ಸಮಾಜಶಾಸ್ತ್ರ 10ನೇ ತರಗತಿ

Mahatma Gandhi is identified as the most prominant person of 20th century India. Albert Eistein said, about him *"Generations to come, it may well be, will scarce believe that such a man as this one ever in flesh and blood walked upon this Earth."*



ರಾಷ್ಟ್ರ ವಿದ್ಯಾ, ಪರಿಶೋಧನೆ, ಶಿಕ್ಷಣ ಸಂಸ್ಥೆ
ತೆಲಂಗಾಣ, ಹೈದರಾಬಾದು.

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

ಸಮಾಜಶಾಸ್ತ್ರ

10 ನೇ ತರಗತಿ

ಸಮಾಜಶಾಸ್ತ್ರ

10 ನೇ ತರಗತಿ

FREE

Social Studies
Class X (Kannada Medium)

ತೆಲಂಗಾಣ ಸರ್ಕಾರದ ಪ್ರಚುರಣೆ
ಹೈದರಾಬಾದು

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ

SCERT TELANGANA

ಭಾರತ ಸೈನ್ಯ

ಪ್ರಾಮಾಣಿಕ ನಾಯಕರಿಗೆ ವಂದನೆಗಳು

ಅಸಾಧಾರಣ ಜೀವನ.

ಸಾಹಸ, ಗೌರವ, ಖ್ಯಾತಿಯೊಂದಿಗೆ ಕೂಡಿದ ಜೀವನ.

ಅಲ್ಲಿ ನೀವು ಕೋಟಿಜನರೊಂದಿಗೆ ಒಬ್ಬರು.

ಕೋಟಿ ಜನರಲ್ಲಿ ಒಬ್ಬರು.

ಉನ್ನತ ಶಿಖರಗಳನ್ನು ಆರೋಹಿಸಿರಿ.

INDIAN ARMY

www.joinindianarmy.nic.in

ಶೈಕ್ಷಣಿಕ ಸಾಲಗಳು

ನಮ್ಮ ದೇಶದಲ್ಲಿ ಬಹಳ ಮಂದಿ ವಿದ್ಯಾರ್ಥಿಗಳಿಗೆ ಆರ್ಥಿಕ ಸಮಸ್ಯೆಗಳಿಂದ ಉನ್ನತ ಶಿಕ್ಷಣಗಳುಕೈಗೆಟುಕದಂತೆ ಇವೆ. ಈ ಸಮಸ್ಯೆಯನ್ನು ಅಧಿಗಮಿಸಲು ಶೈಕ್ಷಣಿಕ ಸಾಲ ಯೋಜನೆಯನ್ನು, ಪ್ರತಿಭೆ ಉಳ್ಳ ವಿದ್ಯಾರ್ಥಿಗಳಿಗೋಸ್ಕರ ರೂಪಿಸಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಏನಂದರೆ ಪ್ರತಿಭಾವಂತರಾದ ವಿದ್ಯಾರ್ಥಿಗಳು ಬ್ಯಾಂಕಿಂಗ್ ರಂಗದ ಮೂಲಕ ಸಾಲದ ಸಹಾಯ ಪಡೆಯುತ್ತಾ ಉನ್ನತ ವಿದ್ಯೆಯನ್ನು ಭಾರತದೇಶದಲ್ಲಿದ್ದೆ, ವಿದೇಶಗಳಲ್ಲಿಯೂ ಸಹ ಮುಂದುವರೆಸಬಹುದು. ಭಾರತದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸಾಲದ ಸಹಾಯ ಗರಿಷ್ಟವಾಗಿ ಹತ್ತು ಲಕ್ಷ ರುಪಾಯಿಗಳು, ವಿದೇಶಗಳಲ್ಲಿ ವಿಧ್ಯಾಭ್ಯಾಸಕ್ಕೆ ಗರಿಷ್ಟವಾಗಿ ಇಪ್ಪತ್ತು ಲಕ್ಷ ರುಪಾಯಿಗಳು ನಿರ್ಣಯಿಸುವುದು ನಡೆದಿದೆ.

ಈ ಯೋಜನೆಗೆ ಕೆಳಗೆ, ವಿದ್ಯಾರ್ಥಿ ಸಾಲದ ಸಹಾಯ ಪಡೆಯಬೇಕೆಂದರೆ ಭಾರತೀಯನಾಗಿರಬೇಕು. ಹೆಚ್. ಎಸ್.ಸಿ (10+2 ಇಲ್ಲವೇ ತತ್ಸಮಾನವಾದ ಪರೀಕ್ಷೆ) ಉತ್ತೀರ್ಣನಾದನಂತರ ಭಾರತದೇಶದಲ್ಲಾಗಲಿ ಅಥವಾ ವಿದೇಶಗಳಲ್ಲಾಗಲಿ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ಉನ್ನತ ವಿದ್ಯಾ ಕೋರ್ಸುಗಳೊಂದಿಗೆ, ಪ್ರವೇಶ ಪರೀಕ್ಷೆ ಮೂಲಕ/ ಪ್ರತಿಭೆ ಆಧಾರಿತ ಆಯ್ಕೆ ಪ್ರಕ್ರಿಯೆ ಮೂಲಕ ಪ್ರವೇಶ ಅರ್ಹತೆ ಹೊಂದಿರಬೇಕು. ಉಳಿದ ಸಂದರ್ಭಗಳಲ್ಲಿ, ಬ್ಯಾಂಕುಗಳು ಶಿಕ್ಷಣವನ್ನು ನೀಡುವ ಖ್ಯಾತಿ ಹೊಂದಿದ ಸಂಸ್ಥೆಗಳ ಮತ್ತು ಅಧ್ಯಯನ ಪೂರ್ತಿ ಆದ ನಂತರ ಪಡೆಯುವ ಉದ್ಯೋಗಾವಕಾಶಗಳನ್ನು ಕುರಿತು ನಿರ್ಣಯಿಸುತ್ತಾರೆ.

ಈ ಯೋಜನೆಯ ಕೆಳಗೆ ಸಾಲದ ಮೊತ್ತವು ಶಿಕ್ಷಣಕ್ಕೆ ಸಂಬಂಧಿಸಿದ ಖರ್ಚುಗಳು, ಟ್ಯೂಷನ್ ಫೀಜುಗಳು, ಪುಸ್ತಕಗಳನ್ನು ಖರೀದಿಸಲು ಆಗುವ ಖರ್ಚು, ವಸತಿ ಹಾಗೂ ಊಟದ ವ್ಯವಸ್ಥೆ ಖರ್ಚುಗಳನ್ನು ಆಧರಿಸಿ ನಿರ್ಣಯಿಸುವರು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ತಂದೆತಾಯಿಗಳು ಸಂಯುಕ್ತ ಸಾಲಗಾರರಾಗಿ (ಜಾಯಿಂಟ್ ಬಾರೋಅರ್) ಇರಬೇಕು. ವಿದ್ಯಾರ್ಥಿಯ ಭವಿಷ್ಯತ್ ಆದಾಯಗಳನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುವರು.

ವಿದ್ಯಾರ್ಥಿ ಶಿಕ್ಷಣದ ಕಾಲದಲ್ಲಿ ವಿದ್ಯಾರ್ಥಿಯಿಂದ ಅಥವಾ ಅವನ ತಂದೆತಾಯಿಗಳಿಂದಾಗಲಿ ಯಾವುದೇ ರೀತಿಯಲ್ಲಿ ಮರುಪಾವತಿ ಮಾಡುವ ಅವಶ್ಯಕತೆ ಇಲ್ಲ. ಶಿಕ್ಷಣ ಪೂರ್ಣವಾದ ಒಂದು ವರ್ಷದ ನಂತರ ಇಲ್ಲವೇ ಉದ್ಯೋಗ ಪಡೆದ ಆರು ತಿಂಗಳುಗಳ ನಂತರ ಯಾವುದು ಮೊದಲಾದರೆ ಅದರ ಪ್ರಕಾರ ಸಾಲದ ಮರುಪಾವತಿ ಪ್ರಾರಂಭವಾಗುತ್ತದೆ.

ಈ ಯೋಜನೆಯಲ್ಲಿ ಸಾಲವನ್ನು ಪಡೆಯಲು ಯಾವುದೇ ವಿಧವಾದ ಪ್ರೊಸೆಸಿಂಗ್ ಶುಲ್ಕಗಳನ್ನು ವಿಧಿಸಲಾಗುವುದಿಲ್ಲ. ಈ ಸಾಲವನ್ನು ಪಡೆಯುವುದಕ್ಕೆ ನಿಮ್ಮ ಹತ್ತಿರದಲ್ಲಿರುವ ಯಾವುದೇ ವಾಣಿಜ್ಯ ಬ್ಯಾಂಕು ಶಾಖೆಯವರನ್ನು ಸಂಪ್ರದಿಸಬಹುದು. ಮತ್ತಷ್ಟು ಮಾಹಿತಿಗಳಿಗಾಗಿ ಲಾಗಾನ್ ಆಗಿರಿ. ಕೆಳಗಿನ ಆರ್. ಬಿ. ಐ ವೆಬ್‌ಸೈಟ್ ನೋಡಿರಿ.

www.obi.in www.rbi.org.in/scripts/helpdesk.aspx

SCERT TELANGANA

ÓÚÊÚÞg ÍÝÓÚ

ÖÚñÚ®à ñÚÃÚwÚ£

Social Studies, Class - X
(Kannada Medium)

ÓÚí±Ý¨ÚPÚÃÚá

Îà AÃÚËí¨... ÓÝÇÝ®Ý
HPÚÆÊÚ, ÊÚá«Ú±Ú¨àÍ...
´àÚ» I. ÆQ
aÚÄñÚ Ë»ÝwÚ, EÓÝ¯¿Þ ¿áã¯ÊÚÔìq, Öá¨ÚÃÝ¸Ý¨Úá
´àÚ» PÚãà¨Úív...ÃÝÊÚå...
ÃÝg¯à£ÍÝÓÚ Ë»ÝwÚ
².ì.PÝÇàh..., ÔQí¨Ý¸Ý¨..., Öá¨ÚÃÝ¸Ý¨Úá
´àÚ» G.ÓñÚ®ÝÃÝ¿á| (¯ÊñÚ)
C£ÖÝÓÚ Ë»ÝwÚ, EÓÝ¯¿Þ ËÍÚË¨ÝÆ¿á,
Öá¨ÚÃÝ¸Ý¨Úá
vÝ» PÚ. ®ÝÃÝ¿á| Ãw
AÔÓrí p... ±àÚ´ÓÚÃ..., »ÚãwÚãàÚ ÍÝÓÚ Ë»ÝwÚ,
EÓÝ¯¿Þ ¿áã¯ÊÚÄq, Öá¨ÚÃÝ¸Ý¨Úá
±àÚ» »Úã±àí¨Ú ¿Þ¨Ê...
A ì à í ±àÊÚå... ì à ¿áã¯ÊÚÄq, ¸íwÚÙÚãÃÚá
vÝ» PÚ. PÇÝÐ...
AÔÓrí p... ±àÚ´ÓÚÃ..., ÃÝgÍÝÓÚ Ë»ÝwÚ
¿áã¯ÊÚÔìq B´... Öá¨ÚÃÝ¸Ý¨Úá, Öá¨ÚÃÝ¸Ý¨Úá
vÝ» aÚí¨ÚÍàSÃ... ¸ÝÆaÚí¨Ú®...
PÚÆÃÚÃ... ìÁãàwÝ´ÚÃ..., ¸íwÚÙÚãÃÚá
vÝ» G®.... aÚí¨Ý¿áávÚá
AÔÓrí p... ±àÚ´ÓÚÃ..., »ÚãwÚãàÚ ÍÝÓÚ Ë»ÝwÚ,
GÓ.... Ë. ¿áã¯ÊÚÄq, £ÃÚá±Ú£

±àÚ» GÓ.... ±Ú¨Úg
»ÚãwÚãàÚÍÝÓÚ Ë»ÝwÚ
EÓÝ¯¿Þ ¿áã¯ÊÚÔìq, Öá¨ÚÃÝ¸Ý¨Úá
±àÚ» ì. KíPÝÃ...®Ý¥...
A¥ìÍÝÓÚ Ë»ÝwÚ
¿áã¯ÊÚÔìq B´... Öá¨ÚÃÝ¸Ý¨Úá, Öá¨ÚÃÝ¸Ý¨Úá
Îà Ô. GÓ.... ÓÚáÝÊÚá| Àí
HPÚÆÊÚ, ÊÚá«Ú±Ú¨àÍ...
vÝ» I.£ÃÚáÊÚÞÈ
Ôà¯¿áÃ... ´Çãà, I.Ô.GÓ....GÓ....BÃ...., ®ÚÊÚ¨ÓÚÈ
´àÚ» PÚ. Eg¿á¸ÝÝá
aÚÄñÚ Ë»ÝwÚ, PÝPÚ£à¿á ¿áã¯ÊÚÔìq, ÊÚÃÚíwÇ...
vÝ» Gí. Ë. Îà¯ÊÝÓÚ®...
AÔÓrí p... ±àÚ´ÓÚÃ..., w. C. GÓ.... GÓ.... Öà...,
G®.... Ô. C .BÃ.... q, ®ÚãÀ¨ÓÚÈ.
Îà PÚ. ÓÚáÃàÍ...
Êáíb ±àÓÚPÚí, Öá¨ÚÃÝ¸Ý¨Úá
vÝ» ÓÚáPÚ®ÚÃ ¸ãàÓ...
AÔÓrí p... ±àÚ´ÓÚÃ...
G®.... I. ².G´.... ², ®ÚãÀ¨ÓÚÈ
Îà AÇÞ... Gí. hÝh...ì
HPÚÆÊÚ, ÊÚá«Ú±Ú¨àÍ...

±ÚsÚÃ±ÚáÓÚPÚ A¼ÊÚ© ÊÚáñÚá ±ÚaÚáÃÚO ÓÚËá£

Îà ì. WàãàÝÇ...Ãw
¯¨àìÍPÚÃÚá, GÓ....Ô.C.BÃ....q.,
ñÚÆíWÝ|, Öá¨ÚÃÝ¸Ý¨Úá

Îà ¹.ÓÚá«ÝPÚÃ...
¯¨àìÍPÚÃÚá, ÓÚPÝìÃ ±ÚsÚÃ ±ÚáÓÚPÚ,
ÊÚáá¨ÚOÝÆ¿á, ñÚÆíWÝ|,
Öá¨ÚÃÝ¸Ý¨Úá

vÝ» G®....E±àí¨ÚÃ... Ãw
±àÚ´ÓÚÃ... & Öàv..., ±ÚsÚÃ±ÚáOÝÚPÚ ÊÚáñÚá
±ÚsÚÃ±ÚáÓÚPÚ Ë»ÝwÚ, GÓ....Ô.C.BÃ....q.,
ñÚÆíWÝ|, Öá¨ÚÃÝ¸Ý¨Úá

ñÚÆíWÝ| ÓÚPÝìÃ¨Ú ±ÚaÚáÃÚO & Öá¨ÚÃÝ¸Ý¨Úá

ಕಾನೂನನ್ನು ಗೌರವಿಸಿ
ಹಕ್ಕುಗಳನ್ನು ಪಡೆದುಕೊಳ್ಳಿ

ಶಿಕ್ಷಣದಿಂದ ಬೆಳೆಯಿರಿ.
ವಿನಯಶೀಲರಾಗಿ ನಡೆದುಕೊಳ್ಳಿ.

ñÚÆíWÝ| ÓÚPÝìÃ©í¨Ú Eb¯ ËñÚÃÚO 2019&20

SCERT TELANGANA

© Government of Telangana, Hyderabad.

First Published 2014

New Impressions 2015, 2016, 2017, 2018, 2019

All rights reserved.

No part of this publication may be reproduced, stored in a retrieval system. or transmitted, in any form or by any means without the prior premission in writting of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purcharer.

The copy right holder of this book is the Director of School Education, Hyderabad, Telangana.
We have used some photographs which are under creative common licence. They are acknowledged at the end of the book.

This Book has been printed on 70 G.S.M. Maplitho
Title Page 200 G.S.M. White Art Card

ತೆಲಂಗಾಣ ಸರ್ಕಾರದ ಉಚಿತ ವಿತರಣೆ 2019-20

Printed in India
at the Telangana Govt. Text Book Press,
Mint Compound, Hyderabad,
Telangana.

— o —

SCERT TELANGANA

AìaìAáñìAìá

ÎìàÊìá£ Gí . ÓìñìÂÊìÉ ÃÝÊìâ, ÄpæÃ... ².i.q, ÃÝgâÍÝÓì', BP...´ìÃ... G®.... G®.... ÓìãìÇ..., ËPÝÓì±ìâÄ, ®ìÊì¨æÓìÈ.
Îìà i. B®ìí¨..., AÔÓæíp... ±æäì´æÓìÃ...(Ô), »ìãìæãàÙ íÝÓì Ë»Ýwì, EÓÝ¯¿Þ ¿áã¯ÊìÄq, Öæ¨ìÃÝ¸Ý¨ìá.
vÝ » G®.... ÊæíPìo Ãìñìí', AÔÓæíp... ±æäì´æÓìÃ...(².q), aìÃñì Ë»Ýwì, ¯hÝí PÝÇàh...(K¿áá), Öæ¨ìÃÝ¸Ý¨ìá.
vÝ » q. ÊæíPìpàÍìÃì ÃÝÊ..., AÔÓæíp... ±æäì´æÓìÃ..., aìÃñì Ë»Ýwì, ².i. PÝÇàh...(K¿áá), ÔQí¨Ýì¸Ý¨....
ÎìàÊìáwñÝq ®ìÃìÓìíÖÝÃæw, GHM, ZPHS, ±æ¨ìgíWìí±ìÈ', Êæ'.GÓ....BÃ....Pìvì±ì
Îìà Pæ. ÆQà®ÝÃÝ¿á|, Lecturer, væp..., AíWìÙìãÄìá, PìÐÝ
ÎìàÊìáÇÝÀÆ ±Ý±ì¿áÂ, Lecturer, GÓ....Ô.C.BÃ....q., Bí«ì±ì¨æàìÍ...
ÎìàB¿ÞbñìáÆ ÆPì|ÃÝÊìâ, SA, ZPHS, «ì®ìWìÃ...ÊÝw, PìÄàí®ìWìÃ...
vÝ » ÃÝaìÃìWì|±ì£, SA, ZPHS, ÇÝ¨æÆ', ÊìÃìíWìÇ...
Îìà Eívàq B®ìí¨ìPìâÊìÞÃ..., SA, ZPHS, ÓìáhÝñì®ìWìÃ..., SÊìáí
Îìà ². gWì®... ÊæãàÓì®... Ãæw SA, ZPHS, ²waæàvìá, Wì¨æàÇ..., Êæá¨ìP...
Îìà ². Ãì¥íWì±Ý~ Ãæw, SA, ZPHS, ±æäÆí±ìÈ', ÊìáÓìÝã¸...®ìWìÃ...
Îìà PæãÄË Îìà¯ÊÝÓìÃÝÊìâ, SA, MPUPS, pæPìÈ, ÎìàPÝPìáÙìí
Îìà PÝ®ìí PìáÊìÞÃìÓÝËá, SA, ZPHS, ¨èvæà±ìÈ, B©ÇÝ¸Ý¨...
Îìà ².Îìà¯ÊÝÓìáÆá, SA, ZPHS, ÖìÊæàÄ Z®...±äÃ... Êæá¨ìP...
Îìà G®...². gWì®Ý¥..., GHS, PìáÆáí±ìâÃì, Öæ¨ìÃÝ¸Ý¨ìá
ÎìàÊìá£ Ýíw ÊìáÄ¿ÞÃÝ~, SA, MPUPS, bÆáPÝ®ìWìÃ..., ÃìíWÝÃæw
Îìà ÊìíWìãÄ WìíXÃæw, SA, ZPHS, Pæãí¨ìáWìáì ÊìáÖìÝãÝ®ìWìÃ...
Îìà q. ±ì»ÝPìÃ... Ãæw, SA, ZPHS (Boys), ÐÝ¸Ý¨... ÃìíWÝÃæw
Îìà G®...ÃÝh...±ÝÇ... Ãæw, IGNIS (Boys), ÓìàÍì®... Z®...±äÃ... (g®ìWÝÊìá)

ÓìÊìá®ì¿á

Îìà ÊìáÇÝÀÆ ±Ý±ì¿áÂ, Lecturer, GÓ....Ô.C.BÃ....q., Bí«ì±ì¨æàìÍ...
ÎìàÊìá£ ¨ìáXÃæw Ëg¿áÆQ$, Lecturer, GÓ....Ô.C.BÃ....q., Bí«ì±ì¨æàìÍ...

Pì®ìvì B®ìáEÝ¨ìPìAìá

ÎìàGí. XÄhÝ±ì£, SA, ZPHS, w. ×ÃæàÖÝÙ..., A®ìíñì±ìâÃìí
ÎìàÊìá£ Êæ'. ±Ý¨ìÊìá, SA, ZPHS, w. ×ÃæàÖÝÙ..., A®ìíñì±ìâÃìí
Îìàw.². DÃìÈíWì±ì, SA, YMKHS, B¨æãà¯, Pì®ìãìÇ...
ÎìàÖæa...Gí. ÍÝíñìËàÃìÊìáã£ì, SA, ZPHS, ÖæãÙìWìáí¨ì, Pì®ìãìÇ...
Îìàhæ. WìíWÝ«ìÃì¿áÂ, SA, ZPHS, PèñÝÙìí, Pì®ìãìÇ...
ÎìàGí. ÍìíPìÃì±ì, SA, ZPHS, ±æ¨ìÖìÄÊÝ|í, Pì®ìãìÇ...
ÎìàÊìá£ i. DÃÝPìÊìá', SA, ZPHS, w. ×ÃæàÖÝÙ..., A®ìíñì±ìâÃìí
ÎìàKíPÝÃìÃìZáÃÝÊìâ, Óì.Î., ®ìê±ìñìáíWì±èìyìíÝÇæ, Öæ¨ìÃÝ¸Ý¨ì.
Îìà®ÝWì»ìãÐì|, SA, ZPHS, PìÐÝ, ÊìáÖìÝãÝ®ìWìÃ...

bñìPÝAìAìá

ÎìàPìáÃæÙì Îìà¯ÊÝÓ..., GHM, ZPHS, B¨æãà , Pì®ìãìÇ...
ÎìàPìÃæà®... ÖæàvÝP..., Professor, HBSC, ÊìááíÝÀá
Îìà².Bíg®à¿ááÆá, Geomapper, CESS-DCS, Öæ¨ìÃÝ¸Ý¨...

w. q. ²

Îìàq.GÓ.... Öì®ìáÊìáíñìÃÝ¿á±ì, SA, ZPHS, w. ×ÃæàÖÝÙ..., A®ìíñì±ìâÃìí.
ÎìàWìíi ±æäí±Ý±ì£, SGT, MPPS, ÊìáÆ±ì®ìWìáw, A®ìíñì±ìâÃìí.

WÝìµP... whæ íW...

ÎìàÊìá£ ÊÝPìáÆ¨æàË, SKV, PìÆÃ... ÔìàÊìá... Öæ¨ìÃÝ¸Ý¨...
ÎìàPì®ì¿áÂ ¨ÝÃÝ, SCERT, ñæÆíWÝ| Öæ¨ìÃÝ¸Ý¨...
ÎìàÊìá£ Pæ.±ÝÊì¯, Pìí±ìäàoÃ... B±ìÃæàoÃ..., Öæ¨ìÃÝ¸Ý¨...

SCERT TELANGANA

Ë¨ÝÂ¦ ìWÚÙWæ EñÚÃÜ

²Â¿ áÊÝ¨Ü Ë¨ÝÂ¦ ìWÜàÚ,

ನೀವು 21ನೇ ಶತಮಾನದಲ್ಲಿ ಬೆಳೆಯುತ್ತಿರುವಿರಿ. ಬೇಗನೇ ನೀವು ದೊಡ್ಡವರಾಗಿ, ಉದ್ಯೋಗ ಮಾಡುವಿರಿ, ಚುನಾವಣೆಯಲ್ಲಿ ಮತ ಹಾಕುವಂತಹ ಪ್ರಜಾ ವ್ಯವಹಾರಗಳಲ್ಲಿ ಪಾಲ್ಗೊಳ್ಳುವಿರಿ. ನಮ್ಮ ಕಾಲದಲ್ಲಿ ಜೀವನಗಳನ್ನು ನಿರ್ದೇಶಿಸುವ ಭಾವನೆಗಳು , ಪ್ರಕ್ರಿಯೆಗಳು, ವ್ಯವಸ್ಥೆಗಳನ್ನು ಅರ್ಥಮಾಡಿಕೊಳ್ಳಬೇಕಾದ ಸಮಯವಿದು. ಪ್ರಜೆಗಳ ತೀವ್ರ ಹೋರಾಟಗಳು, ಎಷ್ಟೋ ತ್ಯಾಗಗಳು ಸೇರಿ ಕೆಲಸ ಮಾಡುವುದರಿಂದ ಇವು ರೂಪುಗೊಂಡಿವೆ. ಮುಂಬರುವ ಶತಮಾನವನ್ನು ರೂಪಿಸುವಲ್ಲಿ ನೀವು ಸಹ ಇಂತಹ ಪಾತ್ರ ಪೋಷಿಸಬೇಕಾಗುತ್ತದೆ. ಕಳೆದ ಶತಮಾನದ ಜನರು ವಿಭಿನ್ನ ಭಾವನೆಗಳು, ಪ್ರಕ್ರಿಯೆಗಳು, ವ್ಯವಸ್ಥೆಗಳನ್ನು ಹೇಗೆ ರೂಪಿಸಿದ್ದಾರೋ ವಿವರಿಸುವುದರ ಮೂಲಕ ಈ ಪುಸ್ತಕವು ನಿಮಗೆ ಸ್ವಲ್ಪವಾದರೂ ಸಹಾಯವಾಗುತ್ತದೆಂದು ಆಶಿಸುವೆವು.

ನಿಮ್ಮ ತಂದೆ ತಾಯಿಗಳು , ಶಿಕ್ಷಕರು ಈ ಪರಿಣಾಮಗಳಲ್ಲಿ ಪಾಲುದಾರರಾಗಿದ್ದಾರೆ. ಅವುಗಳಿಗೆ ಪ್ರೇಕ್ಷಕರಾಗಿದ್ದಾರೆ. ಆ ಕಾರಣದಿಂದ ಇಲ್ಲಿ ಹೇಳಿದ ಅನೇಕ ಅಂಶಗಳ ಮೇಲೆ ಅವರಿಗೆ ವಿಭಿನ್ನ, ಬಲವಾದ ಅಭಿಪ್ರಾಯಗಳು ಇರುಬಹುದು. ಕಳೆದ ಶತಮಾನವನ್ನು ಕುರಿತು ತಿಳಿದುಕೊಳ್ಳುವ ಕ್ರಮದಲ್ಲಿ ಪ್ರಜೆಗಳಿಗೆ ಭಿನ್ನವಾದ ಅವಲೋಕನೆ ಏಕೆ ಇರುತ್ತವೆ ಎಂದು ಅರ್ಥ ಮಾಡಿಕೊಂಡು ನಿಮ್ಮ ಸ್ವಂತ ನಿರ್ಣಯಗಳಿಗೆ ಬರಬೇಕು.

ಈ ಪುಸ್ತಕವು ಎರಡು ಭಾಗಗಳಲ್ಲಿ ಇದೆ. ಮೊದಲನೇ ಭಾಗ ಸಂಪನ್ಮೂಲಗಳ ಅಭಿವೃದ್ಧಿ, ಸಮಾನತೆ ಕುರಿತು, ಎರಡನೇ ಭಾಗ ಸಮಕಾಲೀನ ಪ್ರಪಂಚ, ಭಾರತದೇಶಕ್ಕೆ ಸಂಬಂಧಿಸಿದ್ದು. "ಸಂಪನ್ಮೂಲಗಳ ಅಭಿವೃದ್ಧಿ, ಸಮಾನತೆ" ಎಂಬ ಅಂಶವು ಕೆಳಗೆ ನಾವು ವಾಸಿಸುತ್ತಿರುವ ಭೂಮಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದೇವೆ, ಎಂತಹ ಉತ್ಪಾದಕ ಕಾರ್ಯಕ್ರಮಗಳು ಮಾಡುತ್ತಿದ್ದೇವೆ ಎನ್ನುವವು ಇರುತ್ತವೆ. ಭೂಮಿ, ತನ್ನ ಸಂಪನ್ಮೂಲಗಳನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿರುವೆವೇ? ಉತ್ಪಾದನೆ ಕೆಲಸ, ವಿವಿಧ ಜನರ ಮಧ್ಯೆ ಅವುಗಳ ಫಲಗಳ ಹಂಚಿಕೆಗಳಂತಹ ಅಂಶಗಳಲ್ಲಿ ನಾವು ಸಮಾನ ನ್ಯಾಯವನ್ನು, ಸುಸ್ಥಿರತೆಯನ್ನು ಸಾಧಿಸಿರುವೆವೇ?

"ಸಮಕಾಲೀನ ಪ್ರಪಂಚ, ಭಾರತದೇಶ" ಎಂಬ ಅಂಶದ ಕೆಳಗೆ ಶತಮಾನಗಳಲ್ಲಿನ ಪ್ರಧಾನ ಘಟ್ಟಗಳ ಪ್ರಭಾವವನ್ನು ಪರಿಶೀಲಿಸೋಣ. ಒಟ್ಟು ಪ್ರಪಂಚದಲ್ಲೇ ಅಲ್ಲದೆ ನಮ್ಮ ದೇಶದಲ್ಲಿಯೂ ಸಹ ಸ್ವಲ್ಪ ದಿನಗಳ ಹಿಂದೆ ನಡೆದವುಗಳ ಕುರಿತು ನೋಡೋಣ. ವಿಭಿನ್ನ ಪ್ರಯೋಜನೆಗಳೊಂದೇ ಅಲ್ಲದೇ ಜನರು ವಿಭಿನ್ನ ಭಾವನೆಗಳಿಂದ ಪ್ರಭಾವಿತರಾಗಿ ಕಾರ್ಯಾಚರಣೆಗೆ ಒಳಗಾಗುತ್ತಾರೆ. ಕಳೆದ ಶತಮಾನದಲ್ಲಿ ಸಮಾಜವಾದ, ಫಾಸಿಜಂ, ರಾಷ್ಟ್ರೀಯವಾದ, ಉದಾರವಾದಗಳಂತಹವು ಪ್ರಜೆಗಳ ಆಲೋಚನೆಯನ್ನು ಸಮುದಾಯಿಕ ಚಟುವಟಿಕೆಯನ್ನು ತೀವ್ರವಾಗಿ ಪ್ರಭಾವಿತಗೊಳಿಸಿವೆ. ಇವುಗಳಲ್ಲಿ ಕೆಲವುಗಳ ಬಗ್ಗೆ ಓದಿಕೊಳ್ಳೋಣ.

ಶಾಲಾ ಮಟ್ಟದಲ್ಲಿ ಪಠ್ಯ ಪುಸ್ತಕಗಳು ಸಮಕಾಲೀನ ಘಟನೆಗಳು, ವಿಧಾನಗಳು, ರಾಜಕೀಯಗಳನ್ನು ಸಾಧಾರಣವಾಗಿ ಚರ್ಚಿಸಲಾರೆವು. ಇದಕ್ಕೆ ಕಾರಣ ಇವನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆಂದು ಅಲ್ಲ, ಇವುಗಳ ಬಗ್ಗೆ ಅಭಿಪ್ರಾಯ ಭೇಧಗಳು ತೀವ್ರವಾಗಿರುತ್ತವೆ . ಆದ್ದರಿಂದ ಅವು ಘರ್ಷಣೆಗಳಿಗೆ ದಾರಿಮಾಡಬಹುದೆಂದು ಭಾವಿಸುತ್ತಾರೆ . ಆದರ ಪ್ರಜಾಪ್ರಭುತ್ವ ಪ್ರಪಂಚದಲ್ಲಿ ಜೀವಿಸಲು ನಮ್ಮ ವ್ಯತ್ಯಾಸಗಳು, ಘರ್ಷಣೆಗಳನ್ನು ಹೇಳಿಕೊಳ್ಳಲಾರದೇ ಇರುವುದಲ್ಲದೆ ಅವುಗಳೊಂದಿಗೆ ಹೇಗೆ ವ್ಯವಹರಿಸಬೇಕೆಂದು ತಿಳಿದುಕೊಳ್ಳಬೇಕು. ನಮ್ಮ ನವಯುವಕರಿಗೆ ರಾಜಕೀಯ ಚರ್ಚೆಗಳು , ವ್ಯತ್ಯಾಸಗಳನ್ನು ಪರಿಚಯಿಸುವ ಪ್ರಯತ್ನವನ್ನು ಈ ಪಠ್ಯಪುಸ್ತಕವು ಮಾಡುತ್ತದೆ. ಶಿಕ್ಷಕರು, ವಿದ್ಯಾರ್ಥಿಗಳು, ರಾಜಕೀಯ ಸಮೂಹಗಳು ಇದನ್ನು ಸರಿಯಾದ ಸ್ಫೂರ್ತಿಯಿಂದ ತೆಗೆದುಕೊಂಡಾಗ ತಾಳ್ಮೆಯಿಂದ ಭಿನ್ನಭಿನ್ನ ಅಭಿಪ್ರಾಯಗಳನ್ನು ಸಹನೆಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಇದು ಯಶಸ್ವಿಯಾಗುತ್ತದೆ. ಈ ಪಠ್ಯಪುಸ್ತಕವು ಒಂದು ದೃಷ್ಟಿಕೋನವನ್ನು ಅನುಸರಿಸಿ ಮತ್ತೊಂದು ದೃಷ್ಟಿಕೋನವನ್ನು ಸಾಕಾಗುವಷ್ಟು ತೋರಿಸಿಲ್ಲವೆಂದೆನಿಸಬಹುದು. ಪಠ್ಯಪುಸ್ತಕಗಳ ರಚನಾಕಾರರೂ ಮನುಷ್ಯರೇ ಆದ್ದರಿಂದ ಅವರಿಗೆ ತಮ್ಮದೇ ಆದ ಅವಗಾಹನೆ ಇರುತ್ತದೆ. ಕಾರಣ ಇದು ಅನಿವಾರ್ಯವಾಗುತ್ತದೆ. ಅಂತಹ ಸಂದರ್ಭಗಳು ಎದುರಾದಾಗ ಪುಸ್ತಕದಲ್ಲಿ ಇರುವುದು ಸರಿ ಎಂಬ ಭಾವನೆ ಕಲ್ಪಿಸದಂತೆ ಅದಕ್ಕೆ ಭಿನ್ನವಾದ ದೃಷ್ಟಿಕೋನವನ್ನು ಸಹ ವಿದ್ಯಾರ್ಥಿಗಳಿಗೆ ಶಿಕ್ಷಕರು ಪರಿಚಯಿಸಬೇಕು. ಈ ವಿಷಯಗಳ ಮೇಲೆ ಮತ್ತಷ್ಟು ತಿಳುವಳಿಕೆ ಬರಲು ವಿದ್ಯಾರ್ಥಿಗಳನ್ನು ದಿನಪತ್ರಿಕೆ, ವಾರಪತ್ರಿಕೆ ಅಂತಹವುಗಳನ್ನು ಓದುವಂತೆ , ಬಹಿರಂಗ ಸಭೆಗಳಿಗೆ ಹಾಜರಾಗುವಂತೆ ಪ್ರೋತ್ಸಾಹಿಸಬೇಕು.

ಈ ದೃಷ್ಟಿಯಿಂದ ತಿಳಿದುಕೊಳ್ಳಬೇಕೆಂಬ ಅನ್ವೇಷಣೆಗೆ ಈ ಪುಸ್ತಕವು ಆರಂಭವಾಗಬೇಕಾಗಲಿ ಮುಕ್ತಾಯವಾಗಬಾರದು.

ಇತರರು ಏನು ಆಲೋಚಿಸುವರೋ, ಮಾಡುವರೋ ಎಂಬುದನ್ನು ಮಾತ್ರವೇ ಪುಸ್ತಕಗಳು ತಿಳಿಸುತ್ತವೆ. ಕೊನೆಯದಾಗಿ ನಿಮ್ಮ ತಿಳುವಳಿಕೆ, ಅಭಿಪ್ರಾಯಗಳಿಗೆ ನೀವೇ ಬರಬೇಕು. ನೀವು ಓದುವ ಸಾಮಾಜಿಕ ಸಮಸ್ಯೆಗಳ ಬಗ್ಗೆ ನೀವು ಏನು ಮಾಡಬೇಕೆಂದು ನಿರ್ಣಯಿಸಿಕೊಳ್ಳಬೇಕು. ಈ ಸಮಾಜವನ್ನು ಅರ್ಥಮಾಡಿಕೊಳ್ಳಬೇಕಾದ ಜವಾಬ್ದಾರಿ ಅದನ್ನು ಚೆನ್ನಾಗಿ ಸರಿಪಡಿಸಬೇಕಾದ ಜವಾಬ್ದಾರಿಯೂ ನಿಮ್ಮ ಮೇಲಿದೆ. ಇದರಲ್ಲಿ ಈ ಪುಸ್ತಕವು ನಿಮಗೆ ಸಹಾಯಕವಾಗುತ್ತದೆಂದು ನಮ್ಮ ಆಸೆ.

ÓÜ Í±Ý¨ÜPÜÃÜá

SCERT TELANGANA

D ±ÀÄÛPÀ PÀÄjvÀÄ ....

ನಿಮ್ಮ ಸುತ್ತಲೂ ಇರುವ ಸಮಾಜವನ್ನು ಅಧ್ಯಯನ ಮಾಡುವ ಪ್ರಕ್ರಿಯೆಯ ಭಾಗವಾಗಿ, ಸಮಾಜ ಶಾಸ್ತ್ರ ವಿದ್ಯಾಪ್ರಣಾಳಿಕೆ ಭಾಗವಾಗಿ ಈ ಪುಸ್ತಕ ರೂಪುಗೊಂಡಿದೆ. ಇದು ಆ ವಿದ್ಯಾ ಪ್ರಣಾಳಿಕೆಯಲ್ಲಿ ಒಂದು ಸಣ್ಣ ಭಾಗವಷ್ಟೇ. ಸಮಾಜ ಶಾಸ್ತ್ರ ವಿದ್ಯಾಪ್ರಣಾಳಿಕೆ ನಿಮಗೆ ಗೊತ್ತಿರುವ ಅಂಶಗಳನ್ನು ತರಗತಿ ಕೋಣೆಯಲ್ಲಿ ನಾಲ್ವರೊಂದಿಗೆ ಹಂಚಿಕೊಳ್ಳಲು, ವಿಶ್ಲೇಷಿಸಿಕೊಳ್ಳಲು ಸಹಾಯವಾಗುತ್ತದೆ. ಸಮಾಜದಲ್ಲಿನ ವಿವಿಧ ಅಂಶಗಳನ್ನು ಏಕೆ ಹಾಗೆ ಇವೆ ಎಂದು ಪ್ರಶ್ನಿಸಲು, ಸಮಸ್ಯಗಳು ಹೀಗೇಕೆ ಇವೆ ಎಂದು ಆಲೋಚಿಸಲು ಸಮಾಜ ಶಾಸ್ತ್ರ ಉಪಯೋಗಪಡುತ್ತದೆ. ನೀವು ನಿಮ್ಮ ಸ್ನೇಹಿತರು ತರಗತಿ ಕೋಣೆಯಿಂದ ಬಾಹ್ಯ ಪ್ರಪಂಚದಲ್ಲಿನ ಬಜಾರು, ಪಂಚಾಯಿತಿ, ಮುನ್ಸಿಪಾಲಿಟಿ, ಹಳ್ಳಿಗಳಲ್ಲಿನ ಹೊಲಗಳು, ದೇವಾಲಯಗಳು, ಮಸೀದಿಗಳು, ವಸ್ತು ಪ್ರದರ್ಶನ ಶಾಲೆಗಳು (ಮ್ಯೂಜಿಯಂ), ಇನ್ನೂ ಎಷ್ಟೋ ಅಂಶಗಳು ತಿಳಿದುಕೊಳ್ಳಲು ಉತ್ಸುಕತೆ ಮಾಡುತ್ತದೆ. ರೈತರು, ಅಂಗಡಿಯವರು, ಉದ್ಯೋಗಸ್ತರು, ದೈವ ಕಾರ್ಯ ನಿರ್ವಾಹಕರು ಮೊದಲಾದವರೊಂದಿಗೆ ಚರ್ಚಿಸುವ ಅವಕಾಶವನ್ನು ಈ ಪುಸ್ತಕ ಕಲ್ಪಿಸುತ್ತದೆ.

ಈ ಪುಸ್ತಕ ನಿನ್ನ ಮುಂದೆ ಎಷ್ಟೋ ಸಮಸ್ಯೆಗಳನ್ನು ಇಟ್ಟು ಅವುಗಳ ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ. ಈಪುಸ್ತಕದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಇರುವುದಿಲ್ಲ. ನೀವು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕು. ನಿಜವಾಗಿ ಇದು ಸಂಪೂರ್ಣ ಗ್ರಂಥ ಅಲ್ಲ. ನಿಮ್ಮ ಸ್ನೇಹಿತರ, ಶಿಕ್ಷಕರ ಅನುಭವಗಳು, ಸಂದೇಹಗಳನ್ನು ಬೇರ್ಪಡಿಸಿ ಚರ್ಚಿಸಿ ಜೋಡಿಸಿದಾಗ ಪರಿಪೂರ್ಣತೆ ಉಂಟಾಗುತ್ತದೆ. ಪುಸ್ತಕದಲ್ಲಿನ ಬಹಳ ಅಂಶಗಳಲ್ಲಿ ನೀವು ವಿರೋಧಿಸಬಹುದು. ಸಂಕೋಚವಿಲ್ಲದೇ ಕಾರಣಗಳನ್ನು ತಿಳಿಸಬಹುದು. ಕೊನೆಯಲ್ಲಿ ಸ್ವಂತವಾಗಿ ಪರಿಷ್ಕಾರವನ್ನು ಪಡೆಯಬಹುದು. ಹಾಗೆ ಪಡೆದ ಸಮಾಧಾನವನ್ನು ಮತ್ತೆ ನೋಡಬೇಕೆಂದೆನಿಸಿದರೆ ಪ್ರಶ್ನೆಗಳೆಲ್ಲವನ್ನೂ ಜಾಗ್ರತ್ತೆಯಿಂದ ಪಟ್ಟಿಯಾಗಿ ತಯಾರು ಮಾಡಿ ಸ್ನೇಹಿತರ, ಶಿಕ್ಷಕರ, ಹಿರಿಯರ ಸಹಾಯವನ್ನು ಪಡೆದು ಒಂದು ಸ್ಥಿರವಾದ ನಿರ್ಣಯವನ್ನು ತೆಗೆದುಕೊಳ್ಳಿರಿ.

ಈ ತರಗತಿಯಲ್ಲಿ ನಾವು ಪ್ರಧಾನವಾಗಿ ಸಮಕಾಲೀನ ಪ್ರಪಂಚದ ಹಿನ್ನಲೆಯಲ್ಲಿ ಭಾರತದೇಶದ ಬಗ್ಗೆ ಅಧ್ಯಯನ ಮಾಡುತ್ತೇವೆ. ಎರಡು ಪ್ರಪಂಚ ಯುದ್ದಗಳು, ಅನೇಕ ದೇಶಗಳು ಸ್ವಾತಂತ್ರ್ಯ ಹೊಂದುವುದು, ನ್ಯಾಯವಾದ , ಸಮಸಮಾಜ, ಪ್ರಜಾಪ್ರಭುತ್ವ ಪ್ರಪಂಚವನ್ನು ನಿರ್ಮಿಸುವುದರಲ್ಲಿ ಅನೇಕ ಮಹತ್ವ ಪ್ರಯೋಗಳನ್ನು ಒಳಗೊಂಡ ಕಳೆದ ನೂರು ವರ್ಷಗಳಲ್ಲಿ ಎಷ್ಟೋ ಬದಲಾವಣೆಗಳು ನೋಡಿವೆ.

ಸ್ವಾತಂತ್ರ್ಯವು ಬಂದ ನಂತರ ಭಾರತದೇಶದಲ್ಲಿಬಡತನವನ್ನು ಹೋಗಲಾಡಿಸುವ ಉದ್ದೇಶದಿಂದ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದು, ಆಹಾರ ಧಾನ್ಯಗಳು, ಕೈಗಾರಿಕಾ ವಸ್ತುಗಳಿಗಾಗಿ ಇತರ ದೇಶಗಳ ಮೇಲೆ ಆಧಾರಪಡುವುದನ್ನು ಕಡಿಮೆ ಮಾಡಲು, ದೇಶದಲ್ಲಿ ಅರ್ಥವಂತವಾದ ಉದ್ಯೋಗವನ್ನು ಕಲ್ಪಿಸುವಂತಹ ಗುರಿಗಳೊಂದಿಗೆ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ವಿಧಾನಗಳನ್ನು ಅನುಸರಿಸುತ್ತದೆ. ವ್ಯಕ್ತಿಗತ ಸ್ವಾತಂತ್ರ್ಯ, ಸ್ವೇಚ್ಚೆಗಳಿಗೆ ಭರವಸೆಯನ್ನು ನೀಡುತ್ತಾ, ಅತಿ ದೊಡ್ಡ ಪ್ರಜಾಪ್ರಭುತ್ವವಾಗಿ ರೂಪುಗೊಳ್ಳಬೇಕೆಂಬ ಉಧಾರವಾದ ಆಶಯಗಳೂ ಸಹ ಬಹಳ ಮುಖ್ಯವಾದವು. ಭಾರತದೇಶ ಅಭಿವೃದ್ಧಿಗೆ ಸಂಬಂಧಿಸಿದ ಆರ್ಥಿಕ ವಿಧಾನವನ್ನು, ರಾಜ್ಯಾಡಳಿತ ಕ್ರಮವನ್ನು ಅಧ್ಯಯನ ಮಾಡುತ್ತೇವೆ. ಈ ಅಂಶಗಳು ನಮ್ಮ ಜೀವನಗಳಲ್ಲಿ ಅಲ್ಲದೇ ಸಮಾಜದಲ್ಲಿನ ವಿಭಿನ್ನ ವರ್ಗಗಳಿಗೆ ವಿಭಿನ್ನ ರೀತಿಯಲ್ಲಿ ಪ್ರಭಾವಿತ ಗೊಳಿಸುತ್ತವೆ ಆದ್ದರಿಂದ ಇವುಗಳ ಮೇಲೆ ಭಿನ್ನ ದೃಷ್ಟಿಕೋನ ವಿರುವುದು ಸಹಜವಾಗಿದೆ. ಈ ಭಿನ್ನ ದೃ ಷ್ಟಿಕೋನಗಳನ್ನು ಎದುರಿಸುವುದು ಸೂಕ್ಷ್ಮತೆಯಿಂದ ಅವುಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವುದು ನಾವು ತರಗತಿ ಕೋಣೆಗಳಲ್ಲಿ ಕಲಿತುಕೊಳ್ಳಬೇಕು. ನಮ್ಮ ಪ್ರಜಾಪ್ರಭುತ್ವ ಸಮಾಜವನ್ನು ಬಲಪಡಿಸಲು ಇದು ಬಹಳ ಅವಶ್ಯಕ.

ಈ ಪುಸ್ತಕದಲ್ಲಿನ ಪಾಠಗಳನ್ನು ತರಾತುರಿಯಾಗಿ ಪೂರ್ತಿಮಾಡುವುದಕ್ಕಿಂತ ಕೊಟ್ಟ ಪ್ರಶ್ನೆಗಳನ್ನು, ಚಟುವಟಿಕೆಗಳನ್ನು ಸಮರ್ಥವಂತವಾಗಿ ನಿರ್ವಹಿಸುವುದು ಅವಸರ. ಈ ಪಠ್ಯ ಪುಸ್ತಕವನ್ನು ಓದುತ್ತಿರುವಾಗ ನಿಮಗೆ ಎಷ್ಟೋ ಪ್ರಶ್ನೆಗಳು, ಚಟುವಟಿಕೆಗಳು ಎದುರಾಗುತ್ತಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರಗಳಿಗೋಸ್ಕರ ಪ್ರಯತ್ನಿಸಬೇಕು. ಕೊಟ್ಟ ಚಟುವಟಿಕೆಗಳನ್ನು, ಪ್ರಾಜೆಕ್ಟುಗಳನ್ನು ಮಾಡಿದ ನಂತರವೇ ಮುಂದಿನ ಪಾಠ್ಯಾಂಶಕ್ಕೆ ಹೋಗಬೇಕು.

ಬಹಳ ಪಾಠಗಳಲ್ಲಿ ಪ್ರಾಜೆಕ್ಟು ಕೆಲಸಗಳುನೀಡಲಾಗಿದೆ. ಅವುಗಳನ್ನು ನಿರ್ವಹಿಸಲು ಕೆಲವು ದಿನಗಳು ಹಿಡಿಯುತ್ತದೆ. ಇವು ಸಮಾಜ ಶಾಸ್ತ್ರದಲ್ಲಿನ ವಿಷಯ ಶೇಕರಣೆಗೆ, ವಿಶ್ಲೇಷಣೆಗೆ, ಪ್ರದರ್ಶನೆಗೆ ಬೇಕಾದ ನೈಪುಣ್ಯಗಳನ್ನು ಬೆಳೆಸುತ್ತವೆ. ಪಾಠದಲ್ಲಿರುವವನ್ನು ಕಂಠಾಪಾಠ ಮಾಡದೆ ಆವುಗಳ ಬಗ್ಗೆ ಆಲೋಚಿಸಿ ಸ್ವಂತ ಅಭಿಪ್ರಾಯವನ್ನು ಏರ್ಪಡಿಸಿಕೊಳ್ಳಬೇಕು.

CÍ£
ŊÀ¨ÆàÌ ÍÜPÀÃÜá
SCERT, ñÆÆÍWÝ|, ÖæÇ¨ÜÃÝ¸Ý¨Üá

SCERT TELANGANA

±ÀÖPÀÌ£ÀÀá E±ÀÁ ãàXÓÀáÊÀÈ E±Ý«ÝÂÄÀ,Ë«ÝÂ¦ ìÀÚÀ ÓÀ ãa®ÀÙÀá

- ಈ ಪುಸ್ತಕವು ರಾಷ್ಟ್ರೀಯ,ರಾಜ್ಯ ಪಠ್ಯ ಯೋಜನೆಯ ಕಾಯ್ದೆಗೆ ಅನುಗುಣವಾಗಿದೆ.ಹತ್ತನೇ ತರಗತಿಯ ನಂತರ ವಿಷಯಗಳ ವಿಭಜನೆ ಮಾಡಬೇಕೆಂದು ಇವು ಹೇಳುತ್ತವೆ.ಚರಿತ್ರೆ,ಅರ್ಥಶಾಸ್ತ್ರ,ಪೌರಶಾಸ್ತ್ರ,ಭೂಗೋಳ ಶಾಸ್ತ್ರ ಎನ್ನುವ ವಿವಿಧ ವಿಭಾಗಗಳಿಗೆ ಇಲ್ಲಿಯವರೆಗೂ ಭೋಧಿಸುತ್ತಾ ಬಂದಿದ್ದಾರೆ.ಆದರೆಇವುಗಳಲ್ಲಿ ಚರ್ಚಿಸುವ ಅಂಶಗಳು ಒಂದಕ್ಕೊಂದು ಮಿಳಿತವಾಗಿದ್ದವು.
- ಶಿಕ್ಷಕರು,ವಿಧ್ಯಾರ್ಥಿಗಳು ಪಠ್ಯ ಪುಸ್ತಕವನ್ನು ತರಗತಿಗೆ ತಂದು ಅದರ ಆಧಾರವಾಗಿ ಕಲಿತುಕೊಳ್ಳುವಂತೆ ಇದನ್ನು ತಯಾರಿಸಲಾಗಿದೆ,ಪಠ್ಯಪುಸ್ತಕವನ್ನು ತರಗತಿ ಕೋಣೆಯಲ್ಲಿ ಓದಿ,ಚರ್ಚಿಸುವುದು ಬಹಳ ಮುಖ್ಯ.
- ±ÝsÀÙÀÈ ¸ÝÐ : ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಪಾಠಗಳನ್ನು ಬರೆಯುವ ಪ್ರಯತ್ನ ಮಾಡಲಾಗಿದೆ.ಆದರೆ ವಿವರಣೆ , ಸ್ಪಷ್ಟತೆ,ನೀಡಬೇಕಾದ ಕೆಲವು ಪದಗಳು ಇವೆ. ಚರ್ಚಿಸುತ್ತಿರುವ ಭಾವನೆಗೆ ಸಂಬಂಧಿಸಿದ ಉದಾಹರಣೆಗಳನ್ನು ನೀಡಲು ಪ್ರಯತ್ನಿಸುತ್ತಿದ್ದೇನೆ. ಪ್ರತಿ ಅಧ್ಯಾಯದಲ್ಲಿ ಕೆಲವು ಮುಖ್ಯ ಭಾವನೆಗಳು ಇವೆ. ಇವುಗಳನ್ನು ಸಾಧಾರಣವಾಗಿ ಉಪ ಶೀರ್ಷಿಕೆಗಳಾಗಿ ನೀಡಲಾಗಿದೆ. ಒಂದೇ ಅವಧಿಯಲ್ಲಿ ಸುಮಾರು 2-3 ಉಪ ಶೀರ್ಷಿಕೆಗಳನ್ನು ಬೋಧಿಸಲು ಅವಕಾಶವಾಗುತ್ತದೆ.
- ಈ ಪಠ್ಯ ಪುಸ್ತಕದಲ್ಲಿ ಭಿನ್ನ ರಚನೆಯ ಶೈಲಿಗಳು ಉಪಯೋಗಿಸಲಾಗಿದೆ. ನರಸಿಂಹ, ರಾಜೇಶ್ವರಿಯಂತಹ ಕಲ್ಪಿತ ಕಥೆಗಳು ಮೂರನೇ ಪಾಠದಲ್ಲಿ ನೀಡಲಾಗಿದೆ. ಇದರ ಮೂಲಕ ವಿದ್ಯಾರ್ಥಿಗಳು ಅವರ ಜೀವನ ಪರಿಸ್ಥಿತಿಗಳು - ಕೆಲಸ ಪರಿಸ್ಥಿತಿಗಳು ನಡುವೆ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುತ್ತಾರೆ. ಸಮಾಜದಲ್ಲಿನ ವಾಸ್ತವಗಳನ್ನು ಪ್ರತಿಬಿಂಬಿಸುತ್ತವೆ. 9ನೇ ಅಧ್ಯಾಯದಲ್ಲಿ ರಾಂಪುರಂ ಗ್ರಾಮ ಆರ್ಥಿಕ ವ್ಯವಸ್ಥೆಯನ್ನು ಓದಿ, ಆ ಗ್ರಾಮ ಪರಿಸ್ಥಿತಿಗಳನ್ನು ತಮ್ಮ ಗ್ರಾಮ ಆರ್ಥಿಕ ಪರಿಸ್ಥಿತಿಗಳೊಂದಿಗೆ ಹೋಲಿಸಿ ಅವಗಾಹನೆ ಮಾಡಿಕೊಳ್ಳುತ್ತಾರೆ. 6, 8, 9, 11, 12 ಅಧ್ಯಾಯಗಳಲ್ಲಿ ಪಟ್ಟಿಕೆಗಳು, ಪೈ ಚಾರ್ಟುಗಳು, ಬಾರ್ ಗ್ರಾಫ್‌ಗಳನ್ನು ನೀಡಲಾಗಿದೆ. ಇವಗಳನ್ನು ವಿದ್ಯಾರ್ಥಿಗಳಿಂದ ವಿಶ್ಲೇಷಿಸಿ ಚರ್ಚೆ ನಿರ್ವಹಿಸುವ ಮೂಲಕ ವಿವಿಧ ಅಂಶಗಳ ಮೇಲೆ ಒಂದು ನಿರ್ಣಯಕ್ಕೆ ಬರಬೇಕು.

  ಹಿಂದಿನ ತರಗತಿಗಳಲ್ಲಿ ಪಕೃತಿ ವೈಪರೀತ್ಯಗಳು, ಮಹಿಳಾ ರಕ್ಷಣೆ ಕಾನೂನುಗಳು, ಸಮಾಚಾರ ಹಕ್ಕು ಕಾಯಿದೆ, ವಿದ್ಯಾ ಹಕ್ಕು ಕಾಯಿದೆಗಳಂತಹವುಗಳನ್ನು ಸ್ವಲ್ಪ ಮಟ್ಟಿಗೆ ಚರ್ಚಿಸಲಾಗಿದೆ. ಈ ವರ್ಷ 22ನೇ ಅಧ್ಯಾಯದಲ್ಲಿನ ಸಮಾಚಾರ ಹಕ್ಕು ಕಾಯಿದೆ ಕುರಿತು ಓದಿ ಸರ್ಕಾರದ ವಿವಿಧ ವಿಭಾಗಗಳು, ಪೌರರ ಪಾತ್ರ ಮತ್ತು ಜವಾಬ್ದಾರಿಗಳೇನು ಎಂಬ ವಿಷಯವನ್ನು ಅರ್ಥಮಾಡಿಕೊಳ್ಳುತ್ತೀರಿ.
- ±ÝsÀ¨À ÊÀá«Â ±ÝsÀ¨À PÄã®À ±ÀÍÀÙÀ®Àá E±ÀÁ ãàXÓÀáÊÀ¨Àá :ಪಾಠದ ಮಧ್ಯದಲ್ಲಿ ಪ್ರಶ್ನೆಗಳು ಇರುವುದು ನೀವು ಗಮನಿಸಿರಬಹುದು.ಈಪ್ರಶ್ನೆಗಳನ್ನು ಬಿಡಬೇಡಿರಿ.ಬೋಧನೆ - ಅಭ್ಯಸನ ಪ್ರಕ್ರಿಯೆಯಲ್ಲಿ ಇವು ಸಮಗ್ರಭಾಗ.ಇವು ಭಿನ್ನವಾದ ಪ್ರಶ್ನಗಳು.ನೀವು ಓದಿದ ಅಂಶಗಳನ್ನು ಕ್ರೂಢೀಕರಿಸಲು,ಅಂದಾಜು ಹಾಕಲು ಕೆಲವು ಪ್ರಶ್ನೆಗಳು ಉಪಯೋಗ ಬೀಳುತ್ತವೆ ಇಲ್ಲವೆ ಮುಂದಿನ ಉಪಶೀರ್ಷಿಕೆಯಲ್ಲಿ ಓದಿದಕ್ಕೆ ಸಂಬಂಧಿಸಿದ ಮತ್ತಷ್ಟು ಸಮಾಚಾರ ಶೇಖರಿಸಲು ಮತ್ತೆ ಕೆಲವು ಪ್ರಶ್ನೆಗಳು ಉಪಯೋಗ ಬೀಳುತ್ತವೆ.ಈ ಪ್ರಶ್ನೆಗಳಿಗೆ ಸಮಾಧಾನಗಳು ನೀವು ಹೇಳಬಾರದು.ತಮ್ಮಷ್ಟಕ್ಕೆ ತಾವೇ ಸಮಾಧಾನಗಳನ್ನು ಕಂಡುಕೊಳ್ಳಲು ವಿಧ್ಯಾರ್ಥಿಗಳಿಗೆ ಅವಕಾಶ ನೀಡಬೇಕು.ಈ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು,ಸಮಾಧಾನಗಳ ಕುರಿತು ಮತ್ತೊಬ್ಬರೊಂದಿಗೆ ಚರ್ಚಿಸಿಕೊಳ್ಳಲು ವಿಧ್ಯಾರ್ಥಿಗಳಿಗೆ ಅನುಮತಿ ನೀಡಿರಿ.
- D ±ÀÖPÀ¨ÀÈ ËË«À Ää£¿á ±ÀÍÀÙÀÚÊ:

  1) ವಿಧ್ಯಾರ್ಥಿಗಳಿಗೆ ತಮ್ಮ ಅನುಭವಗಳನ್ನು ಬರೆಯಲು ಹೇಳುವುದು;
  2) ಪಾಠದಲ್ಲಿ ನೀಡಿದ ಉದಾಹರಣೆಗಳಿಂದ ತಮ್ಮ ಅನುಭವಗಳನ್ನು ಹೋಲಿಸಿಕೊಳ್ಳಿರಿ ಎನ್ನುವುದು;
  3) ಪಠ್ಯ ಪುಸ್ತಕದಲ್ಲಿ ನೀಡಿದ ಎರಡು-ಮೂರು ಪರಿಸ್ಥಿತಿಗಳನ್ನು ಹೋಲಿಸಿರೆಂದು ಹೇಳುವುದು;
  4) ಒಂದೇ ಕೇಸ್ ಸ್ಟಡಿ ಇಲ್ಲವೇ ಪರಿಸ್ಥಿತಿಗಳ ಮೇಲೆ ತಮ್ಮ ಅಭಿಪ್ರಾಯ ತಿಳಿಸಿರೆಂದು ಹೇಳುವ ಪ್ರಶ್ನೆಗಳು(ವಿಧ್ಯಾರ್ಥಿಗಳ ಅಭಿಪ್ರಾಯಗಳು ಕೇಳಿದಾಗ ಅವು ಎಲ್ಲಾ ಒಂದೇ ರೀತಿಯಲ್ಲಿ ಇರಬೇಕೆಂದಿಲ್ಲ)ಎಲ್ಲರನ್ನು ತಮ್ಮ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು ;
  5) ಪಾಠದಲ್ಲಿ ವಿವರಿಸಿದ ಪರಿಸ್ಥಿತಿಗಳನ್ನು ಮೌಲ್ಯಮಾಪನ ಮಾಡುವ ಪ್ರಶ್ನೆಗಳು ಕೊಡಲಾಗಿದೆ.

SCERT TELANGANA

- ತರಗತಿ ಕೋಣೆಯಲ್ಲಿ ಈ ಪ್ರಶ್ನೆಗಳನ್ನು ಶಿಕ್ಷಕರು ಭಿನ್ನ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು.ಕೆಲವು ಪ್ರಶ್ನೆಗಳ ಸಮಾಧಾನವನ್ನು ನೋಟುಪುಸ್ತಕದಲ್ಲಿ ಬರೆಸಬಹುದು.ಕೆಲವುಗಳನ್ನು ಚಿಕ್ಕ ಗುಂಪುಗಳಲ್ಲಿ ಚರ್ಚಿಸಬಹುದು.ಕೆಲವು ವ್ಯಕ್ತಿಗತ ಚಟುವಟಿಕೆಗಳಾಗಿ ಹೇಳಬಹುದು.ಎಲ್ಲಾ ಸಂದರ್ಭಗಳಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಾತಿನಲ್ಲಿ ಬರೆಯುವಂತೆ ಪ್ರೋತ್ಸಾಹಿಸಬೇಕು.ಎಲ್ಲಾ ವಿಧ್ಯಾರ್ಥಿಗಳ ಒಂದೇ ರೀತಿಯ ಸಮಾಧಾನ ಬರುವಂತೆ ಸೂಚನೆಗಳನ್ನು ನೀಡಬಾರದು.
- ಪ್ರತಿ ಪಾಠದಲ್ಲಿ ಸುತ್ತಲೂ ರೇಖೆಗಳಿಂದ ಕೆಲ ಸಮಾಚಾರವಿದೆ.ಪಾಠದಲ್ಲಿ ಚರ್ಚಿಸಿದ ಭಾವನೆಗಳಿಗೆ ಹೆಚ್ಚು ಸಮಾಚಾರವನ್ನು ಇವು ಒದಗಿಸುತ್ತವೆ.ಇವುಗಳನ್ನು ತರಗತಿಯಲ್ಲಿ ಚರ್ಚಿಸುವುದು ಬಹಳ ಮುಖ್ಯ ಅವುಗಳ ಸುತ್ತಲೂ ಚಟುವಟಿಕೆಗಳನ್ನು ಸಹ ರೂಪಿಸಿರಿ.ಆದರೆ ಇವುಗಳನ್ನು ಮೌಲ್ಯಮಾಪನದಲ್ಲಿನ ಭಾಗವಾಗಿ ಮಾಡಬಾರದು.
- **±ÜsÂ±ÜâÓÜPÜ¨ÜÈ E±ÜÁãàXÓ¨Ü bñÜÅWÜÙÜá :** ಛಾಯಾ ಚಿತ್ರಗಳು, ರೇಖಾ ಚಿತ್ರಗಳು, ಕಾರ್ಟೂನ್‌ಗಳು ಮತ್ತು ಪೋಸ್ಟರುಗಳಂತಹ ವಿವಿಧ ಶೈಲಿಗಳ ಚಿತ್ರಗಳನ್ನು ಕೂಡಾ ನಾವು ಉಪಯೋಗಿಸುವ ಪ್ರಯತ್ನ ಮಾಡಿದ್ದೇವೆ. ಇವುಗಳನ್ನು ವಿಭಿನ್ನ ಐತಿಹಾಸಿಕ ಕಾಲಗಳಿಂದ ಮತ್ತು ವಿವಿಧ ಸಂಪನ್ಮೂಲಗಳಿಂದ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಪಠ್ಯಪುಸ್ತಕಗಳಲ್ಲಿ ಉಪಯೋಗಿಸಿದ ವಿವಿಧ ಶೈಲಿಗಳ ಚಿತ್ರಗಳಲ್ಲಿ ವೈವಿಧ್ಯಗಳಿವೆ. ಅನೇಕ ಚಿತ್ರಗಳು ಶೀರ್ಷಿಕೆಗಳೊಂದಿಗೆ ಪ್ರಶ್ನೆಗಳನ್ನು ಹೊಂದಿರುತ್ತವೆ. ಚಿತ್ರಗಳ ಪ್ರಾಮುಖ್ಯತೆಯನ್ನು ಕುರಿತು ತರಗತಿ ಕೋಣೆಯಲ್ಲಿ ಚರ್ಚಿಸುವದಕ್ಕಾಗಿ ವಿದ್ಯಾರ್ಥಿಗಳ ಗಮನವನ್ನು ಸೆಳೆಯಲು ಅವು ನಿಮಗೆ ಸಹಾಯಕವಾಗಬಲ್ಲವು.
- **±ÜoWÜÙÜá,±ÜqrPÜWÜÙÜá,ÃàTÝbñÜ ±ÜoWÜÙÜá :** ಈ ಪುಸ್ತಕದಲ್ಲಿನ ಪಟಗಳು ನಮಗೆ ಭೌಗೋಳಿಕ, ಆರ್ಥಿಕ, ರಾಜಕೀಯ,ಚರಿತ್ರೆಯ ಅಂಶಗಳನ್ನು ತಿಳಿಸುತ್ತವೆ.ವಿಷಯವನ್ನು ಆಸಕ್ತಿ ಬರುವಂತಹ ರೀತಿಯಲ್ಲಿ ತಿಳಿಸಲು ಇವುಗಳನ್ನು ಉಪಯೋಗಿಸಿದ್ದೇವೆ.ಪಟ್ಟಿಕೆಗಳು,ರೇಖಾ ಚಿತ್ರಪಟಗಳೂ ಸಹ ನಿಮಗೆ ಕಾಣುತ್ತವೆ.ಪಟ್ಟಿಕೆಗಳನ್ನು,ರೇಖಾಚಿತ್ರ ಪಟಗಳನ್ನು ಓದುವುದು ಸಮಾಜ ಶಾಸ್ತ್ರದಲ್ಲಿ ಬಹು ಮುಖ್ಯ .ಭಾವನೆಗಳನ್ನು ವಿವರಿಸುವಲ್ಲಿ ಇವು ಮತ್ತಷ್ಟು ಸ್ಪಷ್ಟತೆಯನ್ನು ನೀಡುತ್ತವೆ.
- **Áãàg®Ý(±ÝhÜP...r) PÜÆÓÜ :** ಪುಸ್ತಕದಲ್ಲಿ ವಿವಿಧ ಯೋಜನೆಗಳು ಸೂಚಿಸಲಾಗಿದೆ.ಎಲ್ಲಾ ಯೋಜನೆಗಳನ್ನು ಮಾಡುವುದು ಸಾಧ್ಯವಾಗದೇ ಇರಬಹುದು.ಪಠ್ಯಪುಸ್ತಕ ಓದುವುದರ ಮೂಲಕ ಅಂಶಗಳ ಎಲ್ಲಾ ಭಾವನೆಗಳನ್ನು ಭೋಧಿಸಲಾರೆವು.ಪ್ರಾಜೆಕ್ಟುಗಳ ಮೂಲಕ ವಿಧ್ಯಾರ್ಥಿಗಳಿಗೆ ಸಮಾಜದಲ್ಲಿನ ವ್ಯಕ್ತಿಗಳೊಂದಿಗೆ ವ್ಯವರಿಸುವುದು ತಿಳಿಯುತ್ತದೆ.ಹೊಸ ಸಮಾಚಾರ ಶೇಖರಿಸಿ ತಮ್ಮದೇ ಆದ ಪದ್ಧತಿಯಲ್ಲಿ ಜೋಡಿಸಿ ಪ್ರದರ್ಶಿಸುತ್ತಾರೆ.ಮುಖಾಮುಖಿ ಪ್ರಶ್ನೆಗಳು ತಯಾರು ಮಾಡುವುದು.ಬ್ಯಾಂಕು ಸಂದರ್ಶನಕ್ಕೆ ಏರ್ಪಾಟು ಮಾಡುವುದು.ತಾನು ಶೇಖರಿಸಿದ ಸಮಾಚಾರವನ್ನು ಚಿತ್ರಗಳು,ಪಟ್ಟಿಗಳು,ಇಲ್ಲವೇ ರೇಖಾ ಚಿತ್ರಪಟಗಳಿಂದ ಗಣಾಂಕಗಳು ಉಪಯೋಗಿಸಿ ಎಲ್ಲರಿಗೂ ತಿಳಿಸಲು ಸಿದ್ದವಾಗುವಂತಹ ಸಮಾಜಶಾಸ್ತ್ರ ನೈಪುಣ್ಯಗಳು ಮುಖ್ಯವಾದವು.ಇವು ಗುಂಪುಗಳಲ್ಲಿ ಕೆಲಸ ಮಾಡಲು,ಒಬ್ಬರ ವಿವರಗಳು,ಅಭಿಪ್ರಾಯಗಳು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಲು ಅವು ಪ್ರೋತ್ಸಾಹಿಸುತ್ತವೆ.
- ಸಮಾಚಾರ ನೈಪುಣ್ಯದೊಂದಿಗೆ ಪಟ್ಟಿಗಳು, ಗ್ರಾಫ್‌ಗಳು, ನಕಾಶೆ ಕೌಶಲ್ಯಗಳಲ್ಲಿ ನಕಾಶೆ ಓದುವದು, ನಕಾಶೆ ಗುರ್ತಿಸುವಾದಂತಹವುಗಳನ್ನು ಕೂಡಾ ಪಠ್ಯಕ್ರಮಕ್ಕೆ ಅನುಗುಣವಾಗಿ ಪುಸ್ತಕದಲ್ಲಿಲ್ಲದವುಗಳನ್ನು ಕೂಡಾ ಅಭ್ಯಾಸ/ಮೌಲ್ಯಮಾಪನದಲ್ಲಿ ಕೊಡಬಹುದು.
- ಚರ್ಚಿಸುವದು, ಮುಖಾಮುಖಿ ನಿರ್ವಹಿಸುವದು, ಉಪನ್ಯಾಸ, ಪ್ರಾಜೆಕ್ಟ್‌ಗಳಂತಹವುಗಳನ್ನು ಪಾಠದ ಮಧ್ಯದಲ್ಲಿ, ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ, ನಂತರ ಕೊಡಲಾಗಿದೆ ಇವು ಮಕ್ಕಳಲ್ಲಿ ಸಾಮಾಜಿಕ ತಿಳುವಳಿಕೆಯನ್ನು ಸೂಕ್ಷ್ಮತೆಯನ್ನು, ಬೆಳೆಸಿ ಸಮಸ್ಯೆಗಳ ಬಗ್ಗೆ ಧನಾತ್ಮಕ ಭಾವನೆಯನ್ನು ಹವ್ಯಾಸ ಮಾಡಿಕೊಳ್ಳಲು ಉದ್ದೇಶಿಸಿದವು. ಆದ್ದರಿಂದ ತಪ್ಪದೆ ನಿರ್ವಹಿಸಬೇಕು.

PÜêñÜýñÜWÜÙÜá

±ÜäOÜ¿áÈ¿á **SOPPECOM** ÓÜ¨ÜÓÜÂÃÝ¨Ü ÎÜà PÜ.hÜ. hÝ¿å... AÊÜÄWÜ,, »Üã±ÝÇ...®ÜÈ ÊÜç¨ÜÂ ÊÜê£¿áÈÃÜáÊÜ vÝ»ÜãàÊÜá®... ¥Ý®... AÊÜÄWÜ, ÖÜç¨ÜÃÝ¸Ý¨Üá PÜàí¨Ü ËÍÜË¨ÝÅÆ¿áPÜ ÓÜàÄ¨Ü vÝ» Ag¿å... ¯ÊÜÞÊÜáç AÊÜÄWÜ, ÎÜàÃÜígÜ®...ÃÝÊ... G¨Üãì Ã... ¸ÜíWÜÙÜãÃÜá CÊÜÄWÜ, ÎÜàÊÜá£ PÜ.»ÝWÜÂÆQ$ ÊÜáíb ±ÜâÓÜPÜí ÖÜç¨ÜÃÝ¸Ý¨Üá CÊÜÄWÜ, Bí«Ü±Ü¨ÜàÍ... ÃÝgÂ PÜàí¨Ü WÜí¥ÝÆ¿á ÓÜíaÝÆPÜÃÜá, ±ÜÄÍÜãà«Ü®ÝË»ÝWÜ ÔÝºí©Áãí©Ü ®ÝÊÜà¯ÊÜì×Ô¨Ü PÝ¿ÞìWÝÃÜWÜÙÜÈ ±ÜñÜÂPÜÊÝX, ±ÜÃÜãàPÜÊÝX ±ÝÇãívÜá D ±ÜsÂ ±ÜâÓÜPÜ¨ÜÈ® ±ÝsÜWÜÙÜ®Üá A¼ÊÜê©±ÜwÓÜáÊÜ¨ÜÃÜÈ ÓÜÖÝ¿á ÊÜÞw¨ÜÊÜÃÜÆÄWÜã PÜêñÜýñÜWÜÙÜá. A¨ÜàÄà£¿ÞX vÝ» PÜÃÜà®... ÖÜàvÝP... AÊÜÃÜ ËÊÜÃÜOÝñÜPÜ bñÜÅWÜÙÜá, NCERT ±ÜsÂ±ÜâÓÜPÜWÜÙÜÈ®Ü ÓÜÊÜÞaÝÃÜÊÜ®Üá D ±ÜâÓÜPÜ¨ÜÈ Ë¯ÁãàXÓÜPÜãÙÜÇÝX¨Ü, AÊÜÄWÜã «Ü®ÜÂÊÝ¨ÜWÜÙÜá. D ±ÜâÓÜPÜ¨ÜÈ E±ÜÁãàXÓ¨Ü PÜÆÊÜ bñÜÅWÜÙÜá ²PÜÃ...,ËQ²àw¿Þ,CñÜÃÜ AíñÜhÝìÆ ÓÜí±Ü®ÜãÆWÜÚí¨Ü ÓÜêg®ÝñÜPÜ ÓÝÊÜÞ®ÜÂ A®ÜáÊÜá£WÜ JÙÜ±ÜoárñÜWÜ¨ÜáPÜãÙÜÇÝX¨Ü.

SCERT TELANGANA

ಶೈಕ್ಷಣಿಕ ಪ್ರಮಾಣಗಳು

ಪಾಠದಲ್ಲಿನ ಅಂಶಗಳು ವಿದ್ಯಾರ್ಥಿಗಳಿಗೆ ಅರ್ಥವಾಗಲು ಬೇಕಾಗುವಷ್ಟು ಸಮಯವನ್ನು ನೀಡಬೇಕು. ಮಧ್ಯ ಮಧ್ಯದಲ್ಲಿ ಇರುವ ಪ್ರಶ್ನೆಗಳು ಇದಕ್ಕೆ ಉಪಯೋಗ ಪಡುತ್ತವೆ. ಇವು ಭಿನ್ನವಾದ ಪ್ರಶ್ನೆಗಳು : ತರ್ಕ, ಕಾರಣ – ಕಾರ್ಯ, ಸಮರ್ಥನೆ, ಮೇಘೋಪಟ/ ಭಾವನೆಗಳ ಪಟ, ಪರಿಶೀಲನೆ, ವಿಶ್ಲೇಷಣೆ, ಆಲೋಚನೆ, ಊಹೆ, ಸಮತೋಲನೆ, ವ್ಯಾಖ್ಯಾನಿಸುವಂತವುಗಳಿಗೆ ಸಂಬಂಧಿಸಿದವು. ಮುಖ್ಯವಾದ ಭಾವನೆಗಳನ್ನು ಪ್ರತಿ ಅಧ್ಯಾಯದಲ್ಲಿ ಉದಾಹರಣೆಗಳೊಂದಿಗೆ ಮುಖ್ಯಪದಗಳನ್ನು ಸಹ ನೀಡಲಾಗಿದೆ.

1) **ವಿಷಯಾವಗಾಹನೆ (AS$_1$):** ವಿಚಾರಣೆ, ಚರ್ಚೆ, ಸಮಾಲೋಚನೆಗಳು, ಕೇಸ್ ಸ್ಟಡಿಗಳ ಮೂಲಕ ಉದಾಹರಣೆಗಳು, ವ್ಯಾಖ್ಯೆ, ಪರಿಶೀಲನೆಗಳ ಮೂಲಕ ಮೌಲಿಕ ಭಾವನೆಗಳನ್ನು ಪ್ರೋತ್ಸಾಹಿಸುವುದು.

2) **ಪಾಠ್ಯಾಂಶವನ್ನು ಓದಿ, ಅರ್ಥಮಾಡಿಕೊಂಡು ವ್ಯಾಖ್ಯಾನಿಸುವುದು (AS$_2$):** ಆಗಾಗ ನೇರವಾಗಿ ಭಾವನೆಗಳನ್ನು ತಿಳಿಸದ ರೈತರು , ಕಾರ್ಮಿಕರ ಕೇಸ್ ಸ್ಟಡಿಗಳು, ಕೆಲವು ಚಿತ್ರಗಳು ಇರುತ್ತವೆ. ಇವುಗಳನ್ನು ಅರ್ಥ ಮಾಡಿಕೊಳ್ಳಲು, ಚಿತ್ರಗಳನ್ನು ವ್ಯಾಖ್ಯಾನಿಸಲು ವಿಧ್ಯಾರ್ಥಿಗಳಿಗೆ ಬೇಕಾಗುವ ಸಮಯವನ್ನು ನೀಡಬೇಕು.

3) **ಸಮಾಚಾರ ನೈಪುಣ್ಯಗಳು(AS$_3$):** ಸಾಮಾಜಿಕ ಶಾಸ್ತ್ರಗಳ ವಿಧಾನಗಳೆಲ್ಲವನ್ನು ಕೇವಲ ಪಠ್ಯಪುಸ್ತಕಗಳು ಚರ್ಚಿಸಲಾರವು. ಉದಾಹರಣೆಗೆ ಪಟ್ಟಣ ಪ್ರಾಂತದಲ್ಲಿರುವ ಮಕ್ಕಳು ತಮ್ಮ ಆಯ್ಕೆಯಾದ ಪ್ರಜಾಪ್ರತಿನಿಧಿಗಳ ಕುರಿತು, ಹಳ್ಳಿ ಪ್ರಾಂತಗಳಲ್ಲಿರುವ ಮಕ್ಕಳು , ತಮ್ಮ ಪ್ರಾಂತಗಳಲ್ಲಿನ ಕೆರೆ/ನೀರಾವರಿ ಸೌಕರ್ಯಗಳ ಕುರಿತು ಸಮಾಚಾರ ಶೇಖರಿಸಬಹುದು. ಈ ಸಮಾಚಾರ, ಪಠ್ಯಪುಸ್ತಕದಲ್ಲಿ ನೀಡಿದ್ದು ಒಂದೇ ಆಗದಿರಬಹುದು. ಇದನ್ನು ವಿವರಿಸಬೇಕಾಗಿರುತ್ತದೆ. ಯೋಜನೆಗಳ ಪದ್ಧತಿಯ ಮೂಲಕ ವಿದ್ಯಾರ್ಥಿಗಳು ಶೇಖರಿಸಿದ ಸಮಾಚಾರವನ್ನು ಹೇಳುವುದು ಕೂಡ ಮುಖ್ಯವಾದ ಸಾಮರ್ಥ್ಯವಾಗಿರುತ್ತದೆ. ಉದಾಹರಣೆಗೆ ಕೆರೆಗಳಿಗೆ ಸಂಬಂಧಿಸಿದ ಸಮಾಚಾರವನ್ನು ಶೇಖರಿಸಿದರೆ ಲಿಖಿತ ನಿವೇದಿಕೆಯೊಂದಿಗೆ ಚಿತ್ರ ಇಲ್ಲವೆ ಪಟವನ್ನು ಜೋಡಿಸಬಹುದು. ಶೇಖರಿಸಿದ ಸಮಾಚಾರವನ್ನು ಚಿತ್ರಗಳು, ಗೋಡೆ ಪತ್ರಿಕೆಗಳ ರೂಪದಲ್ಲಿ ಪ್ರದರ್ಶಿಸಬಹುದು. ಸಮಾಚಾರ ಶೇಖರಣೆ, ಕ್ರೂಢೀಕರಣೆ, ವಿಶ್ಲೇಷಣೆಗಳಂತಹುವುಗಳು ಸಹ ಸಮಾಚಾರ ನೈಪುಣ್ಯಗಳಾಗಿರುತ್ತವೆ.

4) **ಸಮಕಾಲೀನ(ಸಾಮಾಜಿಕ) ಅಂಶಗಳ ಮೇಲೆ ಪ್ರತಿಸ್ಪಂದನೆ (AS$_4$):** ಪ್ರಶ್ನಿಸುವುದು ತಮ್ಮ ಜೀವನ ಪ್ರಮಾಣಗಳನ್ನು ವಿವಿಧ ಪ್ರಾಂತಗಳ, ವಿವಿಧ ಕಾಲದ ಜನರ ಜೀವನ ಪ್ರಮಾಣದೊಂದಿಗೆ ಹೋಲಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಈ ಹೋಲಿಕೆಗಳ ಸಂದರ್ಭದಲ್ಲಿ ಎದುರಾಗಬಹುದಾದ ಪ್ರಶ್ನೆಗಳಿಗೆ ಒಂದೇ ಸಮಾಧಾನ ಇಲ್ಲದಿರಬಹುದು.

5) **ಪಟ ನೈಪುಣ್ಯಗಳು (AS$_5$):** ಈ ಪಠ್ಯ ಪುಸ್ತಕದಲ್ಲಿ ವಿವಿಧ ರೀತಿಯ ಪಟಗಳು, ಚಿತ್ರಗಳು ಇವೆ. ಪ್ರದೇಶಗಳಿಗೆ ಸಂಬಂಧಿಸಿದ ಪಟಗಳು, ನೈರೂಪ್ಯ ಚಿತ್ರಗಳು ಎಂದು ಅರ್ಥಮಾಡಿಕೊಂಡು ಅದಕ್ಕೆ ಸಂಬಂಧಿಸಿದ ನೈಪುಣ್ಯಗಳನ್ನು ಬೆಳೆಸಿಕೊಳ್ಳಬೇಕು. ಇದರಲ್ಲಿ ವಿವಿಧ ಹಂತಗಳು ಇವೆ. ಹಿಂದಿನ ತರಗತಿಯಲ್ಲಿ ಎತ್ತರ , ದೂರಗಳನ್ನು ಪಟದಲ್ಲಿ ಹೇಗೆ ತೋರಿಸಬೇಕೆಂದು ತಿಳಿದುಕೊಂಡಿದ್ದೇವೆ. ಸಮತಲ ಎತ್ತರದ ಬಗ್ಗೆ ಈ ತರಗತಿಯಲ್ಲಿ ತಿಳಿದುಕೊಳ್ಳುತ್ತೇವೆ. ಪಠ್ಯ ಪುಸ್ತಕದಲ್ಲಿ ವಿವಿಧ ಚಿತ್ರಗಳು, ಫೋಟೋಗಳು, ಗೋಡೆ ಪತ್ರಿಕೆಗಳು ಇವೆ. ಇವು ಕೇವಲ ಸೌಂದರ್ಯಕ್ಕಾಗಿ ತಯಾರಿಸಿದವಲ್ಲ, ಪಾಠಕ್ಕೆ ಸಂಬಂಧಿಸಿದವು. ಚಿತ್ರಗಳಿಗೆ ಸಂಬಂಧಿಸಿಯೂ ಸಹ ಕೆಲವು ಚಟುವಟಿಕೆಗಳು ಇವೆ.

6) **ಪ್ರಶಂಸೆ/ಅಭಿನಂದನೆ – ಸೂಕ್ಷ್ಮತೆ (AS$_6$):** ಬಾಷೆ, ಸಂಸ್ಕೃತಿ, ಕುಲ, ಮತ, ಸ್ತ್ರೀ, ಪುರುಷರ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಎಷ್ಟೋ ವೈವಿಧ್ಯತೆ ಇದೆ. ಸಮಾಜಶಾಸ್ತ್ರ ಈ ವೈವಿಧ್ಯತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಇವುಗಳ ಬಗ್ಗೆ ಸೂಕ್ಷ್ಮತೆ ಪ್ರದರ್ಶಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

SCERT TELANGANA

±ÄËw

PÀ.¸ÀÌ.	A«ÝÀ¿áWÙá	±ãO¸ÀÌTÀ	£ÍWÙá
	»ÝW -I : ¸ÀÍ±®ãÆWÙ A¼Ê©, ¸ÊÞ®ñ		
1	»ÝÃñ¨àÍ & » è W ã àÚP ¸ÃÃ ã ±WÙá	1&13	g ã ®...
2	A¼Ê© »ÝÊ®WÙá	14&27	g ã ®...
3.	E ñ£, E ¨ ã àÂW	28&43	gáÇ¢
4	»ÝÃñ¨àÍ ¨ÊÝ ¿ ááWá |	44&57	gáÇ¢
5	»ÝÃñ¨àÍ ®©WÙá, ¯àÄ® ¸ÀÍ±® ã ÆWÙá	58&70	BW¸Ár
6	±hWÙá	71&86	BW¸Ár
7	¯ÊÝ¸À ±ÝÍ ñWÙá& ÊÆ¸WÙá	87&101	¸±r Í ŸÃ...
8	ÃÝ Í ±âÃ Í & WÝÊá B ¦ ì P ÊÂÊ¸	102&116	¸±r Í ŸÃ...
9	±± Í bàPÃ |	117&130	®Ê Í ŸÃ...
10	BÖÝÃ »¨ñ	131&144	w¸ Í ŸÃ...
11	¸ÊÞ®ñ & ¸áÔÃ A¼Ê©	145&161	g®ÊÄ
	»ÝW -II : ¸ÊáPÝÈà® ±± Í a, »ÝÃñ¨àÍ		
12	±± Í a ¿ áá¨WÙ Êá«Â ±± Í a	162&185	g ã ®...
13	Ê¸ÝÖñá BÚP ±ÝÍ ñWÙÈ ÃÝÑà ¿ á ËÊááQ aÙáÊÚWÙá	186&201	gáÇ¢
14	»ÝÃñ¨àÍ ÃÝÑà ¿ á aÙáÊÚ & ¨àÍ Ë»g® ¸Ýñ Í ñÂ 1939 &1947	202&215	gáÇ¢
15	¸ñ Í ñ »ÝÃñ¨ ¸Í Ë«Ý® ¯ÊÞ ì |	216&231	BW¸...r
16	»ÝÃñ ¨àÍ¨È aá®ÝÊO ±QÁ á	232&241	¸±r Í ŸÃ...
17	¸ñ Í ñ »ÝÃñ¨àÍ Ê ã ¨Æ Êá ã Êñá ÊÐ ì WÙá 1947&1977	242&257	AP ã ràŸÃ...
18	ÃÝ gQà ¿ á « ã àÃOWÙ E ¨ ¿ á : 1977&2000	258&275	®Ê Í ŸÃ...
19	±± Í a ¿ áá¨WÙ ® Í ñÃ ±± Í a, »ÝÃñ¨àÍ	276&291	®Ê Í ŸÃ...
20	¸ÊáPÝÈà® ¸ÝÊÞ i P aÙáÊÚWÙá	292&307	w¸ Í ŸÃ...
21	ñÆ ÍWÝ | ÃÝ gÂ ¸Ý«® ¿ á aÙáÊÚ	308&324	g®ÊÄ
	±â®ÃÝÊñ ì ®		´ ŸÊÄ

SCERT TELANGANA

ÃÝÐÜóXàñæ

– ÃÜËàí¨ÜÅ®Ý¥Ü sÝWÜãÃ…

ಜನಗಣ ಮನ ಅಧಿನಾಯಕ ಜಯಹೇ |
ಭಾರತ ಭಾಗ್ಯ ವಿಧಾತಾ ||
ಪಂಜಾಬ ಸಿಂಧ್ ಗುಜರಾತ ಮರಾಠಾ |
ದ್ರಾವಿಡ ಉತ್ಕಲ ವಂಗಾ ||
ವಿಂಧ್ಯ ಹಿಮಾಚಲ ಯಮುನಾ ಗಂಗಾ |
ಉಚ್ಛಲ ಜಲಧಿ ತರಂಗಾ ||
ತವ ಶುಭ ನಾಮೇ ಜಾಗೇ |
ತವ ಶುಭ ಆಶಿಷ ಮಾಗೇ ||
ಗಾಹೇ ತವ ಜಯ ಗಾಥಾ |
ಜನಗಣ ಮಂಗಳದಾಯಕ ಜಯ ಹೇ ||
ಭಾರತ ಭಾಗ್ಯ ವಿಧಾತಾ |
ಜಯ ಹೇ ! ಜಯ ಹೇ ! ಜಯ ಹೇ ||
ಜಯ ಜಯ ಜಯ ಜಯಹೇ |

▶ ±ÜÅ£þæ |

&±ÜWÜwÊÜáÄÀ Êæ íPÜo ÓÜá¸ÝºÃÝÊ…

"ಭಾರತ ದೇಶ ನನ್ನ ಮಾತೃಭೂಮಿ. ಭಾರತೀಯರೆಲ್ಲರೂ ನನ್ನ ಸಹೋದರರು. ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ ನನ್ನ ದೇಶವನ್ನೂ, ನನ್ನ ತಂದೆ ತಾಯಿಗಳನ್ನೂ, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ.

ನನ್ನ ದೇಶದ ಬಗ್ಗೆ ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡುತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ."

»ÝÃÜñÜ ÓÜíË«Ý®Ü ±ÜÓÝÊÜ®æ

ಭÝÃÜñÜ¨æàÍÜ ±ÜhæWÜÙÝ¨Ü ®ÝÊÜâ »ÝÃÜñÜ¨æàÍÜÊÜ®Üá ±ÜÃÜÊÜÞ—PÝÃÜ, ÓÜÊÜÞgÊÝ©, hÝñÝÂ£àñÜ, ±ÜhÝ±ÜÅ»ÜáñÜÌ, WÜ|ñÜíñÜÅ ÃÝgÂÊÜ®ÝX ¯ËáìÓÜÆãÙÜÛÆá ±èÃÜÃÜæÆÄWÜã ÓÝÊÜÞiPÜ, B¦ìPÜ, ÃÝgQàÿá, ®ÝÂ¿áÊÜ®Üá; BÇæãàaÜ®æ, »ÝÊÜ±ÜPÜo®æ, ËÍÝÓÜ, «ÜÊÜáì, BÃÝ«Ü®æWÜÙÜÈ ÓÝñÜíñÜÅ$ÂÊÜ®Üá ;AíñÜÔ®ÜÈ¿áá, AÊÜPÝÍÜWÜÙÜÈ¿áã, ÓÜÊÜÞ®ÜñÜÊÜ®Üá ñæãàÄ, A¼ÊÜêj©Wæ ãÚÓÜÆá; AÊÜÃÜæÆÃÜÈ ÊÜÂQ WèÃÜÊÜÊÜ®Üá, ÃÝÑrà¿á ÓÜÊÜæáçPÜÂñæ¿á®Üá ÓÜíÃÜQÓÜáñÝ, Óè»ÝñÜñÜÊÜ®Üá A¼ÊÜêj©WæãÚÓÜÆá, 1949 ®ÜÊæíŸÃ… 26ÃÜí¨Üá ®ÊÜá ÓÜíËÜ«Ý®Ü ±ÜÄÐÜ£®ÜÈ BÁáìÊÜÞwPæãíwÜ ÍÝÓÜ®ÊÝX ¯ËáìÓÜPæãíwÜ D ÓÜíË«Ý®ÜÊÜ®Üá ®ÜÊÜáWæ ®ÝÊæà PæãoárPæãíw¨æàÊæ.

SCERT TELANGANA

ಅಧ್ಯಾಯ

1

ಭಾರತ ದೇಶ ನದಿಗಳು: ಭೌಗೋಳಿಕ ಸ್ವರೂಪಗಳು

ಈ ಅಧ್ಯಾಯದಲ್ಲಿ ನಾವು ಭಾರತ ದೇಶದ ಭೌಗೋಳಿಕ ಸ್ವರೂಪಗಳನ್ನು ಕುರಿತು ತಿಳಿದುಕೊಳ್ಳೋಣ. ನಂತರ ಮುಂದಿನ ಅಧ್ಯಾಯಗಳಲ್ಲಿ ಭಾರತ ದೇಶದ ವಾಯುಗುಣ, ನದಿಗಳು, ನೀರಿನ ಸಂಪನ್ಮೂಲಗಳು, ಜನಸಂಖ್ಯೆ ಮುಂತಾದ ಅಂಶಗಳು ದೇಶದ ಭೌತಿಕ ಪರಿಸರಗಳೊಂದಿಗೆ ಯಾವ ವಿಧದ ಅನುಬಂಧವನ್ನು ಹೊಂದಿವೆಯೋ ಅಧ್ಯಯನ ಮಾಡೋಣ. ದೇಶದಲ್ಲಿ ನೀವು ನೋಡಬೇಕೆಂದುಕೊಂಡ ಎರಡು ಪ್ರಾಂತಗಳು, ಕಾರಣಗಳನ್ನು ಹೇಳಿರಿ. ಹಿಂದಿನ ತರಗತಿಗಳಲ್ಲಿ ನೀವು ಆಂಧ್ರಪ್ರದೇಶದ ಭೌಗೋಳಿಕ ಸ್ವರೂಪಗಳ ಕುರಿತು ಏನು ತಿಳಿದುಕೊಂಡಿರುವಿರಿ? ನಕ್ಷೆ ಅಥವಾ ಅಟ್ಲಾಸು ಸಹಾಯದಿಂದ ಇವುಗಳನ್ನು ವಿವರಿಸಿರಿ. ನೀವು ಇನ್ನು ತಿಳಿಯಬೇಕಾದರೆ ಪಾಠಶಾಲೆಯಲ್ಲಿರುವ ಅಟ್ಲಾಸು, ಗೋಡೆ ನಕ್ಷೆಗಳು, (Raised relief maps) ನಕ್ಷೆಗಳನ್ನು ಉಪಯೋಗಿಸಿರಿ.



ಚಿತ್ರ :1 ಪ್ರಪಂಚ ನಕ್ಷೆಯಲ್ಲಿ ಭಾರತದೇಶ

ನೆಲೆ (Location)

- ಮೇಲಿನ ಪ್ರಪಂಚ ನಕ್ಷೆಯನ್ನು ಪರಿಶೀಲಿಸಿ ಭಾರತ ದೇಶ ನೆಲೆಯನ್ನು ಕುರಿತು ಕೆಲವು ವಾಕ್ಯಗಳನ್ನು ಬರೆಯಿರಿ.
- ಒಂದು ಪ್ರದೇಶವನ್ನು ಇಲ್ಲವೇ ಪ್ರಾಂತವನ್ನು ಖಚಿತವಾಗಿ ಸೂಚಿಸಲು ಅಕ್ಷಾಂಶ, ರೇಖಾಂಶಗಳನ್ನು ಉಪಯೋಗಿಸುತ್ತಾರೆ. ಅಟ್ಲಾಸನ್ನು ಉಪಯೋಗಿಸಿ ಕೆಳಗಿನ ವಾಕ್ಯವನ್ನು ಸರಿಪಡಿಸಿರಿ.

SCERT TELANGANA

"ಭಾರತ ದೇಶ ಬಹಳ ವಿಶಾಲವಾದ ದೇಶ, ಇದು ಪೂರ್ತಿಯಾಗಿ ದಕ್ಷಿಣಾರ್ಧಗೋಳದಲ್ಲಿ ಇದೆ. ದೇಶವು 8°-50° ಉತ್ತರ ರೇಖಾಂಶಗಳ ಮಧ್ಯೆ 68°-9° ಪೂರ್ವ ಅಕ್ಷಾಂಶಗಳ ಮಧ್ಯೆ ಇದೆ."

- "ಭಾರತ ದೇಶವು ಪರ್ಯಾಯ ದ್ವೀಪ" ಎಂಬ ಪದವನ್ನು ಆಗಾಗ ಏಕೆ ಬಳಸುತ್ತೇವೆ?
- ಮೇಲಿನ ನಕ್ಷೆಯನ್ನು ನೋಡಿ ಆರ್ಕಿಟಿಕ್ ವೃತ್ತದಲ್ಲಿ ಭಾರತ ದೇಶವು ಇದೆ ಎಂದು ಊಹಿಸಿಕೊಳ್ಳಿ. ಆಗ ನಿಮ್ಮ ಜೀವನದಲ್ಲಿ ಯಾವ ವ್ಯತ್ಯಾಸಗಳಿರುತ್ತಿದ್ದವು?
- ಅಟ್ಲಾಸಿನಲ್ಲಿ ಇಂದಿರಾ ಪಾಯಿಂಟ್‌ನ್ನು ಗುರ್ತಿಸಿರಿ. ಇದರ ಪ್ರತ್ಯೇಕತೆ ಏನು?
- ತೆಲಂಗಾಣ .... ಮತ್ತು .... ಉತ್ತರ ಅಕ್ಷಾಂಶಗಳ ಮಧ್ಯೆ ....ಮತ್ತು .... ಪೂರ್ವ ರೇಖಾಂಶಗಳ ಮಧ್ಯೆ ಇದೆ.
- ನಿಮ್ಮ ಅಟ್ಲಾಸಿನಲ್ಲಿ ನೀಡಿದ ಸ್ಕೇಲು ಆಧಾರವಾಗಿ ಆಂಧ್ರಪ್ರದೇಶದ ಕರಾವಳಿ ತೀರದ ಉದ್ದವನ್ನು ಅಂದಾಜುಮಾಡಿರಿ.

ಭೌಗೋಳಿಕವಾಗಿ ಭಾರತ ದೇಶವು ಇರುವ ಸ್ಥಿತಿ ವಾಯುಗುಣಗಳಲ್ಲಿ ಬಹಳ ವೈವಿಧ್ಯತೆಗಳಿಗೆ ಕಾರಣವಾಗುತ್ತದೆ. ಇದರಿಂದ ಅನೇಕ ವಿಧಧ ವೃಕ್ಷ, ಜೀವಸ್ವರೂಪಗಳು ಏರ್ಪಟ್ಟು, ವಿವಿಧ ರೀತಿಯ ಬೆಳೆಗಳು ಬೆಳೆಸಲು ಅನುಕೂಲವಾದ ಪರಿಸ್ಥಿತಿಗಳು ಕಲ್ಪಿಸಿಕೊಟ್ಟಿವೆ. ಉದ್ದವಾದ ಇದರ ಕರಾವಳಿ ತೀರಪ್ರಾಂತವಿದ್ದು ಮತ್ತು ಇದರ ನೆಲೆ ಹಿಂದೂ ಮಹಾಸಮುದ್ರದಲ್ಲಿರುವದರಿಂದ ಮೀನು ಹಿಡಿಯುವುದು ಅಲ್ಲದೆ ಅನೇಕ ವ್ಯಾಪಾರ ಮಾರ್ಗಗಳಿಗೆ ಸಹಾಯವಾಗುತ್ತದೆ.

ನಕ್ಷೆ 2 ನ್ನು ಪರಿಶೀಲಿಸಿರಿ.

- ಭಾರತ ದೇಶದ ಸರಿಹದ್ದುಗಳನ್ನು ಗುರ್ತಿಸಿರಿ. ಬಣ್ಣದಿಂದ ತುಂಬಿರಿ ನಕ್ಷೆಯಲ್ಲಿರುವ ಸ್ಕೇಲಿನ ಆಧಾರವಾಗಿ ಬಾಂಗ್ಲಾದೇಶದೊಂದಿಗೆ ಭಾರತ ದೇಶದ ಸರಿಹದ್ದಿನ ಉದ್ದವನ್ನು ಕಂಡುಹಿಡಿಯಿರಿ.

ಒಂಬತ್ತನೇ ತರಗತಿಯಲ್ಲಿ ನೀವು ರೇಖಾಂಶಗಳ ಬಗ್ಗೆ,ಕಾಲ, ಪ್ರಯಾಣ ಎಂಬ ಅಂಶಗಳ ಬಗ್ಗೆ ಓದಿರುವಿರಿ. ನಿಮ್ಮ ಅಟ್ಲಾಸಿನ ಸಹಾಯದಿಂದ ಭಾರತ ದೇಶ ರೇಖಾಂಶ ವಿಸ್ತರಣೆ ಎಷ್ಟೋ ತಿಳಿದುಕೊಳ್ಳಿ. ಭಾರತ ದೇಶಕ್ಕೆ $82^\circ\ 30'$ ಪೂರ್ವ ರೇಖಾಂಶವನ್ನು ಪ್ರಾಮಾಣಿಕ ರೇಖಾಂಶವಾಗಿ ಪರಿಗಣಿಸುತ್ತಾರೆ. ಇದು ಅಲಹಾಬಾದಿನ ಹತ್ತಿರ ಹಾಯ್ದು ಹೋಗುತ್ತದೆ. ಭಾರತ ಪ್ರಮಾಣ ವೇಳೆಗೆ (IST- Indian Standard Time) ಇದನ್ನೇ ಆಧಾರವಾಗಿ ತೆಗೆದುಕೊಳ್ಳುತ್ತಾರೆ. ಗ್ರೀನ್‌ವಿಚ್ ಪ್ರಮಾಣ ವೇಳೆಗೋ (GMT- Greenwich Mean Time) ಇದು 5½ ಗಂಟೆಗಳು ಮುಂದೆ ಇದೆ.

ಪಕ್ಕದಲ್ಲಿ ನೀಡಿದ ಅಂಕಿ ಸಂಖ್ಯೆ ಮಾಹಿತಿಯನ್ನು ಪರಿಶೀಲಿಸಿ ಅಹ್ಮದಾಬಾದ್, ಇಂಫಾಲ್‌ನಲ್ಲಿನ ಸೂರ್ಯೋದಯ, ಸೂರ್ಯಾಸ್ತಮಗಳನ್ನು ತಿಳಿಸುವವು ಯಾವುವು? ಕಾರಣಗಳನ್ನು ವಿವರಿಸಿರಿ.

ದಿನಾಂಕ	ಪ್ರದೇಶ:		ಪ್ರದೇಶ :	
	ಸೂರ್ಯೋದಯ	ಸೂರ್ಯಾಸ್ತಮ	ಸೂರ್ಯೋದಯ	ಸೂರ್ಯಾಸ್ತಮ
5 ಜನವರಿ	05:59	16:37	07:20	18:05



ಚಿತ್ರ 1.1 : ಟಿಬೆಟ್ ಪ್ರಸ್ಥ ಭೂಮಿಯಿಂದ ಹಿಮಾಲಯಗಳ ದೃಶ್ಯ - ವೃಕ್ಷಗಳು ಇಲ್ಲದಿರುವುದು ಗಮನಿಸಿರಿ.

SCERT TELANGANA



SCERT TELANGANA

ನಕ್ಷೆ 2 : ಭಾರತ ದೇಶ - ಉತ್ತರ ದಕ್ಷಿಣ, ಪೂರ್ವ - ಪಶ್ಚಿಮಗಳ ವಿಸ್ತೀರ್ಣ ಪ್ರಾಮಾಣಿಕ ರೇಖಾಂಶ.

ಭೂಗರ್ಭ ಹಿನ್ನೆಲೆ

ಒಂಬತ್ತನೇ ತರಗತಿಯಲ್ಲಿನ ಭೂಮಿ ಮೇಲ್ಪದರು ಚಲನೆಗಳು ಕುರಿತು ಮತ್ತೊಮ್ಮೆ ಓದಿರಿ. ಗೊಂಡ್ವಾನ ಭುಮಿಯಲ್ಲಿನ ಭಾಗದಿಂದ ಭೂಗರ್ಭ, ಹವಾಮಾನ, ಭೂಸವೆತ, ಮಣ್ಣಿನ ಸಂಗ್ರಹಗಳಂತಹಾ ಪ್ರಕ್ರಿಯೆಗಳಿಂದ ಭಾರತ ದೇಶದ ಭೂಭಾಗ, ಮಣ್ಣುಗಳು ಏರ್ಪಟ್ಟಿವೆ. ಲಕ್ಷ ವರ್ಷಗಳಿಂದ ಈ ಅಂಶಗಳನ್ನು ಇಂದು ನಾವು ನೋಡುತ್ತಿದ್ದರೂ ಭೌತಿಕ ಸ್ವರೂಪವನ್ನು ಏರ್ಪಡಿಸಿ, ಬದಲಾಗುತ್ತಾ ಬಂದಿವೆ.

ಪ್ರಪಂಚ ಭೂಭಾಗವೆಲ್ಲಾ ಎರಡು ಪ್ರಧಾನ ಭೂಖಂಡಗಳಿಂದ ಏರ್ಪಟ್ಟಿವೆ. ಇವು ಅಮಗಾಶ (Laurasia) ಭೂಮಿ, ಗೊಂಡ್ವಾನಾ (Gondwna)ಭೂಮಿ, ಭಾರತ ದೇಶ ಪರ್ಯಾಯ ದ್ವೀಪವು ಗೊಂಡ್ವಾನಾ ಭೂ ಭಾಗದಲ್ಲಿನದು. 20 ಕೋಟಿ ವರ್ಷಗಳ ಕೆಳಗೆ ಗೊಂಡ್ವಾನ ಭೂಭಾಗವು ತುಂಡುಗಳಾಗಿ ಸೀಳಿಹೋಗಿ, ಭಾರತ ದೇಶ ಪರ್ಯಾಯ ದ್ವೀಪ ಫಲಕ ಈಶಾನ್ಯ ದಿಕ್ಕಿಗೆ ಪ್ರಯಾಣಿಸಿ ಬಹಳ ದೊಡ್ಡದದ ಯುರೇಸಿಯಾ ಫಲಕ (ಅಂಗಾರಾ ಭೂಮಿ)ದೊಂದಿಗೆ ಡಿಕ್ಕಿ ಹೊಡೆದವು. ಹೀಗೆ ಡಿಕ್ಕಿ ಹೊಡೆದದ್ದರಿಂದ, ತೀವ್ರ ಒತ್ತಡದಿಂದ ಲಕ್ಷ ವರ್ಷಗಳ ಕೆಳಗೆ ಮಡಿಚುವಿಕೆ ಪ್ರಕ್ರಿಯೆಯಿಂದ ಪರ್ವತಗಳು ಏರ್ಪಟ್ಟಿವೆ. ಇಂದು ನಾವು ನೋಡುತ್ತಿರುವ ಹಿಮಾಲಯಗಳು ಈ ಪ್ರಕ್ರಿಯೆಯಿಂದ ಏರ್ಪಟ್ಟಿವೆ.

ಪರ್ಯಾಯ ದ್ವೀಪ ಪ್ರಸ್ಥ ಭೂಮಿಯಲ್ಲಿ ಉತ್ತರ ಅಂಚುಗಳು ಮುರಿದು ಹೋಗಿದ್ದರಿಂದ ಒಂದು ದೊಡ್ಡ ರೇವು (Basin) ಏರ್ಪಟ್ಟಿದೆ. ಕಾಲಕ್ರಮೇಣ ಈ ರೇವುಉತ್ತರಾದಿಯಾಗಿ ಹಿಮಾಲಯ ನದಿಗಳು, ದಕ್ಷಿಣಾದಿಯಿಂದ ಪರ್ಯಾಯ ದ್ವೀಪ ನದಿಗಳು ತಂದ ಮಡ್ಡಿಯಿಂದ ಸಂಗ್ರಹವಾಗಿದೆ. ಇದರ ಫಲಿತವಾಗಿ ಭಾರತ ದೇಶದಲ್ಲಿ ವಿಸ್ತಾರವಾದ ಉತ್ತರ ಸಮತಟ್ಟಾದ ಮೈದಾನ ಪ್ರಾಂತಗಳು ಏರ್ಪಟ್ಟಿವೆ. ಭಾರತ ದೇಶದ ಭೂಭಾಗದಲ್ಲಿ ಬಹಳ ವೈವಿಧ್ಯತೆ ಇದೆ. ಭೂ ಮೇಲ್ಮೈ ಮೇಲೆ ಪರ್ಯಾಯ ದ್ವೀಪ ಪ್ರಸ್ಥಭೂಮಿ ಎಷ್ಟೋ ಪುರಾತನವಾದದು.

- ಭಾರತ ದೇಶ ಉತ್ತರ ಮೈದಾನಗಳು ಏರ್ಪಡಲು ಸಹಾಯವಾದ ಹಿಮಾಲಯ ಪರ್ಯಾಯ ದ್ವೀಪ ನದಿಗಳನ್ನು ಹೆಸರಿಸಿ.
- ಹಿಮಾಲಯಗಳು.............. ಕೋಟಿ ವರ್ಷಗಳ ಹಿಂದೆ ಏರ್ಪಟ್ಟಾಗ, ಬೇಟೆ - ಸಂಗ್ರಹಣೆ ಮೇಲೆ ಆಧಾರಪಟ್ಟ ಮೊದಲ ಮಾನವರು .... ಲಕ್ಷ ವರ್ಷಗಳ ಕೆಳಗೆ ಭೂಮಿ ಮೇಲೆ ಗೋಚರಿಸಿದ್ದಾರೆ.



ಚಿತ್ರ 1.2 : ಉಪಗ್ರಹ ಚಿತ್ರದಲ್ಲಿನ ಹಿಮಾಲಯುಗಳು, ಉತ್ತರ ಮೈದಾನ, ಥಾರ್ ಮರುಭೂಮಿ

SCERT TELANGANA

ಮುಖ್ಯವಾದ ಭೌಗೋಳಿಕ ಸ್ವರೂಪಗಳು

ಭಾರತದ ಭೂಭಾಗವನ್ನು ಕೆಳಗೆ ತಿಳಿಸಿದ ಭೌಗೋಳಿಕ ಸ್ವರೂಪಗಳಾಗಿ ವರ್ಗೀಕರಿಸಬಹುದು.

1. ಹಿಮಾಲಯಗಳು
2. ಗಂಗಾ - ಸಿಂಧೂ ನದಿ ಮೈದಾನ
3. ಪರ್ಯಾಯ ದ್ವೀಪದ - ಪ್ರಸ್ಥಭೂಮಿ
4. ಕರಾವಳಿ ತೀರ ಮೈದಾನಗಳು
5. ಮರುಭೂಮಿ
6. ದ್ವೀಪಗಳು.

ಚಿತ್ರ 2ಮತ್ತು ನಿಮ್ಮ ಪಾಠಶಾಲೆಯಲ್ಲಿನ ಉಬ್ಬಿದ ಹಗುರ ನಕ್ಷೆಯನ್ನು ನೋಡಿರಿ. ನಿಮ್ಮ ಬೆರಳಿನಿಂದ ಕೆಳಗೆ ತಿಳಿಸಿದ ವಲಯಗಳನ್ನು ಪತ್ತೆ ಹಚ್ಚಿರಿ.

- ದಕ್ಕನ್ ಪ್ರಸ್ಥಭೂಮಿಯಲ್ಲಿ ಇಳಿಜಾರು ಯಾವ ಕಡೆ ಇದೆ ಎಂದು ತಿಳಿದುಕೊಳ್ಳಲು ಗೋದಾವರಿ, ಕೃಷ್ಣಾನದಿಗಳ ಪ್ರವಾಹದೊಂದಿಗೆ ನಿಮ್ಮ ಬೆರಳನ್ನು ಸರಿಸಿರಿ.
- ಭೂ ಸ್ವರೂಪಗಳು, ಎತ್ತರಗಳು, ದೇಶಗಳನ್ನು ತಿಳಿಸುತ್ತಾ ಬ್ರಹ್ಮ ಪುತ್ರ ನದಿ ಮಾರ್ಗವನ್ನು ವರ್ಣಿಸಿರಿ.

ಹಿಮಾಲಯಗಳು

ಹಿಮಾಲಯ ಪರ್ವತಗಳು ಒಂದು ಕಮಾನಿನಂತೆ ಪಶ್ಚಿಮದಿಂದ ಪೂರ್ವಕ್ಕೆ 2400 ಕಿ.ಮೀಗಳ ಉದ್ದವಾಗಿ ವಿಸ್ತರಿಸಿವೆ. ಪಶ್ಚಿಮ ಪ್ರಾಂತದಲ್ಲಿ ಇವು 500 ಕಿಲೋಮೀಟರ್‌ಗಳ ಅಗಲವಾಗಿದ್ದು, ಮಧ್ಯೆ, ಪೂರ್ವ ಪ್ರಾಂತಗಳಲ್ಲಿ 200 ಕಿ.ಮೀ. ಅಗಲವಾಗಿವೆ. ಅಂದರೆ ಪಶ್ಚಿಮ ಪ್ರಾಂತದಲ್ಲಿ ಅಗಲ ಹೆಚ್ಚಾಗಿದೆ. ವಿವಿಧ ಪ್ರಾಂತಗಳಲ್ಲಿ ಪರ್ವತ ಎತ್ತರದಲ್ಲಿಯೂ ಸಹ ವ್ಯತ್ಯಾಸಗಳಿವೆ. ಹಿಮಾಲಯಗಳಲ್ಲಿ ಸಮಾಂತರವಾಗಿರುವ ಮೂರು ಪರ್ವತ ಶ್ರೇಣಿಗಳಿವೆ. ಆಳವಾದ ಕಣಿವೆಗಳು, ವಿಶಾಲವಾದ ಪ್ರಸ್ಥಭೂಮಿಗಳಿಂದ ಈ ಪರ್ವತ ಶ್ರೇಣಿಗಳು ಬೇರ್ಪಟ್ಟಿವೆ.

ಅತಿ ಎತ್ತರವಾಗಿ ಉತ್ತರಕ್ಕಿರುವ ಪರ್ವತ ಶ್ರೇಣಿಯನ್ನು ಮಹಾ ಹಿಮಾಲಯಗಳು, ಅಥವಾ ಹಿಮಾದ್ರಿ ಎನ್ನುವರು. ಈ ಶ್ರೇಣಿ ಅವಿಚ್ಛಿನ್ನವಾಗಿ ಹಬ್ಬಿದ್ದು ಪರ್ವತಗಳ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ ಸುಮಾರು 6100 ಮೀಟರ್‌ಗಳಿದೆ.

ಹಿಮಾದ್ರಿ ಶ್ರೇಣಿಯು ಹಿಮದಿಂದ ಆವರಿಸಿದೆ. ಇಲ್ಲಿ ಅನೇಕ ಹಿಮನದಿಗಳನ್ನು ನೋಡಬಹುದು. ಮಂಜು ಕಟ್ಟುವುದು, ಹಿಮನದಿಗಳು ಕರಗುತ್ತಾ ಹರಿಯುವಂತಹ ವಾರ್ಷಿಕ ಚಕ್ರದ ಮೂಲಕ ಜೀವನದಿಗಳಿಗೆ ನೀರನ್ನು ಪೂರೈಸುತ್ತದೆ. ಹಿಮಾದ್ರಿಗೆ ದಕ್ಷಿಣಕ್ಕೆ ಇರುವ ಪರ್ವತ ಶ್ರೇಣಿಯನ್ನು 'ನಿಮ್ನ ಹಿಮಾಲಯಗಳು', 'ಹಿಮಾದ್ರಿ' ಯಂತಲೂ ಕರೆಯುತ್ತಾರೆ. ಈ ಶ್ರೇಣಿ ಬಹಳ ಏರುಪೇರಾಗಿದೆ. ಇಲ್ಲಿ ಬಹಳ ಒತ್ತಡಕ್ಕೆ ಗುರಿಯಾದ ಕಲ್ಲುಗ್ಗಳು ಇರುತ್ತವೆ. ಪರ್ವತಗಳ ಎತ್ತರ 3,700-4,500 ಮಧ್ಯೆ ಇರುತ್ತದೆ. ಈ ಶ್ರೇಣಿಗಳಲ್ಲಿ ಪಿರ್‌ಪಂಜಾಲ್, ಮಹಾಭಾರತ ಪರ್ವತ ಶ್ರೇಣಿಗಳು ಮುಖ್ಯವಾದವು.

ನಿಮ್ನ ಹಿಮಾಲಯ ಶ್ರೇಣಿಯಲ್ಲಿ ಪ್ರಖ್ಯಾತಿಯಾದ ಕಾಶ್ಮೀರ, ಹಿಮಾಚಲ ಪ್ರದೇಶದಲ್ಲಿನ ಕಾಂಗ್ರಾ, ಕುಲು ಕಣಿವೆಗಳಿವೆ. ಸಿಮ್ಲಾ, ಮುಸ್ಸೋರಿ, ನೈನಿತಾಲ್, ರಾಣಿ ಖೇತ್‌ಗಳಂತಹಾ ಬೇಸಿಗೆ ಗಿರಿಧಾಮಗಳಿಗೆ , ನಿತ್ಯಹರಿದ್ವರ್ಣ ಕಾಡುಗಳಿಗೆ ಈ ಶ್ರೇಣಿ ಪ್ರಖ್ಯಾತಿ ಹೊಂದಿದೆ.

- ನಿಮ್ಮ ಅಟ್ಲಾಸಿನಲ್ಲಿ ಈ ಮೂರು ಪರ್ವತ ಶ್ರೇಣಿಗಳನ್ನು ಗುರ್ತಿಸಿರಿ.
- ನಕ್ಷೆಗಳಲ್ಲಿ ಅತ್ಯಂತ ಎತ್ತರವಾದ ಪರ್ವತ ಶಿಖರಗಳನ್ನು ಕೆಲವನ್ನು ಗುರ್ತಿಸಿರಿ.

- ಪಕ್ಕದಲ್ಲಿ ತಿಳಿ ಹಸಿರು ವಲಯಗಳನ್ನು ಗೋಡೆ ನಕ್ಷೆಗಳಲ್ಲಿ, ಉಬ್ಬಿದ ಹಗುರ ನಕ್ಷೆಯಲ್ಲಿ ನಿಮ್ಮ ಬೆರಳಿನಿಂದ ಗುರ್ತಿಸಿರಿ.
- ನಿಮ್ಮ ಅಟ್ಲಾಸಿನಲ್ಲಿ ಭಾರತ ದೇಶದ ಭೌಗೋಳಿಕ ಪಟದಲ್ಲಿ ಕೆಳಗೆ ತಿಳಿಸಿದ ಪ್ರಾಂತಗಳನ್ನು ಪತ್ತೆ ಹಚ್ಚಿರಿ. ಸಿಮ್ಲಾ, ಮಸ್ಸೋರಿ, ನೈನಿತಾಲ್, ರಾಣಿಖೇತ್.

SCERT TELANGANA

ಚಿತ್ರಗಳು 1.3 – 1.6: ದಕ್ಷಿಣ (ಭಾರತ ದೇಶ) ಕಡೆಯಿಂದ ಹಿಮಾಲಯ ದೃಶ್ಯಗಳು - ಚಿತ್ರ 1.1ರಲ್ಲಿ ಟಿಬೆಟ್‌ನ ಕಡೆಯಿಂದ ಹಿಮಾಲಯ ದೃಶ್ಯಗಳೊಂದಿಗೆ ಇವುಗಳನ್ನು ಹೋಲಿಸಿರಿ.

ಈ ಚಿತ್ರಗಳು ಹಿಮಾಲಯಗಳಲ್ಲಿ ಇರುವ ವಿಭಿನ್ನ ವೃಕ್ಷಜಾಲವನ್ನು ಸೂಚಿಸುತ್ತವೆ.

ಕೆಳಗಿನ ಪರ್ವತಗಳು 5 ವಿವಿಧ ಹಂತದ ಎತ್ತರಗಳಿಂದ ವಿಭಜಿಸಲ್ಪಟ್ಟಿವೆ. ಕೆಲವು ಪ್ರಮುಖವಾದ ವೃಕ್ಷಜಾತಿಗಳು ತೋರಿಸಲಾಗಿದೆ.



1.3 ಸಿಕ್ಕಿಂನಲ್ಲಿನ ಕಡಿದಾದ, ಆಳವಾದ ಕಣಿವೆಗಳು.

1.4 ಹಿಮಾಲಯಗಳಲ್ಲಿ ಸೋಪಾನ ವ್ಯವಸಾಯವನ್ನು, ನದಿಮಾರ್ಗದಲ್ಲಿರುವ ಬೆಣಚುಕಲ್ಲನ್ನು ಗುರ್ತಿಸಿರಿ.

1.5 ಹಿಮಾಲಯಗಳಲ್ಲಿ ವಿವಿಧ ಎತ್ತರದಲ್ಲಿರುವ ವಿವಿಧ ವೃಕ್ಷ ಜಾತಿಗಳನ್ನು ತೋರಿಸುವ ಚಿತ್ರ.

1.6 ಮೇಘಾಲಯದಲ್ಲಿನ ಮಾರ್ಕ್‌ಡೋಕ್ ಡಿಂಪೆಪ್ ಕಣಿವೆಯ ದೃಶ್ಯ.

SCERT TELANGANA

ಹಿಮಾಲಯದಲ್ಲಿ ಎಲ್ಲದಕ್ಕಿಂತ ದಕ್ಷಣಕ್ಕೆ ಇರುವ ಶ್ರೇಣಿಯನ್ನು ಶಿವಾಲಿಕ್ ಶ್ರೇಣಿ ಎನ್ನುವರು. ಶಿವಾಲಿಕ್ ಶ್ರೇಣಿ 10-50 ಕಿಲೋಮೀಟರ್‌ಗಳ ಅಗಲವಾಗಿರುತ್ತದೆ, ಇದರಲ್ಲಿರುವ ಪರ್ವತಗಳ ಎತ್ತರ 900-1100 ಮೀಟರ್‌ಗಳ ಮಧ್ಯೆ ಇರುತ್ತದೆ. ಈ ಶ್ರೇಣಿಯನ್ನು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತದೆ. ಜಮ್ಮು ಪ್ರಾಂತಗಳಲ್ಲಿ ಜಮ್ಮು ಬೆಟ್ಟಗಳೆಂದು ಅರುಣಾಚಲ ಪ್ರದೇಶದಲ್ಲಿ ಮಿಷ್ಮಿ ಬೆಟ್ಟಗಳೆಂದು, ಅಸ್ಸಾಂನಲ್ಲಿ ಕಚಾರ್ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಈ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ಕಲ್ಲುಗಳು, ಒಂದು ಮಣ್ಣು ಇರುತ್ತದೆ. ನಿಮ್ನ ಹಿಮಾಲಯ, ಶಿವಾಲಿಕ್ ಶ್ರೇಣಿಗಳ ಮಧ್ಯೆ ಇರುವ ಕಣಿವೆಗಳನ್ನು ಸ್ಥಳೀಯವಾಗಿ ಡೂನ್ ಎನ್ನುವರು. ಇವುಗಳನ್ನು ಕೆಲವು ಪ್ರಸಿದ್ದವಾದ ಡೂನ್‌ಗಳು, ಹೆಡ್ರಾಡೂನ್,ಕೊಟ್ಲಿಡೂನ್, ಪಾಟ್ಲಿಡೂನ್ ಮೊದಲಾದವು.

ಹಿಮಾಲಯಗಳಿಗೆ ಪೂರ್ವಕ್ಕೆ ಗಡಿಯಾಗಿ ಬ್ರಹ್ಮಪುತ್ರ ಕಣಿವೆ ಇದೆ. ಅರುಣಾಚಲಪ್ರದೇಶದಲ್ಲಿ ದಿಹಾಂಗ್ ಕಣಿವೆ ನಂತರ ಹಿಮಾಲಯಗಳು ಹೇರ್‌ಪಿನ್ ತಿರುವ ತೆಗೆದುಕೊಂಡು ದಕ್ಷಿಣಕ್ಕೆ ತಿರಿಗಿ ಈಶಾನ್ಯ ರಾಜ್ಯಗಳಲ್ಲಿ ವಿಸ್ತರಿಸಿವೆ. ಭಾರತ ದೇಶಕ್ಕೆ ಇಲ್ಲಿ ಪೂರ್ವ ಗಡಿಯಾಗಿಯೂ ಹಿಮಾಲಯಗಳು ಇವೆ. ಈ ಪರ್ವತಗಳನ್ನು ಪೂರ್ವಾಮಚಲ್ ಎನ್ನುವರು. ಇವು ಅವಕ್ಷೇಪ ಶಿಲೆಗಳಿಂದ, ಮರುಳುನಿಂದ ಏರ್ಪಟ್ಟಿವೆ. ಪ್ರಾಂತೀಯವಾಗಿ ಪೂರ್ವಾಂಚಲ್ ಪರ್ವತಗಳನ್ನು ಪಾಟ್‌ಕಾಯ್ ಬೆಟಟಗಳು, ನಾಗಾ ಬೆಟ್ಟಗಳು, ಮಣಿಪುರ ಬೆಟ್ಟಗಳು, ಖಾಸಿ ಬೆಟ್ಟಗಳು, ಮಿಜೋ ಬೆಟ್ಟಗಳು ಎನ್ನುವರು.

- ನಿಮ್ಮ ಅಟ್ಲಾಸ್‌ನಲ್ಲಿ ಭಾರತ ದೇಶದ ಭೌತಿಕ ಪಟದಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ.

ಬೆಟ್ಟಗಳು	ರಾಜ್ಯ / ರಾಜ್ಯಗಳು
ಪೂರ್ವಾಂಚಲ	
ಪಾಟ್‌ಕಾಯ್	
ನಾಗಾ ಬೆಟ್ಟಗಳು	
ಮಣಿಪುರ ಬೆಟ್ಟಗಳು	

ಹಿಮಾಲಯಗಳಿಂದ ವಾಯುಗುಣ ಅನೇಕ ವಿಧವಾಗಿ ಪ್ರಭಾವಿತಗೊಳ್ಳುತ್ತದೆ. ಇವು ಭಾರತ ದೇಶದ ಉತ್ತರ ಸರಿ ಹದ್ದುಗಳಲ್ಲಿ ರಕ್ಷಣೆ ಕವಚಗಳಾಗಿದ್ದು, ತೀವ್ರ ಚಳಿಕಾಲದಲ್ಲಿ ಮಧ್ಯ ಆಸಿಯಾದಿಂದ ಬೀಸುವ ತಣ್ಣನೆ ಗಾಳಿಗಳನ್ನು ತಡೆಗಟ್ಟುತ್ತದೆ. ಬೇಸಿಗೆಯಲ್ಲಿ ಮಳೆಗಳಿಗೆ, ಪಶ್ಚಿಮ ಕಣಿವೆ ದಾಟಿದ ನಂತರ ಪ್ರಾಂತದಲ್ಲಿ ಋತು ಪವನಗಳಂತೆ ವಾಯುಗುಣಕ್ಕೆ ಹಿಮಾಲಯಗಳೇ ಕಾರಣ. ಅವು ಇಲ್ಲದಿದ್ದಲ್ಲಿ ಉತ್ತರ ಪ್ರಾಂತ ಒಣಕಾಲಾಗಿರುತ್ತಿತ್ತು. ಹಿಮ ನದಿಗಳಿಂದ ನೀರು ದೊರೆಯುವುದರಿಂದ ಹಿಮಾಲಯ ನದಿಗಳು ವರ್ಷದುದ್ದಕ್ಕೂ ನೀರನ್ನು ಹೊಂದಿರುತ್ತದೆ. ಈ ನದಿಗಳು ಕೆಳಕ್ಕೆ ಬೆಟ್ಟಗಳಿಂದ ಹೊತ್ತು ತರುವ ಒಂಡು ಮಣ್ಣಿನಿಂದ ಮೈದಾನ ಪ್ರಾಂತಗಳು ಬಹಳ ಫಲವತ್ತಾಗಿ ಬದಲಾಗಿವೆ.

ಗಂಗಾ - ಸಿಂಧೂ ನದಿ ಮೈದಾನ

ಮೂರು ಹಿಮಾಲಯ ನದಿಗಳಾದ ಗಂಗಾ, ಸಿಂಧು, ಬ್ರಹ್ಮಪುತ್ರಗಳು, ಅವುಗಳ ಉಪನದಿಗಳಿಂದ ವಿಶಾಲ ಉತ್ತರ ಮೈದಾನ ಏರ್ಪಟ್ಟಿದೆ. ಮೊದಲಿಗೆ (2ಕೋಟಿ ವರ್ಷಗಳ ಕೆಳಗೆ) ಅದು ಕಡಿಮೆ ಆಳ ಇರುವ ರೇವುನಂತೆ ಇತ್ತು. ಹಿಮಾಲಯಗಳಿಂದ ಬರುವ ನದಿಗಳು ವಿವಿಧ ರೀತಿಯ ಒಂಡು (ಮೆಕ್ಕಲು) ಮಣ್ಣಿನಿಂದ ಇದು ಕ್ರಮೇಣ ತುಂಬುತ್ತಾಬಂದಿದೆ.

ಭಾರತ ದೇಶದಲ್ಲಿನ ಗಂಗಾ - ಸಿಂಧೂ ನದಿ ಮೈದಾನವನ್ನು ಪ್ರಧಾನವಾಗಿ ಮೂರು ಭಾಗಗಳಾಗಿ ವಿಭಜಿಸಬಹುದು.

1) ಪಶ್ಚಿಮ ಭಾಗ 2) ಮಧ್ಯ ಭಾಗ 3) ಪೂರ್ವ ಭಾಗ.

SCERT TELANGANA



ಚಿತ್ರ 1.7 : ಮಧ್ಯ ಉನ್ನತ ಭೂಮಿಗಳು, ಗಂಗಾ ಮೈದಾನ, ಹಿಮಾಲಯಗಳು

1) ಪಶ್ಚಿಮ ಭಾಗವು ಹಿಮಾಲಯಗಳಿಂದ ಪ್ರವಹಿಸುವ ಸಿಂಧೂ ನದಿ, ಅದರ ಉಪನದಿಗಳಾದ ಜೀಲಂ, ಚಿನಾಬ್, ರಾವಿ, ಬಿಯಾಸ್, ಸಟ್ಲೆಜ್‌ಗಳಿಂದ ಏರ್ಪಟ್ಟಿದೆ. ಸಿಂಧೂ ನದಿ ರೇವು ಪ್ರಾಂತದ ಹೆಚ್ಚು ಭಾಗ ಪಾಕಿಸ್ತಾನದಲ್ಲಿದೆ. ಸ್ವಲ್ಪ ಭಾಗ ಮಾತ್ರವೇ ಭಾರತ ದೇಶದಲ್ಲಿ ಇರುವ ಪಂಜಾಬ್, ಹರ್ಯಾಣ ಮೈದಾಗಳಲ್ಲಿ ಇದೆ. ಈ ಪ್ರಾಂತಗಳಲ್ಲಿ ಫಲವತ್ತಾದ ಎರಡು ನದಿಗಳ ಮಧ್ಯದ ಪ್ರದೇಶ (Doab)ಗಳು ಅತ್ಯಧಿಕವಾಗಿವೆ. ಎರಡು ನದಿಗಳ ಮಧ್ಯದ ಪ್ರಾಂತವನ್ನು ಅಂತರ್ವೇದಿ ಎನ್ನುವರು.

2) ಮಧ್ಯ ಭಾಗವು ಗಂಗಾ ಮೈದಾನವೆಂದುಪ್ರಖ್ಯಾತಿ ಹೊಂದಿದೆ. ಇದು ಗಗ್ಗರ ನದಿಯಿಂದ ತೀಸ್ತಾ ನದಿವರೆಗೆ ವಿಸ್ತರಿಸಿದೆ. ಈ ಭಾಗವು ಪ್ರಧಾನವಾಗಿ ಉತ್ತರ ಪ್ರದೇಶ್, ಬಿಹಾರ್ ರಾಜ್ಯಗಳಲ್ಲಿ ಸ್ವಲ್ಪ ಹರ್ಯಾಣ, ಜಾರ್ಖಂಡ್, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿಯೂ ಇದೆ. ಇಲ್ಲಿ ಗಂಗಾ, ಯಮುನಾ ನದಿಗಳು ಅವುಗಳ ಉಪನದಿಗಳಾದ ಸೋನ್, ಕೋಸಿಗಳಂತಹಾ ನದಿಗಳು ಪ್ರವಹಿಸುತ್ತವೆ.

3) ಪೂರ್ವ ಭಾಗವು ಪ್ರಧಾನವಾಗಿ ಅಸ್ಸಾಂನಲ್ಲಿರುವ ಬ್ರಹ್ಮ ಪುತ್ರಕಣಿವೆಯಲ್ಲಿ ಇದೆ. ಇದು ಪ್ರಧಾನವಾಗಿ ಬ್ರಹ್ಮ ಪುತ್ರ ನದಿಯಿಂದ ಏರ್ಪಟ್ಟಿದೆ.

ಹಿಮಾಲಯ ನದಿಗಳು ಕೆಳ ಭಾಗಕ್ಕೆ ಪ್ರವಹಿಸುವ ತಳದುದ್ದಕ್ಕೂ ಗ್ರ್ಯಾವೆಲ್ ಹಾಗೂ ಅವರ್ಗೀಕೃತ ಮಡ್ಡಿಗಳನ್ನು ಶಿವಾಲಿಕ್ ಪರ್ವತಗಳ ತಳ ಭಾಗದಲ್ಲಿ 8-16 ಕಿ.ಮೀ.ಗಳ ಕಿರಿದಾದ ಒಂದು ಪಟ್ಟಿಯನ್ನು ಇದು ರೂಪಿಸುತ್ತದೆ. ಈ ಭೂಸ್ವರೂಪವನ್ನು ಭಾಬರ್ ಎನ್ನುವರು. ಇದು ಬಹಳ ರಂಧ್ರಯುಕ್ತ (Porus) ವಾಗಿದ್ದು ಸಣ್ಣನದಿಗಳು, ಹೊಳೆಗಳು ಇದರ ಮೂಲಕ ಗುಪ್ತಗಾಮಿಗಳಾಗಿ ಪ್ರಹವಿಸಿ ಕೆಳಗಿನ ಪ್ರಾಂತದಲ್ಲಿ ಮತ್ತೇ ಹೊರಗಡೆ ಪ್ರವಹಿಸುತ್ತವೆ. ಇದರಿಂದ ಜವುಗು ಭೂಮಿ ನಿರ್ಮಾಣವಾಗುತ್ತದೆ. ಇದನ್ನು ತೆರೈ ಎಂದು ಕರೆಯುತ್ತಾರೆ.. ಈ ವಲಯದಲ್ಲಿ ಹೆಚ್ಚಿನ ತೇವಾಂಶವಿದ್ದು

ಚಿತ್ರ 1.8 : ಅಸ್ಸಾಂನಲ್ಲಿರುವ ಬ್ರಹ್ಮ ಪುತ್ರ ಕಣಿವೆಯಲ್ಲಿನ ಒಂದು ಗ್ರಾಮ

SCERT TELANGANA

ದಟ್ಟವಾದ ಕಾಡುಗಳು, ವಿವಿಧ ಪ್ರಕಾರದ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಆದರೆ ಭಾರತ ದೇಶ ವಿಭಜನೆಯ ಸಮಯದಲ್ಲಿ ವಲಸೆ ಬಂದವರಿಗಾಗಿ ತೆರೈ ವಲಯದಲ್ಲಿರುವ ಬಹಳ ಅರಣ್ಯಗಳನ್ನು ವ್ಯವಸಾಯ ಭೂಮಿಗಳಾಗಿ ಮಾರ್ಪಟ್ಟಿವೆ. ತೆರೈ ವಲಯದ ದಕ್ಷಿಣ ಭಾಗದಲ್ಲಿ ಮೆತ್ತನೆಯ ಮೆಕ್ಕಲು ಮಣ್ಣಿನ ಮೈದಾನಗಳು ಏರ್ಪಟ್ಟಿವೆ.

ಪರ್ಯಾಯ ದ್ವೀಪದ ಪ್ರಸ್ಥ ಭೂಮಿ

ಭಾರತ ದೇಶದ ಪ್ರಸ್ಥ ಭೂಮಿಯನ್ನು ಅದರ ಮೂರು ಕಡೆ ಸಮುದ್ರಗಳು ಇವೆ ಆದ್ದರಿಂದ ಇದನ್ನು ಪರ್ಯಾಯ ದ್ವೀಪದ ಪ್ರಸ್ಥಭೂಮಿ ಎನ್ನುವರು. ಇಲ್ಲಿ ಪ್ರಧಾನವಾಗಿ ಅತ್ಯಂತ ಪ್ರಾಚೀನ ಸ್ಫಟಿಕಾಕಾರ, ಕಠಿಣ ಅಗ್ನಿ ಶಿಲೆಗಳು, ರೂಪಾಂತರ ಶಿಲೆಗಳು ಇವೆ. ಭಾರತದ ಪ್ರಸ್ಥ ಭೂಮಿಯಲ್ಲಿ ಲೋಹ, ಅಲೋಹ ಖನಿಜ ಸಂಪನ್ಮೂಗಳು ಸಹ ಹೇರಳವಾಗಿ ಇವೆ. ಸುತ್ತಲೂ ದುಂಡಾದ ಬೆಟ್ಟಗಳಿಂದ ಕಡಿಮೆ ಆಳವಿರುವ ಅಗಲವಾದ ಕಣಿವೆಗಳಿವೆ. ಈ ಪ್ರಸ್ಥ ಭೂಮಿಯ ಪೂರ್ವಕ್ಕಾದ ಕಡೆಗೆ ಸ್ವಲ್ಪವಾಲಿದಂತಿದೆ. ಇದಕ್ಕೆ ಪಶ್ಚಿಮದ ಅಂಚಿನಲ್ಲಿ ಪಶ್ಚಿಮ ಘಟ್ಟಗಳು, ಪೂರ್ವ ಅಂಚಿನ್ನಲ್ಲಿ ಪೂರ್ವ ಘಟ್ಟಗಳು ಇವೆ. ಈ ಪ್ರಸ್ಥಭೂಮಿಯ ದಕ್ಷಿಣದ ತುದಿಗೆ ಕನ್ಯಾಕುಮಾರಿ ಇದೆ.

ಪರ್ಯಾಯ ದ್ವೀಪದ ಪ್ರಸ್ಥ ಭೂಮಿಯನ್ನು ಪ್ರಧಾನವಾಗಿ ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಅವುಗಳ ಮಧ್ಯ ಉನ್ನತ ಭೂಮಿ, ಮಾಳ್ವಾ ಪ್ರಸ್ಥಭೂಮಿ ಮತ್ತು ದಖನ್ ಪ್ರಸ್ಥಭೂಮಿ ಭಾರತ ದೇಶದ ಭೌಗೋಳಿಕ ನಕ್ಷೆಯಲ್ಲಿ ಗಂಗಾ ಮೈದಾನದ ದಕ್ಷಿಣಕ್ಕೆ, ನರ್ಮದಾ ನದಿಗೆ ಉತ್ತರಕ್ಕೆ ಇರುವ ಮಧ್ಯ ಪರ್ವತ ಪ್ರದೇಶಗಳನ್ನು ಗುರ್ತಿಸಿರಿ. ಇಲ್ಲಿ ಪಶ್ಚಿಮಕ್ಕಿರುವ ಮಾಳ್ವಾ ಪ್ರಸ್ಥಭೂಮಿ, ಪೂರ್ವಕ್ಕಿರುವ ಛೋಟಾನಾಗ್‌ಪುರ್ ಪ್ರಸ್ಥಭೂಮಿ ಮುಖ್ಯವಾದ ಪ್ರಸ್ಥಭೂಮಿಗಳು. ಗಂಗಾ ಮೈದಾನದೊಂದಿಗೆ ಹೋಲಿಸಿದರೆ ಪ್ರಸ್ಥಭೂಮಿ ಪ್ರಾಂತವು ಒಣಕಲಾಗಿರುತ್ತವೆ. ಇಲ್ಲಿನ ನದಿಗಳು ಜೀವನದಿಗಳು ಅಲ್ಲ. ಎರಡನೇ ಸಾಗುವಳಿ ನೀರಾವರಿಗಾಗಿ ಕೆರೆಗಳು, ಕೊಳವೆ ಬಾವಿಗಳ ಮೇಲೆ ಆಧಾರಪಡಬೇಕಾಗಿರುತ್ತವೆ. ಮಧ್ಯ ಪರ್ವತ ಪ್ರದೇಶಗಳ ಉತ್ತರಕ್ಕೆ ಪ್ರವಹಿಸುವ ನದಿಗಳನ್ನು ಗುರ್ತಿಸಿರಿ. ಛೋಟಾನಾಗ್‌ಪೂರ್ ಪ್ರಸ್ಥ ಭೂಮಿಯಲ್ಲಿ ಖನಿಜ ಸಂಪನ್ಮೂಲಗಳು ಹೇರಳವಾಗಿವೆ.

- ನಿಮ್ಮ ಅಟ್ಲಾಸಿನಲ್ಲಿ ಭಾರತ ದೇಶದ ಭೌಗೋಳಿಕ ನಕ್ಷೆಯಲ್ಲಿ ಉಬ್ಬರದ ನಕ್ಷೆಗಳಲಿ ಈಕೆಳಗಿನವುಗಳನ್ನು ಗುರ್ತಿಸಿರಿ. ಮಾಳವ ಪ್ರಸ್ಥಭೂಮಿ, ಬಂದೇಲ್ ಖಂಡ್, ಭಾಗೇಲ್ ಖಂಡ್, ರಾಜಮಹಲ್ ಬೆಟ್ಟಗಳು, ಛೋಟಾನಾಗ್‌ಪೂರ್ ಪ್ರಸ್ಥಭೂಮಿ.
- ಅಟ್ಲಾಸಿನ ಸಹಾಯದಿಮದ ಟಿಬೆಟ್ ಪ್ರಸ್ಥ ಭೂಮಿಯೊಂದಿಗೆ ಹೋಲಿಸಿದರೆ ಮೇಲೆ ತಿಳಿಸಿದ ಪ್ರಸ್ಥ ಭೂಮಿಗಳು ಎಷ್ಟು ಎತ್ತರದಲ್ಲಿ ಇವೆಯೋ ತಿಳಿಸಿರಿ.

ನರ್ಮದಾ ನದಿ ದಕ್ಷಿಣಕ್ಕೆ ಇರುವ ತ್ರಿಭುಜಾಕಾರದ ಪ್ರಾಂತವನ್ನು ದಕ್ಕನ್ ಪ್ರಸ್ಥಭೂಮಿ ಎನ್ನುವರು. ಸಾತ್ಪುರ ಪರ್ವತಗಳು ದಕ್ಕನ್ ಪ್ರಸ್ಥಭೂಮಿಗೆ ಉತ್ತರ ಗಡಿಯಾಗಿ ಸುತ್ತುವರಿಯಲ್ಪಟ್ಟಿವೆ. ಮಹಾದೇವ್ ಕೈಮೂರ್, ಮೈಕಲ್ ಶ್ರೇಣಿಗಳಲ್ಲಿ ಸ್ವಲ್ಪ ಭಾಗವು ಪೂರ್ವ ಅಂಚುಗಳಾಗಿವೆ. ದಕ್ಕನ್ ಪ್ರಸ್ಥಭೂಮಿಗೆ ಪಶ್ಚಿಮದ ಫಲಕವು ಪಶ್ಚಿಮ ಗಡಿಯಾಗಿ, ಪೂರ್ವ



ಚಿತ್ರ 1.9 : ದಕ್ಕನ್ ಪ್ರಸ್ಥಭೂಮಿ

SCERT TELANGANA

ಫಲಕವು ಪೂರ್ವ ಗಡಿಯಾಗಿ, ನೀಲಗಿರಿ ಪರ್ವತಗಳು ದಕ್ಷಿಣದ ಗಡಿಯಾಗಿ ಇವೆ.

ಪಶ್ಚಿಮ ಘಟ್ಟಗಳು ಪಶ್ಚಿಮದ ತೀರಕ್ಕೆ ಸಮಾನಾಂತರವಾಗಿವೆ. ಪಶ್ಚಿಮ ಘಟ್ಟಗಳು ನಿರಂತರ ಅನಿಯತವಾದ ಬೆಟ್ಟ ಸಾಲುಗಳಿಂದ ಇದ್ದು ಮಧ್ಯದಲ್ಲಿ ಕೆಲವು ಘಟ್ಟಗಳು ಕರಾವಳಿ ತೀರ ಮೈದಾನಗಳಿಗೆ ಪ್ರವೇಶದ್ವಾರದಂತಿವೆ. ಪೂರ್ವ ಘಟ್ಟಗಳಿಗಿಂತ ಪಶ್ಚಿಮ ಘಟ್ಟಗಳು ಹೆಚ್ಚು ಎತ್ತರವಾಗಿವೆ. ಈ ಕಾರಣದಿಂದ ದಕ್ಕನ್ ಪ್ರಸ್ಥಭೂಮಿ ಪಶ್ಚಿಮದಿಂದ ಪೂರ್ವಕ್ಕೆ ಸ್ವಲ್ಪವಾಲಿದಂತಿದೆ. (ಚಿತ್ರ 1.9). ಪಶ್ಚಿಮ ಘಟ್ಟಗಳು 1600 ಕಿಲೋಮೀಟರ್‌ಗಳ ದೂರ ಹಬ್ಬಿವೆ. ಗೂಡಲೂರು ಹತ್ತಿರ ನೀಲಗಿರಿ ಪರ್ವತಗಳು ಪಶ್ಚಿಮದ ಘಟ್ಟಗಳನ್ನು ಸೇಉತ್ತವೆ. ಇವು 2000 ಮೀಟರ್‌ಗಳು ಎತ್ತರದವರೆಗೂ ಇವೆ.



ಚಿತ್ರ 3: ಪರ್ಯಾಯ ದ್ವೀಪದ ಪ್ರಸ್ಥಭೂಮಿ

ಪ್ರಖ್ಯಾತಿಹೊಂದಿದ ಬೇಸಿಗೆಯ ಗಿರಿಧಾಮವಾದ ಉದಕ ಮಂಡಲವು ನೀಲಗಿರಿ ಪರ್ವತಗಳಲ್ಲಿ ಇದೆ. ಇದನ್ನೇ ಊಟಿ ಎನ್ನುವರು. ಈ ನೀಲಗಿರಿ ಪರ್ವತಗಳಲ್ಲಿ ಎತ್ತರವಾದ ಶಿಖರವಾದ ದೊಡ್ಡ ಬೆಟ್ಟ (2637 ಮೀ.). ಅನ್ನಾಮಲೈ, ಪಳನಿ (ತಮಿಳುನಾಡು), ಕಾರ್ಡಮಮ್ (ಕೇರಳ), ಬೆಟ್ಟಗಳು ಪಶ್ಚಿಮ ಘಟ್ಟಗಳಲ್ಲಿವೆ. ದಕ್ಷಿಣ ಭಾರತ ದೇಶದಲ್ಲಿ ಅನ್ನಾಮಲೈ ಬೆಟ್ಟಗಳಲ್ಲಿನ ಅನೈಮುಡಿ (2695 ಮೀ.) ಎತ್ತರವಾದ ಶಿಖರ.

ಉತ್ತರಕ್ಕೆ ಮಹಾನದಿ ಕಣಿವೆಯಿಂದ ದಕ್ಷಿಣದ ನೀಲಗಿರಿ ಪರ್ವತಗಳವರೆಗೆ ಪೂರ್ವ ಘಟ್ಟಗಳು ವಿಸ್ತರಿಸಿವೆ. ಆದರೆ ಪೂರ್ವ ಘಟಗಟಗಳು ನಿರಂತರವಾಗಿಲ್ಲ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿದ ಗೋದಾವರಿ, ಕೃಷ್ಣಗಳಂತಹಾ ನದಿಗಳು ಪ್ರಸ್ಥ ಭೂಮಿಯ ಮುಖಾಂತರ ಪ್ರವಹಿಸುತ್ತಾ ಬಂಗಾಳಕೊಲ್ಲಿಯಲ್ಲಿ ಸೇರುತ್ತವೆ. ಪೂರ್ವ ಘಟಗಟಗಳು ಸರಾಸರಿ ಎತ್ತರ 900 ಮೀಟರ್‌ಗಳಿತಿಗಿಂತ ಕಡಿಮೆ. ಪೂರ್ವ ಘಟ್ಟಗಲಲ್ಲಿ ಎತ್ತರವಾದ ಪರ್ವತ ಆರೋಮಬೆಟ್ಟ ಚಿಂತಪಲ್ಲಿ (ಆಂಧ್ರಪ್ರದೇಶ) ಹತ್ತಿರ ಇದೆ. ಇದರ ಎತ್ತರ 1680 ಮೀಟರ್‌ಗಳು. ನಲ್ಲಮಲ, ವೆಲಿಕೊಂಡ, ಪಾಲಕೊಂಡ, ಶೇಷಾಚಲಂಗಳಂತಹಾ ಪೂರ್ವಘಟ್ಟಗಳಲ್ಲಿನ ಭಾಗಗಳು. ಅಗ್ನಿ ಪರ್ವತ ಪ್ರಕ್ರಿಯೆಯಿಂದ ಏರ್ಪಟ್ಟ ಕಪ್ಪು ಮಣ್ಣಿನ ಪರ್ಯಾಯ ದ್ವೀಪ ಪ್ರಸ್ಥ ಭೂಮಿಯಲ್ಲಿ ಹೇಳಿಕೊಳ್ಳುವಂತಹಾ ಅಂಶ.

- ಭಾರತ ದೇಶದ ಉಬ್ಬರದ ನಕ್ಷೆಗಳಲ್ಲಿ ಪೂರ್ವ, ಪಶ್ಚಿಮ ಘಟ್ಟಗಳ ಎತ್ತರಗಳನ್ನು ಟಿಬೆಟನ್ ಪ್ರಸ್ಥಭೂಮಿ, ಹಿಮಾಲಯ ಶಿಖರಗಳೊಂದಿಗೆ ಹೋಲಿಸಿರಿ.



ಚಿತ್ರ 1.10: ಪಶ್ಚಿಮ ಘಟ್ಟಗಳಲ್ಲಿರುವ ಅನ್ನಾಮಲೈ ಬೆಟ್ಟಗಳು

SCERT TELANGANA

ಥಾರ್ ಮರುಭೂಮಿ

ಅರಾವಳಿಪರ್ವತಗಳು ಮಳೆನೆರಳಿನ ಪ್ರಾಂತದಲ್ಲಿ ಥಾರ್ ಮರುಭೂಮಿ ಇದೆ. ಇಲ್ಲಿ ವಾರ್ಷಿಕ ವರ್ಷಪಾತವು 100-150 ಮೀ.ಮೀ. ಮಧ್ಯೆ ಇರುತ್ತದೆ. ಥಾರ್ ಮರುಭೂಮಿಯು ಹಳ್ಳ ದಿಣ್ಣೆಗಳಿಂದಾಗಿದ್ದು ದೊಡ್ಡ ಮರಳು ಮೈದಾನವಾಗಿದ್ದು ಅಲ್ಲಲ್ಲಿ ಶಿಲಮಯವಾದ ದಿನ್ನೆಗಳಿರುತ್ತವೆ .ಅದು ರಾಜಸ್ಥಾನದ ಹೆಚ್ಚು ಭಾಗವನ್ನು ಆಕ್ರಮಿಸಿದೆ. ಇಲ್ಲಿ ಶುಷ್ಕ ವಾತಾವರಣವಿದೆ, ಗಿಡಗಳು ಕಡಿಮೆ, ಮಳೆಕಾಲದಲ್ಲಿ ಹಳ್ಳಿಗಳು ಏರ್ಪಟ್ಟು, ಆ ಕಾಲ ಮುಗಿದ ನಂತರ ಕಾಣದಾಗುತ್ತವೆ. ಈ ಪ್ರಾಂತದಲ್ಲಿ ಇರುವ ಒಂದೇ ಒಂದು ನದಿ ಲೂನಿ. ಈ ಮರುಭೂಮಿಯಲ್ಲಿ ಪ್ರವಹಿಸುವ ನದಿ, ಕಾಲುವೆಗಳಲ್ಲಿನ ನೀರು ಸಮುದ್ರವನ್ನು ಸೇರದೇ ಸರೋವರಗಳಿಗೆ ಭೂಗರ್ಭ ಪ್ರವಾಹಗಳು) ಪ್ರವಹಿಸುತ್ತದೆ.

ಚಿತ್ರ 1.11: ಥಾರ್ ಮರುಭೂಮಿಯಲ್ಲಿ ಒಂದು ಪ್ರದೇಶ

ದೇಶದಲ್ಲಿರುವ ಅತ್ಯಂತ ಉದ್ದವಾದ ಇಂದಿರಾಗಾಂಧಿ ಕಾಲುವೆ (650 ಕಿ.ಮೀ.) ಥಾರ್ ಮರುಭೂಮಿಗೆ ನೀರನ್ನು ಒದಗಿಸುತ್ತದೆ. ಇದರಿಂದ ಮರುಭೂಮಿ ಪ್ರಾಂತದಲ್ಲಿನ ಎಷ್ಟೋ ಹೆಕ್ಟೇರು ಭೂಮಿ ಸಾಗುವಳಿಗೆ ಅನುಕೂಲ ವಾಗಿದೆ.

ಕರಾವಳಿ ಬಯಲು

ಪರ್ಯಾಯ ದ್ವೀಪ ಪ್ರಸ್ಥ ಭೂಮಿಯು ದಕ್ಷಿಣ ಭಾಗದಲ್ಲಿ ಪಶ್ಚಿಮಕ್ಕೆ ಅರಬ್ಬೀ ಸಮುದ್ರ ತೀರದುದ್ದಕ್ಕೂ, ಪೂರ್ವದಲ್ಲಿ ಬಂಗಾಳಕೊಲ್ಲಿ ತೀರದುದ್ದಕ್ಕೂ ವಿವಿಧ ವಿಸ್ತಾರದ ಕರಾವಳಿ ಬಯಲುಗಳಿಂದ ಸುತ್ತುವರಿಯಲ್ಪಟ್ಟಿದೆ. ಪಶ್ಚಿಮದ ಕರಾವಳಿ ಬಯಲು ರಾಣ್ ಆಫ್‌ಕಚ್‌ನಿಂದ ಪ್ರಾರಂಭಿಸಿ ಕನ್ಯಾಕುಮಾರಿಯವರೆಗೂ ಹರಡಿದೆ. ಪೂರ್ವ ಕರಾವಳಿ ಬಯಲುಗಿಂತ ಪಶ್ಚಿಮದ ಕರಾವಳಿ ಬಯಲು ಅಗಲ ಕಡಿಮೆಯಾಗಿದೆ. ಈ ಕರಾವಳಿ ಬಯಲು ಕಿರಿದಾಗಿದ್ದು, ಇದನ್ನು ಮೂರು ಭಾಗಗಳಾಗಿ ವಿಭಜಿಸಬಹುದು.

1) ಕೊಂಕಣ್ ಕರಾವಳಿ ಬಯಲು - ಇದು ಉತ್ತರ ಭಾಗ. ಮಹಾರಾಷ್ಟ್ರ, ಗೋವಾಗಳಲ್ಲಿ ವ್ಯಾಪಿಸಿದೆ.
2) ಕೆನರಾ ಕರಾವಳಿ ಬಯಲು -ಇದು ಮಧ್ಯಭಾಗ, ಕರ್ನಾಟಕದಲ್ಲಿರುವ ಕರಾವಳಿ ತೀರವು ಇದರ ಕೆಳಗೆ ಬರುತ್ತದೆ.


ಚಿತ್ರ 1.12 : ಸುಂದರ್ ಬನ್ ಮಡ ಅಡವಿಗಳು

SCERT TELANGANA

3) ಮಲಬಾರ್ ಕರಾವಳಿ ಬಯಲು – ಇದು ದಕ್ಷಿಣಭಾಗ, ಪ್ರಧಾನವಾಗಿ ಕೇರಳ ರಾಜ್ಯದಲ್ಲಿ ಇದೆ.

ಬಂಗಾಳ ಕೊಲ್ಲಿಯ ಮೈದಾನಗಳು ಅಗಲವಾಗಿದ್ದು ಅಧಿಕ ಮೇಲ್ಮೈಯನ್ನು ಹೊಂದಿವೆ. ಇದು ಒಡಿಶಾದಲ್ಲಿನ ಮಹಾನದಿಯಿಂದ ಪ್ರಾರಂಭವಾಗಿ ತಮಿಳುನಾಡಿನಲ್ಲಿ ಕಾವೇರಿ ಡೆಲ್ಟಾವರೆಗೆ ವಿಸ್ತರಿಸಿದೆ. ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ ನದಿಗಳೊಂದಿಗೆ ಏರ್ಪಟ್ಟ ಈ ಮೈದಾನ ಪ್ರಾಂತಗಳು ಬಹಳ ಫಲವತ್ತಾಗಿವೆ. ಈ ಕರಾವಳಿ ಮೈದಾನಗಳನ್ನು ಸ್ಥಳೀಯವಾಗಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಅವು ಉತ್ಕಲ್ ಕರಾವಳಿ (ಒಡಿಶಾ) ಸರ್ಕಾರ್ ಕರಾವಳಿ (ಆಂಧ್ರಪ್ರದೇಶ್), ಕೋರಮಂಡಲ್ ಕರಾವಳಿ (ತಮಿಳುನಾಡು) ಗಂಗಾ– ಸಿಂಧೂ ಮೈದಾನಗಳಂತೆ ಈ ನದಿ ಮುಖಜ ಭೂಮಿ (ಡೆಲ್ಟಾ) ಪ್ರಾಂತಗಳು ಸಹ ವ್ಯವಸಾಯದಲ್ಲೂ ಅಭಿವೃದ್ಧಿ ಹೊಂದಿವೆ. ಕರಾವಳಿ ವಲಯಗಳಲ್ಲಿ ಮೀನಿನ ಸಂಪನ್ಮೂಲಗಳು ಸಮೃದ್ಧಿಯಾಗಿವೆ. ಒಡಿಶಾದಲ್ಲಿನ ಚಿಲ್ಕಾ ಸರೋವರ, ಆಂಧ್ರಪ್ರದೇಶದಲ್ಲಿನ ಕೊಲ್ಲೇರು, ಪುಲಿಕಾಟ್ ಸರೋವರಗಳು ಕರಾವಳಿ ಬಯಲಿನಲ್ಲಿರುವ ಮುಖ್ಯವಾದ ಭೌಗೋಳಿಕ ಅಂಶಗಳು.

- ಭಾರತ ದೇಶದ ಭೌಗೋಳಿಕ ನಕ್ಷೆಯಲ್ಲಿ ಡೆಲ್ಟಾ ಪ್ರಾಂತಗಳನ್ನು ಗುರ್ತಿಸಿರಿ. ಅವುಗಳ ಎತ್ತರಗಳಲ್ಲಿನ ವ್ಯತ್ಯಾಸಗಳು ಏನು? ಗಂಗಾ – ಸಿಂಧೂ ಮೈದಾನಗಳೊಂದಿಗೆ ಇವುಗಳನ್ನು ಹೋಲಿಸಿರಿ.

ದ್ವೀಪಗಳು :

ಭಾರತ ದೇಶದಲ್ಲಿ ಎರಡು ದ್ವೀಪ ಸಮೂಹಗಳು ಇವೆ. ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್, ನಿಕೋಬಾರ್ ದ್ವೀಪಗಳು, ಅರಬ್ಬೀ ಸಮುದ್ರದಲ್ಲಿನ ಲಕ್ಷದ್ವೀಪ ದ್ವೀಪಗಳು. ಮಯನ್ಮಾರ್ ಬೆಟ್ಟಗಳು ಅರ್ಕನ್‌ಯೆಮಾದಿಂದ ಆರಂಬವಾಗಿ ಸಮುದ್ರದಲ್ಲಿ ಮುಳುಗಿದ ಪರ್ವತಗಳ ಸಮುದ್ರದಿಂದ ಮೇಲೆ ಬಂದ ಶಿಖರ ಪ್ರಾಂತಗಳೇ ಅಮಡಮಾನ್, ನಿಕೋಬಾರ್ ದ್ವೀಪಗಳು. ಈ ದ್ವೀಪಗಳಲ್ಲಿನ ಆನರ್ಕೊಂಡಾಂ, ಬಾರೆನ್ ದ್ವೀಪಗಳು ಅಗ್ನಿ ಪರ್ವತಗಳಿಂದ ಏರ್ಪಟ್ಟಿವೆ. ಭಾರತ ದೇಶದ ದಕ್ಷಿಣದ ಅಂಚು ನಿಕೋಬಾರ್ ದ್ವೀಪದಲ್ಲಿನ ಇಂದಿರಾ ಪಾಯಿಂಟ್ ಹತ್ತಿರ ಇದೆ. 2004 ರಲ್ಲಿ ಸಂಭವಿಸಿದ ಸುನಾಮಿಯಲ್ಲಿ ಇದು ಮುಳುಗಡೆಗೆ ಗುರಿಯಾಗಿತ್ತು. ಲಕ್ಷದ್ವೀಪ ದ್ವೀಪಗಳು ಹವಳ (Coral) ಗಳಿಂದ ರೂಪಿತವಾಗಿವೆ. ಇವುಗಳ ಒಟ್ಟು ಭೌಗೋಳಿಕ ವಿಸ್ತೀರ್ಣವು 32 ಚದರ ಕಿಲೋಮೀಟರ್‌ಗಳು. ಇಲ್ಲಿರುವ ವಿವಿಧ ರೀತಿಯ ವೃಕ್ಷ, ಜೀವರಾಶಿಗಳಿಗೆ ಈ ದ್ವೀಪ ಸಮೂಹಗಳು ಪ್ರಖ್ಯಾತಿ ಹೊಂದಿವೆ.

ನಿಕೋಬಾರ್‌ನಲ್ಲಿ ವಾಸಿಸುವ ಒಂದು ಪಕ್ಷಿ

ಭಾರತೀಯರು ವಾಸಿಸುವ ಭೂಭಾಗದಲ್ಲಿ ಭೌಗೋಳಿಕ ಸ್ವರೂಪಗಳಲ್ಲಿ ಬಹಳ ವೈವಿಧ್ಯತೆಗಳಿವೆ. ಕೆಲವು ಪ್ರಾಂತಗಳು ಹಿಮಾಲಯಗಳಿಂದ ಪ್ರವಹಿಸುವ ದೊಡ್ಡ ನದಿಗಳಿಂದ ನೀರಾವರಿ ಸೌಕರ್ಯ ಹೊಂದಿದರೆ, ಮತ್ತೇ ಕೆಲವು ಪಶ್ಚಿಮ ಘಟ್ಟಗಳು, ಅಲ್ಲಿನ ಅಡವಿಗಳಲ್ಲಿ ಹುಟ್ಟಿದ ಮಳೆಯಾಧಾರಿತ ನದಿಗಳಿಂದ ಸಾಗುವಳಿಯಾಗುತ್ತವೆ. ಅನೇಕ ಪ್ರಾಂತಗಳು ನದಿಕಣಿವೆ ಬಯಲುಗಳಿಲ್ಲದಿದ್ದರೆ ಮತ್ತೇ ಕೆಲವು ಬೆಟ್ಟಗಳಲ್ಲಿವೆ.



ಚಿತ್ರ 1.13 : ನೀರಿನಲ್ಲಿರುವ ಹವಳದ ಬಂಡೆಸಾಲು ((Coral Reefs)

SCERT TELANGANA

ಕೀಲಕ ಪದಗಳು

ಜೀವನದಿ, ಪರ್ಯಾಯ ದ್ವೀಪ, ಕೋರಲ್, ಡೂನ್, ಅಂಗಾರಾಭೂಮಿ, ಗೊಂಡ್ವಾನ್ ಭೂಮಿ , ಶಿವಾಲಿಕ್, ಪೂರ್ವಾಂಚಲ ಲಾರೇಸಿಯಾ.

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ಪಶ್ಚಿಮಕ್ಕೆ ಇರುವ ಗುಜರಾತ್‌ಗಿಂತ ಅರುಣಾಚಲ್ ಪ್ರದೇಶದಲ್ಲಿ ಸೂರ್ಯೋದಯವು ಎರಡು ಗಂಟೆ ಮುಂಚೆ ಆಗುತ್ತದೆ. ಆದರೆ ಗಡಿಯಾರಗಳು ಒಂದೇ ಸಮಯವನ್ನು ತೋರಿಸುತ್ತವೆ. ಏಕೆ? (AS_1)
2. ಹಿಮಾಲಯಗಳು ಈಗಿರುವ ಸ್ಥಾನದಲ್ಲಿ ಇಲ್ಲದಿದ್ದರೆ ಭಾರತ ಉಪಖಂಡ ವಾಯುಗುಣ ಹೇಗೆ ಇರುತ್ತಿದ್ದವು?(AS_1)
3. ಭಾರತ ದೇಶದ ಪ್ರಧಾನ ಭೌಗೋಳಿಕ ವಿಭಜನೆಗಳು ಯಾವುವು? ಹಿಮಾಚಲ ಪ್ರಾಂತ ಭೌಗೋಳಿಕ ಪರಿಸ್ಥಿತಿಗಳೊಂದಿಗೆ ಪರ್ಯಾಯ ದ್ವೀಪ ಪ್ರಸ್ಥಭೂಮಿಯನ್ನು ಹೋಲಿಸಿರಿ. (AS_1)
4. ಭಾರತೀಯ ವ್ಯವಸಾಯವನ್ನು ಹಿಮಾಲಯಗಳು ಯಾವ ವಿಧವಾಗಿ ಪ್ರಭಾವಗೊಳಿಸುತ್ತವೆ? (AS_1)
5. ಗಂಗಾ - ಸಿಂಧೂ ನದಿ ಮೈದಾನದಲ್ಲಿ ಜನಸಾಂದ್ರತೆ ಹೆಚ್ಚು ಕಾರಣಗಳನ್ನು ಹೇಳಿರಿ. (AS_5)
6. ಭಾರತ ದೇಶದ ಸರಿಹದ್ದುಗಳನ್ನು ತೋರಿಸುವ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)
   (i) ಬೆಟ್ಟಗಳು, ಪರ್ವತ ಶ್ರೇಣಿಗಳು, ಕಾರಕೋರಂ, ಜಸ್ಕರ್, ಪಾಟ್‌ಕಾಯ್, ಜೈಂತಿಯಾ, ವಿಂಧ್ಯ ಪರ್ವತಗಳು, ಅರಾವಳಿ, ಕಾರ್ಡಮಂ ಬೆಟ್ಟಗಳು. (AS_5)
   (ii) ಶಿಖರಗಳು - K2, ಕಾಂಚನಗಂಗ, ನಂಗ ಪರ್ವತ, ಅನೈಮುಡಿ.
   (iii) ಪ್ರಸ್ಥಭೂಮಿಗಳು - ಛೋಟನಾಗ್‌ಪೂರ್, ಮಾಲ್ವಾ.
   (iv) ಭಾರತದ ಮರುಭೂಮಿ, ಪಶ್ಚಿಮ ಘಟ್ಟಗಳು, ಲಕ್ಷದ್ವೀಪ, ದ್ವೀಪಗಳು.
7. ಅಟ್ಲಾಸನ್ನು ಉಪಯೋಗಿಸಿ ಕೆಳಗಿನವುಗಳನ್ನು ಗುರ್ತಿಸಿರಿ. (AS_5)
   (i) ಅಗ್ನಿಪರ್ವತಗಳ ವಿಸ್ಫೋಟದಿಂದ ಏರ್ಪಟ್ಟ ದ್ವೀಪಗಳು. (ii) ಭಾರತ ಉಪಖಂಡದಲ್ಲಿನ ದೇಶಗಳು
   (iii) ಕರ್ಕಾಟಕ ರೇಖೆ ಹಾದುಹೋಗುವ ರಾಜ್ಯಗಳು.
   (iv) ಭಾರತ ಭೂಭಾಗದಲ್ಲಿ ಉತ್ತರಕ್ಕಿರುವ ಅಕ್ಷಾಂಶ, ಡಿಗ್ರಿಗಳಲ್ಲಿ.
   (v) ಭಾರತ ಭೂಭಾಗದಲ್ಲಿ ದಕ್ಷಿಣಕ್ಕಿರುವ ಅಕ್ಷಾಂಶ, ಡಿಗ್ರಿಗಳಲ್ಲಿ.
   (vi) ಎಲ್ಲಕ್ಕಿಂತಲೂ ಪೂರ್ವ, ಪಶ್ಚಿಮಕ್ಕಿರುವ ರೇಖಾಂಶಗಳು ಡಿಗ್ರಿಗಳಲ್ಲಿ.
   (vii) ಮೂರು ಸಮುದ್ರಗಳಿರುವ ಪ್ರದೇಶ
   (viii) ಭಾರತದೇಶದಿಂದ ಶ್ರೀಲಂಕವವನ್ನು ಬೇರ್ಪಡಿಸುವ ಜಲಸಂಧಿ.
   (ix) ಭಾರತ ದೇಶದ ಕೇಂದ್ರಾಡಳಿತ ಪ್ರದೇಶಗಳು.
8. ಪೂರ್ವ ಕರಾವಳಿ ಬಯಲು, ಪಶ್ಚಿಮ ಕರಾವಳಿ ಬಯಲುಗಳ ಮಧ್ಯೆ ಹೋಲಿಕೆ ಅಥವಾ ವ್ಯತ್ಯಾಸಗಳೇನು?(AS_1)
9. ಭಾರತ ದೇಶದಲ್ಲಿನ ಕರಾವಳಿ ಬಯಲು ವ್ಯವಸಾಯಕ್ಕೆ ಸಹಾಯಪಡುವಷ್ಟು ಪ್ರಸ್ಥಭೂಮಿ ವಲಯಗಳು ಸಹಾಯವಾಗಲಾರವರು. ಇದಕ್ಕೆ ಕಾರಣಗಳೇನು?(AS_1)
10. ಹಿಮಾಲಯಗಳು, ದ್ವೀಪಗಳು ಮತ್ತು ತೀರ ಮೈದಾನಗಳನ್ನು ಕುರಿತು ಓದಿ, ಅವುಗಳ ವಿವರಗಳೊಂದಿಗೆ ಪಟ್ಟಿ ತಯಾರು ಮಾಡಿರಿ. (AS_3)
11. ಭಾರತ ದೇಶ ಅಭಿವೃದ್ಧಿಯಲ್ಲಿ ಹಿಮಾಲಯಗಳು ಪ್ರಧಾನ ಪೋಷಸುತ್ತಿವೆ ವ್ಯಾಖ್ಯಾನಿಸಿ. (AS_2)

ಯೋಜನೆ

ನಿಮ್ಮ ಅಟ್ಲಾಸಿನಲ್ಲಿ ಭೌತಿಕ, ಭೌಗೋಳಿಕ ಅಂಶಗಳು ಉಬ್ಬರದ, ಇತರ ನಕ್ಷೆಗಳನ್ನು ಉಪಯೋಗಿಸಿ ನೆಲದ ಮೇಲೆ ಮಣ್ಣಿನಿಂದ ಭಾರತ ದೇಶದ ನಮೂನೆಯನ್ನು ತಯಾರು ಮಾಡಿರಿ. ವಿವಿಧ ಭೌಗೋಳಿಕ ಅಂಶಗಳನ್ನು ತೋರಿಸಲು ವಿವಿಧ ಮಣ್ಣು ಅಥವಾ ಮರಳನ್ನು ಉಪಯೋಗಿಸಿರಿ. ಶಿಖರಗಳ ಎತ್ತರಗಳಲ್ಲಿನ ವ್ಯತ್ಯಾಸಗಳನ್ನು ತೋರಿಸಿರಿ. ನದಿಗಳನ್ನು ಗುರ್ತಿಸಿರಿ. ನಿಮ್ಮ ಅಟ್ಲಾಸಿನಲ್ಲಿ ಅರಣ್ಯಗಳನಕ್ಷೆಯ ಆಧಾರವಾಗಿ ಅದನ್ನು ಹುಲ್ಲು, ಎಲೆಗಳಿಂದ ಅಲಂಕರಿಸಿರಿ. ನಂತರ ಸ್ವಲ್ಪ ಕಾಲದ ನಂತರ ಇತರ ಅಂಶಗಳನ್ನು ಅದರಲ್ಲಿ ಜೋಡಿಸಬಹುದು.

SCERT TELANGANA

A«ÝÂ¿á
2

A¼ÊÜê© »ÝÊÜ®æWÜÙÜá

ಅಭಿವೃದ್ಧಿ, ಪ್ರಗತಿಗೆ ಸಂಬಂಧಿಸಿದ ಭಾವನೆಗಳು ನಮ್ಮೊಂದಿಗೆ ಅನಾದಿಕಾಲದಿಂದಲೂ ಇವೆ. ಹೇಗೆ ಜೀವಿಸಬೇಕು, ನಾವು ಏನು ಮಾಡಬೇಕು ಎನ್ನುವ ಅಂಶಗಳಿಗೆ ಸಂಬಂಧಿಸಿ ನಮಗೆ ಕೆಲವು ಕೋರಿಕೆಗಳು, ಆಕಾಂಕ್ಷೆಗಳಿವೆ. ಅದೇ ವಿಧವಾಗಿ, ದೇಶ ಹೇಗೆ ಇರಬೇಕು ಎಂಬುದನ್ನು ಕುರಿತು ಸಹ ನಮಗೆ ಕೆಲವು ಅಭಿಪ್ರಾಯಗಳಿವೆ. ನಮಗಿರುವ ಅತ್ಯವಶ್ಯಕ ಅವಸರಗಳೇನು? ಎಲ್ಲರ ಜೀವನವು ಮತ್ತಷ್ಟು ಉತ್ತಮವಾಗಿರಬಹುದಾ ? ಮತ್ತಷ್ಟು ಸಮಾನತೆಯನ್ನು ಸಾಧಿಸಬಹುದಾ? ಅಭಿವೃದ್ಧಿ ಎಂದರೆ ಇಂತಹ ಪ್ರಶ್ನೆಗಳ ಕುರಿತು, ಈ ಗುರಿಗಳನ್ನು ಸಾಧಿಸುವ ಮಾರ್ಗಗಳನ್ನು ಕುರಿತು ಆಲೋಚಿಸುವರು. ಬಹಳ ಕಷ್ಟವಾದ ಕೆಲಸ. ಈ ಅಧ್ಯಾಯದಲ್ಲಿ ಅಭಿವೃದ್ಧಿ ಎಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡೋಣ.

ಚಿತ್ರ 2.1 : ನಾನು ಇಲ್ಲದೇ ಅವರು ಅಭಿವೃದ್ಧಿ ಹೊಂದಲಾರರು. ಈ ವಿಧಾನದಲ್ಲಿ ನಾನು ಅಭಿವೃದ್ಧಿ ಹೊಂದಲಾರೆ.

ವಿವಿಧ ವರ್ಗಗಳ ಪ್ರಜೆಗಳ ಆಕಾಂಕ್ಷೆಗಳು :

ಪಟ್ಟಿಕೆ-1 ರಲ್ಲಿ ತಿಳಿಸಿದಂತೆ ವಿವಿಧ ವರ್ಗಗಳ ಪ್ರಜೆಗಳ ಅಭಿವೃದ್ಧಿ ಎಂದರೆ ಏನು ಎಂಬುದನ್ನು ಊಹಿಸಿಕೊಳ್ಳಲು ಪ್ರಯತ್ನಿಸೋಣ ಅವರ ಹೆಬ್ಬಯಕೆ ಏನು ? ಪಟ್ಟಿಕೆಯಲ್ಲಿನ ಕೆಲವು ಸ್ತಂಭಗಳನ್ನು ತುಂಬಲಾಗಿದೆ. ಪಟ್ಟಿಕೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸಿರಿ. ಇದರೊಂದಿಗೆ ಇತರ ವರ್ಗಗಳ ಪ್ರಜೆಗಳನ್ನು ಸೇರಿಸಿರಿ.

ಪಟ್ಟಿಕೆ 1 : ವಿವಿಧ ವರ್ಗಗಳ ಜನರ ಅಭಿವೃದ್ಧಿಯ ಗುರಿಗಳು

ವಿವಿಧ ವರ್ಗಗಳ ಪ್ರಜೆಗಳು	ಅಭಿವೃದ್ಧಿ ಗುರಿಗಳು / ಹೆಬ್ಬಯಕೆಗಳು
ಭೂಮಿ ಇಲ್ಲದ ಗ್ರಾಮೀಣ ಕೂಲಿಕಾರ	ಮತ್ತಷ್ಟು ದಿನಗಳ ಕೆಲಸ, ಉತ್ತಮವಾದ ಕೂಲಿ ; ಸ್ಥಳೀಯ ಪಾಠಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ; ಸಾಮಾಜಿಕ ತಾರತಮ್ಯ ಇಲ್ಲದಿರುವುದು, ಅವರು ಸಹ ಗ್ರಾಮದಲ್ಲಿ ನಾಯಕರಾಗುವುದು
ಶ್ರೀಮಂತ ರೈತರು	ತಮ್ಮ ಬೆಳೆಗಳಿಗೆ ಅಧಿಕ ಬೆಂಬಲ ಬೆಲೆಯ ಮೂಲಕ, ಕಡಿಮೆ ಕೂಲಿಗೆ ಬಹಳ ಕಷ್ಟಪಡುವ ಕೂಲಿಗಳ ಮೂಲಕ ಅಧಿಕ ಆದಾಯವನ್ನು ಖಚಿತವಾಗಿ ಹೊಂದುವುದು. ತಮ್ಮ ಮಕ್ಕಳು ವಿದೇಶಗಳಲ್ಲಿ ನೆಲೆಸುವುದು.

SCERT TELANGANA

ಮಳೆಯಾಧಾರಿತ ರೈತರು	
ಭೂಮಿ ಇರುವ ಕುಟುಂಬದಲ್ಲಿರುವ ಗ್ರಾಮೀಣ ಮಹಿಳೆ	
ಪಟ್ಟಣ ಪ್ರಾಂತದಲ್ಲಿನ ನಿರುದ್ಯೋಗ ಯುವಜನತೆ	
ಪಟ್ಟಣ ಪ್ರಾತಂತದಲ್ಲಿನ ಶ್ರೀಮಂತ ಹುಡುಗ	
ಪಟ್ಟಣ ಪ್ರಾಂತದಲ್ಲಿನ ಶ್ರೀಮಂತ ಕುಟುಂಬಕ್ಕೆ ಸೇರಿದ ಹುಡುಗಿ	ತನ್ನ ಸಹೋದರನಿಗೆ ಸಿಗುವ ಸ್ವತಂತ್ರ ತನಗೆ ಬೇಕು. ತನ್ನ ಜೀವನದಲ್ಲಿ ಏನು ಮಾಡಬೇಕೋ ತಾನು ನಿರ್ಣಯಿಸಿಕೊಳ್ಳ ಬೇಕು. ವಿದೇಶಗಳಲ್ಲಿ ಉನ್ನತ ವ್ಯಾಸಾಂಗ ಮಾಡಬೇಕು.
ಗಣಿ ಅಗೆಯುವ ಪ್ರಾಂತದಲ್ಲಿನ ಆದಿವಾಸಿ	
ಕರಾವಳಿ ತೀರದಲ್ಲಿಯ ಮೀನು ಹಿಡಿಯುವ ವೃತ್ತಿ ವರ್ಗದ ವ್ಯಕ್ತಿ	

ಪಟ್ಟಿಕೆ 2.1 ತುಂಬಿದ ನಂತರ ಅದನ್ನು ಪರಿಶೀಲಿಸೋಣ. ಅಭಿವೃದ್ಧಿ ಅಥವಾ ಪ್ರಗತಿಯ ಬಗ್ಗೆ ಎಲ್ಲರಿಗೂ ಒಂದೇ ಭಾವನೆ ಇದೆಯಾ ? ಬಹುಶಃ ಇಲ್ಲದೇ ಇರಬಹುದು. ಪ್ರತಿಯೊಬ್ಬರ ಕೋರಿಕೆಗಳು ಬೇರೆ ಬೇರೆಯಾಗಿವೆ. ಅವರಿಗೆ ಮುಖ್ಯವಾದವು ಅವರ ಆಕಾಂಕ್ಷೆ, ಕೋರಿಕೆಗಳನ್ನು ಪಡೆಯಲು ಅವರು ಪ್ರಯತ್ನಿಸುತ್ತಾರೆ. ವಾಸ್ತವಕ್ಕೆ ಕೆಲವೊಮೆಮ ಇಬ್ಬರು ವ್ಯಕ್ತಿಗಳಿಗೆ, ಇಲ್ಲವೇ ಗುಂಪುಗಳಿಗೆ ಪರಸ್ಪರ ವಿರುದ್ಧವಾದ ಕೋರಿಕೆಗಳಿರಬಹುದು. ಒಂದು ಹುಡುಗಿ ತನ್ನ ಸಹೋದರನಿಗೆ ಸಿಗುವ ಸ್ವಾತಂತ್ರ್ಯ ತನಗೂ ಬೇಕೆಂದು, ಮನೆಗೆಲಸದಲ್ಲಿ ಆತನೂ ಭಾಗಿಯಾಗಬೇಕೆಂದು ಆಶಿಸಬಹುದು. ಆದರೆ ಇದು ಆತನಿಗೆ ಇಷ್ಟವಾಗದೇ ಇರಬಹುದು. ಅದೇ ರೀತಿ ಮತ್ತಷ್ಟು ವಿದ್ಯುಚ್ಛಕ್ತಿಗಾಗಿ ಕೈಗಾರಿಕೋದ್ಯಮಿಗಳು ಮತ್ತಷ್ಟು ಆಣೆಕಟ್ಟುಗಳನ್ನು ಕೋರಿಕೊಳ್ಳಬಹುದು. ಆದರೆ ಇವುಗಳಿಂದ ಭೂಮಿಗಳು ಪ್ರವಾಹಕ್ಕೆ ಗುರಿಯಾಗಿ, ಗಿರಿಜನರಂತಹ ನಿರಾಶ್ರಿತ ಜನರ ಜೀವನವನ್ನು ಅಸ್ತವ್ಯಸ್ಥೆಯಾಗಬಹುದು. ಅವರು ದೊಡ್ಡ ಜಲಮಯವಾಗುವ ಆಣೆಕಟ್ಟುಗಳನ್ನು ವ್ಯತಿರೇಕಿಸಿ ತಮ್ಮ ಭೂಮಿಗಳಿಗೆ ನೀರಾವರಿ ಸೌಕರ್ಯಕ್ಕಾಗಿ ಚಿಕ್ಕ ಚೆಕ್‌ಡ್ಯಾಮ್‌ಗಳು ಇಲ್ಲವೆ ಕೆರೆಗಳನ್ನು ಕೋರಿಕೊಳ್ಳಬಹುದು.



ಚಿತ್ರ 2.2 : ಈ ಚಿತ್ರದಲ್ಲಿರುವ ಮಾನವಾಭಿವೃದ್ಧಿ ಚರಿತ್ರೆ ಪರಿಣಾಮ ಕ್ರಮ ಕಾಲಸೂಚಿ (timeline) ಯನ್ನು ಪರಿಶೀಲಿಸಿದರೆ ಬೇಟೆ, ಶೇಖರಣೆ 2,00,000 ವರ್ಷಗಳೆಂದು, ವ್ಯವಸಾಯ ಪ್ರಾರಂಭಿಸಿ 12,000 ವರ್ಷಗಳೆಂದು, ಕೈಗಾರಿಕೀಕರಣ ಪ್ರಾರಂಭವಾಗಿ 400 ವರ್ಷಗಳು ಎಂದು ಅರ್ಥವಾಗುತ್ತದೆ.

SCERT TELANGANA

ಯಾರ ಅಭಿವೃದ್ಧಿ ?

ಚಿತ್ರ 2.3 : ಕುಡಂಕುಳಂ ಅಣು ವಿದ್ಯುತ್ ಕೇಂದ್ರಬಳಿ ಪ್ರತಿಭಟನೆ

ಅಭಿವೃದ್ಧಿ ಎಂದರೆ ವಿಭಿನ್ನ ಅಭಿಪ್ರಾಯಗಳಿದ್ದಾಗ ಅಭಿವೃದ್ಧಿಯ ವಿಧಾನಗಳಲ್ಲಿ ವ್ಯತ್ಯಾಸಗಳಿರುವುದು ಸಹಜವಾಗಿದೆ. ತಮಿಳುನಾಡು ರಾಜ್ಯ ತಿರುಣವೆಲ್ಲಿ ಜಿಲ್ಲೆಯಲ್ಲಿರುವ ಕುಡಂಕುಳಂ ಅಣು ವಿದ್ಯುತ್ ಕೇಂದ್ರ ಸ್ಥಾಪನೆಗೆ ವಿರುದ್ಧವಾಗಿ ನಡೆಯುವ ಪ್ರತಿಭಟನೆಯು ಅಂತಹದ್ದಾಗಿದೆ. ಮತ್ಸಕಾರರಿರುವ ನಿವಾಸ ಪ್ರಾಂತಗಳಿರುವ ಪ್ರಶಾಂತ ಸಮುದ್ರ ತೀರದಲ್ಲಿ ಭಾರತ ಸರ್ಕಾರ ಅಣುವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದೆ. ಇದರ ಪ್ರಧಾನ ಉದ್ದೇಶವು ನಿರಂತರ ಬೆಳೆಯುತ್ತಿರುವ ದೇಶ ವಿದ್ಯುಚ್ಛಕ್ತಿ ಅವಸರಗಳನ್ನು ಈಡೇರಿಸುವುದು. ಈ ಪ್ರಾಂತದ ಜನರು ಅವರ ಭದ್ರತೆ, ರಕ್ಷಣೆ, ಜೀವನೋಪಾದಿಗಳ ಪರಿರಕ್ಷಣೆಗಾಗಿ ಹೋರಾಡಿದ್ದಾರೆ. ದೀರ್ಘಕಾಲದವರೆಗೆ ಹೋರಾಡುವ ಪರಿಸ್ಥಿತಿ ಏರ್ಪಟ್ಟಿದೆ. ಶಾಸ್ತ್ರಜ್ಞರು, ಪರಿಸರವಾದಿಗಳು, ಸಾಮಾಜಿಕ ಹೋರಾಟಗಾರರು ಪ್ರಜೆಗಳ ಪರವಾಗಿ ನಿಂತು ಇದನ್ನು ವಿರೋಧಿಸಿದ್ದಾರೆ.

''ನಾವು ಅಣುವಿದ್ಯುತ್ ಕೇಂದ್ರ ಸ್ಥಾಪನೆಗೆ ವಿರುದ್ಧವಾಗಿ ಹೋರಾಟ ಮಾಡುತ್ತಿರುವೆವೆಂದು ನೀವು ಭಾವಿಸುವುದರಿಂದ ನೀವು ನಮ್ಮ ಹೋರಾಟವನ್ನು ಪ್ರಶಂಸಿಸುತ್ತಿಲ್ಲ. ಆದರೆ ಅದರಿಂದಾಗುವ ವಿನಾಶಕ್ಕೆ ವಿರುದ್ಧವಾಗಿ ನಮ್ಮ ಹೋರಾಟ'' ಎನ್ನುವ ಅಭಿಪ್ರಾಯಗಳು ಸರ್ಕಾರಕ್ಕೆ ಪತ್ರಗಳ ರೂಪದಲ್ಲಿ ಸೇರುತ್ತಿವೆ.

ನಮ್ಮ ಕರಾವಳಿ ಪ್ರದೇಶ. ದೇಶವು ರೇಡಿಯೋ ವಿಕಿರಣ ವಿನಾಶಕ ಅಪಾಯದಿಂದ ರಕ್ಷಿಸಬೇಕೆಂದು ಕೋರಿಕೊಳ್ಳುತ್ತಿರುವೆವು. ಈ ಯೋಜನೆ ನಿರ್ಮಾಣವನ್ನು ನಿಲ್ಲಿಸಿ ಪರ್ಯಾಯವಾಗಿ ಇಂಧನ ಸಂಪನ್ಮೂಲ ಬಗ್ಗೆ ಆಲೋಚಿಸಿರಿ. ಆದರೆ ಸರ್ಕಾರವು ಮಾತ್ರ ಈ ಪ್ರಾಜೆಕ್ಟ್ ನಿರ್ಮಾಣಕ್ಕೆ ಬೇಕಾದ ಭದ್ರತಾ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಪ್ರಕಟಿಸಿದೆ. ಹೋರಾಟಗಳಿಗೆ ವಿರುದ್ಧವಾಗಿ ನಿರ್ಮಾಣವನ್ನು ಮುಂದುವರಿಸುತ್ತಿದೆ.

ಆದ್ದರಿಂದ, ಎರಡು ವಿಷಯಗಳು ಸ್ಪಷ್ಟವಾಗಿ ತಿಳಿಯುತ್ತವೆ.

1. ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ಅಭಿವೃದ್ಧಿ ಗುರಿಗಳಿರಬಹುದು.
2. ಒಬ್ಬರಿಗೆ ಅಭಿವೃದ್ಧಿಯಾಗಿದ್ದು ಇನ್ನೊಬ್ಬರಿಗೆ ಅಭಿವೃದ್ಧಿಯಾಗದೇ ಇರಬಹುದು. ಅದು ಮತ್ತೊಬ್ಬರಿಗೆ ಹಾನಿಕಾರಕವಾಗಿರಬಹುದು.

- ಈ ವಾರ್ತಾಪತ್ರಿಕೆಯ ವರದಿಯನ್ನು ಓದಿ...

''ಒಂದು ಹಡಗು 500 ಟನ್ನುಗಳ ವಿಷಪೂರಿತ ವ್ಯರ್ಥದ್ರವ ಪದಾರ್ಥಗಳನ್ನು ಕಸಹಾಕುವ ಬಹಿರಂಗ ಪ್ರದೇಶದಲ್ಲಿ, ಪಕ್ಕದಲ್ಲಿರುವ ಸಮುದ್ರದ ಹತ್ತಿರ ಹಾಕಿತು. ಆಫ್ರಿಕಾದಲ್ಲಿನ ಐವರೀಕೋಸ್ಟ್ ದೇಶದಲ್ಲಿನ ಅಬಿದ್‌ಜಾನ್ ಎನ್ನುವ ಪಟ್ಟಣದಲ್ಲಿ ಇದು ನಡೆದಿದೆ. ಅತ್ಯಂತ ವಿಷಪೂರಿತವಾದ ಈ ವ್ಯರ್ಥ ಪದಾರ್ಥಗಳಿಂದ ಹೊರ ಬಂದಿರುವ ವಾಯುಗಳಿಂದ ತಲೆ ತಿರುಗುವುದು, ಚರ್ಮದ ಮೇಲೆ ದದ್ದು (ಗುಳ್ಳೆ)ಗಳು, ಮೂರ್ಛೆ ಹೋಗುವಿಕೆ, ಅತಿಸಾರಗಳಂತಹ ಸಮಸ್ಯೆಗಳು ಏರ್ಪಟ್ಟವು. ಒಂದು ತಿಂಗಳೊಳಗೆ ಎಳು ಜನ ಸಾವಿಗೀಡಾದರು. ಇಪ್ಪತ್ತು ಜನ ಆಸ್ಪತ್ರೆಯಲ್ಲಿದ್ದಾರೆ. ವಿಷ ಪ್ರಭಾವಕ್ಕೆ ಗುರಿಯಾದ 26,000 ಜನ ಚಿಕಿತ್ಸೆ ಹೊಂದಿದ್ದಾರೆ. ಲೋಹ, ಕಚ್ಚಾ ಇಂಧನ ವ್ಯಾಪಾರ ಮಾಡುವ ಒಂದು ಬಹುಳಜಾತಿ ಸಂಸ್ಥೆ ತನ್ನ ಹಡಗಿನಲ್ಲಿನ ವ್ಯರ್ಥ ಪದಾರ್ಥಗಳನ್ನು ಬೀಸಾಡಲು ಐವರಿಕೋಸ್ಟ್‌ಗೆ ಸೇರಿದ ಒಂದು ಸ್ಥಳೀಯ ಕಂಪನಿಯೊಂದಿಗೆ ಒಪ್ಪಂದ (ಕಾಂಟ್ರಾಕ್ಟ್) ಮಾಡಿಕೊಂಡಿದೆ.'' ದಿ ಹಿಂದೂ ಪತ್ರಿಕೆಯಲ್ಲಿ 2006 ಸೆಪ್ಟೆಂಬರ್ 16ರಂದು ವೈಜು ನರವನೆ ಬರೆದ ವರದಿಯ ಆಧಾರವಾಗಿ)

SCERT TELANGANA

ಈಗ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಿರಿ :

- ಇದರಿಂದ ಪ್ರಯೋಜನ ಹೊಂದಿದವರು ಯಾರು, ಹೊಂದದವರು ಯಾರು ?
- ಈ ದೇಶಕ್ಕೆ ಅಭಿವೃದ್ಧಿ ಗುರಿಗಳು ಹೇಗಿರಬೇಕು ?
- ನಿಮ್ಮ ಗ್ರಾಮಕ್ಕೆ, ಪಟ್ಟಣಕ್ಕೆ ಅಥವಾ ನಿಮ್ಮ ಪ್ರಾಂತಕ್ಕೆ ಕೆಲವು ಅಭಿವೃದ್ಧಿ ಗುರಿಗಳನ್ನು ತಿಳಿಸಿರಿ.
- ಸರ್ಕಾರಕ್ಕೆ, ಅಣುವಿದ್ಯುತ್ ಕೇಂದ್ರ ಪ್ರಾಂತಗಳಲ್ಲಿ ವಾಸಿಸುವ ಪ್ರಜೆಗಳ ಮಧ್ಯೆ ಘರ್ಷಣೆಗಳೇನು ?
- ಇಂತಹ ಅಭಿವೃದ್ಧಿ ವಿಧಾನಗಳಿಗೆ ಸಂಬಂಧಿಸಿದ ವಿವಾದಗಳು ನಿಮಗೇನಾದರೂ ತಿಳಿದಿವೆಯಾ ? ಎರಡು ಕಡೆಯವರ ವಾದಗಳನ್ನು ಗುರ್ತಿಸಿರಿ.

ಆದಾಯ, ಇತರ ಗುರಿಗಳು

ಪಟ್ಟಿಕೆ 1.2 ನ್ನು ಮತ್ತೊಮ್ಮೆ ನೋಡಿದಲ್ಲಿ ಒಂದು ವಿಷಯವು ಮಾತ್ರ ಸರ್ವಸಾಧಾರಣವೆನಿಸುತ್ತದೆ. ಪ್ರಜೆಗಳು ಕ್ರಮ ತಪ್ಪದಂತೆ ಕೆಲಸ, ಉತ್ತಮವಾದ ಕೂಲಿ, ತಮ್ಮ ಬೆಳೆಗಳು, ಇತರ ಉತ್ಪತ್ತಿಗಳಿಗೆ ಉತ್ತಮ ಬೆಲೆಗಳನ್ನು ಕೋರಿಕೊಳ್ಳುವರು. ಮತ್ತೊಂದು ರೀತಿಯಲ್ಲಿ ಅವರು ಹೆಚ್ಚು ಆದಾಯಗಳನ್ನು ಕೋರಿಕೊಳ್ಳುತ್ತಾರೆ.

ಯಾವುದೋ ವಿಧವಾಗಿ ಹೆಚ್ಚು ಆದಾಯವನ್ನು ಹೊಂದುವುದಲ್ಲದೆ ಪ್ರಜೆಗಳು ಸಮಾನತೆ, ಸ್ವಾತಂತ್ರ, ಭದ್ರತೆ, ಇತರರಿಂದ ಗೌರವವನ್ನು ಹೊಂದುವತಂಹ ಅಂಶಗಳನ್ನು ಕೋರಿಕೊಳ್ಳುವರು. ಅವರು ತಾರತಮ್ಯವನ್ನು ವಿರೋಧಿಸುತ್ತಾರೆ. ಇವೆಲ್ಲವೂ ಮುಖ್ಯವಾದ ಗುರಿಗಳೇ. ವಾಸ್ತವಕ್ಕೆ ಕೆಲವೊಮ್ಮೆ ಹೆಚ್ಚು ಆದಾಯ ಅಥವಾ ಮತ್ತಷ್ಟು ವಸ್ತುವಿನಿಮಯಕ್ಕಿಂತ ಇವು ಮುಖ್ಯವಾಗುತ್ತವಾದರೂ ಜೀವಿಸಲು ಭೌತಿಕ ವಸ್ತುಗಳು ಮಾತ್ರ ಸರಿಹೋಗಲಾರವು. ಹಣ ಅಥವಾ ಅದು ಕೊಳ್ಳುವಂತಹ ವಸ್ತುಗಳು ನಮ್ಮ ಜೀವನದಲ್ಲಿಯ ಒಂದು ಅಂಶ ಮಾತ್ರ. ಮೇಲೆ ತಿಳಿಸಿದ ಭೌತಿಕವಲ್ಲದ ಅಂಶಗಳ ಮೇಲೆ ಜೀವನ ವಿಧಾನ ಆಧಾರಪಟ್ಟಿರುತ್ತದೆ. ಒಂದು ವೇಳೆ ನಿಮಗೆ ಸ್ಪಷ್ಟತೆ ಇಲ್ಲವೇ ಇದ್ದಲ್ಲಿ ನಿಮ್ಮ ಜೀವನದಲ್ಲಿ ನಿಮ್ಮ ಸ್ನೇಹಿತರ ಪಾತ್ರ ಕುರಿತು ಆಲೋಚಿಸಿರಿ. ನೀವು ಅವರ ಸ್ನೇಹವನ್ನು ಕೋರಿಕೊಳ್ಳುವಿರಿ. ಅದೇ ರೀತಿ ಅಷ್ಟು ಸುಲಭವಾಗಿ ಬೆಲೆಕಟ್ಟಲಾರದ ಅನೇಕ ಅಂಶಗಳು ನಮ್ಮ ಜೀವನಕ್ಕೆ ಎಷ್ಟೋ ಮುಖ್ಯವಾದವು. ಇವುಗಳನ್ನು ಆಗಾಗ ಕಡೆಗಣಿಸುತ್ತೇವೆ. ಆದರೆ ಬೆಲೆಕಟ್ಟದಂತಹ ಅಂಶಗಳು ಮುಖ್ಯವಲ್ಲ ಎಂಬ ನಿರ್ಣಯಕ್ಕೆ ಬರುವುದು ಸರಿಯಾದುದಲ್ಲ.



ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನಿಮಗೆ ದೂರದ ಪ್ರಾಂತದಲ್ಲಿ ಉದ್ಯೋಗ ಬಂದರೆ ವೇತನವಿಲ್ಲದೆ ಇನ್ನೂ ಅನೇಕ ಅಂಶಗಳು ಪರಿಗಣನೆಗೆ ತೆಗೆದುಕೊಳ್ಳುವಿರಿ. ನಿಮ್ಮ ಕುಟುಂಬಕ್ಕಿರುವ ಸೌಕರ್ಯಗಳು, ಕೆಲಸದ ಪರಿಸ್ಥಿತಿಗಳು, ಕಲಿತುಕೊಳ್ಳಲಿರುವ ಅವಕಾಶಗಳು. ಕೆಲವೊಮ್ಮೆ ಕಡಿಮೆ ವೇತನವಿದ್ದರೂ ಕ್ರಮ ತಪ್ಪದಂತೆ ಕೆಲಸ ದೊರೆತು ಅದು ಭದ್ರತಾ ಭಾವನೆಯನ್ನು

ಕಲ್ಪಿಸುವುದು. ಮತ್ತೊಂದು ಉದ್ಯೋಗದಲ್ಲಿ ಹೆಚ್ಚು ವೇತನ ಇರಬಹುದು ಆದರೆ ಅದರಲ್ಲಿ ಉದ್ಯೋಗ ಭದ್ರತೆ ಇಲ್ಲದೇ ಇರಬಹುದು. ಕುಟುಂಬದೊಂದಿಗೆ ಕಳೆಯಲು ಸಮಯವಿರದೇ ಹೋಗಬಹುದು. ಇದರಿಂದ ಸ್ವತಂತ್ರವಿರದು ಎನ್ನುವ ಭಾವನೆ, ಅಭದ್ರತಾ ಭಾವನೆ ಹೆಚ್ಚುತ್ತದೆ.

ಅದೇ ರೀತಿ ಅಭಿವೃದ್ಧಿಗೆ ಪ್ರಜೆಗಳು ಮಿಶ್ರಮ ಗುರಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವರು. ಮಹಿಳೆಯರು ವೇತನಸಹಿತ ಕೆಲಸ ಮಾಡುತ್ತಿದ್ದರೆ ಕುಟುಂಬದಲ್ಲಿ, ಸಮಾಜದಲ್ಲೂ ಅವರ ಘನತೆ ಹೆಚ್ಚುತ್ತದೆ ಎಂಬುದು ನಿಜ. ಆದರೆ, ಮಹಿಳೆಯರ ಬಗ್ಗೆ ಗೌರವವಿದ್ದರೆ ಮನೆಗೆಲಸವನ್ನು ಮತ್ತಷ್ಟು ಹಂಚಿಕೊಳ್ಳುವರು . ಮಹಿಳೆಯರು ಹೊರಗಡೆ ಕೆಲಸ ಮಾಡಲು ಮತ್ತಷ್ಟು ಅನುಮತಿ ಲಭಿಸುತ್ತದೆ ಎಂಬುದು ನಿಜ. ಭದ್ರತೆಯಿಂದ ಕೂಡಿದ ಸುರಕ್ಷಿತವಾದ ವಾತಾವರಣವಿದ್ದರೆ ಮಹಿಳೆಯರು ಅನೇಕ ವಿಧದ ಉದ್ಯೋಗಗಳನ್ನು ಕೈಗೊಳ್ಳಲು, ವ್ಯಾಪಾರ ನಿರ್ವಹಿಸಲು ಅವಕಾಶ ದೊರೆಯುತ್ತದೆ.

- ವಿಭಿನ್ನ ವ್ಯಕ್ತಿಗಳಿಗೆ ಅಭಿವೃದ್ಧಿಯ ಬಗ್ಗೆ ವಿಭಿನ್ನ ಭಾವನೆಗಳು ಏಕೆ ಇರುತ್ತವೆ ? ಕೆಳಗೆ ಕೊಟ್ಟ ವಿವರಣೆಗಳಲ್ಲಿ ಯಾವುದು ಮುಖ್ಯವಾದುದು, ಏಕೆ ?
  - ಅ. ವ್ಯಕ್ತಿಗಳು ಬೇರೆಯಾದುದರಿಂದ
  - ಆ. ವ್ಯಕ್ತಿಗಳ ಜೀವನ ಪರಿಸ್ಥಿತಿಗಳು ಬೇರೆಯಾದ್ದರಿಂದ
- ಕೆಳಗಿನ ಎರಡು ವಾಕ್ಯಗಳ ಅರ್ಥವು ಒಂದೇನಾ ? ನಿಮ್ಮ ಉತ್ತರವನ್ನು ಹೇಗೆ ಸಮರ್ಥಿಸಿಕೊಳ್ಳುವಿರಿ ?
  - ಅ. ಪ್ರಜೆಗಳ ಅಭಿವೃದ್ಧಿ ಗುರಿಗಳು ಬೇರೆ ಬೇರೆಯಾಗಿರುತ್ತವೆ .
  - ಆ. ಪ್ರಜೆಗಳ ಅಭಿವೃದ್ಧಿ ಗುರಿಗಳು ಪರಸ್ಪರ ವಿರುದ್ಧವಾಗಿರುತ್ತವೆ.
- ನಮ್ಮ ಜೀವನದಲ್ಲಿ ಆದಾಯಕ್ಕಿಂತ ಮುಖ್ಯವಾದ ಇತರ ಅಂಶಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ.
- ಮೇಲಿನ ಭಾಗದಲ್ಲಿನ ಮುಖ್ಯವಾದ ಅಂಶಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

ಆದ್ದರಿಂದ ಪ್ರಜೆಗಳಿಗೆ ಇರುವ ಅಭಿವೃದ್ಧಿ ಗುರಿಗಳು ಉತ್ತಮ ಆದಾಯಗಳ ಬಗ್ಗೆ ಅಲ್ಲದೇ ಜೀವನದಲ್ಲಿನ ಮುಖ್ಯವಾದ ಇತರ ಅಂಶಗಳು ಸಹ ಇರುತ್ತವೆ.

ಬೇರೆ ಬೇರೆ ದೇಶಗಳನ್ನು ಅಥವಾ ರಾಜ್ಯಗಳನ್ನು ಹೇಗೆ ಹೋಲಿಸುವರು ?

ಬೇರೆ ಬೇರೆ ವಸ್ತುಗಳನ್ನು ಹೋಲಿಸಿದಾಗ ಅವುಗಳಲ್ಲಿ ಹೋಲಿಕೆಗಳಿರಬಹುದು. ಇಲ್ಲವೇ ವ್ಯತ್ಯಾಸಗಳಿರಬಹುದು. ಯಾವ ಅಂಶಗಳ ಆಧಾರವಾಗಿ ಅವುಗಳನ್ನು ಹೋಲಿಸುತ್ತೇವೆ ? ತರಗತಿಯಲ್ಲಿನ ವಿದ್ಯಾರ್ಥಿಗಳನ್ನೇ ತೆಗೆದು ಕೊಳ್ಳೋಣ. ಬೇರೆ ಬೇರೆ ವಿದ್ಯಾರ್ಥಿಗಳನ್ನು ಹೇಗೆ ಹೋಲಿಸುತ್ತೇವೆ ? ಎತ್ತರ, ಆರೋಗ್ಯ, ಕೌಶಲ್ಯ (ಬುದ್ಧಿಶಕ್ತಿ) ಆಸಕ್ತಿಗಳಲ್ಲಿ ಅವರಲ್ಲಿ ವ್ಯತ್ಯಾಸಗಳಿರುತ್ತವೆ. ಆರೋಗ್ಯ ಉತ್ತಮವಾಗಿರುವ ವಿದ್ಯಾರ್ಥಿ ಉತ್ತಮವಾಗಿ ಓದದೇ ಇರಬಹುದು. ಉತ್ತಮವಾದ ಬುದ್ಧಿವಂತ ವಿದ್ಯಾರ್ಥಿ ಸ್ನೇಹ ಪೂರ್ವಕವಾಗಿರದೇ ಹೋಗಬಹುದು. ಮತ್ತೇ ವಿದ್ಯಾರ್ಥಿಗಳನ್ನು ಹೇಗೆ ಹೋಲಿಸುತ್ತೇವೆ ? ಏಕೆ ಹೋಲಿಸುತ್ತಿದ್ದೇವೆ ಎಂಬುದರ ಮೇಲೆ ಆಯ್ಕೆ ಮಾಡುವ ಅಳತೆಗೋಲುಗಳು ಆಧಾರಪಟ್ಟಿರುತ್ತವೆ. ಕ್ರೀಡಾಗುಂಪು, ಚರ್ಚಾ ಗುಂಪು, ಸಂಗೀತ ಗುಂಪು ಇಲ್ಲವೇ ವಿಹಾರ ಯಾತ್ರೆ ನಿರ್ವಹಣಾ ಗುಂಪುಗಳನ್ನು ಆಯ್ಕೆ ಮಾಡಲು ಬೇರೆ ಬೇರೆ ಅಳತೆಗೋಲುಗಳನ್ನು ತೆಗೆದುಕೊಳ್ಳುತ್ತೇವೆ. ಆದರೆ ತರಗತಿಯಲ್ಲಿ ಮಕ್ಕಳು ಸಮಗ್ರ ಅಭಿವೃದ್ಧಿಯನ್ನು ಅಂದಾಜು ಮಾಡೋಣವೆಂದರೆ ಆಗ ಏನು ಮಾಡೋಣ ?

ಇಂತಹ ಸಮಯದಲ್ಲಿ ನಾವು ಸಾಧಾರಣವಾಗಿ ಮುಖ್ಯವಾದ ಲಕ್ಷಣಗಳನ್ನು ತೆಗೆದುಕೊಂಡು ಅವುಗಳ ಆಧಾರವಾಗಿ ವ್ಯಕ್ತಿಗಳನ್ನು ಹೋಲಿಸುತ್ತೇವೆ. ಹೋಲಿಕೆಗಳನ್ನು ಮಾಡಲು ತೆಗೆದುಕೊಳ್ಳಬೇಕಾದ ಮುಖ್ಯವಾದ

SCERT TELANGANA

ಲಕ್ಷಣಗಳು ಏನೆಂಬುದರ ಮೇಲೆ ಅಭಿಪ್ರಾಯ ಬೇಧಗಳಿರಬಹುದು. ಸ್ನೇಹಶೀಲತೆ, ಸಹಕಾರ ಸ್ಫೂರ್ತಿ ಇಲ್ಲವೇ ಸೃಜನಾತ್ಮಕತೆ ಇಲ್ಲವೆ ಸಾಧಿಸಿದ ಅಂಕಗಳಾ ?

ದೇಶಗಳನ್ನು ಹೋಲಿಸಿ ನೋಡಲು ಮುಖ್ಯವಾದ ಅಳತೆಗೋಲುಗಳಲ್ಲಿ ಅವುಗಳ ಆದಾಯ ಒಂದಾಗಿ ಪರಿಗಣಿಸುತ್ತಾರೆ. ಹೆಚ್ಚು ಆದಾಯವಿರುವ ದೇಶಗಳು ಕಡಿಮೆ ಆದಾಯವಿರುವ ದೇಶಗಳಿಗಿಂತ ಅಭಿವೃದ್ಧಿ ಹೊಂದಿವೆ. ಹೆಚ್ಚು ಆದಾಯವಿದ್ದರೆ, ಅವರಿಗೆ ಅವಸರವಾದವು ಹೆಚ್ಚು ಇರುತ್ತವೆ ಎಂಬ ಅಭಿಪ್ರಾಯದಿಂದ ಹೀಗೆ ಭಾವಿಸುತ್ತಾರೆ. ಪ್ರಜೆಗಳು ತಮಗೆ ಇಷ್ಟವಾದವು, ಅವಶ್ಯಕವಾದವು ಹೆಚ್ಚು ಆದಾಯಗಳೊಂದಿಗೆ ಹೊಂದಿಸಿಕೊಳ್ಳುವರು. ಆದ್ದರಿಂದ ಅಧಿಕ ಆದಾಯವಿರುವುದು ಒಂದು ಮುಖ್ಯವಾದ ಅಳತೆಗೋಲಾಗಿ ಪರಿಗಣಿಸುತ್ತಾರೆ.

ದೇಶ ಆದಾಯ (ರಾಷ್ಟ್ರೀಯಾದಾಯ) ಎಂದರೇನು ? ದೇಶವಾಸಿಗಳೆಲ್ಲರ ಆದಾಯವನ್ನೆಲ್ಲಾ ಒಟ್ಟು ದೇಶ ಆದಾಯವಾಗುತ್ತದೆಂದು ತಕ್ಷಣ ಹೇಳುತ್ತೇವೆ. ಇದು ದೇಶದ ಒಟ್ಟು ಆದಾಯವನ್ನು ಸೂಚಿಸುತ್ತದೆ.

ಆದರೆ, ದೇಶಗಳನ್ನು ಹೋಲಿಕೆ ಮಾಡಲು ದೇಶದ ಒಟ್ಟು ಆದಾಯವು ಅಷ್ಟಾಗಿ ಉಪಯೋಗವಾಗಲಾರದು. ವಿವಿಧ ದೇಶಗಳ ಜನಸಂಖ್ಯೆಯಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದ ಒಟ್ಟು ಆದಾಯಗಳನ್ನು ಹೋಲಿಸಿದರೆ ಸರಾಸರಿ ವ್ಯಕ್ತ ಆದಾಯ ಎಷ್ಟು ಇರುತ್ತದೆಂದು ತಿಳಿಯದು. ಒಂದು ದೇಶದಲ್ಲಿನ ಪ್ರಜೆಗಳು ಮತ್ತೊಂದು ದೇಶದ ಪ್ರಜೆಗಳಿಗಿಂತ ಉತ್ತಮವಾಗಿ ಇರುವರೇ, ಇಲ್ಲವೇ ಎಂಬ ವಿಷಯ ತಿಳಿದುಕೊಳ್ಳಲು ನಾವು ಸರಾಸರಿ ಆದಾಯವನ್ನು ಹೋಲಿಸುತ್ತೇವೆ. ದೇಶದ ಒಟ್ಟು ಆದಾಯವನ್ನು ದೇಶದ ಜನಸಂಖ್ಯೆಯೊಂದಿಗೆ ಭಾಗಿಸಿದರೆ ಇದು ಬರುತ್ತದೆ. ಸರಾಸರಿ ಆದಾಯವನ್ನು ತಲಸರಿ ಆದಾಯ(Per Capita Income)ವೆಂದು ಸಹ ಕರೆಯುವರು.

ದೇಶಗಳನ್ನು ವರ್ಗೀಕರಿಸಲು ಪ್ರಪಂಚ ಬ್ಯಾಂಕು ತನ್ನ ಪ್ರಪಂಚ ಅಭಿವೃದ್ಧಿ ನಿವೇದಿಕೆಯಲ್ಲಿ ಈ ಅಳತೆಗೋಲನ್ನು ಉಪಯೋಗಿಸಿದೆ. 2017 ವರ್ಷಕ್ಕೆಲ್ಲಾ $12,055 ಅಮೇರಿಕನ್ ಡಾಲರ್‌ಗಳು ಇಲ್ಲವೇ ಅದಕ್ಕಿಂತ ಹೆಚ್ಚು ತಲಸರಿ ಆದಾಯವಿರುವ ದೇಶಗಳನ್ನು ಅಧಿಕ ಆದಾಯ ದೇಶಗಳು ಅಥವಾ ಶ್ರೀಮಂತ ದೇಶಗಳೇನ್ನುವರು. ಅದೇ ರೀತಿಯಾಗಿ 2017ರಲ್ಲಿ $ 995 ಅಮೇರಿಕನ್ ಡಾಲರ್‌ಗಳಿಗಿಂತ ಕಡಿಮೆ ತಲಸರಿ ಆದಾಯವಿರುವ ದೇಶಗಳನ್ನು ಕಡಿಮೆ ಆದಾಯ ದೇಶಗಳೇನ್ನುವರು. ಆದರೆ ಒಂದು ದಶಮಾನದ ಕೆಳಗೆ ಭಾರತ ದೇಶವು ಕಡಿಮೆ ಆದಾಯ ದೇಶಗಳ ಪಟ್ಟಿಯಲ್ಲಿತ್ತು. ಇತರ ಬಹಳ ದೇಶಗಳಿಗಿಂತ ಭಾರತ ದೇಶ ತಲಸರಿ ಆದಾಯ ವೇಗವಾಗಿ ಬೆಳೆದಿದ್ದರಿಂದ ಅದರ ಸ್ಥಾನ ಸುಧಾರಿಸಿದೆ. ಭಾರತ ದೇಶದ ಪ್ರಜೆಗಳ ಆದಾಯ ಬೆಳೆವಣಿಗೆಯ ಕುರಿತು ಮುಂದಿನ ಅಧ್ಯಾಯದಲ್ಲಿ ತಿಳಿದುಕೊಳ್ಳೋಣ.

ಪಶ್ಚಿಮ ಏಷ್ಯಾ ದೇಶಗಳು, ಮತ್ತಷ್ಟು ಚಿಕ್ಕ ದೇಶಗಳನ್ನು ಬಿಟ್ಟು ಶ್ರೀಮಂತ ದೇಶಗಳನ್ನು ಸಾಧಾರಣವಾಗಿ ಅಭಿವೃದ್ಧಿ ಹೊಂದಿದ ದೇಶಗಳೇನ್ನುವರು.

ಹೋಲಿಕೆಗೆ "ಸರಾಸರಿ" ಉಪಯೋಗಕರವಾಗಿದ್ದರೂ ಅದು ಪ್ರಜೆಗಳ ಮಧ್ಯೆ ಅಸಮತೆಯನ್ನು ಮರೆಮಾಡುತ್ತದೆ.

ಉದಾಹರಣೆಗೆ A ಮತ್ತು B ಎಂಬ ಎರಡು ದೇಶಗಳನ್ನು ತೆಗೆದುಕೊಳ್ಳೋಣ. ಸಂಕ್ಷಿಪ್ತವಾಗಿ ಇಲ್ಲದೇ ಇರಲು ಎರಡು ದೇಶಗಳಲ್ಲಿಯೂ ಐದು ಜನರು ಮಾತ್ರ ಇರುವರೆಂದು ಭಾವಿಸೋಣ. ಪಟ್ಟಿಕೆ -2. 2ರಲ್ಲಿ ನೀಡಿದ ವಿವರಗಳ

ಪಟ್ಟಿಕೆ *2.2 :* ಎರಡು ದೇಶಗಳನ್ನು ಹೋಲಿಕೆ ಮಾಡುವುದು

ದೇಶ	2001ರಲ್ಲಿ ಪೌರರ ಮಾಸಿಕ ಆದಾಯ (ರೂಪಾಯಿಗಳಲ್ಲಿ)					
	I	II	III	IV	V	ಸರಾಸರಿ
ದೇಶ 'A'	9500	10500	9800	10000	10200	
ದೇಶ 'B'	500	500	500	500	48000	

SCERT TELANGANA

ಮೇಲಿನ ಎರಡು ದೇಶಗಳಲ್ಲಿ, ಯಾವ ದೇಶದಲ್ಲಿದ್ದರೂ ನೀವು ಸಂತೋಷವಾಗಿರುತ್ತೀರಾ ? ಎರಡು ದೇಶಗಳ ಅಭಿವೃದ್ಧಿ ಸಮವಾಗಿವೆಯಾ ? ''B'' ದೇಶದಲ್ಲಿ ಐದನೇ ಪೌರನಾಗಿರುವುದು ನಮ್ಮಲ್ಲಿ ಕೆಲವು ಜನರಿಗೆ ಇಷ್ಟವಾಗಬಹುದು, ಆದರೆ ನಾವು ಯಾವ ಪೌರನಾಗಿ ಇರುತ್ತೇವೆಂಬುದು ಲಾಟರೀ ಮೇಲೆ ಆಧಾರಪಟ್ಟಿದ್ದರೆ ನಮ್ಮಲ್ಲಿ ಬಹಳ ಜನರಿಗೆ ''A'' ದೇಶದಲ್ಲಿರಲು ಇಷ್ಟಪಡುವರು. ಎರಡು ದೇಶಗಳ ಸರಾಸರಿ ಆದಾಯ ಒಂದೇ ಆದರೂ ''A'' ದೇಶದಲ್ಲಿ ಹಂಚಿಕೆ ಸಮಾನವಾಗಿರುತ್ತದೆ. ಈ ದೇಶದಲ್ಲಿ ಬಹಳ ಶ್ರೀಮಂತರಿಲ್ಲ. ಅತಿಯಾದ ಬಡವರೂ ಇಲ್ಲ, ಆದೇ ''B'' ದೇಶದಲ್ಲಿ ನಾಲ್ಕು ಜನ ಪೌರರು ಅತ್ಯಂತ ಬಡವರಾಗಿದ್ದು, ಒಬ್ಬ ವ್ಯಕ್ತಿ ಅತ್ಯಂತ ಶ್ರೀಮಂತನಾಗಿರುವನು. ಆದ್ದರಿಂದ ಸರಾಸರಿ ಆದಾಯವು ಹೋಲಿಕೆ ಮಾಡಲು ಉಪಯೋಗವಾದರೂ, ಪ್ರಜೆಗಳ ಮಧ್ಯ ಈ ಆದಾಯ ಹೇಗೆ ಹಂಚಿಕೆಯಾಗಿದೆಯೋ ತಿಳಿಯದು.

- ಇಲ್ಲಿ ನೀಡಿದ ಉದಾಹರಣೆ ಅಲ್ಲದೇ ಹೋಲಿಕೆಗೆ ಸರಾಸರಿಯನ್ನು ಉಪಯೋಗಿಸುವ ಇನ್ನೂ ಮೂರು ಉದಾಹರಣೆಗಳನ್ನು ಕೊಡಿ.
- ಅಭಿವೃದ್ಧಿಗೆ ಸರಾಸರಿ ಆದಾಯವು ಮುಖ್ಯವಾದ ಅಳತೆಗೋಲೆಂದು ಏಕೆ ಹೇಳುತ್ತಾರೆ ? ವಿವರಿಸಿರಿ.
- ಕೆಲವು ದಿನಗಳಿಂದ ಒಂದು ದೇಶದ ಸರಾಸರಿ ಆದಾಯ ಹೆಚ್ಚುತ್ತಿದೆ ಎಂದು ಗಣಾಂಕಗಳು ಹೇಳುತ್ತವೆಂದುಕೊಳ್ಳೋಣ. ಸಮಾಜದಲ್ಲಿನ ಎಲ್ಲಾ ವರ್ಗಗಳ ಜನರ ಜೀವನ ಉತ್ತಮಗೊಂಡಿದೆ ಎಂದು ಇದರ ಆಧಾರದಿಂದ ಹೇಳಬಹುದೇ ? ನಿಮ್ಮ ಉತ್ತರಕ್ಕೆ ಒಂದು ಉದಾಹರಣೆ ನೀಡಿರಿ.
- ಪ್ರಪಂಚ ಅಭಿವೃದ್ಧಿ ನಿವೇದಿಕೆ 2012 ರ ಪ್ರಕಾರ ಮಧ್ಯ ಆದಾಯ ದೇಶಗಳ ತಲಸರಿ ಆದಾಯವು ಎಷ್ಟು ಎಂಬುದನ್ನು ಮೇಲಿರುವ ಭಾಗವನ್ನು ಓದಿ ಹೇಳಿರಿ.
- ಅಭಿವೃದ್ಧಿ ಹೊಂದಿದ ದೇಶವಾಗಿ ಬದಲಾವಣೆಗೊಳ್ಳಲು ನಿಮಗಿರುವ ಆಲೋಚನೆಯ ಪ್ರಕಾರ ಭಾರತದೇಶವು ಏನು ಮಾಡಬೇಕು, ಅಥವಾ ಏನು ಸಾಧಿಸಬೇಕೆಂಬುದನ್ನು ಒಂದು ಪ್ಯಾರ ಬರೆಯಿರಿ.

ಆದಾಯ ಮತ್ತು ಇತರ ಅಳತೆ ಗೋಲುಗಳು :

ಪಟ್ಟಿಕೆ 3 : ಕೆಲವು ರಾಜ್ಯಗಳ ಸ್ಥೂಲ ತಲಸರಿ ಆದಾಯ

ರಾಜ್ಯಗಳು	2016-17 ನೇ ವರ್ಷದಲ್ಲಿನ ಸ್ಥೂಲ ತಲಸರಿ ಆದಾಯ (ಲಕ್ಷಗಳಲ್ಲಿ)	ರಾಜ್ಯಗಳ ಸ್ಥೂಲ ತಲಸರಿ ಆದಾಯ (ರ್‍ಯಾಂಕ್)	ಮಾನವಾಭಿವೃದ್ಧಿ ಸೂಚಿ-2015 ರ್‍ಯಾಂಕ್
ಹರಿಯಾಣ	2.15	7	9
ಹಿಮಾಚಲ ಪ್ರದೇಶ್	1.82	12	3
ಬಿಹಾರ್	0.66	33	21

ವ್ಯಕ್ತಿಗಳನ್ನು, ಆಕಾಂಕ್ಷೆಗಳನ್ನು, ಗುರಿಗಳನ್ನು ನೋಡಿದಾಗ ಉತ್ತಮವಾದ ಆದಾಯವಲ್ಲದೆ ಭದ್ರತೆ, ಇತರರಿಂದ ಗೌರವಿಸಲ್ಪಡುವುದು, ಸಮಾನವಾಗಿ ಕಾಣುವುದು, ಸ್ವಾತಂತ್ರ್ಯಗಳಂತಹ ಗುರಿಗಳು ಸಹ ಇವೆ ಎಂದು ತಿಳಿದಿದೆ. ಆದೇ ರೀತಿಯಾಗಿ, ಒಂದು ದೇಶ ಅಥವಾ ಒಂದು ಪ್ರಾಂತದ ಬಗ್ಗೆ ಆಲೋಚಿಸಿದಾಗ ಸರಾಸರಿ ಆದಾಯವಲ್ಲದೆ ಇತರ ಮುಖ್ಯವಾದ ಅಳತೆಗೋಲುಗಳು ಸಹ ಇವೆ ಎಂದು ತಿಳಿಯುತ್ತದೆ.

SCERT TELANGANA

ಈ ಲಕ್ಷಣಗಳು, ಅಳತೆಗೋಲುಗಳು ಏನಾಗಿರಬಹುದು ? ಒಂದು ಉದಾಹರಣೆಯೊಂದಿಗೆ ಇದನ್ನು ಪರಿಶೀಲಿಸೋಣ. ಹರಿಯಾಣ, ಹಿಮಾಚಲಪ್ರದೇಶ್, ಬಿಹಾರ್‌ಗಳ ತಲಸರಿ ಆದಾಯಗಳು ಪಟ್ಟಿಕೆ 2.3ರಲ್ಲಿವೆ. ಈ ಮೂರು ರಾಜ್ಯಗಳಲ್ಲಿ ತಲಸರಿ ಆದಾಯ ಅತ್ಯಧಿಕವಾಗಿ ಹರಿಯಾಣದಲ್ಲಿದೆ, ಬಿಹಾರ್ ಕೆಳಭಾಗದಲ್ಲಿದೆ. ಈ ಪಟ್ಟಿಕೆ ಪ್ರಕಾರ ಸರಾಸರಿಯಾಗಿ ಒಂದು ವರ್ಷದಲ್ಲಿ ಒಬ್ಬ ವ್ಯಕ್ತಿ ಆದಾಯವು ಹರಿಯಾಣದಲ್ಲಿ 2.15 ಲಕ್ಷಗಳಿದ್ದು, ಬಿಹಾರ್‌ನಲ್ಲಿ 0.66 ಲಕ್ಷ ರೂಪಾಯಿಗಳು. ಅಂದರೆ ತಲಸರಿ ಆದಾಯವನ್ನು ಅಭಿವೃದ್ಧಿಗೆ ಅಳತೆಗೋಲಾಗಿ ತೆಗೆದುಕೊಂಡರೆ ಈ ಮೂರರಲ್ಲಿ ಹರಿಯಾಣ ಅತ್ಯಂತ ಅಭಿವೃದ್ಧಿ ಹೊಂದಿದ ರಾಜ್ಯವಾಗಿ, ಬಿಹಾರ್ ಅತಿ ಕಡಿಮೆ ಅಭಿವೃದ್ಧಿ ಹೊಂದಿದ ರಾಜ್ಯವಾಗಿಯೂ ಪರಿಗಣಿಸುತ್ತಾರೆ. ಈಗ ಈ ರಾಜ್ಯಗಳಿಗೆ ಸಂಬಂಧಿಸಿದ ಪಟ್ಟಿಕೆ 2.4ರಲ್ಲಿ ನೀಡಿದ ಮತ್ತಷ್ಟು ವಿವರಗಳನ್ನು ನೋಡೋಣ.

ಪಟ್ಟಿ 4 : ಕೆಲವು ರಾಜ್ಯಗಳಿಗೆ ಸಂಬಂಧಿಸಿದ ಕೆಲವು ತುಲನಾತ್ಮಕ ಅಂಕಿ ಅಂಶಗಳು

ರಾಜ್ಯ	**ಶಿಶುಮರಣಗಳು ಸಾವಿರಕ್ಕೆ** (2016)	**ಅಕ್ಷರಾಸ್ಯತೆ ಶೇಕಡ** (2011)	**ಸ್ಕೂಲ ಹಾಜರು ಶೇಕಡ** (2013-14)
ಪಂಜಾಬ್	33	77	61
ಹಿಮಾಚಲ ಪ್ರದೇಶ್	25	84	67
ಬಿಹಾರ್	38	64	43

***ಪಟ್ಟಿಕೆ 2.4* ರಲ್ಲಿ ತಿಳಿಸಿದ ಅಂಶಗಳಿಗೆ ವಿವರಣೆ : ಶಿಶು ಮರಣಗಳು :** ಸಜೀವವಾಗಿ ಹುಟ್ಟಿದ ಪ್ರತಿ ಸಾವಿರ ಜನ ಮಕ್ಕಳಲ್ಲಿ ಒಂದು ವರ್ಷ ಮುಗಿಯುವುದರೊಳಗೆ ಎಷ್ಟು ಮಕ್ಕಳು ಸಾವಿಗೀಡಾಗುತ್ತಾರೆಂದು ತಿಳಿಯಪಡಿಸುವ ಸಂಖ್ಯೆ.

ಅಕ್ಷರಾಸ್ಯತೆ ಶೇಕಡ : ಏಳು ವರ್ಷಗಳು, ಅದಕ್ಕೆ ಮೇಲ್ಪಟ್ಟ ವಯಸ್ಸಿನವರಲ್ಲಿ ಅಕ್ಷರಾಸ್ಯತೆಯನ್ನು ತಿಳಿಯಪಡಿಸುತ್ತದೆ.

ಸ್ಕೂಲ ಹಾಜರು ಶೇಕಡ : 1-5 ನೇ ತರಗತಿಯ ಮಕ್ಕಳು ಶಾಲೆಗೆ ಹಾಜರಾಗುವ ಮಕ್ಕಳ ಶೇಕಡ.

ಹಿಮಾಚಲ್ ಪ್ರದೇಶದಲ್ಲಿ ಹುಟ್ಟಿದ ಪ್ರತಿ 1000 ಮಕ್ಕಳಲ್ಲಿ 25 ಮಕ್ಕಳು ಒಂದು ವರ್ಷ ಮುಗಿಯುವುದರೊಳಗೆ ಸಾವಿಗೀಡಾಗುತ್ತಿದ್ದಾರೆಂದು ಮೇಲಿನ ಪಟ್ಟಿಕೆಯ ಮೂಲಕ ತಿಳಿಯುತ್ತದೆ. ಪಂಜಾಬ್‌ನಲ್ಲಿ ಇವರ ಸಂಖ್ಯೆ 33 ಇದೆ. ಬಿಹಾರನಲ್ಲಿ ಈ ಸಂಖ್ಯೆ 38 ಇದೆ.

ಸಾರ್ವಜನಿಕ ಸೌಲಭ್ಯಗಳು :

ಪಂಜಾಬ್‌ನಲ್ಲಿನ ಸರಾಸರಿ ವ್ಯಕ್ತಿ ಆದಾಯವು ಹಿಮಾಚಲ ಪ್ರದೇಶದಲ್ಲಿನ ಸರಾಸರಿ ವ್ಯಕ್ತಿ ಆದಾಯಕ್ಕಿಂತ ಹೆಚ್ಚಾಗಿದ್ದರೂ ಕೆಲವು ಮುಖ್ಯ ರಂಗಗಳಲ್ಲಿ ಅವರು ಏಕೆ ಹಿಂದುಳಿದಿದ್ದಾರೆ ? ನಿಮ್ಮ ಜೇಬಿನಲ್ಲಿ ಹಣವಿದ್ದರೂ ನೀವು ಚೆನ್ನಾಗಿ ಜೀವಿಸಲು ಅವಸರವಾದ ವಸ್ತುಗಳು, ಸೇವೆಗಳೆಲ್ಲವನ್ನು ನೀವು ಕೊಂಡುಕೊಳ್ಳದೇ ಇರಬಹುದು. ಅಂದರೆ ಪೌರರು ಉಪಯೋಗಿಸಿಕೊಳ್ಳುವ ಭೌತಿಕ ವಸ್ತುಗಳು, ಸೇವೆಗಳನ್ನು ಕೇವಲ ಆದಾಯ ಸೂಚಿಸಲಾರದು. ಉದಾಹರಣೆಗೆ ನಿಮ್ಮ ಹಣ ಕಾಲುಷ್ಯವಿಲ್ಲದ ವಾತಾವರಣವನ್ನು ಕೊಂಡುಕೊಡಲಾರದು, ಇಲ್ಲವೆ ಕಲಬೆರಕೆ ಇಲ್ಲದ ಔಷಧಗಳು ದೊರೆಯುತ್ತವೆಂಬ ಭರವಸೆ ನೀಡಲಾರದು. ಮಹಾ ಎಂದರೆ ನೀವು ಇವು ಇರುವ ಪ್ರಾಂತಕ್ಕೆ ಬದಲಾಗಬಹುದು. ನಿಮ್ಮ ಪ್ರಾಂತದಲ್ಲಿನ ಪ್ರಜೆಗಳೆಲ್ಲರೂ ನಿವಾರಣಾ ಕ್ರಮಗಳು ಕೈಗೊಂಡರೆ ಅದನ್ನು ತಪ್ಪಿಸಿ ಹಣವು ನಿಮ್ಮನ್ನು ಅಂಟುರೋಗಗಳಿಂದ ರಕ್ಷಿಸದೇ ಇರಬಹುದು.

SCERT TELANGANA

ವಾಸ್ತವಕ್ಕೆ ಜೀವನದಲ್ಲಿ ಬಹಳ ಮುಖ್ಯವಾದವುಳನ್ನು ನೀಡಲು, ಕಡಿಮೆ ಖರ್ಚಿನಿಂದ ಮಾಡಬೇಕೆಂದರೆ ಇಂತಹ ವಸ್ತುಗಳನ್ನು, ಸೇವೆಗಳನ್ನು ಸಾಮೂಹಿಕವಾಗಿ ನೀಡಬೇಕು. ಒಮ್ಮೆ ಆಲೋಚಿಸಿ. ಒಂದು ಪ್ರಾಂತಕ್ಕೆಲ್ಲಾ ಭದ್ರತೆ ಕಲ್ಪಿಸಲು ಕಡಿಮೆ ಖರ್ಚಾಗುತ್ತದಾ, ಇಲ್ಲವೆ ಪ್ರತಿ ಮನೆಗೆ ಬೇರೆ ಬೇರೆಯಾಗಿ ಒಬ್ಬ ಭದ್ರತಾ ಸಿಬ್ಬಂದಿ ಇದ್ದರೆ ಕಡಿಮೆ ಖರ್ಚಾಗುತ್ತದಾ ? ನಿಮ್ಮ ಊರಿನಲ್ಲಿ ಇಲ್ಲವೆ ನಿಮ್ಮ ಪ್ರಾಂತದಲ್ಲಿ ನಿಮ್ಮೊಬ್ಬರಿಗೆ ಬಿಟ್ಟು ಬೇರೆಯವರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಇಲ್ಲವೆಂದುಕೊಳ್ಳಿ. ಆಗ ನೀವು ಚೆನ್ನಾಗಿ ಓದುತ್ತೀರಾ ? ದೂರದಲ್ಲಿರುವ ಖಾಸಗಿ ಪಾಠಶಾಲೆಗೆ ನಿಮ್ಮ ತಂದೆತಾಯಿಗಳು ಕಳಿಸಿದರೆ ಮಾತ್ರ ನೀನು ಓದಿಕೊಳ್ಳುತ್ತೀಯ. ಅಂದರೆ ಇನ್ನೂ ಬಹಳ ಜನ ಮಕ್ಕಳು ಅಭ್ಯಾಸಿಸಬೇಕೆಂದು ಕೊಂಡಿದ್ದರಿಂದ ಮಕ್ಕಳೆಲ್ಲರಿಗೂ ಓದಿಕೊಳ್ಳುವ ಅವಕಾಶವಿರುವಂತೆ ಸರ್ಕಾರಿ ಪಾಠಶಾಲೆಗಳನ್ನು ಸ್ಥಾಪಿಸಿ, ಇತರ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಬಹಳ ಜನ ಭಾವಿಸುವುದರಿಂದ ನೀವು ಅಭ್ಯಸಿಸುತ್ತಿರುವಿರಿ. ಈಗಲೂ ಬಹಳ ಪ್ರಾಂತಗಳಲ್ಲಿ ಸರ್ಕಾರ / ಸಮಾಜಕ್ಕೆ ಅವಸರವಾದ ಸೌಲಭ್ಯಗಳು ಕಲ್ಪಿಸದೇ ಇರುವುದು ಮಕ್ಕಳ, ಪ್ರತ್ಯೇಕವಾಗಿ ಬಾಲಕೀಯರು ಹಿರಿಯ ಪ್ರಾಥಮಿಕ ವಿಧ್ಯಾಭ್ಯಾಸವನ್ನು ಮುಂದುವರಿಸುತ್ತಿಲ್ಲ.

ಕೆಲವು ರಾಜ್ಯಗಳಲ್ಲಿ ಮೂಲಭೂತ ಆರೋಗ್ಯ ಸೌಕರ್ಯಗಳು, ಶೈಕ್ಷಣಿಕ ಸೌಕರ್ಯಗಳು ತಕ್ಕಷ್ಟು ಇರುವುದರಿಂದ ಅಲ್ಲಿ ಶಿಶು ಮರಣಗಳು ಕಡಿಮೆಯಾಗಿವೆ. ಅದೇ ರೀತಿ ಕೆಲವು ರಾಜ್ಯಗಳಲ್ಲಿ ಸಾರ್ವಜನಿಕ ಹಂಚಿಕೆ ವ್ಯವಸ್ಥೆ (Public Distribution System (PDS)) ಯು ಚೆನ್ನಾಗಿ ಕೆಲಸ ಮಾಡುತ್ತದೆ. ಅಂತಹ ರಾಜ್ಯಗಳಲ್ಲಿ ಯಾವುದೇ ಪೌರ ಪಡಿತರ ಅಂಗಡಿ ಸರಿಯಾಗಿ ಕೆಲಸ ಮಾಡದೇ ಹೋದರೆ ಅಲ್ಲಿನ ಪ್ರಜೆಗಳು ಅದನ್ನು ಸರಿಪಡುವಂತೆ ಮಾಡಿಕೊಳ್ಳಬಲ್ಲರು. ಇಂತಹ ರಾಜ್ಯಗಳಲ್ಲಿ ಪ್ರಜೆಗಳ ಆರೋಗ್ಯ, ಪೌಷ್ಠಿಕ ಆಹಾರದ ಮಟ್ಟ ಉತ್ತಮವಾಗಿರುವ ಅವಕಾಶಗಳಿವೆ.

- ಪಟ್ಟಿಕೆ 2.3 ಮತ್ತು 2.4 ರಲ್ಲಿರುವ ವಿವರಗಳನ್ನು ನೋಡಿರಿ. ತಲಸರಿ ಆದಾಯಗಳಲ್ಲಿ ಬಿಹಾರ್‌ಗಿಂತ ಪಂಜಾಬ್ ಮುಂದೆ ಇರುವಂತೆ ಅಕ್ಷರಾಸ್ಯತೆಗಳಂತಹವುಗಳಲ್ಲಿಯೂ ಇದೆಯಾ ?
- ವ್ಯಕ್ತಿ ಕ್ರೂಢೀಕರಣಕ್ಕಿಂತ ಸಾಮೂಹಿಕವಾಗಿ ವಸ್ತುಗಳು, ಸೇವೆಗಳು ಕ್ರೂಢೀಕರಣಕ್ಕೆ ಕಡಿಮೆ ಖರ್ಚು ಆಗುವ ಮತ್ತಷ್ಟು ಉದಾಹರಣೆಗಳನ್ನು ಹೆಸರಿಸಿ.
- ಆರೋಗ್ಯ, ಶಿಕ್ಷಣಕ್ಕಾಗಿ ಸರ್ಕಾರವು ಖರ್ಚು ಮಾಡುವ ಹಣದ ಮೇಲೆ ಉತ್ತಮವಾದ ಸೇವೆಗಳ ಲಭ್ಯತೆಯ ಆಧಾರಪಟ್ಟಿದೆಯಾ ? ಇನ್ನೂ ಯಾವ ಅಂಶಗಳು ಪ್ರಧಾನ ಪಾತ್ರ ಪೋಷಿಸುತ್ತವೆ ?
- ತಮಿಳುನಾಡು, ಆಂಧ್ರಪ್ರದೇಶದ ಗ್ರಾಮೀಣ ಪ್ರಾಂತಗಳಲ್ಲಿನ ಕುಟುಂಬವು 2009-10ರಲ್ಲಿ ಪಡಿತರ ಅಂಗಡಿಗಳಿಂದ ತಮಗೆ ಅವಶ್ಯವಾದವುಗಳಲ್ಲಿ ಶೇಕಡ 53%, ಶೇಕಡ 33% ಕೊಂಡುಕೊಳ್ಳಲಾಗಿದೆ. ಉಳಿದ ಅಕ್ಕಿ ಬಜಾರಿನಿಂದ ಕೊಂಡುಕೊಳ್ಳುವರು. ಪಶ್ಚಿಮ ಬಂಗಾಲ್, ಅಸ್ಸಾಂನಲ್ಲಿ ಶೇಕಡ 11%, ಶೇಕಡ 6% ಅಕ್ಕಿ ಮಾತ್ರ ಪೌರ ಸರಬರಾಜು ಅಂಗಡಿಗಳಿಂದ ಕೊಂಡುಕೊಳ್ಳುತ್ತಿವೆ. ಯಾವ ರಾಜ್ಯಗಳ ಪ್ರಜೆಗಳ ಉತ್ತಮವಾಗಿದ್ದಾರೆ? ಏಕೆ ?

ಮಾನವ ಅಭಿವೃದ್ಧಿ ನಿವೇದಿಕ

ಆದಾಯದ ಮಟ್ಟ ಮುಖ್ಯವಾಗಿದ್ದರೂ ಅಭಿವೃದ್ಧಿಯನ್ನು ಸೂಚಿಸಲು ಅದು ಒಂದೇ ಸರಿಹೋಗದು ಎಂದು ಗುರ್ತಿಸಿದ ನಂತರ ಇತರ ಅಳತೆಗೋಲುಗಳ ಕುರಿತು ಆಲೋಚಿಸಲು ಪ್ರಾರಂಭಿಸುತ್ತೇವೆ. ಇಂತಹ ಅಳತೆಗೋಲುಗಳ ಪಟ್ಟಿ ಬಹಳ ಉದ್ದವಾಗಿದ್ದರೆ ಆಗ ಅದು ಅಷ್ಟಾಗಿ ಉಪಯೋಗವಾಗಲಾರದು. ಬಹಳ ಮುಖ್ಯವಾದ ಅಂಶಗಳ ಚಿಕ್ಕ ಪಟ್ಟಿ ಬೇಕಾಗುತ್ತದೆ. ಕೇರಳ, ಪಂಜಾಬುಗಳನ್ನು ಹೋಲಿಕೆ ಮಾಡಲು ಉಪಯೋಗಿಸಿದ ಆರೋಗ್ಯ, ವಿದ್ಯೆ ಸೂಚಿಕೆಗಳು ಎಷ್ಟೋ ಮುಖ್ಯವಾದವು. ಕಳೆದ ದಶಕಗಳಿಂದ ಅಭಿವೃದ್ಧಿಗೆ ಅಳತೆಗೋಲಾಗಿ ಆದಾಯದೊಂದಿಗೆ ಆರೋಗ್ಯ, ವಿದ್ಯಾ ಸೂಚಿಕೆಗಳನ್ನು ಸಹ ವಿಸ್ತೃತವಾಗಿ ಉಪಯೋಗಿಸುತ್ತಿದ್ದಾರೆ. ಉದಾಹರಣೆಗೆ ಯುನೈಟೆಡ್ ನೇಷನ್ಸ್ ಅಭಿವೃದ್ಧಿ ಕಾರ್ಯಕ್ರಮ (UNDP) ಪ್ರಕಟಿಸಿದ ಮಾನವ ಅಭಿವೃದ್ಧಿ ನಿವೇದಿಕೆ ದೇಶಗಳನ್ನು ಆ ಪ್ರಜೆಗಳ ವಿದ್ಯಾಮಟ್ಟ, ಆರೋಗ್ಯ ಸ್ಥಿತಿ, ತಲಸಿರಿ ಆದಾಯಗಳನ್ನು ಆಧಾರಿಸಿ ಹೋಲಿಸುತ್ತದೆ.

ಮಾನವ ಅಭಿವೃದ್ಧಿ ನಿವೇದಿಕೆ 2013 ರಲ್ಲಿ ಭಾರತದೇಶ ಅದರ ಪಕ್ಕದ ದೇಶಗಳಿಗೆ ಸಂಬಂಧಿಸಿದ ಕೆಲವು ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಆಸಕ್ತಿಕರವಾಗಿರುತ್ತದೆ.

SCERT TELANGANA

ಪಟ್ಟಿಕೆ 5 : 2017 ರಲ್ಲಿ ಭಾರತದೇಶ ಅದರ ನೆರೆಹೊರೆ ದೇಶಗಳಿಗೆ ಸಂಬಂಧಿಸಿದ ಕೆಲವು ವಿವರಗಳು

ದೇಶ	ತಲಸರಿ ಆದಾಯ ಡಾಲರ್‌ಗಳಲ್ಲಿ	ಆಯುಃ ಪ್ರಮಾಣ ಸಂವತ್ಸರಗಳಲ್ಲಿ	ಸಾಕ್ಷರತೆ	ಪ್ರಪಂಚ ಮಾನವ ಅಭಿವೃದ್ಧಿ ಸೂಚಿಕೆ ಯಲ್ಲಿನ ಸ್ಥಾನ
ಶ್ರೀಲಂಕ	11,326	75.5	92.6	76
ಭಾರತ	6,386	68.8	74.04	130
ಪಾಕಿಸ್ತಾನ್	5,331	66.6	60.00	150
ಮಯನ್ಮಾರ್	5,567	66.7	93.1	148
ಬಂಗ್ಲಾದೇಶ	3,677	72.8	61.5	136
ನೇಪಾಲ್	2,471	70.6	64.7	149

ಪಟ್ಟಿಕೆ 5 ಕ್ಕೆ ಸಂಬಂಧಿಸಿದ ವಿವರಗಳು :

ತಲಸರಿ ಆದಾಯ : ಹೋಲಿಸಲು ಅನುಕೂಲವಾಗುವಂತೆ ತಲಸರಿ ಆದಾಯವನ್ನು ಡಾಲರ್‌ಗಳಲ್ಲಿ ಲೆಕ್ಕಿಸುತ್ತಾರೆ. ಪ್ರತಿ ದೇಶದಲ್ಲಿಯೂ ಪ್ರತಿ ಡಾಲರ್ ಅಷ್ಟೇ ಮೊತ್ತದಲ್ಲಿ ಸರಕುಗಳು, ಸೇವೆಗಳನ್ನು ಕೊಂಡುಕೊಳ್ಳುವ ಹಾಗೆ ಲೆಕ್ಕಿಸುತ್ತಾರೆ.

ವ್ಯಕ್ತಿ ಜೀವಿಸುವ ಸರಾಸರಿ ಕಾಲ : ಹುಟ್ಟಿದಂದಿನಿಂದ ಒಬ್ಬ ವ್ಯಕ್ತಿಯ ಸರಾಸರಿ ಜೀವಿಸಿದ ಕಾಲವನ್ನು ಸೂಚಿಸುತ್ತದೆ.

ಸಾಕ್ಷರತೆ : ಏಳುವರ್ಷಗಳು ಮೇಲ್ಪಟ್ಟು ವಯಸ್ಸಿನ ಯಾವುದಾದರೂ ಭಾಷೆಯಲ್ಲಿ ಅರ್ಥವತ್ತಾಗಿ ಓದುವ ಬರೆಯುವವರ ಶೇಕಡಾ.

ಪ್ರಪಂಚ ಮಾನವಾಭಿವೃದ್ಧಿ ಸೂಚಿಕೆ : ಮಾನವಾಭಿವೃದ್ಧಿ ಸೂಚಿಕೆಯು ಒಟ್ಟು 189 ದೇಶಗಳಲ್ಲಿ ಆಯಾ ದೇಶಗಳ ಸ್ಥಾನವನ್ನು ಸೂಚಿಸುತ್ತದೆ.



ನಕ್ಷೆ 1 : ಮಾನವಾಭಿವೃದ್ಧಿಯನ್ನು ಸೂಚಿಸುವ ಪ್ರಪಂಚ ನಕ್ಷೆ, ವಿವಿಧ ಖಂಡಗಳಲ್ಲಿ ಮಾನವಾಭಿವೃದ್ಧಿಯನ್ನು ಸೂಚಿಸುವ ಮಾದರಿಯನ್ನು ಗಮನಿಸಿರಿ.

SCERT TELANGANA

ಪಕ್ಕದಲ್ಲಿರುವ ಶ್ರೀಲಂಕದಂತಹ ಚಿಕ್ಕ ದೇಶವು ಪ್ರತಿ ಅಂಶದಲ್ಲಿಯೂ ನಮಗಿಂತ ಎಷ್ಟೋ ಮುಂದೆ ಇರುವುದು, ನಮ್ಮ ದೇಶದಂತಹ ದೊಡ್ಡ ದೇಶವು ಪ್ರಪಂಚ ದೇಶಗಳಲ್ಲಿ ಬಹಳ ಕೆಳಶ್ರೇಣಿಯಲ್ಲಿ ಇರುವುದು ಆಶ್ಚರ್ಯವಾಗಿಲ್ಲವೆ? ನೇಪಾಳನ್ನು ಭಾರತದೇಶದೊಂದಿಗೆ ಹೋಲಿಸಿದರೆ ತಲಸರಿ ಆದಾಯದಲ್ಲಿ ಅರ್ಧದಷ್ಟು ಇದ್ದರೂ, ವಿದ್ಯಾ ಮಟ್ಟದಲ್ಲಿ ಭಾರತದೇಶಕ್ಕಿಂತ ಎಷ್ಟೋ ಹಿಂದುಳಿದಿಲ್ಲವೆಂದು ಈ ಪಟ್ಟಿ ನೋಡಿದರೆ ತಿಳಿಯುತ್ತದೆ. ಸರಾಸರಿ ಆಯುಃ ಪ್ರಮಾಣ ವಿಷಯದಲ್ಲಿ ಭಾರತ ದೇಶಕ್ಕಿಂತ ನೇಪಾಳ್ ಮುಂದೆ ಇದೆ.

ಮಾನವ ಅಭಿವೃದ್ಧಿ ಸೂಚಿಕೆಯನ್ನು ಲೆಕ್ಕಿಸುವುದರಲ್ಲಿ ಬಹಳ ಅಭಿವೃದ್ಧಿಯನ್ನು ಸೂಚಿಸಿದ್ದಾರೆ. ಮಾನವ ಅಭಿವೃದ್ಧಿ ನಿವೇದಿಕೆಗೆ ಬಹಳ ಹೊಸ ಅಂಶಗಳನ್ನು ಸೇರಿಸಿದ್ದಾರೆ. ಆದರೆ ''ಅಭಿವೃದ್ಧಿ'' ಗೆ ಮೊದಲು ''ಮಾನವ '' ಎಂದು ಸೇರಿಸಿರುವುದರಿಂದ ಒಂದು ದೇಶದಲ್ಲಿನ ಪೌರರಿಗೆ ಏನಾಗುತ್ತದೆಂಬುದು ಅಭಿವೃದ್ಧಿಯಲ್ಲಿ ಬಹಳ ಮುಖ್ಯವೆಂಬ ವಿಷಯವನ್ನು ಇದು ಸ್ಪಷ್ಟಪಡಿಸುತ್ತದೆ. ಪ್ರಜೆಗಳು, ಅವರ ಆರೋಗ್ಯ, ಅವರ ಸಂಕ್ಷೇಮವು ಬಹಳ ಮುಖ್ಯವಾದವು.

ಮುನ್ನಡೆಯಾಗಿ ಅಭಿವೃದ್ಧಿ :

ಮಾನವ ಅಭಿವೃದ್ಧಿ ಸೂಚಿಕೆಯಲ್ಲಿ ಕೆಲವು ದೇಶಗಳು ಇನ್ನೂ ಹಲವು ದೇಶಗಳಿಗಿಂತ ಮುಂದೆ ಇವೆ ಎಂಬುದನ್ನು ನೋಡಿದ್ದೇವೆ. ಅದೇ ವಿಧವಾಗಿ ರಾಜ್ಯದ ಒಳಗೆ ವ್ಯತ್ಯಾಸಗಳಿದ್ದರೂ ಕೆಲವು ರಾಜ್ಯಗಳು ಮಾನವ ಅಭಿವೃದ್ಧಿ ಸೂಚಿಕೆಯಲ್ಲಿ ಮುಂದೆ ಇವೆ. ಕೆಲವು ಜಿಲ್ಲೆಗಳು ಉಳಿದ ಜಿಲ್ಲೆಗಳಿಗಿಂತ ಮುಂದೆ ಇರಬಹುದು. ಹೋಲಿಕೆಗಳು, ಸ್ಥಾನಗಳಿಗೆ ಅವುಗಳಿಂದ ಯಾವುದೇ ಉಪಯೋಗವೂ ಇಲ್ಲವೆಂಬುದು ಗುರ್ತಿಸಿಕೊಳ್ಳಿ. ಕೆಲವು ಪ್ರಾಂತಗಳು ಉಳಿದ ಪ್ರಾಂತಗಳಿಗಿಂತ ಏಕೆ ಹಿಂದುಳಿದಿವೆ ಎಂದು ಅರ್ಥಗರ್ಭಿತವಾಗಿ ಆಲೋಚಿಸಿದರೆ ಇವು ಉಪಯೋಗಪಡುತ್ತವೆ. ಮಾನವ ಅಭಿವೃದ್ಧಿ ಸೂಚಿಕೆಯಲ್ಲಿ ಕೆಳಭಾಗದಲ್ಲಿರುವುದು ಜನರ ಜೀವನದ ಕೆಲವು ಅಂಶಗಳ ಮೇಲೆ ದೃಷ್ಟಿ ಕೇಂದ್ರೀಕರಿಸಬೇಕೆಂಬ ಸಂಕೇತವನ್ನು ನೀಡುತ್ತದೆ. ಇಲ್ಲದಿದ್ದರೆ ಕೆಲವು ರಾಜ್ಯಗಳು ಇತರ ರಾಜ್ಯಗಳಿಗಿಂತ ಮುಂದೆ ಏಕೆ ಇವೆ ಎಂದು ಪ್ರಶ್ನಿಸಿಕೊಳ್ಳಬಹುದು. ಉದಾಹರಣೆಗೆ ಹಿಮಾಚಲ ಪ್ರದೇಶದಲ್ಲಿನ ಜನರ ಸರಾಸರಿ ಉಳಿದ ರಾಜ್ಯಗಳಿಗಿಂತ ಹೆಚ್ಚು ಶಿಕ್ಷಣವನ್ನು ಪಡೆಯಲು ಕಾರಣವೇನು ? (ಪಟ್ಟಿಕೆ 4 ನ್ನು ನೋಡಿರಿ)

''ಹಿಮಾಚಲ್ ಪ್ರದೇಶದಲ್ಲಿನ ಪಾಠಶಾಲೆ ಶಿಕ್ಷಣ ಕ್ರಾಂತಿ ''ಯಾಗಿ ಪರಿಗಣಿಸುವುದನ್ನು ಮತ್ತಷ್ಟು ಆಳವಾಗಿ ನೋಡೋಣ. ಇದರಿಂದ ನಾವು ಎಷ್ಟೋ ವಿಷಯಗಳನ್ನು ಕಲಿಯಬಹುದು. ಬದಲಾವಣೆಯನ್ನು ತರಲು ಎಷ್ಟು ಅಂಶಗಳು ಬೇಕಾಗುತ್ತದೆಂಬುದನ್ನು ಇದು ತಿಳಿಯಪಡಿಸುತ್ತದೆ. ಅಭಿವೃದ್ಧಿ ಎಂಬುದು ನಿಜವಾಗಿ ಬಹಳ ಕಷ್ಟಕರವಾದ ವಿಷಯ.

ಭಾರತದೇಶಕ್ಕೆ ಸ್ವಾತಂತ್ರ್ಯ ಬಂದಾಗ ಭಾರತದೇಶದಲ್ಲಿನ ಅನೇಕ ಇತರ ರಾಜ್ಯಗಳಂತೆ ಹಿಮಾಚಲ ಪ್ರದೇಶದಲ್ಲಿಯೂ ಶೈಕ್ಷಣಿಕಪ್ರಮಾಣ ಬಹಳ ಕಡಿಮೆಯಾಗಿತು. ಗುಡ್ಡಗಾಡು ಪ್ರಾಂತವಾದ್ದರಿಂದ ಬಹಳ ಗ್ರಾಮಗಳಲ್ಲಿ ಜನಸಾಂದ್ರತೆ ಬಹಳ ಕಡಿಮೆ. ಪಾಠಶಾಲೆಗಳ ವಿಸ್ತರಣೆ, ಪ್ರತ್ಯೇಕವಾಗಿ ಗ್ರಾಮೀಣ ಪ್ರಾಂತಗಳಲ್ಲಿ ವಿಸ್ತರಿಸುವುದು ದೊಡ್ಡ ಸಮಸ್ಯೆಯಾಗಿತು. ಆದರೆ ಹಿಮಾಚಲ್ ಪ್ರದೇಶ್ ಸರ್ಕಾರ ಮತ್ತು ಪ್ರಜೆಗಳು ಶಿಕ್ಷಣದ ಬಗ್ಗೆ ಬಹಳಷ್ಟು ಆಸಕ್ತಿ ತೋರಿಸಿದರು. ಈ ಆಕಾಂಕ್ಷೆಯನ್ನು ಸಕಾರ ಗೊಳಿಸುವುದು ಹೇಗೆ.



ಪಾಠಶಾಲೆಗಳು ಪ್ರಾರಂಭಿಸಿ ಸಾಧ್ಯವಾದಷ್ಟು ಶಿಕ್ಷಣವನ್ನು ಉಚಿತವಾಗಿ ನೀಡುವಂತೆ ಅಥವಾ ತಂದೆ ತಾಯಿಗಳು ನಾಮಮಾತ್ರ ಖರ್ಚಾಗುವಂತೆ ಸರ್ಕಾರ ನೋಡಿದೆ. ಅಷ್ಟೇ ಅಲ್ಲದೇ ಈ ಪಾಠಶಾಲೆಗಳಲ್ಲಿ ಉಪಾಧ್ಯಾಯರು, ತರಗತಿಕೋಣೆಗಳು,

SCERT TELANGANA

ಶೌಚಾಲಯಗಳು, ಕುಡಿಯುವ ನೀರಿನಂತಹ ಮೂಲಭೂತ ಸೌಕರ್ಯಗಳು ಇರುವಂತೆ ನೋಡಿದೆ. ಕಾಲಕಳೆದಂತೆ ಈ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದಾರೆ, ವಿಸ್ತರಿಸಿದ್ದಾರೆ. ಇನ್ನೂ ಹೆಚ್ಚು ಮಕ್ಕಳು ಸುಲಭವಾಗಿ ಅಭ್ಯಾಸ ಮಾಡಲು ಮತ್ತಷ್ಟು ಪಾಠಶಾಲೆಗಳನ್ನು ಸ್ಥಾಪಿಸಿ, ಉಪಾಧ್ಯಾಯರನ್ನು ನಿಯಮಿಸಿದ್ದಾರೆ. ಪಾಠಶಾಲೆಗಳನ್ನು ತೆರೆದು, ಅವುಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಲು ಸರ್ಕಾರ ಹಣ ಖರ್ಚು ಮಾಡಬೇಕು. ಭಾರತದೇಶದ ರಾಜ್ಯಗಳಲ್ಲಿ ಸರ್ಕಾರದ ಬಡ್ಜೆಟ್‌ನಲ್ಲಿ ಪ್ರತಿ ವಿದ್ಯಾರ್ಥಿವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಖರ್ಚು ಮಾಡುತ್ತಿರುವ ರಾಜ್ಯಗಳಲ್ಲಿ ಹಿಮಾಚಲ್ ಪ್ರದೇಶ ಒಂದು. 2005 ವರ್ಷದಲ್ಲಿ ಭಾರತದೇಶದಲ್ಲಿ ರಾಜ್ಯ ಸರ್ಕಾರಗಳು ವಿದ್ಯೆಯ ಮೇಲೆ ಸರಾಸರಿ ಪ್ರತಿ ವಿದ್ಯಾರ್ಥಿಯ ಮೇಲೆ 1,049 ರೂ.ಗಳು ಖರ್ಚು ಮಾಡುತ್ತಿದ್ದರೆ, ಹಿಮಾಚಲ್ ಪ್ರದೇಶ್ 2,005 ರೂಪಾಯಿಗಳನ್ನು ಖರ್ಚು ಮಾಡುತ್ತಿದೆ !

ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಉತ್ತಮ ಫಲಿತಾಂಶ ಬಂದಿವೆ. ಪಾಠಶಾಲೆ ಶಿಕ್ಷಣದ ಮೇಲೆ 1996ರಲ್ಲಿ ಮತ್ತು 2006ರಲ್ಲಿಯೂ ಸೂಕ್ಷ್ಮವಾಗಿ ಸರ್ವೇ ಮಾಡಿ ಹೀಗೆ ತಿಳಿಸಿದ್ದಾರೆ.

ಹಿಮಾಚಲ್ ಪ್ರದೇಶ್‌ದಲ್ಲಿನ ಮಕ್ಕಳು ಬಹಳ ಉತ್ಸಾಹದಿಂದ ಶಾಲೆಗೆ ಬರುತ್ತಾರೆ. ಅಧಿಕ ಭಾಗ ಮಕ್ಕಳಿಗೆ ಅವರ ಪಾಠಶಾಲೆ ಅನುಭವ ಬಹಳ ಸಂತೋಷದಾಯಕವಾಗಿದೆ. ಚಂಬಾಗ್ರಾಮದಲ್ಲಿ 4ನೇ ತರಗತಿ ಅಭ್ಯಸಿಸುತ್ತಿರುವ ನೇಹಾ ''ಶಿಕ್ಷಕರು ನಮ್ಮನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಪಾಠಗಳು ಚೆನ್ನಾಗಿ ಬೋಧಿಸುತ್ತಾರೆ '', ಎಂದು ಹೇಳಿದಳು. ಇನ್ನೂ ಮುಂದಿನ ಉನ್ನತ ತರಗತಿ ಓದಬೇಕೆಂದು, ಪೋಲೀಸ್, ಶಾಸ್ತ್ರಜ್ಞರು, ಶಿಕ್ಷಕರು ಆಗಬೇಕೆಂದು ಮಕ್ಕಳು ಕೋರಿಕೊಳ್ಳುತ್ತಿದ್ದಾರೆ. ಪ್ರಾಥಮಿಕ ತರಗತಿಗಳಲ್ಲಿ ಹಾಜರು ಶೇಕಡ ಬಹಳ ಹೆಚ್ಚಾಗಿದೆ, ಮೇಲಿನ ತರಗತಿಗಳಲ್ಲಿಯೂ ಹಾಜರಿ ಚೆನ್ನಾಗಿದೆ.

ಪಾಠಶಾಲೆ ವಿದ್ಯೆಯಲ್ಲಿ ಹತ್ತು ವರ್ಷಗಳು ಕಳೆಯುವುದೆನ್ನುವುದು ಹಿಮಾಚಲ್ ಪ್ರದೇಶ್ ಮಕ್ಕಳಿಗೆ ಆದರ್ಶ ನಿಯಮವಾಗಿದೆ.

ದೇಶದಲ್ಲಿ ಅನೇಕ ಪ್ರಾಂತಗಳಲ್ಲಿ ಬಾಲಕರ ಶಿಕ್ಷಣಕ್ಕೆ ಹೋಲಿಸಿದರೆ ಬಾಲಕೀಯರ ಶಿಕ್ಷಣಕ್ಕೆ ಕಡಿಮೆ ಪ್ರಾಧಾನ್ಯತೆ ನೀಡುತ್ತಾರೆ. ಬಾಲಕೀಯರು ಕೆಲವು ತರಗತಿಗಳು ಓದುತ್ತಾರೆ, ಆದರೆ ಪಾಠಶಾಲೆ ವಿದ್ಯೆ ಪೂರ್ಣಗೊಳಿಸುವುದಿಲ್ಲ. ಬಾಲಕೀಯರ ಬಗ್ಗೆ ಅಷ್ಟು ತಾರತಮ್ಯ ಇಲ್ಲದಿರುವುದು ಹಿಮಾಚಲ ಪ್ರದೇಶದಲ್ಲಿ ಹೇಳಿಕೊಳ್ಳುವಂತಹ ವಿಷಯ. ಗಂಡು ಮಕ್ಕಳ ಹಾಗೆ ಹೆಣ್ಣು ಮಕ್ಕಳು ಸಹ ಶಿಕ್ಷಣ ಪಡೆಯಬೇಕೆಂದು ಅಲ್ಲಿಯ ತಂದೆ ತಾಯಿಗಳ ಕೋರಿಕೆಯಾಗಿದೆ. ಅದಕ್ಕಾಗಿ 13-18 ವಯಸ್ಸಿನ ಬಾಲಕೀಯರು ಅತ್ಯಧಿಕ ಭಾಗ 8ನೇ ತರಗತಿ ಪೂರ್ಣಗೊಳಿಸಿ, ಮುಂದಿನ ತರಗತಿ ಗಳಲ್ಲಿ ಮುಂದುವರಿಯುತ್ತಿದ್ದಾರೆ. ಇದರ ಅರ್ಥ ಸ್ತ್ರೀ, ಪುರುಷರ ಅಂತಸ್ತುಗಳಲ್ಲಿ ವ್ಯತ್ಯಾಸಗಳಿಲ್ಲವೆಂದು ಅಲ್ಲ, ಇತರ ಪ್ರಾಂತಗಳೊಂದಿಗೆ, ಪ್ರತ್ಯೇಕವಾಗಿ ಉತ್ತರ ಭಾರತ ರಾಜ್ಯಗಳೊಂದಿಗೆ ಹೋಲಿಸಿದರೆ ವ್ಯತ್ಯಾಸಗಳು ಕಡಿಮೆ.

ಲಿಂಗ ತಾರತಮ್ಯ ಕಡಿಮೆ ಇರುವುದು ಆಶ್ಚರ್ಯ ಮೂಡಿಸಬಹುದು. ವಿದ್ಯೆಯಲ್ಲಿ ಅಲ್ಲದೇ ಇದನ್ನು ಇತರ ರಂಗಗಳಲ್ಲಿಯೂ ನೋಡಬಹುದು. ಇತರ ರಾಷ್ಟ್ರಗಳಲ್ಲಿ ಪರಿಸ್ಥಿತಿಗೆ ವಿರುದ್ಧವಾಗಿ ಹಿಮಾಚಲ್ ಪ್ರದೇಶ್‌ದಲ್ಲಿ ಹುಟ್ಟಿದ ಕೆಲವು ತಿಂಗಳಲ್ಲಿ ಸಾಯುತ್ತಿರುವ ಮಕ್ಕಳು ಬಾಲಕರಗಿಂತ ಬಾಲಕೀಯರ ಸಂಖ್ಯೆ ಕಡಿಮೆ. ಇದಕ್ಕೆ ಒಂದು ಕಾರಣ ಹಿಮಾಚಲ್ ಪ್ರದೇಶ್ ಮಹಿಳೆಯರು ಮನೆಯಿಂದ ಹೊರಬಂದು, ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಹೊರಗೆ ಉದ್ಯೋಗ ಮಾಡುವ ಮಹಿಳೆಯರು ಸ್ವತಂತ್ರವಾಗಿರುತ್ತಾರೆ, ಆತ್ಮ ವಿಶ್ವಾಸವನ್ನು ಹೊಂದಿರುತ್ತಾರೆ. ಮನೆಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳಲ್ಲಿ ಅಂದರೆ ಬಾಲಕೀಯರ ಶಿಕ್ಷಣ, ಆರೋಗ್ಯ, ಮಕ್ಕಳ ಸಂಖ್ಯೆ, ಗೃಹ ನಿರ್ವಹಣೆಗಳಂತಹವುಗಳಲ್ಲಿ ಮಹಿಳೆಯರ ಮಾತಿಗೆ ಪ್ರಾಧಾನ್ಯತೆ ಇರುತ್ತದೆ. ಅವರು ಉದ್ಯೋಗಗಳಲ್ಲಿ ಇರುವುದರಿಂದ ಮದುವೆಯಾದ ನಂತರ ತಮ್ಮ ಹೆಣ್ಣು ಮಕ್ಕಳು ಉದ್ಯೋಗಗಳು ಮಾಡಬೇಕೆಂದು ತಾಯಂದಿರು ಕೋರಿಕೊಳ್ಳುತ್ತಾರೆ. ಆದ್ದರಿಂದ ಶಿಕ್ಷಣಕ್ಕೆ ಪ್ರಾಧಾನ್ಯತೆಯನ್ನು ನೀಡುವುದು ಸಹಜ ವಿಷಯವಾಗಿ, ಸಮಾಜಿಕ ನಿಯಮವಾಗಿ ಬದಲಾಗಿದೆ.

ಸಾಮಾಜಿಕ ಜೀವನದಲ್ಲಿ, ಗ್ರಾಮ ರಾಜಕೀಯಗಳಲ್ಲಿಯೂ ಹಿಮಾಚಲ ಪ್ರದೇಶದ ಮಹಿಳೆಯರ ಪಾತ್ರ ಇತರ ರಾಜ್ಯಗಳಿಗಿಂತ ಹೆಚ್ಚು ಇದೆ. ಹಲವು ಗ್ರಾಮಗಳಲ್ಲಿ ಚುರುಕಾಗಿ ಕೆಲಸ ಮಾಡುತ್ತಿರುವ ಮಹಿಳಾ ಮಂಡಲಿಗಳು ಕಾಣುತ್ತವೆ.

SCERT TELANGANA

ಭಾರತದೇಶದಲ್ಲಿನ ರಾಜ್ಯಗಳ ಸರಾಸರಿಯೊಂದಿಗೆ ಹೋಲಿಸಿದರೆ ಹಿಮಾಚಲ್‌ಪ್ರದೇಶ್‌ದಲ್ಲಿ ಪಾಠಶಾಲೆ ವಿದ್ಯೆಯಲ್ಲಿನ ಪ್ರಗತಿಯನ್ನು ಈ ಪಟ್ಟಿ ತಿಳಿಯಪಡಿಸುತ್ತದೆ.

ಪಟ್ಟಿ 6: ಹಿಮಾಚಲ್‌ಪ್ರದೇಶ್‌ದಲ್ಲಿನ ಪ್ರಗತಿ

	ಹಿಮಾಚಲ್‌ಪ್ರದೇಶ್		ಭಾರತದೇಶ	
	1993	2006	1993	2006
(6 ವರ್ಷಗಳು ತುಂಬಿದ) ಬಾಲಕೀಯರಲ್ಲಿ 5 ವರ್ಷಗಳಿಗಿಂತ ಹೆಚ್ಚು ಕಾಲ ಶಾಲೆಗೆ ಹೋದವರ ಶೇಕಡಾ ಧರ	39	60	28	40
(6 ವರ್ಷಗಳು ತುಂಬಿದ) ಬಾಲಕರಲ್ಲಿ 5 ವರ್ಷ ಗಳಿಗಿಂತ ಹೆಚ್ಚು ಕಾಲ ಶಾಲೆಗೆ ಹೋದವರ ಶೇಕಡಾ ಧರ	57	75	51	57

ಈ ವಿವರಗಳು ಎರಡು ಬೇರೆ ಬೇರೆ ಸಮಯಗಳಲ್ಲಿ ಸಾಧಿಸಿದ ಅಭಿವೃದ್ಧಿಯನ್ನು ತಿಳಿಯಪಡಿಸುತ್ತವೆ. ಭಾರತದೇಶ ಒಟ್ಟಾಗಿ ಅಲ್ಲದೆ ಹಿಮಾಚಲ ಪ್ರದೇಶ್‌ನಲ್ಲಿನ ಪಾಠಶಾಲೆ ವಿದ್ಯೆ ವಿಸ್ತರಣೆ, ಅಭಿವೃದ್ಧಿ ಗಣನೀಯವಾಗಿದೆ. ಬಾಲಕರು, ಬಾಲಕೀಯರು ಸರಾಸರಿ ವಿದ್ಯಾ ಪ್ರಮಾಣದಲ್ಲಿ ವ್ಯತ್ಯಾಸಗಳಿದ್ದರೂ ಈ ಕೆಲವು ವರ್ಷಗಳಲ್ಲಿ ಈ ವ್ಯತ್ಯಾಸಗಳು ಕಡಿಮೆಯಾಗುತ್ತಿವೆ.

ಸಾರಾಂಶ :

ಅಭಿವೃದ್ಧಿ ಗುರಿಗಳಲ್ಲಿ ವೈವಿಧ್ಯತೆ ಇದ್ದರೂ, ಅವುಗಳ ಸಾಧನೆಯ ಮಾರ್ಗಗಳು ಬೇರೆಯಾದರೂ ಅವು ಅಭಿವೃದ್ಧಿಯಲ್ಲಿನ ಭಾಗವೇ ಆಗುತ್ತವೆ. ಅಭಿವೃದ್ಧಿ ಪ್ರಸ್ತಾವನೆ ಬಂದಾಗ ಯಾರ ಅಭಿವೃದ್ಧಿ ಮುಖ್ಯ ಎಂಬುದೇ ಪ್ರಶ್ನೆ

ಆದಾಯ, ತಲಸರಿ ಆದಾಯಗಳನ್ನು ಅಭಿವೃದ್ಧಿ ಗಣನೆಯಲ್ಲಿ ಆಗಾಗ್ಗೆ ಹೇಳಿದರು ಅವು ಸ್ವಲ್ಪ ಮಾತ್ರವಲ್ಲದೆ ಸಮಗ್ರ ಅಭಿವೃದ್ಧಿಯನ್ನು ಸೂಚಿಸಲಾರವು. ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ ಕಂಡರೂ ಹಂಚಿಕೆಯಲ್ಲಿ ಬಹಳ ಅಸಮಾನತೆಗಳಿವೆ.

ಆರೋಗ್ಯ, ವಿದ್ಯೆ, ಸಾಮಾಜಿಕ ಸೂಚಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಮಾನವಾಭಿವೃದ್ಧಿ ಭಾವನೆ ವಿಸ್ತರಿಸಿದೆ. ಎಲ್ಲರಿಗೂ ಅಭಿವೃದ್ಧಿ ಹೊಂದಿದ ವಿದ್ಯೆ, ಆರೋಗ್ಯ ಸರ್ಕಾರದ ಮೂಲಕ ಮಾತ್ರ ಸಾಧ್ಯವಾಗುತ್ತದೆ. ಸರಿಯಾದ ರೀತಿಯಲ್ಲಿ ಪ್ರಜೆಗಳಿಗೆ ಸೌಲಭ್ಯಗಳನ್ನು ಕಲ್ಪಿಸಿದಾಗ ಮಾತ್ರ ಅಸಾಮಾನತೆಗಳು ಕಡಿಮೆಯಾಗಿ ಸಮಾಜದಲ್ಲಿ ಸಮಾನತೆಯ ಕಡೆಗೆ ವೇಗವಾಗಿ ಅಭಿವೃದ್ಧಿ ಸಾಧಿಸುತ್ತದೆ.

ಕಠಿಣ ಪದಗಳು

ತಲಸರಿ ಆದಾಯ, ಮಾನವಾಭಿವೃದ್ಧಿ, ಸಾರ್ವಜನಿಕ ಸೌಲಭ್ಯಗಳು, ವಿದ್ಯೆ, ಆರೋಗ್ಯ ಸೂಚಿಕೆಗಳು

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ

1. ವಿವಿಧ ದೇಶಗಳನ್ನು ವರ್ಗೀಕರಿಸುವುದರಲ್ಲಿ ಪ್ರಪಂಚ ಬ್ಯಾಂಕು ಉಪಯೋಗಿಸುವ ಮುಖ್ಯವಾದ ಅಳತೆಗೋಲುಗಳೇನು? ಮೇಲಿನ ಅಳತೆ ಗೋಲುಗಳಲ್ಲಿ ಏನಾದರೂ ಪರಿಮಿತಿಗಳಿದ್ದರೆ ಅವುಗಳನ್ನು ಹೆಸರಿಸಿ. (AS_1)
2. ಪ್ರತಿ ಸಾಮಾಜಿಕ ಅಂಶದ ಹಿಂದೆ ಒಂದಲ್ಲದೆ ಅನೇಕ ಕಾರಕಗಳಿರುತ್ತವೆ. ಇಲ್ಲಿಯೂ ಸಹ ಅದು ಅನ್ವಯಿಸುತ್ತದೆ. ನಿಮ್ಮ ಅಭಿಪ್ರಾಯದಲ್ಲಿ ಹಿಮಾಚಲ್ ಪ್ರದೇಶ್‌ದಲ್ಲಿ ಯಾವ ಯಾವ ಕಾರಕಗಳು ಪಾಠಶಾಲೆ ವಿದ್ಯೆಗೆ ಸಹಾಯಪಟ್ಟಿವೆ.(AS_1)
3. ಅಭಿವೃದ್ಧಿಯನ್ನು ಅಳೆಯಲು ಪ್ರಪಂಚ ಬ್ಯಾಂಕ್ ಉಪಯೋಗಿಸುವ ಅಳತೆಗೋಲುಗಳಿಗೆ ಯುನೈಟೆಡ್ ನೇಷನ್ ಅಭಿವೃದ್ಧಿ ಕಾರ್ಯಕ್ರಮವು ಉಪಯೋಗಿಸುವವುಗಳಿಗೆ ವ್ಯತ್ಯಾಸವೇನು ?(AS_1)

SCERT TELANGANA

4. ಮಾನವ ಅಭಿವೃದ್ಧಿಯನ್ನು ಅಳೆಯಲು ನಿಮ್ಮ ದೃಷ್ಟಿಯಲ್ಲಿ ಇನ್ನೂ ಯಾವ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು? (AS_4)

5. ''ಸರಾಸರಿ'' ಏಕೆ ಉಪಯೋಗಿಸುತ್ತಾರೆ ? ಇದನ್ನು ಉಪಯೋಗಿಸುವುದರಲ್ಲಿ ಯಾವುದಾದರೂ ನಿಬಂಧನೆಗಳಿವೆಯಾ? ಅಭಿವೃದ್ಧಿಗೆ ಸಂಬಂಧಿಸಿದಂತೆ ನಿಮ್ಮ ಸ್ವತಃ ಉದಾಹರಣೆಗಳನ್ನು ತೆಗೆದುಕೊಂಡು ಇದನ್ನು ವಿವರಿಸಿರಿ.

6. ಹಿಮಾಚಲ್‌ಪ್ರದೇಶ್‌ದಲ್ಲಿ ತಲಸರಿ ಆದಾಯ ಕಡಿಮೆ ಇದ್ದರೂ ಹರಿಯಾಣಗಿಂತ ಮಾನವ ಅಭಿವೃದ್ಧಿ ಸೂಚಿಕೆಯಲ್ಲಿ ಮುಂದೆ ಇದೆ ಎಂಬ ವಾಸ್ತವಾಂಶದಿಂದ ಆದಾಯದ ಪ್ರಾಮುಖ್ಯತೆ ಕುರಿತು ಎಂತಹ ನಿರ್ಧಾಗಳು ಮಾಡಬಹುದು?

7. ಪಟ್ಟಿ 6 ರಲ್ಲಿರುವ ವಿವರಗಳ ಆಧಾರವಾಗಿ ಕೆಳಗಿನವುಗಳನ್ನು ಪೂರ್ಣಗೊಳಿಸಿರಿ : (AS_3)

   ಆರು ವರ್ಷಗಳು ಮೇಲ್ಪಟ್ಟ ಪ್ರತಿ 100 ಬಾಲಕೀಯರಲ್ಲಿ ಹಿಮಾಚಲ ಪ್ರದೇಶ್‌ದಲ್ಲಿ 1993ರಲ್ಲಿ....... ಬಾಲಕೀಯರು ಪ್ರಾಥಮಿಕ ಹಂತ ದಾಟಿ ಶಿಕ್ಷಣ ಪಡೆದಿದ್ದಾರೆ. 2006 ರ ಹೊತ್ತಿಗೆ ಇದು ನೂರಕ್ಕೆ .... ಜನರಿಗೆ ಸೇರಿತು. ಭಾರತದೇಶದಲ್ಲೆಲ್ಲಾ 2006ರಲ್ಲಿ ಪ್ರಾಥಮಿಕ ಹಂತ ದಾಟಿ ಶಿಕ್ಷಣ ಪಡೆದ ಬಾಲಕರ ಸಂಖ್ಯೆ ನೂರಕ್ಕೆ ...... ಮಾತ್ರ.

8. ಹಿಮಾಚಲಪ್ರದೇಶ್‌ದಲ್ಲಿ ತಲಸರಿ ಆದಾಯ ಎಷ್ಟು? ಅಧಿಕ ಆದಾಯವಿದ್ದಾಗ ಮಕ್ಕಳನ್ನು ಶಾಲೆಗೆ ಕಳಿಸುವುದು ತಂದೆ ತಾಯಿಗಳಿಗೆ ಸುಲಭವಾಗುತ್ತದೆ ? ಚರ್ಚಿಸಿರಿ. ಹಿಮಾಚಲ್‌ಪ್ರದೇಶ್‌ನಲ್ಲಿ ಸರ್ಕಾರ ಪಾಠಶಾಲೆಗಳನ್ನು ನಡೆಸುವುದು ಏಕೆ ಅವಸರವಾಯ್ತು ? (AS_1)

9. ಬಾಲಕರೊಂದಿಗೆ ಹೋಲಿಸಿದರೆ ಬಾಲಕೀಯರ ಶಿಕ್ಷಣಕ್ಕೆ ತಂದೆ ತಾಯಿಗಳು ಕಡಿಮೆ ಪ್ರಾಧಾನ್ಯತೆ ಏಕೆ ನೀಡುವರು? ತರಗತಿಯಲ್ಲಿ ಚರ್ಚಿಸಿರಿ. (AS_4)

10. ಹೆಣ್ಣು ಮಕ್ಕಳು ಮನೆ ಹೊರಗಡೆ ಕೆಲಸ ಮಾಡಲು, ಲಿಂಗ ತಾರತಮ್ಯಕ್ಕೆ ಮಧ್ಯೆ ಇರುವ ಸಂಬಂಧವೇನು ? (AS_1)

11. ಎಂಟನೇ ತರಗತಿ ಪಠ್ಯಪುಸ್ತಕದಲ್ಲಿ ನೀವು ವಿದ್ಯಾ ಹಕ್ಕು ಕಾಯ್ದೆ (RTE) ಕುರಿತು ಓದಿದ್ದೀರಿ. ಓದಿದ, ನಿಮಗೆ ತಿಳಿದಂತೆ (i) ಮಕ್ಕಳಿಗೆ, ಮತ್ತು (ii) ಮಾನವ ಅಭಿವೃದ್ಧಿಗೆ ಈ ಕಾಯ್ದೆ ಎಂತಹ ಪ್ರಾಧಾನ್ಯತೆ ಹೊಂದಿದೆ ಎಂದು ಚರ್ಚಿಸಿರಿ. ಚರ್ಚಾಗೋಷ್ಠಿ ನಡೆಸಿರಿ. (AS_2)

ಚರ್ಚೆ:-ಓದು ಉದ್ಯೋಗಕ್ಕಾಗಿಯೇನಾ ? ಓದಿನ ಉದ್ದೇಶವೇನು ? ಈ ವಿಷಯದ ಬಗ್ಗೆ ಚರ್ಚೆ ನಿರ್ವಹಿಸಿರಿ.

ಪ್ರಾಜೆಕ್ಟ್

1) ಜೀವನೋಪಾಯಕ್ಕೆ ಸಂಬಂಧಿಸಿದ ವಿವಿಧ ಸಂಪನ್ಮೂಲಗಳು ಈ ಚಿತ್ರ ದಲ್ಲಿ ತೋರಿಸಲಾಗಿದೆ. ಅಭಿವೃದ್ಧಿಯ ಬಗ್ಗೆ ಅವರಿಗೆ ಇರುವ ಭಾವನೆಯನ್ನು ಇಂತಹ ಒಂದು ಚಿತ್ರದೊಂದಿಗೆ ತೋರಿಸಿ, ಅದಕ್ಕೆ ಸರಿಯಾದ ವ್ಯಾಖ್ಯೆ ಯನ್ನು ಬರೆಯಿರಿ.

2) ನಿಮ್ಮ ಪ್ರಾಂತದಲ್ಲಿನ ಬಾಲಕ-ಬಾಲಕಿಯರು ಯಾವ ಯಾವ ಶಾಲೆ ಯಲ್ಲಿ ಓದುತ್ತಿರುವರೊ ತಂದೆ-ತಾಯಿಯವರ ಸಹಾಯದಿಂದ ಸಮಾಚಾರವನ್ನು ಶೇಖರಿಸಿ. ಈ ವಿಷಯವನ್ನು ತರಗತಿ ಕೋಣೆಯಲ್ಲಿ ವಿಶ್ಲೇಷಿಸಿರಿ.

ಕ್ರ. ಸಂ.	ಕುಟುಂಬದ ಯಜಮಾನನ	ಬಾಲಕ/ ಬಾಲಕಿ	ಓದುತ್ತಿರುವ ಶಾಲೆ		ಪಟ್ಟಣ/ಗ್ರಾಮೀಣ ಹೆಸರು	ಓಶಾಲೆಯಲ್ಲಿಯೇ ಓದಿಸು ತ್ತಿರಲು ಕಾರಣ	
			ಸರ್ಕಾರಿ	ಖಾಸಗಿ		ತಾಯಿ-ತಂದೆ ಯವರಅಭಿಪ್ರಾಯ	ಮಕ್ಕಳ ಅಭಿಪ್ರಾಯ

ಅಧ್ಯಾಯ
3

ಉತ್ಪತ್ತಿ, ಉದ್ಯೋಗ

ಒಟ್ಟು ರಾಷ್ಟ್ರೀಯ ಉತ್ಪತ್ತಿಯ ಹೆಚ್ಚಳ ಕಳೆದ 9 ವರ್ಷದಲ್ಲಿ ಕನಿಷ್ಟ ಮಟ್ಟಕ್ಕೆ ಇಳಿದಿದೆ. 2012-13ನೇ ವರ್ಷದಲ್ಲಿ ಭಾರತ ದೇಶದ ಒಟ್ಟು ರಾಷ್ಟ್ರೀಯೋತ್ಪತ್ತಿ ಕೇವಲ 5 ಪ್ರತಿಶತ ಮಾತ್ರವೇ ಹೆಚ್ಚಿದೆ. ವ್ಯವಸಾಯ ರಂಗದಲ್ಲಿ ಸಾಧಾರಣ ಹೆಚ್ಚಳ ನಮೂದು ಆದರೆ ನಿರ್ಮಾಣ ಮತ್ತು ಸೇವಾರಂಗದಲ್ಲಿ ಹೆಚ್ಚಳ ತಗ್ಗಿದೆ. ಒಟ್ಟು ರಾಷ್ಟ್ರೀಯೋತ್ಪತ್ತಿ ಗಣಾಂಕದಲ್ಲಿ ತಗ್ಗಿದ್ದನ್ನು ಗಮನಿಸಿ ನಿರಾಶೆ ಹೊಂದಿದ ಆರ್ಥಿಕ ಮಂತ್ರಿ ಪ್ರತ್ಯೇಕ ರಂಗದಲ್ಲಿ ಪುನರ್ ಸೃಷ್ಟಿಯ ಚಟುವಟಿಕೆಗಳನ್ನು ಕೈಗೊಳ್ಳಬೇಕೆಂದು ಕೆಲವು ಜಾಗ್ರತೆಗಳನ್ನು ಸೂಚಿಸಿದ್ದಾರೆ. (ದಿ ಹಿಂದು ಪತ್ರಿಕೆಯ ಸೌಜನ್ಯದೊಂದಿಗೆ)

ಇಂತಹ ವಾತಾಪತ್ರಿಕೆಯಲ್ಲಿ ಕಥೆಗಳನ್ನು ನೀವು ಓದಿರುತ್ತೀರಿ. ಮೇಲೆ ಚರ್ಚಿಸಿದ ಒಟ್ಟು ರಾಷ್ಟ್ರೀಯ ಉತ್ಪತ್ತಿ ಎಂದರೇನು ?

ಭಾರತ ಆರ್ಥಿಕ ವ್ಯವಸ್ಥೆಯಲ್ಲಿ ವಿವಿಧ ರಂಗಗಳ ಜೊತೆ ಇದಕ್ಕೆ ಸಂಬಂಧವೇನು ? ಈಗ ಇದರ ಕುರಿತು ಅರ್ಥ ಮಾಡಿಕೊಳ್ಳೋಣ.

ಆರ್ಥಿಕ ವ್ಯವಸ್ಥೆಯಲ್ಲಿನ ರಂಗಗಳು (Sectors of Economy) :

ಜನರು ತಮ್ಮ ಜೀವನೋಪಾದಿಗಾಗಿ ವಿವಿಧ ರೀತಿಯ ಕೆಲಸಗಳನ್ನು ಕೈಗೊಳ್ಳುವ ಬಗ್ಗೆ 8, 9ನೇ ತರಗತಿಗಳಲ್ಲಿಯ ಕೆಲವು ಅಧ್ಯಾಯಗಳಲ್ಲಿ ಚರ್ಚಿಸಿದ್ದೇವೆ. ಈ ಕೆಲಸಗಳನ್ನು ಪ್ರಧಾನವಾಗಿ ಮೂರು ರಂಗಗಳಾಗಿ ವಿಭಜಿಸುತ್ತಾರೆ. 1) ಉತ್ಪತ್ತಿ ಪ್ರಕ್ರಿಯೆಯಲ್ಲಿ ಪ್ರಕೃತಿ ಪ್ರಧಾನ ಪಾತ್ರವಹಿಸುವ ವ್ಯವಸಾಯ, ಮೀನುಗಾರಿಕೆ, ತೋಟಗಾರಿಕೆ, ಗಣಿಗಾರಿಕೆಗೆ ಸಂಬಂಧಿಸಿದ ಕೆಲಸಗಳು ; 2) ಯಂತ್ರಗಳು, ಪರಿಕರಗಳನ್ನು ಉಪಯೋಗಿಸಿ ವಸ್ತುಗಳನ್ನು ಉತ್ಪತ್ತಿ ಮಾಡುವುದು, ಇತರ ಕೈಗಾರಿಕೆಗಳು ; 3) ವಸ್ತುಗಳನ್ನು ನೇರವಾಗಿ ತಯಾರು ಮಾಡದೇ ವಸ್ತುಗಳ ಉತ್ಪತ್ತಿಗೆ, ಜನರಿಗೆ ಅವಸರವಾದ ಸೇವೆಗಳನ್ನು ಒದಗಿಸುವ ಚಟುವಟಿಕೆಗಳು.

ಇವುಗಳಲ್ಲಿನ ವ್ಯತ್ಯಾಸಗಳನ್ನು ಮತ್ತೊಮ್ಮೆ ಜ್ಞಾಪಿಸಿಕೊಳ್ಳೋಣ :

- ಕೆಳಗೆ ತಿಳಿಸಿದ ವಿವಿಧ ವೃತ್ತಿಗಳವರನ್ನು ವ್ಯವಸಾಯ, ಕೈಗಾರಿಕೆ, ಸೇವಾವಲಯಗಳ ಕೆಳಗೆ ವರ್ಗೀಕರಿಸಿರಿ. ನಿಮ್ಮ ವರ್ಗೀಕರಣಗಳಿಗೆ ಕಾರಣಗಳನ್ನು ಕೊಡಿ.

ವೃತ್ತಿ	ವರ್ಗೀಕರಣ
ಬಟ್ಟೆ ಹೊಲಿಯುವ ದರ್ಜಿ	
ಬಟ್ಟೆ ನೇಯುವವರು	
ಹೂ ಸಾಗುವಳಿಗಾರರು	
ಹಾಲು ಮಾರುವವರು	
ಮೀನು ಹಿಡಿಯುವವರು	
ಮತ ಪ್ರಚಾರಕರು / ಪುರೋಹಿತರು	
ಪತ್ರಗಳನ್ನು ವಿತರಿಸುವ ಓಲೆಕಾರ	

SCERT TELANGANA

ಬೆಂಕಿಪಟ್ಟಣ ಕೈಗಾರಿಕೆಯಲ್ಲಿ ಕೆಲಸ ಮಾಡುವವರು	
ಬಡ್ಡಿ ವ್ಯಾಪಾರಿಗಳು	
ತೋಟಮಾಲೀಕರು	
ಕುಂಬಾರರು	
ಜೇನುಸಾಕಾಣಿಕೆ ಮಾಡುವವರು	
ಆಕಾಶಯಾನ ಪ್ರಯಾಣಿಕರು	
ಕಾಲ್‌ಸೆಂಟರ್ ಉದ್ಯೋಗಿಗಳು	

- ಕೆಳಗಿನ ಪಟ್ಟಿಯು ಭಾರತ ದೇಶದಲ್ಲಿ 1972-73ರಲ್ಲಿ ಮತ್ತು 2015-16 ಅಂದರೆ 43 ವರ್ಷಗಳ ನಂತರ ಯಾವ ವಲಯದಲ್ಲಿ ಎಷ್ಟು ಜನ ಉದ್ಯೋಗ ಪಡೆಯುತ್ತಿದ್ದಾರೆ ಎಂಬುದನ್ನು ತಿಳಿಯಪಡಿಸುತ್ತದೆ.

ವರ್ಷ	ವ್ಯವಸಾಯ	ಕೈಗಾರಿಕೆ	ಸೇವೆಗಳು
1972-73	74%	11%	15%
2015-16	47%	22%	31%

(ಅ) ಮೇಲಿನ ಪಟ್ಟಿಕೆಯ ಮೂಲಕ ನೀವು ಗಮನಿಸಿದ ಪ್ರಧಾನ ಬದಲಾವಣೆಗಳೇನು ?

(ಆ) ಇದಕ್ಕೂ ಮೊದಲು ನೀವು ಓದಿದ್ದರ ಆಧಾರವಾಗಿ ಈ ಬದಲಾವಣೆಗೆ ಕಾರಣಗಳು ಏನೆಂಬುದನ್ನು ಚರ್ಚಿಸಿರಿ. ಈ ಕೆಳಗಿನ ಚಿತ್ರಗಳನ್ನು ಪರಿಶೀಲಿಸಿ ಅವು ಯಾವ ಯಾವ ವಲಯಗಳಿಗೆ ಸೇರಿವೆ ತಿಳಿಸಿರಿ.

1............................ 2........................ 3............................ 4............................

ಸ್ಥೂಲ ರಾಷ್ಟ್ರೀಯ ಉತ್ಪತ್ತಿ (Gross Domestic Product) :

ಎರಡು ಕುಟುಂಬಗಳಿವೆ ಎಂದುಕೊಳ್ಳೋಣ. - ಒಂದು ಶ್ರೀಮಂತ ಕುಟುಂಬ, ಎರಡನೆಯದು ಬಡ ಕುಟುಂಬ. ಕುಟುಂಬ ಸದಸ್ಯರು ಹಾಕಿಕೊಳ್ಳುವ ಬಟ್ಟೆಗಳು, ಪ್ರಯಾಣಕ್ಕಾಗಿ ಬಳಸುವ ವಾಹನಗಳು, ಸೇವಿಸುವ ಆಹಾರ, ವಾಸಿಸುತ್ತಿರುವ ಮನೆ, ಅವರಿಗಿರುವ ವಸ್ತುಗಳು, ವೈದ್ಯ ಸೌಲಭ್ಯಕ್ಕಾಗಿ ಅವರು ಹೋಗುವ ಆಸ್ಪತ್ರೆಗಳಂತಹವುಗಳ ಆಧಾರದ ಮೇಲೆ ನಾವು "ಶ್ರೀಮಂತ", "ಬಡವ" ಎಂಬ ತೀರ್ಮಾನ ಮಾಡಬಹುದು. ಆದರೆ, ಈ ಕುಟುಂಬಗಳ ಆದಾಯ ಎಲ್ಲಕ್ಕಿಂತ ಮುಖ್ಯವಾದ ಸೂಚಿಕೆಯಾಗುತ್ತದೆ. ದೇಶ ಆದಾಯವನ್ನು ಲೆಕ್ಕ ಹಾಕಲು ದೇಶದಲ್ಲಿ ಉತ್ಪತ್ತಿಯಾದ ಒಟ್ಟು ವಸ್ತುಗಳು, ಸೇವೆಗಳ ಬೆಲೆಗಳನ್ನು ತೆಗೆದುಕೊಳ್ಳುತ್ತೇವೆ. ಈ ಬೆಲೆಗಳಿಗೆ ಉಪಯೋಗಿಸುವ ಸಾಂಕೇತಿಕ (ತಾಂತ್ರಿಕ) ಪದ ಒಟ್ಟು ರಾಷ್ಟ್ರೀಯ ಉತ್ಪತ್ತಿ (GDP).

ಈ ಕೆಳಗಿನ ಚಾರ್ಟ್ ಎರಡು ಬೇರೆ ಬೇರೆ ವರ್ಷಗಳು, 1973-74, 2013-14ಗಳ ಭಾರತದೇಶ ಒಟ್ಟು ರಾಷ್ಟ್ರೀಯ ಉತ್ಪತ್ತಿ ಬೆಲೆಗಳನ್ನು ತೋರಿಸುತ್ತದೆ. 37 ವರ್ಷಗಳಲ್ಲಿ ಒಟ್ಟು ಉತ್ಪತ್ತಿಯು ಬೆಳೆದ ರೀತಿಯನ್ನು ನೀವು ನೋಡಬಹುದು.



ಗ್ರಾಫ್ 1 : ವ್ಯವಸಾಯ, ಕೈಗಾರಿಕೆಗಳು ಸೇವಾರಂಗಗಳ ಒಟ್ಟು ರಾಷ್ಟ್ರೀಯ ಉತ್ಪತ್ತಿ

ಚಾರ್ಟ್‌ನ್ನು ನೋಡಿ ಈ ಪ್ರಶ್ನೆಗಳಿಗೆ ಉತ್ತರಿಸಿ :

- 1973-74ರಲ್ಲಿ ಅಧಿಕ ಉತ್ಪತ್ತಿ ಮಾಡುವ ವಲಯ ಯಾವುದು ?
- 2013-14ರಲ್ಲಿ ಅಧಿಕ ಉತ್ಪತ್ತಿ ಮಾಡುವ ವಲಯ ಯಾವುದು ?
- ಖಾಲಿಸ್ಥಳಗಳನ್ನು ಪೂರ್ಣಗೊಳಿಸಿರಿ.

1973-74, 2013-14 ವರ್ಷಗಳ ಮಧ್ಯೆ ಭಾರತದೇಶದಲ್ಲಿ ಒಟ್ಟು ವಸ್ತುಗಳು, ಸೇವೆಗಳ ಉತ್ಪತ್ತಿ ಸುಮಾರು .... ರಷ್ಟು ಹೆಚ್ಚಾಗಿದೆ.

1973-74 ಮತ್ತು 2013-14 ವರ್ಷಗಳ ಸ್ಥೂಲ ರಾಷ್ಟ್ರೀಯ ಉತ್ಪತ್ತಿಗಳನ್ನು ಹೋಲಿಸಲು ಅನುಕೂಲವಾಗುವಂತೆ 2013-14ನೇ ವರ್ಷದ ಮಾಹಿತಿಯನ್ನು ಸರಿಪಡಿಸಲಾಗಿದೆ. ಅಂದರೆ ಎರಡು ಆರ್ಥಿಕ ವರ್ಷಗಳ ಸಮಾಚಾರವು ಮೂಲ ಸಂವತ್ಸರ ಬೆಲೆಗಳೊಂದಿಗೆ ಸೂಚಿಸಲಾಗಿದೆ.

ಒಟ್ಟು ರಾಷ್ಟ್ರೀಯೋತ್ಪತ್ತಿ ಹೇಗೆ ಅಂದಾಜು ಮಾಡುತ್ತೇವೆ (How do we estimate GDP ?) :

ಮೇಲಿನ ರಂಗಗಳಲ್ಲಿ ಆರ್ಥಿಕ ಚಟುವಟಿಕೆಗಳು ಕೈಗೊಳ್ಳುವ ಪ್ರಜೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ವಸ್ತುಗಳು, ಸೇವೆಗಳನ್ನು ಉತ್ಪತ್ತಿ ಮಾಡುತ್ತಾರೆ. ಪ್ರತಿ ರಂಗದಲ್ಲಿ ಎಷ್ಟು ಜನ ಉದ್ಯೋಗ ಪಡೆಯುತ್ತಿದ್ದಾರೆ, ಎಷ್ಟು ವಸ್ತುಗಳು, ಸೇವೆಗಳು ಉತ್ಪತ್ತಿಯಾಗುತ್ತಿವೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಕೆಲವು ಸಾವಿರ ವಸ್ತುಗಳು, ಸೇವೆಗಳನ್ನು ಲೆಕ್ಕ ಹಾಕುವುದು ಅಸಾಧ್ಯವಾದ ಕೆಲಸವೆಂದು ನಿಮಗೆ ಅನಿಸಬಹುದು. ಈ ಕೆಲಸ ಬಹಳ ದೊಡ್ಡದಲ್ಲದೆ, ಕಾರುಗಳು, ಕಂಪ್ಯೂಟರ್‌ಗಳು, ಮೊಬೈಲ್‌ಫೋನ್ ಸೇವೆಗಳು, ಪುಟ್ಟಿಗಳು, ಕೊಡ (ಗಡಿಗೆ)ಗಳನ್ನು ಕೂಡಿಸುವುದು ಹೇಗೆ ಸಾಧ್ಯವಾಗುತ್ತದೆಂದು ನೀವು ಆಶ್ಚರ್ಯಪಡಬಹುದು. ಇದೆಲ್ಲವೂ ಅರ್ಥವಾಗದೇ ಇರುತ್ತದೆ !

ನಿಮ್ಮ ಆಲೋಚನೆ ಸರಿಯಾದದ್ದೇ, ಈ ಸಮಸ್ಯೆಯನ್ನು ಬಗೆಹರಿಸಲು ಅರ್ಥಶಾಸ್ತ್ರಜ್ಞರು ಉತ್ಪತ್ತಿಯಾದ ಅದರ ಸಂಖ್ಯೆಯು ಅಲ್ಲದೇ ಆ ವಸ್ತುಗಳು, ಸೇವೆಗಳ ಬೆಲೆಯನ್ನು ಕೂಡಿಸಬೇಕೆಂದು ಸೂಚಿಸುತ್ತಾರೆ. ಉದಾಹರಣೆಗೆ 10,000 ಕೆ.ಜಿಗಳ ಭತ್ತವನ್ನು ಕೆ.ಜಿ. 25 ರೂಪಾಯಿಗಳಿಗೆ ಮಾರಾಟ ಮಾಡಿದರೆ ಆ ಭತ್ತದ ಒಟ್ಟು ಮೊತ್ತ 2,50,000 ರೂಪಾಯಿಗಳು, ತೆಂಗಿನಕಾಯಿಗೆ 10 ರೂಪಾಯಿಗಳಂತೆ 5000 ತೆಂಗಿನಕಾಯಿಗಳ ಬೆಲೆ 50,000 ರೂಪಾಯಿಗಳು ಆಗುತ್ತದೆ. ಉತ್ಪತ್ತಿಯಾದ, ಮಾರಾಟ ಮಾಡಿದ ಪ್ರತಿ ವಸ್ತುವನ್ನು, ಸೇವೆಗಳನ್ನು ಲೆಕ್ಕಿಸುವುದು ಅವಸರವೇ ? ವಸ್ತುಗಳು, ಸೇವೆಗಳ ಒಟ್ಟು ಬೆಲೆಗಳನ್ನು ಹೇಗೆ ಅಂದಾಜು ಮಾಡುವಿರಿ ?

ಉದಾಹರಣಗೆ ಒಬ್ಬ ರೈತ ಮಹಿಳೆ ರೈಸ್ ಮಿಲ್ಲಿಗೆ ಕೆ.ಜಿ. 25ರೂಪಾಯಿಗಳಂತೆ ಭತ್ತ ಮಾರಿರುವಳೆಂದು ಕೊಳ್ಳೋಣ. ಆಕೆ ಒಟ್ಟು 100 ಕೆ.ಜಿ. ಮಾರಿದ್ದಾಳೆ. ಆಕೆ ಯಾವುದೇ ಬೀಜಗಳನ್ನು ಕೊಳ್ಳುವ ಅವಸರವಿಲ್ಲವೆಂದು

SCERT TELANGANA

ಕೊಳ್ಳೋಣ. ಆಕೆ ಉತ್ಪತ್ತಿ ಮಾಡಿದ ಒಟ್ಟು ಭತ್ತದ ಮೌಲ್ಯ 2500 ರೂಪಾಯಿಗಳು -ರೈಸ್ ಮಿಲ್ಲರ್ (i) ಹೋಟೆಲ್‌ಗಳಿಗೆ 40 ರೂಪಾಯಿಗಳಂತೆ 80 ಕಿ.ಜಿ. ಅಕ್ಕಿ (ii) ಕಿಲೋ 20 ರೂಪಾಯಿಗಳಂತೆ 20 ಕೆ.ಜಿ. ಹೊಟ್ಟು ಮಾರುತ್ತಾನೆ. ರೈಸ್‌ಮಿಲ್ಲರ್ ಉತ್ಪತ್ತಿ ಮಾಡಿದ ಒಟ್ಟು ವಸ್ತುಗಳ ಮೌಲ್ಯ (80X40) + (20X20) = 3600. ಈ ಮೊತ್ತವನ್ನು ಹೋಟೆಲ್ ಮಾಲೀಕ ರೈಸ್‌ಮಿಲ್ಲರ್‌ಗೆ ಸಲ್ಲಿಸುತ್ತಾನೆ. ಹೋಟೆಲ್ ಮಾಲೀಕ ನೆಲ್ಲು ಹೊಟ್ಟನ್ನು ಉರುವಲಾಗಿ ಉಪಯೋಗಿಸುತ್ತಾನೆ. ಅಕ್ಕಿಯಿಂದ ಇಡ್ಲಿ, ದೋಸೆಗಳನ್ನು ಮಾಡುತ್ತಾನೆ. ಒಟ್ಟು ಇಡ್ಲಿ, ದೋಸೆಗಳನ್ನು ಮಾರಲು ಹೋಟೆಲ್ ಮಾಲೀಕನಿಗೆ 5000 ರೂಪಾಯಿಗಳು ದೊರೆಯುತ್ತದೆ.

ಪ್ರತಿ ಹಂತದಲ್ಲಿ ಒಟ್ಟು ವಸ್ತುಗಳ ಬೆಲೆ :

ಮೊದಲ ಹಂತ (ರೈಸ್ ಮಿಲ್ಲರ್‌ಗೆ ರೈತನು ಭತ್ತ ಮಾರುವುದು)	ರೂ. 2500
ಎರಡನೇ ಹಂತ (ಹೋಟೆಲ್ ಮಾಲಿಕನಿಗೆ ಹೊಟ್ಟು, ಅಕ್ಕಿ ಮಾರುವುದು)	ರೂ. 3600
ಮೂರನೇ ಹಂತ (ಇಡ್ಲಿ, ದೋಸೆ ಮಾರುವುದು)	ರೂ. 5000

- ಚರ್ಚಿಸಿರಿ : ಉತ್ಪತ್ತಿಯಾದ ಒಟ್ಟು ವಸ್ತುಗಳ ಬೆಲೆಯನ್ನು ತಿಳಿದುಕೊಳ್ಳಲು ಇವೆಲ್ಲವುಗಳ ಒಟ್ಟು ಮೌಲ್ಯವನ್ನು ಕೂಡಬೇಕು.

ಈ ಉದಾಹರಣೆಯಲ್ಲಿ ಭತ್ತ, ಹೊಟ್ಟು, ಅಕ್ಕಿ ಮಾಧ್ಯಮಿಕ ವಸ್ತುವುಗಳು, ಇವುಗಳನ್ನು ಅಂತಿಮ ವಿನಿಯೋಗದಾರ ಬಳಕೆ ಮಾಡುವುದಿಲ್ಲವಾದರೂ, ಅಂತ್ಯವಸ್ತುಗಳಾದ ಇಡ್ಲಿ, ದೋಸೆಗಳನ್ನು ತಯಾರು ಮಾಡಲು ಇವುಗಳನ್ನು ಉತ್ಪಾದಕಗಳಾಗಿ ಬಳಸಲಾಗಿದೆ. ಮಾಧ್ಯಮಿಕ ಉತ್ಪಾದಕಗಳು, ಅಂತಿಮ ವಸ್ತುಗಳ ಬೆಲೆಗಳನ್ನು ಕೂಡಿದರೆ ಎರಡು ಬಾರಿ ಲೆಕ್ಕಿಸಿದ ಹಾಗಾಗುತ್ತದೆ. ಅಂತಿಮ ವಸ್ತುಗಳ ಬೆಲೆಯಲ್ಲಿ ಅದನ್ನು ತಯಾರು ಮಾಡಲು ಉಪಯೋಗಿಸಿದ ಮಾಧ್ಯಮಿಕ ವಸ್ತುಗಳೆಲ್ಲಗಳಿಗೆ ಬೆಲೆ ಇದೆ. ಪ್ರತಿ ಹಂತದಲ್ಲಿ ಉತ್ಪತ್ತಿದಾರರು ಉತ್ಪತ್ತಿಗಳನ್ನು ತಯಾರು ಮಾಡಿದವರಿಗೆ ಒಟ್ಟು ಬೆಲೆಯನ್ನು ಸಲ್ಲಿಸಿದ್ದಾರೆ. ಅಂದರೆ ಹೋಟೆಲ್ ಮಾಲಿಕ ಮಾರಿದ (ಅಂತಿಮ) ವಸ್ತುಗಳ ಬೆಲೆಯಾದ 5000 ರೂಪಾಯಿಗಳಲ್ಲಿ ಅಕ್ಕಿ, ಹೊಟ್ಟು ಬೆಲೆಯಾದ 3600 ರೂಪಾಯಿಗಳು ಉತ್ಪಾದಕಗಳಾಗಿವೆ. ಭತ್ತವನ್ನು ತಯಾರಿಸುವಲ್ಲಿ ಹೋಟೆಲ್ ಯಜಮಾನಿಯ ಪಾತ್ರ ಇಲ್ಲ. ಅದೇ ರೀತಿಯಾಗಿ ಭತ್ತ (ಮರ) ಉತ್ಪತ್ತಿ ಮಾಡಿದ ಅಕ್ಕಿ, ಹೊಟ್ಟು 3600 ರೂಪಾಯಿಗಳ ಬೆಲೆಯಲ್ಲಿ ಆತನು ಕೊಂಡ ಭತ್ತದ ಬೆಲೆ 2500 ರೂಪಾಯಿಗಳಾಗಿದೆ. ಆತನು ಭತ್ತವನ್ನು ಉತ್ಪತ್ತಿ ಮಾಡಿಲ್ಲ. ಇವುಗಳನ್ನು ಮೊದಲ ಹಂತದಲ್ಲಿ ರೈತನು ಉತ್ಪತ್ತಿ ಮಾಡಿದ್ದು, ಆದ್ದರಿಂದ ಭತ್ತ,

- ಮೇಲಿನ ಉದಾಹರಣೆಯಲ್ಲಿ ಭತ್ತ, ಅಕ್ಕಿ, ಮಧ್ಯಮಹಂತದಲ್ಲಿನ ಉತ್ಪಾದಕಗಳಾಗಿ, ಇಡ್ಲಿ, ದೋಸೆಗಳಂತಹವು ಕೊನೆಯ ಉತ್ಪಾದಕಗಳು, ನಾವು ನಿತ್ಯ ಜೀವನದಲ್ಲಿ ಉಪಯೋಗಿಸುವ ಕೆಲವು ವಸ್ತುಗಳನ್ನು ಈ ಕೆಳಗೆ ಸೂಚಿಸಲಾಗಿದೆ. ಅವುಗಳ ಎದುರಿಗೆ ಆ ವಸ್ತುಗಳ ಮಧ್ಯದ ಹಂತದ ಉತ್ಪಾದಕಗಳನ್ನು ಬರೆಯಿರಿ.

ಅಂತಿಮ ವಸ್ತುಗಳು	ಮಾಧ್ಯಮಿಕ ವಸ್ತುಗಳು
ನೋಟುಪುಸ್ತಕ	
ಕಾರು	
ಕಂಪ್ಯೂಟರ್	

ಅಕ್ಕಿಯ ಬೆಲೆಯನ್ನು ಬೇರೆ ಬೇರೆಯಾಗಿ ಕೂಡುವುದು ಸರಿಯಲ್ಲ. ಕೊಂಡು ಭೌತಿಕ ಉತ್ಪಾದಕಗಳ ಬೆಲೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆ ನಂತರ ಉತ್ಪತ್ತಿದಾರನ ಶ್ರಮ, ಇತರ ಉತ್ಪಾದಕಗಳನ್ನು ಉಪಯೋಗಿಸಿ ನಂತರ ಹಂತದಲ್ಲಿ ವಸ್ತುವನ್ನು ತಯಾರಿಸಿದರು, ಇದು ಈಗ ಇರುವ ಬೆಲೆಗಳಿಗೆ ಹೆಚ್ಚಾಗಿ ಕೂಡಿದ್ದಾಗಿದೆ.

ಇತರ ವಸ್ತುಗಳ ತಯಾರಿಗೆ ಉಪಯೋಗಿಸದಿದ್ದಲ್ಲಿ ಅದು ಅಂತಿಮ ವಸ್ತುವಾಗುತ್ತದೆ. ಮೇಲಿನ ಉದಾಹರಣೆ ಯಲ್ಲಿ ರೈತನ ಕುಟುಂಬ ವಿನಿಯೋಗಕ್ಕೆ ಅಕ್ಕಿ ತೆಗೆದುಕೊಂಡರೆ ಅದು ಅಂತಿಮ ವಸ್ತು ಆಗುತ್ತದೆ. ಇಡ್ಲಿ, ದೋಸೆಗಳನ್ನು ಕುಟುಂಬ ತಮ್ಮ ವಿನಿಯೋಗಕ್ಕೆ ತಯಾರು ಮಾಡಿಕೊಳ್ಳುತ್ತದೆ, ಇವು ಮಾರುವ ವಸ್ತುಗಳಲ್ಲ.

ಪ್ರತಿ ಹಂತದಲ್ಲೂ ಕೂಡಿಸಿದ ಹೆಚ್ಚಿನ ಬೆಲೆಯನ್ನು ಮಾತ್ರ ತೆಗೆದುಕೊಳ್ಳುವುದು ಮತ್ತೊಂದು ಪದ್ಧತಿ. ಇದಕ್ಕೆ ವಸ್ತುಗಳ ಮಾರಾಟ ಬೆಲೆಗಳಲ್ಲಿ ಅದಕ್ಕೆ ಮೊದಲು ಬೇರೆ ವ್ಯಕ್ತಿ ಉತ್ಪತ್ತಿ ಮಾಡಿದ ಭೌತಿಕ ಉತ್ಪಾದಕಗಳ ಬೆಲೆಯನ್ನು ಕಳೆಯಬೇಕು. ಮೇಲಿನ ಉದಾಹರಣೆ ಮೂಲಕ ಉತ್ಪತ್ತಿದಾರರು ಕೂಡಿದ ಹೆಚ್ಚು ಬೆಲೆ ಎಷ್ಟು ಎಂಬುದನ್ನು ತಿಳಿಯೋಣ:

ಮೊದಲ ಹಂತ (ರೈಸ್ ಮಿಲ್ಲರ್‌ಗೆ ರೈತನು ಭತ್ತ ಮಾರುವುದು) = ರೂ. 2500 ಗಳಿಂದ ಕೊಂಡ ಉತ್ಪಾದಕಗಳ ಬೆಲೆ "0" ರೂಪಾಯಿಗಳನ್ನು ಕಳೆದರೆ, ಕೂಡಿದ ಬೆಲೆ 2500 ರೂಪಾಯಿಗಳು.

ಎರಡನೇಯ ಹಂತ (ಹೋಟೆಲ್ ಯಜಮಾನನಿಗೆ ಹೊಟ್ಟು, ಅಕ್ಕಿ ಮಾರುವುದು) = ರೂ. 3600 ಗಳಿಂದ ಕೊಂಡುಕೊಂಡು ಉತ್ಪಾದಕಗಳ ಬೆಲೆ 2500 ಕಳೆದರೆ, ಒಟ್ಟು ಬೆಲೆ 1100 ರೂಪಾಯಿಗಳು.

ಮೂರನೇ ಹಂತ (ಇಡ್ಲಿ, ದೋಸೆಗಳನ್ನು ಮಾರುವುದು) = ರೂ. 5000 ಗಳಿಂದ ಕೊಂಡುಕೊಂಡ ಬೆಲೆ 3600 ನ್ನು ಕಳೆದರೆ, ಒಟ್ಟು ಬೆಲೆ 1400 ರೂಪಾಯಿಗಳು.

ಪ್ರತಿ ಹಂತದಲ್ಲೂ ಕೂಡಿದ ಬೆಲೆ = 2500+1100+1400=5000

- ಚರ್ಚಿಸಿರಿ : ಎರಡೂ ಪದ್ಧತಿಗಳಲ್ಲಿ ಒಂದೇ ಉತ್ತರ ಏಕೆ ಬಂದಿದೆ ?

ಆದ್ದರಿಂದ ಪ್ರತಿ ಹಂತದಲ್ಲೂ ಕೂಡಿಸಿದ ಉಳಿದ ಬೆಲೆಯನ್ನಾಗಲೀ ಅಥವಾ ಅಂತಿಮ ವಸ್ತುಗಳ / ಸೇವೆಗಳ ಬೆಲೆಯನ್ನಾಗಲೀ ತೆಗೆದುಕೊಳ್ಳಬೇಕು. ಒಂದು ವರ್ಷದಲ್ಲಿ ಒಂದು ರಂಗದಲ್ಲಿ ಉತ್ಪತ್ತಿ ಮಾಡಿದ ಅಂತಿಮ ವಸ್ತುಗಳ / ಸೇವೆಗಳ ಬೆಲೆ ಆ ವರ್ಷಕ್ಕೆ, ಆ ರಂಗದಲ್ಲಿ ಒಟ್ಟು ಉತ್ಪತ್ತಿಯನ್ನು ಸೂಚಿಸುತ್ತದೆ. ಮೂರು ರಂಗಗಳ ಉತ್ಪತ್ತಿಯನ್ನು ಕೂಡಿಸಿದರೆ ದೇಶದ ಒಟ್ಟು ರಾಷ್ಟ್ರೀಯ ಉತ್ಪತ್ತಿ ಬರುತ್ತದೆ. ಒಂದು ದೇಶದಲ್ಲಿ, ಒಂದು ವರ್ಷದ ಅವಧಿಯಲ್ಲಿ ಉತ್ಪತ್ತಿ ಮಾಡಿದ ಎಲ್ಲಾ ಅಂತಿಮ ವಸ್ತುಗಳು, ಸೇವೆಗಳ ಬೆಲೆಯನ್ನು ಇದು ತಿಳಿಸುತ್ತದೆ.

2013-14 ವರ್ಷಕ್ಕೆ ಒಟ್ಟು ರಾಷ್ಟ್ರೀಯ ಉತ್ಪತ್ತಿ (GDP) ಬೆಲೆಯನ್ನು ನೀಡಿದ ಸಂಗತಿ ಗಮನಿಸಿರುತ್ತೀರಿ. ಅಂದರೆ ಏಪ್ರಿಲ್ 2013 ರಿಂದ ಮಾರ್ಚ್ 2014 ರವರೆಗೂ ಉತ್ಪತ್ತಿ ಮಾಡಿದ ವಿವರಗಳು, ಇದನ್ನೇ ಆರ್ಥಿಕ ವರ್ಷ ಎಂದು ಕರೆಯುತ್ತಾರೆ.

ಉತ್ಪತ್ತಿಯಾದ ಅಂತ್ಯ ವಸ್ತು ಸೇವೆಗಳ ಮಾರ್ಕೆಟ್ ಬೆಲೆಯನ್ನು ನಮೋದು ಮಾಡುತ್ತದೆ. ಆದರೆ ಮಾರುಕಟ್ಟೆಯಲ್ಲಿ ಕೊಳ್ಳುವ / ಮಾರಾಟ ಮಾಡದಿರುವ ಅಂಶಗಳು ಎಷ್ಟೋ ಇವೆ. ಅಡುಗೆ ಮಾಡುವುದು, ಮನೆ ಸ್ವಚ್ಛಗೊಳಿಸುವುದು, ಮನೆ ಅಚ್ಚುಕಟ್ಟಾಗಿ ಜೋಡಿಸುವುದು, ಮಕ್ಕಳನ್ನು ಬೆಳೆಸುವುದು, ಸಸ್ಯಗಳನ್ನು, ಪಶುಗಳನ್ನು ಪೋಷಿಸುವಂತಹ ಗೃಹ ಸಂಬಂಧ ಕೆಲಸಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು. ಒಟ್ಟು ರಾಷ್ಟ್ರೀಯ ಉತ್ಪತ್ತಿಯನ್ನು ಅಳೆಯುವುದರಲ್ಲಿ ದ್ರವ್ಯಪರವಾದ ಲಾವಾದೇವಿಗಳು ಇಲ್ಲದೆ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಇವು ಆರ್ಥಿಕ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದವು. ಭಾರತದೇಶದಲ್ಲಿ ಅಲ್ಲದೆ, ಪ್ರಪಂಚ ವ್ಯಾಪ್ತವಾಗಿ ಮಹಿಳೆಯರು ಮಾಡುವ ಈ ಕೆಲಸಗಳಿಗೆ ಇಂದಿಗೂ ದ್ರವ್ಯರೂಪದಲ್ಲಿ ಸಲ್ಲಿಸುತ್ತಿಲ್ಲ.

SCERT TELANGANA

● ಕೆಳಗಿನ ಪಟ್ಟಿಕೆಯಲ್ಲಿ ಒಟ್ಟು ರಾಷ್ಟ್ರೀಯ ಉತ್ಪತ್ತಿ ಬೆಲೆ ನೀಡಲಾಗಿದೆ. 2010-2011 ರ ವರ್ಷಕ್ಕೆ ಲೆಕ್ಕಿಸಿದ ಹಾಗೆ ಒಟ್ಟು ರಾಷ್ಟ್ರೀಯ ಉತ್ಪತ್ತಿ ಹೆಚ್ಚಳದ ರೇಟನ್ನು ಉಳಿದ ವರ್ಷಗಳಿಗೆ ಲೆಕ್ಕ ಹಾಕಿರಿ.

ಆರ್ಥಿಕ ವರ್ಷ	ಒಟ್ಟು ರಾಷ್ಟ್ರೀಯ ಉತ್ಪತ್ತಿ ರೂ.ಗಳಲ್ಲಿ (ಕೋಟಿಗಳಲ್ಲಿ)	ಕಳೆದ ವರ್ಷಕ್ಕಿಂತ ಒಟ್ಟು ರಾಷ್ಟ್ರೀಯ ಉತ್ಪತ್ತಿ ಹೆಚ್ಚಳ	ಒಟ್ಟು ರಾಷ್ಟ್ರೀಯ ಉತ್ಪತ್ತಿ ಹೆಚ್ಚಳ ರೇಟು
2009-10	45,16,000	——————	——————
2010-11	49,37,000	[(49,37,000 – 45,16,000)/ 45,16,000] *100	= 9.32 %
2011-12	52,44,000		
2012-13	55,05,000		

ವಲಯಗಳ ಪ್ರಾಮುಖ್ಯತೆಯಲ್ಲಿ ಬದಲಾವಣೆ - ಉತ್ಪತ್ತಿ ಮಾಡಿದ ವಸ್ತು, ಸೇವೆಗಳ ಬೆಲೆ - ಉದ್ಯೋಗ :

(Changes in the importance of sectors - value of goods and services produced nad employment of people) :

ಪ್ರತಿ ವರ್ಷವು ವಸ್ತುಗಳ, ಸೇವೆಗಳ ಉತ್ಪತ್ತಿ ಹೆಚ್ಚುವುದರಿಂದ ಒಟ್ಟು ರಾಷ್ಟ್ರೀಯ ಉತ್ಪತ್ತಿ ಹೇಗೆ ಹೆಚ್ಚಾಗುವುದೆಂದು ನಮಗೆ ತಿಳಿದಿದೆ. ಈ ಹೆಚ್ಚಳ ಹೇಗೆ ನಡೆದಿದೆ, ಯಾವುದರಿಂದ ಒಟ್ಟು ರಾಷ್ಟ್ರೀಯೋತ್ಪತ್ತಿಯಲ್ಲಿ ಹೆಚ್ಚಾಗಿ ಅಭಿವೃದ್ಧಿ ಕಂಡುಬರುತ್ತದೆ ಎಂದು ತಿಳಿದುಕೊಳ್ಳುವುದು ಮುಖ್ಯ. ಪ್ರಸ್ತುತ ಅಭಿವೃದ್ಧಿ ಹೊಂದಿದ ದೇಶಗಳೆಂದು ಪರಿಗಣಿಸಲ್ಪಡುತ್ತಿರುವ ದೇಶಗಳ ಅಭಿವೃದ್ಧಿ ಮೊದಲ ಹಂತದಲ್ಲಿ ವ್ಯವಸಾಯ, ಅದರ ಸಂಬಂಧಿತ ವಲಯಗಳು ಅವುಗಳ ಒಟ್ಟು ರಾಷ್ಟ್ರೀಯೋತ್ಪತ್ತಿ ಹೆಚ್ಚಳಕ್ಕೆ ಬಹಳವಾಗಿ ಸಹಾಯವಾಗಿದೆ.

ಸಾಗುವಳಿ ಪದ್ಧತಿಗಳು ಬದಲಾಗುತ್ತಾ ವ್ಯವಸಾಯ ಅಭಿವೃದ್ಧಿ ಹೊಂದುವುದರೊಂದಿಗೆ ಹಿಂದಿಗಿಂತ ಈಗ ಹೆಚ್ಚು ಆಹಾರ ಉತ್ಪತ್ತಿಯಾಗುತ್ತಿದೆ. ಅವಶ್ಯಕತೆ ಇರುವ ಆಹಾರವನ್ನು ಕೆಲವು ರೈತರು ಉತ್ಪತ್ತಿ ಮಾಡುವುದರಿಂದ ಬಹಳ ಜನ ಬೇರೆ ಕೆಲಸಗಳನ್ನು ಕೈಗೊಳ್ಳುತ್ತಿದ್ದಾರೆ. ಕೈಕಸುಬು ದಾರರು, ವ್ಯಾಪಾರಿಗಳು ಹೆಚ್ಚುತ್ತಿದ್ದಾರೆ. ಕೊಳ್ಳುವ, ಮಾರುವ ಚಟುವಟಿಕೆಗಳು ಬಹಳ ಹೆಚ್ಚಾಗುವುದರಿಂದ ವಸ್ತು, ಸೇವೆಗಳಿಗೆ ಬೇಡಿಕೆ ಮತ್ತಷ್ಟು ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೇ ಆಡಳಿತಗಾರರು ಆಳ್ವಿಕೆಗೆ, ಸೈನ್ಯಕ್ಕೆ ಬಹಳ ಜನರನ್ನು ನಿಯಮಿಸುತ್ತಾರೆ. ಆದರೆ ಈ ಹಂತದಲ್ಲಿ ಒಟ್ಟು ಉತ್ಪತ್ತಿಯಾದ ವಸ್ತುಗಳಲ್ಲಿ ಹೆಚ್ಚಾಗಿ ವ್ಯವಸಾಯ, ಸಂಭದಿಸಿದ ವಲಯಗಳಿಗೆ ಸೇರಿದವು. ಬಹಳ ಜನರು ಈ ವಲಯದಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ.

ಹಿಂದಿನ ತರಗತಿಗಳಲ್ಲಿ ಕೈಗಾರಿಕಾ ಕ್ರಾಂತಿಯ ಬಗ್ಗೆ ನೀವು ಓದಿದನ್ನು ಮತ್ತೇ ಜ್ಞಾಪಿಸಿಕೊಳ್ಳಿರಿ. ಹೊಸ ಉತ್ಪತ್ತಿಯ ವಿಧಾನಗಳು ಜಾರಿಯಲ್ಲಿರುವುದರಿಂದ ಕೈಗಾರಿಕೆಗಳು ಏರ್ಪಟ್ಟು, ಎಲ್ಲೆಡೆ ವ್ಯಾಪಿಸಿವೆ. ಇದಕ್ಕೂ ಮೊದಲು ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದವರು ಈಗ ಹೆಚ್ಚು ಪ್ರಮಾಣದಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಜನರು ಹೆಚ್ಚು ವಸ್ತುಗಳನ್ನು ವಿನಿಯೋಗಿಸಿಕೊಳ್ಳುತ್ತಿದ್ದಾರೆ. ಕೈಗಾರಿಕೆಗಳಲ್ಲಿ ಕಡಿಮೆ ಬೆಲೆಗೆ ಹೆಚ್ಚು ವಸ್ತುಗಳ ಉತ್ಪತ್ತಿ ನಡೆಯುವುದರಿಂದ ಇವು ಪ್ರಪಂಚದಾದ್ಯಂತ ಎಲ್ಲಾ ಮಾರುಕಟ್ಟೆಗೆ ತಲುಪುತ್ತವೆ. ಈ ದೇಶಗಳಲ್ಲಿ ಒಟ್ಟು ಉತ್ಪತ್ತಿ ಮಾಡುವ ವಸ್ತುಗಳು, ಸೇವೆಗಳಿಗಾಗಿ ಕಲ್ಪಿಸಿದ ಉದ್ಯೋಗಕ್ಕಾಗಿ ಕೈಗಾರಿಕಾ ಉತ್ಪತ್ತಿಗೆ ಪ್ರಾಮುಖ್ಯತೆ ದೊರೆತಿದೆ. ಈ ವಿಧವಾಗಿ ಕಾಲಕ್ರಮೇಣ ಪರಿಸ್ಥಿತಿಗಳು ಬದಲಾಗುತ್ತಿವೆ. ಅಂದರೆ ರಂಗಗಳ ಪ್ರಾಮುಖ್ಯತೆ ಬದಲಾಗಿದೆ. ಕೈಗಾರಿಕಾವಲಯ ಪ್ರಮುಖ ವಲಯವಾಗಿದೆ. ಉತ್ಪತ್ತಿ ಮತ್ತು ಉದ್ಯೋಗದ ದೃಷ್ಟಿಯಿಂದ ವ್ಯವಸಾಯ ವಲಯವು ಕ್ಷೀಣಿಸುತ್ತಿದೆ.

SCERT TELANGANA

ಸೇವೆಗಳಲ್ಲಿನ ವಿಧಗಳು	
ಸಾರ್ವಜನಿಕ, ಸಾಮಾಜಿಕ, ವೈಯಕ್ತಿಕ ಸೇವೆಗಳು	ಸಾರ್ವಜನಿಕ ಆಡಳಿತ, ದೇಶರಕ್ಷಣೆ, ವಿದ್ಯೆ, ಆರೋಗ್ಯ, ಪಶುವೈದ್ಯ ಚಟುವಟಿಕೆಗಳು, ಪ್ರಸಾರ ಮಾಧ್ಯಮಗಳು, ಗ್ರಂಥಾಲಯಗಳು, ಪತ್ರಾಗಾರ, ಮ್ಯೂಜಿಯಂ ಇತರ ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದವು.
ಆರ್ಥಿಕ, ವಿಮೆ, ಸ್ಥಿರಾಸ್ತಿ ಸೇವೆಗಳು	ಬ್ಯಾಂಕುಗಳು, ಅಂಚೆಕಛೇರಿಯಲ್ಲಿ, ಉಳಿತಾಯ ಖಾತೆ, ಬ್ಯಾಂಕುಗಳಲ್ಲದ ಆರ್ಥಿಕ ಸಂಸ್ಥೆಗಳು, ಜೀವ ವಿಮೆ ಮತ್ತು ಸಾಧಾರಣ ವಿಮೆ ಸಂಸ್ಥೆಗಳು, ಭವನ, ಮಾರಾಟ ಕಂಪನಿಗಳು, ದಲ್ಲಾಳಿಗಳ ಸೇವೆಗಳು ಮುಂತಾದವು.
ವ್ಯಾಪಾರ, ಹೋಟೆಲ್‌ಗಳು, ಸಾರಿಗೆ ಸಂವಹನ	

- **ಅಭ್ಯಾಸ :** ವ್ಯಾಪಾರ, ಹೋಟೆಲ್‌ಗಳು, ಸಾರಿಗೆ, ಸಂವಹನಗಳಿಗೆ ಕೆಲವು ಉದಾಹರಣೆಯನ್ನು ಹೆಸರಿಸಿರಿ.

ಗ್ರಾಫ್ 2 : ಒಟ್ಟು ರಾಷ್ಟ್ರೀಯ ಉತ್ಪತ್ತಿಯಲ್ಲಿ ವಿವಿಧ ವಲಯಗಳ ಭಾಗ



SCERT TELANGANA

ಕಳೆದ 50 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೈಗಾರಿಕಾವಲಯದಿಂದ ಸೇವಾ ವಲಯಕ್ಕೆ ಪ್ರಾಮುಖ್ಯತೆ ಬದಲಾಗುತ್ತಿದೆ. ಒಟ್ಟು ಉತ್ಪತ್ತಿಯಲ್ಲಿ ಸೇವಾರಂಗ ಪ್ರಮುಖ ಸ್ಥಾನದಲ್ಲಿದೆ. ಕೆಲಸ ಮಾಡುವವರಲ್ಲಿಯೂ ಸಹ ಈಗ ಹೆಚ್ಚು ಜನ ಸೇವಾ ರಂಗದಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ. ಉತ್ಪಾದನಾ ಚಟುವಟಿಕೆಯಲ್ಲಿ ಹೆಚ್ಚು ಭಾಗ ಈಗ ವಸ್ತುಗಳ ಉತ್ಪತ್ತಿ ಅಲ್ಲದೇ ಸೇವೆಗಳನ್ನು ಒದಗಿಸುತ್ತಿವೆ. ಎಲ್ಲಾ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇದೇ ರೀತಿ ಕಂಡುಬರುತ್ತಿದೆ. ಭಾರತದೇಶದಲ್ಲಿಯೂ ಹೀಗೆ ನಡೆಯುತ್ತದೆಯಾ ಇಲ್ಲವೇ ಭಿನ್ನವಾಗಿದೆಯಾ ?

ಗ್ರಾಫ್ 2 ರಲ್ಲಿರುವ "ಪೈ" ಚಾರ್ಟ್‌ನ್ನು ನೋಡಿರಿ. 1973-74, 2013-14 ಆರ್ಥಿಕ ವರ್ಷಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪತ್ತಿಯಲ್ಲಿ ವಿವಿಧ ರಂಗಗಳ ಪಾಲನ್ನು (ಭಾಗವನ್ನು) ಇವು ತಿಳಿಸುತ್ತವೆ. ಇದಕ್ಕಿಂತ ಮೊದಲ ಪಟ್ಟಿಕೆಯಲ್ಲಿರುವ ಗಣಾಂಕಗಳೇ ಈ ಚಿತ್ರಗಳಲ್ಲಿ ಶೇಕಡಗಳಾಗಿವೆ. ಒಟ್ಟು ವೃತ್ತ ಆ ವರ್ಷದಲ್ಲಿನ ಒಟ್ಟು ರಾಷ್ಟ್ರೀಯ ಉತ್ಪತ್ತಿಯನ್ನು ಸೂಚಿಸುತ್ತದೆ. ವ್ಯವಸಾಯ, ಕೈಗಾರಿಕೆ, ಸೇವೆಗಳು ಎಂಬ ಮೂರು ರಂಗಗಳ ಉತ್ಪತ್ತಿಯನ್ನು ಕೂಡಿದರೆ ಒಟ್ಟು ರಾಷ್ಟ್ರೀಯ ಉತ್ಪತ್ತಿ ಬರುತ್ತದೆ. ಸೇವೆಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ :

43 ವರ್ಷಗಳ ಕಾಲದಲ್ಲಿ ವ್ಯವಸಾಯ ವಲಯ ಗಣನೀಯವಾಗಿ ಕ್ಷೀಣಿಸಿದೆ. ಒಟ್ಟು ರಾಷ್ಟ್ರೀಯ ಉತ್ಪತ್ತಿಯಲ್ಲಿ ಕೈಗಾರಿಕೆ ರಂಗ ಉತ್ಪತ್ತಿಯ ಭಾಗ ಸ್ವಲ್ಪ ಹೆಚ್ಚಾಗಿದೆ. ಇದಕ್ಕೆ ವಿರುದ್ಧವಾಗಿ ಸೇವಾ ಚಟುವಟಿಕೆಗಳಲ್ಲಿ ಮೂರರಲ್ಲಿ ಎರಡು ರಂಗಗಳಲ್ಲಿ ಗಣನೀಯ ಅಭಿವೃದ್ಧಿ ಸಾಧಿಸಿದೆ.

ಉದ್ಯೋಗ-ಭಾರತದೇಶದಲ್ಲಿ ಕೆಲಸದ ಪರಿಸ್ಥಿತಿಗಳು :

ಒಂದು ದೇಶದಲ್ಲಿ ಕೆಲಸ ಮಾಡುವವರ ಒಟ್ಟು ಸಂಖ್ಯೆಗೆ, ಆ ದೇಶದ ಒಟ್ಟು ರಾಷ್ಟ್ರೀಯ ಉತ್ಪತ್ತಿಗೆ ಮಧ್ಯೆ ಹತ್ತಿರ ಸಂಬಂಧವಿದೆ. ಪ್ರತಿ ದೇಶದಲ್ಲೂ ಜನಸಂಖ್ಯೆ ಹೆಚ್ಚುತ್ತಿದ್ದಂತೆ ಕೆಲಸ ಬಯಸುವರಿಗೆ ಕೆಲಸ ಒದಗಿಸುವ ಅವಶ್ಯಕತೆ ಇದೆ. ಸಂಪಾದನೆಗಾಗಿ ಜನರಿಗೆ ಉದ್ಯೋಗ ದೊರೆಯದೆ ಇದ್ದಲ್ಲಿ ಅವರ ಆಹಾರ, ಇತರ ಅವಶ್ಯಕತೆಗಳು ಹೇಗೆ ತೀರುತ್ತವೆ?

2011 ರ ಜನಸಂಖ್ಯೆ ಲೆಕ್ಕದ ಪ್ರಕಾರ 121 ಕೋಟಿ ಜನಸಂಖ್ಯೆಯಲ್ಲಿ 46 ಕೋಟಿ ಜನರು ಕೆಲಸ ಮಾಡುತ್ತಿದ್ದಾರೆ. ಅಂದರೆ ಉತ್ಪಾದನಾ ಚಟುವಟಿಕೆಗಳಲ್ಲಿಕೆಲಸ ಗೊತ್ತು ಮಾಡಿಕೊಂಡ ಜನ. ಪಟ್ಟಿಕೆ -1 ರಲ್ಲಿ ಭಾರತ ದೇಶದಲ್ಲಿ ವಿವಿಧ ಚಟುವಟಿಕೆಯಲ್ಲಿರುವವರ ಮೌಲಿಕ (ಮೂಲಭೂತ) ಅಂಕಿ ಅಂಶಗಳನ್ನು ತಿಳಿಯಪಡಿಸುತ್ತದೆ.

ಪಟ್ಟಿ 1- ಭಾರತ ದೇಶದಲ್ಲಿ ಕೈಗಾರಿಕಾಧಾರಿತ ಕಾರ್ಮಿಕರ ವಿವರಗಳು 2012-2013

	ವಾಸಸ್ಥಳ		ಲಿಂಗ		ಎಲ್ಲಾ ಕಾರ್ಮಿಕರು
ರಂಗ	ಗ್ರಾಮೀಣ	ಪಟ್ಟಣ	ಪುರುಷರು	ಸ್ತ್ರೀಯರು	
ವ್ಯವಸಾಯ ರಂಗ	67	9	44	63	49
ಕೈಗಾರಿಕಾ ರಂಗ	16	31	26	20	24
ಸೇವಾ ರಂಗ	17	60	30	17	27
ಒಟ್ಟು	**100**	**100**	**100**	**100**	**100**

SCERT TELANGANA

ಪಟ್ಟಿಕೆ 1ನ್ನು ಗಮನವಿಟ್ಟು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ವ್ಯವಸಾಯ ರಂಗದಲ್ಲಿನ ಅತ್ಯಧಿಕ ಕಾರ್ಮಿಕರು ....ನಲ್ಲಿ ವಾಸಿಸುತ್ತಿದ್ದಾರೆ.
- ಬಹಳ ಜನರು...................ಕೆಲಸದವರು ವ್ಯವಸಾಯ ರಂಗದಲ್ಲಿ ಉದ್ಯೋಗ ಹೊಂದುತ್ತಿದ್ದಾರೆ.
- 90% ಗಿಂತ ಅಧಿಕವಾಗಿ ಪಟ್ಟಣ ಪ್ರಾಂತ ಕೆಲಸದವರು ...., ... ರಂಗಗಳಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ.
- ಸ್ತ್ರಿಪುರುಷರ ನಿಷ್ಪತ್ತಿ ಹೋಲಿಸಿದರೆ ಸ್ತ್ರೀಯರು............. .... ರಂಗಗಳಲ್ಲಿ ಸ್ವಲ್ಪ ಭಾಗ ಮಾತ್ರ ಉದ್ಯೋಗ ಹೊಂದುತ್ತಿದ್ದಾರೆ.

ಭಾರತದೇಶದಲ್ಲಿ ನಡೆದ ಬದಲಾವಣೆಗಳಲ್ಲಿ ಹೇಳಿಕೊಳ್ಳಬೇಕಾದದ್ದು ಒಂದಿದೆ. ಒಟ್ಟು ರಾಷ್ಟ್ರೀಯೋತ್ಪತ್ತಿ ಯಲ್ಲಿನ ವಿವಿಧ ರಂಗಗಳ ಬದಲಾವಣೆ ಯಾದಂತೆ ಉದ್ಯೋಗದಲ್ಲಿ ಬದಲಾವಣೆಯಾಗಿಲ್ಲ. 1973-74, 2015-16ರಲ್ಲಿ ಮೂರು ರಂಗಗಳಲ್ಲಿ ಉದ್ಯೋಗ ಭಾಗಗಳನ್ನು ಗ್ರಾಫ್ 3ರಲ್ಲಿ ತೋರಿಸಲಾಗಿದೆ. ಈಗಲೂ ವ್ಯವಸಾಯವೇ ಪ್ರಧಾನ ಉದ್ಯೋಗ ರಂಗವಾಗಿದೆ. ಆದರೆ ವ್ಯವಸಾಯದಲ್ಲಿ ಉದ್ಯೋಗ ಭಾಗ ಏಕೆ ಕಡಿಮೆಯಾಗಿಲ್ಲ? ಕೈಗಾರಿಕೆ, ಸೇವಾ ರಂಗಗಳಲ್ಲಿ ಸರಿಯಾದಷ್ಟು ಉದ್ಯೋಗ ಕಲ್ಪಿಸಲಾಗದೇ ಇರುವುದು ಇದಕ್ಕೆ ಕಾರಣ.

ದೇಶದಲ್ಲಿನ ಕಾರ್ಮಿಕ ರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ವ್ಯವಸಾಯ ರಂಗದಲ್ಲಿದ್ದು, ಅರರಲ್ಲಿ ಒಂದು ಭಾಗ ಉತ್ಪತ್ತಿಗೆ ಮಾತ್ರವೇ ಸೀಮಿತವಾಗಿದ್ದಾರೆ. ಇದಕ್ಕೆ ವಿರುದ್ಧವಾಗಿ ಒಟ್ಟು ರಾಷ್ಟ್ರೀಯ ಉತ್ಪತ್ತಿಯಲ್ಲಿ 75% ಭಾಗ ಇರುವ ಕೈಗಾರಿಕೆ, ಸೇವಾ ರಂಗಗಳು ಒಟ್ಟು ಕಾರ್ಮಿಕರಲ್ಲಿ ಸುಮಾರು ಅರ್ಧದಷ್ಟು ಮಾತ್ರ ಉದ್ಯೋಗ ಕಲ್ಪಿಸುತ್ತಿವೆ. ವ್ಯವಸಾಯ ದಲ್ಲಿರುವ ಕಾರ್ಮಿಕರು ಅವರು ಉತ್ಪತ್ತಿ ಮಾಡುವಷ್ಟು ಮಾಡುತ್ತಿಲ್ಲವೆಂದು ತಿಳಿಯಬೇಕಾ?

ಇದರಿಂದ ವ್ಯವಸಾಯದಲ್ಲಿ ಅವಶ್ಯಕತೆಗಿಂತ ಹೆಚ್ಚು ಜನರಿದ್ದಾರೆಂದು ಅರ್ಥವಾಗುತ್ತದೆ. ವ್ಯವಸಾಯದಿಂದ ಕೆಲವು ಜನರು ಹೊರಹೋದರೂ ಉತ್ಪತ್ತಿಯ ಮೇಲೆ ಪ್ರಭಾವ ಬೀರುವುದಿಲ್ಲ, ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ ವ್ಯವಸಾಯ ರಂಗದಲ್ಲಿ ಕಾರ್ಮಿಕರು ಅರೆ (ಅಲ್ಪ) ಉದ್ಯೋಗವನ್ನು ಹೊಂದಿದ್ದಾರೆ.

ಉದಾಹರಣೆಗೆ ಗಾಯಿತ್ರಿ ಎಂಬ ಚಿಕ್ಕ ರೈತಳನ್ನು ತೆಗೆದುಕೊಳ್ಳೋಣ. ಆಕೆಗೆ 5 ಎಕರೆ ಮಳೆಯಾಧಾರಿತ ಭೂಮಿ ಇದೆ. ಆಕೆ ಜೋಳ, ತೊಗರಿಗಳಂತಹ ಬೆಳೆಗಳನ್ನು ಬೆಳೆಸುತ್ತಾಳೆ. ಕುಟುಂಬದಲ್ಲಿನ ಐದು ಜನ ಸದಸ್ಯರು ವರ್ಷವೆಲ್ಲಾ ಅದರಲ್ಲೇ ಕೆಲಸ ಮಾಡುತ್ತಾರೆ. ಏಕೆ ? ಕಾರಣ ಅವರಿಗೆ ಮಾಡಲು ಬೇರೆ ಕೆಲಸವಿಲ್ಲ. ಅವರ ಶ್ರಮ ವಿಭಜನೆಗೊಳ್ಳುತ್ತದೆ. ಎಲ್ಲರೂ ಯಾವುದೋ ಒಂದು ಕೆಲಸ ಮಾಡುತ್ತಿದ್ದಾರೆ, ಆದರೆ ಯಾರಿಗೂ ಪೂರ್ತಿ ಕೆಲಸವಿಲ್ಲ. ಅರೆ ಉದ್ಯೋಗವೆಂದರೆ ಇದೇ,

ಗ್ರಾಫ್ 3 : ಮೂರು ರಂಗಗಳಲ್ಲಿ ಉದ್ಯೋಗದ ಭಾಗ

1973-74ರಲ್ಲಿ ಉದ್ಯೋಗ



2015-16ರಲ್ಲಿ ಉದ್ಯೋಗ



SCERT TELANGANA

ಗ್ರಾಫ್ 4 : ಮೂರು ರಂಗಗಳಲ್ಲಿ ಒಟ್ಟು ರಾಷ್ಟ್ರೀಯೋತ್ಪತ್ತಿ (GDP) ಯ ಪಾಲು (ಭಾಗ)



- ಮೇಲಿನ್ನ ಪೈ ಚಾರ್ಟ್‌ಗಳನ್ನು ನೋಡಿ ಕೆಳಗಿನ ಪಟ್ಟಿಕೆಯನ್ನು ತುಂಬಿರಿ.

ರಂಗ	ಉದ್ಯೋಗ (%)		ಒಟ್ಟು ಸ್ಥೂಲ ದೇಶೀಯೋತ್ಪತ್ತಿ (%)	
	1973-74	**2015-16**	**1973-74**	**2015-16**
ವ್ಯವಸಾಯ				
ಕೈಗಾರಿಕಾ				
ಸೇವೆಗಳು				

ಸೇವಾರಂಗ ಅಭಿವೃದ್ಧಿ ಹೊಂದಿದರೂ ಆ ರಂಗದಲ್ಲಿನ ಎಲ್ಲಾ ಚಟುವಟಿಕೆಗಳು ಸಮಾನವಾಗಿ ಬೆಳೆಯುತ್ತಿಲ್ಲ. ಭಾರತದೇಶದಲ್ಲಿ ಸೇವಾ ರಂಗದಲ್ಲಿ ಅನೇಕ ರೀತಿಯ ಜನರು ಉದ್ಯೋಗ ಹೊಂದುತ್ತಿದ್ದಾರೆ. ಒಂದು ಕಡೆ ಉನ್ನತ ವ್ಯಾಸಾಂಗ ಮಾಡಿದ, ನೈಪುಣ್ಯದಿಂದ ಕೂಡಿದ ವ್ಯಕ್ತಿಗಳಿಗೆ ಉದ್ಯೋಗ ನೀಡುವ ಕೆಲವು ಸೇವೆಗಳಿವೆ. ಇನ್ನೊಂದು ಕಡೆ ಚಿಕ್ಕ ಚಿಕ್ಕ ಅಂಗಡಿಗಳನ್ನು ನಡೆಸುತ್ತಿರುವ, ದುರಸ್ಥಿ ಕೆಲಸ ಮಾಡುವವರು, ಸಾರಿಗೆ ಸೇವೆಗಳನ್ನು ಒದಗಿಸುವ ವ್ಯಕ್ತಿಗಳು, ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅವರ ಜೀವನವು ಬಹಳ ಕಷ್ಟದಿಂದ ಕೂಡಿರುತ್ತದೆ. ಆದರೂ ಬೇರೊಂದು ದಾರಿ ಇಲ್ಲದೇ ಈ ಸೇವೆಗಳಲ್ಲಿ ಮುಂದುವರಿಯುತ್ತಿದ್ದಾರೆ. ಅಂದರೆ ಸೇವಾರಂಗಲ್ಲಿ ಒಂದು ಭಾಗಕ್ಕೆ ಮಾತ್ರವೇ ಪ್ರಾಧಾನ್ಯತೆ ಹೆಚ್ಚಾಗುತ್ತಿದೆ.

ಭಾರತದೇಶದಲ್ಲಿ ವ್ಯವಸ್ಥೀಕೃತ, ಅವ್ಯವಸ್ಥೀಕೃತ ರಂಗಗಳಲ್ಲಿ ಉದ್ಯೋಗ : (Organised and unorganised sector employment in India) :

ಭಾರತದೇಶದಲ್ಲಿ ಒಟ್ಟು ರಾಷ್ಟ್ರೀಯ ಉತ್ಪತ್ತಿಗೆ ವಿಭಿನ್ನ ರಂಗಗಳು ಹೇಗೆ ಸಹಾಯ ಮಾಡುತ್ತಿವೆಯೋ, ಈ ಮೂರು ರಂಗಗಳಲ್ಲಿ ಯಾವುದರ ಪ್ರಾಮುಖ್ಯತೆ ಎಷ್ಟು ಇದೆ ಎಂಬುದನ್ನು ನೋಡಿದ್ದೇವೆ. ಉತ್ಪತ್ತಿ, ಉದ್ಯೋಗಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ವಿಶ್ಲೇಷಿಸಲು ಇದು ಉಪಯೋಗ ಪಡುತ್ತದೆ.

ನಮ್ಮ ದೇಶದಲ್ಲಿ ಉದ್ಯೋಗ ವಿಧಾನದಲ್ಲಿ ಗಣನೀಯವಾದ ಬದಲಾವಣೆಗಳು ಆಗುತ್ತಿಲ್ಲ. ಇದನ್ನು ಪರಿಶೀಲಿಸಲು ಉದ್ಯೋಗಕ್ಕೆ ಸಂಬಂಧಿಸಿದ ಮತ್ತೊಂದು ವರ್ಗೀಕರಣವನ್ನು ನೋಡೋಣ. ಕೆಳಗೆ ಚರ್ಚಿಸಿದ

SCERT TELANGANA

ನರಸಿಂಹ

ನರಸಿಂಹನು ಸರ್ಕಾರಿ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ಸಂಜೆ 5.30 ರವರೆಗೆ ಮನೆಯಿಂದ 5 ಕಿಲೋಮೀಟರ್‌ಗಳ ದೂರದಲ್ಲಿರುವ ಕಾರ್ಯಾಲಯಕ್ಕೆ ಆತನು ಮೋಟರ್ ಸೈಕಿಲ್‌ನಲ್ಲಿಹೋಗುತ್ತಾನೆ. ಪ್ರತಿ ತಿಂಗಳ ಕೊನೆಯಲ್ಲಿ ಆತನಿಗೆ ಕ್ರಮ ತಪ್ಪದಂತೆ ವೇತನ ದೊರೆಯುತ್ತದೆ. ಅದು ನೇರವಾಗಿ ಆತನ ಬ್ಯಾಂಕ್ ಖಾತೆಗೆ ಜಮ ಆಗುತ್ತದೆ. ಸಂಬಳವಿಲ್ಲದೆ ಸರ್ಕಾರದ ನಿಯಮದಂತೆ ಆತನ ಭವಿಷ್ಯ ನಿಧಿ (PF) ಲಭಿಸುತ್ತದೆ. ವೈದ್ಯಕೀಯ, ಇತರ ಭತ್ಯೆಗಳು ಕೂಡ ದೊರೆಯತ್ತವೆ. ನರಸಿಂಹನು ಭಾನುವಾರ ಕಾರ್ಯಾಲಯಕ್ಕೆ

ಹೋಗುವುದಿಲ್ಲ. ಇದು ಆತನಿಗೆ ವೇತನದಿಂದ ಕೂಡಿದ ರಜೆ. ಆತನು ಕೆಲಸಕ್ಕೆ ಸೇರಿದಾಗ ಕೆಲಸದ ಷರತ್ತುಗಳು, ನಿಬಂಧನೆಗಳು ತಿಳಿಸುತ್ತಾ ಆತನಿಗೆ ನೇಮಕಾತಿ ಪತ್ರ ನೀಡಿದ್ದರು.

ರಾಜೇಶ್ವರಿ :

ರಾಜೇಶ್ವರಿ ಕಟ್ಟಡ ನಿರ್ಮಾಣ ಕೂಲಿಕಾರ್ಮಿಕಳಾಗಿ ಕೆಲಸ ಮಾಡುತ್ತಿದ್ದಾಳೆ. ಆಕೆ ಬೆಳಿಗ್ಗೆ 7 ಗಂಟೆಗೆ ಕೆಲಸಕ್ಕೆ ಹೋಗಿ, ರಾತ್ರಿ 7 ಗಂಟೆಗೆ ಮರಳಿ ಬರುತ್ತಾಳೆ. 8-10 ಕಿಲೋಮೀಟರ್‌ಗಳ ದೂರದಲ್ಲಿ ಇರುವ ಕೆಲಸವಿರುವ ಪ್ರಾಂತಕ್ಕೆ ಆಕೆಯು ಪ್ರತಿದಿನ ಬಸ್ಸಿನಲ್ಲಿ ಹೋಗಿ ಬರುತ್ತಾಳೆ. ಭವನ ನಿರ್ಮಾಣ ಕಾರ್ಮಿಕರಿಗೆ ಮಧ್ಯಾಹ್ನ 1-2 ಗಂಟೆಗಳ ಮಧ್ಯೆ ಭೋಜನ ವಿರಾಮ ಲಭಿಸುತ್ತದೆ. ಆಕೆಗೆ ತಿಂಗಳಲ್ಲಿ 10-12 ದಿನಗಳು ಮಾತ್ರ ಕೆಲಸ ಸಿಗುತ್ತದೆ. ಕೆಲಸವಿಲ್ಲದ ದಿನಗಳಲ್ಲಿ ಆಕೆಗೆ ಕೂಲಿ ಬರುವುದಿಲ್ಲ. ಆಕೆಗೆ ದಿನಕ್ಕೆ 150 ರೂಪಾಯಿಗಳು ಕೂಲಿ ದೊರೆಯುತ್ತಿದೆ. ಸಾಧಾರಣವಾಗಿ ಸಂಜೆ ಆಕೆಗೆ ದಿನಕೂಲಿ ದೊರಕುತ್ತದೆ. ಒಂದೇ ಕಡೆ ಮೂರು, ನಾಲ್ಕು ದಿನಗಳು ಕೆಲಸ ಮಾಡಿದರೆ ಆ ಕೆಲಸ ಮುಗಿದ ಬಳಿಕ ಒಟ್ಟು ಕೂಲಿ ಲಭಿಸುತ್ತದೆ. ಫೆಬ್ರವರಿ - ಜೂನ್ ತಿಂಗಳಲ್ಲಿ ಹೆಚ್ಚು ಕೆಲಸ ಸಿಗುತ್ತದೆ. ಜೂಲೈನಿಂದ ಜನವರಿವರೆಗೆ ಅಷ್ಟಾಗಿ ಕೆಲಸಗಳಿರುವುದಿಲ್ಲ. ಸ್ಥಳೀಯ ಸ್ವಯಂ ಸಹಾಯಕ ಗುಂಪುಗಳಲ್ಲಿ ರಾಜೇಶ್ವರಿಯು ಸದಸ್ಯಳಾಗಿದ್ದಳು. ಕೆಲಸ ಮಾಡುತ್ತಿರುವಾಗ ದೊಡ್ಡ ಅಪಘಾತಗಳು ಸಂಭವಿಸಿದರೆ ಅಥವಾ ಮರಣ ಹೊಂದಿದರೆ ಸರ್ಕಾರವು ಸ್ವಲ್ಪ ನಷ್ಟ ಪರಿಹಾರವನ್ನು ನೀಡುತ್ತದೆ. ಆದರೆ ಚಿಕ್ಕ ಪ್ರಮಾದಗಳಿಗೆ ಯಾವುದೇ ನಷ್ಟ ಪರಿಹಾರ ನೀಡುವುದಿಲ್ಲ. ಒಬ್ಬ ಮೇಸ್ತ್ರಿ ಕೆಳಗೆ ಕೆಲಸ ಮಾಡುವ ಗುಂಪಿನಲ್ಲಿ ಆಕೆ ಸದಸ್ಯಳು. ಪ್ರತಿ ಮೇಸ್ತ್ರಿ ಕೆಳಗೆ 6-10 ಜನರು ಕೆಲಸ ಮಾಡುತ್ತಿರುತ್ತಾರೆ.

SCERT TELANGANA

ಎಲ್ಲರೂ ಕೆಲಸ ಮಾಡುತ್ತಿದ್ದಂತೆ ಕಾಣುತ್ತದೆ, ಆದರೆ ಯಾರಿಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕ ಪೂರ್ತಿ ಕೆಲಸ ಇರುವುದಿಲ್ಲ. ಕೆಲಸವಿಲ್ಲದೆ ನಿರುದ್ಯೋಗಿಯಾಗಿದ್ದರೆ ಅದು ಕಾಣುತ್ತದೆ, ಆದರೆ ಈ ವಿಧವಾದ ಅರೆ ಉದ್ಯೋಗ ಯಾರಿಗೂ ಕಾಣುವುದಿಲ್ಲ. ಅದಕ್ಕೆ ಇದನ್ನು "ಮರೆಮಾಚಿದ ನಿರುದ್ಯೋಗ" ಎಂದು ಸಹ ಕರೆಯುತ್ತಾರೆ.

ಒಬ್ಬ ಜಮೀನುದಾರ ಈ ಕುಟುಂಬದಲ್ಲಿನ ಒಂದಿಬ್ಬರನ್ನು ತನ್ನ ಹೊಲದಲ್ಲಿ ಕೆಲಸ ಮಾಡಲು ನೇಮಿಸಿರುವನು ಎಂದು ಕೊಳ್ಳೋಣ. ಇದರಿಂದ ಗಾಯಿತ್ರಿ ಕುಟುಂಬಕ್ಕೆ ಕೂಲಿಯಿಂದ ಹೆಚ್ಚಿನ ಆದಾಯ ದೊರೆಯುತ್ತದೆ. ಅವರಿಗಿರುವ ಕಡಿಮೆ ಭೂಮಿಯಲ್ಲಿ ಐದಾರು ಜನರು ಕೆಲಸ ಮಾಡುವ ಅವಸರವಿಲ್ಲವಾದ್ದರಿಂದ ಇಬ್ಬರು ಬೇರೆ ಕೆಲಸಕ್ಕೆ ಹೋಗುವುದರಿಂದ ಉತ್ಪತ್ತಿಗೆ ತೊಂದರೆಯಾಗುವುದಿಲ್ಲ. ಮೇಲಿನ ಉದಾಹರಣೆಯಲ್ಲಿ ಇಬ್ಬರೂ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಹೋಗಬಹುದು. ಇದರಿಂದಲೂ ವ್ಯವಸಾಯ ಉತ್ಪತ್ತಿ ಕಡಿಮೆಯಾಗದಂತೆ ಗಾಯತ್ರಿ ಕುಟುಂಬ ಹೆಚ್ಚಿನ ಆದಾಯ ಪಡೆಯಬಹುದು.

ಭಾರತದೇಶದಲ್ಲಿ ಗಾಯಿತ್ರಿಯಂತಹ ರೈತರು ಲಕ್ಷ ಸಂಖ್ಯೆಯಲ್ಲಿದ್ದಾರೆ. ಇದರ ಅರ್ಥ ವ್ಯವಸಾಯ ವಲಯದಲ್ಲಿ ಕೆಲಸ ಮಾಡುತ್ತಿದ್ದ ಬಹಳ ಜನ ಬೇರೆ ರಂಗಗಳಲ್ಲಿ ಕೆಲಸ ಮಾಡಿದರೂ ವ್ಯವಸಾಯ ಉತ್ಪತ್ತಿ ಕಡಿಮೆಯಾಗುವುದಿಲ್ಲ, ಇತರ ಕೆಲಸಗಳನ್ನು ಮಾಡುವ ಸದಸ್ಯರ ಮೂಲಕ ಕುಟುಂಬ ಒಟ್ಟು ಆದಾಯ ಹೆಚ್ಚಾಗುತ್ತದೆ.

ಈ ರೀತಿಯ ಅರೆ ಉದ್ಯೋಗ ಇತರ ರಂಗಗಳಲ್ಲಿಯೂ ಇರಬಹುದು. ಉದಾಹರಣೆಗೆ ಪಟ್ಟಣ ಪ್ರಾಂತಗಳಲ್ಲಿ ಸೇವಾವಲಯದಲ್ಲಿ ದಿನಕೂಲಿಗಾಗಿ ಹುಡುಕುವ ಸಾವಿರಾರು ಜನರಿದ್ದಾರೆ. ಇವರು ಬಣ್ಣ ಹಾಕುವವರು, ಪೈಪುಗಳನ್ನು ಜೋಡಿಸುವವನು, ದುರಸ್ತಿ ಮಾಡುವಂತಹ ಕೆಲಸಗಳನ್ನು ಮಾಡುತ್ತಾರೆ. ಇವರಲ್ಲಿ ಬಹಳ ಜನಕ್ಕೆ ಪ್ರತಿದಿನ ಕೆಲಸ ಸಿಗಲಾರದು, ಅದೇ ವಿಧವಾಗಿ ಸೇವಾ ರಂಗದಲ್ಲಿ ರಸ್ತೆಯಲ್ಲಿ ಬಂಡಿಗಳಲ್ಲಿ, ಸರಕುಗಳನ್ನು ಮಾರುವವರನ್ನು ನೋಡುತ್ತಿರುತ್ತೇವೆ. ಇವರು ದಿನವೆಲ್ಲಾ ಕಷ್ಟಪಟ್ಟರೂ ಸಂಪಾದನೆ ಬಹಳ ಕಡಿಮೆ ಇರುತ್ತದೆ. ಇದಕ್ಕಿಂತ ಉತ್ತಮ ಅವಕಾಶಗಳು ಇಲ್ಲದ್ದರಿಂದ ಇವರು ಈ ಕೆಲಸಗಳನ್ನು ಮಾಡುತ್ತಿದ್ದಾರೆ.

ಸಂಘಟಿತ, ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಉದಾಹರಣೆಯಾಗಿ ನರಸಿಂಹ, ರಾಜೇಶ್ವರಿ ಇದ್ದಾರೆ. ಅವರ ಕೆಲಸದ ರೀತಿಯಲ್ಲಿ ಎಂತಹ ವ್ಯತ್ಯಾಸಗಳನ್ನು ಗಮನಿಸಿದ್ದೀರಿ ? ಸಂಘಟಿತ, ಅಸಂಘಟಿತ ವಲಯಗಳ ನಡುವೆ ವ್ಯತ್ಯಾಸಗಳು ಗುರ್ತಿಸುವುದರ ಮೂಲಕ ದೇಶದಲ್ಲಿ ಅತ್ಯಧಿಕ ಶೇಕಡ ಕಾರ್ಮಿಕರ ಕೆಲಸ ಪರಿಸ್ಥಿತಿಗಳು, ಸಂಬಳಗಳು ಹೇಗಿವೆ ಎಂದು ಅರ್ಥ ಮಾಡಿಕೊಳ್ಳಬಹುದು. 92% ಕಾರ್ಮಿಕರು ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಕೇವಲ 8% ಜನರು ಮಾತ್ರ ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ಉದ್ಯೋಗ ಷರತ್ತುಗಳಿದ್ದು ನಂಬಿಕೆಯಾಗಿ ಕೆಲಸವಿರುವ ಪ್ರದೇಶಗಳು ಅಥವಾ ವ್ಯಾಪಾರಗಳನ್ನು ಸಂಘಟಿತ ರಂಗವಾಗಿ ವ್ಯವಹರಿಸುತ್ತಾರೆ. ಇವು ಸರ್ಕಾರದೊಂದಿಗೆ ನೊಂದಣಿ ಮಾಡಿಕೊಂಡಿರುತ್ತವೆ. ಆದ್ದರಿಂದ ಕೈಗಾರಿಕೆಗಳ ಕಾಯ್ದೆ, ಕನಿಷ್ಟ ವೇತನ ಕಾಯ್ದೆ, ಅಂಗಡಿಗಳು, ಸಂಸ್ಥೆಗಳ ಕಾಯ್ದೆಗಳಲ್ಲಿರುವ ಸರ್ಕಾರದ ನಿಯಮ ನಿಬಂಧನೆಗಳನ್ನು ಇವು ಅನುಸರಿಸುತ್ತವೆ. ಕೆಲವು ಕ್ರಮಬದ್ಧ ಪ್ರಕ್ರಿಯೆಗಳು, ವಿಧಾನಗಳು ಇರುವುದರಿಂದಲೂ ಸಹ ಇವುಗಳನ್ನು ಸಂಘಟಿತ ವಲಯ ಎನ್ನುವರು. ಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಇರುತ್ತದೆ. ಅವರು ಪ್ರತಿದಿನ ನಿರ್ಣಯಿಸಿದ ಗಂಟೆಗಳು ಮಾತ್ರ ಕೆಲಸ ಮಾಡಬೇಕಾಗಿರುತ್ತದೆ. ಅದಕ್ಕಿಂತ ಹೆಚ್ಚಾಗಿ ಕೆಲಸ ಮಾಡಿದರೆ ಯಜಮಾನನು ಹೆಚ್ಚಿನ ವೇತನ ಕೊಡಬೇಕು. ಅಷ್ಟೇ ಅಲ್ಲದೆ ಸಂಬಳಸಹಿತ ರಜೆ ರಜೆಯಲ್ಲಿ ವೇತನ, ಭವಿಷ್ಯನಿಧಿ ಯಂತಹ ಅನೇಕ ಇತರ ಪ್ರಯೋಜನಗಳು ಅವರಿಗೆ ಇರುತ್ತವೆ. ಅವರಿಗೆ ವೈದ್ಯ ಸೌಕರ್ಯಗಳೂ ಒದಗಿಸಬೇಕು, ಕಾನೂನು ಪ್ರಕಾರ ಯಜಮಾನರು ಭದ್ರತೆಯಿಂದ ಕೂಡಿದ ಕೆಲಸದ ವಾತಾವರಣ, ಕುಡಿಯುವ ನೀರಿನ ಸೌಕರ್ಯಗಳನ್ನು ಕಲ್ಪಿಸಬೇಕು. ಸರ್ಕಾರ, ಕಂಪನಿಗಳು, ದೊಡ್ಡ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

SCERT TELANGANA

ಅಸಂಘಟಿತ ವಲಯದಲ್ಲಿ ಚಿಕ್ಕ ಚಿಕ್ಕ ಸಂಸ್ಥೆಗಳು ಅಲ್ಲಲ್ಲಿ ಇರುತ್ತವೆ. ಇವು ಸಾಧಾರಣವಾಗಿ ಸರ್ಕಾರದ ನಿಯಂತ್ರಣದಲ್ಲಿ ಇರುವುದಿಲ್ಲ. ನಿಯಮ, ನಿಬಂಧನೆಗಳಿರುತ್ತವೆಯಾದರೂ ಇವುಗಳನ್ನು ಅನುಸರಿಸುವುದಿಲ್ಲ. ಅನುಸರಿಸುವಂತೆ ನೋಡಿಕೊಳ್ಳಲು ಇರುವುದಿಲ್ಲ. ಉದ್ಯೋಗಿಗಳ ವೇತನ ಕಡಿಮೆ, ಭದ್ರತೆಯೂ ಇರುವುದಿಲ್ಲ. ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ವೇತನ, ವೇತನಸಹಿತ ರಜೆ, ರಜೆಗಳು, ಅನಾರೋಗ್ಯವಿದ್ದಾಗ ರಜೆಗಳಿರುವುದಿಲ್ಲ. ಯಾವುದೇ ಕಾರಣವಿಲ್ಲದೇ ಉದ್ಯೋಗಿಗಳನ್ನು ಬಿಟ್ಟು ಬಿಡಬಹುದು. ಕೆಲಸ ಕಡಿಮೆ ಇದ್ದಾಗ ಕೆಲವು ಜನರನ್ನು ಕೆಲಸದಿಂದ ತೆಗೆದುಹಾಕಬಹುದು. ಬದಲಾಗುತ್ತಿರುವ ಮಾರುಕಟ್ಟೆ ಪರಿಸ್ಥಿತಿ, ಉದ್ಯೋಗ ಕಲ್ಪಿಸುತ್ತಿರುವವರ ಮಾನಸಿಕ ಧೃಡತೆ ಮೇಲೆ ಬಹಳ ಆಧಾರಪಟ್ಟಿರುತ್ತದೆ.

ಮೇಲೆ ತಿಳಿಸಿರುವ ವಿಷಯಗಳಲ್ಲಿ ಮಾತ್ರವಲ್ಲದೆ ಸೇವಾವಲಯದಲ್ಲಿ ಸ್ವಯಂ ಉದ್ಯೋಗ ಹೊಂದುತ್ತಿರುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾರ್ಮಿಕರಲ್ಲಿ ಅರ್ಧಭಾಗ ಸ್ವಯಂ ಉದ್ಯೋಗ ಹೊಂದುತ್ತಿರುವರೇ, ಬಜಾರಿನಲ್ಲಿ ವಸ್ತುಗಳನ್ನು ಮಾರುತ್ತಾ, ಚಿಕ್ಕ ಚಿಕ್ಕ ದುರಸ್ಥಿಗಳನ್ನು ಮಾಡುತ್ತಾ, ಬೀದಿ ತಿರುಗುತ್ತಾ ಮಾರುತ್ತಾ ಇರುವವರು ಅಲ್ಲಲ್ಲಿ ನಿಮಗೆ ಕಾಣುತ್ತಿರುತ್ತಾರೆ. ಅದೇ ರೀತಿಯಲ್ಲಿ ರೈತರೂ ಸಹ ಹೆಚ್ಚಾಗಿ ಸ್ವಯಂ ಉದ್ಯೋಗ ಪಡೆಯುತ್ತಾ ಬೇಕಾದಾಗ ಕೂಲಿಗಳನ್ನು ಕರೆಯುತ್ತಾರೆ.

ಸಂಘಟಿತ ವಲಯದಲ್ಲಿ ಎಲ್ಲರೂ ಉದ್ಯೋಗಗಳನ್ನು ಬಯಸುತ್ತಾರೆ. ಆದರೆ ಈ ರಂಗದಲ್ಲಿ ಉದ್ಯೋಗ ಅವಕಾಶಗಳು ಬಹಳ ನಿಧಾನವಾಗಿ ಹೆಚ್ಚಾಗುತ್ತಿವೆ. ಇದರಿಂದ, ಅಧಿಕ ಶೇಕಡ ಕಾರ್ಮಿಕರು ಬಹಳ ಕಡಿಮೆ ವೇತನಕ್ಕೆ ಅಸಂಘಟಿತ ಉದ್ಯೋಗಗಳು ಇಲ್ಲದಿದ್ದರೆ ಬೇರೆ ದಾರಿಲ್ಲ. ಇವರು ಆಗಾಗ ದೋಚುವಿಕೆಗೆ ಗುರಿಯಾಗುತ್ತಾರೆ. ಇವರಿಗೆ ನ್ಯಾಯವಾದ ವೇತನಗಳಿರುವುದಿಲ್ಲ. ಇವರ ಸಂಪಾದನೆ ಬಹಳ ಕಡಿಮೆ, ಅದು ಸಹ ನಿರಂತರವಾಗಿರುವುದಿಲ್ಲ. ಸಂಘಟಿತ ವಲಯದಲ್ಲಿ ಕಾರ್ಮಿಕರ ಉದ್ಯೋಗಗಳು ಹೋಗುವುದು ಸಹ ಸಾಧಾರಣವಾಗಿ ನೋಡುತ್ತಿರುತ್ತೇವೆ. ಅದ್ದರಿಂದ ಇವರೂ ಸಹ ಕಡಿಮೆ ಸಂಬಳಕ್ಕೆ ಅಸಂಘಟಿತ ವಲಯದಲ್ಲಿ ಕೆಲಸ ಮಾಡಬೇಕಾಗಿ ಬರುತ್ತದೆ. ಅಂದರೆ ಮತ್ತಷ್ಟು ಕೆಲಸ ಅವಸರದೊಂದಿಗೆ ಅಸಂಘಟಿತ ವಲಯದಲ್ಲಿನ ಕಾರ್ಮಿಕರ ರಕ್ಷಣೆ, ಬೆಂಬಲ ಅವಸರ.

ರಕ್ಷಣೆಗೆ ಅವಸರವಾದ ಈ ಅಸಂಘಟಿತ ಕಾರ್ಮಿಕರು ಯಾರು ? ಗ್ರಾಮೀಣ ಪ್ರಾಂತಗಳಲ್ಲಿ ಇವರು ಭೂಮಿ ಇಲ್ಲದ ವ್ಯವಸಾಯ ಕೂಲಿಗಳು, ಸಣ್ಣ, ಅತಿಸಣ್ಣ ರೈತರು, ಕೌಲುದಾರರು, ನೇಕಾರ, ಕಮ್ಮಾರ, ಅಕ್ಕಸಾಲಿಗ, ಬಡಿಗರಂತಹ ಕೈಕಸಬುದಾರರು, ಭಾರತದೇಶದಲ್ಲಿನ ಗ್ರಾಮೀಣ ಪ್ರಾಂತಗಳಲ್ಲಿ 80% ಕುಟುಂಬಗಳು ಸಣ್ಣ ಮತ್ತು ಅತಿಸಣ್ಣ ರೈತರ ಕೆಳಗೆ ಬರುತ್ತವೆ. ಇಂತಹ ರೈತರಿಗೆ ಸಕಾಲದಲ್ಲಿ ಬೀಜ, ವ್ಯವಸಾಯ ಉತ್ಪಾದಕಗಳು, ಸಾಲಸೌಲಭ್ಯಗಳು, ಸಂಗ್ರಹ ಸೌಲಭ್ಯ ಮಾರುಕಟ್ಟೆ ಕೇಂದ್ರಗಳ ಮೂಲಕ ಬೆಂಬಲ ನೀಡಬೇಕು, ವ್ಯವಸಾಯ ಕೂಲಿಗಳಿಗೆ ಕನಿಷ್ಠ ಕೂಲಿ, ಸರಿಯಾದ ಕೆಲಸವನ್ನು ನೀಡಬೇಕು.

ಪಟ್ಟಣ ಪ್ರಾಂತಗಳಲ್ಲಿ ಸಣ್ಣ ಕೈಗಾರಿಕೆಗಳು, ಭವನ ನಿರ್ಮಾಣ, ವ್ಯಾಪಾರ ಸಾರಿಗೆಗಳಲ್ಲಿ ದಿನನಿತ್ಯ ಕೂಲಿಗಳು, ಬಜಾರಿನಲ್ಲಿ ಮಾರುವವರು, ಹಮಾಲಿಗಳು, ತುಂಡು ಕಾಗದ ಆರಿಸುವವರು ಬಟ್ಟೆಗಳನ್ನು ಹೊಲಿಯುವವರು,

ಪಟ್ಟಿಕೆ 2 : ಸಂಘಟಿತ, ಅಸಂಘಟಿತ ವಲಯಗಳ ಕೊಡುಗೆ

ರಂಗಗಳು	ಕೊಡುಗೆ (ಒಟ್ಟನಲ್ಲಿ ಶೇಕಡ)	
	ಉದ್ಯೋಗ	ಒಟ್ಟು ರಾಷ್ಟ್ರೀಯ ಉತ್ಪತ್ತಿ
ಸಂಘಟಿತ	8	50
ಅಸಂಘಟಿತ	92	50
ಒಟ್ಟು	100	100

SCERT TELANGANA

ಅಸಂಘಟಿತ ವಲಯ ಕಾರ್ಮಿಕರಾಗುತ್ತಾರೆ. ಕಚ್ಚಾ ಸಾಮಾಗ್ರಿ ಕೊಂಡುಕೊಳ್ಳಲು ಉತ್ಪತ್ತಿಗಳನ್ನು ಮಾರಾಟ ಮಾಡಲು ಸಣ್ಣ ಕೈಗಾರಿಕೆಗಳಿಗೂ ಸರ್ಕಾರದ ಬೆಂಬಲಬೇಕು. ಪಟ್ಟಣ, ಗ್ರಾಮೀಣ ಪ್ರಾಂತಗಳಲ್ಲಿನ ದಿನಕೂಲಿಗಳಿಗೆ ರಕ್ಷಣೆಬೇಕು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ , ಹಿಂದುಳಿದ ವರ್ಗಗಳಿಗೆ ಸೇರಿದ ಅಧಿಕ ಶೇಕಡ ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ಈ ವರ್ಗಗಳಿಗೆ ಸೇರಿದ ಮಹಿಳೆಯರ ಪರಿಸ್ಥಿತಿ ಮತ್ತಷ್ಟು ದಾರುಣವಾಗಿದೆ. ಕೆಲಸ ಸರಿಯಾಗಿ ಸಿಗದೇ ಇರುವುದು, ಕಡಿಮೆ ವೇತನ ಇರುವುದಲ್ಲದೆ ಈ ಕಾರ್ಮಿಕರು ಸಾಮಾಜಿಕ ತಾರತಮ್ಯಕ್ಕೆ ಗುರಿಯಾಗುತ್ತಾರೆ. ಆದ್ದರಿಂದ ಆರ್ಥಿಕ, ಸಾಮಾಜಿಕ ಅಭಿವೃದ್ದಿಗೆ ಅಸಂಘಟಿತ ರಂಗದ ಕಾರ್ಮಿಕರಿಗೆ ರಕ್ಷಣೆ, ಬೆಂಬಲದ ಅವಶ್ಯಕತೆ ಇದೆ.

ಈ ವಲಯಗಳಲ್ಲಿ ವಸ್ತು, ಸೇವೆಗಳ ಉತ್ಪತ್ತಿ, ಉದ್ಯೋಗಗಳನ್ನು ಪರಿಶೀಲಿಸೋಣ. ಅಸಂಘಟಿತ ವಲಯವೂ ಸಹ ಉತ್ಪತ್ತಿಗೆ ಸಹಾಯ ಮಾಡುತ್ತದೆ. 2004-05 ನೇ ವರ್ಷದಲ್ಲಿ ಒಟ್ಟು ಕಾರ್ಮಿಕರಲ್ಲಿ 92 ಜನ ಅಸಂಘಟಿತ ವಲಯದಲ್ಲಿದ್ದು ಒಟ್ಟು ಉತ್ಪತ್ತಿಯಲ್ಲಿ ಅರ್ಧದಷ್ಟು ಭಾಗ ಸಹಾಯ ಮಾಡಿದ್ದಾರೆ. ಅಂದರೆ ಇದರ ಅರ್ಥ ಕೇವಲ 8 ಕಾರ್ಮಿಕರು ರಕ್ಷಣೆಯಿಂದ ಕೂಡಿದ ಉತ್ತಮ ಉದ್ಯೋಗವಿದ್ದು ಒಟ್ಟು ವಸ್ತುಗಳು, ಸೇವೆಗಳಲ್ಲಿ 50 ರಷ್ಟು ನೆರವಾಗಿದ್ದಾರೆ. ಇಂತಹ ಕಂಪನಿಗಳ ಉತ್ಪತ್ತಿಗಳು ಸೇವೆಗಳಿಗೆ ಉತ್ತಮ ಮಾರುಕಟ್ಟೆ ಇದೆ ಆದರೂ, ಬಹಳ ಸ್ವಲ್ಪ ಜನಕ್ಕೆ ಮಾತ್ರ ಉತ್ತಮ ಸೌಲಭ್ಯದಿಂದ ಕೂಡಿದ ಉದ್ಯೋಗ ಕಲ್ಪಿಸುತ್ತಿವೆ. ಇದು ತೀವ್ರ ಅಸಮಾನತೆಗಳಿಂದ ಕೂಡಿದ ಪರಿಸ್ಥಿತಿ, ಉಳಿದವರು ಕಡಿಮೆ ವೇತನದಿಂದ, ಭದ್ರತೆ ಇಲ್ಲದ ಉದ್ಯೋಗ ಮಾಡುತ್ತಿದ್ದಾರೆ ಇಲ್ಲವೇ ಸ್ವಯಂ ಉದ್ಯೋಗದಲ್ಲಿದ್ದಾರೆ. ಇಲ್ಲವೇ ನಿರುದ್ಯೋಗಿಗಳಾಗಿದ್ದಾರೆ.

ಉದ್ಯೋಗ ಅವಕಾಶಗಳು, ಪರಿಸ್ಥಿತಿಗಳನ್ನು ಅಭಿವೃದ್ಧಿ ಪಡಿಸುವುದು ಹೇಗೆ ? :

(How to create more and better conditions of employment ?

ಮೇಲೆ ತಿಳಿಸಿದ ಜನರಲ್ಲಿ ಬಹಳ ಜನ ಕೈಗಾರಿಕೆ, ಸೇವಾರಂಗಗಳಲ್ಲಿ ಉತ್ತಮ ಉದ್ಯೋಗ ಹೊಂದಬೇಕಾಗಿತ್ತು. ಆದರೆ ಹಾಗಾಗಿಲ್ಲ. ಕೈಗಾರಿಕೆ, ಸೇವೆಗಳಲ್ಲಿ ಉತ್ಪತ್ತಿ ಹೆಚ್ಚಾಗಿದೆ ಆದರೆ ಅದಕ್ಕೆ ತಕ್ಕಷ್ಟು ಉದ್ಯೋಗಗಳು ಹೆಚ್ಚಳವಾಗಿಲ್ಲ. ಹೆಚ್ಚು ಶೇಕಡ ಜನರು ಅಸಂಘಟಿತ ವಲಯದಲ್ಲಿ ಕೆಲಸ ದೊರೆಯದ ಸ್ಥಿತಿಯಲ್ಲಿದ್ದಾರೆ. ಉತ್ಪತ್ತಿಯಲ್ಲಿ ಹೆಚ್ಚಳದಿಂದ ಕಾರ್ಮಿಕರಲ್ಲಿ 8% ಜನ ಮಾತ್ರ ಪ್ರಯೋಜನ ಪಡೆದಿದ್ದಾರೆ. ಇನ್ನೂ ಉಳಿದ ಜನರಿಗೆ ಉದ್ಯೋಗ ಅವಕಾಶಗಳು ಹೆಚ್ಚಿಸುವುದು ಹೇಗೆ ? ಕೆಲವು ಮಾರ್ಗಗಳನ್ನು ನೋಡೋಣ.

ಐದು ಎಕರೆ ಮಳೆಯಾಧಾರಿತ ಭೂಮಿ ಇರುವ ಗಾಯಿತ್ರಿಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಸರ್ಕಾರ ಖರ್ಚು ಮಾಡುವುದರ ಮೂಲಕವಾಗಲೀ ಇಲ್ಲವೇ ಬ್ಯಾಂಕುಗಳು ಸಾಲಗಳು ನೀಡುವುದರ ಮೂಲಕ ಗಾಯಿತ್ರಿ ತನ್ನ ಭೂಮಿಗೆ ನೀರಾವರಿ ಸೌಕರ್ಯಕ್ಕಾಗಿ ಬಾವಿಯನ್ನು ತೋಡಿಸಬಹುದು. ಈ ನೀರಾವರಿ ಮೂಲಕ ಗಾಯಿತ್ರಿ ತನ್ನ ಭೂಮಿಯಲ್ಲಿ ಎರಡನೇ ಬೆಳೆಯಾಗಿ ಗೋಧಿಯನ್ನು ಸಾಗುವಳಿ ಮಾಡುತ್ತಾಳೆ. 2.5 ಎಕರೆಗಳಲ್ಲಿ ಗೋಧಿ ಬೆಳೆಯಲ್ಲಿ (ಬಿತ್ತುವುದು, ನೀರು ಹರಿಸುವುದು, ಗೊಬ್ಬರ ಹಾಕುವುದು, ಬೆಳೆ ಕಟಾವು ಮಾಡುವುದು ಮುಂತಾದ ಎಲ್ಲಾ ಕೆಲಸಗಳನ್ನು ಸೇರಿಸಿ) ಇಬ್ಬರು ವ್ಯಕ್ತಿಗಳಿಗೆ 50 ದಿನಗಳು ಕೆಲಸ ದೊರೆಯುತ್ತದೆ. ಅಂದರೆ ಆಕೆಗಿರುವ ಭೂಮಿಯಲ್ಲಿ ಮತ್ತಿಬ್ಬರಿಗೆ ಉದ್ಯೋಗ ದೊರಕುತ್ತದೆ. ಒಂದು ಆಣೆಕಟ್ಟು ನಿರ್ಮಿಸಿ ಇಂತಹ ಅನೇಕ ರೈತರ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಕಾಲುವೆಗಳನ್ನು ತೋಡಿರುವರೆಂದುಕೊಳ್ಳೋಣ. ಇದರ ಮೂಲಕ ವ್ಯವಸಾಯ ವಲಯದಲ್ಲಿಯೇ ಉದ್ಯೋಗ ಅವಕಾಶಗಳು ಲಭಿಸಿ ಅರೆ ಉದ್ಯೋಗಗಳಂತಹ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತವೆ.

ಗಾಯತ್ರಿ, ಇನ್ನೂ ಇತರ ರೈತರು ಮೊದಲಿಗಿಂತ ಹೆಚ್ಚು ಬೆಳೆ ಬೆಳೆಸುತ್ತಿದ್ದಾರೆಂದುಕೊಳ್ಳೋಣ. ಇವರಲ್ಲಿ ಕೆಲವರು ಬಜಾರಿನಲ್ಲಿ ಮಾರಬೇಕಾಗಿರುತ್ತದೆ. ಇದಕ್ಕೆ ಹತ್ತಿರದಲ್ಲಿರುವ ಪಟ್ಟಣಗಳಿಗೆ ತಮ್ಮ ಉತ್ಪತ್ತಿಗಳನ್ನು ಸಾಗಿಸಲು ಸಾರಿಗೆ

ವ್ಯವಸ್ಥೆ ಅವಶ್ಯವಾಗುತ್ತದೆ. ಬೆಳೆಗಳನ್ನು ಸಂಗ್ರಹಿಸಲು, ಸಾರಿಗೆಗಾಗಿ ಸರ್ಕಾರವು ಸ್ವಲ್ಪ ಬಂಡವಾಳ ಹೂಡಿದರೆ ಇಲ್ಲವೇ ಸಣ್ಣ ಲಾರಿಗಳು ಎಲ್ಲಾ ಪ್ರಾಂತಗಳಿಗೆ ಸೇರುವಂತೆ ಉತ್ತಮವಾದ ರಸ್ತೆಗಳನ್ನು ನಿರ್ಮಿಸಿದರೆ ಗಾಯತ್ರಿಯಂತಹ ರೈತರಿಗೆ ನೀರಾವರಿ ಸೌಕರ್ಯ ದೊರೆಯುವಂತಾಗಿ, ಹೆಚ್ಚು ಬೆಳೆಗಳನ್ನು ಬೆಳೆದು, ಅವುಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಾರೆ. ಇಂತಹ ಚಟುವಟಿಕೆಗಳ ಮೂಲಕ ರೈತರಿಗೆ ಮಾತ್ರವಲ್ಲದೆ, ಸಾರಿಗೆ, ವ್ಯಾಪಾರಗಳಂತಹ ಸೇವೆಗಳಲ್ಲಿರುವವರಿಗೆ ಸಹ ಉತ್ಪಾದಕ ಉದ್ಯೋಗ ದೊರೆಯುತ್ತದೆ.

ಗಾಯತ್ರಿ ಅವಶ್ಯಕತೆಗಳಲ್ಲಿ ನೀರು ಒಂದು ಅಂಶ ಮಾತ್ರ. ಭೂಮಿಯನ್ನು ಸಾಗುವಳಿ ಮಾಡಲು ಆಕೆಗೆ ಬೀಜ, ಗೊಬ್ಬರ, ವ್ಯವಸಾಯ ಉಪಕರಣಗಳು, ಪಂಪುಸೆಟ್ಟುಗಳು ಬೇಕಾಗುತ್ತವೆ. ಬಡ ರೈತಳಾದ್ದರಿಂದ ಆಕೆ ಇವುಗಳಲ್ಲಿ ಬಹಳ ವಸ್ತುಗಳು ಕೊಂಡಿಲ್ಲ. ಆದ್ದರಿಂದ ಆಕೆ ಅಧಿಕ ಬಡ್ಡಿಗೆ ಬಡ್ಡಿವ್ಯಾಪಾರಸ್ಥನ ಹತ್ತಿರ ಸಾಲ ಮಾಡಬೇಕಾಗಿದೆ. ಸ್ಥಳೀಯ ಬ್ಯಾಂಕು ಕಡಿಮೆ ಬಡ್ಡಿಗೆ ಸಕಾಲದಲ್ಲಿ ಸಾಲ ನೀಡಿದರೆ ಇವೆಲ್ಲವುಗಳನ್ನು ಆಕೆ ಸಕಾಲದಲ್ಲಿ ಕೊಂಡು ಭೂಮಿ ಸಾಗುವಳಿ ಮಾಡಬಹುದು. ಅಂದರೆ ವ್ಯವಸಾಯ ಅಭಿವೃದ್ಧಿ ಹೊಂದಬೇಕಾದರೆ ನೀರಾವರಿಯೊಂದಿಗೆ ರೈತರಿಗೆ ಕಡಿಮೆ ಬಡ್ಡಿಗೆ ವ್ಯವಸಾಯಕ್ಕೆ ಸಾಲ ನೀಡಬೇಕಾಗುತ್ತದೆ.

ಈ ಸಮಸ್ಯೆಯನ್ನು ಪರಿಷ್ಕರಿಸಲು ಮತ್ತೊಂದು ಮಾರ್ಗವೆಂದರೆ ದೊಡ್ಡ ದೊಡ್ಡ ಗ್ರಾಮ ಪ್ರಾಂತಗಳಲ್ಲಿ ಬಹಳ ಜನರಿಗೆ ಉದ್ಯೋಗ ಕಲ್ಪಿಸುವಂತೆ ಕೈಗಾರಿಕೆಗಳು, ಸೇವೆಗಳನ್ನು ಗುರ್ತಿಸಿ, ಪ್ರೋತ್ಸಾಹಿಸಿ, ಅಲ್ಲಿಯೇ ಸ್ಥಾಪಿಸುವಂತೆ ನೋಡಿ ಕೊಳ್ಳುವುದು. ಉದಾಹರಣೆಗೆ ಬಹಳ ಜನ ರೈತರು ತೃಣಧಾನ್ಯ, ಚಿರುಧಾನ್ಯಗಳನ್ನು ಬೆಳಸಬೇಕೆಂದುಕೊಳ್ಳಬಹುದು. ಇವುಗಳನ್ನು ಹಿಟ್ಟು ಹಾಕಿಸಿ ಪಟ್ಟಣ ಪ್ರಾಂತಗಳಲ್ಲಿ ಮಾರಾಟ ಮಾಡಲು ಹಿಟ್ಟಿನಗಿರಣಿ ಸ್ಥಾಪಿಸುವುದು ಒಂದು ಉದಾಹರಣೆ. ಶೀತಲ ಸಂಗ್ರಹಣೆ ಕೇಂದ್ರ ದ ಸೌಕರ್ಯ ಕಲ್ಪಿಸಿದರೆ ಮೆಣಸಿನಕಾಯಿ, ಈರುಳ್ಳಿಯಂತಹ ಉತ್ಪತ್ತಿಗಳನ್ನು ರೈತರು ಶೇಖರಿಸಿ ಉತ್ತಮ ಬೆಲೆ ಬಂದಾಗ ಮಾರಿಕೊಳ್ಳುವರು. ಅರಣ್ಯ ಪ್ರಾಂತಗಳಿಗೆ ಹತ್ತಿರವಾಗಿರುವ ಗ್ರಾಮಗಳಲ್ಲಿ ಜೇನು ಶೇಖರಣೆ ಕೇಂದ್ರಗಳನ್ನು ಪ್ರಾರಂಭಸಿದರೆ ಕಾಡುಗಳಲ್ಲಿನ ಜೇನು ಶೇಕರಿಸಿ ಅಲ್ಲಿಯೇ ಮಾರುತ್ತಾರೆ. ಟಮೋಟ, ಮೆಣಸಿನಕಾಯಿ, ಮಾವು, ಭತ್ತ, ತೊಗರಿ, ಹಣ್ಣುಗಳಂತಹ ವ್ಯವಸಾಯ ಉತ್ಪತ್ತಿಗಳು, ಕಾಯಿಪಲ್ಲೆಗಳ ಪ್ರಾಸೆಸಿಂಗ್‌ಗೆ ಕೈಗಾರಿಕೆಗಳನ್ನು ಸ್ಥಾಪಿಸಬಹುದು. ಇದರ ಮೂಲಕ ದೊಡ್ಡ ಪಟ್ಟಣಗಳಲ್ಲಿ ಅಲ್ಲದೇ ಸಾಧಾರಣ ಊರುಗಳಲ್ಲಿನ ಕೈಗಾರಿಕೆಗಳಲ್ಲಿ ಉದ್ಯೋಗ ಲಭಿಸುತ್ತದೆ.

ಪ್ರಸ್ತುತ ಹೊಸ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದೇ ಅಲ್ಲದೇ ಯಂತ್ರಗಳಿಂದ, ಸಮರ್ಥವಂತವಾಗಿ ಕೆಲಸ ಮಾಡುವ ಜನರಿಗೆ ಶಿಕ್ಷಣ ನೀಡಬೇಕು. ಮತ್ತಷ್ಟು ವಸ್ತು, ಸೇವೆಗಳನ್ನು ಉತ್ಪತ್ತಿ ಮಾಡಲು ದೊಡ್ಡ ಗ್ರಾಮಗಳು, ಚಿಕ್ಕ ಪಟ್ಟಣಗಳಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಬೇಕು.

ಕಠಿಣ ಪದಗಳು

ಒಟ್ಟು ರಾಷ್ಟ್ರೀಯೋತ್ಪತ್ತಿ	ಅಂತಿಮ ವಸ್ತುಗಳು	ಉದ್ಯೋಗ ಬದಲಾವಣೆ
ಸಂಘಟಿತ ವಲಯ	ಅಸಂಘಟಿತ ವಲಯ	

SCERT TELANGANA

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ

1 . ಆರ್ಥಿಕ ಚಟುವಟಿಕೆಗಳನ್ನು ಪ್ರಾಥಮಿಕ, ದ್ವಿತೀಯ, ತೃತೀಯ ವಲಯಗಳಾಗಿ ವಿಭಜಿಸಿರುವುದು ಉಪಯುಕ್ತವೇ ? ಏಕೆ ವಿವರಿಸಿರಿ. (AS_1)

2. ಪ್ರತಿ ರಂಗದಲ್ಲೂ ಒಟ್ಟು ರಾಷ್ಟ್ರೀಯೋತ್ಪತ್ತಿಯಲ್ಲೂ, ಉದ್ಯೋಗದಲ್ಲೂ ಏಕೆ ದೃಷ್ಟಿ ಕೇಂದ್ರೀಕರಿಸಬೇಕು ? ಇನ್ನೂ ಪರಿಶೀಲಿಸಬೇಕಾದ ಇತರ ಅಂಶಗಳು ಇವೆಯಾ ? ಚರ್ಚಿಸಿರಿ. (AS_4)

3. ಸೇವಾ ರಂಗವು ಇತರ ವಲಯಗಳಿಗಿಂತ ಏಕೆ ಭಿನ್ನವಾಗಿದೆ ? ಕೆಲವು ಉದಾಹರಣೆಗಳೊಂದಿಗೆ ವಿವರಿಸಿರಿ.(AS_1)

4 . ಅರೆ ಉದ್ಯೋಗ ಎಂದರೆ ಏನು ಅರ್ಥ ಮಾಡಿಕೊಂಡಿರುವಿರಿ ? ಪಟ್ಟಣ, ಗ್ರಾಮೀಣ ಪ್ರಾಂತಗಳಿಂದ ಒಂದೊಂದು ಉದಾಹರಣೆಯೊಂದಿಗೆ ವಿವರಿಸಿರಿ. (AS_1)

5 . ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ಈ ಕೆಳಗಿನ ಅಂಶಗಳಲ್ಲಿ ರಕ್ಷಣೆ ಬೇಕು.

ಕೂಲಿ, ಭದ್ರತೆ, ಆರೋಗ್ಯ : ಉದಾಹರಣೆಗಳೊಂದಿಗೆ ವಿವರಿಸಿರಿ. (AS_1)

6 . ಅಹ್ಮದಾಬಾದ್ ನಗರದಲ್ಲಿ ನಡೆಸಿದ ಅಧ್ಯಯನದಲ್ಲಿ 15 ಲಕ್ಷ ಕಾರ್ಮಿಕರಿದ್ದಾರೆ, ಅವರಲ್ಲಿ 11 ಲಕ್ಷ ಜನರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಆ ವರ್ಷ (1997-98) ರಲ್ಲಿ ನಗರದ ಒಟ್ಟು ಆದಾಯ 6000 ಕೋಟಿ ರೂಪಾಯಿಗಳು. ಅದರಲ್ಲಿ ಅಸಂಘಟಿತ ವಲಯದ ಪಾಲು 3200 ಕೋಟಿಗಳು. ಈ ಅಂಕಿಅಂಶಗಳನ್ನು ಒಂದು ಪಟ್ಟಿಯ ರೂಪದಲ್ಲಿ ತೋರಿಸಿರಿ. ಪಟ್ಟಣದಲ್ಲಿ ಮತ್ತಷ್ಟು ಉದ್ಯೋಗ ಕಲ್ಪಿಸುವ ಮಾರ್ಗಗಳಾವುವು ? (AS_3)

7 . ಪುಟ ಸಂಖ್ಯೆ 33ರಲ್ಲಿ ನಾಲ್ಕನೇ ಪ್ಯಾರಾದಲ್ಲಿನ 'ಕಳೆದ 50 ವರ್ಷಗಳಲ್ಲಿ ....ಭಿನ್ನವಾಗಿದೆಯೇ ? ಇದರ ಮೇಲೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. (AS_2)

8 . ಪುಟ ಸಂಖ್ಯೆ 34ರಲ್ಲಿನ ಪೈ ಗ್ರಾಫ್‌ಗಳನ್ನು ಪರಿಶೀಲಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.(AS_3)

ಎ) 1973-74ಕ್ಕೆ ಹೋಲಿಸಿದರೆ 2015-16ನೇ ವರ್ಷದಲ್ಲಿ ಸ್ಥೂಲ ರಾಷ್ಟ್ರೀಯೋತ್ಪತ್ತಿಯಲ್ಲಿ ಯಾವ ರಂಗಗಳ ಭಾಗ ಹೆಚ್ಚಾಗಿದೆ ?

ಬಿ) 2015-16ನೇ ವರ್ಷದಲ್ಲಿ 1973-74ಕ್ಕೆ ಹೋಲಿಸಿದರೆ ಸ್ಥೂಲ ರಾಷ್ಟ್ರೀಯೋತ್ಪತ್ತಿಯಲ್ಲಿ ವ್ಯವಸಾಯ ರಂಗದ ಭಾಗ ಎಷ್ಟು ಕಡಿಮೆಯಾಗಿದೆ ?

9 . ಒಟ್ಟು ರಾಷ್ಟ್ರೀಯೋತ್ಪತ್ತಿಯನ್ನು ಲೆಕ್ಕ ಹಾಕುವಾಗ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ ಅಂಶಗಳು ಯಾವುವು ? (AS_1)

10. ಒಟ್ಟು ರಾಷ್ಟ್ರೀಯೋತ್ಪತ್ತಿಯಲ್ಲಿ ಬರುವ ಬದಲಾವಣೆಗಳನ್ನು ಚರ್ಚಿಸಿರಿ.(AS_1)

11. ಒಟ್ಟು ರಾಷ್ಟ್ರೀಯೋತ್ಪತ್ತಿಯಲ್ಲಿ ಅಸಂಘಟಿತ ರಂಗದ ಪಾತ್ರವನ್ನು ವಿಶ್ಲೇಷಿಸಿರಿ.(AS_1

SCERT TELANGANA

ಅಧ್ಯಾಯ

4 ಭಾರತದೇಶದ ವಾಯುಗುಣ

ಹವಾಮಾನ ಬದಲಾವಣೆಯಿಂದ ಅಸಹಜ ಪರಿಸ್ಥಿತಿಗಳು - ನಿಪುಣರು

ಹೈದರಾಬಾದಿನಲ್ಲಿ ಯಾವಾಗಲೂ ಬೀಳುವ ಅಕಾಲ ಮಳೆಯಿಂದ ಹವಾಮಾನ ವಿಭಾಗಾಧಿಕಾರಿಗಳು ಆಶ್ಚರ್ಯ ಪಡುತ್ತಿದ್ದಾರೆ. ದೇಶದ್ಲಲಿನ ಹವಾಮಾನವನ್ನು ಮುಂದಾಗಿ ಅಂದಾಜು ಮಾಡುವುದು ಮುಂದಿನ ದಿನಗಳಲ್ಲಿ ಕಷ್ಟಕರವಾಗುತ್ತದೆ ಎಂದು ವಾತಾವರಣ ನಿಪುಣರು ಹೇಳುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಹವಾಮಾನದಲ್ಲಿ ಅಸಹಜ ಬದಲಾವಣೆಗಳನ್ನು ನಾವು ಗಮನಿಸುತ್ತಿದ್ದೇವೆ. ತತ್ಫಲಿತವಾಗಿ ಹವಾಮಾನವು ಊಹಿಸದ ರೀತಿಯಲ್ಲಿ ಇರುತ್ತಿದೆ.

ದೇಶದಲ್ಲಿನ ತೀವ್ರ ಬೇಸಿಗೆ, ರಂಗಾರೆಡ್ಡಿ ಜಿಲ್ಲೆಯ ಚೇವೇಳ್ಲದಲ್ಲಿ ಇದ್ದಕ್ಕಿದ್ದಂತೆ ಆಲಿಕಲ್ಲು ಬೀಳುವುದು, ಉತ್ತರಾಖಂಡದಲ್ಲಿನ ಕುಂಭದ್ರೋಣ ಮಳೆ, ನೈರುತಿ ಋತುಪವನಗಳು ಮುಂದಾಗಿಯೇ ಪ್ರವೇಶಿಸುವುದು, ತಡವಾಗಿ ಹಿಂದಕ್ಕೆ ಮರಳುವುದು ಇಂತಹ ಅಸಾಧಾರಣ ಪರಿಸ್ಥಿತಿಗಳನ್ನು ಗಮನಿಸಿದ ನಂತರ ಹವಾಮಾನವು ವಿಚಿತ್ರವಾಗಿ ವರ್ತಿಸುತ್ತಿದೆ ಎಂದು ನಿಪುಣರು ಅಭಿಪ್ರಾಯಪಡುತ್ತಿದ್ದಾರೆ.

ಒಂಗೋಲಿನಲ್ಲಿ *341* ಮಿ. ಮೀ ಮಳೆ ಬಂದಿತು. ಇದು ವಾರ್ಷಿಕ ಮಳೆಯ ಮೂರರಷ್ಟಕ್ಕಿಂತ ಹೆಚ್ಚು. ರಾಜ್ಯದಲ್ಲಿ ಬಂದ ಅತಿವೃಷ್ಟಿಯಿಂದ ಅನೇಕ ಬೆಳೆಗಳಿಗೆ ನಷ್ಟವುಂಟಾಯಿತು. ಆದರೆ ಇದರಿಂದ ಆಂಧ್ರಪ್ರದೇಶದ *80,000* ಕೆರೆಗಳು ಶೇಕಡ *75* ರಷ್ಟು ನೀರಿನಿಂದ ತುಂಬಿದವು.

(ಟೈಮ್ಸ್ ಆಫ್ ಇಂಡಿಯಾದಲ್ಲಿ ಅಕ್ಟೋಬರ್ 25, *2013* ವಾರ್ತಾ *ಸಂಗ್ರಹ ಸ್ವಲ್ಪ ಬದಲಾವಣೆಯೊಂದಿಗೆ*)

- ಇಂತಹ ಮತ್ತಷ್ಟು ವಾರ್ತಾ ಸುದ್ದಿಗಳನ್ನು ಶೇಖರಿಸಿರಿ.

ಇವು ಅಸಾಧಾರಣವಾಗಿ ನಡೆಯುವ ಸಂಘಟನೆಗಳೇ? ಅಥವಾ ಬದಲಾವಣೆಯ ಸಂಕೇತಗಳೇ? ಇದನ್ನು ಕುರಿತು ಚರ್ಚಿಸಲು ಹವಾಮಾನ ವಿಭಾಗಾಧಿಕಾರಿ ಅಥವಾ ಮಹಾವಿದ್ಯಾಲಯದ ಅಧ್ಯಾಪಕರನ್ನು ನಿಮ್ಮ ತರಗತಿಗೆ ಕಆಹ್ವಾನಿಸಿರಿ

ವಾಯುಗುಣ - ಹವಾಮಾನ

ಒಂದು ನಿಧಿಷ್ಟ ಪ್ರದೇಶದಲ್ಲಿ ಒಂದು ನಿರ್ಧಿಷ್ಟ ಸಮಯದ್ಲಲಿನ ವಾತಾವರಣ ಪರಿಸ್ಥಿತಿಗಳನ್ನು 'ಹವಾಮಾನ' ಎನ್ನುತ್ತಾರೆ. ಈ ಹವಾಮಾನ ಪರಿಸ್ಥಿತಿಗಳು ಆತಿ ಕಡಿಮೆ ಸಮಯದಲ್ಲಿ ಕೂಡಾ ತೀವ್ರವಾಗಿ ಬದಲಾಗುತ್ತಿರುತ್ತವೆ. ಒಂದು ವಿಶಾಲ ಪ್ರದೇಶದಲ್ಲಿ ಕೆಲವು ವರ್ಷಗಳವರೆಗೆ ಒಂದು ಕ್ರಮಪದ್ದತಿಯನ್ನು ಅನುಸರಿಸುವ ವಾತಾವರಣ ಪರಿಸ್ಥಿತಿಗಳನ್ನು 'ವಾಯುಗುಣ' ಎನ್ನುತ್ತಾರೆ. ಸುಮಾರು 30 ವರ್ಷಗಳವರೆಗೆ ಒಂದೇ ವಿಧವಾಗಿರುವ ವಾತಾವರಣ ಪರಿಸ್ಥಿತಿಗಳನ್ನು ಆ ಪ್ರದೇಶದ ವಾಯುಗುಣ ಎನ್ನುತ್ತಾರೆ. ಒಂದು ವರ್ಷಕ್ಕೂ ಮತ್ತೊಂದು ವರ್ಷಕ್ಕೂ ಹವಾಮಾನದಲ್ಲಿ ಸ್ವಲ್ಪ ಬದಲಾವಣೆಗಳಿದ್ದರೂ ಒಟ್ಟಿನಲ್ಲಿ ವಾಯುಗುಣ ಏರ್ಪಡುವ ಕ್ರಮ ಬದಲಾಗುವುದಿಲ್ಲ. ಇಂತಹ ಸಾಧಾರಣ ಪರಿಸ್ಥಿತಿಗಳ ಆಧಾರವಾಗಿ ವರ್ಷವನ್ನು ಕಾಲಗಳಾಗಿ ವಿಭಾಗಿಸುತ್ತಾರೆ. ಶೀತೋಷ್ಣ ಸ್ಥಿತಿಯಲ್ಲಿ ಮುಖ್ಯವಾದ ಉಷ್ಣೋಗ್ರತೆ (ಅತ್ಯಧಿಕ, ಆತ್ಯಲ್ಪ), ಮಳೆಬೀಳುವಿಕೆಗಳನ್ನು 'ಕ್ಲೈಮಾಟೋಗ್ರಾಫ್ ' ಮುಖಾಂತರ ತೋರಿಸಬಹದು. ಹವಾಮಾನದಲ್ಲಿನ ಅಂಶಗಳು : ಉಷ್ಣೋಗ್ರತೆ, ವಾತಾವರಣದ ಒತ್ತಡ, ಗಾಳಿಯ ವೇಗ, ಗಾಳಿಯಲ್ಲಿನ ತೇವಾಂಶ ಮತ್ತು ವರ್ಷಾಪಾತ.

SCERT TELANGANA

ಭಾರತದೇಶದ ಕೆಲವು ಪ್ರದೇಶಗಳಲ್ಲಿ ಕ್ಲೈಮೋಗ್ರಾಫ್‌ಗಳು

ದೇಶದಲ್ಲಿನ ವಿವಿಧ ಪ್ರದೇಶಗಳಲ್ಲಿ ಉಷ್ಣೋಗ್ರತೆ, ವರ್ಷಾಪಾತಗಳಲ್ಲಿ ವ್ಯತ್ಯಾಸಗಳಿವೆ ಎಂಬುದನ್ನು ಕೆಳಗಿನ ಕ್ಲೈಮೋಗ್ರಾಫ್‌ಗಳು ತಿಳಿಯಪಡಿಸುತ್ತವೆ. ನಿಮ್ಮ ಅಟ್ಲಾಸನ್ನು ನೋಡಿ ಕೆಳಗಿರುವ ಪ್ರದೇಶಗಳು ಯಾವ ಭೌಗೋಳಿಕ ಪ್ರದೇಶದಲ್ಲಿವೆಯೇ ತಿಳಿದು ಕೊಳ್ಳಿರಿ. ಕೆಳಗಿನ ನಕ್ಷೆಗಳನ್ನು ಓದಿ, ಮುಂದಿನ ಪುಟದಲ್ಲಿರುವ ಪಟ್ಟಿಯನ್ನು ಪೂರ್ಣಗೊಳಿಸಿರಿ.

ಗ್ರಾಫ್ 1 -4 : ಕ್ಲೈಮೋಗ್ರಾಫ್‌ಗಳು



SCERT TELANGANA

ಪಟ್ಟಣ	ಭೌಗೋಳಿಕ ಪ್ರದೇಶ	ವರ್ಷದಲ್ಲಿ ಅತ್ಯಧಿಕ ಉಷ್ಣೋಗ್ರತೆ ಪರಿಧಿ	ವರ್ಷದಲ್ಲಿ ಅತ್ಯಲ್ಪ ಉಷ್ಣೋಗ್ರತೆ ಪರಿಧಿ	ಅತ್ಯಧಿಕ ವರ್ಷಾಪಾತ ಬೀಳುವ ತಿಂಗಳು ಆ ತಿಂಗಳ ವರ್ಷಾಪಾತ(ಮಿ.ಮೀ)	ಅತ್ಯಲ್ಪ ವರ್ಷಾಪಾತ ಬೀಳುವ ತಿಂಗಳು ಆ ತಿಂಗಳ ವರ್ಷಾಪಾತ(ಮಿ.ಮೀ)
ಜೈಪೂರ್					
ಲೆಹ್					
ನವದೆಹಲಿ					
ಚೆನ್ನೈ					
ಉಷ್ಣೋಗ್ರತಾ ವ್ಯಾಪ್ತಿ ಅತ್ಯಧಿಕದಿಂದ ಅತ್ಯಲ್ಪದವರೆಗೆ					

- ಲೆಹ್‌ನಲ್ಲಿ ಅತಿ ಬಿಸಿಯಾಗಿರುವ, ಅತಿ ಚಳಿಯಿರುವ ತಿಂಗಳುಗಳು ಯಾವು?
- ಮೇಲಿನ ಪಟ್ಟಿಯಲ್ಲಿ ಉಷ್ಣೋಗ್ರತೆ ಪರಿಧಿ ಆಧಾರವಾಗಿ ಲೆಹ್‌ಗಿಂತ ಜೈಪುರ ಬಿಸಿಯಾಗಿರುತ್ತದೆ ಎಂದು ಹೇಳಬಹುದೇ? ನಿಮ್ಮ ಉತ್ತರಕ್ಕೆ ವಿವರಣೆ ನೀಡಿರಿ.
- ದೆಹಲಿ, ಚೆನ್ನೈಗಳ ಶೀತೋಷ್ಣಸ್ಥಿತಿಗಳನ್ನು ಹೋಲಿಸಿರಿ. ಅವುಗಳಲ್ಲಿನ ವ್ಯತ್ಯಾಸವೇನು?
- ಲೆಹ್‌ನಲ್ಲಿ ಮಳೆ ಬರುವ ವಿಧಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಿರಿ. ಉಳಿದ ಪ್ರದೇಶಗಳಿಗೂ, ಇದಕ್ಕೂ ಇರುವ ವ್ಯತ್ಯಾಸವೇನು? ನಿಮ್ಮ ಅಟ್ಲಾಸ್ ಸಹಾಯದಿಂದ ಇದೇ ವರ್ಷಾಪಾತ ಕಂಡುಬರುವ ಇತರ ಪ್ರದೇಶಗಳನ್ನು ಗುರ್ತಿಸಿರಿ.
- ಚೆನ್ನೈನಲ್ಲಿ ಮಳೆಗಾಲದ ತಿಂಗಳುಗಳನ್ನು ಗುರ್ತಿಸಿರಿ. ಇದನ್ನು ಜೈಪೂರ್‌ನೊಂದಿಗೆ ಹೋಲಿಸಿದರೆ ಯಾವ ವಿಧವಾಗಿ ಭಿನ್ನವಾಗಿದೆ?

ವಾಯುಗುಣ, ಹವಾಮಾನವನ್ನು ಪ್ರಭಾವಗೊಳಿಸುವ ಅಂಶಗಳು

ಕೆಲವು ಪ್ರಾಂತಗಳಲ್ಲಿ (ಉದಾ: ಚೆನ್ನೈ) ವಿವಿಧ ತಿಂಗಳುಗಳಲ್ಲಿ ಉಷ್ಣೋಗ್ರತೆಯಲ್ಲಿ ಅಷ್ಟಾಗಿ ವ್ಯತ್ಯಾಸಗಳಿಲ್ಲ ಎಂಬುದನ್ನು ಗಮನಿಸಿದ್ದೇವೆ. ಆದರೆ ಕೆಲವು ಪ್ರಾಂತಗಳನ್ನು (ಉದಾ: ದೆಹಲಿ) ವಿವಿಧ ತಿಂಗಳಲ್ಲಿ ಉಷ್ಣೋಗ್ರತೆಯಲ್ಲಿ ಹೆಚ್ಚು ವ್ಯತ್ಯಾಸ ಇದೆ. ಉತ್ತರದಲ್ಲಿ ಹಿಮಾಲಯಗಳಿದ್ದು, ದಕ್ಷಿಣ ಪರ್ಯಾಯ ದ್ವೀಪವು ಸಮುದ್ರಗಳಿಂದ ಸುತ್ತುವರೆಯಲ್ಪಟ್ಟಿದೆ. ಕೆಲವು ಪ್ರದೇಶಗಳು ಸಮುದ್ರ ತೀರಕ್ಕೆ ಬಹಳ ದೂರದಲ್ಲಿವೆ. ಭಾರತದಲ್ಲಿ ಕೆಲವು ಎತ್ತರವಾದ ಪ್ರದೇಶಗಳಿದ್ದರೆ ಮತ್ತೆ ಕೆಲವು ಮೈದಾನ ಪ್ರದೇಶಗಳಾಗಿವೆ. ವಾಯುಗುಣವನ್ನು ಪ್ರಭಾವಗೊಳಿಸುವ ಅಂಶಗಳನ್ನು ವಾಯುಗುಣ ಕಾರಕಗಳು ಎನ್ನುವರು. ಅವು

1. ಅಕ್ಷಾಂಶ 2. ಭೂಮಿಗೆ – ನೀರಿಗೆ ಇರುವ ಸಂಬಂಧ 3. ಭೌಗೋಳಿಕ ಸ್ವರೂಪ 4. ಭೂ ಮೇಲ್ಮೈ ಗಾಳಿ ಪ್ರಸರಣೆ

1. ಅಕ್ಷಾಂಶ ಅಥವಾ ಭೂಮಧ್ಯರೇಖೆಯಿಂದ ಇರುವ ದೂರ

ಭೂಮಧ್ಯರೇಖೆಯಿಂದ ದೂರ ಹೆಚ್ಚಾದಂತೆಲ್ಲಾ ವಾರ್ಷಿಕ ಸರಾಸರಿ ಉಷ್ಣೋಗ್ರತೆಗಳೂ ಇಳಿಯುತ್ತಾ ಇರುತ್ತವೆ. ಈ ದೃಷ್ಟಿಯಿಂದ ಭೂಮಿಯನ್ನು ಮೂರು ಪ್ರದೇಶಗಳಾಗಿ ವಿಭಜಿಸುತ್ತೇವೆ.

- ಉಷ್ಣ ಪ್ರದೇಶಗಳು, ಭೂಮಧ್ಯ ರೇಖೆಗೆ ಹತ್ತಿರದಲ್ಲಿರುವವು.
- ಧೃವ ಪ್ರದೇಶಗಳು, ಧೃವಗಳಿಗೆ ಹತ್ತಿರದಲ್ಲಿರುವವು.
- ಸಮಶೀತೋಷ್ಣ ಪ್ರದೇಶಗಳು, ಈ ಎರಡರ ನಡುವೆ ಇರುವವು.

SCERT TELANGANA

- ಗ್ಲೋಬನ್ನು ಉಪಯೋಗಿಸಿ ನಾವು ಇದಕ್ಕೆ ಮೊದಲು ತಿಳಿದುಕೊಂಡ ವಿಷಯಗಳನ್ನು ನೆನಪಿಸಿಕೊಳ್ಳೋಣ. ವಿವಿಧ ರೇಖಾಂಶಗಳ ಹತ್ತಿರ ಸೂರ್ಯ ಕಿರಣಗಳ ಕೋನಗಳಲ್ಲಿ ಯಾವ ವ್ಯತ್ಯಾಸ ಇದೆ? ಇದರ ಪ್ರಭಾವ ಹೇಗಿರುತ್ತದೆ.

ಉದಾಹರಣೆಗೆ ನಾವು ಇಂಡೋನೇಷಿಯಾ, ಜಪಾನ್‌ಗಳ ವಾಯುಗುಣ ಹೋಲಿಸಿದರೆ ನಮಗೆ ಈ ವ್ಯತ್ಯಾಸಗಳು ಅರ್ಥವಾಗುತ್ತವೆ. ಈ ವ್ಯತ್ಯಾಸಗಳಿಗೆ ಕಾರಣ ಭೂಮಿಯ ಮೇಲಿನ ವಿಭಿನ್ನ ಪ್ರದೇಶಗಳು ಬಿಸಿಯಾಗುವುದರಲ್ಲಿನ ವ್ಯತ್ಯಾಸ ಎಂಬುದನ್ನು ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡಿದ್ದೀರಿ. ಉಷ್ಣೋಗ್ರತೆಯ ತೀವ್ರತೆಯು ಅಕ್ಷಾಂದವಮೆಲೆ ಆಧಾರಪಟ್ಟಿರುತ್ತದೆ. ಭೂಮಿಯ ಮೇಲಿನ ಉಷ್ಣೋಗ್ರತೆ ಆ ಪ್ರದೇಶದಲ್ಲಿ ಬೀಳುವ ಸೂರ್ಯ ಕಿರಣಗಳ ಶಾಖವನ್ನು ಆಧರಿಸುತ್ತದೆ. ಭೂಮಧ್ಯರೇಖೆಗೆ ದೂರವಾಗಿರುವ ರೇಖಾಂಶಗಳಿ ಗಿಂತ ಹತ್ತಿರವಾಗಿರುವ ರೇಖಾಂಶಗಳ ಹತ್ತಿರ ಈ ತೀರ್ವತೆ ಹೆಚ್ಚಾಗಿರುತ್ತದೆ. ಭೂಮಧ್ಯರೇಖೆಯಿಂದ ಧೃವಗಳ ಕಡೆಗೆ ಹೋದಂತೆ ಸರಾಸರಿ ವಾರ್ಷಿಕ ಉಷ್ಣೋಗ್ರತೆಗಳು ಕಡಿಮೆಯಾಗುತ್ತವೆ.



ಚಿತ್ರ 4.1 : ಶೀತೋಷ್ಣಸ್ಥಿತಿಯ ಮೇಲೆ ಅಕ್ಷಾಂಶಗಳ ಪ್ರಭಾವ

ಭಾರತದೇಶದಲ್ಲಿ ದಕ್ಷಿಣ ಪ್ರದೇಶವು ಭೂಮಧ್ಯರೇಖೆಗೆ ಹತ್ತಿರವಾಗಿ ಉಷ್ಣಮಂಡಲದಲ್ಲಿದೆ. ಇದರಿಂದ ಈ ಪ್ರದೇಶಗಳಲ್ಲಿ ಸರಾಸರಿ ಉಷ್ಣೋಗ್ರತೆಗಳು ಉತ್ತರ ಭಾಗಗಳಿಗಿಂತ ಹೆಚ್ಚಾಗಿರುತ್ತವೆ. ಕನ್ಯಾಕುಮಾರಿಯಲ್ಲಿರುವ ವಾಯುಗುಣ ಭೂಪಾಲ್ ಅಥವಾ ದೆಹಲಿಯ ವಾಯುಗುಣಕ್ಕಿಂತ ಭಿನ್ನವಾಗಿರಲು ಇದು ಒಂದು ಕಾರಣ. ಭಾರತವು ಅಂದಾಜು 8° ಉ -37°ಉ ಅಕ್ಷಾಂಶಗಳ ನಡುವೆ ಇದೆ. ಕರ್ಕಾಟಕರೇಖೆಯು ಭಾರತವನ್ನು ಬಹಳ ಮಟ್ಟಿಗೆ ಎರಡು ಸಮಭಾಗಗಳಾಗಿ ಮಾಡುತ್ತದೆ. ಕರ್ಕಾಟಕರೇಖೆಯ ಉತ್ತರ ಭಾಗವು ಸಮಶೀತೋಷ್ಣದ ವಲಯದಲ್ಲಿದೆ.

2. ಭೂಮಿಗೆ, ನೀರಿಗೆ ನಡುವೆ ಇರುವ ಸಂಬಂಧ

ಭಾರತದೇಶದಲ್ಲಿ ಭೂಮಿ, ನೀರಿನ ಪ್ರದೇಶಗಳನ್ನು ತೋರಿಸುವ ನಕ್ಷೆಯನ್ನು ಗಮನಿಸಿದರೆ ನಿಮಗೆ ವಾಯುಗುಣವನ್ನು ಪ್ರಭಾವಗೊಳಿಸುವ ಮತ್ತೊಂದು ಮುಖ್ಯ ಸಂಬಂಧವನ್ನು ಕಾಣಬಹುದು. ಇದು ಭೂಮಿಗೆ, ನೀರಿಗೆ ನಡುವೆ ಇರುವ ಸಂಬಂಧ. ಭೂಮಿಯ ಮೇಲ್ಮೈ ಸ್ಥಿತಿಯನ್ನಾಧರಿಸಿ ಸೂರ್ಯರಶ್ಮಿಯು ಎಷ್ಟು ಗ್ರಹಿಸಲ್ಪಡುತ್ತದೆ; ಮರಳಿ ಎಷ್ಟು ಪ್ರಸರಿಸಲ್ಪಡುತ್ತದೆ ಅಥವಾ ಎಷ್ಟು ಶಾಖ ಬಿಡುಗಡೆ ಮಾಡಲ್ಪಡುತ್ತದೆ ಎಂಬ ಅಂಶಗಳು ಆಧಾರಪಟ್ಟಿರುತ್ತದೆ. ಹಸಿರಾಗಿರುವ, ಗಿಡಮರಗಳು ಹೆಚ್ಚಾಗಿರುವ ಪ್ರದೇಶಗಳು ಸೂರ್ಯರಶ್ಮಿಯನ್ನು ಹೆಚ್ಚು ಗ್ರಹಿಸುತ್ತದೆ. ಮಂಜಿನಿಂದ ಆವರಿಸಲ್ಪಟ್ಟ ಪ್ರದೇಶಗಳು ಸೂರ್ಯರಶ್ಮಿಯನ್ನು ಮರಳಿ ವಾತಾವರಣದಲ್ಲಿ ಪ್ರಸರಿಸುತ್ತವೆ. ಭೂಮಿಯೊಂದಿಗೆ ಹೋಲಿಸಿದರೆ ಸಮುದ್ರವು ಬಹಳ ನಿಧಾನವಾಗಿ ಬಿಸಿಯಾಗುತ್ತದೆ ಮತ್ತು ನಿಧಾನವಾಗಿ ತಣ್ಣಗಾಗುತ್ತದೆ. ಇದರಿಂದ ವಾಯುಗುಣದ ಮೇಲೆ ಅನೇಕ ವಿಧವಾಗಿ ಪರಿಣಾಮಬೀರುತ್ತದೆ. ಭೂಮಿಯ ಮೇಲಿಂದ, ಸಮುದ್ರದ ಮೇಲಿಂದ ಬೀಸುವ ಪವನಗಳು ಏರ್ಪಡುವುದು ಇವುಗಳಲ್ಲಿ ಒಂದು. ಚಿತ್ರ



ಚಿತ್ರ 4.2 ಈ ಅಂಶಗಳು ಒಂದು ಪ್ರದೇಶದ ಉಷ್ಣೋಗ್ರತೆಯಲ್ಲಿ ಹೆಚ್ಚು ವ್ಯತ್ಯಾಸ ವಿಲ್ಲದಂತೆ ಹೇಗೆ ಪ್ರಭಾವ ಬೀರುತ್ತದೆ

SCERT TELANGANA

4.6 ನೋಡಿ ಇದು ಹೇಗೆ ಉಂಟಾಗುತ್ತದೆಯೋ ವಿವರಿಸಿರಿ. 9ನೇ ತರಗತಿಯಲ್ಲಿ ನೀವು ಓದಿದ ಒತ್ತಡ ಮತ್ತು ಗಾಳಿಯ ದಿಕ್ಕುಗಳ ನಡುವಿನ ಸಂಬಂಧವನ್ನು ಒಂದು ಬಾರಿ ನೆನಪಿಸಿಕೊಳ್ಳಿರಿ.

ಸುದೀರ್ಘ ಕರಾವಳಿ ತೀರದ ಕಾರಣದಿಂದ ದಕ್ಷಿಣ ಪ್ರಾಂತ್ಯದ ಅಧಿಕ ಭಾಗ ಸಮುದ್ರ ಪ್ರಭಾವಕ್ಕೆ ಗುರಿಯಾಗುತ್ತಿದೆ. ಇದರಿಂದ ಹಗಲು ರಾತ್ರಿಗಳ ಉಷ್ಣೋಗ್ರತೆಯಲ್ಲಿ ಅದೇ ವಿಧವಾಗಿ ಬೇಸಿಗೆ ಮತ್ತು ಚಳಿಗಾಲದ ಉಷ್ಣೋಗ್ರತೆಗಳಲ್ಲಿ ಅಷ್ಟೊಂದು ವ್ಯತ್ಯಾಸ ಇರುವುದಿಲ್ಲ. ಇದನ್ನೇ ಸಮಶೀತೋಷ್ಣಸ್ಥಿತಿ ಎನ್ನುತ್ತಾರೆ. ಒಂದೇ ಅಕ್ಷಾಂಶದ ಮೇಲೆ ಸಮುದ್ರದಿಂದ ದೂರದಲ್ಲಿದ್ದು ಒಂದೇ ಎತ್ತರದಲ್ಲಿರುವ ಪ್ರದೇಶಗಳನ್ನು ಹೋಲಿಸಿದರೆ ಸಮುದ್ರ ಪ್ರಭಾವ ಏನೆಂಬುದು ನಮಗೆ ಚೆನ್ನಾಗಿ ತಿಳಿಯುತ್ತದೆ.

- ನಿಮ್ಮ ಅಟ್ಲಾಸನ್ನು ಉಪಯೋಗಿಸಿ ಮುಂಬಯಿ, ನಾಗಪುರಗಳ ಚಳಿಗಾಲದ ಮತ್ತು ಬೇಸಿಗೆಯಲ್ಲಿನ ಉಷ್ಣೋಗ್ರತೆಗಳನ್ನು ಹೋಲಿಸಿರಿ. ಅವುಗಳಲ್ಲಿ ಹೋಲಿಕೆ ಮತ್ತು ವ್ಯತ್ಯಾಸಗಳೇನು? ಸಮುದ್ರದಿಂದ ದೂರವನ್ನು ಇದು ಹೇಗೆ ತಿಳಿಯಪಡಿಸುತ್ತದೆ.
- ಕ್ಲೈಮೋಗ್ರಾಫ್‌ಗಳನ್ನು ಉಪಯೋಗಿಸಿ ಜೈಪುರ ಮತ್ತು ಚೆನ್ನೈಗಳ ನಡುವೆ ಇರುವ ಉಷ್ಣೋಗ್ರತೆಗಳ ವ್ಯತ್ಯಾಸಗಳನ್ನು ವಿವರಿಸಿರಿ.

- ಸಿಮ್ಲಾ ಮತು ದೆಹಲಿಗಳು ಬೇರೆ ಬೇರೆ ಅಕ್ಷಾಂಶಗಳ ಮೇಲೆ ಇವೆಯೇ? ನಿಮ್ಮ ಅಟ್ಲಾಸನ್ನು ಪರಿಶೀಲಿಸಿ ಹೇಳಿರಿ? ಬೇಸಿಗೆಯಲ್ಲಿ ದೆಹಲಿಗಿಂತ ಸಿಮ್ಲಾದಲ್ಲಿ ಚಳಿ ಇರುತ್ತದೆಯೇ?
- ಬೇಸಿಗೆ ಕಾಲದಲ್ಲಿ ಕೊಲ್ಕತ್ತದೊಂದಿಗೆ ಹೋಲಿಸಿದರೆ ಡಾರ್ಜಿಲಿಂಗ್‌ನಲ್ಲಿ ವಾತಾವರಣ ಏಕೆ ಆಹ್ಲಾದಕರವಾಗಿರುತ್ತದೆ?

3. ಭೌಗೋಳಿಕ ಸ್ವರೂಪ

ಸಮುದ್ರಮಟ್ಟದಿಂದ ಎತ್ತರಕ್ಕೆ ಹೋದಂತೆಲ್ಲಾ ಉಷ್ಣೋಗ್ರತೆ ಕಡಿಮೆಯಾಗುತ್ತದೆ ಎಂದು ನಿಮಗೆ ಗೊತ್ತು. ಆದ್ದರಿಂದ ಮೈದಾನ ಪ್ರದೇಶಗಳಿಗಿಂತ ಬೆಟ್ಟಗಳು, ಪರ್ವತಗಳ ಮೇಲೆ ಉಷ್ಣೋಗ್ರತೆ ಕಡಿಮೆಯಾಗಿರುತ್ತದೆ. ಆದ್ದರಿಂದ ಒಂದು ಪ್ರದೇಶದ ವಾಯುಗುಣವನ್ನು ಆ ಪ್ರದೇಶದ ಎತ್ತರ ಕೂಡಾ ಪ್ರಭಾವಿತಗೊಳಿಸುತ್ತದೆ. ತೀವ್ರವಾದ ಬೇಸಿಗೆಯ ತಿಂಗಳುಗಳಲ್ಲಿ ಕೂಡಾ ಹಿಮಾಲಯದ ಸಿಮ್ಲಾ, ಗುಲ್ಮಾರ್ಗ್, ನೈನಿತಾಲ್, ಡಾರ್ಜಿಲಿಂಗ್‌ನಂತಹವು ಬೇಸಿಗೆ ಬಿಡದಿಗಳಾಗಿದ್ದು ಬಹಳ ತಂಪಾಗಿರುತ್ತವೆ ಎಂದು ನೀವು ಕೇಳಿಯೇ ಇರುತ್ತೀರಿ. ಅದೇರೀತಿ ಪಶ್ಚಿಮ ಘಟ್ಟಗಳ ಕೊಡೈಕೆನಾಲ್, ಊಟಿಯಂತಹ ಪ್ರಾಂತಗಳಲ್ಲಿ ತೀರ ಪ್ರಾಂತಗಳಿಗಿಂತ ಉಷ್ಣೋಗ್ರತೆಗಳು ಕಡಿಮೆಯಾಗಿರುತ್ತವೆ.

4. ವಾತಾವರಣದಲ್ಲಿ ಮೇಲ್ಮೈ ಗಾಳಿಯ ಪ್ರಸಾರ

ಉತ್ತರಾರ್ಧಗೋಳದಲ್ಲಿ ಉಪ ಆಯನರೇಖಾ ಅಧಿಕ ಒತ್ತಡದಿಂದ ಶಾಶ್ವತ ಪವನಗಳು ಏರ್ಪಡುತ್ತವೆ. ಇವು ಭೂಮಧ್ಯರೇಖೆಯ ಹತ್ತಿರ ಇರುವ ಅಲ್ಪ ಒತ್ತಡ ಪ್ರದೇಶದ ಕಡೆಗೆ ಪಶ್ಚಿಮ ದಿಶೆಯಲ್ಲಿ ಪ್ರಯಾಣಿಸುತ್ತವೆ. ಇವುಗಳನ್ನು 'ವ್ಯಾಪಾರ ಪವನಗಳು' (Trade Winds) ಎನ್ನುತ್ತಾರೆ. 'ಟ್ರೇಡ್' ಎಂಬ ಜರ್ಮನ್ ಪದಕ್ಕೆ 'ಟ್ರಾಕ್' ಎಂದು ಅರ್ಥ. ಅಂದರೆ ಒಂದೇ ದಿಶೆಯಲ್ಲಿ ಸ್ಥಿರವಾಗಿ ಪ್ರಯಾಣಿಸುವ ಗಾಳಿಗಳು ಎಂದರ್ಥ. ಶುಷ್ಕ ಈಶಾನ್ಯ ಪವನಗಳ ಪಟ್ಟಿಗಳಲ್ಲಿ ಭಾರತದೇಶ ಇದೆ.

ಭಾರತದೇಶದ ವಾಯುಗುಣವು ಮೇಲ್ಮೈ ವಾಯು ಪ್ರವಾಹಗಳಿಂದ ಕೂಡಾ ಪ್ರಭಾವಿತವಾಗುತ್ತದೆ. ಈ ಪ್ರವಾಹಗಳನ್ನು ಜೆಟ್ ಪ್ರವಾಹ ಎನ್ನುತ್ತಾರೆ. ನೆಲದಿಂದ 12,000 ಮೀಟರ್ ಎತ್ತರದಲ್ಲಿ ಸಣ್ಣನೆಯ ಪಟ್ಟಿಗಳಲ್ಲಿ ವೇಗವಾಗಿ ಪ್ರವಹಿಸುವ ಗಾಳಿಗಳಿವು. ಈ ಗಾಳಿಯ ವೇಗ ಗಂಟೆಗೆ ಬೇಸಿಗೆಯಲ್ಲಿ 110 ಕಿಲೋಮೀಟರುಗಳು, ಚಳಿಗಾಲದಲ್ಲಿ 184 ಕಿಲೋಮೀಟರ್‌ಗಳ ನಡುವೆ ಇರುತ್ತದೆ. 25^0 ಉತ್ತರ ಅಕ್ಷಾಂಶದ ಹತ್ತಿರ ಪೂರ್ವದ ಜೆಟ್ ಪ್ರವಾಹ ಏರ್ಪಡುತ್ತದೆ. ಇಂತಹ ಜೆಟ್ ಪ್ರವಾಹದಿಂದ ಸುತ್ತಲಿರುವ ಉಷ್ಣೋಗ್ರತೆ ತಂಪಾಗುತ್ತದೆ. ಪೂರ್ವದ ಜೆಟ್‌ಪ್ರವಾಹದ ತಂಪಾಗಿಸುವ ಈ ಪ್ರಕ್ರಿಯೆಯಿಂದ ಅಲ್ಲಿರುವ ಮೋಡಗಳು ಮಳೆಯನ್ನು ಸುರಿಸುತ್ತವೆ.

SCERT TELANGANA

ಭಾರತದೇಶದ ಕಾಲಗಳು

ಚಳಿಗಾಲ

ಭಾರತದೇಶ ಭೂಭಾಗದ ಮೇಲೆ ಉಷ್ಣೋಗ್ರತೆಗಳು ನವೆಂಬರ್ ಮಧ್ಯದಿಂದ ಗಣನೀಯವಾಗಿ ಕಡಿಮೆಯಾಗುತ್ತವೆ. ಈ ಚಳಿಗಾಲವು ಫೆಬ್ರವರಿ ಮಧ್ಯದವರೆಗೆ ಮುಂದುವರೆಯುತ್ತದೆ. ಜನವರಿಯಲ್ಲಿ ಸಾಧಾರಣವಾಗಿ ಅತಿಹೆಚ್ಚು ಚಳಿ ಇರುತ್ತದೆ. ದೇಶದ ಕೆಲವು ಪ್ರಾಂತ್ಯಗಳಲ್ಲಿ ಉಷ್ಣೋಗ್ರತೆ 10^{0}ಸೆಲ್ಸಿಯಸ್‌ಗಿಂತ ಕಡಿಮೆ ಇರುತ್ತದೆ. ಮುಖ್ಯವಾಗಿ ಉತ್ತರ ಭಾರತದಲ್ಲಿ ಅತ್ಯಲ್ಪ ಉಷ್ಣೋಗ್ರತೆಗಳು ದಾಖಲಾಗುತ್ತವೆ. ದಕ್ಷಿಣ ಭಾರತದೇಶದಲ್ಲಿ ಅದರಲ್ಲೂ ಕರಾವಳಿ ತೀರಗಳಲ್ಲಿ ಉಷ್ಣೋಗ್ರತೆಗಳು ಮಧ್ಯಸ್ಥವಾಗಿ ಅಂದರೆ 20^{0}C ಗಿಂತ ಹೆಚ್ಚು ಇದ್ದು , ಆಹ್ಲಾದಕರ ವಾಗಿರುತ್ತದೆ.

- ಆಂಧ್ರಪ್ರದೇಶದಲ್ಲಿ ಜನವರಿಯಲ್ಲಿ ಸರಾಸರಿ ಉಷ್ಣೋಗ್ರತೆ ಎಷ್ಟು?
- ನಿಮ್ಮ ಅಟ್ಲಾಸನ್ನು ಉಪಯೋಗಿಸಿ 15^{0}C ಉಷ್ಣೋಗ್ರತೆ ಇರುವ ಕೆಲವು ಪ್ರದೇಶಗಳನ್ನು ಗುರುತಿಸಿರಿ.
- ಸರಾಸರಿ 25^{0}C ಉಷ್ಣೋಗ್ರತೆ ಇರುವ ಪ್ರದೇಶಗಳ ಹತ್ತಿರ 20^{0}C ಉಷ್ಣೋಗ್ರತೆ ಇರುವ ಸಣ್ಣ ವೃತ್ತಾಕಾರ ಪ್ರದೇಶವಿದೆ. ಇದು ಹೇಗೆ ಸಾಧ್ಯ ?

ಕೆಳಗಿನ ನಕ್ಷೆಗಳಲ್ಲಿನ ರೇಖೆಗಳು ಜನವರಿಯಲ್ಲಿ ಒಂದೇ ಸರಾಸರಿ ಉಷ್ಣೋಗ್ರತೆ ಇರುವ ಪ್ರಾಂತ್ಯಗಳನ್ನು ತೋರಿಸುತ್ತದೆ.

ಚಳಿಗಾಲದಲ್ಲಿ ನಿರ್ಮಲವಾದ ಆಕಾಶ, ಗಾಳಿಯಲ್ಲಿ ಕಡಿಮೆ ತೇವಾಂಶ, ತಂಪಾದ ಗಾಳಿಯಿಂದ ಹವಾಮಾನವು ಆಹ್ಲಾದಕರವಾಗಿರುತ್ತದೆ. ಮೆಡಿಟೇರಿಯನ್ ಸಮುದ್ರದಿಂದ ಬೀಸುವ ಚಂಡಮಾರುತಗಳು(ಇವುಗಳನ್ನು ಪಶ್ಚಿಮ ವಿಕ್ಷೋಭಗಳು ಎನ್ನುತ್ತಾರೆ) ಉತ್ತರ ಭಾರತದೇಶದಲ್ಲಿ ಅತಿಹೆಚ್ಚು ಮಳೆ ಬೀಳಲು ಕಾರಣವಾಗುತ್ತವೆ. ಸಾಧಾರಣವಾಗಿ ರಬಿ ಕಾಲದಲ್ಲಿ ಸಾಗುವಳಿಮಾಡುವ ಗೋಧಿ ಬೆಳೆಗೆ ಈ ಮಳೆ ಎಷ್ಟೋ ಉಪಯೋಗಕಾರಿಯಾಗಿರುತ್ತದೆ.



ನಕ್ಷೆ 1: ಜನವರಿ ತಿಂಗಳಲ್ಲಿ ಭಾರತದೇಶದ ಸರಾಸರಿ ಉಷ್ಣೋಗ್ರತೆ (^{0}C ಗಳಲ್ಲಿ)

ಉತ್ತರಾರ್ಧ ಗೋಳದ ವ್ಯಾಪಾರ ಪವನಗಳ ಪಟ್ಟಿಯಲ್ಲಿ ಭಾರತದೇಶ ಇದೆ. ಭೂಭಾಗದಿಂದ ಸಮುದ್ರದ ಮೇಲಕ್ಕೆ ಬೀಸುವ ಈಶಾನ್ಯ ಪವನಗಳು ಶುಷ್ಕವಾಗಿರುತ್ತವೆ. ಆದರೆ ಇವು ಬಂಗಾಳಕೊಲ್ಲಿ ಯನ್ನು ದಾಟುವ ಕ್ರಮದಲ್ಲಿ ಸ್ವಲ್ಪ ತೇವವನ್ನು ಗ್ರಹಿಸುವುದರಿಂದ ತಮಿಳುನಾಡಿನ ಕೋರಮಂಡಲ ಕರಾವಳಿ ಪ್ರದೇಶದಲ್ಲಿ ಸ್ವಲ್ಪ ಮಳೆ ಬರುತ್ತದೆ.

SCERT TELANGANA

ಬೇಸಿಗೆಕಾಲ

ಬೇಸಿಗೆಕಾಲದಲ್ಲಿ ದೇಶದ ದಕ್ಷಿಣಭಾಗದಿಂದ ಉತ್ತರಕ್ಕೆ ಹೋದಂತೆಲ್ಲಾ ಸರಾಸರಿ ಉಷ್ಣೋಗ್ರತೆಗಳು ಹೆಚ್ಚುತ್ತಿರುತ್ತವೆ. ಉತ್ತರ ಭಾರತದೇಶದ ಮೈದಾನಗಳಲ್ಲಿ ಗರಿಷ್ಠ ಉಷ್ಣೋಗ್ರತೆಗಳು ಕ್ರಮವಾಗಿ 37^0C ದಾಟುತ್ತವೆ. ಮೇ ತಿಂಗಳ ಮಧ್ಯಕಾಲಕ್ಕೆ ಭಾರತದ ಅನೇಕ ಪ್ರಾಂತಗಳಲ್ಲಿ ಪ್ರತ್ಯೇಕವಾಗಿ ವಾಯುವ್ಯ ಮೈದಾನದಲ್ಲಿಯೂ, ಮಧ್ಯ ಭಾರತದಲ್ಲಿಯೂ ಹಗಲಿನ ಉಷ್ಣೋಗ್ರತೆಗಳು 41^0ರಿಂದ 42^0Cಗಳು ದಾಖಲಾಗುತ್ತವೆ. ಕನಿಷ್ಠ ಉಷ್ಣೋಗ್ರತೆಗಳು ಸಹ 20^0C ಗಿಂತ ಕಡಿಮೆ ಇರುವುದಿಲ್ಲ. ಉತ್ತರದ ಮೈದಾನಗಳಲ್ಲಿ ಬಿಸಿಯಾಗಿರುವ, ಶುಷ್ಕವಾಗಿರುವ ಸ್ಥಾನಿಕ ಪವನಗಳು ಬೀಸುತ್ತವೆ. ಇವುಗಳನ್ನು 'ಲೂ ಪವನಗಳು' ಎನ್ನುತ್ತಾರೆ.

ನಕ್ಷೆ 2: ^{0}Cಗಳಲ್ಲಿ ಸರಾಸರಿ ಉಷ್ಣೋಗ್ರತೆ (ಮೇ ತಿಂಗಳು)



ಸಾಧಾರಣವಾಗಿ ಬೇಸಿಗೆ ಮುಗಿಯುವ ಕಾಲಕ್ಕೆ ದಕ್ಷಿಣ ಪ್ರಸ್ಥಭೂಮಿಯಲ್ಲಿ ಮೊದಲ ಮಳೆಯ ಹನಿ ಬೀಳುತ್ತದೆ. ಭಾರತದೇಶ ಪರ್ಯಾಯ ದ್ವೀಪ ಪ್ರದೇಶದಲ್ಲಿ ಮಾವು, ಇತರ ಹಣ್ಣುಗಳು ಬೇಗನೆ ಪಕ್ವವಾಗಲು (ಹಣ್ಣಾಗಲು) ಈ ಮಳೆ ಸಹಕರಿಸುತ್ತದೆ. ಆದ್ದರಿಂದ ಇವುಗಳನ್ನು ಆಂಧ್ರಪ್ರದೇಶದಲ್ಲಿ ಸ್ಥಾನಿಕವಾಗಿ 'ಮಾವಿನ ಹನಿಗಳು' ಎಂದು ಕರೆಯುತ್ತಾರೆ.

- ಇದಕ್ಕೆ ಮೊದಲು ಕೊಟ್ಟಿರುವ ಕ್ಲೈಮೋಗ್ರಾಫ್‌ಗಳ (4.1ಆ4.4) ಆಧಾರವಾಗಿ ನಾಲ್ಕು ಪಟ್ಟಣಗಳ ಮೇ ತಿಂಗಳ ಸರಾಸರಿ ಉಷ್ಣೋಗ್ರತೆಗಳನ್ನು ತಿಳಿದುಕೊಂಡು ಅವುಗಳನ್ನು ಮೇಲಿನ ನಕ್ಷೆಯಲ್ಲಿ ಗುರ್ತಿಸಿರಿ.

ಋತುಪವನಗಳ ಪ್ರವೇಶ

ಭಾರತದೇಶದಲ್ಲಿನ ವಾಯುಗುಣವು ಋತುಪವನಗಳಿಂದ ಬಹಳಷ್ಟು ಪ್ರಭಾವಿತವಾಗುತ್ತದೆ. ಹಿಂದಿನ ಕಾಲದಲ್ಲಿ ಭಾರತದೇಶಕ್ಕೆ ಬಂದ ನಾವಿಕರು ಗಾಳಿ ಬೀಸುವ ದಿಕ್ಕು ಕ್ರಮ ತಪ್ಪದಂತೆ ಬದಲಾಗುವುದನ್ನು ಗಮನಿಸುತ್ತಿದ್ದರು. ಈ ಗಾಳಿಯ ಸಹಾಯದಿಂದ ಅವರು ಭಾರತದೇಶದ ತೀರದ ಕಡೆ ಪ್ರಯಾಣಿಸುತ್ತಿದ್ದರು. ಹೀಗೆ ಕಾಲಾನುಗುಣವಾಗಿ ಗಾಳಿಯ ದಿಕ್ಕು ಬದಲಾಗುವುದನ್ನು ಅರಬ್ ವರ್ತಕರು 'ಮಾನ್‌ಸೂನ್ ' ಎಂದು ಹೆಸರಿಟ್ಟರು. ಇದನ್ನೇ ನಾವಿಂದು ಋತುಪವನಗಳು ಎಂದು ಕರೆಯುತ್ತೇವೆ.

ಉಷ್ಣ ವಲಯದಲ್ಲೇ ಸುಮಾರು 20^0 ಉ. – 20^0 ದ. ಅಕ್ಷಾಂಶಗಳ ನಡುವೆ ಋತುಪವನಗಳು ಏರ್ಪಡುತ್ತವೆ. ಆಗ್ನೇಯ ಋತುಪವನಗಳು ದಕ್ಷಿಣಗೋಳಾರ್ಧದಲ್ಲಿ ಹಿಂದೂ ಮಹಾಸಮುದ್ರ ಮಾರ್ಗವಾಗಿ ಭೂಮಧ್ಯರೇಖೆಗೆ ಅಲ್ಪಒತ್ತಡ ಪ್ರದೇಶದ ಕಡೆ ಪ್ರಯಾಣಿಸುವ ಸಮಯದಲ್ಲಿ ನೀರಾವಿಯನ್ನು ತೆಗೆದುಕೊಂಡು ಹೋಗುತ್ತವೆ. ಭೂಮಧ್ಯರೇಖೆಯನ್ನು ದಾಟಿದ ನಂತರ ಈ ಗಾಳಿಗಳು ಭಾರತ ಉಪಖಂಡದ ಮೇಲೆ ಏರ್ಪಟ್ಟ ಅಲ್ಪಒತ್ತಡ ಪ್ರದೇಶದ ಕಡೆ ಪ್ರಯಾಣಿಸುತ್ತವೆ. ಭೂಮಿ ಬಿಸಿಯಾಗುವುದರಿಂದ ಭಾರತ ಉಪಖಂಡದ ಭೂಭಾಗದ ಮೇಲೆ ಪ್ರತ್ಯೇಕವಾಗಿ ಮಧ್ಯ ಭಾರತ, ಗಂಗಾನದಿ ಮೈದಾನ ಪ್ರದೇಶ ಮೇಲೆ ಕಡಿಮೆ ಒತ್ತಡ ಪ್ರದೇಶ ಏರ್ಪಟ್ಟಿರುತ್ತದೆ. ಇದರಿಂದ ಟಿಬೆಟ್ ಪ್ರಸ್ಥಭೂಮಿ ಕೂಡಾ ಬಹಳ ಬಿಸಿಯಾಗಿ ಬಲವಾದ ಊರ್ಧ್ವ (ಲಂಬ)ವಾಯು ಪ್ರವಾಹಗಳು ಏರ್ಪಡುತ್ತವೆ. ಪ್ರಸ್ಥಭೂಮಿಯಲ್ಲಿ 9 ಕಿಲೋಮೀಟರ್ ಎತ್ತರದಲ್ಲಿ ಕಡಿಮೆ ಒತ್ತಡ ಪ್ರದೇಶ ಏರ್ಪಡುತ್ತದೆ.

SCERT TELANGANA

ನಂತರ ಈ ಪವನಗಳು ನೈರುತಿ ಋತುಪವನಗಳಾಗಿ ತಮ್ಮ ಪ್ರಯಾಣವನ್ನು ಆರಂಭಿಸುತ್ತವೆ. ಭಾರತ ಪರ್ಯಾಯದ್ವೀಪವು ಈ ಪವನಗಳನ್ನು ಎರಡು ಶಾಖೆಗಳಾಗಿ ವಿಭಜಿಸುತ್ತದೆ. ಅವು : ಅರಬ್ಬೀ ಸಮುದ್ರ ಶಾಖೆ, ಬಂಗಾಳಕೊಲ್ಲಿ ಶಾಖೆ. ಅರಬ್ಬೀ ಸಮುದ್ರ ಶಾಖೆಯು ಭಾರತದೇಶದ ಪಶ್ಚಿಮ ತೀರವನ್ನು ಪ್ರವೇಶಿಸಿ ಉತ್ತರ ದಿಕ್ಕಿನ ಕಡೆ ನಡೆಯುತ್ತದೆ. ಬಂಗಾಳಕೊಲ್ಲಿ ಶಾಖೆ ಬಂಗಾಳದ ತೀರವನ್ನು, ಷಿಲ್ಲಾಂಗ್ ಪ್ರಸ್ಥಭೂಮಿಯ ದಕ್ಷಿಣ ಮುಖವನ್ನು ಪ್ರವೇಶಿಸುತ್ತದೆ.

ನಂತರ ಇದು ಪಶ್ಚಿಮವಾಗಿ ಗಂಗಾ ಕಣಿವೆಯ ಕಡೆ ಹೊರಳುತ್ತದೆ. ಈ ಎರಡು ಶಾಖೆಗಳು ಜೂನ್ ತಿಂಗಳ ಮೊದಲವಾರದಲ್ಲಿ ಭಾರತವನ್ನು ಸೇರುತ್ತವೆ. ಇದನ್ನೇ ನಾವು ಋತುಪವನ ಆರಂಭ ಎನ್ನುತ್ತೇವೆ. ನಾಲ್ಕರಿಂದ ಐದು ವಾರಗಳಲ್ಲಿ ಈ ಋತುಪವನಗಳು ಕ್ರಮವಾಗಿ ದೇಶವನ್ನೆಲ್ಲಾ ವ್ಯಾಪಿಸುತ್ತವೆ. ಭಾರತದೇಶದಲ್ಲಿ ಅತ್ಯಧಿಕ ವರ್ಷಾಪಾತ ನೈರುತಿ ಋತುಪವನ ಕಾಲದಲ್ಲಿ ಸಂಭವಿಸುತ್ತವೆ. ಪಶ್ಚಿಮ ತೀರದುದ್ದಕ್ಕೂ ಪಶ್ಚಿಮ ಘಟ್ಟಗಳ ಕಾರಣದಿಂದ, ಈಶಾನ್ಯ ಪ್ರದೇಶದಲ್ಲಿ ಎತ್ತರವಾದ ಬೆಟ್ಟಗಳಿಂದ ಆ ಪ್ರದೇಶದಲ್ಲಿ ವರ್ಷಾಪಾತ ಹೆಚ್ಚಾಗಿರುತ್ತದೆ. ಅರಬ್ಬೀ ಶಾಖೆಗೆ, ಮಳೆ ನೆರಳಿನ ಪ್ರದೇಶದಲ್ಲಿಯೂ, ಬಂಗಾಳಕೊಲ್ಲಿ ಶಾಖೆಗೆ ಸಮಾಂತರವಾಗಿಯೂ ಇರುವುದರಿಂದ ಈ ಕಾಲದಲ್ಲಿ ತಮಿಳುನಾಡಿನ ಕೋರಮಂಡಲ ತೀರದಲ್ಲಿ ಅಷ್ಟಾಗಿ ಮಳೆ ಬರುವುದಿಲ್ಲ.



ಚಿತ್ರ 4.3 : ಒತ್ತಡ ಮತ್ತು ಋತುಪವನಗಳು

ಋತುಪವನಗಳ ಹಿನ್ನಡೆ

ಬಿಸಿ ಹೆಚ್ಚುತ್ತಿರುವ ತಿಂಗಳುಗಳಿಂದ ಒಣ ಹವೆಇರುವ ಚಳಿ ಪರಿಸ್ಥಿತಿಗಳ ನಡುವೆ ಅಕ್ಟೋಬರ್, ನವಂಬರ್ ತಿಂಗಳುಗಳ ಸಂಧಿಕಾಲಗಳಾಗಿರುತ್ತವೆ. ಹಿನ್ನಡೆ ಋತುಪವನ ಕಾಲದಲ್ಲಿ ಆಕಾಶವು ನಿರ್ಮಲವಾಗಿದ್ದು, ಉಷ್ಣೋಗ್ರತೆಗಳು ಹೆಚ್ಚುತ್ತಿರುತ್ತವೆ. ಭೂಮಿ ಇನ್ನೂ ತೇವಾಂಶದಿಂದ ಕೂಡಿರುತ್ತದೆ. ಅಧಿಕ ಉಷ್ಣೋಗ್ರತೆ, ಗಾಳಿಯಲ್ಲಿ ಅಧಿಕ ತೇವಾಂಶದ ಕಾರಣದಿಂದ ಹವಾಮಾನವು ಸೆಖೆಯಿಂದ ಕೂಡಿರುತ್ತದೆ. ಇದನ್ನೇ ಸಾಧಾರಣವಾಗಿ ' ಅಕ್ಟೋಬರ್‌ಬಿಸಿ' ಎನ್ನುತ್ತಾರೆ.

ಇದಕ್ಕೂ ಮೊದಲು ವಾಯುವ್ಯ ಭಾರತದಲ್ಲಿನ ಕಡಿಮೆ ಒತ್ತಡ ಪರಿಸ್ಥಿತಿಗಳು ನವಂಬರ್ ಪ್ರಾರಂಭದಲ್ಲಿ ಬಂಗಾಳಕೊಲ್ಲಿಯಲ್ಲಿ ಏರ್ಪಡುತ್ತದೆ. ಕಡಿಮೆ ಒತ್ತಡ ಪ್ರದೇಶವು ಪೂರ್ತಿಯಾಗಿ ದಕ್ಷಿಣಕ್ಕೆ ಬದಲಾಗುತ್ತದೆ. ಈ ಸಮಯದಲ್ಲಿಅಂಡಮಾನ್ ಪ್ರದೇಶದಲ್ಲಿ ಚಂಡಮಾರುತಗಳು, ತುಫಾನುಗಳು ಏರ್ಪಡುತ್ತವೆ. ಈ ಉಷ್ಣವಲಯ ತುಫಾನುಗಳು ಬಹಳ ವಿನಾಶಕರವಾಗಿ ಇರುತ್ತವೆ. ಗೋದಾವರಿ, ಕೃಷ್ಣಾ, ಕಾವೇರಿ ನದಿಗಳ ಡೆಲ್ಟಾ ಪ್ರಾಂತಗಳು ಇವುಗಳ ಪ್ರತಾಪಕ್ಕೆ ಗುರಿಯಾಗುತ್ತವೆ. ಯಾವುದೇ ಒಂದು ವರ್ಷವೂ ವಿಕೋಪಗಳಿಲ್ಲದೆ ಇರುವುದಿಲ್ಲ. ಈ ತುಫಾನುಗಳು ಆಗಾಗ್ಗೆ ಸುಂದರ್‌ಬನ್ ಅರಣ್ಯಗಳನ್ನು, ಬಾಂಗ್ಲಾದೇಶವನ್ನು ಸಹ ತಾಕುತ್ತವೆ. ಕೋರಮಂಡಲ ಪ್ರಾಂತದಲ್ಲಿ ಅತಿ ಹೆಚ್ಚು ಮಳೆ ಈ ತುಫಾನುಗಳಿಂದ ಮತ್ತು ಕಡಿಮೆ ಒತ್ತಡಗಳಿಂದ ಬರುತ್ತವೆ.

SCERT TELANGANA



ಚಿತ್ರ 3 : ಭಾರತದೇಶ - ನೈರುತಿ ಋತುಪವನಗಳ ಪ್ರವೇಶ



ಚಿತ್ರ 4 : ಭಾರತದೇಶ - ನೈರುತಿ ಋತುಪವನಗಳ ನಿಷ್ಕ್ರಮಣ

ಭಾರತದೇಶ ಸಂಪ್ರದಾಯದ ಪ್ರಕಾರ ವರ್ಷವನ್ನು ಎರಡು ತಿಂಗಳಿರುವ ಆರು ಋತುಗಳಾಗಿ ವಿಭಜಿಸಲಾಗಿದೆ. ಉತ್ತರ, ಮಧ್ಯ ಭಾರತದೇಶ ಪ್ರಜೆಗಳು ಅನುಭವಿಸುವ ಸಾಧಾರಣ ವಾಯುಗುಣಗಳ ಆಧಾರವಾಗಿ ಈ ಋತುಗಳ ವಿಭಜನೆ ಮಾಡಲಾಗಿದೆ. ಉತ್ತರ ಭಾರತ ದೇಶಕ್ಕೂ, ದಕ್ಷಿಣ ಭಾರತದೇಶಕ್ಕೂ ಈ ಋತುಗಳ ವಿಭಜನೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ.

ಸಾಂಪ್ರದಾಯ ಭಾರತ ಕಾಲಗಳು

ಋತುಗಳು	ಕನ್ನಡ ತಿಂಗಳುಗಳು (ಚಂದ್ರಮಾನ ವರ್ಷ)	ಇಂಗ್ಲೀಷು ತಿಂಗಳುಗಳು (ಸೂರ್ಯಮಾನ ವರ್ಷ)
ವಸಂತ	ಚೈತ್ರ - ವೈಶಾಖ	ಮಾರ್ಚ್ - ಏಪ್ರಿಲ್
ಗ್ರೀಷ್ಮ	ಜ್ಯೇಷ್ಠ - ಆಷಾಢ	ಮೇ - ಜೂನ್
ವರ್ಷ	ಶ್ರಾವಣ - ಬಾದ್ರಪದ	ಜುಲೈ - ಆಗಷ್ಟು
ಶರತ್	ಆಶ್ವೀಜ - ಕಾರ್ತೀಕ	ಸೆಪ್ಟೆಂಬರ್ - ಅಕ್ಟೋಬರ್
ಹೇಮಂತ	ಮಾರ್ಗಶಿರ - ಪುಷ್ಯ	ನವೆಂಬರ್ - ಡಿಶೆಂಬರ್
ಶಿಶಿರ	ಮಾಘ - ಪಾಲ್ಗುಣ	ಜನವರಿ - ಫೆಬ್ರವರಿ

SCERT TELANGANA

ಭೂಗೋಳವು ಬಿಸಿಯಾಗುವುದು, ವಾಯುಗುಣದಲ್ಲಿ ಬದಲಾವಣೆ

ಉರಿಯುತ್ತಿರುವ ಗೋಳದಿಂದ ಭೂಗೋಳವು ಏರ್ಪಟ್ಟ ಕ್ರಮದಲ್ಲಿ ಸಾಕಷ್ಟು ವಾಯುಗಳೂ ಕೂಡಾ ಬಿಡುಗಡೆಯಾದವು. ಭೂಮಿಯ ಗುರುತ್ವಾಕರ್ಷಣ ಶಕ್ತಿಯಿಂದ ಈ ವಾಯುಗಳು ಅಂತರಿಕ್ಷದಲ್ಲಿ ತಪ್ಪಿಸಿಕೊಳ್ಳಲಾಗಲಿಲ್ಲ. ಭೂಮ್ಯಾಕರ್ಷಣ ಶಕ್ತಿ ಈ ವಾಯುಗಳನ್ನು ಇನ್ನೂ ಹಿಡಿದಿಟ್ಟುಕೊಂಡಿದೆ. ಈ ಕಾರಣದಿಂದ ಭೂಮಿಯ ಸುತ್ತಲೂ ವಾಯುಪೊರೆಯೊಂದು ಏರ್ಪಟ್ಟಿದೆ. ಇದರಿಂದ ಸಾಕಷ್ಟು ಮುಖ್ಯ ಪ್ರಯೋಜನಗಳಿವೆ. ಉದಾಹರಣೆಗೆ ನಾವು ಉಸಿರಾಡುವ ಪ್ರಾಣವಾಯು(ಆಕ್ಸಿಜನ್) ಸೂರ್ಯನ ಅತಿ ನೇರಳಾತೀತ ಕಿರಣಗಳಿಂದ ಕಾಪಾಡುವ ಓಝೋನ್ ಪೊರೆ, ನಮಗೆ ಅವಶ್ಯಕವಾದ ಸಸಾರಜನಕ (ಪ್ರೋಟೀನ್) ಗಳನ್ನು ತಯಾರಿಸಿಕೊಳ್ಳಲು ಸಸ್ಯಗಳು ಬಳಸಿಕೊಳ್ಳುವ ಸಾರಜನಕ(ನೈಟ್ರೋಜನ್) ಮೊದಲಾದವು. ಅಷ್ಟೇ ಅಲ್ಲದೇ ಈ ವಾತಾವರಣವು ನಮ್ಮನ್ನು ಬಿಸಿಯಾಗಿಡುತ್ತದೆ. ಜಲಚಕ್ರವು ಸಹ ಇದರ ಜೊತೆಯಲ್ಲೇ ಏರ್ಪಡುತ್ತದೆ. (ಒಂಬತ್ತನೇ ತರಗತಿಯ 4ನೇ ಅಧ್ಯಾಯದಲ್ಲಿ ಚಿತ್ರ ನೋಡಿರಿ)

ವಾತಾವರಣವು ಮಾಡುವ ಮುಖ್ಯವಾದ ಕೆಲಸಗಳಲ್ಲಿ ನಮ್ಮನ್ನು ಬಿಸಿಯಾಗಿರಿಸುವುದು ಒಂದು. ಅದು ಭೂಮಿಯನ್ನು ಮುಚ್ಚುವ ಹೊದಿಕೆಯಂತೆ ಕೆಲಸ ಮಾಡುತ್ತದೆ. ಭೂಮಿಯನ್ನು ಸೇರುವ ಸೌರಶಕ್ತಿಯೆಲ್ಲವೂ ಅಂತರಿಕ್ಷದಲ್ಲಿ ವಿಕಿರಣ ಹೊಂದದಂತೆ ವಾತಾವರಣವು ಸ್ವಲ್ಪ ಶಕ್ತಿಯನ್ನು ಹಿಡಿದಿಟ್ಟುಕೊಳ್ಳುತ್ತದೆ ಎಂದು 9ನೇ ತರಗತಿಯಲ್ಲಿ ತಿಳಿದುಕೊಂಡಿದ್ದೇವೆ. ಇದನ್ನೇ ಹಸಿರು ಮನೆ ಪ್ರಭಾವ ಎನ್ನುತ್ತೇವೆ. ಭೂಮಿಯ ಮೇಲೆ ಜೀವಿ ಬದುಕಲು ಇದು ಬಹಳ ಮುಖ್ಯ. ಭೂಮಿಯ ಮೇಲೆ ವಾತಾವರಣವೇ ಇಲ್ಲದೇ ಹೋಗಿದ್ದರೆ ಅದು ಬಹಳ ತಂಪಾಗಿ ಇರುತಿತ್ತು.

ಆದರೆ 19ನೇ ಶತಮಾನದಿಂದ ಭೂಗೋಳವು ಬಹುಬೇಗ ವೇಗವಾಗಿ ಬಿಸಿಯಾಗುತ್ತದೆ. ಇದು ಎಲ್ಲರ ಆಂದೋಳನಕ್ಕೆ ಕಾರಣವಾಗಿದೆ. ಏಕೆ? ಭೂಮಿಯ ಚರಿತ್ರೆಯಲ್ಲಿ ಭೂಮಿ ಕೆಲವು ಸಲ ಬಹಳ ಬಿಸಿಯಾಗಿದೆ. ಎಷ್ಟೋ ಬಾರಿ ಮಂಜಿನ ಗಡ್ಡೆಯಾಗಿ ಬದಲಾಗಿದೆ. ಆದರೆ ಈಗ ಭೂಮಿ ಬಿಸಿಯಾಗುವುದರ ಹಿಂದಿನ ಕಾರಣವೇನು?

ಇದಕ್ಕೆ ಮೊದಲು ಭೂಮಿ ಬಿಸಿಯಾಗಲು ಅಥವಾ ತಂಪಾಗಲು ಬಹಳ ಸಮಯ ಹಿಡಿಯುತ್ತಿತ್ತು. ಇದರಿಂದ ಭೂಮಿಯ ಮೇಲಿನ ಪ್ರಾಣಿಗಳು ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗಲು ಸಮಯ ಸಿಗುತಿತ್ತು. ಆದರೆ ಈಗ ಭೂಮಿ ಬಹಳ ಬೇಗನೆ ಬಿಸಿಯಾಗುತ್ತಿದೆ. ಇದು ವಿನಾಶಕಾರಿ ಬದಲಾವಣೆಗೆ ಕಾರಣವಾಗಬಹುದು. ಕೈಗಾರಿಕಾ ಕ್ರಾಂತಿಯ ನಂತರ ಭೂಮಿ ಬಿಸಿಯಾಗಲು ಮಾನವನ ಕ್ರಿಯೆಗಳೇ ಕಾರಣ. ಆದ್ದರಿಂದ ಪ್ರಸ್ತುತ ಭೂಮಿ ಬಿಸಿಯಾಗುವುದನ್ನು ಮಾನವಜನಿತ ಕಾರಣವಾಗಿ ಭೂಗೋಳ ಬಿಸಿಯಾಗುವಿಕೆ (AGW- Anthropogenic Global Warming) ಎನ್ನುತ್ತಾರೆ.

ಇತ್ತೀಚಿಗೆ ಶಾಸ್ತ್ರಜ್ಞರು ಉತ್ತರ ಅಕ್ಷಾಂಶಗಳ ಹತ್ತಿರ ಗಡ್ಡೆ ಕಟ್ಟಿದ ಟಂಡ್ರಾಗಳ ಕೆಳಗೆ (ಪ್ರಧಾನವಾಗಿ ಉತ್ತರ ರಷ್ಯಾ ವಿಶಾಲ ಭೂಭಾಗದ ಕೆಳಗೆ) ದೊಡ್ಡ ಪ್ರಮಾಣದಲ್ಲಿ ಮೀಥೇನ್ ವಾಯುವಿದೆ ಎಂದಿದ್ದಾರೆ. ಭೂಗೋಳದ ಉಷ್ಣೋಗ್ರತೆಗಳು ಹೆಚ್ಚಾಂದಂತೆಲ್ಲಾ ಟಂಡ್ರಾಗಳಲ್ಲಿ ಗಡ್ಡೆ ಕಟ್ಟಿದ ಮಂಜು ಮತ್ತಷ್ಟು ಕರಗುತ್ತದೆ. ಇದರಿಂದ ಮಂಜಿನ ಕೆಳಗಿರುವ ಮೀಥೇನ್ ವಾತಾವರಣದಲ್ಲಿ ಸೇರುತ್ತದೆ. ಇದರಿಂದ ಭೂಮಿ ಮತ್ತಷ್ಟು ಬಸಿಯಾಗುತ್ತದೆ. ಇದು ಒಂದು ವಿಷ ವಲಯವಾಗಿ ಬದಲಾಗುತ್ತದೆ. ಹಸಿರು ಮನೆ ಅನಿಲವಾಗಿ(Green house gas) ಕಾರ್ಬನ್ ಡೈ ಆಕ್ಸೈಡಿಗಿಂತ ಮೀಥೇನ್ ಮತ್ತಷ್ಟು ಶಕ್ತಿಯುತವಾಗಿ ಕೆಲಸ ಮಾಡುತ್ತದೆ.

ಮಾನವ ಜನಿತ ಕಾರಣಗಳಿಂದ ಭೂಗೋಳವು ಬಿಸಿಯಾಗುವುದು (AGW), ವಾಯುಗುಣದಲ್ಲಿ ಬದಲಾವಣೆ

ಈ ಮಾನವ ಜನಿತ ಕಾರಣಗಳಿಂದ ಭೂಮಿ ಬಿಸಿಯಾಗಿರುವುದು, ಭೂವ್ಯವಸ್ಥೆಯ ಉಷ್ಣೋಗ್ರತೆಯ ಹಂಚಿಕೆಯಲ್ಲಿ ಅನೇಕ ಬದಲಾವಣೆಗೆ ಕಾರಣವಾಗುತ್ತಿದೆ. ವಾತಾವರಣದಿಂದ, ಸಮುದ್ರಪ್ರವಾಹಗಳಿಂದ, ಭೂಗೋಳದ ಮೇಲೆ ಉಷ್ಣದ ಪುನಃ ಪ್ರಸಾರ ಹೇಗೆ ಉಂಟಾಗುತ್ತದೋ ನೆನಪಿಸಿಕೊಳ್ಳಿರಿ. ಭೂಗೋಳವು ಬಿಸಿಯಾಗುವುದರಿಂದ ಈ ವ್ಯವಸ್ಥೆ ಅಸ್ತವ್ಯಸ್ತವಾಗುತ್ತದೆ. ಆದರೆ ನಡೆಯುತ್ತಿರುವ ಬದಲಾವಣೆಗಳಿಗಿಂತ, ಅವುಗಳ ವೇಗ ಚಿಂತಾಜನಕವಾಗಿದೆ.

SCERT TELANGANA

ಉಷ್ಣ ಪುನಃ ಪ್ರಸರಣವು ಗಂದರಗೋಳಕ್ಕೆ ಗುರಿಯಾಗುವುದರಿಂದ ಹವಾಮಾನ, ವಾಯುಗುಣಗಳ ವಿಧಾನದಲ್ಲಿ ಬದಲಾವಣೆಗಳು ಬರುತ್ತವೆ. ಹವಾಮಾನದ ಅಲ್ಪಕಾಲಿಕ ಬದಲಾವಣೆಗಳು ಒಂದಕ್ಕೊಂದು ಜೊತೆಯಾಗಿ ದೀರ್ಘಕಾಲದ (ವಾಯುಗುಣದ) ಬದಲಾವಣೆಗಳಾಗುತ್ತವೆ.

ಹಸಿರು ಮನೆ ಅನಿಲಗಳ ಹೊರಸೂಸುವಿಕೆಗಳನ್ನು ಎಲ್ಲಾ ದೇಶಗಳಲ್ಲಿ ಕಡಿಮೆಮಾಡಲು, ಒಪ್ಪಂದ ಮಾಡಿಕೊಳ್ಳಲು ನಡೆಯುತ್ತಿರುವ ಅಂತರಾಷ್ಟ್ರೀಯ ಪ್ರಯತ್ನಗಳೂ ಇನ್ನೂ ಫಲಕಾರಿಯಾಗಿಲ್ಲ. ಈ ಸಮಸ್ಯೆಯನ್ನು ಎದುರಿಸಲು ವಾಯುಗುಣ ಬದಲಾವಣೆಯ ಮೇಲೆ ಪ್ರಪಂಚದೇಶಗಳ ನಡುವೆ ಒಂದು ಆಂತರಿಕ ಸರಕಾರಿ ಸಂಘ (IPCC–Inter-governmental Panel on Climate Change) ಒಂದು ಏರ್ಪಾಟಾಗಿದೆ. ಮಾನವ ಕಾರಣದಿಂದ ಭೂಮಿ ಬಿಸಿಯಾಗುವುದನ್ನು ತಡೆಯಲು, ಹವಾಮಾನದ ಬದಲಾವಣೆಯ ವೇಗವನ್ನು ನಿಯಂತ್ರಿಸಲು ಒಂದು ಒಪ್ಪಂದವನ್ನು ಏರ್ಪಡಿಸಿಕೊಳ್ಳಲು ಈ ಸಂಘವು ಅನೇಕ ದೇಶಗಳೊಂದಿಗೆ ಅನೇಕ ಸಮಾವೇಷಗಳನ್ನು ಏರ್ಪಡಿಸಿದೆ. ಆದರೆ ಇವುಗಳಲ್ಲಿ ಯಾವುದೂ ಫಲಕಾರಿಯಾಗಲಿಲ್ಲ. 2015 ನೇ ವರ್ಷದಲ್ಲಿ ಪ್ರಪಂಚ ದೇಶಗಳ ಅಂತರರಾಷ್ಟ್ರೀಯ ಸರಕಾರಗಳ ಒಕ್ಕೂಟದ ಸಮಾವೇಶ ಪ್ಯಾರಿಸ್‌ನಲ್ಲಿ ನಡೆಯಿತು. ಇದರಲ್ಲಿ ಹಸಿರುಮನೆ ಅನಿಲದ ಪ್ರಭಾವದಿಂದ ಪ್ರಪಂಚದ ಸರಾಸರಿ ಉಷ್ಣೋಗ್ರತೆ ಮಟ್ಟವನ್ನು 2^0 ಸೆಲ್ಸಿಯಸ್‌ನಷ್ಟು ಇಳಿಸಿ ಕೈಗಾರಿಕೀಕರಣವನ್ನು ಪೂರ್ವಸ್ಥಿತಿಗೆ ಕಡಿತಗೊಳಿಸಬೇಕೆಂಬ ಒಪ್ಪಂದಕ್ಕೆ 195 ದೇಶಗಳು ಸಹಿ ಹಾಕಿದವು.

ಮುಖ್ಯವಾಗಿ 'ಅಭಿವೃದ್ಧಿ ಹೊಂದಿದ 'ದೇಶಗಳು (ಪ್ರಧಾನವಾಗಿ ಪಾಶ್ಚಾತ್ಯ ಕೈಗಾರಿಕೆ, ಆರ್ಥಿಕವಾಗಿ ಚೆನ್ನಾಗಿ ಅಬಿವೃದ್ಧಿ ಹೊಂದಿದ ದೇಶಗಳು) ಮತ್ತು 'ಅಭಿವೃದ್ಧಿ ಹೊಂದುತ್ತಿರುವ ದೇಶಗಳು' (ಅಷ್ಟಾಗಿ ಕೈಗಾರೀಕರಣ ಹೊಂದದ) ಮಧ್ಯೆ ವಿವಾದಗಳು ತಲೆ ಎತ್ತಿದವು. ವಾತಾವರಣದಲ್ಲಿ ಹಸಿರು ಮನೆ ಅನಿಲಗಳನ್ನು ಹೆಚ್ಚಿಸುವ ಕಲ್ಲಿದ್ದಲು ಬಳಕೆ, ಇತರ ಕಾರ್ಯಕ್ರಮಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕಡಿಮೆ ಮಾಡಿಕೊಳ್ಳಲು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹೇಳುತ್ತಿವೆ. ಪಳೆಯುಳಿಕೆ ಇಂಧನಗಳಿಂದಲೆ ಆದೇಶಗಳು ಅಭಿವೃದ್ಧಿ ಹೊಂದಿದೆ ಎಂಬುದು ಪ್ರಸ್ತುತ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಾದ. ಪಳಿಯುಳಿದೆ ಇಂಧನಗಳು (ಪ್ರಧಾನವಾಗಿ ಕಲ್ಲದ್ದಲು) ಬಳಸದಿದ್ದಲ್ಲಿ ತಮ್ಮ ಆರ್ಥಿಕ ಪ್ರಗತಿ ತೀವ್ರವಾಗಿ ಕುಂಠಿತವಾಗುತ್ತದೆ ಎಂದು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಭಾವಿಸುತ್ತವೆ. ಪ್ರಗತಿಯನ್ನು ಸಾಧಿಸಲು ಪರ್ಯಾಯಗಳನ್ನು ತೋರಿಸುವುದಕ್ಕೆ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಪಾತ್ರವನ್ನು ಪೋಷಿಸಬೇಕೆಂದು ಅವು ಕೋರುತ್ತಿವೆ.

- ಅರಣ್ಯಗಳ ನಿರ್ಮೂಲನೆ ಎಂದರೇನು?
- ಇದು ಕೇವಲ ಅರಣ್ಯ ಪ್ರದೇಶಗಳಲ್ಲಿಯೇ ನಡೆಯುತ್ತಿದೆಯೇ?
- ಭೂಗೋಳವು ಬಿಸಿಯಾಗುವುದನ್ನು ಅರಣ್ಯಗಳು ಕಣ್ಮರೆಯಾಗುತ್ತಿರುವುದು ಯಾವ ವಿಧವಾಗಿ ಪ್ರಭಾವಿತಗೊಳಿಸುತ್ತದೆ? (ವಿಜ್ಞಾನಶಾಸ್ತ್ರ ತರಗತಿಯಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆ ಕುರಿತು ಓದಿದ್ದನ್ನು ನೆನಪು ಮಾಡಿಕೊಳ್ಳಿರಿ.
- ಭೂಗೋಳ ಬಿಸಿಯಾಗುವುದರಲ್ಲಿ ಪ್ರಭಾವ ಬೀರುವ ಇತರೆ ಮಾನವನ ಕಾರ್ಯಕ್ರಮಗಳಾವುವು?

ಪ್ರಪಂಚ ವ್ಯಾಪ್ತವಾಗಿ ಅನೇಕ ಶಾಸ್ತ್ರಜ್ಞರು ಒಂದು ವಿಷಯದಲ್ಲಿ ಏಕಾಭಿಪ್ರಾಯ ಹೊಂದಿದ್ದಾರೆ. ಮಾನವನ ಕಾರಣದಿಂದಾಗಿ ಭೂಗೋಳವು ಬಿಸಿಯಾಗುತ್ತಿರುವುದು ವಾಸ್ತವ. ಇದು ತೀವ್ರ ಪರಿಣಾಮಗಳಿಗೆ ದಾರಿ ಮಾಡಿಕೊಡುತ್ತದೆ. ಮುಂಬರುವ ವರ್ಷಗಳಲ್ಲಿ ವಾತಾವರಣದಲ್ಲಿ ತೀವ್ರ ಪರಿಣಾಮಗಳು ಸಂಭವಿಸಬಹುದೆಂದು, ಜೀವಕೋಟಿಯ ಉಳಿವಿಗೆ ಅಪಾಯ ಬರುವ ಅವಕಾಶವಿದೆ ಎಂದು ಶಾಸ್ತ್ರಜ್ಞರು ಎಚ್ಚರಿಸುತ್ತಿದ್ದಾರೆ.

ಭೂಗೋಳವು ಬಿಸಿಯಾಗಲು ಸಹಕರಿಸುವ ಮಾನವ ಕಾರಣಗಳಲ್ಲಿ ಅರಣ್ಯಗಳನ್ನು ಕಡಿದುಹಾಕುತ್ತಿರುವುದು ಒಂದು. ನಿಮ್ಮ ಉಪಾಧ್ಯಾಯರೊಂದಿಗೆ ಮತ್ತು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಮೇಲಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ

SCERT TELANGANA

ಭಾರತದೇಶದ ಮೇಲೆ ವಾಯುಗುಣದ ಬದಲಾವಣೆಯ ಪ್ರಭಾವ

ಸರಾಸರಿ ಉಷ್ಣೋಗ್ರತೆಗಳು 2^0 ಹೆಚ್ಚಾಗುವುದು ಬಹಳ ಕಡಿಮೆ ಅನ್ನಿಸಬಹುದು ಆದರೆ ಮುಂಬರುವ ಶತಮಾನದ ಆರಂಭ ಕಾಲಕ್ಕೆಲ್ಲಾ ಇದರ ಕಾರಣದಿಂದ ಸಮುದ್ರಮಟ್ಟವು ಒಂದು ಮೀಟರ್ ಬೆಳೆಯುತ್ತದೆ. ನಮ್ಮ ಕರಾವಳಿ ಪ್ರದೇಶಗಳು ಇದರಿಂದ ಸಾಕಷ್ಟು ಪ್ರಭಾವಿತಗೊಳ್ಳುತ್ತವೆ. ಇದರಿಂದ ಕೋಟ್ಯಾಂತರ ಜನರನ್ನು ಇತರೆ ಪ್ರದೇಶಗಳಿಗೆ ಕಳುಹಿಸಬೇಕಾಗುತ್ತದೆ. ಇವರು ತಮ್ಮ ಜೀವನೋಪಾಯಗಳನ್ನು ಕಳೆದುಕೊಳ್ಳುತ್ತಾರೆ.

ಪೂರ್ವ ಕೊಲ್ಕತ್ತದ ನೋನಡಂಗಾ ಪ್ರದೇಶದಲ್ಲಿ ಕಳೆದ ಕೆಲವು ವರ್ಷಗಳಿಂದ ಇರುವ 200 ಗ್ರಾಮೀಣ ಕುಟುಂಬಗಳನ್ನು ತೆರೆವುಗೊಳಿಸಲು ಕೊಲ್ಕತ್ತ ಮಹಾನಗರ ಪಾಲಿಕೆಯು ಪ್ರಯತ್ನಿಸುತ್ತಿದೆ. ಐಲಾ ತುಫಾನು ಕಾರಣದಿಂದ 2009ರಲ್ಲಿ ಸುಂದರ್‌ಬನ್ ಪ್ರದೇಶವು ಅಸ್ತವ್ಯಸ್ತವಾಗಿದ್ದರಿಂದ ಉದ್ಯೋಗ ಅರಸಿಕೊಂಡು ಬಂದ ಕುಟುಂಬಗಳು ಇಲ್ಲಿ ವಾಸಿಸುತ್ತಿವೆ.

ಭಾರಿ ಪೋಲೀಸ್ ಪಹರೆಯ ಮಧ್ಯೆ ಮಾರ್ಚ್ 30ರಂದು ಬುಲ್‌ಡೋಜರ್ ಬಳಸಿ ಈ ಕೊಳಚೆಗೇರಿಯ ಮನೆಗಳನ್ನು ಕೆಡವಿಹಾಕಿದರು. ಕೆಲವು ಮನೆಗಳಿಗೆ ಬೆಂಕಿ ಇಟ್ಟರು. ಮನೆಗಳನ್ನು ಕಳೆದುಕೊಂಡ 700 ಜನ ಕಳೆದ ಕೆಲವು ದಿನಗಳಿಂದ ಸುರಿಯುತ್ತಿದ್ದ ಮಳೆಯಿಂದ, ಕೆಸರಿನಲ್ಲಿ ರಾತ್ರಿಯಲ್ಲಿ ನಿದ್ರೆಯಿಲ್ಲದೆ ಕಳೆದಿದ್ದಾರೆ. ಇವರು ಹೆಚ್ಚಾಗಿ ಮನೆಗಳಲ್ಲಿ ಕೆಲಸಗಾರರಾಗಿ ಕೆಲಸ ಮಾಡುತ್ತಾರೆ, ರಿಕ್ಷಾ ತುಳಿಯುತ್ತಾರೆ, ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ಕೆಲಸಮಾಡುತ್ತಾರೆ.

- ಲಕ್ಷಾಂತರ ಜನರು ಪ್ರಭಾವಿತವಾದರೆ ಆಗ ಆ ಪರಿಸ್ಥಿತಿಗಳನ್ನು ಹೇಗೆ ಎದುರಿಸಲಬಲ್ಲರೋ ಊಹಿಸಿರಿ. ಪುನರ್‌ವಸತಿಗೆ ಇವರಿಗೆ ಭೂಮಿ ಎಲ್ಲಿ ಸಿಗುತ್ತದೆ ?

ಇನ್ನೊಂದು ಪ್ರಭಾವ ವರ್ಷಾಪಾತದ ಮೇಲಿದೆ. ಮಳೆ ಬೀಳುವಿಕೆ ವಿಧಾನದಲ್ಲಿ ಬಹಳ ಬದಲಾವಣೆ ಬರಬಹುದು. ಕೆಲವು ಪ್ರಾಂತಗಳಲ್ಲಿ ಅತಿವೃಷ್ಟಿ ಯಾದರೆ, ಕೆಲವು ಪ್ರಾಂತಗಳು ಅನಾವೃಷ್ಟಿಗೆ ಗುರಿಯಾಗಬಹುದು. ಅಂದರೆ ಪ್ರವಾಹಗಳು, ಬರಪರಿಸ್ಥಿತಿಗಳು ಹೆಚ್ಚಾಗಿರುವ ಅವಕಾಶವಿದೆ. ಇದರಿಂದ ವ್ಯವಸಾಯ ಮತ್ತು ಪ್ರಜೆಗಳ ಜೀವನೋಪಾಯಗಳು ಪ್ರಭಾವಿತಗೊಳ್ಳುತ್ತವೆ.

'ಐಲಾ' ಪ್ರಭಾವದಿಂದ ಒಡೆದ ಕೆರೆ ಕಟ್ಟೆ

ಹಿಮಾಲಯದಲ್ಲಿನ ಪರ್ವತಗಳು ವೇಗವಾಗಿ ಕರಗುವದರಿಂದ ಮೀನುಗಾರರ ನಿವಾಸ ಪ್ರದೇಶಗಳು ಪ್ರಭಾವಿತಗೊಂಡು , ಸಿಹಿ ನೀರಿನ ಮೀನು ಹಡಿಯುವವರ ಜೀವನ ನೋಪಾಯಗಳು ಪ್ರಭಾವಿತಗೊಳ್ಳುತ್ತವೆ. ಅದೇ ವಿಧವಾಗಿ ಮೇಲೆ ಓದಿಕೊಂಡ ಅಸಾಧಾರಣ ವಾತಾವರಣ ಪರಿಸ್ಥಿತಿಗಳು ಹೆಚ್ಚಾಗುವ ಅವಕಾಶವಿದೆ. ವಾತಾವರಣ ಬದಲಾವಣೆ ಎನ್ನುವುದು ಪ್ರಪಂಚ ಮಟ್ಟದಲ್ಲಿ ನಡೆಯುತ್ತದೆ. ಆದ್ದರಿಂದ

'ಕೆರೆಕಟ್ಟೆಯ ರಿಪೇರಿ' ದೃಶ್ಯ

ಕೀಲಕ ಪದಗಳು

ಕೈಮೋಗ್ರಾಫ್ | ಹವಾಮಾನ | ಋತುಪವನಗಳು | ಸೌರವಿಕಿರಣ
ಒತ್ತಡ ಮಂಡಲಗಳು | ಭೂಗೋಳ ಬಿಸಿಯಾಗುವಿಕೆ | ಜೆಟ್ ಪ್ರವಾಹ

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1 . ಕೆಳಗಿನ ವಾಕ್ಯಗಳನ್ನು ಓದಿ ಅವು ಹವಾಮಾನ ಅಥವಾ ವಾಯುಗುಣಗಳಲ್ಲಿಯಾವ ಅಂಶಕ್ಕೆ ಉದಾಹರಣೆಯೋ ತಿಳಿಸಿರಿ. (AS_1)

ಅ) ಹಿಮಾಲಯದಲ್ಲಿನ ಅನೇಕ ಹಿಮಪರ್ವತಗಳು ಕಳೆದ ಕೆಲ ವರ್ಷಗಳಲ್ಲಿ ಕರಗಿಹೋಗಿವೆ.

ಆ) ಕಳೆದ ಕೆಲವು ದಶಮಾನಗಳಲ್ಲಿ ವಿಧರ್ಭ ಪ್ರದೇಶದಲ್ಲಿ ಬರಗಾಲ ಹೆಚ್ಚಾಗಿ ಸಂಭವಿಸಿವೆ.

2 . ಭಾರತದೇಶ ವಾಯುಗುಣವನ್ನು ಪ್ರಭಾವಿತಗೊಳಿಸುವ ಅಂಶಗಳಾವುವು? (AS_1)

3 . ಪರ್ವತ ಪ್ರದೇಶ, ಮತ್ತು ಮರುಭೂಮಿಯ ವಾಯುಗುಣಗಳನ್ನು ಪ್ರಭಾವಿತಗೊಳಿಸುವ ಅಂಶಗಳನ್ನು ವಿವರಿಸಿರಿ. (AS_4)

4 . ಭೂಗೋಳ ಬಿಸಿಯಾಗುವುದರಲ್ಲಿ ಮಾನವನ ಪಾತ್ರವನ್ನು ತಿಳಿಸಿರಿ. (AS_4)

5 . AGW ವಿಷಯದಲ್ಲಿ ಅಭಿವೃದ್ದಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಇರುವ ಅಭಿಪ್ರಾಯ ವ್ಯತ್ಯಾಸಗಳನ್ನು ತಿಳಿಸಿರಿ. (AS_1)

6 . ಭೂಗೋಳ ಬಿಸಿಯಾಗುವಿಕೆಯಲ್ಲಿ ಶೀತೋಷ್ಣಸ್ಥಿತಿ ಬದಲಾವಣೆಗಳು ಹೇಗೆ ಕಾರಣವಾಗಿವೆ? ಭೂಗೋಳ ಬಿಸಿಯಾಗುವುದನ್ನು ನಿಯಂತ್ರಿಸುವ ಕೆಲವು ಕ್ರಮಗಳನ್ನು ತಿಳಿಸಿರಿ. (AS_4)

7 . ಕೆಳಗಿನ ಕ್ಲೈಮೊಗ್ರಾಫ್‌ಗಳನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (AS_3)

(i) ಯಾವ ತಿಂಗಳಲ್ಲಿ ಅತ್ಯಧಿಕ ಮಳೆ ದಾಖಲಾಗಿದೆ?

(ii) ಯಾವ ತಿಂಗಳಲ್ಲಿ ಅತ್ಯಲ್ಪ, ಅತ್ಯಧಿಕ ಉಷ್ಣೋಗ್ರತೆಗಳು ದಾಖಲಾಗಿವೆ?

(iii) ಜೂನ್, ಅಕ್ಟೋಬರ್‌ನಡುವೆ ಗರಿಷ್ಟ ವರ್ಷಾಪಾತ ಏಕೆ ಸಂಭವಿಸುತ್ತದೆ?

(iv) ಮಾರ್ಚ್, ಮೇ ತಿಂಗಳಲ್ಲಿ ಅತ್ಯಧಿಕ ಉಷ್ಣೋಗ್ರತೆ ಇರಲು ಕಾರಣವೇನು?

(v) ಉಷ್ಣೋಗ್ರತೆ, ವರ್ಷಾಪಾತಗಳಲ್ಲಿ ಬದಲಾವಣೆಗಳಿಗೆ ಕಾರಣವಾಗುವ ಭೌಗೋಳಿಕ ಅಂಶಗಳನ್ನು ಹೆಸರಿಸಿರಿ.

SCERT TELANGANA



8 . ಪುಟ 53ರಲ್ಲಿನ 4ನೇ ಪ್ಯಾರಾದಲ್ಲಿನ ಇದಕ್ಕಿಂತ ಮೊದಲು ಭೂಮಿ ಬಿಸಿಯಾಗಲು ......ಕಾರಣ ಮಾನವನ ಕ್ರಿಯೆಗಳೇ ವರೆಗೆ ಓದಿ ವ್ಯಾಖ್ಯಾನಿಸಿರಿ. (AS_2)

ಯೋಜನೆ

1) ನಿಮ್ಮ ಪ್ರಾಂತಕ್ಕೆ ಸಂಬಂಧಿಸಿದ ವಾಯುಗುಣ, ಹವಾಮಾನದ ಮೇಲೆ ಇರುವ ಗಾದೆಮಾತು ಮತ್ತು ನಾಣ್ಣುಡಿಗಳನ್ನು ಶೇಕರಿಸಿರಿ.

- ಮುಂಜಾನೆಯ ಕಾಮನಬಿಲ್ಲು ನಾವಿಕರಿಗೆ ಎಚ್ಚರಿಕೆ.
- ರಾತ್ರಿ ಹೊತ್ತಿನ ಕಾಮನ ಬಿಲ್ಲು ನಾವಿಕರಿಗೆ ಆಹ್ಲಾದ.
- ಹುಲ್ಲಿನ ಮೇಲೆ ಇಬ್ಬನಿ ಇದ್ದರೆ ಮಳೆಬರುವುದಿಲ್ಲ.

2) ಅಭಿವೃದ್ಧಿ ಹೊಂದಿದ, ಹೊಂದುತ್ತಿರುವ ದೇಶಗಳು ವಾತಾವರಣದೊಳಕ್ಕೆ ಹಸಿರುಮನೆ ವಾಯುವನ್ನು ವಿಪರೀತವಾಗಿ ಬಿಡುಗಡೆ ಮಾಡುತ್ತಿವೆ. ಇದರಿಂದ ಪ್ರಸ್ತುತ ಎಷ್ಟೊ ವಿಪತ್ತುಗಳು ಸಂಭವಿಸುತ್ತಿವೆ. ಇವುಗಳ ಸಮಾಚಾರವನ್ನು ಸಂಗ್ರಹಿಸಿ, ಭವಿಷ್ಯತ್ತಿನಲ್ಲಿ ಏರ್ಪಡುವ ತೀವ್ರ ಪರಿಣಾಮಗಳನ್ನು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

SCERT TELANGANA

ಅಧ್ಯಾಯ

5

ಭಾರತದೇಶ ನದಿಗಳು , ನೀರಿನ ಸಂಪನ್ಮೂಲಗಳು

- ಭಾರತದೇಶದ ನಕ್ಷೆಯಲ್ಲಿ ಹಿಮಾಲಯಗಳನ್ನು, ಪಶ್ಚಿಮ ಘಟ್ಟಗಳನ್ನು ಗುರುತಿಸಿರಿ.
- ನಕ್ಷೆಯಲ್ಲಿನ ಬಣ್ಣದ ಸೂಚಿಕೆಗಳ ಆಧಾರವಾಗಿ ನದಿಗಳು ಹುಟ್ಟಿದ ಪರ್ವತಗಳು ಎಷ್ಟು ಎತ್ತರದಲ್ಲಿವೆಯೋ ತಿಳಿಯಿರಿ. ಅಟ್ಲಾಸ್ ಮತ್ತು ಉಬ್ಬು ಭೌಗೋಳಿಕ ನಕ್ಷೆ(Relief map)ಸಹಾಯದಿಂದ ನದಿಯ ಗಮನವನ್ನು ಅನುಸರಿಸುತ್ತಾ ಅವುಗಳ ಪ್ರವಾಹ ದಿಕ್ಕನ್ನು ಗುರುತಿಸಿರಿ.
- ಗೃಹೋಯೋಗಕ್ಕಾಗಿ ಶೇಕಡ 5 ನೀರನ್ನು ಉಪಯೋಗಿಸುತ್ತಾರೆ, ಆದರೂ ಹೆಚ್ಚಿನ ಜನರಿಗೆ ನೀರು ಸಿಗುತ್ತಿಲ್ಲ. ಇದರ ಕಾರಣಗಳನ್ನು ಕುರಿತು ಚರ್ಚಿಸಿರಿ.
- ಭಾರತದೇಶದಲ್ಲಿ ಸುಮಾರು 10 ಕೋಟಿ ಎಕರೆಗಳ ಭೂಮಿ ಪ್ರವಾಹಕ್ಕೆ ಗುರಿಯಾಗುತ್ತಿರುವ ಅವಕಾಶವಿದೆ. ಅಷ್ಟೇ ವಿಸ್ತೀರ್ಣದ ಭೂಮಿ ಕ್ಷಾಮಕ್ಕೆ ಗುರಿಯಾಗುವ ಅವಕಾಶವಿದೆ. ಇದಕ್ಕೆ ಕಾರಣವೇನು?
- ಭೂಮಿಯ ಮೇಲಿರುವ ಸಂಪನ್ಮೂಲಗಳಲ್ಲಿ 70% ರಷ್ಟು ನೀರು ಕಲುಷಿತಗೊಂಡಿದೆ, ಇದಕ್ಕೆ ಕಾರಣಗಳೇನು?



ನಕ್ಷೆ 1 : ಭಾರತದೇಶ ಭೌಗೋಳಿಕ ಸ್ವರೂಪ ನದೀ ಜಲ ವ್ಯವಸ್ಥೆ

SCERT TELANGANA

ಭಾರತದೇಶದ ನದಿ ಜಲವ್ಯವಸ್ಥೆಯು ಮೂರು ಭೌತಿಕ ಅಂಶಗಳಿಗನುಗುಣವಾಗಿ ರೂಪುಗೊಂಡಿವೆ. ಅವು 1) ಹಿಮಾಲಯಗಳು, 2) ಪರ್ಯಾಯ ದ್ವೀಪ ಪ್ರಸ್ಥಭೂಮಿ, 3) ಸಿಂಧೂ - ಗಂಗಾ ಮೈದಾನ. ನದಿಗಳ ಹುಟ್ಟುವಿಕೆ ಆಧಾರವಾಗಿ ಭಾರತದೇಶ ನದಿ ಜಲ ವ್ಯವಸ್ಥೆಯನ್ನು ಎರಡು ಭಾಗ ಮಾಡಬಹುದು. i) ಹಿಮಾಲಯ ನದಿಗಳು ii) ಪರ್ಯಾಯ ದ್ವೀಪ ನದಿಗಳು.

ಹಿಮಾಲಯ ನದಿಗಳು

ಹಿಮಾಲಯ ನದಿಗಳು ಮೂರು ಮುಖ್ಯವಾದ ವ್ಯವಸ್ಥೆಗಳ ಕೆಳಗೆ ಬರುತ್ತವೆ : ಅವು ಗಂಗ, ಸಿಂಧು, ಬ್ರಹ್ಮಪುತ್ರ ನದಿಗಳು. ಈ ನದಿಗಳೆಲ್ಲಾ ಒಂದೇ ಪ್ರದೇಶದಲ್ಲಿ ಕೆಲವು ಕಿಲೋಮೀಟರ್‌ಗಳ ವ್ಯತ್ಯಾಸದಲ್ಲಿ ಹುಟ್ಟಿ ಪರ್ವತ ಶ್ರೇಣಿಗಳ ಕಾರಣದಿಂದ ಬೇರ್ಪಡಿಸಲ್ಪಟ್ಟಿವೆ. ಇವು ಮೊದಲು ಪರ್ವತಗಳ ಪ್ರಧಾನ ಅಕ್ಷಕ್ಕೆ ಸಮಾಂತರವಾಗಿ ಪ್ರವಹಿಸುತ್ತವೆ. ನಂತರದ ಅಕಸ್ಮತ್ತಾಗಿ ದಕ್ಷಿಣಕ್ಕೆ ತಿರುಗಿ ಎತ್ತರವಾದ ಪರ್ವತ ಶ್ರೇಣಿಗಳನ್ನು ಸೀಳಿಕೊಂಡು ಉತ್ತರ ಭಾರತದ ಮೈದಾನಗಳನ್ನು ಸೇರುತ್ತವೆ. ಈ ಕ್ರಮದಲ್ಲಿ ಇವು ಆಳವಾದ "V" ಆಕಾರದ ಕಣಿವೆಗಳನ್ನು ಏರ್ಪಡಿಸುತ್ತವೆ. ಇವು ಸಿಂಧು, ಬ್ರಹ್ಮಪುತ್ರ ನದಿಗಳಲ್ಲಿ ಚೆನ್ನಾಗಿ ಕಂಡುಬರುತ್ತವೆ.

ಹಿಮಾಲಯದ ನದಿಗಳು ಜೀವ ನದಿಗಳು. ಅಂದರೆ ಇವುಗಳಲ್ಲಿ ವರ್ಷವೆಲ್ಲಾ ನೀರು ಇರುತ್ತದೆ. ವರ್ಷಾಪಾತ ಮತ್ತು ಹಿಮಾಲಯಗಳ ಹಿಮ ಕರಗಿ ಇವುಗಳಿಗೆ ನೀರು ಸಿಗುವುದರಿಂದ ಇವುಗಳನ್ನು ಜೀವ ನದಿಗಳು ಎನ್ನುತ್ತಾರೆ.

ಸಿಂಧೂನದಿ ವ್ಯವಸ್ಥೆ

ಟಿಬೆಟ್‌ನಲ್ಲಿಯ ಮಾನಸ ಸರೋವರದ ಹತ್ತಿರ ಕೈಲಾಸ ಪರ್ವತಗಳ ಉತ್ತರದ ಇಳಿಜಾರಿನಲ್ಲಿ ಸಿಂಧೂನದಿ ಆರಂಭವಾಗುತ್ತದೆ. ಇದು ಟಿಬೆಟ್ಟಿನ ವಾಯುವ್ಯ ದಿಕ್ಕಿನಲ್ಲಿ ಪ್ರವಹಿಸಿ, ಭಾರತದಲ್ಲಿನ ಜಮ್ಮು - ಕಾಶ್ಮೀರದಲ್ಲಿ ಪ್ರವೇಶಿಸುತ್ತದೆ. ಭಾರತದಲ್ಲಿ ಜೀಲಂ, ಚೀನಾಬ್, ರಾವಿ, ಬಿಯಾಸ್, ಸಟ್ಲೆಜ್ ನದಿಗಳು ಇದರ ಮುಖ್ಯ ಉಪನದಿಗಳು. ಭಾರತದ ಜಮ್ಮು ಮತ್ತು ಕಾಶ್ಮೀರ್, ಪಂಜಾಬ್ ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಇದು ಪ್ರವಹಿಸುತ್ತದೆ.

- ಅಟ್ಲಾಸ್ ಸಹಾಯದಿಂದ ಭಾರತ ಮತ್ತು ಪಾಕಿಸ್ತಾನ್‌ಗಳಲ್ಲಿ ಸಿಂಧೂ ನದಿ ಪ್ರವಾಹ ಮಾರ್ಗವನ್ನು ಗುರ್ತಿಸಿರಿ.

ಗಂಗಾನದಿ ವ್ಯವಸ್ಥೆ

ಗಂಗಾನದಿ ಎರಡು ನದಿಗಳ ಸಂಗಮ. ಒಂದು ಗಂಗೋತ್ರಿ. ಇದು ಹಿಮನದಿ ಹತ್ತಿರ ಹುಟ್ಟುವ ಭಾಗೀರಥಿ. ಎರಡನೆಯದು ಬದರೀನಾಥ್‌ಗೆ ವಾಯುವ್ಯ ದಿಕ್ಕಿನಲ್ಲಿ ಸತಪ್‌ನಾಥ್ ಹತ್ತಿರ ಹುಟ್ಟುವ ಅಲಕನಂದ. ಇವೆರಡು ನದಿಗಳು ದೇವ ಪ್ರಯಾಗದ ಹತ್ತಿರ ಸೇರಿ ಗಂಗಾನದಿಯಾಗುತ್ತದೆ. ಇದು ಹರಿದ್ವಾರದ ಹತ್ತಿರ ಪರ್ವತಗಳನ್ನು ಬಿಟ್ಟು ಮೈದಾನಗಳಲ್ಲಿ ಪ್ರವಹಿಸುತ್ತದೆ. ಗಂಗಾನದಿಯಲ್ಲಿ ಅನೇಕ ಉಪನದಿಗಳು ಬಂದು ಸೇರುತ್ತವೆ. ಇವುಗಳಲ್ಲಿ ಹೆಚ್ಚು ನದಿಗಳು ಹಿಮಾಲಯ ಪರ್ವತಗಳಲ್ಲಿ ಹುಟ್ಟುತ್ತವೆ. ಕೆಲವು ಪರ್ಯಾಯ ಪ್ರಸ್ಥಭೂಮಿ ಯಲ್ಲಿ ಸಹ ಹುಟ್ಟುತ್ತವೆ.

- ಗಂಗಾನದಿ ನಕ್ಷೆಯನ್ನು (5.2) ನೋಡಿ ಅದು ಯಾವ ರಾಜ್ಯಗಳ ಮೂಲಕ ಪ್ರವಹಿಸುತ್ತದೋ ಹೇಳಿರಿ.
- ಮೇಲಿನ ನಕ್ಷೆಯನ್ನು ನೋಡಿ ಗಂಗಾನದಿ ಉಪನದಿಗಳಲ್ಲಿ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಹರಿಯುವ ನದಿಗಳನ್ನು ಹೆಸರಿಸಿರಿ.

ಬ್ರಹ್ಮಪುತ್ರನದಿ ವ್ಯವಸ್ಥೆ

ಬ್ರಹ್ಮ ಪುತ್ರ ನದಿ (ಟಿಬೆಟ್‌ನಲ್ಲಿ ಇದನ್ನು ಸಾಂಗ್ ಪೋ ಎನ್ನುವರು) ಮಾನಸ ಸರೋವರ ಹತ್ತಿರ ಕೈಲಾಸ ಪರ್ವತಗಳಲ್ಲಿನ ಚಮಯಂಗ್‌ಡಂಗ್ ಎಂಬ ಹಿಮನದಿಯಿಂದ ಹುಟ್ಟುತ್ತದೆ. ಇದು ದಕ್ಷಿಣ ಟಿಬೆಟ್‌ನ ಮೂಲಕ ಪೂರ್ವಕ್ಕೆ ಪ್ರವಹಿಸುತ್ತದೆ. ಲೋಟಿತ್ಸಾಂಗ್ ಹತ್ತಿರ ಜಲ ಪ್ರಯಾಣಕ್ಕೆ ಅನುಕೂಲಕರವಾಗಿರುವ ಅಗಲವಾದ ನದಿಯಾಗಿ ಬದಲಾಗಿ 640 ಕಿ.ಮೀಗಳು ಪ್ರವಹಿಸುತ್ತದೆ. ನಂತರ ಅನೇಕ ಜಲಪಾತಗಳ ಮೂಲಕ ಅದು ಬೇರೆ ಬೇರೆ

SCERT TELANGANA

ಎಳೆಗಳಂತೆ ಬದಲಾಗುತ್ತದೆ. ಭಾರತ ದೇಶದಲ್ಲಿನ ಅರುಣಾಚಲ ಪ್ರದೇಶದಲ್ಲಿ ನೈರುತ್ಯ ದಿಶೆಯಲ್ಲಿ ದೊಡ್ಡ ತಿರುವು ಪಡೆಯುತ್ತದೆ. ಇಲ್ಲಿ ಅದನ್ನು ಸಿಯಾಂಗ್ ಎಂದು, ದಿಹಾಂಗ್ ಎಂದು ಕರೆಯುತ್ತಾರೆ. ಅಸ್ಸಾಂ ಕಣಿವೆಯಲ್ಲಿ ಬಂದಾಗ ದಿಬಾಂಗ್, ಮತ್ತು ಲೋಹಿತ್ ಎಂಬ ಎರಡು ಉಪನದಿಗಳು ಇದರಲ್ಲಿ ಸೇರುತ್ತವೆ. ಇಲ್ಲಿಂದ ಅದನ್ನು ಬ್ರಹ್ಮಪುತ್ರ ಎಂದು ಕರೆಯುತ್ತಾರೆ.



ನಕ್ಷೆ 2 : ಗಂಗಾ ಬ್ರಹ್ಮಪುತ್ರ ನದಿಗಳ ಸಂಗಮ

ಪರ್ಯಾಯದ್ವೀಪ ನದಿಗಳು

ಬಂಗಾಳಕೊಲ್ಲಿಯಲ್ಲಿ ಸೇರುವ ಪರ್ಯಾಯ ದ್ವೀಪ ನದಿಗಳಿಗೂ ಅರೇಬಿಯಾ ಸಮುದ್ರದಲ್ಲಿ ಸೇರುವ ಸಣ್ಣ ನದಿಗಳಿಗೂ ನಡುವೆ ಜಲವಿಭಾಜಕ ಕ್ಷೇತ್ರಗಳಾಗಿ ಪಶ್ಚಿಮ ಘಟ್ಟಗಳಿವೆ. ನರ್ಮದಾ ಮತ್ತು ತಪತಿ ನದಿಗಳನ್ನು ಬಿಟ್ಟು ಪರ್ಯಾಯ ಪ್ರಸ್ಥಭೂಮಿಯಲ್ಲಿನ ಉತ್ತರಭಾಗದಲ್ಲಿ ಹುಟ್ಟುವ ಚಂಬಲ್, ಸಿಂದ್, ಬೇತ್ವಾ, ಕೇನ್, ಸೋನ್ ನದಿಗಳು ಗಂಗಾ ನದಿ ವ್ಯವಸ್ಥೆಗೆ ಸೇರುತ್ತವೆ. ಪರ್ಯಾಯ ದ್ವೀಪದಲ್ಲಿನ ಇತರ ಮುಖ್ಯವಾದ ನದಿಗಳಾದ ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿಗಳ ಪ್ರವಾಹ ಮಾರ್ಗ ಬದಲಾಗುವುದಿಲ್ಲ. ಇವುಗಳಲ್ಲಿ ವಕ್ರತೆಗಳು (meanders) ಇರುವುದಿಲ್ಲ. ಇವುಗಳಲ್ಲಿ ವರ್ಷ ಪೂರ್ತಿ ನೀರು ಇರುವುದಿಲ್ಲ.

- ಇಲ್ಲಿ ಕೊಟ್ಟ ನಕ್ಷೆ ಆಧಾರವಾಗಿ ಮತ್ತು ಅಟ್ಲಾಸ್ ಸಹಾಯದಿಂದ ಕೆಳಗಿನವುಗಳನ್ನು ವಿವರಿಸಿರಿ.
- ಗೋದಾವರಿ .... ಹತ್ತಿರ ಹುಟ್ಟುತ್ತದೆ.
- ಪೂರ್ವಕ್ಕೆ ಪ್ರವಹಿಸುವ ಪರ್ಯಾಯದ್ವೀಪ ನದಿಗಳಲ್ಲಿ ಕೃಷ್ಣಾನದಿ ಎರಡನೆಯದು. ಇದು .... ಹತ್ತಿರ ಹುಟ್ಟುತ್ತದೆ.
- ಮಹಾನದಿ ಛತ್ತೀಸ್‌ಘಡ್‌ನ ಸಿಹಾನಾ ಹತ್ತಿರ ಹುಟ್ಟುತ್ತದೆ. .... ಮೂಲಕ ಪ್ರವಹಿಸುತ್ತದೆ.
- ನರ್ಮದಾನದಿ ಮಧ್ಯಪ್ರದೇಶದಲ್ಲಿನ .... ಹತ್ತಿರ ಹಹಹ.
- ತಪತಿನದಿ....... ಹತ್ತಿರ ಹುಟ್ಟಿ .... ದಿಕ್ಕಿನಲ್ಲಿ ಪ್ರವಹಿಸುತ್ತದೆ.

ಪರ್ಯಾಯದ್ವೀಪ ನದಿಗಳಲ್ಲಿ ದೊಡ್ಡನದಿ ಗೋದಾವರಿ. ಮಹಾರಾಷ್ಟ್ರದ ನಾಸಿಕ್ ಹತ್ತಿರ ಇರುವ ತ್ರಯಾಂಬಕಂ ಪ್ರಸ್ಥಭೂಮಿಯಲ್ಲಿ ಇದು ಹುಟ್ಟುತ್ತದೆ. ಬಂಗಾಳಕೊಲ್ಲಿಯಲ್ಲಿ ಸೇರುತ್ತದೆ.

SCERT TELANGANA



ಪಟ-3 ಭಾರತದ ಪರ್ಯಾಯ ದ್ವೀಪದ ನದಿಗಳು

ನೀರಿನ ಬಳಕೆ :

ಮೇಲ್ಮೈ ಮತ್ತು ಭೂಗರ್ಭ ಪ್ರವಾಹಗಳ ಮೂಲಕ ಹೊರ ಹೋಗುವ ನೀರು : ಒಂದು ಗ್ರಾಮದಂತಹ ಪ್ರದೇಶವನ್ನು ಊಹಿಸಿಕೊಳ್ಳಿರಿ. ಅಲ್ಲಿ ಸ್ವಲ್ಪ ನೀರು ಹಳ್ಳಗಳಿಂದ ಮೇಲ್ಮೈ ಪ್ರವಾಹದ ಮೂಲಕ ಹೊರಗೋಗುತ್ತವೆ. ಮಳೆಗಾಲದಲ್ಲಿ ಈ ಮೇಲ್ಮೈ ಪ್ರವಾಹ ಗಣನೀಯವಾಗಿ ಹೆಚ್ಚುತ್ತದೆ. ಮಳೆಗಾಲದಲ್ಲಿ ಸ್ವಲ್ಪ ನೀರು ಭೂಮಿಯೊಳಗೆ, ಭೂಮಿಯ ಒಳ ಪದರದೊಳಕ್ಕೆ ಇಂಗಿಹೋಗಿ ಭೂಗರ್ಭಜಲ ಮರಳಿ ತುಂಬುತ್ತದೆ. ಇದರಲ್ಲಿ ಸ್ವಲ್ಪ ಭಾಗ ಬಾವಿಗಳು, ಕೊಳವೆ ಬಾವಿಗಳಲ್ಲಿ ಪ್ರವಹಿಸಿ ಮರಳಿ ಬಳಸಲು ಅವಕಾಶವಾಗುತ್ತದೆ. ಸ್ವಲ್ಪ ಭಾಗದ ನೀರು ಆಳವಾದ ಬಿರುಕುಗಳಲ್ಲಿ ಸೇರಿ ಬಳಕೆಗೆ ಬರುವುದಿಲ್ಲ. ಈ ಭೂಗರ್ಭ ಜಲದಲ್ಲಿ ಇನ್ನೂ ಸ್ವಲ್ಪ ಭಾಗ ಭೂಗರ್ಭ ಜಲ ಪ್ರವಾಹಗಳನ್ನು ಸೇರಿ ಮತ್ತೆ ಹಳ್ಳ ನದಿಗಳನ್ನು ಸೇರುತ್ತದೆ.

- ವಾಟರ್‌ಷೆಡ್ ಎಂಬ ಪದವನ್ನು ಕುರಿತು ಚರ್ಚಿಸಿರಿ.

ವ್ಯವಸಾಯಕ್ಕೆ ನೀರು : ಬೆಳೆಗಳ ಬೇರು ಇರುವ ಪ್ರದೇಶಗಳಲ್ಲಿ ನೀರು ಮಳೆಯ ಮೂಲಕವಾಗಲೀ, ನೀರಾವರಿ ಸೌಕರ್ಯಗಳಿಂದಾಗಲಿ ಸೇರುತ್ತದೆ. ಭೂಮಿಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಇದೆ. ಪ್ರವಾಹಗಳು ಬಂದಾಗ ಹೆಚ್ಚು ನೀರು ಭೂಮಿಯ ಮೇಲೆ ಇದ್ದು, ಅದು ಭೂಮಿಯ ಒಳಪದರದಲ್ಲಿ ಇಂಗದೇ ಹೋದರೆ ಸಸ್ಯಗಳ ಬೇರು ಕೊಳೆಯುತ್ತವೆ. ಮತ್ತೊಂದು ಕಡೆ ಬರಗಾಲ ಪರಿಸ್ಥಿತಿಗಳಲ್ಲಿ ಪ್ರದೇಶದಲ್ಲಿ ತಕ್ಕಷ್ಟು ತೇವಾಂಶ ಭೂಮಿಯಲ್ಲಿ ಇಲ್ಲದಿದ್ದರೆ ಬೆಳೆ ಬೆಳೆಯದೆ ಒಣಗಿ ಹೋಗುತ್ತವೆ.

- ನಿಮ್ಮ ಹತ್ತಿರದ ಮಂಡಲ ಕಛೇರಿಯಿಂದ ಕಳೆದ 5 ವರ್ಷಗಳ ಒಟ್ಟು ವಾರ್ಷಿಕ ವರ್ಷಾಪಾತ ಪ್ರಮಾಣವನ್ನು ತಿಳಿದುಕೊಳ್ಳಿ.

ಗೃಹೋಪಯೋಗಕ್ಕೆ, ಪಶುಗಳಿಗೆ ನೀರು : ಕುಡಿಯುವುದಕ್ಕೆ ಬೆಳೆಗಳಿಗೆ, ಸ್ನಾನಕ್ಕೆ , ಶುಭ್ರಗೊಳಿಸಲು ಮತ್ತು ಪಶುಗಳಿಗೆ ಉಪಯೋಗಿಸುವ ನೀರು ಬಹಳ ಮುಖ್ಯವಾದದ್ದು, ಆದಾಯದೊಂದಿಗೆ ಸಂಬಂಧವಿಲ್ಲದೆ, ಎಲ್ಲರಿಗೂ ಈ ಮೇಲಿನ ಅವಶ್ಯಕತೆಗಳಿಗಾಗಿ ನೀರು ಸಿಗುವಂತೆ ಮಾಡಲು ಯೋಜನೆಗಳು ತಯಾರಿಸಬೇಕು.

ಕೈಗಾರಿಕಾ ಅವಶ್ಯಕತೆಗಳಿಗೆ ನೀರಿನ ಬಳಕೆ : ಉತ್ಪತ್ತಿ ಪ್ರಕ್ರಿಯೆಗಳಿಗೆ ಸಹ ನೀರು ಅತಿ ಅವಶ್ಯಕ. ಆದರೆ ಇದಕ್ಕೂ, ವ್ಯವಸಾಯ ಮತ್ತು ಗೃಹ ಅವಸರಗಳಿಗೂ ನಡುವೆ ವ್ಯತ್ಯಾಸ ಇದೆ. ಈ ವ್ಯತ್ಯಾಸವು ಬೆಳೆಯುತ್ತಲೇ ಇದೆ,

SCERT TELANGANA

ಆದ್ದರಿಂದ ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೈಗಾರಿಕಾ ಅವಶ್ಯಕತೆಗಳಿಗಾಗಿ ಬಳಸುವ ನೀರಿನ ಬಳಕೆಯಲ್ಲಿ ಕಾಲುಷ್ಯ ನಿಯಂತ್ರಣೆ ಮತ್ತು ನೀರಿನ ಪುನಃ ಬಳಕೆ ಎಂಬುವವು ಮುಖ್ಯವಾದ ಸಮಸ್ಯೆಗಳಾಗಿವೆ.

ಒಂದು ಪ್ರಾಂತ ಅಥವಾ ಒಂದು ಗ್ರಾಮದಲ್ಲಿ ಬಳಸಲ್ಪಡುವ ನೀರು, ಭೂಮಿಯ ಒಳಕ್ಕೆ ಪ್ರವಹಿಸುವ ನೀರಲ್ಲದೇ, ನಾವು ಬಳಸುವ ನೀರಿನ ಸಂಗ್ರಹಣೆಯ ಮೇಲೆ ಸಹ ಆಧಾರಪಟ್ಟಿರುತ್ತದೆ. ನಮ್ಮ ವಿಶ್ಲೇಷಣೆಯಲ್ಲಿ ಈ ಪ್ರವಾಹ ಮತ್ತು ಸಂಗ್ರಹಣೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರ್ತಿಸಬೇಕು. ಉದಾಹರಣೆಗೆ ಒಂದು ಟ್ಯಾಂಕನ್ನು ಊಹಿಸಿಕೊಳ್ಳಿರಿ. ಅದರಲ್ಲಿ ನೀರು ಒಳಹೋಗಲು ಒಂದು ಕೊಳವೆ, ಬಳಸಿಕೊಳುಲು ನೀರು ಹೊರಬರಲು ಒಂದು ಕೊಳವೆ ಇರುತ್ತವೆ. ಒಳಗೆ ಪ್ರವಹಿಸುವ ನೀರನ್ನು ನಿಮಿಷಕ್ಕೆ ಲೀಟರ್‌ಗಳಲ್ಲಿ ಅಳೆಯುತ್ತಾರೆ. ಹಾಗೆಯೇ ಹೊರಗೆ ಹರಿಯುವ ನೀರನ್ನು ಸಹ ನಿಮುಷಕ್ಕೆ ಲೀಟರ್‌ಗಳಲ್ಲಿ ಅಳೆಯುತ್ತಾರೆ. ಟ್ಯಾಂಕಿನ ನೀರು ನಿರಂತರ ಬದಲಾಗುತ್ತಲೇ ಇರುತ್ತದೆ. ಆದರೆ ಒಂದು ನಿರ್ಧಿಷ್ಟ ಸಮಯದಲ್ಲಿ ಅಂದರೆ ಉದಾಹರಣೆಗೆ ಬೆಳಿಗ್ಗೆ 8.30 ಕ್ಕೆ ಎಷ್ಟು ನೀರು ಇದೆ ಎಂಬುದನ್ನು ಖಚಿತವಾಗಿ ಹೇಳಬಹುದು. ಇದು ಆ ಸಮಯದಲ್ಲಿ ಆ ಟ್ಯಾಂಕಿನಲ್ಲಿರುವ ನೀರಿನ ಸಂಗ್ರಹವಾಗುತ್ತದೆ.

ಒಂದು ಗ್ರಾಮದಲ್ಲಿ ಕೆರೆಗಳು, ಕೊಳಗಳು, ಮಡುಗುಗಳು ಮೊದಲಾದವು ಇರಬಹುದು. ಇವೆಲ್ಲವೂ ಭೂಮಿಯ ಮೇಲ್ಮೈ ಸಂಗ್ರಹಗಳು. ಭಾರತದೇಶದಲ್ಲಿ ಬಹಳ ಗ್ರಾಮಗಳಲ್ಲಿ ಬಾವಿ ಮತ್ತು ಕೊಳವೆಬಾವಿಗಳ ಮೂಲಕ ನೀರು ಪಡೆಯುತ್ತಾರೆ. ಅಂದರೆ ಇವರೆಲ್ಲಾ ಭೂಮಿಯ ಅಂತರ್ಜಲದ ಮೇಲೆ ಆಧಾರಪಟ್ಟು ಜೀವಿಸುತ್ತಾರೆ. ಅಂತರ್ಗತವಾಗಿ ಪ್ರವಹಿಸುವ ನೀರಿಗೆ ಮತ್ತು ಸಂಗ್ರಹಣೆಗೆ ಮಧ್ಯೆ ಸಂಬಂಧವಿದೆ. ಅಂತರ್ಭಾಗದಲ್ಲಿ ಪ್ರವಹಿಸುವ ನೀರಿನಲ್ಲಿ ಸ್ವಲ್ಪ ಭಾಗವನ್ನು ನೇರವಾಗಿ ಬಳಸಿಕೊಳ್ಳುತ್ತಾರೆ. ಇನ್ನು ಸ್ವಲ್ಪ ಭಾಗ ನೀರಿನ ಸಂಗ್ರಹಣೆಯನ್ನು ನವೀಕರಿಸಲು ಉಪಯೋಗವಾಗುತ್ತದೆ. ಅದೇ ವಿಧವಾಗಿ ಕೊಳವೆಬಾವಿಗಳಿಂದ ನೀರನ್ನು ಅತಿಯಾಗಿ ಬಳಸುವುದರಿಂದ ಅವುಗಳ ನೀರಿನ ಮಟ್ಟ ಕಡಿಮೆಯಾಗುತ್ತದೆ. ಅಂತರ್ಭಾಗದಲ್ಲಿ ಪ್ರವಹಿಸುವ ನೀರು ಮತ್ತು ಹೊರಕ್ಕೆ ತೆಗೆದು ಬಳಸುವ ನೀರನ್ನು ಆಧರಿಸಿ ಕಾಲ ಕ್ರಮದಲ್ಲಿ ನೀರಿನ ಸಂಗ್ರಹಣೆ ಹೇಗಿರಬಹುದೆಂದು ಅಂದಾಜುಮಾಡಬಹುದು. ಪ್ರಸ್ತುತದಲ್ಲಿ ನಾವು ಭೂಗರ್ಭಜಲ ಸಂಗ್ರಹಣೆ ಕಡಿಮೆಯಾಗುತ್ತಿರುವುದರ ಪರಿಣಾಮಗಳನ್ನು ಎದುರಿಸುತ್ತಿದ್ದೇವೆ. ನಮ್ಮ ಮುಂದಿನ ಪೀಳಿಗೆಗೆ ಭೂಗರ್ಭಜಲ ಸಿಗುತ್ತದೆಯೋ ಇಲ್ಲವೋ ಎಂಬುದನ್ನು ಕೂಡಾ ನಾವು ಆಲೋಚಿಸುತ್ತಿಲ್ಲ.

ನಮಗೆ ಸಿಗುತ್ತಿರುವ ನೀರು ವಾರ್ಷಿಕ ಪ್ರವಾಹಗಳು, ಬಾವಿಗಳು , ಕೊಳವೆ ಬಾವಿಗಳಲ್ಲಿನ ಪುನರುದ್ದರಿಸಲ್ಪಡುವ ನೀರಿನ ಸಂಗ್ರಹಣೆಯನ್ನು ಆಧಾರಪಟ್ಟಿರುತ್ತದೆ. ನಮ್ಮ ನೀರಿನ ಅವಶ್ಯಕತೆಗಳನ್ನು ಸಹ ಮಿತಿಯಲ್ಲಿಟ್ಟುಕೊಳ್ಳಬೇಕು. ನಾವು ಭೂಮಿಯ ಬಹಳಷ್ಟು ಆಳದಿಂದ ನೀರು ತೆಗೆಯುತ್ತಿದ್ದರೆ ಅದು ಸಾವಿರಾರು ವರ್ಷಗಳ ಸಂಗ್ರಹಣೆಯ ನೀರು ಎಂದು ತಿಳಿಯಬೇಕು. ತೀವ್ರಬರ ಬಂದಾಗ ಈ ನೀರನ್ನು ಉಪಯೋಗಿಸಿ, ಚೆನ್ನಾಗಿ ಮಳೆ ಬಂದ ವರ್ಷದಲ್ಲಿ ಮತ್ತೆ ನೀರನ್ನು ಸಂಗ್ರಹಿಸುವಂತೆ ನೋಡಬೇಕು. 'ಸುಸ್ಥಿರತೆ ' ಎಂಬ ಅಂಶವನ್ನು ನಂತರ ತಿಳಿಯೋಣ.

ತುಂಗಭದ್ರ ನದೀ ಪ್ರದೇಶದಲ್ಲಿ ನೀರಿನ ಬಳಕೆ

ಕೃಷ್ಣಾನದಿಯ ಉಪನದಿಯಾದ ತುಂಗಭದ್ರಾನದಿ ನೀರನ್ನು ದಕ್ಷಿಣ ರಾಜ್ಯಗಳಾದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಹಂಚಿಕೊಳ್ಳುತ್ತಿವೆ. ತುಂಗಭದ್ರಾ ನದಿ ಪಶ್ಚಿಮಘಟ್ಟಗಳಲ್ಲಿ ಹುಟ್ಟುತ್ತದೆ. ಈ ನದಿಯ ಒಟ್ಟು ವಿಸ್ತೀರ್ಣ ಪ್ರದೇಶ 71,417 ಚದರ ಕಿಲೋಮೀಟರ್‌ಗಳು. ಇದರಲ್ಲಿ 57,671 ಚದರ ಕಿಲೋಮೀಟರ್‌ಗಳು ಕರ್ನಾಟಕದಲ್ಲಿದೆ. ತುಂಗಭದ್ರಾನದಿ ಪರಿವಾಹಕ ಪ್ರದೇಶವನ್ನು ಎರಡು ಭಾಗ ಮಾಡಿದ್ದಾರೆ. : 1) ಕರ್ನಾಟಕದಲ್ಲಿನ ಮೇಲಿನ ಮತ್ತು ಮಧ್ಯದ ಪರಿವಾಹಕ ಪ್ರದೇಶ. 2) ಆಂಧ್ರಪ್ರದೇಶದ ಕೆಳಗಿನ ಪರಿವಾಹಕ ಪ್ರದೇಶ.

ಆಧುನಿಕ ಗಣಾಂಕಗಳ ಪ್ರಕಾರ ಎರಡು ರಾಜ್ಯಗಳಲ್ಲಿ ವ್ಯವಸಾಯ ಭೂಮಿ ಹೆಚ್ಚಾಗಿಯೇ ಇದೆ. ಉಳಿದ ವಿಸ್ತೀರ್ಣದಲ್ಲಿ ಮರಗಳು, ತೋಪುಗಳು, ತಾತ್ಕಾಲಿಕ ಬೀಳು ಭೂಮಿ, ಸಾಗುವಳಿಗೆ ಅನುಕೂಲವಾದ ಬಂಜರು,

SCERT TELANGANA

ನಿತ್ಯಹರಿದ್ವರ್ಣದ ಕಾಡುಗಳು ಸಹಜ ವೃಕ್ಷ ಸಂಪತ್ತು ಹುಲ್ಲುಗಾವಲುಗಳು ಇವೆ. ಕೆಲ ಪ್ರದೇಶಗಳಲ್ಲಿ ನೀರಿನ ಸಂಗ್ರಹಣಕ್ಕೆ ಅನುಕೂಲವಾಗಿ ಕೆರೆಗಳಿವೆ. ಆಂಧ್ರಪ್ರದೇಶದಲ್ಲಿರುವ ಕೆಳಗಿನ ನದಿ ಪರಿವಾಹಕ ಪ್ರದೇಶದಲ್ಲಿ ಮಳೆ ಕಡಿಮೆ. ಬರ ಪರಿಸ್ಥಿಗಳು ಹೆಚ್ಚು. ಕೆಲವು ಪ್ರದೇಶಗಳು ಮಳೆಯನ್ನು, ಭೂಗರ್ಭಜಲವನ್ನು (ಬಾವಿ, ಕೊಳವೆಬಾವಿ) ಆಧರಿಸಿವೆ. ಉಳಿದ ಪ್ರದೇಶಗಳು ತುಂಗಭದ್ರ ಯೋಜನೆಯ ಕೆಳಗೆ ನಿರ್ಮಿತವಾದ ಕಾಲುವೆ ನೀರನ್ನು ಆಧರಿಸಿವೆ. ಈ ಎರಡು ರೀತಿಯ ಪ್ರದೇಶದಲ್ಲಿ ನೀರಿನ ಲಭ್ಯತೆಯಲ್ಲಿ ಬಹಳ ವ್ಯತ್ಯಾಸಗಳಿವೆ.

ಸರಕಾರದ ಜಮೀನುಗಳನ್ನು ಸಾಗುವಳಿಗಾಗಿ ಆಕ್ರಮಿಸಿಕೊಳ್ಳಲಾಗುತ್ತಿದೆ. ಇದರಿಂದ ಅರಣ್ಯ ವಿಸ್ತೀರ್ಣ ಕಡಿಮೆಯಾಗುತ್ತಾ ಸಾಗುವಳಿ ಭೂಮಿ ಹೆಚ್ಚುತ್ತಿದೆ. ಗಿಡಮರಗಳನ್ನು ಯಥೇಚ್ಛವಾಗಿ ಕಡಿದುಹಾಕುವುದು. ಮತ್ತು ಗಣಿಗಾರಿಕೆಯಿಂದ ಅರಣ್ಯಗಳು ಕ್ಷೀಣಿಸುತ್ತಿವೆ. ಅಷ್ಟೇ ಅಲ್ಲದೆ ಅಮೂಲ್ಯವಾದ ವೃಕ್ಷಸಂಪತ್ತು, ಪ್ರಾಣಿಸಂಪತ್ತು ಗಣನೀಯವಾಗಿ ಕಡಿಮೆಯಾಗುತ್ತಿದೆ. ಭೂಗರ್ಭದಲ್ಲಿ ಸೇರುವ ನೀರಿನ ಪ್ರಮಾಣವು ಪರವಾಹಕ ಪ್ರದೇಶದಲ್ಲಿನ ಗಿಡಮರಗಳನ್ನು ಆಧರಿಸಿರುತ್ತದೆ. ಭೂಮಿಯ ಮೇಲೆ ಮರಗಳಿಲ್ಲದಿದ್ದರೆ ಮಳೆಯ ನೀರು ಭೂಮಿಯಲ್ಲಿ ಇಂಗಿ ಹೋಗದೇ ಮೇಲ್ಮೈ ಪ್ರವಾಹವಾಗಿ ಹರಿಯುತ್ತದೆ. ಇದರಿಂದ ಭೂಗರ್ಭಜಲವು ಪುನರುದ್ಧರಿಸಲಾಗದೇ ಒಂದೊಂದು ಸಾರಿ ಆಕಸ್ಮಿಕವಾಗಿ ಪ್ರವಾಹಗಳಿಗೆ ಕಾರಣವಾಗುತ್ತಿದೆ. ಮಳೆಯಾಧಾರಿತ ಮತ್ತು ಕಾಲುವೆ ನೀರಿನ ಸೌಕರ್ಯ ಹೊಂದಿರುವ ಎರಡೂ ಪ್ರದೇಶಗಳಿಗೆ ಒಳ್ಳೆಯದಾಗಬೇಕೆಂದರೆ, ನೀರಿನ ಸಂರಕ್ಷಣೆಗೆ ಮತ್ತು ನೀರಿನ ಹಂಚಿಕೆಗೆ ವಿಭಿನ್ನವಾದ ವಿಧಾನಗಳನ್ನು ಅವಲಂಬಿಸಬೇಕು.

- ಭಾರತದೇಶ ನಕ್ಷೆಯಲ್ಲಿ ತುಂಗಭದ್ರ ನದಿ ಪ್ರವಾಹ ಮಾರ್ಗವನ್ನು ಗುರ್ತಿಸಿರಿ.

ಕಳೆದ ಕೆಲವು ದಶಮಾನಗಳಿಂದ ತುಂಗಭದ್ರ ಆಣೆಕಟ್ಟಿನ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. 50 ವರ್ಷಗಳ ಹಿಂದೆ ಆಣೆಕಟ್ಟಿನ ಸಾಮರ್ಥ್ಯ 376.6 ಕೋಟಿ ಘನಮೀಟರ್ (TMC) ಇದ್ದರೆ ಈಗ ಅದು ಗಣಿಗಾರಿಕೆ , ಧೂಳು, ವ್ಯರ್ಥ್ಯ ಪದಾರ್ಥಗಳು ರಿಜರ್‌ವಾಯರ್‌ನಲ್ಲಿ ನಿಕ್ಷೇಪಿಸಲ್ಪಟ್ಟು, ಅದರ ಸಾಮರ್ಥ್ಯ 84.9ಕೋಟಿ ಘನಮೀಟರ್‌ವರೆಗೆ ಕಡಿಮೆಯಾಗಿದೆ. ಕಬ್ಬಿಣ ಖನಿಜ ಅಗೆಯುವಿಕೆಯಲ್ಲಿ ಸರಿಯಾದ ಪದ್ಧತಿಗಳನ್ನು ಅವಲಂಬಿಸದಿರುವುದು ಇದಕ್ಕೆ ಕಾರಣ. ಕುದುರೆಮುಖದ ಕಬ್ಬಿಣದ ಅದಿರು, ಸಂಡೂರು ಹತ್ತಿರ ಮ್ಯಾಂಗನೀಸ್ ಖನಿಜ ಅಗೆಯುವಿಕೆಯಿಂದ ನದಿ ಪರಿವಾಹಕ ಪ್ರದೇಶದಲ್ಲಿ ಭೂ ಸವಕಳಿ ಹೆಚ್ಚಾಗಿ, ಪ್ರಾಚೀನ ಕೆರೆಗಳು, ಸಣ್ಣ ಜಲಾಶಯಗಳು, ತುಂಗಭದ್ರ ಜಲಾಶಯ ಹೂಳು ತುಂಬಲು ಕಾರಣ ಎಂದು ಒಂದು ವರದಿ ಹೇಳುತ್ತದೆ.

ಚಿತ್ರ 5. ತುಂಗಭದ್ರ ಆಣೆಕಟ್ಟು ನಿರ್ಮಾಣಂ

ಎಷ್ಟು ನೀರು ಬಳಕೆಗೆ ಲಭ್ಯವಿದೆ ಎಂಬ ವಿಷಯದಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಮಧ್ಯೆ ಘರ್ಷಣೆಗಳಿವೆ. ನೀರು ಮೇಲ್ಭಾಗದಲ್ಲಿ ಸಂಗ್ರಹಿಸಿದಾಗ ಅದು ಕೆಳಗಿನವರಿಗೆ ಲಭ್ಯವಾಗಬಹುದಾದ ನೀರನ್ನು ಪ್ರಭಾವಿತಗೊಳಿಸುತ್ತದೆ. ಎರಡೂ ರಾಜ್ಯಗಳ ಒಪ್ಪಂದದ ಪ್ರಕಾರ ನೀರನ್ನು ಹಂಚಲಾಗುತ್ತದೆ.

SCERT TELANGANA

ಶೇಕಡಾ 80ರಷ್ಟು ಜನಸಂಖ್ಯೆ ವ್ಯವಸಾಯವನ್ನು ಜೀವನಾಧಾರವಾಗಿಸಿಕೊಂಡಿರುವ ಈ ಎರಡು ರಾಜ್ಯಗಳಲ್ಲಿ ನೀರು ಬಹಳ ಪ್ರಧಾನವಾದದ್ದು. ವ್ಯವಸಾಯಕ್ಕೆ ಕಾಲುವೆಗಳ ಮೂಲಕ ನೀರು ಬಿಡುತ್ತಾರೆ. ಮಳೆಯಾದಾರಿತ ಪ್ರದೇಶದಲ್ಲಿ ಭೂಗರ್ಭಜಲವನ್ನು ಕೊಳವೆಬಾವಿ ಮೂಲಕ ಹೊರ ತೆಗೆಯುತ್ತಾರೆ. ಇಲ್ಲಿ ಭತ್ತ, ಜೋಳ, ಕಬ್ಬು, ರಾಗಿ ಪ್ರಧಾನ ಬೆಳೆಗಳು.

ಈ ಪ್ರದೇಶವು ಕಡಿಮೆ ನೀರಿನ ಬೆಳೆಗಳಿಗೆ ಅನುಕೂಲಕರವಾಗಿದ್ದರೂ ಪ್ರಧಾನವಾಗಿ ಬೆಳೆಯುವ (ಭತ್ತ, ಕಬ್ಬು) ಬೆಳೆಗಳಿಗೆ ಹೆಚ್ಚು ನೀರು ಬೇಕು. ನದಿ ಪರಿವಾಹಕ ಪ್ರದೇಶದಲ್ಲೆಲ್ಲಾ ಈ ಬೆಳೆಗಳನ್ನು ಸಾಗುವಳಿ ಮಾಡುವುದರಿಂದ ನೀರಿನ ಹಂಚಿಕೆಯಲ್ಲಿ, ಅದರ ಸಮತೋಲನೆಯಲ್ಲಿ ಗಣನೀಯ ಬದಲಾವಣೆಗಳು ಬಂದಿವೆ. ಈ ಬೆಳೆಗಳಿಗೆ ಎಲ್ಲಾ ಪ್ರದೇಶದಲ್ಲಿ ನೀರಿನ ಅವಶ್ಯಕತೆ ಇರುವುದರಿಂದ ಘರ್ಷಣೆಗಳು ಸಹಜ. ಭೂಮಿ ಮತ್ತು ಸಾಗುವಳಿ ನೀರು ಲಭ್ಯವಿರುವ ರೈತರಿಗೂ, ಲಭ್ಯವಿಲ್ಲದವರಿಗೂ ನಡುವೆ ತೀವ್ರ ಅಂತರಗಳಿವೆ. ಎಲ್ಲರಿಗೂ ನೀರು ಸಿಕ್ಕು, ಆ ನೀರನ್ನು ಸದ್ವಿನಿಯೋಗ ಮಾಡಬೇಕೆಂದರೆ ಆ ಪ್ರದೇಶಗಳೆಲ್ಲಾ ಬೆಳೆ ವಿಧಾನದಲ್ಲಿ ಬದಲಾವಣೆ ತರಬೇಕು.

ಕಳೆದ ಎರಡು ದಶಮಾನ ಕಾಲದಲ್ಲಿ ಸಣ್ಣ ಪಟ್ಟಣಗಳು, ಕೈಗಾರಿಕಾ ಪ್ರದೇಶಗಳು ಬಹಳ ಹೆಚ್ಚಿವೆ. ಇದರಿಂದ ನೀರಿಗಾಗಿ ಪರಸ್ಪರ ವಿರುದ್ಧ ಅವಶ್ಯಕತೆಗಳು ಮತ್ತಷ್ಟು ಸಂಕ್ಲಿಷ್ಟವಾಗಿವೆ. ಕೈಗಾರೀಕರಣ, ನಗರೀಕರಣದಿಂದ ಜನರ ಜೀವನ ಪ್ರಮಾಣಗಳು ಬೆಳೆದಿವೆ. ಆದರೆ ಇದರಿಂದ ಪ್ರತ್ಯೇಕವಾಗಿ ಕೈಗಾರಿಕೆಗಳಿಂದ ಕಾಲುಷ್ಯವು ಹೆಚ್ಚಾಗಿದೆ. ನದಿ ಪರಿವಾಹಕ ಪ್ರದೇಶಗಳಲ್ಲಿ 27 ಭಾರೀ ಮತ್ತು 2543 ಸಣ್ಣ ಕೈಗಾರಿಕೆ ಸಂಸ್ಥೆಗಳಿವೆ. ಇವು ಪ್ರತಿನಿತ್ಯ ದೊಡ್ಡ ಪ್ರಮಾಣದಲ್ಲಿ ನೀರನ್ನು ಬಳಸುತ್ತವೆ. ಈ ಕೈಗಾರಿಕೆಗಳಿಗೆ ನದಿಯಲ್ಲಿ ತಮ್ಮ ಕಲುಷಿತ ನೀರನ್ನು ಬಿಡಲು ಅನುಮತಿಸಲಾಗಿದೆ. ಆದರೆ 1984ರಲ್ಲಿ ನದಿಗೆ ಬಿಟ್ಟ ಬೆಲ್ಲದ ಮಡ್ಡಿ (ಕಾಕಂಬಿ) ಯಿಂದ ದೊಡ್ಡ ಪ್ರಮಾಣದಲ್ಲಿ ಮೀನುಗಳು ಸತ್ತಿದ್ದರಿಂದ ಪ್ರಜೆಗಳು ಪ್ರತಿಭಟಿಸಿದರು. ಅಂದಿನಿಂದ ಕೈಗಾರಿಕೆಗಳು ಶುದ್ಧೀಗೊಳಿಸಿದ ನೀರನ್ನು ಮಾತ್ರವೇ ನದಿಯಲ್ಲಿ ಬಿಡಬೇಕು. ಆದರೆ ಈ ಕಾನೂನುಗಳು ಸಮರ್ಥವಾಗಿ ಜಾರಿಯಾಗುತ್ತಿಲ್ಲ. ಇದರಿಂದ ನದಿ ವ್ಯವಸ್ಥೆ ತೀವ್ರ ಕಾಲುಷ್ಯಕ್ಕೆ ಗುರಿಯಾಗುತ್ತಿದೆ.

ವಿವಿಧ ರಂಗಗಳ ಅಭಿವೃದ್ಧಿಗೂ, ಸಣ್ಣ ಪಟ್ಟಣಗಳು, ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ವರ್ಗದ ಜನರಿಗೆ ಪರಿಶುಭ್ರತೆ, ಕುಡಿಯುವ ನೀರು ಕೊಡುವ ವಿಷಯದಲ್ಲಿ ಹೊಂದಾಣಿಕೆ ಇಲ್ಲದೆ ಹೋಗಿದೆ. ಕುಡಿಯುವ ನೀರು ಮತ್ತು ಪರಿಶುಭ್ರತೆ ಇವು ಜನರ ಕನಿಷ್ಠ ಅವಶ್ಯಕತೆಗಳೆಂದು, ಹಣ ಕೊಡದಿದ್ದರೂ ಇವುಗಳನ್ನು ಎಲ್ಲರಿಗೂ ಸಮಾನವಾಗಿ ಹಂಚಬೇಕೆಂದು ಕೆಲವು ಜನರು ಹೇಳುತ್ತಾರೆ. ಮೀಟರ್ ಅಳವಡಿಸಿ ನೀರು ಸರಬರಾಜು ಮಾಡಿದಾಗ ಸಮಾಜದಲ್ಲಿಯ ಒಂದು ವರ್ಗ ಹಣ ಸಲ್ಲಿಸದಿದ್ದರೂ ಅವರ ಮೂಲಭೂತ ಅವಶ್ಯಕತೆಗಳಿಗೂ ಸ್ವಲ್ಪ ನೀರು ಸಿಗುವಂತೆ ಕ್ರಮತೆಗೆದುಕೊಳ್ಳಬೇಕು. ನದಿ ಪರಿವಾಹಕ ಪ್ರದೇಶದ ಮೇಲಿನ ಒಂದು ವರದಿ ಹೀಗೆ ಹೇಳುತ್ತದೆ. "...ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸರಿಯಾದ ಯೋಜನೆಗಳನ್ನು ರೂಪಿಸಿಲ್ಲ, ಪ್ರತ್ಯೇಕವಾಗಿ ಸಣ್ಣ ಪಟ್ಟಣಗಳಲ್ಲಿ ನೀರಿನ ಲಭ್ಯತೆ ಮತ್ತು ಸಮನಾದ ಹಂಚಿಕೆಯಲ್ಲಿ ಸಮಸ್ಯೆಗಳಿವೆ. ಈ ಸಮಸ್ಯೆಗಳು ಬೇಸಿಗೆಯಲ್ಲಿ ಮತ್ತಷ್ಟು ತೀವ್ರವಾಗುತ್ತವೆ."

- ನೀರಿನ ಬಳಕೆ ಯೋಜನೆಗಳಿಗಾಗಿ ಸರ್ಕಾರ ನದಿ ಪರಿವಾಹಕ ಪ್ರಾಧಿಕಾರ ಸಂಸ್ಥೆ ಇದ್ದರೆ ಹೇಗೆ ಉಪಯೋಗಕರವಾಗಿರುತ್ತದೆ?
- ತುಂಗಭದ್ರ ಪರಿವಾಹಕ ಪ್ರದೇಶದಲ್ಲಿ ನೀರಿನ ಪರಸ್ಪರ ವಿರುದ್ಧ ವಿನಿಯೋಗಗಳು ಏನು?

ಆದ್ದರಿಂದ ನೀರಿನ ಸದ್ಬಳಕೆಯಲ್ಲಿ ಸಾಮಾಜಿಕ, ಆರ್ಥಿಕ ಅಂಶಗಳು ಬಹಳ ಮುಖ್ಯವಾದವು. ಒಂದು ಪ್ರದೇಶದಲ್ಲಿ ವಿವಿಧ ವರ್ಗಗಳ ನಡುವೆ ವ್ಯವಸಾಯ, ಕೈಗಾರಿಕೆ, ಕುಡಿಯುವ ನೀರಿನಂತಹ ರಂಗಗಳ ನಡುವೆ ವ್ಯತ್ಯಾಸಗಳಿವೆ. ಅಷ್ಟೇ ಅಲ್ಲದೆ ಈ ತುಂಗಭದ್ರಾ ನದಿ ಎರಡೂ ರಾಜ್ಯಗಳಲ್ಲಿ ಹರಿಯುತ್ತಿರುವುದರಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ನಡುವೆ ಸಹ ಸಾಕಷ್ಟು ವಿವಾದಗಳಿವೆ.

SCERT TELANGANA

ನೀರಿನ ತರ್ಕಸಮ್ಮತ್ತವಾದ- ಸಮ ವಿನಿಯೋಗ - ಒಂದು ಉದಾಹರಣೆ

ನೀರಿನ ಬಳಕೆಯ ಕುರಿತಂತೆ ನೀರನ್ನು ಸಮರ್ಥರೀತಿಯಲ್ಲಿ ನ್ಯಾಯವಾಗಿ ಬಳಸಲು ಅಂತರ್ಗತ, ಬಾಹ್ಯ ಪ್ರವಾಹಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಕುರಿತು ತಿಳಿದುಕೊಂಡೆವು. ಇದು ಒಂದು ಗ್ರಾಮಕ್ಕೆ ಸಂಬಂಧಿಸಿರಬಹುದು, ನದಿ ಪರಿವಾಹಕ ಪ್ರದೇಶಕ್ಕೆ ಆಗಿರಬಹುದು. ಇಂತಹ ಯೋಜನೆಗಳು ತಯಾರಿಸುವುದು, ಜಾರಿಗೊಳಿಸುವುದು ಸಾಧ್ಯವಾಗುತ್ತದೆ. ಹಿವಾರೇ ಬಜಾರು ಇದಕ್ಕೆ ಒಂದು ಉದಾಹರಣೆ.

ಗ್ರಾಮ ಪರಿವಾಹಕ, ಸಮಗ್ರಾಭಿವೃದ್ಧಿಗೆ 'ಆದರ್ಶ ಗ್ರಾಮ ಯೋಜನೆ ' ಕೆಳಗೆ ಹಿವಾರೇ ಬಜಾರ್ ಗ್ರಾಮವನ್ನು ಮಹಾರಾಷ್ಟ್ರ ಸರ್ಕಾರ ಆಯ್ಕೆ ಮಾಡಿದೆ. ಮಹಾರಾಷ್ಟ್ರದ ಅಹ್ಮದ್‌ನಗರ ಜಿಲ್ಲೆಯಲ್ಲಿ ಈ ಗ್ರಾಮವಿದೆ. ಮಹಾರಾಷ್ಟ್ರದಿಂದ ಕರಾವಳಿ ಕೊಂಕಣ ತೀರ ಪ್ರದೇಶವನ್ನು ಬೇರ್ಪಡಿಸುತ್ತಾ ಉತ್ತರ - ದಕ್ಷಿಣವಾಗಿ ಇರುವ ಸಹ್ಯಾದ್ರಿ ಪರ್ವತ ಶ್ರೇಣಿಗೆ (ಮಳೆ ನೆರಳಿನ ಪ್ರದೇಶದಲ್ಲಿ) ಪೂರ್ವಕ್ಕಿರುವ ಮಳೆನೆರಳಿನ ಪ್ರದೇಶದಲ್ಲಿ ಈ ಜಿಲ್ಲೆ ಇದೆ. ಅದಕ್ಕಾಗಿ ಈ ಜಿಲ್ಲೆ 400 ಮಿ.ಮೀ.ವಾರ್ಷಿಕ ಮಳೆಯ ಕಾರಣದಿಂದ ಬರಪೀಡಿತ ಜಿಲ್ಲೆಯಾಗಿದೆ.

ಹಿವಾರೇ ಬಜಾರಿನಲ್ಲಿ ಸಂಯುಕ್ತ ಭೂಮಿಗಳು, ವೈಯಕ್ತಿಕ ಭೂಮಿಗಳಲ್ಲಿ ಭೂ ಮತ್ತು ಜಲ ಸಂರಕ್ಷಣಾ ಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಬೆಟ್ಟಗಳ ಇಳಿಜಾರಿನಲ್ಲಿ ಸಮತಲ ಕಂದಕಗಳನ್ನು ಅಗೆದು ಮಣ್ಣಿನ ಸವಕಳಿ ಆಗದಂತೆ ಮಾಡಿದ್ದಾರೆ. ಈ ಕಂದಕಗಳು ಮಳೆ ನೀರನ್ನು ಸಂಗ್ರಹಿಸುತ್ತವೆ. ಇದರಿಂದ ಅಲ್ಲಿ ಹುಲ್ಲು ಚೆನ್ನಾಗಿ ಬೆಳೆಯುತ್ತದೆ. ನೀರನ್ನು ಸಂಗ್ರಹಿಸುವ ಅನೇಕ ನಿರ್ಮಾಣಗಳನ್ನು ಅಲ್ಲಿ ಕೈಗೊಂಡಿದ್ದಾರೆ. ಚೆಕ್ ಡ್ಯಾಂ ನಿರ್ಮಾಣ, ನೀರಿನ ಹಿಂಗುವ ಕುಣಿಗಳನ್ನು ತೋಡುವುದು, ಕಲ್ಲಿನ ಕಟ್ಟಡಗಳು, ರಸ್ತೆಯ ಎರಡೂ ಬದಿಯಲ್ಲಿ ಮರಗಳನ್ನು ನೆಡುವುದು; ಅರಣ್ಯಗಳಲ್ಲಿ ಗಿಡಮರ ಬೆಳೆಸುವುದಂತಹ ಕಾರ್ಯಕ್ರಮಗಳನ್ನು ಅಲ್ಲಿ ಕೈಗೊಳ್ಳುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ ಆದರ್ಶ ಗ್ರಾಮ ಯೋಜನೆ ಆರಂಭಿಸಿದಾಗ, ಗ್ರಾಮದ ಆಯ್ಕೆಗಾಗಿ ಕೆಲವು ಷರತ್ತುಗಳನ್ನು ಹಾಕಲಾಯಿತು. ಇದರಲ್ಲಿ ನಾಲ್ಕು ಮುಖ್ಯವಾದ ನಿಷೇಧಗಳಿವೆ. ರಾಲೇಗಾವ್ ಸಿದ್ದಿ ಎಂಬ ವ್ಯಕ್ತಿಯ ಸಾಧನೆಯಿಂದ ಅವು ಹೆಸರುವಾಸಿಯಾಗಿವೆ. ಆ ನಾಲ್ಕು ನಿಷೇಧಗಳೆಂದರೆ 1) ಮರಗಳನ್ನು ಕಡಿಯುವುದ ಮೇಲೆ ನಿಷೇಧ 2) ಪಶುಗಳನ್ನು ಸ್ವತಂತ್ರವಾಗಿ ಮೇಯಿಸದಿರುವುದು 3) ಮಾದಕ ದ್ರವ್ಯಸೇವನೆ ನಿಷೇಧ 4) ಅಧಿಕ ಸಂತಾನ ನಿಷೇಧ. ಅಷ್ಟೇ ಅಲ್ಲದೆ ಪ್ರಜೆಗಳು ಶ್ರಮಧಾನ ಮಾಡಬೇಕು. ಭೂಮಿ ಇಲ್ಲದ ಬಡವರಿಗೆ ಇದರಲ್ಲಿ ರಿಯಾಯಿತಿ ಇದೆ.

1980 ರ ಕೊನೆಯ ದಿನಗಳ ಪರಿಸ್ಥಿತಿ ಗಮನಿಸಿದರೆ ಈ ಆದರ್ಶಗಳು ಅರ್ಥವಾಗುತ್ತವೆ. ಬಡವ, ಶ್ರೀಮಂತನೆಂಬ ಬೇಧವಿಲ್ಲದಂತೆ ಅಲ್ಲಿ ಗಿಡಮರಗಳನ್ನು ಕಡಿಯುತ್ತಿದ್ದರು, ದನಗಳನ್ನು ಯಥೇಚ್ಛವಾಗಿ ಮೇಯಿಸುತ್ತಿದ್ದರು. ಸುತ್ತಮುತ್ತಲಿನ ಬೆಟ್ಟ ಗುಡ್ಡಗಳು ಆಗ ಬೋಳಾಗಿರುತ್ತಿದ್ದವು ಎಂದು ಬಹಳಷ್ಟು ಜನ ಸ್ಥಾನಿಕ ಪ್ರಜೆಗಳು ಹೇಳುತ್ತಾರೆ. ಆಗ ಭೂ ಕೊರತೆ ಹೆಚ್ಚಾಗಿತ್ತು. ಭೂಗರ್ಭಜಲ ಆಳಕ್ಕಿಳಿದವು. ಅಷ್ಟೇ ಅಲ್ಲದೆ ಅಡುಗೆಗೆ ಕಟ್ಟಿಗೆಯ ಕೊರತೆ, ಪಶುಗಳಿಗೆ ಹುಲ್ಲಿನ ಕೊರತೆ ತೀವ್ರವಾಗಿತ್ತು. ಅರಣ್ಯಗಳಲ್ಲಿ ಪಶುಗಳನ್ನು ಯಥೇಚ್ಛವಾಗಿ ಮೇಯಿಸುವುದನ್ನು ನಿಷೇಧಿಸಿದ ಬಳಿಕ ಜನರು ಹುಲ್ಲನ್ನು ಕೊಯ್ದು ಪಶುಗಳಿಗೆ ಹಾಕುತ್ತಿದ್ದಾರೆ.

ಆ ನಂತರ ಗ್ರಾಮದಲ್ಲಿ ಇನ್ನೂ ಕೆಲವು ನಿಷೇಧಗಳನ್ನು ತಂದರು. ಅವುಗಳಲ್ಲಿ ಮುಖ್ಯವಾದವು: ನೀರಿಗಾಗಿ ಕೊಳವೆ ಬಾವಿಗಳನ್ನು ತೋಡುವುದು, ಕಬ್ಬು, ಬಾಳೆ ಸಾಗುವಳಿಮಾಡುವುದು, ಹೊರಗಿನ ವ್ಯಕ್ತಿಗಳಿಗೆ ಭೂಮಿಯನ್ನು ಮಾರುವುದು. ನೀರಿನ ಬಳಕೆಯಲ್ಲಿ ದೀರ್ಘಕಾಲದ ಸುಸ್ಥಿರತೆ ಸಾಧಿಸುವ ಅಂಶಗಳೇ ಈ ವಿಧಾನದಲ್ಲಿ ಮುಖ್ಯ ಎಂದು ಅರ್ಥವಾಗುತ್ತದೆ. ಈ ನಿಷೇಧಗಳು ಕೇವಲ ಪ್ರಕಟಣೆಗಳಲ್ಲ, ಪ್ರಜೆಗಳೆಲ್ಲರ ಪ್ರಯೋಜನೆಗಳನ್ನು ಸಾಧಿಸಲು ಸಹಕರಿಸುವ ಪ್ರಜಾನಿರ್ಮಾಣ. ಆದರೆ ಯಾವುದೂ ಅಷ್ಟು ಸುಲಭವಾಗಿ ನಡೆಯಲಿಲ್ಲ.

SCERT TELANGANA

ಬೇಸಿಗೆಯಲ್ಲಿ ನೀರಿನಿಂದ ಸಾಗುವಳಿ ಮಾಡುವ ಭೂಮಿ 7 ಹೆಕ್ಟೇರ್‌ನಿಂದ 72 ಹೆಕ್ಟೇರ್‌ಗೆ ಬೆಳೆಯಿತು. ವಾರ್ಷಿಕ ಸರಾಸರಿ ಮಳೆ ಬಂದಾಗ ಖರೀಫ್ ಕಾಲದಲ್ಲಿ ಸಜ್ಜೆ, ರಬಿಯಲ್ಲಿ ಜೋಳ ಅಲ್ಲದೆ ಜಯಾದ್‌ನಲ್ಲಿ ಸ್ವಲ್ಪ ತರಕಾರಿಗಳನ್ನು ಬೆಳೆಯಲು ಸ್ವಲ್ಪ ನೀರು ಸಿಗುವಂತಾಯಿತು. ನೀರಾವರಿ ಸೌಕರ್ಯವಿಲ್ಲದ ಭೂಮಿಯಲ್ಲಿ ಕೂಡಾ ತೇವಾಂಶ ಹೆಚ್ಚಾಗಿದ್ದರಿಂದ ಉತ್ಪಾದಕತೆ ಹೆಚ್ಚಾಯಿತು. ಕಳೆದ ಕಾಲಕ್ಕಿಂತ ಈಗ ಬೆಳೆಗಳಲ್ಲಿ ವೈವಿಧ್ಯತೆ ಹೆಚ್ಚಾಯಿತು. ಈಗ ಅಲ್ಲಿ ಆಲೂಗಡ್ಡೆ, ಈರುಳ್ಳಿ, ದ್ರಾಕ್ಷಿ, ದಾಳಿಂಬೆ, ಹೂವಿನಂತಹ ವಾಣಿಜ್ಯ ಬೆಳೆಗಳು, ಗೋದಿಯನ್ನು ಸಹ ಬೆಳೆಯುತ್ತಾರೆ. ಎಲ್ಲಕ್ಕಿಂತ ಹೇಳಿಕೊಳ್ಳಬಹುದಾದ ಪರಿಣಾಮವೇನಂದರೆ ನೀರಿನ ಲಭ್ಯತೆ ಹೆಚ್ಚಾಗಿ, ಎರಡನೇ ಬೆಳೆ ಬೆಳೆಸಲು ಸಾಧ್ಯವಾದ್ದರಿಂದ ಜನರು ಇತರ ಪ್ರದೇಶಗಳಿಗೆ ವಲಸೆ ಹೋಗುವುದು ಕಡಿಮೆಯಾಯಿತು. ಸಣ್ಣ ರೈತರು ತಮ್ಮ ಭೂಮಿಗಳ ಮೂಲಕ ಪೂರ್ಣ ಜೀವನೋಪಾಯ ಪಡೆಯದಿದ್ದರೂ ಅವರ ಭೂಮಿಯ ಉತ್ಪಾದಕತೆ ಗಣನೀಯವಾಗಿ ಹೆಚ್ಚಾಯಿತು. ಕೂಲಿದರಗಳು ಇನ್ನೂ ಕಡಿಮೆ ಇದ್ದಾಗ್ಯೂ ಅವು ಸ್ವಲ್ಪ ಮಟ್ಟಿಗೆ ಬೆಳೆದಿದ್ದರಿಂದ ಕೂಲಿಕಾರರ ಪರಿಸ್ಥಿತಿ ಕೂಡಾ ಉತ್ತಮಗೊಂಡಿದೆ.

ಭೂಗರ್ಭ ಜಲಹೊರತೆಗೆಯುವಿಕೆ, ವಿನಿಯೋಗದ ಮೇಲೆ ಸಾಮಾಜಿಕ ನಿಯಂತ್ರಣ ಬಹಳ ಮುಖ್ಯ. ನೀರಾವರಿ ಸೌಕರ್ಯಗಳಿಗಾಗಿ ಕೊಳವೆ ಬಾವಿಗಳನ್ನು ತೋಡಬಾರದು(ಕುಡಿಯುವ ನೀರಿಗಾಗಿ ತೋಡಬಹುದು). ನೀರು ಅಧಿಕವಾಗಿ ಬೇಕಾಗುವ ಕಬ್ಬಿನಂತಹ ಬೆಳೆಗಳನ್ನು ಬೆಳೆಸಬಾರದು. ಸಾಗುವಳಿ ನೀರನ್ನು ಸಾಮಾನ್ಯ ಬಾವಿಗಳಿಂದಲೇ ಪಡೆಯಬೇಕು. ಅಷ್ಟೇ ಅಲ್ಲದೆ ಕೆಲವು ಕಠಿಣ ನಿಯಮಗಳನ್ನು ಕೂಡಾ ರೂಪಿಸಿದ್ದಾರೆ. ಉದಾಹರಣೆಗೆ ವರ್ಷಾಪಾತ ಚೆನ್ನಾಗಿದ್ದರೆ ಚಳಿಗಾಲದಲ್ಲಿ ಒಟ್ಟು ವಿಸ್ತೀರ್ಣವನ್ನು ಸಾಗುವಳಿ ಮಾಡಬಹುದು. ಆದರೆ ಮಳೆ ಕಡಿಮೆ ಇದ್ದರೆ ಚಳಿಗಾಲದಲ್ಲಿ ಸಾಗುವಳಿ ವಿಸ್ತೀರ್ಣವನ್ನು ಕಡಿಮೆಮಾಡಬೇಕು. ವರ್ಷಾಪಾತ ವಿವರಗಳನ್ನು ಖಚಿತವಾಗಿ ದಾಖಲಿಸಿ ಬೆಳೆಯ ಯೋಜನೆಗಳನ್ನು ತಯಾರಿಸುತ್ತಾರೆ. ನೀರಿನ ಪ್ರಾಧಾನ್ಯತೆಯನ್ನು ನಿರ್ಣಯಿಸುತ್ತಾರೆ. ಈ ಕಾರಣಗಳಿಂದ ಕೆಲವು ವರ್ಷಗಳಿಂದ ಕಡಿಮೆ ಮಳೆ ಬರುತ್ತಿದ್ದರೂ ಕುಡಿಯುವ ನೀರಿನ ಕೊರತೆ ಏಪಟ್ಟಿಲ್ಲ. ಲಭ್ಯವಿರುವ ನೀರನ್ನು ಆಧರಿಸಿ ಯೋಜನೆಗಳನ್ನು ರೂಪಿಸಿಕೊಂಡಿದ್ದರಿಂದ ಇದು ಸಾಧ್ಯವಾಗಿದೆ.

ಚಿತ್ರ 5.2 ಹಿವಾರೇ ಬಜಾರು - ಭೂಸವೆತ, ನೀರಿನ ಸಂರಕ್ಷಣೆ ಮುಂದಿನ ನಂತರದ ಚಿತ್ರಗಳು

SCERT TELANGANA

- ಹಿವಾರೇ ಬಜಾರಿನಲ್ಲಿ ನೀರಿನ ಸಂರಕ್ಷಣೆಗಾಗಿ ಕೈಗೊಂಡ ಕೆಲಸಗಳನ್ನು ಸೂಚಿಸುವ ವಾಕ್ಯಗಳ ಕೆಳಗೆ ಗೆರೆ ಹಾಕಿರಿ.
- ನೀರಿನ ಲಭ್ಯತೆಯನ್ನಾಧರಿಸಿ ವ್ಯವಸಾಯ ಯೋಜನೆ ತಯಾರಿಸಲು ಎಂತಹ ಪ್ರಯತ್ನ ನಡೆದಿದೆ?
- ನಿಮಗೆ ಅಂತರ್ಜಾಲ ಸೌಲಭ್ಯವಿದ್ದರೆ ಹಿವಾರೇ ಬಜಾರಿಗೆ ಸಂಬಂಧಿಸಿದ ವೀಡಿಯೋ ಚಿತ್ರವನ್ನು ಈ ಲಿಂಕಿನಲ್ಲಿ ನೋಡಿರಿ.: http://bit.ly/koth Ll

ಪಶು ಪೋಷಣೆ ರಂಗವು ಅಭಿವೃದ್ಧಿ ಹೊಂದಿರುವುದರಿಂದ ಸಣ್ಣ ರೈತರು ಇದರಿಂದ ಹೆಚ್ಚಿನ ಪ್ರಯೋಜನ ಹೊಂದಿದ್ದಾರೆ. ಎಲ್ಲರ ಜೀವನವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಿವಾರೇ ಬಜಾರು ಗ್ರಾಮದಲ್ಲಿ ಪಶುಪೋಷಣೆ ಬಗ್ಗೆ ಹೆಚ್ಚಿನ ಶ್ರದ್ಧೆವಹಿಸುತ್ತಿದ್ದಾರೆ. ಅನೇಕ ಸಣ್ಣ ರೈತರಿಗೆ ಸಾಲಗಳನ್ನು ಕೊಟ್ಟಿದ್ದಾರೆ. ಇದರಿಂದ ಗ್ರಾಮದಲ್ಲಿ ದನಕರುಗಳ ಸಂಖ್ಯೆ ಹೆಚ್ಚಾಗಿದೆ. ಉತ್ತಮ ಉತ್ಪಾದಕತೆ ಕಾರಣದಿಂದ ಹುಲ್ಲಿನ ಲಭ್ಯತೆ ಕೂಡಾ ಹೆಚ್ಚಾಗಿರುವುದರಿಂದ ಈ ಪರಿಣಾಮಕ್ಕೆ ಸಹಕಾರಿಯಾಗಿದೆ. ಪ್ರತಿದಿನದ ಹಾಲಿನ ಉತ್ಪತ್ತಿ 140 ಲೀಟರುಗಳಿಂದ 3,000 ಲೀಟರ್‌ಗಳವರೆಗೆ ಬೆಳೆದು 20 ರಷ್ಟು ಪ್ರಗತಿಯನ್ನು ಸಾಧಿಸಿದೆ.

ಆದರೆ ಗ್ರಾಮದ ಗಡಿಯಂತಹ ಚಿಕ್ಕ ಪ್ರದೇಶಗಳಲ್ಲಿ ಭೂಗರ್ಭಜಲ ಹೊರತೆಗೆಯುವು ದನ್ನು ನಿಯಂತ್ರಿಸು ವುದರಿಂದ ಲಾಭವಿಲ್ಲ ಎಂಬ ವಿಷಯ ಅರ್ಥವಾಯಿತು. ಪಕ್ಕದ ಗ್ರಾಮಗಳು ಆಳವಾದ ಕೊಳವೆಬಾವಿ ಹಾಕಿ ಭೂಗರ್ಭಜಲ ಉಪಯೋಗಿಸುವುದನ್ನು ಆರಂಭಿಸಿದವು. ಇದರ ಮೇಲೆ ಹಿವಾರೇ ಬಜಾರ್ ಗ್ರಾಮಕ್ಕೆ ಯಾವುದೇ ನಿಯಂತ್ರಣ ವಿಲ್ಲದಾಯಿತು. ಆದ್ದರಿಂದ ನದಿ ಪರಿವಾಹಕ ಪ್ರದೇಶ ಅಥವಾ ಉಪ ಪ್ರದೇಶ ಪರಿಧಿಯಲ್ಲಿ ವ್ಯವಸ್ಥಾಗತ ನಿಯಮಗಳು ಮತ್ತು ಅವಗಾಹನೆಗಳು ಅವಶ್ಯಕವಾಗುತ್ತವೆ.

ಸಂಯುಕ್ತ ಸಂಪನ್ಮೂಲವಾಗಿ ನೀರು

ಕಳೆದ ಕೆಲವು ದಶಮಾನಗಳಿಂದ ಭೂಗರ್ಭಜಲವು ಪ್ರತ್ಯೇಕವಾಗಿ ಗೃಹ ಅವಶ್ಯಕತೆಗಳಿಗೆ, ವ್ಯವಸಾಯಕ್ಕೆ ಮುಖ್ಯವಾದ ಸಂಪನ್ಮೂಲವಾಗಿದೆ. ಈ ಜಲದ ವಿನಿಯೋಗವು ಗಣನೀಯವಾಗಿ ಬೆಳೆಯುತ್ತಿರುವುದರಿಂದ ಲಭ್ಯವಿರುವ ಒಟ್ಟುನೀರು, ಅವು ಯಾರಿಗೆ ಸೇರುತ್ತವೆ ಎಂಬ ವಿಷಯಗಳನ್ನು ತೀವ್ರವಾಗಿ ಪ್ರಭಾವಿತ ಗೊಳಿಸಿದೆ.

ಅನೇಕ ರಾಜ್ಯಗಳಲ್ಲಿ ಭೂಗರ್ಭಜಲಕ್ಕೆ ಸಂಬಂಧಿಸಿದ ಕಾನೂನುಗಳು ಹಳೆಯವು. ಅವು ಪ್ರಸ್ತುತ ಪರಿಸ್ಥಿತಿಗಳಿಗೆ ಅನುಕೂಲಕರವಾಗಿಲ್ಲ. ಭೂಗರ್ಭಜಲ ಬಳಕೆ ನಾಮಮಾತ್ರವಾಗಿರುವ ಕಾಲದಲ್ಲಿ ಈ ಕಾನೂನು ರೂಪಿಸಲ್ಪಟ್ಟಿವೆ. ಇಂದು ಕೊಳವೆ ಬಾವಿಗಳು ವಿವಿಧ ಆಳದಲ್ಲಿರುವ ದೊಡ್ಡಮೊತ್ತದ ನೀರನ್ನು ಹೊರಹಾಕುತ್ತಿವೆ. ನೀರನ್ನು ಸಕ್ರಮವಾಗಿ ಬಳಸಿಕೊಳ್ಳುವುದು ಹೇಗೆ?

ಭೂಗರ್ಭಜಲಕ್ಕೆ ಸಂಬಂಧಿಸಿದ ಪ್ರಸ್ತುತ ಕಾನೂನುಗಳು ಇಂದಿನ ಪರಿಸ್ಥಿತಿಗಳಿಗೆ ಸೂಕ್ತವಾಗಿಲ್ಲ. ಭೂಮಿಯ ಹಕ್ಕಿಗೂ, ಭೂಗರ್ಭಜಲ ಹಕ್ಕಿಗೂ ಸಂಬಂಧ ಕಲ್ಪಿಸಿರುವುದು ಈ ನಿಯಮಗಳಲ್ಲಿನ ದೋಷವಾಗಿದೆ. ಭೂಭಾಗದ ಮೇಲಿಂದಲೇ ಭೂಗರ್ಭ ಜಲವನ್ನು ತೆಗೆಯಬೇಕಾಗಿರುವುದರಿಂದ ಈ ನಿಯಮಗಳನ್ನು ರೂಪಿಸಿದ್ದಾರೆ. ಭೂಮಿಯ ಕೆಳಗಿನಿಂದ ತೆಗೆದ ಭೂಗರ್ಭಜಲದ ಮೇಲೆ ಆ ಭೂಮಿಯ ಯಜಮಾನನಿಗೆ ಹಕ್ಕು ಇದೆ ಎಂದು ಭಾವಿಸಿದರು. ಇದರ ಅರ್ಥ ಭೂಗರ್ಭಜಲದ ಮೇಲೆ ಹಕ್ಕು ಭೂಮಿ ಇರುವವರಿಗೆ ಇರುತ್ತದೆ. ಅಂತರ್ಜಲವನ್ನು ಎಷ್ಟರ ಮಟ್ಟಿಗೆ ತೆಗೆಯುತ್ತಾರೆ ಎಂಬುದರ ಮೇಲೆ ಯಾವುದೇ ಪರಿಮಿತಿ ಇಲ್ಲ.

ಮೇಲಿನ ವಿಧಾನದಲ್ಲಿರುವ ಲೋಪವೇನು? ಭೂಭಾಗದ ಮೇಲೆ ಏರ್ಪಡಿಸಿಕೊಂಡ ಒಡೆತನದ ಗಡಿಗಳನ್ನು ಭೂಗರ್ಭಜಲ ಅನುಸರಿಸುವುದಿಲ್ಲ. ನೀರು ಪ್ರವಹಿಸುವ ಸಂಪನ್ಮೂಲ. ಒಂದು ಕೊಳವೆ ಬಾವಿಯಲ್ಲಿನ ನೀರು ಭೂಗರ್ಭದಲ್ಲಿ ಕಲ್ಲಿನ ಪೊರೆಗಳ ಏರ್ಪಾಟು, ವರ್ಷಾಪಾತ, ಭೂಮಿಯಲ್ಲಿ ಇಂಗುವ ನೀರು ಮೊದಲಾದವುಗಳನ್ನು

SCERT TELANGANA

ಆಧರಿಸಿದೆ. ಇವೆಲ್ಲಾ ಒಂದು ವಿಶಾಲ ಪ್ರದೇಶದಲ್ಲಿ ನಡೆಯುತ್ತವೆ. ಆದ್ದರಿಂದ ಆ ಪ್ರದೇಶದಲ್ಲಿಯ ಇತರ ಕ್ರಮಗಳು ಆ ಬಾವಿ ಒಟ್ಟು ನೀರನ್ನು ಪ್ರಭಾವಿತಗೊಳಿಸುತ್ತವೆ. ಉದಾಹರಣೆಗೆ ಒಂದು ಕೊಳವೆಬಾವಿಯಿಂದ ಹೆಚ್ಚು ನೀರು ಹೊರತೆಗೆದಾಗ ಸುತ್ತಮುತ್ತಲಿನ ಬಾವಿ , ಕೊಳವೆಬಾವಿ ಬತ್ತಿ ಹೋಗಬಹುದು. ಪಕ್ಕದವರಿಗಿಂತ ತಾವು ಆಳವಾದ ಕೊಳವೆಬಾವಿ ಹಾಕಿಸಬೇಕೆಂದು ಪ್ರತಿಯೊಬ್ಬರೂ ಭಾವಿಸುತ್ತಾರೆ. ಒಂದು ಪ್ರದೇಶದ ಕೊಳವೆಬಾವಿಗಳೆಲ್ಲಾ ಭೂಗರ್ಭ ಸ್ವರೂಪದ ಕಾರಣದಿಂದ ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಆದ್ದರಿಂದ ಒಂದೇ ಆಳದ ಕೊಳವೆ ಬಾವಿಗಳು ಬತ್ತಿಹೋಗಬಹುದು. ಆದ್ದರಿಂದ ಹರಿಯುವ ನೀರಿನ ಮೇಲೆ 'ಒಡೆತನ ' ಕುರಿತು ಆಲೋಚಿಸುವುದು ಸರಿಯಾದುದಲ್ಲ. ಭೂಮಿಯ ಮೇಲೆ ಬೀಸುವ ಗಾಳಿಯೊಂದಿಗೆ ಹೋಲಿಸಿರಿ – ಅದು ಯಾವಾಗಲೂ ಪ್ರವಹಿಸುತ್ತಿರುತ್ತದೆ. ಆದ್ದರಿಂದ ಅದಕ್ಕೆ ಸರಹದ್ದುಗಳನ್ನು ನಿರ್ಣಯಿಸುವುದು ಸಾಧ್ಯವಿಲ್ಲ. ಅದೇ ವಿಧವಾಗಿ ಭೂಮಿಯಲ್ಲಿ ಪ್ರವಹಿಸುವ ನೀರಿಗೆ ಯಾವುದೇ ಸರಹದ್ದುಗಳು ಇರುವುದಿಲ್ಲ.

ಪ್ರಸ್ತುತ ಭೂಗರ್ಭಜಲವೇ ಪ್ರಜೆಗಳ ಪ್ರಧಾನ ನೀರಿನ ಸಂಪನ್ಮೂಲವಾಗಿದೆ. ಈ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಹೊರ ತೆಗೆದಾಗ, ಅದರೊಂದಿಗೆ ಸಂಬಂಧವಿರುವ ಇತರ ಪ್ರದೇಶಗಳು ಕೂಡಾ ಪ್ರಭಾವಕ್ಕೊಳಗಾಗುತ್ತವೆ. ಮುಂದಿನ ಪೀಳಿಗೆಗೆ ಬೇಕಾಗುವ ನೀರಿನ ಸಂಗ್ರಹದ ಮೇಲೆ ಕೂಡಾ ಪ್ರಭಾವ ಬೀರುತ್ತವೆ. ಆದ್ದರಿಂದ ಭೂಮಿಯ ಯಜಮಾನರಿಗೆ ತಮ್ಮ ಇಷ್ಟದಂತೆ ನೀರು ತೆಗೆಯುವ ಹಕ್ಕನ್ನು ಕೊಡಲಾಗದು. ಇದರ ಮೇಲೆ ಪರಿಮಿತಿಗಳಿರಬೇಕು. ಭೂ ಒಡೆತನಕ್ಕೂ, ಭೂಮಿಯ ಮೇಲಿಂದ ಭೂಗರ್ಭಜಲ ಹೊರತೆಗೆಯುವುದರ ಮಧ್ಯೆ ಸಂಬಂಧವಿಲ್ಲದಂತೆ ಮಾಡಿದರೆ ಈ ಪರಿಮಿತಿಗಳು ಆಮೋದಯೋಗ್ಯವಾಗಿರುತ್ತವೆ.

ಭೂಮಿಯ ಮತ್ತು ನೀರಿನ ಮೇಲಿನ ಹಕ್ಕುಗಳಿಗೆ ಸಂಬಂಧ ಇದ್ದಾಗ ನೀರಿನ ಸಕ್ರಮ ಬಳಕೆಯಮೇಲೆ ವೈಯಕ್ತಿಕ ಭೂಯಜಮಾನರ ಮೇಲೆ ಯಾವುದೇ ಒತ್ತಡ ಇರುವುದಿಲ್ಲ. ಅದೇ ರೀತಿ ಪರಿಸರಕ್ಕೆ , ಪ್ರಜೆಗಳೆಲ್ಲರಿಗೂ ಪ್ರಯೋಜನವಾಗುವಂತಹ ವಿಧಾನಗಳನ್ನು ಜಾರಿಗೊಳಿಸುವ ಮಾರ್ಗಗಳಿಲ್ಲ. ಯಾವುದೇ ನಿಯಂತ್ರಣವಿಲ್ಲದ ಈ ವ್ಯವಸ್ಥೆಯಲ್ಲಿ ಒಂದು ಪ್ರದೇಶದಲ್ಲಿ ಎಷ್ಟು ಕೈಪಂಪುಗಳಿವೆ, ಬಾವಿಗಳೆಷ್ಟು, ಕೊಳವೆ ಬಾವಿಗಳೆಷ್ಟು ಇರಬಹುದು ಎಂದು ನಿರ್ಣಯಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಆದ್ದರಿಂದ ನೀರನ್ನು ಜನರೆಲ್ಲರಿಗೆ ಉದ್ದೇಶಿಸಿದ ಸಂಯುಕ್ತ ಆಸ್ತಿ ಎಂದೇ ಪರಿಗಣಿಸಬೇಕು. ರಸ್ತೆಗಳು, ನದಿಗಳು, ಉದ್ಯಾನವನಗಳು, ಅಂತರ್ಜಲ ಎಲ್ಲವೂ ಎಲ್ಲರಿಗೆ ಸೇರಿದ 'ಪ್ರಜಾಆಸ್ತಿ' ಎಂದು ಭಾವಿಸಬೇಕು. ಇದನ್ನು ಕೆಲವು ರಾಜ್ಯ ಸರ್ಕಾರಗಳು ಗುರುತಿಸಿವೆ. ಆದರೂ ಇನ್ನೂ ವಿಸ್ತೃತವಾಗಬೇಕು.

ನಿಯಂತ್ರಣ ಎನ್ನುವುದು ಸುಲಭದ ಮಾತಲ್ಲ. ವಿದ್ಯುತ್, ಪೆಟ್ರೋಲ್, ಗ್ಯಾಸ್, ನೀರು ಮೊದಲಾದ ಸಂಪನ್ಮೂಲಗಳ ಬಳಕೆಯು ಒಬ್ಬರ ಬಳಕೆಯ ನಂತರ ಇನ್ನೊಬ್ಬರ ಲಭ್ಯತೆಯನ್ನು ಪ್ರಭಾವಿತ ಗೊಳಿಸುತ್ತವೆ. ಭೂಗರ್ಭಜಲವು ಕ್ಷೀಣಿಸುತ್ತಿರುವ ಪರಿಸ್ಥಿತಿಗಳನ್ನು ರಾಜ್ಯ ಸರ್ಕಾರಗಳು ಗುರ್ತಿಸಬೇಕು. ಬದಲಿಗೆ ಮತ್ತಷ್ಟು ಆಳದಿಂದ ನೀರು ತೆಗೆಯಲು ಅನುಕೂಲವಾಗುವಂತೆ ವಿದ್ಯುತ್ ಸಬ್ಸಿಡಿಗಳನ್ನು ಕೊಡುತ್ತಿವೆ. ಭೂಗರ್ಭಜಲದ ವಿನಿಯೋಗವನ್ನು ನಿಯಂತ್ರಿಸದೇ, ಅವುಗಳ ಬಳಕೆಯನ್ನು ಪ್ರೋತ್ಸಾಹಿಸುವ ಸಬ್ಸಿಡಿಗಳಿಂದ ಉಪಯೋಗವಿಲ್ಲವೆಂದು ನಮಗೆ ಸ್ಪಷ್ಟವಾಗಿ ಗೊತ್ತು. ಈ ನಿಯಂತ್ರಣಗಳು ಕೆಲಸ ಮಾಡಬೇಕಾದರೆ ರಾಜಕೀಯ ಆಲೋಚನೆಗಳು ಬದಲಾಗಬೇಕು. ಇತರರಿಗಿಂತ ತಾವೇ ಮುಂಚಿತವಾಗಿ ನೀರನ್ನು ಬಳಸಿಕೊಳ್ಳಲು ಪೈಪೋಟಿ ನಡೆಸುತ್ತಿರುವುದರಿಂದ ಈ ಸಂಯುಕ್ತ ಸಂಪನ್ಮೂಲವು ಬೇಗನೆ ನಶಿಸಿಹೋಗುವ ಅಪಾಯವಿದೆ. ಪ್ರಸ್ತುತ ನಮ್ಮ ಮುಂದೆ ಇರುವ ಪ್ರಧಾನ ಸಮಸ್ಯೆ ಇದೇ.

ನೀರು ಎಂಬುದು ಪ್ರವಹಿಸುವ ಜಂಟಿ ಆಸ್ತಿ ಎಂದು ಗುರುತಿಸುವ ಕಾನೂನುಗಳು, ನಿಭಂದನೆಗಳು ನಮಗೆ ಅವಶ್ಯಕ. ಕುಡಿಯುವ ನೀರಿಗೆ ಮೊದಲ ಸ್ಥಾನ ನೀಡುವುದರ ಜೊತೆಗೆ ಅದನ್ನು ಪಡೆಯುವುದು ಕೂಡಾ ಮಾನವ ಹಕ್ಕು. ಭೂಗರ್ಭಜಲದ ವಿನಿಯೋಗದ ಮೇಲೆ ಪಂಚಾಯತ್‌ರಾಜ್ ಸಂಸ್ಥೆಗೆ ನಿಯಂತ್ರಣ ಇರಬೇಕು.

ಕೇರಳದಲ್ಲಿ ಪೆರುಮಟ್ಟಿ ಗ್ರಾಮದಲ್ಲಿ ಪಂಚಾಯತಿಗೂ, ಕೋಕೋಕೋಲಾ ಕಂಪನಿಯ ನಡುವೆ ತಲೆ ಎತ್ತಿದ ವಿವಾದವನ್ನು ನೋಡೋಣ. ಸುತ್ತ ಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗುತ್ತಿರುವುದರಿಂದ,

SCERT TELANGANA

ಅದರ ಬಳಕೆಗೆ ಆ ಕಂಪನಿಗೆ ನೀಡಿದ ಲೈಸೆನ್ಸ್‌ನ್ನು ನವೀಕರಿಸಬೇಕೆಂದು ಪಂಚಾಯ್ತಿ ನಿರ್ಣಯ ತೆಗೆದುಕೊಂಡಿತು. ಅಲ್ಲದೇ ಆ ಕಂಪನಿಯಿಂದ ಕುಡಿಯುವ ನೀರಿನ ಶುದ್ಧತೆಯ ಮೇಲೆ ಸಹ ಪರಿಣಾಮ ಬೀರುತ್ತಿದೆ. ಸ್ಥಳೀಯ ಸರಕಾರದ ಅಧೀನದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವು ಅಲ್ಲಿನ ನೀರು ಕುಡಿಯಲು ಯೋಗ್ಯವಲ್ಲವೆಂದು ನಿರ್ಣಯಿಸಿತು. ಈ ವಿವಾದವು ನ್ಯಾಯಾಲಯ ಮೆಟ್ಟಿಲೇರಿತು. ಜನವರಿ 2014ರಲ್ಲಿ ಈ ವಿವಾದವು ದೇಶದ ಅತ್ಯುನ್ನತ ನ್ಯಾಯಸ್ಥಾನದಲ್ಲಿ ವಿಚಾರಣೆಯಲ್ಲಿದೆ. ಕೇರಳದಲ್ಲಿ ಇಬ್ಬರು ನ್ಯಾಯಾಧೀಶರು ನೀಡಿದ ತೀರ್ಪುಗಳು ಭೂಗರ್ಭ ಜಲಕ್ಕೆ ಸಂಬಂಧಿಸಿ ಪರಸ್ಪರ ವಿರುದ್ಧವಾಗಿದ್ದವು. ಮೊದಲನೇ ನ್ಯಾಯಾಧೀಶರು ಅಂತರ್ಜಲವು ಎಲ್ಲರ ಅವಶ್ಯಕತೆಗೆ ಸಂಬಂಧಿಸಿದ ಪ್ರಜಾ ಸಂಪನ್ಮೂಲವಾಗಿ ಪರಿಗಣಿಸಿ ಯಾರೊಬ್ಬರೂ ಅದನ್ನು ಹೆಚ್ಚಾಗಿ ಬಳಸದಂತೆ ಸರಕಾರವು ನಿಯಂತ್ರಿಸಬೇಕೆಂದು ಭಾವಿಸಿದರು. ಎರಡನೇ ನ್ಯಾಯಾಧೀಶರು ಇದಕ್ಕೆ ವಿರುದ್ಧವಾಗಿ ಭೂ ಒಡೆಯನಿಗೆ ಅಲ್ಲಿನ ಅಂತರ್ಜಲದ ಮೇಲೆ ಸಂಪೂರ್ಣ ಹಕ್ಕು ಇರುತ್ತದೆ ಎಂದು ತೀರ್ಪು ಕೊಟ್ಟರು. ಈ ಎರಡು ಪರಸ್ಪರ ವಿರುದ್ಧ ತೀರ್ಪುಗಳು ನಮ್ಮ ಕಾನೂನಿನಲ್ಲಿರುವ ಗೊಂದಲವನ್ನು ತಿಳಿಸುತ್ತವೆ.

- ಹಿವಾರೇ ಬಜಾರಿನಂತೆ ಅಂತರ್ಜಲ ನಿಯಂತ್ರಣವನ್ನು ಪ್ರಜೆಗಳೇ ನಿಯಂತ್ರಿಸಬೇಕಾ?
- 'ಅಂತರ್ಜಲಕ್ಕೆ ಸಂಬಂಧಿಸಿದ ಕಾನೂನುಗಳು ಹಳೆಯದಾಗಿದ್ದು ಅವು ಪ್ರಸ್ತುತ ಕಾಲಕ್ಕೆ ಸರಿಯಾಗುವುದಿಲ್ಲ.' ವಿವರಿಸಿರಿ.
- 'ಅಂತರ್ಜಲ ಎಲ್ಲರ ಆಸ್ತಿ'ನಿಮ್ಮ ಅಭಿಪ್ರಾಯವನ್ನು ವಿವರಿಸಿರಿ.

ಮುಕ್ತಾಯ

ಮೊದಲಿನ ಭಾಗದಲ್ಲಿ ನಾವು ಭಾರತದ ವಿವಿಧ ಭೂ ಭೌಗೋಳಿಕ ಪರಿಸ್ಥಿತಿಗಳನ್ನು ಕುರಿತು, ನದೀ ವ್ಯವಸ್ಥೆಗಳ ಕುರಿತು ತಿಳಿದುಕೊಂಡೆವು. ಒಂದು ಪ್ರದೇಶದಲ್ಲಿ ಅಂದರೆ ಅದು ಸಣ್ಣ ಪರಿವಾಹಕ ಪ್ರದೇಶವಾಗಲಿ, ನದಿ ಪರಿವಾಹಕ ಪ್ರದೇಶವಾಗಲಿ ಇರಬಹುದು, ನೀರಿನ ಬಳಕೆಗೆ ಅಂತರ್ಗತ ಮತ್ತು ಬಾಹ್ಯ ಪ್ರವಾಹಗಳ ನೀರನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಈ ಅವಗಾಹನೆಯಿಂದ ಪ್ರಸ್ತುತ ನೀರಿನ ಅಸಂಬದ್ಧ ಬಳಕೆ, ದುರ್ವಿನಿಯೋಗವಾಗುತ್ತಿರುವ ವಿಧಾನ ನಮಗೆ ಅರ್ಥವಾಗುತ್ತದೆ. ತುಂಗಭದ್ರಾ ನದಿ ಪರಿವಾಹಕ ಪ್ರದೇಶದ ಅಧ್ಯಯನದ ಮೂಲಕ ನೀರನ್ನು ಸಕ್ರಮವಾಗಿ,ಸಮವಾಗಿ ಹೇಗೆ ಬಳಸಬೇಕೆಂದು ತಿಳಿದುಕೊಂಡೆವು. ಇದು ಸಂಕ್ಲಿಷ್ಟವಾದ ವಿಷಯವಾದರೂ ಸಾಧ್ಯವಾಗುವ ವಿಷಯವೂ ಹೌದು. ಅದೇ ವಿಧವಾಗಿ ಸಣ್ಣ ಪ್ರದೇಶದಲ್ಲಿ ಸಾಮಾಜಿಕ ಸಹಭಾಗಿತ್ವ, ಸರಿಯಾದ ಯೋಜನೆಗಳ ಮೂಲಕ ಎಲ್ಲರಿಗೂ ನೀರು ಒದಗಿಸುವುದು ಸಾಧ್ಯ ಎಂದು ತಿಳಿದೆವು. ಹಿವಾರೇ ಬಜಾರ್ ಪ್ರಜೆಗಳ ಪ್ರಯತ್ನವನ್ನು ನೋಡಿದೆವು. ಪ್ರಪಂಚದಾದ್ಯಂತ ಪ್ರಜೆಗಳು ತಮ್ಮ ತಮ್ಮ ಪರಿಸ್ಥಿತಿಗಳಿಗೆ ಅನುಗುಣವಾಗಿ, ಸೃಜನಾತ್ಮಕ ಕಾರ್ಯಾಚರಣೆಗೆ ಮುಂದಾಗುತ್ತಾರೆಂದು ಆಶಿಸೋಣ. ನೀರಿನ ಸಂಪನ್ಮೂಲಗಳಿಗೆ ಸ್ಥಳೀಯಶ ಮಟ್ಟದಲ್ಲಿ ಸಂಯುಕ್ತ ಕಾರ್ಯಾಚರಣೆಗೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅನುಕೂಲಕರ ಕಾನೂನುಗಳು, ವಿಧಾನಗಳು ಅವಶ್ಯಕ. ಅಂತರ್ಜಲದ ಉದಾಹರಣೆಯ ಮೂಲಕ ಪ್ರಸ್ತುತ ಆಲೋಚನಾ ವಿಧಾನದ ಪರಿಮಿತಿಗಳನ್ನು ಅರ್ಥಮಾಡಿಕೊಂಡೆವು.

ಮುಖ್ಯ ಪದಗಳು

ಹರಿಯುವ ಸಂಪನ್ಮೂಲ	**ಅಂತರ್ಭೂಜಲ**	**ನೀರಿನ ಪ್ರವಾಹ ವ್ಯವಸ್ಥೆ**
ನೀರಿನ ಸರಬರಾಜು ಕಾಯಿದೆ	**ಭೂಗರ್ಭ ಜಲ ಸಂಪನ್ಮೂಲ**	**ಪರಿವಾಹಕ ಪ್ರದೇಶ**
ಬರ	**ನೀರು ನೆಲದಲ್ಲಿ ಇಂಗುವುದು**	

SCERT TELANGANA

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1 . ಭಾರತದಲ್ಲಿ ನದಿ ವ್ಯವಸ್ಥೆಯನ್ನು ವಿವರಿಸಲು ಕೆಳಗಿನ ಅಂಶಗಳನ್ನು ಆಧಾರವಾಗಿ ಒಂದು ಪಟ್ಟಿಯನ್ನು ತಯಾರಿಸಿರಿ. ನದಿಯ ಹುಟ್ಟು, ನದಿ ಹರಿಯುವ ದಿಕ್ಕು, ಯಾವ ರಾಜ್ಯಗಳ ಮೂಲಕ ಹರಿಯುತ್ತದೆ. ಅವುಗಳ ಉಪನದಿಗಳು (AS_3)

2 . ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿ ಅಂತರ್ಜಲದ ವಿನಿಯೋಗವನ್ನು ಸಮರ್ಥಿಸುವ, ವಿರೋಧಿಸುವ ವಾದಗಳನ್ನು ತಿಳಿಸಿರಿ.(AS_2)

3 . ತುಂಗಭದ್ರಾ ನದಿ ಪರಿವಾಹಕ ಪ್ರದೇಶದಲ್ಲಿ ಜಲ ಸಂಪನ್ಮೂಲಕ್ಕೆ ಸಂಬಂಧಿಸಿ ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿರಿ. ಈ ಅಧ್ಯಾಯದಲ್ಲಾಗಲಿ, ಅಥವಾ ಇತರ ತರಗತಿಗಳಲ್ಲಾಗಲಿ ಈ ಸಮಸ್ಯೆಗೆ ಸಂಬಂಧಿಸಿ ಚರ್ಚಿಸಿದ ಪರಿಷ್ಕಾರಗಳನ್ನು ತಿಳಿಸಿರಿ.(AS_4)

4 . ಜಲ ಸಂರಕ್ಷಣೆಗಾಗಿ ಹಿವಾರೇ ಬಜಾರಿನಲ್ಲಿ ವ್ಯವಸಾಯದಲ್ಲಿನ ಯಾವ ಪದ್ದತಿಗಳ ಮೇಲೆ ನಿಯಂತ್ರಣ ಹಾಕಿದ್ದಾರೆ? (AS_1)

5 . ಜಲ ಸಂಪನ್ಮೂಲ ವಿಷಯದಲ್ಲಿ ಪ್ರಜೆಗಳ ಸಹಭಾಗಿತ್ವ ಮತ್ತು ಕಾನೂನುಗಳ ಪ್ರತ್ಯೇಕತೆ ಏನು? ಈ ಅಧ್ಯಾಯದ ಕೊನೆಯ ಎರಡು ಭಾಗಗಳಲ್ಲಿ ಚರ್ಚಿಸಿದ ಅಂಶಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.(AS_1)

6 . ನಿಮ್ಮ ಪ್ರದೇಶದಲ್ಲಿ ಯಾವ ಅವಶ್ಯತೆಗಳಿಗಾಗಿ ನೀರನ್ನು ಮಾರುವುದು, ಕೊಳ್ಳುವುದು ನಡೆಯುತ್ತಿದೆ? ಇದರ ಮೇಲೆ ಯಾವುದಾದರೂ ನಿಯಂತ್ರಣಗಳು ಇವೆಯೇ? ಚರ್ಚಿಸಿರಿ. (AS_4)

7 . ನೀರಿನ ಲಭ್ಯತೆ ದಿನೇ ದಿನೇ ಕುಗ್ಗುತ್ತಿದೆ. ಅಂತರ್ಜಲ ಪಾತಾಳಕ್ಕೆ ಇಳಿಯುತ್ತಿದೆ. ಹೀಗೆ ಮುಂದುವರೆದರೆ ಇದರ ಪ್ರಭಾವ ನಮ್ಮ ಜೀವನದ ಮೇಲೆ ಹೇಗಿರುತ್ತದೆ ? ನಿವಾರಣಾ ಕ್ರಮಗಳೇನು ? ಇದರಲ್ಲಿ ನಮ್ಮ ಜವಾಬ್ದಾರಿಯೇನು ? (AS_4)

ಚರ್ಚೆ : 1) ಅಂತರ್ಜಲವನ್ನು ಹುಡುಕಿ ತೆಗೆಯುವದು, ವಿನಿಯೋಗದ ಮೇಲೆ ಸಾಮಾಜಿಕ ನಿಯಂತ್ರಣ ಇರಬೇಕೇ ? ಈ ಅಂಶದ ಬಗ್ಗೆ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

2) ನೀರು ಉಭಯ ಸಂಪನ್ಮೂಲವಾಗಿ ಇರಬೇಕೆ ? ಇಲ್ಲವೆ ? ಈ ವಿಷಯದ ಬಗ್ಗೆ ನಿಮ್ಮ ತರಗತಿಯಲ್ಲಿ ಚರ್ಚೆಯನ್ನು ನಿರ್ವಹಿಸಿರಿ.

ಯೋಜನೆ

ನಿಮ್ಮ ಗ್ರಾಮ ಅಥವಾ ಪ್ರದೇಶದಲ್ಲಿ ಎಲ್ಲರಿಗೂ ಉಪಯೋಗವಾಗುವ ಯೋಜನೆಗಳನ್ನು ಜಾರಿಗೊಳಿಸಿದರೆ ಹೇಗೆ , ಇದರ ಕುರಿತು ಆಲೋಚಿಸಿ ಬರೆಯಿರಿ.

SCERT TELANGANA

ಅಧ್ಯಾಯ 6

ಜನಸಂಖ್ಯೆ



ನಕ್ಷೆ 1 : ಜನಸಂಖ್ಯೆ ಆಧಾರವಾಗಿ ಪ್ರಪಂಚಪಟ ತಯಾರಿಸಿದರೆ ಅದು ಹೀಗಿರುತ್ತದೆ. ಇದಕ್ಕೆ ಮತ್ತು ಉಳಿದ ಪಟಗಳಿಗೂ ವ್ಯತ್ಯಾಸವೇನು? ಚರ್ಚಿಸಿರಿ.

ಸಮಾಜ ಶಾಸ್ತ್ರದಲ್ಲಿ ಜನಸಂಖ್ಯೆ ಬಹಳ ಕೀಲಕವಾದ ಅಂಶ. 'ಎಲ್ಲರಿಗೆ ಅಭಿವೃದ್ಧಿ'ಎಂದು ನಾವು ಅಂದಾಗ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅಂಚಿಗೆ ತಳ್ಳಲ್ಪಟ್ಟವರ ಕುರಿತು ನಾವು ಪ್ರತ್ಯೇಕವಾಗಿ ಪ್ರಸ್ತಾಪಿಸುತ್ತೇವೆ. ಪ್ರಜೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಾನತೆ ಎಂಬ ಭಾವನೆಯನ್ನು ಬೆಳಸುತ್ತೇವೆ. ಇನ್ನೊಂದು ಕಡೆ ನಾವು ಎದುರಿಸುತ್ತಿರುವ ಪ್ರತಿ ಸಮಸ್ಯೆಗೆ 'ಜನಸಂಖ್ಯೆ ಬೆಳವಣಿಗೆ'ಕಾರಣ ಎಂದು ನಿಂಧಿಸುತ್ತಿರುತ್ತೇವೆ. ಬಹಳಷ್ಟು ಜನ ಹಂಚಿಕೊಳ್ಳುತ್ತಿರುವುದರಿಂದಲೇ ಉದ್ಯೋಗ, ಆಹಾರ, ಸಂಪನ್ಮೂಲಗಳ ಕೊರತೆ ಉಂಟಾಗುತ್ತದೆ ಎನ್ನುತ್ತಾರೆ. ಭಾರತದ ಕಾರ್ಮಿಕರಲ್ಲಿ ಶೇಕಡ 92 ರಷ್ಟು ಜನ ಅಸಂಘಟಿತ ರಂಗದಲ್ಲಿದ್ದಾರೆ. ಅವರಿಗೆ ಸರಿಯಾದ ಕೆಲಸ ಸಿಗುತ್ತಿಲ್ಲ. ಅವರಲ್ಲಿ ಬಹಳ ಮಂದಿ ಕೆಲಸವನ್ನು ಹುಡುಕುವ ದಿನಗೂಲಿಗಳಾಗಿ ಅಥವಾ ಸ್ವಯಂ ಉದ್ಯೋಗದಲ್ಲಿರುವವರು. ಅವರಿಗೆ ಅವರ ಕುಟುಂಬದ ಹೊರತು ಇತರ ಯಾವುದೇ ಸಾಮಾಜಿಕ ಭದ್ರತೆಗಳಿಲ್ಲ. ಅವರ ಬಡತನಕ್ಕೆ ಅವರನ್ನೇ ನಿಂದಿಸುವುದು ಬಹಳ ಅನ್ಯಾಯ. ಈ ವಿರುದ್ಧ ಭಾವನೆಗಳನ್ನ ಹೇಗೆ ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಜನಸಂಖ್ಯೆಗೆ ಸಂಬಂಧಿಸಿದ ಗಣಾಂಕ ವಿವರಗಳನ್ನು ವಿಸ್ತರಣೆ ಮತ್ತು ಲಕ್ಷಣಗಳನ್ನು ಅರ್ಥಮಾಡಿಕೊಂಡರೆ ಇತರ ಅಂಶಗಳನ್ನು ಸಹ ಅರ್ಥಮಾಡಿಕೊಳ್ಳಬಹುದು.

- ನಿಮ್ಮ ಸುತ್ತ ಇರುವ ವಿವಿಧ ಜೀವನೋಪಾಧಿ ಮತ್ತು ಆದಾಯಗಳಿರುವ ವ್ಯಕ್ತಿಗಳೊಂದಿಗೆ ಮಾತನಾಡಿರಿ. ಎಷ್ಟು ಜನ ಮಕ್ಕಳಿದ್ದರೆ ಸರಿಯೆ ಅವರನ್ನು ಕೇಳಿರಿ.
- ನಿಮ್ಮ ಪ್ರಾಂತ, ಗ್ರಾಮ, ದೇಶದಲ್ಲಿರುವ ಜನರಿಗೆ ಸಂಬಂಧಿಸಿದ ಸಮಾಚಾರವನ್ನು ಹೇಗೆ ಶೇಖರಿಸುತ್ತಾರೆ. ದಾಖಲಿಸುತ್ತಾರೆ ಎಂಬುದನ್ನು ನೀವು ಎಂದಾದರೂ ಲೋಚಿಸಿರುವಿರಾ? ಜನಗಣತಿ ಕಾರ್ಯದ ತಮ್ಮ ಅನುಭವಗಳನ್ನು ತಿಳಿಸಲು ನಿಮ್ಮ ಶಿಕ್ಷಕರನ್ನು ಕೇಳಿರಿ.
- ಮಾದರಿಗಳ ಸಂಗ್ರಹಣೆ, ಮತ್ತು ಜನಗಣತಿ ಮೂಲಕ ಸಮಾಚಾರ ಶೇಕರಣೆಯಲ್ಲಿನ ವ್ಯತ್ಯಾಸಗಳೇನು? ಕೆಲವು ಉದಾಹರಣೆಯೊಂದಿಗೆ ಚರ್ಚಿಸಿರಿ.

SCERT TELANGANA

ದೇಶದ ಜನಸಂಖ್ಯೆಗೆ ಸಂಬಂಧಿಸಿದ ಸಮಾಚಾರವನ್ನು ಭಾರತ ಜನಗಣನೆ ನೀಡುತ್ತದೆ. ದೇಶದ ಜನರೆಲ್ಲರಿಗೂ ಸಂಬಂಧಿಸಿದ ಸಮಾಚಾರವನ್ನು ಒಂದು ಪದ್ಧತಿ ಪ್ರಕಾರ ಶೇಖರಿಸಿ, ದಾಖಲಿಸುವ ವಿಧಾನವನ್ನು ಜನಗಣತಿ ಎನ್ನುತ್ತಾರೆ. ಹತ್ತು ವರ್ಷಕ್ಕೆ ಒಂದು ಸಾರಿ ಭಾರತದ ಪ್ರಜೆಗಳ ವಿವರಗಳನ್ನು ಸಂಗ್ರಹಿಸುತ್ತಾರೆ. ಈ ಕೆಲಸ ಮಾಡುವವರು ಪ್ರತಿ ಊರು, ಪಟ್ಟಣ, ನಗರದ ಪ್ರತಿ ಮನೆಗೆ ಹೋಗಿ ಆ ಕುಟುಂಬ ಸದಸ್ಯರ ವಿವರಗಳನ್ನು ಶೇಖರಿಸುತ್ತಾರೆ. ಪ್ರಜೆಗಳ ವಯಸ್ಸು, ವೃತ್ತಿ, ಮನೆಯ ರೀತಿ, ವಿದ್ಯೆ, ಮತದಂತಹ ಅನೇಕ ವಿವರಗಳನ್ನು ಜನಗಣತಿ ವಿಭಾಗ ನಮಗೆ ನೀಡುತ್ತದೆ. ಸೆನ್ಸಸ್ ಆಫ್ ಇಂಡಿಯಾ ಎಂಬ ಕೇಂದ್ರ ಸರ್ಕಾರದ ಸಂಸ್ಥೆ ಈ ಸಮಾಚಾರ ಸಂಗ್ರಹಣೆ ಮತ್ತು ದಾಖಲಾತಿ ಕಾರ್ಯ ನಿರ್ವಹಿಸುತ್ತದೆ.

ಜನಗಣತಿಯನ್ನು ಕುರಿತು ತಿಳಿಯುವ ಮೊದಲು ನಮ್ಮ ಪ್ರಾಂತವನ್ನು ಸರ್ವೇಮಾಡಿ ಜನಗಣತಿಯಲ್ಲಿ ಮಾಡುವ ಕೆಲಸವನ್ನು ಪರಿಶೀಲಿಸೋಣ.

ಭಾರತ ದೇಶದ ಜನಗಣತಿ

ಭಾರತದಲ್ಲಿ ಮೊಟ್ಟ ಮೊದಲು 1872ರಲ್ಲಿ ಜನಗಣತಿ ಕಾರ್ಯ ಪ್ರಾರಂಭವಾಯಿತು. ಆದರೆ ಮೊದಲ ಸಂಪೂರ್ಣ ಜನಗಣತಿ 1881ರಲ್ಲಿ ನಡೆಯಿತು. ಅಂದಿನಿಂದ ಪ್ರತಿ' 10 ವರ್ಷಕ್ಕೊಮ್ಮೆ ತಪ್ಪದೇ ಜನಗಣತಿ ಕಾರ್ಯ ಮಾಡುತ್ತಿದ್ದಾರೆ. 2011ರಲ್ಲಿ ಭಾರತದ ಜನಸಂಖ್ಯೆ 121,01,93,422. ಈ 121 ಕೋಟಿ ಜನರಲ್ಲಿ 62,37,24,248 ಮಂದಿ ಪುರುಷರು 58,64,69,174 ಮಂದಿ ಸ್ತ್ರೀಯರು ಇದ್ದಾರೆ.

ಸರ್ವೇ ನಿರ್ವಹಿಸುವುದು

- ಇಬ್ಬರು ಅಥವಾ ಮೂವರು ವಿದ್ಯಾರ್ಥಿಗಳ ಸರ್ವೆ ನಿರ್ವಹಣಾ ಗುಂಪು ತಮ್ಮ ಪ್ರಾಂತದ 10 ಕುಟುಂಬಗಳ ಸಮಾಚಾರವನ್ನು ಶೇಖರಿಸಬೇಕು. ಸರ್ವೆಗೆ ಉಪಯೋಗಿಸುವ ಪತ್ರ ಕೆಳಗೆ ಇದೆ.
- ಪ್ರತಿ ಬೃಂದವು ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಬೇಕು.
- ಎಲ್ಲ ಬೃಂದಗಳ ಪಟ್ಟಿಕೆ ಆಧಾರವಾಗಿ ತರಗತಿಯಲ್ಲಿ ಪ್ರಶ್ನೆಗಳನ್ನು ಚರ್ಚಿಸಬೇಕು.

1ನೇ ಕುಟುಂಬದಲ್ಲಿನ ಪ್ರತಿ ವ್ಯಕ್ತಿಯ ಹೆಸರು	ಲಿಂಗ (ಪು/ಸ್ತ್ರೀ)	ವಯಸ್ಸು	ವೈವಾಹಿಕ ಸ್ಥಿತಿ (ಅವಿವಾಹಿತ/ ವಿವಾಹಿತ/ ವಿಧವೆ)	ಸಾಕ್ಷರತೆ/ ಅನಕ್ಷರತೆ	6 ರಿಂದ 14 ವರ್ಷ ಗಳಲ್ಲಿನ ಮಕ್ಕಳಾದರೆ ಶಾಲೆಯ ಸ್ಥಿತಿ	ವೃತ್ತಿ
2ನೇ ಕುಟುಂಬದಲ್ಲಿನ ಪ್ರತಿ ವ್ಯಕ್ತಿಯ ಹೆಸರು						

★★ ಶಾಲೆಯಲ್ಲಿ ದಾಖಲಾಗದ/ಅಭ್ಯಾಸ ಮಾಡುತ್ತಿರುವ/ಶಾಲೆ ಬಿಟ್ಟಿರುವ.

ಸರ್ವೆ ಮಾಡುವ ಮೊದಲು :

- ಸರ್ವೆ ಫಾರಂನಲ್ಲಿ ಉಪಯೊಗಿಸಿದ ಪದಗಳನ್ನು ಅರ್ಥಮಾಡಿಕೊಳ್ಳಲು ತರಗತಿಕೋಣೆಯಲ್ಲಿ ಚರ್ಚೆ ಮಾಡಬೇಕು. ಇಲ್ಲದಿದ್ದಲ್ಲಿ ಸರ್ವೆ ಮಾಡುವಾಗ ಗೊಂದಲವುಂಟಾಗಿ ಒಂದು ಗುಂಪಿನ ಫಲಿತಗಳನ್ನು ಇನ್ನೊಂದು ಗುಂಪಿನೊಂದಿಗೆ ಹೋಲಿಸುವುದು ಕಷ್ಟವಾಗುತ್ತದೆ. ನಿಮ್ಮ ಶಿಕ್ಷಕರ ಸಹಾಯದಿಂದ ಈ ಕೆಳಗಿನ ಪದಗಳನ್ನು ಕುರಿತು ಚರ್ಚಿಸಿರಿ.

SCERT TELANGANA

1. ಕುಟುಂಬ ಎಂದರೇನು? ಎಂತಹ ವ್ಯಕ್ತಿಗಳು ಕುಟುಂಬದ ಕೆಳಗೆ ಪರಿಗಣಿಸಲ್ಪಡುತ್ತಾರೆ?
2. ವಿದ್ಯೆಗತೆ ಯಾವ ವರ್ಗೀಕರಣವನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ: 6 ವರ್ಷದೊಳಗಿನ ಮಕ್ಕಳು ಪಾಠಶಾಲೆ /ವಿಶ್ವ ವಿದ್ಯಾಲಯದಲ್ಲಿ ಓದುವರ, ತರಗತಿ .... ಶಾಲೆಯಲ್ಲಿದ್ದರೂ ಹೆಸರು ದಾಖಲಾಗಿಲ್ಲ..... ತರಗತಿಯವರೆಗೆ ಓದಿದವರು ... ಶಾಲೆಗೆ ಹೋಗದೆ ಇರುವವರು.
3. ವೃತ್ತಿಗೆ ಎಂತಹ ವರ್ಗೀಕರಣವನ್ನು ಉಪಯೋಗಿಸುತ್ತಾರೆ?
ಉದಾಹರಣೆಗೆ: ಗೃಹಿಣಿ, ವಿದ್ಯಾರ್ಥಿ...... ಸ್ವಯಂ ಉದ್ಯೋಗ, ಉದ್ಯೋಗ, ನಿರುದ್ಯೋಗ, ಪದವಿ ವಿರಮಣ, ವೃದ್ಧರು.

ಸರ್ವೆ ನಂತರ :

(ಎ) ಸರ್ವೆ ಮಾಡಿದ ಕುಟುಂಬದ ಸದಸ್ಯರನ್ನು ಲೆಕ್ಕಹಾಕಲು ಪ್ರತಿ ವೃಂದವೂ ಕೆಳಗೆ ತೋರಿಸಿದಂತೆ ಪಟ್ಟ ತಯಾರಿಸಬೇಕು.
:

ಪುರುಷರು	ಸ್ತ್ರೀಯರು	ಒಟ್ಟು ಜನಸಂಖ್ಯೆ

(ಬಿ) ನಿಮ್ಮ ವೃಂದದಲ್ಲಿ ಸ್ತ್ರೀ ಪುರುಷರು ನಿಷ್ಪತ್ತಿ ಎಷ್ಟು? ವಿವಿಧ ಬೃಂದಗಳ ಈ ನಿಷ್ಪತ್ತಿಯಲ್ಲಿ ವ್ಯತ್ಯಾಸವಿದೆಯಾ? ಚರ್ಚಿಸಿರಿ .

6-14 ವರ್ಷದ ಮಕ್ಕಳಿಗೆ			
ಮಕ್ಕಳು	ಬಾಲಕರು	ಬಾಲಕೀಯರು	ಒಟ್ಟು
ಶಾಲೆಯಲ್ಲಿರುವವರು			
ಶಾಲೆ ಬಿಟ್ಟವರು			
ಶಾಲೆ ಸೇರದಿರುವವರು			

(ಸಿ) ಎಲ್ಲ ಬೃಂದಗಳ ಒಟ್ಟು ಮಕ್ಕಳಲ್ಲಿ ಶಾಲೆ ಹೋಗದೇ ಇರುವವರು, ಶಾಲೆ ಬಿಟ್ಟವರು ಶೇಕಡಾ ಎಷ್ಟು? ಇದಕ್ಕೆ ಕಾರಣಗಳೇನು?

(ಡಿ) 20 ವರ್ಷ ತುಂಬಿದವರಲ್ಲಿ ಅವರು ಶಾಲೆಯಲ್ಲಿ ಕಳೆದ ಸರಾಸರಿ ವರ್ಷವೆಷ್ಟು? ವಿವರಗಳನ್ನು ಸಂಗ್ರಹಿಸಿರಿ. ಈ ಸಮಾಚಾರ ಸಂಗ್ರಹಣೆ ಉಪಯೋಗವೇ?

(ಇ) 15-59 ವರ್ಷದವರಿಗೆ :

ವೃತ್ತಿ	ಸಂಖ್ಯೆ	ಶೇಕಡಾ (%)
ಸ್ವಯಂ ಉದ್ಯೋಗ		
ಗೃಹಿಣಿ		
ಉದ್ಯೋಗಿ		
ನಿರುದ್ಯೋಗಿ		
ವಿದ್ಯಾರ್ಥಿ		
ಒಟ್ಟು		

ನಿಮ್ಮ ಮಾದರಿ ಜನಗಣತಿಯಲ್ಲಿ ಕೆಲಸ ಮಾಡುವವರು, ಇತರರ ಮೇಲೆ ಆಧಾರ ಪಟ್ಟವರು ಎಂಬ ಅಂಶವನ್ನು ಹೇಗೆ ವರ್ಗೀಕರಿಸುತ್ತೀರಿ?

SCERT TELANGANA

ಜನಗಣತಿ ಏನು ತಿಳಿಸುತ್ತದೆ ?

ವಯಸ್ಸಿನ ವಿವರಣೆ

ದೇಶದಲ್ಲಿನ ವಿವಿಧ ವಯಸ್ಸಿನ ಸ್ತ್ರೀ ಪುರುಷರ ಸಂಖ್ಯೆ ಎಷ್ಟಿವೆ ಎಂಬುದನ್ನು ಇದು ತಿಳಿಸುತ್ತದೆ. ಇದು ಜನಸಂಖ್ಯೆಗೆ ಸಂಬಂಧಿಸಿದ ಅತ್ಯಂತ ಮುಖ್ಯ ಲಕ್ಷಣ. ಒಬ್ಬರ ವಯಸ್ಸು ಬಹಳ ಮಟ್ಟಿಗೆ ಅವರಿಗೆ ಏನು ಬೇಕು, ಅವರು ಕೆಲಸ ಮಾಡುವ ಸಾಮರ್ಥ್ಯ, ಇತರರ ಮೇಲೆ ಆಧಾರ ಪಟ್ಟಿದ್ದರೂ ಇಲ್ಲವೋ ಎಂಬ ವಿಷಯದ ಮೇಲೆ ಪ್ರಭಾವ ಬೀರುತ್ತದೆ. ಮಕ್ಕಳು, ವಯಸ್ಸು, ವೃದ್ಧರು ಎಂಬುವ ವಯಸ್ಸಿನ ವರ್ಗೀಕರಣಗಳು, ಜನಸಂಖ್ಯೆಯು ಸಾಮಾಜಿಕ ಆರ್ಥಿಕ ನಿರ್ಮಾಣವನ್ನು, ಈ ವರ್ಗೀಕರಣದಲ್ಲಿರುವ ಪ್ರಜೆಗಳ ಸಂಖ್ಯೆ, ಶೇಖಡಾ ಮುಖ್ಯವಾಗಿ ನಿರ್ಣಯಿಸುತ್ತಾರೆ.

ಒಂದು ದೇಶದ ಜನಸಂಖ್ಯೆಯನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಭಜಿಸುತ್ತಾರೆ. :

1) ಮಕ್ಕಳು : (ಸಾಧಾರಣವಾಗಿ 15 ವರ್ಷ ಒಳಗಿನವರು)

ಇವರನ್ನ ಕುಟುಂಬವು ಸಂರಕ್ಷಿಸುತ್ತದೆ. ಎಲ್ಲರಂತೆ ಇವರಿಗೆ ಆಹಾರ, ಬಟ್ಟೆ, ವಿದ್ಯೆ, ವೈದ್ಯ ಸೌಕರ್ಯ, ಬೆಳವಣಿಗೆಗೆ ಅವಕಾಶಗಳಿರಬೇಕು. ಆದರೆ ಇವರು ತಮ್ಮ ಅವಶ್ಯಕತೆಗಳಿಗಾಗಿ ಸ್ವಂತ ಆದಾಯ ಹೊಂದಿರುವುದಿಲ್ಲ. ಆರ್ಥಿಕ ಪರಿಸ್ಥಿತಿಗಳ ಕಾರಣದಿಂದ ಮಕ್ಕಳು ಕೆಲಸ ಮಾಡಬೇಕಾಗಿ ಬರುವುದು ಸರಿಯಲ್ಲ.

2) ಕೆಲಸ ಮಾಡುವ ವಯುಸ್ಸು (15-59 ವರ್ಷ)

ಸಾಧಾರಣವಾಗಿ ಸಮಾಜದಲ್ಲಿ ಕೆಲಸ ಮಾಡುವ ಜನರಿದ್ದಾರೆ. ಇವರು ಪುನರುತ್ಪತ್ತಿ ಅಥವಾ ಸಂತಾನೋತ್ಪತ್ತಿ ವಯಸ್ಸಿನವರೂ ಆಗಿರುತ್ತಾರೆ. ಈ ಗುಂಪಿನಲ್ಲಿ ಅವರು ಗೌರವತಯುವಾದ ಆದಾಯ, ಉದ್ಯೋಗ ಭದ್ರತೆ ಬಯಸುತ್ತಾರೆ. ಮಕ್ಕಳು, ವೃದ್ಧರು ಬಹಳ ಸಂದರ್ಭದಲ್ಲಿ ಇವರ ಆದಾಯದ ಮೇಲೆ ಅವಲಂಬಿತರಾಗಿರುತ್ತಾರೆ.

3) ವೃದ್ಧರು (59 ವರ್ಷ ಮೇಲ್ಪಟ್ಟವರು)

ಉದ್ಯೋಗದಲ್ಲಿ ಅಥವಾ ಸಂಘಟಿತ ವಲಯದಲ್ಲಿ ಕೆಲಸ ಮಾಡುವವರಿಗೆ ನಿವೃತ್ತಿಯ ನಂತರ ಪೆನ್ಷನ್ ಸಿಗಬಹುದು. ಆದರೆ ಅಧಿಕ ಸಂಖ್ಯೆಯಲ್ಲಿರುವ ವ್ಯವಸಾಯ ಕೂಲಿಗಳು, ಮನೆಗೆಲಸ ಮಾಡುವವರು ಭವನ ನಿರ್ಮಾಣ ಕಾರ್ಮಿಕರು ತಮ್ಮ ಶಕ್ತಿ ಇರುವರೆಗೆ ದುಡಿಯುತ್ತಲೇ ಇರುತ್ತಾರೆ. ವೃದ್ಧದಲ್ಲಿ ಅವರು ಆಸರೆಗಾಗಿ ತಮ್ಮ ಕುಟುಂಬದ ಮೇಲೆ ಆಧಾರಪಟ್ಟಿರುತ್ತಾರೆ. ಇತರ ವಯಸ್ಸಿನವರಿಗಿಂತ ಇವರ ವೈದ್ಯ ಖರ್ಚುಗಳು ಬಹಳ ಹೆಚ್ಚಾಗಿರುವ ಅವಕಾಶವಿದೆ.



ಗ್ರಾಫ್ 1 : ಭಾರತದೇಶ ಜನಸಂಖ್ಯೆ ಪಿರಮಿಡ್ 2011

ವಿವಿಧ ವಯಸ್ಸಿಗೆ ಸಂಬಂಧಿಸಿದ ಗುಂಪಿನ ಜನರಿಗೆ ಸರಕಾರವು ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಬೇಕು ತಿಳಿಸಿರಿ. ಉದಾ: ಮಧ್ಯಾಹ್ನ ಬಿಸಿಯೂಟ ಯೋಜನೆ, ಅಂಗನವಾಡಿ ಕಾರ್ಯಕ್ರಮ

- ಮೇಲೆ ಕೊಟ್ಟಿರುವ ಜನಸಂಖ್ಯಾ ಪಿರಮಿಡ್ ಆಧಾರವಾಗಿ ಜನಸಂಖ್ಯೆಯಲ್ಲಿ ಮಕ್ಕಳ ಶೇಕಡಾ ಎಷ್ಟು ಎಂಬುದನ್ನು ಅಂದಾಜು ಮಾಡಿ ಹೇಳಿರಿ.
- ನೀವು ಮಾಡಿದ ಸರ್ವೆ ಆಧಾರವಾಗಿ ಪ್ರತಿ ಗುಂಪಿನ ಪಟ್ಟಿಯಲ್ಲಿ ಈ ಕೆಳಗಿನ ವಿವರಗಳನ್ನು ತುಂಬಬೇಕು. ವಯಸ್ಸು, ಜನರ ಸಂಖ್ಯೆ, ಮಕ್ಕಳು, ಕೆಲಸ ಮಾಡುತ್ತಿರುವವರು, ವೃದ್ಧರು.

SCERT TELANGANA

ಲಿಂಗ ನಿಷ್ಪತ್ತಿ :

ಜನಸಂಖ್ಯೆಯಲ್ಲಿ ಪ್ರತಿ ಸಾವಿರ ಮಂದಿ ಪುರುಷರಿಗೆ ಎಷ್ಟು ಮಂದಿ ಸ್ತ್ರೀಯರು ಇದ್ದಾರೆ ಎಂಬುದನ್ನು ತಿಳಿಸುವುದೇ ಲಿಂಗ ನಿಷ್ಪತ್ತಿ. ಒಂದು ಸಮಾಜದಲ್ಲಿ, ಒಂದು ನಿರ್ಧಿಷ್ಟ ಕಾಲದಲ್ಲಿ ಸ್ತ್ರೀ ಪುರುಷರ ಮಧ್ಯೆ ಸಮಾನತೆ ಎಷ್ಟಿದೆ ಎಂದು ತಿಳಿಯಲು ಉಪಯೋಗವಾಗುವ ಮುಖ್ಯವಾದ ಸಾಮಾಜಿಕ ಅಳತೆ ಇದು. ನೀವು ಸರ್ವೆ ಮಾಡಿದ ಕುಟುಂಬಗಳಿಗೆ ಇದನ್ನು ಲೆಕ್ಕಿಸಿರುತ್ತೀರಿ. ದೇಶಕ್ಕೆ ಸಂಬಂಧಿಸಿದ ಈ ಗಣಾಂಕ ವಿವರಗಳನ್ನು ಈಗ ಪರಿಶೀಲಿಸೋಣ.



ಗ್ರಾಫ್ 2 : ಭಾರತದೇಶ ಜನಸಂಖ್ಯೆ: ಸ್ತ್ರೀ ಪುರುಷರ ಅನುಪಾತ
1951-2011

ಭಾರತದಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಯಾವಾಗಲೂ ಕಡಿಮೆಯಾಗಿಯೇ ಇದೆ. ಈ ಸ್ತ್ರೀ -ಪುರುಷ ನಿಷ್ಪತ್ತಿ ಅಥವಾ ಲಿಂಗನಿಷ್ಪತ್ತಿ ಆಂದೋಲನೆಗೆ ಗುರಿ ಮಾಡುವ ವಿಷಯ. ಏಕೆಂದರೆ ಇದು ಸ್ತ್ರೀಯರ ಬಗೆಗಿನ ಬೆದಭಾವ್ವ ತೋರಿಸುತ್ತದೆ. ಸ್ತ್ರೀಯರಿಗೆ ಪ್ರತ್ಯೇಕವಾಗಿ ಬಾಲಕಿಯ ವಿದ್ಯೆ, ಅಭಿವೃದ್ಧಿಯಲ್ಲಿ ಸಮಾನ ಅವಕಾಶಗಳು ದೊರೆಯುತ್ತಿಲ್ಲ. ಅತ್ಯಂತ ಮೂಲಭೂತ ಅವಶ್ಯಕತೆ ಇರುವ ಪೌಷ್ಟಿಕ ಆಹಾರ, ಶಿಶು ಸಂರಕ್ಷಣೆ, ವೈದ್ಯ ಸೌಲಭ್ಯ ವಿಷಯದಲ್ಲಿ ಇವರು ಬೇದಭಾವಕ್ಕೆ ಗುರಿಯಾಗುತ್ತಿದ್ದಾರೆ. ಅಂದರೆ ಇವು ಗಂಡಿಗೆ ದೊರೆತಷ್ಟು ಹೆಣ್ಣು ಮಕ್ಕಳಿಗೆ ಸಿಗುತ್ತಿಲ್ಲ. ಒಂದು ಕುಟುಂಬದಲ್ಲಿಯೇ ಇದು ನಡೆಯುತ್ತದೆ. ಇಂತಹ ಬೇದಭಾವ ಎಲ್ಲ ಸಮಯದಲ್ಲಿ ಹೊರಗೆ ಕಾಣುವುದಿಲ್ಲ. ಬೇದಭಾವ ಇದೆ ಎಂದು ಯಾರೂ ಒಪ್ಪಿಕೊಳ್ಳುವುದಿಲ್ಲ ಆದರೆ ಒಟ್ಟು ಜನಸಂಖ್ಯೆಯಲ್ಲಿ ಇದು ಕಾಣುತ್ತದೆ ಎಂದು ನಾವು ಹೇಗೆ ಹೇಳಬಲ್ಲೆವು?

ಒಂದೇ ಪರಿಸ್ಥಿತಿಯಲ್ಲಿರುವ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚು ಕಾಲ ಜೀವಿಸುತ್ತಾರೆಂದು ವೈದ್ಯಕೀಯ ಪರಿಶೋಧನೆಗಳು ತಿಳಿಸುತ್ತವೆ. ಬೇದಭಾವ ಇಲ್ಲದಿದ್ದರೆ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚು ಅಥವಾ ಸಮನಾಗಿರಬೇಕು. ಜನಗಣತಿ ಸರ್ವೆಯಿಂದ ನಮಗೆ ಮತ್ತೊಂದು ವಿಷಯ ತಿಳಿಯುತ್ತದೆ. ಭಾರತದಲ್ಲಿ ಪ್ರತಿ 100 ಮಂದಿ ಹೆಣ್ಣುಮಕ್ಕಳಿಗೆ 105 ಮಂದಿ ಗಂಡು ಮಕ್ಕಳು ಹುಟ್ಟುತ್ತಿದ್ದಾರೆ. ಆದರೆ ಗಂಡು ಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಮರಣಹೊಂದುತ್ತಿದ್ದಾರೆ. 0-5 ವರ್ಷದಲ್ಲಿ ಬದುಕಿ ಉಳಿದವರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಸಂಖ್ಯೆ ಬಹಳ ಕಡಿಮೆ ಎಂದು ಜನಗಣತಿ ಹೇಳುತ್ತದೆ. ಹೆಣ್ಣುಮಕ್ಕಳು ಜೀವಿಸಲು ಹೆಚ್ಚುಅವಕಾಶಗಳು ಇದ್ದರೂ, ಹೀಗೆ ನಡೆಯುತ್ತಿದೆ ಎಂದರೆ ಅವರ ಪೋಷಣೆ, ಸಂರಕ್ಷಣೆಯಲ್ಲಿ ಒಂದು ರೀತಿಯ ಬೇದಭಾವ ಇರಲೇಬೇಕು.

ಗಣಾಂಕಗಳನ್ನು ಹೋಲಿಸುವುದರ ಮೂಲಕ ನಮಗೆ ಮತ್ತೊಂದು ಸತ್ಯ ಸಂಗತಿ ಅರಿವಾಗುತ್ತದೆ. ಮಹಿಳೆಯರಿಗೆ ಸಮಾನತೆ, ಸಮಾನ ಅವಕಾಶ ಕಲ್ಪಿಸಿದ ಸಾಮ್ರಾಜ್ಯಗಳನ್ನು ಅಥವಾ ಪ್ರಾಂತಗಳನ್ನು ನೋಡಿದಾಗ ಅವುಗಳ ಲಿಂಗ ನಿಷ್ಪತ್ತಿ ಬೇರೆ ಇರುವುದನ್ನು ಕಾಣುತ್ತದೆ. ಸ್ತ್ರೀ ಪುರುಷರ ಮಧ್ಯೆ ಅಸಮಾನತೆಗಳನ್ನು ಪುರುಷರಿಗೆ ಅನುಕೂಲವಿದ್ದು, ಸ್ತ್ರೀಯರ ಬಗ್ಗೆ ಬೇದಭಾವದಿಂದ ವ್ಯವಹರಿಸುವ ಪ್ರಾಂತಗಳಲ್ಲಿ ಲಿಂಗ ನಿಷ್ಪತ್ತಿ ಅಸಮಾನವಾಗಿದೆ. ಆ ಪ್ರಾಂತದಲ್ಲಿ ಅಧಿಕ ಆದಾಯಗಳಿದ್ದರೂ ಹೀಗೆ ನಡೆಯಬಹುದು. ಉದಾಹರಣೆಗೆ ಈ ಕೆಳಗೆ ಕೊಟ್ಟಿರುವ ಗಣಾಂಕಗಳನ್ನು ಗಮನಿಸಿರಿ.

ಪ್ರಾಂತ	ಹರಿಯಾಣ	ಪಂಜಾಬ್	ಆಂಧ್ರಪ್ರದೇಶ	ಕೇರಳ	ಅಮೇರಿಕಾ
ಲಿಂಗ ನಿಷ್ಪತ್ತಿ	870	880	970	1040	1050

ಪಟ್ಟಿ 1 : ಪ್ರತಿ ಸಾವಿರ ಮಂದಿ ಪುರುಷರಿಗೆ ಸ್ತ್ರೀಯರು

SCERT TELANGANA

ಭಾರತದಲ್ಲಿ ಕೇರಳದಂತಹ ಕೆಲವು ಪ್ರಾಂತದಲ್ಲಿ ಲಿಂಗ ನಿಷ್ಪತ್ತಿ ಹೆಚ್ಚಾಗಿದೆ. ಅದೇ ಕೆಲವು ಪ್ರಾಂತದಲ್ಲಿ ಈ ನಿಷ್ಪತ್ತಿ ಕಡಿಮೆ ಇದೆ. ಹೆಣ್ಣು ಮಗುವಿಗಿಂತ ಗಂಡು ಮಗುವೇ ಹುಟ್ಟಬೇಕೆಂಬ ಲಿಂಗ ಬೇದಭಾವ ಇನ್ನೂ ಕಣ್ಮರೆಯಾಗುವ ಸೂಚನೆ ಇಲ್ಲ. ಗಂಡು ಮಕ್ಕಳಿಗೆ ಅಧಿಕ ಪ್ರಾಧಾನ್ಯತೆ ನೀಡುವುದರಿಂದ ಗಂಡಿಗಿಂತ ಹೆಣ್ಣು ಮಕ್ಕಳ ಮರಣದ ಶೇಖಡ ಹೆಚ್ಚಾಗಿದೆ. ಗಂಡು ಮಕ್ಕಳಿಗೆ ಕೊಡುವ ಸಂರಕ್ಷಣೆ, ಶ್ರದ್ಧೆಯೊಂದಿಗೆ ಹೋಲಿಸಿದರೆ, ಹೆಣ್ಣು ಮಕ್ಕಲ ಆರೋಗ್ಯದ ಕುರಿತು, ರೋಗಗಳ ಕುರಿತು ಕಡೆ ಕಿವಿಗೊಡುವುದಿಲ್ಲ ಎಂಬ ಕಣ್ಮರೆಯಾದ ಹಿಂಸೆಯಿಂದ ಇದು ನಡೆಯುತ್ತಿದೆ. ಹೆಣ್ಣು ಶಿಶುಗಳ ಭ್ರೂಣ ಹತ್ಯೆ ಎಂಬ ಅಂಶವೂ ಇದರಲ್ಲಿದೆ. ಗಂಡು ಮಗು ಬೇಕೆನ್ನುವವರು, ತಮ್ಮ ಗರ್ಭದಲ್ಲಿರುವುದು ಹೆಣ್ಣು ಎಂದು ತಿಳಿದು ಭ್ರೂಣ ಹತ್ಯೆಗೆ ಮುಂದಾಗಬಹುದು. ಅನೇಕ ಕುಟುಂಬಗಳು ಹೆಣ್ಣು ಮಕ್ಕಳು ಭಾರ ಎಂದು ಭಾವಿಸುತ್ತಿವೆ. ವೈದ್ಯ ವಿಷಯದಲ್ಲಿನ ಈ ಬೇದಭಾವ ದೊಡ್ಡವರಾದ ನಂತರವೂ ಮುಂದುವರೆಯುತ್ತಿದೆ. ಅದಕ್ಕಾಗಿಯೇ ಪುರುಷರಿಗಿಂತ ಸ್ತ್ರೀಯರಲ್ಲಿ ಮರಣದ ಶೇಕಡಾ ಹೆಚ್ಚು ಇದೆ ಎಂದು ಅಧ್ಯಯನಗಳು ತಿಳಿಸುತ್ತಿವೆ.



ಮಹಿಳೆಯರ ಬಗ್ಗೆ ಬೇದಭಾವವನ್ನು ಕಡಿಮೆ ಮಾಡಲು ಮಹಿಳೆಯರಿಗೆ ವಿದ್ಯೆ ಬಲವಾದ ಶಕ್ತಿಯಂತೆ ಸಹಕರಿಸುತ್ತದೆ. ಮಹಿಳೆಯರ ಅಕ್ಷರಾಭ್ಯಾಸ, ವಿದ್ಯೆಯಿಂದ ಹೆಣ್ಣು ಮಕ್ಕಳ ಮರಣದ ದರ ಕಡಿಮೆಯಾಗುತ್ತಿದೆ ಎನ್ನಲು, ಹೆಣ್ಣು ಮಕ್ಕಳ ಆರೋಗ್ಯದಲ್ಲಿ ತೋರಿಸುವ ಬೇದಭಾವ ಕಡಿಮೆ ಆಗುತ್ತದೆ ಎನ್ನಲು ಬಲವಾದ ಆಧಾರಗಳಿವೆ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪಕ್ಕದಲ್ಲಿರುವ ಪ್ರಶ್ನೆಗಳನ್ನು ಕುರಿತು ಚರ್ಚಿಸಿರಿ. ಇವು ಲಿಂಗ ನಿಷ್ಪತ್ತಿಯ ಮೇಲೆ ಪ್ರಭಾವ ಬೀರುತ್ತವೆಯೇ?

- ಹೆಚ್ಚಿನ ವಿದ್ಯಾವಕಾಶಗಳಿಗೆ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆ ಸಮಾನ ಅವಕಾಶಗಳು ಲಭಿಸುತ್ತವೆಯಾ?
- ಮದುವೆಯಾದ ಮಹಿಳೆಯರಿಗೆ ಮನೆ ಹೊರಗೆ ಕೆಲಸ ಮಾಡಲು, ಪ್ರಯಾಣಿಸಲು ಅವಕಾಶಗಳಿವೆಯಾ?
- ಮಹಿಳೆಯರು ತಮ್ಮ ತವರು ಮನೆಯವರೊಂದಿಗೆ ಸಂಬಂಧ ಇಟ್ಟುಕೊಳ್ಳಬಾರದೆ? ಅವರಿಗೆ ಆಸ್ತಿ ಮೇಲೆ ಹಕ್ಕು ಇರಬಾರದೇ? ಭದ್ರತೆ ಇರಬಾರದೇ? ತಿಳಿಸಿರಿ.
- ನಿಮ್ಮ ಪ್ರಾಂತದಲ್ಲಿ ಗಂಡು ಮಕ್ಕಳನ್ನು ಹೆಚ್ಚಾಗಿ ಬಯಸುತ್ತಾರೆಯೇ ಏಕೆ?

ಅಕ್ಷರಾಸ್ಯತೆ ಶೇಕಡಗಳು : (2011 ರ ಜನಗಣತಿಯ ಪ್ರಕಾರ)

ಏಳು ವರ್ಷದ ಮೇಲ್ಪಟ್ಟು ಯಾವ ಭಾಷೆಯನ್ನಾಗಲೀ ಅರ್ಥಪೂರ್ಣವಾಗಿ ಓದಿದರೆ, ಬರೆದರೆ, ಆತ / ಆಕೆ ಅಕ್ಷರಾಸ್ಯರೆಂದು ಪರಿಗಣಿಸಲ್ಪಡುತ್ತಾರೆ. ಸಾಮಾಜಿಕ, ಆರ್ಥಿಕ ಪ್ರಗತಿಗೆ ಅಕ್ಷರಾಸ್ಯತೆ ಕೀಲಕವಾಗಿದೆ.

SCERT TELANGANA

- ನಿಮ್ಮ ಊರು, ಪಟ್ಟಣದಲ್ಲಿ ನಿರಕ್ಷರಾಸ್ಯರು ಇರುವರೋ ತಿಳಿದುಕೊಳ್ಳಿ. ನಿಮ್ಮ ಸರ್ವೆ ಏನು ಹೇಳುತ್ತದೆ?
- ಅಕ್ಷರಾಸ್ಯತೆಯು ಅಭಿವೃದ್ಧಿಯನ್ನು ಹೇಗೆ ಪ್ರಭಾವ ಗೊಳಿಸುತ್ತದೆ.

ಪಟ್ಟಿ 2 : ಜನಗಣತಿ 2011 ಪ್ರಕಾರ ವಿವಿಧ ಕೆಲಸ ಮಾಡುವವರ ವಿವರಗಳು

ಕೆಲಸ ಮಾಡುವವರು	ಕೆಲಸ ಮಾಡುವವರ ಶೇಕಡ
ರೈತರು	25
ವ್ಯವಸಾಯ ಕೂಲಿಗಳು	30
ಕೈಗಾರಿಕೆಯಲ್ಲಿ ಕೆಲಸ ಮಾಡುವ ಕೂಲಿಗಳು	04
ಇತರ ಕೆಲಸಗಾರರು	41
ಒಟ್ಟು	100

- ವ್ಯವಸಾಯ ಭೂಮಿಯನ್ನು ಸಾಗು ಮಾಡುವ ವ್ಯಕ್ತಿಗೂ, ವ್ಯವಸಾಯ ಕೂಲಿಗೂ ವ್ಯತ್ಯಾಸವೇನು?
- ನಿಮ್ಮ ಸರ್ವೆಯಲ್ಲಿ ಕಂಡುಕೊಂಡ ಕಾರ್ಮಿಕರನ್ನು ಜನಗಣತಿಯಲ್ಲಿ ದಾಖಲಾದ ವಿವಿಧ ಕೆಲಸಗಾರ ರೊಂದಿಗೆ ಹೋಲಿಸಿರಿ.

ಭಾರತ ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದಾಗ ಜನಸಂಖ್ಯೆಯ ಶೇ. 12 ರಷ್ಟು ಮಾತ್ರ ಅಕ್ಷರಾಸ್ಯರಿದ್ದರು. 2001ರಲ್ಲಿ ಅದು 65 ಆದರೆ 2011 ಕ್ಕೆ ಅದು ಶೇ. 74 ಕ್ಕೇರಿತು. ಆದರೆ 2011 ಜನಗಣತಿ ಪ್ರಕಾರ ಅಕ್ಷರಾಸ್ಯತೆಯಲ್ಲಿ ಪುರುಷರಿಗೆ (82%), ಸ್ತ್ರೀಯರಿಗೆ (65%) ಬಹಳ ವ್ಯತ್ಯಾಸವಿದೆ ಎಂಬ ವಿಷಯ ಬೆಳಕಿಗೆ ಬಂದಿದೆ.

ಶ್ರಾಮಿಕ ಜನಸಂಖ್ಯೆ

15 ರಿಂದ 59 ವರ್ಷ ವಯಸ್ಸಿನ ಗುಂಪನ್ನು ಶ್ರಾಮಿಕ ಜನಸಂಖ್ಯೆ ಎನ್ನುವರು. ಇವರು ವರ್ಷ ಪೂರ್ತಿ ಅಥವಾ ವರ್ಷದ ಸ್ವಲ್ಪ ಭಾಗ ಕೆಲಸ ಮಾಡುತ್ತಾರೆ. ಇದು ಕೆಲಸದ ಲಭ್ಯತೆಯನ್ನು ಆಧರಿಸಿರುತ್ತದೆ. ಮಹಿಳೆಯರು ಮಾಡುವ ಮನೆ ಕೆಲಸ ಇದರಲ್ಲಿ ಬರುವುದಿಲ್ಲ (ಪಟ್ಟಿ 6.2ನೋಡಿರಿ) ಭಾರತ ಜನಗಣತಿ ಇವರನ್ನು ನಾಲ್ಕು ಭಾಗಗಳಾಗಿ ವರ್ಗೀಕರಿಸಿದೆ.: (1) ಸ್ವಂತ ಭೂಮಿ ಅಥವಾ ಸಾಗುವಳಿಗೆ ತೆಗೆದುಕೊಂಡು ಭೂ ವ್ಯವಸಾಯ ಮಾಡುವ ರೈತರು. (2) ಇತರರ ವ್ಯವಸಾಯ ಭೂಮಿಯಲ್ಲಿ ಕೂಲಿಗೆ ಕೆಲಸ ಮಾಡುವ ವ್ಯವಸಾಯ ಕೂಲಿಗಳು. (3) ಗೃಹ ಸಂಬಂಧ ಕೈಗಾರಿಕೆಗಳಲ್ಲಿ, ರೈಸ್ ಮಿಲ್‌ಗಳಲ್ಲಿ, ಬೀಡಿ ಸುತ್ತುವವರು, ಮಡಿಕೆ ತಯಾರಿಕರು, ಬುಟ್ಟಿ ಹೆಣೆಯುವವರು, ಪಾದರಕ್ಷೆ ತಯಾರಕರು, ಕಡ್ಡಿ ಪೆಟ್ಟಿಗೆ, ಬೊಂಬೆ ತಯಾರಿ ಮೊದಲಾದ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು. (4) ಫ್ಯಾಕ್ಟರಿಗಳು, ವ್ಯಾಪಾರ, ವಾಣಿಜ್ಯ ಸಂಸ್ಥೆಗಳು, ದಿನಗೂಲಿ ಕಾರ್ಮಿಕರು, ಇತರ ವೃತ್ತಿಯವರು.

ಜನಸಂಖ್ಯೆಯ ಬದಲಾವಣೆ

ಜನಸಂಖ್ಯೆಯು ನಿರಂತರ ಬದಲಾವಣೆಯಾಗುತ್ತಿರುತ್ತದೆ. ಸಂಖ್ಯೆ ವಿಸ್ತರಣೆ, ಅಂಶಗಳಂತಹವು ನಿರಂತರ ಬದಲಾಗುತ್ತಿರುತ್ತದೆ. (1) ಜನನ (2) ಮರಣ (3) ವಲಸೆಗಳು ಎಂಬ ಮೂರು ಪ್ರಕ್ರಿಯೆಗಳ ಮೂಲಕ ಈ ಜನಸಂಖ್ಯೆಯ ಅಂಶಗಳು ಬದಲಾಗುತ್ತಿರುತ್ತವೆ.

ಒಂದು ದೇಶ ಅಥವಾ ಪ್ರಾಂತದಲ್ಲಿ ಒಂದು ನಿರ್ಧಿಷ್ಟ ಕಾಲದಲ್ಲಿ ಉದಾಹರಣೆಗೆ ಹತ್ತು ವರ್ಷಗಳಲ್ಲಿ ಪ್ರಜೆಗಳ ಸಂಖ್ಯೆಯಲ್ಲಾದ ಬದಲಾವಣೆಯನ್ನು ಜನಸಂಖ್ಯೆಯ ಬದಲಾವಣೆ ಎನ್ನುತ್ತಾರೆ. ಈ ಬದಲಾವಣೆಯನ್ನು ಅಂಕೆಗಳಲ್ಲಿ ಮತ್ತು ಶೇಕಡಾಗಳಲ್ಲಿ ತಿಳಿಸುತ್ತಾರೆ.

ಪ್ರತಿ ಹತ್ತು ವರ್ಷದಲ್ಲಿ ಸೇರ್ಪಡೆಯಾದ ಹೆಚ್ಚುವರಿ ವ್ಯಕ್ತಿ ಸಂಖ್ಯೆ ಜನಸಂಖ್ಯೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಉದಾಹರಣೆಗೆ 2011 ಜನಸಂಖ್ಯೆಯಿಂದ 2001 ಜನಸಂಖ್ಯೆಯನ್ನು ಕಳೆದರೆ ಜನಸಂಖ್ಯೆಯಲ್ಲಿ ಯಾವ ಬದಲಾವಣೆ ತಿಳಿಯುತ್ತದೆ. ಕಳೆದಾಗ ಬಂದ ಸಂಖ್ಯೆ ಧನಾತ್ಮಕವಾದರೆ ಜನಸಂಖ್ಯೆ ಬೆಳೆದಿದೆ ಎಂದೂ ಋಣಾತ್ಮಕವಾದರೆ ಕಡಿಮೆಯಾಗಿದೆ ಎನ್ನುತ್ತಾರೆ.

ಜನಸಂಖ್ಯೆ ಬದಲಾವಣೆ (ಅಂಕೆಯಲ್ಲಿ) = (ನಂತರ ಕಾಲದ ಜನಸಂಖ್ಯೆ) – (ಮುಂದಿನ ಕಾಲದ ಜನಸಂಖ್ಯೆ)

SCERT TELANGANA



- 1901 ರಿಂದ 2011ವರೆಗೆ ಭಾರತ ದೇಶದಲ್ಲಿ ಪ್ರತಿ ದಶಾಬ್ದ ಕಾಲಕ್ಕೆ ಜನಸಂಖ್ಯೆ ಎಷ್ಟು ಬೆಳೆದಿದೆ ಪರಿಶೀಲಿಸಿರಿ.
- ಪಕ್ಕದ ಗ್ರಾಫ್ ಪರಿಶೀಲಿಸಿ ಯಾವ ದಶಮಾನದಲ್ಲಿ ಜನಸಂಖ್ಯೆ ಇಳಿಕೆಯಾಗಿದೆ ತಿಳಿಸಿರಿ.
- ಯಾವ ವರ್ಷದಿಂದ ಜನಸಂಖ್ಯೆ ನಿರಂತರವಾಗಿ ಬೆಳೆಯುತ್ತಿದೆ?
- ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಜನಸಂಖ್ಯೆ ವೇಗವಾಗಿ ಬೆಳೆಯಲು ಕಾರಣ ಏನಿರಬಹುದು?

ಒಂದು ಪ್ರಾಂತದ ಜನಸಂಖ್ಯೆಯ ಬದಲಾವಣೆ =(ಜನನಗಳ ಸಂಖ್ಯೆ +ಆ ಪ್ರಾಂತಕ್ಕೆ ವಲಸೆ ಬಂದವರ ಸಂಖ್ಯೆ) –(ಮರಣಗಳ ಸಂಖ್ಯೆ + ಆ ಪ್ರಾಂತದಿಂದ ಹೊರಗೆ ವಲಸೆ ಹೋದವರ ಸಂಖ್ಯೆ). ಬರುವ ಸಂಖ್ಯೆ ಧನಾತ್ಮಕವಾಗಿದ್ದರೆ ಜನಸಂಖ್ಯೆ ಹೆಚ್ಚಾಗಿದೆ ಎಂದು ಋಣಾತ್ಮಕವಾಗಿದ್ದರೆ ಜನಸಂಖ್ಯೆ ಕಡಿಮೆಯಾಗಿದೆಯೆಂದು ಹೇಳುತ್ತಾರೆ.

ಸ್ವಲ್ಪ ಹೊತ್ತು ವಲಸೆಗಳನ್ನು ಪಕ್ಕಕ್ಕಿಡೋಣ. ಜನಸಂಖ್ಯೆಯಲ್ಲಿ ಬದಲಾವಣೆ ತಿಳಿಯಲು ಜನನಗಳ ಮತ್ತು ಮರಣಗಳ ದರವನ್ನು ತಿಳಿಯೋಣ. ಒಂದು ವರ್ಷದಲ್ಲಿ 1000 ಮಂದಿ ಜನಸಂಖ್ಯೆಗೆ ಎಷ್ಟು ಜನ ಸಜೀವ ಮಕ್ಕಳು ಹುಟ್ಟಿದರೋ ಅದು ಜನನಗಳ ದರ. ಉದಾಹರಣೆಗೆ 1992ರಲ್ಲಿ ಭಾರತದಲ್ಲಿ ಜನನಗಳ ದರ 29. ಅಂದರೆ ಆ ವರ್ಷದಲ್ಲಿ ದೇಶದಲ್ಲಿ ಪ್ರತಿ ಸಾವಿರ ಮಂದಿಗೆ 29 ಜನನ ಇದೆ ಎಂದರ್ಥ. ಮರಣಗಳ ದರ ಎಂದರೆ ಒಂದು ವರ್ಷದಲ್ಲಿ ಪ್ರತಿ ಸಾವಿರ ಮಂದಿಗೆ ಮರಣ ಹೊಂದಿದವರ ಸಂಖ್ಯೆ. 1992 ರಲ್ಲಿ ಅಂದಿನ ಜನಸಂಖ್ಯೆಯಲ್ಲಿ ಪ್ರತಿ ಸಾವಿರ ಜನರಿಗೆ 19 ಮಂದಿ ಮರಣಹೊಂದಿದರು. ಇದನ್ನು ಗಮನಿಸಿದಾಗ ಆ ವರ್ಷದಲ್ಲಿ ಪ್ರತಿ ಸಾವಿರ ಜನರಿಗೆ 19 ಮಂದಿ ಹೆಚ್ಚು ಜನ ಸೇರಿದ್ದಾರೆ ಎಂದರ್ಥ. ಈ ಸಂಖ್ಯೆಯನ್ನು ಶೇಕಡಾ ರೂಪದಲ್ಲಿ ಹೇಳುವುದಾದರೆ ಶೇ.1.9 ಅಂದರೆ 1992ರಲ್ಲಿ ಜನಸಂಖ್ಯೆ 1.9 ಶೇಕಡ ರಷ್ಟು ಹೆಚ್ಚಾಗಿದ ಎಂದರ್ಥ.

ಜನಸಂಖ್ಯೆ ಹೆಚ್ಚಳ ಶೇಕಡ ಬಹಳ ಮುಖ್ಯವಾದ ಅಂಶ. ಇದನ್ನು ವರ್ಷಕ್ಕೆ ಶೇಕಡಾ ರೂಪದಲ್ಲಿ ಲೆಕ್ಕ ಹಾಕುತ್ತಾರೆ. ಉದಾಹರಣೆಗೆ ವರ್ಷಕ್ಕೆ ಶೇಕಡಾ 2ರಷ್ಟು ಹೆಚ್ಚು ಎಂದರೆ ಅದಕ್ಕೆ ಹಿಂದಿನ ವರ್ಷದಲ್ಲಿ ಪ್ರತಿ ನೂರು ಮಂದಿಗೆ ಇಬ್ಬರಂತೆ ಜನಸಂಖ್ಯೆ ಬೆಳೆದಿದೆ ಎಂದರ್ಥ. ಇದು ಚಕ್ರಬಡ್ಡಿಯಂತೆ ಇರುತ್ತದೆ. ಇದನ್ನೇ ವಾರ್ಷಿಕ ವೃದ್ಧಿರೇಟು ಎನ್ನುತ್ತಾರೆ. ಭಾರತ ದೇಶ ಜನಸಂಖ್ಯೆ ಸ್ಥಿರವಾಗಿ ಬೆಳೆಯುತ್ತಲೇ ಇದೆ.

ಮೇಲಿನ ರೇಖಾ ಚಿತ್ರದಲ್ಲಿ ತೋರಿಸಿದಂತೆ ಜನಸಂಖ್ಯೆ ಬೆಳೆಯುತ್ತಿದೆ. ಇದಕ್ಕೆ ಕಾರಣ ತಿಳಿಯಬೇಕಾದರೆ ಜನನ ಮರಣಗಳ ಶೇಕಡವನ್ನು ಪರಿಶೀಲಿಸಬೇಕು. ಮರಣದ ದರ ಗಣನೀಯವಾಗಿ ಇಳಿಕೆಯಾಗಿದ್ದರೂ ಇತ್ತೀಚಿನ ಕಾಲದಲ್ಲಿ ಜನನಗಳ ದರ ಇಳಿದಿಲ್ಲ. ಕ್ಷಾಮ, ಅಂಟು ರೋಗಗಳಿಂದ ಅಧಿಕ ಜನರು ಮರಣ ಹೊಂದಿದ್ದರಿಂದ 1901–21ರ ಮಧ್ಯ ಕಾಲದ ಅಧಿಕ ಮರಣ ದರಕ್ಕೆ ಸಾಕ್ಷಿಯಾಗಿದೆ. 1918 ರಲ್ಲಿ 15 ಮಿಲಿಯನ್ ಜನರು ಮರಣಕ್ಕೆ ಕಾರಣವಾದ ಜ್ವರ, ಅಂಟು ರೋಗಗಳು ಈ ಕಾಲಕ್ಕೆ ಸೇರಿದವುಗಳೇ. 1921 ರಿಂದ ಪ್ರತ್ಯೇಕವಾಗಿ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಬರ ಸಹಾಯ, ಆಹಾರ ಧಾನ್ಯಗಳ ಸಂಗ್ರಹಣೆ, ನ್ಯಾಯಬೆಲೆ ಅಂಗಡಿಗಳು, ಪ್ರಜಾಪ್ರಭುತ್ವದಲ್ಲಿ ಜನರು ಚುರುಕಾದ ಪಾತ್ರ ವಹಿಸುತ್ತಿರುವುದು. ಮೊದಲಾದವುಗಳಿಂದ ಬರ ಪ್ರಭಾವ ಕಡಿಮೆಯಾಗಿದೆ. ಅದೇ ರೀತಿ ಕಲರಾ, ಪ್ಲೇಗು, ಸ್ವಲ್ಪಮಟ್ಟಿಗೆ ಮಲೇರಿಯಾದಂತಹ ಅಂಟುರೋಗಗಳನ್ನು ನಿಯಂತ್ರಿಸಲಾಯಿತು. ಅನೇಕ ರೋಗಗಳಿಗೆ ಕಲುಷಿತ ನೀರು, ಇಕ್ಕಟ್ಟಾದ ಮನೆಗಳಲ್ಲಿ ವಾಸ, ಪರಿಶುದ್ದತೆಯ ಲೋಪ, ಮೊದಲಾದವು ಮುಖ್ಯ ಕಾರಣಗಳು,

SCERT TELANGANA

ಈ ರೋಗಗಳನ್ನು ಎದುರಿಸಲು ಉತ್ತಮ ಪರಿಸರ, ಶುಭ್ರವಾದ ನೀರು, ಪೋಷಕ ಆಹಾರವನ್ನು ಒದಗಿಸಬೇಕೆಂದು ಎಲ್ಲರೂ ಗುರುತಿಸಿ ಆ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಂಡರು. ಆ ನಂತರ ವೈದ್ಯಕೀಯ ರಂಗದ ಬೆಳವಣಿಗೆಯಿಂದ ಅದರಲ್ಲಿ ಪ್ರತ್ಯೇಕವಾಗಿ ಲಸಿಕೆಗಳು ಮತ್ತು ಯಾಂಟಿ ಬಯೋಟಿಕ್ಸ್ (ರೋಗನಿರೋಧಕಗಳು) ಗಳಿಂದ ಉತ್ತಮ ಆರೋಗ್ಯ ಸಾಧ್ಯವಾಯಿತು. 1921ರೊಂದಿಗೆ ಹೋಲಿಸಿದರೆ ಮರಣದ ಶೇಕಡ ದರೆ ಕಡಿಮೆಯಾಯಿತು. ಜನನಗಳ ಶೇಕಡ ದರೆ ಹೆಚ್ಚಾಗಲು ಕಡಿಮೆಯಾಗುತ್ತಿರುವ ಮರಣ ದರ ಜೊತೆಯಾಗಿ ಜನಸಂಖ್ಯೆ ವಿಪರೀತವಾಗಿ ಬೆಳೆಯಲಾರಂಭಿಸಿತು.

ಜನನದ ಶೇಖಡ ದರ ಹೆಚ್ಚಾಗಿರಲು ಕಾರಣವೇನು? ಗತಕಾಲದಲ್ಲಿ ಏನು ನಡೆದಿದೆ ಎಂಬುದು ಒಂದು ಕಾರಣ. ಒಟ್ಟು ಜನಸಂಖ್ಯೆಯಲ್ಲಿ ಸಣ್ಣ ಮಕ್ಕಳು ಅಧಿಕ ಸಂಖ್ಯೆಯಲ್ಲಿದ್ದರೆ ಅವರು ಮುಂಬರುವ ವರ್ಷಗಳಲ್ಲಿ ಬೆಳೆದು, ದೊಡ್ಡವರಾಗಿ, ಮದುವೆಯಾಗಿ, ಮಕ್ಕಳನ್ನು ಹೆರುತ್ತಾರೆ. ದೊಡ್ಡ ಸಂಖ್ಯೆಯ ಯುವ ಜನಾಂಗದೊಂದಿಗೆ ಆರಂಭಗೊಂಡಾಗ ಹುಟ್ಟುವ ಮಕ್ಕಳ ಸಂಖ್ಯೆಯೂ ಹೆಚ್ಚಾಗುತ್ತದೆ.

ದಂಪತಿಗಳು ಎಷ್ಟು ಮಂದಿ ಮಕ್ಕಳು ಬೇಕೆನ್ನುತ್ತಾರೆ ಎನ್ನುವುದು ಸಹ ಜನಸಂಖ್ಯೆ ಬೆಳವಣಿಗೆಗೆ ಮತ್ತೊಂದು ಕಾರಣ. ಹುಟ್ಟಿದ ಮಕ್ಕಳಲ್ಲಿ ಜೀವಂತವಾಗಿರುವ ಮಕ್ಕಳೆಷ್ಟು, ಪ್ರಜೆಗಳಿಗಿರುವ ಸಾಮಾಜಿಕ ಭದ್ರತೆ, ಸಮಾಜದಲ್ಲಿ ಗಂಡು ಮಗುವಿಗಿರುವ ಪ್ರಾಧಾನ್ಯತೆಯಂತಹ ಅಂಶಗಳನ್ನು ಇದು ಆಧರಿಸಿದೆ. ಉದಾಹರಣೆಗೆ ಉಮೇದ್‌ಸಿಂಗ್ ಕುಟುಂಬದ ಮೂರು ತಲೆಮಾರನ್ನು ಪರಿಶೀಲಿಸೋಣ.

''ಉಮೇದ್‌ಸಿಂಗ್‌ನ ಅಜ್ಜ ಮತ್ತು ಅಜ್ಜಿ ಪ್ಲೇಗು ಮತ್ತು ಕಲರಾದಂತಹ ರೋಗಗಳಿಂದ ನರಳಿ ಮರಣ ಹೊಂದಿದರು. 1900 ರಲ್ಲಿ ಹುಟ್ಟಿದ ಆತನ ತಂದೆಯನ್ನು ಅವರ ಅಣ್ಣ ಬೆಳೆಸಿದ. ಅವರಿಗೆ ಸ್ವಲ್ಪ ಭೂಮಿ ಇತ್ತು. ಯಾವಾಗಲೋ ಒಮ್ಮೆ ಉತ್ತಮ ಬೆಳೆ ಬೆಳೆಯುವುದು ಬಿಟ್ಟರೆ, ಬೆಳೆನಷ್ಟ, ಬರದಂತಹ ನಿರಂತರ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಉಮೇದ್ ಸಿಂಗ್‌ನ ತಂದೆಗೆ ಒಂಬತ್ತು ಮಂದಿ ಮಕ್ಕಳು ಆದರೆ ಅವರಲ್ಲಿ ಆರು ಮಂದಿ ಸಣ್ಣವರಿದ್ದಾಗಲೇ ಮರಣ ಹೊಂದಿದರು. ಬದುಕಿರುವ ಮೂವರಲ್ಲಿ ಉಮೇದ್‌ಸಿಂಗ್ 1935 ರಲ್ಲಿ ಜನಿಸಿದ. ಆತನಿಗೆ ಇಬ್ಬರು ಅಕ್ಕಂದಿರು. ಆತನಿಗೆ ತಂದೆಯಂತೆ ಮಾತ್ರವಲ್ಲದೆ ಅವನಿಗೆ ಪೋಲೀಸ್ ಉದ್ಯೋಗದಿಂದ ಪ್ರತಿ ತಿಂಗಳು ಸಂಬಳವಲ್ಲದೇ ಭೂಮಿಯಿಂದ ಸ್ವಲ್ಪ ಆದಾಯ ಬರುತ್ತದೆ. ಉಮೇದ್‌ಸಿಂಗ್‌ಗೆ ಮೊದಲು ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರೂ. ಅವರು ಬದುಕುವುದು ಅನುಮಾನವಿತ್ತು. ಅದಲ್ಲದೆ ಆತನಿಗೆ ಗಂಡು ಮಗು ಬೇಕಿತ್ತು. ಆ

ಚಿತ್ರ 6.2: ಕೆಳಗೆ ವಿದೇಶಕ್ಕೆ ಸಂಬಂಧಿಸಿದ ಎರಡು ಭಿತ್ತಿ ಚಿತ್ರ ಕೊಡಲ್ಪಟ್ಟಿವೆ. ಅವುಗಳಲ್ಲಿ ಕೊಟ್ಟ ಸಂದೇಶವನ್ನು ಊಹಿಸಬಲ್ಲಿರಾ? ಇಂತಹ ಭಿತ್ತಿ ಚಿತ್ರಗಳನ್ನು ಭಾರತದಲ್ಲಿ ಯಾವಾಗಲಾದರೂ ನೋಡಿದ್ದೀರಾ? ಚರ್ಚಿಸಿರಿ.



SCERT TELANGANA

ನಂತರ ಆವನಿಗೆ ನಾಲ್ಕು ಜನ ಮಕ್ಕಳಾದರು. ಅವರಲ್ಲಿ ಮೂರು ಜನ ಗಂಡುಮಕ್ಕಳು. ಉಮೇದ್ ದೊಡ್ಡ ಮಗಳು ಶಿಕ್ಷಕರ ಶಿಕ್ಷಣ ಪಡೆದಿದ್ದಳು. ಮೂರಕ್ಕಿಂತಲೂ ಹೆಚ್ಚು ಶೇಕಡ ಸಂತಾನ ಬೇಡ ಎಂದು ಆಕೆ ಬಯಸಿದಳು.

1981 ರಿಂದ ಜನನ ದರ ಸಹ ಕ್ರಮೇಣ ಕಡಿಮೆಯಾಗುತ್ತಿದೆ. ಇದರ ಪರಿಣಾಮವಾಗಿ ಜನಸಂಖ್ಯೆ ಬೆಳವಣಿಗೆ ದರ ನಿಧಾನವಾಗಿ ಕಡಿಮೆಯಾಗುತ್ತಿದೆ. ಕೆಳಗಿನ ಪಟ್ಟಿಯಲ್ಲಿ 1951 ರಿಂದ 2011 ರವರೆಗೆ ಪ್ರತಿ ದರಮಾನಕ್ಕೆ ಜನಸಂಖ್ಯೆ ಬದಲಾವಣೆಯ ಶೇಕಡ ದರವನ್ನು ಲೆಕ್ಕಹಾಕಿ ಅದು ಸಹ ಕಡಿಮೆಯಾಗುತ್ತಿದೆಯೋ ನೋಡಿರಿ.

ಪಟ್ಟಿ 3 : ಭಾರತದ ಜನಸಂಖ್ಯಾ ಬೆಳವಣಿಗೆಯ ಸ್ವರೂಪ, ಶೇಕಡಾ ಖಾಲಿಗಳನ್ನು ತುಂಬಿರಿ.

ವರ್ಷ	ಒಟ್ಟು ಜನಸಂಖ್ಯೆ (ಮಿಲಿಯನ್‌ಗಳಲ್ಲಿ)	ಜನಸಂಖ್ಯಾ ಬೆಳವಣಿಗೆ ಶೇಕಡಾ ವೃದ್ಧಿ	ದಶಾಬ್ದ ಕಾಲದಲ್ಲಿ ಬದಲಾವಣೆಯ ಶೇಕಡ	ವಾರ್ಷಿಕ ಬದಲಾವಣೆ ಶೇಕಡಾ
1951	361			
1961	439	78	21.60	2.16
1971	548	?		
1981	683	?		
1991	846	?		
2001	1029	?		
2011	1210	?		

ಸೂತ್ರ: 439 – 361 = 78 361ಕ್ಕೆ ಸೇರಿದರೆ, ಎಷ್ಟು ಶೇಕಡಾ ವೃದ್ಧಿಯಾದಂತೆ 78×100/361=21.60 ವಾರ್ಷಿಕ ಬದಲಾವಣೆ 2.16.

ಈ ಧೋರಣೆಯನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ? ಇದಕ್ಕೆ ಶೇಕಡಾವಾರು ಸಂತಾನ ಸಾಫಲ್ಯತೆ (ಫೆರ್ಟಿಲಿಟಿ ದರ) (ಒಬ್ಬ ಮಹಿಳೆಗೆ ಹುಟ್ಟುವ ಒಟ್ಟು ಮಕ್ಕಳು) ಬಳಸುತ್ತಾರೆ. ಒಬ್ಬ ಮಹಿಳೆಯ ಪುನರುತ್ಪತ್ತಿ ವಯಸ್ಸು, ಕೊನೆಯವರೆಗೆ ಜೀವಿಸಿದ್ದು, ಪ್ರಸ್ತುತ ವಿಧಾನದ ಪ್ರಕಾರ ಆಕೆ ಮಕ್ಕಳನ್ನು ಹೆತ್ತರೆ, ಹುಟ್ಟುವ ಒಟ್ಟು ಮಕ್ಕಳನ್ನು ಫೆರ್ಟಿಲಿಟಿ ದರ ಎನ್ನುತ್ತಾರೆ. ಇದು ಕಡಿಮೆಯಾದರೆ ದಂಪತಿಗಳು ಕಡಿಮೆ ಮಕ್ಕಳನ್ನು ಆಶಿಸುತ್ತಿದ್ದಾರೆ ಎಂದು ಭಾವಿಸಬಹುದು. ಕುಟುಂಬದ ಒಳಗಿನ ಮತ್ತು ಹೊರಗಿನ ಅಂಶಗಳು ಈ ನಿರ್ಣಯದ ಮೇಲೆ ಪ್ರಭಾವ ಬೀರುತ್ತದೆ. ಕೆಳಗಿನ ಗ್ರಾಫ್ 6.4ನ್ನು ನೋಡಿರಿ.

1961ರಲ್ಲಿ ಭಾರತದಲ್ಲಿ ಫೆರ್ಟಿಲಿಟಿ ಧರ 5.9 ಇದೆ. ಅಂದರೆ ಪ್ರತಿ ಮಹಿಳೆ ಸರಾಸರಿ ಐದರಿಂದ ಆರು ಮಕ್ಕಳಿಗೆ ಜನ್ಮ ನೀಡುತ್ತಾಳೆ, ಭದ್ರತೆ, ಮಕ್ಕಳಿಗಿರುವ ಅವಕಾಶಗಳು, ಸಾಮಾಜಿಕ ಒತ್ತಡಗಳು ಎಷ್ಟು ಮಕ್ಕಳು ಬೇಕೆಂದು ಆ ಕುಟುಂಬ ನಿರ್ಣಯಿಸಿಕೊಳ್ಳುತ್ತದೆ. ಈ ವಿಧಾನದಲ್ಲಿ ಸ್ವಲ್ಪ ಬದಲಾವಣೆ ಬಂದಿದೆ. ಭಾರತದ ಪ್ರಸ್ತುತ ಫರ್ಟಿಲಿಟಿ ದರ 2.7, ಅದು ಆಂಧ್ರಪ್ರದೇಶದಲ್ಲಿ 1.9 ಇದೆ.

ಗ್ರಾಫ್ 4: ಭಾರತದಲ್ಲಿ ಫರ್ಟಿಲಿಟಿ ದರ 1961 - 2011



ಜನಸಂಖ್ಯೆ ಬೆಳವಣಿಗೆಯಲ್ಲಿ ಮೂರನೇ ಅಂಶ ವಲಸೆ ಹೋಗುವುದು. ಪ್ರಜೆಗಳು ತಮ್ಮ ಪ್ರಾಂತವನ್ನು ದಾಟಿ ಹೋಗುವುದನ್ನು ವಲಸೆ ಎನ್ನುತ್ತಾರೆ. ಇದು ದೇಶದ ರಾಷ್ಟ್ರೀಯವಾಗಿರಬಹುದು(ದೇಶದ ಒಳಗೆ) ಮತ್ತು ಅಂತರಾಷ್ಟ್ರೀಯ ವಾಗಿಯೂ ಇರಬಹುದು. ರಾಷ್ಟ್ರೀಯ ವಲಸೆಯಿಂದ ದೇಶದ ಜನಸಂಖ್ಯೆ ಬದಲಾಗುವುದಿಲ್ಲವಾದರೂ ದೇಶದಲ್ಲಿನ ಅದರ ವಿಸ್ತರಣೆಯು ಪ್ರಭಾವಕ್ಕೊಳಗಾಗುತ್ತದೆ. ವಲಸೆಗಳ ಕುರಿತು ಮುಂದಿನ ಅಧ್ಯಾಯದಲ್ಲಿ ಮತ್ತಷ್ಟು ತಿಳಿಯುವಿರಿ.

SCERT TELANGANA

- ಫರ್ಟಿಲಿಟಿ ಶೇಕಡಾ 2ಕ್ಕೆ ಹತ್ತಿರವಾಗಿದ್ದರೆ ಆದರ ಅರ್ಥವೇನು ಚರ್ಚಿಸಿರಿ.
- ಇತ್ತೀಚಿಗೆ ಮದುವೆ ಆಗಿ ಇನ್ನು ಮಕ್ಕಳು ಹುಟ್ಟದ ದಂಪತಿಗಳೊಂದಿಗೆ ಮಾತನಾಡಿರಿ. ಅವರು ಎಷ್ಟು ಮಂದಿ ಮಕ್ಕಳು ಬೇಕೆಂದುಕೊಂಡಿದ್ದಾರೆ? ಅದಕ್ಕಿರುವ ಕಾರಣಗಳೇನು?
- ನಿಮ್ಮ ಕುಟುಂಬದಲ್ಲಿ ಮೂರು ತಲೆಮಾರಿನ ಪ್ರತಿ ಮಹಿಳೆಗೆ ಎಷ್ಟು ಮಂದಿ ಸಂತಾನಗಳಿದ್ದವೋ ತಿಳಿದುಕೊಳ್ಳಿರಿ. ನಿಮಗೆ ಎಂತಹ ಬದಲಾವಣೆಗಳು ಕಂಡುಬಂದಿವೆ?
- ನಿಮ್ಮ ಗುಂಪಿನಲ್ಲಿ ಮಾಡಿದ ಸರ್ವೆಯಲ್ಲಿ 45 ವರ್ಷಗಳು ತುಂಬಿದ ಒಟ್ಟು ಮಹಿಳೆಯರ ಸಂಖ್ಯೆ , ಅವರ ಮಕ್ಕಳ ಸಂಖ್ಯೆಯನ್ನು ತಿಳಿದುಕೊಳ್ಳಿರಿ. ನಿಮ್ಮ ಸರ್ವೆಯಲ್ಲಿ ಸರಾಸರಿ ಪ್ರತಿ ಮಹಿಳೆಗೆ ಎಷ್ಟು ಮಂದಿ ಮಕ್ಕಳು ಇದ್ದಾರೆ?
- ಮಕ್ಕಳ ವಿಷಯದಲ್ಲಿ ಉಮೇದ್ ಸಿಂಗ್‌ನ್ನು ಯಾವ ಅಂಶಗಳು ಪ್ರಭಾವ ಬೀರಿವೆ? ಅವನ ಮಗಳು ಸಹ ಅವನ ಹಾಗೆಯೇ ಆಲೋಚಿಸುತ್ತಿದ್ದಾಳೆಯೇ?

ಜನಸಂಖ್ಯೆ ಬೆಳವಣಿಗೆಯನ್ನು ಕುರಿತು ಕೆಲವರು ಆಂದೋಲನೆಯಿಂದ ಮಾತನಾಡುವುದನ್ನು ಕೇಳುತ್ತಿರುತ್ತೇವೆ. ಇಂತವರು ಸಾಧಾರಣವಾಗಿ ಅಕ್ಷರಾಸ್ಯರು, ಜನಸಂಖ್ಯೆ ಹೆಚ್ಚಾಗಿ ಸಂಪನ್ಮೂಲಗಳು ಕಡಿಮೆಯಾಗಿ ಇತರರು ಪ್ರಯೋಜನ ಪಡೆಯದೇ ಹೋಗುತ್ತಾರೆ ಎಂದು ಅವರು ಹೇಳುತ್ತಿರುತ್ತಾರೆ. ಆದರೆ ತಮಗಿರುವ ಸಂಪನ್ಮೂಲಗಳು, ವೃದ್ಧಾಪ್ಯದಲ್ಲಿ ತಮ್ಮ ಭದ್ರತೆಯಂತಹ ಅನೇಕ ಅಂಶಗಳ ಆಧಾರವಾಗಿ ಅನೇಕ ಕುಟುಂಬಗಳು ತಮಗೆ ಎಷ್ಟು ಮಕ್ಕಳು ಬೇಕುಶಶ ಎಂಬುದನ್ನು ನಿರ್ಣಯಿಸಿಕೊಳ್ಳುತ್ತವೆ. ಹೆಚ್ಚು ಮಕ್ಕಳಿರುವ ಕುಟುಂಬಗಳು ಉಳಿದ ಕುಟುಂಬಗಳಿಗೆ ಬಡತನದಲ್ಲಿರುತ್ತವೆ. ಅಷ್ಟಾಗಿ ಆಸ್ತಿಗಳಿಸುವುದಿಲ್ಲ, ವೃದ್ಧಾಪ್ಯದಲ್ಲಿ ಭದ್ರತೆಗೆ ತಮ್ಮ ಮಕ್ಕಳ ಮೇಲೆ ಆಧಾರಪಟ್ಟಿರುತ್ತಾರೆ. ಈ ಭಿನ್ನ ದೃಷ್ಟಿಕೋನಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

ಜನಸಾಂದ್ರತೆ :

ಜನಸಂಖ್ಯೆ ವಿಸ್ತರಣೆಯನ್ನು ಜನಸಾಂದ್ರತೆ ಚೆನ್ನಾಗಿ ತಿಳಿಯಪಡಿಸುತ್ತದೆ. ಒಂದು ನಿರ್ಧಿಷ್ಟ ವಿಸ್ತೀರ್ಣದಲ್ಲಿರುವ ಪ್ರಜೆಗಳ ಸಂಖ್ಯೆಯನ್ನು ಆಧರಿಸಿ ಜನಸಾಂದ್ರತೆಯನ್ನು ಲೆಕ್ಕ ಹಾಕುತ್ತಾರೆ.

ಪ್ರಪಂಚದಲ್ಲಿ ಅತ್ಯಧಿಕ ಜನಸಾಂದ್ರತೆ ಇರುವ ದೇಶಗಳಲ್ಲಿ ಭಾರತವೂ ಒಂದು. 2011ರಲ್ಲಿ ಭಾರತದ ಜನಸಾಂದ್ರತೆ ಒಂದು ಚದರ ಕಿ.ಮೀ 382 ಜನ. ಈ ಸಾಂದ್ರತೆಯಲ್ಲಿ ವ್ಯತ್ಯಾಸಗಳು ಬಿಹಾರದಲ್ಲಿ 1102 ರಿಂದ ಅರುಣಾಚಲ ಪ್ರದೇಶದಲ್ಲಿ 17 ರವರೆಗೆ ಇದೆ. ಅಸ್ಸಾಂ, ದ್ವೀಪಕಲ್ಪ ಪ್ರಾಂತದ ಅನೇಕ ರಾಜ್ಯಗಳಲ್ಲಿ ಜನಸಾಂದ್ರತೆ ಒಂದು ರೀತಿಯಲ್ಲಿದೆ. ಅಲ್ಲಿನ ಭೂ ಭಾಗವು ಬೆಟ್ಟಗಳು, ಕಲ್ಲಿನಿಂದ ಕೂಡಿರುವುದು, ಕಡಿಮೆ ಮಳೆ ಬೀಳುವುದು, ಹೆಚ್ಚು ಆಳ, ನಿಸ್ಸಾರವಾದ ಭೂಮಿಗಳು, ಈ ಪ್ರಾಂತದ ಜನಸಾಂದ್ರತೆಯ ಮೇಲೆ ಪ್ರಭಾವ ಬೀರಿವೆ. ಉತ್ತರ ಮೈದಾನಗಳು, ಕೇರಳ ಮತ್ತು ಸಮತಟ್ಟಾದ ಮೈದಾನಗಳು, ಸಂಯುಕ್ತ ನೆಲಗಳು, ಅಧಿಕ ಮಳೆ ಕಾರಣದಿಂದ ಇಲ್ಲಿ ಅಧಿಕದಿಂದ ಅತ್ಯಧಿಕ ಜನಸಾಂದ್ರತೆ ಇದೆ.

ಉತ್ತರ ಮೈದಾನದಲ್ಲಿ ಅಧಿಕ ಜನಸಾಂದ್ರತೆ ಇರುವ ಮೂರು ರಾಜ್ಯಗಳನ್ನು ಗುರುತಿಸಿರಿ. ಜನಸಾಂದ್ರತೆಯಲ್ಲಿ ಈ ವ್ಯತ್ಯಾಸವೇಕೆ ಇದೆ? ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಆ ಪ್ರಾಂತದ ಚರಿತ್ರೆಯನ್ನು, ಆ ಭೂಭಾಗವನ್ನು, ವಾತಾವರಣ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ ಎಂಟನೇ ಅಧ್ಯಾಯದಲ್ಲಿ ರಾಮಪುರ ಗ್ರಾಮ ಕಥೆಯಲ್ಲಿ ಭೂಮಿ, ಇತರ ಸಹಜ ಸಂಪತ್ತು ಎಂಬ ಭಾಗವನ್ನು ಓದಿರಿ. ಫಲವತ್ತಾದ ಭೂಮಿ, ನೀರಾವರಿ ಸೌಕರ್ಯ, ಇದಕ್ಕೆ ಮೊದಲು ಹೆಚ್ಚು ಜನ ಸಂಖ್ಯೆಯನ್ನು ಪೋಷಿಸುತ್ತಿದ್ದರೂ, ಬೇರೆ ಬೇರೆ ಗುಂಪುಗಳ ಮೇಲೆ ಪ್ರತ್ಯೇಕವಾಗಿ ಸಣ್ಣ ರೈತರು, ಭೂಮಿ ಇಲ್ಲದ ಕೂಲಿಗಳ ಮೇಲೆ ಈ ಪ್ರಭಾವ ಬೇರೆ ಬೇರೆಯಾಗಿದೆ.

SCERT TELANGANA

- ಯಾವ ವರ್ಷದ ಹೊತ್ತಿಗೆ ಗ್ರಾಮದಲ್ಲಿಯ ಎಲ್ಲಾ ಭೂಮಿಯನ್ನು ಸಾಗುವಳಿಗೆ ತರಲಾಯಿತು?
- ಬೆಳೆಯುತ್ತಿರುವ ಕುಟುಂಬ ಪರಿಮಾಣಕ್ಕೆ ಭೂಮಿ ಉಳ್ಳವರು ಹೇಗೆ ಸ್ಪಂದಿಸಿದರು?
- ಕುಟುಂಬ ಪರಿಮಾಣ ಬೆಳೆದಾಗ ಗೋವಿಂದನಂತಹ ಸಣ್ಣ ರೈತರು ಹೇಗೆ ಸ್ಪಂದಿಸಿದರು? ಕೊಳವೆ ಬಾವಿಗಳಿಂದ ಬರುವ ನೀರು ಎಷ್ಟರಮಟ್ಟಿಗೆ ಉಪಯೋಗಕರ?
- ಕೆಳಗಿನ ಭಾರತ ನಕ್ಷೆಯನ್ನು ನೋಡಿರಿ. ಭಾರತದ ಭೌಗೋಳಿಕ ಸ್ವರೂಪಕ್ಕೂ, ಜನಸಾಂದ್ರತೆಗೂ ಮಧ್ಯ ಏನಾದರೂ ಸಂಬಂಧ ಇದೆಯೇ ನೋಡಿರಿ. ದೇಶದಲ್ಲಿನ ಪ್ರಧಾನ ನಗರಗಳನ್ನು ಗುರುತಿಸಬಲ್ಲಿರಾ? ನಗರಗಳಲ್ಲಿನ ಅಧಿಕ ಜನಸಾಂದ್ರತೆಯನ್ನು ಹೇಗೆ ವಿವರಿಸುತ್ತಾರೆ?



ನಕ್ಷೆ 2 : ಭಾರತದೇಶ ಜಿಲ್ಲಾ ಮಟ್ಟದ ಜನಸಾಂದ್ರತೆ.

SCERT TELANGANA

ನಕ್ಷೆ 3 : ತೆಲಂಗಾಣ 31 ಜಿಲ್ಲೆಗಳ ಹೊರ ರೇಖಾ ನಕ್ಷೆ



ಪ್ರಸ್ತುತ ಜಿಲ್ಲೆಗಳಿರುವ ತೆಲಂಗಾಣ ಭೂಪಟದಲ್ಲಿ ವಿವಿಧ ಜನಸಾಂದ್ರತೆ ಮಟ್ಟಗಳನ್ನು ನಿಮ್ಮ ಶಿಕ್ಷಕರ ಸಹಾಯದಿಂದ ಸೂಚಿಸಿರಿ. ಅಧಿಕ ಜನಸಾಂದ್ರತೆ ಇರುವ ಜಿಲ್ಲೆಯನ್ನು, ಕಡಿಮೆ ಜನಸಾಂದ್ರತೆ ಇರುವ ಮತ್ತೊಂದು ಜಿಲ್ಲೆಯೊಂದಿಗೆ ಕೆಳಗಿನ ಅಂಶಗಳನ್ನು ಹೋಲಿಸಿರಿ.

ಅ. ಭೂಮಿಯ ಮೇಲ್ಮೈ, ವ್ಯವಸಾಯ ಅಭಿವೃದ್ಧಿಗೆ ಅವಕಾಶಗಳು.

ಆ. ಆ ಪ್ರದೇಶದ ವ್ಯವಸಾಯ ಚರಿತ್ರೆ, ಭೂಮಿ, ನೀರು ಇತರ ನೈಸರ್ಗಿಕ ಸಂಪನ್ಮೂಲಗಳ ಬಳಕೆ.

ಇ. ಆ ಪ್ರದೇಶದಿಂದ , ಈ ಪ್ರದೇಶಕ್ಕೆ ವಲಸೆಗಳು, ಇದಕ್ಕೆ ಕಾರಣಗಳು

SCERT TELANGANA

ಮುಖ್ಯ ಪದಗಳು

ಜನಸಂಖ್ಯಾ ಬೆಳವಣಿಗೆ	ಜನಸಾಂದ್ರತೆ	ಲಿಂಗನಿಷ್ಪತ್ತಿ	ಫರ್ಟಿಲಿಟಿ ಶೇಕಡಾ
ಜನಸಂಖ್ಯೆ ವಿಸ್ತರಣೆ	ಅಕ್ಷರಾಸ್ಯತೆ ಶೇಕಡಾ	ಭ್ರೂಣ ಹತ್ಯೆ	

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1 . ಕೆಳಗಿನ ಪಟ್ಟಿ ಆಧರಿಸಿ ಕೆಳಗೆ ಇರುವ ಪ್ರಶ್ನೆಗೆ ಉತ್ತರಿಸಿರಿ. (AS_3)

ಪ್ರಪಂಚ ಜನಸಂಖ್ಯೆ ಕಳೆದ ಮತ್ತು ಭವಿಷ್ಯದ ಅಂದಾಜು (ಮಿಲಿಯನ್‌ಗಳಲ್ಲಿ)

ವರ್ಷ

ಪ್ರಾಂತ / ವರ್ಷ	1500	1600	1700	1800	1900	1950	1999	2012	2050	2150
ಪ್ರಪಂಚ	458	580	682	978	1,650	2,521	5,978	7,052	8,909	9,746
ಆಫ್ರಿಕಾ	86	114	106	107	133	221	767	1,052	1,766	2,308
ಆಸಿಯಾ	243	339	436	635	947	1,402	3,634	4,250	5,268	5,561
ಯುರೋಪ್	84	111	125	203	408	547	729	740	628	517
ಲ್ಯಾಟಿನ್ ಅಮೇರಿಕಾ ಮತ್ತು ಕರೇಬಿಯನ್	39	10	10	24	74	167	511	603	809	912
ಉತ್ತರ ಅಮೇರಿಕಾ	3	3	2	7	82	172	307	351	392	398
ಓಷಿಯಾನಿಯಾ	3	3	3	2	6	13	30	38	46	51

- ಪ್ರಪಂಚ ಜನಸಂಖ್ಯೆ ಮೊದಲಬಾರಿ ಎರಡರಷ್ಟಾಗಲು ಸುಮಾರು ಎಷ್ಟು ದಶಮಾನಗಳು ಬೇಕಾಯಿತು ತಿಳಿದುಕೊಳ್ಳಿರಿ.
- ಹಿಂದಿನ ತರಗತಿಯಲ್ಲಿ ನೀವು ವಸಹಾತು ಆಳ್ವಿಕೆ ಕುರಿತು ಓದಿದ್ದೀರಿ. ಪಟ್ಟಿಯನ್ನು ನೋಡಿ 1800 ರ ಹೊತ್ತಿಗೆ ಯಾವ ಖಂಡದಲ್ಲಿ ಜನಸಂಖ್ಯೆ ಕಡಿಮೆಯಾಗಿದೆ ತಿಳಿಸಿರಿ.
- ಯಾವ ಖಂಡದಲ್ಲಿ ಹೆಚ್ಚು ಕಾಲ ಅಧಿಕ ಜನಸಂಖ್ಯೆ ಇದೆ.
- ಭವಿಷ್ಯತ್ತಿನಲ್ಲಿ ಜನಸಂಖ್ಯೆ ಗಣನೀಯವಾಗಿ ಕಡಿಮೆಯಾಗುವ ಖಂಡ ಯಾವುದಾದರೂ ಇದೆಯೇ?

2 . ಲಿಂಗನಿಷ್ಪತ್ತಿಯ ಬಹಳ ಹೆಚ್ಚು ಕಡಿಮೆಯಾಗಲು ಇದ್ದರೆ ಸಮಾಜದ ಮೇಲೆ ಬೀರುವ ಪರಿಣಾಮಗಳನ್ನು ತಿಳಿಸಿರಿ.(AS_4)

3. ಭಾರತದ ಅಕ್ಷರಾಸ್ಯತೆಯನ್ನು ಇತರ ದೇಶಗಳೊಂದಿಗೆ ಹೋಲಿಸಿರಿ. (AS_1)

ಶ್ರೀಲಂಕ, ನೇಪಾಳ, ಬಾಂಗ್ಲಾದೇಶ, ಮಯನ್ಮಾರ, ಪಾಕಿಸ್ಥಾನ ಯಾವ ವ್ಯತ್ಯಾಸಗಳನ್ನು ಗಮನಿಸಿದ್ದೀರಿ?

4 . ತೆಲಂಗಾಣದಲ್ಲಿ ಯಾವ ಪ್ರಾಂತದಲ್ಲಿ ಜನಸಾಂದ್ರತೆ ಹೆಚ್ಚಾಗಿದೆ. ಅದಕ್ಕೆ ಕಾರಣಗಳೇನು?(AS_1)

5 . ಜನಸಂಖ್ಯೆ ಬೆಳವಣಿಗೆ ಮತ್ತು ಜನಸಂಖ್ಯೆ ಬದಲಾವಣೆಯ ವ್ಯತ್ಯಾಸ ತಿಳಿಸಿರಿ. (AS_1)

SCERT TELANGANA

6. ಕೆಳಗೆ ಕೊಟ್ಟಸ್ವೀಡನ್, ಕೆನಾಯ, ಮೆಕ್ಸಿಕೋ, ದೇಶಗಳ ವಯಸ್ಸಿನ ಸಮೂಹವನ್ನು ಹೋಲಿಸಿರಿ.(AS$_3$)

ಈ ದೇಶಗಳಲ್ಲಿ ಜನಸಂಖ್ಯೆ ಬೆಳವಣಿಗೆ ಹೇಗಿರುತ್ತದೆ?

ಯಾವ ದೇಶದ ಜನಸಂಖ್ಯೆ ಇನ್ನೂ ಕಡಿಮೆಯಾಗಬಹುದು?

ಎಲ್ಲಾ ದೇಶಗಳಲ್ಲಿ ಲಿಂಗ ಅನುಪಾತ ಸಮತೋಲನ ಇದೆಯಾ?



ಆ ದೇಶದ ಕುಟುಂಬ ಸಂಕ್ಷೇಮ ಯೋಜನೆಗಳು ಏನಿರಬಹುದು?





7. ನಕ್ಷೆಯ ಕೆಲಸ (AS$_5$)

ಅ. ರಾಜ್ಯಗಳನ್ನು ಸೂಚಿಸುವ ಭಾರತ ನಕ್ಷೆಯಲ್ಲಿ 2011 ಜನಗಣತಿ ವಿವರಗಳನ್ನು ಆಧರಿಸಿ ಐದು ಮಟ್ಟದಲ್ಲಿ ಜನಸಾಂದ್ರತೆ ಯನ್ನು ತಿಳಿಸಿರಿ.

ಆ. ಜಿಲ್ಲೆಗಳನ್ನು ಸೂಚಿಸುವ ತೆಲಂಗಾಣ ನಕ್ಷೆಯಲ್ಲಿ ಚುಕ್ಕಿ ಪದ್ದತಿಯನ್ನು ಬಳಸಿ ಜನಸಂಖ್ಯೆಯ ವಿಸ್ತರಣೆಯನ್ನು ತೋರಿಸಿರಿ. (ಒಂದು ಚುಕ್ಕಿ ಹತ್ತು ಸಾವಿರ ಜನರನ್ನು ಸೂಚಿಸುತ್ತದೆ?

ಯೋಜನೆ

ಜನಸಾಂದ್ರತೆಗೆ ಸಂಬಂಧಿಸಿದ ಎರಡು ನಕ್ಷೆಗಳನ್ನು, ಜನಸಂಖ್ಯೆ ಬೆಳವಣಿಗೆಗೆ ಸಂಬಂಧಿಸಿದ ರೇಖಾ ಚಿತ್ರವನ್ನು ನೋಡಿರಿ. ಈ ಅಧ್ಯಾಯದಲ್ಲಿ ನೀವು ಜನಸಂಖ್ಯೆಗೆ ಸಂಬಂಧಿಸಿ ತಿಳಿದ ವಿವಿಧ ಅಂಶಗಳ ಆಧಾರವಾಗಿ ಅವುಗಳನ್ನು ವಿವರಿಸಿರಿ.

SCERT TELANGANA



1990 ರಿಂದ ಜನಸಂಖ್ಯೆ ಬೆಳವಣಿಗೆ, ಅರಣ್ಯನಾಶ.



SCERT TELANGANA

ಅಧ್ಯಾಯ 7

ÊÝÓí ±ÝÌí ñÑWÙÜá & ÊÜÆÓÑWÙÜá

ನಿವಾಸ ಪ್ರಾಂತ ಎಂದರೇನು?

ನೀವು ಇರುವ ಊರು, ಪಟ್ಟಣ ಅಥವಾ ನಗರವನ್ನು ನೋಡಿರಿ. ಭವನ, ರಸ್ತೆ, ಚರಂಡಿಗಳಂತಹ ಜೋಡಣೆಗೆ ಒಂದು ವ್ಯವಸ್ಥೆ ಇರುವುದೆಂದು ನೀವು ಗ್ರಹಿಸುತ್ತೀರಿ. ಪ್ರಪಂಚದ ಎಲ್ಲಾ ಕಡೆಗೂ ಈ ಪದ್ಧತಿಯಲ್ಲಿ ಎಷ್ಟು ವ್ಯತ್ಯಾಸಗಳಿವೆಯೆಂದು ನೀವು ತಿಳಿದುಕೊಳ್ಳುತ್ತೀರಿ.

ಒಂದು ಪ್ರದೇಶದಲ್ಲಿ ನಮ್ಮ ನಿವಾಸ ಸ್ಥಳವನ್ನು , ನಮ್ಮ ಜೀವನ ವಿಧಾನಗಳನ್ನು ಏರ್ಪಡಿಸಿಕೊಂಡ ಪದ್ಧತಿಯನ್ನೇ ನಿವಾಸ ಪ್ರದೇಶ ಎನ್ನುತ್ತಾರೆ - ಇದು ನಾವು ವಾಸಿಸುವ , ಕೆಲಸ ಮಾಡುವ ಭೌಗೋಳಿಕ ಪ್ರದೇಶ, ನಿವಾಸ ಪ್ರಾಂತದಲ್ಲಿ ವಿದ್ಯೆ, ಮತಪರ, ವಾಣಿಜ್ಯಗಳಂತಹ ವಿಭಿನ್ನ ಚಟುವಟಿಕೆಗಳು ಇರುತ್ತವೆ.

ಈ ಅಧ್ಯಾಯದಲ್ಲಿ ನಾವು ಮಾನವ ನಿವಾಸ ಪ್ರಾಂತಗಳ ಕುರಿತು, ಅದಕ್ಕೆ ಸಂಬಂಧಿಸಿದ ಭೌಗೋಳಿಕ ಶಾಸ್ತ್ರವನ್ನು ಕುರಿತು ತಿಳಿದುಕೊಳ್ಳೋಣ.



ಚಿತ್ರ 7.1: ಅ, ಆ, ಇ ಇವೆಲ್ಲಾ ಹಿಮಾಲಯಕ್ಕೆ ಸಂಬಂಧಿಸಿದ ಚಿತ್ರಗಳು. ಈ ಚಿತ್ರಗಳನ್ನು ನೋಡಿ ವಿವಿಧ ನಿವಾಸ ಪ್ರಾಂತಗಳು, ಮನೆಗಳ ನಿರ್ಮಾಣದಲ್ಲಿ ಎದುರಾಗುವ ನಷ್ಟಗಳು, ಭೂಮಿ ವಿನಿಯೋಗ, ನಿವಾಸ ಪ್ರಾಂತ ವಿಧಗಳಂತವುಗಳಲ್ಲಿ ವ್ಯತ್ಯಾಸಗಳನ್ನು ಹೋಲಿಸಿರಿ

ಅ. 25,000 ಜನಸಂಖ್ಯೆಗೆ ಉದ್ದೇಶಿಸಲಾದ ಸಿಮ್ಲಾ ಪಟ್ಟಣದಲ್ಲಿ ಈಗ ಎರಡು ಲಕ್ಷ ಜನರಿದ್ದಾರೆ.

ಆ. ಹಿಮಾಲಯಗಳಲ್ಲಿ ಬೆಟ್ಟದ ತುದಿಗಳು ಮುರಿದು ಬೀಳುವುದು.

ಇ. ಹಿಮಾಲಯಗಳು ಲಡಖ್‌ನಲ್ಲಿನ ನುಬ್ರಾಕಣಿವೆಯಲ್ಲಿನ ಒಂದು ಗ್ರಾಮ. ಮಂಜಿನ ಗುಡ್ಡಗಳು ಕರಗುವಿಕೆಯಿಂದ ಏರ್ಪಟ್ಟ ಹಳ್ಳಗಳ ಪಕ್ಕದಲ್ಲಿ ಈ ನಿವಾಸ ಪ್ರಾಂತ ಏರ್ಪಟ್ಟಿದೆ. ಈ ಹಳ್ಳ ಬೇಸಿಗೆಯಲ್ಲಿ ಹರಿಯುತ್ತದೆ. ಆ ಕಾಲದಲ್ಲಿಯೇ ವ್ಯವಸಾಯಕ್ಕೆ ಸಾಧ್ಯವಾಗುತ್ತದೆ. ಈ ಪ್ರಾಂತದಲ್ಲಿ ಮಳೆ ಬೀಳುವುದೇ ಇಲ್ಲ. ಬೆಟ್ಟಗಳೆಲ್ಲವೂ ಗಿಡಗಳಿಲ್ಲದೆ ಬರಡಾಗಿ(Barren) ಇರುತ್ತವೆ.

SCERT TELANGANA

ಕ್ಷೇತ್ರ ಪರ್ಯಟನೆ

ನಿಮ್ಮ ಊರು, ಪಟ್ಟಣ ಅಥವಾ ನಗರವನ್ನು ಪರಿಶೀಲಿಸಿರಿ. ಇದಕ್ಕೂ ಮುನ್ನ ಕಲಿತುಕೊಂಡ ಪದ್ದತಿಗಳ ಆಧಾರವಾಗಿ ಆಯ್ದುಕೊಂಡ ಒಂದು ಸಣ್ಣ ಪ್ರಾಂತದ ಚಿತ್ರವನ್ನು ಎಳೆಯಿರಿ. ನಿಮ್ಮ ಚಿತ್ರದಲ್ಲಿ ಈ ಕೆಳಗೆ ಸೂಚಿಸಿದ ಅಂಶಗಳು ಇರಬೇಕು.

ರಸ್ತೆ, ಮನೆ, ಬಜಾರು, ಅಂಗಡಿ, ಹಳ್ಳ, ಚರಂಡಿ ಕಾಲುವೆ, ಆಸ್ಪತ್ರೆ, ಪಾಠಶಾಲೆ, ಬಸ್‌ಸ್ಟಾಂಡ್, ರೈಲ್ವೇಸ್ಟೇಷನ್‌ಗಳಂತಹ ಕೆಲವು ಪ್ರದೇಶಗಳು.

- ★ ಸಾರ್ವಜನಿಕ ಸೌಕರ್ಯ ಪ್ರದೇಶಗಳು ಹೆಚ್ಚು ಜನರಿಗೆ ಅನುಕೂಲವಾದ ಪ್ರದೇಶದಲ್ಲಿವೆಯೇ?
- ★ ಸ್ಥಳೀಯ ಬಜಾರುಗಳನ್ನು ಕಂಡುಕೊಳ್ಳುವುದರಲ್ಲಿ ಯಾವುದಾದರೂ ಪದ್ದತಿ ಇದೆಯೇ?
- ★ ಮನೆಗಳು ಗುಂಪುಗಳಾಗಿ ಇವೆಯೇ? ಅವುಗಳಿಗೆ ಮುಖ್ಯ ಹೆದ್ದಾರಿಗಳ ನಡುವೆ ಅನುಸಂಧಾನವಿದೆಯೇ?
- ★ ಆಯ್ದುಕೊಂಡ ಪ್ರಾಂತಗಳಲ್ಲಿ ಪ್ರಜೆಗಳ ಜೊತೆ ಮಾತನಾಡಿ ಕಳೆದ 20 ವರ್ಷಗಳಲ್ಲಿ ಆದ ಬದಲಾವಣೆಗಳು, ಅವುಗಳಿಗೆ ಕಾರಣಗಳನ್ನು ತಿಳಿದುಕೊಳ್ಳಿರಿ.
- ★ ಅವಶ್ಯಕತೆ ಇರುವ ಅನುಕೂಲಗಳು ಯಾವು ಇಲ್ಲ?

ನಿವಾಸ ಪ್ರಾಂತಗಳು ಹೇಗೆ ಏರ್ಪಡುತ್ತವೆ?

ಮಾನವರು ಸುಮಾರು 1.8 ಲಕ್ಷ ವರ್ಷದವರೆಗೆ ಸಂಗ್ರಹಣೆ – ಬೇಟೆಗಾರ ಗುಂಪಾಗಿ ಜೀವಿಸುತ್ತಿದ್ದರು. ಆ ಅವಧಿಯಲ್ಲಿ ಅವರು ವ್ಯವಸಾಯವನ್ನು ಮಾಡುತ್ತಿರಲಿಲ್ಲ. ಆಹಾರ ಸರಬರಾಜಿನಲ್ಲಿ ಬಂದ ಬದಲಾವಣೆಗಳಿಂದ ಕೆಲವು ಗುಂಪುಗಳು ಆಹಾರ ಉತ್ಪತ್ತಿಗೆ – ವ್ಯವಸಾಯ ಮಾಡುವುದಕ್ಕೆ ತೀರ್ಮಾನಿಸಿಕೊಂಡರು. ಈಗ ಒಂದೇ ಪ್ರದೇಶದಲ್ಲಿ ಹೆಚ್ಚು ಕಾಲ ಇರುವುದಕ್ಕೆ ಸಾಧ್ಯವಾಯಿತು. ವ್ಯವಸಾಯದಾರರಾಗಿ ಒಂದೇ ಪ್ರದೇಶದಲ್ಲಿ ಸ್ಥಿರ ನಿವಾಸ ಏರ್ಪಡಿಸಿಕೊಂಡರು.

ಚಿತ್ರ 7.2: ಮಧ್ಯ ಪ್ರದೇಶದಲ್ಲಿನ ಭಿಂಭೇಡ್ಕಾದಲ್ಲಿ ಆದಿಮಾನವರು ವಾಸಿಸಿದ ಕಲ್ಲಿನ ಗುಹೆ . ಮತ್ತಷ್ಟು ವಿವರಗಳಿಗಾಗಿ ಆರನೆಯ ತರಗತಿಯಲ್ಲಿ ಆಹಾರ ಸಂಗ್ರಹಣೆ, ಬೇಟೆಗಾರರು ಅಧ್ಯಾಯವನ್ನು ಓದಿರಿ.

- ಮೇಲಿನ ಸಮಾಚಾರ ಆಧಾರವಾಗಿ ಅಲೆಮಾರಿ, ಸ್ಥಿರ ಜೀವನ ಶೈಲಿಯಲ್ಲಿನ ಹೋಲಿಕೆ, ವ್ಯತ್ಯಾಸಗಳನ್ನು ಹೆಸರಿಸಿರಿ. ನೀಮಗೆ ಎಷ್ಟು ಅಂಶಗಳನ್ನು ಗುರ್ತಿಸಲಾಗುತ್ತದೆಯೋ ನೋಡಿರಿ. (ಇಲ್ಲಿ ಪಟ್ಟಿ ಸರಿಹೋಗದಿದ್ದರೆ ಮತ್ತೊಂದು ಪಟ್ಟಿಯನ್ನು ತಯಾರುಮಾಡಿರಿ.)

ಅಲೆಮಾರಿ ಜೀವನ ವಿಧಾನ	ಸ್ಥಿರ ಜೀವನ ವಿಧಾನ

SCERT TELANGANA

ನಿವಾಸ ಪ್ರಾಂತಗಳು ಏತಕ್ಕಾಗಿ ಬದಲಾಗುತ್ತವೆ?

ಚಿತ್ರ 7.3 : ಮಧ್ಯತರಗತಿ ಮನೆಗಳ ಕಾಲೊನಿ

ಅನೇಕ ಕಾರಣಗಳಿಂದ ನಿವಾಸ ಪ್ರಾಂತಗಳು ಬದಲಾಗುತ್ತವೆ. ಡಿಲ್ಲಿಗೆ ಸಂಬಂಧಿಸಿದ ವಿವರಗಳನ್ನು ಇಲ್ಲಿ ಓದಿರಿ.

ಭಾರತ ದೇಶವನ್ನು ಪರಿಪಾಲಿಸಿದ ಅನೇಕ ರಾಜ್ಯ ಗಳಿಗೆ ಢಿಲ್ಲಿ ಕೇಂದ್ರವಾಗಿ ಇತ್ತು ಎಂದು ಹೇಳಬಹುದು. ಭಾರತದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅದು ದೇಶದ ರಾಜಧಾನಿಯಾಗಿ ಮುಂದು ವರೆಯಿತು. ದಶಾಬ್ದಗಳು ಕಳೆಯುತ್ತಿರುವ ಕ್ರಮದಲ್ಲಿ ಉದ್ಯೋಗ, ಜೀವನೋಪಾಧಿಯನ್ನು ಹುಡುಕುತ್ತಾ ದೇಶದ ಎಲ್ಲಾ ಪ್ರದೇಶಗಳಿಂದ ದೊಡ್ಡ ಸಂಖ್ಯೆಯಲ್ಲಿ ಪ್ರಜೆಗಳು ವಲಸೆ ಬರಲು ಪ್ರಾರಂಭಿಸಿದರು. ದೇಶದ ರಾಜಧಾನಿಯಾದ್ದರಿಂದ, ಪಾರ್ಲಿಮೆಂಟ್, ಕೇಂದ್ರ ಸರ್ಕಾರ ಕಾರ್ಯಾಲಯಗಳು ಇರುವುದರಿಂದ ಎಲ್ಲಾ ರಾಜ್ಯಗಳ ಪ್ರಜೆಗಳು ಇಲ್ಲಿ ವಾಸಿಸುತ್ತಿದ್ದಾರೆ. ಇದರಿಂದಾಗಿ 9151 ರಲ್ಲಿ 60 ಲಕ್ಷ ಇದ್ದ ಜನಸಂಖ್ಯೆ 8 ಪಟ್ಟು ಬೆಳೆದು 1 ಕೋಟಿ 60 ಲಕ್ಷ ಜನರು ವಾಸಿಸುತ್ತಿದ್ದಾರೆ.

ಪ್ರತಿ ನಗರಕ್ಕೆ ವಿವಿಧ ವಿಧವಾದ ಪ್ರಾಂತಗಳು ನಿರ್ಮಿಸುವುದಕ್ಕಾಗಲಿ, ಮೀಸಲಿರುಸುವುದಕ್ಕಾಗಲಿ ಸಾಧಾರಣವಾಗಿ ಒಂದು ಮಾಸ್ಟರ್ ಯೋಜನೆ ಇರುತ್ತದೆ. ಯಾವ ನಗರದಲ್ಲಾದರೂ ನಿವಾಸ ಪ್ರಾಂತಗಳು, ಮಾರುಕಟ್ಟೆ, ಪಾಠಶಾಲೆಗಳು, ಕೈಗಾರಿಕಾ ಪ್ರದೇಶಗಳು, ಕಾರ್ಯಾಲಯಾ ಪ್ರಾಂತಗಳು, ಉದ್ಯಾನವನಗಳು, ವಿನೋದಸ್ಥಳಗಳಂತಹವು ಇರಬೇಕು. ಇದರ ಆಧಾರವಾಗಿ ಎಂತಹ ರಸ್ತೆಗಳು ಇರಬೇಕು. ಎಂತಹ ವಿದ್ಯುತ್ ಅಥವಾ ನೀರು ಅವಶ್ಯಕವಾಗುತ್ತವೆ. ವ್ಯರ್ಥ ಪದಾರ್ಥಗಳನ್ನು ಹೇಗೆ ತೆಗೆದುಹಾಕಬೇಕು. ಪರಿಶುದ್ಧತೆಯ ಪರಿಸ್ಥಿತಿಗಳನ್ನು ಹೇಗೆ ಕಲ್ಪಿಸಬೇಕೆನ್ನುವ ಅಂಶಗಳಿಗೆ ಸಂಬಂಧಿ ಸಿದ ಯೋಜನೆಗಳನ್ನು ತಯಾರಿಸುವವರು ನಿರ್ಣಯಿಸುತ್ತಾರೆ. ದೆಹಲಿಗೆ ಇಂತಹ ಮಾಸ್ಟರ್ ಯೋಜನೆ ಮೂರುಬಾರಿ ತಯಾರುಮಾಡಿದ್ದಾರೆ. ಆದರೆ ಈಗಿನ ಪರಿಸ್ಥಿತಿ ನೋಡಿದರೆ ಈ ಯೋಜನೆಗಳನ್ನು ಜಾರಿಗೆ ತಂದಂತೆ ಕಾಣುತ್ತಿಲ್ಲ. ವಾಸ್ತವಕ್ಕೆ ದೆಹಲಿ ಯೋಜನಾಬದ್ಧವಾಗಿ ಬೆಳೆಯಲಿಲ್ಲ. ಯೋಜನಾಬದ್ಧ ವಾಸವಸ್ಥಳಕ್ಕೆ ಎಲ್ಲಾ ಅನುಕೂಲತೆಗಳು ಇರುತ್ತವೆ. ವಿವಿಧ ಉದ್ದೇಶಕ್ಕೆ ಆಯ್ಕೆಮಾಡಿಕೊಂಡ ಪ್ರಾಂತವನ್ನು ಸರ್ಕಾರ ಪ್ರಕಟಿಸಬೇಕು. ಈ ಪ್ರಾಂತದಲ್ಲಿ ನಿರ್ಮಾಣಗಳು ಈ ಆದೇಶಗಳನ್ನು ಪಾಲಿಸಬೇಕು. ಆದರೆ ಇಂತಹ ಯೋಜನೆಗಳು ಜಾರಿಯಾಗಿಲ್ಲವೆಂದು ಸ್ಪಷ್ಟವಾಗುತ್ತದೆ.

ಒಂದು ಕಡೆ ನಗರಗಳಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆ, ಇನ್ನೊಂದುಕಡೆ ಯೋಜನೆಗಳನ್ನು ತಯಾರುಮಾಡುವುದರಲ್ಲಿ ಯಾವ ಪ್ರಾಂತಗಳನ್ನು ಏತಕ್ಕಾಗಿ ಉಪ ಯೋಗಿಸಬೇಕೋ ಪ್ರಕಟಿಸುವುದರಲ್ಲಿ ವಿಳಂಬ ನಡೆಯುತ್ತಿದೆ. ಕೆಲಸಕ್ಕಾಗಿ ಅಲೆದಾಡುತ್ತಾ ನಗರಕ್ಕೆ ಬಂದವರು ಭೂಮಿಯನ್ನು ಆಕ್ರಮಿಸಿಕೊಂಡು , ಯಾವುದೇ ಅನುಮತಿಗಳು ಇಲ್ಲದೇ, ಯಾರ ಸಹಾಯ, ಯಾವ ಸೌಕರ್ಯ ಗಳು ಇಲ್ಲದೇ ತಮ್ಮ ಶಕ್ತಿಯಾನುಸಾರ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಇವು ಬಹಳ ಕಾಲದವರೆಗೆ ಅನಧಿಕೃತ ಕಾಲನಿಗಳಾಗಿ ಉಳಿದು ಹೋಗುತ್ತವೆ. ಕೊನೆಗೆ ಯೋಜನೆಗಳನ್ನು ಪ್ರಕಟಿಸುವಷ್ಟರಲ್ಲಿ ದಿನಕ್ಕೆ ಈ ಪ್ರಾಂತವನ್ನು ಬೇರೆ ಉಪಯೋಗಕ್ಕಾಗಿ ಮೀಸಲಿರಿಸಬಹುದು.

SCERT TELANGANA

ಇದು ಕ್ಲಿಷ್ಟವಾದ ವಿರೋಧ ಪರಿಸ್ಥಿತಿಗಳಿಗೆ ದಾರಿ ಮಾಡಿಕೊಡುತ್ತದೆ. ತಮ್ಮ ಮನೆಗಳಿಂದ ಖಾಲಿ ಮಾಡಿಸುತ್ತಾರೆಂಬ ನಿರಂತರ ಭಯದಿಂದ ಪ್ರಜೆಗಳು ರಾಜಕೀಯ ಬೆಂಬಲಕ್ಕಾಗಿ ಕಾಯುತ್ತಾರೆ. ಮಾಸ್ಟರ್‌ಯೋಜನೆ ಈ ಕಾಲನಿಗಳ ಅಸ್ತಿತ್ವವನ್ನು ಗಮನಿಸಲಾಗುವುದಿಲ್ಲವಾದ್ದರಿಂದ ಇವುಗಳಿಗೆ ಒಪ್ಪಿಗೆ ಬರುವ ಅವಕಾಶಗಳು ಇಲ್ಲ. ಫಲಿತವಾಗಿ ಪ್ರಾಂತಗಳಿಗೆ ಎಂತಹ ಉಪಯೋಗಗಳನ್ನು ಸ್ಥಳೀಯ ಸರ್ಕಾರಗಳು ಕಲ್ಪಿಸುವುದಿಲ್ಲ. ಇವುಗಳಲ್ಲಿ ವಾಸಿಸುವ ಪ್ರಜೆಗಳು ಬಡವರು, ಆದರೆ ನಗರಕ್ಕೆ ಅವಸರವಾದ ಸೇವೆಗಳನ್ನು ಇವರು ಪೂರೈಸುತ್ತಾರೆ.

ಎಂತಹ ಪ್ರದೇಶಗಳು ನಿವಾಸ ಪ್ರಾಂತಗಳಾಗಿ ಬದಲಾಗಿವೆ?

ಇದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ನಾವು ಮೂರು ಮೂಲಭೂತ ವಿಷಯಗಳನ್ನು ಪರಿಶೀಲಿಸಬೇಕು : (1) ಪ್ರದೇಶ, (2) ಪರಿಸ್ಥಿತಿ, (3) ಆ ಪ್ರದೇಶದ ಚರಿತ್ರೆ.

ಚಿತ್ರ 7.4 : ಪ್ರತಾಪಘಡ ಕೋಟೆ

ಪ್ರದೇಶವು ಒಂದು ಪ್ರಾಂತ ಲಕ್ಷಣಗಳನ್ನು ತಿಳಿಯಪಡಿಸುತ್ತದೆ. ಸ್ಥಳವರ್ಣನೆ, ಸಮುದ್ರಕ್ಕೆ ಎಷ್ಟು ಎತ್ತರವಾಗಿದೆ, ನೀರಿನ ಅಂಶಗಳು(ಕೆರೆಗಳು, ನದಿಗಳು, ಭೂಗರ್ಭಜಲಗಳಂತವುಗಳು ಇವೆಯೇ) ಮಣ್ಣಿನ ವಿಧಗಳು, ಭದ್ರತೆ, ಪ್ರಕೃತಿ ಶಕ್ತಿಗಳಿಂದ ರಕ್ಷಣೆದಂತವುಗಳು.

ಪ್ರಾಚೀನ ಕಾಲದಲ್ಲಿ ನೀರಿನ ಸರಬರಾಜು ಉತ್ತಮವಾಗಿರುವ ಪ್ರದೇಶಗಳನ್ನು, ದಂಡೆತ್ತಿ ಬರುವ ಶತ್ರುಗಳಿಂದ ರಕ್ಷಣೆ ಕೊಡುವ ಪ್ರಾಂತಗಳನ್ನು ಆಯುದ್ಧಕೊಳ್ಳುತ್ತಿದ್ದರು. ಉದಾಹರಣೆಗೆ ಛತ್ರಪತಿ ಶಿವಾಜಿ ಮಹಾರಾಷ್ಟ್ರದಲ್ಲಿ ಪ್ರತಾಪ್‌ಘಡ್ ಹತ್ತಿರ ಕೋಟೆ ಕಟ್ಟಿಸಿದನು. ಈ ಪ್ರದೇಶ ಬಹಳ ಎತ್ತರದಲ್ಲಿದ್ದು ಸುತ್ತಮುತ್ತಲ ಎಲ್ಲಾ ಪ್ರಾಂತಗಳೂ ಕಾಣುತ್ತವೆ. ಆದ್ದರಿಂದ ಇದನ್ನು ಆಯುದ್ಧಕೊಂಡಿದ್ದಾರೆ. ಇದರಿಂದ ಇದಕ್ಕೆ ಸೈನಿಕ ಪರ ಭದ್ರತೆ ಇದೆ.

ಚಿತ್ರ 7.5 : ವಿಶಾಖಪಟ್ಟಣ

SCERT TELANGANA

ಪ್ರಾಂತಗಳು ಒಂಟಿಯಾಗಿರುವುದಿಲ್ಲ. ಯಾವುದೋ ಒಂದು ವಿಧವಾಗಿ ಇತರ ಪ್ರದೇಶಗಳೊಂದಿಗೆ ಸಂಬಂಧವಿರುತ್ತದೆ. ಪರಿಸ್ಥಿತಿ ಇತರ ಪ್ರದೇಶಗಳೊಂದಿಗಿರುವ ಸಂಬಂಧಗಳನ್ನು ತಿಳಿಸುತ್ತದೆ. ಉದಾಹರಣೆಗೆ, ವಿಶಾಖಪಟ್ಟಣ ತೀರ ಪ್ರಾಂತದಲ್ಲಿದ್ದು ಭಾರತದೇಶದೊಳಗೆ, ಹೊರಗೆ ಅನೇಕ ಪ್ರದೇಶಗಳೊಂದಿಗೆ ಸೇರಿಸುತ್ತಿದೆ.

ಕಳೆದ ದಶಾಬ್ದಕಾಲದಲ್ಲಿ ವಿಶಾಖಾ ಪಟ್ಟಣದ ಜನಸಂಖ್ಯೆ ಗಣನೀಯವಾಗಿ ಬೆಳೆದಿದೆ. (ಪಕ್ಕದ ಪಟ್ಟಿಯನ್ನು ನೋಡಿರಿ) ರೇವು ಪಟ್ಟಣವಾಗಿ ವಿಶಾಖಾಪಟ್ಟಣಕ್ಕೆ ಇರುವ ಪ್ರಾಮುಖ್ಯತೆ ಯಿಂದ ಈ ಪ್ರಗತಿ ಸಂಭವಿಸಿದೆ. ಈ ಜನಸಂಖ್ಯೆ ಬೆಳವಣಿಗೆ ಆರ್ಥಿಕ, ಸಾಮಾಜಿಕ ಅವಕಾಶಗಳು ಬೆಳೆಯುವುದನ್ನು ಸೂಚಿಸುತ್ತದೆ.

ವಿಶಾಖ ಪಟ್ಟಣಕ್ಕೆ ಸುದೀರ್ಘ ಇತಿಹಾಸವಿದೆ. ವಸಾಹತು ಪಾಲನೆಗಿಂತ ಮೊದಲೇ ಅನೇಕ ವಂಶಗಳು ಆಡಳಿತ ನಡೆಸಿವೆ. 19ನೇ ಶತಮಾನದಲ್ಲಿ ಈ ನಗರದ ಮೇಲೆ ಆಧಿಪತ್ಯಕ್ಕಾಗಿ ಬ್ರಿಟಿಷ್, ಫ್ರೆಂಚ್ ದೇಶಗಳು ಜಲಯುದ್ಧಕ್ಕಿಳಿದವು. ಬಂದರುಗಳ ನಿರ್ಮಾಣಕ್ಕೆ ಅನುಕೂಲವಾಗಿರುವದ ರಿಂದ ವಸಾಹತುಶಾಹಿಗಳು ತೀರ ಪ್ರದೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆಕೊಟ್ಟರು. ಈ ಬಂದರುಗಳ ಮೂಲಕ ದೋಚಿಕೊಂಡ ಕಚ್ಚಾ ಸರಕುಗಳನ್ನು ವಸಾಹತುಶಾಹಿಗಳು ತಮ್ಮ ದೇಶಗಳಿಗೆ ರವಾನಿಸುತ್ತಿದ್ದರು.

ಈ ರೀತಿಯಾಗಿ ಮುಂಬೈ, ಚೆನ್ನೈನಂತಹ ನಗರಗಳನ್ನು ವಸಾಹತು ಶಾಹಿಗಳು, ಭಾರತ ದೇಶದ ಸಹಜ ಸಂಪನ್ಮೂಲಗಳನ್ನು ದೋಚಿ ಕೊಳ್ಳುವದಕ್ಕಾಗಿ ಬಹಳಷ್ಟು ಅಭಿವೃದ್ಧಿ ಪಡಿಸಿದರು.

ಪಟ್ಟಿ - 2

ವಿಶಾಖಪಟ್ಟಣ ಜನಸಂಖ್ಯೆ

ವರ್ಷ	ಜನಸಂಖ್ಯೆ	% ಬದಲಾವಣೆ
1901	40,892	-
1911	43,414	+6.2%
1921	44,711	+3.0%
1931	57,303	+28.2%
1941	70,243	+22.6%
1951	1,08,042	+53.8%
1961	2,11,190	+95.5%
1971	3,63,467`	+72.1%
1981	6,03,630	+66.1%
1991	7,52,031	+24.6%
2001	13,45,938	+123.0%
2011	20,35,690	+51.2%

ವಿಶಾಖಪಟ್ಟಣ ಜನಸಂಖ್ಯೆ ಬದಲಾವಣೆ

1. ಪಕ್ಕದಲ್ಲಿ ಕೊಟ್ಟ ಜನಸಂಖ್ಯೆ ವಿವರಗಳಲ್ಲಿ ಎಲ್ಲಾ ದಶಕಗಳ ಗಣಾಂಕಗಳು ಇವೆಯಾ? ಒಂದು ವೇಳೆ ಇಲ್ಲದಿದ್ದರೆ ಯಾವ ದಶಕದ ಗಣಾಂಶಗಳು ಇಲ್ಲಿಲ್ಲ?
2. ಯಾವ ದಶಕದಿಂದ ಯಾವ ದಶಕಕ್ಕೆ ಜನಸಂಖ್ಯಾ ಬೆಳವಣಿಗೆ (ಶೇಕಡಾದಲ್ಲಿ) ಅತ್ಯಧಿಕವಾಗಿದೆ?
3. ಯಾವ ದಶಕದಿಂದ ಯಾವ ದಶಕಕ್ಕೆ ಜನಸಂಖ್ಯಾ ಬೆಳವಣಿಗೆ (ಶೇಕಡಾದಲ್ಲಿ) ಕಡಿಮೆಯಾಗಿದೆ?
4. 1901-2011 ವಿಶಾಖಪಟ್ಟಣ ಜನಸಂಖ್ಯೆಗೆ ಲೈನ್ ಗ್ರಾಫ್ ತಯಾರುಮಾಡಿರಿ. ಜನ ಸಂಖ್ಯೆಯಲ್ಲಿ ಯಾವ ಬದಲಾವಣೆಗಳನ್ನು ನೀವು ಪರಿಶೀಲಿಸಿದ್ದೀರಿ?

ಭಾರತದೇಶ ನಿವಾಸ ಪ್ರಾಂತಗಳ ಸ್ಥಾಯಿಗಳು

ಭಾರತದೇಶ ಜನಗಣನೆ ಕೆಲವು ಪ್ರಮಾಣಗಳ ಆಧಾರವಾಗಿ ನಿವಾಸ ಪ್ರಾಂತಗಳನ್ನು ವರ್ಗೀಕರಿಸುತ್ತದೆ. ಜನಗಣನೆ ಶಾಖೆ ವಿವಿಧ ನಿವಾಸ ಪ್ರಾಂತಗಳಿಗೆ ಕೊಟ್ಟ ವ್ಯಾಖ್ಯಾನಗಳು ಪಟ್ಟಿ 3ರಲ್ಲಿ ಇವೆ. ಇವುಗಳನ್ನು ಗಮನವಿಟ್ಟು ಓದಿ ಈ ಅಭ್ಯಾಸವನ್ನು ಪೂರ್ಣಗೊಳಿಸಿರಿ.

ಪಕ್ಕದ ಪುಟದಲ್ಲಿ ಒಂದು ಪಿರಮಿಡ್ ಇದೆ. ಪಿರಮಿಡ್‌ನಲ್ಲಿನ ಕೆಳಗಿನ ಭಾಗ ಭಾರತದೇಶ ಜನಸಂಖ್ಯೆ ಜನಗಣತಿ ಪ್ರಕಾರ ಅತಿ ಚಿಕ್ಕ ನಿವಾಸ ಪ್ರಾಂತಗಳನ್ನು ಸೂಚಿಸುತ್ತದೆ. ಮೇಲಿನ ಭಾಗ ಅತಿದೊಡ್ಡ ನಿವಾಸ ಪ್ರಾಂತಗಳನ್ನು ಸೂಚಿಸುತ್ತದೆ. ಕೆಳಗೆ ಕೊಟ್ಟಿರುವ ಖಾಲಿ ಸ್ಥಳಗಳನ್ನು ತುಂಬಿರಿ.

1. ಒಂದು ಪ್ರತ್ಯೇಕ ನಿವಾಸ ಪ್ರಾಂತ ಸ್ಥಾಯಿಗೆ ಕೊಟ್ಟ ಹೆಸರು(ಎರಡು ಉದಾಹರಣೆಗಳಿವೆ)
2. ವಿವಿಧ ನಿವಾಸ ಪ್ರಾಂತಗಳಿಗೆ ಒಂದು ಉದಾಹರಣೆಯನ್ನು ಆಂಧ್ರ ಪ್ರದೇಶದಿಂದ ಹೆಸರಿಸಿರಿ. (ಮಹಾನಗರಗಳಲ್ಲ, ಏತಕ್ಕಾಗಿ?)
3. ನೀವು ವಾಸಿಸುವ ಪಟ್ಟಣ ಯಾವ ಮಟ್ಟದಲ್ಲಿದೆಯೊ ಸೂಚಿಸಿರಿ(ನೀವು ಗ್ರಾಮದಲ್ಲಿದ್ದರೆ ನೀವು ಓದಿದ ಪಾಠಶಾಲೆ ಇರುವ ಪಟ್ಟಣವನ್ನು ತೆಗೆದುಕೊಳ್ಳಿರಿ) ಕೆಳಗೆ ಖಾಲಿಗಳಿವೆ. ನಿಮ್ಮ ನಿರ್ಣಯಗಳಿಗೆ ಒಂದು ಅಥವಾ ಎರಡು ಕಾರಣಗಳನ್ನು ಹೆಸರಿಸಿರಿ.

SCERT TELANGANA

ಪಟ್ಟಿ 3 : ಸ್ಥಾಯಿ ಕ್ರಮದಲ್ಲಿ ನಿವಾಸ ಪ್ರಾಂತಗಳು

ನಿವಾಸ ಪ್ರಾಂತದ ವಿಧ	ಉಪಯೋಗಿಸಿದ ಪ್ರಾಮಾಣಿಕಗಳು	ಉದಾಹರಣೆಗಳು
ಮಹಾ ನಗರಗಳು (Mega cities)	ಕೋಟಿ ಜನಸಂಖ್ಯೆಗಿಂತ ಹೆಚ್ಚು ಇರುವ ನಗರಗಳು	• ಮುಂಬಯಿ ಮಹಾನಗರ ಪ್ರಾಂತ (1.84 ಕೋಟಿಗಳು) • ಢಿಲ್ಲಿ ಮಹಾನಗರ (1.63 ಕೋಟಿಗಳು) • ಕೊಲ್ಕತ್ತ ಮಹಾನಗರ (1.41 ಕೋಟಿಗಳು)
ಮೆಟ್ರೋಪಾಲಿಟನ್ ನಗರಗಳು/ಹತ್ತುಲಕ್ಷಗಳು ದಾಟಿದ ನಗರಗಳು	ಹತ್ತು ಲಕ್ಷಗಳು – ಕೋಟಿ ಮಧ್ಯ ಜನಸಂಖ್ಯೆ ಇರುವ ನಗರಗಳು	• ಚೆನ್ನೈ (86 ಲಕ್ಷಗಳು) • ಹೈದರಾಬಾದು (78 ಲಕ್ಷಗಳು) • ಅಹ್ಮದಾಬಾದು (62 ಲಕ್ಷಗಳು)
ಕ್ಲಾಸ್ 1 ನಗರಗಳು	ಒಂದು ಲಕ್ಷ – ಹತ್ತು ಲಕ್ಷಗಳ ನಡುವೆ ಇರುವ ಪಟ್ಟಣ ಪ್ರಾಂತಗಳು	• ನಿಮ್ಮ ಶಿಕ್ಷಕರ ಸಹಾಯದಿಂದ ನಿಮ್ಮ ಸುತ್ತಮುತ್ತಲಿನ ಪ್ರಾಂತದಲ್ಲಿ ಇಂತಹ ಮೂರು ನಗರಗಳನ್ನು ಗುರ್ತಿಸಿ ಅವುಗಳ ಜನಸಂಖ್ಯೆ ಬರೆಯಿರಿ.
ಪಟ್ಟಣಗಳು	5000 ದಿಂದ ಒಂದು ಲಕ್ಷ ನಡುವೆ ಜನಸಂಖ್ಯೆ ಇರುವ ಪಟ್ಟಣ ಪ್ರಾಂತಗಳು	• ನಿಮ್ಮ ಶಿಕ್ಷಕರ ಸಹಾಯದಿಂದ ನಿಮ್ಮ ಸುತ್ತಮುತ್ತಲಿನ ಪ್ರಾಂತದಲ್ಲಿ ಇಂತಹ ಮೂರು ಪಟ್ಟಣಗಳನ್ನು ಗುರ್ತಿಸಿ ಅವುಗಳ ಜನಸಂಖ್ಯೆ ಬರೆಯಿರಿ.
ರೆವೆನ್ಯೂ ಗ್ರಾಮಗಳು	ನಿರ್ಧಿಷ್ಟ ಸರಹದ್ದುಗಳು ಇರುವ ಗ್ರಾಮ	• ನಿಮ್ಮ ಶಿಕ್ಷಕರ ಸಹಾಯದಿಂದ ನಿಮ್ಮ ಸುತ್ತಮುತ್ತಲಿನ ಪ್ರಾಂತದಲ್ಲಿ ಇಂತಹ ಮೂರುಗ್ರಾಮಗಳನ್ನು ಗುರ್ತಿಸಿ ಅವುಗಳ ಜನಸಂಖ್ಯೆ ಬರೆಯಿರಿ.
ನಿವಾಸ ಪ್ರಾಂತಗಳು (ಸಣ್ಣಹಳ್ಳಿ)	ರೆವೆನ್ಯೂ ಗ್ರಾಮದ ಒಳಗಡೆ ಕೆಲವು (ಹಾಮ್ಲೆಟ್)ಮನೆಗಳ ಗುಂಪು	• ನಿಮ್ಮ ರೆವೆನ್ಯೂ ಗ್ರಾಮಗಳು ಅಥವಾ ಸುತ್ತಮುತ್ತಲಿರುವ ರೆವೆನ್ಯೂ ಗ್ರಾಮಗಳಲ್ಲಿ ಒಂದು ಎರಡು ಸಣ್ಣ ಹಳ್ಳಿಗಳನ್ನು ನಿಮ್ಮ ಶಿಕ್ಷಕರ ಸಹಾಯದಿಂದ ಗುರ್ತಿಸಿರಿ.

4. ನಿವಾಸ ಪ್ರಾಂತಗಳನ್ನು ಕೇವಲ ಜನಸಂಖ್ಯೆ ಆಧಾರವಾಗಿ ವರ್ಗೀಕರಿಸ ಬೇಕಾ? ಆಲೋಚಿಸಿರಿ. ಇತರ ವಿಧಾನಗಳು ಯಾವುದಾದರೂ ಇವೆಯೇ? ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ ಅಂತಹ ವರ್ಗೀಕರಣಕ್ಕೆ ಪ್ರಮಾಣಿಕೆಗಳನ್ನು ಗುರ್ತಿಸಿ.

ಭಾರತದೇಶ 'ಆರ್ಥಿಕವಾಗಿ ಅಭಿವೃದ್ಧಿ' ಹೊಂದಿದ ದೇಶಗಳ ಮಾರ್ಗವನ್ನು ಅನುಸರಿಸಿ ಭವಿಷ್ಯತ್ತಿನಲ್ಲಿ ಹೆಚ್ಚಿನ ಶೇಕಡ ಜನಸಂಖ್ಯೆ ಪಟ್ಟಣಗಳಲ್ಲಿ ಇರಬಹುದು.



ಭಾರತದೇಶದಲ್ಲಿ ನಗರೀಕರಣ

ಭಾರತದೇಶದಲ್ಲಿ 35 ಕೋಟಿಮಂದಿ ಪ್ರಜೆಗಳು ಎಂದರೆ ಜನಸಂಖ್ಯೆಯಲ್ಲಿ ಮೂರರಲ್ಲಿ ಒಂದು ಭಾಗ, ನಗರಗಳಲ್ಲಿ, ಪಟ್ಟಣಗಳಲ್ಲಿ ವಾಸಿಸುತ್ತಿದ್ದಾರೆ. ಪ್ರಜೆಗಳು ಹೆಚ್ಚಾಗಿ ವ್ಯವಸಾಯೇತರ ಕೆಲಸಗಳನ್ನು ಮಾಡುತ್ತಾ ನಗರಗಳಲ್ಲಿ, ಪಟ್ಟಣಗಳಲ್ಲಿ ವಸತಿ ಏರ್ಪಡಿಸಿಕೊಂಡಿದ್ದಾರೆ. ಇದನ್ನೇ ನಗರೀಕರಣ

SCERT TELANGANA

ಎನ್ನುವರು. 1950ರಲ್ಲಿ ದೇಶದಲ್ಲಿನ ಹೆಚ್ಚಿನ ಶೇಕಡ ಜನಸಂಖ್ಯೆ 5.6ಲಕ್ಷ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಆಗ 10 ಲಕ್ಷ ಜನಸಂಖ್ಯೆ ದಾಟಿದ ನಗರಗಳು ಐದು ಇದ್ದವು. ಲಕ್ಷ ಜನಸಂಖ್ಯೆ ದಾಟಿದ ಪಟ್ಟಣಗಳು 40 ಇದ್ದವು. ಈ ದಿನ ಗ್ರಾಮಗಳ ಸಂಖ್ಯೆ 6.4 ಲಕ್ಷಕ್ಕೆ ಬೆಳೆದಿದೆ. ಗ್ರಾಮೀಣ ಜನಸಂಖ್ಯೆ 85 ಕೋಟಿ ಇದೆ. ಮೂರು ನಗರಗಳಲ್ಲಿ -ಮುಂಬಯಿ, ದೆಹಲಿ, ಕೊಲ್ಕತ್ತಾದಲ್ಲಿ ಒಂದೊಂದರ ಜನಸಂಖ್ಯೆ ಕೋಟಿಗೆ ಮಿಂಚಿದೆ. 10 ಲಕ್ಷ ಜನಸಂಖ್ಯೆ ದಾಟಿದ ನಗರಗಳು 50ಕ್ಕೂ ಹೆಚ್ಚು ಇವೆ.

ಚಿತ್ರ 7.6 ದೆಹಲಿಯಲ್ಲಿ ಕಡಿಮೆ ಆದಾಯವಿರುವ ಪ್ರಜೆಗಳ ನಿವಾಸಗಳು

ಪಟ್ಟಣ, ನಗರಗಳಲ್ಲಿನ ಜನಸಂಖ್ಯೆ ಬೆಳವಣಿಗೆಯಲ್ಲಿ ಹೆಚ್ಚಿನ ಭಾಗ ಸಹಜ ವೃದ್ಧಿಯಿಂದ ನಡೆದಿದೆ. ಈ ಪಟ್ಟಣಗಳ ಜನಸಂಖ್ಯೆ ಕಾಲಕ್ರಮದಲ್ಲಿ ಬೆಳೆದಿದೆ. ಸುತ್ತಮುತ್ತಲಿರುವ ಗ್ರಾಮೀಣ ಪ್ರಾಂತಗಳನ್ನು ಸೇರಿಸಿಕೊಂಡಿದ್ದರಿಂದ ಕೆಲವು ಪಟ್ಟಣ, ನಗರಗಳು ವಿಸ್ತರಿಸಿವೆ. ಜನಸಂಖ್ಯಾ ಬೆಳವಣಿಗೆಯಲ್ಲಿ ಐದರಲ್ಲಿ ಒಂದು ಭಾಗ ಮಾತ್ರವೇ ಗ್ರಾಮೀಣ ಪ್ರಾಂತಗಳಿಂದ ಪಟ್ಟಣ ಪ್ರಾಂತಗಳಿಗೆ ಬಂದ ವಲಸೆಗಳಿಂದ ಏರ್ಪಟ್ಟಿದೆ.

ನಗರೀಕರಣ ಬೆಳೆಯುತ್ತಿದ್ದರೂ ಇದಕ್ಕೆ ಅನುಗುಣವಾಗಿ ಅವಶ್ಯಕತೆ ಇರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿಲ್ಲ. ರಸ್ತೆಗಳು, ಚರಂಡಿಗಳು, ವಿದ್ಯುತ್, ನೀರು ಮುಂತಾದ ಸಾರ್ವಜನಿಕ ಸೌಕರ್ಯಗಳ ಅವಶ್ಯಕತೆಯಿದೆ. ಪಟ್ಟಣ ಮೂಲಭೂತ ಸೌಕರ್ಯಗಳಿಗೆ ಪ್ರತ್ಯೇಕವಾಗಿ ರಸ್ತೆ ಸಾರಿಗೆಯನ್ನು ಉತ್ತಮಪಡಿಸುವುದರಲ್ಲಿ ಸರ್ಕಾರದ ಮಧ್ಯಸ್ಥಿಕೆ ಸ್ವಲ್ಪ ಫಲಿತಾಂಶವನ್ನು ಸಾಧಿಸುತ್ತಿದೆ. ಆದರೆ ನೀರು, ವೈದ್ಯಕೀಯ ಸೌಕರ್ಯಗಳು ಸಾಕಾಗುವಷ್ಟು ಇಲ್ಲ. ಪಟ್ಟಣಗಳು, ನಗರಗಳಲ್ಲಿನ ಬಡಜನರ ಪರಿಸ್ಥಿತಿ ಈ ವಿಷಯದಲ್ಲಿ ಮತ್ತಷ್ಟು ಹೀನವಾಗಿದೆ.

ಭಾರತದೇಶ ಪಟ್ಟಣ ಪ್ರಾಂತಗಳು ನಮ್ಮ ದೇಶ ಆರ್ಥಿಕಾಭಿವೃದ್ಧಿಗೆ ಯಾವ ವಿಧವಾಗಿ ಸಹಾಯಕವಾಗುತ್ತಿವೆ? ಕೈಗಾರಿಕಾ ಚಟುವಟಿಕೆಗಳಿಗಿಂತ ಆರ್ಥಿಕ, ಜೀವವಿಮೆ, ಸ್ಥಿರಾಸ್ಥಿಯಂತಹ ಸೇವಾರಂಗ ಕಾರ್ಯ ಕಲಾಪಗಳು, ಸಾರಿಗೆ, ಸಂಗ್ರಹಣೆ, ಸಮಾಚಾರ ಮಾಧ್ಯಮಗಳಂತಹ ಸೇವೆಗಳ ಭಾಗ ಹೆಚ್ಚಿದೆ. ಕಳೆದ ಕೆಲವು ಶತಮಾನಗಳಲ್ಲಿ ಕೈಗಾರಿಕಾ ಉತ್ಪತ್ತಿಯಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿಯಾಗಿಲ್ಲ.

ಪಟ್ಟಣಗಳಲ್ಲಿ, ನಗರಗಳಲ್ಲಿ ವಾಸಿಸುವುದು, ಅಲ್ಲಿಗೆ ವಲಸೆ ಹೋಗುವುದು ಕೆಲವು ಮಂದಿಗೆ ಮಾತ್ರವೇ ವರವಾಗಿದೆ. ಗ್ರಾಮೀಣ ಪ್ರಾಂತಗಳಿಗೆ ಹೋಲಿಸಿದರೆ, ಪಟ್ಟಣ ಪ್ರಾಂತಗಳಲ್ಲಿ ಬಡತನದ ಸ್ಥಾಯಿ ಕಡಿಮೆಯಿದ್ದರೂ ಹೆಚ್ಚಿನ ಆದಾಯವಿರುವ ಕುಟುಂಬಗಳ ಮಧ್ಯ ವ್ಯತ್ಯಾಸ ಬಹಳ ಕಡಿಮೆ ಇದೆ. ಈ ವ್ಯತ್ಯಾಸ ಪಟ್ಟಣಗಳು, ನಗರಗಳಲ್ಲಿ ಇನ್ನೂ ಹೆಚ್ಚಾಗುತ್ತದೆ. ಪಟ್ಟಣ ಪ್ರಾಂತಗಳಲ್ಲಿ ಇತರ ಕುಲದವರೊಂದಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಜನರ ಆದಾಯಗಳು ಬಹಳ ಕಡಿಮೆ ಇವೆ. 2009-10ರಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸೇರಿದ ಪಟ್ಟಣ ಪ್ರಾಂತ ಜನರಲ್ಲಿ ಬಡತನ ಆರರಲ್ಲಿ ಒಂದು ಭಾಗ ಇರಲು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನರು ಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಪಟ್ಟಣಗಳು ನಗರಗಳಲ್ಲಿ ಜನಸಂಖ್ಯೆ ಹೆಚ್ಚಳದಲ್ಲಿ ಅಧಿಕ ಭಾಗವು ಸಹಜ ವೃದ್ಧಿಯಿಂದ ಜರುಗಿದೆ. ಈ ಪಟ್ಟಣಗಳ ಜನಸಂಖ್ಯೆ ಕಾಲಕ್ರಮದಲ್ಲಿ ಬೆಳೆದಿದೆ. ಸುತ್ತಮುತ್ತಲು ಇರು ಗ್ರಾಮೀಣ ಪ್ರದೇಶಗಳು ಕೂಡಿಕೊಳ್ಳುತ್ತಿರುವುದರಿಂದ ಕೆಲವು ಪಟ್ಟಣಗಳು, ನಗರಗಳು ವಿಸ್ತರಿಸಿವೆ. ಜನಸಂಖ್ಯೆಯ ವೃದ್ಧಿಯಲ್ಲಿ ಐದರಲ್ಲಿ ಒಂದು ಭಾಗಮಾತ್ರ ಗ್ರಾಮೀಣ ಪ್ರದೇಶದಿಂದ, ಪಟ್ಟಣ ಪ್ರದೇಶಕ್ಕೆ ಬಂದ ವಲಸೆಯಿಂದ ಸಂಭವಿಸಿದೆ.

SCERT TELANGANA

ನಗರೀಕರಣ ಸಮಸ್ಯೆಗಳು

ನಗರೀಕರಣ ಬೆಳೆಯುವುದೆಂದರೆ ಪ್ರಜೆಗಳ ಅವಕಾಶಗಳು ಬೆಳೆಯುವುದು. ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುವುದು ಒಂದೇ ಅಲ್ಲ. ಅದರಿಂದ ಎಷ್ಟೋ ಸಮಸ್ಯೆಗಳು ಕೂಡ ತಲೆಎತ್ತುತ್ತಿವೆ. ಬೆಳೆಯುತ್ತಿರುವ ಪಟ್ಟಣ ಜನಸಂಖ್ಯೆಗೆ ಗೃಹವಸತಿ ಅವಶ್ಯಕ. ಅವರಿಗೆ ನೀರಿನ ಪೂರೈಕೆ ಇರಬೇಕು, ಚರಂಡಿನೀರು, ಇತರ ವ್ಯರ್ಥಪದಾರ್ಥ ಗಳನ್ನು ಹೊರದೂಡುವ ವಿಧಾನಗಳು ಇರಬೇಕು.ಇವೆಲ್ಲವುಗಳಿಂದ ಪರಿಸರದ ಮೇಲೆ ಒತ್ತಡ ಹೆಚ್ಚಾಗುತ್ತದೆ. ವಾಹನಗಳ ವಿನಿಯೋಗ ಹೆಚ್ಚಾದುದರಿಂದ ಪಟ್ಟಣಗಳಲ್ಲಿ ವಾಯುಮಾಲಿನ್ಯ ಹೆಚ್ಚಾಗುತ್ತಿದೆ. ಇದು ಆರೋಗ್ಯ ಸಮಸ್ಯೆಗಳಿಗೆ, ಸ್ಥಳೀಯ ವಾತಾವರಣ ಬದಲಾವಣೆಗೆ ದಾರಿ ಮಾಡಿಕೊಡುತ್ತಿದೆ. ಚರಂಡಿ ನೀರನ್ನು ತೊಲಗಿಸದಿದ್ದರೆ ಅದು ಅಂಟುರೋಗಗಳಿಗೆ ದಾರಿಮಾಡಿಕೊಡುತ್ತದೆ.

ನಗರೀಕರಣ ಹೆಚ್ಚಾಗುವುದರಲ್ಲಿ ಒಂದು ಸಮಸ್ಯೆ ಭೂಮಿಯಲ್ಲಿ ಬೆರೆತು ಹೋಗದ, ಅಥವಾ ಕೊಳತು ಹೋಗುವುದಕ್ಕೆ ಹೆಚ್ಚು ಸಮಯ ಹಿಡಿಯುವ ಪದಾರ್ಥಗಳ ವಿನಿಯೋಗ ಹೆಚ್ಚಾಗುವುದು. ಇದರಿಂದ ಬಹಳ ಕಸವನ್ನು ತೊಲಗಿಸಬೇಕಾಗುತ್ತದೆ. ಈ ಕಸವನ್ನು ಎಲ್ಲಿ ಹಾಕಬೇಕು? ಪಟ್ಟಣ ಪ್ರಾಂತಗಳು ವಿಸ್ತರಿಸುತ್ತಿರುವುದರಿಂದ ಇವುಗಳನ್ನು ಕಸ ಶುದ್ಧೀಕರಣ ಕೈಗಾರಿಕಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಸುರಿಯುತ್ತಿದ್ದಾರೆ. ಕೆಳಗಿನ ಉದಾಹರಣೆಯನ್ನು ನೋಡೋಣ.

ವಿಮಾನ ನಿಲ್ದಾಣ ನಗರಗಳು(ಏರೋಟ್ರೋಪೋಲಿಸ್) ಜೆಟ್‌ಯುಗದ ನಗರಗಳು

ಭಾರತದೇಶವನ್ನು ಒಳಗೊಂಡು ಅನೇಕ ದೇಶಗಳಲ್ಲಿ ಹೊಸ ವಿಧದ ನಿವಾಸ ಪ್ರಾಂತಗಳು ಏರ್ಪಟ್ಟಿವೆ. ಈ ನಿವಾಸ ಪ್ರಾಂತಗಳು ದೊಡ್ಡ ದೊಡ್ಡ ವಿಮಾನ ನಿಲ್ದಾಣಗಳ ಸುತ್ತೂ ಏರ್ಪಡುತ್ತಿವೆ. ಆದ್ದರಿಂದ ಇವುಗಳನ್ನು ವಿಮಾನಾಶ್ರಯ ನಗರಗಳು(ಅಥವಾ ಏರೋಟ್ರೊಪೊಲಿಸ್) ಎನ್ನುತ್ತಾರೆ.

ವಿಮಾನಾಶ್ರಯ ನಗರಗಳಲ್ಲಿ ವಿಮಾನಾಶ್ರಯವೇ ಒಂದು ನಗರವಾಗಿ ಕೆಲಸ ಮಾಡುತ್ತದೆ. ಅನೇಕ ಸೌಕರ್ಯಗಳು (ಹೋಟೆಲ್‌ಗಳು, ಅಂಗಡಿಗಳು, ವಿನೋದ, ಆಹಾರ, ವ್ಯಾಪಾರ, ಸಮಾವೇಶ ಸೌಕರ್ಯಗಳಂತಹವು) ಅಲ್ಲಿ ಕಲ್ಪಿಸುತ್ತಾರೆ. ಬೇರೆ ಪ್ರಾಂತಗಳಿಂದ ಪ್ರಜೆಗಳು ವಿಮಾನಗಳಲ್ಲಿ ಬಂದು ತಮಗೆ ಅವಶ್ಯಕತೆಯಿರುವವರ ಜೊತೆ ಅಲ್ಲಿಯೇ ವ್ಯವಹಾರಗಳನ್ನು ಮುಗಿಸಿಕೊಂಡು ತಿರುಗಿ ವಿಮಾನಗಳಲ್ಲಿ ಹೋಗುತ್ತಾರೆ. ಟ್ರಾಫಿಕ್‌ನಂತಹ ಸಮಸ್ಯೆಗಳು ಯಾವುವು ಇಲ್ಲದಂತೆ ನಗರಗಳಲ್ಲಿನ ಸೌಕರ್ಯಗಳನ್ನೆಲ್ಲಾ ಪಡೆಯುತ್ತಾರೆ.

ಭಾರತದೇಶದಲ್ಲಿ ರೂಪುದಿದ್ದುಗೊಳ್ಳುತ್ತಿರುವ ವಿಮಾನಾಶ್ರಯ ನಗರಗಳು ಕೆಲವು : ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನನಿಲ್ದಾಣ(ಡಿಲ್ಲಿ), ರಾಜೀವ್‌ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ(ಹೈದರಾಬಾದು).

ಬೇರೆ ದೇಶಗಳಲ್ಲಿ ಏರ್ಪಡುತ್ತಿರುವ ವಿಮಾನಾಶ್ರಯ ನಗರಗಳಿಗೆ ಉದಾಹರಣೆಗೆಗಳು : ಸುವರ್ಣಭೂಮಿ ಅಂತರಾಷ್ಟ್ರೀಯ ವಿಮಾನಾಶ್ರಯ (ಬ್ಯಾಂಕಾಂಕ್, ಥಾಯ್‌ಲ್ಯಾಂಡ್), ದುಬಾಯಿ ಅಂತರಾಷ್ಟ್ರೀಯ ವಿಮಾನಾಶ್ರಯ (ದುಬಾಯಿ, ಯು.ಎ.ಇ), ಕೈರೋ ಅಂತರಾಷ್ಟ್ರೀಯ ವಿಮಾನಾಶ್ರಯ(ಕೈರೋ, ಈಜಿಪ್ಟ್), ಲಂಡನ್ ಹೀಥ್ರೋ ವಿಮಾನಾಶ್ರಯ(ಲಂಡನ್, ಯು.ಕೆ)

- ವಿಮಾನಾಶ್ರಯ ನಗರ ಕೇಂದ್ರ ಯಾವುದು?
- ವಿಮಾನಾಶ್ರಯ ನಗರ ಕೇಂದ್ರದಲ್ಲಿ ಅಥವಾ ಅದರ ಹತ್ತಿರ ಇರುವ ಎರಡು ಸೌಕರ್ಯಗಳನ್ನು ಹೆಸರಿಸಿರಿ.
- ಪ್ರಪಂಚ ನಕ್ಷೆಯಲ್ಲಿ ಪಕ್ಕದಲ್ಲಿ ಉದಾಹರಣೆಯಾಗಿ ಕೊಟ್ಟ ನಗರಗಳನ್ನು ಗುರ್ತಿಸಿರಿ. ವಿಮಾನಾಶ್ರಯಗಳು, ದೇಶಗಳ ಹೆಸರುಗಳನ್ನು ಕೂಡ ನಕ್ಷೆಯಲ್ಲಿ ಬಿಡಿಯಾಗಿ ಬರೆಯಿರಿ. ಇದರಿಂದ ಯಾವ ದೇಶಗಳಲ್ಲಿ, ಯಾವ ನಗರಗಳಲ್ಲಿ, ಯಾವ ವಿಮಾನಾಶ್ರಯಗಳಿವೆ ಎಂದು ಗುರ್ತಿಸುವುದು ಸುಲಭವಾಗುತ್ತದೆ.
- ಈ ಅಧ್ಯಾಯದ ಸಲುವಾಗಿ ನೀವು ಅಧ್ಯಯನ ಮಾಡಿದ ಪ್ರದೇಶಕ್ಕೆ ಹತ್ತಿರದಲ್ಲಿ ವಿಮಾನಾಶ್ರಯ ನಗರ ಏರ್ಪಟ್ಟಿದೆ ಎಂದು ಊಹಿಸಿಕೊಳ್ಳಿರಿ. ಆಗ ಆ ಪ್ರಾಂತ ಸ್ಥಳದಲ್ಲಿ ಆದ ಮೂರು ಬದಲಾವಣೆಗಳನ್ನು ಹೆಸರಿಸಿರಿ. ಅದೇ ವಿಧವಾಗಿ ಆ ಪ್ರಾಂತ ಪರಿಸ್ಥಿತಿಗಳಲ್ಲಿ ಬಂದ ಮೂರು ಬದಲಾವಣೆಗಳನ್ನು ಹೆಸರಿಸಿರಿ.

SCERT TELANGANA

ವಲಸೆಗಳು

ಪ್ರಜೆಗಳು ವಿದ್ಯೆ, ಉದ್ಯೋಗ, ಉತ್ತಮವಾದ ಅವಕಾಶಗಳಿಗಾಗಿ, ವಿವಿಧ ಆರ್ಥಿಕ, ಸಾಮಾಜಿಕ, ರಾಜಕೀಯ ಕಾರಣಗಳಿಗಾಗಿ ಇತರ ಪ್ರದೇಶಗಳಿಗೆ ಹೋಗುವದನ್ನು ವಲಸೆ ಎನ್ನುವರು.

ವಲಸೆ ಪದ್ಧತಿಗಳನ್ನು ವರ್ಗೀಕರಿಸುವುದು, ಅಳತೆ ಮಾಡುವುದು

ವಿವಿಧ ಆರ್ಥಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದ ವಲಸೆ ಹೋಗುತ್ತಿರುತ್ತಾರೆ. ಒಬ್ಬ ವ್ಯಕ್ತಿಯನ್ನು ವಲಸೆ ಹೋದವರೆಂದು ಗುರ್ತಿಸುವುದಕ್ಕಾಗಿ ಜನಸಂಖ್ಯಾ ಗಣನೆಯವರು ಎರಡು ಪ್ರಮಾಣಗಳನ್ನು ಉಪಯೋಗಿಸುತ್ತಾರೆ.

- ♣ ''ಜನ್ಮಸ್ಥಾನ'' - ಒಬ್ಬ ವ್ಯಕ್ತಿ ಹುಟ್ಟಿದ ಪ್ರದೇಶ
- ♣ ''ಇದಕ್ಕಿಂತ ಮುನ್ನ ನಿವಾಸವಿರುವ ಸ್ಥಳ''- ಒಬ್ಬ ವ್ಯಕ್ತಿ ಆರು ತಿಂಗಳು ಇಲ್ಲವೆ ಅದಕ್ಕಿಂತ ಹೆಚ್ಚು ಕಾಲವಿದ್ದ ಪ್ರದೇಶ

- ಇಲ್ಲಿ ಕೆಲವು ಜನರ ಪಟ್ಟಿಯಿದೆ. ಅವರನ್ನು ವಲಸೆ ಹೋದವರು, ಹೋಗದವರಾಗಿ ವರ್ಗೀಕರಿಸಿರಿ. ವಲಸೆಗೆ ರೀತಿಯನ್ನು ತಿಳಿಸಿ, ವಲಸೆಗೆ ಕಾರಣ ಏನಾಗಿರುತ್ತದೆಂಬುದನ್ನು ಹೇಳಿರಿ.

ಹೆಸರು	ಕಳೆದ ಆರುತಿಂಗಳಿಂದ ವಾಸಿಸುತ್ತಿದ್ದ ಪ್ರದೇಶ	ಹುಟ್ಟಿದ ಊರು	ವಲಸೆ ಬಂದಿದ್ದಾರೋ ಇಲ್ಲವೊ	ವಲಸೆ ಪದ್ಧತಿ: ಗ್ರಾಮೀಣದಿಂದ ಪಟ್ಟಣಕ್ಕೆ,ಪಟ್ಟಣದಿಂದ ಗ್ರಾಮಕ್ಕೆ, ಮುಂತಾದ, ಕಾರಣಗಳು
ಸಿಂಧು	ಬಿಜ್ವಾರಂ	ಜೋಗುಳಾಂಬ ಗದ್ವಾಲ ಒಂದು ಗ್ರಾಮ		
ಗ್ರೇಸ್ ಓವಿಯಾ	ಹೈದರಾಬಾದ್	ಮುಂಬಯಿ		
ಅಲೀ(ಎಸ್.ಆರ್.ಇ)	ಹೊಸ ದೆಹಲಿ	ಲಂಡನ್		
ರಾಮಯ್ಯ	ಹೈದರಾಬಾದ್	ಮೊಗಿಲಿದೊರಿ		
ಲಕ್ಷ್ಮಿ	ತಿಮ್ಮಾಪುರ (2 ತಿಂಗಳಿಂದ)	ರಂಗಾರೆಡ್ಡಿ ಜಿಲ್ಲೆಯಲ್ಲಿ		
ಸ್ವಾತಿ	ಕರೀಂನಗರ ಜಿಲ್ಲೆಯಲ್ಲಿ ಮಾನಕೊಂಡೂರ್	ಹೈದ್ರಾಬಾದ್		ಪಿಪಿಎಸ್‌ಸಿ ಗ್ರೂಪ್ - IV ಪರೀಕ್ಷೆಯಲ್ಲಿ ಉತ್ತೀರ್ಣ

ಭಾರತ ದೇಶದಲ್ಲಿ 2011 ಜನಸಂಖ್ಯಾ ಲೆಕ್ಕದ ಪ್ರಕಾರ 30.7 ಕೋಟಿ ಜನರು ವಲಸೆ ಹೋಗಿದ್ದಾರೆ. ಅನೇಕ ಕಾರಣಗಳಿಂದ ವಲಸೆಗಳು ಉಂಟಾಗಬಹುದು. ಸ್ತ್ರೀಯರು ವಲಸೆ ಹೋಗುವುದಕ್ಕೆ ಮದುವೆ ಮುಖ್ಯವಾದ ಕಾರಣವಾದರೆ ಪುರುಷರಲ್ಲಿ ಉದ್ಯೋಗ ಅವಕಾಶಗಳ ಮೇಲೆ ಅಸಂತೃಪ್ತಿ, ವಿದ್ಯೆಗೆ ಉತ್ತಮವಾದ ಅವಕಾಶಗಳು, ವ್ಯಾಪಾರದಲ್ಲಿ ನಷ್ಟಗಳು, ಕುಟುಂಬ ಕಲಹಗಳಂತವುಗಳು ಜನಗಣನ ಸರ್ವೆಯಲ್ಲಿ ಪ್ರಜೆಗಳ ವಲಸೆಗೆ ಕಾರಣಗಳಾಗಿ ಹೆಸರಿಸಿದ್ದಾರೆ.

- 'ವಲಸೆ ಕುಟುಂಬಗಳಲ್ಲಿ ಅಧಿಕ ಪ್ರತಿಶತ ಮಕ್ಕಳು ಶಾಲೆಯನ್ನು ಮಧ್ಯದಲ್ಲಿಯೇ ಬಿಡುತ್ತಾರೆ.'

ಇದಕ್ಕೆ ನೀವು ಏಕೀಭವಿಸುತ್ತೀರಾ ? ನಿಮ್ಮ ಪ್ರಾಂತದಲ್ಲಿನ ಉದಾಹರಣೆಯೊಂದಿಗೆ ವಿವರಿಸಿರಿ.

SCERT TELANGANA

ಕಾಲಾನುಗುಣ, ತಾತ್ಕಾಲಿಕ ವಲಸೆ

ರಾಷ್ಟ್ರೀಯ ಜನಸಂಖ್ಯಾ ಗಣನೆಯ ಪ್ರಕಾರ ಭಾರತ ದೇಶದಲ್ಲಿ ಪ್ರತಿ ನಾಲ್ಕನೆಯ ವ್ಯಕ್ತಿ ವಲಸೆ ಬಂದವರೆ. 2001-2011ರಲ್ಲಿ ವಲಸೆ ಬೆಳೆದಿದೆಯಾಗಲಿ 1980ರ ಕಾಲದಲ್ಲಿ ಹೆಚ್ಚಾದಷ್ಟಲ್ಲ. ವಲಸೆಗಳು ರಾಜ್ಯದ ಒಳಗೆ ಇರಬಹುದು. ಮತ್ತೊಂದು ರಾಜ್ಯಕ್ಕೆ ಇರಬಹುದು. ಗ್ರಾಮೀಣ ಪ್ರಾಂತದಿಂದ ಪಟ್ಟಣ ಪ್ರಾಂತಕ್ಕೆ ವಲಸೆ ಹೋದ ರಾಮಯ್ಯನ ಕಥೆಯನ್ನು ನೀವು ಓದಿದ್ದೀರಿ. ಪಟ್ಟಣಕ್ಕೆ ದಿನಗೂಲಿಗಳಾಗಿ ಬಂದ ವ್ಯಕ್ತಿಯನ್ನು ಸಹ ನೀವು ಸಂದರ್ಶನ ಮಾಡಿದ್ದೀರಿ. ಗ್ರಾಮೀಣ ಪ್ರಾಂತದಿಂದ ಪಟ್ಟಣ ಪ್ರಾಂತಕ್ಕೆ ವಲಸೆ ಹೆಚ್ಚಾಗಿದೆ. ಹೀಗೆ ಹೋಗುವ ವಲಸಿಗರು ಸಾಮಾನ್ಯವಾಗಿ ಆರು ತಿಂಗಳವಳಗೆ ಇರುತ್ತಾರೆ. ಆದ್ದರಿಂದ ಇದನ್ನು ಜನಸಂಖ್ಯಾ ಗಣನ ಗಣಾಂಕಗಳು ಪ್ರತಿ ಬಿಂಬಿಸದಿರಬಹುದು. ರಾಷ್ಟ್ರೀಯ ಸರ್ವೆಯಲ್ಲಿ ವಲಸೆ ಹೋದ ವ್ಯಕ್ತಿ ಎನ್ನುವ ಪದಕ್ಕೆ ಇರುವ ವ್ಯಾಖ್ಯೆ ಪರಿಮಿತಿಯಿಂದ ತಾತ್ಕಾಲಿಕವಾಗಿ ವಲಸೆ ಹೋಗುವವರ ಸಂಖ್ಯೆ ಕಡಿಮೆಯಾಗಿ ತೋರಿಸಲಾಗುತ್ತದೆ.

ಗ್ರಾಮದಿಂದ ಗ್ರಾಮಗಳಿಗೆ ವಲಸೆ

ದೇಶದಲ್ಲಿ ಸಕ್ಕರೆ ಉತ್ಪತ್ತಿ ಮಾಡುವ ಪ್ರಮುಖ ರಾಜ್ಯಗಳಲ್ಲಿ ಮಹಾರಾಷ್ಟ್ರ ಸಹ ಒಂದು. ಇಲ್ಲಿ ಒಟ್ಟು 186 ಸಹಕಾರ ಸಕ್ಕರೆ ಕೈಗಾರಿಕೆಗಳಿವೆ. ಕೊಯಿನ ಆಣೆಕಟ್ಟಿದ ನಂತರ 1970 ದಶಾಬ್ದ ಆರಂಭದಿಂದ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬು ಸಾಗುವಳಿ ಮಾಡುವುದನ್ನು ಪ್ರಾರಂಭಿಸಿದರು. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಕಬ್ಬು ಕಡಿಯುವುದಕ್ಕೆ ಮಧ್ಯ ಮಹಾರಾಷ್ಟ್ರದಿಂದ ಪಶ್ಚಿಮ ಮಹಾರಾಷ್ಟ್ರಕ್ಕೆ 6,50,000 ಕೂಲಿಗಳು ವಲಸೆ ಹೋಗುತ್ತಾರೆ. ಇದರಲ್ಲಿ ಪ್ರಾಥಮಿಕೋನ್ನತ ಪಾಠಶಾಲೆ ವಯಸ್ಸಿರುವ 6-14 ವರ್ಷಗಳ ಮಕ್ಕಳು 2,00,000 ರಷ್ಟು ಇರುತ್ತಾರೆ. ತಮ್ಮ ಕುಟುಂಬದ ಜೊತೆಗೆ ಇವರು ಸಹ ವಲಸೆ ಹೋಗುತ್ತಾರೆ.

ಕಬ್ಬು ಕಡಿಯುವುದಕ್ಕಾಗಿ ವಲಸೆ ಬಂದವರು ಫ್ಯಾಕ್ಟರಿಗಳು ಸೂಚಿಸಿದ (ಗೊತ್ತುಪಡಿಸಿದ) ಖಾಲಿ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇವು ಹೊಲಗಳಿಗೆ ಹತ್ತಿರವಾಗಿರುತ್ತವೆ. ಪ್ರತಿಕುಟುಂಬಕ್ಕೆ ಕೆಲವು ಕಟ್ಟಿಗೆಗಳನ್ನು ಬಿದಿರಿನ ತಡಿಕೆಯನ್ನು ಕೊಡುತ್ತಾರೆ. ಇವುಗಳಿಂದ ಅವರು ಒಂದು ಸಣ್ಣ ಗುಡಿಸಲು ಹಾಕಿಕೊಳ್ಳುತ್ತಾರೆ.

2007 -08 ರಲ್ಲಿ ಭಾರತದೇಶದಲ್ಲಿ ಕಾಲಾನುಕ್ರಮ ವಲಸೆದಾರರ ಹಿನ್ನೆಲೆ



ಪೈಚಾರ್ಟ್ 1: 2007-08 ರಲ್ಲಿ ಭಾರತ ದೇಶದಲ್ಲಿ ಸ್ವಲ್ಪಕಾಲ ವಲಸೆಗಾರರ ಸಾಮಾಜಿಕ ಹಿನ್ನೆಲೆ

ಗ್ರಾಮೀಣ ಪ್ರಾಂತ ಕಾರ್ಮಿಕರಲ್ಲಿ ಹೆಚ್ಚಿನ ಸಂಖ್ಯೆ ಕಡಿಮೆ ಸಮಯಕ್ಕೆ ಪ್ರತ್ಯೇಕವಾಗಿ ಗ್ರಾಮೀಣ ಪ್ರಾಂತದಲ್ಲಿನ ಮುಗ್ಗಟ್ಟಿನ ಪ್ರಭಾವದಿಂದ ವಲಸೆ ಹೋಗುತ್ತಾರೆ. ಇವರು ಮುಖ್ಯವಾಗಿ ವ್ಯವಸಾಯ ಕೂಲಿಗಳು, ಸಣ್ಣಕಾರ ರೈತರು, ಕಡಿಮೆ ಆದಾಯದವರು, ದಲಿತರು ಆದಿವಾಸಿಗಳು.

ಗ್ರಾಮೀಣ ಕಾರ್ಮಿಕರ ಮೇಲೆ ರಾಷ್ಟ್ರೀಯ ಕಮೀಷನ್ 1990ರಲ್ಲಿ ಕೊಟ್ಟ ನಿವೇದಿಕೆಯಲ್ಲಿ ಅಸಮಾನ ಅಭಿವೃದ್ಧಿ, ಪ್ರಾಂತಗಳ ಮಧ್ಯ ಅಸಮಾನತೆಗಳು ಕಾಲಾನುಕ್ರಮ ವಲಸೆಗೆ ಕಾರಣವೆಂದು ತಿಳಿಸುತ್ತದೆ. ಕೆಲವು ಗಿರಿಜನ ಪ್ರಾಂತಗಳಲ್ಲಿ ಹೊರಗಿನವರು ಬರುವುದರಿಂದ, ಆಣೆಕಟ್ಟುಗಳನ್ನು ಕಟ್ಟುವುದಕ್ಕಾಗಿ, ಗಣಿಗಳನ್ನು ಅಗೆಯುವುದಕ್ಕಾಗಿ ಪ್ರಜೆಗಳು ಸೀಮಿತ ವಾಗುವುದರಿಂದ ತಾತ್ಕಾಲಿಕವಾಗಿ ತಪ್ಪದೇ ವಲಸೆ ಹೋಗಬೇಕಾದ ಪರಿಸ್ಥಿತಿ ಏರ್ಪಡುತ್ತದೆ.

SCERT TELANGANA

ಗ್ರಾಮೀಣ ಪ್ರಾಂತದಿಂದ ಪಟ್ಟಣಗಳಿಗೆ ವಲಸೆ

ಗ್ರಾಮೀಣ ಪ್ರದೇಶಗಳಲ್ಲಿ ತಕ್ಕಷ್ಟು ಉದ್ಯೋಗ ಅವಕಾಶಗಳು ಇಲ್ಲದಿರುವುದರಿಂದ ಗ್ರಾಮೀಣ ಉದ್ಯೋಗದಲ್ಲಿ ಬರುವ ಆದಾಯವು ಸಾಲದಿರುವುದರಿಂದ ಪ್ರಜೆಗಳು ಮುಖ್ಯವಾಗಿ ಗ್ರಾಮೀಣ ಪ್ರಾಂತಗಳಿಂದ ಪಟ್ಟಣ ಪ್ರಾಂತಗಳಿಗೆ ವಲಸೆ ಹೋಗುತ್ತಿದ್ದಾರೆ. ಕುಟುಂಬ ಸದಸ್ಯರಿಗೆ ಮತ್ತಷ್ಟು ಅವಕಾಶಗಳು ಹೆಚ್ಚಿನ ಆದಾಯ, ಉತ್ತಮವಾದ ಸೇವೆಗಳು ದೊರೆಯುತ್ತವೆ. ಆಸೆಯಿಂದ ಪ್ರಜೆಗಳು ವಲಸೆ ಹೋಗುತ್ತಾರೆ. ರಾಮಯ್ಯನಿಗೆ ಸಂಘಟಿತ ವಲಯದಲ್ಲಿ ಕೆಲಸ ದೊರಕಿದೆ. ಆದರೆ, ಪಟ್ಟಣಗಳಿಗೆ ವಲಸೆ ಹೋಗುವವರಲ್ಲಿ ಬಹಳ ಜನರು ಕೂಲಿಗಳಾಗಿ ಕೆಲಸ ಮಾಡಬೇಕಾಗಿ ಬರುತ್ತದೆ. ಅದು ಅಸಂಘಟಿತ ವಲಯದಲ್ಲಿ ಕೆಲಸಗಳನ್ನು ಹುಡುಕಿಕೊಳ್ಳಬೇಕಾಗಿರುತ್ತದೆ. ಅವರು ಬಜಾರಿನಲ್ಲಿ ತಿರುಗುತ್ತಾ ವಸ್ತುಗಳನ್ನು ಮಾರುತ್ತಿರಬಹುದು, ಬಣ್ಣ ಹಚ್ಚುವವರು, ರಿಪೇರಿ ಮಾಡುವವರು, ರಿಕ್ಷಾ ತುಳಿಯುವವರು, ಕಟ್ಟಡ ನಿರ್ಮಾಣ ಕಾರ್ಮಿಕರಾಗಿರಬಹುದು.

- ಗ್ರಾಮೀಣ ಪ್ರಾಂತಗಳಿಂದ ಪ್ರಜೆಗಳು ವಲಸೆ ಹೋದಾಗ ಗ್ರಾಮೀಣ ಪ್ರಾಂತದಲ್ಲಿನ ಯಾವ ಆರ್ಥಿಕ ರಂಗ ಹೆಚ್ಚು ವರಧಿಯನ್ನು ಕಳೆದುಕೊಳ್ಳುತ್ತದೆ.
- ಗ್ರಾಮೀಣ ಪ್ರಾಂತಗಳಿಂದ ವಲಸೆ ಬಂದವರು ಪಟ್ಟಣ ಪ್ರಾಂತಗಳಲ್ಲಿ ಕೆಲಸ ಪಡೆಯುವ ಆರ್ಥಿಕ ರಂಗ ಯಾವುದು? ಇದಕ್ಕೆ ಕೆಲವು ಕಾರಣಗಳನ್ನು ಹೆಸರಿಸಿರಿ.

ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಕುಟುಂಬ ಪರಿಸ್ಥಿತಿಗಳನ್ನು ಉತ್ತಮ ಪಡಿಸಿಕೊಳ್ಳುವುದಕ್ಕಾಗಿ ಗ್ರಾಮೀಣ ಪ್ರಾಂತಗಳಿಂದ ಪಟ್ಟಣ, ನಗರಗಳಲ್ಲಿನ ಕೈಗಾರಿಕೆ, ಸೇವಾ ರಂಗದಲ್ಲಿ ಕೆಲಸ ಮಾಡುವುದಕ್ಕೆ ವಲಸೆ ಹೋಗುವುದು ಕೆಲವು ಜನರಿಗೆ ಸಹಜ ಪ್ರತಿಕ್ರಿಯೆಯಾಗಿ ಪರಿಗಣಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಅವರಿಗೆ ಓದಲು, ಹೊಸ ಉದ್ಯೋಗಗಳನ್ನು ಮಾಡುವುದಕ್ಕೆ, ಹೊಸ ನೈಪುಣ್ಯತೆಯನ್ನು ಪಡೆಯಲು ಅವಕಾಶಗಳು ಸಿಗುತ್ತವೆ. ಅಷ್ಟೇ ಅಲ್ಲದೇ ಲಿಂಗ, ಕುಲದ ಬೇಧಭಾವ ಪಟ್ಟಣ ಪ್ರಾಂತಗಳಲ್ಲಿ ಕಡಿಮೆಯಾಗಿದ್ದು ಅವರಿಗೆ ಹೆಚ್ಚು ಸ್ವತಂತ್ರವನ್ನು ನೀಡುವಂತೆ ಇರುತ್ತವೆ. ಆದರೆ ಬಹಳ ಜನ ಗ್ರಾಮೀಣ ಪ್ರಾಂತಗಳಲ್ಲಿ ಸಾಕಾಗುವಷ್ಟು ಕೆಲಸ ದೊರೆಯದೆ ಇರುವ ಪರಿಸ್ಥಿತಿಯಲ್ಲಿ ಪಟ್ಟಣಗಳಿಗೆ ವಲಸೆ ಹೋಗುತ್ತಾರೆ. ಇಂತಹ ಜನರಿಗೆ ಪಟ್ಟಣ, ನಗರಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ಸಾಕಾಗುಷ್ಟು ಸ್ಥಳವಿಲ್ಲದೆ, ಕುಡಿಯುವ ನೀರು, ಪರಿಶುದ್ಧತೆಯಂತಹ ಮೂಲಭೂತ ಸೌಕರ್ಯಗಳಿಲ್ಲದೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿರುತ್ತದೆ. ಇಂತವರಿಗೆ ಸಂಘಟಿತ ವಲಯದಲ್ಲಿ ಕೆಲಸ ಸಿಗುವುದು ಕಷ್ಟ. ಆದ್ದರಿಂದ ಇವರು ತಿಳಿದ ಉದ್ಯೋಗ ಭದ್ರತೆ ಇರುವುದಿಲ್ಲ, ಉತ್ತಮವಾದ ಆದಾಯವಿರುವುದಿಲ್ಲ, ಅವರು ದಿನಗೂಲಿಗಳಾಗಿ ಜೀವನವನ್ನು ನಡೆಸುತ್ತಾರೆ.

ಬಹಳ ಜನಕ್ಕೆ ತಮ್ಮ ಸ್ವಂತ ಗ್ರಾಮದಲ್ಲಿ, ವಲಸೆ ಹೋದ ಪ್ರಾಂತಗಳಲ್ಲಿಯೂ, ಮನೆಗಳು ಇರುತ್ತವೆ. ವಿವಿಧ ಕಾಲಗಳಲ್ಲಿ ಕೆಲಸದ ಆಧಾರದ ಮೇಲೆ ಈ ಎರಡು ಪ್ರದೇಶಗಳ ಮಧ್ಯ ತಿರುಗುತ್ತಿರುತ್ತಾರೆ. ವಲಸೆ ಹೋಗಬೇಕೆಂದರೆ ಎಲ್ಲಾ ಕುಟುಂಬ ಸದಸ್ಯರು ಹೋಗಬೇಕಾಗಿಲ್ಲ. ಸಾಮಾನ್ಯವಾಗಿ ಹೆಂಡತಿ ಗ್ರಾಮೀಣ ಪ್ರಾಂತದಲ್ಲಿ ಉಳಿದುಕೊಳ್ಳುತ್ತಾಳೆ.

ಅವರ ವಿದ್ಯೆ, ನೈಪುಣ್ಯತೆಗಳಿಂದ ಪಟ್ಟಣಗಳಿಗೆ ವಲಸೆ ಹೋದವರು ಕೆಲಸಕ್ಕಾಗಿ ವಿಧವಿಧವಾದ ಪದ್ಧತಿಗಳನ್ನು ಉಪಯೋಗಿಸುತ್ತಾರೆ. ಪಟ್ಟಣಗಳಲ್ಲಿ ಉದ್ಯೋಗಗಳು ದೊರೆಯಲು ಪರಿಚಯ, ಸಂಬಂಧಗಳು ಬಹಳ ಮುಖ್ಯವಾದವು. ಒಂದೊಂದು ಸಲ ತಮ್ಮ ಪರಿಚಯ, ಸಂಬಂಧಗಳ ಮೂಲಕ ಉದ್ಯೋಗವನ್ನು ದೊರಕಿಸಿಕೊಂಡ ಮೇಲೆ ಗ್ರಾಮೀಣ ಪ್ರಾಂತಗಳ ಪ್ರಜೆಗಳು

- ಪಟ್ಟಣದಲ್ಲಿ ಅಸಂಘಟಿತ ರಂಗದಲ್ಲಿ ದಿನಕೂಲಿಗಳಾಗಿ ಅಥವಾ ಮನೆಗೆಲಸ ಮಾಡುವ ಮಹಿಳೆಯರಾಗಿ ಪಟ್ಟಣಕ್ಕೆ ಬಂದ ಒಬ್ಬ ವ್ಯಕ್ತಿಯನ್ನು ಸಂದರ್ಶನ ಮಾಡಿ, ಅವಳ ಕಥೆ ಬರೆಯಿರಿ.
- ನೀವು ಗ್ರಾಮೀಣ ಪ್ರಾಂತದಲ್ಲಿ ಇರುತ್ತಿದ್ದರೆ ಪಟ್ಟಣದಲ್ಲಿ ಅಸಂಘಿತ ರಂಗದಲ್ಲಿ ಕೆಲಸ ಮಾಡುತ್ತಾ ಹಬ್ಬಕ್ಕೆ ಊರಿಗೆ ಬಂದ ವ್ಯಕ್ತಿಯನ್ನು ಸಂದರ್ಶನ ಮಾಡಿ ಆತನ ಕಥೆಯನ್ನು ಬರೆಯಿರಿ.
- ಈ ಎರಡು ಪರಿಸ್ಥಿತಿಗಳ ಮಧ್ಯವಿರುವ ವ್ಯತ್ಯಾಸಗಳನ್ನು, ಹೋಲಿಕೆಗಳನ್ನು ಹೆಸರಿಸಿರಿ.

SCERT TELANGANA

ಪಟ್ಟಣಗಳಿಗೆ ಸೇರುತ್ತಾರೆ. ಅನೇಕ ಕಾರಣಗಳಿಂದ ಅವರು ತಮ್ಮ ಗ್ರಾಮೀಣ ಪ್ರಾಂತಗಳೊಂದಿಗೆ ಒಳ್ಳೆಯ ಸಂಬಂಧಗಳನ್ನು ಇಟ್ಟುಕೊಳ್ಳುತ್ತಾರೆ. ವಲಸೆ ಹೋದವರು ಪಟ್ಟಣ ಅವಕಾಶಗಳನ್ನು ಗ್ರಾಮೀಣ ಪ್ರಾಂತಗಳಿಗೆ ವರ್ಗಾಯಿಸುತ್ತಿರುತ್ತಾರೆ, ಇದರಿಂದ ವಲಸೆ ಹೋಗಬೇಕೆಂದುಕೊಳ್ಳುವವರು ಗ್ರಾಮೀಣ ಪ್ರಾಂತದಲ್ಲಿಯೇ ಉದ್ಯೋಗದ ಸಲುವಾಗಿ ಅನ್ವೇಷಿಸಬಹುದು. ಅನೇಕ ಸಂದರ್ಭಗಳಲ್ಲಿ ಅನೇಕ ಕುಟುಂಬಗಳಿಗೆ ವಲಸೆ ಎನ್ನುವುದು ಅವರ ಜೀವನವನ್ನು ಆಯ್ದುಕೊಳ್ಳುವ ವಿಧಾನವಾಗಿರುತ್ತದೆ.

ಅಂತರಾಷ್ಟ್ರೀಯ ವಲಸೆಗಳು

ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮದ ಪ್ರಕಾರ 20 ಕೋಟಿ ಅಂತರಾಷ್ಟ್ರೀಯ ವಲಸೆ ವ್ಯಕ್ತಿಗಳಲ್ಲಿ 7 ಕೋಟಿಗಿಂತ ಹೆಚ್ಚು ಜನ ಅಭಿವೃದ್ಧಿ ಹೊಂದುತ್ತಿರುತವ ದೇಶದಿಂದ ಮತ್ತೊಂದು ಅಭಿವೃದ್ಧಿ ಹೊಂದುತ್ತಿರುವ ದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಭಾರತ ದೇಶದಿಂದ ಅಂತರಾಷ್ಟ್ರೀಯ ವಲಸೆಗಳು ಎರಡು ವಿಧ:

ತಾಂತ್ರಿಕ ಕೌಶಲ್ಯ, ವೃತ್ತಿ ಅನುಭವವಿರುವ ವ್ಯಕ್ತಿಗಳು ಅಮೇರಿಕಾ, ಕೆನಡಾ, ಇಂಗ್ಲೆಂಡ್, ಆಸ್ಟ್ರೇಲಿಯಾದಂತಹ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಐ.ಟಿ. ನಿಪುಣರು, ವೈದ್ಯರು, ಮೇನೇಜ್‌ಮೆಂಟ್ ನಿಪುಣರು ಇದಕ್ಕೆ ಉದಾಹರಣೆ. 1950ರ, 1960ರಲ್ಲಿ ಕೆನಡಾ, ಇಂಗ್ಲೆಂಡ್‌ಗೆ ವಲಸೆ ಹೋದ ಭಾರತೀಯರಲ್ಲಿ ಹೆಚ್ಚು ಜನ ಯಾವ ನೈಪುಣ್ಯಗಳು ಇಲ್ಲದವರು ಅಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಹೆಚ್ಚಾಗಿ ವೃತ್ತಿ ನಿಪುಣರು ಈ ದೇಶಗಳಿಗೆ ಹೋಗುತ್ತಿದ್ದಾರೆ. ಈಗಿನ ಕಾಲದಲ್ಲಿ ಭಾರತ ದೇಶ ವೃತ್ತಿ ನಿಪುಣರು ಜರ್ಮನಿ, ನಾರ್ವೆ, ಜಪಾನ್, ಮಲೇಶಿಯಾದಂತಹ ದೇಶಗಳಿಗೆ ಸಹ ವಲಸೆ ಹೋಗುತ್ತಿದ್ದಾರೆ. 1950ರಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ವರ್ಷಕ್ಕೆ 10,000 ಮಂದಿ, ವಲಸೆ ಹೋಗಲು, 1990ರಲ್ಲಿ ಈ ಸಂಖ್ಯೆ 60,000ಕ್ಕೆ ಹೆಚ್ಚಾಯಿತು.

ಎರಡನೆಯ ವಿಧದ ವಲಸೆಗಳು ತೈಲ ರಫ್ತು ಮಾಡುತ್ತಿರುವ ಪಶ್ಚಿಮ ಆಸಿಯಾ ದೇಶಗಳಿಗೆ ತಾತ್ಕಾಲಿಕ ಒಪ್ಪಂದಗಳ ಮೇಲೆ ವಲಸೆ ಹೋಗುತ್ತಿರುವ ನೈಪುಣ್ಯಗಳಿಲ್ಲದ, ಸ್ವಲ್ಪ ನೈಪುಣ್ಯವಿರುವ ಕೆಲಸದವರು. ವಲಸೆ ಹೋದ ದೇಶಗಳಲ್ಲಿನ ಪರಿಸ್ಥಿತಿಯನ್ನಾಧರಿಸಿ ಸ್ವಲ್ಪ ಕಾಲದ ನಂತರ ಹೀಗೆ ವಲಸೆ ಹೋದವರೆಲ್ಲರೂ ಮರಳಿ ಬರುತ್ತಾರೆ. ಭಾರತ ದೇಶದಿಂದ ಪಶ್ಚಿಮ ಆಸಿಯಾಕ್ಕೆ ಹೋಗುತ್ತಿರುವ 30 ಲಕ್ಷ, ವಲಸೆ ವ್ಯಕ್ತಿಗಳಲ್ಲಿ ಹೆಚ್ಚು ಜನ ಸೌದಿ ಅರೇಬಿಯಾಕ್ಕೆ, ಯು.ಎ.ಇ. (United Arab Emirates)ಹೋಗುತ್ತಿದ್ದಾರೆ. ಪ್ರತಿ ವರ್ಷ ಪಶ್ಚಿಮ ಆಸಿಯಾಕ್ಕೆ 3 ಲಕ್ಷ ಕಾರ್ಮಿಕರು ವಲಸೆ ಹೋಗುತ್ತಿದ್ದಾರೆ. ಪಶ್ಚಿಮ ಆಸಿಯಾಗೆ ವಲಸೆ ಹೋಗುತ್ತಿರುವ ಕಾರ್ಮಿಕರಲ್ಲಿ ಐದರಲ್ಲಿ ಮೂರು ಜನರು ಕೇರಳ, ತಮಿಳುನಾಡು ಆಂಧ್ರಪ್ರದೇಶ ರಾಜ್ಯಗಳಿಗೆ ಸೇರಿದವರು. ಈ ವಲಸೆ ಕಾರ್ಮಿಕರಲ್ಲಿ ಅಧಿಕ ಭಾಗ ಭವನಗಳ ನಿರ್ಮಾಣ, ದುರಸ್ತಿ ನಿರ್ವಹಣೆ ಸೇವೆಗಳು ಸಾರಿಗೆ, ಟೆಲಿಕಮ್ಯುನಿಕೇಷನ್ ರಂಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

- ಮೇಲಿನ ಪ್ಯಾರಾದಲ್ಲಿ ಹೆಸರಿಸಿ ಭಾರತದೇಶ ದಿಂದ ಇತರ ದೇಶಗಳಿಗೆ ಹೋಗುತ್ತಿರುವ ವಲಸಿಗರನ್ನು ತೋರಿಸುತ್ತಾ ಪ್ರಪಂಚ ನಕ್ಷೆಯಲ್ಲಿ ಬಾಣ ಗುರ್ತು ಗಳನ್ನು ಎಳೆಯಿರಿ.

SCERT TELANGANA

ಪ್ರಜೆಗಳು ವಲಸೆ ಹೋದಾಗ ಏನಾಗುತ್ತದೆ?

ವಲಸೆ ಹೋದ ಪ್ರದೇಶದಲ್ಲಿ ಆ ಕಾರ್ಮಿಕರು ಚಿಲ್ಲರೆ ಬೆಲೆಗಳ ಅಂಗಡಿಗಳಿಂದ ಸಾಮಾಗ್ರಿಗಳು ದೊರೆಯುವುದಿಲ್ಲ ಆದ್ದರಿಂದ ಅವರು ಆಹಾರ ಧಾನ್ಯಗಳ ಮೇಲೆ ಹೆಚ್ಚು ಖರ್ಚು ಮಾಡಬೇಕಾಆಗಿರುತ್ತದೆ.ಬಹಳ ತೀರ್ವವಾದ ಪರಿಸ್ಥಿತಿಗಳಲ್ಲೂ, ಪರಿಶುದ್ಧತೆ ಇರದ ವಾತಾವರಣದಲ್ಲೂ ವಾಸಿಸ ಬೇಕಾಗಿರುವುದರಿಂದ ಅವರು ಅನೇಕ ಅನಾರೋಗ್ಯಕ್ಕೆ, ರೋಗಗಳಿಗೆ ಗುರಿಯಾಗುತ್ತಾರೆ. ಗಣಿಗ, ಇಟ್ಟಿಗೆ ಬಟ್ಟಿಗಳು, ನಿರ್ಮಾಣ ಕೆಲಸದಿಂದ ಅವರಿಗೆ ಮೈನೋವು, ಸನ್‌ಸ್ಟ್ರೋಕ್ (ಬಿಸಿಲುತಾಪ), ಚರ್ಮರೋಗಗಳು, ಶ್ವಾಸಕೋಶ ರೋಗಗಳಿಗೆ ಗುರಿಯಾಗುತ್ತಾರೆ. ಯಜಮಾನರು ಸರಿಯಾದ ಸುರಕ್ಷಾ ಕಾರ್ಯಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಕೈಗಾರಿಕಾ ಪ್ರದೇಶಗಳು, ಕಟ್ಟಡಗಳ ನಿರ್ಮಾಣ ಪ್ರದೇಶಗಳಲ್ಲಿ ಪ್ರಮಾದಗಳು ಕ್ರಮೇಣ ಸಂಭವಿಸುತ್ತಾ ಇರುತ್ತವೆ. ವಲಸೆ ಕಾರ್ಮಿಕರು ಸಂಘಟಿತ ರಂಗದಲ್ಲಿ ಇಲ್ಲದಿರುವುದರಿಂದ ಅವರಿಗೆ ವಿವಿಧ ಆರೋಗ್ಯ, ಕುಟುಂಬ ಸಂರಕ್ಷಣೆ ಕಾರ್ಯಕ್ರಮಗಳು ಸಿಗುತ್ತಿಲ್ಲ. ವಲಸೆ ಬಂದ ಮಹಿಳಾ ಕೂಲಿಗಳು ಪ್ರಸೂತಿ (ಹೆರಿಗೆ)ರಜೆಗಳು ಇರುವುದಿಲ್ಲ. ಎಂದರೆ ಹೆರಿಗೆಯಾದ ಸ್ವಲ್ಪ ದಿನಕ್ಕೆ ಅವರು ಮತ್ತೆ ಕೆಲಸಕ್ಕೆ ಹೋಗಬೇಕಾಗಿರುತ್ತದೆ.

ಕುಟುಂಬಗಳು ವಲಸೆ ಹೋದಾಗ ತಂದೆ ತಾಯಿಗಳ ಜೊತೆ ಹೋಗುವ ಸಣ್ಣ ಮಕ್ಕಳಿಗೆ ಶಿಶು ಸಂರಕ್ಷಣಾ ಕೇಂದ್ರಗಳು ಇರುವುದಿಲ್ಲ. ದೊಡ್ಡ ಮಕ್ಕಳು ಹೊಸ ಪ್ರದೇಶದಲ್ಲಿ ಓದನ್ನು ಮುಂದುವರೆಸುವ ಅವಕಾಶಗಳಿರುವುದಿಲ್ಲ. ಅವರು ಸ್ವಗ್ರಾಮಕ್ಕೆ ಮರಳಿ ಹೋದಾಗ ಅಲ್ಲಿ ಪಾಠಶಾಲೆಗಳು ಸಹ ಪುನಃ ಅವರನ್ನು ಸೇರಿಸಿಕೊಳ್ಳುವುದಿಲ್ಲ. ಕೊನೆಗೆ ಅವರು ಶಾಲೆಗೆ ಹೋಗುವುದನ್ನು ನಿಲ್ಲಿಸಿ ಬಿಡುತ್ತಾರೆ. ಕುಟುಂಬದಲ್ಲಿ ಕೇವಲ ಪುರುಷರೇ ವಲಸೆ ಹೋದಾಗ ಕುಟುಂಬದ ಜವಾಬ್ದಾರಿ, ಮುದುಕರ ಸಂರಕ್ಷಣಾ ಭಾರವು ಸ್ತ್ರೀಯರ ಮೇಲೆ ಬೀಳುತ್ತದೆ.

ವಲಸೆ ಹೋದವರ ಮೇಲೆಯೂ ಪ್ರಭಾವ ತೀರ್ವತೆ ಇರುತ್ತದೆ. ಭಿನ್ನವಾದ ವಾತಾವರಣದಲ್ಲಿ ಇರಬೇಕಾಗಿ ಬರುವುದು, ಅದರಿಂದ ಉಂಟಾಗುವ ಒತ್ತಡ, ಆಹಾರ ಬದಲಾವಣೆ, ಭಿನ್ನವಾದ ವಾತಾವರಣದಿಂದ ವಲಸೆ ಹೋದವರು ತೀರ್ವವಾಗಿ ಪ್ರಭಾವಕ್ಕೊಳಗಾಗುತ್ತಾರೆ. ವಲಸೆಯ ಕಾಲದ ಆಧಾರದ ಮೇಲೆ ಈ ಒತ್ತಡದ ತೀವೇತೆಯಿರುತ್ತದೆ.

ವಲಸೆ ಹೋಗುವವರಲ್ಲಿ ಬಹಳ ಜನರು, ಪ್ರತ್ಯೇಕವಾಗಿ ದೀರ್ಘಕಾಲ ವಲಸೆ ಹೋಗುವವರು ಊರಿನಲ್ಲಿರುವ ತಮ್ಮ ಕುಟುಂಬಗಳಿಗೆ ಹಣ ಕಳುಹಿಸುತ್ತಾರೆ. ಭಾರತ ದೇಶದಲ್ಲಿ ಕೆಲವು ಪ್ರಾಂತಗಳಲ್ಲಿ ಮೂರರಲ್ಲಿ ಒಂದು ಭಾಗದಷ್ಟು ಕುಟುಂಬಗಳು ವಲಸಿಗರು ಕಳುಹಿಸುವ ಹಣದ ಮೇಲೆ ಆಧಾರವಾಗಿರುತ್ತವೆ. ಕಾಲಾನುಗುಣವಾಗಿ ವಲಸೆ ಹೋಗುವವರಲ್ಲಿ ಬಹಳ ಜನ ಮನೆಗೆ ಹಣ ಕಳುಹಿಸುತ್ತಾರೆ. ಇಲ್ಲವೆ ಉಳಿತಾಯ ಮಾಡಿದ ಹಣವನ್ನು ತಮ್ಮ ಜೊತೆಗೆ ತೆಗೆದುಕೊಂಡು ಬರುತ್ತಾರೆ. ವಲಸೆ ಹೋಗುವುದರಿಂದ ಆಸ್ತಿಗಳನ್ನು ಮಾರಿಕೊಳ್ಳದಂತೆ ಸಾಲಗಳನ್ನು ತೀರಿಸುವುದಕ್ಕೆ, ಇತರ ಕಾರ್ಯಕ್ರಮಗಳಿಗೆ ಹಣವನ್ನು ಸಂಗ್ರಹಿಸುತ್ತಾರೆ. ವಲಸೆ ಹೋದ ಕುಟುಂಬಗಳು ಮನೆ, ಭೂಮಿ, ವ್ಯವಸಾಯ ಸಾಮಗ್ರಿಗಳು ವಿನಿಯೋಗ ವಸ್ತುಗಳನ್ನು ಕೊಂಡುಕೊಳ್ಳುವುದು ಸಾಮಾನ್ಯವಾಗಿ ಗಮನಿಸುತ್ತಿರುತ್ತೇವೆ. ವಲಸೆ ಹೋದವರಲ್ಲಿ ಸ್ವಲ್ಪ ಜನ ವಲಸೆ ಹೋದ ಸ್ಥಳದಲ್ಲಿಯೇ ಉದ್ಯೋವನ್ನು ಪಡೆಯಬಹುದು. ಅವಶ್ಯಕತೆ ಇರುವ ನೈಪುಣ್ಯತೆಗಳನ್ನು ಬಳಸಿಕೊಳ್ಳಬಹುದು, ಒಳ್ಳೆಯ ಉದ್ಯೋಗಗಳನ್ನು ಕುರಿತು ತಿಳಿದುಕೊಂಡು ಕ್ರಮ ತಪ್ಪದಂತೆ ಅಥವಾ ಶಾಶ್ವತವಾಗಿ ವಲಸೆ ಹೋಗಬಹುದು.

- ವಲಸೆ ಹೋದವರಿಗೆ ಆಹಾರ, ವೈದ್ಯ, ಕುಟುಂಬ ಸಂರಕ್ಷಣೆ ಕಾರ್ಯಕ್ರಮಗಳು ದೊರೆಯುವುದಕ್ಕೆ ಏನು ಮಾಡಬೇಕು?
- ಸರ್ಕಾರ, ಸ್ವಚ್ಛಂದ ಸಂಸ್ಥೆಗಳು ಕೆಲವು ಕಾರ್ಯಗಳನ್ನು ಕೈಗೊಂಡಿವೆ. ನಿಮ್ಮ ಪ್ರಾಂತದಲ್ಲಿ ಇಂತಹವುಗಳು ಇವೆಯೋ ಎಂಬುದನ್ನು ತಿಳಿದುಕೊಳ್ಳಿರಿ. ಅಂತಹ ಸಂಸ್ಥೆಗಳಿನಲ್ಲಿನ ವ್ಯಕ್ತಿಗಳನ್ನು ನಿಮ್ಮ ಪಾಠಶಾಲೆಗೆ ಆಹ್ವಾನಿಸಿ ಮಾತನಾಡಿರಿ.

SCERT TELANGANA

ಅಂತರರಾಷ್ಟ್ರೀಯ ವಲಸೆಯ ಪರಿವೀಕ್ಷಣೆ

ಭಾರತ ದೇಶಿಯರು ವಿದೇಶಗಳಿಗೆ ವಲಸೆ ಹೋಗಿ ಕೆಲಸ ಮಾಡುವುದನ್ನು ವಲಸೆಗಳ ಕಾಯ್ದೆ, 1983ನ್ನು ಭಾರತ ದೇಶ ಕಾಯ್ದೆ ಸೂಚಿಸುತ್ತದೆ. ಕೆಲಸದ ಸಲುವಾಗಿ ಹೋಗುವವರು ಅವರ ಪ್ರಯೋಜನಗಳನ್ನು ಕಾಪಾಡುವುದಕ್ಕೆ ಇದು ಕೆಲವು ನಿಯಮಗಳನ್ನು ವಿಧಿಸುತ್ತದೆ. ವಿವಿಧ ದೇಶಗಳಲ್ಲಿ ಭಾರತ ಸರ್ಕಾರ ಏರ್ಪಾಟು ಮಾಡಿದ ರಾಯಭಾರಿ ಕಾರ್ಯಾಲಯಗಳು ವಲಸೆ ಕಾಯ್ದೆಯಲ್ಲಿ ನಮೂದಿಸಲಾದಂತೆ ಕಾಯ್ದೆ ಪರವಾದ ವಿಧಾನಗಳನ್ನು ಪಾಲಿಸಿ ಅಂತರಾಷ್ಟ್ರೀಯ ವಲಸೆ ಕಾರ್ಮಿಕರ ಸಂಕ್ಷೇಮವನ್ನು ಕಾಪಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವಲಸೆ ಕಾರ್ಮಿಕರಿಗೆ ವೇತನಗಳನ್ನು ಸಲ್ಲಿಸುವುದಿಲ್ಲ. ಕೆಲವು ಸಲ ಕಾರ್ಮಿಕರನ್ನು ಮಧ್ಯವರ್ತಿಗಳು ಮೋಸ ಮಾಡುತ್ತಾರೆ, ಅಥವಾ ವಿದೇಶಗಳಲ್ಲಿ ಕೆಲಸ ತೋರಿಸುವುದಕ್ಕೆ ಶಿಫಾರಸ್ಸು ಮಾಡಿದ್ದಕ್ಕಿಂತ ಹೆಚ್ಚು ಬೆಲೆಯನ್ನು ವಸೂಲಿ ಮಾಡುತ್ತಾರೆ. ಒಂದೊಂದು ಸಲ ಯಜಮಾನರ ಒಪ್ಪಂದದ ಸಮಯ ಮುಗಿಯದಿದ್ದರೂ ಒಪ್ಪಂದವನ್ನು ರದ್ದು ಮಾಡುತ್ತಾರೆ. ಅಥವಾ ವಲಸೆ ಕಾರ್ಮಿಕರು ನಷ್ಟ ಹೊಂದುವಂತೆ ಒಪ್ಪಂದ ಪತ್ರವನ್ನು ಬದಲಾಯಿಸುತ್ತಾರೆ. ಸಲ್ಲಿಸುತ್ತೇವೆಂದು ಹೇಳಿದ್ದಕ್ಕಿಂತ ಕಡಿಮೆ ವೇತನ ಕೊಡುತ್ತಾರೆ. ಇತರ ಪ್ರಯೋಜನಗಳು, ಪ್ರೋತ್ಸಾಹಗಳನ್ನು ನಿಲ್ಲಿಸುತ್ತಾರೆ. ಅವರು ಆಗಾಗ್ಗೆ ಕಾರ್ಮಿಕರಿಂದ ನಿಗಧಿಪಡಿಸಿದ ಸಮಯಕ್ಕಿಂತ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಾರೆ, ಅದಕ್ಕೆ ಹೆಚ್ಚಿನ ವೇತನವನ್ನು ಕೊಡುವುದಿಲ್ಲ. ಕಾರ್ಮಿಕರನ್ನು ಅವರ ಪಾಸ್‌ಪೋರ್ಟ್‌ನ್ನು ಅವರ ಹತ್ತಿರ ಇಟ್ಟುಕೊಳ್ಳಲು ಬಿಡುವುದಿಲ್ಲ. ಉದ್ಯೋಗ ಪಡೆಯುತ್ತಿರುವ ಭಯದಿಂದ ಭಾರತ ವಲಸೆ ಕಾರ್ಮಿಕರನ್ನು ವಿರಳವಾಗಿ ಕರೆಯಿಸಿಕೊಂಡು ತಮ್ಮ ವಿದೇಶಿಯಜಮಾನರ ಮೇಲೆ ಫಿರ್ಯಾದಿ (ದೂರು) ಯನ್ನು ನಮೋದಿಸುವುದಿಲ್ಲ.

ಚಿತ್ರ 7.7 : ವಲಸೆ ವ್ಯಕ್ತಿಗಳು ಬರದಂತೆ ರಾಷ್ಟ್ರೀಯ ಹೆದ್ದಾರಿಗಳನ್ನು ಕಾಪಾಡುತ್ತಿರುತ್ತಾರೆ. ಇಲ್ಲಿ ಕೆಲವು ಉದಾಹರಣೆಗಳನ್ನು ನೋಡೋಣ.

1) ಅಮೇರಿಕಾದಲ್ಲಿ ಮೆಕ್ಸಿಕೋ ಸರಹದ್ದಿನ ಸುತ್ತ,

2) ದಕ್ಷಿಣ ಕೊರಿಯಾದಲ್ಲಿ ಉತ್ತರ ಕೊರಿಯಾದ ಸರಹದ್ದಿನ ಸುತ್ತ

3) ಭಾರತ ದೇಶದಲ್ಲಿ ಬಾಂಗ್ಲಾದೇಶ ಸರಹದ್ದಿನ ಸುತ್ತ. ಹೀಗೆ ದೇಶ ಸರಹದ್ದಗಳನ್ನು ದಾಟಿಹೋಗುತ್ತಿರುವವರ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

SCERT TELANGANA

ಮುಖ್ಯ ಪದಗಳು

1. ನಿವಾಸ ಪ್ರಾಂತ
2. ಮಹಾನಗರಗಳು
3. ವಿಮಾನಾಶ್ರಯ ನಗರಗಳು
4. ನಗರೀಕರಣ
5. ಮೆಟ್ರೋಪಾಲಿಟನ್ ನಗರ
6. ವಲಸೆ
7. ವಿದೇಶಿಗಳಿಗೆ ವಲಸೆ
8. ಅಂತರಾಷ್ಟ್ರೀಯ ವಲಸೆ
9. ಕಾಲಾನುಗುಣ ವಲಸೆ
10. ದೇಶದ ಸರಿಹದ್ದು

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ನಿವಾಸ ಪ್ರಾಂತ ಎಂದರೇನು? (AS_1)
2 . ಸ್ಥಿರ ನಿವಾಸ ಏರ್ಪಡಿಸಿಕೊಂಡಿದ್ದರಿಂದ ಮಾನವನ ಜೀವನ ವಿಧಾನ ಹೇಗೆ ಬದಲಾಯಿತು?(AS_1)
3 . ವಿವಿಧ ಪ್ರಾಂತಗಳನ್ನು ಭಾರತದೇಶ ಜನಸಂಖ್ಯಾ ಗಣ ವಿಭಾಗ ಹೇಗೆ ನಿರ್ವಹಿಸುತ್ತದೆ? ಪರಿಮಾಣ, ಇತರ ಅಂಶಗಳ ಆಧಾರವಾಗಿ ಅವುಗಳನ್ನು ಹೇಗೆ ವ್ಯವಸ್ಥೀಕರಿಸುತ್ತದೆ? (AS_1)
4 . ವಿಮಾನಾಶ್ರಯ ನಗರ ಎಂದರೇನು? ಅದರ ನಿರ್ಮಾಣ ಸ್ವರೂಪವೇನು? (AS_1)
5 . 100ನೇ ಪೇಜನಲ್ಲಿಯ ಎರಡನೇಯ ಪ್ಯಾರಾ 'ಎರಡನೇ ಪ್ರಕಾರದ ವಲಸೆ---- ರಂಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ' ವರೆಗೆ ಓದಿ ವ್ಯಾಖ್ಯಾನಿಸಿರಿ.
6. ಗ್ರಾಮೀಣ ಪ್ರಾಂತಗಳಿಂದ ಪಟ್ಟಣ ಪ್ರಾಂತಗಳಿಗೆ, ಗ್ರಾಮೀಣ ಪ್ರಾಂತಗಳಿಂದ ಗ್ರಾಮೀಣ ಪ್ರಾಂತಗಳಿಗೆ ವಲಸೆಗಳ ಮಧ್ಯ ಹೋಲಿಕೆಗಳು, ವ್ಯತ್ಯಾಸಗಳು ಬರೆಯಿರಿ. (AS_1)
7 . ವಲಸೆ ಹೋದವರು ಆ ಪ್ರಾಂತದಲ್ಲಿ ಸಮಸ್ಯೆ ಸೃಷ್ಟಿಸುತ್ತಾರ/ ಸಮಸ್ಯೆಗೆ ಕಾರಣರಾಗುತ್ತಾರಾ ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ತಿಳಿಸಿರಿ. (AS_4)
8. ಗ್ರಾಮೀಣ ಪ್ರಾಂತಗಳಿಂದ ಪಟ್ಟಣ ಪ್ರಾಂತಗಳಿಗೆ ವಲಸೆ ಹೋಗುವುದರಿಂದ ಗ್ರಾಮೀಣ ಪ್ರಾಂತಗಳ ಪ್ರಜೆಗಳು ಕೊಂಡುಕೊಳ್ಳುವ ಶಕ್ತಿ ಹೇಗೆ ಬೆಳೆಯುತ್ತದೆ? (AS_1)
9. ವೃತ್ತಿ ನೈಪುಣ್ಯತೆ ಇರುವವರು ಅಭಿವೃದ್ಧಿ ಹೊಂದಿದ ದೇಶಗಳಿಗೆ ಏತಕ್ಕಾಗಿ ವಲಸೆ ಹೋಗಲ್ಪಡುತ್ತಿದ್ದಾರೆ? ನೈಪುಣ್ಯತೆ ಇಲ್ಲದ ಕಾರ್ಮಿಕರು ಈ ದೇಶಗಳಿಗೆ ಏಕೆ ಹೋಗುವುದಿಲ್ಲ? (AS_1)
10. ರಾಷ್ಟ್ರೀಯ, ಅಂತರಾಷ್ಟ್ರೀಯ ವಲಸೆಗಳ ಪ್ರಭಾವಗಳ ಮಧ್ಯೆ ಹೋಲಿಕೆ, ವ್ಯತ್ಯಾಸಗಳನ್ನು ಹೆಸರಿಸಿರಿ. (AS_1)
11. ಭಾರತದ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

    1) ಚೆನ್ನೈ 2) ಬೆಂಗಳೂರು 3) ದೆಹಲಿ 4) ಹೈದ್ರಾಬಾದ್ 5) ಕೊಲ್ಕತ್ತಾ

ಪ್ರಾಜೆಕ್ಟ್:

ನಿಮ್ಮ ಪ್ರಾಂತದಲ್ಲಿ ವಲಸೆ ಹೋದ ಕುಟುಂಬಗಳಿಂದ ಇಲ್ಲವೇ ವಲಸೆ ಬಂದ ಕುಟುಂಬಗಳಿಂದ ಈ ಕೆಳಗಿನ ಸಮಾಚಾರವನ್ನು ಶೇಖರಿಸಿರಿ.

ಕ್ರ. ಸಂ.	ವಲಸೆಹೋದ ಕುಟುಂಬದ ಯಜಮಾನನ ಹೆಸರು	ವಲಸೆಹೋದವರ ಸಂಖ್ಯೆ	ವಲಸೆ ಎಲ್ಲಿಗೆ ಹೋಗಿದ್ದಾರೆ	ವಲಸೆ ಹೋಗಲು ಕಾರಣಗಳು	ವಲಸೆ ಹೋದಲ್ಲಿನ ಪರಿಸ್ಥಿತಿಗಳು	ವಸಲೆ ಹೋದ ನಂತರ ಕುಟುಂಬದ ಪರಿಸ್ಥಿತಿಗಳು

ಸಮಾಚಾರವನ್ನು ಶೇಖರಿಸಿದ ನಂತರ ಕುಟುಂಬಗಳ ಪರಿಸ್ಥಿತಿಯ ಮೇಲೆ ವಿಶ್ಲೇಷಣೆ ಮಾಡಿ ಪರಿಹಾರ ಮಾರ್ಗಗಳನ್ನು ಸೂಚಿಸಿರಿ.

ಚರ್ಚೆ :

ಪಟ್ಟಣೀಕರಣವು ಅಭಿವೃದ್ಧಿಯ ಸಂಕೇತವೋ ? ಸಮಸ್ಯೆಗಳ ತಾಣವೋ ? ಈ ವಿಷಯವನ್ನು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

SCERT TELANGANA

ಅಧ್ಯಾಯ 8

ರಾಂಪುರಂ : ಗ್ರಾಮ ಆರ್ಥಿಕ ವ್ಯವಸ್ಥೆ

ರಾಂಪುರ ಗ್ರಾಮದ ಕಥೆ

ಈ ಕಥೆ ಒಂದು ಗ್ರಾಮದಲ್ಲಿನ ವಿವಿಧ ರೀತಿಯ ಉತ್ಪತ್ತಿ ಚಟುವಟಿಕೆಗಳನ್ನು ಪರಿಚಯಿಸುತ್ತದೆ. ಭಾರತ ದೇಶದ ಗ್ರಾಮಗಳಲ್ಲಿ ವ್ಯವಸಾಯ ಮುಖ್ಯವಾದ ಉತ್ಪತ್ತಿ ಚಟುವಟಿಕೆ ಇನ್ನುಳಿದ ಉತ್ಪತ್ತಿ ಚಟುವಟಿಕೆಗಳನ್ನು ವ್ಯವಸಾಯೇತರ ಚಟುವಟಿಕೆಗಳು ಎನ್ನುವರು. ಇವುಗಳಲ್ಲಿ ಸಣ್ಣ ಸಣ್ಣ ವಸ್ತುಗಳ ಉತ್ಪತ್ತಿ, ರವಾಣಾ, ಅಂಗಡಿಗಳ ನಿರ್ವಹಣೆಯಂತಹವುಗಳು ಇರುತ್ತವೆ. ಈ ಅಧ್ಯಾಯದಲ್ಲಿ ಎರಡು ವಿಧವಾದ ಚಟುವಟಿಕೆಗಳನ್ನು ನೋಡೋಣ. ಉತ್ಪತ್ತಿಯ ವ್ಯವಸ್ಥೆಯನ್ನು – ಅವು ವ್ಯವಸಾಯದಲ್ಲಾಗಬಹುದು. ಕೈಗಾರಿಕೆಗಳಲ್ಲಿ ಆಗಬಹುದು. – ಉತ್ಪತ್ತಿ ಪ್ರಕ್ರಿಯೆಯಲ್ಲಿನ ಮೂಲಭೂತ ಅಂಶಗಳನ್ನು ಉಪಯೋಗಿಸಿ ವಿಶ್ಲೇಷಿಸಬಹುದು. ಉತ್ಪತ್ತಿ ಹೇಗೆ ವ್ಯವಸ್ಥೀಕರಿಸಲ್ಪಡುತ್ತದೆಂಬುದೇ ಪ್ರಜೆಗಳ ಜೀವನಗಳನ್ನು ಗಣನೀಯವಾಗಿ ಪ್ರಭಾವಿತಗೊಳಿಸುತ್ತದೆ.

ಪಾಠದ ರಚಯಿತ ರಾಂಪುರ (ಹೆಸರು ಬದಲಾಯಿಸಲಾಗಿದೆ) ಗ್ರಾಮಕ್ಕೆ ಹೋಗಿ ಅಲ್ಲಿನ ಎಲ್ಲಾ ಅಂಶಗಳನ್ನು ಆಳವಾಗಿ ಪರಿಶೀಲಿಸಿ ಆ ಗ್ರಾಮ ಕಥೆಯನ್ನು ಬರೆದಿದ್ದಾರೆ. ಈ ಅಧ್ಯಯನದ ನಂತರ ಅನೇಕ ಬಾರಿ ಈ ಗ್ರಾಮವನ್ನು ರಚಯಿತರು ಸಂದರ್ಶಿಸಿದ್ದಾರೆ. ಈ ವಿಧವಾಗಿ ಕಾಲಕ್ರಮದಲ್ಲಿ ಬಂದ ಬದಲಾವಣೆಗಳನ್ನು ಗಮನಿಸುತ್ತಿದ್ದರು. ಈ ಕಥೆಯನ್ನು ಓದುತ್ತಾ ರಾಂಪುರದಲ್ಲಿ ನೋಡಿದ ಅಂಶಗಳು ನಿಮ್ಮ ಪಟ್ಟಣಕ್ಕೂ ಸಹ ವರ್ತಿಸುತ್ತವೇ ಎನ್ನುವುದನ್ನು ನೀವು ಸಹ ಆಲೋಚಿಸಬಹುದು. ಪರಿಶೀಲಿಸಬಹುದು ಅಥವಾ ನಿಮ್ಮ ಊರಿನ ಪರಿಸ್ಥಿತಿ ಇದಕ್ಕೆ ಭಿನ್ನವಾಗಿದೆಯೋ? ಆದರೆ ಅದು ಯಾವ ವಿಧವಾಗಿ ಭಿನ್ನವಾಗಿದೆಯೋ ಆಲೋಚಿಸಿರಿ.

ಈ ಅಧ್ಯಾಯದಲ್ಲಿ ಆಗಾಗ ನಿಮ್ಮ ಊರಿನ ಸಂದರ್ಭವನ್ನು, ಭಾರತ ದೇಶದ ಪರಿಸ್ಥಿತಿಗಳ ಪ್ರಸ್ತಾವನೆ ಬರುತ್ತವೆ. ಉದಾಹರಣೆಗೆ ರಾಂಪುರದಲ್ಲಿ ಭೂಮಿ ಹಂಚಿಕೆ ಕುರಿತು ಚರ್ಚಿಸುವಾಗ ದೇಶದಲ್ಲೆಲ್ಲಾ ಇದು ಹೇಗೆಂಬುದನ್ನು ಕುರಿತು ಪರಿಶೀಲಿಸುತ್ತೇವೆ. ರಾಂಪುರದಲ್ಲಿ ಕೆಲವು ಪ್ರತ್ಯೇಕ ಅಂಶಗಳು ಇದ್ದರೂ ಅದರಲ್ಲಿರುವ ಅನೇಕ ಅಂಶಗಳು ಸ್ವಲ್ಪ ಬದಲಾವಣೆಯೊಂದಿಗೆ ದೇಶದಲ್ಲೆಲ್ಲಾ ಇವೆ. ಇವುಗಳನ್ನು ಸಹ ನಿಮ್ಮ ಪ್ರಾಂತದೊಂದಿಗೆ ಹೋಲಿಸಬಹುದು.

- ವ್ಯವಸಾಯವನ್ನು ಕುರಿತು ನಿಮಗೇನು ಗೊತ್ತು ? ವಿವಿಧ ಕಾಲಗಳಲ್ಲಿ ಬೆಳೆಗಳು ಹೇಗೆ ಬದಲಾಗುತ್ತಾ ಇರುತ್ತವೆ? ವ್ಯವಸಾಯದ ಮೇಲೆ ಆಧಾರಪಟ್ಟ ಅಧಿಕ ಜನರಿಗೆ ಭೂಮಿ ಇದೆಯಾ ಅಥವಾ ಅವರು ವ್ಯವಸಾಯ ಕೂಲಿಗಳಾ ?

ರಾಂಪುರದಲ್ಲಿ ವ್ಯವಸಾಯ

ಪಶ್ಚಿಮ ಉತ್ತರ ಪ್ರದೇಶದಲ್ಲಿನ ಫಲವತ್ತಾದ ಗಂಗಾ ಮೈದಾನದ ಒಂದು ಮಣ್ಣಿನಲ್ಲಿ ರಾಂಪುರವಿದೆ. ಪಂಜಾಬ್ ಹರ್ಯಾಣದ ಜೊತೆಗೆ ಪಶ್ಚಿಮ ಉತ್ತರ ಪ್ರದೇಶ ವ್ಯವಸಾಯ ದೃಷ್ಟಿಯಿಂದ ಶ್ರೀಮಂತವಾದ ಪ್ರಾಂತ, ಈ ಗ್ರಾಮಕ್ಕೆ ಸುತ್ತುಮುತ್ತ ಗ್ರಾಮ, ಪಟ್ಟಣಗಳೊಂದಿಗೆ ಒಳ್ಳೆಯ ಸಾರಿಗೆ ವ್ಯವಸ್ಥೆ ಇವೆ. ರಾಯಿ ಗಂಜ್ ಎನ್ನುವ ದೊಡ್ಡ ಊರು ರಾಂಪುರಕ್ಕೆ 3 ಕಿಲೋಮೀಟರ್ ದೂರದಲ್ಲಿದೆ. ಎಲ್ಲಾ ಕಾಲದಲ್ಲೂ ವಾಹನಗಳು ತಿರುಗುವ ರಸ್ತೆ. ರಾಯಿಗಂಜ್‌ನಿಂದ 12 ಕಿಲೋಮೀಟರ್ ದೂರದಲ್ಲಿರುವ ಜಹಾಂಗೀರ್‌ಬಾದ್‌ವರಿಗಿದೆ. ಈ ರಸ್ತೆಯ ಮೇಲೆ ಎತ್ತು ಬಂಡಿಯಿಂದ ಹಿಡಿದು ಜಟ್ಕಾಬಂಡಿ, ಬೋಗಿಗಳು (ಎಮ್ಮೆ ಕೋಣಗಳು ಎಳೆಯುವ ಕಟ್ಟಿಗೆ ಬಂಡಿ – ಬೆಲ್ಲ, ಮತ್ತು ಇತರ ಸಾಮಗ್ರಿಗಳನ್ನು ರವಾನಿಸುತ್ತವೆ) ಸೈಕಲ್ ಮೋಟರ್, ಜೀಪು, ಟ್ರ್ಯಾಕ್ಟರ್‌ಗಳು, ಲಾರಿಗಳು ಕಂಡು ಬರುತ್ತವೆ.



SCERT TELANGANA

ರಾಂಪುರದಲ್ಲಿ ವ್ಯವಸಾಯ ಮುಖ್ಯವಾದ ಉತ್ಪತ್ತಿ ಚಟುವಟಿಕೆ. ಶ್ರಮ ಜೀವಿಗಳಲ್ಲಿ ಹೆಚ್ಚಿನ ಭಾಗವನ್ನು ಜೀವನೋಪಾಧಿಗೆ ವ್ಯವಸಾಯದ ಮೇಲೆ ಆಧಾರಪಟ್ಟಿದ್ದಾರೆ. ಅವರು ರೈತರಾಗಬಹುದು. ವ್ಯವಸಾಯ ಕೂಲಿಗಳು ಆಗಬಹುದು. ಇವರ ಯೋಗಕ್ಷೇಮವು ವ್ಯವಸಾಯ ಕ್ಷೇತ್ರಗಳ ಉತ್ಪತ್ತಿ ಮೇಲೆ ಆಧಾರಪಟ್ಟಿದೆ.

ಭೂಮಿ, ಮತ್ತು ಇತರ ಸಹಜ ಸಂಪನ್ಮೂಲಗಳು

ವ್ಯವಸಾಯ ಉತ್ಪತ್ತಿಗೆ ಭೂಮಿ ಬಹಳ ಮುಖ್ಯವಾದ ಅಂಶ. ಆದರೆ ಸಾಗುವಳಿಯಲ್ಲಿರುವ ಭೂಮಿ ವಿಸ್ತೀರ್ಣ ಸಾಮಾನ್ಯವಾಗಿ ಸ್ಥಿರವಾಗಿರುತ್ತದೆ. ರಾಂಪುರದಲ್ಲಿ 1921 ರಿಂದ ಸಾಗುವಳಿ ಭೂಮಿಯ ವಿಸ್ತೀರ್ಣ ಹೆಚ್ಚಾಗಲಿಲ್ಲ. ಇದಕ್ಕೂ ಮೊದಲು ಸುತ್ತಮುತ್ತಲಿರುವ ಅಡವಿಗಳನ್ನು, ಊರಿನಲ್ಲಿರುವ ಬಂಜರು ಭೂಮಿಯನ್ನು ವ್ಯವಸಾಯ ಭೂಮಿಗಳಾಗಿ ಬದಲಾಯಿಸಿದ್ದಾರೆ. ಮತ್ತಷ್ಟು ಭೂಮಿಯನ್ನು ಹೊಸದಾಗಿ ಸಾಗುವಳಿಗೆ ತೆಗೆದುಕೊಂಡು ಬರುವುದರ ಮೂಲಕ ವ್ಯವಸಾಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಅವಕಾಶವಿಲ್ಲ.

ರಾಂಪುರದಲ್ಲಿ ಸ್ವಲ್ಪ ಭೂಮಿ ಕೂಡ ಖಾಲಿಯಿಲ್ಲ. ಮಳೆಗಾಲ (ಖರೀಫ್)ದಲ್ಲಿ ರೈತರು ಜೋಳ, ಸಜ್ಜೆ ಬೆಳೆಯುತ್ತಿದ್ದಾರೆ. ಆಹಾರ ಧಾನ್ಯಗಳ ಜೊತೆ ಇವುಗಳ ಸೌದೆ ದನಗಳಿಗೆ ಮೇವಾಗಿ ಉಪಯೋಗ ವಾಗುತ್ತದೆ. ತದನಂತರ ಅಕ್ಟೋಬರ್, ಡಿಸೆಂಬರ್ ತಿಂಗಳುಗಳ ಮಧ್ಯ ಆಲೂಗಡ್ಡೆ ಬೆಳೆಯನ್ನು ಬೆಳೆಸುತ್ತಾರೆ. ಚಳಿಗಾಲದಲ್ಲಿ (ರಭಿ) ಗೋಧಿ ಯನ್ನು ಬೆಳೆಸುತ್ತಾರೆ. ಈ ಬೆಳೆಯಲ್ಲಿ ಕುಟುಂಬಕ್ಕೆ ಬೇಕಾಗುವಷ್ಟು ಶೇಖರಣೆ ಮಾಡಿ, ಉಳಿದದ್ದನ್ನು ರಾಯಿಗಂಜ್‌ನಲ್ಲಿನ ಮಾರ್ಕೆಟ್ ಯಾರ್ಡ್‌ನಲ್ಲಿ ಮಾರುತ್ತಾರೆ. ಸ್ವಲ್ಪ ವಿಸ್ತೀರ್ಣದಲ್ಲಿ ಕಬ್ಬು ಸಾಗುವಳಿ ಮಾಡುತ್ತಾರೆ. ಇದು ವರ್ಷದ ಬೆಳೆ ನೇರವಾಗಿ ಕಬ್ಬಾಗಲಿ, ಅಥವಾ ಬೆಲ್ಲವನ್ನು ತಯಾರು ಮಾಡಿ ಸಮೀಪ ಪಟ್ಟಣವಾದ ಜಹಾಂಗೀರ್‌ಬಾದ್ ನಲ್ಲಿನ ವ್ಯಾಪಾರಸ್ಥರಿಗೆ ಮಾರುತ್ತಾರೆ.

ಭೂಮಿಯನ್ನು ಅಳೆಯುವುದು

ಭೂಮಿಯನ್ನು ಅಳೆಯುವುದಕ್ಕೆ ಹೆಕ್ಟಾರನ್ನು (ಎರಡುವರೆ ಎಕರೆ) ಪ್ರಾಮಾಣಿಕ ಕಾಲಮಾನವಾಗಿ ಉಪಯೋಗಿಸುತ್ತಾರೆ. ಆದರೆ ಗ್ರಾಮದಲ್ಲಿ ಎಕರೆಗಳು, ಸೆಂಟುಗಳು, ಗುಂಟೆನಂತಹ ಸ್ಥಾನಿಕ ಅಳತೆ ಮಾನಗಳಿವೆ. ಒಂದು ಹೆಕ್ಟೇರು ಎಂದರೆ 10,000 ಚದರ ಮೀಟರ್. ಒಂದು ಹೆಕ್ಟೇರ್ ಕ್ಷೇತ್ರವನ್ನು ನಿಮ್ಮ ಪಾಠಶಾಲೆ ಮೈದಾನದೊಂದಿಗೆ ಹೋಲಿಸಿರಿ. ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ.

ಒಂದೇ ವಿಸ್ತೀರ್ಣದಲ್ಲಿ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ಸಾಗು ಮಾಡುವುದನ್ನು ಬಹುಳ ಬೆಳೆಗಳ ಸಾಗುವಳಿ ಎನ್ನುವರು. ಭೂಮಿ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಇದು ಅತ್ಯಂತ ಸಾಮಾನ್ಯವಾದ ಪದ್ಧತಿ. ರಾಂಪುರದಲ್ಲಿ ರೈತರೂ ಕನಿಷ್ಠವೆಂದರೆ ಎರಡು ಮುಖ್ಯ ಬೆಳೆಯನ್ನು ಬೆಳೆಸುತ್ತಾರೆ. ಅವರಲ್ಲಿ ಬಹಳ ಜನ ಮೂರನೆಯ ಬೆಳೆಯಾಗಿ ಆಲುಗಡ್ಡೆಯನ್ನು ಬೆಳೆಸುತ್ತಾರೆ.

ರಾಂಪುರದಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿದ ನೀರಾವರಿ ಸೌಕರ್ಯವಿರುವುದರಿಂದ ರೈತರು ವರ್ಷದಲ್ಲಿ ಮೂರು ಬೆಳೆ ಬೆಳೆಸುತ್ತಾರೆ. ರಾಂಪುರಕ್ಕೆ ಬಹಳ ದಿನಗಳ ಹಿಂದಿನಿಂದ ವಿದ್ಯುತ್ ಸೌಲಭ್ಯವಿದೆ. ಇದರಿಂದ ನೀರಾವರಿ ವ್ಯವಸ್ಥೆಯ ಕಾರ್ಯಕ್ಷೇತ್ರದಲ್ಲಿ ಬದಲಾವಣೆ ಹೊಂದಿದವು. ಅಲ್ಲಿಯವರಿಗೆ ರೈತರು ಬಾವಿಗಳಿಂದ ನೀರನ್ನು ಮೇಲಕ್ಕೆತ್ತಲು ಪರ್ಶಿಯನ್ ವೀಲ್ ಎನ್ನುವ ಸಾಧನವನ್ನು ಉಪಯೋಗಿಸಿ ನೀರಾವರಿ ಅಡಿಯಲ್ಲಿ ಬಹಳ ಕಡಿಮೆ ವಿಸ್ತೀರ್ಣವನ್ನು ಸಾಗುಮಾಡುತ್ತಿದ್ದರು. ವಿದ್ಯುತ್‌ನಿಂದ ನಡೆಯುವ ಬೋರು ಬಾವಿಗಳ ಮೂಲಕ ಸುಲಭವಾಗಿ ಹೆಚ್ಚು ವಿಸ್ತೀರ್ಣಕ್ಕೆ ಸಾಗುನೀರನ್ನು ಒದಗಿಸಬಹುದೆಂದು ರೈತರು ಗುರ್ತಿಸಿದರು. ಅಂದಾಜು 50 ವರ್ಷಗಳ ಹಿಂದೆ ಮೊದಲು ಬೋರು ಬಾವಿಗಳನ್ನು ಸರ್ಕಾರವು ಏರ್ಪಡಿಸಿತು. ಅನಂತರ ರೈತರು ಸ್ವಂತ ಖರ್ಚಿನಿಂದ ಬೋರು ಬಾವಿಗಳನ್ನು ಏರ್ಪಡಿಸಿ ಕೊಂಡರು. ಇದರ ಪರಿಣಾಮವಾಗಿ 1970 ದಶಾಬ್ದದ ಮಧ್ಯಕಾಲಕ್ಕೆ 264 ಹೆಕ್ಟೇರುಗಳ ವ್ಯವಸಾಯ ಭೂಮಿ ನೀರಾವರಿ ಭೂಮಿಯ ಅಡಿಯಲ್ಲಿ ಬಂದಿತು.

ಭಾರತ ದೇಶದಲ್ಲಿ ಎಲ್ಲಾ ಗ್ರಾಮಗಳಿಗೆ ಇಂತಹ ನೀರಾವರಿ ಸೌಲಭ್ಯವಿಲ್ಲ. ದೇಶದಲ್ಲಿನ ನದಿ ಮೈದಾನಗಳು, ತೀರ ಪ್ರಾಂತಗಳಲ್ಲಿ ಮಾತ್ರವೇ ನೀರಾವರಿ ಸೌಲಭ್ಯಗಳು ಉತ್ತಮವಾಗಿವೆ. ಇದಕ್ಕೆ ವಿರುದ್ಧವಾಗಿ ದಕ್ಷಿಣ ಪ್ರಸ್ಥ ಭೂಮಿಯಂತ ಪ್ರಸ್ಥಭೂಮಿ ಪ್ರಾಂತಗಳಲ್ಲಿ ನೀರಾವರಿ ಸೌಲಭ್ಯಗಳು ಕಡಿಮೆ. ಈಗಲೂ ಸಹ ದೇಶದಲ್ಲಿಯೇ ಸಾಗುವಳಿ ವಿಸ್ತೀರ್ಣದಲ್ಲಿ 40 ರಿಂತ ಕಡಿಮೆ ವಿಸ್ತೀರ್ಣಕ್ಕೆ ನೀರಾವರಿ ಸೌಲಭ್ಯವಿದೆ. ಉಳಿದ ಪ್ರಾಂತಗಳಲ್ಲಿ ವ್ಯವಸಾಯವು

SCERT TELANGANA

- ಅಟ್ಲಾಸನ್ನು ನೋಡಿ ಚೆನ್ನಾಗಿ ನೀರಾವರಿ ಸೌಲಭ್ಯವಿರುವ ಪ್ರಾಂತಗಳನ್ನು ಗುರ್ತಿಸಿರಿ. ನೀವು ವಾಸಿಸುತ್ತಿರುವ ಪ್ರಾಂತ ಇದರ ಕೆಳಗೆ ಬರುತ್ತದೆಯೇ?

ಮುಖ್ಯವಾಗಿ ಮಳೆಯಾಧಾರವಾಗಿದೆ. ಭಾರತ ದೇಶದಲ್ಲಿಯೇ ವಿವಿಧ ಭೌಗೋಳಿಕ ಪ್ರಾಂತಗಳನ್ನು ಬೆಳೆಯಲು 1 ನೆಯ ಪಾಠವನ್ನು ನೋಡಿರಿ.

ಭೂಮಿ, ನೀರು ಇಂತಹ ಸಹಜ ಸಂಪನ್ಮೂಲಗಳು ಹೆಚ್ಚಾಗಿ ಉಪಯೋಗಿಸುವುದರಿಂದ ಇಳುವರಿ, ಉತ್ಪತ್ತಿ ಹೆಚ್ಚಾಗಿವೆ. ಆದರೆ ಈ ಸಹಜ ಸಂಪನ್ಮೂಲಗಳನ್ನು ಎಲ್ಲಾ ಸಂದರ್ಭಗಳಲ್ಲಿ ಸರಿಯಾದ ಪದ್ಧತಿಯಲ್ಲಿ ಬೆಳೆಸಿದ್ದಾರೆಂದು ಹೇಳಲಿಕ್ಕಾಗದು. ರಸಾಯನಿಕ ಗೊಬ್ಬರಗಳು, ಕ್ರಿಮಿ ಸಂಹಾರಕಗಳನ್ನು ಅಧಿಕವಾಗಿ, ಇಷ್ಟಾನುಸಾರವಾಗಿ ಬಳಸಿದ್ದರಿಂದ ಭೂಮಿಯ ಫಲವತ್ತತೆ ಕಡಿಮೆಯಾಗುತ್ತದೆ ಎಂದು ನಮ್ಮ ಅನುಭವಗಳ ಮೂಲಕ ತಿಳಿಯುತ್ತದೆ. ನೀರಿನ ಪರಿಸ್ಥಿತಿ ಸಹ ಅಷ್ಟೇ ಕಳವಳ ಉಂಟುಮಾಡುತ್ತದೆ. ರಾಂಪುರ ಗ್ರಾಮ ಮಾದರಿಯ ಹಾಗೆ ಭಾರತ ದೇಶದಲ್ಲೆಲ್ಲಾ ನೀರಾವರಿಗೆ ಮುಖ್ಯವಾಗಿ ಅಂತರ್ಜಲ ಮೇಲೆಯೇ ಆಧಾರಪಟ್ಟಿದ್ದಾರೆ. ಇದರ ಫಲಿತವಾಗಿ ದೇಶದಲ್ಲೆಲ್ಲಾ ಅಂತರ್ಜಲಗಳ ಮಟ್ಟಗಳು ಗಣನೀಯವಾಗಿ ಕಡಿಮೆಯಾಗುತ್ತಿವೆ. ಮಳೆಗಳು ಬಿದ್ದು, ಮಳೆಯ ನೀರು ಮಣ್ಣಿನೊಳಗೆ ಹಿಂಗಲು ಸುಲಭವಾಗಿರುವ ಪ್ರಾಂತಗಳಲ್ಲಿ ಸಹ ಅಂತರ್ಜಲಗಳು ಬಹಳ ಪ್ರಮಾದಕರ ಸ್ಥಾಯಿಗೆ ತಲುಪುತ್ತವೆ. ಅಂತರ್ಜಲಗಳ ಮಟ್ಟ ಕಡಿಮೆಯಾಗುತ್ತಿದ್ದರೆ ರೈತರು ಮೊದಲಿಗಿಂತ ಆಳವಾಗಿ ಬೋರು ಬಾವಿಗಳನ್ನು ತೋಡಬೇಕಾಗಿದೆ ಇದರಿಂದ ಸಾಗು ನೀರಿಗೆ ಡೀಸೆಲ್/ ವಿದ್ಯುತ್ ವಿನಿಯೋಗ ಸಹ ಹೆಚ್ಚಾಗುತ್ತದೆ. ಈ ಅಂಶಗಳನ್ನು ಸುಸ್ಥಿರತೆ, ನೀರು ಸಂಪನ್ಮೂಲಗಳು ಅಧ್ಯಾಯದಲ್ಲಿ ಮತ್ತಷ್ಟು ವಿವರವಾಗಿ ತಿಳಿದುಕೊಳ್ಳೋಣ.

- ಕೆಳಗಿನ ಪಟ್ಟಿಯು ಭಾರತ ದೇಶದಲ್ಲಿ ಸಾಗುವಳಿಗೆ ಇರುವ ಭೂಮಿ ಯನ್ನು ಮಿಲಿಯನ್ ಹೆಕ್ಟಾರ್ ಗಳಲ್ಲಿ ತೋರಿಸುತ್ತದೆ. ಪಕ್ಕದಲ್ಲಿರುವ ಗ್ರಾಫ್‌ನಲ್ಲಿ ಇವುಗಳ ನಕ್ಷೆ ಬರೆಯಿರಿ. ಗ್ರಾಫ್ ಏನು ತಿಳಿಯಪಡಿಸುತ್ತದೆ? ತರಗತಿಯ ಕೊಠಡಿಯಲ್ಲಿ ಚರ್ಚಿಸಿರಿ.

ಗ್ರಾಫ್ - 1



ವರ್ಷಗಳು	ಸಾಗುವಳಿ ವಿಸ್ತೀರ್ಣ (ಮಿಲಿಯನ್ ಹೆಕ್ಟೇರುಗಳಲ್ಲಿ)
1950	120
1960	130
1970	140
1980	140
1990	140
2000	140
2010	140
2015	140

- ರಾಂಪುರದಲ್ಲಿ ಬೆಳೆಸಿದ ಬೆಳೆಗಳನ್ನು ಕುರಿತು ತಿಳಿದುಕೊಂಡಿದ್ದೀರಿ. ನಿಮ್ಮ ಪ್ರಾಂತದಲ್ಲಿ ಬೆಳೆಸುವ ಬೆಳೆಗಳ ಆಧಾರವಾಗಿ ಕೆಳಗಿನ ಪಟ್ಟಿಯನ್ನು ನೋಡಿರಿ.

ಬೆಳೆಯ ಹೆಸರು	ಬೀಜಗಳನ್ನು ಬಿತ್ತಿದ ತಿಂಗಳು	ಬೆಳೆ ಕಟಾವು ಮಾಡಿದ ತಿಂಗಳು	ನೀರು/ ನೀರಾವರಿ ಸಂಪನ್ಮೂಲ (ಮಳೆ, ಕರೆಗಳು, ಕೊಳವೆ ಬಾವಿಗಳು, ಕಾಲುವೆಗಳು ಮೊದಲಾದವು)

- ಗ್ರಾಮೀಣ ಪ್ರಾಂತದಲ್ಲಿ 'ಬಹುಳಜಾತಿ ಬೆಳೆ' ಗಳನ್ನು ಬೆಳೆಸಲು ಸಹಾಯಕವಾಗುವ ಕಾರಣಗಳಾವುವು?

SCERT TELANGANA

ರಾಂಪುರದಲ್ಲಿ ಭೂ ಹಂಚಿಕೆ :

ವ್ಯವಸಾಯಕ್ಕೆ ಭೂಮಿ ಎಷ್ಟು ಮುಖ್ಯವಾದುದೋ ನೀವು ಗಮನಿಸಿರುತ್ತೀರಿ. ದುರದೃಷ್ಟವೇನೆಂದರೆ ವ್ಯವಸಾಯದಲ್ಲಿ ತೊಡಗಿಸಿದವರಿಗೆಲ್ಲಾ ಸಾಗುವಳಿ ಮಾಡುವುದಕ್ಕೆ ಭೂಮಿಯ ಕೊರತೆ ಇದೆ. ರಾಂಪುರ ಜನಸಂಖ್ಯೆ 2660. ಅಲ್ಲಿ ವಿವಿಧ ಕುಲಕ್ಕೆ ಸೇರಿದ 450 ಕುಟುಂಬಗಳಿವೆ. ಗ್ರಾಮದಲ್ಲಿನ ಅಧಿಕ ಭೂಮಿ ಉನ್ನತ ಕುಲದವರ ಕೈಯಲ್ಲಿದೆ. ಅವರ ಮನೆಗಳು ಕೆಲವು ಬಹಳ ದೊಡ್ಡ ಇಟ್ಟಿಗೆ, ಸಿಮೆಂಟಿನಿಂದ ನಿರ್ಮಿಸಿದವು. ಜನಸಂಖ್ಯೆಯಲ್ಲಿ ಮೂರು ಭಾಗ ಪರಿಶಿಷ್ಟ ಜಾತಿಯವರು (ದಲಿತರು) ಇದ್ದಾರೆ. ಇವರ ಮನೆಗಳು ಊರಿಗೆ ದೂರದಲ್ಲಿ, ಒಂದು ಮೂಲೆಯಲ್ಲಿದ್ದು, ಮನೆಗಳು ಬಹಳ ಚಿಕ್ಕವಾಗಿರುತ್ತವೆ. ಮನೆಯಲ್ಲಿ ಸ್ವಲ್ಪ ಭಾಗ ಜೋಪಡಿಯಾಗಿರುತ್ತದೆ.

ರಾಂಪುರದಲ್ಲಿ ಮೂರರಲ್ಲಿ ಒಂದು ಭಾಗ ಎಂದರೆ 150 ಕುಟುಂಬಗಳಿಗೆ ಭೂಮಿಯಿಲ್ಲ. ಭೂಮಿ ಇಲ್ಲದವರಲ್ಲಿ ಹೆಚ್ಚು ಭಾಗ ದಲಿತರೆ ಎರಡು ಹೆಕ್ಟೇರಿಗಿಂತ ಹೆಚ್ಚು ಭೂಮಿಯಿರುವ ದೊಡ್ಡ,ಮಧ್ಯ ತರಗತಿ ಕುಟುಂಬಗಳು 60 ರವರಿಗಿವೆ. ದೊಡ್ಡ ರೈತರಲ್ಲಿ ಸ್ವಲ್ಪ ಜನಕ್ಕೆ 10 ಹೆಕ್ಟೇರುಗಳಿಗಿಂತ ಹೆಚ್ಚು ಸಾಗುವಳಿ ಭೂಮಿಯಿದೆ. ಎರಡು ಹೆಕ್ಟೇರ್‌ಗಳಿಗಿಂತ ಕಡಿಮೆ ಭೂಮಿ ಸಾಗುವಳಿ ಮಾಡುವ ಕುಟುಂಬಗಳು 240 ಇವೆ. ಸಣ್ಣ ರೈತರಿಗೆ ವ್ಯವಸಾಯದ ಮೂಲಕ ಕುಟುಂಬಕ್ಕೆ ಸರಿಹೋಗುವಷ್ಟು ಆದಾಯ ಬರುವುದಿಲ್ಲ.

*1960*ರಲ್ಲಿ ಗೋವಿಂದ ಎನ್ನುವ ರೈತನಿಗೆ *2.25* ಹೆಕ್ಟೇರು ಭೂಮಿ ಇತ್ತು. ಆಗ ಅದಕ್ಕೆ ನೀರಾವರಿ ಸೌಲಭ್ಯ ಇರಲಿಲ್ಲ. ಮೂರು ಜನ ಮಕ್ಕಳ ಸಹಾಯದಿಂದ ಗೋವಿಂದ ವ್ಯವಸಾಯ ಮಾಡುತ್ತಿದ್ದನು. ಭೋಗ ಭಾಗ್ಯಗಳು ಇಲ್ಲದಿದ್ದರೂ ಕುಟುಂಬಕ್ಕೆ ಇರುವ ಒಂದು ಎಮ್ಮೆಯಿಂದ ಬರುವ ಹೆಚ್ಚಿನ ಆದಾಯದಿಂದ ಸರಿಹೋಗುವಷ್ಟು ಆಹಾರವನ್ನು ಪಡೆಯುತ್ತಿದ್ದರು. ಕೆಲವು ವರ್ಷಗಳಲ್ಲಿ ಗೋವಿಂದ ಮರಣ ಹೊಂದಿದರಿಂದ ಮೂರು ಜನ ಮಕ್ಕಳು ಭೂಮಿ ಯನ್ನು ಹಂಚಿಕೊಂಡರು. ಈಗ ಒಬ್ಬೊಬ್ಬರಿಗೆ *0.75* ಹೆಕ್ಟೇರು ಭೂಮಿ ಮಾತ್ರ ಇದೆ. ಉತ್ತಮ ವಾದ ನೀರಾವರಿ ಸೌಲಭ್ಯ, ಆಧುನಿಕ ವ್ಯವಸಾಯ ಪದ್ದತಿಯಿಂದ ಸಹ ಗೋವಿಂದನ ಮಕ್ಕಳಿಗೆ ಭೂಮಿಯಿಂದ ಕುಟುಂಬ ಸೌಕರ್ಯಗಳು ಪೂರ್ತಿಯಾಗಿ ತೀರಿಸಲಾಗುತ್ತಿಲ್ಲ. ವರ್ಷದಲ್ಲಿ ಕೆಲವು ತಿಂಗಳು ಅವರು ಇತರ ಕೆಲಸಗಳನ್ನು ಕೈಗೊಳ್ಳಬೇಕಾಗುತ್ತದೆ.

ಪಕ್ಕದ ಚಿತ್ರದಲ್ಲಿ ತೆಲಂಗಾಣ ರಾಜ್ಯದ ಒಂದು ಗ್ರಾಮಕ್ಕೆ ಸಂಬಂಧಿಸಿದ ಬೇರೆ ಬೇರೆ ಪರಿಮಾಣಗಳ (ವಿಸ್ತೀರ್ಣದ) ಸಾಗುವಳಿ ಭೂಮಿ ಮತ್ತು ಅಧಿಕ ಸಂಖ್ಯೆಯಲ್ಲಿನ ಚಿಕ್ಕ ಸಾಗುವಳಿ ಭೂಮಿಗಳನ್ನು ನೋಡಬಹುದು.



ಚಿತ್ರ -1 ತೆಲಂಗಾಣದಲ್ಲಿನ ಒಂದು ಗ್ರಾಮದಲ್ಲಿ ಸಾಗುವಳಿ ಭೂಮಿಯ ಹಂಚಿಕೆ

SCERT TELANGANA

- ಚಿತ್ರ 1 ರಲ್ಲಿ ಸಣ್ಣ ರೈತರು ಸಾಗುವಳಿ ಮಾಡುವ ಭೂಮಿಯನ್ನು ಗುರ್ತಿಸಿ ಬಣ್ಣ ತುಂಬಿರಿ.
- ಅನೇಕ ಜನ ರೈತರು ಬಹಳ ಸಣ್ಣ ಭೂ ಹಿಡುವಳಿಯನ್ನು ಏತಕ್ಕಾಗಿ ಸಾಗುವಳಿ ಮಾಡುತ್ತಿದ್ದಾರೆ ?
- ಭಾರತ ದೇಶದಲ್ಲಿ ರೈತರು, ಅವರು ಸಾಗುವಳಿ ಮಾಡುವ ಭೂಮಿಗಳ ವಿವರಗಳು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಮೇಲೆ ಚಾರ್ಟ್‌ನಲ್ಲಿ ಸಹ ಇದೆ.

ರೈತರ ವಿಧಗಳು	ಸಾಗುವಳಿ ಭೂಮಿ ವಿಸ್ತೀರ್ಣ	ರೈತರ ಶೇಕಡ	ಸಾಗುವಳಿ ಭೂಮಿಯ ಶೇಕಡ
ಸಣ್ಣ ರೈತರು	2 ಹೆಕ್ಟಾರುಗಿಂತ ಕಡಿಮೆ	87%	48%
ಮಧ್ಯತರಗತಿ ದೊಡ್ಡ ರೈತರು	2 ಹೆಕ್ಟಾರುಗಿಂತ ಹೆಚ್ಚು	13%	52%

ಸೂಚನೆ : ಈ ಗಣಾಂಕಗಳು ರೈತರ ಸಾಗುವಳಿ ಮಾಡುತ್ತಿರುವ ವಿವರಗಳನ್ನು ತಿಳಿಯಪಡಿಸುತ್ತವೆ. ಈ ಭೂಮಿ ಸ್ವತಃದಿಂದರಬಹುದು ಅಥವಾ ಗೇಣಿಗೆ ತೆಗೆದುಕೊಂಡದ್ದು ಆಗಬಹುದು.

- ಬಾಣದ ಗುರ್ತುಗಳು ಏನು ಸೂಚಿಸುತ್ತವೆ? ಭಾರತ ದೇಶದಲ್ಲಿ ಸಾಗುವಳಿ ಭೂಮಿ ಹಂಚಿಕೆಯಲ್ಲಿ ಅಸಮಾನತೆಗಳು ಇವೆ ಎಂದು ನೀವು ಒಪ್ಪಿಕೊಳ್ಳುತ್ತೀರಾ? ನಿಮ್ಮ ಉತ್ತರಕ್ಕೆ ವಿವರಣೆ ಕೊಡಿರಿ.

ರೈತರ ವಿಧಗಳು

ಗ್ರಾಫ್ **2** ರೈತರು ಸಾಗುವಳಿ ಮಾಡುತ್ತಿರುವ ಭೂಮಿ ಹಂಚಿಕೆ



ಉತ್ಪತ್ತಿ ನಿರ್ವಹಣೆ

ರಾಂಪುರದಲ್ಲಿ ಉತ್ಪತ್ತಿ ಕ್ರಿಯೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಿಸೋಣ.

ಪ್ರಜೆಗಳಿಗೆ ಅವಸರವಾದ ವಸ್ತು, ಸೇವೆಗಳನ್ನು ಸಲ್ಲಿಸುವುದೇ ಉತ್ಪತ್ತಿಯ ಉದ್ದೇಶ. ವಸ್ತುಗಳು ಅಥವಾ ಸೇವೆಗಳನ್ನು ಉತ್ಪತ್ತಿಮಾಡುವುದಕ್ಕಾಗಿ ಉತ್ಪತ್ತಿದಾರರಿಗೆ ಅನೇಕ ವಸ್ತುಗಳು ಬೇಕಾಗುತ್ತವೆ. ಇವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

ಮೊದಲನೆಯದಾಗಿ ಭೂಮಿ, ನೀರು, ಅಡವಿಗಳು, ಖನಿಜ ಲವಣಗಳಂತಹ ಸಹಜ ಸಂಪನ್ಮೂಲಗಳು ಬೇಕು. ರಾಂಪುರದಲ್ಲಿ ವ್ಯವಸಾಯಕ್ಕೆ ಭೂಮಿಯನ್ನು, ನೀರನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆಂಬುದನ್ನು ಮೇಲೆ ತಿಳಿದುಕೊಂಡಿದ್ದೇವೆ.

ಎರಡನೆಯದು ಕಾರ್ಮಿಕರು, ಎಂದರೆ ಕೆಲಸ ಮಾಡುವವರು ಬೇಕು. ಕೆಲವು ಉತ್ಪತ್ತಿ ಚಟುವಟಿಕೆಗಳಿಗೆ ಅವಶ್ಯಕವಿರುವ ಕೆಲಸಗಳನ್ನು ಮಾಡುವುದಕ್ಕೆ ಚೆನ್ನಾಗಿ ಓದಿಕೊಂಡ, ಸಾಮರ್ಥ್ಯಗಳಿರುವ ಕಾರ್ಮಿಕರು ಬೇಕಾಗುತ್ತದೆ. ಉಳಿದ ಕೆಲಸಗಳಿಗೆ ಶಾರೀರಿಕ (ದೈಹಿಕ) ಶ್ರಮಮಾಡುವ ಕಾರ್ಮಿಕರು ಬೇಕು. ಪ್ರತಿ ಕಾರ್ಮಿಕನು ಉತ್ಪತ್ತಿಗೆ ಅವಸರವಾದ ಶಕ್ತಿಯನ್ನು ಸಲ್ಲಿಸುತ್ತಾನೆ. ಸಾಮಾನ್ಯ ಬಳಕೆಯಲ್ಲಿರುವುದಕ್ಕಿಂತ ಭಿನ್ನವಾಗಿ ಶ್ರಮವೆಂದರೆ ಕೇವಲ ಶಾರೀರಿಕ ಶ್ರಮವಲ್ಲದೆ ಉತ್ಪತ್ತಿಗೆ ಅವಸರವಾದ ಮಾನವನ ಪ್ರಯತ್ನಗಳೆಲ್ಲವನ್ನು ಅದು ಸೂಚಿಸುತ್ತದೆ. ಉದಾಹರಣೆಗೆ ಒಬ್ಬ ಇಂಜಿನೀಯರು, ಒಬ್ಬ ಮೇನೇಜರ್, ಒಬ್ಬ ಅಕೌಂಟೆಂಟ್, ಒಬ್ಬ ಸೂಪರ್‌ವೈಜರ್, ಒಬ್ಬ ಯಂತ್ರ ಆಪರೇಟರ್, ಒಬ್ಬ ಸೇಲ್ಸ್ ರಿಪ್ರೆಜೆಂಟಿಟಿವ್, ಒಬ್ಬ ದಿನಗೂಲಿ ಆಗಬಹುದು ಇವರೆಲ್ಲರೂ ಒಂದು ವಸ್ತುವನ್ನು ತಯಾರು ಮಾಡಿ, ಮಾರುವುದರಲ್ಲಿ ಕಾರ್ಖಾನೆಗಳಿಗೆ ಶ್ರಮವನ್ನು ಸಲ್ಲಿಸುತ್ತಿದ್ದಾರೆ.

SCERT TELANGANA

ಮೂರನೆಯದು ಬಂಡವಾಳ ಎಂದರೆ ಉತ್ಪತ್ತಿಯ ಎಲ್ಲಾ ಹಂತದಲ್ಲಿ ಅವಶ್ಯಕವಾದ ವಸ್ತುಗಳು ಬಂಡವಾಳದ ಕೆಳಗೆ ಏನೇನು ಬರುತ್ತವೆ?

(ಅ) ಉಪಕರಣಗಳು, ಯಂತ್ರಗಳು, ಭವನಗಳು : ರೈತನು ಉಪಯೋಗಿಸುವ ನೇಗಿಲಿಗಳಿಂದ ಹಿಡಿದು ಪ್ರಾರಂಭವಾಗಿ ಜನರೇಟುಗಳು, ಟರ್ಬೈನ್‌ಗಳು, ಕಂಪ್ಯೂಟರ್‌ನಿಂದ ನಡೆಯುವ ಯಂತ್ರಗಳಂತಹ ಅತ್ಯಂತ ಸಂಕ್ಲಿಷ್ಟವಾದ ಯಂತ್ರಗಳಿರಬಹುದು. ಇವು ಉತ್ಪತ್ತಿ ಪ್ರಕ್ರಿಯೆಯಲ್ಲಿ ಕೊನೆಗೊಳ್ಳುವುದಿಲ್ಲ. ಅನೇಕ ವರ್ಷಗಳವರೆಗೆ ಇವು ವಸ್ತುಗಳ ಉತ್ಪತ್ತಿಯಲ್ಲಿ ಉಪಯೋಗ ಪಡುತ್ತವೆ. ಹೀಗೆ ವರ್ಷದುದ್ದಕ್ಕೂ ಉಪಯೋಗಪಡುವುದಕ್ಕಾಗಿ ಅವುಗಳನ್ನು ಸ್ವಲ್ಪ ರಿಪೇರಿ, ನಿರ್ವಹಣೆ ಮಾಡುವುದು ಅಗತ್ಯ. ಇವುಗಳನ್ನು ಸ್ಥಿರ ಬಂಡವಾಳ ಅಥವಾ ಭೌತಿಕ ಬಂಡವಾಳ ಎನ್ನುತ್ತಾರೆ. ಆದರೆ ಅನೇಕ ವರ್ಷಗಳು ಉಪಯೋಗಿಸಿದ ನಂತರ ಎಲ್ಲಾ ಯಂತ್ರಗಳನ್ನು ತೆಗೆದು ಹಾಕಿ ಹೊಸ ಯಂತ್ರಗಳನ್ನು ಬದಲಾಯಿಸಿಕೊಳ್ಳಬೇಕು. ಹಾಗೆ ಬದಲಾಯಿಸಿದ ಪ್ರತಿಸಲವೂ ಉತ್ತಮವಾದ ಹೊಸ ಉಪಕರಣಗಳು, ಯಂತ್ರಗಳು ಬರುತ್ತವೆ.

(ಆ) ಅವಶ್ಯಕವಿರುವ ಕಚ್ಚಾ ಪದಾರ್ಥಗಳು ಹಣ : ಉತ್ಪತ್ತಿ ಪ್ರಕ್ರಿಯೆಯಲ್ಲಿ ನೇಕಾರ ಕೆಲಸದಲ್ಲಿ ಉಪಯೋಗಿಸುವ ದಾರ , ಗಡಿಗೆ ತಯಾರಿಸುವಲ್ಲಿ ಬಳಸುವ ಮಣ್ಣು ಕಚ್ಚಾ ಪದಾರ್ಥಗಳು ಎನ್ನುತ್ತಾರೆ. ಅದೇರೀತಿ ಅಗತ್ಯವಾದ ಕೆಲವು ಪದಾರ್ಥಗಳನ್ನು ಕೊಳ್ಳುವುದಕ್ಕೆ, ಉತ್ಪತ್ತಿ ಪೂರ್ತಿಮಾಡುವುದಕ್ಕೆ ಬೇಕಾದ ಹಣ ಅಗತ್ಯವಾಗುತ್ತದೆ. ಉತ್ಪತ್ತಿ ಪೂರ್ತಿ ಮಾಡುವುದಕ್ಕೆ, ಆ ವಸ್ತು, ಸೇವೆಗಳನ್ನು ಮಾರ್ಕೆಟ್‌ನಲ್ಲಿ ಮಾರುವುದಕ್ಕಾಗಿ ಸ್ವಲ್ಪ ಸಮಯವಿಡಿಯುತ್ತದೆ. ಅನಂತರ ಉತ್ಪತ್ತಿ ಪ್ರಕ್ರಿಯೆಗೆ ಹಣ ತಿರುಗಿ ಬರುತ್ತದೆ. ಕಚ್ಚಾ ಪದಾರ್ಥ, ಹಣ ಈ ಅಗತ್ಯಗಳನ್ನು ನಿರ್ವಾಹಕನು ಬಂಡವಾಳ ಎನ್ನುತ್ತಾರೆ. ಯಂತ್ರ, ಸಾಮಗ್ರಿ, ಭವನಗಳಂತಹ ಭೌತಿಕ ಬಂಡವಾಳಕ್ಕೆ ಇದು ಭಿನ್ನವಾದುದು. ಉತ್ಪತ್ತಿ ಪ್ರಕ್ರಿಯೆಯಲ್ಲಿ ಇವು ಪೂರ್ತಿಯಾಗಿ ವಿನಿಯೋಗಿಸಲ್ಪಟ್ಟು ಕೊನೆಗೆ ಉಳಿಯುವುದಿಲ್ಲ.

ನಾಲ್ಕನೆಯದು ತಾಂತ್ರಿಕ ಪರಿಜ್ಞಾನ ಮತ್ತು ವ್ಯಾಪಾರದಕ್ಷತೆ: ಭೂಮಿ, ಶ್ರಮ, ಭೌತಿಕ ಬಂಡವಾಳ ಉಪಯೋಗಿಸಿಕೊಂಡು ವಸ್ತುಗಳನ್ನು ಅಥವಾ ಸೇವೆಗಳನ್ನು ಉತ್ಪತ್ತಿ ಮಾಡುವುದಕ್ಕಾಗಿ ಉತ್ಪತ್ತಿ ಕ್ರಿಯೆಗೆ ಸಂಬಂಧಿಸಿದ ಜ್ಞಾನವೂ, ಆತ್ಮ ವಿಶ್ವಾಸವೂ ಅವಶ್ಯ. ಭೌತಿಕ ಬಂಡವಾಳವಿರುವವರು, ಅಥವಾ ನೇಮಿಸಿಕೊಂಡ ಮೇನೇಜರ್‌ಗಳು ಈ ಪ್ರಕ್ರಿಯೆಯಲ್ಲಿ ಸಹಾಯವಾಗುತ್ತಾರೆ. ಯಜಮಾನರು ,ಮಾರ್ಕೆಟ್‌ನಲ್ಲಿ ಎದುರಾಗುವ ತೊಂದರೆಗಳನ್ನು ಎದುರಿಸಬೇಕು, ಎಂದರೆ ಉತ್ಪತ್ತಿ ಮಾಡಿದ ವಸ್ತುಗಳು, ಸೇವೆಗಳಿಗೆ ಸರಿಹೋಗದ ಕೊಳ್ಳುವವರು ಇರಬಹುದು, ಇಲ್ಲದೇ ಇರಬಹುದು. ನಾವು ಸಮಾಜದಲ್ಲಿ ಬಹಳಮಟ್ಟಿಗೆ ವಸ್ತುಗಳ, ಸೇವೆಗಳನ್ನು ಮಾರುಕಟ್ಟೆಯಲ್ಲಿ ಮಾರುವುದಕ್ಕಾಗಿ ಉತ್ಪತ್ತಿಮಾಡುತ್ತಾರೆ. ಆದ್ದರಿಂದ ಮಾರುಕಟ್ಟೆಯ ಸಲುವಾಗಿ ಉತ್ಪತ್ತಿ ಮಾಡುವ ವ್ಯಾಪಾರಸ್ಥರು ಯೋಜನೆಗಳನ್ನು ತಯಾರಿಸಿಕೊಂಡು, ಎಲ್ಲವನ್ನು ಏರ್ಪಾಟು ಮಾಡಿಕೊಂಡು, ಅವನ್ನು ನಿರ್ವಹಿಸಬೇಕು. ಇವರು ರೈತರು, ಅಂಗಡಿಯವರು, ಕಡಿಮೆ ಸ್ಥಾಯಿ ಉತ್ಪತ್ತಿದಾರರು, ವೈದ್ಯರು, ವಕೀಲರು ಸೇವೆಯನ್ನು ಸಲ್ಲಿಸುವರು. ಅಥವಾ ದೊಡ್ಡ ಕಂಪನಿಗಳು ಆಗಬಹುದು. ಅವರ ವಸ್ತುಸೇವೆಗಳನ್ನು ಪ್ರಜೆಗಳು ಕೊಳ್ಳುತ್ತಾರೆ. ಅವರು ಲಾಭ ಪಡೆಯಬಹುದು ಅಥವಾ ನಷ್ಟ ಹೋಗಬಹುದು.

ಭೂಮಿ, ಶ್ರಮ, ಬಂಡವಾಳಗಳನ್ನು ಸಂಘಟಿಸಿಕೊಂಡು ವ್ಯಕ್ತಿಗಳು ಅಥವಾ ವ್ಯಾಪಾರಸ್ಥರು ಉತ್ಪತ್ತಿ ಮಾಡುತ್ತಾರೆ. ಇವುಗಳನ್ನೇ ಉತ್ಪತ್ತಿ ಕಾರಕಗಳು ಎನ್ನುತ್ತಾರೆ.

ಚಿತ್ರ 9.1 ಸಣ್ಣ ರೈತ, ದೊಡ್ಡರೈತ, ಪಾಠದಲ್ಲಿನ ಮುಂದಿನ ಭಾಗವನ್ನು ಓದಿ, ಉತ್ಪತ್ತಿಕಾರಕಗಳೊಂದಿಗೆ ಅವರಿಗೆ ಇರುವ ಸಂಬಂಧಗಳನ್ನು ತಿಳಿಸುವ ರೀತಿ ವ್ಯಾಖ್ಯೆ ಬರೆಯಿರಿ.



ವ್ಯವಸಾಯಕ್ಕೆ ಅಗತ್ಯವಾದ ಕ್ರಮ

ಭೂಮಿಯ ನಂತರ ಉತ್ಪತ್ತಿಗೆ ಅವಸರವಾದ ಅಂಶಗಳಲ್ಲಿ ಶ್ರಮ ಒಂದು. ವ್ಯವಸಾಯಕ್ಕೆ ಎಷ್ಟೋ ದೈಹಿಕ ಶ್ರಮ ಅಗತ್ಯವಾಗುತ್ತದೆ. ಸಣ್ಣ ರೈತರು ಕುಟುಂಬ ಸದಸ್ಯರ ಜೊತೆ ಸೇರಿ ಸಾಮಾನ್ಯವಾಗಿ ತಮಗೆ ಅಗತ್ಯವಾದ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಮಧ್ಯತರಗತಿ ರೈತರು, ದೊಡ್ಡ ರೈತರು ತಮ್ಮ ಹೊಲಗಳಲ್ಲಿ ಕೆಲಸ ಮಾಡುವುದಕ್ಕೆ ವ್ಯವಸಾಯ ಕೂಲಿಗಳನ್ನು ನೇಮಿಸಿಕೊಳ್ಳುತ್ತಾರೆ.

ಭೂಮಿಯಿಲ್ಲದ ಕುಟುಂಬಗಳಿಂದ ಅಥವಾ ಸಣ್ಣ ರೈತರ ಕುಟುಂಗಳಿಂದ ವ್ಯವಸಾಯ ಕಾರ್ಮಿಕರು ದೊರೆಯುತ್ತಾರೆ. ತಮ್ಮ ಸ್ವಂತ ಹೊಲಗಳಲ್ಲಿ ಕೆಲಸ ಮಾಡುವ ರೈತರ ಮಾದರಿಯಲ್ಲದೆ ವ್ಯವಸಾಯ ಕೂಲಿಗಳಿಗೆ ಭೂಮಿಯಲ್ಲಿ ಬೆಳೆಸುವ ಬೆಳೆಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಅದಕ್ಕೆ ಬದಲಾಗಿ ಅವರು ಮಾಡಿದ ಕೆಲಸಕ್ಕೆ ಕೂಲಿ ಕೊಡುತ್ತಾರೆ. ಈ ಕೆಲಸ ಮಾಡುವುದಕ್ಕೆ ಇವರನ್ನು ನಿಯಮಿಸಿಕೊಳ್ಳುತ್ತಾರೆ.

ಚಿತ್ರ 9.2 : ಹಿಮಾಲಯದಲ್ಲಿ ಆಲೂಗಡ್ಡೆ ಬೆಳೆಯನ್ನು ತೆಗೆಯುವುದು

ಹಣದ ರೂಪದಲ್ಲಾಗಲಿ, ವಸ್ತು (ಬೆಳೆ) ರೂಪದಲ್ಲಾಗಲಿ ಕೂಲಿ ಇರಬಹುದು. ಕೆಲವು ಸಮಯದಲ್ಲಿ ಕೂಲಿಗಳಿಗೆ ಊಟವನ್ನು ಸಹ ಇಡುತ್ತಾರೆ. ಪ್ರಾಂತದ ಆಧಾರದ ಮೇಲೆ, ಬೆಳೆಯ ಆಧಾರದ ಮೇಲೆ, ಕೆಲಸದ ಆಧಾರದ ಮೇಲೆ, (ಉದಾ: ಬಿತ್ತುವುದು ಕಟಾವು) ಕೂಲಿ ಬೆಲೆಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಕೆಲಸ ದೊರೆಯುವ ದಿನಗಳಲ್ಲಿ ಸಹ ಬಹಳ ವ್ಯತ್ಯಾಸವಿರುತ್ತದೆ. ವ್ಯವಸಾಯ ಕೂಲಿಯನ್ನು ದಿನಗೂಲಿಯಾಗಿ ನೇಮಿಸಿಕೊಳ್ಳಬಹುದು ಅಥವಾ ಒಂದು ಪ್ರತ್ಯೇಕ ಕೆಲಸಕ್ಕೆ ಒಪ್ಪಂದ ಪದ್ಧತಿಯಲ್ಲಿ ಇಟ್ಟುಕೊಳ್ಳಬಹುದು. ಅಥವಾ ವರ್ಷದುದ್ದಕ್ಕೂ ಸಂಬಳಕ್ಕೆ ನೇಮಿಸಿಕೊಳ್ಳಬಹುದು.

ರಾಂಪುರದಲ್ಲಿ ದಿನಗೂಲಿ ಕೆಲಸ ಮಾಡುವ ಭೂಮಿಯಿಲ್ಲದ ಕೂಲಿಯ ಹೆಸರು ದಳ. ಅಂದರೆ ಅವನು ಪ್ರತಿದಿನ ಕೆಲಸಕ್ಕಾಗಿ ಅಲೆದಾಡಬೇಕು. ವ್ಯವಸಾಯ ಕೂಲಿಗಳಿಗೆ ಉತ್ತರ ಪ್ರದೇಶ ಸರ್ಕಾರ ನಿರ್ಣಯಿಸಿದ ಕನಿಷ್ಠ ವೇತನಗಿಂತ ಕಡಿಮೆ ಕೂಲಿ ದಳನಿಗೆ ಲಭಿಸುತ್ತದೆ. ರಾಂಪುರದಲ್ಲಿ ಕೆಲಸಕ್ಕಾಗಿ ವ್ಯವಸಾಯ ಕೂಲಿಗಳ ಮಧ್ಯ ತೀವ್ರವಾದ ಪೈಪೋಟಿಯಿರುತ್ತದೆ. ಆದ್ದರಿಂದ ಕೂಲಿಗಾದರೂ ಕೆಲಸ ಮಾಡುವುದಕ್ಕಾಗಿ ತಯಾರಾಗಿರುತ್ತಾರೆ. ದೊಡ್ಡ ರೈತರು ಟ್ರಾಕ್ಟರ್, ನೂರ್ಪಿಡಿ ಯಂತ್ರಗಳು ಬೆಳೆ ಕಟಾವು ಮಾಡುವ ಯಂತ್ರಗಳ ಮೇಲೆ ಆಧಾರ ಪಡುವುದು ಹೆಚ್ಚಾಯಿತು. ಆದ್ದರಿಂದ ಗ್ರಾಮೀಣ ಪ್ರಾಂತಗಳಲ್ಲಿ ಕೂಲಿಗಳಿಗೆ ಸಿಗುವ ಕೆಲಸ ದಿನಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕಳೆದ ವರ್ಷ ಒಟ್ಟು ವ್ಯವಸಾಯದಲ್ಲಿ ಐದು ತಿಂಗಳವಳಗೆ ಮಾತ್ರ ಕೆಲಸ ದೊರೆಯಿತು. ಕೆಲಸ ಸಿಗದ ದಿನಗಳಲ್ಲಿ ದಳ, ಅವರಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಯೋಜನೆ ಕೆಳಗೆ ಕೆಲಸ ದೊರಕಿಸಿಕೊಡಬೇಕೆಂದು ಪಂಚಾಯಿತಿಯಲ್ಲಿ ಅರ್ಜಿಯನ್ನು ಹಾಕಿಕೊಂಡರು.

- ದಳ ನಂತಹ ವ್ಯವಸಾಯ ಕೂಲಿಗಳು ಬಡವರಾಗಿ ಇದ್ದಾರೆ ಏಕೆ ?
- ತಮ್ಮ ಸಲುವಾಗಿ ವ್ಯವಸಾಯ ಕೂಲಿಗಳು ಕೆಲಸ ಮಾಡುವುದಕ್ಕೆ ರಾಂಪುರದಲ್ಲಿ ಮಧ್ಯತರಗತಿ, ದೊಡ್ಡ ತರಗತಿ ರೈತರು ಏನು ಮಾಡುತ್ತಾರೆ? ನಿಮ್ಮ ಪ್ರಾಂತದಲ್ಲಿನ ಪರಿಸ್ಥಿತಿಯನ್ನು ಇದಕ್ಕೆ ಹೋಲಿಸಿರಿ.
- ಕೆಳಗಿನ ಪಟ್ಟಿಯನ್ನು ತುಂಬಿರಿ.

ಉತ್ಪತ್ತಿ ಪ್ರಕ್ರಿಯೆಯಲ್ಲಿ ಶ್ರಮ	ಒಂದೊಂದಕ್ಕೆ ಮೂರು ಭಿನ್ನವಾದ ಉದಾಹರಣೆ ಕೊಡಿ
ಯಜಮಾನ/ಕುಟುಂಬ ಸಹ ಅಗತ್ಯವಾದ ಕೆಲಸ ಮಾಡುತ್ತಾರೆ.	
ಕೆಲಸ ಮಾಡುವುದಕ್ಕಾಗಿ ಯಜಮಾನ ಕೂಲಿಗಳನ್ನು ನೇಮಿಸುತ್ತಾರೆ.	

- ನಿಮ್ಮ ಪ್ರಾಂತದಲ್ಲಿ ವಸ್ತುಗಳು,ಸೇವೆಗಳ ಉತ್ಪತ್ತಿಯಲ್ಲಿ ಯಾವ ಯಾವ ವಿಧಗಳಾಗಿ ಶ್ರಮ ಪಡೆಯುತ್ತಾರೆ.

SCERT TELANGANA

ಪಟ್ಟಿ 1 : ಡಿಸೆಂಬರ್ 2011ರಲ್ಲಿ ವಿವಿಧ ವ್ಯವಸಾಯ ಕೆಲಸಗಳಿಗೆ ಆಂಧ್ರಪ್ರದೇಶದಲ್ಲಿ ದಿನಗಳ ಪ್ರಕಾರ ಕೂಲಿ ಬೆಲೆ (ರೂಪಾಯಿಗಳಲ್ಲಿ)								
ಕಾರ್ಮಿಕರು	ಉಳಿಮೆ	ಬಿತ್ತುವುದು	ಕಳೆ ಕಿಗೆಯುವುದು	ನಾಟಿ ಮಾಡುವುದು	ಕಟಾವು ಮಾಡುವುದು	ತೂರುವುದು	ತುಳಿಸುವುದು	ಹತ್ತಿ ಬಿಡಿಸುವುದು
ಪುರುಷರು	214	197	215	-	164	168	152	-
ಸ್ತ್ರೀಯರು	-	152	130	143	126	124	118	136

ಈ ಪಟ್ಟಿಯಲ್ಲಿ ಆಂಧ್ರಪ್ರದೇಶದಲ್ಲಿ ವ್ಯವಸಾಯ ಕೆಲಸಗಳಿಗೆ ಸಿಗುತ್ತಿರುವ ಸರಾಸರಿ ಕೂಲಿಬೆಲೆಗಳಿವೆ. ಆದರೆ ಪ್ರಾಂತದ ಆಧಾರದ ಮೇಲೆ ಇದರಲ್ಲಿ ಬಹಳ ವ್ಯತ್ಯಾಸವಿದೆ.

ಒಂದು ದಿನ ಪೂರ್ತಿ ಹತ್ತಿ ಆರಿಸಿದ್ದಕ್ಕಾಗಿ ಒಬ್ಬ ಮಹಿಳೆಗೆ 136 ರೂಪಾಯಿಗಳು ಲಭಿಸುತ್ತವೆ. ರಂಟೆ ಹೊಡೆಯುವ ಕೆಲಸಕ್ಕೆ ಮುಖ್ಯವಾಗಿ ಪುರುಷರನ್ನು ನೇಮಿಸುತ್ತಾರೆ. ಆದ್ದರಿಂದ ಅದರ ಕೆಳಗೆ ಮಹಿಳೆಯರಿಗೆ ಕೂಲಿ ತಿಳಿಸಲಾಗಿಲ್ಲ. ಭತ್ತ ನಾಟಿಮಾಡುವುದು, ಹತ್ತಿಬಿಡಿಸುವಂತಹ ಕೆಲಸಗಳಿಗೆ ಮುಖ್ಯವಾಗಿ ಮಹಿಳೆಯರನ್ನು ನೇಮಿಸುತ್ತಾರೆ. ಕೆಲವು ಉತ್ಪತ್ತಿ ಚಟುವಟಿಕೆಗಳಲ್ಲಿ ಮಹಿಳೆಯರು ಪುರುಷರು ಸಹ ಪಾಲ್ಗೊಳ್ಳುತ್ತಾರೆ. ಒಂದೇ ಕೆಲಸ ಮಾಡುತ್ತಿದ್ದರೂ ಸ್ತ್ರೀಯರಿಗಿಂತ ಪುರುಷರಿಗೆ ಹೆಚ್ಚು ಕೂಲಿ ದೊರೆಯುತ್ತದೆ. ರಾಜ್ಯದಲ್ಲಿನ ಯಜಮಾನರೆಲ್ಲರೂ (ಸರ್ಕಾರಿ , ಖಾಸಗಿ) ಕೊಡಬೇಕಾದ ಕನಿಷ್ಟ ಕೂಲಿ ಬೆಲೆಗಳನ್ನು ರಾಜ್ಯ ಸರ್ಕಾರ ಪ್ರಕಟಿಸುತ್ತದೆ.

- ಮೇಲೆ ಕೊಟ್ಟ ಕೂಲಿ ಬೆಲೆಗಳಿಂದ ನಿಮ್ಮ ಪ್ರಾಂತದಲ್ಲಿ ಯಾವುದಾದರೂ ಕೆಲಸಕ್ಕೆ ಜಾರಿಯಲ್ಲಿರುವ ಕೂಲಿ ಬೆಲೆಯನ್ನು ಹೋಲಿಸಿರಿ.
- ಕನಿಷ್ಟ ಕೂಲಿ ಬೆಲೆ ಕುರಿತು ತಿಳಿದುಕೊಂಡು ಅವುಗಳೊಂದಿಗೆ ಹೋಲಿಸಿರಿ.
- ಒಂದು ಕೆಲಸಕ್ಕೆ ಸ್ತ್ರೀಯರಿಗಿಂತ ಪುರುಷರಿಗೆ ಹೆಚ್ಚು ಕೂಲಿ ದೊರೆಯುತ್ತದೆ ? ಚರ್ಚಿಸಿರಿ.

ಬಂಡವಾಳ, ಭೌತಿಕ ಬಂಡವಾಳ, ಸಂಘಟನೆ ಬಂಡವಾಳವನ್ನು ಏರ್ಪಾಟು ಮಾಡಿಕೊಳ್ಳುವುದು :

ಆಧುನಿಕ ವ್ಯವಸಾಯ ಪದ್ದತಿಯಲ್ಲಿ ಅಧಿಕ ಇಳುವರಿ ಕೊಡುವ ಬೀಜದ ತಳಿಗಳು, ಭರವಸೆ ನೀಡುವ ನೀರಾವರಿ ವ್ಯವಸ್ಥೆ, ರಸಾಯನಿಕ ಗೊಬ್ಬರಗಳು, ಕ್ರಿಮಿ ಸಂಹಾರಕಗಳ ವಿನಿಯೋಗವನ್ನು ಕುರಿತು ನೀವು ಹಿಂದಿನ ತರಗತಿಯಲ್ಲಿ ಓದಿದ್ದೀರಿ. ಇದರ ಅರ್ಥ ಉತ್ಪತ್ತಿ ಮಾಡುವುದಕ್ಕೆ ರೈತರು ಬೇಕಾದಷ್ಟು ಬಂಡವಾಳ ಅಂದರೆ ಹಣ ಬೇಕಾಗುತ್ತದೆ. ರೈತರು ವ್ಯವಸಾಯಕ್ಕೆ ಅಗತ್ಯವಾದ ಭೌತಿಕ ಬಂಡವಾಳ, ಸಂಘಟಣೆ ಬಂಡವಾಳ ಹೇಗೆ ಸಂಗ್ರಹಿಸುತ್ತಾರೋ ನೋಡೋಣ.

ನಿರ್ವಹಣೆ ಬಂಡವಾಳಕ್ಕಾಗಿ ಬಹಳಮಂದಿ ಸಣ್ಣ ರೈತರು ಸಾಲ ಮಾಡಗಬೇಕಾಗಿರುತ್ತದೆ. ಅವರು ದೊಡ್ಡ ರೈತರಿಂದಾಗಲಿ, ಬಡ್ಡಿ ವ್ಯಾಪಾರಸ್ಥರಿಂದಾಗಲಿ ಸಾಲ ತೆಗೆದುಕೊಳ್ಳುತ್ತಾರೆ. ಇಂತಹ ಸಾಲಗಳ ಮೇಲೆ ಬಡ್ಡಿ ಬಹಳ ಹೆಚ್ಚಾಗಿರುತ್ತದೆ ಈ ಸಾಲಗಳನ್ನು ತೀರಿಸುವುದು ಅವರಿಗೆ ಬಹಳ ಭಾರ (ತೂಕ) ವಾಗುತ್ತದೆ.

ಸವಿತ ಒಬ್ಬ ಸಣ್ಣ ರೈತಳು ತನಗಿರುವ ಒಂದು ಹೆಕ್ಟಾರ್ ಭೂಮಿಯಲ್ಲಿ ಅವಳು ಗೋಧಿಯನ್ನು ಬೆಳೆಸಬೇಕೆಂದುಕೊಳ್ಳುತ್ತಾಳೆ. ಬೀಜಗಳು, ರಸಾಯನಿಕ ಗೊಬ್ಬರಗಳು, ಕ್ರಿಮಿ ಸಂಹಾರಕ ಔಷಧಗಳು ಅಲ್ಲದೆ ನೀರುಕೊಳ್ಳುವುದಕ್ಕೆ, ತನ್ನ ವ್ಯವಸಾಯ ಸಾಮಗ್ರಿಗಳನ್ನು ರಿಪೇರಿಗೂ ಸಹ ಹಣ ಬೇಕು. ನಿರ್ವಹಣೆ ಬಂಡವಾಳದ ಕೆಳಗೆ 6000 ರೂಪಾಯಿಬೇಕೆಂದು ಅವಳ ಲೆಕ್ಕ. ಅವಳ ಹತ್ತಿರ ಹಣವಿಲ್ಲದ್ದರಿಂದ ತೇಜ್‌ಪಾಲ್ ಎನ್ನುವ ದೊಡ್ಡ ರೈತನ ಹತ್ತಿರ ಸಾಲ ತೆಗೆದುಕೊಳ್ಳಬೇಕೆಂದುಕೊಂಡಳು. ನಾಲ್ಕು ತಿಂಗಳಲ್ಲಿ ಹಿಂತಿರುಗಿಸಬೇಕೆಂಬ ಷರತ್ತುಗಳ ಮೇಲೆ ಹೆಚ್ಚು ಬಡ್ಡಿ ಆದರೂ ತೆಗೆದುಕೊಳ್ಳಬೇಕಾಯಿತು. ಹೆಚ್ಚು ಬಡ್ಡಿ ಆದರೂ 36% ಬಡ್ಡಿಗೆ ಅವಳಿಗೆ ಸಾಲ ಕೊಡುವುದಕ್ಕೆ ತೇಜ್‌ಪಾಲ್ ಒಪ್ಪಿಕೊಂಡನು. ಕಟಾವು ಸಮಯದಲ್ಲಿ ದಿನಕ್ಕೆ ನೂರು ರೂಪಾಯಿಗಲ ಕೂಲಿಗೆ ತೇಜ್‌ಪಾಲ್ ಹೊಲದಲ್ಲಿ ಕೆಲಸ ಮಾಡುವುದಕ್ಕೆ ಸವಿತ ಅಂಗೀಕರಿಸಬೇಕಾಗಿ ಬಂತು. ಇದು ಕಡಿಮೆ ಕೂಲಿಯೆಂದು ತಿಳಿಯುತ್ತದೆ. ತನ್ನ ಹೊಲದಲ್ಲಿ ಕಟಾವು ಪೂರ್ತಿಮಾಡಿ ತೇಜ್‌ಪಾಲ್ ಹೊಲದಲ್ಲಿ ಕಟಾವುಗೆ ಹೋಗುವುದಕ್ಕಾಗಿ ಬಹಳ ಕಷ್ಟಪಡಬೇಕಾಗಿ ಬರುತ್ತದೆಂದು

SCERT TELANGANA

ಸವಿತಾಗೆ ಗೊತ್ತು. ಕಟಾವು ಸಮಯದಲ್ಲಿ ಕೆಲಸದ ಒತ್ತಡ ಬಹಳ ಹೆಚ್ಚಾಗಿರುತ್ತದೆ. ಮೂರು ಜನ ಮಕ್ಕಳ ತಾಯಿಯಾಗಿ ಅವಳ ಮೇಲೆ ಮನೆ ಕೆಲಸವು ಹೆಚ್ಚು. ಸಣ್ಣ ರೈತರಿಗೆ ಸಾಲ ಸಿಗುವುದುದ ಕಷ್ಟವೆಂದು ತಿಳಿದಿದ್ದರಿಂದ ಆ ನಿಯಮಗಳಿಗೆಲ್ಲಾ ಸವಿತ ಒಪ್ಪಿಕೊಂಡಳು.

ಸಣ್ಣ ರೈತರ ಮಾದರಿಯಲ್ಲದೆ, ಮಧ್ಯತರಗತಿ, ದೊಡ್ಡ ರೈತರಿಗೆ ಸಾಮಾನ್ಯವಾಗಿ ವ್ಯವಸಾಯ ಆದಾಯದಲ್ಲಿ ಉಳಿತಾಯವು ಇವರ ಹತ್ತಿರವಿರುತ್ತದೆ. ಈ ವಿಧವಾಗಿ ಬೀಜಗಳು, ರಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ಔಷದಗಳು, ಕೂಲಿಗಳಿಗೆ ಕೊಡಬೇಕಾದದ್ದು ಮುಂತಾದವುಗಳಿಗೆ ಅವಸರವಾದ ನಿರ್ವಹಣೆಗೆ ಬಂಡವಾಳವನ್ನು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಈ ರೈತರಿಗೆ ಸ್ವಂತ ಉಳಿತಾಯ ಹೇಗೆ ಏರ್ಪಡುತ್ತದೆ? ಇದಕ್ಕೆ ಉತ್ತರವನ್ನು ಮುಂದಿನ ಭಾಗದಲ್ಲಿ ತಿಳಿಯುತ್ತದೆ.

ಈ ಗ್ರಾಮದಲ್ಲಿನ ದೊಡ್ಡ ರೈತರೆಲ್ಲರಿಗೆ ಟ್ರಾಕ್ಟರ್‌ಗಳಿವೆ. ತಮ್ಮ ಹೊಲಗಳನ್ನು ಉಳುವುದಕ್ಕೆ, ಬಿತ್ತುವುದಕ್ಕೆ ಉಪಯೋಗಿಸುವುದಲ್ಲದೆ ಇವುಗಳನ್ನು ಸಣ್ಣ ರೈತರಿಗೆ ಬಾಡಿಗೆಗೆ ಕೊಡುತ್ತಾರೆ. ಇವರಲ್ಲಿ ಬಹಳ ಮಂದಿಗೆ ನೂರ್ಪಿ ಯಂತ್ರಗಳಿವೆ. ಕೆಲವು ಜನಕ್ಕೆ ಬೆಳೆ ಕಟಾವು ಮಾಡುವ ಯಂತ್ರಗಳು ಸಹ ಇವೆ. ಈದೊಡ್ಡ ರೈತರೆಲ್ಲರಿಗೆ ತಮ್ಮಹೊಲಗಳಿಗೆ ಸಾಗುನೀರು ಒದಗಿಸಲು ಅನೇಕ ಬೋರುಬಾವಿಗಳಿವೆ. ಈ ಸಾಮಾಗ್ರಿಗಳು, ಯಂತ್ರಗಳು ಎಲ್ಲವೂ ವ್ಯವಸಾಯಕ್ಕೆ ಅಗತ್ಯವಾದ ಭೌತಿಕ ಬಂಡವಾಳದಲ್ಲಿನ ಭಾಗ.

ರೈತನಿಗೆ ಉಳಿತಾಯ ಅಥವಾ ನಷ್ಟ :

ಉತ್ಪತ್ತಿಗೆ ಅಗತ್ಯವಾದ ಮೂರು ಕಾರಕಗಳನ್ನು ಉಪಯೋಗಿಸಿಕೊಂಡು ರೈತರು ತಮ್ಮ ಹೊಲದಲ್ಲಿ ಗೋಧಿಯನ್ನು ಬೆಳೆಸಿದ್ದಾರೆಂದು ತಿಳಿಯೋಣ. ಉತ್ಪತ್ತಿಯಲ್ಲಿ ಸ್ವಲ್ಪ ಭಾಗ ಕುಟುಂಬದ ಅವಶ್ಯಕತೆಗಳಿಗೆ ಉಳಿಸಿಕೊಂಡು ಉಳಿದಿದ್ದನ್ನು ಬಜಾರಿನಲ್ಲಿ ಮಾರುತ್ತಾರ. ಸವಿತ ಇಲ್ಲವೆ ಗೋವಿಂದನ ಮಕ್ಕಳು ನಂತಹ ಸಣ್ಣ ರೈತರಿಗೆ ಗೋಧಿ ಉಳಿಯುವ ಗೋಧಿ ಬಹಳ ಕಡಿಮೆಯಾಗಿರುತ್ತದೆ. ಏಕೆಂದರೆ ಇವರು ಉತ್ಪತ್ತಿಮಾಡುವುದು ಕಡಿಮೆ, ಅದರಲ್ಲಿ ಬಹಳಷ್ಟು ಕುಟುಂಬ ಅವಸರಗಳಿಗೆ ಉಳಿಸಿಕೊಳ್ಳುತ್ತಾರೆ. ಆದ್ದರಿಂದ ಮಧ್ಯ ತರಗತಿ ದೊಡ್ಡ ರೈತರೇ ಹೆಚ್ಚಿನ ಮೊತ್ತದಲ್ಲಿ ಮಾರ್ಕೆಟ್‌ಯಾರ್ಡ್‌ಗೆ ಗೋಧೀಗಳನ್ನು ಪೂರೈಸುತ್ತಾರೆ. ಮಾರ್ಕೆಟ್‌ಯಾರ್ಡ್‌ನಲ್ಲಿನ ವ್ಯಾಪಾರಸ್ಥರು ಈ ಗೋಧಿಯನ್ನು ಕೊಂಡು ಅವುಗಳನ್ನು ಪುನಃ ಪಟ್ಟಣ, ನಗರಗಳಲ್ಲಿನ ಅಂಗಡಿಗಳಿಗೆ ಮಾರುತ್ತಾರೆ.

ಚಿತ್ರ 9.3 ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಿರುವ ಗೋಧಿ

ದೊಡ್ಡ ರೈತನಾದ ತೇಜ್‌ಪಾಲ್‌ಗೆ ಆತನ ಎಲ್ಲಾ ಭೂಮಿಯಿಂದ 350 ಕ್ವಿಂಟಾಲ್ ಗೋಧಿ ಹೆಚ್ಚಳವಿರುತ್ತದೆ. ಇದನ್ನು ರಾಯಿಗಂಜ್ ಮಾರ್ಕೆಟ್‌ನಲ್ಲಿ ಮಾರಿ ದೊಡ್ಡ ಪ್ರಮಾಣದಲ್ಲಿ ಹಣ ಪಡೆಯುತ್ತಾರೆ.

ಈ ಹಣವನ್ನು ತೇಜ್‌ಪಾಲ್ ಏನು ಮಾಡುತ್ತಾರೆ? ಕಳೆದ ವರ್ಷ ತೇಜ್‌ಪಾಲ್ ಈ ಹಣದಲ್ಲಿ ಬಹಳಷ್ಟನ್ನು ಬ್ಯಾಂಕ್‌ನಲ್ಲಿ ಜಮ ಮಾಡಿದ್ದಾನೆ. ನಂತರ ಸವಿತಳಂತೆ ಅಗತ್ಯವಿರುವ ವರಿಗೆ ಸಾಲಕೊಡುತ್ತಾನೆ. ತದನಂತರ ಬೆಳೆ ಕಾಲ ದಲ್ಲಿ ತನ್ನ ಹೊಲಗಳಿಗೆ ಅಗತ್ಯವಾದ ನಿರ್ವಹಣೆಗೆ ಬಂಡವಾಳವನ್ನು ಸಹ ಈ ಹಣದಿಂದಲೇ ಪೂರೈಸಿಕೊಂಡನು. ಈ ವರ್ಷ ತನ್ನ ಸಂಪಾದನೆ ಯಿಂದ ತೇಜ್‌ಪಾಲ್‌ಗೆ ಮತ್ತೊಂದು ಟ್ರಾಕ್ಟರ್‌ನ್ನು ಕೊಂಡುಕೊಳ್ಳಬೇಕೆಂದುಕೊಳ್ಳುತ್ತಿದ್ದಾನೆ. ಪಕ್ಕದ ಗ್ರಾಮಗಳಲ್ಲಿ ಬಾಡಿಗೆಗೆ ಟ್ರಾಕ್ಟರ್‌ಗಳಿಂದ ಒಳ್ಳೆಯ ಬೇಡಿಕೆಯಿದೆ. ಇನ್ನೊಂದು ಟ್ರ್ಯಾಕ್ಟರ್‌ನಿಂದ' ಅವನ ಸ್ಥಿರ ಬಂಡವಾಳ ಹೆಚ್ಚಾಗುತ್ತಿದೆ.

SCERT TELANGANA

ತೇಜ್‌ಪಾಲ್‌ನಂತೆಯೇ ಇತರ ಮಧ್ಯತರಗತಿ, ದೊಡ್ಡ ರೈತರು ತಮ್ಮ ಹೆಚ್ಚಳ ವ್ಯವಸಾಯ ಉತ್ಪತ್ತಿಯನ್ನು ಮಾರುತ್ತಾರೆ. ಈ ಆದಾಯದಿಂದ ಸ್ವಲ್ಪ ಹಣವನ್ನು ಉಳಿತಾಯ ಮಾಡಿ, ಅನಂತರ ಬೆಳೆಯ ಖರ್ಚುಗಳಿಗಾಗಿ ಉಪಯೋಗಿಸುತ್ತಾರೆ. ಕೆಲವು ಮಂದಿ ರೈತರು ತಮ್ಮ ಉಳಿತಾಯ ಹಣವನ್ನು ಪಶುಗಳು, ಟ್ರ್ಯಾಕ್ಟರ್‌ಗಳನ್ನು ಕೊಳ್ಳುತ್ತಾರೆ ಅಥವಾ ಅಂಗಡಿಗಳನ್ನು ಇಡುತ್ತಾರೆ. ಇವು ವ್ಯವಸಾಯೇತರ ಕೆಲಸಗಳಿಗೆ ಬಂಡವಾಳವಾಗುತ್ತದೆ. ಅವರು ಇನ್ನೂ ಹೆಚ್ಚಿನ ಭೂಮಿಯನ್ನು ಕೊಳ್ಳಬಹುದು.

ವ್ಯವಸಾಯ ಕೆಲಸಗಳಲ್ಲಿ ನಷ್ಟ ಸಹ ಸಂಭವಿಸುತ್ತಿರುತ್ತದೆ. ಮಳೆ, ರೋಗಗಳಿಂದ ಬೆಳೆ ನಷ್ಟವಾದಾಗ ಹೀಗೆ ನಡೆಯುತ್ತದೆ. ವ್ಯವಸಾಯ ಉತ್ಪತ್ತಿಗಳ ಬೆಲೆಗಳು ಕಡಿಮೆಯಾಗುವುದರಿಂದ ಸಹ ನಷ್ಟಗಳು ಬರಬಹುದು. ಇಂತಹ ಸಂದರ್ಭಗಳಲ್ಲಿ ಸಣ್ಣ ರೈತರಿಗೆ ತಾವು ಖರ್ಚುಮಾಡಿದ ಬಂಡವಾಳ ಮತ್ತೆ ಪಡೆಯುವುದು ಸಹ ಬಹಳ ಕಷ್ಟವಾಗುತ್ತದೆ.

ಹೆಚ್ಚಳ(ಉಳಿತಾಯ), ಉತ್ಪತ್ತಿಗೆ ಬಂಡವಾಳ

- ಮೂರು ಜನ ರೈತರನ್ನು ತೆಗೆದುಕೊಳ್ಳಿ ಮೂರು ಜನ ಗೋಧಿಯನ್ನು ಬೆಳೆಸಿದ್ದಾರೆ. ಆದರೆ ಅವರು ಉತ್ಪತ್ತಿಯಲ್ಲಿ ವ್ಯತ್ಯಾಸವಿದೆ. (ಎರಡು ಉದ್ದಸಾಲು) ವಿವಿಧ ರೈತರು ಎದುರಿಸುತ್ತಿರುವ ಪರಿಸ್ಥಿತಿಯನ್ನು ವಿಶ್ಲೇಷಿಸುವುದಕ್ಕೆ ಕೆಲವು ಅಂಶಗಳು ಎಲ್ಲರಿಗೂ ಸಮಾನವೆಂದು ತಿಳಿದುಕೊಳ್ಳಬೇಕು. ಸುಲಭವಾಗಿ ಲೆಕ್ಕ ಹಾಕಲು ಈ ಅಂಶಗಳನ್ನು ಅಂದುಕೊಳ್ಳೋಣ.

1. ಪ್ರತಿ ರೈತ ಕುಟುಂಬ ವಿನಿಯೋಗಿಸುವ ಗೋಧಿ ಮೊತ್ತ ಸಮಾನ (ಮೂರನೆ ಉದ್ದ ಸಾಲು)
2. ಈ ವರ್ಷದಲ್ಲಿ ಹೆಚ್ಚಳ ಗೋಧಿಯನ್ನೆಲ್ಲಾ ಬರುವ ವರ್ಷದ ಬೀಜವಾಗಿ ರೈತರೆಲ್ಲರೂ ಉಪಯೋಗಿಸಿಕೊಳ್ಳುತ್ತಾರೆ. ಅದಕ್ಕೆ ಅವರಿಗೆ ಬೇಕಾದಷ್ಟು ಭೂಮಿ ಇದೆ.
3. ಎಲ್ಲರೂ ಉಪಯೋಗಿಸಿದ ಬೀಜಗಳಿಗಿಂತ ಎರಡರಷ್ಟು ಇಳುವರಿ ಬರುತ್ತದೆಂದು ತಿಳಿಯೋಣ. ಉತ್ಪತ್ತಿಯಲ್ಲಿ ಯಾವುದೇ ರೀತಿಯ ತಕ್ಷಣದ ನಷ್ಟಗಳಿಲ್ಲ.

ಪಟ್ಟಿಯನ್ನು ಪೂರ್ಣಗೊಳಿಸಿ.

1ನೆಯ ರೈತ

ವರ್ಷಗಳು	ಉತ್ಪತ್ತಿ	ವಿನಿಯೋಗ	ಹೆಚ್ಚಳ = ಉತ್ಪತ್ತಿ - ವಿನಿಯೋಗ	ಮುಂದಿನ ವರ್ಷಕ್ಕೆ ಬಂಡವಾಳ
1ನೇ ವರ್ಷ	100	40	60	60
2ನೇ ವರ್ಷ	120	40		
3ನೇ ವರ್ಷ		40		

2ನೇ ರೈತ

ವರ್ಷಗಳು	ಉತ್ಪತ್ತಿ	ವಿನಿಯೋಗ	ಉಳಿತಾಯ	ಮುಂದಿನ ವರ್ಷಕ್ಕೆ ಬಂಡವಾಳ
1ನೇ ವರ್ಷ	80	40		
2ನೇ ವರ್ಷ		40		
3ನೇ ವರ್ಷ		40		

3ನೇ ರೈತ

ವರ್ಷಗಳು	ಉತ್ಪತ್ತಿ	ವಿನಿಯೋಗ	ಉಳಿತಾಯ	ಮುಂದಿನ ವರ್ಷಕ್ಕೆ ಬಂಡವಾಳ
1ನೇ ವರ್ಷ	60	40		
2ನೇ ವರ್ಷ		40		
3ನೇ ವರ್ಷ		40		

- ಮೂರು ವರ್ಷಗಳಲ್ಲಿ ಮೂರು ಜನ ರೈತರ ಗೋಧಿ ಉತ್ಪತ್ತಿಯನ್ನು ಹೋಲಿಸಿರಿ.
- 3ನೇಯ ರೈತನ ಪರಿಸ್ಥಿತಿ 3ನೇಯ ವರ್ಷದಲ್ಲಿ ಏನಾಗುತ್ತದೆ? ಅವನು ಉತ್ಪತ್ತಿಯನ್ನು ಮುಂದುವರಿಸುತ್ತಾನೆಯೇ? ಉತ್ಪತ್ತಿಯನ್ನು ಮುಂದುವರಿಸಲು ಅವನು ಏನು ಮಾಡಬೇಕು?

SCERT TELANGANA

ಚಿತ್ರ 9.4 : ಟೀ, ರಬ್ಬರ್ ತೋಟಗಳು, ವ್ಯವಸಾಯ ರಂಗದಲ್ಲಿ ಟೀ, ಕಾಫಿ, ರಬ್ಬರ್, ಹಣ್ಣಿನ ತೋಟಗಳು ಬರುತ್ತವೆ.

ರಾಂಪುರದಲ್ಲಿ ವ್ಯವಸಾಯೇತರ ಕೆಲಸಗಳು

ಪ್ರಧಾನ ಉತ್ಪತ್ತಿ ಚಟುವಟಿಕೆಯಾದ ವ್ಯವಸಾಯವಲ್ಲದೆ ರಾಂಪುರದಲ್ಲಿ ಕೆಲವು ವ್ಯವಸಾಯೇತರ ಉತ್ಪತ್ತಿ ಚಟುವಟಿಕೆಗಳಿವೆ. ರಾಂಪುರದಲ್ಲಿ ಕೆಲಸ ಮಾಡುವವರಲ್ಲಿ 25% ಜನಮಾತ್ರವೇ ವ್ಯವಸಾಯೇತರ ಕೆಲಸದಲ್ಲಿದ್ದಾರೆ.

ಹಾಲು ಉತ್ಪಾದಕ ಕೈಗಾರಿಕೆ – ಎರಡನೆಯ ಸಾಮಾನ್ಯ ಚಟುವಟಿಕೆ

ರಾಂಪುರದಲ್ಲಿ ಅನೇಕ ಕುಟುಂಬಗಳು ಹಾಲು ಉತ್ಪತ್ತಿ ಮಾಡುತ್ತವೆ. ಎಮ್ಮೆಗಳಿಗೆ ವಿವಿಧ ವಿಧವಾದ ಹುಲ್ಲು, ಮಳೆಗಾಲದಲ್ಲಿ ಸಾಗು ಮಾಡುವ ಜೋಳ, ಸಜ್ಜೆಯ ಮೇವನ್ನು ಮೇಯಿಸುತ್ತಾರೆ. ರಾಯಿಗಂಜ್‌ನಲ್ಲಿ ಹಾಲು ಮಾರುತ್ತಾರೆ. ಜಹಂಗೀರಾಬಾದ್‌ಗೆ ಸೇರಿದ ಇಬ್ಬರು ವ್ಯಾಪಾರಸ್ಥರು ರಾಯಿಗಂಜ್‌ನಲ್ಲಿ ಹಾಲು ಶೇಖರಣೆ, ಶೀತಲೀಕರಣ ಕೇಂದ್ರಗಳನ್ನು ಏರ್ಪಾಟುಮಾಡಿದರು. ಹಾಲನ್ನು ಇವರ ಬುಲಂದ್‌ಷಹಾರ್, ದೆಹಲಿಯಂತಹ ದೂರ ಪ್ರದೇಶಗಳಿಗೆ ಸಾಗಿಸುತ್ತಾರೆ. ಈ ಕೆಲಸದಲ್ಲಿ ಉತ್ಪತ್ತಿಕಾರಕಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

ಭೂಮಿ : ಗ್ರಾಮದಲ್ಲಿ ಸ್ವಂತ ಷೆಡ್ಡು (ಗುಡಿಸಲು)

ಶ್ರಮ : ಕುಟುಂಬ ಕೆಲಸ : ಮುಖ್ಯವಾಗಿ ಮಹಿಳೆಯರು ಎಮ್ಮೆಗಳ ಪೋಷಣೆ ಮಾಡುತ್ತಾರೆ.

ಭೌತಿಕ ಬಂಡವಾಳ : ಪಶುಗಳ ಸಂತೆಯಲ್ಲಿ ಕೊಂಡ ಎಮ್ಮೆಗಳು.

ನಿರ್ವಹಣ ಬಂಡವಾಳ : ತಮ್ಮ ಭೂಮಿಯಿಂದ ಬಂದ ಪಶುಗಳ ಮೇವಿನ ಜೊತೆ ಕೊಂಡ ಔಷಧಗಳು.

ರಾಂಪುರದಲ್ಲಿ ಸಣ್ಣ ವಸ್ತುಗಳ ತಯಾರಿ.

ಪ್ರಸ್ತುತ ರಾಂಪುರದಲ್ಲಿ ವಸ್ತುಗಳ ತಯಾರಿ (ಉತ್ಪತ್ತಿ) ಕೈಗಾರಿಕೆಗಳಲ್ಲಿ ಉದ್ಯೋಗ ಪಡೆಯುತ್ತಿರುವವರು 50ಕ್ಕೂ ಕಡಿಮೆ ಜನರಿದ್ದಾರೆ. ದೊಡ್ಡ ನಗರಗಳು, ಪಟ್ಟಣ ಕಾರ್ಖಾನೆಯಲ್ಲಿ ನಡೆಯುವ ಉತ್ಪತ್ತಿಮಾದರಿಯಲ್ಲದೆ ರಾಂಪುರದಲ್ಲಿ ಉತ್ಪತ್ತಿ ಸುಲಭ ಪದ್ಧತಿಗಳನ್ನು ಉಪಯೋಗಿಸಿ, ಸಣ್ಣ ಮಟ್ಟದಲ್ಲಿ ನಡೆಯುತ್ತದೆ. ಇವುಗಳನ್ನು ಸಾಮಾನ್ಯವಾಗಿ ಮನೆಯ ಹತ್ತಿರ ಕುಟುಂಬ ಶ್ರಮವನ್ನು ಉಪಯೋಗಿಸಿ ತಯಾರಿಸುತ್ತಾರೆ.ಕೂಲಿಗಳನ್ನು ಉಪಯೋಗಿಸಿಕೊಳ್ಳುವುದು ಬಹಳ ಕಡಿಮೆ.

ಮಿಶ್ರಿಲಾಲ್ ವಿದ್ಯುತ್ ಶಕ್ತಿಯಿಂದ ಕೆಲಸ ಮಾಡುತ್ತಾ ಕಬ್ಬು ರಸವನ್ನು ತೆಗೆಯುವ ಯಂತ್ರವನ್ನು ಕೊಂಡು ಬೆಲ್ಲವನ್ನು ತಯಾರು ಮಾಡುತ್ತಾರೆ. ಅದಕ್ಕಿಂತ ಮೊದಲು ಕಬ್ಬು ರಸವನ್ನು ತೆಗೆದಯುವುದಕ್ಕಾಗಿ ಎತ್ತುಗಳನ್ನು ಉಪಯೋಗಿಸುತ್ತಿದ್ದರು. ಆದರೆ ಈಗ ಎಲ್ಲರೂ ಯಂತ್ರಗಳಿಗೆ ಪ್ರಾಮುಖ್ಯತೆಯನ್ನು ಕೊಂಡುತ್ತಿದ್ದಾರೆ, ತಾನು ಬೆಳೆಸಿದ ಕಬ್ಬನ್ನು ಉಪಯೋಗಿಸುವುದು ಮಾತ್ರವಲ್ಲದೆ ಮಿಶ್ರಲಾಲ್ ನಂತಹ ರೈತರಿಂದ ಸಹ ಕಬ್ಬನ್ನು ಕೊಂಡು ಬೆಲ್ಲವನ್ನು ತಯಾರು

SCERT TELANGANA

ಮಾಡುತ್ತಾನೆ. ಈ ಬೆಲ್ಲವನ್ನು ಜಹಂಗೀರಾಬಾದ್‌ನಲ್ಲಿ ಮಾರುತ್ತಾನೆ. ಈ ಕ್ರಮದಲ್ಲಿ ಮಿಶ್ರಲಾಲ್ ಸ್ವಲ್ಪ ಲಾಭ ಪಡೆದುಕೊಳ್ಳುತ್ತಾನೆ.

- ಈ ಕೆಲಸಕ್ಕೆ ಮಿಶ್ರಲಾಲ್‌ಗೆ ಯಾವ ಭೌತಿಕ ಬಂಡವಾಳ ಅಗತ್ಯವಾಗಿವೆ.
- ಇದಕ್ಕೆ ಶ್ರಮ ಯಾರ ಮೂಲಕ ದೊರೆಯುತ್ತದೆ?
- ಮಿಶ್ರಿಲಾಲ್ ತನ್ನ ಲಾಭವನ್ನು ಏತಕ್ಕಾಗಿ ಹೆಚ್ಚಿಸಿಕೊಳ್ಳ ಲಾಗುತ್ತಿಲ್ಲ? ಅವನಿಗೆ ನಷ್ಟಗಳು ಉಂಟಾಗುವ ಸಂದರ್ಭಗಳು ಯಾವುವೋ ಆಲೋಚಿಸಿರಿ.
- ಬೆಲ್ಲವನ್ನು ಮಿಶ್ರಿಲಾಲ್ ತನ್ನ ಊರಿನಲ್ಲಿ ಅಲ್ಲದೆ ಜಹಂಗೀರಾ ಬಾದ್‌ನಲ್ಲಿನ ವ್ಯಾಪಾರಸ್ಥರಿಗೆ ಏಕೆ ಮಾರುತ್ತಿದ್ದಾನೆ?

ರಾಂಪುರದಲ್ಲಿನ ಅಂಗಡಿಯವರು

ರಾಂಪುರದಲ್ಲಿ ವ್ಯಾಪಾರಸ್ಥರು (ವಸ್ತು ಬದಲಾವಣೆ) ಹೆಚ್ಚಾಗಿಲ್ಲ. ರಾಂಪುರದಲ್ಲಿನ ವ್ಯಾಪಾರಸ್ಥರು ನಗರಗಳಲ್ಲಿನ ಹೋಲ್‌ಸೇಲ್ ಮಾರುಕಟ್ಟಿನಲ್ಲಿ ವಸ್ತುಗಳನ್ನುಕೊಂಡು ಅವುಗಳನ್ನು ರಾಂಪುರದಲ್ಲಿ ಮಾರುತ್ತಾರೆ. ರಾಂಪುರದಲ್ಲಿನ ಸಣ್ಣ ಕಿರಾಣಿ ಅಂಗಡಿಗಳು, ಅಕ್ಕಿ, ಗೋದಿ, ಸಕ್ಕರೆ, ಟೀ, ಎಣ್ಣೆ, ಬಿಸ್ಕೆಟ್, ಸಬ್ಬುಗಳು, ಟೂತ್‌ಪೇಸ್ಟ್, ಬ್ಯಾಟರಿಳು, ಮೇಣದ ಬತ್ತಿಗಳು, ನೋಟ್‌ಪುಸ್ತಕಗಳು, ಪೆನ್ನುಗಳು, ಪೆನ್ಸಿಲ್‌ಗಳು, ಬಟ್ಟೆಗಳು ಸಹ ಮಾರುತ್ತಾರೆ.

- ಯಾರ ಸ್ಥಳದಲ್ಲಿ ಅಂಗಡಿಗಳನ್ನು ಸ್ಥಾಪಿಸಿಕೊಳ್ಳುತ್ತಾರೆ?
- ತಿನ್ನುವ ವಸ್ತುಗಳು ಮಾರುವ ಈ ಅಂಗಡಿಗಳಲ್ಲಿ ಶ್ರಮ ಯಾರದು?
- ಇಂತಹ ಅಂಗಡಿಗಳಿಗೆ ಎಂತಹ ನಿರ್ವಹಣೆ ಬಂಡವಾಳ ಅಗತ್ಯವಾಗುತ್ತದೆ.
- ಭೌತಿಕ ಬಂಡವಾಳದ ಕೆಳಗೆ ಬರುವವರ್ನು ಹೆಸರಿಸಿ.
- ನಿಮ್ಮ ಪ್ರಾಂತದಲ್ಲಿ ಬಜಾರಿನಲ್ಲಿ ತಿರುಗುತ್ತಾ ಸಾಮಗ್ರಿಗಳೂ ಮಾರುವವರಲ್ಲಿ ಒಬ್ಬರಿಂದ ಅವರ ಪ್ರತಿದಿನ ಮಾರುವ ಸಂಖ್ಯೆ

ಬಸ್ಟಾಂಡಿಗೆ ಹತ್ತಿರವಾಗಿರುವ ಮನೆಗಳಲ್ಲಿ ಕುಟುಂಬದವರು ತಮಗಿರುವ ಸ್ಥಳದಲಿ ಸ್ವಲ್ಪ ಅಂಗಡಿಗಳನ್ನು ತೆರೆಯುವುದಕ್ಕಾಗಿ ಉಪಯೋಗಿಸುತ್ತಾರೆ. ಅವರು ಟಿ, ಸಮೋಸಾ, ಕಚೋರಿ, ಕಾರಾ, ಮಿಠಾಯಿಗಳು, ಚಾಕ್ಲೆಟುಗಳು, ತಣ್ಣನೆಯ ಪಾನೀಯಗಳಂತವುಗಳನ್ನು ಮಾರುತ್ತಾನೆ. ಕುಟುಂಬದಲ್ಲಿನ ಮಹಿಳೆಯರು, ಮಕ್ಕಳು ಈ ಕೆಲಸದಲ್ಲಿ ಭಾಗಿಗಳಾಗುತ್ತಾರೆ. ನಮ್ಮ ದೇಶದಲ್ಲಿ ರೈತರು, ಅಂಗಡಿಯವರು, ಬಜಾರಿನಲ್ಲಿ ಅಲೆದು ವಸ್ತುಗಳು ಮಾರುವವರು, ಬಹಳ ಜನ ಸ್ವಯಂ ಉದ್ಯೋಗವಿರುವವರು ಇದ್ದಾರೆ. ವಸ್ತು, ಸೇವೆಗಳ ಉತ್ಪತ್ತಿಗೆ ಯೋಜನೆಗಳು ತಯಾರು ಮಾಡಿ ಆ ಕೆಲಸ ಮಾಡಿ ಅದರಲ್ಲಿಯೇ ಲಾಭ ನಷ್ಟಗಳನ್ನು ಭರಿಸಬೇಕಾಗುತ್ತದೆ. ಆದ್ದರಿಂದ ಅವರು ಯಜಮಾನರಾಗುತ್ತಾರೆ. ಅದೇ ಸಮಯದಲ್ಲಿ ಈ ಪ್ರಕ್ರಿಯೆಯಲ್ಲಿ ತಮ್ಮ ಸ್ವಂತ ಶಕ್ತಿಯನ್ನು ಉಪಯೋಗಿಸುತ್ತಾರೆ.

ಸ್ವಲ್ಪ ಮಂದಿ ಅಂಗಡಿಯವರು ಗ್ರಾಮದಲ್ಲಿ ಉತ್ಪತ್ತಿಯಾಗುವತ್ತಿರುವವರನ್ನು ಕೊಂಡು ದೊಡ್ಡ ಗ್ರಾಮಗಳು ಅಥವಾ ಪಟ್ಟಣಗಳ ಮಾರುಕಟ್ಟೆಯ ಅಂಗಡಿಗಳಿಗೆ ಸುತ್ತಿ ಮಾರುತ್ತಾರೆ. ಉದಾಹರಣೆಗೆ ಹಿಟ್ಟಿನ ಗಿರಣಿ ನಡೆಸುವ ವ್ಯಕ್ತಿ ಗ್ರಾಮದಲ್ಲಿ ಸಣ್ಣ ರೈತರಿಂದ ಗೋಧಿಯನ್ನುಕೊಂಡು, ಅವುಗಳನ್ನು ರಾಯಿಗಂಜ್ ಮಾರ್ಕೆಟ್‌ನಲ್ಲಿ ಮಾರುತ್ತಾನೆ. ಹಿಟ್ಟಿನ ಗಿರಣಿ ನಿರ್ವಹಿಸುವುದು, ಗೋಧಿಯನ್ನು ಕೊಂಡು, ಮಾರುವುದು ಎರಡೂ ಬೇರೆ ಬೇರೆ ವ್ಯಾಪಾರಗಳು.

ಸಾರಿಗೆ : ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಂಗ

ರಾಂಪುರದಿಂದ ರಾಯಿಗಂಜ್‌ಗೆ ರಸ್ತೆ ಮಾರ್ಗದಲ್ಲಿ ಅನೇಕ ವಿಧವಾದ ವಾಹನಗಳು ಇವೆ - ರಿಕ್ಷಾಗಳು, ಜಟ್ಕಾಗಳು, ಟ್ರಾಕ್ಟರು, ಲಾರಿ, ಸಾರಿಗೆ ರಂಗದಲ್ಲಿ ಲಾರಿ ಡ್ರೈವರ್‌ಗಳು, ಎತ್ತಿನಬಂಡಿ, ಜಟ್ಕಾವನ್ನು ನಡೆಸುವವರು ಮೊದಲಾದವರು ಇದ್ದಾರೆ. ಅವರು ಮನುಷ್ಯರನ್ನು, ವಸ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಲುಪಿಸಿ ಅದಕ್ಕೆ ಪ್ರತಿಯಾಗಿ ಹಣವನ್ನು ತೆಗೆದುಕೊಳ್ಳುತ್ತಾರೆ. ಕಳೆದ ಸ್ವಲ್ಪ ವರ್ಷಗಳಿಂದ ಸಾರಿಗೆಯಲ್ಲಿರುವವರ ಸಂಖ್ಯೆಹೆಚ್ಚಾಗುತ್ತಿದೆ.

SCERT TELANGANA

ಕಿಶೋರ್ ಒಬ್ಬ ವ್ಯವಸಾಯ ಕೂಲಿ ಬೇರೆ ಕೂಲಿಗಳಂತೆ ಕಿಶೋರ್ ವ್ಯವಸಾಯ ಕೂಲಿಯ ಮೂಲಕ ಬರುವ ಆದಾಯ ಕುಟುಂಬ ಅವಸರಗಳಿಗೆ ಸರಿಹೋಗುತ್ತಿರಲಿಲ್ಲ. ಕೆಲವು ವರ್ಷಗಳ ಹಿಂದೆ ಕಿಶೋರ್ ಬ್ಯಾಂಕ್‌ನಿಂದ ಸಾಲತೆಗೆದುಕೊಂಡನು. ಭೂಮಿಯಿಲ್ಲದ ಬಡ ಕುಟುಂಬಗಳಿಗೆ ಕಡಿಮೆ ಬಡ್ಡಿಯ ಮೇಲೆ ಸಾಲವನ್ನು ಕೊಡುವ ಸರ್ಕಾರದ ಯೋಜನೆಗಳ ಅಡಿಯಲ್ಲಿ ಅವನು ಈ ಸಾಲ ತೆಗೆದುಕೊಂಡನು. ಈ ಹಣದಿಂದ ಕಿಶೋರ್ ಒಂದು ಎಮ್ಮೆಯನ್ನು ಕೊಂಡನು. ಈಗ ಅವನು ಎಮ್ಮೆಯ ಹಾಲನ್ನು ಮಾರುತ್ತಿದ್ದಾನೆ. ಅಷ್ಟೇ ಅಲ್ಲದೇ ಅವನು ತನ್ನ ಎಮ್ಮೆಗೆ ಬಂಡಿಯನ್ನು ಕಟ್ಟಿ ವಿವಿಧ ಸಾಮಗ್ರಿಗಳನ್ನು ಸಾರಿಗೆ ಮಾಡುತ್ತಿದ್ದಾನೆ. ವಾರಕ್ಕೆ ಒಂದು ಸಲ ಗಂಗಾನದಿಗೆ ಹೋಗಿ ಗಡಿಗೆ ಮಾಡುವ ವ್ಯಕ್ತಿಗೆ ಜಿಗುಟುಮಣ್ಣು ತರುತ್ತಾನೆ. ಅಥವಾ ಬೆಲ್ಲ, ಇತರ ವಸ್ತುಗಳನ್ನು ತೆಗೆದುಕೊಂಡು ಆಗಾಗ ಜಹಂಗೀರಾಬಾದ್‌ಗೆ ಹೋಗುತ್ತಾನೆ. ಪ್ರತಿ ತಿಂಗಳು ಅವನಿಗೆ ಸಾರಿಗೆಯಲ್ಲಿ ಸ್ವಲ್ಪ ಕೆಲಸ ಸಿಗುತ್ತದೆ. ಇದರ ಫಲಿತವಾಗಿ ಕಳೆದ ವರ್ಷಗಳಿಗಿಂತ ಕಿಶೋರ್ ಹೆಚ್ಚು ಆದಾಯವನ್ನು ಪಡೆಯುತ್ತಿದ್ದಾನೆ.

- ಕಿಶೋರ್‌ನ ಸ್ಥಿರ ಬಂಡವಾಳ ಏನು? ಅವನ ನಿರ್ವಹಣೆ ಬಂಡವಾಳ ಏನಾಗಿ ಇರುತ್ತದೆ?
- ಕಿಶೋರ್ ಎಷ್ಟು ಉತ್ಪತ್ತಿ ಕೆಲಸಗಳಲ್ಲಿ ಭಾಗವಹಿಸುತ್ತಿದ್ದಾನೆ?
- ರಾಂಪುರದಲ್ಲಿ ಉತ್ತಮವಾದ ರಸ್ತೆಗಳಿಂದ ಕಿಶೋರ್ ಲಾಭ ಪಡೆದಿದ್ದಾನೇಯೇ?

ಸಾರಾಂಶ :

ಈ ಗ್ರಾಮದಲ್ಲಿ ವ್ಯವಸಾಯ ಮುಖ್ಯವಾದ ಕೆಲಸ. ಕಾಲಕ್ರಮದಲ್ಲಿ ವ್ಯವಸಾಯ ಪದ್ಧತಿಯಲ್ಲಿ ಅನೇಕ ಬದಲಾವಣೆಗಳು ಬಂದವು. ಇದರಿಂದ ನಿಗದಿತ ಭೂಮಿಯಲ್ಲಿ ರೈತರು ಮತ್ತಷ್ಟು ಹೆಚ್ಚಿನ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಇದು ಮುಖ್ಯವಾದ ಪರಿಣಾಮ - ಏಕೆಂದರೆ ಭೂಮಿ ಕಡಿಮೆಯಿದೆ, ಸ್ಥಿರವಾಗಿದೆ. ಆದರೆ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲಿ ಭೂಮಿಯ ಮೇಲೆ, ಸಹಜ ಸಂಪನ್ಮೂಲಗಳ ಮೇಲೆ ಒತ್ತಡ ಹೆಚ್ಚಿತು. ಉತ್ಪತ್ತಿ ಪದ್ದತಿಗಳನ್ನು ಸಮೀಕ್ಷಿಸಿ, ಸಂಪನ್ಮೂಲಗಳನ್ನು ಸುಸ್ಥಿರ ವಿಧಾನದಲ್ಲಿ ಉಪಯೋಗಿಸಿಕೊಳ್ಳುವ ಅವಶ್ಯಕತೆ ಬಹಳಷ್ಟು ಇದೆ.

ವ್ಯವಸಾಯಕ್ಕೆ ಈಗ ಹೆಚ್ಚು ಬಂಡವಾಳ ಬೇಕಾಗುತ್ತದೆ. ಉತ್ಪತ್ತಿಯಲ್ಲಿ ಉಳಿಸಿಕೊಂಡ ಹಣದ ಮೂಲಕ ಮಧ್ಯತರಗತಿ, ದೊಡ್ಡ ರೈತರಿಗೆ ನಂತರ ಬೆಳೆಗೆ ಬಂಡವಾಳ ಏರ್ಪಾಟಾಗುತ್ತದೆ. ಇನ್ನೊಂದು ಕಡೆ ಭಾರತ ದೇಶದಲ್ಲಿ 87% ಇರುವ ಸಣ್ಣ ರೈತರಿಗೆ ಬಂಡವಾಳ ಸಿಗುವುದು ಕಷ್ಟವಾಗುತ್ತದೆ. ಅವರ ಸಾಗುವಳಿ ಭೂಮಿ ಕಡಿಮೆಯಿರುವುದರಿಂದ ಅವರ ಉತ್ಪತ್ತಿ ಸರಿಹೋಗದು. ಹೆಚ್ಚಿನ ಉತ್ಪತ್ತಿ ಇಲ್ಲದಿದ್ದರಿಂದ ಅವರ ಉಳಿತಾಯದಿಂದ ಬಂಡವಾಳ ಸಿಗದೆ ಸಾಲ ಮಾಡಬೇಕಾಗಿ ಬರುತ್ತದೆ. ಕಡಿಮೆ ಆದಾಯ ಕಾರಣದಿಂದ ಸಣ್ಣ ರೈತರು ವ್ಯವಸಾಯ ಕೂಲಿ ಕೆಲಸಕ್ಕೆ ಹೋಗಬೇಕಾಗಿ ಬರುತ್ತದೆ.

ಉತ್ಪತ್ತಿ ಕಾರಕಗಳಲ್ಲಿ ಶ್ರಮ ಮುಖ್ಯವಾದ ಕಾರಣವಾದುದರಿಂದ ಹೊಸ ವ್ಯವಸಾಯ ಪದ್ಧತಿಗಳು ಹೆಚ್ಚು ಶ್ರಮವನ್ನು ಉಪಯೋಗಿಸಿಕೊಂಡರೆ ಉತ್ತಮವಾಗಿರುತ್ತದೆ. ದುರದೃಷ್ಟವಶಾತ್ ಈಗೇನು ನಡೆಯಲಿಲ್ಲ. ವ್ಯವಸಾಯದಲ್ಲಿ ಶ್ರಮವನ್ನು ಮಿತವಾಗಿ ಉಪಯೊಗಿಸಿಕೊಳ್ಳುತ್ತಿದ್ದಾರೆ. ಆದರಿಂದ ಕಾರ್ಮಿಕರು ಅವಕಾಶಗಳಿಗಾಗಿ ಹುಡುಕುತ್ತಾ ನೆರೆ ಗ್ರಾಮ, ಪಟ್ಟಣ, ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವು ಜನ ಕಾರ್ಮಿಕರು ಗ್ರಾಮದಲ್ಲಿ ವ್ಯವಸಯೇತರ ಕೆಲಸಗಳನ್ನು ಮಾಡುತ್ತಿದ್ದಾರೆ.

ಪ್ರಸ್ತುತ ಗ್ರಾಮದಲ್ಲಿ ವ್ಯವಸಾಯೇತರ ಕೆಲಸಗಳು ಹೆಚ್ಚಾಗಿಲ್ಲ. ಗ್ರಾಮಗಳಲ್ಲಿ ಅನೇಕ ವಿಧಗಳ ವ್ಯವಸಾಯೇತರ ಕೆಲಸಗಳಲ್ಲಿ ನಾವು ಕೆಲವು ಉದಾಹರಣೆಗಳೇ ನೋಡಿದ್ದೇವೆ) ಬಹಳ ಸ್ವಲ್ಪ ಜನಕ್ಕೆ ಉದ್ಯೋಗ ಸಿಗುತ್ತದೆ. 2009-2010 ರಲ್ಲಿ ಭಾರತ ದೇಶದಲ್ಲಿನ ಪ್ರತಿ 100 ಮಂದಿ ಗ್ರಾಮೀಣ ಕಾರ್ಮಿಕರಲ್ಲಿ 32 ಮಂದಿ ವ್ಯವಸಾಯೇತರ ಕೆಲಸದಾರಿದ್ದಾರೆ. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಹಾಮಿ ಯೋಜನೆ ಕೆಳಗೆ ವಿವಿಧ ಕೆಲಸ ಮಾಡುವವರು ಸಹ ಇದರಲ್ಲಿದ್ದಾರೆ. ಈ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಜಗ ಹಾಮಿ ಯೋಜನೆಯ ಸ್ವಲ್ಪ ಹೆಚ್ಚಿನ ಆದಾಯ ದೊರೆತ್ತಿದೆ.

SCERT TELANGANA

ಭವಿಷ್ಯತ್ತಿನಲ್ಲಿ ಗ್ರಾಮಗಳಲ್ಲಿ ವ್ಯವಸಾಯೇತರ ಉತ್ಪತ್ತಿ ಚಟುವಟಿಕೆಗಳು ಇನ್ನೂ ಹೆಚ್ಚಾಗಬೇಕು. ವ್ಯವಸಾಯ ಮಾತ್ರವಲ್ಲದೇ ವ್ಯವಸಾಯೇತರ ಕೆಲಸಗಳಿಗೆ ಬಹಳ ಕಡಿಮೆ ಭೂಮಿ ಬೇಕು. ಸ್ವಲ್ಪ ಬಂಡವಾಳವಿರುವವರು ವ್ಯವಸಾಯೇತರ ಕೆಲಸಗಳು ಮಾಡಬಹುದು. ಯಾರಿಗಾದರೂ ಬಂಡವಾಳ ಹೇಗೆ ಲಭಿಸುತ್ತದೆ? ಇದಕ್ಕೆ ಸ್ವಂತವಾಗಿರುವ ಉಳಿತಾಯ ಮೊತ್ತವನ್ನು ಉಪಯೋಗಿಸಬಹುದು. ಆದರೆ ಆಗಾಗ್ಗೆ ಅದರ ಸಲುವಾಗಿ ಸಾಲ ತೆಗೆದುಕೊಳ್ಳಬೇಕಾಗಿ ಬರುತ್ತದೆ. ಕಡಿಮೆ ಬಡ್ಡಿಯಿಂದ ಸಾಲಗಳು ದೊರೆಯುವುದು ಮುಖ್ಯ, ಆಗ ಉಳಿತಾಯ ಹಣ ಇಲ್ಲದವರು ಸಹ ಸಾಲ ತೆಗೆದುಕೊಂಡು ಯಾವುದೋ ಒಂದು ವ್ಯವಸಾಯೇತರ ಕೆಲಸ ಕೈಗೊಳ್ಳುತ್ತಾರೆ. ವ್ಯವಸಾಯೇತರ ಕೆಲಸಗಳು ವಿಸ್ತರಿಸಲು ಮತ್ತೊಂದು ಮುಖ್ಯವಾದ ಅವಶ್ಯಕತೆ ಉತ್ಪತ್ತಿ ಮಾಡಿದ ವಸ್ತು, ಸೇವೆಗಳನ್ನು ಮಾರುವುದಕ್ಕಾಗಿ ಮಾರ್ಕೆಟ್ ಇರುವುದು. ರಾಂಪುರದಲ್ಲಿ ಉತ್ಪತ್ತಿಯಾಗುತ್ತಿದ್ದ ಹಾಲು, ಬೆಲ್ಲ, ಗೋಧಿಯಂತಹ ಬೆಲೆಗಳಿಗೆ ನೆರೆಹೊರೆಯ ಗ್ರಾಮ, ಪಟ್ಟಣ, ನಗರಗಳಲ್ಲಿ, ಮಾರ್ಕೆಟ್ ಇರುವುದನ್ನು ನೋಡಿದ್ದೇವೆ. ಸುವ್ಯವಸ್ಥಿತ ರಸ್ತೆಗಳು,ಸಾರಿಗೆ, ಟೆಲಿಫೋನ್, ಸೌಕರ್ಯದಂತವುಗಳನ್ನು ಅಭಿವೃದ್ಧಿಪಡಿಸಿದ್ದರಿಂದ ಗ್ರಾಮಗಳಿಗೆ ಪಟ್ಟಣಗಳು, ನಗರಗಳೊಂದಿಗೆ ಒಳ್ಳೆಯ ಅನುಸಂಧಾನ ಏರ್ಪಟ್ಟು ಮುಂಬರುವ ವರ್ಷಗಳಲ್ಲಿ ಗ್ರಾಮಗಳಲ್ಲಿ ವ್ಯವಸಾಯೇತರ ಉತ್ಪತ್ತಿ ಚಟುವಟಿಕೆಗಳು ಹೆಚ್ಚಾಗುತ್ತವೆ.

ಮುಖ್ಯ ಪದಗಳು

ಉತ್ಪತ್ತಿಕಾರಕಗಳು **ಭೂಮಿ** **ಶ್ರಮ** **ನಿರ್ವಹಣ ಬಂಡವಾಳ**

ಸ್ಥಿರ ಬಂಡವಾಳ **ಉಳಿತಾಯ(ಹೆಚ್ಚಳ)** **ವ್ಯವಸಾಯ ಚಟುವಟಿಕೆಗಳು** **ವ್ಯವಸಾಯೇತರ ಚಟುವಟಿಕೆಗಳು**

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ಭಾರತ ದೇಶದಲ್ಲಿನ ಪ್ರತಿ ಗ್ರಾಮವನ್ನು ಪ್ರತಿ ಹತ್ತು ವರ್ಷಕ್ಕೆ ಒಂದು ಸಲ ಜನಸಂಖ್ಯಾ ಗಣನೆಯಲ್ಲಿ ಸರ್ವೆ ಮಾಡಿ ಕೆಳಗೆ ಕೊಟ್ಟ ವಿವರಗಳನ್ನು ನಮೋದಿಸುತ್ತಾರೆ. ರಾಂಪುರಕ್ಕೆ ಸಂಬಂಧಿಸಿದ ಸಮಾಚಾರ ಆಧಾರವಾಗಿ ಕೆಳಗಿನ ವಿವರಗಳನ್ನು ತುಂಬಿರಿ. (AS_3)
   ಅ. ಎಲ್ಲಿದೆ (ನೆಲ)
   ಆ. ಗ್ರಾಮದ ಒಟ್ಟು ವಿಸ್ತೀರ್ಣ
   ಇ. ಭೂ ವಿನಿಯೋಗ ಹೆಕ್ಟೇರ್‌ಗಳಲ್ಲಿ

ಸಾಗುವಳಿಯಲ್ಲಿರುವ ಭೂಮಿ		ಸಾಗುವಳಿಗೆ ಉಪಯೋಗವಿಲ್ಲದ ಭೂಮಿ (ಮನೆ, ರಸ್ತೆ, ಕೆರೆಗಳು, ಬಂಜರು ಭೂಮಿಗಳೂ ಇರುವ ಪ್ರಾಂತ)
ನೀರಾವರಿಯ ಕೆಳಗೆ	ನೀರಾವರಿ ಇಲ್ಲದಂತೆ	
		26 ಹೆಕ್ಟೇರುಗಳು

ಈ. . ಸೌಕರ್ಯಗಳು

ವಿದ್ಯೆ	
ವೈದ್ಯ	
ಮಾರುಕಟ್ಟೆ	
ವಿದ್ಯುತ್ ಸರಬರಾಜು	
ಸಂಪರ್ಕ ಮಾಧ್ಯಮಗಳು	
ಸಮೀಪ ಪಟ್ಟಣ	

SCERT TELANGANA

2 . ರಾಂಪುರದಲ್ಲಿನ ವ್ಯವಸಾಯ ಕೂಲಿಗಳಿಗೆ ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿ ದೊರೆಯುತ್ತದೆ ಏಕೆ ?(AS_1)

3 . ನಿಮ್ಮ ಪ್ರಾಂತದಲ್ಲಿನ ಇಬ್ಬರು ಕೂಲಿಗಳ ಜೊತೆ ಮಾತನಾಡಿರಿ. ಇದಕ್ಕೆ ವ್ಯವಸಾಯ ಕೂಲಿಗಳನ್ನಾಗಲಿ ಭವನ ನಿರ್ಮಾಣದಲ್ಲಿ ಕೆಲಸ ಮಾಡುವವರನ್ನಾಗಲಿ ಆಯ್ದುಕೊಳ್ಳಿ ಅವರಿಗೆ ಎಷ್ಟು ಕೂಲಿ ದೊರೆಯುತ್ತದೆ ? ಅವರಿಗೆ ನಗದು ರೂಪದಲ್ಲಿ ಕೊಡುತ್ತಾರಾ? ವಸ್ತು ರೂಪದಲ್ಲಾ? ಅವರಿಗೆ ಕ್ರಮ ತಪ್ಪದೇ ಕೆಲಸ ಸಿಗುತ್ತದೆಯೇ ? ಅವರು ಸಾಲದಲ್ಲಿದ್ದಾರಾ?(AS_3)

4 . ಒಂದೇ ವಿಸ್ತೀರ್ಣವಿರುವ ಭೂಮಿಯಿಂದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಇರುವ ಪದ್ದತಿಗಳು ಯಾವುವು? ಕೆಲವು ಉದಾಹರಣೆಗಳೊಂದಿಗೆ ವಿವರಿಸಿರಿ. (AS_1)

5 . ಮಧ್ಯತರಗತಿ, ದೊಡ್ಡ ರೈತರಿಗೆ ವ್ಯವಸಾಯಕ್ಕೆ ಅವಸರವಾದ ಬಂಡವಾಳ ಹೇಗೆ ಪೂರೈಕೆಯಾಗುತ್ತದೆ ? ಸಣ್ಣ ರೈತರಿಗೂ ಇವರಿಗೆ ಮಧ್ಯ ಇರುವ ವ್ಯತ್ಯಾಸವೇನು? (AS_1)

6. ಯಾವ ನಿಯಮಗಳ ಮೇಲೆ ತೇಜ್‌ಪಾಲ್‌ನಿಂದ ಸವಿತ ಸಾಲ ಪಡೆದಳು? ಕಡಿಮೆ ಬಡ್ಡಿಗೆ ಬ್ಯಾಂಕ್‌ನಿಂದ ಸಾಲ ಸಿಕ್ಕರೆ ಸವಿತ ಪರಿಸ್ಥಿತಿ ಬದಲಾಗುತ್ತಿತ್ತೇ ? (AS_1)

7 . ನಿಮ್ಮ ಪ್ರಾಂತದಲ್ಲಿನ ದೊಡ್ಡವರ ಜೊತೆ ಮಾತನಾಡಿ ಕಳೆದ 30 ವರ್ಷಗಳಲ್ಲಿ ನೀರಾವರಿ ಪದ್ಧತಿಯಲ್ಲೂ, ವ್ಯವಸಾಯ ಪದ್ಧತಿಗಳಲ್ಲಿಯೂ ಬಂದ ಬದಲಾವಣೆಗಳನ್ನು ಕುರಿತು ಒಂದು ನಿವೇದಿಕೆ ಬರೆಯಿರಿ. (AS_3)

8 . ನಿಮ್ಮ ಪ್ರಾಂತದಲ್ಲಿ ವ್ಯವಸಾಯೇತರ ಕೆಲಸ ಯಾವುದು? ಯಾವುದಾದರೂ ಒಂದು ಕಾರ್ಯಕ್ರಮವನ್ನು ಆಯ್ದುಕೊಂಡು ಒಂದು ಸಣ್ಣ ನಿವೇದಿಕೆಯನ್ನು ತಯಾರಿಸಿರಿ. (AS_3)

9 . ಉತ್ಪತ್ತಿಗೆ ಭೂಮಿ ಮಾತ್ರವೇ ಶ್ರಮ ಕೊರತೆ ಇರುವ ಪರಿಸ್ಥಿತಿಯನ್ನು ಊಹಿಸಿಕೊಳ್ಳಿರಿ. ಆಗ ರಾಂಪುರ ಕಥೆ ಇದಕ್ಕೆ ಭಿನ್ನವಾಗಿರುತ್ತಿತ್ತಾ ? ಹೇಗೆ? ತರಗತಿಯಲ್ಲಿ ಚರ್ಚಿಸಿರಿ. (AS_1)

10. ಗೋಸಾಯಿಪುರ್, ಮಜಾಲಿಗಳು ಉತ್ತರ ಬಿಹಾರ್‌ನಲ್ಲಿನ ಎರಡು ಗ್ರಾಮಗಳು. ಎರಡು ಗ್ರಾಮಗಳಲ್ಲಿ 850 ಕುಟುಂಬದಿಂದ 250ಕ್ಕಿಂತ ಹೆಚ್ಚು ಗಂಡಸರು ಪಂಜಾಬ್ ಅಥವಾ ಹರ್ಯಾಣ ಗ್ರಾಮೀಣ ಪ್ರಾಂತಗಳಲ್ಲಿ, ಅಥವಾ ದೆಹಲಿ, ಮುಂಬೈ, ಸೂರತ್, ಹೈದರಾಬಾದ್, ನಾಗಪೂರ್‌ನಂತಹ ನಗರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗೆ ವಲಸೆ ಹೋಗುವುದು ಭಾರತ ದೇಶದ ಗ್ರಾಮಗಳಲ್ಲಿ ಸಾಧಾರಣವೇ ಪ್ರಜೆಗಳು ಹೇಗೆ ವಲಸೆ ಹೋಗುತ್ತಾರೆ? (ಕಳೆದ ಅಧ್ಯಾಯಕ್ಕೆ ನಿಮ್ಮ ಊಹೆಯನ್ನು ಜೋಡಿಸಿ) ಗೋಸಾಯಿಪೂರ್, ಮಜಾಯಿ ಗ್ರಾಮಗಳಿಂದ ವಲಸೆ ಹೋದವರು ಆಯಾ ಪ್ರಾಂತಗಳಲ್ಲಿ ಯಾವ ಕೆಲಸ ಮಾಡುತ್ತಾರೋ ಬರೆಯಿರಿ. (AS_4)

11. ಪಟ್ಟಣ ಪ್ರಾಂತಗಳಲ್ಲಿ ವಸ್ತುಗಳ ಉತ್ಪತ್ತಿಗೆ ಸಹ ಭೂಮಿ ಅಗತ್ಯ. ಗ್ರಾಮೀಣ ಪ್ರಾಂತದಲ್ಲಿ ಭೂ ವಿನಿಯೋಗಕ್ಕೆ, ಇದಕ್ಕೆ ವ್ಯತ್ಯಾಸವೇನು? (AS_1)

12. ಉತ್ಪತ್ತಿ ಚಟುವಟಿಕೆಯಲ್ಲಿ 'ಭೂಮಿ' ಎನ್ನುವ ಅರ್ಥವನ್ನು ಮತ್ತೊಂದು ಸಲ ಓದಿರಿ. ವ್ಯವಸಾಯ ಮಾತ್ರವಲ್ಲದೇ ಇತರ ಉತ್ಪತ್ತಿ ಚಟುವಟಿಕೆಯಲ್ಲಿ ಭೂಮಿ ಮುಖ್ಯವಾಗಿ ಅವಶ್ಯಕತೆ ಇರುವ ಮತ್ತೊಂದು ಮೂರು ಉದಾಹರಣೆ ಕೊಡಿ. (AS_1)

13. ಉತ್ಪತ್ತಿಗೆ, ಪ್ರತ್ಯೇಕವಾಗಿ ವ್ಯವಸಾಯಕ್ಕೆ ಅಗತ್ಯವಾದ ನೀರು ಒಂದು ಸಹಜ ಸಂಪನ್ಮೂಲ. ಈಗ ಇವುಗಳನ್ನು ಪಡೆಯುವುದಕ್ಕೆ ಇದರ ವಿನಿಯೋಗಕ್ಕೆ ಹೆಚ್ಚು ಬಂಡವಾಳ ಅಗತ್ಯವಾಗುತ್ತದೆ. ಈ ವಾಕ್ಯಗಳನ್ನು ವಿವರಿಸಿರಿ.(AS_2)

SCERT TELANGANA

ಅಧ್ಯಾಯ 9

ಪ್ರಪಂಚೀಕರಣ







ಅ & ಆ) ಶಾಲೆಗೆ ಹೋಗುವುದು ಇ) ಶಾಲಾ ಪ್ರವೇಶದ್ವಾರ ಈ) ತರಗತಿ ಕೋಣೆಯಲ್ಲಿ ಉ) ಕಪ್ಪು ಹಲಗೆ ಹತ್ತಿರ ಟೀಚರ್ – ನಿಮಗೆ ಇಂಟರ್ನೆಟ್ ಸೌಕರ್ಯ ಇದ್ದರೆ ಕೆಳಗಿನ ಲಿಂಕ್‌ನಲ್ಲಿ ಪೂರ್ತಿ ಪ್ರಕಟನೆಯನ್ನು ನೋಡಿರಿ:
http://www.youtube.com/watch?v=VHYtShXI510

ನೀವು ಮೇಲೆ ನೋಡುತ್ತಿರುವುದು ಲಂಡನ್‌ನಿಂದ ಪ್ರಚುರಿತವಾಗುತ್ತಿರುವ ಒಂದು ಪತ್ರಿಕಾ ಪ್ರಕಟನೆ. ಭಾರತದೇಶದಲ್ಲಿ ಚಂದಾದಾರರ ಸಂಖ್ಯೆ ಹೆಚ್ಚಿಸಿಕೊಳ್ಳುವುದು ಇದರ ಉದ್ದೇಶ. ಭಾರತೀಯ ಓದುಗರನ್ನು ಆಕರ್ಷಿಸಲು ಚೈನಾದಂತಹ ದೇಶಗಳು ಭಾರತದೇಶದ ಮೇಲೆ ಶ್ರದ್ದೆ ಇಟ್ಟು ಭಾರತೀಯ ಭಾಷೆಗಳನ್ನು ಕಲಿತುಕೊಳ್ಳುತ್ತಿದ್ದಾರೆಂದು ಅದು ಹೇಳುತ್ತಿರುವ ಹಾಗೆ ಇದೆ. ಇದು ಭಾರತೀಯ ಉತ್ಪತ್ತಿದಾರರು ಅಥವಾ ವ್ಯಾಪಾರಸ್ತರನ್ನು ಉದ್ದೇಶಿಸಿರಬಹುದು ಇಲ್ಲವೇ ಭಾರತದೇಶಕ್ಕೆ ಹೋಗಿ ಕೆಲಸ ಮಾಡಿಕೊಂಡಿರಬೇಕೆಂದುಕೊಂಡ ಚೈನಾ ಕಾರ್ಮಿಕರನ್ನು ಉದ್ದೇಶಿಸಿರಬಹುದು. ಅಂದರೆ ಈ ಪ್ರಕಟನೆಯಲ್ಲಿ ಪ್ರಪಂಚೀಕರಣದ ವಿವಿಧ ಕೋನಗಳನ್ನು ನೀವು ನೋಡಬಹುದು. ಬ್ರಿಟನ್‌ನಲ್ಲಿ ಇಂಗ್ಲೀಷ್‌ನಲ್ಲಿಮುದ್ರಣವಾಗುತ್ತಿರುವ ಪತ್ರಿಕೆ ಭಾರತದೇಶದಲ್ಲಿ ಕೊಳ್ಳುವವರಿಗಾಗಿ ನೋಡುತ್ತದೆ. ಚೈನಾದವರು ಭಾರತೀಯ ಭಾಷೆಗಳನ್ನು ಕಲಿಯಲು ಪ್ರಯತ್ನಿಸುತ್ತಾ, ಭಾರತದೇಶದಲ್ಲಿ ತಮ್ಮ ವಸ್ತುಗಳನ್ನು ಮಾರಬೇಕೆಂದು ತಮ್ಮ ಕಾರ್ಮಿಕರನ್ನು ಅಲ್ಲಿಗೆ ಕಳಿಸಬೇಕೆಂದೂ, ಭಾರತೀಯ ಭಾಗಸ್ವಾಮಿಗಳಿಂದ ವ್ಯಾಪಾರ ಮಾಡಬೇಕೆಂದು ಅಂದುಕೊಳ್ಳುತ್ತಾರೆ.

SCERT TELANGANA

20ನೇ ಶತಮಾನದ ಕೊನೆಯಲ್ಲಿ ಪ್ರಪಂಚ ವ್ಯಾಪ್ತವಾಗಿ ಜರುಗಿದ ಮುಖ್ಯವಾದ ಪರಿಣಾಮಗಳಲ್ಲಿ ಪ್ರಪಂಚೀಕರಣ ಒಂದು. ಇದಕ್ಕೆ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಕೋನಗಳಿವೆ. ಇದರಲ್ಲಿಯ ಕೆಲವು ಅಂಶಗಳನ್ನು 8,9 ನೇ ತರಗತಿಯಲ್ಲಿ ಸೇವಾರಂಗದ ಕಾಲ್‌ಸೆಂಟರ್ ನಂತಹ ಹೊಸ ಉದ್ಯೋಗ ಅವಕಾಶಗಳ ಆವಿರ್ಭಾವವನ್ನು ಕಂಡಿದ್ದೀರಿ. ಮಾರ್ಕೆಟ್‌ಗಳಲ್ಲಿ ಬೃಹತ್ ಪ್ರಮಾಣದಲ್ಲಿ ವಿನಿಯೋಗ ವಸ್ತುಗಳು ಲಭಿಸುತ್ತವೆಯೆಂದು ನಿಮಗೆ ಗೊತ್ತು. ಅಂತರಾಷ್ಟ್ರೀಯ ಆರ್ಥಿಕ ಬದಲಾವಣೆಗಳಿಂದ ನಾವು ಮೂರು ವಿಧದ ಪ್ರವಾಹ ಗಳನ್ನು ಗುರ್ತಿಸಬಹುದು. ಮೊದಲನೆಯದು ವಸ್ತು-ಸೇವೆಗಳ ಪ್ರವಾಹ. ಎರಡನೇಯ ಶ್ರಮ-ಪ್ರವಾಹ. ಉದ್ಯೋಗಗಳನ್ನು ಹುಡಿಕಿ ಕೊಳ್ಳುತ್ತಾ ಪ್ರಜೆಗಳು ವಲಸೆ ಹೋಗುವುದು. ಮೂರನೇಯದು ಬಂಡವಾಳ ಪ್ರವಾಹ, ಸ್ವಲ್ಪ ಕಾಲ ಇಲ್ಲವೇ ದೀರ್ಘಕಾಲ ಪ್ರಯೋಜನೆಗಳಿ ಗಾಗಿ ದೂರ ಪ್ರಾಂತಗಳಿಗೆ ಬಂಡವಾಳ ಪ್ರವಹಿಸುವುದು ಇವಲ್ಲದೇ ಪ್ರಪಂಚೀಕರಣವು ರಾಜಕೀಯ, ಸಾಂಸ್ಕೃತಿಕ ವಿವಿಧ ಕೋಣಗಳಿಂದ ಕೂಡಿದೆ. ಉದಾಹರಣೆಗೆ ಪಶ್ಚಿಮ ಆಸಿಯಾ, ಉತ್ತರ ಆಫ್ರಿಕಾದ ಟ್ಯೂನೀಷಿಯಾ, ಈಜಿಪ್ಟುನಂತಹ ಅನೇಕ ದೇಶಗಳು ಒಂದಕ್ಕೊಂದು ಪ್ರಭಾವಿತವಾಗಿ ತಮ್ಮ ದೇಶಗಳಲ್ಲಿರುವ ನಿಯಂತ್ರರನ್ನು(Dictators) ತೊಲಗಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಪ್ರಸಾರ ಮಾಧ್ಯಮದಲ್ಲಿ ಇದನ್ನೇ "ಅರಬ್ ವಸಂತವಾಗಿ" ಹೆಸರಿಸಿದ್ದಾರೆ. ಈ ದೇಶಗಳಲ್ಲಿ ಪ್ರಸಾರ ಮಾಧ್ಯಮಗಳು ಮುಖ್ಯವಾದ ಪಾತ್ರವನ್ನು ಪೋಷಿಸಿದ್ದಾವೆ. ಇತರ ದೇಶಗಳ ಯಾಜಮಾನ್ಯದಲ್ಲಿದ್ದು ಅವರಿಂದ ನಡೆಯುತ್ತಿರವ ಟಿ.ವಿ. ಚಾನೆಲ್‌ಗಳು ಪ್ರಜೆಗಳಿಗೆ ಬೆಂಬಲ ಕೊಡುವುದರಿಂದ, ಸ್ಥಾನಿಕ ನಾಯಕರ ಅಧಿಕಾರಗಳನ್ನು ನಿಯಂತ್ರಿಸುವುದು ಸುಲಭ. ಪೌರಯುದ್ಧ, ಸುನಾಮಿಗಳಂತಹ ಪ್ರಕೃತಿ ವೈಪರಿತ್ಯಗಳು ರಾಷ್ಟ್ರೀಯ ಸರಿಹದ್ದುಗಳ ಒಳಗೆ ಚರ್ಚಿಸಿದ್ದಾಗ್ಯೂ ಅವುಗಳಿಗೆ ಪ್ರಪಂಚದ ನಾಲ್ಕು ಮೂಲೆಗಳಿಂದ ಸಹಾಯ, ಸಾನೂಭೂತಿ ಲಭಿಸುವುದು ಪ್ರಪಂಚೀಕರಣ ಕೇವಲ ಮಾರ್ಕೆಟ್‌ಗೆ ಪರಿಮಿತವಾಗಿಲ್ಲ. ಆಲೋಚನೆಗಳು, ಭಾವನೆಗಳೂ ಹಂಚಿಕೊಂಡು ವಿಸ್ತೃತವಾಗುತ್ತಿದೆ.

- ಮೊಬೈಲ್ ಫೋನ್‌ಗಳು ಇಲ್ಲವೇ ವಾಹನ ಒಂದನ್ನು ತೆಗೆದುಕೊಳ್ಳಿರಿ. ಮಾರ್ಕೆಟ್‌ಗಳಲ್ಲಿರುವ ಬ್ರಾಂಡ್‌ಗಳನ್ನು ಗುರ್ತಿಸಿರಿ. ಅವುಗಳ ಯಜಮಾನರು ಯಾರು ? ಅವು ಭಾರತ ದೇಶದಲ್ಲಿ ತಯಾರು ಆಗುತ್ತವೆಯಾ ? ನಿಮ್ಮ ತಂದೆ ತಾಯಿಯವರ ಹತ್ತಿರ ಚರ್ಚಿಸಿರಿ - 30 ವರ್ಷಗಳ ನಂತರ ಎಷ್ಟು ಬ್ರಾಂಡ್ ಅದರಲ್ಲಿದ್ದಾವೆ, ತಿಳಿದುಕೊಳ್ಳಿರಿ.

ಈ ಪಾಠದಲ್ಲಿ ಪ್ರಪಂಚೀಕರಣದ ಭಾಗದಲ್ಲಿ ಕಳೆದ 30-40 ವರ್ಷಗಳಲ್ಲಿ ಸಂಭವಿಸಿದ ಆರ್ಥಿಕ ಅಂಶಗಳನ್ನು ನೋಡೋಣ.

ಹಲವು ದೇಶಗಳಲ್ಲಿ ಉತ್ಪತ್ತಿ :

20ನೇ ಶತಮಾನದ ಮಧ್ಯಭಾಗದವರೆಗೂ ಉತ್ಪತ್ತಿಯು ಪ್ರಧಾನವಾಗಿ ದೇಶದ ಒಳಗೆ ನಿರ್ವಹಿಸುತ್ತಿದ್ದರು. ಕಚ್ಚಾ ವಸ್ತುಗಳು, ಆಹಾರ ಧಾನ್ಯಗಳು, ತಯಾರಾದ ವಸ್ತುಗಳು ಮಾತ್ರ ದೇಶದ ಗಡಿಯನ್ನು ದಾಟಿ ಹೋಗುತ್ತಿದ್ದವು. ಭಾರತದಂತಹ ವಲಸೆ ದೇಶಗಳು ಕಚ್ಚಾ ವಸ್ತುಗಳು, ಆಹಾರ ಧಾನ್ಯಗಳನ್ನು ರಫ್ತು ಮಾಡಿ - ತಯಾರಾದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದವು. ದೂರ ದೇಶಗಳನ್ನು ಸೇರಿಸಲು ವಾಣಿಜ್ಯವೇ ಪ್ರಧಾನ ಮಾರ್ಗವಾಗಿತ್ತು. ಇದು ದೊಡ್ಡ ಬಹುಳ ಜಾತಿ ಸಂಸ್ಥೆಗಳು (MNCs) ರಂಗ ಪ್ರವೇಶ ಮಾಡುವ ಮೊದಲ ಪರಿಸ್ಥಿತಿ. ಒಂದು ದೇಶಕ್ಕಿಂತ ಹಲವಾರು ದೇಶಗಳಲ್ಲಿ ಉತ್ಪತ್ತಿಯನ್ನು ಕೈಹಿಡಿದು ಅಥವಾ ಉತ್ಪತ್ತಿಗಳನ್ನು ನಿಯಂತ್ರಿಸುವ ಸಂಸ್ಥೆಗಳನ್ನೇ ಬಹುಳಜಾತಿ ಸಂಸ್ಥೆ (MNC) ಎನ್ನುವರು. ಕಾರ್ಮಿಕರು ಇತರ ಸಂಪನ್ಮೂಲಗಳು ಅಗ್ಗದ ಧರದಲ್ಲಿ ಲಭಿಸುವ ಪ್ರಾಂತಗಳಲ್ಲಿ ಬಹುಜಾತಿ ಸಂಸ್ಥೆಗಳು ತಮ್ಮ ಕಾರ್ಯಾಲಯಗಳನ್ನು, ಕಾರ್ಖಾನೆಗಳನ್ನು ಸ್ಥಾಪಿಸುವವು. ಉತ್ಪತ್ತಿ ಖರ್ಚುಗಳನ್ನು ಕಡಿಮೆ ಮಾಡಿ ತಮ್ಮ ಲಾಭಗಳನ್ನು ಬೆಳೆಸಲು ಬಹುಳಜಾತಿ ಸಂಸ್ಥೆಗಳು ಹೀಗೆ ಮಾಡುತ್ತವೆ.

SCERT TELANGANA

ಈ ಉದಾಹರಣೆಯನ್ನು ಗಮನಿಸಿರಿ, ಕೈಗಾರಿಕೆಗಳ ಪರಿಕರಗಳನ್ನು ತಯಾರಿಸುವ ಒಂದು ದೊಡ್ಡ ಬಹುಳಜಾತಿ ಸಂಸ್ಥೆಯು ಅದನ್ನು ಅಮೇರಿಕಾದ ಪರಿಶೋಧನಾ ಕೇಂದ್ರದಲ್ಲಿ ಡಿಜೈನ್ ಮಾಡುತ್ತದೆ. ಅದರಲ್ಲಿನ ಬಿಡಿಭಾಗಗಳನ್ನು ಚೈನಾದಲ್ಲಿ ತಯಾರಿಸುತ್ತಾರೆ. ಈ ಬಿಡಿಭಾಗಗಳನ್ನು ಮೆಕ್ಸಿಕೋ, ಪೂರ್ವ ಯೂರೋಪ್ ದೇಶಗಳಿಗೆ ಕಳುಹಿಸಿ ಅಲ್ಲಿ ಅಸೆಂಬ್ಲಿಂಗ್ ಮಾಡುವರು. ಆ ನಂತರ ಪೂರ್ಣಗೊಂಡ ವಸ್ತುಗಳನ್ನು ಪ್ರಪಂಚ ವ್ಯಾಪ್ತವಾಗಿ ಮಾರುತ್ತಾರೆ. ಭಾರತದೇಶದಲ್ಲಿನ ಕಾಲ್‌ಸೆಂಟರ್‌ಗಳು ಈ ಸಂಸ್ಥೆಗಳು 'ವಿನಿಯೋಗದಾರರಿಗೆ ಸೇವೆ'(Customer Care)ಗಳ ಮೂಲಕ ಸೇವೆಗಳನ್ನು ಒದಗಿಸುತ್ತಾರೆ. (ಈ ದೇಶಗಳನ್ನು ಪ್ರಪಂಚ ನಕ್ಷೆಗಳಲ್ಲಿ ಗುರ್ತಿಸಿರಿ.)

ಈ ಉದಾಹರಣೆಯಲ್ಲಿ ಬಹುಳಜಾತಿ ಸಂಸ್ಥೆ ತನ್ನ ವಸ್ತುಗಳನ್ನು ಪ್ರಪಂಚವ್ಯಾಪ್ತವಾಗಿ ಮಾರುವುದಲ್ಲದೇ ವಸ್ತು. ಸೇವೆಗಳ ಉತ್ಪತ್ತಿ ಪ್ರಪಂಚವ್ಯಾಪ್ತವಾಗಿ ವಿಸ್ತರಿಸುವಂತೆ ಮಾಡಿದೆ. ಇದರ ಫಲಿತವಾಗಿ ಉತ್ಪತ್ತಿ ಪ್ರಕ್ರಿಯೆ ಅನೇಕ ಸಂಕೀರ್ಣ ರೂಪಗಳಲ್ಲಿ ನಿರ್ವಹಿಸಲಾಗುತ್ತದೆ. ಉತ್ಪತ್ತಿ ಪ್ರಕ್ರಿಯೆಯನ್ನು ಸಣ್ಣ ಸಣ್ಣ ಭಾಗಗಳಾಗಿ ಮಾಡಿ ಅದನ್ನು ಪ್ರಪಂಚದಲ್ಲಿ ಅನೇಕ ಕಡೆ ನಿರ್ವಹಿಸುವರು. ಮೇಲಿನ ಉದಾಹರಣೆಯಲ್ಲಿ ಕಡಿಮೆ ಖರ್ಚಿನಿಂದ ಉತ್ಪತ್ತಿ ಮಾಡುವ ದೇಶವಾಗಿ ಚೈನಾಕ್ಕೆ ಉಪಯೋಗವಾಗಿದೆ. ಅಮೇರಿಕಾ, ಯೂರೋಪ್‌ಗಳಲ್ಲಿನ ಮಾರ್ಕೆಟ್‌ಗಳಿಗೆ ಸಮೀಪವಾಗಿರುವುದರಿಂದ ಮೆಕ್ಸಿಕೋ, ಪೂರ್ವ ಯೂರೋಪ್‌ಗಳಲ್ಲಿ ಅಸೆಂಬ್ಲಿಂಗ್ ಮಾಡುವರು. ಭಾರತ ದೇಶದಲ್ಲಿ ಇಂಗ್ಲೀಷ್ ಮಾತನಾಡುವ ವಿದ್ಯಾವಂತ ಯುವಕರ ಕಸ್ಟಮರ್ ಕೇರ್ ಸೇವೆಗಳನ್ನು ಕಲ್ಪಿಸುವರು. ಇವೆಲ್ಲವುಗಳ ಫಲಿತವಾಗಿ ಬಹುಳಜಾತಿ ಸಂಸ್ಥೆಗಳಿಗೆ 50%-60% ಉಳಿತಾಯವಾಗುತ್ತದೆ. ಉತ್ಪತ್ತಿಯನ್ನು ದೇಶ ಗಡಿಯನ್ನು ದಾಟಿ ಕೈಹಿಡಿಯುವುದರಿಂದ ಬಹುಳ ಜಾತಿ ಸಂಸ್ಥೆಗಳಿಗೆ ಬಹಳ ಲಾಭಗಳಿದ್ದಾವೆ.

ದೇಶಗಳ ಮಧ್ಯೆ ಉತ್ಪತ್ತಿಯನ್ನು ಅನುಸಂಧಾನ ಮಾಡುವುದು :

ಬಹುರಾಷ್ಟ್ರೀಯ ಸಂಸ್ಥೆಗಳು ಕೆಲಸದ ಪ್ರದೇಶವನ್ನು ಆಯ್ದುಕೊಳ್ಳಲು ಇರುವ ಸಾಧಾರಣ ಸೂಚಿಕೆಗಳು ಮಾರ್ಕೆಟ್‌ಗಳಿಗೆ ಹತ್ತಿರವಾಗಿರಬೇಕು. ಕಡಿಮೆ ಖರ್ಚಿನಲ್ಲಿಯೇ ನೈಪುಣ್ಯವಿರುವ / ನೈಪುಣ್ಯ ಇಲ್ಲದ ಕಾರ್ಮಿಕರ ಲಭ್ಯತೆ; ಇತರ ಉತ್ಪತ್ತಿ ಕಾರಕಗಳ ಲಭ್ಯತೆ. ತಮ್ಮ ಪ್ರಯೋಜನಗಳನ್ನು ಕಾಪಾಡುವ ಸರ್ಕಾರದ ವಿಧಾನಗಳು ; ಭೂಮಿ, ಭವನಗಳು, ಯಂತ್ರ ಇತರ ಸಾಮಗ್ರಿಗಳಿಗಾಗಿ ಬಹುಳಜಾತಿ ಸಂಸ್ಥೆಗಳು ಖರ್ಚು ಮಾಡುವ ಮೊತ್ತವನ್ನೇ ವಿದೇಶಿ ಬಂಡವಾಳ ಎನ್ನುವರು. ಲಾಭಗಳನ್ನು ಸಂಪಾದಿಸಿಕೊಡುತ್ತಾವೆ ಎನ್ನುವ ಆಸೆಯಿಂದ ಇಂತಹ ಬಂಡವಾಳಗಳನ್ನು ಇಡುತ್ತಾರೆ.

ಕೆಲವು ಸಂದರ್ಭಗಳಲ್ಲಿ ಬಹುಳಜಾತಿ ಕಂಪನಿಗಳು ಆಯಾ ದೇಶಗಳ ಸ್ಥಾನಿಕ ಕಂಪನಿಗಳೊಂದಿಗೆ ಸೇರಿ ಉತ್ಪತ್ತಿ ಮಾಡುತ್ತವೆ. ಇವುಗಳನ್ನು ಜಾಯಿಂಟ್ ವೆಂಚರ್‌ಗಳೆನ್ನುವರು. ಬಹುಳಜಾತಿ ಸಂಸ್ಥೆಗಳು ತರುವ ಆಧುನಿಕ ಸಾಂಕೇತಿಕ ಪರಿಜ್ಞಾನದಿಂದ, ಅಧಿಕವಾದ ಬಂಡವಾಳಗಳಿಂದ ಸ್ಥಾನಿಕ ಕಂಪನಿಗಳು ಪ್ರಯೋಜನಗಳನ್ನು ಹೊಂದುತ್ತವೆ.

ಆದರೆ ಬಹಳ ಸಂದರ್ಭಗಳಲ್ಲಿ ಬಹುಳಜಾತಿ ಬಂಡವಾಳಶಾಹಿಗಳು ಸ್ಥಾನಿಕ ಕಂಪನಿಗಳನ್ನುಕೊಂಡು ಉತ್ಪತ್ತಿಯನ್ನು ವಿಸ್ತರಿಸಿಕೊಳ್ಳುತ್ತವೆ. ದೊಡ್ಡ ಮೊತ್ತದಲ್ಲಿ ನಿಧಿಗಳಿರುವ ಬಹುಳಜಾತಿ ಕಂಪನಿಗಳು ಈ ಕೆಲಸವನ್ನು ಸುಲಭವಾಗಿ ಮಾಡುತ್ತವೆ. ಉದಾಹರಣೆಗೆ ಕಾರ್ಗಿಲ್ ಫುಡ್ಸ್ ಎನ್ನುವ ಅಮೇರಿಕಾದ ದೊಡ್ಡ ಬಹುಳಜಾತಿ ಸಂಸ್ಥೆಯು "ಫಾರಖ್ ಫುಡ್ಸ್" ಎನ್ನುವ ಸಣ್ಣ ಭಾರತೀಯ ಕಂಪನೀಯನ್ನು ಕೊಂಡಿತು. ಫಾರಖ್ ಫುಡ್ಸ್‌ಗೆ ನಾಲ್ಕು ಎಣ್ಣೆ ಶುದ್ಧಿ ಕಾರ್ಖಾನೆಗಳು, ಭಾರತ ದೇಶವೆಲ್ಲಾ ದೊಡ್ಡ ಮಾರ್ಕೆಟಿಂಗ್ ನೆಟ್‌ವರ್ಕ್, ತಮ್ಮ ಬ್ರಾಂಡ್‌ಗೆ ಒಳ್ಳೆಯ ಹೆಸರಿದೆ. ಸ್ಥಾನಿಕ ಕಂಪನೀಗಳನ್ನು ಕೊಂಡ ಮೇಲೆ ಭಾರತದೇಶದಲ್ಲಿ ಅಡುಗೆ ಎಣ್ಣೆಯಲ್ಲಿ ಕಾರ್ಗಿಲ್ ಅತಿದೊಡ್ಡ ಉತ್ಪತ್ತಿದಾರನಾಗಿ ಪರಿಣಮಿಸಿತು.

ಬಹುರಾಷ್ಟ್ರೀಯ ಸಂಸ್ಥೆಗಳು ಉತ್ಪತ್ತಿಯನ್ನು ಮತ್ತೊಂದು ವಿಧವಾಗಿ ಕೂಡ ನಿಯಂತ್ರಿಸುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬೃಹತ್ ಬಹುಳಜಾತಿ ಸಂಸ್ಥೆಗಳು ಸಣ್ಣ ಉತ್ಪತ್ತಿದಾರರಿಗೆ ಉತ್ಪತ್ತಿಸಲು ಆರ್ಡರ್‌ಗಳು ಕೊಡುತ್ತವೆ. ಪ್ರಪಂಚವಾಪ್ತವಾಗಿ ಸಣ್ಣ ಉತ್ಪತ್ತಿದಾರರು ವಸ್ತ್ರಗಳು, ಚಪ್ಪಲಿಗಳು, ಕ್ರೀಡಾ ವಸ್ತುಗಳನ್ನು, ಆಟದ ಸಾಮಾಗ್ರಿಗಳನ್ನು ಉತ್ಪತ್ತಿ



ಮಾಡಿ ಬಹುಳಜಾತಿ ಸಂಸ್ಥೆಗಳಿಗೆ ನೀಡುತ್ತವೆ. ಅವು ಈ ವಸ್ತುಗಳಿಗೆ ತಮ್ಮ ಬ್ರಾಂಡ್ ಹೆಸರುಗಳೊಂದಿಗೆ ವಿವನಿಯೋಗದಾರರಿಗೆ ಮಾರುತ್ತವೆ. ಈ ಸಣ್ಣ ಉತ್ಪತ್ತಿದಾರರಿಗೆ ಕೊಡುವ ಧರ, ನಾಣ್ಯತೆ, ವಸ್ತುಗಳನ್ನು ಕೊಡುವ ಸಮಯ, ಕಾರ್ಮಿಕರ ಪರಿಸ್ಥಿತಿಗಳನ್ನು ಪ್ರಭಾವಿತ ಮಾಡುವ ಅಧಿಕಾರ ಬಹುಳಜಾತಿ ಸಂಸ್ಥೆಗಳಿಗೆ ಇರುತ್ತದೆ. ಬಹುಳಜಾತಿ ಸಂಸ್ಥೆಗಳ ಕಾರಣವಾಗಿ ದೂರಪ್ರಾಂತದಲ್ಲಿರುವ ಉತ್ಪತ್ತಿ ಮಧ್ಯ ಅನುಸಂಧಾನವು ಏರ್ಪಡುತ್ತದೆ.

ವಿದೇಶಿ ವಾಣಿಜ್ಯ - ಮಾರುಕಟ್ಟೆಗಳ ಅನುಸಂಧಾನ :

ದೇಶಗಳ ಮಧ್ಯ ಅನುಸಂಧಾನವಾಗಿ ಬಹಳ ಕಾಲದಿಂದಲೂ

ಫೋರ್ಡ್‌ಮೋಟಾರ್ಸ್ ಎನ್ನುವ ಅಮೇರಿಕಾ ಕಂಪನಿ ಪ್ರಪಂಚವ್ಯಾಪ್ತವಾಗಿ 26 ದೇಶಗಳಲ್ಲಿ ಉತ್ಪತ್ತಿ ಸೌಕರ್ಯಗಳನ್ನು ಹೊಂದಿ ಅತಿದೊಡ್ಡ ಕಾರುಗಳ ಉತ್ಪತ್ತಿದಾರನಾಗಿದೆ. ಫೋರ್ಡ್‌ಮೋಟಾರ್ಸ್ 1995ರಲ್ಲಿ ಭಾರತದೇಶಕ್ಕೆ ಬಂದು 1700 ಕೋಟಿ ರೂಪಾಯಿಯೊಂದಿಗೆ ಚೈನ್ನೈ ಹತ್ತಿರ ಕಾರ್ಖಾನೆಯನ್ನು ಸ್ಥಾಪಿಸಿತು. ಭಾರತದೇಶದಲ್ಲಿ ಜೀಪುಗಳು, ಲಾರಿಗಳು, ಅತಿದೊಡ್ಡ ಕಂಪನಿಯಾದ ಮಹೇಂದ್ರ ಅಂಡ್ ಮಹೇಂದ್ರದೊಂದಿಗೆ ಸೇರಿ ಈ ಕಾಖಾರನೆಯನ್ನು ಸ್ಥಾಪಿಸಿದರು. 2004 ರ ಹೊತ್ತಿಗೆ ಫೋರ್ಡ್ ಮೋಟಾರ್ಸ್ ಭಾರತದೇಶದಲ್ಲಿ 27,000 ಕಾರುಗಳು ಮಾರಾಟಮಾಡಿತು. ಭಾರತದೇಶದಿಂದ ದಕ್ಷಿಣಾಫ್ರಿಕಾ, ಮೆಕ್ಸಿಕೋ, ಬ್ರೆಜಿಲ್ ದೇಶಗಳಿಗೆ ಇನ್ನೂ 24,000 ಕಾರುಗಳನ್ನು ರಫ್ತು ಮಾಡಿತು. ಇತರ ದೇಶಗಳಲ್ಲಿ ಉತ್ಪತ್ತಿ ಕೇಂದ್ರಗಳಿಗೆ ಬಿಡಿ ಭಾಗಗಳನ್ನು ಸರಬರಾಜು ಮಾಡುವಂತೆ ಫೋರ್ಡ್ ಇಂಡಿಯಾವನ್ನು ಅಭಿವೃದ್ಧಿ ಮಾಡಬೇಕೆಂಬ ಸಂಕಲ್ಪದಲ್ಲಿ ಕಂಪನಿ ಇದೆ.

- ಫೋರ್ಡ್‌ಮೋಟಾರ್ಸ್ ಬಹುಳ ಜಾತಿ ಕಂಪನಿಯೇ ? ಏಕೆ ?
- ವಿದೇಶಿ ಬಂಡವಾಳ ಎಂದರೇನು ? ಫೋರ್ಡ್ ಮೋಟಾರ್ಸ್ ಭಾರತದೇಶದಲ್ಲಿ ಎಷ್ಟು ಬಂಡವಾಳ ಹೂಡಿದೆ ?

- ಫೋರ್ಡ್ ಮೋಟಾರ್ಸ್‌ನಂತಹ ಬಹುಳಜಾತಿ ಕಂಪನಿಗಳು ಭಾರತದೇಶಲ್ಲೇ ಕಾರುಗಳ ಉತ್ಪತ್ತಿ ಮಾಡುವ ಕಾರ್ಖಾನೆ ಸ್ಥಾಪಿಸುವುದರಿಂದ ಅಂತಹ ದೇಶಗಳಲ್ಲಿರುವ ಬೃಹತ್ ಮಾರುಕಟ್ಟೆಗಳಲ್ಲದೇ ಕಡಿಮೆ ಉತ್ಪತ್ತಿ ಖರ್ಚಿನಿಂದ ಕೂಡ ಲಾಭ ಪಡೆಯುತ್ತವೆ. ಈ ವ್ಯಾಖ್ಯೆಯನ್ನು ವಿವರಿಸಿರಿ.
- ಪ್ರಪಂಚವ್ಯಾಪ್ತ ಕಾರುಗಳ ಉತ್ಪತ್ತಿಗೆ ಭಾರತದೇಶದ ಬಿಡಿಭಾಗಗಳನ್ನೇ ಉಪಯೋಗಿಸಲು ಅಭಿವೃದ್ಧಿ ಮಾಡಬೇಕೆಂದು ಕಂಪನಿ ಏಕೆ ಅಂದುಕೊಳ್ಳುತ್ತಿದೆ ? ಕೆಳಗಿನ ಅಂಶಗಳನ್ನು ಚರ್ಚಿಸಿರಿ.
  (ಅ) ಭಾರತದೇಶಲ್ಲಿ ಕಾರ್ಮಿಕರು, ಇತರ ಸಂಪನ್ಮೂಲ ಖರ್ಚು.
  (ಆ) ಫೋರ್ಡ್‌ಮೋಟಾರ್ಸ್‌ಗೆ ವಿವಿಧ ಬಿಡಿಭಾಗಗಳನ್ನು ಕೊಡುವ ಸ್ಥಾನಿಕ ಉತ್ಪತ್ತಿದಾರರು ಇರುವುದು.
  (ಇ) ಭಾರತದೇಶದಲ್ಲಿ, ಚೈನಾದಲ್ಲಿ ಅಧಿಕ ಜನರು ಕಾರುಕೊಳ್ಳುವವರು ಇರುವುದು.
- ಭಾರತದೇಶದಲ್ಲಿ ಫೋರ್ಡ್‌ಮೋಟಾರ್ಸ್ ಕಾರುಗಳ ಉತ್ಪತ್ತಿ ಮಾಡುವುದರಿಂದ ಉತ್ಪತ್ತಿ ಕಾರ್ಯಕಲಾಪಗಳಲ್ಲಿ ಎಂತಹ ಅನುಸಂಧಾನ ಜರುಗಿದೆ ?
- ಇತರ ಕಂಪನಿಗಳಿಗೆ, ಬಹುಳಜಾತಿ ಸಂಸ್ಥೆಗಳಿಗೆ ಇರುವ ವ್ಯತ್ಯಾಸಗಳಾವುವು ?
- ನೈಕೋ, ಕೊಕಾಕೋಲಾ, ಪೆಪ್ಸೀ, ಹೊಂಡಾ, ನೋಕಿಯಾದಂತಹ ಬಹುಳಜಾತಿ ಕಂಪನಿಗಳು ಎಲ್ಲವೂ ಅಮೇರಿಕಾ, ಜಪಾನ್ ಇಲ್ಲವೇ ಯೂರೋಪಿಗೆ ಸೇರಿದವೆ ? ಏಕೆ ಊಹಿಸಬಲ್ಲಿರಾ ?

SCERT TELANGANA

ವಾಣಿಜ್ಯವು ಇದೆ. ಭಾರತದೇಶ, ದಕ್ಷಿಣ ಏಷ್ಯಾದಿಂದ ಪೂರ್ವ, ಪಶ್ಚಿಮದ ಕಡೆಗೆ ಇರುವ ಮಾರುಕಟ್ಟೆಗಳಿಗೆ ಇರುವ ವ್ಯಾಪಾರ ಮಾರ್ಗಗಳ ಕುರಿತು ಈ ದಾರಿಗಳ ಹಿಂದೆ ನಡೆದ ದೊಡ್ಡ ಮೊತ್ತದ ವ್ಯಾಪಾರಗಳ ಕುರಿತು ನಾವು ಚರಿತ್ರೆಯಲ್ಲಿ ಓದಿದ್ದೇವೆ. ವಾಣಿಜ್ಯ ಪ್ರಯೋಜನೆಗಳಿಗಾಗಿ ಈಸ್ಟ್ ಇಂಡಿಯಾ ಕಂಪನಿ ಯಂತಹ ವಾಣಿಜ್ಯ ಸಂಸ್ಥೆಗಳು ಭಾರತದೇಶಕ್ಕೆ ಬಂದಿರುವ ವಿಷಯ ಕೂಡ ನಿಮಗೆ ತಿಳಿದಿರಬಹುದು. ಆದರೆ ಈ ವಿದೇಶಿ ವ್ಯಾಪಾರಕ್ಕೆ ಮೂಲವಿಧಿ ಯಾವುದು ?

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಉತ್ಪತ್ತಿದಾರರಿಗೆ ದೇಶಿಯ ಮಾರ್ಕೆಟ್‌ಗಳಿಗಿಂತ ಒಳ್ಳೆಯ ಅವಕಾಶಗಳನ್ನು ವಿದೇಶಿ ವಾಣಿಜ್ಯ ಒದಗಿಸುತ್ತದೆ. ಅದೇ ವಿಧವಾಗಿ ಕೊಂಡುಕೊಳ್ಳುವವರಿಗೆ ಸ್ಥಾನಿಕವಾಗಿ ಉತ್ಪತ್ತಿಯಾದ ವಸ್ತುಗಳೇ ಅಲ್ಲದೇ ಇತರ ವಸ್ತುಗಳು ಕೂಡ ಅವರಿಗೆ ದೊರೆಯುತ್ತವೆ, ಎಂದರೆ ವಿದೇಶಿ ವಾಣಿಜ್ಯ ವಿವಿಧ ದೇಶಗಳ ಮಾರ್ಕೆಟ್‌ಗಳನ್ನು ಅನುಸಂಧಾನ ಮಾಡುತ್ತದೆ.

ಬಹುರಾಷ್ಟ್ರೀಯ ಕಂಪನಿಗಳು, ಪ್ರಪಂಚೀಕರಣ :

ಕಳೆದ ಮೂರ್‍ನಾಲ್ಕು ದಶಮಾನಗಳಿಂದ ಬಹಳ ಬಹುರಾಷ್ಟ್ರೀಯ ಸಂಸ್ಥೆಗಳು ತಾವು ಅಗ್ಗವಾಗಿ ಉತ್ಪತ್ತಿ ಮಾಡುವ ಅವಕಾಶಗಳಿರುವ ಪ್ರದೇಶಗಳಿಗಾಗಿ ಪ್ರಪಂಚದ ನಾಲ್ಕು ಮೂಲೆಗಳಲ್ಲಿ ಹುಡುಕಿದ್ದಾರೆ. ಆಯಾ ದೇಶಗಳಲ್ಲಿ ಈ ಬಹು ರಾಷ್ಟ್ರೀಯ ಕಂಪನಿಗಳ ವಿದೇಶಿ ಬಂಡವಾಳ ಹೆಚ್ಚಾಗಿವೆ. ಅದೇ ಸಮಯದಲ್ಲಿ ದೇಶಗಳ ಮಧ್ಯೆ ವಿದೇಶಿ ವಾಣಿಜ್ಯವು

- ಹಿಂದೆ ದೇಶಗಳನ್ನು ಸೇರಿಸಿದ ಪ್ರಧಾನ ಅಂಶ ಯಾವುದು ? ಹಿಂದಿಗೂ, ಪ್ರಸ್ತು ಪರಿಸ್ಥಿತಿಗೆ ವ್ಯತ್ಯಾಸ ಯಾವುದು ?
- ವಿದೇಶಿ ವಾಣಿಜ್ಯ – ವಿದೇಶಿ ಬಂಡವಾಳಗಳಿಗಿರುವ ವ್ಯತ್ಯಾಸ ಯಾವುದು ?
- ಇತ್ತೀಚಿನ ದಿನಗಳಲ್ಲಿ ಭಾರತದೇಶದಿಂದ ಚೈನಾ ಉಕ್ಕನ್ನು ಆಮದು ಮಾಡಿಕೊಳ್ಳುತ್ತದೆ. ಈ ಆಮದುಗಳು ಇವುಗಳನ್ನು ಹೇಗೆ ಪ್ರಭಾವಿತ ಮಾಡುತ್ತವೆ ಹೇಳಿರಿ.
  (ಅ) ಚೈನಾದಲ್ಲಿನ ಉಕ್ಕು ಕಾರ್ಖಾನೆಗಳು.
  (ಆ) ಭಾರತದೇಶದಲ್ಲಿನ ಉಕ್ಕು ಕಾರ್ಖಾನೆಗಳು.
  (ಇ) ಚೈನಾದಲ್ಲಿ ಇತರ ಕೈಗಾರಿಕಾ ವಸ್ತುಗಳು ತಯಾರು ಮಾಡಲು ಉಕ್ಕನ್ನು ಕೊಂಡುಕೊಳ್ಳುವ ಕೈಗಾರಿಕೆಗಳು.
- ಚೈನಾದೊಳಗೆ ಭಾರತದ ಉಕ್ಕನ್ನು ಆಮದು ಮಾಡಿಕೊಳ್ಳುವುದರಿಂದ ಎರಡು ದೇಶಗಳ ಉಕ್ಕಿನ ಮಾರ್ಕೆಟ್‌ಗಳು ಹೇಗೆ ಅನುಸಂಧಾನವಾಗುತ್ತಿವೆ ?

ಚೈನಾ ಉತ್ಪತ್ತಿದಾರರು ಭಾರತದೇಶಕ್ಕೆ ಪ್ಲಾಸ್ಟಿಕ್ ಗೊಂಬೆಗಳನ್ನು ರಫ್ತು ಮಾಡಿದರು. ಭಾರತದೇಶದಲ್ಲಿನಕೊಳ್ಳುವವರರಿಗೆ ಈಗ ಭಾರತೀಯ, ಚೈನಾ ಗೊಂಬೆಗಳ ಆಯ್ಕೆಗೆ ಅವಕಾಶವಿದೆ. ಹೊಸ ಡಿಜೈನ್, ಕಡಿಮೆ ಧರ ಕಾರಣವಾಗಿ ಚೈನಾದ ಗೊಂಬೆಗಳು ಬಹಳ ಆದರಣ ಹೊಂದಿವೆ. ಒಂದು ವರ್ಷ ಅವಧಿಯಲ್ಲಿ ಗೊಂಬೆಗಳ ಅಂಗಡಿಯಲ್ಲಿ ಶೇಕಡ 70-80 ಭಾರತೀಯ ಗೊಂಬೆಗಳಿಗೆ ಬದಲಾಗಿ ಚೈನಾ ಗೊಂಬೆಗಳನ್ನು ಮಾರಿದ್ದಾರೆ. ಹಿಂದಿಗಿಂತಲೂ ಈಗ ಭಾರತದೇಶಲ್ಲಿ ಗೊಂಬೆಗಳು ಅಗ್ಗವಾಗಿ ದೊರೆಯುತ್ತವೆ.

ಚೈನಾದ ಗೊಂಬೆಗಳ ಉತ್ಪತ್ತಿದಾರರಿಗೆ ಇದು ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳಲು ಅವಕಾಶಕೊಟ್ಟಿದೆ. ಭಾರತೀಯ ಗೊಂಬೆಗಳ ಉತ್ಪತ್ತಿದಾರರಿಗೆ ಇದು ವಿರುದ್ಧವಾಗಿದೆ. ಸ್ಪರ್ಧೆ ಇರುವುದರಿಂದ ಭಾರತೀಯ ಉತ್ಪತ್ತಿದಾರರು ಹೊಸ ಮಾರ್ಗಗಳನ್ನು ಅನ್ವೇಷಿಸಬೇಕಾಗಿ ಬಂದಿದೆ. ಈ ಪ್ರಕ್ರಿಯೆಯಲ್ಲಿ ಕೆಲವು ಜನರು ನಷ್ಟ ಹೊಂದಿದರು.

ಸಹ ವೇಗವಾಗಿ ಹೆಚ್ಚಿದೆ. ವಿದೇಶಿ ವಾಣಿಜ್ಯದಲ್ಲಿ ಸಹ ಅಧಿಕ ಭಾಗವನ್ನು ಬಹುರಾಷ್ಟ್ರೀಯ ಸಂಸ್ಥೆಗಳೇ ನಿಯಂತ್ರಿಸುತ್ತಿದ್ದಾವೆ. ಉದಾಹರಣೆಗೆ ಭಾರತದೇಶದಲ್ಲಿನ ಫೋರ್ಡ್‌ಮೋಟಾರ್ಸ್ ಕಾರುಗಳ ತಯಾರಿ ಕಾರ್ಖಾನೆಯಲ್ಲಿ ಭಾರತೀಯ ಮಾರ್ಕೆಟ್‌ಗಳಲ್ಲದೇ ಇತರ ಅಭಿವೃದ್ಧಿ ಹೊಂದಿದ ದೇಶಗಳಿಗೆ ಕಾರುಗಳನ್ನು ರಫ್ತು ಮಾಡುತ್ತಿದೆ. ಕಾರುಗಳ ಬಿಡಿಭಾಗಗಳನ್ನು ಪ್ರಪಂಚವೆಲ್ಲಾ ಇರುವ ತನ್ನ ಕಾರ್ಖಾನೆಗಳಿಗೆ ರಫ್ತು ಮಾಡುತ್ತಿದೆ. ಇದೇ

SCERT TELANGANA

- ಪ್ರಪಂಚೀಕರಣ ಪ್ರಕ್ರಿಯೆಯಲ್ಲಿ ಬಹುಳಜಾತಿ ಸಂಸ್ಥೆಗಳ ಪಾತ್ರವೇನು ?
- ದೇಶಗಳನ್ನು ಅನುಸಂಧಾನ ಮಾಡುವ ವಿವಿಧ ಮಾರ್ಗಗಳಾವುವು ?
- ಸರಿಯಾದ ಸಮಾಧಾನವನ್ನು ಆಯ್ದುಕೊಳ್ಳಿರಿ :

ಪ್ರಪಂಚೀಕರಣ ದೇಶಗಳನ್ನು ಅನುಸಂಧಾನ ಮಾಡುವುದರಿಂದ :

(ಅ) ಉತ್ಪತ್ತಿದಾರರ ಮಧ್ಯೆ ಪೈಪೋಟಿಯನ್ನು ಕಡಿಮೆಗೊಳಿಸುತ್ತದೆ.

(ಆ) ಉತ್ಪತ್ತಿದಾರರ ಮಧ್ಯೆ ಪೈಪೋಟಿಯನ್ನು ಹೆಚ್ಚಿಸುತ್ತದೆ.

(ಇ) ಉತ್ಪತ್ತಿದಾರರ ಮಧ್ಯೆ ಪೈಪೋಟಿಯಲ್ಲಿ ವ್ಯತ್ಯಾಸಗಳಿರುವುದಿಲ್ಲ.

ವಿಧವಾಗಿ ಅನೇಕ ಬಹುರಾಷ್ಟ್ರೀಯ ಕಂಪನಿಗಳು ವಸ್ತುಗಳು–ಸೇವೆಗಳ ವಾಣಿಜ್ಯದಲ್ಲಿ ಕೂಡ ಪ್ರಧಾನಪಾತ್ರವಹಿಸುತ್ತವೆ.

ಅಧಿಕ ವಿದೇಶಿ ಬಂಡವಾಳ, ಅಧಿಕ ವಿದೇಶಿ ವಾಣಿಜ್ಯದಿಂದ ವಿವಿಧ ದೇಶಗಳ ಉತ್ಪತ್ತಿ, ಮಾರ್ಕೆಟ್ ಮಧ್ಯ ಅನುಸಂಧಾನವು ಬೆಳೆದಿದೆ. ವೇಗವಾಗಿ ಬೆಳೆಯುವ ಈ ದೇಶಗಳ ಅನುಸಂಧಾನ, ಅಂತಃ ಸಂಬಂಧಗಳೇ ಪ್ರಪಂಚೀಕರಣ.



ಈ ಪ್ರಪಂಚೀಕರಣ ಪ್ರಕ್ರಿಯೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಪ್ರಧಾನ ಪಾತ್ರ ಪೋಷಿಸುತ್ತವೆ. ದೇಶಗಳ ಮಧ್ಯ ವಸ್ತುಗಳು–ಸೇವೆಗಳು ಬಂಡವಾಳ, ತಾಂತ್ರಿಕ ವಿಜ್ಞಾನ ಪ್ರವಾಹಗಳು ಹೆಚ್ಚುತ್ತಿವೆ. ಕೆಲವು ದಶಮಾನಗಳ ಹಿಂದಿನಿಂದ ಹೋಲಿಸಿದರೆ ಪ್ರಪಂಚದಲ್ಲಿ ಅನೇಕ ಪ್ರಾಂತಗಳ ಮಧ್ಯ ಸಮೀಪ ಸಂಬಂಧಗಳು ಏರ್ಪಟ್ಟಿವೆ.

ಬಂಡವಾಳ, ಪ್ರಜೆಗಳು, ತಾಂತ್ರಿಕ ಪರಿಜ್ಞಾನಗಳ ಪ್ರವಾಹಗಳಿಂದ ಗಡಿಗಳಿಲ್ಲದ ಪ್ರಪಂಚ ಏರ್ಪಟ್ಟಿದೆ. ಇದರ ಫಲವಾಗಿ ಅನೇಕ ದೇಶಗಳು ತಮ್ಮ ದೇಶದ ಗಡಿಗಳ ಒಳಗೆ ಕೂಡ ಜೀವಿಸಲು ಸಂಬಂಧಿಸಿದ ಅನೇಕ ಅಂಶಗಳ ಮೇಲೆ ನಿಯಂತ್ರಣೆ ಕಳೆದುಕೊಂಡಿದ್ದಾನೆ. ಉದಾಹರಣೆಗೆ ಹಿಂದೆ ಸಾರ್ವಭೌಮ ಸರ್ಕಾರಗಳು ಕರೆನ್ಸೀ ಬೆಲೆಯನ್ನು ನಿರ್ಣಯಿಸುವ ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದವು. ಈಗ ಸರ್ಕಾರ ಹೊರಗೆ ಸರ್ಕಾರಕ್ಕೆ ಎಂತಹ ನಿಯಂತ್ರಣೆ ಇಲ್ಲದ ಮಾರ್ಕೆಟ್ ಶಕ್ತಿಗಳೇ ಆ ನಿರ್ಣಯವನ್ನು ತೆಗೆದುಕೊಳ್ಳುತ್ತಿವೆ.

ಪ್ರಪಂಚೀಕರಣಕ್ಕೆ ಸಹಕರಿಸಿದ ಅಂಶಗಳು :

ತಾಂತ್ರಿಕ ಪರಿಜ್ಞಾನ (Technology) :

ಪ್ರಪಂಚೀಕರಣ ಪ್ರಕ್ರಿಯೆಗೆ ಮುಖ್ಯ ಕಾರಣ ತಾಂತ್ರಿಕ ಪರಿಜ್ಞಾನ ವೇಗವಾಗಿ ಅಭಿವೃದ್ಧಿ ಹೊಂದುವುದು. ಉದಾಹರಣೆಗೆ ಕಳೆದ 50 ವರ್ಷಗಳಲ್ಲಿ ಸಾರಿಗೆ ತಾಂತ್ರಿಕ ಪರಿಜ್ಞಾನ ಬಹಳ ಅಭಿವೃದ್ಧಿಗೊಂಡಿದೆ. ಇದರ ಫಲಿತವಾಗಿ ಬಹಳ ದೂರದ ಪ್ರಾಂತಗಳಿಗೆ ಕಡಿಮೆ ದರದಲ್ಲಿ ವಸ್ತುಗಳನ್ನು ಸಾಗಿಸುತ್ತಾರೆ.

ಸಮಾಚಾರ, ಪ್ರಸಾರ ಸಾಧನೆಗಳು ತಾಂತ್ರಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಗಣನೀಯವಾಗಿ, ವೇಗವಾಗಿ ತಂದಿದೆ. ಟೆಲಿ ಕಮ್ಯೂನಿಕೇಷನ್ ಸೇವೆಗಳು (ಟೆಲಿಗ್ರಾಫ್–ಟೆಲಿಫೋನ್–ಮೊಬೈಲ್ ಫೋನ್‌ಗಳು, ಫ್ಯಾಕ್ಸ್) ಪ್ರಪಂಚದಲ್ಲಿ ಒಬ್ಬರಿಂದ ಮತ್ತೊಬ್ಬರೊಂದಿಗೆ ಮಾತನಾಡಿಕೊಳ್ಳಲು, ಸುದೂರ ಪ್ರಾಂತಗಳಿಂದ ಸಮಾಚಾರವನ್ನು ಬೇಗನೆ ಪಡೆಯಲು ಉಪಯೋಗಿಸುತ್ತಾರೆ. ಉಪಗ್ರಹ ಪ್ರಸಾರ ಸಾಧನೆಗಳಿಂದ ಇದೆಲ್ಲಾ ಸಾಧ್ಯವಾಗಿದೆ. ಇತ್ತೀಚಿಗೆ ಎಲ್ಲ ಕ್ಷೇತ್ರಗಳಲ್ಲೂ

SCERT TELANGANA

ಲಂಡನ್‌ದಲ್ಲಿಯ ಓದುಗರಿಗಾಗಿ ಮುದ್ರಿತವಾಗುವ ಒಂದು ವಾರ್ತಾ ಪತ್ರಿಕೆಯನ್ನು ಡೆಲ್ಲಿಯಲ್ಲಿ ಡಿಜೈನ್ ಮಾಡಿ ಮುದ್ರಿಸಬೇಕು. ಪತ್ರಿಕೆಯಲ್ಲಿ ಮುದ್ರಿತವಾಗುವ ಅಂಶಗಳನ್ನು ಇಂಟರ್ನೆಟ್ ಮೂಲಕ ಡೆಲ್ಲಿಯಲ್ಲಿಯ ಕಾರ್ಯಾಲಯಕ್ಕೆ ಕಳುಹಿಸುತ್ತಾರೆ. ಟೆಲಿಕಮ್ಯೂನಿಕೇಷನ್ ಸದುಪಾಯಗಳ ಮೂಲಕ ಪತ್ರಿಕೆಯನ್ನು ಹೇಗೆ ರೂಪಿಸಬೇಕೆಂದು ಡೆಲ್ಲಿಯಲ್ಲಿಯ ಡಿಜೈನರಿಗೆ ಲಂಡನ್ ಕಾರ್ಯಾಲಯದಿಂದ ಸಮಾಚಾರ ಬರುತ್ತದೆ. ಪತ್ರಿಕೆಯ ಡಿಜೈನಿಂಗ್ ಎಲ್ಲಾ ಕಂಪ್ಯೂಟರ್‌ನಲ್ಲಿ ಜರುಗುತ್ತದೆ. ಪತ್ರಿಕೆಯನ್ನು ಮುದ್ರಿಸಿ ನಂತರ ಅವುಗಳನ್ನು ವಿಮಾನ ಮೂಲಕ ಲಂಡನ್‌ಗೆ ಕಳುಹಿಸುತ್ತಾರೆ. ಡಿಜೈನಿಂಗ್‌ಗೆ, ಮುದ್ರಣಕ್ಕೆ ಹಣ ಲಂಡನ್‌ನಲ್ಲಿನ ಬ್ಯಾಂಕ್‌ನಿಂದ ಡೆಲ್ಲಿಯಲ್ಲಿನ ಬ್ಯಾಂಕ್‌ಗೆ ಇಂಟರ್ನೆಟ್ (e-Banking) ಮೂಲಕ ತಕ್ಷಣವೇ ಕಳುಹಿಸುತ್ತಾರೆ.

- ಈ ಉದಾಹರಣೆಯಲ್ಲಿ ಉತ್ಪತ್ತಿಯಲ್ಲಿ ತಾಂತ್ರಿಕ ವಿಜ್ಞಾನ ಉಪಯೋಗವನ್ನು ತಿಳಿಸುವ ಪದಗಳ ಕೆಳಗೆ ಗೆರೆ ಎಳೆಯಿರಿ ?
- ಪ್ರಪಂಚೀಕರಣ ಸಮಾಚಾರ ತಾಂತ್ರಿಕ ಪರಿಜ್ಞಾನಕ್ಕೆ ಮಧ್ಯ ಇರುವ ಸಂಬಂಧ ಯಾವುದು ? ಸಮಾಚಾರ ಸಾಂಕೇತಿಕ ಪರಿಜ್ಞಾನ (IT) ವಿಸ್ತರಿಸದಂತೆ ಪ್ರಪಂಚೀಕರಣ ಸಾಧ್ಯವಾಗುವುದೇ ?

ಕಂಪ್ಯೂಟರ್‌ಗಳು ಪ್ರವೇಶಿಸಿದ್ದಾವೆ. ಇಂಟರ್ನೆಟ್ (ಅಂತರ್ಜಾಲ) ಎನ್ನುವ ಅದ್ಭುತ ಪ್ರಪಂಚದೊಂದಿಗೆ ನಿಮಗೆ ಈಗಾಗಲೇ ಪರಿಚಯವಿರುತ್ತದೆ. ಇದರ ಮೂಲಕ ನೀವು ಯಾವ ವಿಷಯವನ್ನಾದರೂ ಗುರ್ತಿಸಿ, ಸಮಾಚಾರವನ್ನು ಪಡೆಯಬಹುದು. ನಿಮ್ಮ ಹತ್ತಿರವಿರುವ ಸಮಾಚಾರವನ್ನು ಕಳುಹಿಸಬಹುದು. ಇಂಟರ್ನೆಟ್ ಮೂಲಕ ಪ್ರಪಂಚದಲ್ಲಿ ಎಲ್ಲಿಯಾದರೂ ಕಡಿಮೆ ಖರ್ಚಿನಿಂದ ನೀವು ತಕ್ಷಣವೇ ಎಲೆಕ್ಟ್ರಾನಿಕ್ ಮೆಯಿಲ್ (e-mail) ಕಳುಹಿಸಬಹುದು. ಬೇರೆಯವರೊಡನೆ (Voice-mail) ಮಾತನಾಡಬಹುದು.

ವಿದೇಶಿ ವಾಣಿಜ್ಯ, ವಿದೇಶಿ ಬಂಡವಾಳ ವಿಧಾನಗಳ ಸರಳೀಕರಣ :

ಭಾರತದೇಶಲ್ಲಿ ಚೈನಾದ ಗೊಂಬೆಗಳ ಆಮದು ಉದಾಹರಣೆಗೆ ಮತ್ತೊಂದು ಸಲ ಬರೋಣ. ಗೊಂಬೆಗಳ ಆಮದು ಮೇಲೆ ಭಾರತ ಸರ್ಕಾರ ತೆರಿಗೆ ವಿಧಿಸಿದೆಂದುಕೊಳ್ಳೋಣ. ತೆರಿಗೆ ಕಾರಣವಾಗಿ ಕೊಳ್ಳುವವರು ಆಮದು ಮಾಡಿಕೊಂಡ ಗೊಂಬೆಗಳ ಮೇಲೆ ಅಧಿಕವಾದ ದರ ಕೊಡಬೇಕಾಗುತ್ತದೆ. ಆಗ ಭಾರತದ ಮಾರ್ಕೆಟ್‌ಗಳಲ್ಲಿ ಚೈನಾದ ಗೊಂಬೆಗಳ ದರ ಅಧಿಕವಾಗುತ್ತದೆ. ಆದರಿಂದ ಚೈನಾದಿಂದ ಆಮದು ಕಡಿಮೆಯಾಗುತ್ತದೆ. ಭಾರತೀಯ ಉತ್ಪತ್ತಿದಾರರೂ ಬಲಪಡುತ್ತಾರೆ.





20 ವರ್ಷಗಳ ಹಿಂದೆ :

"ನಮ್ಮ ಕಂಪ್ಯೂಟರ್‌ಗಳಿಗೆ ವೇಗವಂತವಾದ ಕನೆಕ್ಷನ್ ಇದ್ದಾವೆ"

ಪ್ರಸ್ತುತ :

"ನಮ್ಮ ಮೊಬೈಲ್ ಫೋನ್‌ನಲ್ಲಿ ಸಹ ಇಂಟರ್ನೆಟ್ ಬರುತ್ತದೆ!"

20 ವರ್ಷಗಳ ಹಿಂದೆ :

"ನಮಗೂ ಇನ್ನೂ ವಿದ್ಯುತ್ ಕಡಿತ ಇದೆ"

ಪ್ರಸ್ತುತ : *"3 ಜಿ, 4 ಜಿ ಎಂದರೇನು ? ನಮಗೆ ಸ್ಥಿರವಾದ ಕನೆಕ್ಷನ್ ದೊರೆಯುವುದು ಕಷ್ಟವಿದೆ"*

ವಾಣಿಜ್ಯ ಅಡಚಣೆಗಳಿಗೆ ತೆರಿಗೆ ಒಂದು ಉದಾಹರಣೆ. ಕೆಲವು ಪರಿಮಿತಿಗಳನ್ನು ವಿಧಿಸುವುದರಿಂದ ಇದನ್ನು ಅಡಚಣೆ ಎನ್ನುವರು. ವಿದೇಶಿ ವಾಣಿಜ್ಯವನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು (ನಿಯಂತ್ರಿಸಲು) ಸರ್ಕಾರ ವಾಣಿಜ್ಯ ಅವರೋಧಗಳನ್ನು ಉಪಯೋಗಿಸುತ್ತದೆ. ಈ ವಿಧವಾಗಿ ಎಂತಹ ವಸ್ತುಗಳ ಆಮದಿಗೆ ಅನುಮತಿಸಬೇಕು, ಒಂದೊಂದನ್ನು ದೇಶದೊಳಗೆ ಎಷ್ಟು ಮೊತ್ತವನ್ನು ಆಮದು ಮಾಡಿಕೊಳ್ಳಬೇಕೆಂದು ಸರ್ಕಾರ ನಿರ್ಣಯಿಸುತ್ತದೆ.

ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ವಿದೇಶಿ ವಾಣಿಜ್ಯ ವಿದೇಶಿ ಬಂಡವಾಳಗಳಿಗೆ ಅವರೋಧಗಳನ್ನು ವಿಧಿಸಿದೆ. ದೇಶದಲ್ಲಿನ ಉತ್ಪತ್ತಿದಾರರಿಗೆ ವಿದೇಶಿ ಪೈಪೋಟಿಯಿಂದ ರಕ್ಷಣ ಕಲ್ಪಿಸುವ ಅವಸರವಿದೆಯೆಂದು ಭಾವಿಸಿತು. 1950-1960ರಲ್ಲಿ ಕೈಗಾರಿಕೆಗಳನ್ನು ಆಗಲೇ ಸ್ಥಾಪಿಸುತ್ತಿದ್ದಾರೆ. ಈ ದಿಶೆಯಲ್ಲಿ ಆಮದು ಸ್ಪರ್ಧೆಯನ್ನು ಅನುಮತಿಸಿದ್ದರೆ ಈ ಕೈಗಾರಿಕೆಗಳು ನಿಲ್ಲಲು ಆಗುತ್ತಿರಲಿಲ್ಲ. ಅದಕ್ಕಾಗಿ ಅತ್ಯವಸರ ವಸ್ತುಗಳಾದ ಯಂತ್ರ ಸಾಮಾಗ್ರಿ, ರಸಾಯನಿಕ ಗೊಬ್ಬರಗಳು, ಕಚ್ಚಾತೈಲಗಳಿಗೆ ಮಾತ್ರ ಆಮದು ಮಾಡಿಕೊಳ್ಳಲು ಸರ್ಕಾರ ಅನುಮೋದಿಸಿದೆ. ಎಲ್ಲಾ ಅಭಿವೃದ್ಧಿ ಹೊಂದಿದ ದೇಶಗಳು ಅವು ಅಭಿವೃದ್ಧಿ ಹೊಂದುತ್ತಿರುವ ದಿಶೆಯಲ್ಲಿ ತಮ್ಮ ದೇಶದ ಉತ್ಪತ್ತಿದಾರರಿಗೆ ಯಾವುದೋ ಒಂದು ವಿಧವಾಗಿ ರಕ್ಷಣೆ ಕಲ್ಪಿಸಿದ್ದಾರೆಂಬ ವಿಷಯವನ್ನು ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು.

ಆದರೆ, 1991 ರಲ್ಲಿ ಮೊದಲಾದ ದೀರ್ಘಕಾಲದಲ್ಲಿ ಪ್ರಭಾವ ತೋರಿಸುವ ಭಾರತದೇಶ ವಿಧಾನಗಳಲ್ಲಿ ಬದಲಾವಣೆ ಮಾಡಿದರು. ಭಾರತೀಯ ಉತ್ಪತ್ತಿದಾರರು ಪ್ರಪಂಚವ್ಯಾಪ್ತ ಉತ್ಪತ್ತಿದಾರರೊಂದಿಗೆ ಪೈಪೋಟಿಗೆ ಬರುವ ಸಮಯ ಬಂದಿದೆಂದು ಸರ್ಕಾರ ನಿರ್ಣಯಿಸಿದೆ. ಸ್ಪರ್ಧೆಯ ಫಲಿತವಾಗಿ ದೇಶದಲ್ಲಿನ ಉತ್ಪತ್ತಿದಾರರು ತಮ್ಮ ಉತ್ಪತ್ತಿಗಳಿಗೆ ನಾಣ್ಯತೆಯನ್ನು ಹೆಚ್ಚಿಸಿಕೊಳ್ಳಬೇಕಾಗುವುದರಿಂದ ಅವರ ಕೆಲಸದಲ್ಲಿ ಅತ್ಯುತ್ತಮವಾಗಿರಬೇಕೆಂದು ಭಾವಿಸಿದರು. ಈ ನಿರ್ಣಯಕ್ಕೆ ಬಲವಾದ ಅಂತರಾಷ್ಟ್ರೀಯ ಸಂಸ್ಥೆಗಳ ಬೆಂಬಲವಿದೆ.

- ವಿದೇಶಿ ವಾಣಿಜ್ಯ ಸರಳೀಕರಣ ಎಂದರೆ ಏನು ಅರ್ಥಮಾಡಿಕೊಂಡಿದ್ದೀರಿ ?
- ಆಮದುಗಳ ಮೇಲೆ ತೆರಿಗೆ ವಾಣಿಜ್ಯ ಅವರೋಧಕ್ಕೆ ಒಂದು ಉದಾಹರಣೆ ಆಮದು ಮಾಡಿಕೊಂಡ ವಸ್ತುಗಳ ಸಂಖ್ಯೆ / ಪರಿಮಾಣದ ಮೇಲೆ ಕೂಡ ಸರ್ಕಾರ ಪರಿಮಿತಿ ವಿಧಿಸುತ್ತದೆ. ಇದನ್ನೇ ಕೋಟಾ ಎನ್ನುವರು. ಚೈನಾಗೊಂಬೆಗಳ ಉದಾಹರಣೆಯಲ್ಲಿ ಕೋಟಾ ಉಪಯೋಗಿ ವಾಣಿಜ್ಯ ಅವರೋಧವನ್ನು ಹೇಗೆ ವಿಧಿಸಬಹುದೋ ವಿವರಿಸಿದೆ. ಈ ವಿಧಾನವನ್ನು ಉಪಯೋಗಿಸಬೇಕಾ ? ಚರ್ಚಿಸಿರಿ.

ಇದರಿಂದ ವಿದೇಶಿ ವಾಣಿಜ್ಯ, ವಿದೇಶಿ ಬಂಡವಾಳಗಳಿಗೆ ಅವರೋಧಗಳು ಬಹಳಮಟ್ಟಿಗೆ ತೊಲಗಿಸಿದ್ದಾರೆ. ಇದರ ಅರ್ಥ ದೇಶದೊಳಗೆ ವಸ್ತುಗಳನ್ನು ಸ್ವೇಚ್ಛವಾಗಿ ಆಮದು ಮಾಡಿಕೊಳ್ಳಬಹುದು. ಆಗೆಯೇ ರಫ್ತುಗಳನ್ನು ಕೂಡ ಮಾಡಬಹುದು. ವಿದೇಶಿ ಕಂಪನಿಗಳು ಇಲ್ಲಿ ಕಾರ್ಯಾಲಯಗಳನ್ನು, ಕಾರ್ಖಾನೆಗಳನ್ನು ಸ್ಥಾಪಿಸಬಹುದು.

ಸರ್ಕಾರ ವಿಧಿಸಿದ ಅವರೋಧಗಳನ್ನು, ಪರಿಮಿತಿಗಳನ್ನು ತೊಲಗಿಸುವುದನ್ನೇ ಆರ್ಥಿಕ ಸರಳೀಕರಣ ಎನ್ನುವರು. ಸರಳೀಕೃತ ವಿಧಾನಗಳ ಫಲಿತವಾಗಿ ತಾವು ಏನನ್ನು ರಫ್ತು, ಆಮದು ಮಾಡಿಕೊಳ್ಳಬೇಕೋ ಆ ವ್ಯಾಪಾರಿಗಳು, ವಾಣಿಜ್ಯದಾರರು ಸ್ವೇಚ್ಛವಾಗಿ ನಿರ್ಣಯವನ್ನು ತೆಗೆದುಕೊಳ್ಳುವರು. ಇದಕ್ಕೂ ಮೊದಲಿರುವುದಕ್ಕೆ ಹೋಲಿಸಿದರೆ ಬಹಳ ಕಡಿಮೆ ಪರಿಮಿತಿಗಳನ್ನು ಸರ್ಕಾರ ವಿಧಿಸುತ್ತದೆ ಅದಕ್ಕಾಗಿ ಇದನ್ನು ''ಸರಳೀಕೃತ ಆರ್ಥಿಕ ವಿಧಾನ'' ಎನ್ನುವರು.

ಪ್ರಪಂಚೀಕರಣಕ್ಕೆ ಚಾಲನೆಯ ಶಕ್ತಿ ಯಾವುದು ಎಂದು ಪ್ರಶ್ನೆ ಹಾಕಿಕೊಳ್ಳಬೇಕು. ಅದು ರಾಜಕೀಯ ನಿರ್ಣಯವೋ ಅಥವಾ ಆರ್ಥಿಕ, ತಾಂತ್ರಿಕ ರಂಗದಲ್ಲಿ ಕ್ರಾಂತಿಯೇ ? ಪ್ರಪಂಚೀಕರಣಕ್ಕೆ ಆರ್ಥಿಕ ರಂಗವೋ ಮೂಲ ಭಾವಿಸುವವರು ಅದಕ್ಕೆ ಆರ್ಥಿಕ ಶಕ್ತಿಗಳೇ ಕಾರಣವೆಂದು ಅದರ ಸರಿಹದ್ದುಗಳನ್ನು ಅವೇ ನಿರ್ಣಯಿಸುತ್ತವೆ ಎಂದು ವಾದಿಸುವರು. ರಾಜಕೀಯ ಕಾರಣ ಎಂದು ಭಾವಿಸುವವರು ಸರ್ಕಾರದ ನಿರ್ಣಯದಿಂದ ಇದು ಮೊದಲಾಗಿದೆ

SCERT TELANGANA

ಎಂದು ಎನ್ನುವರು. ಸರ್ಕಾರ ಪರಿಮಿತಿ ಗಳನ್ನು ವಿಧಿಸುತ್ತದೆ ಇಲ್ಲವೇ ಅವುಗಳನ್ನು ತೊಲಗಿಸುತ್ತದೆ. ಒಂದು ಪ್ರದೇಶ ಅನುಕೂಲವಾಗಿದೆಯೋ ಇಲ್ಲವೋ ಎಂದು ಗುರ್ತಿಸಲು ಮಾರ್ಕೆಟ್ ಪರಿಸ್ಥಿತಿ ಗಳೇ ಅಲ್ಲದೇ ರಾಜಕೀಯ ವಾತಾವರಣ ಕೂಡ ಮುಖ್ಯವಾದ ಅಂಶವಾಗುತ್ತದೆ. ವಾಸ್ತವವಾಗಿ ನೋಡಿದರೆ ಮೇಲಿನ ಎರಡಕ್ಕೂ ಸಂಬಂಧವಿದೆ. ಒಂದು ಪ್ರತ್ಯೇಕ ಸಮಯದಲ್ಲಿ ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವುರೆಂದು ಗುರ್ತಿಸಿದರೆ. ಇವು ಆ ಸಮಯಕ್ಕೆ ಆಗಲೇ ಬಂದ ಆರ್ಥಿಕ, ತಾಂತ್ರಿಕ ಬದಲಾವಣೆ ಪರಿಗಣನೆಯಲ್ಲಿ ತೆಗೆದು ಕೊಳ್ಳವವೆಂದು ಅರ್ಥವಾಗುತ್ತದೆ.

ಪ್ರಪಂಚ ಪರಿಪಾಲನೆಯ ಸಂಸ್ಥೆಗಳು :

ಈ ದಿನ ಪ್ರಪಂಚದಲ್ಲಿನ ಅಧಿಕಶಾತ ಜನಾಭವನ್ನು ಪ್ರಭಾವಿತಗೊಳಿಸುವ ಕೆಲವು ಕೀಲಕ ನಿರ್ಣಯಗಳನ್ನು ಪ್ರಪಂಚ ಪರಿಪಾಲನೆಯ ಸಂಸ್ಥೆಗಳು ತೆಗೆದುಕೊಳ್ಳುವವು. ಇದಕ್ಕೆ ಒಳ್ಳೆಯ ಉದಾಹರಣೆ ಹವಾಮಾನ-ಬದಲಾವಣೆ. ಮೊದಲು ಕಾರ್ಬನ್ ಉದ್ಗಾರವನ್ನು ತಗ್ಗಿಸಿಕೊಳ್ಳುವ ವಿಷಯವನ್ನು ಆಯಾ ದೇಶಗಳಿಗೆ ಬಿಟ್ಟಿದೆ. ಆದರೆ ಕಾರ್ಬನ್ ಉದ್ಗಾರವನ್ನು ತಗ್ಗಿಸಲು ಒಂದು ದೇಶ ಪ್ರಯತ್ನಿಸಿದರೆ, ಕೈಗಾರಿಕೆಗಳ ನಿಯಂತ್ರಣಗಳು ಕಡಿಮೆ ಇರುವ ಬೇರೆ ಪ್ರದೇಶಗಳಿಗೆ ಬದಲಾಗಿ ಹೋಗುವ ಸಂಭವವಿದೆ. ಅದಕ್ಕಾಗಿ ಕಾರ್ಬನ್ ಉದ್ಗಾರಗಳು – ಹವಾಮಾನ ಬದಲಾವಣೆಯ ಅಂಶಗಳ ಮೇಲೆ ಎಲ್ಲಾ ದೇಶಗಳು ಸೇರಿ ಪರಿಷ್ಕರಿಸಿಕೊಳ್ಳುವ ಅವಸರವಿದೆ.

ಪ್ರಪಂಚ ಪರಿಪಾಲನೆಯ ಸಂಸ್ಥೆಗಳಲ್ಲಿ ಒಂದಾದ ಪ್ರಪಂಚ ವಾಣಿಜ್ಯ ಸಂಸ್ಥೆ (WTO) ಕುರಿತು ವಿವರವಾಗಿ ತಿಳಿದುಕೊಳ್ಳೋಣ.

ಪ್ರಪಂಚ ವಾಣಿಜ್ಯ ಸಂಸ್ಥೆ (WTO) :

ಭಾರತದೇಶದ ವಿದೇಶಿ ವಾಣಿಜ್ಯಕ್ಕೆ ಬಂಡವಾಳದಲ್ಲಿಯ ಸರಳೀಕೃತ ವಿಧಾನಗಳಿಗೆ ಬಲವಾದ ಅಂತರಾಷ್ಟ್ರೀಯ ಸಂಸ್ಥೆಗಳ ಬಲ ಇದೆಯೆಂದು ತಿಳಿದಿದ್ದೇವೆ. ವಿದೇಶಿ ವಾಣಿಜ್ಯಕ್ಕೆ ಬಂಡವಾಳಕ್ಕೆ ಅವರೋಧಗಳು ನಷ್ಟ ತರುತ್ತವೆ ಎಂದು ಆ ಸಂಸ್ಥೆಗಳು ವಾದಿಸುತ್ತವೆ. ದೇಶಗಳ ಮಧ್ಯ ವಾಣಿಜ್ಯವು ಎಂತಹ ಅವರೋಧಗಳು ಇಲ್ಲದಂತೆ ಸ್ವೇಚ್ಛವಾಗಿರಬೇಕೆಂದು ಕೊಳ್ಳುತ್ತಾರೆ. ಅಂತರಾಷ್ಟ್ರೀಯ ವಾಣಿಜ್ಯದಲ್ಲಿ ಸರಳೀಕೃತ ವಿಧಾನಗಳು ಏರ್ಪಡುವಂತೆ ನೋಡಿಕೊಳ್ಳುವು ಉದ್ದೇಶ

ಭಾರತದೇಶದಲ್ಲಿ ವ್ಯವಸಾಯ ರಂಗವೇ ಅತ್ಯಧಿಕ ಕೆಲಸಗಳು ಕಲ್ಪಿಸುತ್ತದೆ. ಇದನ್ನು ಅಭಿವೃದ್ಧಿಗೊಂಡ ಅಮೇರಿಕಾ ದೇಶದೊಂದಿಗೆ ಹೋಲಿಸಿದರೆ ಅಮೇರಿಕಾದ GDP ಯಲ್ಲಿ ವ್ಯವಸಾಯ ಪಾಲು 1% ಆದರೆ ಮೊತ್ತ ಕೆಲಸಗಳಲ್ಲಿ 0.5% ಮಾತ್ರವೇ ವ್ಯವಸಾಯದಲ್ಲಿದ್ದಾರೆ. ಆದರೂ ಕೂಡ ಅಮೇರಿಕಾ ವ್ಯವಸಾಯ ದಲ್ಲಿರುವ ಈ ಕೆಲವು ಜನರಿಗೆ ಉತ್ಪತ್ತಿಗೆ, ಇತರ ದೇಶಗಳ ರಫ್ತುಗೆ ಅಮೇರಿಕಾ ಸರ್ಕಾರದಿಂದ ದೊಡ್ಡ ಮೊತ್ತದಲ್ಲಿ ಹಣ ಲಭಿಸುತ್ತದೆ. ದೊಡ್ಡ ಮೊತ್ತದಲ್ಲಿ ಲಭಿಸುವ ಈ ಸಬ್ಸಿಡಿಗಳಿಂದ ಅಮೇರಿಕಾ ರೈತರು ತಮ್ಮ ವ್ಯವಸಾಯ ಉತ್ಪತ್ತಿಗಳನ್ನು ಕಡಿಮೆ ಬೆಲೆಗೆ ಮಾರಿಕೊಳ್ಳುತ್ತಾರೆ. ಹೆಚ್ಚುವರಿಯಾಗಿರುವ ವ್ಯವಸಾಯ ಉತ್ಪತ್ತಿಗಳನ್ನು ಇವರು ಇತರ ದೇಶಗಳ ಮಾರ್ಕೆಟ್‌ಗಳಲ್ಲಿ ಕಡಿಮೆ ಬೆಲೆಗೆ ಮಾರುತ್ತಾರೆ. ಇದು ಆದೇಶಗಳಲ್ಲಿರುವ ರೈತರನ್ನು ತೀವ್ರವಾಗಿ ಪ್ರಭಾವ ಬೀರುತ್ತದೆ.

ಅದಕ್ಕಾಗಿ ಅಭಿವೃದ್ಧಿ ಹೊಂದಿದ ದೇಶಗಳನ್ನು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹೀಗೆ ಪ್ರಶ್ನಿಸುತ್ತಿವೆ. "ಪ್ರಪಂಚ ವಾಣಿಜ್ಯ ಸಂಸ್ಥೆಯ ನಿಯಮಗಳ ಪ್ರಕಾರ ನಾವು ವಾಣಿಜ್ಯ ಅವರೋಧಗಳನ್ನು ತೊಲಗಿಸಿದ್ದೇವೆ. ಆದರೂ ನೀವು ಆ ನಿಯಮಗಳನ್ನು ಪಾಲಿಸದಂತೆ ನಿಮ್ಮ ರೈತರಿಗೆ ದೊಡ್ಡ ಮೊತ್ತದಲ್ಲಿ ಹಣ ನೀಡುತ್ತಿದ್ದಿರಿ ನಮ್ಮ ರೈತರಿಗೆ ಬೆಂಬಲ ಕೊಡಬೇಡವೆಂದು ನಮ್ಮ ಸರ್ಕಾರಗಳಿಗೆ ಹೇಳಿ ನೀವು ನಿಮ್ಮ ರೈತರಿಗೆ ಬೆಂಬಲವನ್ನು ಮುಂದುವರಿಸುವುದು ಸ್ವೇಚ್ಛ, ನ್ಯಾಯವಾದ ವಾಣಿಜ್ಯ ಎಂದರೆ – ಇದೇನಾ ?"

- ಖಾಲೀ ಸ್ಥಳಗಳನ್ನು ಪೂರ್ತಿಗೊಳಿಸಿರಿ.

  ---------- ದೇಶಗಳ ಸಹಕಾರದೊಂದಿಗೆ ಪ್ರಪಂಚ ವಾಣಿಜ್ಯ ಸಂಸ್ಥೆ ಪ್ರಾರಂಬವಾಗಿದೆ. ಈ ಸಂಸ್ಥೆಯ ಉದ್ದೇಶ ----------ಪ್ರಪಂಚ ವಾಣಿಜ್ಯ ಸಂಸ್ಥೆ---------- ಗೆ ಸಂಬಂಧಿಸಿದ ನಿಮಯಗಳು ರೂಪಿಸಿ ------ ನೋಡುತ್ತಿದೆ. ಆದರೆ ಆಚರಣೆ ಯಲ್ಲಿ ದೇಶಗಳ ಮಧ್ಯ ವಾಣಿಜ್ಯ --------ಇಲ್ಲ. ಭಾರತದೇಶದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ---------- ಆದರೂ ಅನೇಕ ಸಂದರ್ಭಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಉತ್ಪತ್ತಿದಾರರಿಗೆ ಬೆಂಬಲ ಮುಂದುವರಿಸುತ್ತಿದ್ದಾವೆ.
- ದೇಶಗಳ ಮಧ್ಯ ವಾಣಿಜ್ಯವು ಮತ್ತಷ್ಟು ನ್ಯಾಯಬದ್ಧವಾಗಿರಬೇಕೆಂದರೆ ಏನು ಮಾಡಬೇಕು ?
- ಮೇಲಿನ ಉದಾಹರಣೆಯಲ್ಲಿ ಅಮೇರಿಕಾ ಸರ್ಕಾರ ಉತ್ಪತ್ತಿ ಮಾಡುವ ರೈತರಿಗೆ ದೊಡ್ಡ ಮೊತ್ತದಲ್ಲಿ ಹಣ ಕೊಡುತ್ತದೆ ಎಂದು ಕೇಳಿದ್ದೇವೆ. ಕೆಲವು ಸಲ ಸರ್ಕಾರ ಕೆಲವು ವಸ್ತುಗಳ, ಉದಾಹರಣೆಗೆ ಪರ್ಯಾವರಣಕ್ಕೆ ಅನುಕೂಲವಾದವುಗಳ ಉತ್ಪತ್ತಿಗೆ ಬೆಂಬಲ ನೀಡುತ್ತದೆ. ಇದು ನ್ಯಾಯವಾದುದೋ ಅಲ್ಲವೋ ಚರ್ಚಿಸಿರಿ ?

SCERT TELANGANA

ಹೊಂದಿದ ಸಂಸ್ಥೆಯೇ ಪ್ರಪಂಚ ವಾಣಿಜ್ಯ ಸಂಸ್ಥೆ. ಅಭಿವೃದ್ಧಿ ಹೊಂದಿದ ದೇಶಗಳ ಸಹಕಾರದಿಂದ ಏರ್ಪಟ್ಟ ಈ ಸಂಸ್ಥೆಯು ಅಂತರಾಷ್ಟ್ರೀಯ ವಾಣಿಜ್ಯಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ರೂಪಿಸಿ ಅವುಗಳನ್ನು ದೇಶಗಳು ಪಾಲಿಸುವಂತೆ ನೋಡುತ್ತದೆ. ಪ್ರಸ್ತುತ ಪ್ರಪಂಚದಲ್ಲಿ ಸುಮಾರು 150 ದೇಶಗಳು ಪ್ರಪಂಚ ವಾಣಿಜ್ಯ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೆ.

ಪ್ರಪಂಚ ವಾಣಿಜ್ಯ ಸಂಸ್ಥೆಯು ಎಲ್ಲಾ ದೇಶಗಳು ಸ್ವೇಚ್ಚ ವಾಣಿಜ್ಯವನ್ನು ರೂಪಿಸಿಕೊಳ್ಳುವಂತೆ ನೋಡಬೇಕು. ಆದರೆ ಆಚರಣೆಯಲ್ಲಿ ಅಭಿವೃದ್ಧಿ ಹೊಂದಿದ್ದ ದೇಶಗಳು ಅನ್ಯಾಯವಾದ ವಾಣಿಜ್ಯ ಅವರೋಧಗಳನ್ನು ಇನ್ನೂ ಕೊನೆಸಾಗಿಸುತ್ತಿವೆ. ಪ್ರಪಂಚ ವಾಣಿಜ್ಯ ಸಂಸ್ಥೆಯ ನಿಯಮಗಳು, ಅಭಿವೃದ್ಧಿ ಹೊಂದಿದ ದೇಶಗಳಿಗೆ ವಾಣಿಜ್ಯ ಅವರೋಧಗಳನ್ನು ತೊಲಗಿಸಬೇಕೆಂದು ಒತ್ತಡ ತರುತ್ತಿದೆ. ವ್ಯವಸಾಯ ಉತ್ಪತ್ತಿಯ ವಾಣಿಜ್ಯದ ಮೇಲೆ ಪ್ರಸ್ತುತ ನಡೆಯುತ್ತಿರುವ ಚರ್ಚೆ ಇದಕ್ಕೆ ಉದಾಹರಣೆಯು.

ಭಾರತದೇಶದ ಮೇಲೆ ಪ್ರಪಂಚೀಕರಣದ ಪ್ರಭಾವ :

ಪ್ರಪಂಚೀಕರಣ ಫಲಿತವಾಗಿ ಪ್ರಜೆಗಳ ಜೀವನಶೈಲಿ ಯಾವ ರೀತಿ ಪ್ರಭಾವಗೊಳ್ಳುತ್ತಿದೆ. ಪ್ರಪಂಚೀಕರಣದಿಂದ ವಿನಿಯೋಗದಾರರು, ಪ್ರತ್ಯೇಕವಾಗಿ ಪಟ್ಟಣಗಳಲ್ಲಿರುವ ಶ್ರೀಮಂತ ವರ್ಗದವರಿಗೆ ಇದು ಅನುಕೂಲವಾಗಿದೆ. ಇವರ ಆಯ್ಕೆಗೆ ತಕ್ಕ ವಸ್ತುಗಳು ಲಭಿಸುತ್ತಿವೆ. ವಸ್ತುಗಳ ಉತ್ಪತ್ತಿಯ ನಾಣ್ಯತೆಯಿಂದ ಕೂಡಿದ ಬೆಲೆಗಳೂ ಕಡಿಮೆಯೇ, ಫಲಿತವಾಗಿ ಪ್ರಜೆಗಳು ಮೊದಲಿಗಿಂತ ಉತ್ತಮ ಜೀವನ ಪ್ರಮಾಣಗಳನ್ನು ಅನುಭವಿಸುತ್ತಿದ್ದಾರೆ. ಉತ್ಪತ್ತಿದಾರರು, ಕಾರ್ಮಿಕರ ಮೇಲೆ ಪ್ರಪಂಚೀಕರಣ ಪ್ರಭಾವವು ಒಂದೇ ವಿಧವಾಗಿಲ್ಲ.

ಬಹುಳ ಜಾತಿ ಸಂಸ್ಥೆಗಳು ಭಾರತದೇಶದಲ್ಲಿ ತಮ್ಮ ಬಂಡವಾಳಗಳನ್ನು ವೃದ್ಧಿಗೊಳಿಸಿದ್ದಾವೆ. ಅಂದರೆ ಭಾರತದೇಶದಲ್ಲಿ ಬಂಡವಾಳ ಹೂಡುವುದು ಅವರಿಗೆ ಲಾಭಸಾಟಿಯಾಗಿದೆ. ಮೊಬೈಲ್‌ಫೋನ್, ವಾಹನಗಳು, ಎಲೆಕ್ಟ್ರಾನಿಕ್ಸ್, ತಂಪಾದ ಪಾನಿಯಗಳು, ಫಾಸ್ಟ್‌ಫುಡ್‌ನಂತಹ ಕೈಗಾರಿಕೆಗಳಲ್ಲಿ ಬಹುಳಜಾತಿ ಸಂಸ್ಥೆಗಳು ಆಸಕ್ತಿಯನ್ನು ತೋರಿಸುತ್ತವೆ. ಈ ಉತ್ಪತ್ತಿಗಳನ್ನು ಖರೀದಿಸುವವರು ಅಧಿಕಸಂಖ್ಯೆಯಲ್ಲಿ ಶ್ರೀಮಂತವರ್ಗದವರಿದ್ದಾರೆ. ಈ ಕೈಗಾರಿಕೆಗಳಲ್ಲಿ, ಸೇವೆಗಳಲ್ಲಿ ಹೊಸ ಉದ್ಯೋಗಗಳು ಏರ್ಪಟ್ಟಿವೆ. ಈ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುವ ಸ್ಥಾನಿಕ ಸಂಸ್ಥೆಗಳು ಕೂಡಾ ಲಾಭಗಳನ್ನು ಹೊಂದಿವೆ.

ಭಾರತದೇಶದಲ್ಲಿಯ ಅನೇಕ ದೊಡ್ಡ ಕಂಪನಿಗಳು ಅಧಿಕವಾದ ಪೈಪೋಟಿಯಿಂದ ಅನೇಕ ಪ್ರಯೋಜನಗಳನ್ನು ಹೊಂದಿವೆ. ಅವರು ಹೊಸ ತಾಂತ್ರಿಕ ವಿಜ್ಞಾನದಲ್ಲೂ, ಉತ್ಪತ್ತಿ ಪದ್ದತಿಗಳಲ್ಲಿ ಬಂಡವಾಳ ಹೂಡಿ ಉತ್ಪತ್ತಿ ಪ್ರಮಾಣಗಳನ್ನು ಹೆಚ್ಚಿಸಿದ್ದಾರೆ. ವಿದೇಶಿ ಕಂಪನಿಗಳೊಂದಿಗೆ ಕೂಡಿ ಕೆಲಸ ಮಾಡುವುದರಿಂದ ಕೆಲವು ಕಂಪನಿಗಳು ಲಾಭಗೊಂಡಿವೆ.

- ಭಾರತದೇಶದ ಪ್ರಜೆಗಳು ಪೈಪೋಟಿಯಿಂದ ಯಾವ ವಿಧವಾಗಿ ಲಾಭಹೊಂದಿದ್ದಾರೆ ?
- ಮತ್ತಷ್ಟು ಭಾರತೀಯ ಕಂಪನಿಗಳು ಬಹುಳಜಾತಿ ಕಂಪನಿಗಳಾಗಿ ಬೆಳೆಯಬೇಕಾ ? ದೇಶದಲ್ಲಿನ ಪ್ರಜೆಗಳಿಗೆ ಅದರ ಪ್ರಯೋಜನಗಳಾವುವು ?
- ಮತ್ತಷ್ಟು ವಿದೇಶಿ ಬಂಡವಾಳಗಳನ್ನು ಆಕರ್ಷಿಸಲು ಸರ್ಕಾರವು ಏಕೆ ಪ್ರಯತ್ನಿಸುತ್ತಿದೆ ?
- ಒಬ್ಬರಿಗೆ ಅಭಿವೃದ್ಧಿಯಾದುದು ಮತ್ತೊಬ್ಬರಿಗೆ ನಾಶ ಮಾಡುತ್ತದೆ ಎಂಬುದನ್ನು ಓದಿದ್ದೇವೆ. ಆರ್ಥಿಕ ಮಂಡಲಿಗಳನ್ನು ಸ್ಥಾಪಿಸುವುದನ್ನು ಭಾರತದೇಶದಲ್ಲಿಯ ಕೆಲವು ಜನರು ವಿರೋಧಿಸುತ್ತಿದ್ದಾರೆ. ಇವರು ಏಕೆ ಇದನ್ನು ವಿರೋಧಿಸುವರೋ ತಿಳಿಸಿರಿ.



ಈ ಚಿತ್ರಕ್ಕೆ ಒಂದು ಊಹಾತ್ಮಕ ವ್ಯಾಖ್ಯೆ ನೀಡಿರಿ. ಇದು ಪ್ರಪಂಚೀಕರಣ ಕುರಿತು ಏನು ಹೇಳುತ್ತದೆ ?

SCERT TELANGANA

ಅಷ್ಟೇ ಅಲ್ಲದೇ ಪ್ರಪಂಚೀಕರಣದಿಂದ ಕೆಲವು ದೊಡ್ಡ ಭಾರತೀಯ ಕಂಪನಿಗಳು, ಸ್ವತಃ ಬಹುಳಜಾತಿ ಸಂಸ್ಥೆಗಳಾಗಿ ಬೆಳೆದಿವೆ. ಟಾಟಾಮೋಟಾರ್ಸ್ (ವಾಹನಗಳು) ಇನ್ಫೊಸಿಸ್ (IT), ರಾನ್‌ಬಾಕ್ಸೀ (ಔಷಧಗಳು) ಏಷಿಯನ್ ಪೆಯಿಂಟ್ಸ್ (ಕಲರ್ಸ್) ಸುಂದರಂ ಪಾರ್ಟನರ್ಸ್ (ನಟ್ಟು ಬೋಲ್ಟ್‌ಗಳು)ನಂತಹ ಭಾರತೀಯ ಕಂಪನಿಗಳು ಈಗ ಪ್ರಪಂಚ ವ್ಯಾಪ್ತವಾಗಿ ತಮ್ಮ ವ್ಯವಹಾರಗಳನ್ನು ಹೊಂದಿವೆ.

ಪ್ರಪಂಚೀಕರಣದಿಂದ ಸೇವೆಗಳು ಪ್ರತ್ಯೇಕಿಸಿ IT ಯೊಂದಿಗೆ ಕೂಡಿದ ಸೇವೆಗಳನ್ನು ನೀಡುವ ಕಂಪನಿಗಳಿಗೆ ಹೊಸ ಅವಕಾಶಗಳು ಲಭಿಸಿವೆ. ಲಂಡನ್‌ನಲ್ಲಿಯ ಕಂಪನಿಗೆ ಭಾರತದೇಶದಲ್ಲಿ ಕಂಪನಿಯು ಪತ್ರಿಕೆಯನ್ನು ಮುದ್ರಿಸಿ ಕೊಡುವುದು, ಕಾಲ್‌ಸೆಂಟರ್ ನಿರ್ವಹಣೆ ಇದಕ್ಕೆ ಒಂದು ಉದಾಹರಣೆ. ಅಷ್ಟೇ ಅಲ್ಲದೇ ಡೇಟಾ ಎಂಟ್ರೀ, ಜಮಾ ಖರ್ಚುಲೆಕ್ಕಗಳು, ಪರಿಪಾಲನಾ ಸಂಬಂಧವಾದ ಕೆಲಸಗಳು ಇಂಜಿನೀರಿಂಗ್ ಮೊದಲಾದವು ಈಗ ಭಾರತದೇಶದಂತಹ ದೇಶಗಳಲ್ಲಿ ಅಗ್ಗದ ದರಲ್ಲಿ ಮಾಡಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ.

- ಹೆಚ್ಚುತ್ತಿರುವ ಸ್ಪರ್ಧೆಯಿಂದ ರವಿಯ ಸಣ್ಣ ಉತ್ಪತ್ತಿ ಕೇಂದ್ರ ಯಾವ ವಿಧವಾಗಿ ಪ್ರಭಾವಿತವಾಯಿತು ?
- ಇತರ ದೇಶಗಳಿಗೆ ಹೋಲಿಸಿದರೆ ತಮ್ಮ ಉತ್ಪತ್ತಿ ಖರ್ಚು ಹೆಚ್ಚು, ಅದಕ್ಕಾಗಿ ರವಿಯಂತಹ ಉತ್ಪತ್ತಿದಾರರು ಅವರ ಉತ್ಪತ್ತಿಯನ್ನು ನಿಲ್ಲಿಸಬೇಕಾ ? ನಿಮ್ಮ ಅಭಿಪ್ರಾಯವೇನು?
- ಭಾರತದೇಶ ಸಣ್ಣ ಉತ್ಪತ್ತಿದಾರರು ಮಾರ್ಕೆಟ್‌ನಲ್ಲಿ ಸ್ಪರ್ಧೆ ಯನ್ನು ತಡೆಯಬೇಕಾದರೆ ಮೂರು ಅಂಶಗಳಿದ್ದಾವೆಂದು ಕೆಲವು ಅಧ್ಯಯನಗಳು ಹೇಳಿದ್ದಾವೆ ಅವು (ಅ) ಉತ್ತಮ ರೋಡ್, ವಿದ್ಯುತ್, ನೀರು, ಕಚ್ಚಾವಸ್ತುಗಳು, ಮಾರ್ಕೆಟಿಂಗ್ ಇನ್ಫರ್‌ಮೇಷನ್ ನೆಟ್‌ವರ್ಕ್ (ಆ) ತಾಂತ್ರಿಕ ಪರಿಜ್ಞಾನದಲ್ಲಿ ಅಭಿವೃದ್ಧಿ - ಆಧುನೀಕರಣ (ಇ) ಕಡಿಮೆ ಬಡ್ಡಿಗೆ ಸಾಲಗಳು ನೀಡುವುದು ಈ ಮೂರು ಭಾರತೀಯ ಉತ್ಪತ್ತಿದಾರರಿಗೆ ಹೇಗೆ ಸಹಾಯ ನೀಡುವವೋ ವಿವರಿಸಿರಿ.
- ಇವುಗಳಲ್ಲಿ ಬಂಡವಾಳ ಹೂಡಲು ಬಹುಳಜಾತಿ ಸಂಸ್ಥೆಗಳು ಆಸಕ್ತಿ ತೋರುತ್ತವೆಯಾ ? ಏಕೆ ?
- ಈ ಸೌಕರ್ಯಗಳೆಲ್ಲವನ್ನು ನೀಡುವಂತೆ ನೋಡುವಲ್ಲಿ ಸರ್ಕಾರದ ಪಾತ್ರ ಇದೆಯಾ ? ಏಕೆ ?
- ಸರ್ಕಾರ ತೆಗೆದುಕೊಳ್ಳುವ ಇತರ ಚರ್ಯೆಗಳ ಕುರಿತು ಆಲೋಚಿಸಿರಿ ? ತರಗತಿಯಲ್ಲಿಯ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ.

ಸಣ್ಣ ಉತ್ಪತ್ತಿದಾರರು : ಸ್ಪರ್ಧಿಸಿರಿ ಇಲ್ಲವೇ ನಾಶವಾಗಿರಿ (Compete or Perish) :

ಅನೇಕ ಸಣ್ಣ ಉತ್ಪತ್ತಿದಾರರಿಗೆ, ಕಾರ್ಮಿಕರಿಗೆ ಪ್ರಪಂಚೀಕರಣ ಒಂದು ಸವಾಲನ್ನೇ ಸೃಷ್ಟಿಸಿದೆ.

ಕೈಗಾರಿಕೋದ್ಯಮಿಯಾಗಿ ತಾನು ಇಷ್ಟು ಕಡಿಮೆ ಅವಧಿಯಲ್ಲೇ ಸಂಕ್ಷೋಭವನ್ನು ಎದುರಿಸಬೇಕೆಂದು ರವಿ ಊಹಿಸಿರಲಿಲ್ಲ. ಹೊಸೂರಿನಲ್ಲಿ ಕೆಪಾಸಿಟರುಗಳ ಉತ್ಪತ್ತಿ ಮಾಡಿ ಸ್ವಂತ ಕಂಪನಿ ಸ್ಥಾಪಿಸಲು ರವಿ 1992ರಲ್ಲಿ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡನು. ಟ್ಯೂಬ್‌ಲೈಟ್‌ಗಳು, ಟೆಲಿವಿಜನ್‌ನಂತಹ ಕೆಲವು ಎಲೆಕ್ಟ್ರಾನಿಕ್ ಗೃಹೋಪಕರಣಗಳಲ್ಲಿ ಕೆಪಾಸಿಟರುಗಳನ್ನು ಉಪಯೋಗಿಸುತ್ತಾರೆ. ಮೂರು ವರ್ಷಗಳಲ್ಲಿ ಆತನ ಕಂಪನಿ ವೃದ್ಧಿಗೊಂಡು ಇಪ್ಪತ್ತು ಜನ ಕಾರ್ಮಿಕರೊಂದಿಗೆ ಕೆಲಸ ಮಾಡತೊಡಗಿತು.

2001ರಲ್ಲಿ ಪ್ರಪಂಚ ವಾಣಿಜ್ಯ ಸಂಸ್ಥೆಯ ಒಪ್ಪಂದದ ಕಾರಣವಾಗಿ ಸರ್ಕಾರ ಕೆಪಾಸಿಟರುಗಳ ಆಮದುಗಳಲ್ಲಿ ಪರಿಮಿತಿಗಳನ್ನು ತೊಲಗಿಸುವುದರಿಂದ ಆತನಿಗೆ ಕಷ್ಟಗಳು ಪ್ರಾರಂಭವಾದವು. ಆತನ ಪ್ರಧಾನ ಕೊಂಡುಕೊಳ್ಳುವವರಾದ ಟೆಲಿವಿಜನ್ ಕಂಪನಿಗಳು ಟೆಲಿವಿಜನ್ ಸೆಟ್‌ಗಳ ಉತ್ಪತ್ತಿಗೆ ಕೆಪಾಸಿಟರುಗಳೊಂದಿಗೆ ಸಹ ಇತರ ಬಿಡಿಭಾಗಗಳನ್ನು ದೊಡ್ಡ ಮೊತ್ತದಲ್ಲಿ ಕೊಳ್ಳುತ್ತಿದ್ದರು. ಆದರೆ ಬಹುಳಜಾತಿ ಸಂಸ್ಥೆ (MNC)ಯ ಟಿವಿ ಬ್ರಾಂಡುಗಳಿಂದ ಪೈಪೋಟಿ ಫಲಿತವಾಗಿ ಭಾರತೀಯ ಟೆಲಿವಿಜನ್ ಕಂಪನಿಗಳು ಬಹುಳಜಾತಿ ಸಂಸ್ಥೆಗಳಿಗೆ ಅಸೆಂಬ್ಲಿಂಗ್ ಕೇಂದ್ರಗಳಾಗಿ ಬದಲಾದವು. ಅವು ಒಂದು ವೇಳೆ ಕೆಪಾಸಿಟರುಗಳನ್ನು ಕೊಳ್ಳುವಇದ್ದರೂ ಅವರು ಆಮದು ಮಾಡಿಕೊಂಡವು ರವಿಯಂತಹ ಉತ್ಪತ್ತಿದಾರರು ಕೊಡುವ ದರಗಳಲ್ಲಿ ಅರ್ಧಬೆಲೆಗಳಿಗೆ ಬರುವಾಗ ಅವುಗಳಿಗೆ ಜನ ಆಸಕ್ತಿ ತೋರಿಸುತ್ತಾರೆ.

SCERT TELANGANA

ಈಗ ರವಿಯು 2000 ವರ್ಷದಲ್ಲಿ ಉತ್ಪತ್ತಿ ಮಾಡಿದ ಸಂಖ್ಯೆಯಲ್ಲಿ ಅರ್ಧದಷ್ಟು ಮಾತ್ರ ಉತ್ಪತ್ತಿ ಮಾಡುತ್ತಿದ್ದಾನೆ. ರವಿಯ ಹತ್ತಿರ ಈಗ ಕೇವಲ ಏಳು ಜನರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಇದೇ ವ್ಯಾಪಾರದಲ್ಲಿ ಹೈದರಾಬಾದು, ಚೈನ್ನೈಗಳಲ್ಲಿರುವ ರವಿಯ ಸ್ನೇಹಿತರು ತಮ್ಮ ಕಾರ್ಖಾನೆಗಳನ್ನು ಮುಚ್ಚಿಬಿಟ್ಟರು.

ಇತ್ತೀಚಿಗೆ, ಭಾರತದೇಶದಲ್ಲಿ ಬಂಡವಾಳ ಹೂಡಲು ವಿದೇಶಿ ಕಂಪನಿಗಳನ್ನು ಆಕರ್ಷಿಸಲು ಕೇಂದ್ರ ರಾಷ್ಟ್ರ ಸರ್ಕಾರಗಳು ಅನೇಕ ಚರ್ಯೆಗಳನ್ನು ಕೈಹಿಡಿದಿವೆ. ಪ್ರತ್ಯೇಕ ಆರ್ಥಿಕ ಮಂಡಲಿ (SEZs) ಎನ್ನುವ ಕೈಗಾರಿಕಾ ಪ್ರಾಂತಗಳನ್ನು ಸ್ಥಾಪಿಸುತ್ತಿದ್ದಾರೆ. ಈ ಸೆಜ್‌ಗಳಲ್ಲಿ ಪ್ರಪಂಚಸ್ಥಾಯಿ ಸೌಕರ್ಯಗಳಿರುತ್ತವೆ. ವಿದ್ಯುತ್, ನೀರು, ರೋಡು, ಸಾರಿಗೆ, ವಿದ್ಯೆ, ವಿನೋಧ, ಗೋದಾಮುಗಳ ಸದುಪಯೋಗಳಿರುತ್ತವೆ. ಪ್ರತ್ಯೇಕ ಆರ್ಥಿಕ ಮಂಡಲಿ (SEZ) ಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವ ಕಂಪನಿಗಳಿಗೆ ಮೊದಲು ಐದು ವರ್ಷಗಳಿಗೆ ತೆರಿಗೆ ವಿನಾಯಿತಿ ಇರುತ್ತದೆ.

ವಿದೇಶಿ ಬಂಡವಾಳವನ್ನು ಆಕರ್ಷಿಸಲು ಸರ್ಕಾರ ಕಾರ್ಮಿಕರ ಕಾಯ್ದೆಗಳು ಸಡಲಿಸಿದೆ. ಕಾರ್ಮಿಕರನ್ನು ದೀರ್ಘಕಾಲದ ಪ್ರತಿಪಾದನೆ ಅಲ್ಲದೇ ಕೆಲಸದ ಒತ್ತಡವನ್ನು ಹಿಡಿದು ಕಡಿಮೆ ಕಾಲದ ಅವಧಿಗೆ ಕಾರ್ಮಿಕರನ್ನು ತೆಗೆದುಕೊಳ್ಳುವುದು. ಇದರಿಂದ ಕಂಪನಿಗೆ ಕಾರ್ಮಿಕರ ಮೇಲೆ ಮಾಡುವ ಖರ್ಚು ಕಡಿಮೆಯಾಗುತ್ತದೆ. ಆದರೆ ವಿದೇಶಿ ಕಂಪನಿಗಳು ಕಾರ್ಮಿಕ ಕಾಯ್ದೆಗಳನ್ನು ಇನ್ನೂ ಸಡಲಿಸುವಂತೆ ಕೋರುತ್ತವೆ.

ನ್ಯಾಯಬದ್ಧವಾದ ಪ್ರಪಂಚೀಕರಣ ಕ್ಕಾಗಿ ಹೋರಾಟ :

ಮೇಲಿನ ಉದಾಹರಣೆಗಳ ಮೂಲಕ ಪ್ರಪಂಚಕೀಕರಣದಿಂದ ಎಲ್ಲರೂ ಪ್ರಯೋಜನ ಹೊಂದಿಲ್ಲವೆಂದು ತಿಳಿಯುತ್ತದೆ. ವಿದ್ಯೆ, ನೈಪುಣ್ಯೆ, ಸಂಪತ್ತು ಇರುವವರು ಹೊಸ ಅವಕಾಶಗಳಿಂದ ತುಂಬಾ ಲಾಭಪಟ್ಟಿದ್ದಾರೆ. ಇನ್ನೊಂದು ಕಡೆ ಎಂತಹ ಪ್ರಯೋಜನಗಳನ್ನು ಹೊಂದದ ಪ್ರಜೆಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಪ್ರಪಂಚೀಕರಣವು ಈಗ ನಿಜ ಇದೆ ಎಂಬ ವಾಸ್ತವ . ಇದರಿಂದ ಎಲ್ಲರಿಗೂ ನ್ಯಾಯ ಜರುಗುವಂತೆ ಹೇಗೆ ಮಾಡಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ನ್ಯಾಯಬದ್ಧ ಪ್ರಪಂಚೀಕರಣವು ಎಲ್ಲರಿಗೂ ಅವಕಾಶಗಳನ್ನು ಸೃಷ್ಟಿಸುತ್ತದೆ. ಅದರ ಪ್ರಯೋಜನಗಳನ್ನು ಚೆನ್ನಾಗಿ ಹಂಚಬೇಕು.

ಪ್ರಪಂಚ ಬ್ಯಾಂಕು (WB) , ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಅ ಅವುಗಳ ಅಧಿಕಾರ :

ಪುನರ್‌ನಿರ್ಮಾಣ, ಅಭಿವೃದ್ಧಿಗೆ ಅಂತರಾಷ್ಟ್ರೀಯ ಬ್ಯಾಂಕನ್ನು (IBRD), ಅಂತರಾಷ್ಟ್ರೀಯ ಅಭಿವೃದ್ಧಿ ಸಂಘವನ್ನು (IDA) ಸೇರಿ ಪ್ರಪಂಚ ಬ್ಯಾಂಕಾಗಿ ವ್ಯವಹರಿಸುವರು. ಈ ಎರಡು ಸಂಸ್ಥೆಗಳಲ್ಲಿ 170ಕ್ಕೂ ಹೆಚ್ಚಾಗಿ ಸದಸ್ಯ ದೇಶಗಳಿದ್ದಾವೆ. ಅಮೇರಿಕಾದಂತಹ ದೇಶಗಳು ಈ ಸಂಸ್ಥೆಯ ಕೆಲಸವನ್ನು ನಿರ್ದೇಶಿಸುತ್ತದೆ. ಇಂದಿಗೂ ಕೂಡ ಅಮೇರಿಕಾ ಓಟಿಗೆ 16% ಬೆಲೆ ಇದೆ. ಜಪಾನ್, ಜರ್ಮನಿ, ಯು.ಕೆ., ಫ್ರಾನ್ಸ್‌ನಂತಹ ದೇಶಗಳು ಒಂದೊಂದಕ್ಕೆ 3ಅ6% ಓಟು ಅಧಿಕಾರವಿದೆ. ಬಡದೇಶಗಳ ಓಟಿಗೆ ಕಡಿಮೆ ಬೆಲೆ ಇದೆ. ಪ್ರಸ್ತುತ ಇತರ ಬಡದೇಶಗಳೊಂದಿಗೆ ಹೋಲಿಸಿದರೆ ಭಾರತ, ಚೈನಾಗಳಿಗೆ ಹೆಚ್ಚು ಓಟಿಂಗ್ ಅಧಿಕಾರವಿದೆ. ಸರ್ಕಾರಗಳು ತಮ್ಮ ವಿಧಾನಗಳನ್ನು ರೂಪಿಸಿಕೊಳ್ಳುವಲ್ಲಿ ಪ್ರಪಂಚ ಬ್ಯಾಂಕ್ ಸಲಹೆ ಕೊಟ್ಟು, ಮಾರ್ಗದರ್ಶನ ಮಾಡುತ್ತಾ ಅವುಗಳನ್ನು ಪ್ರಭಾವಿತ ಮಾಡುತ್ತದೆ.

ಇದನ್ನು ಸಾಧ್ಯಗೊಳಿಸುವಲ್ಲಿ ಸರ್ಕಾರ ಪ್ರಧಾನ ಪಾತ್ರವಹಿಸಬೇಕಾಗುತ್ತದೆ. ಸರ್ಕಾರದ ವಿಧಾನಗಳು ಶ್ರೀಮಂತರಿಗೂ, ಅಧಿಕಾರ ಇರುವವರಿಗೆ ಅಲ್ಲದೇ ದೇಶದಲ್ಲಿರುವ ಪ್ರಜೆಗಳ ಪ್ರಯೋಜನಗಳನ್ನು ಕಾಪಾಡುವ ಹಾಗೆ ಇರಬೇಕು. ಸರ್ಕಾರ ಕೈಹಿಡಿಯುವ ಕೆಲವು ಚರ್ಯೆಗಳ ಕುರಿತು ನೀವು ತಿಳಿದಿದ್ದೀರಿ. ಉದಾಹರಣೆಗೆ ಕಾರ್ಮಿಕರ ಕಾಯ್ದೆಗಳು ಚೆನ್ನಾಗಿ ಜಾರಿಗೆ ತಂದು ಕಾರ್ಮಿಕರಿಗೆ ಅವರ ಹಕ್ಕುಗಳು ಲಭಿಸುವಂತೆ ನೋಡಬೇಕು. ಸಣ್ಣ ಉತ್ಪತ್ತಿದಾರರು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಂಡು ಇತರರೊಡನೆ ಸ್ಪರ್ಧಿಸುವ ಶಕ್ತಿ ಬರುವವರೆಗೆ ಅವರಿಗೆ ಸಹಾಯ ಮಾಡಬೇಕು. ಅವಶ್ಯಕವಾದರೆ ಸರ್ಕಾರದ ವಾಣಿಜ್ಯ, ಬಂಡವಾಳ ಅವರೋಧಗಳನ್ನು ಉಪಯೋಗಿಸಬಹುದು ಮತ್ತಷ್ಟು ನ್ಯಾಯಬದ್ದವಾದ ನಿಯಮಗಳಿಗಾಗಿ ಪ್ರಪಂಚ ವಾಣಿಜ್ಯ ಸಂಸ್ಥೆಯೊಂದಿಗೆ ಮಾತುಕಥೆಗಳನ್ನು ನಡೆಸಬಹುದು. ಇವೇ ಆಸಕ್ತಿ ಹೊಂದಿದ ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಂದಿಗೆ ಸೇರಿ ಪ್ರಪಂಚ ವಾಣಿಜ್ಯ ಸಂಸ್ಥೆಯಲ್ಲಿನ ಅಭಿವೃದ್ಧಿ ಹೊಂದಿದ ದೇಶಗಳ ಹಿರಿತನಕ್ಕೆ ವಿರೋಧವಾಗಿ ಹೋರಾಡಬಹುದು.

SCERT TELANGANA

ಇತ್ತೀಚಿನ ಕೆಲ ವರ್ಷಗಳಲ್ಲಿ ನಡೆದ ಚುಳುವಳಿಗಳಿಂದ, ಪ್ರಜಾ ಸಂಘಗಳ ಬೇಡಿಕೆಗಳಿಂದ ಪ್ರಪಂಚ ವಾಣಿಜ್ಯ ಸಂಸ್ಥೆಯಲ್ಲಿ ವಾಣಿಜ್ಯ-ಬಂಡವಾಳಕ್ಕೆ ಸಂಬಂಧಿಸಿದ ಮುಖ್ಯವಾದ ನಿರ್ಣಯಗಳು ಪ್ರಭಾವಿತವಾಗಿವೆ. ನ್ಯಾಯವಾದ ಪ್ರಪಂಚೀಕರಣಕ್ಕಾಗಿ ನಡೆಯುವ ಹೋರಾಟದಲ್ಲಿ ಪ್ರಜೆಗಳು ಸಹ ಮುಖ್ಯವಾದ ಪಾತ್ರ ಪೋಷಿಸುತ್ತಾರೆಂದು ಇವು ನಿರೂಪಿಸುತ್ತವೆ.

ಇತರ ಅಂಶಗಳು :

ಪ್ರಪಂಚೀಕರಣದಿಂದ ರಾಷ್ಟ್ರೀಯ ರಾಜ್ಯಗಳು ಕಣ್ಮರೆಯಾಗಿ ಹೋಗುತ್ತವೆ ಎಂಬುದು ಒಂದು ಪ್ರಮುಖ ಚರ್ಚೆಯ ವಿಷಯವಾಗಿದೆ. ಪ್ರಜೆಗಳು ಒಂದು ಪ್ರಾಂತದ ಆಧಾರವಾಗಿ ಸಂಘಟಿತರಾಗಿ ದೇಶಗಳನ್ನು ರಾಜಕೀಯವಾಗಿ ಗುರ್ತಿಸುವುದು ಇಲ್ಲಿಯವರೆಗೆ ನಡೆದಿದೆ. ಈ ವಿಧವಾದ ಪ್ರಾಂತಗಳ ವಿಭಜನೆಯಿಂದ ನಾವು-ಅವರು-ಹೊರಗಿನ-ಸ್ಥಾನಿಕವಾದುದು ಎನ್ನುವ ಭಾವನೆ ಏರ್ಪಟ್ಟು ರಾಷ್ಟ್ರೀಯ ಭಾವನೆ ಉಂಟಾಗಿದೆ. ಪ್ರಪಂಚೀಕರಣ ದಿಂದ ಈ ಭಾವನೆಗೆ ಈಗ ಧಕ್ಕೆ ಉಂಟಾಗಿದೆ.

ಎಲ್ಲರ ದೃಷ್ಟಿಯನ್ನು ಆಕರ್ಷಿಸಲು ಮತ್ತೊಂದು ಅಂಶ, ಪ್ರಂಪಚೀಕರಣ ಸಾಂಸ್ಕೃತಿಕ ವೈವಿಧ್ಯತೆಗೆ ದಾರಿ ಮಾಡುತ್ತದೆಯಾ ಅಥವಾ ಸಾಂಸ್ಕೃತಿಯ ಮರೆಯಲು ಕಾರಣಕ್ಕೆ ದಾರಿ ಮಾಡುತ್ತದೆ ಎಂಬುದನ್ನು ಆಧುನಿಕ ಪ್ರಸಾರ ಸಾಧನೆಗಳು, ತಾಂತ್ರಿಕ ಪರಿಜ್ಞಾನದಿಂದ ಕೆಲವು ಸಂಸ್ಕೃತಿಗಳು, ಭಾವನೆಗಳು ಪ್ರಚಾರ ಹೊಂದಿ ಇತರ ಸ್ಥಾನಿಕ, ಅಲ್ಪಸಂಖ್ಯಾತ ವರ್ಗದವರ ಸಂಸ್ಕೃತಿಗಳು ಮರೆಯಾಗುತ್ತಿವೆಂದು ಕೆಲವರು ವಾದಿಸುತ್ತಾರೆ. ಅಲ್ಲದೇ ಬೇರೊಬ್ಬರು ಪ್ರತ್ಯೇಕ, ಇಲ್ಲಿಯವರೆಗೂ ಮರೆಯಾಗಿದ್ದಾ ಸಾಂಸ್ಕೃತಿಕ ಕಥೆ ಅಭ್ಯಾಸಗಳು ಪ್ರಪಂಚೀಕರಣದಿಂದ ಬೆಳಕಿಗೆ ಬರಲು ಸಹಾಯಕವಾಗಿದೆಯೆಂದು ಭಾವಿಸು ತ್ತಾರೆ. ಕೆಲವು ಭಾಷೆಗಳು ವಿಸ್ತೃತವಾಗಿ ಉಪಯೋಗವಾಗಿ ಅಂತರಾಷ್ಟ್ರೀಯ ಪ್ರಸಾರ ಸಾಧನೆಗಳು ವರದಿಯಾಗಿದ್ದು, ಇತರ ಭಾಷೆಗಳು ನಿರ್ಲಕ್ಷಕ್ಕೆ ಗುರಿ ಯಾಗಿವೆ. ಇನ್ನೂ ಕೆಲವು ನಶಿಸಿ ಹೋಗುವ ಆದಾಯ ಎಂದು ಹೇಳುತ್ತಾರೆ.

ಮುಕ್ತಾಯ :

ದೇಶಗಳು ವೇಗವಾಗಿ ಅನು ಸಂಧಾನವಾಗುವ ಪ್ರಕ್ರಿಯೆಯನ್ನು ಪ್ರಪಂಚೀಕರಣ ಎನ್ನುವರು. ಇದು ಇಪ್ಪತ್ತನೇಯ ಶತಮಾನದ ಕೊನೆಯಲ್ಲಿ ಪ್ರಪಂಚವೆಲ್ಲಾ ಸಂಭವಿಸಿದ ದೊಡ್ಡ ಬದಲಾವಣೆ. ಇದಕ್ಕೆ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕೋನಗಳೆಲ್ಲಾ ಇವೆ. ಪ್ರಪಂಚೀಕರಣ ಪ್ರಸ್ತುತ ದಶೆಯಲ್ಲಿ ಒಂದು ಮುಖ್ಯವಾದ ಅಂಶ ಅಪಾರ ಸಂಪತ್ತು ಇರುವ ಬಹುಳಜಾತಿ ಕಂಪನಿಗಳ ನಿಯಂತ್ರಣೆಯಲ್ಲಿ ಬಂಡವಾಳ, ವಾಣಿಜ್ಯ ಮೂಲಕ ಮಾರ್ಕೆಟ್‌ಗಳು, ಉತ್ಪತ್ತಿಯನ್ನು ಅನುಸಂಧಾನಿಸುವುದು, ವಾಣಿಜ್ಯ, ಬಂಡವಾಳಗಳಿಗೆ ಇರುವ ಸರಳೀಕೃತ ವಿಧಾನ ಮೂಲಕ ಅವರೋಧಗಳನ್ನು ತೊಲಗಿಸುವುದರಿಂದ ಪ್ರಪಂಚೀಕರಣ ಶಕ್ತಿಗಳಿಗೆ ಆರ್ಥಿಕ ವ್ಯವಸ್ಥೆಯ ಬಾಗಿಲು ತೆರದಂತಾಯಿತು..

ಪ್ರಪಂಚೀಕರಣ ಪ್ರಯೋಜನೆಗಳು ಸಮಾನವಾಗಿ ಹಂಚಿಕೆಯಾಗಿಲ್ಲ. ಶ್ರೀಮಂತ ವಿನಿಯೋಗದಾರರಿಗೆ, ನೈಪುಣ್ಯ, ವಿದ್ಯೆ, ಅಪಾರ ಸಂಪತ್ತು ಇರುವ ಉತ್ಪತ್ತಿದಾರರಿಗೆ ಇದು ಪ್ರಯೋಜನಕಾರವಾಗಿದೆ. ಸಾಂಕೇತಿಕ ಪರಿಜ್ಞಾನದಿಂದ ಕೂಡಿದ ಕೆಲವು ಸೇವೆಗಳು ವಿಸ್ತರಿಸಿವೆ. ಇನ್ನೊಂದು ಕಡೆ ಸಾವಿರಾರು ಜನರು ಸಣ್ಣ ಉತ್ಪತ್ತಿದಾರರಿಗೆ, ಕಾರ್ಮಿಕರಿಗೆ, ಅವರ ಕೆಲಸಗಳಿಗೆ, ಹಕ್ಕುಗಳಿಗೆ ಭಂಗ ಉಂಟಾಗಿದೆ. ಎರಡು ಪಾರ್ಶ್ವಗಳಿರುವ ಈ ಪ್ರಪಂಚೀಕರಣವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

ಅಸಮಾನತ್ವದಲ್ಲಿಯ ಮತ್ತೊಂದು ಕೋನ ಇತರ ದೇಶಗಳ ವಿಧಾನಗಳೊಂದಿಗೆ ಧನಿಕ ದೇಶಗಳ ದೌರ್ಜನ್ಯಪೂರಿತ ಆಧಿಪತ್ಯ. ವಾಣಿಜ್ಯ, ಬಂಡವಾಳ, ವಲಸೆಯಂತಹ ಅಂತರಾಷ್ಟ್ರೀಯ ಆರ್ಥಿಕ ವಿಧಾನಗಳೊಂದಿಗೆ ದೇಶ ವ್ಯವಹಾರಗಳೊಂದಿಗೆ ಧನಿಕ ಪಾಶ್ಚಾತ್ಯ ದೇಶಗಳು ಉಳಿದ ಪ್ರಪಂಚವನ್ನು ತೀವ್ರವಾಗಿ ಪ್ರಭಾವಿತಗೊಳಿಸಿದ್ದಾವೆ. ಪ್ರಪಂಚ ವಾಣಿಜ್ಯ ಸಂಸ್ಥೆ (WTO), ಪ್ರಪಂಚ ಬ್ಯಾಂಕು (WB), ಪ್ರಪಂಚ ಹಣಕಾಸು ಸಂಸ್ಥೆ (IMF) ಗಳಂತಹ

SCERT TELANGANA

ಅಂತರಾಷ್ಟ್ರೀಯ ಸಂಸ್ಥೆಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ಅಭಿವೃದ್ಧಿ ಹೊಂದಿದ ದೇಶಗಳ ಪ್ರಯೋಜನೆಗಳಿಗೆ ಅಧಿಕ ಪ್ರಾತಿನಿಧ್ಯವಹಿಸುತ್ತವೆ. ಒಂದು ಕಡೆ ಪ್ರಪಂಚೀಕರಣಕ್ಕೆ ಸಹಕಾರಿ ನೀಡುವವರು ವಿಶ್ವ ಅನುಸಂಧಾನದ ಮೂಲಕ ಪ್ರಪಂಚೀಕರಣ ಅಭಿವೃದ್ಧಿಗೆ, ಸಂಪತ್ತಿಗೆ ಅವಕಾಶ ಒದಗಿಸುವತ್ತದೆ ಎಂದು ಭಾವಿಸುತ್ತದೆ. ಅದನ್ನು ವಿಮರ್ಶಿಸುವವರು ಅವರು ಪ್ರಪಂಚದ ಮೇಲೆ ಅಧಿಕಾರವನ್ನು ಹೊಂದಲು ಕೆಲವು ಪಾಶ್ಚತ್ಯ ದೇಶಗಳು ಮಾಡುವ ಪ್ರಯತ್ನವೆಂದು ಭಾವಿಸುತ್ತಾರೆ. ಅನೇಕ ಬಡ ದೇಶಗಳಲ್ಲಿ ಇದರಿಂದ ಪ್ರಜಾಸೌಮ್ಯ, ಕಾರ್ಮಿಕರ ಹಕ್ಕುಗಳು-ಪರಿಸರಕ್ಕೆ ಭಂಗವನ್ನು ತರುತ್ತವೆಂದು ಇವರು ವಾದಿಸುತ್ತಾರೆ.

ಕಠಿಣ ಪದಗಳು

ಬಹುಳಜಾತಿ ಸಂಸ್ಥೆಗಳು (MNCs)	ರಾಷ್ಟ್ರೀಯ ರಾಜ್ಯ	ತಾಂತ್ರಿಕ ಪರಿಜ್ಞಾನ
ವಿದೇಶಿ ಬಂಡವಾಳ	ವಿದೇಶಿ ವಾಣಿಜ್ಯ	ಸರಳೀಕೃತ ಆರ್ಥಿಕ ವಿಧಾನ

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ !

1 . ವಿದೇಶಿ ಬಂಡವಾಳ, ವಾಣಿಜ್ಯಗಳ ಮೇಲೆ ಭಾರತ ಸರ್ಕಾರ ಅವರೋಧಗಳು ಕಲ್ಪಿಸಲು ಇರುವ ಕಾರಣಗಳಾವುವು ? ಈ ಅವರೋಧಗಳನ್ನು ತೊಲಗಿಸಬೇಕೆಂದು ಅದು ಏಕೆ ಅಂದುಕೊಳ್ಳುತ್ತಿದೆ ? (AS_1)

2 . ಕಾರ್ಮಿಕರ ಕಾಯ್ದೆಗಳ - ಸಡಿಲಿಸುವುದು ಕಂಪನಿಗಳಿಗೆ ಯಾವ ವಿಧವಾಗಿ ಸಹಾಯಪಡುತ್ತದೆ ?(AS_1)

3. ಉತ್ಪತ್ತಿಯನ್ನು ಕೈಗೆತ್ತಿಕೊಳ್ಳುವುದು, ಅದನ್ನು ನಿಯಂತ್ರಿಸುವುದು ಇಲ್ಲವೇ ಇತರ ದೇಶಗಳಲ್ಲಿ ಸ್ಥಿರಪಡಲು ಬಹುಳ ಜಾತಿ ಸಂಸ್ಥೆಗಳು ಅವಲಂಬಿಸುವ ವಿಧಾನಗಳಾವುವು ? (AS_1)

4 . ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಾಣಿಜ್ಯವು, ಬಂಡವಾಳದಲ್ಲಿ ಸರಳೀಕೃತ ವಿಧಾನಗಳನ್ನು ಅವಲಂಬಿಸಬೇಕೆಂದು ಅಭಿವೃದ್ಧಿ ಹೊಂದಿದ ದೇಶಗಳು ಏಕೆ ಕೋರುತ್ತವೆ ? ಇದಕ್ಕೆ ಪ್ರತಿಯಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಯಾವ ಷರತುಗಳನ್ನು ವಿಧಿಸಬೇಕು ? (AS_4)

5. "ಪ್ರಪಂಚೀಕರಣ ಪ್ರಭಾವ ಒಂದೇ ವಿಧವಾಗಿಲ್ಲ" ಈ ವ್ಯಾಖ್ಯೆವನ್ನು ವಿವರಿಸಿರಿ. (AS_1)

6 . ವಾಣಿಜ್ಯ - ಬಂಡವಾಳ ವಿಧಾನಗಳನ್ನು ಸರಳೀಕರಿಸುವುದರಿಂದ ಪ್ರಪಂಚೀಕರಣ ಪ್ರಕ್ರಿಯೆಗೆ ಉಪಯೋಗವಾಗುವುದು ಹೇಗೆ ನಡೆದಿದೆ ? (AS_1)

7 . ಪ್ರಪಂಚೀಕರಣ ಭವಿಷ್ಯತ್ತಿನಲ್ಲಿಯೂ ಮುಂದುವರಿಯುತ್ತದೆ. ಇಂದಿನಿಂದ ಇಪ್ಪತ್ತು ವರ್ಷಗಳಲ್ಲಿ ಪ್ರಪಂಚ ಹೇಗೆ ಇರುತ್ತದೆ ಊಹಿಸಿ, ನಿಮ್ಮ ಊಹೆಗಳಿಗೆ ಕಾರಣಗಳನ್ನು ಹೆಸರಿಸಿರಿ. (AS_4)

8 . ಪ್ರಪಂಚ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

1) ಚೈನಾ 2) ಜಪಾನ್ 3) ಬ್ರೆಜಿಲ್ 4) ದಕ್ಷಿಣ ಆಫ್ರಿಕಾ

ಚರ್ಚೆ :

ಸೈಬರ್ ಅಪರಾಧಗಳು ಹೆಚ್ಚಾಗಲು ಕಾರಣ ತಾಂತ್ರಿಕ ಜ್ಞಾನವೋ ? ಮಾನವನ ಆಲೋಚನಾ ವಿಧಾನವೋ ? ಈ ವಿಷಯದ ಮೇಲೆ ಚರ್ಚೆಯನ್ನು ನಿರ್ವಹಿಸಿರಿ.

SCERT TELANGANA

ಅಧ್ಯಾಯ

10 ಆಹಾರ ಭದ್ರತೆ

ಭಾರತದೇಶಕ್ಕೆ ಸ್ವಾತಂತ್ರ್ಯಬರುವುದಕ್ಕಿಂತ ಮುಂಚೆ ಬರಗಾಲ ಅಂದರೆ ಆಹಾರದ ಕೊರತೆ ತೀರ್ವವಾಗಿ ಇರುವ ಪರಿಸ್ಥಿತಿಗಳು - ದೊಡ್ಡ ಮೊತ್ತದಲ್ಲಿ ಹಸಿವಿನಿಂದ ಸಾವಿಗೂ ಕಾರಣವಾಗಿವೆ. ಉದಾಹರಣೆಗೆ 1943-45 ವರ್ಷಗಳಲ್ಲಿ ಬೆಂಗಾಲ್ ಬರಗಾಲದಿಂದ ಬೆಂಗಾಲ್, ಅಸ್ಸಾಂ, ಒಡಿಶಾಗಳಲ್ಲಿ 30-50 ಲಕ್ಷಗಳ ಮಂದಿ ಜನರು ಸಾವಿಗೀಡಾದರು. ಇದನ್ನು ಓದಿರಿ.

ಲೈಫ್ (LIFE) ಪತ್ರಿಕೆಯಲ್ಲಿನ ಚಿತ್ರಗಳು:
(ಅ) ಆಹಾರ ಧಾನ್ಯಗಳು ರವಾಣಾ ಮಾಡುತ್ತಿರುವ ರೈಲಿನಿಂದ ಸ್ವಲ್ಪ ಧಾನ್ಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವ ಮಕ್ಕಳು
(ಆ) ನೆಲದ ಮೇಲೆ ಬಿದ್ದಿರುವ ಧಾನ್ಯಗಳನ್ನು ಗೂಡಿಸುತ್ತಿರುವ ಒಬ್ಬ ಮಹಿಳೆ

''ನಮ್ಮ ಕುಟುಂಬದಲ್ಲಿ ನಾನೇ ಹಿರಿಯನು. ಜೀವಿಸುವುದಕ್ಕೆ ನಾನು ದಿನಗೂಲಿಯಾಗಿ ಕೆಲಸ ಮಾಡುವೆನು. ಆ ಸಮಯದಲ್ಲಿ ನನ್ನ ತಮ್ಮಂದಿರನ್ನೂ, ತಂಗಿಯರನ್ನೂ ಕರೆದುಕೊಂಡು ನಮ್ಮ ತಂದೆಯನ್ನು ಬಿಟ್ಟು ಕೊಲ್ಕತ್ತಾಗೆ ಹೋದೆನು. ನಮಗೆ ಆಹಾರವಾಗಿ ಹಿಟ್ಟು ಮಾತ್ರವೇ ದೊರೆಯಿತು. ಎಲ್ಲಿ ಆಹಾರ ಸಿಗುತ್ತಿತ್ತೋ ಅಲ್ಲಿಗೆ ನಾವು ಹೋಗುತ್ತಿದ್ದೆವು. ಕೊಲ್ಕತ್ತಾ ಬೀದಿಗಳಲ್ಲಿ ಅದೆಷ್ಟೋ ಜನರು ಕಷ್ಟಗಳನ್ನು ಅನುಭವಿಸುವವರನ್ನು ನಾನು ನೋಡಿದ್ದೇನೆ. ಸಾವಿಗೀಡಾದ ಮಕ್ಕಳನ್ನು ಕೈಯಲ್ಲಿ ಹಿಡಿದುಕೊಂಡು ತಿರುಗುತ್ತಿರುವ ತಾಯಂದಿರನ್ನು ನೋಡಿದ್ದೇನೆ. ಅವರು ಮತ್ತೆ ಏಳುವವರು ಎಂಬ ಆಸೆಯಿಂದ ಆ ತಾಯಂದಿರು ನೀರು ಚಿಮುಕಿಸುತ್ತಾ ಇರುವರು. ಪ್ರಜೆಗಳು ಹುಲ್ಲು, ಹಾವುಗಳನ್ನು ತಿನ್ನುವುದನ್ನು ನಾನು ನೋಡಿದ್ದೇನೆ. ನನ್ನ ಇಬ್ಬರು ತಂಗಿಯರು, ಒಬ್ಬ ತಮ್ಮನು ಸಾವಿಗೀಡಾದನು.''

''ಇವರು ರೈತರು, ವ್ಯವಸಾಯದಾರರು; ಅಷ್ಟೇ ಆಗಲಿಬಿಕ್ಷೆ ಬೇಡುವರು ಮಾತ್ರ ಅಲ್ಲ. ಆದ್ದರಿಂದಲೇ ಅವರಿಗೆ ಬಿಕ್ಷೆಬೇಡುವುದು ಸಹ ತಿಳಿಯುತ್ತಿರಲಿಲ್ಲ. ಅವರಿಗೆ ಆತ್ಮಾಭಿಮಾನ ಹೆಚ್ಚು, ಕೊಲ್ಕತ್ತಾ ಬಂದವರು ರಸ್ತೆಯ ಪಕ್ಕದಲ್ಲೇ ಹಾಗೆಯೇ ಕೂತಿದ್ದು, ಅಲ್ಲಿಯೇ ಸತ್ತು ಹೋಗಿದ್ದಾರೆ. ಕೊಲ್ಕತ್ತಾ ಪ್ರಜೆಗಳು ಆ ಫೋಟೋಗಳನ್ನು ನೋಡಿದಾಗ ಸಮಸ್ಯೆ ತೀರ್ವತೆ ಅವರಿಗೆ ಒಂದೇ ಸಲಕ್ಕೆ ಅರ್ಥವಾಗಿದೆ. ''

ಪರಿಪಾಲಿಸುವವರು ಆಹಾರಧಾನ್ಯಗಳನ್ನು ಸರಬರಾಜು ಮಾಡದೇ ಹೋದ್ದರಿಂದ ಬರಗಾಲ ಸಂಭವಿಸುವ ಸಂದರ್ಭಗಳು ಭಾರತದೇಶದ ಚರಿತ್ರೆಯಲ್ಲಿವೆ. ಆಹಾರ ಶೇಕರಣೆಯಾಗಲಿ, ಇತರ ಪ್ರದೇಶಗಳಿಂದ ಆಹಾರ

SCERT TELANGANA

ಧಾನ್ಯಗಳನ್ನು ತರಸಿಯಾಗಲೀ ಇವುಗಳನ್ನು ಸರಬಾರಾಜು ಮಾಡಬಹುದಾಗಿತ್ತು. ಭಾರತದೇಶಕ್ಕೆ ಸ್ವಾತಂತ್ರ್ಯ ಬರುವ ಸಮಯಕ್ಕೆ ಪ್ರಜೆಗಳಿಗೆ ಆಹಾರ ತಲುಪುವ ಹಾಗೆ ಮಾಡುವುದಕ್ಕೆ ಸರ್ಕಾರಗಳು ವಿವಿಧ ವಿಧಾನಗಳನ್ನು ರೂಪಿಸತೊಡಗಿದವು. ಕಡಿಮೆ ಬೆಲೆಗಳಿಗೆ ಆಹಾಆರ ಧಾನ್ಯಗಳು ಸಿಗುವ ರೇಷನ್ ಅಂಗಡಿಗಳು, ನೀವು ಬಹಳಷ್ಟು ಮಂದಿ ಶಾಲೆಯಲ್ಲಿ ತಿನ್ನುತ್ತಿರುವ ಮಧ್ಯಾಹ್ನದ ಬಿಸಿಯೂಟ , ಚಿಕ್ಕ ಮಕ್ಕಳ ಸಂರಕ್ಷಣೆಯೊಂದಿಗೆ, ಮಧ್ಯಾಹ್ನ ಭೋಜನ ಇಡುವ ಅಂಗನ್‌ವಾಡಿ ಕೇಂದ್ರಗಳಂತಹವುಗಳ ಮೂಲಕ ಸರ್ಕಾರ ಆಹಾರ ಭದ್ರತೆ ಕಲ್ಪಿಸಲು ಪ್ರಯತ್ನಿಸುತ್ತದೆ. ಈ ಪಾಠದಲ್ಲಿ ಆಹಾರ ಭದ್ರತೆಗೆ ಸಂಬಂಧಿಸಿದ ಕೆಲವು ಅಂಶಗಳನ್ನು ನೋಡೋಣ.

ಮೊದಲನೆ ಭಾಗದಲ್ಲಿ ಆಹಾರ ಭದ್ರತೆಗೆ ಸಂಬಂಧಿಸಿದ ಅಂಶಗಳನ್ನು ನೋಡೋಣ: ದೇಶ ಮೊತ್ತದ ಮೇಲೆ ಆಹಾರ ಉತ್ಪತ್ತಿ, ಲಭ್ಯತೆಗಳಂತಹವುಗಳನ್ನು ಇದರಲ್ಲಿ ತಿಳಿದುಕೊಳ್ಳುತ್ತೇವೆ. ಎರಡನೆ ಭಾಗದಲ್ಲಿ ಪ್ರಜೆಗಳಿಗೆ ಆಹಾರ ಲಭ್ಯತೆ ಕುರಿತು ನೋಡುತ್ತೇವೆ – ಉತ್ಪತ್ತಿ ಆದ ಆಹಾರ ಪ್ರಜೆಗಳಿಗೆ ಎಷ್ಟರ ಮಟ್ಟಿಗೆ ಸೇರುತ್ತದೆಯೋ ತಿಳಿದುಕೊಳ್ಳೋಣ. ಕೊನೆಯದಾಗಿ, ಕುಟುಂಬಗಳ ಪೋಷಕಾಹಾರ ಮಟ್ಟವನ್ನು ನೋಡಿ ಈ ಯೋಜನೆಗಳು, ಪದ್ಧತಿಗಳು ಸಮರ್ಥವಾಗಿ ಕೆಲಸಮಾಡುತ್ತಿವೆಯೋ ಇಲ್ಲವೋ ತಿಳಿದುಕೋಳ್ಳುತ್ತೇವೆ.

ದೇಶಕ್ಕೆ ಆಹಾರ ಭದ್ರತೆ

ಆಹಾರ ಧಾನ್ಯಗಳ ಉತ್ಪತ್ತಿಯನ್ನು ಬೆಳೆಸುವುದು

ಆಹಾರ ಭದ್ರತೆಗೆ ಸರಿಹೋಗುವ ಆಹಾರ ಧಾನ್ಯಗಳ ಉತ್ಪತ್ತಿ ಮಾಡುವುದು ಮುಖ್ಯವಾದ ಅವಶ್ಯಕ. ಇದರ ಅರ್ಥ ಹೆಚ್ಚು ಮೊತ್ತದಲ್ಲಿ ಆಹಾರ ಪದಾರ್ಥಗಳನ್ನು ರೈತರು ಬೆಳೆಸುವ ಪರಿಸ್ಥಿತಿಗಳನ್ನು ಭಾರತದೇಶ ಸರ್ಕಾರ ಕಲ್ಪಿಸುವುದು.

ರೇಖಾಚಿತ್ರ ಪಟ 10.1ನ್ನು ಪರಿಶೀಲಿಸಿ ಖಾಲಿಸ್ಥಳಗಳನ್ನು ತುಂಬಿರಿ(ಪ್ರತಿ ಬಿಂದುವಿನ ಹತ್ತಿರ ಖಚ್ಚಿತವಾದ ಬೆಲೆಗಳನ್ನು ತಿಳಿದುಕೊಳ್ಳುವುದಕ್ಕೆ "ವೈ" ಅಕ್ಷದ ಮೇಲೆ ಸ್ಕೇಲನ್ನು ಉಪಯೋಗಿಸಿರಿ).

- ಆಹಾರ ಧಾನ್ಯಗಳ ಉತ್ಪತ್ತಿ 1970-71 ರಿಂದ ------ಗೆ ಬೆಳೆದಿದೆ. ಭತ್ತ ಉತ್ಪತ್ತಿ 1970-71ರಲ್ಲಿ 40 ಮಿಲಿಯನ್ ಟನ್ನುಗಳಿಂದ 2010-11 ವರ್ಷಕ್ಕೆ ------- ಮಿಲಿಯನ್ ಟನ್ನುಗಳಿಗೆ ಬೆಳೆದಿದೆ. ಈ 40ವರ್ಷಗಳ ಕಾಲದಲ್ಲಿ ಉತ್ಪತ್ತಿ ವೇಗವಾಗಿ ಹೆಚ್ಚಿದ ಮತ್ತೊಂದು ಮುಖ್ಯವಾದ ಆಹಾರ ಬೆಳೆ ---------. ಭತ್ತ, ಗೋಧಿಗಳಲ್ಲಿ ಹೋಲಿಸಿದರೆ 1970-2011ಕಾಲದಲ್ಲಿ ------ಉತ್ಪತ್ತಿ ಬೆಳೆಯಲಿಲ್ಲ.ಇದಕ್ಕೆ ಕಾರಣ ------ ಆಗಿರಬಹುದು.
- ಪಾಠ 9 ''ರಾಂಪುರಂ : ಗ್ರಾಮ ಆರ್ಥಿಕ ವ್ಯವಸ್ಥೆ''ಯಲ್ಲಿನ ''ಭೂಮಿ, ಇತರ ಸ್ವಾಭಾವಿಕ ಸಂಪನ್ಮೂಲಗಳು'' ಎಂಬ ಭಾಗವನ್ನು ಮತ್ತೇ ಓದಿರಿ ಭೂಮಿಯಿಂದ ಬೆಳೆಯ ಉತ್ಪತ್ತಿ ಬೆಳೆಸುವುದಕ್ಕೆ ಯಾವ ಯಾವ ವಿಧಾನಗಳು ಇವೆ?

ರೇಖಾಚಿತ್ರ ನಕ್ಷೆ 10.1: ಆಯ್ಕೆ ಮಾಡಿದ ಆಹಾರ ಧಾನ್ಯಗಳ ಉತ್ಪತ್ತಿ (ಮಿಲಿಯನ್ ಟನ್ನುಗಳಲ್ಲಿ)



SCERT TELANGANA

ರೇಖಾ ಚಿತ್ರ ನಕ್ಷೆ 10.2: ಆಯ್ಕೆ ಮಾಡಿದ ಆಹಾರ



ಕಳೆದ ಕೆಲವು ದಶಮಾನಗಳಿಂದ ಬೇಸಾಯದ ಕೆಳಗಿರುವ ಭೂಮಿ ಇಂಚುಮಿಂಚು ಸ್ಥಿರವಾಗಿಯೇ ಇದೆ ಎಂದು ನಮಗೆ ತಿಳಿದಿದೆ. ಆದ್ದರಿಂದ ಇಲ್ಲಿ ಇಳುವರಿಗಳು ಮುಖ್ಯವಾಗುತ್ತವೆ. ರೇಖಾ ಚಿತ್ರ 10.2 ನೋಡಿರಿ.

ಹೆಕ್ಟೇರಿಗೆ ಲಭಿಸುವ ಬೆಳೆಯ ಇಳುವರಿಯನ್ನು ಹೆಚ್ಚಿಸುವುದಕ್ಕೆ ಅವಶ್ಯಕವಾದ ಉತ್ಪಾದಕಗಳನ್ನು ಸಕ್ರಮವಾಗಿ ವಿನಿಯೋಗಿಸಬೇಕು. ನೀರಾವರಿ ಸೌಲಭ್ಯವನ್ನು ಹೆಚ್ಚಿಸುವುದು ಒಂದು ಮಾರ್ಗ. ಆದರೆ ಈ ಮುಖ್ಯವಾದ ಸಂಪನ್ಮೂಲವು ಎಲ್ಲರಿಗೂ ಸಮಾನ ರೀತಿಯಲ್ಲಿ ಹಂಚುವ ಪದ್ಧತಿಯನ್ನು ಉಪಯೋಗಿಸಬೇಕು.

ರೇಖಾ ಚಿತ್ರ ನಕ್ಷೆ 10.2 ರಲ್ಲಿ ಕಡಿಮೆ ಇಳುವರಿ ಕೊಡುವ ಬೆಳೆಗಳನ್ನು ಪ್ರಧಾನವಾಗಿ ಮಳೆಯ ಮೇಲೆ ಆಧಾರವಾದ ಪ್ರಾಂತದಲ್ಲಿ ಬೇಸಾಯ ಮಾಡುತ್ತಾರೆ, ಈ ಭೂಮಿಗಳಿಗೆ ಭವಿಷ್ಯತ್ತಿನಲ್ಲಿ ಕೂಡಾ ನೀರಾವರಿ ಸೌಕರ್ಯ ಲಭಿಸುವ ಅವಕಾಶವಿಲ್ಲ. ಅದಕ್ಕಾಗಿ ವರ್ಷಾಭಾವ ಪರಿಸ್ಥಿತಿಗೆ ಅನುಕೂಲ ವಾದ ಬೆಳೆಗಳು, ಸ್ಥಳೀಯ ಪರಿಸ್ಥಿತಿಗಳಿಗೆ ಅಣುಗುಣವಾಗಿ ಬಿತ್ತನೆ, ಮಳೆ ನೀರನ್ನು ಸಂಗ್ರಹಿಸುವುದು, ಬೆಳೆ ಬದಲಾವಣೆಗಳು ಮುಂತಾದ ಪದ್ಧತಿಗಳ ಮೂಲಕ ಅಧಿಕ ಇಳುವರಿಯನ್ನು ಸಾಧಿಸುವುದು.

ಈ ಪ್ರಕ್ರಿಯೆಯಲ್ಲಿ ಭೂಮಿ, ಇತರ ಸ್ವಾಭಾವಿಕ ಸಂಪನ್ಮೂಲಗಳು ನಶಿಸಿ ಹೋಗದಂತೆ ಕ್ಷೀಣತೆಗೆ ಗುರಿಯಾಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಭಾರತದೇಶದಲ್ಲಿ ಭತ್ತ, ಗೋಧಿಗಳನ್ನು ಬೆಳೆಸುವ ವಿಧಾನದಿಂದ ರಾಸಾಯನಿಕ ಗೊಬ್ಬರಗಳು, ಕ್ರಿಮಿಸಂಹಾರಕ ಔಷಧಗಳು, ಅಶಾಸ್ತ್ರೀಯವಾಗಿ , ವಿಚಕ್ಷಣೆ ರಹಿತವಾಗಿ ಉಪಯೋಗಿಸುವುದರಿಂದ ಅಧಿಕ ಇಳುವರಿ ಬಂದಿದೆ. ಆದರೆ ಕೆಲಸ ಇದು ಸುಸ್ಥಿರ ಪದ್ಧತಿಯಲ್ಲವೆಂದು ಕೆಲವು ಶಾಸ್ತ್ರಜ್ಞರು ವ್ಯವಸಾಯ ವಲಯದಲ್ಲಿ ಮಾಡುವ ವ್ಯಕ್ತಿಗಳು ಭಾವಿಸುತ್ತಿದ್ದಾರೆ. ವಾಸ್ತವವಾಗಿ ಈ ಪದ್ಧತಿಯಿಂದ ಭೂಮಿಯು ಕ್ಷೀಣತೆಗೆ ಗುರಿಯಾಗಿದೆ. ಭೂಗರ್ಭಜಲ ಅಂತರಿಸಿ ಹೋಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಬೆಳೆಯು ಅಧಿಕವಾಗುವುದು ಬಿಟ್ಟು ಕಡಿಮೆಯಾಗುತ್ತದೆ.

ಕೆಳಗಿನ ವಾಕ್ಯಗಳನ್ನು ಓದಿ ಹೆಕ್ಟೇರಿಗೆ ಭತ್ತ, ಗೋಧಿಗಳ ಇಳುವರಿಗಳು ಹೇಗೆ ಇವೆಯೋ ವಿವರಿಸಿರಿ.

- -------------------- ಬೆಳೆಗಳ ಇಳುವರಿಗಳು ಭತ್ತ, ಗೋಧಿಯೊಂದಿಗೆ ಹೋಲಿಸಿದರೆ ಯಾವಾಗಲೂ ಕಡಿಮೆಯಾಗಿಯೇ ಇವೆ. ಆದರೆ ಇತ್ತೀಚಿನ ಕಾಲದಲ್ಲಿ ಈ ಬೆಳೆಗಳ ಇಳುವರಿಗಳು ಕ್ರಮೇಣವಾಗಿ ಹೆಚ್ಚುತ್ತಿವೆ.
- ಜೋಳ ಇಳುವರಿಗಳನ್ನು ಹೆಚ್ಚಿಸುವುದ ಮೇಲೆ ದೃಷ್ಟಿ ಏಕೆ ಇಡಬೇಕು? ಚರ್ಚಿಸಿರಿ.
- ದೀರ್ಘ ಕಾಲದವರೆಗೂ ಭತ್ತ, ಗೋಧಿಯ ಇಳುವರಿಗಳನ್ನು ಗಣನೀಯವಾಗಿ ಹೆಚ್ಚಿಸಲು ಯಾವ ಅಂಶಗಳು ಸಹಕಾರಿಯಾಗುವವೋ ತಿಳಿಸಿರಿ.

ಆಹಾರ ಧಾನ್ಯಗಳ ಲಭ್ಯತೆ

ದೇಶದ ಜನಸಂಖ್ಯೆಗೆ ಸರಿಹೊಂದುವಷ್ಟು ಆಹಾರ ಧಾನ್ಯಗಳನ್ನು ಬೆಳೆಸುವುದು ಎನ್ನುವುದು ಮೊದಲನೆಯ ಹೆಜ್ಜೆ. ಎಲ್ಲರಿಗೂ ಸರಿಹೋಗುವಷ್ಟು ಆಹಾರವು ಇದೆಯೋ, ಇಲ್ಲವೋ ಎಂಬುದನ್ನು ಹೇಗೆ ಲೆಕ್ಕ ಹಾಕುತ್ತೇವೆ. ಈ ಆಹಾರವು ಎಲ್ಲ ಕುಟುಂಬಗಳಿಗೆ ತಲುಪುತ್ತದೆಯೋ ಇಲ್ಲವೆಂಬುದನ್ನು ನಂತರ ಪರಿಶೀಲಿಸೋಣ. ಮೊದಲನೆಯದಾಗಿ ಲಭ್ಯತೆಯು ಎಷ್ಟು ಇದೆ ಎಂಬುದನ್ನು ನೋಡುತ್ತಿದ್ದೇವೆ. ಇದರ ಅರ್ಥ ದೇಶದಲ್ಲಿ ತಲಸರಿ ಸರಾಸರಿ ಪ್ರತಿಯೊಬ್ಬರಿಗೂ

SCERT TELANGANA

ದೊರೆಯುವ ಆಹಾರ ಧಾನ್ಯಗಳ ಲಭ್ಯತೆಯು ಸರಿಹೋಗುವಷ್ಟು ಇರಬೇಕು. ಅದು ಕಾಲಕ್ರಮದಲ್ಲಿ ಹೆಚ್ಚುತ್ತಾ ಇರಬೇಕು. ಆಹಾರ ಧಾನ್ಯಗಳ ಲಭ್ಯತೆಯು ವಾಸ್ತವ ವಾಗಿ ಬೆಳೆಯುತ್ತದೆಯೇ?

ಆಹಾರ ಧಾನ್ಯಗಳ ಉತ್ಪತ್ತಿ, ಲಭ್ಯತೆಯ ಮಧ್ಯೆ ವ್ಯತ್ಯಾಸವಿದೆ. ಇದನ್ನು ಈವಿಧವಾಗಿ ಅಂದಾಜು ಹಾಕುತ್ತಾರೆ.

ವರ್ಷಕ್ಕೆ ಲಭ್ಯತೆ ಇರುವ ಆಹಾರ ಧಾನ್ಯಗಳು = ವರ್ಷದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿ (ಉತ್ಪತ್ತಿ – ಬೀಜ, ದಾಣಾ, ವೃಥಾ) + ನಿಕರ ಆಮದುಗಳು (ಆಮದು – ರಫ್ತುಗಳು) – ಸರ್ಕಾರ ಸಂಗ್ರಹಣಗಳಲ್ಲಿ ವ್ಯತ್ಯಾಸ (ವರ್ಷದ ಕೊನೆಯಲ್ಲಿರುವ ಸಂಗ್ರಹಣಗಳು – ವರ್ಷದ ಆರಂಭಕ್ಕೆ ಇರುವ ಸಂಗ್ರಹಣಗಳು).

ಸರಾಸರಿಯಾಗಿ ಪ್ರತಿ ವ್ಯಕ್ತಿಗೆ , ಪ್ರತಿದಿನವೂ ಲಭ್ಯತೆಯಲ್ಲಿರುವ ಆಹಾರ ಧಾನ್ಯಗಳು = (**ವರ್ಷಕ್ಕೆ ಲಭ್ಯತೆಯಲ್ಲಿರುವ ಆಹಾರ ಧಾನ್ಯಗಳು** ÷ **ಜನಸಂಖ್ಯೆ** / 365.

ಉತ್ಪತ್ತಿ, ಆಮದುಗಳು ಸರ್ಕಾರದ ಸಂಗ್ರಹಣಗಳಲ್ಲಿ ಬದಲಾವಣೆಗೆ ಸಂಬಂಧಿಸಿದ ವಿವರಗಳು 1971, 1991, 2011 ವರ್ಷಗಳಿಗೆ ಕೆಳಗನ ಪಟ್ಟಿಯಲ್ಲಿವೆ. ಉತ್ಪತ್ತಿ ಅಲ್ಲದೆ ಒಂದು ವರ್ಷದಲ್ಲಿ ಆಹಾರ ಧಾನ್ಯಗಳ ಲಭ್ಯತೆ ಬೆಳಸುವುದಕ್ಕೆ ಆಮದುಗಳು ಒಂದು ಮಾರ್ಗ. ಆಹಾರದ ಲಭ್ಯತೆಯನ್ನು ಬೆಳೆಸುವುದಕ್ಕೆ ಸರ್ಕಾರದ ಸಂಗ್ರಹಣಗಳನ್ನು ಉಪಯೋಗಿಸುಕೊಳ್ಳವುದು ಒಂದು ಮುಖ್ಯವಾದ ಮಾರ್ಗ. ಉದಾಹರಣೆಗೆ ಸರ್ಕಾರ ತನ್ನ ಹತ್ತಿರ ಇರುವ ಸಂಗ್ರಹಣಗಳಿಂದ ಪ್ರಜೆಗಳಿಗೆ ಅಕ್ಕಿ ಮಾರುವುದರ ಮೂಲಕ ಅದರ ಲಭ್ಯತೆಯನ್ನು ಬೆಳೆಸಬಹುದು. ಸರ್ಕಾರ ಹತ್ತಿರ ಸಂಗ್ರಹಣಗಳು ಕಡಿಮೆಯಾಗುತ್ತವೆ ಹೊರೆತು ಆ ವರ್ಷ ವಿನಿಯೋಗಕ್ಕೆ ಅಕ್ಕಿಯ ಲಭ್ಯತೆ ಹೆಚ್ಚಾಗುತ್ತದೆ. (ನಂತರ ಭಾಗದಲ್ಲಿ ಸರ್ಕಾರ ಸಂಗ್ರಹಣೆ ಕುರಿತು ಮತ್ತಷ್ಟು ತಿಳಿದುಕೊಳ್ಳೋಣ.)

1971ರಲ್ಲಿ ಲೆಕ್ಕಹಾಕಿದ ಪ್ರಕಾರ,1991,2011 ವರ್ಷಗಳಲ್ಲಿ ತಲಸರಿ ಸರಾಸರಿ ಆಹಾರ ಧಾನ್ಯಗಳ ಲಭ್ಯತೆಯನ್ನು ಲೆಕ್ಕಹಾಕಿರಿ.

ಪಟ್ಟಿ -1: ತಲಸರಿ ಆಹಾರ ಧಾನ್ಯಗಳ ಲಭ್ಯತೆ

ವರ್ಷ	ಜನಸಂಖ್ಯೆ (ಮಿಲಿಯನ್‌ಗಳು)	ನಿಕರ ಆಹಾರ ಧಾನ್ಯಗಳ ಉತ್ಪತ್ತಿ #	ನಿಕರ ಆಮದುಗಳು #	ಸರ್ಕಾರಿ ಸಂಗ್ರಹಗಳಲ್ಲಿ ಬದಲಾವಣೆ #	ಆಹಾರ ಧಾನ್ಯಗಳ ನಿಕರ ಲಭ್ಯತೆ #	ತಲಸರಿ ಲಭ್ಯತೆ ಒಂದು ದಿನಕ್ಕೆ (ಗ್ರಾಮುಗಳಲ್ಲಿ)
col (1)	col (2)	col (3)	col (4)	col (5)	col (6)	col (7)
1971	551	94.9	2	2.6	col (3) + col (4) – col (5) = 94.3	={col (6)/col (2)}/365} = (94.3/551)/365 = 0.000469 ಟನ್ನುಗಳು * = 0.000469 x 1000 =0.469 ಕಿಲೋಗ್ರಾಮುಗಳು* = 0.469 x 1000 = 469 ಗ್ರಾಮುಗಳು
1991	852	154.3	–0.1	–4.4		
2011	1202	214.2	–2.9	8.2		

ಸೂಚನೆ : 1 ಟನ್ನು = 1000 ಕಿಲೋಗ್ರಾಂಗಳು; 1 ಕಿಲೋ = 1000 ಗ್ರಾಮುಗಳು; # = ಮಿಲಿಯನ್ ಟನ್ನುಗಳು

- ನೀವು ಲೆಕ್ಕಿಸಿದ ಆಧಾರವಾಗಿ ಖಾಲಿಸ್ಥಳಗಳನ್ನು ತುಂಬಿರಿ : 1971 ರಿಂದ 1991 ಕ್ಕೆ ತಲಸರಿ ಆಹಾರ ಧಾನ್ಯಗಳ ಲಭ್ಯತೆ -------(ಹೆಚ್ಚಾಗಿದೆ/ಕಡಿಮೆಯಾಗಿದೆ), ಆದರೆ 2011ರಲ್ಲಿ ಇದು ------(ಹೆಚ್ಚು/ ಕಡಿಮೆಯಾಗಿ) ಇದೆ. ಇತ್ತೀಚಿನ ದಶಾಬ್ದಗಳಲ್ಲಿ ಜನಾಭಿವೃದ್ಧಿಯಲ್ಲಿ ಇಳಿಕೆಯಿದ್ದರೂ ಹೀಗೆ ನಡೆದಿದೆ. ಭವಿಷ್ಯತ್ತಿನಲ್ಲಿ ಆಹಾರ ಧಾನ್ಯಗಳ ಲಭ್ಯತೆ ಹೆಚ್ಚಿಸುವುದಕ್ಕೆ ಸರ್ಕಾರ ----------- ಕ್ರಮಗಳು ಕೈಗೊಳ್ಳಬೇಕು.

SCERT TELANGANA

ಆಹಾರ ಧಾನ್ಯಗಳು ಎಂದರೇನು?



"ತೃಣ" ಧಾನ್ಯಗಳು ಎನ್ನುತ್ತಾರೆ ಆದ್ದರಿಂದ ಇವು ಕಡಿಮೆ ಬೆಳೆಗಳು ಎಂದು ಬಹಳ ಮಂದಿ ಅಂದುಕೊಳ್ಳುತ್ತಾರೆ. ಇವು ತೃಣಪ್ರಾಯವೆಂದು, ಪೋಷಕ ಬೆಲೆಗಳು ಕಡಿಮೆ ಎಂದು ಎಂದುಕೊಳ್ಳುತ್ತಾರೆ. ಇದಕ್ಕೆ ವಿರುದ್ಧವಾಗಿ ಇವುಗಳಲ್ಲಿ ಪೋಷಕಾಂಶಗಳು ಹೆಚ್ಚು, ಒಂದು ವಿಧವಾಗಿ ಪರಿಪೂರ್ಣವಾದ ಆಹಾರ ಇವು. ದೇಶದಲ್ಲಿನ ವರ್ಷಾಧಾರ ಪ್ರದೇಶದಲ್ಲಿನ ಲಕ್ಷಾಂತರ ಪ್ರಜೆಗಳ ಪ್ರಧಾನ ಆಹಾರ ಇದೇ. ಒಂದುಕಾಲದಲ್ಲಿ ಭಾರತೀಯ ಕುಟುಂಬಗಳೆಲ್ಲವುಗಳಲ್ಲಿ ಇವುಗಳನ್ನು ಇಷ್ಟವಾಗಿ ತನ್ನುತ್ತಿದ್ದರು. ಅಕ್ಕಿ, ಗೋಧಿಗಳ ಬಿಳಿ ಬಣ್ಣ ಇಷ್ಟಪಡುವ ವಲಸೆ ಪಾಲಕರಿಂದ ಇವುಗಳಿಗೆ ತೃಣ ಧಾನ್ಯಗಳೆಂಬ ಹೆಸರು ಬಂದಿದೆ. ಅಷ್ಟೇ ಅಲ್ಲದೇ ಅವರು ಸ್ಥಳೀಯ ಆಹಾರವನ್ನು, ಸಾಂಸ್ಕೃತಿಕ ಆಚಾರಗಳನ್ನು ಕಡೆಗಣಿಸಿ ನೋಡಿದರು. ಪ್ರಸ್ತುತ ಬಹಳ ಮಂದಿ ಇವುಗಳನ್ನು "ಪೋಷಕ ಧಾನ್ಯಗಳಾಗಿ" ವ್ಯವಹರಿಸುತ್ತಿದ್ದಾರೆ.

ಇತರ ಆಹಾರ ಪದಾರ್ಥಗಳ ಲಭ್ಯತೆ

ಆಹಾರ ಬಳಕೆಯಲ್ಲಿ ಬದಲಾವಣೆಗಳು ಬಂದು ಹಣ್ಣು, ತರಕಾರಿಗಳು, ಹಾಲು, ಮಾಂಸ , ಕೋಳಿಮಾಂಸ, ಮೀನುಗಳನ್ನು ಜನರು ಬಯಸುತ್ತಿದ್ದಾರೆ. ಇದು ಬಳಕೆದಾರರಿಗೂ ಉತ್ಪತ್ತಿದಾರರಿಗೂ ಒಳ್ಳೆಯ ಸಂಕೇತವು. ಬಳಕೆದಾರರು ವಿಧವಿಧವಾದ ಆಹಾರ ಪದಾರ್ಥಗಳಿಂದ ಕೂಡಿದ ಸಮತೌಲ್ಯ ಆಹಾರವನ್ನು ತೆಗೆದುಕೊಳ್ಳಬೇಕು. ಆಹಾರ ಧಾನ್ಯಗಳನ್ನು ಬೆಳೆಸುವ ರೈತರು ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ವಿವಿಧ ಬೆಳೆಗಳನ್ನು ಬೆಳೆಯಬೇಕು. ಕಳೆದ ಎರಡು ದಶಮಾನಗಳಿಂದ ಆಂಧ್ರಪ್ರದೇಶ್‌ದಲ್ಲಿಯ ಆಹಾರ ಧಾನ್ಯಗಳು ಬೆಳೆಸುವ ಭೂಮಿಯಲ್ಲಿ ಹತ್ತಿಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಸುತ್ತಿದ್ದಾರೆಂದು ಹಿಂದಿನ ತರಗತಿಗಳಲ್ಲಿ ಓದಿದ್ದೇವೆ. ರೈತರ ಸಂಕ್ಷೋಭಕ್ಕೆ ಇದು ಕೂಡಾ ಒಂದು ಕಾರಣ. ಇದರ ಬದಲಾಗಿ ರೈತರು ಕೋಳಿ ಸಾಗಾಣಿಕೆ, ಮೀನು ಸಾಗಾಣಿಕೆ, ಹೈನುಗಾರಿಕೆಗಳಂತಹ ಅನುಬಂಧ ಕೆಲಸಗಳನ್ನು ಕೈಹಿಡಿದು ಹೊಸ ಅವಕಾಶಗಳನ್ನು ಕೊಟ್ಟು ತೆಗೆದುಕೊಳ್ಳಬಹುದು.

ಕಾಲಕ್ರಮೇಣ ಇತರೆ ಆಹಾರ ಪದಾರ್ಥಗಳ ಉತ್ಪತ್ತಿ ಬೆಳೆದರೂ ದೈನಂದಿನ ಕನಿಷ್ಠ ಆಹಾರ ಅವಶ್ಯಕತೆಗಳನ್ನು ತೀರಿಸುವ ಸಾಕಾಗುವಷ್ಟು ಇದು ಇಲ್ಲ. ಭಾರತದೇಶದಲ್ಲಿನ ಸರಾಸರಿ ಪ್ರತಿ ವ್ಯಕ್ತಿ ದಿನಕ್ಕೆ 300 ಗ್ರಾಮುಗಳ ತರಕಾರಿಗಳು, 100ಗ್ರಾಮುಗಳ ಹಣ್ಣುಗಳನ್ನು ತೆಗೆದುಕೊಳ್ಳಬೇಕು ಎಂದು ನಿಪುಣರು ಹೇಳುತ್ತಿದ್ದಾರೆ. ಆದರೆ,ಪೋಷಕಾಹಾರ ಇವುಗಳ ಲಭ್ಯತೆ ಕ್ರಮವಾಗಿ 180 ಗ್ರಾಮುಗಳು, 58 ಗ್ರಾಮುಗಳು ಮಾತ್ರವೇ ಇದೆ. ಅದೇ ವಿಧವಾಗಿ ಸರಾಸರಿಯಾಗಿ ಪ್ರತಿ ವ್ಯಕ್ತಿ ವರ್ಷದಲ್ಲಿ 180 ಮೊಟ್ಟೆಗಳನ್ನು ತೆಗೆದುಕೊಳ್ಳಬೇಕಿದ್ದರೆ ಇದರ ಲಭ್ಯತೆ 30 ಮಾತ್ರವೇ. ಆಹಾರದಲ್ಲಿ ಸರಾಸರಿಯಾಗಿ ಪ್ರತಿ ವ್ಯಕ್ತಿ ವರ್ಷಕ್ಕೆ 11 ಕಿಲೋಗ್ರಾಂಗಳ ಮಾಂಸವನ್ನು ತೆಗೆದುಕೊಳ್ಳಬೇಕಿದ್ದರೆ ಇದರ ಲಭ್ಯತೆ 3.2 ಕಿಲೋಗ್ರಾಂಗಳು ಮಾತ್ರವೇ. ದಿನಕ್ಕೆ ಪ್ರತಿ ವ್ಯಕ್ತಿ 300 ಮಿಲ್ಲೀ ಲೀಟರ್‌ಗಳ ಹಾಲು ತೆಗೆದುಕೊಳ್ಳಬೇಕಿದ್ದರೆ ಲಭ್ಯತೆ 210 ಮಿಲ್ಲೀ ಲೀಟರುಗಳು ಮಾತ್ರವೇ.

ಆದ್ದರಿಂದ ಇತರ ಆಹಾರ ಪದಾರ್ಥಗಳ ಉತ್ಪತ್ತಿ ಕೈಗೊಳ್ಳುವುದಕ್ಕೆ ರೈತರಿಗೆ ಉತ್ಪಾದಕಗಳು, ಮಾರ್ಕೆಟ್ ಅವಕಾಶಗಳ ರೂಪದಲ್ಲಿ ಬೆಂಬಲ ಬೇಕು. ಹೊಸ ಪರಿಸ್ಥಿತಿಗಳಲ್ಲಿ ರೈತರು ಎದುರಿಸುವ ಮಾರ್ಕೆಟ್ ಏರು ಪೇರುಗಳಿಂದ ರೈತರಿಗೆ ರಕ್ಷಣೆ,ಬೆಂಬಲ ಅವಶ್ಯಕ ವಾಗುತ್ತವೆ.

SCERT TELANGANA

ವ್ಯವಸಾಯ ವೈವಿಧ್ಯೀಕರಣ

ಮಿಡ್ನಪೂರ್ ಪ್ರಾಂತಗಳಲ್ಲಿ ಕೆಂಪು ನೆಲಗಳಿವೆ. ಬೊರ್ರೊಲ್ಲಾ ಗ್ರಾಮಪಂಚಾಯಿತಿ ಪರಿಧಿಯಲ್ಲಿನ ಕಸ್ಬಲ್ ಗ್ರಾಮ ವದು. ಸರಿಸುಮಾರು ಎಲ್ಲಾ ರೈತರಿಗೂ ಕೊಳವೆಬಾವಿಗಳಿವೆ. ನೀರಿನ ಸೌಕರ್ಯ ಅಭಿವೃದ್ಧಿಗೆ ಬ್ಯಾಂಕಿನವರು ಸಾಲಗಳನ್ನು ಕೊಟ್ಟಿವೆ. ನಾನು ಹರಿಪ್ರಸಾದ್ ಸಮಂತ, ಚಿಟ್ಟೋ ಮೈಥಿ, ಝೂಥ್ ಲೆಂಕಾರೊಂದಿಗೆ ಮಾತನಾಡಿದ್ದೇನೆ – ಯಾರೂ ಎರಡು ಎಕರೆಗಳಿಗೆ ಮೀರಿ ಬೇಸಾಯ ಮಾಡುತ್ತಿಲ್ಲ. ಸಾಂಕೇತಿಕ ವಿಜ್ಞಾನ ಬಹಳ ಚೆನ್ನಾಗಿದೆ. ಭತ್ತ ಬೀಜಗಳನ್ನು ಬಹಳ ದಿನಗಳ ಹಿಂದೆ ವಿಶ್ವವಿದ್ಯಾಲಯದಿಂದ ಎಂದೋ ತಂದ ಬೀಜಗಳನ್ನೇ ಇಂದಿಗೂ ಬಳಸುತ್ತಿದ್ದಾರೆ. ವಾಣಿಜ್ಯ ಬೆಳೆಗಳ ಮೂಲಕ ಅವರಿಗೆ ಹೆಚ್ಚು ಆದಾಯ ಬರುತ್ತದೆ, ಪ್ರತಿಯೊಬ್ಬರೂ ತರಕಾರಿಗಳನ್ನು ಬೆಳೆಸುತ್ತಾರೆ. ಆಲೂಗಡ್ಡೆಗಳೆಂದರೆ ಅವರಿಗೆ ಬಲುಇಷ್ಟ. ಇವುಗಳ ಬೀಜಗಳನ್ನು ವಾಣಿಜ್ಯ ಕಂಪೆನಿಗಳಿಂದ ಲಭಿಸುತ್ತವೆ, ಹೆಚ್ಚು ಬೆಲೆ . . . ಇನ್ನೊಂದು ಒಳ್ಳೆಯ ಪರಿಣಾಮ ಹೈನುಗಾರಿಕೆ. ಸರಿಸುಮಾರು ಎಲ್ಲರಿಗೂ ಮೂರರಿಂದ ಐದು ಹಸುಗಳಿವೆ. ಇವುಗಳ ಪೋಷಣೆ ಜವಾಬ್ದಾರಿ ಸ್ತ್ರೀಯರದು. ಇದು ಈಗಾ ವಿಸ್ತರಣೆಯಾಗುತ್ತಿದೆ. ಒಳ್ಳೆಯ ಬೇಳೆಕಾಳುಗಳ ಬೀಜಗಳು ಮಹಾರಾಷ್ಟ್ರ, ಮಧ್ಯಪ್ರದೇಶ್‌ಗಳಿಂದ ಬರುತ್ತವೆ ಎಂದು ರೈತರಿಗೆ ಗೊತ್ತು. ಅವರ ಹತ್ತಿರ ಇರುವ ಸಾಸುವೆ ಬೀಜಗಳು ಉತ್ತಮವಾಗಿವೆ.

ನದಿಯಿಂದ ನೆಲ ಮೇಲಕ್ಕೆ ಇಳಿಜಾರಾಗಿರುತ್ತದೆ. ಮೂರುನೂರು ಮೀಟರ್‌ಗಳ ಮೇಲಕ್ಕೆ, ಸ್ವಲ್ಪ ದೂರ ಹೋದ ನಂತರ ಮತ್ತೊಂದು ಗ್ರಾಮ ನೋಡಿದೆನು. ಅಲ್ಲಿಯ ಅರ್ಧದಷ್ಟು ಜನಸಂಖ್ಯೆ ಬಡತನದಲ್ಲಿ ಇದೆ. ಅಲ್ಲಿ ಒಂದೇ ಬೆಳೆ ಬೆಳೆಯುತ್ತದೆ, ಎರಡನೆ ಬೆಳೆಯನ್ನು ಮಳೆಯಾಧಾರವಾಗಿ ಬೆಳೆಸುತ್ತಾರೆ. ಇಳುವರಿಗಳು ಕಡಿಮೆ. ಅನೇಕ ಅವಕಾಶಗಳು ಇವೆ. ಆದರ ಒಂದೇ ಯೋಜನೆ, ಸರ್ಕಾರ ಸಹಾಯವಿಲ್ಲದೇ ಅವರೊಂದಿಗೆ ವೈವಿಧ್ಯೀಕರಣ ಕುರಿತು ಮಾತನಾಸುವುದು ವ್ಯರ್ಥವೇ ಆಗುತ್ತದೆ.1

ವ್ಯವಸಾರಯ ವೈವಿಧ್ಯೀಕರಣವು ಆಹಾರ ಧಾನ್ಯಗಳ ಉತ್ಪತ್ತಿಯನ್ನು ಪ್ರಭಾವಿತಗೊಳಿಸುತ್ತವೆ ಎಂಬ ವಿಷಯವನ್ನು ಗಮನಿಸಿರಿ. ಇದರಿಂದ ಎದುರಾಗುವ ವಿಧಾನಗಳ ಸಂಧಿಗ್ಧತೆಯನ್ನು ಸರಿಯಾದ ಯೋಜನೆಗಳ ಮುಖಾಂತರ ಎದುರಿಸಬೇಕು. ಆಹಾರೇತರ ಬೆಳೆಗಳಿಗೆ ಸಂಪನ್ಮೂಲಗಳನ್ನು ಬದಲಾಯಿಸುವುದರಿಂದ ಆಹಾರ ಧಾನ್ಯಗಳ ಉತ್ಪತ್ತಿ ಕಡಿಮೆಯಾಗಬಹುದು. ತಲಸರಿ ಆಹಾರ ಧಾನ್ಯಗಳ ಲಭ್ಯತೆಯಲ್ಲಿ ಯೂರೋಪ್ (700 ಗ್ರಾಮುಗಳು), ಅಮೆರಿಕಾ (850 ಗ್ರಾಮುಗಳು) ಗಳಂತಹ ದೇಶಗಳೊಂದಿಗೆ ಹೋಲಿಸಿದರೆ ಭಾರತದೇಶದಲ್ಲಿ ಕಡಿಮೆ. ಆಹಾರ ಧಾನ್ಯ ಗಳ ತಲಸರಿ ಲಭ್ಯತೆ ಕಡಿಮೆಯಾಗುತ್ತಾ ಇರುವುದು ಭಾರತದೇಶ ಆಹಾರ ಭದ್ರತೆ ವಿಷಯದಲ್ಲಿ ಕಳವಳ ಉಂಟುಮಾಡುವ ವಿಷಯ. ಬಡಕುಟುಂಬಗಳದವರು ಶಾರೀರಿಕ ಕಷ್ಟಮಾಡುತ್ತಾರೆ, ಶಕ್ತಿಗೋಸ್ಕರ ಅವರು ಆಹಾರ ಧಾನ್ಯಗಳ ಮೇಲೆಯೇ ಆಧಾರ ಪಟ್ಟಿದ್ದಾರೆ. ಆಹಾರ ಧಾನ್ಯಗಳ ಉತ್ಪತ್ತಿಯೊಂದಿಗೆ ಇತರ ಆಹಾರ ಪದಾರ್ಥಗಳ ಉತ್ಪತ್ತಿ ಹೆಚ್ಚಿಸುವ ಹಾಗೆ ನಮ್ಮ ವಿಧಾನಗಳು ಇರಬೇಕು.

- ವ್ಯವಸಾಯ ವೈವಿಧ್ಯೀಕರಣಕ್ಕೆ ಸಂಬಂಧಿಸಿದ ಪದಗಳು, ವಾಕ್ಯಗಳು ಕೆಳಗೆ ಗೆರೆ ಎಳೆದು ಭಾರತೀಯ ರೈತರಿಗೆ ಇದು ಏಕೆ ಅವಶ್ಯಕವೋ ವಿವರಿಸಿರಿ.
- ನಿಮ್ಮ ಗ್ರಾಮದಲ್ಲಿ ಅಥವಾ ನಿಮಗೆ ತಿಳಿದ ಗ್ರಾಮದಲ್ಲಿ ದಲ್ಲಿನ ವ್ಯವಸಾಯ ವೈವಿಧ್ಯೀರಣವನ್ನು ವಿವರಿಸಿರಿ.

ಆಹಾರ ದೊರೆಯುವುದು

ಆಹಾರ ಭದ್ರತೆಯಲ್ಲಿ ನಂತರದ ಮುಖ್ಯವಾದ ಅಂಶ ಆಹಾರ ದೊರೆಯುವುದು. ಆಹಾರ ಧಾನ್ಯಗಳು, ಇತರ ಪದಾರ್ಥಗಳು ಉತ್ಪತ್ತಿ ಮಾಡಿದ ಮಾತ್ರಕ್ಕೆ ಸರಿಹೋಗುವುದಿಲ್ಲ. ಪ್ರತಿಯೊಬ್ಬರೂ ಅವುಗಳನ್ನು ಕೊಂಡು, ಬಳಸುವ ಸ್ಥಿತಿಯಲ್ಲಿ ಇರಬೇಕು. ಕನಿಷ್ಟವಾಗಿ ಅವಶ್ಯಕವಾಗಿ ಆಹಾರ ಪ್ರತಿಯೊಬ್ಬರಿಗೂ ದೊರೆಯುತ್ತದೆಯೇ?

ಎಂಟನೇ ತರಗತಿಯಲ್ಲಿ ಬಡತನ ಕುರಿತು ಓದಿದ್ದು ಜ್ಞಾಪಿಸಿಕೊಳ್ಳಿ. ನಾವು ತಿನ್ನುವ ಆಹಾರ ಶರೀರದಲ್ಲಿ ಜೀರ್ಣವಾಗಿ ಶಕ್ತಿಯನ್ನು ಉತ್ಪತ್ತಿ ಮಾಡುತ್ತದೆ. ಇದನ್ನು ಕ್ಯಾಲರಿಗಳಲ್ಲಿ ಅಳೆಯುತ್ತಾರೆ. ಇದರಿಂದ ನಾವು ಕೆಲಸವನ್ನು ಮಾಡಬಲ್ಲವರಾಗುತ್ತೇವೆ. ಕಡಿಮೆ ಅಥವಾ ಕಡಿಮೆ ಪೋಷಕಾಂಶಗಳು ಇರುವ ಆಹಾರವನ್ನು ತೆಗೆದುಕೊಂಡರೆ ನಮ್ಮ

SCERT TELANGANA

ರೇಖಾಚಿತ್ರ, ಪಟ *10.3* :



ಶರೀರಕ್ಕೆ ಸಿಗುವ ಕ್ಯಾಲರಿಗಳು ಕಡಿಮೆಯಾಗುತ್ತವೆ. ಫಲಿತವಾಗಿ ಕೆಲಸಮಾಡುವುದು ಕಷ್ಟವಾಗಿರುತ್ತದೆ, ಇಲ್ಲವೇ ಆರೋಗ್ಯ ಕ್ಷೀಣಿಸುತ್ತದೆ. ದಿನಕ್ಕೆ ಪಟ್ಟಣ ಪ್ರದೇಶಗಳಲ್ಲಿ 2100 ಕ್ಯಾಲರೀಗಳು, ಗ್ರಾಮೀಣ ಪ್ರದೇಶಗಳಲ್ಲಿ 2400 ಕ್ಯಾಲರೀಗಳ ಶಕ್ತಿ ನೀಡುವ ಆಹಾರವನ್ನು ತೆಗೆದುಕೊಳ್ಳಬೇಕು.

ತೆಗೆದುಕೊಳ್ಳಬೇಕಾದ ಕ್ಯಾಲರೀಗಳಿಗಿಂತ ಗ್ರಾಮೀಣ, ಪಟ್ಟಣ ಪ್ರದೇಶಗಳ ರಾಷ್ಟ್ರೀಯ ಸರಾಸರಿ ಕಡಿಮೆಯಾಗಿದೆ. ಅಷ್ಟೇ ಅಲ್ಲದೆ ಕ್ಯಾಲರೀಗಳ ಬಳಕೆ 1983ರೊಂದಿಗೆ ಹೋಲಿಸಿದರೆ 2004ಕ್ಕೆ ಕಡಿಮೆಯಾಗಿದೆ. ನಮ್ಮ ದೇಶ ಆರ್ಥಿಕ ಪರಿಸ್ಥಿತಿ ವೇಗವಾಗಿ ಬೆಳೆಯುತ್ತಿರುವ ಹಿನ್ನಲೆಯಲ್ಲಿ, ವಸ್ತುಗಳು, ಸೇವೆಗಳ ಉತ್ಪತ್ತಿ ಬಹಳಷ್ಟು ಬೆಳೆದ ಹಿನ್ನಲೆಯಲ್ಲಿ ಹೀಗೆ ನಡೆಯುವುದು ಕಳವಳಕಾರಿಯಾಗಿದೆ. ಅಷ್ಟೇ ಅಲ್ಲದೆ, ಹಂಚಿಕೆಯಲ್ಲಿನ ವ್ಯತ್ಯಾಸಗಳನ್ನು ಸರಾಸರಿ ಸರಿದೂಗಿಸುತ್ತದೆ. ಬಹಳ ಸಂಪನ್ನರು ಸಿಫಾರಸು ಮಾಡಿದ ಕ್ಯಾಲರಿಗಳಿಗಿಂತ ಬಹಳ ಬಳಸುತ್ತಿರುವ ಜನಸಂಖ್ಯೆಯಲ್ಲಿ ಪ್ರತಿಶತ ಅಧಿಕ ಪ್ರಜೆಗಳು ತೆಗೆದುಕೊಳ್ಳುತ್ತಿರುವ ಆಹಾರ ಅವರಿಗೆ ಸರಿಹೊಂದುವಂತಹ ಕ್ಯಾಲರಿಗಳನ್ನು ಪೂರೈಸುತ್ತಿಲ್ಲ. ಭಾರತದೇಶ ಗ್ರಾಮೀಣ ಪ್ರದೇಶದಲ್ಲಿ ಪ್ರತಿಶತ 80 ಜನರು ಕ್ಯಾಲರೀಗಳ ದೃಷ್ಟ್ಯಾ ತಿನ್ನಬೇಕಾದುಕ್ಕಿಂತ ಕಡಿಮೆ ಆಹಾರ ತಿನ್ನುತ್ತಿದ್ದಾರೆ. ಗ್ರಾಮೀಣ ಪ್ರಾಂತಗಳಲ್ಲಿ ಅತ್ಯಂತ ಬಡವರ ಕ್ಯಾಲರೀ ವಿನಿಯೋಗ ಎಲ್ಲರಿಗಿಂತ ಕಡಿಮೆಯಾಗಿದೆ ಎಂದು ರೇಖಾಚಿತ್ರ ನಕ್ಷೆ 11.3 ರಲ್ಲಿ ತಿಳಿಸುತ್ತದೆ. ಇದು ಅವಶ್ಯಕವಾದ 2400 ಕ್ಯಾಲರಿಗಳಿಂತ ಬಹಳ ಕಡಿಮೆಯಾಗಿ ಇದೆ. ಎಲ್ಲರಲ್ಲಿ ಶಾರೀರಿಕ ಶ್ರಮ, ಕಷ್ಟವಾದ ಕೆಲಸಗಳು ಹೆಚ್ಚಾಗಿ ಮಾಡುತ್ತಿರುವವರು ಇವರೇ.

ಕಡಿಮೆ ಕ್ಯಾಲರೀಗಳ ಬಳಕೆಗೆ ಮುಖ್ಯವಾದ ಕಾರಣ ಪ್ರಜೆಗಳ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿ ಇರುವುದು. ಆಹಾರ ಕೊಳ್ಳಲು ಸರಿಯಾದ ಆದಾಯ ಇಲ್ಲ ಪ್ರಜೆಗಳಿಗೆ ಇಲ್ಲದಿರುವುದೇ. ಬಡತನ, ನಿರುದ್ಯೋಗ, ಪ್ರಜಾಸೌಕರ್ಯಗಳಂತಹವುಗಳನ್ನು ಅವುಗಳ ಚರ್ಚೆಯಲ್ಲಿ ನೀವು ಓದಿರುವಹಾಗೆ ಇದಕ್ಕೆ ಅನೇಕ ಕಾರಣಗಳು ಇವೆ. ಇವುಗಳನ್ನು ಮತ್ತಿಒಂದು ಸಾರಿ ಜ್ಞಾಪಿಸಿಕೊಂಡು ಮುಂದಕ್ಕೆ ಸಾಗಿರಿ.

ಪ್ರಜಾ ನಿತ್ಯವಸರ ವಸ್ತುಗಳ ಸರಬರಾಜು ವ್ಯವಸ್ಥೆ

ಭಾರತದೇಶದಲ್ಲಿ ಆಹಾರ ಧಾನ್ಯಗಳು ಕೈಗೆಟುಕುವಂತೆ ಮಾಡಲು ಪ್ರಜೆಗಳಿಗೆ ನ್ಯಾಯಬೆಲೆ ಅಂಗಡಿಗಳು ಎಷ್ಟೋ ಮುಖ್ಯವಾದವು. 2004-05ರಲ್ಲಿ ವಿವಿಧ ರಾಜ್ಯಗಳ ಜನರು ಪ್ರಜಾ ಸರಬರಾಜು ವ್ಯವಸ್ಥೆಯಲ್ಲಿ ನ್ಯಾಯಬೆಲೆ ಅಂಗಡಿಗಳಿಂದ ಕೊಂಡುಕೊಳ್ಳುವ ಆಹಾರ ಧಾನ್ಯಗಳು ಅವರ ಒಟ್ಟು ಆಹಾರ ಧಾನ್ಯ ಬಳಕೆಯಲ್ಲಿ ಪ್ರತಿಶತ ಎಷ್ಟೋ ತಿಳಿದುಕೊಳ್ಳುವುದಕ್ಕ ಸರ್ವೇ ಮಾಡಿದ್ದಾರೆ. ರೇಖಾಚಿತ್ರ ನಕ್ಷೆ 11.4 ನ್ನು ನೋಡಿರಿ. ಭಾರತದೇಶ ರಾಜ್ಯಗಳಲ್ಲಿ ಆಹಾರ ಧಾನ್ಯಗಳ ಕೊಂಡುಕೊಳ್ಳುವು ಪ್ರಜಾ ಸರಬರಾಜು ವ್ಯವಸ್ಥೆ ಯಮೇಲೆ ಆಧಾರಪಟ್ಟದ್ದನ್ನು ಇದು ತಿಳಿಸುತ್ತದೆ.

- ಎಂಟನೇ ತರಗತಿಯಲ್ಲಿನ ಪ್ರಜಾ ಹಂಚಿಕೆ ವ್ಯವಸ್ಥೆಮೇಲೆ ಚರ್ಚೆಯನ್ನು ಗುರ್ತು ನೆನಪು ಮಾಡಿಕೊಳ್ಳಿರಿ. ಪ್ರಜಾ ಹಂಚಿಕೆ ವ್ಯವಸ್ಥೆಗೆ, ಪ್ರಜೆಗಳ ಆಹಾರ ಭದ್ರತೆಗೆ ನಡುವೆ ಇರುವ ಸಂಬಂಧ ಏನು?

ಭಾರತದೇಶ ದಕ್ಷಿಣದ ರಾಜ್ಯಗಳಲ್ಲಿ ಪ್ರಜಾ ಹಂಚಿಕೆ ವ್ಯವಸ್ಥೆ ಚೆನ್ನಾಗಿದೆ ಎಂದು ಅಧ್ಯಯನಗಳು ತಿಳುಸುತ್ತಿವೆ. ಇವು ಪ್ರಜಾ ಹಂಚಿಕೆ ವ್ಯವಸ್ಥೆಯನ್ನು ಎಲ್ಲರಿಗೂ ವರ್ತಿಸುವಂತೆ ಮಾಡಿದ ರಾಜ್ಯಗಳು ಆಗಿರುವುದು ಗಮನಿಸಬೇಕಾದ ವಿಷಯ. ಇವು ಎಲ್ಲರಿಗೂ ಕಡಿಮೆ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ನೀಡಿವೆ. ಇದಕ್ಕೆ ವಿರುದ್ದವಾಗಿ ಇತರ ರಾಜ್ಯಗಳ ಪ್ರಜೆಗಳು ಬಡವರನ್ನು ಗುರ್ತಿಸಿ ಆಹಾರ ಧಾನ್ಯಗಳನ್ನು ಬಡವರಿಗೆ,

SCERT TELANGANA

ಬಡವರಲ್ಲದವರಿಗೆ ಬೇರೆ ಬೇರೆ ಬೆಲೆಗಳಿಗೆ ಮಾರಿವೆ. ಬಡವರಲ್ಲಿಯೂ ಸಹ ಅತ್ಯಂತ ಕಡು ಬಡವರಿಗೆ ಸಹ ಬೇರೆ ಹಕ್ಕುಗಳಿವೆ. ಅವರಿಗೆ ನೀಡುವ ಪ್ರಮಾಣ ಬೇರೆ. ಉದಾಹರಣೆಗೆ ಅಂತ್ಯೋದಯ ಕಾರ್ಡು ಇರುವವರಿಗೆ ಪ್ರತಿ ಕುಟುಂಬಕ್ಕೆ, ತಿಂಗಳಿಗೆ 35 ಕಿಲೋಗ್ರಾಂ ಆಹಾರ ಧಾನ್ಯಗಳು (ಅಕ್ಕಿ, ಗೋಧಿ) ನ್ನು ನೀಡುತ್ತವೆ.

ರೇಖಾಚಿತ್ರ ಪಟ 10.4 : 2009 -10ರಲ್ಲಿ ಅಕ್ಕಿ, ಗೋಧಿ PDS ನಿಂದ ಕೊಂಡ ಪ್ರತಿಶತ



● ಖಾಲಿಸ್ಥಳಗಳನ್ನು ತುಂಬಿರಿ. ಅಖಿಲ ಭಾರತಕ್ಕೆ ಪ್ರಜೆಗಳ ಒಟ್ಟು ಬಳಕೆಯಲ್ಲಿ --------ಶೇಕಡ ಅಕ್ಕಿ, -------ಶೇಕಡ ಗೋಧಿ ನ್ಯಾಯಬೆಲೆ ಅಂಗಡಿಗಳಿಂದ ಕೊಳ್ಳುತ್ತಾರೆ. ಇದರ ಅರ್ಥ ಪ್ರ ಜೆಗಳು ತಮ್ಮ ಆಹಾರ ಧಾನ್ಯಗಳ ಅವಶ್ಯಕತೆಯಲ್ಲಿ ಅಧಿಕ ಭಾಗ ----ನಿಂದ ಕೊಳ್ಳಬೇಕು. ಆದರೆ ------------ರಾಜ್ಯಗಳಲ್ಲಿ ಪರಿಸ್ಥಿತಿ ಚೆನ್ನಾಗಿದೆ. ---------, -------- , -------- ರಾಜ್ಯಗಳಲ್ಲಿ ಪ್ರಜಾ ಹಂಚಿಕೆ ವ್ಯವಸ್ಥೆ ಪ್ರಜೆ ಗಳ ಆಹಾರ ಧಾನ್ಯಗಳ ಅವಸರಗಳಿಗೆ ನಾಮಮಾತ್ರವಾಗಿ ತೀರಿಸುತ್ತಿದೆ.

ಪ್ರಜಾ ಹಂಚಿಕೆ ವ್ಯವಸ್ಥೆ, ಆಹಾರ ಬಫರ್ ಸಂಗ್ರಹಗಳು

ಭಾರತ ಸರ್ಕಾರ ಭಾರತ ಆಹಾರ ಸಂಸ್ಥೆಯ (Food Corporation of India) ಮೂಲಕ ಸಂಗ್ರಹಿಸಿದ ಆಹಾರ ಧಾನ್ಯಗಳನ್ನು ಬಫರ್ ಶೇಖರಣೆ ಎನ್ನುವರು. ಹೆಚ್ಚಾಗಿ ಉತ್ಪತ್ತಿ ಇರುವ ರಾಜ್ಯಗಳಲ್ಲಿ ರೈತರಿಂದ ಭತ್ತ, ಗೋಧಿಗಳನ್ನು FCI ಕೊಂಡುಕೊಳ್ಳುತ್ತದೆ. ಇವುಗಳಿಗೆ ಮೊದಲೇ ಪ್ರಕಟಿಸಿದ ಬೆಲೆಗಳ ಪ್ರಕಾರ ರೈತರಿಗೆ ನೀಡುತ್ತಾರೆ. ಈ ಬೆಲೆಯನ್ನು ಕನಿಷ್ಟ ಬೆಂಬಲ ಬೆಲೆ (Minimum Support Price) ಎನ್ನುತ್ತಾರೆ. ಸರ್ಕಾರಿ ಸಂಸ್ಥೆ ಪ್ರತಿ ವರ್ಷಕ್ಕೂ MSP ಯನ್ನು ಪ್ರಕಟಿಸುತ್ತ ದೆ.

ಕೇಂದ್ರ, ರಾಜ್ಯ ಸರ್ಕಾರಗಳು ಮೂರನೇ ಒಂದು ಭಾಗ ಆಹಾರ ಧಾನ್ಯಗಳನ್ನು ರೈತರಿಂದ ಶೇಖರಿಸುತ್ತವೆ. ವಿವಿಧ ಯೋಜನೆಗಳ ಮೂಲಕ ಈ ಆಹಾರ ಧಾನ್ಯಗಳನ್ನು ಪ್ರಜೆಗಳಿಗೆ ಹಂಚುತ್ತದೆ. ಇತ್ತೀಚಿನ ಕಾಲದಲ್ಲಿಪ್ರಜಾ ಹಂಚಿಕೆ ವ್ಯವಸ್ಥೆಗೆ ಅವಶ್ಯಕ್ಕಿಂತ ಹೆಚ್ಚು ಧಾನ್ಯಗಳನ್ನು ಸರ್ಕಾರಿ ಸಂಸ್ಥೆಗಳು ಕೊಂಡುಕೊಳ್ಳುತ್ತಿವೆ. ಸರ್ಕಾರಿ ಸಂಗ್ರಹಗಳು ಪ್ರತಿ ವರ್ಷ ಬೆಳೆಯುತ್ತಿದ್ದರೆ ಆಹಾರ ಧಾನ್ಯಗಳ ಲಭ್ಯತೆ ಕಡಿಮೆಯಾಗುತ್ತದೆ. (ಆಹಾರ ಲಭ್ಯತೆ ಪಟ್ಟಿಯಲ್ಲಿ 2011 ವಿವರಗಳನ್ನು ನೋಡಿರಿ). ಅವಶ್ಯಕವಾದ ಪ್ರಜೆಗಳಿಗೆ ಈ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುತ್ತಿಲ್ಲ ಎಂಬ ವಿಮರ್ಶೆ ಸರ್ಕಾರದ ಮೇಲಿದೆ. ಕೆಲವು ಬಾರಿ, ಸರ್ಕಾರಗಳು ಈ ಆಹಾರ ಧಾನ್ಯಗಳನ್ನು ವಿದೇಶಗಳಿಗೆ ಸಹ ರಫ್ತು ಸಹ ಮಾಡಿವೆ.

- ದೇಶದಲ್ಲಿ ಪ್ರತಿಶತ ಅಧಿಕ ಜನರಿಗೆ ಆಹಾರ ಧಾನ್ಯಗಳು ದೊರಕದೇ ಇರುವ ಹಿನ್ನಲೆಯಲ್ಲಿ ಸ್ವಲ್ಪ ಆದಾಯಕ್ಕೋಸ್ಕರ ಆಹಾರ ಧಾನ್ಯಗಳನ್ನು ರಫ್ತು ಮಾಡುವುದು ಸರಿಯಾದುದೇನಾ?

2013ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಎಂಬ ಹೊಸ ಕಾಯಿದೆಯನ್ನು ಮಾಡಿದೆ. ಇದು ಪ್ರಜೆಗಳಿಗೆ ಇರುವ ಆಹಾರವನ್ನು ಪಡೆಯುವ ಹಕ್ಕಿಗೆ ಕಾನೂನು ಬದ್ದತೆ ಕಲ್ಪಿಸುತ್ತದೆ. ಭಾರತದೇಶದಲ್ಲಿನ ಮೂರನೇ ಎರಡುಭಾಗದ ಜನರಿಗೆ ಇದು ವರ್ತಿಸುತ್ತದೆ. ಈ ಕಾನೂನು ಪ್ರಕಾರ ಕಡಿಮೆ ಆದಾಯವಿರುವ ಕುಟುಂಬಗಳಲ್ಲಿರುವ ವ್ಯಕ್ತಿಗೆ ಸಬ್ಸಿಡೀ ದರದಲ್ಲಿ 5 ಕಿಲೋಗಳ ಆಹಾರ ಧಾನ್ಯಗಳು ಲಭ್ಯವಾಗುತ್ತವೆ. ಬಡವರಲ್ಲಿ

SCERT TELANGANA

ಅತ್ಯಂತ ಬಡವರಿಗೆ 35 ಕಿಲೋಗಳನ್ನು ಕೊಡಬೇಕು. ಕೆಲವು ವರ್ಷಗಳವರೆಗೆ ಕೇಂದ್ರ ಸರ್ಕಾರ ಅಕ್ಕಿ, ಗೋಧಿ, ತೃಣ ಧಾನ್ಯಗಳನ್ನು ಕ್ರಮವಾಗಿ 3,2,1 ರೂಪಾಯಿಗಳಿಗೆ ಕೊಡುತ್ತದೆ. ಈ ಕಾಯಿದೆ ಪ್ರಕಾರ ಅವಶ್ಯಕಾವಾದರೆ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಧಿಕವಾಗಿ 75 ಪ್ರತಿಶತಕ್ಕೆ, ಪಟ್ಟಣ ಜನಸಂಖ್ಯೆಯಲ್ಲಿ 50 ಪ್ರತಿಶತಕ್ಕೆ ಪ್ರಜಾ ಹಂಚಿಕೆ ವ್ಯವಸ್ಥೆಯಿಂದ ಆಹಾರ ಧಾನ್ಯಗಳನ್ನು ಕೊಂಡು ಕೊಳ್ಳುವ ಹಕ್ಕು ಇದೆ. ಸರ್ಕಾರ ಆಹಾರ ಧಾನ್ಯಗಳನ್ನು ನೀಡುವ ಪರಿಸ್ಥಿತಿಯಲ್ಲಿ ಇಲ್ಲದಿದ್ದಾಗ ಜನರು ಅವುಗಳನ್ನು ಕೊಳ್ಳುವುದಕ್ಕೆ ಹಣ ಕೊಡಬೇಕು. ಈ ಕಾಯಿದೆ ಪ್ರಕಾರ ಗರ್ಭಿಣಿ ಸ್ತ್ರೀಯರಿಗೆ, ಹಾಲು ಕೊಡುವ ತಾಯಂದಿಯರಿಗೆ , ಅಂಗನವಾಡಿಗೆ ಬರುವ 1-6 ವರ್ಷಗಳ ಮಕ್ಕಳಿಗೆ, ಶಾಲೆಗೆ ಬರುವ 6-14 ವರ್ಷದ ಮಕ್ಕಳಿಗೆ ಮಧ್ಯಾಹ್ನ ಭೋಜನ ಇಡಬೇಕು.

ಭಾರತ ಪಾರ್ಲಿಮೆಂಟ್ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಂತಹ ಕಾಯಿದೆಗಳನ್ನು, ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳಂತಹ ಯೋಜನೆಗಳನ್ನು ಜಾರಿಗೊಳಿಸುವಾಗ ಇತ್ತೀಚಿನ ಕಾಲದಲ್ಲಿ ಆಹಾರ ಭದ್ರತೆ ಜಾರಿ ಆಗುವ ಹಾಗೆ ನೋಡುವುದರಲ್ಲಿ ಭಾರತ ನ್ಯಾಯ ವ್ಯವಸ್ಥೆ ಸಹ ಚುರುಕಾದ ಪಾತ್ರವನ್ನು ಪೋಷಿಸುತ್ತಿದೆ. ಸ್ವಚ್ಛಂದ ಸಂಸ್ಥೆಗಳು ಹಾಕಿದ ದಾವೆಗಳಲ್ಲಿ ತೀರ್ಪನ್ನು ಕೊಡುತ್ತಾ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಮಧ್ಯಾಹ್ನ ಭೋಜನವನ್ನು ನೀಡಬೇಕೆಂದು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಆದೇಶಗಳನ್ನು ಜಾರೀ ಮಾಡಿತು. ಈಯೋಜನೆ ತಮಿಳುನಾಡು ಗಳಂತಹ ರಾಜ್ಯಗಳಲ್ಲಿ ಚಿಕ್ಕ ಮಟ್ಟದಲ್ಲಿ ಜಾರಿ ಗೊಳ್ಳುತ್ತಾ ಇತ್ತು. ಈಗ ಈ ಪಥಕ ಎಲ್ಲಾ ರಾಜ್ಯಗಳಲ್ಲಿ ಜಾರಿಗೊಳ್ಳುತ್ತಿದೆ. ಪಾಠಶಾಲೆಗಳಲ್ಲಿ ಓದದುತ್ತಿರುವ 14 ಕೋಟಿಮಂದಿ ಮಕ್ಕಳು ಪ್ರಸ್ತುತ ಮಧ್ಯಾಹ್ನ ಭೋಜನ ತಿನ್ನುತ್ತಿದ್ದಾರೆ. ರಾಜ್ಯ ಸರ್ಕಾರಗಳು ಈ ಯೋಜನೆಯನ್ನು ಜಾರೀ ಗೊಳಿಸುವುದಕ್ಕ ನಿರಾಕರಿಸಿದಾಗ ನ್ಯಾಯ ಸ್ಥಾನ ಪರ್ಯವೇಕ್ಷಣೆಯ ವಿಧಾನವನ್ನು ಸಹ ರೂಪಿಸಿದೆ. ಹಾಗೆಯೇ ಸ್ಥಳೀಯವಾಗಿ ಬೆಳೆದ ಆಹಾರ ಧಾನ್ಯಗಳನ್ನು ಉಪಯೋಗಿಸಬೇಕೆಂದು, ಬಿಸಿಯಾಗಿ ಅಡುಗೆ ಮಾಡಿ ನೀಡಬೇಕೆಂದು (ಅಲ್ಲಿಯ ವರೆಗೂ ಅನೇಕ ಸರ್ಕಾರಗಳು ಆಹಾರ ಧಾನ್ಯಗಳನ್ನು ಅಥವಾ ತಿಂಡಿಗಳನ್ನು ಕೊಡುತ್ತಿದ್ದವು), ಅದು ಶುಭ್ರವಾಗಿ, ಪೋಷಕಾಹಾರವಾಗಿ(ಸಿಫಾರಸು ಮಾಡಿದ ಕ್ಯಾಲರಿಗಳು ಇರುವಂತೆ) ಇರಬೇಕೆಂದು, ವಾರದಲ್ಲಿನ ಪ್ರತಿದಿನ ಬೇರೆ ಬೇರ ಪದಾರ್ಥಗಳನ್ನು ಇಡಬೇಕೆಂದು ಮಧ್ಯಾಹ್ನ ಭೋಜನ ಯೋಜನೆಯನ್ನು ಚೆನ್ನಾಗಿ ಜಾರಿಗೊಳಿಸುವುದಕ್ಕೆ ಅನೇಕ ಸಿಫಾರಸುಗಳನ್ನು ನ್ಯಾಯಸ್ಥಾನ ಸೂಚಿಸಿದೆ. ಅಡುಗೆ ಮಾಡುವುದರಲ್ಲಿ ದಲಿತರಿಗೆ, ವಿಧವೆಯರಿಗೆ, ಯಾವುದೇ ಆಧಾರ ಇಲ್ಲದ ಮಹಿಳೆಯರಿಗೆ ಪ್ರಾಧಾನ್ಯತೆ ಕೊಡಬೇಕೆಂದು ನ್ಯಾಯಸ್ಥಾನ ಆದೇಶಗಳನ್ನು ಜಾರಿಗೊಳಿಸಿದೆ. ಪ್ರಪಂಚಕ್ಕೆಲ್ಲಾ ಇದೇ ಅತ್ಯಂತ ದೊಡ್ಡ ಪಾಠಶಾಲೆ ಭೋಜನ ಯೋಜನೆ. ಈ ಪಥಕಕ್ಕೆ ಹಣವನ್ನು ಹೊಂದಿಸಿಕೊಳ್ಳಲು ತೆರಿಗೆಗಳನ್ನು ವಿಧಿಸಬೇಕೆಂದು ಸಹ ಭಾರತ ಸರ್ಕಾರವನ್ನು ನ್ಯಾಯಸ್ಥಾನ ಆದೇಶಿಸಿದೆ. ಈಗ ಅಂಗನ್‌ವಾಡಿಗಳಲ್ಲಿ ಮಕ್ಕಳಿಗೆ ಸಹ ಬಿಸಿ ಬಿಸಿಯಾಗಿ ಬೇಸಿದ ಆಹಾರವನ್ನು ನೀಡುತ್ತಿದ್ದಾರೆ.

ಪೋಷಕ ಆಹಾರ ಮಟ್ಟ

ಕೊನೆಯದಾಗಿ ದೊಡ್ಡವರು, ಮಕ್ಕಳು ತೆಗೆದುಕೊಳ್ಳುತ್ತಿರುವ ಆಹಾರ ಸರಿಹೋಗುತ್ತಿದೆಯೋ ಇಲ್ಲವೋ ತಿಳಿದುಕೊಳ್ಳುವುದಕ್ಕೆ ಅವರ ಪೋಷಕಾಹಾರ ಮಟ್ಟವನ್ನು ತಿಳಿದುಕೊಳ್ಳೋಣ. ಮೇಲೆ ಚರ್ಚಿಸಿದ ಯೋಜನೆಗಳು ಸಮರ್ಥವಾಗಿ ಕೆಲಸ ಮಾಡುವುತ್ತಿವೆಯೋ, ಇಲ್ಲವೋ, ಸಮಸ್ಯಾತ್ಮಕ ರಂಗಗಳು ಯಾವುವೋ ಸಹ ಇದು ತಿಳಿಯಪಡಿಸುತ್ತದೆ.

ಶರೀರ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದಕ್ಕೆ - ಶಕ್ತಿಗೆ, ಬೆಳವಣಿಗೆಗೆ, ಆರೋಗ್ಯವಾಗಿ ಇರುವುದಕ್ಕೆ, ರೋಗಗಳೊಂದಿಗೆ ಹೋರಾಡುವುದಕ್ಕೆ - ಆಹಾರ ಬೇಕು. ನಾವು ತಿನ್ನುವ ಆಹಾರವನ್ನು ಈ ಕೆಳಗಿನವಿಧವಾಗಿ ವರ್ಗೀಕರಿಸುತ್ತಾರೆ.

ಪಿಷ್ಟ ಪದಾರ್ಥಗಳು : ಗೋಧಿ, ಅಕ್ಕಿ, ರಾಗಿ, ಜೋಳ, ಎಣ್ಣೆ, ಸಕ್ಕರೆ, ಕೊಬ್ಬಿನ ಪದಾರ್ಥಗಳಂತಹವುಗಳ ಮೂಲಕ ಇವು ಶಕ್ತಿಯನ್ನು ಕೊಡುತ್ತವೆ.

ಸಸಾರಜನಕ(ಪ್ರೋಟೀನುಗಳು): ಕಡ್ಲೆ, ಬೇಳೆಕಾಳುಗಳು, ಮಾಂಸ, ಮೊಟ್ಟೆ, ಅಕ್ಕಿ, ಗೋಧಿಗಳಂತಹವುಗಳು ಶಾರೀರಿಕ ಬೆಳವಣಿಗೆಗೆ, ಅಂಗಾಂಶಗಳ ನಿರ್ಮಾಣಕ್ಕೆ ಸಹಾಯ ಪಡುತ್ತವೆ.

ವಿಟಮಿನ್‌ಗಳು : ಹಣ್ಣುಗಳು, ಸೊಪ್ಪುಗಳು(ಪಲ್ಯೆಗಳು), ಮೊಳಕೆಕಾಳುಗಳು, ಕಚ್ಚಾ ಅಕ್ಕಿ, ಗಳಂತಹವುಗಳ ಮೂಲಕ ಶರೀರಕ್ಕೆ ರಕ್ಷಣೆ ಕೊಟ್ಟು ಅನೇಕ ಕೀಲಕ ವ್ಯವಸ್ಥೆಗಳು ಕೆಲಸ ಮಾಡುವುದಕ್ಕೆ ಸಹಾಯಪಡುತ್ತವೆ.

SCERT TELANGANA

ಖನಿಜ ಲವಣಗಳು : ರಕ್ತ ಏರ್ಪಡುವುದಕ್ಕೆ ಕಬ್ಬಿಣದ ಹಾಗೆ ಅನೇಕ ಮುಖ್ಯವಾದ ಕೆಲಸಗಳಿಗೆ ಇವು ಕಡಿಮೆ ಮೊತ್ತದಲ್ಲಿ ಬೇಕು. ಇವು ಸೊಪ್ಪುಗಳು, ರಾಗಿಗಳಂತಹವುಗಳ ಮೂಲಕ ದೊರೆಯುತ್ತವೆ.

ಇದಕ್ಕೂ ಮೊದಲು ಪಾಠಗಳಲ್ಲಿರುವಂತೆ ಜನರು ಒಂದು ದಿನದಲ್ಲಿ ಏನು ತಿನ್ನುತ್ತಾರೋ ಕೇಳಿ ಅವರು ತಿನ್ನುತ್ತಿರುವ ಆಹಾರ ಕುರಿತು ಒಂದು ಸರ್ವೆ ಮೂಲಕ ತಿಳಿದುಕೊಳ್ಳಬಹುದು. ಇದರ ಮೂಲಕ ಮೇಲೆ ತಿಳಿಸಿದ ಎಲ್ಲಾ ಆಹಾರ ಪದಾರ್ಥಗಳನ್ನು ಜನರು ತಿನ್ನುತ್ತಿದ್ದಾರೋ ಇಲ್ಲವೋ ತಿಳಿದುಕೊಳ್ಳಬಹುದು. ಆದರೆ ಕುಟುಂಬದಲ್ಲಿನ ಒಬ್ಬೊಬ್ಬರು ಎಷ್ಟು ಪ್ರಮಾಣದಲ್ಲಿ ಪಿಷ್ಟ ಪದಾರ್ಥಗಳು, ವಿಟಮಿನ್ನುಗಳು, ಪ್ರೊಟೀನ್‌ಗಳನ್ನು , ಖನಿಜ ಲವಣಗಳನ್ನು ತೆಗೆದುಕೊಳ್ಳುತ್ತಿದ್ದಾರೋ ಸ್ಪಷ್ಟವಾಗಿ ತಿಳಿದುಕೊಳ್ಳುವುದು ಕಷ್ಟ. ಪ್ರಜೆಗಳು ಪೋಷಕಾಹಾರ ತೆಗೆದುಕೊಳ್ಳುತ್ತಿದ್ದಾರೋ ಇಲ್ಲವೋ ತಿಳಿದುಕೊಳ್ಳುವುದಕ್ಕೆ ಅವರ ಎತ್ತರ, ತೂಕವನ್ನು ಪ್ರಮಾಣವಾಗಿ ಉಪಯೋಗಿಸುವ ವಿಧಾನವನ್ನು ಪೋಷಕಾಹಾರ ಶಾಸ್ತ್ರಜ್ಞರು ರೂಪಿಸಿದ್ದಾರೆ. ಬಹಳ ಮಂದಿ ವಿವರಗಳನ್ನು ತೆಗೆದುಕೊಂಡು, ಗಣಾಂಕ ಶಾಸ್ತ್ರ ಪರಿಜ್ಞಾನದೊಂದಿಗೆ ಆಧಾರಪಡಬೇಕಾದ ಪ್ರಾಮಾಣಿಕ ಪರಿಧಿಗಳನ್ನು ಪೋಷಕಾಹಾರ ಶಾಸ್ತ್ರಜ್ಞರು ತಯಾರುಮಾಡಿದ್ದಾರೆ. ಇದರೊಂದಿಗೆ ವ್ಯಕ್ತಿಗಳನ್ನು ಹೋಲಿಸುವುದು ಸಾಧ್ಯವಾಗುತ್ತದೆ. ಇದರ ಮೂಲಕ ಪ್ರಜೆಗಳ ಪೋಷಕಾಹಾರ ಮಟ್ಟ ಕುರಿತು ಸ್ಪಷ್ಟವಾಗಿ ಅಂದಾಜು ಮಾಡಬಹುದು.

ಹೈದರಾಬಾದಿನಲ್ಲಿ ರಾಷ್ಟ್ರೀಯ ಪೋಷಕಾಹಾರ ಸಂಸ್ಥೆ ದೇಶವ್ಯಾಪ್ತಿಯಾಗಿ ಬಹಳ ರಾಜ್ಯಗಳಲ್ಲಿ ಮಾಡಿದ ಪೋಷಕಾಹಾರ ಸರ್ವೆ ಭಾರತದೇಶದಲ್ಲಿ ಪೋಷಕಾಹಾರ ಮಟ್ಟ ಕಳವಳವಾಗಿ ಇದೆಯೆಂಬುದನ್ನು ತಿಳಿಸುತ್ತದೆ. ಕಳೆದ ತರಗತಿಗಳಲ್ಲಿ ಬಡತನಕ್ಕೆ, ಪೋಷಕಾಹಾರ ಲೋಪಕ್ಕೆ ಸಂಬಂಧಿಸಿದ ವಾಸ್ತವ ಪರಿಸ್ಥಿತಿಯನ್ನು ತಿಳಿಯಪಡಿಸುವ ಉದಾಹರಣೆಗಳನ್ನು ನೋಡಿದ್ದೇವೆ. ವ್ಯಕ್ತಿಗಳ ಕುರಿತು ತಿಳಿಯಲ್ಪಡಿಸದ ಈ ಗಣಾಂಕಗಳನ್ನು ಪರಿಶೀಲಿಸುವುದು ಕೂಡಾ ಎಷ್ಟೋ ಮುಖ್ಯ. ಇಂತಹ ಪರಿಸ್ಥಿತಿಗಳುಬಹಳ ವಿರಳವಾಗಿ ಇರುತ್ತಿವೆಯೇ, ಅಥವಾ ಸಾಧಾರಣ ಧೋರಣಿಯಾಗಿ ಇದೆಯೇ ಎಂದು ಅರ್ಥಮಾಡಿಕೊಳ್ಳುವುದಕ್ಕೆ ಇದು ಸಹಾಯವಾಗುತ್ತದೆ. ಸ್ಪಷ್ಟವಾಗಿ, ತಿಳಿಯದಿರುವ, ಅಡಗಿರುವ ಅಂಶಗಳನ್ನು ಕೂಡಾ ನೋಡುವುದಕ್ಕೆ ಇದು ಸಹಾಯವಾಗುತ್ತದೆ.

ಮೇಲೆ ತಿಳಿಸಿದ ಹಾಗೆ ಮಕ್ಕಳ ಪೋಷಕಾರ ಮಟ್ಟವನ್ನು ಪರಿಶೀಲಿಸುವುದಕ್ಕೆ ಎತ್ತರ, ತೂಕ ಅಳತೆಗಳನ್ನು ಉಪಯೋಗಿಸುತ್ತಾರೆ. ಅಂಗನ್‌ವಾಡಿ ಕೇಂದ್ರಕ್ಕೆ ಹೋಗಿ ಇದನ್ನು ಹೇಗೆ ಮಾಡುತ್ತಾರೋ ನೋಡಿರಿ. ಮಕ್ಕಳು ಬಹಳ ವೇಗವಾಗಿ ಬೆಳೆಯುತ್ತಾರೆ ಆದ್ದರಿಂದ ದೊಡ್ಡವರಹಾಗೆ ಅಲ್ಲದೇ ವಯಸ್ಸಿನೊಂದಿಗೆ ಅವರ ತೂಕ ಸಹ ಬೆಳೆಯುತ್ತಿರುತ್ತದೆ. ವಯಸ್ಸು , ತೂಕ ಖಚಿತವಾಗಿ ತಿಳಿದುಕೊಂಡರೆ ಈ ಸೂಚಿಕೆ ಬಹಳ ಚೆನ್ನಾಗಿ ಉಪಯೋಗ ಪಡುತ್ತದೆ. ಹೀಗೆ ತೆಗೆದುಕೊಂಡ ಅಳತೆಗಳ ಪೋಷಕಾಹಾರ ಶಾಸ್ತ್ರಜ್ಞರು ತಯಾರಿಸಿದ ನಕ್ಷೆಯಲ್ಲಿ ಬರೆದರೆ ಆ ಮಕ್ಕಳು ಸಾಧಾರಣ ಸ್ಥಿತಿಯಲ್ಲಿ ಇದ್ದಾರೆಯೇ ಅಥವಾ ಅದಕ್ಕಿಂತ ಕೆಳಗಿದ್ದಾರೆಯೇ ಎಂಬುದನ್ನು ತಿಳಿಸುತ್ತದೆ.

ಉದಾಹರಣೆಗೆ ಒಂದು ಮಗುವಿನ ತೂಕ ಅತನ ವಯಸ್ಸಿನ ಎದುರಿಗೆ ಈ ನಕ್ಷೆಯಲ್ಲಿ ಗುರ್ತಿಸಿದರೆ ಅವನು ಕಡಿಮೆ ತೂಕವಿರುವನೋ, ಇಲ್ಲವೋ ತಿಳಿಯುತ್ತದೆ. ಇದು ಒಂದು ಮಗುವಿನ ವಿವರ.

ಚಿತ್ರ 10.2 ಆಂಧ್ರಪ್ರದೇಶದಲ್ಲಿನ ಮಕ್ಕಳ ಪೋಷಣೆಯ ಸ್ಥಾಯಿಯನ್ನು ತಿಳಿದುಕೊಳ್ಳುವುದಕ್ಕೆ ಅಂಗನವಾಡಿ ಕೇಂದ್ರಗಳಲ್ಲಿ ಉಪಯೋಗಿಸುವ ತೂಕದ ಚಾರ್ಟು



SCERT TELANGANA

ರಾಷ್ಟ್ರೀಯ ಪೋಷಕಾಹಾರ ಸಂಸ್ಥೆ ಮಾಡಿದ ಸರ್ವೆ ಏನು ತಿಳಿಯಪಡಿಸುತ್ತದೆ? ದೇಶದಲ್ಲಿನ ಕೆಲವು ರಾಜ್ಯಗಳಲ್ಲಿ ಸರ್ವೆ ಮಾಡಿದ 1-5 ವರ್ಷಗಳ ವಯಸ್ಸಿರುವ 7000ಮಕ್ಕಳಲ್ಲಿ 45% ಮಕ್ಕಳು ಕಡಿಮೆ ತೂಕವಿದ್ದಾರೆ. ಅಂದರೆ ಸಾಧಾರಣ ಪ್ರಾಮಾಣಿಕಗಳ ಪ್ರಕಾರ ಇರಬೇಕಾದುದಕ್ಕಿಂತ ಕಡಿಮೆ ತೂಕ ಇದ್ದಾರೆ. ಈ ಮಕ್ಕಳು ವಾಸ್ತವಕ್ಕೆ ಸಾಕಾಗುವಷ್ಟು ಆಹಾರ ಸಿಗದೇ ಹಸಿವಿನಿಂದ ಇರುತ್ತಿದ್ದಾರೆ. ಅವರು ಬಹಳ ಕಡಿಮೆ ತೂಕವಿದ್ದರೆ ನೋಡಿದ ಕೂಡಲೇ ಅವರನ್ನು ಗುರ್ತಿಸುವುದು ಕಷ್ಟ. ನಮಗಿರುವ ಲೋಕಜ್ಞಾನದಲ್ಲಿ ದೇಶದಲ್ಲಿನ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಕಡಿಮೆ ತೂಕ ಇದ್ದಾರೆಂದು ಗುರ್ತಿಸುವುದು ಕಷ್ಟ. ಇಂತಹ ಮಕ್ಕಳನ್ನು ನೋಡುವುದು ಅಭ್ಯಾಸವಾಗಿ ಇದು ''ಸಹಜ''ವೆಂದು ಕೊಳ್ಳುತ್ತೇವೆ. ಈ ಸರ್ವೆ ನಮ್ಮ ಸಾಧಾರಣ ಅಭಿಪ್ರಾಯಗಳನ್ನು ಮೀರಿ ದೇಶದಲ್ಲಿನ ಸರಿಸುಮಾರು ಅರ್ಧಮಂದಿ ಮಕ್ಕಳ ಬೆಳವಣಿಗೆ, ಸಾಮರ್ಥ್ಯಗಳನ್ನು ತೀವ್ರವಾಗಿ ಪ್ರಭಾವಿತ ಗೊಳಿಸುತ್ತದೆಂದು ಗುರ್ತಿಸುವಂತೆ ಮಾಡುತ್ತದೆ.

ಈ ವರದಿ ಹೀಗೆ ಹೇಳುತ್ತದೆ :

''ಒಟ್ಟು 45% ಮಕ್ಕಳು ಕಡಿಮೆ ತೂಕ ಇದ್ದಾರೆ, 1-3 ವರ್ಷದ ಮಕ್ಕಳೊಂದಿಗೆ ಹೋಲಿಸಿದರೆ, 3-5 ವರ್ಷಗಳ ಮಕ್ಕಳಲ್ಲಿ ಇದು ಬಹಳ ಹೆಚ್ಚಾಗಿ ಇದೆ. ಗುಜರಾತ್(58%), ಮಧ್ಯಪ್ರದೇಶ್ (56.9%), ಉತ್ತರಪ್ರದೇಶ್(53.2%) ಗಳಂತಹ ರಾಜ್ಯಗಳಲ್ಲಿ ಇದು ಪ್ರತಿಶತ 50 ಕ್ಕೆ ಮೀರಿ ಇದೆ. ಕಡಿಮೆ ತೂಕ ಇರುವುದು ಎಲ್ಲದಕ್ಕಿಂತ ಕಡಿಮೆಯಾಗಿ ಕೇರಳ ರಾಜ್ಯ (24%)ರಲ್ಲಿ ಇದೆ ...''

''ತೂಕವು ಬಹಳ ಕಡಿಮೆ ಇರುವ ತೀವ್ರ ಪರಿಸ್ಥಿತಿ ಒಟ್ಟು 16% ಮಕ್ಕಳಲ್ಲಿ ಇದೆ ...''

- ಸಮರ್ಥವಂತವಾಗಿ ಕೆಲಸಮಾಡುವ ಅಂಗನವಾಡಿ ಕೇಂದ್ರ ಈ ಪರಿಸ್ಥಿತಿ ಯನ್ನು ಹೇಗೆ ಸರಿಪಡಿಸುತ್ತದೆ? ಚರ್ಚಿಸಿರಿ.

ಶಾಲೆಯಲ್ಲಿ ಸೇರುವ ವಯಸ್ಸು ಬರದ ಮಕ್ಕಳಿಗೆ ಪೋಷಕಾಹಾರ ಶಾಸ್ತ್ರಜ್ಞರು ಮೂರು ಚಾರ್ಟುಗಳನ್ನು ಉಪಯೋಗಿಸುತ್ತಾರೆ. ಈ ಮೂರು ಬೇರೆ ಬೇರೆ ಸೂಚಿಕೆಗಳು ನಮ್ಮ ಮಕ್ಕಳ ಪೋಷಕಾಹಾರ ಮಟ್ಟಕ್ಕೆ ಸಂಬಂಧಿಸಿದ ಪೂರ್ತಿ ವಿವರಗಳನ್ನು ನೀಡುತ್ತಿವೆ. ಅವುಗಳನ್ನು ಕೆಳಗೆ ಕೊಟ್ಟಿದ್ದೇವೆ.

ಸೂಚಿಕೆ	**ಸಾಧಾರಣ ಮಟ್ಟಕ್ಕಿಂತ ಕಡಿಮೆ ಇರುವ ಮಕ್ಕಳಲ್ಲಿ ಏನಾಗುತ್ತದೆ**	**ನಿಮ್ಮ ಮಾತುಗಳಲ್ಲಿ ವಿವರಿಸಿರಿ.**	**ದೇಶದಲ್ಲಿ ಎಷ್ಟು ಮಂದಿ ಮಕ್ಕಳು ಈ ಸಾಲಿನಲ್ಲಿ ಬರುತ್ತಾರೆ**
ವಯಸ್ಸಿಗೆ ಎದುರಾಗಿ ತೂಕವನ್ನು ತೋರಿಸುವುದು	ಕಡಿಮೆ ತೂಕ		45%
ವಯಸ್ಸಿಗೆ ಎದುರಾಗಿ ಎತ್ತರವನ್ನು ತೋರಿಸುವುದು	ಬೆಳವಣಿಗೆಯು ಕುಗ್ಗಿ ಹೋಗಿದೆ	ದೀರ್ಘಕಾಲವಾಗಿ ಮಕ್ಕಳು ಪೋಷಕಾಹಾರ ಲೋಪಕ್ಕೆ ಗುರಿಯಾದರೆ ಅವರ ಮೂಳೆಗಳ ಮೇಲೆ ಪ್ರಭಾವಿತವಾಗುತ್ತದೆ. ಇಂತಹ ಮಕ್ಕಳು ಅವರ ವಯಸ್ಸಿಗೆ ತಕ್ಕ ಎತ್ತರ ಇರುವುದಿಲ್ಲ. ಆ ನಂತರ ಇದನ್ನು ಸರಿಮಾಡುವುದು ಆಗುವುದಿಲ್ಲ.	41%
ಎತ್ತರಕ್ಕೆ ಎದುರಾಗಿ ತೂಕವನ್ನು ತೋರಿಸುವುದು	ಬಡವಾಗಿರುವುದು	ಇತ್ತೀಚಿಗೆ ತೂಕ ಕಳೆದುಕೊಳ್ಳುವುದನ್ನು ಇದು ಸೂಚಿಸುತ್ತದೆ. ತಕ್ಷಣವೇ ಸಾಕಷ್ಟು ಆಹಾರ ಕೊಟ್ಟರೆ ಈ ಸ್ಥಿತಿಯಿಂದ ಚೇತರಿಸಿಕೊಳ್ಳುವರು.	21%

- ಈ ಗಣಾಂಕಗಳ ಕುರಿತು ಎಂತಹ ನಿರ್ಧಾರಕ್ಕೆ ಬರುತ್ತೀರಿ? ಒಂದು ಪ್ಯಾರಾ ಬರೆಯಿರಿ.

SCERT TELANGANA

ವಯೋಜನರಾದ ಸ್ತ್ರೀ ಪುರುಷರಲ್ಲಿ ಪೋಷಕಾಹಾರ ಮಟ್ಟವನ್ನು ಶರೀರದ ತೂಕದ ಸೂಚಿಕೆ (BMI =Body mass Index)ನಿಂದ ಅಳೆಯುತ್ತಾರೆ. ಇದನ್ನು ಕುರಿತು ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡಿದ್ದೀರಿ.

BMI = (ತೂಕ ಕಿಲೋಗ್ರಾಂಗಳಲ್ಲಿ / ಮೀಟರ್‌ಗಳಲ್ಲಿ ಎತ್ತರದ ವರ್ಗ).

ಈ ಸೂಚಿಕೆಯನ್ನು ಒಂದು ಪರಿಧಿಯೊಂದಿಗೆ ಹೋಲಿಸಿ ಒಬ್ಬ ವ್ಯಕ್ತಿಯ ತೂಕ ಕಡಿಮೆ ಇದೆಯೋ, ಸಾಧಾರಣವಾಗಿದೆಯೊ, ಹೆಚ್ಚು ತೂಕವಿದೆಯೋ ತಿಳಿದುಕೊಳ್ಳಬಹುದು. ಈ ಸೂಚಿಕೆ ಹೆಚ್ಚಾಗಿ ಇದ್ದರೆ ಕೊಬ್ಬು ಹೆಚ್ಚು ಇದೆ ಎಂದು, ಕಡಿಮೆ ಇದ್ದರೆ ಇರಬೇಕಾದ ಕೊಬ್ಬಿಗಿಂತ ಕಡಿಮೆ ಇದೆ ಎಂದು ತಿಳಿಯುತ್ತದೆ. ರಾಷ್ಟ್ರೀಯ ಪೋಷಾಹಾಕಾರ ಸಂಸ್ಥೆ ಸರ್ವೇ ಪ್ರಕಾರ ಸ್ತ್ರೀ, ಪುರುಷರ ಪರಿಸ್ಥಿತಿ ಹೀಗೆ ಇದೆ :

''ಪುರುಷರಲ್ಲಿ ತೀರ್ವ ಶಕ್ತಿ ಲೋಪ (BMI <18.5) 35%, ಅಧಿಕ ತೂಕ/ಸ್ಥೂಲಕಾಯ (BMI>25) 10% ಯಾಗಿ ಇದೆ.''

''35% ಮಹಿಳೆಯರಲ್ಲಿ ತೀರ್ವ ಶಕ್ತಿ ಲೋಪ ಇದ್ದರೆ, 14% ಮಹಿಳೆಯರಲ್ಲಿ ಅಧಿಕ ತೂಕ/ಸ್ಥೂಲಕಾಯ ಕಾಣಿಸುತ್ತದೆ. ತೀರ್ವ ಶಕ್ತಿ ಲೋಪ ಒಡಿಶಾ, ಗುಜರಾತ್, ಉತ್ತರ್‌ಪ್ರದೇಶ್ ರಾಜ್ಯಗಳಲ್ಲಿ ಅಧಿಕವಾಗಿ ಇದೆ, ಆ ನಂತರ ಕರ್ನಾಟಕ, ಆಂಧ್ರಪ್ರದೇಶ್, ಮಹಾರಾಷ್ಟ್ರ, ಮಧ್ಯಪ್ರದೇಶ್, ಪಶ್ಚಿಮ ಬಂಗಾಳಗಳಲ್ಲಿ 33-38% ಮಹಿಳೆಯರಲ್ಲಿ ತೀರ್ವ ಶಕ್ತಿ ಲೋಪವಿದೆ ...''

ಆಹಾರ ಭದ್ರತೆಗೂ ಇದಕ್ಕೂ ಇರುವ ಸಂಬಂಧವೇನು? ಚತ್ತೀಸ್‌ಘಡ್‌ನಲ್ಲಿ ಆರೋಗ್ಯ ಕೇಂದ್ರಕ್ಕೆ ಕಡಿಮೆ ತೂಕ ಇರುವ ರೋಗಿಗಳು ಪ್ರತಿದಿನ ದೊಡ್ಡ ಸಂಖ್ಯೆಯಲ್ಲಿ ಬರುತ್ತಾರೆ. ಅಲ್ಲಿನ ವೈದ್ಯರು ಈ ಪರಿಸ್ಥಿತಿಯನ್ನು ವಿವರಿಸಿದರು. ಕುಟುಂಬಕ್ಕೆ ತಿಂಗಳಿಗೆ ನ್ಯಾಯಬೆಲೆ ಅಂಗಡಿ ಮೂಲಕ ಲಭಿಸುವ 35 ಕಿಲೋಗಳ ಆಹಾರ ಧಾನ್ಯಗಳು ಐದು ಜನ ಇರುವ ಕುಟುಂಬದಲ್ಲಿ 11 ದಿನಗಳಿಗೆ ಸರಿಹೋಗುತ್ತದೆ. ಉಳಿದ ದಿನಗಳಲ್ಲಿ ತಾವು ಬೆಳೆಸಿದ ಆಹಾರದಮೇಲಾಗಲೀ ಅಥವಾ ಮಾರುಕಟ್ಟೆಗಳಲ್ಲಿ ಕೊಂಡವುಗಳ ಮೇಲಾಗಲೀ ಆಧಾರಪಡಬೇಕು.

ಉದಾಹರಣೆಗೆ ಬಿಲಾಸ್‌ಪೂರ್‌ನಲ್ಲಿ ರಿಕ್ಷಾತುಳಿಯುವ ವ್ಯಕ್ತಿ ದಿನಕ್ಕೆ 70-80 ರೂಪಾಯಿಗಳನ್ನು ಸಂಪಾದಿಸುತ್ತಾನೆ. ಅವನಿಗೆ ಮನೆ ಬಾಡಿಗೆಗೆ 400 ರೂಪಾಯಿಗಳು, ವಿದ್ಯುತ್‌ಗೆ 100 ರೂಪಾಯಿಗಳನ್ನು ಖರ್ಚು ಆಗುತ್ತವೆ. ಅವನು ತೂಕ ಕಳೆದುಕೊಳ್ಳುವುದು, ಕ್ಷಯಕ್ಕೆ ತುತ್ತಾದರೆ ಆಶ್ಚರ್ಯ ಕಲ್ಪಿಸುವುದಿಲ್ಲ.

ಅಂದರೆ ಈ ಗಣಾಂಕಗಳು ಆಹಾರ ಭದ್ರತೆಗೆ ಸೂಚಿಕೆಗಳು,ಚತ್ತೀಸ್‌ಘಡ್ ವೈದ್ಯ ಹೀಗೆ ಹೇಳುತ್ತಿದ್ದಾರೆ :

''ದೇಹಕ್ಕೆ ಬೇಕಾದಷ್ಟು ಆಹಾರ ತೆಗೆದುಕೊಂಡರೆ ಯಾರು ಇರಬೇಕಾದ್ದಕ್ಕಿಂತ ಕಡಿಮೆ ತೂಕವಾಗಲೀ, ಕಡಿಮೆ ಎತ್ತರವಾಗಲೀ ಇರುವುದಿಲ್ಲ. ಯಾವುದಕ್ಕಾದರೂ ನಿರೂಪಣೆ ವಾಸ್ತವದಲ್ಲಿ ಕಾಣಿಸಬೇಕು. ಪ್ರಜಾ ಹಂಚಿಕೆ ವ್ಯವಸ್ಥೆ ಸಾಮರ್ಥ್ಯ, ಆಹಾರ ಬೆಳೆಗಳನ್ನು ಬೆಳೆಸುವುದಕ್ಕೆ ಪ್ರಾಧಾನ್ಯತೆ. ಪ್ರಜೆಗಳ ಕೊಳ್ಳುವ ಶಕ್ತಿ ಮೊದಲಾದವುಗಳೆಲ್ಲವೂ ಪ್ರಜೆಗಳ ಎತ್ತರ, ತೂಕ ಗಂತಹವುಗಳ ಸೂಚಿಕೆಗಳ ಆಧಾರವಾಗಿ ಅಂದಾಜು ಹಾಕಬಹುದು.ಅಷ್ಟೇ ಅಲ್ಲದೆ ಒಬ್ಬ ವ್ಯಕ್ತಿ ಎತ್ತರದ ಮೂಲಕ ಅವನಿಗೆ / ಅವಳಿಗೆ ಬಾಲ್ಯದಲ್ಲಿ ಸರಿಯಾದ ಆಹಾರ ದೊರೆತಿದೆಯೋ ಇಲ್ಲವೋ ಎಂದು ಹೇಳಬಹುದು. ಕಡಿಮೆ ಎತ್ತರ , ಕಡಿಮೆ ತೂಕ ಇರುವವರು ಪೋಷಕ ಆಹಾರ ಲೋಪಕ್ಕೆ ಗುರಿಯಾಗಿದ್ದಾರೆ ಎಂದು ಹೇಳಬಹುದು. ಆದರ ಹಸಿವಿಗೆ ಗುರಿಯಾಗಿದ್ದಾರೆ ಎನ್ನುವುದು ಸರಿಯಾದುದು ಎಂದು ನನ್ನ ಅಭಿಪ್ರಾಯ.''

SCERT TELANGANA

ಸಾರಾಂಶ

ಈ ಪಾಠದ ಮೊದಲ ಭಾಗದಲ್ಲಿ ದೇಶದ ಮೊತ್ತವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಹಾರ ಭದ್ರತೆ ಎಂಬ ಅಂಶವನ್ನು ಪರಿಶೀಲಿಸಿದ್ದೇವೆ. ಆಹಾರ ಉತ್ಪತ್ತಿಯನ್ನು ಬೆಳೆಸಲು ಏನು ಮಾಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ ನಂತರ ಆಹಾರ ಲಭ್ಯತೆಯನ್ನು ಹೇಗೆ ಲೆಕ್ಕಿಸಬೇಕು ಎನ್ನುವ ವಿಷಯವನ್ನು ಚರ್ಚಿಸಿದ್ದೇವೆ. ತಲಸರಿ ಆಹಾರ ಧಾನ್ಯಗಳ ದೊರಕುವಿಕೆಯನ್ನುವುದು ವಾಸ್ತವದಲ್ಲಿ ಹೆಚ್ಚಾಗದೇ ಅದು ಕಡಿಮೆಯಾಗುವುದೆನ್ನುವುದು ಭಾದಾಕರವಾದ ವಿಷಯ.

ಉತ್ಪತಿಯಾದ ಧಾನ್ಯ ಗಳು ಜನರೆಲ್ಲರಿಗೂ ದೊರಕುವಂತೆ ಇರಬೇಕು. ಮಾರುಕಟ್ಟೆಯಲ್ಲಿ ಕೊಳ್ಳುವುದರಿಂದಾಗಲೀ, ನ್ಯಾಯಬೆಲೆ ಅಂಗಡಿಯಿಂದಾಗಲೀ, ಮಧ್ಯಾಹ್ನ ಬಿಸಿಯೂಟ ಯೋಜನೆಗಳಿಂದಾಗಲಿ ಆಹಾರವು ಎಲ್ಲರಿಗೂ ದೊರೆಯುವಂತಾಗಬೇಕು. ಪ್ರತಿಶತ ಅಧಿಕ ಜನರು ಅವರಿಗೆ ಬೇಕಾದುದಕ್ಕಿಂತ ಕಡಿಮೆ ಕ್ಯಾಲರೀಗಳು ತೆಗೆದುಕೊಳ್ಳುತ್ತಿದ್ದಾರೆ. ಇದು ಬಡಜನರಲ್ಲಿ ಬಹಳ ಹೆಚ್ಚು. ಹಣ್ಣುಗಳು, ತರಕಾರಿಗಳು, ಮಾಂಸ, ಮೊಟ್ಟೆಗಳಂತಹವುಗಳ ಬಳಕೆ ನೋಡಿದರೆ ಕ್ಯಾಲರೀಗಳ ಕ್ಷೀಣತೆ ಕಳವಳಿಕಾರಿಯಾಗಿದೆ. ಪ್ರಜಾ ಹಂಚಿಕೆ ವ್ಯವಸ್ಥೆ ಅವಶ್ಯಕವಾದ ಕಡೆ ಸಮರ್ಥವಾಗಿ ಕೆಲಸಮಾಡುವುದಿಲ್ಲ. ಮಕ್ಕಳಲ್ಲೂ, ವಯೋಜನರಲ್ಲಿಯೂ ಕಡಿಮೆ ತೂಕ ಸಮಸ್ಯೆ ತೀವ್ರವಾಗಿದೆಯೆಂದು ಪೋಷಕಾಹಾರ ವರದಿಗಳು ತಿಳಿಸುತ್ತಿವೆ. ಪ್ರಜೆಗಳು ತೆಗೆದುಕೊಳ್ಳಬೇಕಾದ ಆಹಾರಕ್ಕಿಂತ ಕಡಿಮೆ ತೆಗೆದುಕೊಳ್ಳುತ್ತಿದ್ದಾರೆ. ದೇಶದಲ್ಲಿ ಸಾಕಾಗುವಷ್ಟು ಆಹಾರ ಸಂಗ್ರಹಣೆಗಳು ಇದ್ದರೂ ಬಹಳ ಜನ ಪ್ರಜೆಗಳು ಹಸಿವಿನಿಂದ ಇರುತ್ತಾ ಪೋಷಕಾಹಾರ ಲೋಪಕ್ಕೆ ತುತ್ತಾಗುತಿದ್ದಾರೆ. ಇದು ಆಮೋದ್ಯವಾಗಿಲ್ಲ. ಆಹಾರ ಭದ್ರತೆಯ ಸಮಸ್ಯೆಯನ್ನು ಪರಿಷ್ಕರಿಸುವುದಕ್ಕೆ ಜಾಗ್ರತ್ತೆಯಾಗಿ ಆಲೋಚಿಸುತ್ತಾ ಮೇಲೆ ಚರ್ಚಿಸಿದ ಎಲ್ಲಾ ಕೋನಗಳಲ್ಲಿ ಪ್ರಯತ್ನಿಸಬೇಕಾಗಿದೆ.

ಮುಖ್ಯ ಪದಗಳು

ಉತ್ಪತ್ತಿ	**ಲಭ್ಯತೆ**	**ದೊರೆಯುವಿಕೆ**	**ಪೋಷಕಾಹಾರ**
ಬಫರ್ ಸಂಗ್ರಹಣೆಗಳು	**ಹಸಿವು**	**ಪ್ರಜಾ ಹಂಚಿಕೆ ವ್ಯವಸ್ಥೆ**	

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1 . ಪ್ರಕೃತಿ ವಿಕೋಪಗಳಿಂದ ಒಂದು ವರ್ಷ ಆಹಾರ ಧಾನ್ಯಗಳ ಉತ್ಪತ್ತಿಯು ಕಡಿಮೆ ಆಗಿದೆ ಎಂದು ಕೊಳ್ಳೋಣ. ಆ ವರ್ಷದಲ್ಲಿ ಆಹಾರ ಧಾನ್ಯಗಳ ಲಭ್ಯತೆ ಹೆಚ್ಚಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು? ವಿವರಿಸಿರಿ. (AS_4)

2. ತೂಕ ಕಡಿಮೆಯಾಗಿ ಇರುವುದಕ್ಕೆ , ಆಹಾರ ದೊರೆಯುವಿಕೆಗೆ ನಡುವೆ ಇರುವ ಸಂಬಂಧವನ್ನು ತಿಳಿಯಪಡಿಸುವುದಕ್ಕೆ ನಿಮ್ಮ ಪ್ರದೇಶದಿಂದ ಒಂದು ಊಹಾಜನಿತ ಉದಾಹರಣೆಯನ್ನು ಕೊಡಿರಿ.(AS_4)

3. ಒಂದು ವಾರದ ದಿನಗಳಲ್ಲಿ ನಿಮ್ಮ ಕುಟುಂಬದ ಆಹಾರದ ಅಭ್ಯಾಸವನ್ನು ವಿಶ್ಲೇಷಿಸಿರಿ. ಅದರಲ್ಲಿನ ಪೋಷಕಾಂಶಗಳನ್ನು ವಿವರಿಸಲು ಒಂದು ಪಟ್ಟಿಯನ್ನು ತಯಾರಿಸಿರಿ. (AS_3)

4. ಆಹಾರ ಉತ್ಪತ್ತಿ ಯನ್ನು ಹೆಚ್ಚುಸುವುದಕ್ಕೆ, ಆಹಾರ ಭದ್ರತೆಗೆ ನಡುವೆ ಇರುವ ಸಂಬಂಧವನ್ನು ವಿವರಿಸಿರಿ. (AS_1)

5. "ಪ್ರಜಾ ಹಂಚಿಕೆ ವ್ಯವಸ್ಥೆ ಪ್ರಜೆಗಳಿಗೆ ಆಹಾರ ಭದ್ರತೆಯಾಗಿ ಇರುವಂತೆ ನೋಡಬಲ್ಲದು " ಈ ವ್ಯಾಖ್ಯಾನಕ್ಕೆ ಬೆಂಬಲವಾಗಿ ವಾದನಗಳನ್ನು ತಿಳಿಸಿರಿ. (AS_1)

6. ಆಹಾರ ಭದ್ರತೆ ಕುರಿತು ಇಂತಹುದೇ ಒಂದು ಪೋಸ್ಟರನ್ನು ತಯಾರುಮಾಡಿರಿ. (AS_6)

7. ಪುಟಸಂಖ್ಯೆ 139ರಲ್ಲಿನ ಕೊನೆಯ ಪ್ಯಾರಾದಲ್ಲಿನ ಭಾರತ ದೇಶ.......... ಪ್ರಮಾಣ ಬೇರೆ ಇಲ್ಲಿಯವರೆಗೆ ಓದಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. (AS_2)

SCERT TELANGANA

8. ಭಾರತ ದೇಶದ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ.(AS$_1$)

1) ಕರ್ನಾಟಕ 2) ಒರಿಸ್ಸಾ 3) ಗುಜರಾತ 4) ಮಹಾರಾಷ್ಟ್ರ 5) ಮಧ್ಯಪ್ರದೇಶ 6) ಛತ್ತಿಸಘಡ 7) ಪಶ್ಚಿಮಬಂಗಾಳ 8) ತೆಲಂಗಾಣ 9) ಉತ್ತರ ಪ್ರದೇಶ 10) ಪಂಜಾಬ ಯೋಜನೆ

ಪ್ರಾಜೆಕ್ಟ್:

1) ಅಮ್ಮ ಎಂಬ ಕೆಳಿಗಿನ ಕವಿತೆಯನ್ನು ಓದಿರಿ. ಆಹಾರ ಭದ್ರತೆಗೆ ಸಂಬಂಧಿಸಿ ಯಾವುದೇ ಒಂದು ಅಂಶದ ಮೇಲೆ ನೀವು ಸಹ ಒಂದು ಕವಿತೆಯನ್ನು ಬರೆಯಿರಿ.

ಅಮ್ಮ

ಕರುಳಿನ ಕೂಗನ್ನು ಲೆಕ್ಕಸದೆ
ಒಣಗಿದ ಗಂಟಲು, ತುಟಿಗಳೊಂದಿಗೆ ನೋವುಪಡುತ್ತಾ
ಪ್ರವಹಿಸುವ ಕಣ್ಣೀರನ್ನು ತಡೆಯುತ್ತಾ
ಸರೋವರವಾದ ಕಣ್ಣನೊಂದಿಗೆ ನಿನ್ನನ್ನು ನೋಡಿದೆನು ...
ನೀನು ಮಾತ್ರ ಅರ್ಧ ಹೊಟ್ಟೆಗೆ ತಿನ್ನುತ್ತಾ,
ಎಲ್ಲರಿಗೂ ಊಟ ಬಡಿಸಲೆಂದು
ಒಂದು ರೊಟ್ಟಿ, ಇನ್ನುಸ್ವಲ್ಪ
ಮತ್ತೇನೋ ಮಾಡಲು
ಒಲೆಯ ಮುಂದೆ ಕುಳಿತುಕೊಂಡು
ನಿನ್ನ ಮೂಳೆಗಳನ್ನೇ ಸುಡಲು ಪಣವಾಗಿಟ್ಟ
ನಿನ್ನನ್ನು ನೋಡಿದೆನು ...
ಎಲ್ಲರ ಮನೆಯಲ್ಲಿ ಬಟ್ಟೆಗಳನ್ನು ಒಗೆಯುತ್ತಾ,
ಪಾತ್ರೆಗಳನ್ನು ತೊಳೆಯುತ್ತಾ
ಅವರು ಬಿಸಾಡಿದ ಅನ್ನವನ್ನು ನಿನಗೆ ಕೊಟ್ಟರೆ
ಅದನ್ನೇ ಪರಮಾನ್ನವಾಗಿ ತೆಗೆದುಕೊಂಡ
ನಿನ್ನನ್ನು ನೋಡಿದೆನು ...

2) ನಿಮ್ಮ ಕುಟುಂಬದಲ್ಲಿ, ಸುತ್ತಮುತ್ತಲಿನ ಕುಟುಂಬಗಳಲ್ಲಿ ತೃಣಧಾನ್ಯಗಳ ಬಳಕೆಯನ್ನು ಕುರಿತು ಸಮಾಚಾರವನ್ನು ಶೇಖರಿಸಿ, ವಿಶ್ಲೇಷಿಸಿರಿ.

ಕ್ರ. ಸಂ.	ಕುಟುಂಬದ ಯಜಮಾನನ	ತಿನ್ನುವ ಆಹಾರ			ತೃಣಧಾನ್ಯಗಳಿಂದ ತಯಾರಿಸಿದವುಗಳು	ತೃಣಧಾನ್ಯಗಳ ಬಳಕೆ ಹೆಚ್ಚಾಗಲು ಕಾರಣ
		ಮುಂಜಾನೆ	ಮಧ್ಯಾಹ್ನ	ರಾತ್ರಿ		
	ಹೆಸರು					

SCERT TELANGANA

ಸಮಾನತೆ - ಸುಸ್ಥಿರ ಅಭಿವೃದ್ಧಿ

ಅಧ್ಯಾಯ
11

ಅಭಿವೃದ್ಧಿಯನ್ನು ಮತ್ತೊಂದುಸಾರಿ ನೋಡೋಣ :

ಅಭಿವೃದ್ಧಿಗೆ ಅಳತೆಗೋಲಾಗಿ ತಲಾದಾಯ, ಸ್ಥೂಲ ರಾಷ್ಟ್ರೀಯೋತ್ಪತ್ತಿ (GDP)ಗಳಿಗಿಂತ ಮಾನವಾಭಿವೃದ್ಧಿಸೂಚಿಕೆ (HDI) ಉತ್ತಮವಾದುದು (ಎರಡನೇ ಪಾಠ ನೋಡಿರಿ) ಒಂದು ದೇಶದಲ್ಲಿ ಉತ್ಪತ್ತಿ ಆಗುತ್ತಿರುವ ವಸ್ತುಗಳು, ಸೇವೆಗಳ ಬೆಲೆಗಳನ್ನು GDP ಸೂಚಿಸುತ್ತದೆ, ಆದರೆ ಅಭಿವೃದ್ಧಿಯನ್ನು ಕೇವಲ ವಸ್ತುಗಳು, ಸೇವೆಗಳ ಉತ್ಪತ್ತಿಗೆ ಪರಿಮಿತಿ ಮಾಡಲಾರೆವು. ಉತ್ಪತ್ತಿಯು ಆದಾಯಗಳು ಒಂದು ಕಡೆ ವೇಗವಾಗಿ ಬೆಳೆಯುತ್ತಿದ್ದರೂ, ಇನ್ನೊಂದು ಕಡೆ ಭಾರತದೇಶದ ಹಾಗೆ ಶೇಕಡವಾರು ಪ್ರಜೆಗಳು ಪೋಷ್ಟಿಕಾಹಾರ ಲೋಪದಿಂದ, ವಿದ್ಯೆ, ವೈದ್ಯ ಸೌಕರ್ಯಗಳು ದೊರೆಯದ ಪರಿಸ್ಥಿತಿಗಳಿದ್ದಾಗ ಮತ್ತಷ್ಟು ಆಲೋಚಿಸುವ ಅವಸರವಿದೆ. ಅಭಿವೃದ್ಧಿಯಲ್ಲಿ ಸಾಮಾಜಿಕ ಸೂಚ್ಯಾಂಕಗಳಾದ ವಿದ್ಯೆ, ವೈದ್ಯಗಳಂತಹವು ದಾರಿ ಮಾಡಿಕೊಳ್ಳುವಂತೆ HDI ಮಾಡುತ್ತದೆ.

ಆದರೂ ವಿಸ್ತರಿಸಿದ ಈ ಅಭಿವೃದ್ಧಿಯ ಅಳತೆಗೋಲನ್ನು ಕೂಡ ಪರಿಗಣನೆಯಲ್ಲಿ ತೆಗೆದುಕೊಳ್ಳಲಾರದ ಅಂಶಗಳಿನ್ನೂ ಬಹಳ ಇವೆ. ಭಾರತದೇಶದಲ್ಲಿ ಕಾರ್ಮಿಕ ವರ್ಗದಲ್ಲಿ 90 ಜನರು ಅಸಂಘಟಿತ ರಂಗದಲ್ಲಿದ್ದಾರೆ. ಅಲ್ಲಿ ಕೆಲಸದ ಪರಿಸ್ಥಿತಿಗಳು ಚೆನ್ನಾಗಿರುವುದಿಲ್ಲ. ಅವ್ಯವಸ್ಥೀಕೃತ ರಂಗದಲ್ಲಿಯ ಸ್ವಯಂ ಉದ್ಯೋಗ, ದಿನಕೂಲಿಗಳ ಆದಾಯ ಬಹಳ ಕಡಿಮೆ ಇರುತ್ತದೆ (ಮೂರನೇ ಪಾಠ ನೋಡಿರಿ). ಕಾರ್ಮಿಕ ವರ್ಗದಲ್ಲಿ ಅಧಿಕ ಜನರು ಕಡಿಮೆ ಆದಾಯವನ್ನು ಕೊಡುವ ಕೆಲಸಗಳಲ್ಲಿದ್ದಾಗ GDPಯು ವೃದ್ಧಿಯಾಗುತ್ತಾ ಇರುವುದೆಂದರೆ, ಹೆಚ್ಚುತ್ತಿರುವ ಅನೇಕ ವಸ್ತುಗಳು, ಸೇವೆಗಳಿಂದ ಕೆಲವೇ ಜನರು ಮಾತ್ರ ಪ್ರಯೋಜನಗಳನ್ನು ಹೊಂದುತ್ತಿದ್ದಾರೆಂದು ಅರ್ಥ. ಅಧಿಕ ಆದಾಯ, ಸಂಪತ್ತು ಇರುವವರು ಯಾವುದನ್ನು ಬೇಕಾದರೂ ಕೊಂಡುಕೊಳ್ಳುವ, ವಿನಿಯೋಗಿಸಿಕೊಳ್ಳುವ ಸ್ಥಿತಿಯಲ್ಲಿರುತ್ತಾರೆ (10ನೇ ಪಾಠ ನೋಡಿರಿ). ಕೆಲವೇ ಜನರು ಪ್ರಪಂಚ ಮಟ್ಟದ ಭೋಗಭಾಗ್ಯಗಳಲ್ಲಿ ತೇಲಿಯಾಡುತ್ತಾ ಇರುವಾಗ, ಶೇಕಡವಾರು ಜನರು ಸರಿಯಾದ ಉದ್ಯೋಗಗಳಿಲ್ಲದೇ ಸಾಕಾಗುವಷ್ಟು ಆದಾಯಗಳಿಲ್ಲದೇ ಮೂಲಭೂತ ಅವಶ್ಯಕತೆ ಸಹ ದೊರಯದೇ ಇದ್ದು, ಗೌರವಯುತವಾಗಿ ಜೀವಿಸಲಾರದೇ ಹೋಗುತ್ತಿದ್ದಾರೆ. ಪ್ರಜೆಗಳ ಆದಾಯಗಳು, ಅವಕಾಶ ಗಳಲ್ಲಿ ಇಂತಹ ಅಂತರವಿರುವುದು ಸಮಸಮಾಜಕ್ಕೆ ಆಧಾರವಾಗದು.

- ಇಲ್ಲಿ ಕೊಟ್ಟಿರುವ ಗ್ರಾಫ್‌ಗಳ ಆಧಾರ ವಾಗಿ ಭಾರತದೇಶದಲ್ಲಿಯ ಅಂತರಗಳ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.



ಗ್ರಾಫ್ 1 : ಭಾರತದೇಶದಲ್ಲಿ ವಾರ್ಷಿಕ ಆದಾಯ ಆಧಾರವಾಗಿ ಕುಟುಂಬಗಳ ಹಂಚಿಕೆ (ಲಕ್ಷಗಳಲ್ಲಿ) (2010 ಸರ್ವೆ)

SCERT TELANGANA

ಗ್ರಾಫ್ 2: ಭಾರತದೇಶದಲ್ಲಿಯ ಶತಕೋಟಿಶ್ವರರಿಗೆ ಇರುವ ಒಟ್ಟು ಆಸ್ತಿ (ಬಿಲಿಯನ್ ರೂಪಾಯಿಗಳಲ್ಲಿ



ಗ್ರಾಫ್ 3: ಭಾರತದೇಶದಲ್ಲಿಯ ಶತಕೋಟಿಶ್ವರರು (ಬಿಲಿಯನೀರರು) ಸಂಖ್ಯೆ ಹೆಚ್ಚಳ



ಚಿತ್ರ 11.1 : ಮುಂಬೈಯಲ್ಲಿನ ಧಾರವಿ ಕೊಳಚೆಪ್ರದೇಶ ಭಾರತದೇಶದಲ್ಲಿನ ಪಟ್ಟಣ ಪ್ರಾಂತದ ಬಡವರು ವಾಸಿಸುವ ಅತಿದೊಡ್ಡ ಕಾಲೋನಿಗಳಲ್ಲಿ ಇದು ಒಂದು

ಚಿತ್ರ 11.2 : ಹೈದರಾಬಾದಿನಲ್ಲಿ ಒಂದು ಹೋಟೆಲ್‌ನಿಂದ ಕಾಣಿಸುವ ಬಂಜಾರಾಹಿಲ್ಸ್ ದೃಶ್ಯವು. ಇದು ಶ್ರೀಮಂತರು ವಾಸಿಸುವ ಒಂದು ಪ್ರಾಂತವು.

SCERT TELANGANA

GDPಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವುದರಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಪರಿಸರದ ಅಂಶಗಳ ದೃಷ್ಟಿಯಿಂದ ಸಹ ಪ್ರಧಾನ ವಿಮರ್ಶೆ ಇದೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಕ್ರಮದಲ್ಲಿ ಪರಿಸರ ಸಂಪನ್ಮೂಲಗಳು ಇದಕ್ಕೂ ಮೊದಲು ಕಂಡುಅರಿಯದ ರೀತಿಗಳಲ್ಲಿ ಉಪಯೋಗಿಸಿದ್ದೇವೆಂದು ನಾಶ ಮಾಡಿದ್ದೇವೆ ಎಂದೂ, ವಿವಿಧ ಸಂದರ್ಭಗಳಲ್ಲಿ ನೋಡಿದ್ದೇವೆ. ಅಡವಿಗಳನ್ನು ಕಡಿದುಹಾಕುವುದು, ಭೂಮಿ ಕೊರೆತೆಗೆ (Soil erosion) ಭೂಗರ್ಭಜಲಗಳು ಕಡಿಮೆಯಾಗುವುದು. ಕಾಲುಷ್ಯ ಹೆಚ್ಚುವುದು, ಹುಲ್ಲುಗಾವಲುಗಳ ಮೇಲೆ ಒತ್ತಡ, ಶಿಲಾಇಂಧನಗಳ ಮೇಲೆ ಆಧಾರವಾಗುವುದು, ಕೈಗಾರಿಕೆಗಳ ವ್ಯರ್ಥಗಳು, ವ್ಯವಸಾಯದಲ್ಲಿ ರಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ಔಷಧಗಳು ಬಳಸುವುದು, ವಾಯುಗುಣ - ಬದಲಾವಣೆಗಳು ನಮ್ಮ ಮುಂದಿರುವ ಮುಖ್ಯವಾದ ಪರಿಸರದ ಸಮಸ್ಯೆಗಳು. ಕೈಗಾರಿಕೀಕರಣದಿಂದ ಕೆಲ ಜನರಿಗೆ ಅನೇಕ ವಸ್ತುಗಳು ಜಾರಿಯಲ್ಲಿ ಬಂದಿವೆ. ಆದರೆ ಇದರ ಫಲಿತವಾಗಿ ಪ್ರಪಂಚ ಸಹಜ ಸಂಪನ್ಮೂಲಗಳು ಕಣ್ಮರೆಯಾಗಿ ಹೋಗುತ್ತಿವೆ. ವಾತಾವರಣವು ಸಹ ಹೆಚ್ಚು, ಕಡಿಮೆಯಾಗುತ್ತದೆ. ಈ ವಿಧವಾದ ವೃದ್ಧಿಯು ಬಹಳ ಕಾಲ ಮುಂದುವರಿಯದು.

ಈ ಅಧ್ಯಾಯದಲ್ಲಿ ನಾವು ಅಭಿವೃದ್ಧಿ, ಪರಿಸರವು, ಪ್ರಜೆಗಳ ಮಧ್ಯ ಸಂಬಂಧಗಳನ್ನು ಪರಿಶೀಲಿಸೋಣ. ಆರ್ಥಿಕ ಕಾರ್ಯಕಲಾಪಗಳ ವಿಸ್ತರಣೆಯು ಪರಿಸರದಲ್ಲಿನ ವಿವಿಧ ಅಂಶಗಳನ್ನು ಯಾವ ರೀತಿ ಪ್ರಭಾವಗೊಳಿಸುತ್ತದೆ ? ಪ್ರಕೃತಿ ಸಂಪತ್ತುಗಳ ಮೇಲೆ ಪ್ರಜೆಗಳ ಹಕ್ಕುಗಳನ್ನೂ, ಜಾರಿಯಲ್ಲಿರುವ ಅವರ ಜೀವನಗಳ ಅಭಿವೃದ್ಧಿಯನ್ನು ಯಾವ ವಿಧವಾಗಿ ಪ್ರಭಾವಿತಗೊಳಿಸಿದೆ. ಅಭಿವೃದ್ಧಿಗೆ ಸಹಕರಿಸುವ ವಿಭಿನ್ನವಾದ ಮಾರ್ಗಗಳಿದ್ದಾವಾ? ಪ್ರಸ್ತುತ ಅಂಶಗಳ ಆಧಾರವಾಗಿ, ಪ್ರಜೆಗಳ ಜೀವನ ಅನುಭವಗಳ ಮೂಲಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಅನ್ವೇಷಿಸೋಣ. ಭೌಗೋಳಿಕ ವಸ್ತುಗಳು, ಸೇವೆಗಳು ಅಲ್ಲದೇ ಪ್ರಜೆಗಳೆಲ್ಲರೂ (ಪ್ರಸ್ತುತ ತಲೆಮಾರಿನವರು / ಮುಂಬರುವ ತಲೆಮಾರಿನವರು ಸಹ) ಸಜೀವ, ನಿರ್ಜೀವ ಪರಿಸರವು ಎನ್ನುವ ಅರ್ಥ ಕೂಡ ಬರುವಂತೆ ಅಭಿವೃದ್ಧಿಯನ್ನು ವಿಸ್ತೃತಪಡಿಸಬೇಕು.

ಪರಿಸರದ - ಅಭಿವೃದ್ಧಿ :

ಅಭಿವೃದ್ಧಿಯಲ್ಲಿ ಪರಿಸರದ ಪಾತ್ರ ಯಾವುದೋ ಮೊದಲು ಮತ್ತೊಂದು ಸಾರಿ ನೆನಪು ಮಾಡಿಕೊಳ್ಳೋಣ. ಉತ್ಪತ್ತಿ ಪ್ರಕ್ರಿಯೆಯಲ್ಲಿ, ಭೂಮಿ-ನೀರು-ಖನಿಜಗಳು, ಗಿಡಗಳಿಂದ ಬರುವ ಉತ್ಪತ್ತಿಗಳು, ಪಶುಗಳು ಅಂತಹ ಸಹಜ ಸಂಪತ್ತುಗಳು ಬಹಳ ಮುಖ್ಯವಾದವು. ವ್ಯವಸಾಯ, ಗಣಿಗಳ ತೋಡುವುದು ಅಂತಹ ಪ್ರಾಥಮಿಕ ರಂಗ ಕಾರ್ಯಕಲಾಪಗಳಲ್ಲಿ ಅಲ್ಲದೇ ತಯಾರಿ, ಇಂಧನ ರಂಗಗಳಲ್ಲಿ ಕೂಡ ಸಹಜ ಸಂಪತ್ತುಗಳ ಮೇಲೆ ಉತ್ಪತ್ತಿ ಪ್ರಧಾನ ಆಧಾರವಾಗಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಇತರ ರಂಗಗಳು ಕೂಡಾ ವಿವಿಧ ಸ್ಥಾಯಿಯಲ್ಲಿ ಸಹಜ ಸಂಪತ್ತುಗಳ ಮೇಲೆ ಆಧಾರವಾಗಿದ್ದಾವೆ. ಈ ಸಂಪನ್ಮೂಲಗಳನ್ನು ಅಂದಿಸುವಲ್ಲಿ ಪರ್ಯಾವರಣ ಸಾಮರ್ಥ್ಯವನ್ನೇ ''ಪರಿಸರ ಸಂಪನ್ಮೂಲ ಕಾರ್ಯಾಚರಣೆ''(Environment's Source

> ಭಾರತೀಯ ವ್ಯವಸಾಯ - ಕೈಗಾರಿಕೆಗಳಿಗೆ ಸಂಬಂಧಿಸಿ ಒಂಬತ್ತನೇ ತರಗತಿ ಪಾಠಗಳನ್ನು ಮತ್ತೊಂದು ಸಲ ನೋಡಿರಿ.
>
> - ಈ ಎರಡು ಸಂದರ್ಭಗಳಲ್ಲಿ ಸಂಪನ್ಮೂಲಗಳ ಹಂಚಿಕೆ ಲಭ್ಯತೆಗೆ ಸಂಬಂಧಿಸಿ ಅಸಮಾನತೆಗಳನ್ನು ಹೇಗೆ ಚರ್ಚಿಸಿದ್ದಾವೆ ?
> - ಪರಿಸರ ಸಮಸ್ಯೆಗಳ ಮೂಲಕ ಅಭಿವೃದ್ಧಿ ಎನ್ನು ಭಾವನೆಯನ್ನು ಹೇಗೆ ಪ್ರಶ್ನಿಸಿದ್ದಾರೋ ಗುರ್ತಿಸಿರಿ ?
> - ''ಹಸಿರುಕ್ರಾಂತಿ'' ವಿಸ್ತರಿಸುವುದರಿಂದ ಎಂತಹ ಪರಿಸರ ಸಮಸ್ಯೆ ಏರ್ಪಟ್ಟಿದೆ ? ಇದರಿಂದ ಭವಿಷ್ಯದಲ್ಲಿ ಎಂತಹ ಗುಣಪಾಠವನ್ನು ಕಲಿತುಕೊಳ್ಳಬೇಕು ?

SCERT TELANGANA

Function) ಎನ್ನುವರು. ಸಂಪನ್ಮೂಲಗಳನ್ನು ವಿನಿಯೋಗಿಸುತ್ತಾ ಇರುವುದರಿಂದ ಅಥವಾ ಅವು ಕಾಲುಷ್ಯಗಳಿಗೆ ಗುರಿಯಾಗುವುದರಿಂದ ಈ ಸಾಮರ್ಥ್ಯ ಕಡಿಮೆಯಾಗುತ್ತದೆ.

ಪರಿಸರ ನಿರ್ವಹಿಸುವ ಮತ್ತೊಂದು ಕರ್ತವ್ಯ ಸಹ ಇದೆ. ಅದು ವಿವಿಧ ಕಾರ್ಯಕ್ರಮಗಳ ಮೂಲಕ ಬಿಡುಗಡೆ ಮಾಡವ ವ್ಯರ್ಥಗಳನ್ನು, ಶುದ್ಧಿ ಮಾಡಿ ಪ್ರಮಾದರಹಿತವಾಗಿ ಮಾಡುವುದು, ಉತ್ಪತ್ತಿ, ವಿನಿಯೋಗಗಳಲ್ಲಿ ನಿರುಪಯೋಗವಾದ ಉಪಉತ್ಪತ್ತಿಗಳು-ಉದಾಹರಣೆಗೆ ಇಂಜನ್‌ಗಳಿಂದ ಹೊರ ಬರುವ ಹೊಗೆ, ಶುಭ್ರ ಮಾಡಲು ಉಪಯೋಗಿಸಿದ ನೀರು - ಬೀದಿಗೆಸೆದ ಅಟ್ಟೇಪಟ್ಟಿಗೆಗಳು, ವಸ್ತುಗಳು, ಅಂತಹವುಗಳನ್ನು ಪರಿಸರವೇ ಶುಭ್ರ ಮಾಡುತ್ತದೆ. ಇದು ಬಹಳ ಮುಖ್ಯವಾದ ಕಾರ್ಯ. ಕಾಲುಷ್ಯವನ್ನು ಗ್ರಹಿಸಿ ಪ್ರಮಾದರಹಿತವಾಗಿ ಬದಲಾಯಿಸುವ ಶಕ್ತಿಯನ್ನೇ ''ಶುದ್ಧಿಕರಿಸುವ ಕರ್ತವ್ಯ'' (Environment Sink Function) ತಿಳಿಸುತ್ತದೆ. ಪರಿಸರ ಶುದ್ಧೀ ಮಾಡಲಾರ ದಷ್ಟು ಹೆಚ್ಚಿನ ಪ್ರಮಾಣದಲ್ಲಿ ವ್ಯರ್ಥಪದಾರ್ಥಗಳು ಉತ್ಪನ್ನವಾಗುತ್ತಾ ಇದ್ದರೆ ಪರಿಸರಕ್ಕೆ ದೀರ್ಘಕಾಲ ನಷ್ಟ ಉಂಟಾಗುತ್ತದೆ.

ಚಿತ್ರ 11.3 : ರಾಜಸ್ಥಾನ್‌ದಲ್ಲಿ ನೀರಾವರಿ ವ್ಯವಸಾಯ (1957 ವಿಶ್ವಸಂಸ್ಥೆ ಫೋಟೋ)

ಕಳೆದ 50 ವರ್ಷಗಳ ಅಭಿವೃದ್ಧಿಯಲ್ಲಿ ಪರಿಸರದ ಈ ಎರಡು ಕಾರ್ಯಗಳು ಪರಿಮಿತಿಗೆ ಮೀರಿ ಉಪಯೋಗಿಸಿದ್ದಾರೆ. ಇದರಿಂದ ಪರಿಸರಕ್ಕೆ ಬೆಂಬಲ ಕೊಡುವ ಸಾಮರ್ಥ್ಯ, ಅಂದರೆ ಭವಿಷ್ಯತ್ತಿನಲ್ಲಿ ಆರ್ಥಿಕ ಉತ್ಪತ್ತಿ ವಿನಿಯೋಗಗಳಿಗೆ ಬೆಂಬಲ ಕೊಡುವ ಸಾಮರ್ಥ್ಯ ಪ್ರಭಾವಿತವಾಗಿದೆ ಎಂದು ಕರೆಯುವರು. ಇದನ್ನು ಕೆಲವು ಉದಾಹರಣೆಗಳ ಮೂಲಕ ನೋಡೋಣ.

ಉದಾಹರಣೆ 1: ಪುರಾತನ ವ್ಯವಸಾಯದಲ್ಲಿ ಮಳೆ ನೀರಿನಿಂದ, ಭೂಗರ್ಭಜಲಗಳಿಂದ ನೀರು ಬಿಡುವುದು ಅಥವಾ ಕಡಿಮೆ ಭೂಮಿ ನೀರಾವರಿ ಮಾಡಲು ವಿನಿಯೋಗಿಸುವರು ಉದಾಹರಣೆಗೆ 'ಮೋಟ ಬಾವಿ'ಯಿಂದ 2-3 ಎಕರೆಗಳಿಗೆ ಮಾತ್ರ ನೀರು ಹರಿಸುತ್ತಿದ್ದರು. ವ್ಯವಸಾಯ ಮಳೆಗಾಲದಲ್ಲಿ ಮಾತ್ರ ಪರಿಮಿತಿಯಾಗಿತ್ತು. ಅಧಿಕ ಪ್ರಾಂತವು ವರ್ಷಾದಾರವಾಗಿತ್ತು. ಕಾಲಕ್ರಮದಲ್ಲಿ ನೂತನ ಇಂಧನ ಸಂಪನ್ಮೂಲಗಳು ಜಾರಿಯಲ್ಲಿ ಬಂದು ಪೆಟ್ರೋಲ್, ಡೀಸೆಲ್, ವಿದ್ಯುತ್‌ನಿಂದ ಕೆಲಸ ಮಾಡುವ ಪಂಪ್‌ಸೆಟ್‌ಗಳು ಬಳಕೆಯಲ್ಲಿ ಬಂದವು. ಇದರ ಪ್ರಭಾವವನ್ನು ಎರಡು ದೆಶೆಯಲ್ಲಿ ನೋಡಬೇಕು. ಮೊದಲನೆಯದು ಮಾನವನ ಶ್ರಮ ಕಡಿಮೆಯಾಗಿದೆ. ಭೂಮಿಯಿಂದ ನೀರನ್ನು ಮೇಲೇತ್ತುವ ಯಂತ್ರಗಳಿಂದ ಸುಲಭವಾಗಿದೆ. ಅಷ್ಟೇಅಲ್ಲದೇ ಈ ದೆಶೆಯಲ್ಲಿ ಭೂಗರ್ಭಜಲಗಳು ಸಮೃದ್ಧಿಯಿಂದ ಕೂಡಿವೆ. ಸಾಧಾರಣ ಬಾವಿಗಳಲ್ಲಿ 10-15 ಅಡಿಗಳಲ್ಲೇ ನೀರಿದ್ದವು. ಮಹಾ ಎಂದರೆ 100 ಅಡಿಗಳ ಒಳಗಿದ್ದವು. ವಿದ್ಯುತ್ ಡೀಸೆಲ್ ಮೋಟರ್‌ಗಳಿಂದ ಭೂಗರ್ಭಜಲವನ್ನು ತೆಗೆಯಲು ಪ್ರಾರಂಭವಾದ ನಂತರ ಅವು ಕೆಲವು ನೂರಾರು ಅಡಿಗಳ ಭೂಮಿಯ ಆಳಕ್ಕೆ ಸೇರಿದವು. ಒಳಗಿನಿಂದ ನೀರನ್ನು ಮೇಲೆ ತರಬೇಕಾದರೆ ಮೊದಲು ಭೂಮಿಯಲ್ಲಿ ನೀರು ಇಂಗಬೇಕು. ಇದನ್ನೇ ಭೂಗರ್ಭಜಲಗಳು 'ಪುನರುದ್ಧರಣೆ' ಎನ್ನುವರು. ಭೂಮಿಯ ಒಳಗಡೆ ಮಣ್ಣುಕಲ್ಲುಗಳ ಒಳಗೆ ಭೂಗರ್ಭಜಲಗಳು ಪ್ರವಹಿಸುತ್ತವೆ. ಒಳಗೆ ನೀರು ಇಂಗುವುದಕ್ಕಿಂತ ಮೇಲೆ ಬರುವ ನೀರೇ ಅಧಿಕವಾದರೆ ಕೆಲಕಾಲಕ್ಕೆ ನೀರು ಮುಗಿಯತ್ತದೆ ಎನ್ನುವ ಅರ್ಥವನ್ನು ಕೊಡುತ್ತದೆ.

ಭಾರತದೇಶದ ಭೂಗರ್ಭಜಲ ಸಂಪನ್ಮೂಲಗಳಿಗೆ ಸಂಬಂಧಿಸಿ ಇತ್ತೀಚಿನ ಗಣಾಂಕಗಳ ಪ್ರಕಾರ ದೇಶದಲ್ಲಿ ಅನೇಕ ಪ್ರಾಂತಗಳಲ್ಲಿ ನೀರು ಅಧಿಕವಾಗಿ ವಿನಿಯೋಗಿಸುವುದರಿಂದ ತೀವ್ರ ಸಂಕಷ್ಟದಲ್ಲಿದ್ದೇವೆಂದು ತಿಳಿಯುತ್ತದೆ. ದೇಶದಲ್ಲಿನ ಮೂರನೇ ಒಂದು ಭಾಗ ಪ್ರಾಂತದಲ್ಲಿ ಭೂಗರ್ಭಜಲ ಪುನರುದ್ಧರಣೆಗಿಂತ ಆ ನೀರಿನ ವಿನಿಯೋಗ ಅಧಿಕವಾಗಿದೆ. ಸುಮಾರು 300 ಜಿಲ್ಲೆಗಳಲ್ಲಿ ಕಳೆದ 20 ವರ್ಷಗಳಲ್ಲಿ ಭೂಗರ್ಭಜಲಗಳು 4 ಮೀಟರ್‌ನಷ್ಟು ಕೆಳಬಿದ್ದು ಹೋಗಿವೆ. ಭೂಗರ್ಭ ಜಲವನ್ನು ಬಹಳ ಬಳಸಿಕೊಳ್ಳುತ್ತೇವೆಂದು ಇದರಿಂದ ತಿಳಿಯುತ್ತದೆ.

- ಭೂಗರ್ಭಜಲಗಳನ್ನು ಹೆಚ್ಚಾಗಿ ಬಳಸುವುದು ಸುಸ್ಥಿರವಾದ ಪದ್ಧತಿ ಅಲ್ಲ? ಏಕೆ ?

SCERT TELANGANA

ವ್ಯವಸಾಯದಲ್ಲಿ ಪರಸಂಪನ್ನವಾಗಿರುವ ಪಂಜಾಬ್, ಪಶ್ಚಿಮ ಉತ್ತರಪ್ರದೇಶ್‌ಗಳಲ್ಲಿ, ಮಧ್ಯ, ದಕ್ಷಿಣ ಪ್ರಸ್ಥಭೂಮಿಗಳಲ್ಲಿ ಕಲ್ಲಿನ ಪ್ರಾಂತಗಳಲ್ಲೂ ಕೆಲವು ಕರಾವಳಿ ಪ್ರಾಂತಗಳಲ್ಲೂ, ವೇಗವಾಗಿ ಬೆಳೆಯುವ ಪಟ್ಟಣ ಪ್ರಾಂತಗಳಲ್ಲೂ ಭೂಗರ್ಭ ಜಲ ವಿನಿಯೋಗ ಬಹಳ ಹೆಚ್ಚಿದೆ.

ಭೂಗರ್ಭ ಜಲಗಳನ್ನು ಅಧಿಕವಾಗಿ ಬಳಸುವುದರಿಂದ ಅದು ನಶಿಸಿ ಹೋಗುತ್ತವೆ. ಭೂಗರ್ಭ ಜಲಗಳು ಬಹಳ ವೇಗವಾಗಿ ಆಳಕ್ಕೆ, ಇನ್ನೂ ಆಳಕ್ಕೆ ಬಿದ್ದು ಹೋಗುತ್ತವೆ.

ಭೂಗರ್ಭ ಜಲಗಳು ಕಡಿಮೆಯಾಗುವುದು ಅಲ್ಲದೇ, ಅವುಗಳ ನಾಣ್ಯತೆಯು ಕೂಡಾ ಕಡಿಮೆಯಾಗುತ್ತದೆ. ಭಾರತದೇಶದಲ್ಲಿನ 59% ಜಿಲ್ಲೆಗಳಲ್ಲಿ ಕೈಪಂಪುಗಳಲ್ಲಿನ ನೀರು ಕುಡಿಯಲು ಬರುವುದಿಲ್ಲ. ಕೈಗಾರಿಕೆಗಳು, ವ್ಯವಸಾಯದಿಂದ ಬರುವ ರಸಾಯನಿಕ ವ್ಯರ್ಥಗಳು, ಭೂಗರ್ಭ ಜಲಗಳನ್ನು ಕಲುಷಿತ ಮಾಡುವುದಿರಂದ ಹೀಗೆ ನಡೆಯುತ್ತದೆ. ಎಲ್ಲಾ ವ್ಯರ್ಥ, ವಿಷಪೂರಿತ ಪದಾರ್ಥಗಳನ್ನು ನೀರಿನಲ್ಲಿ ಬೀಸಾಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಸುಲಭವಾಗಿ ಸರಿಪಡಿಸಲಾರೆವು. ಇದರ ಪರಿಣಾಮವನ್ನು ನಂತರದ ಉದಾಹರಣೆಯಲ್ಲಿ ನೋಡೋಣ.

ಈ ವಿಧವಾದ ಅಭಿವೃದ್ಧಿ ಸರಿಯಾಗಿ ಸುಸ್ಥಿರ ಅಭಿವೃದ್ಧಿಗೆ ವಿರುದ್ಧವಾಗಿದೆ. ಸುಸ್ಥಿರ ಅಭಿವೃದ್ಧಿ ಎಂದರೆ ಭವಿಷ್ಯದ ತಲೆಮಾರಿನವರು ತಮ್ಮ ಅವಶ್ಯಕತೆಗಳನ್ನು ತೀರಿಸಿಕೊಳ್ಳುವ ಸಾಮರ್ಥ್ಯವನ್ನು ನಾಶ ಮಾಡದಂತೆ ಪ್ರಸ್ತುತ ತಲಮಾರಿನ ಅವಶ್ಯತೆಗಳನ್ನು ತೀರಿಸಿಕೊಳ್ಳುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸುಸ್ಥಿರ ಅಭಿವೃದ್ಧಿ ಎಲ್ಲರಿಗೂ ಪ್ರಸ್ತುತ ಮತ್ತು ಬರುವ ತಲಮಾರಿನವರಿಗೆ ನಾಣ್ಯವಾದ ಜೀವನವನ್ನು ಕೋರಿಕೊಳ್ಳುತ್ತದೆ.

ಆದರೆ, ಪ್ರಸ್ತುತ ನಾವು ಸಂಪನ್ಮೂಲಗಳನ್ನು ಉಪಯೋಗಿಸುವ ರೀತಿಯನ್ನು ನೋಡಿದರೆ ವಿರಳವಾದ ಸಂಪನ್ಮೂಲಗಳು ಭವಿಷ್ಯದ ತಲೆಮಾರಿನವರಿಗೆ ತಮ್ಮ ನ್ಯಾಯವಾದ ಭಾಗವನ್ನು ಹೊಂದುವ ಅವಕಾಶಗಳು ನಾಶವಾಗುತ್ತಿವೆ. ಅಷ್ಟೇಅಲ್ಲದೇ ನಾವು ಉಪಯೋಗಿಸುವ ಸಂಪನ್ಮೂಲಗಳು ಪ್ರಭಾವ ಪರಿಸರದ ಮೇಲೆ ಬಿದ್ದು ಅದರ ಸಾಮರ್ಥ್ಯವನ್ನು ಶಾಶ್ವತವಾಗಿ ನಾಶ ಹೊಂದುವ ಅವಕಾಶವಿದೆ.

ಉದಾಹರಣೆ 2 : ಆಧುನಿಕ ವ್ಯವಸಾಯ ಪದ್ಧತಿಗಳಲ್ಲಿ ಅಧಿಕ ಇಳುವರಿ ಹೊಂದಲು ಬೆಳೆಗಳಿಗೆ ಕ್ರಿಮಿ ಔಷಧಗಳು ಬಳಸುವುದು ಬಹಳ ಮುಖ್ಯ. ಆದರೆ ರಸಾಯನಿಕ ಕ್ರಿಮಿ ಔಷಧಗಳು ಬಳಸುವುದರಿಂದ ಪರ್ಯಾವರಣದ ಮೇಲೆ ಪ್ರತಿಕೂಲ ಪ್ರಭಾವಿರುತ್ತದೆಂದು ಪರಿಸರ ಶಾಸ್ತ್ರಜ್ಞರು ಬಹಳ ವರ್ಷಗಳ ಹಿಂದೆಯೇ ಗುರ್ತಿಸಿ, ಒಂದು ಮಟ್ಟಕ್ಕೆ ಮೀರಿದ ವಿಷ ಪದಾರ್ಥಗಳನ್ನು ಪರಿಸರ ಜೀರ್ಣಸಿಕೊಳ್ಳುವುದಿಲ್ಲ.



ಸೊಳ್ಳೆಗಳ ನಿಯಂತ್ರಣಕ್ಕಾಗಿ DDT ಪಿಚಕಾರಿ ಮಾಡುವುದರಿಂದ ಮನುಷ್ಯರ ಮೇಲೆ ಪಕ್ಷಿಗಳ ಮೇಲೆ ಬಿಳುವ ಪ್ರಭಾವ ಕುರಿತು 'ರಾಚೆಲ್ ಕಾರ್ಸನ್' ಎನ್ನವು ಮಹಿಳೆ 1962ರಲ್ಲಿಯೇ 'ಸೈಲೆಂಟ್ ಸ್ಪ್ರಿಂಗ್' (ನಿಶ್ಯಬ್ಧ ವಸಂತ) ಎನ್ನುವ ಪುಸ್ತಕ ಬರೆದಿದ್ದಾರೆ. ಕ್ರಿಮಿನಾಶಕ ಔಷಧಗಳಲ್ಲಿನ ಭಾರಲೋಹಗಳು ಪರಿಸರದಲ್ಲಿ ಕರಗಿ ಹೋಗದೇ ಜೀವಿಗಳಲ್ಲಿ ಸೇರಿಕೊಳ್ಳುತ್ತದೆ. DDT ಇರುವ ನೀರು ಕೆರೆಗಳಲ್ಲಿ ಸೇರಿ ಕಲುಷಿತ ಮಾಡುತ್ತದೆ. DDT ಯಲ್ಲಿನ ವಿಷ ಪದಾರ್ಥವು ಆ ಕೆರೆಗಳಲ್ಲಿರುವ ಮೀನುಗಳಲ್ಲಿ ಹೋಗಿ ಸೇರಿಕೊಳ್ಳುತ್ತದೆ. ಈ ವಿಷ ಪ್ರಮಾಣವು ಕಡಿಮೆ ಇರುವುದರಿಂದ ಮೀನುಗಳು ಸಾಯುವುದಿಲ್ಲ. ಆದರೆ ಒಂದು ಪಕ್ಷಿ ಅನೇಕ ಮೀನುಗಳನ್ನು ತಿಂದಾಗ ಅವುಗಳಲ್ಲಿಯ ವಿಷ ಪ್ರಮಾಣವು ಆ ಪಕ್ಷಿಯನ್ನು ಸಾಯಿಸಲು ಸರಿಹೋಗುತ್ತದೆ. ಮಾನವನ ಚರ್ಯೆಗಳು ಸರಿಮಾಡಲಾರದಷ್ಟು ವಿಧವಾಗಿ ಪ್ರಕೃತಿಯನ್ನು, ಮನುಕುಲವನ್ನು ಇದು ನಾಶನ ಮಾಡುತ್ತದೆಂದು ಅವರು ಕಂಡುಕೊಂಡ ಅಂಶಗಳು ನಿರೂಪಿಸುತ್ತವೆ.

ಭಾರತದೇಶದಲ್ಲಿ ಎಂಡೋಸಲ್ಫನ್ ಎನ್ನುವ ರಸಾಯನಿಕ ಕ್ರಿಮಿನಾಶಕದ ಹಾನಿಕಾರಕ ಪ್ರಭಾವವನ್ನು ನೋಡಿದ್ದೇವೆ. 1976ರಲ್ಲಿ ಅಂಟು ಮಾವಿನ ತೋಟಗಳಲ್ಲಿ ಕ್ರಿಮಿಯಿಂದ ರಕ್ಷಿಸಲು ಕೇರಳ ರಾಜ್ಯ ಸರ್ಕಾರವು ಹೆಲಿಕ್ಯಾಪಟ್ಟರ್‌ನಿಂದ 15000 ಎಕರೆಗಳಲ್ಲಿ ಈ ಕ್ರಿಮಿನಾಶಕವನ್ನು ಪಿಚ್‌ಕಾಯಿ ಮಾಡಿಸಿತು. ಕೇರಳದಲ್ಲಿನ ಉತ್ತರ ಪ್ರಾಂತವಾದ ಕಾಸರಗೋಡು ಜಿಲ್ಲೆಯಲ್ಲಿ ಇದು ನಡೆಯಿತು. ಈ ಕೆಲಸ 25 ವರ್ಷಗಳ ಕಾಲ

SCERT TELANGANA

ಮುಂದುವರಿಯಿತು. ಗಾಳಿ, ನೀರು, ಪರಿಸರ ಎಲ್ಲವೂ ಎಂಡೋಸಲ್ಫಾನ್‌ನಿಂದ ಕಲುಷಿತವಾಯಿತು. ಇದರ ಪಿಚ್‌ಕಾರಿಯಿಂದ ಸ್ಥಾನಿಕ ಪ್ರಜೆಗಳಲ್ಲಿ, ಪ್ರತ್ಯೇಕಿಸಿ, ವ್ಯವಸಾಯ ಕೂಲಿಗಳಲ್ಲಿ ತುಂಬಾ ತೀವ್ರ ಆರೋಗ್ಯ ಸಮಸ್ಯೆಗಳು ತಲೆದೋರಿದವು. ಇದರಿಂದ ಕನಿಷ್ಠ 5,000 ಜನರು ಮರಣ ಹೊಂದಿದರು. ಅದಕ್ಕಿಂತ ಹೆಚ್ಚಿನ ಜನರು ಅವಯವ ಲೋಪಗಳೊಂದಿಗೆ, ಕ್ಯಾನ್ಸರ್‌ನಿಂದ ಮರಣಕ್ಕಿಂತಲೂ ಅತಿದುರ್ಬರವಾದ ಜೀವನವನ್ನು ಸಾಗಿಸುತ್ತಿದ್ದಾರೆ.

ಇತ್ತೀಚಿನ ಕಾಲದಲ್ಲಿ ನ್ಯಾಯಸ್ಥಾನ ಆದೇಶಗಳ ಫಲಿತವಾಗಿ ಕೆಲವು ವರ್ಷಗಳವರೆಗೂ ಎಂಡೋಸಲ್ಫಾನ್ ಪಿಚ್‌ಕಾರಿ ನಿಲ್ಲಿಸಿದ್ದಾರೆ. ಕ್ರಮವಾಗಿ ರೋಗಗಳು ಕಡಿಮೆಯಾಗಿ, ಪ್ರಜೆಗಳ ಆರೋಗ್ಯವು ಗುಣಮಟ್ಟವಾಗುತ್ತಿದೆ.

- ಪರ್ಯಾವರಣವನ್ನು ''ಸಹಜ ಬಂಡವಾಳ'' ಎಂದೂ ಸಹ ಕರೆಯುವರು. 9ನೇ ಅಧ್ಯಾಯದಲ್ಲಿ ಬಂಡವಾಳದ ನಿರ್ವಚನೆಯನ್ನು ಮತ್ತೊಂದು ಸಾರಿ ನೋಡಿರಿ ಪರ್ಯಾವರಣವನು ಸಹಜ ಬಂಡವಾಳ ಎಂದು ಏಕೆ ಕರೆಯುವರು ?
- ನೀರನ್ನು ಉಭಯ ಆಸ್ತಿ ಎಂದು ಏಕೆ ಪರಿಗಣಿಸುವರು ?
- ಎಂಡೋಸಲ್ಫಾನ್ ವಿನಿಯೋಗವನ್ನು ನಿಲ್ಲಿಸಲು ನ್ಯಾಯಸ್ಥಾನಕ್ಕೆ ಹೇಗೆ ಹೋಗಬೇಕಾಯಿತು ?
- ಎಂಡೋಸಲ್ಫಾನ್ ಬಳಕೆಯನ್ನು ಆದೇಶಗಳಲ್ಲಿ ಆ ಕ್ರಿಮಿಔಷಧ ಬಳಸುವುದು ಜೀವಿಸುವ ಹಕ್ಕನ್ನು (ಸಂವಿಧಾನದಲ್ಲಿ 21ನೇ ಅಧಿಕರಣ) ಭಂಗಕಲಿಗಿಸುವುತ್ತದೆ ಎಂದು ಹೇಳಿದೆ ? ಜೀವಿಸುವ ಹಕ್ಕನ್ನು ಎಂಡೋಸಲ್ಫಾನ್ ಹೇಗೆ ಭಂಗ ಉಂಟು ಮಾಡಿದೆಯೋ ವಿವರಿಸಿರಿ.

ಇದು ಆ ಪ್ರಾಂತಕ್ಕೆ ಪರಿಮಿತವಾದ ಒಂದು ಉದಾಹರಣೆ ಮಾತ್ರವಲ್ಲ. ಆಧುನಿಕ ವ್ಯವಸಾಯ ದಲ್ಲಿ ಕ್ರಿಮಿನಾಶಕ ಔಷಧಗಳನ್ನು ಹೆಚ್ಚು ಹೆಚ್ಚಾಗಿ ಬಳಸುವುದರಿಂದ ಪರಿಸರದ ಮೇಲೆ, ಪ್ರಜೆಗಳ ಮೇಲೆ ಅದರ ಪ್ರಭಾವವನ್ನು ಕುರಿತು ಅನೇಕ ಅಧ್ಯಯನಗಳು ತಿಳಿಸಿ ಹೇಳಿವೆ. ವಿಚಾರಕರವಾದ ವಿಷಯ ಏನೆಂದರೆ ಉಪಯೋಗಿಸುವ ಕ್ರಿಮಿನಾಶಕವು 1% ಮಾತ್ರ ಕ್ರಿಮಿಗಳ ಮೇಲೆ ಪ್ರಭಾವ ತೋರಿಸುತ್ತದೆ. ಉಳಿದ ಔಷಧವು ಆಹಾರ, ನೀರು, ಗಾಳಿ, ಪರಿಸರದ ಮೂಲಕ ಮರಳಿ ನಮ್ಮಲ್ಲಿಯೇ ಸೇರುತ್ತದೆ.

ಪರಿಸರದ ಮೇಲೆ ಪ್ರಜೆಗಳ ಹಕ್ಕುಗಳು :

ಆಧುನಿಕ ಅಭಿವೃದ್ಧಿಗಿಂತ ದೊಡ್ಡ ಮೊತ್ತದಲ್ಲಿ ಪರಿಸರ ಸಮಸ್ಯೆಗಳು ಏರ್ಪಟ್ಟ ಅನೇಕ ಉದಾಹರಣೆಗಳು ಈ ದಿನ ನಮ್ಮುಂದಿದೆ. ದೊಡ್ಡ ಆಣೆಕಟ್ಟುಗಳ ನಿರ್ಮಾಣವು ಇದಕ್ಕೆ ಒಂದು ಉದಾಹರಣೆ. ಇದರ ಪರಿಣಾಮಗಳು ಬಹಳ ತೀವ್ರವಾಗುತ್ತವೆ.

ಭಾರತದೇಶದಲ್ಲಿ ನರ್ಮದಾ ಕಣಿವೆ ಅಭಿವೃದ್ಧಿಯ ಯೋಜನೆಯು ಒಂದು ದೊಡ್ಡ ಆಣೆಕಟ್ಟು. ಇದು ಪ್ರಪಂಚದಲ್ಲಿನ ಅತಿದೊಡ್ಡ ಜಲವಿದ್ಯುತ್ ಪ್ರಾಜೆಕ್ಟುಗಳಲ್ಲಿ ಒಂದು. ಇದರಿಂದ ವಿದ್ಯುತ್ ಉತ್ಪತ್ತಿ, ನೀರಾವರಿ ಸೌಲಭ್ಯ, ಪ್ರವಾಹಗಳ ನಿಯಂತ್ರಣೆ ಮೊದಲಾದ ಪ್ರಯೋಜನೆಗಳು ಉಂಟಾಗುತ್ತವೆ ಎಂದು ಹೇಳಿದ್ದಾರೆ. ಈ ಪ್ರಾಜೆಕ್ಟ್‌ನಿಂದ 3000 ದೊಡ್ಡ, ಸಣ್ಣ ಆಣೆಕಟ್ಟುಗಳಿಂದ ಪರಿಸರಕ್ಕೆ ಆಗುವ ನಷ್ಟಕ್ಕಿಂತ ಇದು ಹೆಚ್ಚಾಗಿದೆಂದು ಹೇಳುತ್ತಾರೆ. ನಿರ್ಮಿಸಿದ ಆಣೆಕಟ್ಟುಗಳಲ್ಲಿಯೇ ಸರ್ದಾರ್ ಸರೋವರ ಡ್ಯಾಮ್ ಬಹಳ ದೊಡ್ಡದು, ಇದರಿಂದ 37,000 ಹೆಕ್ಟಾರ್ ಅಡವಿ ಭೂಮಿ, ವ್ಯವಸಾಯ ಭೂಮಿ ಮುಳುಗಿ ಹೋಗುತ್ತದೆಂದು, ಐದು ಲಕ್ಷಗಳಿಗಿಂತಲೂ ಅಧಿಕ ಜನರು ಇದರಿಂದ ನಿರಾಶ್ರಿತರಾಗುತ್ತಾರೆಂದು ಹೇಳಿದೆ. ಭಾರತದೇಶದಲ್ಲಿ ಅತ್ಯಂತ ಫಲವತ್ತಾವಾದ ಭೂಮಿಗಳು ಇದರಿಂದ ನಾಶವಾಗುತ್ತವೆ. ಸಾವಿರಾರು ಎಕರೆಗಳಲ್ಲಿ ಅರಣ್ಯಭೂಮಿ, ವ್ಯವಸಾಯಭೂಮಿ ಮುಳುಗಿ ಹೋಗುವುದರಿಂದ ಜೀವ ವೈವಿಧ್ಯತೆಯಿಂದ ಮಾನವ ಜೀವನ ನಾಶವಾಗುತ್ತವೆ. ನಿರ್ವಾಸಿತರಲ್ಲಿ ಅಧಿಕ ಜನರು ಆದಿವಾಸಿಗಳು ಮತ್ತು ದಲಿತರೇ,

ಮಧ್ಯಪ್ರದೇಶದಲ್ಲಿನ ಝುಬುವಾ ಜಿಲ್ಲಾ, ಜಲಸಂಧಿ ಗ್ರಾಮಕ್ಕೆ ಸೇರಿದ ಬಾವಾಮಹಾಲಿಯಾ 1994ರಲ್ಲಿ ಮಧ್ಯಪ್ರದೇಶ್ ಮುಖ್ಯಮಂತ್ರಿಗೆ ಈ ಕೆಳಗಿನ ಉತ್ತರವನ್ನು ಬರೆದಿದ್ದಾನೆ. ಇದು ಗಿರಿಜನ ಭಾಷೆ ಭಿಲಾಲದಲ್ಲಿ ರಿಕಾರ್ಡ್ ಮಾಡಿದಾಗ ಹಿಂದಿನಲ್ಲಿ ಅನುವಾದಿಸಿದ್ದಾರೆ. ಆ ಉತ್ತರದಲ್ಲಿನ ಕೆಲಭಾಗವನ್ನು ಇಲ್ಲಿ ಕೊಡುತ್ತಿದ್ದೇವೆ. ಇದು ಅಭಿವೃದ್ಧಿ ಎನ್ನುವ ಭಾವನೆಯನ್ನು ಪ್ರಶ್ನಿಸುತ್ತದೆ.

SCERT TELANGANA

ಪ್ರೀತಿಯ ದಿಗ್ವಿಜಯ್‌ಸಿಂಗ್ ಅವರಿಗೆ,

ಝುಬುವಾ ಜಿಲ್ಲೆಯಲ್ಲಿನ ಜಲಸಿಂಧೀ ಗ್ರಾಮ ಪ್ರಜೆಗಳಾದ ನಾವು ಮಧ್ಯಪ್ರದೇಶದ ಮುಖ್ಯಮಂತ್ರಿಯಾದ ನಿಮಗೆ ಈ ಉತ್ತರವನ್ನು ಬರೆಯುತ್ತಿದ್ದೇವೆ.

ನಾವು ನದಿ ತೀರ ಗ್ರಾಮದ ಪ್ರಜೆಗಳು, ಉತ್ತುಂಗ ನರ್ಮದಾ ತೀರದಲ್ಲಿ ನಾವಿದ್ದೇವೆ. ಈ ವರ್ಷ (1994), ಸರ್ದಾರ್ ಸರೋವರ್ ಆಣೆಕಟ್ಟಿನಿಂದ ಮಧ್ಯಪ್ರದೇಶ್‌ದಲ್ಲಿ ಮುಳುಗುವ ಗ್ರಾಮಗಳಲ್ಲಿ ಮೊದಲನೇ ಗ್ರಾಮ ನಮ್ಮ ಜಲಸಿಂಧೀ ಗ್ರಾಮ. ನಮ್ಮ ಗ್ರಾಮದೊಂದಿಗೆ ಸಾಕರ್ಜಾ, ಕಕರ್‌ಶಿಲಾ, ಅಕಾಡಿಯಾದಂತಹ ನಾಲ್ಕೈದು ಇತರ ಗ್ರಾಮಗಳು ಕೂಡ ಮುಳುಗಿ ಹೋಗುತ್ತವೆ... ನಮ್ಮ ಊರೊಳಗೆ ನೀರು ಬಂದು, ಮನೆ, ಹೊಲಗಳು ಮುಳುಗಿದಾಗ ನಾವು ಕೂಡ ಮುಳುಗಿ ಹೋಗುತ್ತೇವೆ... ಇದು ನಮ್ಮ ಗಟ್ಟಿ ನಿರ್ಣಯ.

ಮುಳುಗಡೆಗೆ ಗುರಿಯಾಗುತ್ತಿರುವ ಜಲಸಿಂಧೀ ಗ್ರಾಮದ ಆದಿವಾಸಿ ಪ್ರಜೆಗಳು ತಾವು ಕೂಡಾ ಮುಳುಗಿ ಹೋಗಲು ಸಿದ್ಧರಾಗಿದ್ದಾರೆಂದು ತಿಳಿಸುವುದಕ್ಕೆ ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇವೆ.

ನೀವು, ನಿಮ್ಮ ಹಾಗೆ ಪಟ್ಟಣಗಳಲ್ಲಿ ಇರುವವರೆಲ್ಲರೂ ಗುಡ್ಡಗಳಲ್ಲಿ ನಿವಾಸಿಸುವ ನಾವು ಬಡವರೆಂದೂ, ಅಡವಿಗಳಲ್ಲಿ ಕೋತಿಗಳ ಮಾದರಿ ಜೀವಿಸುವವರೆಂದು ಅಂದುಕೊಳ್ಳುತ್ತಿದ್ದೀರಿ. "ಗುಜರಾತ್‌ನಲ್ಲಿಯ ಮೈದಾನ ಪ್ರಾಂತಕ್ಕೆ ಹೋಗಿರಿ, ನಿಮ್ಮ ಪರಿಸ್ಥಿತಿ ಸುಧಾರಿಸುತ್ತದೆ. ನೀವು ಅಭಿವೃದ್ಧಿಯಾಗುತ್ತೀರಿ," ಎಂದೂ ನಮಗೆ ಸಲಹೆ ನೀಡುತ್ತೀರಿ, ಆದರೆ ನಾವು ಎಂಟು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ-ನಾವು ಲಾಠೀ ಒಡೆತಗಳ ರುಚಿ ನೋಡಿದ್ದೇವೆ. ಅನೇಕ ಸಲ ಜೈಲಿಗೆ ಹೋಗಿದ್ದೇವೆ. ಅಂಜನವರ ಗ್ರಾಮದಲ್ಲಿ ಪೋಲೀಸರು ನಮ್ಮ ಮೇಲೆ ಗುಂಡು ಹಾರಿಸಿದ್ದಾರೆ-ನಮ್ಮ ಮನೆಗಳನ್ನು ಧ್ವಂಸ ಮಾಡಿದ್ದಾರೆ... ಗುಜರಾತ್‌ಗೆ ಹೋದರೆ ನಿಮ್ಮ ಪರಿಸ್ಥಿತಿ ಚೆನ್ನಾಗಿರುತ್ತದೆ ಎಂದರೆ ಈಗ ಕೂಡ ಅಲ್ಲಿಗೆ ಹೋಗಲು ನಮ್ಮವರು ಏಕೆ ಸಿದ್ಧವಿಲ್ಲ ?

ನಿಮ್ಮ ಅಧಿಕಾರಿಗಳು ಪಟ್ಟಣಗಳಲ್ಲಿರುವ ಪ್ರಜೆಗಳು ಇಳಿಜಾರಿರುವ ಬೆಟ್ಟ ಪ್ರದೇಶಗಳು ನಿವಾಸಕ್ಕೆ ಅಷ್ಟು ಅನುಕೂಲವಲ್ಲ ಎಂದೂ ಭಾವಿಸುತ್ತಾರೆ. ಆದರೆ ಅಡವಿಯಲ್ಲಿ ನರ್ಮದಾ ನದಿ ತೀರದಲ್ಲಿ ನಮ್ಮ ಭೂಮಿಗಳಿರುವುದು ನಮಗೆ ಎಷ್ಟೋ ಉಪಯೋಗಗ, ಎಷ್ಟೋ ತಲೆಮಾರಿನಿಂದ ನಾವು ಇಲ್ಲಿಯೇ ನಿವಾಸ ಮಾಡುತ್ತಿದ್ದೇವೆ. ಈ ಭೂಮಿಯ ಮೇಲೆಯೇ ನಮ್ಮ ಪೂರ್ವಿಕರು ಅರಣ್ಯಗಳನ್ನು ಕಡಿದು, ದೇವತೆಗಳನ್ನು ಪೂಜಿಸಿ, ನೆಲವನ್ನು ಚೆನ್ನಾಗಿ ಮಾಡಿದ್ದಾರೆ. ಪ್ರಾಣಿಗಳನ್ನು ಸಾಕುತ್ತಾ, ಗ್ರಾಮಗಳನ್ನು ಏರ್ಪಾಟು ಮಾಡಿ, ಅದೇ ಭೂಮಿಯನ್ನು ಇಂದಿಗೂ ನಾವು ಬೇಸಾಯ ಮಾಡುತ್ತಿದ್ದೇವೆ. ನಾವು ಬಡವರೆಂದು ಅಂದುಕೊಳ್ಳುತ್ತಿದ್ದೀರಿ, ಆದರೆ ನಾವು ಬಡವರಲ್ಲ, ಇಲ್ಲಿಯೇ ನಮ್ಮ ಮನೆಗಳನ್ನು ನಾವೇ ನಿರ್ಮಿಸಿಕೊಂಡಿದ್ದೇವೆ. ನಾವು ರೈತರು ಇಲ್ಲಿಯೇ ಚೆನ್ನಾಗಿದೆ. ನಾವು ನೆಲವನ್ನು ಉಳುಮೆ ಮಾಡಿ ಜೀವನ ಮಾಡುತ್ತೇವೆ. ಕಡಿಮೆ ಮಳೆಯಿಂದಲೇ ನಮ್ಮ ಆಹಾರವನ್ನು ನಾವೇ ಬೆಳಸುತ್ತಿದ್ದೇವೆ. ಮೆಕ್ಕೆಜೋಳ ನಮ್ಮ ಹೊಟ್ಟೆ ತುಂಬಿಸುತ್ತದೆ. ಸಾಗು ಭೂಮಿ ಸ್ವಲ್ಪ ಊರಲ್ಲಿ ಸ್ವಲ್ಪ ಅಡವಿಯಲ್ಲಿದೆ. ಅಡವಿ ಭೂಮಿಯಲ್ಲಿ ಸಜ್ಜೆ, ಜೋಳ, ಮೆಕ್ಕೆಜೋಳ-ಕಡಲೆ-ಉದ್ದಿನಬ್ಯಾಳೆ, ಎಳ್ಳು, ಮಡಿಕೆಕಾಳು, ನೆಲಗಡಲೆಗಳನ್ನು ಬೆಳೆಸುತ್ತೇವೆ. ಬೆಳೆಗಳನ್ನು ಬದಲಿಸುವುದು ಕೂಡಾ ಮಾಡುತ್ತೇವೆ. ನಮ್ಮ ಆಹಾರವೆಲ್ಲಾ ಇವುಗಳಿಂದ ಬರುತ್ತದೆ.

ಗುಜರಾತ್‌ನಲ್ಲಿ ಏನು ಬೆಳೆಸುತ್ತಾರೆ ? ಗೋಧಿ, ಜೋಳ, ತೊಗರಿ, ಹತ್ತಿ-ತಿನ್ನಲು ಕಡಿಮೆ-ಮಾರುಕಟ್ಟೆಯಲ್ಲಿ ಮಾರುವುದು ಅಧಿಕ. ನಾವು ತಿನ್ನಲು ಬೆಳೆಗಳನ್ನು ಬೆಳೆಸುತ್ತೇವೆ. ಬಟ್ಟೆಗಳು ಕೊಳ್ಳಲು ಮಾತ್ರ ಹೆಚ್ಚಿನ ಉತ್ಪತ್ತಿಯನ್ನು ಮಾರುತ್ತೇವೆ.

SCERT TELANGANA

ನಾವು ಶ್ರಮಪಟ್ಟು ಅನೇಕ ವಿಧವಾದ ಆಹಾರ ಧಾನ್ಯಗಳನ್ನು ಬೆಳೆಸುತ್ತೇವೆ. ನಮಗೆ ಹಣದೊಂದಿಗೆ ಕೆಲಸವಿಲ್ಲ. ನಾವು ನಮ್ಮ ಬೀಜಗಳನ್ನೇ ಬಳಸುತ್ತೇವೆ. ಪಶುಗಳ ಗೊಬ್ಬರವನ್ನೇ ಹೊಲಗಳಿಗೆ ಹಾಕುತ್ತೇವೆ. ಇದರಿಂದ ನಮಗೆ ಒಳ್ಳೆಯ ಬೆಳೆ ಬರುತ್ತದೆ. ಗುಜರಾತಿನಲ್ಲಿ ವ್ಯವಸಾಯಕ್ಕೆ ಬಹಳ ಹಣಬೇಕು, ಅಷ್ಟು ಹಣ ನಮಗೆ ಎಲ್ಲಿಂದ ಬರುತ್ತದೆ. ಅಲ್ಲಿ ನಮಗೆ ಯಾರು ಗೊತ್ತು ? ಯಾವ ಬಡ್ಡಿ ವ್ಯಾಪಾರಸ್ಥ ನಮಗೆ ಸಾಲವನ್ನು ಕೊಡುವನು ? ಉತ್ತಮ ಬೆಳೆ ಬರದಿದ್ದರೆ, ನಮ್ಮ ಹತ್ತಿರ ಹಣವಿರುವುದಿಲ್ಲ ಅಥವಾ ನಮ್ಮ ಭೂಮಿಗಳನ್ನೇ ಅಡವಿಡಬೇಕಾಗುತ್ತದೆ (ಒತ್ತಿಹಿಡಬೇಕಾಗುತ್ತದೆ.)

ಇಲ್ಲಿ ನಾವು ನೀರಿನ ಹರಿವೆಗೆ ಕಾಲುವೆಗಳು ಮಾಡಿ ನಮ್ಮ ಬೆಳೆಗಳಿಗೆ ನೀರು ಇಡುತ್ತೇವೆ. ನಮಗೆ ವಿದ್ಯುತ್ ಸೌಕರ್ಯವಿದ್ದರೆ ನರ್ಮದಾ ನದಿಯಿಂದ ನೀರು ಮೇಲೆ ಹಾಯಿಸಿ, ಚಳಿಗಾಲದ ಬೆಳೆಗಳನ್ನು ಬೆಳೆಸುತ್ತಿದ್ದೇವು. ಸ್ವಾತಂತ್ರ್ಯ ಬಂದು 45 ವರ್ಷಗಳಾದರೂ, ನದಿ ತೀರ ಗ್ರಾಮಗಳಿಗೆ ವಿದ್ಯುತ್ ಸೌಕರ್ಯವಿಲ್ಲ, ನದಿ ಜಲಗಳಿಂದ ನೀರಾವರಿಲ್ಲ.

... ನಮಗೆ ಅರಣ್ಯದಲ್ಲಿ ಪ್ರವಹಿಸುವ ನೀರು, ಹುಲುಸಾದಮೇವು ಇದೆ. ವ್ಯವಸಾಯಕ್ಕಿಂತ ನಮಗೆ ಪಶುಸಂಪತ್ತು ಬಹಳ ಮುಖ್ಯ. ನಾವು ಕೋಳಿಗಳು, ಕುರಿಗಳು, ಆಕಳು, ಎಮ್ಮೆಗಳನ್ನು ಸಾಕುತ್ತೇವೆ. ಕೆಲವರಿಗೆ 2-4 ಎಮ್ಮೆಗಳಿದ್ದರೆ ಇನ್ನೂ ಕೆಲವರಿಗೆ 8-10 ಇವೆ. ಸರಾಸರಿ ಪ್ರತಿಯೊಬ್ಬರಿಗೂ 10-20-40 ಮೇಕೆಗಳಿದ್ದಾವೆ. ಗುಜರಾತ್‌ನಿಂದ ಜನರು ಬಂದು ನಮ್ಮ ಗುಡ್ಡಗಳಲ್ಲಿ ತಮ್ಮ ದನಗಳನ್ನು ಮೇಯಿಸುವರು, ಇಲ್ಲಿ ಮೇವು-ನೀರು ಸಂಮೃದ್ಧಿಯಾಗಿ ಲಭಿಸುತ್ತವೆ.

... ಅರಣ್ಯವೇ ನಮಗೆ ಸಾಲ ನೀಡುತ್ತವೆ. ಅರಣ್ಯವೇ ನಮಗೆ ಬ್ಯಾಂಕ್, ಕಷ್ಟಕಾಲದಲ್ಲಿ ನಾವು ಅರಣ್ಯಕ್ಕೆ ಹೋಗುತ್ತೇವೆ. ಅರಣ್ಯದಲ್ಲಿ ಸಿಗುವ ಟೇಕು, ಬಿದಿರುನಿಂದ ನಾವು ಮನೆಕಟ್ಟಿಕೊಳ್ಳುತ್ತೇವೆ. ನಿಂಗೋಡಿ, ಹಿಯಾಲೀ, ರಕ್ತದ ಬಿಡಿರನ್ನು ಸೀಳಿ ತಡಿಕೆಗಳನ್ನು ಎಣೆಯುತ್ತೇವೆ. ಅರಣ್ಯದಲ್ಲಿನ ವಸ್ತುಗಳೊಂದಿಗೆ ಬುಟ್ಟಿಗಳು, ಮಂಚಗಳು, ನಗಕೂರಿಗೆಗಳನ್ನು ತಯಾರು ಮಾಡುವೆವು-ನಾವು ಅರಣ್ಯದಲ್ಲಿನ ಎಲೆಗಳನ್ನು ತಿನ್ನುತ್ತೇವೆ. Hegwe, Mahia, Amli, Goirdi, Bhanjan ಈ ಎಲೆಗಳೆಲ್ಲವನ್ನು ತಿನ್ನುತ್ತೇವೆ. ಬರಗಾಲ ಸಂಭವಿಸಿದರೆ ಅರಣ್ಯದಲ್ಲಿನ ಬೇರುಗಳು, ಗಡ್ಡೆಗಳನ್ನು ತಿಂದು ಬದುಕುತ್ತೇವೆ. ನಾವು ರೋಗಗಳಿಗೆ ತುತ್ತಾದಾಗ ನಮ್ಮ ವೈದ್ಯರು ಅರಣ್ಯದಿಂದ ಎಲೆ, ಬೇರುಗಳು, ಬೆರಡುಗಳನ್ನು ತಂದು ಗುಣಪಡಿಸುತ್ತಾರೆ... ನಮಗೆ ಅರಣ್ಯದಲ್ಲಿನ ಪ್ರತಿಗಿಡವು ಪೊದೆಯು, ಸಸಿಗಳ ಹೆಸರು ಗೊತ್ತು. ಅವುಗಳ ಉಪಯೋಗವು ಗೊತ್ತು. ಅರಣ್ಯ ಇಲ್ಲದ ಪ್ರಾಂತಗಳಲ್ಲಿ ನಾವು ವಾಸಿಸುವಂತೆಯಾದರೆ ಎಷ್ಟೋ ತಲೆಮಾರಿನಿಂದ ಕಾಪಾಡಿಕೊಂಡು ಬಂದಿರುವ ಈ ಜ್ಞಾನವೆಲ್ಲಾ ಉಪಯೋಗ ವಿಲ್ಲದಂತಾಗುತ್ತದೆ. ನಿಧಾನವಾಗಿ ಇದನ್ನು ಮರೆಯುತ್ತೇವೆ.

...ನದಿ ಹಾಡನ್ನು ಹಾಡುವುದರ ಮೂಲಕ ನಮ್ಮ ದೇವರನ್ನು ಪೂಜಿಸುತ್ತೇವೆ. ನಾವಲ್, ದಿವಸ್ ಹಬ್ಬಗಳಲ್ಲಿ ಈ ಪ್ರಪಂಚವು ಹೇಗೆ ಏರ್ಪಟ್ಟಿದೆ ? ಮನುಷ್ಯರು ಹೇಗೆ ಜನಿಸಿದರು ? ಈ ನದಿ ಎಲ್ಲಿಂದ ಬಂದಿದೆ ? ಎಂಬುದನ್ನು ವಿವರಿಸುತ್ತಾ ನಾವು ನದಿ ಹಾಡನ್ನು ಹಾಡುತ್ತೇವೆ ... ನಾವು ಮೇಲಿಂದ ಮೇಲೆ ಮೀನು ತಿನ್ನುತ್ತೇವೆ, ಇದ್ದಕ್ಕಿದ್ದಂತೆ ಯಾರಾದರೂ ಅತಿಥಿಗಳು ಬಂದರೆ ಮೀನು ನಿರಂತರವಾಗಿ ದೊರೆಯುತ್ತದೆ. ಮೇಲಿಂದ ನದಿಯು ರೇವಮಣ್ಣನ್ನು ತಂದು ಬೀಡುತ್ತದೆ... ನಮ್ಮ ಮಕ್ಕಳು ನದಿ ತೀರದಲ್ಲಿ ಆಡವರು-ಈಜಾಡುವರು-ಈ ನದಿ ವರ್ಷವೆಲ್ಲಾ ಹರಿಯುತ್ತಾ ಇರುತ್ತದೆ. ಅದಕ್ಕಾಗಿ ನಮ್ಮ ಪಶುಗಳಿಗೆ ನೀರು ಸದಾ ಸಿಗುತ್ತದೆ. ನದಿ ತೀರದಲ್ಲಿ ಸಂತೃಪ್ತಿಕರವಾದ ಜೀವನವನ್ನು ಸಾಗಿಸುತ್ತಿದ್ದೇವೆ. ಅನೇಕ ತಲೆಮಾರಿನಿಂದ ಇಲ್ಲಿಯೇ ಇದ್ದೇವೆ. ಈ ನದಿ ಮೇಲೆ - ಅರಣ್ಯದ ಮೇಲೆ ನಮಗೆ ಹಕ್ಕುಗಳಿವೆಯಾ-ಇಲ್ಲವಾ ? ನಿಮ್ಮ ಸರ್ಕಾರ ಈ ಹಕ್ಕನ್ನು ಗುರ್ತಿಸುತ್ತಿಸುವುದಿಲ್ಲವಾ ?

ಪಟ್ಟಣಗಳಲ್ಲಿ ನೀವು ಬೇರೆ ಬೇರೆ ಮನೆಗಳಲ್ಲಿರುತ್ತೀರಿ, ಒಬ್ಬರ ಸುಖದುಃಖಗಳು ಒಬ್ಬರಿಗೆ ಹಿಡಸವು, ನಾವು ನಮ್ಮ ವಂಶದೊಂದಿಗೆ, ನಮ್ಮ ಬಂಧುಗಳೊಂದಿಗೆ, ನಮ್ಮವರೊಂದಿಗೆ ಇರುತ್ತೇವೆ. ನಾವೆಲ್ಲರೂ ಸೇರಿ, ಕಷ್ಟಪಟ್ಟು ಒಂದೇ ದಿನದಲ್ಲಿ ಮನೆಯನ್ನು ಕಟ್ಟುತ್ತೇವೆ. ಹೊಲಗಳಲ್ಲಿ ಕಳೆ ತೆಗೆಯುತ್ತೇವೆ. ಎದುರಾದ ಸಣ್ಣಪುಟ್ಟ ಕೆಲಸಗಳನ್ನು ಪೂರ್ತಿಗೊಳಿಸುವೆವು. ಗುಜರಾತಿನಲ್ಲಿ ಯಾರು ನಮ್ಮ ಸಹಾಯಕ್ಕೆ ಬಂದು ನಮ್ಮ ಕೆಲಸದ ಭಾರ ಕಡಿಮೆ ಮಾಡುತ್ತಾರೆ. ದೊಡ್ಡ ರೈತರು ಬಂದು ನಮ್ಮ ಹೊಲಗಳಲ್ಲಿ ಕಳೆ ತೆಗೆಯುತ್ತಾರಾ ? ನಮ್ಮ ಮನೆ ಕಟ್ಟುತ್ತಾರೆಯೇ ? ಇಲ್ಲಿ ನಮ್ಮ ಗ್ರಾಮಗಳಲ್ಲಿ ನಮ್ಮವರಿಂದ ಇಷ್ಟ ಸಹಾಯ ಏಕೆ ಲಭಿಸುತ್ತದೆ. ಏಕೆಂದರೆ ನಾವೆಲ್ಲಾ ಒಂದೇ ವಿಧವಾಗಿದ್ದೇವೆ. ನಮ್ಮದೆಲ್ಲಾ ಒಂದೇ ಅವಗಾಹನೆ. ಕೆಲವು ಜನರು ಮಾತ್ರ ಇಲ್ಲಿ ಗುತ್ತಿಗೆದಾರರಿದ್ದಾರೆ. ಪ್ರತಿಯೊಬ್ಬರಿಗೂ ಭೂಮಿದೆ. ಯಾವೊಬ್ಬರಿಗೂ ಹೆಚ್ಚಿನ ಭೂಮಿಲ್ಲ. ಆದರೂ ಎಲ್ಲರಿಗೂ ಸ್ವಲ್ಪ ಭೂಮಿದೆ. ನಾವು ಗುಜರಾತಿಗೆ ಹೋದರೆ ದೊಡ್ಡ ರೈತರು ನಮ್ಮನ್ನು ತುಳಿದುಬಿಡುತ್ತಾರೆ. ನಲವತ್ತು, ಐವತ್ತು ವರ್ಷಗಳ ಹಿಂದೆಯೇ

SCERT TELANGANA

ಅಲ್ಲಿನ ಆದಿವಾಸಿಗಳ ಭೂಮಿಯನ್ನು ಅವರು ಕಸೆದುಕೊಂಡುಬಿಟ್ಟರು. ಇಂದಿಗೂ ಇದು ಮುಂದುವರಿಯುತ್ತಲಿದೆ. ನಾವೇನೂ ಅಲ್ಲಿ ಹೊಸಬರು- ಅಲ್ಲಿನ ಭಾಷೆ ತಿಳಿಯದು, ಸಂಪ್ರದಾಯಗಳು ಗೊತ್ತಿಲ್ಲ, ಹಿರಿತನವೆಲ್ಲಾ ಅವರದು ಹೆಚ್ಚು ಹಣದೊಂದಿಗೆ ವ್ಯವಸಾಯ ಮಾಡಬೇಕಾದಾಗ ನಮ್ಮ ಭೂಮಿಗಳನ್ನು ಅವರಿಗೆ ಒತ್ತೆಹಿಟ್ಟು (ಅಡವಿಟ್ಟು) ಕೊಡಬೇಕು. ನಿಧಾನವಾಗಿ ಅವರು ಇವುಗಳನ್ನು ಕಬ್ಜಾ ಮಾಡುತ್ತಾರೆ. ಅಲ್ಲಿರುವ ಆದಿವಾಸಿಗಳ ಭೂಮಿಯನ್ನೇ ತೆಗೆದುಕೊಂಡಾಗ, ನಮ್ಮ ಭೂಮಿ ಬಿಡುತ್ತಾರೆಯೇ ಆಗ ನಮಗೆ ಬೇರೆ ಭೂಮಿ ಯಾರು ಕೊಡುತ್ತಾರೆ ? ಇದು ನಮ್ಮ ಪೂರ್ವಿಕರದು ಇದರ ಮೇಲೆ ನಮಗೆ ಹಕ್ಕಿದೆ. ಇದನ್ನು ಕಳೆದುಕೊಂಡರೆ ನಮ್ಮ ಕೈಗೆ ಕಬ್ಬಿಣದ ಚಲಿಕೆ, ಗಡಾರಗಳು ಬರುತ್ತವೆ. ಇನ್ನೇನು ಬರುವುದಿಲ್ಲ.

ನಮ್ಮೂರಿನ ದೇವತೆಗಳೆಲ್ಲರೂ ಇಲ್ಲಿಯೇ ಇದ್ದಾರೆ... ನಮ್ಮ ಪೂರ್ವಿಕರ ಜ್ಞಾಪಕಾರ್ಥವಾಗಿ ಇಟ್ಟಿರುವ ಕಲ್ಲುಗಳೆಲ್ಲಾ ಇಲ್ಲಿಯೇ ಇವೆ. ನಾವು ಕಾಲೋರಾನೋ, ರಾಜಾಪಾಂತೋ, ಇಂದಿರಾಜಾಗಳನ್ನು ಪೂಜಿಸುತ್ತೇವೆ. ಆಯಿಖಾಡಾ, ಬೇಡುಬಾಯಿನಿ ಕೂಡ ಪೂಜಿಸುವೆವು. ರಾಣಿ ಕಾಜೋಲ್ ನಮ್ಮ ದೊಡ್ಡದೇವತೆಯು, ಆಕೆ - ಕುಂಬಾಯಿ-ಕುಂದಾರಾಣಿಯರ ಬೆಟ್ಟಗಳು ಮದ್ವಾಡದಲ್ಲಿವೆ. ಇವರೆಲ್ಲರನ್ನು ಬಿಟ್ಟು ಹೋದರೆ ನಮಗೆ ಹೊಸ ದೇವತೆಗಳು ಎಲ್ಲಿಂದ ಬರುತ್ತಾರೆ ? ಇಂದಲ್, ದಿವಸ, ದಿವಾಲಿಯಂತಹ ಹಬ್ಬಗಳನ್ನ ನಡೆಸಲು ಎಲ್ಲ ಪ್ರಾಂತಗಳಿಂದ ಪ್ರಜೆಗಳು ಇಲ್ಲಿ ಬರುತ್ತಾರೆ. ಭಂಗೋರಿಯಾಗೆ ನಾವೆಲ್ಲಾ ಸಂತೆಗೆ ಹೋಗುತ್ತೇವೆ ? ಅಲ್ಲಿನ ನಮ್ಮ ಯುವಕರ ತಮ್ಮ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಗುಜರಾತ್‌ನಲ್ಲಿ ನಮ್ಮ ಹತ್ತಿರ ಯಾರು ಬರುತ್ತಾರೆ ?

ಗುಜರಾತ್‌ನಲ್ಲಿಯ ಭೂಮಿ ನಮಗೆ ಅನುಮೋದನೆ ಯೋಗ್ಯವಲ್ಲ. ನಿಮ್ಮ ನಷ್ಟಪರಿಹಾರ ಕೂಡ ನಮಗೆ ಸಮ್ಮತವಿಲ್ಲ - ನರ್ಮದಾ ನದಿ ಹೊಟ್ಟೆಯಿಂದ ಹುಟ್ಟಿದ್ದೇವೆ. ಅದರಲ್ಲಿಯೇ ಬೆರೆತು ಹೋಗಲು ನಾವು ಭಯಪಡುವುದಿಲ್ಲ.

ನಾವು ಮುಳುಗಿ ಹೋಗುತ್ತೇವೆ. ಆದರೆ ಇಲ್ಲಿಂದ ನಾವು ಕದಲುವುದಿಲ್ಲ !

ಬಾವಾ ಮಹಾಲಿಯ

- ಅಭಿವೃದ್ಧಿ ಭಾವನೆಗಳು ಎನ್ನುವ ಅಧ್ಯಾಯದಲ್ಲಿ ಒಬ್ಬರಿಗೆ ಅಭಿವೃದ್ಧಿಯಾದದ್ದು ಮತ್ತೊಬ್ಬರಿಗೆ ಅಭಿವೃದ್ಧಿಯಾಗದೇ ಇರಬಹುದೆಂದು ಓದಿದ್ದೇವೆ. ಇದನ್ನು ವಿವರಿಸಲು ಬಾವಾ ಮಹಾಲಿಯಾ ಉತ್ತರವನ್ನು ಉಪಯೋಗಿಸಿರಿ ?
- ಗಿರಿಜನರಿಗೆ ಬೇರೆ ರಾಷ್ಟ್ರಗಳಲ್ಲಿ ಪುನರಾವಾಸ ಕಲ್ಪಿಸಿದರೆ ಕೆಳಗೆ ಹೇಳುವ ವಿಷಯದಲ್ಲಿ ಪ್ರಸ್ತುತ ಅಭ್ಯಾಸಗಳಲ್ಲಿ ಯಾವ ಬದಲಾಗುತ್ತವೋ ತೋರಿಸಲು ಒಂದು ಪಟ್ಟಿಕೆ ತಯಾರು ಮಾಡಿರಿ. ಆಹಾರದ ಅಭ್ಯಾಸ, ವ್ಯವಸಾಯ, ಆರ್ಥಿಕ ಅಂಶಗಳು, ಅರಣ್ಯದೊಂದಿಗೆ ಸಂಬಂಧ-ಮತಾಚಾರ-ಮನೆಕಟ್ಟಿಕೊಳ್ಳುವುದು-ಸಾಮಾಜಿಕ ಸಂಬಂಧಗಳು.
- ಜೀವ ವೈವಿಧ್ಯತೆಯನ್ನು ಕಳೆದುಕೊಳ್ಳುವುದರ ಬಗ್ಗೆ ಉತ್ತರದಲ್ಲಿ ಹೇಗೆ ಹೇಳಿದ್ದಾರೆ.
- ಗಿರಿಜನರಲ್ಲಿ ಜೀವನೋಪಾಧಿ, ಸಂಸ್ಕೃತಿ, ಸಾಮಾಜಿಕ ಸಂಬಂಧಗಳು ಅರಣ್ಯದೊಂದಿಗೆ ಬಿಡಿಸಲಾರದ ಸಂಭಂಧಗಳಿವೆ - ಇದನ್ನು ವಿವರಿಸಿರಿ.
- ಜಲಸಿಂಧೀ ಗ್ರಾಮದಲ್ಲಿಯ ಪ್ರಜೆಗಳಿಗೆ ಪ್ರಸ್ತುತ ಆಹಾರ ಭದ್ರತೆ ಇದೆಯಾ ?
- ಮೇಲಿ ಹೇಳಿದ ಪರಿಸ್ಥಿತಿಗಳಲ್ಲಿ ನೀವು ವಾಸಿಸುತ್ತಿದ್ದರೆ ಪುನರ ನಿವಾಸವನ್ನು ಹೊಂದಬೇಕೆಂದು ಕೊಂಡರೆ ಹೇಗೆ ಸ್ಪಂಧಿಸುವಿರಿ ?

ಸರ್ದಾರ್ ಸರೋವರ್ ಆಣೆಕಟ್ಟಿನಂತಹ ಅಭಿವೃದ್ಧಿ ಯೋಜನೆಗಳು ಸಾವಿರಾರು ಜನರ ಜೀವನಗಳು, ಜೀವನೋಪಾದಿಗಳನ್ನು ಚಿನ್ನಾಭಿನ್ನ ಮಾಡಿವೆ. ಇವುಗಳಿಂದ ಆಧುನಿಕ ಅಭಿವೃದ್ಧಿಗೆ ಅವಶ್ಯಕ ವಿದ್ಯುತ್, ನೀರಾವರಿ ಸೌಕರ್ಯಗಳು ಆಗಿವೆ ಎಂಬುದು ನಿಜವೆ. ಆದರೆ ಅವುಗಳಿಂದ ನಿರ್ವಾಸಿತರಾದ ಪ್ರಜೆಗಳು – ಇವರು ಲಕ್ಷ ಸಂಖ್ಯೆಯಲ್ಲಿ ಇದ್ದಾರೆ. ಇವು ಅನ್ಯಾಯವಾಗಿಯೂ – ವಿಧ್ವಂಸಕರವಾಗಿಯೂ ಇದೆ. ಆಧುನಿಕ ಅಭಿವೃದ್ಧಿ ಯೋಜನೆಗಳು ಇವರಿಗೆ ಅತಿಮುಖ್ಯ ಸಂಪನ್ಮೂಲ ಸ್ಥಾನಿಕ ಪರಿಸರವು ದೊರಕದಂತೆಯಾಗಿದೆ. ಇದೇ ವಿಷಯವನ್ನು ಬಾವಾ ಮಹಾಲಿಯಾ ಮತ್ತೆ ಮತ್ತೆ ಪ್ರಸ್ತಾಪಿಸಿದ್ದಾರೆ. ಸ್ಥಾನಿಕ ಪರಿಸರವು ಇಲ್ಲದಿದ್ದರೆ ಅವರ ಜೀವನಗಳು ಶೂನ್ಯವಾಗಿ ಹೋಗುತ್ತವೆ. ಸ್ವಯಂ ಸಂಮೃದ್ಧಿ ದೆಶೆಯಿಂದ ಒಂದೇ ಸಾರಿ ಕೊರತೆಯಲ್ಲಿ ಬೀಸಾಡಿದಂತಾಗುತ್ತದೆ. ಈಗ ಅವರು ಒಂದು ಬೆಳೆಯನ್ನಾದರು ಬೆಳೆಸಿಕೊಳ್ಳುತ್ತಿದ್ದಾರೆ. ಭವಿಷ್ಯತ್ತಿನಲ್ಲಿ ನೀರಾವರಿ ವಸತಿ ಏರ್ಪಟಾದ್ದರೆ ಹೆಚ್ಚಿನ ಬೆಳೆಗಳನ್ನು ಬೆಳೆಸಬಹುದೆಂದು ಆಸೆಯಿಂದ ಇದ್ದಾರೆ. ಆದರೆ ನಿರ್ವಾಸಿತರಾದ ಅವರ ಜೀವನಗಳು ಬಾಹ್ಯ ಶಕ್ತಿಗಳ ಮೇಲೆ ಆಧಾರಪಡಬೇಕಾಗುತ್ತದೆ. ಅವರು ಬಡತನದಲ್ಲಿ ಬೀಳುತ್ತಾರೆ.

ಗ್ರಾಮೀಣ ಪ್ರಾಂತದಲ್ಲಿರುವ ಬಹಳ ಜನರ ಜೀವನಕ್ಕೆ, ಪರಿಸರಕ್ಕೆ ಮಧ್ಯ ಗಾಢವಾದ ಸಂಬಂಧವಿದೆ. ಪರಿಸರದಲ್ಲಿದ್ದು, ಅನೇಕ ವಸ್ತುಗಳು ಅವರಿಗೆ ಸುಲಭವಾಗಿ ದೊರೆಯುತ್ತವೆ (ಆಹಾರ, ಕಟ್ಟಿಗೆ, ದನಗಳಿಗೆ ಮೇವು, ಆರ್ಥಿಕವಾಗಿ ಬೆಲೆಬಾಳುವ ವಸ್ತುಗಳು) ಅದೇ ಇಲ್ಲದಿದ್ದರೆ ಇವುಗಳಿಗೆ ಹಣ ಕೊಡಬೇಕಾಗಿ ಬರುತ್ತಿತ್ತು. ನಿರ್ವಾಸಿತರಾಗುವುದರಿಂದ, ಪರಿಸರ ಸೌಕರ್ಯಗಳು ದೊರೆಯದಿದ್ದರೂ ಅಥವಾ ಕಲುಷಿತವಾದರೂ, ವಿಧ್ವಂಸವಾದರೂ ಬಹಳಷ್ಟು ನಷ್ಟವಾಗುವುದು ಬಡವರೇ, ಪರಿಸರ, ಸುಸ್ಥಿರತೆ ಎನ್ನುವ ಅಂಶಗಳು ಸಮಾನತೆ ಎನ್ನುವ ಅಂಶದೊಂದಿಗೆ ಬಲವಾಗಿ ಮುಡಿಬಿದ್ದಿತೆ.

ಸ್ಥಾನಿಕ ಪರಿಸರದಿಂದ ನಿರ್ವಾಸಿತರು ಆಗುವುದರಿಂದ ನಷ್ಟವಾಗುವುದು ಪ್ರಜೆಗಳು ಒಂದೇ ಅಲ್ಲವೆಂಬುದು ಮುಖ್ಯವಾಗಿ ಗುರ್ತಿಸಬೇಕು–ಪ್ರಜೆಗಳೊಂದಿಗೆ ಸಾಂಪ್ರದಾಯ ಜ್ಞಾನವು ಮಾಯವಾಗುತ್ತದೆ. ಸುಸಂಪನ್ನವಾದ ಪರಿಸರ ಜೀವವೈವಿಧ್ಯತೆ ಅಂತರಿಸಿ ಹೋಗುವುದು ಈ ಜ್ಞಾನವು ಬಹಳ ತಲೆಮಾರಿನಿಂದ ಏರ್ಪಟ್ಟು ಬೆಳೆಯುತ್ತಾ ಬಂದಿದೆ. ಇಂತಹ ಸಂಪ್ರದಾಯ ಜ್ಞಾನವು ಬಾವಾ ಮಹಾಲಿಯಾರಂತಹ ಅವರಲ್ಲಿದೆ. ''ನಮಗೆ ಅರಣ್ಯದಲ್ಲಿಯ ಪ್ರತಿ ಗಿಡವು, ಮರ, ಸಸಿಗಳು ಹೆಸರೂ–ಅವುಗಳ ಉಪಯೋಗ ಗೊತ್ತು. ಕಾಡುಗಳಿಲ್ಲದ ಪ್ರಾಂತದಲ್ಲಿ ನಾನು ವಾಸಿಸಲು ಬಂದರೆ ಎಷ್ಟೋ ತಲೆಮಾರಿನಿಂದ ರಕ್ಷಿಸುತ್ತಾ ಬಂದಿರವು ಈ ಜ್ಞಾನವೆಲ್ಲಾ ಉಪಯೋಗವಾಗದಂತೆ ಹೋಗುತ್ತದೆ. ನಿಧಾನವಾಗಿ ಇದನ್ನು ಮರೆತು ಹೋಗುತ್ತೇವೆ.'' ಪರ್ಯಾವರಣವು ಅನೇಕ ವಿಧವಾಗಿ ತೊಂದರೆಗೆ ಗುರಿಯಾಗುತ್ತಿರುವ ಪ್ರಸ್ತುತ ಸಮಯದಲ್ಲಿ ಅದನ್ನು ಚೆನ್ನಾಗಿ ತಿಳಿದ ಇಂತಹ ಸಮೂಹಗಳ ಪಾತ್ರ ಬಹಳ ಮುಖ್ಯವೆಂದು ಗುರ್ತಿಸಬೇಕು.

ಚಿತ್ರ 11.5 : ಪರಿಸರ ಹಿನ್ನೆಲೆಯಲ್ಲಿ ಇದಕ್ಕೆ ಒಂದು ಶೀರ್ಷಿಕೆಯನ್ನು ಸ್ವಂತವಾಗಿ ಬರೆಯಿರಿ

ಸರ್ದಾರ್ ಸರೋವರಕ್ಕೂ, ನರ್ಮದಾ ಕಣುವೆಯಲ್ಲಿವೇ ಪರಿಣಾಮಗಳಿರುವ ಇತರ ಆಣೆಕಟ್ಟುಗಳಿಗೆ ಇರುವ ವಿರೋದವು ಒಂದು ಸಾಮಾಜಿಕ ಚಳುವಳಿಯಾಗಿ ರೂಪುಗೊಂಡಿದೆ. ಇದನ್ನೇ 'ನರ್ಮದಾ ಬಚಾವೋ ಆಂದೋಳನ' (ನರ್ಮದಾವನ್ನು ಕಾಪಾಡುವ ಚಳುವಳಿ) ಎನ್ನುವರು. ಇದನ್ನು ಕುರಿತು ಇದರ ಸುತ್ತಲೂ ಏರ್ಪಟ್ಟ ನಿರ್ವಾಸಿತರು ಪರಿಸರ ಚಳುವಳಿಗಳ ಕುರಿತು ನೀವು ''ಸಾಮಾಜಿಕ ಚಳುವಳಿಗಳು'' ಎನ್ನುವ ಅಧ್ಯಾಯದಲ್ಲಿ ತಿಳಿದುಕೊಳ್ಳುವಿರಿ.

SCERT TELANGANA

ಚಿಪ್ಕೋ ಚಳುವಳಿ (Chipko Andolan)

ಉತ್ತರಾಖಂಡ್‌ದಲ್ಲಿಯ ಗಡ್‌ವಾಲ್ ಬೆಟ್ಟಗಳಲ್ಲಿ 1970 ಪ್ರಾರಂಭದಲ್ಲಿ ಮೊದಲಾದ ಚಿಪ್ಕೋ ಚಳುವಳಿ ಮತ್ತೊಂದು ಮುಖ್ಯವಾದ ಪರಿಸರ ಉದ್ಯಮ. ನರ್ಮದಾ ಕಣಿವೆಯಲ್ಲಿನ ಗಿರಿಜನ ಪ್ರಜೆಗಳ ಮಾದರಿಯಾಗಿ ಇಲ್ಲಿಯ ಬೆಟ್ಟ ಪ್ರಾಂತಗಳಲ್ಲಿ ಜೀವಿಸುವ ಜನರ ಜೀವನಕ್ಕೆ ಅರಣ್ಯಗಳು ತುಂಬಾ ಅವಶ್ಯಕವಾಗಿವೆ. ಇವು ಪ್ರತ್ಯೇಕ್ಷವಾಗಿ ಆಹಾರ, ಕಟ್ಟಿಗೆ, ಪಶುಗಳಿಗೆ ಮೇವುದೊರೆಯುವುದಲ್ಲದೇ ಪರೋಕ್ಷವಾಗಿ ನೆಲ, ನೀರು ಸಂಪನ್ಮೂಲಗಳ ಸುಸ್ಥಿರ ಪಡಿಸುವಲ್ಲಿ ಪ್ರಧಾನ ಪಾತ್ರ ಪೋಷಿಸಿವೆ. ವ್ಯಾಪಾರ, ಕೈಗಾರಿಕೆಗಳಿಗಾಗಿ ಅಡವಿಗಳನ್ನು ಕಡಿದು ಹಾಕವುದು ತೀವ್ರಗೊಂಡಿದ್ದರಿಂದ ತಮ್ಮ ಜೀವನೋಪಾಯಕ್ಕೆ ರಕ್ಷಣೆ ಮಾಡಿಕೊಳ್ಳಲು ಇದನ್ನು ಅಹಿಂಸಾಯುತ ಪದ್ಧತಿಯಲ್ಲಿ ವಿರೋಧಿಸಬೇಕೆಂದು ಪ್ರಜೆಗಳು ಗಿಡಗಳನ್ನು ತಬ್ಬಿಕೊಳ್ಳುವುದು (Embrace) ಇದರಿಂದ ಈ ಚಳುವಳಿಗೆ ಆ ಹೆಸರು ಬಂದಿದೆ. ಚಿಪ್ಕೋ ಎಂದರೆ ತಬ್ಬಿಕೊಳ್ಳುವುದು (ಅಪ್ಪಿಕೊಳ್ಳು) ಗಿಡಗಳನ್ನು ಅಪ್ಪಿಕೊಂಡು ಹಳ್ಳಿಯ ಜನರು ಗುತ್ತೇದಾರಿಗಳ ಕೊಡಲಿಗಳಿಗೆ ಅಡ್ಡನಿಂತರು. ಇದರಲ್ಲಿ ಗ್ರಾಮೀಣ ಮಹಿಳೆಯರೇ ಹೆಚ್ಚಾಗಿ ಪಾಲ್ಗೊಂಡರು. ಈ ಚಳುವಳಿ ಕಾರಣವಾಗಿ ಬಹಳ ಜನ ಪರಿಸರ ಸುಸ್ಥಿರತೆ ಬಗ್ಗೆ ಆಲೋಚಿಸುವುದನ್ನು ಪ್ರಾರಂಭಿಸಿದರು.

ಚಿತ್ರ 11.6

ಈ ಎಲ್ಲಾ ಚಳುವಳಿಗಳ ಹಿನ್ನೆಲೆಗಳಲ್ಲಿ ಸ್ವಲ್ಪ ವ್ಯತ್ಯಾವಿದ್ದರೂ ಮೂಲಭೂತವಾಗಿ ಇವೆಲ್ಲಾ ಪರಿಸರದ ಮೇಲೆ ಸ್ಥಾನಿಕ ಪ್ರಜೆಗಳ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾವೆ. ಗಿಡಗಳನ್ನು ಕಡಿದು ಹಾಕುವುದಕ್ಕೆ ಅಡ್ಡಿಪಡಿಸಿದರು. ಗುತ್ತೆದಾರರಿಂದ ಬರುವಮುಪ್ಪನ್ನು ಎದುರಿಸಲು ತಮ್ಮ ಸಂಪ್ರದಾಯ ಅಡವಿ ಹಕ್ಕುಗಳಿಗಾಗಿ ಚಿಪ್ಕೋ ಚಳುವಳಿ ಪ್ರಾರಂಭವಾಯಿತು. ಭೂಮಿ, ಅಡವಿಗಳು, ನದಿ ಮೇಲೆ ಪ್ರಜೆಗಳ ಹಕ್ಕುಗಳಿಗಾಗಿ ನರ್ಮದಾ ಬಚಾವೋ ಆಂದೋಳನವು ಹೋರಾಟ ಮಾಡಿದೆ.

- ''ಅಭಿವೃದ್ಧಿ ಭಾವನೆಗಳು'' ಅಧ್ಯಾಯದಲ್ಲಿ ನೀವು ಕೂಡಂಕುಳಂ ಅಣುವಿದ್ಯುತ್ ಕಾರ್ಖಾನೆಗೆ ಪ್ರತಿಭಟನೆಗಳ ಬಗ್ಗೆ ಓದಿದ್ದೀರಿ. ಇಲ್ಲಿ ತಿಳಿದುಕೊಂಡದರ ಆಧಾರವಾಗಿ ಆ ಪ್ರತಿಭಟನೆಗಳನ್ನು ವಿವರಿಸಿರಿ.
- ''ಪರಿಸರ ಪರಿರಕ್ಷಣೆಯು ಪ್ರತ್ಯೇಕ್ಷವಾಗಿ ಪ್ರಭಾವಿತವಾಗುವ ಸಮೂಹಗಳಿಗೆ ಅಲ್ಲದೇ ನಮ್ಮೆಲ್ಲರಿಗೂ ಸಹ ಎಷ್ಟೋ ಮುಖ್ಯವಾದುದು '' ಕೆಲವು ಉದಾಹರಣೆಗಳೊಂದಿಗೆ ಇದನ್ನು ವಿವರಿಸಿರಿ.
- 8ನೇ ತರಗತಿಯಲ್ಲಿನ ಆಂಧ್ರಪ್ರದೇಶ್ ಖನಿಜಗಳಿಗೆ ಸಂಬಂಧಿಸಿದ ಅಧ್ಯಾಯಗಳನ್ನು ಮತ್ತೊಂದು ಸಲ ನೋಡಿರಿ. ಕೈಗಾರಿಕಾ ತಜ್ಞರಿಗೆ, ಖನಿಜಗಳಿರುವ ಪ್ರಾಂತಗಳಲ್ಲಿ ವಾಸಿಸುವ ಪ್ರಜೆಗಳಿಗೆ ಮಧ್ಯ ಎಂತಹ ವೈರತ್ವಗಳು ಬೆಳೆದು ಬರುತ್ತವೆ.

- ಭಾರತದೇಶ ಆರ್ಥಿಕ ವಿಧಾನದಲ್ಲಿ ಸರಳೀಕರಣ ಪ್ರಪಂಚೀಕರಣ ರೂಪುಗೊಂಡ ನಂತರ ಸ್ಥಾನಿಕ ಅವಸರಗಳಿಗೆ, ರಫ್ತು ಮಾಡಲು ಖನಿಜಗಳ ಹೊರ ತೆಗೆಯುವುದು ವೇಗವಾಗಿ ಹೆಚ್ಚಿತು. ಇಲ್ಲಿಯೇ ಕೊಟ್ಟ ಪಟ್ಟಿಕೆಯಲ್ಲಿ ಗಣಾಂಕಗಳ ಆಧಾರವಾಗಿ ಈ ವ್ಯಾಖ್ಯೆಯನ್ನು ವಿವರಿಸಿರಿ.
- ಗಣಿಗಳ ತೋಡುವುದು ವೇಗವಾಗಿ ವೃದ್ಧಿಯಾಗುವುದರಿಂದ ಪರಿಸರಕ್ಕೆ, ಮನುಷ್ಯರಿಗೆ ಯಾವ ವಿಧವಾದ ನಷ್ಟಗಳು ಉಂಟಾಗುತ್ತವೆ ? ವಿವರಿಸಿರಿ.

ಪಟ್ಟಿಕೆ : ಭಾರತದೇಶದಲ್ಲಿ ಕೆಲವು ಮುಖ್ಯ ಖನಿಜಗಳ ತೋಡುವಿಕೆ (ಸಾವಿರ ಟನ್ನುಗಳಲ್ಲಿ)

ಖನಿಜ	1997-98	2010
ಬಾಕ್ಸೈಟ್	6,108	18,000
ಕಲ್ಲಿದ್ದಲು	2,97,000	5,37,000
ಕಬ್ಬಿಣ ಖನಿಜ	75,723	2,60,000
ಕ್ರೊಮೈಟ್	1,515	3,800

SCERT TELANGANA

ಸಮಾನತೆಯಿಂದ ಕೂಡಿದ ಸುಸ್ಥಿರ ಅಭಿವೃದ್ಧಿ :

ವಿಧಾನಗಳನ್ನು ರೂಪಿಸುವವರು ಬಹಳ ಕಾಲ ಪರಿಸರ ಅಂಶಗಳನ್ನು ನಿರ್ಲಕ್ಷಿಸಿದ್ದಾರೆ. ಭಾರತದೇಶದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಬಡತನವಿದೆ, ಅದಕ್ಕಾಗಿ ಆರ್ಥಿಕಾಭಿವೃದ್ಧಿ ಅವಸರವೆಂದು ಅವರು ವಾದಿಸುತ್ತಾರೆ. ತುಂಬ ವಿಪತ್ಕರ ಪರಿಸ್ಥಿತಿಗಳಿದ್ದರೂ, ಅಭಿವೃದ್ಧಿ ಮಾತ್ರ ತಪ್ಪದೇ ಇರಬೇಕೆಂದು ಭಾವಿಸಿದರು. ಬಡತನವನ್ನು ಕಡಿಮೆಗೊಳಿಸಲು, ಪ್ರಜೆಗಳ ಜೀವನ ಪ್ರಮಾಣವನ್ನು ವೃದ್ಧಿಗೊಳಿಸಲು, ಆಧುನಿಕ ಕೈಗಾರಿಕೆಗಳಲ್ಲಿ GDPಯಲ್ಲಿಯೂ ಅಭಿವೃದ್ಧಿ ಸಾಧಿಸುವುದು ಕಡ್ಡಾಯವೆನ್ನುವರು. ಆಧುನಿಕ ಕೈಗಾರಿಕೆ, ವ್ಯವಸಾಯದ ಅಭಿವೃದ್ಧಿಗೆ ಇಂಧನ ದೊಂದಿಗೆ ಸಹ ಪ್ರಕೃತಿ ಸಂಪನ್ಮೂಲಗಳನ್ನು ಹೆಚ್ಚಾಗಿ ವಿನಿಯೋಗಿಸುವುದರಿಂದ ಈ ಸಂಪನ್ಮೂಲಗಳು ಅಂತರಿಸಿ ಹೋಗುವವು. ವಾತಾವರಣದ ಕಾಲುಷ್ಯಕ್ಕೆ ದಾರಿ ಮಾಡುವುದು ಊಹಿಸಿದ ಪರಿಣಾಮವೇ. ಅಭಿವೃದ್ಧಿ ಸಾಧಿಸಲು ಈ ಮಾತ್ರ ತ್ಯಾಗವನ್ನು ಮಾಡಲೇಬೇಕು ಎನ್ನುವರು. ಅಧಿಕ ಆರ್ಥಿಕಾಭಿವೃದ್ಧಿ, ಸಂಪತ್ತು ಸಾಧಿಸಿದ ನಂತರ ಕಾಲುಷ್ಯವನ್ನು ಪರಿಸರ ಕ್ಷೀಣತೆಯನ್ನು ಪರಿಷ್ಕರಿಸಬಹುದೆಂದು ಭಾವಿಸಿದರು. ಹಣ ಖರ್ಚು ಮಾಡಿ ನದಿಗಳನ್ನು, ಗಾಳಿಯನ್ನು ಶುಭ್ರ ಮಾಡಬಹುದು. ಸೀಸೆಗಳಲ್ಲಿ ನೀರು ಕುಡಿಯಬಹುದು. ಇಂಧನವನ್ನು ಸೂಕ್ಷ್ಮವಾಗಿ ವಿನಿಯೋಗಿಸುವ ಕಾರಗಳನ್ನು ರೂಪಂದಿಸಬಹುದೆಂದು ಅವರು ವಾದಿಸಿದರು. ಅಭಿವೃದ್ಧಿ ಹೊಂದಿದ ದೇಶಗಳು ಕೂಡಾ ಹಿಂದೆ ಇದೇ ಮಾರ್ಗವನ್ನು ಅನುಸರಿಸಿದವು ಎಂದು ಹೇಳುತ್ತಾರೆ.

ಈ ವಾದನೆಯಲ್ಲಿ ಅನೇಕ ಲೋಪಗಳಿದ್ದಾವೆ. ಅನೇಕ ಪಾರ್ಶ್ವಗಳಲ್ಲಿ ಪರಿಸರವು ತೀವ್ರ ಕ್ಷೀಣತೆಗೆ ಗುರಿಯಾಗಿದೆಂದು ನೀವು ಈಗಾಗಲೇ ಗುರ್ತಿಸಿದ್ದೀರಿ. ಅಭಿವೃದ್ಧಿ ಹೊಂದಿದ ದೇಶಗಳ ಮಾದರಿ ನಾವು ಕೂಡ ವೃದ್ಧಿಯನ್ನು ಸಾಧಿಸಿ ಸಂಪನ್ಮೂಲಗಳು, ಇಂಧನವನ್ನು ವಿನಿಯೋಗಿಸಿದರೆ, ಪರಿಸರವನ್ನು ಕಲುಷಿತ ಮಾಡಿದರೆ ಭೂಮಿ ವಿನಾಶಕ್ಕೆ ಗುರಿಯಾಗುತ್ತದೆ. ಪರಿಸರಕ್ಕೆ ನಡೆದ ಹಾನಿಯನ್ನು ಮರಳಿ ಸರಿ ಮಾಡುವ ಸ್ಥಿತಿಯಲ್ಲಿ ನಾವಿಲ್ಲ. ನಡೆದ ನಷ್ಟವನ್ನು ಪ್ರಕೃತಿಯೇ ತನ್ನಷ್ಟಕ್ಕೆ ತಾನು ಸರಿಮಾಡಿಕೊಳ್ಳುತ್ತಿದೆಂಬ ಭಾವನೆ ಸರಿಯಾದುದಲ್ಲ. ಅದನ್ನು ಸರಿಪಡಿಸುವ ಮೊದಲೇ ಪರಿಸರ ನಾಶವಾಗುತ್ತೆಂಬುದನ್ನು ಕೋರುವುದಿಲ್ಲ. ಭವಿಷ್ಯತ್ತಿನ ತಲೆಮಾರಿನವರು ನಡೆದ ನಷ್ಟವನ್ನು ಸರಿದಿದ್ದದರೂ ಈಗ ಮಾಡಿದ ಕಾಲುಷ್ಯವನ್ನು ತೊಲಗಿಸಲು ಕೋಟ್ಯಾಂತರ ರೂಪಾಯಿಗಳು ಖರ್ಚು ಮಾಡಬೇಕಾಗಿದೆ. ಉದಾಹರಣೆಗೆ ನಮ್ಮ ನದಿಗಳು-ಹೊಲಸು ಕಾಲುವೆಗಳನ್ನು ಶುಭ್ರಪಡಿಸಲು ಹಣ ಖರ್ಚು ಮಾಡುವುದಲ್ಲದೇ ಅವು ಮರಳಿ ಕಾಲುಷ್ಯಗಳಿಗೆ ಗುರಿಯಾಗದಂತೆ ನೋಡಬೇಕು. ಪ್ರಕೃತಿಯ ಸಂಪತ್ತು ಧ್ವಂಸ ಮಾಡಿ ಭವಿಷ್ಯತ್ತಿನ ತಲೆಮಾರಿನವರಿಗೆ ಕ್ಷೀಣಿಸಿದ ಸ್ಥಿತಿಯಲ್ಲಿ ಅವುಗಳನ್ನು ಕೊಡುವ ಅಭಿವೃದ್ಧಿಯ ವಿಧಾನವನ್ನು ನಾವು ಅನುಸರಿಸಬೇಕೇ? ಮೊದಲು ಸಮಸ್ಯೆಗಳಿಗೆ ಕಾರಣವಾದ ಜೀವನ ವಿಧಾನವನ್ನು ಪ್ರೋತ್ಸಾಹಿ, ಆನಂತರ ಇವುಗಳನ್ನು ಸರಿ ಮಾಡಲು ಹಣ ಖರ್ಚು ಮಾಡುವಲ್ಲಿ ವಿರೋಧ ನಮಗೆ ಕಂಡು ಬರುವುದಿಲ್ಲವೇ ?

ಚಿತ್ರ 11.7 : ಚರ್ಚಿಸಿದ ಅಂಶಗಳ ಹಿನ್ನಲೆಯಲ್ಲಿ ಈ ಚಿತ್ರಕ್ಕೆ ಒಂದು ಶೀರ್ಷಿಕೆಯನ್ನು

ವೇಗವಾದ ಆರ್ಥಿಕ ಅಭಿವೃದ್ಧಿಯಿಂದ ಅನೇಕ ಕ್ಷೇತ್ರಗಳಲ್ಲಿ ಈಗಲೇ ನಾವು ವಿರೋಧ ಪರಿಣಾಮಗಳನ್ನು ನೋಡುತ್ತಿದ್ದೇವೆ. ಭೂಗರ್ಭಜಲಗಳು, ಕ್ರಿನಾಶಕ ಔಷಧಗಳು ಸಮಸ್ಯೆಗಳು ಇದಕ್ಕೆ ಪ್ರತ್ಯಕ್ಷ ಉದಾಹರಣೆ. ಪರಿಸರದ ಮೇಲೆ ಆಧಾರವಾಗಿ ಅನೇಕ ಜನಸಮೂಹಗಳು ವಾಸಿಸುತ್ತವೆ. ಪರಿಸರ ವಿನಾಶವೆಂದರೆ ಈ ಸಮೂಹಗಳನ್ನು ನಾಶಪಡಿಸುವುದೇ ಅಭಿವೃದ್ಧಿಗೆ ಬಡಜನರು ಮೂಲ್ಯಂವನ್ನು ಸಲ್ಲಿಸಬೇಕೆನ್ನುವುದು ನ್ಯಾಯವಲ್ಲ.

SCERT TELANGANA

ಇದರ ಅರ್ಥ ನಾವು ಪ್ರಗತಿಯನ್ನು ಸಾಧಿಸಬಾರದೆಂದಲ್ಲ, ಪ್ರಗತಿಯೊಂದಿಗೆ ಪರಿಸರ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಸಮಾನತೆ, ನ್ಯಾಯ ಎನ್ನುವ ಭಾವನೆಗಳನ್ನು ಪರಿಗಣನೆಯಲ್ಲಿ ತೆಗೆದುಕೊಳ್ಳಬೇಕು. ಬಡತನದಿಂದ ಹೊರಬರಲು ಪರಿಸರ ದೃಷಿಯಿಂದ ಸುಸ್ಥಿರ ಮಾರ್ಗವನ್ನು ಕಂಡು ಹಿಡಿಯಬೇಕು. ಇದು ಅಷ್ಟು ಸುಲಭವಲ್ಲ. ಆದರೆ ಈಗಾಗಲೇ ಆ ದಿಶೆಯಲ್ಲಿ ಪ್ರಯತ್ನಗಳು ಮೊದಲಾಗಿವೆ.

1. ಪರಿಸರದ ಮೇಲೆ ಸ್ಥಾನಿಕ ಪ್ರಜೆಗಳ ಹಕ್ಕುಗಳಿಗಾಗಿ ವಿವಿಧ ಬೃಂಧಗಳು ಹೇಗೆ ಕೆಲಸ ಮಾಡುತ್ತವೆಯೋ ನೋಡಿದ್ದೇವೆ. ಪ್ರಜೆಗಳಲ್ಲಿ ಪರಿಸರದ ಬಗ್ಗೆ ಚೈತನ್ಯವನ್ನು ಕಲ್ಪಿಸಬೇಕು. ಸುಸ್ಥಿರ ಅಭಿವೃದ್ಧಿ ದಿಶೆಗೆ ಮರಳುವಂತೆ ಅವರು ಕೃಷಿ ಮಾಡಬೇಕು.

2. ಪ್ರಾಥಮಿಕ ಹಕ್ಕಾದ ಜೀವಿಸುವ ಹಕ್ಕಿನಲ್ಲಿ ಭಾಗವಾಗಿ ಆರೋಗ್ಯಕರವಾದ ಪರಿಸರಕ್ಕೆ ಹಕ್ಕಿರುತ್ತದೆಂದು ನ್ಯಾಯಸ್ಥಾನಗಳು ಅನೇಕ ತೀರ್ಪುಗಳನ್ನು ಕೊಟ್ಟಿವೆ. 1991ರಲ್ಲಿ ಸಂವಿಧಾನದ ಅಧಿಕರಣದಲ್ಲಿನ ಪ್ರಾಥಮಿಕ ಹಕ್ಕಿದ ಜೀವಿಸುವ ಹಕ್ಕುನಲ್ಲಿ ಜೀವನವನ್ನು ಪೂರ್ತಿಯಾಗಿ ಆನಂದಿಸುವುದಕ್ಕೆ, ಕಾಲುಷ್ಯರಹಿತ ನೀರು, ಗಾಳಿಯನ್ನು ಹೊಂದುವ ಹಕ್ಕಿದೆಂದು ಸುಪ್ರೀಂಕೋರ್ಟ್ ತೀರ್ಪುಕೊಟ್ಟಿದೆ. ಕಾಲುಷ್ಯವನ್ನು ನಿಯಂತ್ರಿಸಲು ಅನುಕೂಲವಾದ ಕಾನೂನುಗಳು, ರೂಪಿಸುವ ಜವಾಬ್ದಾರಿ ಸರ್ಕಾರಕ್ಕಿದೆ. ಕಾಲುಷ್ಯಕಾರಕರಿಗೆ ಭಾರಿ ಪ್ರಮಾಣದಲ್ಲಿ ಜರಿಮಾನಗಳನ್ನು ವಿಧಿಸಬೇಕು. ನಿಯಂತ್ರಣ ಪಾತ್ರವನ್ನು ಪೋಷಿಸಲು ಅನೇಕ ಸರ್ಕಾರಿ ಸಂಸ್ಥೆಗಳನ್ನು ಸ್ಥಾಪಿಸಬೇಕು.

ಚಿತ್ರ 12.8 : ವಾಹನಗಳಿಂದ ಹೊರಬೀಡುವ ಹೊಗೆ ಪರಿಸರ ಕಾಲುಷ್ಯಕ್ಕೆ ಒಂದು ಪ್ರಧಾನ ಕಾರಣ. (1998ರಿಂದ ಪ್ರಾರಂಭವಾಗಿ) ಸುಪ್ರೀಂ ಕೋರ್ಟ್ ನೀಡಿದ ಅನೇಕ ಆದೇಶಗಳಲ್ಲಿ ಪ್ರಜಾ ಸಾರಿಗೆಯ ವಾಹನಗಳಿಗೆಲ್ಲಾ ಡಿಸೆಲ್‌ನಿಂದ ಒತ್ತಡಕ್ಕೆ ಗುರಿಯಾದ ಸಹಜವಾಯುವಿಗೆ (CNG) ಬದಲಾಗಲು ಹೇಳಿದೆ. ಡೇಸೆಲ್‌ಗೆ ಹೋಲಿಸಿದರೆ ಈ ಇಂಧನದಿಂದ ಕಾಲುಷ್ಯವು ಕಡಿಮೆ. ಈ ಚರ್ಯೆಗಳಿಂದ ದೆಹಲಿಯಂತಹ ನಗರಗಳಲ್ಲಿ ವಾಯುಕಾಲುಷ್ಯವು ಗಣನೀಯವಾಗಿ ಕಡಿಮೆಯಾಗುತ್ತದೆ. ಆದರೆ ಇತ್ತೀಚಿನ ಕಾಲದಲ್ಲಿ ಡೀಸೆಲ್‌ನಿಂದ ನಡೆಯುವ ಖಾಸಗಿ ಕಾರುಗಳು ಗಣನೀಯವಾಗಿ ಹೆಚ್ಚಾಗಿವೆ, ಇದರಿಂದ ವಾಯುಕಾಲುಷ್ಯವು ಮತ್ತೆ ಬೆಳೆದಿದೆ. ಕಾರುಗಳ ಉತ್ಪತ್ತಿದಾರರು ಡೀಸೆಲ್‌ನಿಂದ ನಡೆಯುವ ಕಾರುಗಳನ್ನು ತಯಾರು ಮಾಡಿ, ಮಾರಲು ಪ್ರಾರಂಭಿಸಿದ್ದಾರೆ ! ಸುಸ್ಥಿರ ಅಭಿವೃದ್ಧಿ ಮುಂದಿರುವ ಸಮಸ್ಯೆ ಅಷ್ಟು ಸುಲಭವಾದುದೇನಲ್ಲ.

3. ವಾತಾವರಣದಲ್ಲಿ ಬದಲಾವಣೆಯಂತಹ ಅಂಶಗಳಲ್ಲಿ ಸಾಮಾಜಿಕ ನಿರ್ಣಯಗಳನ್ನು ತೆಗೆದುಕೊಳ್ಳಲು ವಿವಿಧ ದೇಶಗಳು ಪ್ರಯತ್ನಿಸುತ್ತಾವೆ. ವಾತಾವರಣದ ಬದಲಾವಣೆಯಿಂದ ಎಲ್ಲಾ ದೇಶಗಳ ಪ್ರಜೆಗಳು ಮಟ್ಟ ವ್ಯತ್ಯಾಸಗಳೊಂದಿಗೆ ಪ್ರಭಾವಿತರಾಗುತ್ತಾರೆ. ಈ ಬದಲಾವಣೇಗಳಲ್ಲಿ ಅನೇಕ ವಿಷಯಗಳನ್ನು ನಾವು ಅರ್ಥಮಾಡಿಕೊಳ್ಳುವ ಸ್ಥಿತಿಯಲಿಲ್ಲ. ಅವುಗಳನ್ನು ಮುಂದಾಗಿ ಊಹಿಸಲಾರೆವು. ಹರಿತ ಗೃಹ ವಾಯು ಉದ್ಗಾರಗಳನ್ನು ತಗ್ಗಿಸಲು ಒಂದು ದೇಶ ನಿರ್ಣಯ ತೆಗೆದುಕೊಳ್ಳಬಹುದು. ಆದರೆ ಇತರ ದೇಶಗಳು ತಮ್ಮ ಉದ್ಗಾರಗಳನ್ನು ನಿಯಂತ್ರಿಸದಿದ್ದರೆ ಆ ದೇಶದಲ್ಲಿ ಪರಿಸರ ಕ್ಷಿಣತೆ ಮುಂದುವರಿಯುತ್ತದೆ. ಅದಕ್ಕಾಗಿ ಪ್ರಪಂಚಮಟ್ಟದ ಎಲ್ಲಾ ದೇಶಗಳು ಸೇರಿ ಮಾಡುವ ಪರಿಷ್ಕಾರಗಳು ಅವಶ್ಯಕವಾಗುತ್ತವೆ.

4. ಪ್ರಜೆಗಳಮಟ್ಟ, ಪ್ರಜೆಗಳೊಂದಿಗೆ ಕೆಲಸ ಮಾಡುವ ಅನೇಕ ಸಂಘಗಳ ಸುಸ್ಥಿರತೆ, ಸಮಾನತೆ, ಸಾಧಿಸುವ ವಿಧವಾಗಿ ಅನೇಕ ಹಳೆಯ ಪದ್ಧತಿಗಳನ್ನು ಮರಳಿ ಕಂಡುಹಿಡಿದಿವೆ. ಹೊಸ ಪದ್ಧತಿಗಳನ್ನು ಕೂಡ ರೂಪಿಸಿವೆ. ಮೀನುಗಳ ಬೆಳೆಸುವುದು-ಗಣಿಗಳ ತೊಡುವುದು, ಸಾರಿಗೆ, ಇಂಧನ, ವ್ಯವಸಾಯ ಕೈಗಾರಿಕೆಯಂತ ಕ್ಷೇತ್ರಗಳಲ್ಲಿ ಇಂತಹ ಪದ್ಧತಿಗಳು ಬಹಳ ಇವೆ. ಸಮಾಜಕ್ಕೆ ಅತ್ಯಂತ ಅವಶ್ಯವಾದ ಆಹಾರದ ಮೇಲೆ ಪ್ರಭಾವ ಬೀರುವ ಕೆಲವು ಪ್ರಯತ್ನಗಳನ್ನು ಪರಿಶೀಲಿಸೋಣ.

ವ್ಯವಸಾಯ ಕ್ಷೇತ್ರದಲ್ಲಿ ನೀವು ಸಾವಯವ (ಸೇಂದ್ರೀಯ) ವ್ಯವಸಾಯ, ಸೇಂದ್ರೀಯ ಉತ್ಪತ್ತಿಗಳು ಕುರಿತು ಕೇಳಿರುತ್ತೀರಿ. ಸಾವಯವ ರೈತರು ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷಧಗಳನ್ನು ವಿನಿಯೋಗಿಸುವುದಿಲ್ಲ. ಇದಕ್ಕೆ ಬದಲಾಗಿ ಬೆಳೆ ಬದಲಿಸುವ ವಿಧಾನ, ತಿಪ್ಪೇಗುಂಡಿಯ ಗೊಬ್ಬರ, ಕ್ರಿಮಿಗಳ ಜೈವಿಕ ನಿಯಂತ್ರಣೆಯ ಸಹಜ ಪದ್ಧತಿಗಳನ್ನು

SCERT TELANGANA

ಇವರು ಅವಲಂಬಿಸುತ್ತಾರೆ. ಸಾವಯವ ವ್ಯವಸಾಯದಲ್ಲಿ ಒಂದು ಮುಖ್ಯವಾದ ಲಕ್ಷಣ. ಸ್ಥಾನಿಕ ಸಂಪನ್ಮೂಲಗಳನ್ನು ಉಪಯೋಗಿಸುವುದು. ಉದಾಹರಣೆಗೆ ಹಾನಿಕರವಾದ ಕ್ರಿಮಿಗಳನ್ನು ತಿನ್ನುವ ಜೀವಿಗಳನ್ನು (ಪಕ್ಷಿಗಳು, ಜೇಡರಹುಳು, ಒಳಿತು ಮಾಡುವ ಹುಳಗಳು) ಪ್ರೋತ್ಸಹಿಸುವುದು, ಪೋಷಕಾಂಶಗಳನ್ನು ಸಸಿಗಳಿಗೆ ಸಿಗುವ ಮಣ್ಣಿನಲ್ಲಿನ ಸೂಕ್ಷ್ಮಜೀವಿಗಳನ್ನು (ರೈಜೋಬಿಯಂ, ಅಜಟೊಬಾಕ್ಟರ್‌ನಂತವು) ಬೆಳೆಸುವುದು, ಕೃತ್ರಿಮ ರಸಾಯನಿಕ ಪದಾರ್ಥಗಳ ಉಪಯೋಗವನ್ನು ಸಾಧ್ಯವಾದಷ್ಟು ಕಡಿಮೆ ಮಾಡುತ್ತಾರೆ. ಹಾಗೆಯೇ ಒಂದೆರಡು ಬೆಳೆಗಳು ಮಾತ್ರವೇ ಅಲ್ಲದೇ ಅನೇಕ ಬೆಳೆಗಳನ್ನು ಸಾಗುವಳಿ ಮಾಡುವುದರಿಂದ ಜೀವ ವೈವಿಧ್ಯತೆ ಹೆಚ್ಚಾಗುತ್ತದೆ. ಆಧುನಿಕ ವ್ಯವಸಾಯ ಪದ್ಧತಿಗಳಿಂದ ಸಾಧಿಸಿದ ಉತ್ಪತ್ತಿಯನ್ನು ಈ ಪದ್ಧತಿಗಳಿಂದಲೂ ಪಡೆಯಬಹುದು.

ಪ್ರಸ್ತುತ ಸಾವಯವ ವ್ಯವಸಾಯ ಅಗತ್ಯವನ್ನು, ಅದರ ಸಾಮರ್ಥ್ಯವನ್ನು ಅನೇಕ ರಾಜ್ಯಗಳು ಗುರ್ತಿಸಿವೆ. ಸ್ಥಾನಿಕವಾಗಿ ಮಾಡಲ್ಪಟ್ಟ ಕಾರ್ಯಗಳು ಸರ್ಕಾರ ವಿಧಾನವನ್ನು ಪ್ರಭಾವಿತಗೊಳಿಸಿವೆ. ಸಿಕ್ಕಿಂ ರಾಜ್ಯ ಸರ್ಕಾರದಲ್ಲಿ ರಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ಔಷಧಗಳನ್ನು ನಿಷೇಧಿಸುವ ಸಾಹಸವಂತವಾದ ನಿರ್ಣಯವನ್ನು ತೆಗೆದುಕೊಂಡಿದೆ. 2015 ರ ಹೊತ್ತಿಗೆ ಎಲ್ಲವೂ ಸಾವಯವ ವ್ಯವಸಾಯಕ್ಕೆ ಬದಲಾಗಬೇಕೆಂದು ನಿರ್ಣಯಿಸಿಕೊಂಡ

1. ಕೆನ್ಯಾದಲ್ಲಿ ಮುಸ್ಸಾಯಿ ಸೈನಿಕರು
2. ಖಜಕಿಸ್ಥಾನ್‌ಗೆ ಹೊಂದಿದ ಯುರ್ತಾ ಗಿರಿಜನರು
3. ಟಿಬೆಟ್‌ನಲ್ಲಿನ ಕಿಯಾಂಗ್ ಗಿರಿಜನರು
4. ದಕ್ಷಿಣ ಅಮೇರಿಕಾದಲ್ಲಿನ ಗೌಚೊ ಪಂಗಡದವರು

ಚಿತ್ರ 11.9: 2013 ವರ್ಷದಲ್ಲಿ ಅವರುಕಣ್ಮರೆಯಾಗಿ ಹೋಗುವ ಮೊದಲು (ಬಿಫೋರ್ ದೆ ಪಾಸ್ ಅವೆ) ಎನ್ನುವ ಗೊಂಬೆಗಳ ಪುಸ್ತಕ ಪ್ರಕಟಿತವಾಯಿತು. ಈ ಪುಸ್ತಕವು ನಮಗೆ ಇಲ್ಲಿಯವರೆಗೆ ದೊರಲಿಲ್ಲ. ಕಣ್ಮರೆಯಾಗುವ ಪ್ರಮಾದಲ್ಲಿರುವ ಸಂಚಾರ ಜಾತಿಯನ್ನು ರಚಯಿತರು ಗುರ್ತಿಸಿದ್ದಾರೆ (ಇಲ್ಲಿಕೊಟ್ಟಿರುವ ಚಿತ್ರಗಳು ಬೇರೆ ಬೇರೆ ಪ್ರದೇಶದಿಂದ ಪಡೆದಂತವುಗಳು). ಈ ಚಿತ್ರಗಳನ್ನು ನೋಡಿ ಸುಸ್ಥಿರ ಅಭಿವೃದ್ಧಿ ಏಕೆ ಕಣ್ಮರೆಯಾಗುತ್ತವೆಂದು ರಚನೆಕಾರರು ಹೇಗೆ ಭಾವಿಸಿದರು.

SCERT TELANGANA

ಮೊದಲ ರಾಜ್ಯಇದೆ. 100% ಸಾವಯವ ರಾಜ್ಯವಾಗಿ ಬದಲಾದವರು ಇಂತಹ ಮಾರ್ಗವನ್ನು ಉತ್ತರಾಖಂಡ್ ಕೂಡ ಅನುಸರಿಸುತ್ತದೆ.

ಪ್ರತ್ಯಾಮ್ನಾಯ - ಪ್ರಜಾಹಂಚಿಕೆ ವ್ಯವಸ್ಥೆ

ಭಾರತದೇಶದಲ್ಲಿನ ಒಟ್ಟು ಸಾಗುವಳಿ ಭೂಮಿಯಲ್ಲಿ 9.2 ಕೋಟಿ ಹೆಕ್ಟಾರುಗಳು ಮಳೆಯಾಧಾರಿತವಾದರೆ 5.1 ಹೆಕ್ಟಾರ್‌ಗಳು ನೀರಾವರಿಯ ಕೆಳಗಿದೆ. ಇದರ ಅರ್ಥ ಭಾರತದೇಶದಲ್ಲಿನ ಮೂರರಲ್ಲಿ ಎರಡರಷ್ಟು ಭೂಮಿ ಮಳೆಯಾಧಾರಿತವಾಗಿದ್ದು ನೀರಾವರಿ ವ್ಯವಸಾಯಕ್ಕೆ ಉತ್ತಮವಾದುದಲ್ಲ. ಸಂಪ್ರದಾಯವಾಗಿ ಈ ಪ್ರಾಂತದಲ್ಲಿ ವರ್ಷಾಧಾರವಾಗಿ ಬೆಳೆಯುವ ಆನೇಕ ಬೆಳೆಗಳನ್ನು ಸೇರಿಸಿ ಸಾಗುವಳಿ ಮಾಡುತ್ತಿದ್ದರು. ಉದಾಹರಣೆಗೆ ದಕ್ಷಿಣ ಪ್ರಸ್ಥಭೂಮಿಯಲ್ಲಿ 16 ವಿಧವಾದ ಬೆಳೆಗಳನ್ನು ಸೇರಿಸಿ ಒಂದೇ ಸಲ ಬಿತ್ತುತ್ತಿದ್ದರು. ಇವು ಬೆಳೆಗೆ ಬರುವ ಕಾಲಗಳು ಬೇರೆ ಬೇರೆಯಾಗಿರುವುದರಿಂದ ಕೆಲಸ ದಿನಗಳು ಹೆಚ್ಚಾಗಿದ್ದು ಆದಾಯಗಳು / ಆಹಾರ ಧಾನ್ಯಗಳ ಪೂರೈಕೆ ಹೆಚ್ಚು ಕಾಲದವರಿಗೆ ಇರುತ್ತದೆ. ಇದರಿಂದ ಬೆಳೆ ನಷ್ಟಗಳಿಂದ ಕೂಡ ರಕ್ಷಣೆ ಸಿಗುತ್ತದೆ. ಅನುಕೂಲ ವಾತಾವರಣ ಪರಿಸ್ಥಿತಿಗಳಲ್ಲಿ ಕನಿಷ್ಟ ಒಂದು ಬೆಳೆಯಾದರೂ ಇಳುವರಿ ಕೊಡಿಸಲಾಗುತ್ತದೆ. ಸಾಗುವಳಿ ಮಾಡುವ ಬೆಳೆಗಳು ಮಣ್ಣಿಗೆ, ಮನುಷ್ಯರಿಗೆ, ಪಶುಗಳಿಗೆ ಸಮತೌಲ್ಯ ಪೌಷ್ಠಿಕ ಆಹಾರವನ್ನು ಕೊಡುವಂತೆ ಆಯ್ಕೆ ಮಾಡುತ್ತಾರೆ.

ಆದರೆ, ಹಸಿರುಕ್ರಾಂತಿಯ ನಂತರ ಭತ್ತ, ಗೋಧಿಗಳಿಗೆ ಪ್ರಾಮುಖ್ಯತೆ ಹೆಚ್ಚಾಯಿತು. ಈ ಬೆಳೆಗಳ ಆಹಾರ ದಾನ್ಯಗಳೇ ಪ್ರಜಾ ಹಂಚಿಕೆ ವ್ಯವಸ್ಥೆ (PDS) ಮೂಲಕ ಚಿಲ್ಲರೆ ಬೆಲೆ ಅಂಗಡಿಗಳಲ್ಲಿ ಸಿಗುತ್ತಿದ್ದವು. ದಿನದ ಆಹಾರದಲ್ಲಿ ಅಕ್ಕಿ, ಗೋಧಿಗಳನ್ನು ಬಳಸುವುದು ಹೆಚ್ಚಾಯಿತು. ಸ್ಥಾನಿಕ ಆಹಾರ ಧಾನ್ಯಗಳಿಗೆ ಬೇಡಿಕೆ ಕಡಿಮೆಯಾದ್ದರಿಂದ ಕಾಲಕ್ರಮದಲ್ಲಿ ಆನೇಕ ಮಳೆಯಾಧಾರಿತ ಭೂಮಿಗಳನ್ನು ಸಾಗುವಳಿ ಮಾಡದಂತೆ ಬಿಟ್ಟುಬಿಟ್ಟರು. ಹಸಿರುಕ್ರಾಂತಿಯ ಕೆಳಗೆ ಆಹಾರದಲ್ಲಿ ಸ್ವಯಂ ಸಮೃದ್ಧಿ ಸಾಧಿಸುವುದಕ್ಕಾಗಿ ಭತ್ತ, ಗೋಧಿ, ಬೆಳೆಗಳು ಸಾಗುವಳಿಯನ್ನು ವಿವಿಧ ಸರ್ಕಾರಿ ಯೋಜನೆಗಳ ಮೂಲಕ ಪ್ರೋತ್ಸಾಹಿಸಿದರು. ಇದಕ್ಕೆ ವಿರುದ್ಧವಾಗಿ ತೃಣ ಧಾನ್ಯಗಳ ಸಾಗುವಳಿಗೆ ಎಂತಹ ಬೆಂಬಲ, ಪ್ರೋತ್ಸಾಹ ಸಿಗಲಿಲ್ಲ. ಈ ತೃಣ ಧಾನ್ಯಗಳ ಇಳುವಳಿಯನ್ನು ಹೆಚ್ಚಿಸುವುದಕ್ಕಾಗಿ ಬೇಕಾದಷ್ಟು ಪರಿಶೋಧನೆಗಳು ನಡೆಯಲಿಲ್ಲ. ಮಳೆಯಾಧಾರಿತ ಬೆಳೆಗಳಾದ ತೃಣ ಧಾನ್ಯಗಳು (ಜೋಳ, ಸಜ್ಜೆ, ರಾಗಿಯಂತಹವು), ಎಣ್ಣೆಕಾಳುಗಳ ಇಳುವರಿ ಕಡಿಮೆಯಾಗುವುದಕ್ಕೆ ಇದು ಒಂದು ಕಾರಣ.

ಆಂಧ್ರಪ್ರದೇಶದಲ್ಲಿನ ಮೆದಕ್ ಜಿಲ್ಲೆ ಜಹಿರಾಬಾದ್ ಮಂಡಲದಲ್ಲಿನ ಗ್ರಾಮಸ್ಥರು ಕೊಂಡ ಅಕ್ಕಿ, ಗೋದಿಗಳ ಮೇಲೆ ಆಧಾರಪಡುವುದರಿಂದ ಭಯಬಿದ್ದರು. ಸ್ಥಾನಿಕ ಆಹಾರ ಅಲಾವಟು(ಅಭ್ಯಾಸ)ಗಳು, ಸಂಸ್ಕೃತಿಯನ್ನು ಕಳೆದುಕೊಳ್ಳವುದನ್ನು ಕುರಿತು 2000 ವರ್ಷದಲ್ಲಿ ಮಹಿಳೆಯರು ಆಲೋಚನೆಗಳಿಂದ ಇದೆಲ್ಲವು ಪ್ರಾರಂಭವಾಯಿತು. ಸಂಪ್ರದಾಯವಾಗಿ ಈ ಪ್ರಾಂತದಲ್ಲಿ ತೃಣ ಧಾನ್ಯಗಳು ಮುಖ್ಯವಾದ ಆಹಾರವಾಗಿದ್ದವು. ಇವುಗಳ ಸ್ಥಾನವನ್ನು ಅಕ್ಕಿಯು ಆಕ್ರಮಿಸಿತು. ಪೋಷಕಾಂಶಗಳ ದೃಷ್ಟಿಯಿಂದ ನೋಡಿದರೆ ತೃಣಧಾನ್ಯಗಳಿಗಿಂತ ಅಕ್ಕಿಯು ಬಹಳ ಕಡಿಮೆ ಮಟ್ಟದಲ್ಲಿದೆ. ಪೋಷಕಾಹಾರವನ್ನು ಕಳೆದುಕೊಳ್ಳುವುದೇ ಅಲ್ಲದೆ ತಮ್ಮ ಭೂಮಿಗಳಲ್ಲಿ ಬೆಳೆಸುವ ಬೆಳೆಗಳ ಮೇಲೆಯೂ ಸಹ ನಿಯಂತ್ರಣ ಕಳೆದುಕೊಳ್ಳುವುದು ಜನರು ಗುರ್ತಿಸಿದರು. ಅನೇಕ ಭೂಮಿಗಳು ಈಗ ಬೀಳುಬಿದ್ದಿವೆ. ದಕ್ಕನ್ ಡೆವಲಪ್ಮೆಂಟ್ ಸೊಸೈಟಿ ಎನ್ನುವ ಸ್ವಚ್ಛಂದ ಸಂಸ್ಥೆ ನೇತೃತ್ವದಲ್ಲಿ ಹೀಗೆ ಬೀಳು ಬಿದ್ದ ಭೂಮಿಗಳನ್ನು, ಅವಿಭಕ್ತ ಭೂಮಿಗಳನ್ನು ಸೇರಿಸಿ ಸಾಗುವಳಿ ಮಾಡಬೇಕೆಂದು ಗ್ರಾಮಸ್ತರು ನಿರ್ಣಯಿಸಿದರು. ತೃಣ ಧಾನ್ಯಗಳು ಗಟ್ಟಿ ಸಸಿಗಳಾದ್ದರಿಂದ ಹೆಚ್ಚು ಪೋಷಕಾಂಶಗಳನ್ನು ಹೊಂದಿರುತ್ತವೆ.

ಮಳೆಯಾಧಾರಿತ ಭೂಮಿಗಳನ್ನು ಸಾಗುವಳಿ ಭೂಮಿಯಾಗಿ ಬದಲಾಯಿಸಿದ್ದರಿಂದ ಜನರಿಗೆ ಕೆಲಸ ಲಭಿಸಿತು. ಅಷ್ಟೇ ಅಲ್ಲದೇ ಬೆಳೆಯನ್ನು ಹೊರಗೆ ಮಾರದಂತೆ ಗ್ರಾಮಮಟ್ಟದಲ್ಲಿ ಪ್ರಜಾ ಧಾನ್ಯ ಬ್ಯಾಂಕನ್ನು ಪ್ರಾರಂಭಿಸಿದರು. ಇದು ಪ್ರಜಾಹಂಚಿಕೆ ವ್ಯವಸ್ಥೆಯ ಹಾಗೇ ಕೆಲಸ ಮಾಡುತ್ತಿತ್ತು. (ಪ್ರಜೆಗಳಿಗೆ ಬೇರೆ ಬೇರೆ ಕಾರ್ಡ್‌ಗಳಿದ್ದು, ಅವುಗಳ ಆಧಾರವಾಗಿ ಯಾರಿಗೆ ಎಷ್ಟು ಕೊಡಬೇಕೋ ನಿರ್ಣಯಿಸುತ್ತಿದ್ದರು.) ಆದರೆ ಇದನ್ನು ಸ್ಥಾನಿಕವಾಗಿ ನಿರ್ವಹಿಸುತ್ತಿದ್ದರು. ಅಲ್ಲಿ ದೊರೆಯುವ ಧಾನ್ಯ ಸ್ಥಾನಿಕವಾಗಿ

SCERT TELANGANA

ಬೆಳೆದಂತಹವುಗಳು. ಧಾನ್ಯ ಎಲ್ಲೊ ನೂರು ಕಿಲೋಮೀಟರ್ ದೂರದಿಂದ ತೆಗೆದುಕೊಂಡು ಬರಬೇಕಾದ ಅವಶ್ಯಕತೆಯಿಲ್ಲದೇ ಗ್ರಾಮದಲ್ಲಿ ಆಹಾರ ಭದ್ರತೆಯನ್ನು ಸಾಧಿಸುವುದಕ್ಕೆ ಸ್ಥಾನಿಕವಾಗಿ ಬೆಳಸಿದ ಆಹಾರವು ಈಗ ಸಿಗುತ್ತಿವೆ.

ಸುಸ್ಥಿತ ಪದ್ಧತಿಯಲ್ಲಿ ಆಹಾರ ಉತ್ಪತ್ತಿ, ಅದರ ಉತ್ಪತ್ತಿ, ಅದರ ಸಮಾನವಾದ ಹಂಚಿಕೆಗೆ ಮತ್ತೊಂದು ಉತ್ತಮ ಉದಾಹರಣೆ ಪ್ರತ್ಯಾಮ್ನಯ ಪ್ರಜಾಹಂಚಿಕೆ ವ್ಯವಸ್ಥೆ, ಇದನ್ನು ಆಂಧ್ರಪ್ರದೇಶದಲ್ಲಿನ ಜಹಿರಾಬಾದ್ ಪ್ರಜಾಸಮೂಹಗಳು ಕೈಗೊಂಡಿವೆ.

ಸಂಕ್ಷಿಪ್ತವಾಗಿ...

ವಾತಾವರಣ ಸಮಸ್ಯೆಗಳನ್ನು ಆಧುನಿಕ ಅಭಿವೃದ್ಧಿ ತೀವ್ರಗೊಳಿಸಿದೆಯೆಂದು ನೋಡಿದ್ದೇವೆ. ಇದನ್ನೇ ಈ ದಿನ ನಾವು ಅನೇಕ ವಿಧಗಳಾಗಿ, ಸ್ಪಷ್ಟವಾಗಿ ನೋಡುತ್ತಿದ್ದೇವೆ. ವಸ್ತುಗಳು, ಸೇವೆಗಳ ಬೆಳಬಣಿಗೆಯ ಮೇಲೆ ಆಧಾರವಿರುವ ಅಭಿವೃದ್ಧಿಯಿಂದ ಸಮಾನತೆಯಿಂದ ಕೂಡಿದ ಸುಸ್ಥಿರ ಅಭಿವೃದ್ಧಿ ಎನ್ನುವ ಗುರಿಯ ಕಡೆಗೆ ಬದಲಾಯಿಸಬೇಕು. ಈ ಬದಲಾವಣೆಯ ಸಲುವಾಗಿ ವ್ಯಕ್ತಿಗಳೂ, ಕಂಪನಿಗಳು, ರೈತರು, ಸರ್ಕಾರಗಳು, ನ್ಯಾಯಸ್ಥಾನಗಳು, ಸ್ವಚ್ಛಂದ ಸಂಸ್ಥೆಗಳು, ಪ್ರಜಾಸಂಘಗಳು, ಪ್ರಪಂಚಮಟ್ಟ ಸಂಸ್ಥೆಗಳು-ಪ್ರತಿಯೊಬ್ಬರೂ ತಮ್ಮ ಭಾಗದಲ್ಲಿ ಕೃಷಿ ಮಾಡಬೇಕು.

ಕಠಿಣ ಪದಗಳು

ಸುಸ್ಥಿರ ಅಭಿವೃದ್ಧಿ	ವಾತಾವರಣ	ಸಂಪನ್ಮೂಲಗಳ ಮೂಲ
ಪ್ರಜೆಗಳ ಹಕ್ಕುಗಳು	ಸಮಾನತೆ	

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ !

1. ಜಲಸಿಂಧಿ ಗ್ರಾಮ ಜನರು ತಮ್ಮ ಊರಿನಿಂದ ತೆರಳಿ ಹೋಗುವುದನ್ನು ಏಕೆ ತಿರಸ್ಕರಿಸಿದರು.(AS_1)
2. ''ಇದು ನಮ್ಮ ಪೂರ್ವಿಕರ ಭೂಮಿ ಇದರ ಮೇಲೆ ನಮಗೆ ಹಕ್ಕಿದೆ. ಇದನ್ನು ಕಳೆದುಕೊಂಡರೆ ನಮ್ಮ ಕೈಗೆ ಸಲಕೆ, ಗಡಾರಗಳು ಬರುವುದಲ್ಲದೆ ಇನ್ನೇನು ಉಳಿಯುವುದಿಲ್ಲ...'' ಎನ್ನುವ ಬಾವಾ ಮಹಾಲಿಯಾ ಮಾತುಗಳನ್ನು ವಿವರಿಸಿರಿ. (AS_1)
3. ''ಕೊನೆಯಲ್ಲಿ (ಅಷ್ಟು ಮಾತ್ರಕ್ಕೆ ಇದರ ಪ್ರಾಮುಖ್ಯತೆ ಕಡಿಮೆಯೇನು ಅಲ್ಲ) ವ್ಯರ್ಥ ಪದಾರ್ಥಗಳು, ಮಲಿನತೆ ಕಡಿಮೆ ಇರುವಂತೆ ನಮ್ಮ ಜೀವನ ಚಕ್ರವನ್ನು ಬದಲಾಯಿಸುವುದರ ಮೇಲೆ ವಾತಾವರಣ ಸಮಸ್ಯೆಗಳ ಪರಿಷ್ಕಾರ ಆಧಾರವಾಗಿದೆ.'' (AS_4)

SCERT TELANGANA

● ನಮ್ಮ ಜೀವನ ವಿಧಾನ ಪರಿಸರವನ್ನು ಹೇಗೆ ಪ್ರಭಾವಗೊಳಿಸುತ್ತದೆ ? ಈ ಹಿನ್ನಲೆಯಲ್ಲಿ ಕೆಲವು ಉದಾಹರಣೆಗಳನ್ನು ತೆಗೆದುಕೊಂಡು ಇದನ್ನು ವಿವರಿಸಿರಿ.

● ಪ್ರಪಂಚದಲ್ಲಿ ವಿವಿಧ ಪ್ರಾಂತಗಳಲ್ಲಿ ಕಸ, ನೈರ್ಮಲ್ಯ ಬಿಡುಗಡೆ ಸಮಸ್ಯೆಗಳನ್ನು ವಿವಿಧ ಪದ್ಧತಿಗಳನ್ನು ಹೆಸರಿಸಿರಿ.

4 . ಖನಿಜಗಳು, ಇತರ ಸಹಜ ಸಂಪನ್ಮೂಲಗಳು ವೇಗವಾಗಿ ಸಂಗ್ರಹಿಸುವುದರಿಂದ ಭವಿಷ್ಯದ ಅಭಿವೃದ್ಧಿ ಅಂಶಗಳ ಮೇಲೆ ಪ್ರಭಾವ ಬೀಳುತ್ತದೆ. ನೀವು ಏಕೀಭವಿಸುತ್ತೀರಾ ? (AS_4)

5 . ವಾತಾವರಣ ಬದಲಾವಣೆಯ ಪ್ರಭಾವ ಎಲ್ಲ ದೇಶಗಳ ಮೇಲೆ ಇರುತ್ತದೆಯೆಂದು ಹೇಗೆ ತಿಳಿದುಕೊಳ್ಳುತ್ತೀರಿ ?(AS_1)

6 . ಭೂಮಿಯ ಸರಾಸರಿ ಉಷ್ಣೋಗ್ರತೆಯನ್ನು ಪ್ರಜೆಗಳಿಗೆಲ್ಲರಿಗೆ ಸಹಜ ಸಂಪನ್ಮೂಲವಾಗಿ ಪರಿಗಣಿಸಬೇಕಾ ? (AS_1)

7 . ತೆಲಂಗಾಣದಲ್ಲಿನ ಜಹಿರಾಬಾದ್ ಮಂಡಲದಲ್ಲಿನ ಪ್ರತ್ಯಾಮ್ನಾಯ ಪ್ರಜಾ ಹಂಚಿಕೆ ವ್ಯವಸ್ಥೆಯಿಂದ ಯಾವ ಗುಣಪಾಠಗಳನ್ನು ಕಲಿತುಕೊಳ್ಳಬಹುದು ? (AS_4)

8 . ''ಸ್ಥಾನಿಕ ಜನ ಜೀವನಕ್ಕೆ, ಜೀವನೋಪಾಧಿಗಳಿಗೆ, ಪರಿಸರಗಳೊಂದಿಗೆ ಸಹ ಜೀವನ ಮಾಡುವ ಜೀವನ ವಿಧಾನಕ್ಕೆ ಪರಿಸರವು ಬಹಳ ಮುಖ್ಯವಾದುದು'' ವಿವರಿಸಿರಿ. (AS_6)

9 . ಭಾರತದ ನಕಾಶೆಯಲ್ಲಿ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

1) ನರ್ಮದಾ ನದಿ 2) ಸರ್ದಾರ್ ಸರೋವರ್ ಯೋಜನೆ

ಪಾಜೆಕ್ಟ್

ಸಾವಯವ ವ್ಯವಸಾಯದ ಹಿನ್ನೆಲೆಯಲ್ಲಿ ನೀವು ಸಗಣಿ (ಜೈವಿಕ)ಗೊಬ್ಬರ ಕುರಿತು ಓದಿದ್ದಿರಾ. ನಿಮ್ಮ ಶಾಲೆಯಲ್ಲಿ, ಮನೆಯ ಹತ್ತಿರ ಪ್ರಯತ್ನಿಸುವುದಕ್ಕೆ ಸುಲಭವಾದ ಪದ್ದತಿ ಇಲ್ಲಿದೆ.

★ ಒಂದು ದೊಡ್ಡ ಪಾತ್ರ ತೆಗೆದುಕೊಂಡು ಹೆಚ್ಚಿನ ನೀರು ಹೋಗುವುದಕ್ಕೆ ಕೆಳಗಿನ ಭಾಗದಲ್ಲಿ ರಂಧ್ರ ಹಾಕಿರಿ.

★ ತೆಂಗಿನ ಪೀಚು ಒಂದು ಪದರ ಹಾಕಿರಿ. ಹೆಚ್ಚಿನ ನೀರು ಹೋಗುವುದಕ್ಕೆ ಇದು ಸಹಾಯವಾಗುತ್ತದೆ.

★ ಒಂದು ತೆಳ್ಳನೆಯ ಮಣ್ಣಿನ ಪದರದಿಂದ ಇದನ್ನು ಮುಚ್ಚಿರಿ.

★ ಕಾಯಿಪಲ್ಲೆಗಳು ಹೊಟ್ಟು ಬೇರೆ ವ್ಯರ್ಥಪದಾರ್ಥಗಳನ್ನು ಒಂದು ಪದರವಾಗಿ ಹಾಕಿರಿ.

★ ಮತ್ತೊಂದು ಪದರ ಮಣ್ಣನ್ನು ಹಾಕಿರಿ.

★ ಕಾಯಿಪಲ್ಲೆಗಳ ವ್ಯರ್ಥಗಳನ್ನು ಮತ್ತೊಂದು ಪದರವಾಗಿ ಹಾಕಿರಿ.

★ ಮಣ್ಣಿನಿಂದ ಮುಚ್ಚಿರಿ.

★ ಒಂದು ವಾರದ ನಂತರ ಇದರಲ್ಲಿ ಮಳೆ ಹಾವುಗಳನ್ನ ಬಿಡಬೇಕು.

★ ಇದು ಕೊಳೆತ ನಂತರ ನಿಮ್ಮ ತೋಟದಲ್ಲಿ ಬೇಕಾದ ಸಸಿಗಳನ್ನು ಬೆಳೆಸುವುದಕ್ಕೆ ಈ ಮಣ್ಣನ್ನು ಉಪಯೋಗಿಸಿರಿ.

SCERT TELANGANA

ಅಧ್ಯಾಯ

12 ಪ್ರಪಂಚ ಯುದ್ಧಗಳ ಮಧ್ಯ ಪ್ರಪಂಚ 1914-1945 : ಭಾಗ - I

ಪರಿಚಯ

ಈ ಅಧ್ಯಾಯದಲ್ಲಿ 20 ನೆಯ ಶತಮಾನದಲ್ಲಿನ ಪ್ರಪಂಚ ಚರಿತ್ರೆಯನ್ನು ಕುರಿತು ತಿಳಿದುಕೊಳ್ಳೋಣ. ಎರಡು ಪ್ರಪಂಚ ಯುದ್ಧಗಳಿಗೆ ಕಾರಣಗಳು, ಯುದ್ಧ ಪ್ರಭಾವಗಳನ್ನು ಕುರಿತು, ಪ್ರಪಂಚ ಶಾಂತಿಯನ್ನು ಅಭಿವೃದ್ಧಿಯನ್ನು ಸಾಧಿಸಲು ವಿಶ್ವ ಸಂಸ್ಥೆಯಂತಹ ಸಂಸ್ಥೆಗಳ ಸ್ಥಾಪನೆಯನ್ನು ಕುರಿತು ತಿಳಿದುಕೊಳ್ಳೋಣ. 20ನೆಯ ಶತಮಾನದ ಮೊದಲ 50 ವರ್ಷಗಳಲ್ಲಿ ನಡೆದ ಮುಖ್ಯವಾದ ಪರಿಣಾಮಗಳನ್ನು ಕುರಿತು ತಿಳಿದುಕೊಳ್ಳೋಣ.

oñÀ 12.1 GÃP. Ö..., ÝÊå..

ಇತಿಹಾಸಕಾರನಾದ ಎರಿಕ್ ಹಬ್ಸ್‌ಬಾಮ್ 20ನೆಯ ಶತಮಾನವನ್ನು 'ತೀವ್ರ ಅತಿರೇಕದ ಕಾಲ' ಎಂದು ಕರೆದನು. ಒಂದೆಡೆ ಸಾಟಿಯಿಲ್ಲದ ಅಧಿಕಾರ, ಹೊರಗಿನ/ಇತರ ಪ್ರಜೆಗಳ ಬಗ್ಗೆ ದ್ವೇಷ ಹೆಚ್ಚುತ್ತಾ ಇರಲು, ಇನ್ನೊಂದೆಡೆ ಪ್ರಜಾಪ್ರಭುತ್ವದ ಅವಶ್ಯಕತೆಯೂ ಕೂಡಾ ಹೆಚ್ಚಾಗ ತೊಡಗಿತು. ವೈದ್ಯರಂಗದಲ್ಲಿನ ನೂತನ ಆವಿಷ್ಕಾರಗಳ ಫಲಿತವಾಗಿ ಸರಾಸರಿ ಆಯಸ್ಸು ಕೂಡಾ ಹೆಚ್ಚಾಗತೊಡಗಿತು. ಸಾಕ್ಷರತೆಯ ಮಟ್ಟ ಕೂಡಾ ಹೆಚ್ಚಾಗತೊಡಗಿತು. ಅಂದರೆ ಅಧಿಕ ಸಂಖ್ಯೆಯ ಪ್ರಜೆಗಳಿಗೆ ಉತ್ತಮ ಮಟ್ಟದ ಶಿಕ್ಷಣ ದೊರೆಯಲಾರಂಭಿಸತು. ಸಿನಿಮಾದಂತಹ ಹೊಸ ರೂಪಗಳು ಕೂಡಾ ಪ್ರಚಾರಕ್ಕೆ ಬಂದವು. ವಿಜ್ಞಾನಶಾಸ್ತ್ರ ರಂದಲ್ಲಿ ಜೀವಿಯನ್ನು ಕುರಿತು, ಅಣುಗಳನ್ನು ಕುರಿತು, ಹೊಸ ಆವಿಷ್ಕಾರಗಳನ್ನು ಮಾಡಿದರು. ಪ್ರಪಂಚ ವ್ಯಾಪ್ತಿಯಾಗಿ ನೂರಕ್ಕಿಂತ ಅಧಿಕ ದೇಶಗಳು ಸ್ವಾತಂತ್ರ್ಯವನ್ನು ಪಡೆದವು.

20ನೆಯ ಶತಮಾನದಲ್ಲಿ ಅನೇಕ ಪ್ರಯೋಗಗಳು ನಡೆದವು. ಕೆಲವು ದೇಶಗಳಲ್ಲಿ ಸೋಷಿಲಿಸ್ಟ್ ಸಮಾಜಗಳು ಏರ್ಪಟ್ಟವು. ಸೋಷಲಿಸ್ಟ್ ಸಮಾಜದಲ್ಲಿ ಪ್ರಜೆಗಳು ಸಹೋದರ ಭಾವದಿಂದ ಸಮಾನತೆಯಿಂದ ಜೀವಿಸಲಾರಂಭಿಸಿದರು. ಕೆಲವು ದೇಶಗಳು ಉದಾರವಾದ ಪ್ರಜಾಪ್ರಭುತ್ವವನ್ನು ಅನುಸರಿಸಿದವು. ಇಲ್ಲಿ ಬಂಡವಾಳಶಾಹಿ ವಿಧಾನಗಳು ಜಾರಿಗೊಂಡು ಪ್ರಜೆಗಳಿಗೆ ರಾಜಕೀಯ ಸ್ವೇಚ್ಛೆ ಇದ್ದಿತು. 20ನೆಯ ಶತಮಾನದಲ್ಲಿ ನಡೆದ ತೀವ್ರ ಆರ್ಥಿಕ ಕುಸಿತದ ಕಾರಣವಾಗಿ ಪ್ರಪಂಚದ ಆರ್ಥಿಕ ವ್ಯವಸ್ಥೆಯು ಕುಸಿದು ನಿರುದ್ಯೋಗ ಹೆಚ್ಚಾಯಿತು. 20ನೆಯ ಶತಮಾನದಲ್ಲಿಯೇ ಎರಡು ಪ್ರಪಂಚ ಯುದ್ಧಗಳು ತಲೆದೋರಿದವು. ಈ ಯುದ್ಧದಲ್ಲಿ ಲಕ್ಷಗಟ್ಟಲೆ ಜನ ಮರಣ ಹೊಂದಿದರು. ಲಕ್ಷಗಟ್ಟಲೆ ಪ್ರಜೆಗಳು ತಮ್ಮ ಪ್ರಾಂತಗಳನ್ನು ಬಿಟ್ಟು ಹೋಗಬೇಕಾಗಿ ಬಂದಿತು.

ಈ ಕಾಲಕ್ಕೆ ಪ್ರಪಂಚದ ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ಕೈಗಾರಿಕಾ ದೇಶಗಳಾಗಿ (ಬ್ರಿಟನ್, ಅಮೇರಿಕಾ, ಜರ್ಮನಿ, ಫ್ರಾನ್ಸ್, ಇಟಲಿ, ಜಪಾನ್ ನಂತಹವು) ಮತ್ತು ಏಷ್ಯಾ ಆಫ್ರಿಕಾದಲ್ಲಿನ ವಸಾಹತು ಪಾಲಿತ ದೇಶಗಳಾಗಿ ವಿಭಜಿಸಲ್ಪಟ್ಟಿದೆ. ಈ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳ ಅಡಿಯಲ್ಲಿ ವಸಾಹತು ಪಾಲಿತ ದೇಶಗಳಿರುತ್ತಿದ್ದವು. ವಸಾಹತು ಪ್ರಾಂತಗಳ ಮೇಲಿನ ನಿಯಂತ್ರಣಕ್ಕಾಗಿ ಅಭಿವೃದ್ಧಿ ಹೊಂದಿದ ದೇಶಗಳು ಪೈಪೋಟಿಗಿಳಿದವು. ಪರೀಕ್ಷೆಗೊಳ ಪಡಿಸಿದರು. ನ್ಯೂರೆಂಬರ್ಗ್ ನ್ಯಾಯಾಲಯ ಕೇವಲ ಹನ್ನೆರಡು

PÝÇÝ®ÁáPÀÊÁá ±Àq

Êã¨ÀÆ®à ±À±Àía ¿áá¨À:	1914
ÃÀÐÝÂPÝÀ í£:	1917
Êã¨ÀÆ®à ±À±Àía ¿áá¨À¨À	
ÊÀáäPÝ¿á:	1918
ÊÀÓ ì Ç... J±À í ¨À:	1919
AíñÀÃÝÑà¿á ÓÀ í Z¨À ÓÝ±À®:	1919
gÊÀá ì ¯¿á ×oÃÀ®À BÚÌP BÃÀ í»À:	1933
GÃÀvÀ®à ±À±Àía ¿áá¨À¨À BÃÀ í»À:	1939
ÃÀÐÝÂ USSR Êáà Ç gÊÀá ì ®... ¨ÝÚ:	1942
Ë íÀÌÓÀ íÓ¿á ÓÝ±À®:	1945
GÃÀvÀ®à ±À±Àía ¿áá¨À¨À ÊÀáäPÝ¿á:	1945

bñ 12.2 aÄñ¿áÈ Êão Êã¨Æ ¸ÝÄW Êã¨Æ®à ±±ía ¿áá¨¨È ¸Ýí¸…WÙ®á ÖÝPÆá ËÊÞ®WÙ®á E±ÁãàXÔ¨Ãá.



ಬೇರ್ಪಟ್ಟವು. ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಒಂದುಕಡೆ ಇರಲು, ಬ್ರಿಟನ್, ಫ್ರಾನ್ಸ್, ರಷ್ಯಾ ಮತ್ತೊಂದೆಡೆ ಇದ್ದವು. ಈ ಎರಡು ವೃಂದಗಳು ಪ್ರಪಂಚದ ಮೇಲೆ ಆಧಿಪತ್ಯವನ್ನು ಸಾಧಿಸಿ, ಸಾಧ್ಯವಾದ ವಲಸೆ ಪ್ರಾಂತಗಳೆಲ್ಲವನ್ನು ಮಾರುಕಟ್ಟೆಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂದು ಎರಡೂ ಪ್ರಪಂಚ ಯುದ್ಧಕ್ಕೆ ದಾರಿಮಾಡಿಕೊಟ್ಟವು.

ಮೊದಲನೇ ಪ್ರಪಂಚಯುದ್ಧ 1914 ರಲ್ಲಿ ಆರಂಭವಾಯಿತು. ಪ್ರಪಂಚದಲ್ಲಿನ ಸುಮಾರು ಎಲ್ಲಾ ದೇಶಗಳು ಇದರಲ್ಲಿ ಭಾಗಿಗಳಾಗಿದ್ದವು. ಆದ್ದರಿಂದ ಅದು ಪ್ರಪಂಚ ಯುದ್ಧವಾಯಿತು. ಪೂರ್ವದಲ್ಲಿನ ಜಪಾನ್, ಚೈನಾ, ಪಶ್ಚಿಮದಲ್ಲಿನ ಅಮೇರಿಕಾದಂತಹ ದೇಶಗಳು ಈ ಯುದ್ಧದಲ್ಲಿ ಪಾಲ್ಗೊಂಡಿದ್ದವು. ಮೊದಲನೇ ಪ್ರಪಂಚಯುದ್ಧ 1918 ರಲ್ಲಿ ಮುಕ್ತಾಯಗೊಂಡಿತು. ಜರ್ಮನಿ ಅದರ ಮಿತ್ರ ಪಕ್ಷಗಳನ್ನು ಯುದ್ಧದಲ್ಲಿ ಬ್ರಿಟನ್, ಫ್ರಾನ್ಸ್ ಸೋಲಿಸಿದವು.

ಪ್ರಪಂಚ ಯುದ್ಧಕ್ಕೆ ಕಾರಣಗಳು :

ಆಕ್ರಮಣಶೀಲ ರಾಷ್ಟ್ರೀಯವಾದ

ರಾಷ್ಟ್ರೀಯವಾದ ಎನ್ನುವ ಭಾವನೆ ಒಂದು ಉತ್ತಮ ಪ್ರೇರಣೆ. ಆಧುನಿಕ ರಾಷ್ಟ್ರೀಯ ರಾಜ್ಯಗಳು ಏರ್ಪಡಲು, ಜರ್ಮನಿ, ಇಟಲಿ ಏಕೀಕರಣಕ್ಕೆ ಇದು ಕಾರಣವಾಯಿತು. ಆದರೆ ಈ ಭಾವನೆ ತಮ್ಮ ಕಡೆ ಗರ್ವವನ್ನು, ಇತರರ ಕಡೆ ದ್ವೇಷವನ್ನು ಮೂಡಿಸಲು ಕೂಡ ಬಳಸಿದರು. ಯುರೋಪಿನಲ್ಲಿನ ದೇಶಗಳ ಮಧ್ಯ ಈ ದ್ವೇಷ 19ನೇ ಶತಮಾನದಲ್ಲಿ ಕ್ರಮೇಣ ಹೆಚ್ಚಾಗುತ್ತಾ ಬಂತು.

1923 ದಿಂದ ಇಟಲಿಯಲ್ಲಿ ಫ್ಯಾಸಿಜಂ, ಜರ್ಮನಿಯಲ್ಲಿ ನಾಜಿಜಂ ಎರಡು ಕೂಡ ವಿಧ್ವಾಂಸಕರ ರೂಪದಲ್ಲಿನ ಆಕ್ರಮಣಶೀಲ ರಾಷ್ಟ್ರೀಯವಾದಗಳು, ಫ್ಯಾಸಿಜಂಗಳು ಆಕ್ರಮಣಪೂರಿತ ರಾಷ್ಟ್ರೀಯವಾದವನ್ನು ಪ್ರೇರೇಪಿಸಿ, ಪ್ರಪಂಚವನ್ನು ಜರ್ಮನಿ ವಿಜಯದಿಂದ ಪರಿಪಾಲಿಸುತ್ತದೆ ಎಂಬ ಚಿತ್ರವನ್ನು ತೋರಿಸಿ ಯುರೋಪಿನಲ್ಲಿನ ಇತರ ದೇಶಗಳಿಗೆ ವಿರುದ್ಧವಾಗಿ ಜರ್ಮನ್ ಪ್ರಜೆಗಳನ್ನು ಸಮೀಕ್ಷಿಸತೊಡಗಿದರು.

ಸಾಮ್ರಾಜ್ಯವಾದ :

ಬ್ರಿಟನ್, ಜರ್ಮನಿಯಂತಹ ಐರೋಪಾ ದೇಶ ಗಳಲ್ಲಿಯೂ ಅಮೇರಿಕದಲ್ಲಿಯೂ ಕೈಗಾರಿಕಾ ಹಣಕಾಸು ಅಭಿವೃದ್ಧಿ ಹೊಂದಿದ್ದರಿಂದ, ತಮ್ಮ ಉತ್ಪತ್ತಿಗಳಿಗೆ ಮಾರ್ಕೆಟ್, ಕಚ್ಚಾ ಸರಕುಗಳನ್ನು ಸರಫರಾಜು ಅವಸರವಾದವು. ಬ್ಯಾಂಕುಗಳು, ಇತರ ಆರ್ಥಿಕ ಸಂಸ್ಥೆಗಳೊಂದಿಗೆ ಬಂಡವಾಳ ಮತ್ತಷ್ಟು ಒಂದುಗೂಡಿದ್ದರಿಂದ ವಸಾಹತು ಪ್ರಾಂತಗಳೊಂದಿಗೆ ಬಂಡವಾಳ ಹೂಡುವ ಅವಕಾಶಕ್ಕಾಗಿ ಎದುರು ನೋಡ ತೊಡಗಿದರು. ಆದ್ದರಿಂದ 19ನೇ ಶತಮಾನವು ಮುಗಿಯುವಷ್ಟರಲ್ಲಿ ಐರೋಪಾ ಶಕ್ತಿಗಳ ಮಧ್ಯ ವಸಾಹತು ಪ್ರಾಂತಗಳಿಗಾಗಿ ಪೈಪೋಟಿ ಪ್ರಾರಂಭವಾಯಿತು.

ಹೊಸ ಕೈಗಾರಿಕೀಕರಣ ಶಕ್ತಿಗಳು (ಜಪಾನು, ಜರ್ಮನಿ, ಇಟಲಿಯಂತಹವು) ಏರ್ಪಟುಗಳಿಂದಾಗಿ ಇವು ವಸಾಹತು ಪ್ರಾಂತಗಳನ್ನು ಪುನಃ ವಿಭಜಿಸಬೇಕೆಂದು ಬೇಡಿಕೊಂಡವು. ಆದರೆ ಹಳೆ ಶಕ್ತಿಗಳು ಇದಕ್ಕೆ ಸಿದ್ಧವಾಗಿರಲಿಲ್ಲ. ಇದು ತೀವ್ರ ಒತ್ತಡಗಳಿಗೆ, ಕ್ರಮೇಣ ಯುದ್ಧಗಳಿಗೆ ಕಾರಣವಾಗುತಿತ್ತು.

SCERT TELANGANA

ರಹಸ್ಯ ಒಪ್ಪಂದಗಳು :

1870ರಲ್ಲಿ ಫ್ರಾನ್ಸ್‌ನ್ನು ಸೋಲಿಸಿದ ನಂತರ ಜರ್ಮನಿ ಚಾನ್ಸಲರ್ ಆದ ಬಿಸ್ಮಾರ್ಕ್ ಅದನ್ನು ಒಬ್ಬಂಟಿಯಾಗಿಸಬೇಕೆಂದು ಕೊಂಡನು. ಇದಕ್ಕೆ ಅನುಗುಣವಾಗಿ ಆತನು ಆಸ್ಟ್ರೀಯಾದೊಂದಿಗೆ 1879ರಲ್ಲೂ, ಇಟಲಿಯೊಂದಿಗೆ 1882ರಲ್ಲೂ ರಹಸ್ಯ ಒಪ್ಪಂದಗಳನ್ನು ಮಾಡಿಕೊಂಡನು. ಈ ರಕ್ಷಣೆ ಒಪ್ಪಂದದಲ್ಲಿ ಒಂದು ಅಂಶ ರಷ್ಯಾದಿಂದ ಆಸ್ಟ್ರೀಯಾವನ್ನು ಫ್ರಾನ್ಸ್‌ನಿಂದ ಇಟಲಿಯನ್ನು ಕಾಪಾಡುವುದು. ಆದರೆ ಫ್ರಾನ್ಸ್ ಏಕಾಂಗಿಯಾಗದಂತೆ 1891ರಲ್ಲಿ ರಷ್ಯಾದೊಂದಿಗೂ, ಕೆಲವು ತೊಡಕುಗಳನ್ನು ತೊಲಗಿಸಿದ ನಂತರ 1904ರಲ್ಲಿ ಬ್ರಿಟನ್‌ನೊಂದಿಗೆ ಸಂಬಂಧಗಳನ್ನು ನೆಲೆಗೊಳಿಸಿಕೊಂಡವು. 1907ರಲ್ಲಿ ರಷ್ಯಾ, ಫ್ರಾನ್ಸ್, ಬ್ರಿಟನ್‌ಗಳು ಮೂರು ಮಿತ್ರ ದೇಶಗಳ ಕೂಟವಾಗಿ ಏರ್ಪಟ್ಟವು. ಜರ್ಮನಿ ತ್ರೈಪಾಕ್ಷಿಕ ಕೂಟ, ಫ್ರಾನ್ಸ್‌ಮಿತ್ರ ರಾಜ್ಯಗಳಿಂದ ಐರೋಪ್ಯಾ ದೇಶಗಳು ಒಂದಕ್ಕೊಂದು ಸಂಶಯ ಅಸೂಯೆಪಡ ತೊಡಗಿದವು. ಈ ಕೂಟಗಳು ನಿಜವಾದ ಶಾಂತಿಗೆ ದಾರಿ ಮಾಡಿಕೊಡಲಿಲ್ಲ. ಅದಕ್ಕೆ ವಿರುದ್ಧವಾಗಿ ಯುರೋಪಿನಲ್ಲಿ 'ಆಯುಧ ಗಳ ಶಾಂತಿ', ಭಯದ ವಾತಾವರಣ ನೆಲೆಗೊಂಡಿತು.

Óæç¯PÌÊÝ¨Ì :

ರಕ್ಷಣೆಗೆ ಸೈನಿಕ ಶಕ್ತಿ ಉತ್ತಮ ಮಾರ್ಗವೆಂದು, ಸಮಸ್ಯೆ ಪರಿಷ್ಕಾರಕ್ಕೆ ಯುದ್ಧವೇ ಸರಿಯಾದ ವಿಧಾನವೆಂದು ನಂಬುವುದನ್ನು ಸೈನಿಕವಾದ ಎನ್ನುತ್ತಾರೆ. 1880 ರಿಂದ 1914 ವರೆಗೆ ಆರು ಪ್ರಧಾನ ಶಕ್ತಿಗಳು (ಜರ್ಮನಿ, ರಷ್ಯಾ, ಆಸ್ಟ್ರೀಯಾ, ಇಟಲಿ, ಫ್ರಾನ್ಸ್, ಬ್ರಿಟನ್) ಸೈನಿಕ ಖರ್ಚು 300 ಶೇಕಡಕ್ಕಿಂತ ಹೆಚ್ಚಾಗಿ ಅಂದರೆ 132 ಮಿಲಿಯನ್ ಪೌಂಡ್‌ದಿಂದ 397 ಮಿಲಿಯನ್ ಪೌಂಡುಗಳಿಗೆ ಹೆಚ್ಚಾಯಿತು. ಸೈನಿಕವಾದ ನೇತೃತ್ವದಲ್ಲಿ ಮೂರು ಮುಖ್ಯವಾದ ವಿಷಯಗಳನ್ನು ಗಮನಿಸಬೇಕು. ಈ ದೇಶಗಳು ದೊಡ್ಡ ಸಂಖ್ಯೆಯಲ್ಲಿ ಶಾಶ್ವತ ಸೈನ್ಯವನ್ನು ಹೆಚ್ಚಿಸಿದವು. ಆಯುಧಗಳನ್ನು ಸಂಗ್ರಹಿಸುವಲ್ಲಿ ಒಂದಕ್ಕೊಂದು ಪೈಪೋಟಿಗಿಳಿದವು. ತಮ್ಮ ಪ್ರಜೆಗಳನ್ನು ಮಾನಸಿಕವಾಗಿ ಯುದ್ಧಕ್ಕೆ ಸಿದ್ಧಗೊಳಿಸಿದವು. ಆಯುಧಗಳನ್ನು ಉತ್ಪತ್ತಿ ಮಾಡುವ ದೊಡ್ಡ ಕೈಗಾರಿಕೆಗಳು ಉದಯಿಸಿ-ಕ್ಲಿಷ್ಟ ಸಮಸ್ಯೆಗಳ ಪರಿಷ್ಕಾರಕ್ಕೆ ಯುದ್ಧ ಬಳಕೆಯನ್ನು ಇವು ಪ್ರೋತ್ಸಾಯಿಸಿದವು.

WÝÌ… : 2 B¿áá«Ì ÓÌ«ìì



1880ರಿ1914 ಮಧ್ಯ ಪ್ರಧಾನ ಶತ್ರುವಾದ ಜರ್ಮನಿ, ಆಸ್ಟ್ರೀಯಾ-ಹಂಗರಿ, ಬ್ರಿಟನ್ ರಷ್ಯಾ, ಇಟಲಿ, ಫ್ರಾನ್ಸ್‌ಗಳ ಸೈನಿಕ ಖರ್ಚು (ಮೂಲ: ಟೈಮ್ಸ್ ಪ್ರಪಂಚ ಚರಿತ್ರೆ ಅಟ್ಲಾಸು, ಲಂಡನ್ 1978)

¸ÝÆ®… ÃÝgQà¿á :

ಬಾಲ್ಕನ್ ದ್ವೀಪ ಸಮೂಹದಲ್ಲಿ ಅನೇಕ ರಾಜ್ಯಗಳಿದ್ದವು. ಇದರಲ್ಲಿ ಅನೇಕ ಜಾತಿಗಳ, ಭಾಷೆಗಳ ಪ್ರಜೆಗಳು ವಾಸಿಸುತ್ತಿದ್ದರು. ಇವರೆಲ್ಲರೂ ಒಟ್ಟೋಮಾನ್ ಟರ್ಕಿ ಸುಲ್ತಾನನ ಸಾಮ್ರಾಜ್ಯದ ಭಾಗವಾಗಿ ಪರಿಪಾಲನೆ ಮಾಡಿಕೊಳ್ಳುತ್ತಿದ್ದರು. ಒಟ್ಟೋಮಾನ್ ಸಾಮ್ರಾಜ್ಯ ಪತನಾ ನಂತರ ಈ ರಾಜ್ಯಗಳ ಮೇಲೆ ಅಧಿಕಾರವನ್ನು ಸಾಧಿಸುವುದಕ್ಕೆ ಆಸ್ಟ್ರೀಯಾ, ಜರ್ಮನಿ, ಟರ್ಕಿ, ರಷ್ಯಾಗಳು ಪೈಪೋಟಿ ನಡೆ

SCERT TELANGANA

ಸುತ್ತಿದ್ದವು. ಇಷ್ಟೆ ಅಲ್ಲದೆ ರಷ್ಯಾ, ಟರ್ಕಿಗಳು ಎಷ್ಟೋ ಕಾಲದಿಂದ ಕಪ್ಪು ಸಮುದ್ರ, ಭೂಮಧ್ಯ ಸಮುದ್ರ ಪ್ರದೇಶದ ಮೇಲೆ ಅಧಿಪತ್ಯಕ್ಕಾಗಿ ಪ್ರಯತ್ನಿಸುತ್ತಾ ಇದ್ದವು. ಆದರಿಂದ ಈ ಪ್ರದೇಶದಲ್ಲಿ ಉದ್ರಿಕ್ತ ಸ್ಥಿತಿಗಳು ಏರ್ಪಟ್ಟಿದ್ದವು. ಇದೇ ಸಂದರ್ಭ ದಲ್ಲಿ ಆಸ್ಟ್ರೀಯಾ, ಬೊಸ್ನಿಯಾದಲ್ಲಿ ತಮ್ಮ ಪಾಲನೆಗೆ ವಿರುದ್ಧವಾಗಿ ಇರುವ ಸರ್ಬರಾಷ್ಟ್ರಕ್ಕೆ ಸೇರಿದ ಚಳುವಳಿದಾರರನ್ನು ನಾಶಮಾಡುವುದಕ್ಕೆ ಪ್ರಯತ್ನಿಸುತ್ತಿತ್ತು.

ñÚPÜ | ¨Ü PÝÃÜ | :

ಮೊದಲ ಮಹಾಯುದ್ಧಕ್ಕೆ ತಕ್ಷಣದ ಕಾರಣವು 1914 ಜೂನ್ 28 ರಂದು ಆಸ್ಟ್ರೀಯಾ ರಾಜಕುಮಾರನಾದ ಆರ್ಚ್‌ಡ್ಯೂಕ್ ಫ್ರಾಂಜ ಫರ್ಡಿನಾಂಡ್ ಒಬ್ಬ ಬೊಸ್ನಿಯಾದ ಸರ್ಬನ ಕೈಯಿಂದ ಸಾಯಿಸಲ್ಪಟ್ಟನು. ಈ ಹತ್ಯೆಗೆ ಸಂಬಂಧಿಸಿದಂತೆ ಆಸ್ಟ್ರೀಯಾ, ಸರ್ಬಿಯಾಕ್ಕೆ ವಿವರಣೆಯನ್ನು ಕೇಳಿತು. ಸರ್ಬಿಯಾ ಕೊಟ್ಟ ವಿವರಣೆಗೆ ಸಂತೃಪ್ತಿ ಹೊಂದದ ಆಸ್ಟ್ರೀಯಾ ಸರ್ಬಿಯಾ ಮೇಲೆ 28 ಜುಲೈ 1914 ರಂದು ಯುದ್ಧವನ್ನು ಪ್ರಕಟಿಸಿತು. ಬ್ರಿಟನ್, ಫ್ರಾನ್ಸ, ರಷ್ಯಾ ಕೂಟದಲ್ಲಿ ಸರ್ಬಿಯಾ ಇರುವುದರಿಂದ ಸರ್ಬಿಯಾಕ್ಕೆ ಸಹಾಯಕ್ಕಾಗಿ ಆ ದೇಶಗಳು ಬಂದವು. ಇದರಿಂದ ಆಸ್ಟ್ರೀಯಾ ಪಕ್ಷದಲ್ಲಿರುವ ಜರ್ಮನಿ ಕೂಡಾ ಯುದ್ಧದಲ್ಲಿ ಸೇರುವುದರೊಂದಿಗೆ ಮೊದಲ ಪ್ರಪಂಚ ಯುದ್ಧ ಪ್ರಾರಂಭವಾಯಿತು.

Êãã¨ÜÆ ±Ü±Üíal ¿áá¨Ý®ÜíñÜÃÜ¨Ü ±Ü±Üíal

ÊÜÓÜìÇ… J±Üí¨Ü 1919:

¿áá¨Ü¨ÜÈ ÓãàñÜ, ¨àÍÜWÜÙÜá, CñÜÃÜ bPÜ¨àÍÜWÜÙÜ ÊáàÇ ¹Üo®… A¨ÜÃÜ ÊÜáãÃÜá ËáñÜ ¨àÍÜWÜÙÜá D J±Üí¨Ü¨ÜÈ®Ü ÐÜÃÜñÜáWÜÙÜ®Üá ŸÆÊÜíñÜÊÝX ÖàÄ¨ÜÃÜá. BÓãà&ÖÜíWàÄ¿á®…, JpãàÊÜÞ®… ÓÝÊÜÞgÂWÜÙÜ®Üá ËbѮÜWãÚÔ, bPÜ ÃÝÑà¿á ÃÝgÂWÜÙÝX ËíWÜwÔ¨ÜÃÜá. C¨ÜPÜ ÊÜáíaÜ PÝÜí£¿á ´ÜÈñÜÊÝX ÃÜÐÜÂ®… ÓÝÊÜÞgÂ PÜáÔ¨Üá¹©ñÜá. gÊÜáì®… ÓÝÊÜÞgÂPÜãÜ PÜãvÝ AíñÜÂ ÖÝw ±ÜhÝ±Ü»ÜáñÜ B«ÝÄñÜ WÜ|ñÜíñÜÊÜ®Üá ÓÝ²Ô¨ÜÃÜá. JpãàÊÜá®… ÓÝÊÜÞgÂ¨Ü ÓÝ®Ü¨ÜÈ oQì WÜ|ñÜíñÜ ÃÝgÂÊÝX H±Üì qñÜá. BµÜPÝ¨ÜÈ®Ü ÊÜÆÓÜ ¨àÍÜWÜÙÜ®Üá Ëhàñ ¨àÍÜWÜÙÜá ÖÜíbPÜãívÜÊÜâ. BÔà¿Þ, ÖÜíWàÄ, ¿ááWãÓãË¿Þ, hPÜÓãËQ¿Þ, GÓã¯Êàä, ÇÝq¿Þ µ®…ÇÝÂív… ®ÜíñÜÖÜ A®àPÜ ÖãÓÜ ¨àÍÜWÜÙÜá H±Üì oÊÜâ.

ÊÜÓÜìÇ… J±Üí¨ÜÊÜâ gÊÜáì¯¿á ÊáàÇ B¦ìPÜÊÝX, »èWãàÚPÜÊÝX A±ÝÃÜ ±ÜÊÜÞ|¨Ü ¨ÜívÜ ñÜñÜáÊÜíñÜ ÊÜÞwñÜá. Ëg¿á ÍÝÈWÜÙÝ¨Ü ËáñÜ ±ÜPÜWÜÚW gÊÜáì¯¿áá ®ÜÐÜ±ÜÄÖÝÃÜÊÝX A±ÝÃÜ Êãñ¨Ü Ö|Pãav ¸àPÝÀáñÜá, A¨ÜÃÜ »Üã»ÝW¨Ü ±ÝíñÜWÜÙÜ®Üá ´Ý®… CñÜÃÜ ¨àÍÜWÜÚW J²Ö¸àPÝÀáñÜá.

AíñÜÃÝÑà¿á ÓÜËáá£ 1920:

ÊÜÓÜìÇ… J±Üí¨Ü¨Ü ´ÜÈñÜÊÝX Êã¨ÜÆá AíñÜÃÝÑà¿á ÓÜíZÊÝX ®Ý®ÝhÝ£ ÓÜËáá£ H±Üì qñÜá. 1920 g®ÜÊÜÄ 11 ÃÜí¨Üá C¨Üá ÓÝ±Ü®Ü¿ÞÀáñÜá. 1946ÃÜÈ A¨Ü®Üá ÃÜ¨ÜáWãÚÓÜáÊÜÊÜÃÜW A¨Üá

- GÃÜvÜá ¨àÍÜWÜÙÜ ÊÜá«Ü, ÊÝÂgÂWÜÙÜ ±ÜÄÐÝÃÜPÝX ®Ý®ÝhÝ£ ÓÜËáá£¿áíñÜÖÜ ÓÜíÓÜ×ÙÜá ÖàWÜ ÓÜÖÝ¿á±ÜvÜáñÜÊÜ? ÊÝÂgÂWÜÙÜ ±ÜÄÐÝÃÜPÝX AÊÜâ H®Üá ÊÜÞvÜáÊÜÊÜâ?

SCERT TELANGANA

PÆÓ ¯Ê ì ×Ôñá. B¿áá«WÙ ñ¿ÞÄ¿á®á ñXÓáÊ¨á, ÊÞñáPñWÙ A¥ÊÝ Óí«Ý®WÙ ÊáãÆP ÊÝÂgÂWÙ®á ±ÄÖÄÓáÊ¨Ã ÊáãÆP ¿áá¨WÙ®á ¯«ÝÄÓáÊ¨PÝX H±ì qñá.

A¼Ê©, PÝËáì PÃ PÇÝÂ | , BÃãàWÂ¨íñÖ ËÐ¿áWÚWÝX¿áã Pãv PÑ ÊÞwñá. C¨ÃÈ 58 ¨àÍWÙá Ó¨ÓÂñÊ®á Öãí©Ê. BÃí»¨È PÆÊâ AíÍWÙÈ Ëg¿á ÓÝ—Ô¨ÝWãÂ C¨á GÃv®¿á ±±íaÌ ¿áá¨Ê®á ¯ÈÓÇÝWÈÆ.

ರಷ್ಯಾದಲ್ಲಿ ಸಮಾಜವಾದಿ (ಸೋಷಲಿಸ್ಟು) ಕ್ರಾಂತಿ (1917–1922) :

> **ರಷ್ಯಾ ಕ್ರಾಂತಿ ದಿನಾಂಕ**
>
> 1918 ಫೆಬ್ರವರಿ 1 ವರೆಗೆ ರಷ್ಯಾ ಜುಲಿಯನ್ ಕ್ಯಾಲೆಂಡರ್‌ನ್ನು ಅನುಸರಿಸಿತು. ಆಗಿನಿಂದ ಪ್ರಪಂಚವೆಲ್ಲಾ ಉಪಯೋಗಿಸುತ್ತಿರುವ ಗ್ರೆಗೋರಿಯನ್ ಕ್ಯಾಲೆಂಡಿರಿಗೆ ಬದಲಾಯಿತು. ಗ್ರೆಗೋರಿಯನ್ ದಿನಾಂಕಗಳು ಜುಲಿಯನ್ ದಿನಾಂಕಗಳಿಗಿಂತ 13 ದಿನಗಳು ಮುಂದೆ ಇರುತ್ತವೆ. ಆದ್ದರಿಂದ ನಮ್ಮ ಕ್ಯಾಲೆಂಡರ್ ಪ್ರಕಾರ "ಫೆಬ್ರವರಿ" ಕ್ರಾಂತಿ ಮಾರ್ಚ್ 12 ರಂದು "ಅಕ್ಟೋಬರ್" ಕ್ರಾಂತಿ ನವೆಂಬರ್ 7ರಂದು ನಡೆಯಿತು.

20ನೇ ಶತಮಾನದ ಪ್ರಾರಂಭದಲ್ಲಿ ಜಾರ್‌ನ ಆಳ್ವಿಕೆಯಲ್ಲಿ ರಷ್ಯಾ ಎರಡೂ ಖಂಡಗಳಲ್ಲಿ ವಿಸ್ತರಿಸಿ ಯುರೋಪ್, ಏಷ್ಯಾ ಶಕ್ತಿಯಾಗಿ (ಯುರೇಷಿಯಾ) ವಿಶಾಲ ಸಾಮ್ರಾಜ್ಯವಾಗಿತ್ತು. ಚೈನಾ ಭಾರತದೇಶದ ನಂತರ 15.6 ಕೋಟಿ ಜನಸಂಖ್ಯೆಯಲ್ಲಿ ಮೂರನೇ ಅತಿದೊಡ್ಡ ದೇಶವಾಗಿತ್ತು. ಇದರಲ್ಲಿ ರಷ್ಯಾ, ಉಕ್ರೆಯಿನ್, ಉಜ್ಬೆಕಿಸ್ತಾನ್, ಕಜಕಿಸ್ಥಾನ್, ತಜಿಕಿಸ್ಥಾನ್, ತುರ್ಕೊ ಮಾನಿಯಾದಂತಹ ಕೆಲವು ದೇಶಗಳಿದ್ದವು. ರಷ್ಯಾದಲ್ಲಿ ಅಧಿಕ ಭಾಗ ಜನರು ವ್ಯವಸಾಯದಿಂದ ಜೀವನೋಪಾಯವನ್ನು ಪಡೆಯುತ್ತಿದ್ದರು. ಭೂಮಿ ಮೇಲೆ ನಿಯಂತ್ರಣ ವಿಷಯದಲಿ ಫ್ಯೂಡಲ್ ಭೂಮಾಲಿಕರಿಗೆ, ರೈತಾಂಗಕ್ಕೆ ಮಧ್ಯ ಘರ್ಷಣೆಗಳು ಸಂಭವಿಸುತ್ತಾ ಇದ್ದವು. ಭೂಮಿಯಲ್ಲಿ ಅಧಿಕ ಭಾಗ ಫ್ಯೂಡಲ್ ಭೂ ಮಾಲಿಕರಿಗೆ ಸೇರಿತ್ತು. ರೈತಾಂಗದಲ್ಲಿ ಅಧಿಕ ಭಾಗ ತಾವು ಸಾಗುವಳಿ ಮಾಡುತ್ತಿರುವ ಭೂಮಿಗೆ ಬಾಡಿಗೆ ವಿಧಿಸಲಾಗುತಿತ್ತು.

ಇತರ ನಿರಂಕುಶಾಧಿಕಾರಿಗಳ ಮಾದರಿಯಲ್ಲಿ ಜಾರ್ ನಿಕೊಲಸ್ II ಕೂಡ ತನ್ನ ವಿಶಾಲ ರಷ್ಯಾ ಸಾಮ್ರಾಜ್ಯವನ್ನು ಸೈನ್ಯ, ಪರಿಪಾಲನಾ ಅಧಿಕಾರಿಗಳ ಸಹಾಯದಿಂದ ಆಳ್ವಿಕೆ ನಡೆಸಿದನು. ಆದರೆ ಪ್ರಪಂಚ ಯುದ್ಧದಿಂದ ರಷ್ಯಾ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಚಿದ್ರಗೊಂಡಿತು. ಮೊದಲ ಪ್ರಪಂಚ ಯುದ್ಧಕ್ಕೆ ಮೊದಲು, ಪ್ರಪಂಚಕ್ಕೆಲ್ಲಾ ಅತಿದೊಡ್ಡ ಸೈನ್ಯ ರಷ್ಯದ್ದೇ ಆಗಿತ್ತು. ಆದರೆ 1917 ರಷ್ಯರಲ್ಲಿ 20 ಲಕ್ಷ ಸೈನಿಕರು, ಪೌರರು ಮರಣ ಹೊಂದಿ, ಮೊದಲ ಪ್ರಪಂಚ ಯುದ್ಧದಲ್ಲಿ ಅತ್ಯಧಿಕ ಪ್ರಾಣನಷ್ಟ ಸಂಭವಿಸಿತು. ಯುದ್ಧರಂಗಕ್ಕೆ ಆಹಾರವನ್ನು ಒದಗಿಸಿದ್ದರಿಂದ ಪಟ್ಟಣದಲ್ಲಿ ಕೊರತೆ ಏರ್ಪಟ್ಟಿತು. 1917 ಮಾರ್ಚ್ 8ನೇ ಸೆಂಟ್ ಪಿಟರ್ಸ್‌ಬರ್ಗ್ ನಗರದಲ್ಲಿ 10,000 ಮಹಿಳೆಯರು ನಿರಸನ ಪ್ರದರ್ಶನಗಳನ್ನು ಕೈಗೊಂಡು "ರೊಟ್ಟಿ, ಶಾಂತಿ" ಬೇಕೆಂದು ಕೋರಿದರು. ಈ ನಿರಸನಗಳಲ್ಲಿ ಮಹಿಳೆಯರ ಜೊತೆಗೆ ಕಾರ್ಮಿಕರು ಕೂಡ ಭಾಗವಹಿಸಿದರು. ರಾಜಧಾನಿಯಲ್ಲಿ ಈ ನಿರಸನಗಳಿಂದ ಕಂಗಾಲಾದ ಜಾರ್ ನಿಕೋಲಸ್ II ನಿರಸನಕಾರರನ್ನು ತೊಲಗಿಸಬೇಕೆಂದು, ಅವಸರವಾದರೆ ಸಾಯಿಸುವಂತೆ ಆದೇಶಿಸಿದನು. ಆದರೆ ಸೈನ್ಯವು ಅದರ ಬದಲು ಪ್ರದರ್ಶನಕಾರರೊಂದಿಗೆ ಸೇರಿಕೊಂಡಿತು. ಎರಡು ದಿನಗಳಲ್ಲಿ ಪರಿಸ್ಥಿತಿ ಎಷ್ಟು ಬದಲಾಯಿತೆಂದರೆ ಜಾರ್ ಪಲಾಯನ ಮಾಡಿದ್ದರಿಂದ ರಾಜರ ಆಳ್ವಿಕೆಗೆ ಸೇರಿದ ರಷ್ಯನ್ನರು ತಾತ್ಕಾಲಿಕ ಸರ್ಕಾರವನ್ನು ಏರ್ಪಡಿಸಿ ದರು. ಇದನ್ನೇ 1917ರಲ್ಲಿ ಸಂಭವಿಸಿದ ಮೊದಲ ರಷ್ಯಾ ಕ್ರಾಂತಿ ಎಂದು ಅಥವಾ ಮಾರ್ಚ್ ಕ್ರಾಂತಿ ಎಂದು ಕರೆಯುತ್ತಾರೆ.

SCERT TELANGANA

æYÃÊÜA PYÃí£¿áÈ ÊÜá×Üæ¿áAÜá

“ಮಹಿಳಾ ಕಾರ್ಮಿಕರು ಕಾಲಕಳೆದಂತೆ ತಮ್ಮ ಸಹಪಾಠಿ ಪುರುಷ ಕಾರ್ಮಿಕರಿಗೆ ಸ್ಪೂರ್ತಿಯನ್ನು ನೀಡುತ್ತಿದ್ದರು. ಲೊರೆಂಜ್ ಟೆಲಿಫೋನ್ ಕಾರ್ಖಾನೆಯಲ್ಲಿ ಮಾರ್ಫಾ ವಾಸಿಲೆವಾ ಒಬ್ಬಂಟಿಯಾಗಿ ವಿಜಯವಂತವಾದ ಚಟುವಟಿಕೆಗೆ ಕರೆ ನೀಡಿದಳು. ಈ ದಿನ ಬೆಳಿಗ್ಗ ಮಹಿಳಾ ದಿನೋತ್ಸವ ಸಂದರ್ಭವಾಗಿ ಮಹಿಳಾ ಕಾರ್ಮಿಕರು ಪುರುಷರಿಗೆ ಕೆಂಪು ಕತ್ತಿನ ಪಟ್ಟಿಗಳನ್ನು ಬಹುಮತಿಯಾಗಿ ಕೊಟ್ಟರು. ಆ ಸಮಯದಲ್ಲಿ ಮಿಲ್ಲಂಗ್ ಯಂತ್ರ ನಿರ್ವಹಕರಾದ ಮಾರ್ಫಾ ವಾಸಿಲೇವಾ ಕೆಲಸ ಬಿಟ್ಟು ಆಗಿಂದಾಗ್ಗೆ ಚಳುವಳಿಗೆ ಕರೆನೀಡಿದಳು. ಅಲ್ಲಿರುವ ಕಾರ್ಮಿಕರು ಆಕೆಗೆ ಬೆಂಬಲ ನೀಡಿದರು... ಫೋರ್‌ಮಾನ್ ಈ ವಿಷಯವನ್ನು ಯಜಮಾನನಿಗೆ ತಿಳಿಯಪಡಿಸಿ ಆಕೆಗೆ ಪೂತಿ ರೊಟ್ಟಿ ಕಳುಹಿಸಿದನು. ಆಕೆ ರೊಟ್ಟಿ ತೆಗೆದುಕೊಂಡು ಆದರೆ ಕೆಲಸ ಪುನಃ ಪ್ರಾರಂಭಿಸಲಿಲ್ಲ. ಕೆಲಸ ಏಕೆ ಮಾಡುತ್ತಿಲ್ಲವೆಂದು ಫೋರ್‌ಮಾನ್ ಕೇಳಿದಾಗ ‘‘ಉಳಿದ ಎಲ್ಲರೂ ಹಸಿವಿನಿಂದಿದ್ದಾಗ ನಾನು ಮಾತ್ರ ಹೊಟ್ಟೆ ಹೇಗೆ ತುಂಬಿಸಿಕೊಳ್ಳುತ್ತೇನೆ?’’ ಎಂದು ಆಕೆ ಪ್ರತಿಕ್ರಿಯಿಸಿದಳು. ಕಾರ್ಖಾನೆಯಲ್ಲಿ ಇತರ ವಿಭಾಗದಲ್ಲಿನ ಮಹಿಳೆಯರು ಮಾರ್ಫಾಗೆ ಬೆಂಬಲವಾಗಿ ಆಕೆಯನ್ನು ಸುತ್ತವರೆದರು. ಕ್ರಮೇಣ ಮಹಿಳೆಯರೆಲ್ಲಾ ಕೆಲಸವನ್ನು ನಿಲ್ಲಿಸಿದರು. ಆ ನಂತರ ಪುರುಷರು ಕೂಡಾ ತಮ್ಮ ಪರಿಕರಗಳನ್ನು ಬಿಟ್ಟು ಸಮಾವೇಶದಲ್ಲಿ ಭಾಗವಹಿಸಿದರು. ಎಲ್ಲರೂ ಬಜಾರಿಗೆ ಓಡ ತೊಡಗಿದರು.”

ನಂತರ ಇದಕ್ಕಿಂತಲೂ ದೊಡ್ಡ ಕ್ರಾಂತಿ ಅಕ್ಟೋಬರ್ 1917ರಲ್ಲಿ ಸಂಭವಿಸಿತು. ಇದು ದಿಢೀರನೆ ನಡೆದದ್ದಲ್ಲ. ಜಾರ್ ಪದವಿ ನಿವೃತ್ತಿ ಹೊಂದಿದ ನಂತರ ರಷ್ಯಾವನ್ನು ಆಳ್ವಿಕೆ ನಡೆಸುತ್ತಿರುವ ಉದಾರವಾದಿಗಳು, ರಾಜರ ಕುಟುಂಬದವರು ತಾಯಿ ನಾಡಿನ ಗೌರವ ವನ್ನು ಕಾಪಾಡಲು ಯುದ್ಧವನ್ನು ಮುಂದು ವರೆಸಬೇಕೆಂದು ನಿರ್ಧರಿಸಿದರು. ಯುದ್ಧ ದಲ್ಲಾದ ಸೋಲಿನಿಂದ ಆರ್ಥಿಕ ಕೊರತೆ ಯಿಂದ ಸಾಮಾನ್ಯ ಜನರು ಬೇಸತ್ತು ಯುದ್ಧ ವನ್ನು ವಿರೋಧಿಸಿದರು. ಅವರು ಸೋವಿಯಟ್ ಎಂದು ಕರೆಯುವ ಸಂಘ ಗಳಾಗಿ ಏರ್ಪಟ್ಟರು. ಸೈನಿಕರು, ಕೈಗಾರಿಕಾ ಕಾರ್ಮಿಕರು, ಗ್ರಾಮೀಣ ಪ್ರಾಂತದ ಜನರು ಏರ್ಪಡಿಸಿದ ಸೋವಿಯಟ್‌ಗಳು ಸಾಧಾರಣ ಜನರ ಶಕ್ತಿಯನ್ನು ಪ್ರಕಟಿಸಿದವು. ರಷ್ಯಾ ಸಮಾಜವಾದಿ ಪಾರ್ಟಿಗಳಲ್ಲಿ ಬೊಲ್ಷಿವಿಕ್ಕರು ಎಂಬ ಒಂದು ಬೃಂದ ಇವುಗಳಿಗೆ ದಾರಿ ತೋರಿಸಿತು.

ಬೊಲ್ಷಿವಿಕ್ಕರಿಗೆ ವ್ಲಾಡಿಮಿರ್ ಲೆನಿನ್ (1870-1924) ನಾಯಕತ್ವವಹಿಸಿದನು. ಷರತ್ತುಗಳು ಇಲ್ಲದ ಶಾಂತಿಯನ್ನು ತಕ್ಷಣ ಸ್ಥಾಪಿಸುವುದು, ಎಲ್ಲಾ ಭೂಮಿಯನ್ನೂ ರಾಷ್ಟ್ರೀಕರಣಗೊಳಿಸಿ ಅದನ್ನು ರೈತಾಂಗಕ್ಕೆ ನೀಡುವುದು, ಬೆಲೆಗಳ ನಿಯಂತ್ರಣ, ಎಲ್ಲಾ ಕಾರ್ಖಾನೆಗಳು, ಬ್ಯಾಂಕುಗಳನ್ನು ರಾಷ್ಟ್ರೀಕರಣದಂತಹ ಸೋವಿಯಟ್ (ರೈತಾಂಗ, ಕಾರ್ಮಿಕ ಸೈನಿಕ ಸಂಘಗಳ) ಬೇಡಿಕೆಗಳನ್ನು ಕೈಗೊಂಡದ್ದರಿಂದ ಬೋಲ್ಷಿವಿಕ್ಕರು ಅವರ ವಿಶ್ವಾಸಕ್ಕೆ ಪಾತ್ರರಾದರು. ತಾತ್ಕಾಲಿಕ ಸರ್ಕಾರದಿಂದ ಅಕ್ಟೋಬರ್-ನವೆಂಬರ್ 1917ರಲ್ಲಿ ಬೋಲ್ಷಿವಿಕ್ಕರ ನಾಯಕತ್ವದಲ್ಲಿನ ಸೋವಿಯಟ್‌ರ ಅಧಿಕಾರವನ್ನು ಪಡೆದು ಕೊಂಡು ಯುದ್ಧಕ್ಕೆ ಅಂತ್ಯ ಹಾಡಲು, ಭೂಮಿ ಯನ್ನು ಪುನಃ ಹಂಚಲು ತಕ್ಷಣ ಕ್ರಮಗಳನ್ನು ಕೈಗೊಂಡರು. ರಷ್ಯಾ ರಾಜವಂಶಸ್ಥರು ಬಿಳಿ ಸೈನ್ಯ, (ಕಮ್ಯುನಿಸ್ಟು ವಿರುದ್ಧ ಸೈನಿಕರು ಬ್ರಿಟನ್, ಫ್ರಾನ್ಸ್, ಅಮೇರಿಕಾ, ಜಪಾನುಗಳ ಸಹಾಯದಿಂದ) ಪೌರಯುದ್ಧಕ್ಕಿಳಿದ್ದರಿಂದ ರಷ್ಯಾದಲ್ಲಿ ತಕ್ಷಣ ಶಾಂತಿ ನೆಲೆಗೊಳ್ಳಲಿಲ್ಲ. 1920 ರಲ್ಲಿಗೆ ಈ

ಚಿತ್ರ 12.3 : ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿರುವ ಲೆನಿನ್

SCERT TELANGANA

ಶಕ್ತಿಗಳೆಲ್ಲಾ ಸೋಲನ್ನನುಭವಿಸಿದವು. ಬೋಲ್ಷಿವಿಕ್ಕರು ರಷ್ಯನ್ ಸಾಮ್ರಾಜ್ಯ ಕೊನೆಗೊಂಡಿತೆಂದು ಪ್ರಕಟಿಸಿ ಅದರ ಕೆಳಗೆ ಇರುವ ದೇಶಗಳು ಸ್ವತಂತ್ರ್ಯವಾಗಿರಲು ಅವಕಾಶ ಕಲ್ಪಿಸಿದರು. ಆದರೆ 1924ರಲ್ಲಿ ರಷ್ಯ ಸೋವಿಯಟ್ ಸರ್ಕಾರದ ಏರ್ಪಾಟು ಮಾಡಿದ ಸೋವಿಯಟ್ ಸೋಷಿಯಲಿಸ್ಟು ರಿಪಬ್ಲಿಕರ ಒಕ್ಕೂಟದ (ಯುಎಸ್ಎಸ್ಆರ್) ಅಡಿಯಲ್ಲಿ ಜಾರ್ ಸಾಮ್ರಾಜ್ಯದಲ್ಲಿ ಇರುವ ದೇಶಗಳನ್ನೆಲ್ಲಾ ಸೇರಿಸಲು ಅಂಗೀಕರಿಸಲಾಯಿತು.

ಇದರಿಂದ ಫ್ಯೂಡಲ್ ಭೂಮಾಲೀಕರು, ರಾಜರು, ಬಂಡವಾಳದಾರರಂತಹ ದೊಚುವಿಕೆ ದಾರರು ಅಥವಾ ದೇಶವನ್ನು ನಿರ್ಮಿಸಲು ಒಂದು ಬೃಹತ್ ಪ್ರಯೋಗ ಮೊದಲು ಗೊಂಡಿತು. ಆಧುನಿಕ, ಕೈಗಾರಿಕಾ ಸಮಾಜವನ್ನು ನಿರ್ಮಿಸುತ್ತಾ ಅಸಮಾನತೆಗಳು, ಹುಟ್ಟು, ಲಿಂಗ, ಭಾಷೆಯಂತಹವುಗಳ ಆಧಾರದ ಮೇಲೆ ಬೇಧಭಾವವಿಲ್ಲದ ಸಮಾಜವನ್ನು ಏರ್ಪಡಿಸಲು ಯುಎಸ್ಎಸ್ಆರ್ ಪ್ರಯತ್ನಿಸಿತು.

A—PÝÃÜPæR Ÿí ¨Ü ÓÝrÈ®...

1924ರಲ್ಲಿ ಲೆನಿನ್ ಮರಣ ಹೊಂದಿದ ನಂತರ ಸ್ಟಾಲಿನ್ ಕಮ್ಯುನಿಸ್ಟ್ ಪಾರ್ಟಿಯ ನಾಯಕನಾದನು. ನಂತರ ದಶಮಾನಗಳಲ್ಲಿ ಆತನು ಸಂಪೂರ್ಣ ನಿಯಂತ್ರಣವನ್ನು ಸಾಧಿಸಿಕೊಂಡು ತನಗೆ ವಿರೋಧ ಇಲ್ಲದಂತೆ ಮಾಡಿದನು. ಯಾರು ಆದೇಶಿಸಲಾರದ ಅಧಿಕಾರದಿಂದ ಸೋವಿಯಟ್ ರಷ್ಯವನ್ನು ಪ್ರಬಲವಾದ ಆರ್ಥಿಕ ಶಕ್ತಿ ಯಾಗಿ ಬದಲಾಯಿಸಿದನು.

APæãràŸÃ... PÝÂí£, ÃÜÐÝÂ WÝÂËáà | ±ÝÂíñÜ : GÃÜvÜá AÊÜÇæ ã àPÜ®ÜWÜÙÜá

1) ''1917 ಅಕ್ಟೋಬರ್ 25 ಕ್ರಾಂತಿ ಹೋರಾಟಕ್ಕೆ ಸಂಬಂಧಿಸಿದ ವಾರ್ತೆಗಳು ಆ ಗ್ರಾಮಕ್ಕೆ ಮರುದಿನ ತಲುಪಿದರು. ಇದನ್ನು ಪ್ರಜೆಗಳು ಉತ್ಸಾಹದಿಂದ ಸ್ವಾಗತಿಸಿದರು. ತಮಗೆ ಉಚಿತವಾಗಿ ಭೂಮಿ ದೊರೆಯುತ್ತದೆಂದು, ಯುದ್ಧ ಮುಗಿಯುತ್ತದೆಂದು ರೈತರಯ ಬಯಸಿತು. ಈ ವಾರ್ತೆ ತಿಳಿದ ದಿನ ಭೂಮಾಲಿಕರಿಗೆ ಸೇರಿದ ಕೋಟೆಯಂತಹ ಮನೆಯನ್ನು ಲೂಟಿ ಮಾಡಿದರು, ಪಶುಗಳನ್ನು ''ಜಪ್ತು'' ಮಾಡಿದರು. ವಿಶಾಲವಾದ ಹಣ್ಣಿನ ತೋಟಗಳನ್ನು ಕಡಿದುಹಾಕಿ ಕಟ್ಟಿಗೆಯಾಗಿ ರೈತಾಂಗಕ್ಕೆ ಮಾರಾಟ ಮಾಡಿದರು. ಎಲ್ಲಾ ಇದ್ದ ಆತನ ಭವನಗಳನ್ನು ಹೊಡೆದು ಹಾಕಿ, ನಿರ್ಜೀವವಾಗಿಸಿದರು. ಹೊಸ ಸೋವಿಯಟ್ ವಿಧಾನವನ್ನು ಅನುಸರಿಸಲು ಸಿದ್ಧವಾಗಿರುವ ರೈತಾಂಗವನ್ನು ಆತನ ಭೂಮಿಯನ್ನು ಹಂಚಿಕೊಟ್ಟರು.'' ಫೆಡಾರ್‌ಬೆಲೋವ್ ಬರೆದ ''ದಿ ಹಿಸ್ಟರೀ ಆಫ್ ಎ ಸೋವಿಯಟ್ ಕಲೆಕ್ಟಿವ್ ಫಾಂ'' ದಿಂದ,

2) ಭೂಮಿ ಇರುವ ಕುಟುಂಬ ಸದಸ್ಯನು ಎಸ್ಟೇಟ್‌ನಲ್ಲಿ ನಡೆದ ವಿಷಯಗಳನ್ನು ಕುರಿತು ತನ್ನ ಸಂಬಂಧಿಕನಿಗೆ ಹೀಗೆ ಬರೆದನು.

''ನಿಶ್ಯಬ್ದವಾಗಿ, ಶಾಂತಿಯುತವಾಗಿ, ಯಾವುದೇ ನೋವು ಇಲ್ಲದೆ ''ಹೋರಾಟ'' ನಡೆದುಹೋಯಿತು... ಮೊದಲು ಕೆಲವು ದಿನಗಳು ಭರಿಸಲಾರದಂತಹವುಗಳಿದ್ದವು. ಮಿಖಾಯಿಲ್ ಮಿಖಾಯಿಲೋನಿಚ್ (ಎಸ್ಟೇಟು ಯಜಮಾನ) ಪ್ರಶಾಂತವಾಗಿದ್ದನು... ಹೆಣ್ಣು ಮಕ್ಕಳು ಕೂಡಾ... ಚೇರ್‌ಮೆನ್ ಮರ್ಯಾದೆಯಿಂದಲೂ, ಸರಿಯಾಗಿಯೂ ವರ್ತಿಸಿದನೆಂದೇ ಹೇಳಬೇಕು. ನಮಗೆ ಎರಡು ಆಕಳು, ಎರಡು ಕುದುರೆಗಳನ್ನು ಬಿಟ್ಟರು. ನಮ್ಮನ್ನು ತೊಂದರೆ ಕೊಡಬಾರದೆಂದು ಕೆಲಸದವರು ಅವರಿಗೆ ಹೇಳುತ್ತಿದ್ದರು. ''ಅವರನ್ನು ಬದುಕಲು ಬಿಡಿ. ಅವರ ರಕ್ಷಣೆಗೆ, ಆಸ್ತಿಗೆ ನಮ್ಮದು ಜಾಮೀನು ಅವರನ್ನು ಸಾಧ್ಯವಾದಷ್ಟು ಮಾನವೀಯತೆಯಿಂದ ನೋಡಿರಿ...''

''... ಅನೇಕ ಗ್ರಾಮಗಳಲ್ಲಿ ಕಮಿಟಿಗಳನ್ನು ತೆಗೆದುಹಾಕಿ ಎಸ್ಟೇಟನ್ನು ಮಿಖಾಯಿಲ್ ಮಿಖಾಯಿಲೋನಿಚ್‌ಗೆ ಮರಳಿ ನೀಡಲು ಪ್ರಯತ್ನಗಳು ನಡೆಯುತ್ತವೆಂದು ಪುಕಾರು ಎದ್ದಿತು. ಆಗ ನಡೆಯುತ್ತದೆ ಇಲ್ಲವೋ ಅದು ನಮಗೆ ಒಳ್ಳೆಯದೋ ಕೆಟ್ಟದ್ದೋ ನನಗೆ ತಿಳಿದಿಲ್ಲ, ಆದರೆ ನಮ್ಮ ಪ್ರಜೆಗಳ ಅಂತರಾತ್ಮ ಸಜೀವವಾಗಿದೆ ಎಂದು ನಮಗೆ ಸಂತೋಷವಾಗಿದೆ . . . ''

ಮೂಲ: ಸೆರ್ಜ್ ಷ್ಮೆಮಾನ್ ಬರೆದ್ದ ಎಕೊಸ್ ಆಫ್ ಎ ನೇಟೀವ್ ಲ್ಯಾಂಡ್ ಟು ಸೆಂಚರೀಸ್ ಆಫ್ ಎ ರಷ್ಯನ್ ವಿಲೇಜ್, (1997) ರಿಂದ.

- ಕ್ರಾಂತಿಯನ್ನು ಕುರಿತು ಗ್ರಾಮೀಣ ಪ್ರಾಂತಗಳಲ್ಲಿ ಎರಡು ಪಕ್ಷಗಳನ್ನು ಮೇಲೆ ಓದಿರಿ. ಆ ಘಟನೆಗಳಿಗೆ ನೀವು ಕೂಡ ಸಾಕ್ಷಿಯಾಗಿ ಊಹಿಸಿಕೊಳ್ಳಿ. 1) ಎಸ್ಟೇಟ್ ಯಜಮಾನ 2) ಸಣ್ಣ ರೈತ, 3) ಪತ್ರಿಕರ್ತರಾಗಿ ಆಗಿನ ಘಟನೆಗಳನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

SCERT TELANGANA

APïãràŸÃ... PÝÌí£¿á ÊÌá«ÌÂ HÐÝÂ : AÊÌÇï ã àPÌ®ÌWÌÙÌá

ಪ್ರಪಂಚದಾದ್ಯಂತ ಸಮಾಜವಾದಿ ಕ್ರಾಂತಿಯನ್ನು ಪ್ರೋತ್ಸಾಹಿಸಲು ಏರ್ಪಟ್ಟ "ಕೊಮಿನ್‌ಟರ್" ಎನ್ನುವ ಅಂತರಾಷ್ಟ್ರೀಯ ಸಂಸ್ಥೆಯಲ್ಲಿ ಎಂ.ಎನ್. ರಾಯ್ ಮುಖ್ಯ ಪಾತ್ರವಹಿಸಿದನು. 1920ರ ಪೌರಯುದ್ಧ ಕಾಲದಲ್ಲಿ ಆತನು ಮಧ್ಯ ಏಷ್ಯಾದಲ್ಲಿದ್ದನು ಆತನು ಹೀಗೆ ಬರೆದನು.

"ಗ್ರಾಮ ಹಿರಿಯ ವೃದ್ಧನು, ಬಹಳ ಉತ್ತಮನು. ಆತನಿಗೆ ಸಹಾಯಕ್ಕೆ ಇದ್ದಯುವಕರನ್ನು ರಷ್ಯನ್ ಮಾತನಾಡುತ್ತಿದ್ದನು... ಕ್ರಾಂತಿಯನ್ನು ಕುರಿತು ಆತನು ಕೇಳಿದ್ದನು, ಜಾರ್ ಚಕ್ರವರ್ತಿ ಓಡಿ ಹೋದನೆಂದು, ತನ್ನ ಸ್ವಸ್ಥಳವಾದ ಕಿರಿಗಿಜ್‌ನನ್ನು ಸ್ವಾಧೀನ ಪಡೆದುಕೊಂಡ ಸೈನ್ಯಾಧಿಪತಿಗಳು ಓಡಿಹೋದರೆಂದು ತಿಳಿದಿತ್ತು ಎಂದರೆ ಕ್ರಾಂತಿಯಿಂದ ಕಿರಿಗಿಜ್ ಸ್ವತಂತ್ರ್ಯವನ್ನು ಪಡೆಯಿತು. "ಕ್ರಾಂತಿ ನೆಲೆಗೊಳ್ಳಬೇಕು," ಎಂದು ಆ ಯುವಕನು ಘೋಷಿಸಿದನು. ಆತನು ಜನ್ಮತಃ ಬೋಲ್ಷಿವಿಕ್‌ಗಳ ಹಾಗೆ ಇದ್ದನು. ಊರು ಎಲ್ಲಾ ಆತನೊಂದಿಗೆ ಕೈಜೋಡಿಸಿತು."

Gí.G®.... ÃÝ¿å... ÊïãÊÌÞ¿á0...ì

(1964)

ÃÌÐÝÂ©í ¨ 1930ರಲ್ಲಿ ರವೀದ್ರನಾಥ್ ಠಾಗೂರ್ ಹೀಗೆ ಬರೆದಿದ್ದಾರೆ.

"ಐರೋಪಾದಲ್ಲಿನ ಇತರ ರಾಜಧಾನಿ ಗಳೊಂದಿಗೆ ಹೋಲಿಸಿದರೆ ಮಾಸ್ಕೊ ಅಷ್ಟೇನು ಶುಭ್ರವಾಗಿದೆ ಎನಿಸುವುದಿಲ್ಲ. ಬಜಾರುಗಳಲ್ಲಿ ಹೋಗುತ್ತಿರುವವರು ಯಾರು ಸೂಕ್ಷ್ಮ ಬುದ್ಧಿಯುಳ್ಳ ವರಾಗಿರಲಿಲ್ಲ. ಈ ಪ್ರದೇಶವೆಲ್ಲಾ ಕಾರ್ಮಿಕರಿಗೆ ಸೇರಿದ್ದು... ಇಲ್ಲಿನ ಸಾಮಾನ್ಯ ಜನರು ಸಜ್ಜನರ ನೆರಳು ಕೂಡ ಇವರ ಮೇಲೆ ಬಿದ್ದಿರಲಿಲ್ಲ... ಎಷ್ಟೋ ಯುಗಗಳಿಂದ ಕಣ್ಮರೆಯಾದವರು ಈಗ ಬೆಳಕಿಗೆ ಬಂದಿದ್ದಾರೆ... ನಮ್ಮ ದೇಶದಲ್ಲಿನ ರೈತಾಂಗ, ಕಾರ್ಮಿಕ ಕುರಿತು ಯೋಚಿಸಿದೆನು. ಇದೆಲ್ಲಾ ಅರೇಬಿಯನ್ ರಾತ್ರಿ ಕಥೆಯಲ್ಲಿನ ಭೂತ ಮಾಡಿದ ಮಾಯೆರೀತಿ ಕಾಣುತ್ತದೆ. ಒಂದು ದಶಮಾನಗಳ ಹಿಂದೆ ನಮ್ಮ ಪ್ರಜೆಗಳ ರೀತಿಯಲ್ಲೇ ಇವರೂ ನಿಕ್ಷರಾಸ್ಯರಾಗಿಯೂ, ನಿಸ್ಸಹಾಯಕರಾಗಿಯೂ, ಹಸಿವಿನಿಂದ ಕೂಡಿದವ ರಾಗಿಯೂ ಇದ್ದರು . ಈ ಕೆಲವು ವರ್ಷಗಳಲ್ಲೇ ಪರ್ವತದಷ್ಟು ದೊಡ್ಡದಾದ ಅಜ್ಞಾನ, ನಿಸ್ಸಾಯಕತೆ ತೊಲಗಿಸಿದ್ದನ್ನು ನೋಡಿ ಭಾರತೀಯರಿಗಿಂತ ಹೆಚ್ಚು ಆಶ್ಚರ್ಯವನ್ನು ಪಡುವವರು ಯಾರು ?"

1928ರಲ್ಲಿ ಯುಎಸ್‌ಎಸ್.ಆರ್. ಯೋಜನಾಬದ್ಧ ಆರ್ಥಿಕಾಭಿವೃದ್ಧಿಯನ್ನು ಕೈಗೊಂಡಿತು. ಇದು ವೇಗವಂತವಾದ ಕೈಗಾರಿಕಿಕರಣ, ವ್ಯವಸಾಯ ದಲ್ಲಿ ಭೂಮಿಗಳ ಏಕೀಕರಣ ಎನ್ನುವ ಉಭಯ ವಿಧಾನ ಗಳನ್ನು ಅವಲಂಬಿಸಿತು.

±Ì±Ìíal¨Ì ÊïáàÇï ÃÌÐÝÂ PÝÌí£¿á ±Ì»ÝÊÌ

ಸಮಾನತೆ, ಜಾತಿ ಸ್ವತಂತ್ರ್ಯದಂತಹ ಆದರ್ಶಗಳ ಕಡೆ ಪ್ರಪಂಚದಾದ್ಯಂತ ಪ್ರಜೆಗಳೆಲ್ಲರಲ್ಲಿ ಯುಎಸ್‌ಎಸ್‌ಆರ್‌ನ ಅನುಭವ ಸ್ಫೂರ್ತಿಯನ್ನು ತುಂಬಿತು. ಅವರಲ್ಲಿ ಬಹಳ ಜನ ಕಮ್ಯುನಿಸ್ಟರಾಗಿ ಬದಲಾಗಿ ತಮ್ಮ ತಮ್ಮ ದೇಶಗಳಲ್ಲಿ ಕಮ್ಯುನಿಸ್ಟು ಕ್ರಾಂತಿಗಳಿಗಾಗಿ ಕೃಷಿ ಮಾಡಿದರು. ಪ್ರತಿಪಕ್ಷ ರಾಜಕೀಯ ಪಾರ್ಟಿಗಳನ್ನು ತೊಲಗಿಸುವಂತಹ ಕಮ್ಯುನಿಜಂನಲ್ಲಿನ ಕೆಲವು ವಿಧಾನಗಳೊಂದಿಗೆ ಒಪ್ಪದಿದ್ದರೂ ಎಂ. ಎನ್.ರಾಯ್, ಠಾಗೂರ್, ಜವಹಾರ್‌ಲಾಲ್ ನೆಹರೂರಂತಹವರು ಅದರಿಂದ ಪ್ರೇರಣೆಯನ್ನು ಪಡೆದರು.

SCERT TELANGANA

ಯುಎಸ್ಎಸ್ಆರ್‌ನಲ್ಲಿ ಪ್ರತಿಪಕ್ಷವನ್ನು ಹಿಂಸಾತ್ಮಕವಾಗಿ ನಿರ್ಮೂಲನೆಗೊಳಿಸುವುದು ಬಹುಳ ಪಾರ್ಟಿ ಪ್ರಜಾಪ್ರಭುತ್ವ, ಸ್ವತಂತ್ರ್ಯ ಇಲ್ಲದಿರುವುದು ಬಹಳ ಘೋರ ವಿಷಯವೆಂದು ಅನೇಕರು ಭಾವಿಸಿದರು. ಜಾರ್ಜ್ ಆರ್ವೆಲ್ ಎಂಬ ರಚನೆಕಾರ ''ಯಾನಿಮಲ್ ಫಾಂ'' ಎನ್ನುವ ತನ್ನ ಪ್ರಮುಖ ವ್ಯಂಗ ಕಾದಂಬರಿಯಲ್ಲಿ ರಷ್ಯನ್ ಕ್ರಾಂತಿ ಆದರ್ಶಗಳನ್ನು ಯುಎಸ್ಎಸ್ಆರ್‌ನಲ್ಲಿ ಹೇಗೆ ನಿರುತ್ಸಾಹ ಗೊಳಿಸಿದರೆಂಬುದನ್ನು ಚಿತ್ರೀಕರಿಸಿದ್ದಾನೆ.

- ಸಮಾನತೆ, ಸ್ವತಂತ್ರ್ಯ, ಸಂಪತ್ತಿನಿಂದ ಕೂಡಿದ ಪ್ರಪಂಚವನ್ನು ನಿರ್ಮಿಸುವಲ್ಲಿ ಸೋವಿಯಟ್ ಪ್ರಯೋಗ ಯಾವ ರೀತಿ ವಿಜಯವನ್ನು ಸಾಧಿಸಿತೋ ಊಹಿಸಿರಿ.
- ಇಂತಹ ಪ್ರಯೋಗಗಳಿಗಾಗಿ ಸಾವಿರಾರು ಜನರನ್ನು ಮರಣಕ್ಕೀಡು ಮಾಡುವುದು ಎಷ್ಟರ ಮಟ್ಟಿಗೆ ಸರಿ ?
- ಕಮ್ಯುನಿಸ್ಟ್ ವಿಧಾನಗಳ ಮೇಲ ಮೂಡಿ ಬಂದ ವಿಮರ್ಶೆಗಳಾವುವು ?

B¦ìPÌPÁÔñÌ : 1929&1939:

ತೀವ್ರ ಖಿನ್ನತೆ 1929 ಕೊನೆಯಲ್ಲಿ ಪ್ರಾರಂಭವಾಗಿ ಸುಮಾರು ಎರಡನೇ ಪ್ರಪಂಚ ಯುದ್ಧ ಪ್ರಾರಂಭವಾಗಿ 1939 ರವರೆಗೂ ಮುಂದುವರೆಯಿತು. ಈ ಶತಮಾನದಲ್ಲಿ ಪ್ರಪಂಚದಾದ್ಯಂತ ಬೇಡಿಕೆ ಕಡಿಮೆಯಾಗಿದ್ದರಿಂದ ಬೆಲೆ ಕಡಿಮೆಯಾಗಿ ಆರ್ಥಿಕ ಪರಿಸ್ಥಿತಿ ಕ್ಷೀಣಿಸಿತು. ಬೇಡಿಕೆ ಕಡಿಮೆಯಾಗಿದ್ದರಿಂದ ಕಾರ್ಖಾನೆಗಳು ಮುಚ್ಚಲ್ಪಟ್ಟವು, ಆದ್ದರಿಂದ ಪ್ರಜೆಗಳು ಕೊಂಡುಕೊಳ್ಳುವ ಶಕ್ತಿ ಮತ್ತಷ್ಟು ಕಡಿಮೆಯಾಗಿ ಬೇಡಿಕೆ ಮತ್ತಷ್ಟು ಕಡಿಮೆಯಾಯಿತು. ಈ ಕಾಲಚಕ್ರದ ಪರಿಣಾಮದಿಂದ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ, ವಾಸ್ತವಿಕ ಆದಾಯದಲ್ಲಿ ಇಳಿತ ಕಂಡು ಬಂತು. ಪ್ರಪಂಚದಾದ್ಯಂತ ಸಾಧಾರಣ ಪ್ರಜೆಗಳು, ಸರ್ಕಾರಗಳು ಕೂಡ ಪ್ರಭಾವವನ್ನು ಬೀರಿದವು. ಅಮೇರಿಕಾದಲ್ಲಿನ ಸ್ಟಾಕ್ ಮಾರ್ಕೆಟ್ ಕುಸಿದು ಬಿದ್ದರಿಂದ ಪ್ರಾರಂಭವಾದ ಪರಿಣಾಮಗಳು ಅದೇ ಕಾಲಾವಧಿಯಲ್ಲಿ ಅಂದಾಜು ಎಲ್ಲಾ ದೇಶಗಳನ್ನು ಪ್ರಭಾವಗೊಳಿಸಿತು.

A New Yorker offers to sell his roadster after losing his money in the stock market crash. Few people anticipated the event that would usher in the Great Depression. (UPI/Corbis-Bettmann. Reproduced by permission.)

ಅಮೇರಿಕಾದಲ್ಲಿ ನಿರುದ್ಯೋಗಿಗಳು 25% ಹೆಚ್ಚಾಯಿತು, ಅನೇಕ ಇತರ ದೇಶಗಳಲ್ಲಿ ಈ ಸಂಖ್ಯೆ 33% ರಷ್ಟಿದೆ. ಕಾರ್ಖಾನೆಗಳು ಮುಚ್ಚಲ್ಪಟ್ಟು ವ್ಯಾಪಾರ ಕಡಿಮೆಯಾದ್ದರಿಂದ ಪಟ್ಟಣಗಳು ವಿನಾಶಕ್ಕೆ ಕೇಂದ್ರಗಳಾಗಿ ಬದಲಾದವು. ಇದರಿಂದ ವ್ಯವಸಾಯ ಉತ್ಪತ್ತಿಗಳ ಬೆಲೆ (60% ರವರೆಗೆ) ಕಡಿಮೆಯಾಗಿ ಲಕ್ಷಾಂತರ ರೈತರು ಬೀದಿಪಾಲಾದರು, ಅವರು ಸಾಗುವಳಿಯನ್ನು ಕೈಬಿಟ್ಟರು. ಇಲ್ಲಿಯವರೆಗೆ ಆಧುನಿಕ ಆರ್ಥಿಕ ವಿಧಾನ ಕಂಡ ಅತ್ಯಂತ ದೀರ್ಘಕಾಲ ಕ್ಷೀಣತೆ ಇದಾಗಿದೆ. ಇದನ್ನು ಸಾಮಾಜಿಕ ಪರಿಣಾಮಗಳು ತೀವ್ರವಾಗಿದ್ದವು. ಬಡತನ ಹೆಚ್ಚಾಗಿ, ಬಾರಿ ಪ್ರಮಾಣದಲ್ಲಿ ಪ್ರಜೆಗಳು ನಿರಾಶ್ರಿತರಾದರು.

ಆಗಿನಿಂದ ಈ ಕ್ಷೀಣತೆಗೆ ಕಾರಣಗಳನ್ನು ಕುರಿತು, ಇದನ್ನು ಹತ್ತಿಕ್ಕಲು ಇರುವ ಮಾರ್ಗಗಳು, ಪುನರಾವೃತ್ತಿಯಾಗದಂತೆ ನೋಡಿಕೊಳ್ಳುವ ವಿಧಾನಗಳನ್ನು ಕುರಿತು ಆರ್ಥಿಕ ಶಾಸ್ತ್ರಜ್ಞರು, ರಾಜಕೀಯ ನಾಯಕರು ವಾದಿಸುತ್ತಲೇ ಇದ್ದರು. ಮಾರ್ಕಿಸ್ಟ್ ಆರ್ಥಿಕ ತಜ್ಞರು ಈ ವಿಧವಾದ ವಿಷಮಸ್ಥಿತಿ ಬಂಡವಾಳದಾರಿ ವಿಧಾನ ಲಕ್ಷಣವೆಂದು

SCERT TELANGANA

ಸೋಷಲಿಜಂ ಏರ್ಪಾಟಿನಿಂದ ಇವುಗಳನ್ನು ನಿರ್ಮೂಲಿಸಬಲ್ಲವೆಂದು ಎನ್ನುತ್ತಾರೆ. ಇನ್ನೊಂದು ಕಡೆ ಜೆ.ಎಂ. ಕೀನ್ಸ್‌ನಂತಹ ಆರ್ಥಿಕ ತಜ್ಞರು ಆರ್ಥಿಕ ವಿಧಾನ ಪುರೋಗತಿಯಲ್ಲಿ ಸರ್ಕಾರದ ಕೀಲಕ ಪಾತ್ರವಿದೆ. ಅದು ಪ್ರಭಾವಶಾಲಿಯಾಗಿ ಮಧ್ಯ ಪ್ರವೇಶಿಸದಿದ್ದರೆ ಖಿನ್ನತೆಗೆ (ಕುಸಿತ) ದಾರಿ ಮಾಡಿಕೊಡುತ್ತದೆ ಎನ್ನುತ್ತಾರೆ. ಆರ್ಥಿಕ ಪರಿಸ್ಥಿತಿ ಕ್ಷೀಣಿಸಿ ಬೇಡಿಕೆ ಕ್ಷೀಣಿಸುತ್ತಿರುವಾಗ ಸರ್ಕಾರದ ನಿಧಿಗಳು ಖರ್ಚು ಮಾಡಿ ಉದ್ಯೋಗ ಒದಗಿಸಬೇಕೆಂದು, ಇದರಿಂದ ಪ್ರಜೆಗಳಿಗೆ ಆದಾಯ ಸಂಗ್ರಹವಾಗಿ ಮಾರ್ಕೆಟುಗಳಲ್ಲಿನ ವಸ್ತುಗಳಿಗೆ ಬೇಡಿಕೆ ಏರ್ಪಡುತ್ತದೆಂದು ಕೀನ್ಸ್ ಪ್ರತಿಪಾದಿಸಿದನು. ಸರ್ಕಾರ ತಲೆಹಾಕವುದುರಿಂದ ಹೆಚ್ಚಾದ ಬೇಡಿಕೆಯೊಂದಿಗೆ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ ಎನ್ನುವರು.

ಅಮೇರಿಕಾ ಅಧ್ಯಕ್ಷನಾಗಿ ಆಯ್ಕೆಯಾದ ರೂಸ್‌ವೆಲ್ಟ್ ಹೊಸ ಒಪ್ಪಂದವನ್ನು ಪ್ರಕಟಿಸಿದನು. ಇದರ ಪ್ರಕಾರ ಖಿನ್ನತೆಗೆ ಗುರಿಯಾದವರಿಗೆ ಪುನರ್‌ವಸತಿ, ಆರ್ಥಿಕ ಸಂಸ್ಥೆಗಳ ಸಂಸ್ಕರಣೆ, ಆರ್ಥಿಕ ಪರಿಸ್ಥಿತಿ ಪುನಃ ಚೇತರಿಸಿಕೊಳ್ಳಲು ಕ್ರಮಗಳನ್ನು ಕೈಗೊಂಡರು. ಇದಕ್ಕಾಗಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡತೊಡಗಿತು. ಆದರೆ ಎರಡನೇ ಪ್ರಪಂಚ ಯುದ್ಧ ಪ್ರಾರಂಭವಾದ್ದರಿಂದ ಸೈನ್ಯ ಆಯುಧಗಳ ಮೇಲೆ ಸರ್ಕಾರದ ಖರ್ಚು ಹೆಚ್ಚಾಗಿ ಕಾರ್ಖಾನೆಗಳ ಉತ್ಪತ್ತಿ, ವ್ಯವಸಾಯ ಉತ್ಪತ್ತಿಗಳಿಗೆ ಬೇಡಿಕೆ ದಿಡೀರನೆ ಹೆಚ್ಚಾಯಿತು. ಅಮೇರಿಕಾದಲ್ಲಿ ಬಹಳ ಅವಶ್ಯಕತೆ ಇರುವ ಸಾಮಾಜಿಕ ರಕ್ಷಣೆ ವಿಧಾನವನ್ನು ಕೂಡ ರೂಸ್‌ವೆಲ್ಟ್ ಪ್ರವೇಶಪಡಿಸಿದನು. ಎಲ್ಲರಿಗೂ ಅನ್ವಯಿಸುವ ನಿವೃತ್ತಿ ಪಿಂಚನಿ, ನಿರುದ್ಯೋಗ ವಿಮೆ, ಅಂಗವಿಕಲರಿಗೆ, ತಂದೆ ಇಲ್ಲದ ಕುಟುಂಬಗಳಲ್ಲಿ ಅವಶ್ಯಕತೆ ಇರುವ ಮಕ್ಕಳಿಗೆ ಸಂಕ್ಷೇಮ ಪ್ರಯೋಜನೆಗಳಂತವು ಇದರಿಂದ ನೆಲೆಗೊಂಡವು. ಅಮೇರಿಕಾದಲ್ಲಿನ ಸಂಕ್ಷೇಮ ವ್ಯವಸ್ಥೆಗೆ ಇದು ಒಂದು ಕಾಯ್ದಿಯನ್ನು ಏರ್ಪಡಿಸಿತು. ಖಿನ್ನತೆ ಪ್ರಾರಂಭಕ್ಕಂತ ಮುನ್ನ ಮೊದಲನೆ ಪ್ರಪಂಚ ಯುದ್ಧ ಕಾಲದಲ್ಲೇ ಈ ಹಂತದಲ್ಲಿ ಬ್ರಿಟನ್ ಕೆಲವು ಕ್ರಮಗಳನ್ನು ಕೈಗೊಂಡಿತು. ನಿರುದ್ಯೋಗ ವಿಮೆ, ವೃದ್ಯಾಪ್ಯ ಪಿಂಚನಿ ಯೋಜನೆಗಳನ್ನು ಏರ್ಪಡಿಸಿತು. ಎರಡನೇ ಪ್ರಪಂಚ ಯುದ್ಧ ಮುಗಿಯುವಷ್ಟರಲ್ಲಿ ಬ್ರಿಟನ್ ಕೂಡ ನಿರುದ್ಯೋಗ ವೇತನ, ಅನಾರೋಗ್ಯಕ್ಕೆ ಖರ್ಚು. ಆರೋಗ್ಯ ಯೋಜನೆಗಳು, ಶಿಶು ಸಂರಕ್ಷಣ ಯಂತಹ ಸಾಮಾಜಿಕ ಭದ್ರತಾ ಕ್ರಮಗಳನ್ನು ವಿಸ್ತಾರವಾಗಿ ಕೈಗೊಂಡಿತು. ಇವುಗಳೆಲ್ಲಾ ಸಂಕ್ಷೆಮ ರಾಜ್ಯ ಎನ್ನುವುದನ್ನು ಏರ್ಪಡಿಸಲು ಸಹಕರಿಸಿದವು. ಇದರ ಪ್ರಕಾರ ಪ್ರಜೆಗಳಿಗೆಲ್ಲಾ ಕನಿಷ್ಟ ಜೀವನ ಮಟ್ಟ ಆಹಾರ, ವಸತಿ, ಆರೋಗ್ಯ, ವಿದ್ಯೆ, ಶಿಶು, ವೃದ್ದಾಪ್ಯ ಸಂರಕ್ಷಣೆಯಂತಹ ಮೂಲಭೂತ ಅವಶ್ಯಕತೆಗಳಿಗೆ ಸರ್ಕಾರದ ಜವಾಬ್ದಾರಿ ಯಾಗಿರು ತ್ತದೆ ಕೆಲಸ ಮಾಡುವ ಪೌರರೆಲ್ಲರಿಗೂ ಉದ್ಯೋಗವನ್ನು ಒದಗಿಸುವ ಜವಾಬ್ದಾರಿ ಬಹಳ ಮಟ್ಟಿಗೆ ಸರ್ಕಾರವೇ ತೆಗೆದು ಕೊಂಡಿದೆ. ಈ ವಿಧವಾಗಿ ಸರ್ಕಾರ ಮಾರ್ಕೆಟ್ ಆಧಾರಿತ ಬಂಡವಾಳಶಾಹಿ ವಿಧಾನ ದಲ್ಲಿನ ತೊಂದರೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸಿತು.

bñl 13.3 B¦ìPÌPláÔñlPÝÆ¨lÈ´äÈÓlÊlÆÓ PÝËáìPlÚÝ¨l´äÃ®… JÊ®… ´äàp¤ãà, vãàÄ£¿ÞÇÝíh…ñlW¨lD´äàp¤ãàŸÖl ÖÓlÃláÊÝÓ¿ÞX¨l 1936ÊÞa…ìÓÊlá¿á¨lÈ PÝÈ´äà¯ì¿Þ¨lÈŸsÝ~PãÚláÊÊÃl£àÊl ±ÄÔ£¿á®lá C¨lá Óã bÓlá ñl¨l. AÊÚlá H®lá BÇãàbÓláñlÝCÃláñlÝ?

gÊlái¯¿áÈ B¦ìPÌPláÔñl:

ಮೊದಲನೇ ಪ್ರಪಂಚ ಯುದ್ಧ ನಂತರ ಯುದ್ಧ ನಷ್ಟಗಳ ಸಲ್ಲಿಕೆಯಂತಹವುಗಳ ಭಾರದಿಂದ ಜರ್ಮನಿಯು ಆರ್ಥಿಕ ಪರಿಸ್ಥಿತಿ ವಿಷಮಸ್ಥಿತಿಯನ್ನು ತಲುಪಿತು. ಇದರಿಂದ ಜರ್ಮನಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಕರೆನ್ಸಿ ನೋಟನ್ನು

SCERT TELANGANA

- ಇದ್ದಕ್ಕಿದ್ದ ಹಾಗೆ ಉದ್ಯೋಗ ಕಳೆದುಕೊಂಡು, ಕೆಲವು ವರ್ಷಗಳ ವರೆಗೆ ಉದ್ಯೋಗ ದೊರೆಯದ ಕಾರ್ಮಿಕರಾಗಿ ನಿಮ್ಮನ್ನು ನೀವು ಊಹಿಸಿಕೊಳ್ಳಿ. ನಿಮ್ಮ ಜೀವನದಲ್ಲಿ ಒಂದು ದಿನವನ್ನು ಕುರಿತು ಬರೆಯಿರಿ.
- ಬೆಳೆಸಿದ ಬೆಳೆಯ ಬೆಲೆ ಅರ್ಧಕ್ಕಿಂತಲೂ ಕಡೆಮೆಯಾಗಿ ತಗ್ಗಿಹೋದ ರೈತನಾಗಿ ನಿಮ್ಮನ್ನು ನೀವು ಊಹಿಸಿಕೊಳ್ಳಿ. ನಿಮ್ಮ ಪ್ರತಿಕ್ರಿಯೆಯನ್ನು ಬರೆಯಿರಿ.
- ಭಾರತ ದೇಶದಲ್ಲಿ ಈಗಲೂ ಸಂಕ್ಷೇಮ ರಾಜ್ಯದಲ್ಲಿನ ಯಾವ ಯಾವ ಅಂಶಗಳು ಜಾರಿಯಲ್ಲಿವೆ ?

ಮುದ್ರಿಸತೊಡಗಿತು, ಇದರ ಫಲಿತವಾಗಿ ಹಣದುಬ್ಬರ ಹೆಚ್ಚಾಯಿತು. ಬ್ರೆಡ್ ಕೊಂಡುಕೊಳ್ಳಲು ಚೀಲಗಳಲ್ಲಿ ಹಣವನ್ನು ತೆಗೆದುಕೊಂಡು ಹೋಗಬೇಕಾಯಿ ತೆಂದು ಹೇಳುತ್ತಾರೆ.

ಖಿನ್ನತೆಯಿಂದ ಎಲ್ಲವುದಕ್ಕಿಂತಲೂ ಹೆಚ್ಚಾಗಿ ಜರ್ಮನಿ ಪ್ರಭಾವಗೊಂಡಿತು. 1932 ಹೊತ್ತಿಗೆ ಕೈಗಾರಿಕಾ ಉತ್ಪತ್ತಿ 1929 ಮಟ್ಟದಲ್ಲಿ ಹೋಲಿಸಿದರೆ 40 ಶೇಕಡಕ್ಕೆ ಬಿದ್ದು ಹೋಯಿತು. ಕಾರ್ಮಿಕರು ಉದ್ಯೋಗವನ್ನು ಕಳೆದುಕೊಂಡರು ಇಲ್ಲವೆ ಅವರ ಸಂಬಳ ಕಡಿಮೆಯಾಯಿತು. ನಿರುದ್ಯೋಗಿಗಳ ಸಂಖ್ಯೆ ಹಿಂದೆಂದೂ ಇಲ್ಲದಷ್ಟು 60 ಲಕ್ಷಗಳನ್ನು ತಲುಪಿತು. ಜರ್ಮನಿ ಬೀದಿಗಳಲ್ಲಿ ಪುರುಷರು ''ಯಾವ ಕೆಲಸವಾದರೂ ಮಾಡಲು ಸಿದ್ಧ'' ಎಂದು ಬರೆದಿರುವ ಕಾರ್ಡ್‌ಗಳನ್ನು ಕತ್ತಿನಲ್ಲಿ ತಗಲಿ ಹಾಕಿಕೊಂಡು ಕಾಣಿಸುತ್ತಿದ್ದರು. ನಿರುದ್ಯೋಗ ಯುವಕರು ಜೂಜಾಟ (Played cards)ದಿಂದ ಸಮಯವನ್ನು ಕಳೆಯುತ್ತಿದ್ದರು. ಇಲ್ಲವೆ ಬೀದಿಗಳಲ್ಲಿ ಕುಳಿತು ಕಾಲ ಕಳೆಯುತ್ತಿದ್ದರು ಇಲ್ಲವೆ ಸ್ಥಾನಿಕ ಉದ್ಯೋಗಖಾತ್ರಿ ಕಾರ್ಯಾಲಯದ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಉದ್ಯೋಗಗಳು ಕಣ್ಮಾರೆಯಾದ್ದರಿಂದ ಯುವಕರು ಅಪರಾಧಗಳನ್ನು ಮಾಡಿದರು. ನಿರಾಸೆ, ಅವಿಜ್ಞಾನವನ್ನೇ ಸರ್ವಸ್ವವಾಗಿ ಹೆಣೆದುಕೊಂಡರು.

ಈ ಆರ್ಥಿಕ ಮುಗ್ಗಟ್ಟು ಪ್ರಜೆಗಳಲ್ಲಿ ತೀವ್ರ ಬಯ, ಆಂದೋಳನವನ್ನು ಉಂಟುಮಾಡಿತು. ಕರೆನ್ಸಿ ಬೆಲೆ ಕಳೆದುಕೊಂಡಿದ್ದರಿಂದ ಮಧ್ಯ ತರಗತಿ ಪ್ರಜೆಗಳು, ಪ್ರತ್ಯೇಕವಾಗಿ ಉದ್ಯೋಗಸ್ಥರು, ಪಿಂಚನಿ ದಾರರು ಉಳಿತಾಯ ಕಡಿಮೆಯಾಗ ತೊಡಗಿತು. ತಮ್ಮ ವ್ಯಾಪಾರಗಳು ನಷ್ಟ ಹೊಂದಿ ದ್ದರಿಂದ ಸಣ್ಣ ವ್ಯಾಪಾರಸ್ಥರು, ಚಿಲ್ಲರೆ ವ್ಯಾಪಾರಸ್ಥರು, ಸ್ವಯಂ ಉದ್ಯೋಗಗಳಲ್ಲಿರುವವರು ಎಷ್ಟೋ ಕಷ್ಟಗಳಿ ಗೊಳಪಟ್ಟರು. ಸಮಾಜದಲ್ಲಿನ ಈ ವರ್ಗಗಳು ತಾವು ಬಡವರಾಗಿ ಬೀದಿಗಿಳುಯು ತ್ತೇವೆಂದು ಇಲ್ಲವೆ ಕಾರ್ಮಿಕವರ್ಗ ಶ್ರೇಣಿಗೆ ಕಡಿಮೆಯಾಗುತ್ತೇವೆಂದು ಇಲ್ಲವೆ ಇನ್ನೂ ದಾರುಣವಾಗಿ ನಿರುದ್ಯೋಗಿ ಗಳಾಗುತ್ತೇವೆಂದ ಭಯಪಟ್ಟರು. ಸಂಘಟಿತ ಕಾರ್ಮಿಕರು ಮಾತ್ರ ಹೇಗೆ ಮುಂದೆ ಬಂದರು, ಆದರೆ ಸಮಾಜದಲ್ಲಿನ ನಿರುದ್ಯೋಗದಿಂದ ತಮ್ಮ ಕೋರಿಕೆಗಳನ್ನು ಸಾಧಿಸಿಕೊಳ್ಳುವ ಶಕ್ತಿಯನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡರು. ದೊಡ್ಡ ವ್ಯಾಪಾರಸ್ಥರು ವಿಷಮಸ್ಥಿತಿಯಲ್ಲಿದ್ದರು. ವ್ಯವಸಾಯ ಉತ್ಪತ್ತಿಗಳ ಬೆಲೆ ಕಡಿಮೆಯಾದ್ದರಿಂದ ರೈತಾಂಗದಲ್ಲಿ ಅಧಿಕ ಭಾಗ ಪ್ರಭಾವಕ್ಕೊಳಪಟ್ಟಿತು. ತಮ್ಮ ಮಕ್ಕಳ ಹೊಟ್ಟೆತುಂಬಲಾಗದ ಮಹಿಳೆಯರು ತೀವ್ರ ನಿರಾಶೆಗೆ ಒಳಗಾದರು. ರಾಜಕೀಯ ಅಸ್ಥಿರತೆಯಲ್ಲಿ ಸರ್ಕಾರ, ನಂತರದ ಸರ್ಕಾರ ಬಿದ್ದು ಹೋಗಿ ಸ್ಥಿರವಾದ ಆಳ್ವಿಕೆ ಇಲ್ಲದಂತಾಯಿತು.

±ÝÌŸÆÂPæ Ÿí¨ ´ÝÂÔgí&®Ý i gí

Êæã¨ÆÆ®æà ±Ì±ía ¿áá¨¨ ®íñÃ, ±ñæÀàPÊÝX ¿áá¨¨È ÓæãàÆá A®á»ËÔ¨ ¨æàÍWÙÈ C¨á ±aÝÃ¨È Ÿí©ñá. CñÃ ¨æàÍWÙ ÊæáàÇæ Ëg¿á ÓÝ—ÓÆá, ¨æàÍ¨ I PÀñæWæ C¨á ±ÝÊáá SÂñæ¿á®á Pæãq¨æ. ¨æàÍ¨È ¼® ±Áãàg®WÙ®á, ZÐì OæWÙ®á ´ÝÂÔÓáWÙá A®áÊá£ÓÈÆ. Pæàí©àPñ A—PÝÃ¨ Êæáàǿ ±ä|ì®í¹Pæ, ËÍÝÌÓ ±¨Îì ÓáÊíñæ CÊÃá

±ÀhÀWÙ ÊáàÇ JñÀvÊÀàÄ¨ÃÀá. ÖÀ£Q¨ÃÀá, C¨ÃÀá PÊááÀ¯gí®á, E¨ÝÃÊÝ¨Ê®á ÊÀ£ÃàQÔ¨ÃÀá. ¯ÃíPáÍÓPÝìÃ©í¨ ¨àÍ¨È® A–PÓíTÀ¿á ÊÀWìÊ®á ÓËáàPÀÓáÊ¨ÃÀ ÊáãÆPÃÝÑà¿á HPñ¿á®á ÓÝ–Ó¸àPí¨áPãívÃÀá. ´ÝÀÔÓ… aÙáÊÚWÙÈ PÆÊÀ ÓÝÊáÀ AíÍWÙã CÊ. ÃÝgÀÊ®á BÃÝ–ÓáÊ¨á, ×oÃ… ®íñÖ ŸÈÐ ®Ý¿áPÃ ŸW »Q»ÝÊ, £àÊÊÝ¨ ÃÝÑà¿áÊÝ¨Pí Ó¯P A–±ñÀPí ±Ý«Ý®Àñ. ÃÝÐ ±®áÃÀá i¸àÊ® ÓÝ–ÓÆá ´ÝÀÔgí ÃÝgQà¿á ×íÓ, ¿áá¨, CñÃ ±ÝíñWÙ®á BPËáÔPãÙáÊíñÖÊWÙ®á E±ÀÁãàXÔ¨Êá. ŸÆ×à® ¨àÍWÙ®á ñãÆXÔ ŸÈÐ ¨àÍWÚW ñÊá »ã»ÝWÊ®á ËÓÀÖPãÙáÊ ÓPá C¨ Gí¨á, ÊÝÓÊÊÝX A¨á AÊÃ gÊÝ¸ÝÄ Gí¨á ´ÝÀÔgí »ÝËÔñá. A¨á ±À»áññ ¯¿áí£ñ ŸívÊÝÙÍÝ× Ë«Ý®Ê®á ŸÆ±wÓáñÝ ÓãÐÈgí®á, PÊááÀ¯gí®á ÊÀ£ÃàQÔñá. TÝÓX PWÝÄPWÙÆÊ®á Ã¨áWãÚÓ¸àPí¨á A¨á PãàÄñá.

ಹಿಟ್ಲರ್‌ನ ಉಪನ್ಯಾಸದಿಂದ :

ಎಲ್ಲಕ್ಕಿಂತಲೂ ಬಲವಾದ ಮತಕ್ಕೆ ಪ್ರಪಂಚವನ್ನು ಸೋಲಿಸುವ ಹಕ್ಕಿದೆ ಎಂದು ಹಿಟ್ಲರ್ ವಾದಿಸುತ್ತಿದ್ದನು.

"ಭೂಮಿ ಯಾರಿಗೂ ಹಂಚಿಕೆಯಾಗಿಲ್ಲ, ಯಾರಿಗೂ ಬಹುಮತಿಯು ನೀಡಿಲ್ಲ. ತಮ್ಮ ಹೃದಯಗಳಲ್ಲಿ ಅದನ್ನು ಜಯಿಸುವ ಸಾಹಸ ಅಧನ್ನು ಕಾಪಾಡಿಕೊಳ್ಳುವ ಬಲ. ಅದನ್ನು ಊಳುವ ಶ್ರಮಪಡುವ ಪ್ರಜೆಗಳಿಗೆ ದೇವರು ಅದನ್ನು ಮೀಸಲಿರಿಸಿದ್ದಾನೆ... ಪ್ರಪಂಚ ಪ್ರಾಥಮಿಕ ಹಕ್ಕು ಅದಕ್ಕೆ ಶಕ್ತಿ ಇರುವವರೆಗೆ ಜೀವಿಸಲು ಇರುವ ಹಕ್ಕು. ಈ ಹಕ್ಕನ್ನು ಆಧಾರವಾಗಿ ಪ್ರಬಲವಾದ ಜಾತಿ ತನ್ನ ಜನಸಂಖ್ಯೆಗೆ ತಕ್ಕಂತೆ ಸರಿಹದ್ದುಗಳನ್ನ ವಿಸ್ತರಿಸಿಕೊಳ್ಳುತ್ತದೆ.

- ಪ್ರಪಂಚವನ್ನೆಲ್ಲಾ ಜಯಿಸಬೇಕೆಂಬ ಭಾವನೆ ಯನ್ನು ಹಿಟ್ಲರ್ ಇಲ್ಲಿ ಪ್ರತಿಪಾದಿಸುತ್ತಿದ್ದಾನೆ ? ಬಲ, ಶಕ್ತಿ ಇರುವವರಿಗೆ ಈ ಪ್ರಪಂಚ ದೊರೆಯ ಬೇಕೆಂದು ನೀವು ಅಂದುಕೊಳ್ಳುತ್ತಿರಾ ?

ÊÓìÇ… J±Àí¨ ñÊá ÊááÇÖàÄ¨ÐÃñáWÙ®áÓãàñ ¨àÍWÙá AÊÊÞ®Êí¨á »ÝËÔ¨Êá. C¨Pí ±À±íaÀ¨Ý¨Ãíñ B¦ìP PáÔñ hãñ¿ÞWáÊ¨ Ããí©W B ¨àÍWÙÈ D Ô¨ÝíñPí ËÓñ g®²¿áñ Æ¼Ôñá. 1922 ÃÈ CoÈ¿áÈ ¸¯pã ÊááÓÇãà¯ Ëg¿á©í¨ C¨á BÃí»ÊÝÀáñá. ñÃáÊÝ¿á 1933ÃÈ ×oÃ…, Bñ®



ಚಿತ್ರ 14.6 :1945ರಲ್ಲಿ ಜೆನಾ ಜರ್ಮನಿ ಹತ್ತಿರ ಬಚೆನ್ ವಾಲ್ಡ್ ನಿರ್ಭಂದ ಶಿಬಿರದಲ್ಲಿ ಯೂದರ ಜೀತದಾಳು ಕಾರ್ಮಿಕರು

SCERT TELANGANA

®Ý i à±P, gÊá ì¯¿áÈ A—PÝÃPæ Ÿí¨Êâ. ±hÝ±»áñì ÓPÝìÃ¨ ÊæáàÇæ Óá—àZì Óæ¯P aÙáÊÚ¿á ®íñÃ Óæà®…®È g®ÃÇ… ´ÝíPæãà 1939ÃÈ A—PÝÃPæ Ÿí¨®á. C¨æà ÓÊá¿á¨È g±Ý®… ñ®¨æà B¨ ´ÝÂÔp… Ô¨ÝíñÊ®á Ãã²ÔPæãívá aæ®Ý, PæãÄ¿Þ¨íñÖ ¨æàÍWÙ ÊæáàÇæ Óæ¯P ¨ÝÚXÚÀáñá. D ¯ÃíPáÍ BvÚñWÝÃÃá GÆÃá ¿ÞÊâ¨æãà Jí¨æà Äà£¿á ´ÝÂÔÓ… Ô¨ÝíñÊ®á A®áÓÄÓáÊÊÃæà.

ಹಿಟ್ಲರ್ ಅದ್ಭುತವಾದ ಮಾತುಗಾರ (ವಕ್ತ) ಆತನ ಉದ್ವೇಗ, ಆತನ ಮಾತುಗಳು ಪ್ರಜೆಗಳನ್ನು ಅಲುಗಾಡಿಸಿತು. ಒಂದು ಬಲವಾದ ದೇಶವನ್ನು ನಿರ್ಮಿಸುತ್ತೇನೆಂದು, ವರ್ಸೈಲ್ಸ್ ಒಪ್ಪಂದದ ಅನ್ಯಾಯವನ್ನು ರದ್ದು ಮಾಡುತ್ತೇನೆಂದು, ಜರ್ಮನಿ ಪ್ರಜೆಗಳ ಗೌರವವನ್ನು ಪುನಃ ತಂದು ಕೊಡುತ್ತೇನೆಂದು ಆತನು ಹೇಳಿದನು. ಕೆಲಸ ಬೇಕೆಂದು ಬಯಸುವವರಿಗೆ ಕೆಲಸ, ಯುವಕರಿಗೆ ಬಂಗಾರದ ಭವಿಷ್ಯತ್ತನ್ನು ಕಲ್ಪಿಸುತ್ತೇನೆಂದು ಭರವಸೆ ನೀಡತೊಡಗಿದನು. ಎಲ್ಲಾ ವಿದೇಶಿ ಪ್ರಭಾವವನ್ನು ತೊಲಗಿಸುತ್ತೇನೆಂದು ಭರವಸೆ ನೀಡತೊಡಗಿದನು. ಎಲ್ಲಾ ವಿದೇಶಿ ಪ್ರಭಾವವನ್ನು ತೊಲಗಿಸುತ್ತೇನೆಂದು, ಜರ್ಮನಿಗೆ ವಿರುದ್ಧವಾಗಿ ಎಲ್ಲಾ ವಿದೇಶಿ 'ಒಳಸಂಚು' (ಪಿತೂರಿ)ಗಳನ್ನು ಎದುರಿಸು ತ್ತೇನೆಂದು ತಿಳಿಸಿದನು.

ರಾಜಕೀಯದಲ್ಲಿ ಒಂದು ಹೊಸ ಶೈಲಿಯನ್ನು ಹಿಟ್ಲರ್ ಪ್ರವೇಶಪಡಿಸಿದನು. ದೊಡ್ಡ ಪ್ರಮಾಣದಲ್ಲಿ ಜನ ಸಮೀಕರ ಗೊಂಡಿದ್ದರಿಂದ ಆಚಾರಗಳು, ಅದ್ಭುತ ದೃಶ್ಯಗಳ ಪ್ರಾಮುಖ್ಯತೆಯನ್ನು ಆತನು ಗುರ್ತಿಸಿದನು. ಹಿಟ್ಲರ್‌ಗೆ ಇರುವ ಬೆಂಬಲ ವನ್ನು ತಿಳಿಯಪಡಿಸಲು, ಪ್ರಜೆಗಳ ಮಧ್ಯ ಐಕ್ಯತೆಯನ್ನು ಬೆಳೆಸಲು ನಾಜೀಗಳು ದೊಡ್ಡ ದೊಡ್ಡ ಬಹಿರಂಗ ಸಭೆಗಳನ್ನು, ಪ್ರದರ್ಶನಗಳನ್ನು ನಿರ್ವಹಿಸತೊಡಗಿದರು. ಸ್ವಸ್ತಿಕ ಗುರ್ತಿನಿಂದ ಕೆಂಪು ಝುಂಡಾಗಳು, ನಾಜೀ ವಂದನ ಉಪನ್ಯಾಸಗಳ ನಂತರ ಚಪ್ಪಾಳೆ ತಟ್ಟುವಂತಹವುಗಳೆಲ್ಲಾ ಆತನ ಅಖಂಡ ಅಧಿಕಾರದಲ್ಲಿನ ಭಾಗ. ಪ್ರಪಂಚದ ಮೇಲೆ ಜರ್ಮನಿ ಆರ್ಯ ಜಾತಿ ಆಧಿಪತ್ಯ ವನ್ನು ಸ್ಥಾಪಿಸುತ್ತೇನೆಂಬ ವಾಗ್ದಾನದಿಂದ, ಎಲ್ಲಾ ಸಮಸ್ಯೆಗಳಿಗೆ ಯೂದಗಳಂತಹ ಅಲ್ಪಸಂಖ್ಯಾತರ ಕಾರಣದಿಂದ ಎನ್ನುತ್ತಾ ಹಿಟ್ಲರ್ ತನ್ನ ಬೆಂಬಲಿಗರನ್ನು ಸೇರಿಸಿ ಕೊಳ್ಳತೊಡಗಿದನು. ಕಮ್ಯುನಿಜಂ ಬಂಡವಾಳಶಾಹಿ ವಿಧಾನ ಎರಡನ್ನೂ ಯೂದರ ಪಿತೂರಿ ಎಂದು ಹೆಸರಿಸುತ್ತಾ, ಆ ಎರಡನ್ನೂ ನೆಲ ಸಮ ಮಾಡುವ ಬಲವಾದ ದೇಶವನ್ನು ನಿರ್ಮಿಸುತ್ತೇನೆಂದು ಹಿಟ್ಲರು ಹೇಳತೊಡಗಿದನು. ತೀವ್ರ ಖಿನ್ನತೆ, ಬಂಡವಾಳಶಾಹಿ ವಿಧಾನದಿಂದ ಭಯಪಟ್ಟ ಮಧ್ಯ ತರಗತಿ ಜನರಿಗೆ ಹಿಟ್ಲರ್ ಮಾತುಗಳು ಬಹಳಷ್ಟು ಇಷ್ಟವಾಯಿತು. ಅದೇ ಸಮಯದಲ್ಲಿ ಆತನು ಕಮ್ಯುನಿಸ್ಟರು, ಸೋಷಲಿಸ್ಟರು ನಾಯಕತ್ವದಲ್ಲಿನ ಕಾರ್ಮಿಕ ವರ್ಗದ ಹೋರಾಟಗಳನ್ನು ವಿರೋಧಿಸತೊಡಗಿದರು.

ಇಂತಹ ಪರಿಸ್ಥಿತಿಗಳಲ್ಲಿ ನಾಜೀ ಪಕ್ಷ ಪ್ರಚಾರದಿಂದ ಉತ್ತಮ ಭವಿಷ್ಯದೆಡೆಗೆ ಆ ಪಕ್ಷಕ್ಕೆ ಸರಿಸಾಟಿ ಇಲ್ಲದ ನಾಯಕನಾಗಿರುವ ಹಿಟ್ಲರ್ ಆಸೆ ಮೂಡಿಸಿದನು. 1928ರಲ್ಲಿ ಜರ್ಮನಿ ಪಾರ್ಲಿಮೆಂಟ್ ರೀಚ್‌ಸ್ಟಾಂಗ್‌ನಲ್ಲಿ ನಾಜೀ ಪಕ್ಷಕ್ಕೆ 2.6 ಶೇಕಡ ಮತಕ್ಕಿಂತ ಮೀರಿಸಲಿಲ್ಲ. 1937 ರಲ್ಲಿಗೆ 37 ಶೇಕಡ ಮತಗಳಿಂದ ಅತಿ ದೊಡ್ಡ ಪಕ್ಷವಾಗಿ ಪರಿಣಮಿಸಿತು.. ಹಿಟ್ಲರ್ ಅಧಿಕಾರಕ್ಕೆ ಬಂದ ನಂತರ ಪಾರ್ಲಿಮೆಂಟ್‌ನಂತಹ ಎಲ್ಲಾ ಪ್ರಜಾ ಪ್ರಭುತ್ವದ ಸಂಸ್ಥೆಗಳನ್ನು ನಾಶಗೊಳಿಸಿ ಅಪ್ರಜಾ ಪ್ರಭುತ್ವ,ನಿರಂಕುಶ ಆಳ್ವಿಕೆಯನ್ನು ಏರ್ಪಡಿಸಿ ದನು. ರಾಜಕೀಯ ಪ್ರತ್ಯರ್ಥಿ ಗಳು (ವಿರೋಧ ಪಕ್ಷದವರು), ಪ್ರತ್ಯೇಕ ವಾಗಿ ಕಮ್ಯುನಿಸ್ಟು ಗಳನ್ನು ಮನಬಂದಂತೆ ಅರೆಸ್ಟ್(ಬಂಧಿಸಿ) ಮಾಡಿ ಶಿಕ್ಷಾ ಶಿಬಿರಗಳಿಗೆ ಕಳುಹಿಸುತ್ತಿದ್ದರು. 1933 ಮಾರ್ಚ್ 3ರಂದು ಅನುಮೋದನೆ ಹೊಂದಿದ್ದ ಎನೇಬ್ಲಿಂಗ್ ಯಾಕ್ಟ್ ನೊಂದಿಗೆ ನಲ್ಲಿ ಜರ್ಮನಿಯಲ್ಲಿ ನಿರಂಕುಶ ಆಳ್ವಿಕೆ ಏರ್ಪಟ್ಟಿತು. ಪಾರ್ಲಿಮೆಂಟನ್ನು ನಿರ್ಲಕ್ಷಿಸಿ ಡಿಕ್ರಿಗಳ ಮೂಲಕ ಪರಿಪಾಲಿಸುವ ಅಧಿಕಾರವನ್ನು ಹಿಟ್ಲರ್‌ನಿಗೆ ಈ ಕಾಯ್ದೆ ಒದಗಿಸಿತು. . ನಾಜೀ ಪಾರ್ಟಿ ಅದರ ಅನುಬಂಧ ಸಂಸ್ಥೆಗಳನ್ನು ತೊಲಗಿಸಿ ಉಳಿದ ಎಲ್ಲಾ ರಾಜಕೀಯ ಪಾರ್ಟಿ ಗಳನ್ನು ಕಾರ್ಮಿಕ ಸಂಘಗಳನ್ನು ನಿಷೇಧಿಸಿದರು. ಆರ್ಥಿಕ ಪರಿಸ್ಥಿತಿ, ಸಂಪರ್ಕ ಮಾಧ್ಯಮಗಳು, ಸೈನ್ಯ, ನ್ಯಾಯ ವ್ಯವಸ್ಥೆಯ ಮೇಲೆ ಸರ್ಕಾರ ಪೂರ್ತಿ ಹಿಡಿತನವನ್ನು ಸಾಧಿಸಿತು.

SCERT TELANGANA

ಸಿದ್ಧಾಂತ ಬೋಧನೆ

ನಾಜೀಗಳು ತಮ್ಮ ಮಕ್ಕಳಿಗೆ ಮೊದಲಿನಿಂದ ಒಂದೇ ರೀತಿಯಾದ ಆಲೋಚನೆಗಳನ್ನು ಕಲಿಸತೊಡಗಿದರು. ಜರ್ಮನ್ ಜಾತಿ ಶ್ರೇಷ್ಟವೆಂದು ನಾಜೀ ವಿಚಾರಶಾಸ್ತ್ರ, ಹಿಟ್ಲರ್‌ನ ಶ್ರೇಷ್ಟತೆ, ಯೂದರು, ಇತರ ಪ್ರಜೆಗಳ ಮೇಲೆ ದ್ವೇಷ. ಈ ಸಿದ್ಧಾಂತ ಬೋಧನೆ ಹೇಗೆ ನಡೆಸಿದರು ?

ಆರರಿಂದ ಹತ್ತು ವರ್ಷಗಳ ಗಂಡು ಮಕ್ಕಳೆಲ್ಲರೂ ನಾಜೀ ಸಿದ್ಧಾಂತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಈ ಶಿಕ್ಷಣ ಪೂರ್ತಿಯಾದ ನಂತರ ಹಿಟ್ಲರನ ಕಡೆ ವಿಶ್ವಾಸ ತೋರಿಸುತ್ತೇವೆಂದು ಹೀಗೆ ಪ್ರತಿಜ್ಞೆ ಮಾಡುತ್ತಿದ್ದರು, ನಮ್ಮ ಮಹಾನಾಯಕನಿಗೆ ಪ್ರತಿನಿಧಿಯಾಗಿ ನಿಂತ ಈ ರಕ್ತಕೇತನ ಸಮಕ್ಷಮದಲ್ಲಿ ನನ್ನ ಶಕ್ತಿ, ಬಲವನ್ನೆಲಾ ನಮ್ಮ ದೇಶ ರಕ್ಷಕನಾದ ಅಡಾಲ್ಫ್ ಹಿಟ್ಲರಗೆ ಅಂಕಿತಗೊಳಿಸುತ್ತೇವೆಂದೂ ಪ್ರತಿಜ್ಞೆ ಮಾಡುತ್ತಿದ್ದೇನೆ ಆತನಿಗಾಗಿ ನನ್ನ ಪ್ರಾಣವನ್ನು ಕೂಡ ತ್ಯಾಗ ಮಾಡಲು ಸಿದ್ಧನಾಗಿದ್ದೇನೆ, ಇದರಲ್ಲಿ ದೇವರು ನನಗೆ ಸಹಾಯಮಾಡುತ್ತಾನೆ.

ಡಬ್ಲೂ ಷಿರೆರ್, ದಿ ರೈಜ್ ಎಂಡ್ ಫಾಲ್ ಆಫ್ ಥರ್ಡ್ ರೀಚ್ ದಿಂದ

ಜರ್ಮನಿ ಕಾರ್ಮಿಕ ಸಮಾಖ್ಯ ನಾಯಕನಾದ ರಾಬರ್ಟ್ ಲೇ ಹೀಗೆ ಹೇಳಿದನು : ಮಕ್ಕಳಿಗೆ ಮೂರು ವರ್ಷ ವಯಸ್ಸಿನಿಂದಲೇ ಪ್ರಾರಂಭ ಮಾಡುತ್ತೇವೆ. ಆತನಲ್ಲಿ ಆಲೋಚನೆ ಮೊದಲಾಗುವ ಮೊದಲೇ ಹಾರಿಸಲು ಆತನಿಗೆ ಒಂದು ಚಿಕ್ಕ ಜೆಂಡಾ ಕೊಡುತ್ತೇವೆ, ನಂತರ ಶಾಲೆಯಲ್ಲಿ ಹಿಟ್ಲರು ಯುವಕ, ಮಿಲಿಟರಿ ಸೇವೆ ಇರುತ್ತವೆ. ಇದೆಲ್ಲ ಮುಗಿದ ನಂತರ ಯಾರನ್ನೂ ಬಿಡುವುದಿಲ್ಲ. ಕಾರ್ಮಿಕ ಒಕ್ಕೂಟ ಅವರನ್ನು ಅಲ್ಲಿಯವರೆಗೆ ತಡದೇ ಇರುತ್ತಾರೆ. ಅವರಿಗೆ ಇಷ್ಟವಿದ್ದರೂ ಇಲ್ಲವೇ ಇರದಿದ್ದರೂ ಅವರು ಮರಣ ಹೊಂದುವವರೆಗೂ ಬಿಡುವುದಿಲ್ಲ.

®Ý i àg í & Êlá×Ù¿ áÃlá

1934 ಸೆಪ್ಟೆಂಬರ್ 8ರಂದು ನ್ಯುರೆಂಬರ್ಗ್ ಪಕ್ಷ ಪ್ರದರ್ಶನದಲ್ಲಿ ಮಹಿಳೆಯರನ್ನು ಉದ್ದೇಶಿಸಿ ಹಿಟ್ಲರ್ ತನ್ನ ಬಾಷಣದಲ್ಲಿ ಹೀಗೆ ಹೇಳಿದ್ದಾನೆ.

''ಪುರುಷರ ಪ್ರಪಂಚದಲ್ಲಿ, ಆತನ ಪ್ರಧಾನ ರಂಗದಲ್ಲಿ ಮಹಿಳೆಯರು ತಲೆಹಾಕುವುದು ಸರಿಯಾದ್ದುದಲ್ಲಿ ಈ ಎರಡು ಪ್ರಪಂಚಗಳು ಭಿನ್ನವಾಗಿರುವುದು ಸಹಜವೆಂದು ನಾನು ತಿಳಿದಿದ್ದೇನೆ. ಯುದ್ಧ ರಂಗದಲ್ಲಿ ಪುರುಷನು ತೋರಿಸುವ ಸಾಹಸ, ಸ್ತ್ರೀ ತನ್ನ ನಿರಂತರ ಆತ್ಮತ್ಯಾಗ, ನಿರಂತರ ವ್ಯಥೆ, ಬಾಧೆಗಳಲ್ಲಿ ಕಂಡುಬರುತ್ತದೆ. ಈ ಲೋಕದೊಳಗೆ ಮಹಿಳೆಯರು ತಂದ ಪ್ರತಿ ಸಂತಾನವು ಒಂದು ಯುದ್ಧವೇ, ತನ್ನ ಪ್ರಜಗಳಿಗೋಸ್ಕರ ಮಹಿಳೆ ಈ ಹೋರಾಟ ನಡೆಸುತ್ತಿದ್ದಾಳೆ.''

ಅದೇ ಪ್ರದರ್ಶನದಲ್ಲಿ ಹಿಟ್ಲರ್ ಇನ್ನೂ ಹೀಗೆ ಹೇಳಿದನು.

''ಒಂದುಜಾತಿಯನ್ನು ಕಾಪಾಡಿದ್ದರಿಂದ ಎಲ್ಲದಕ್ಕಿಂತಲೂ ಸ್ಥಿರವಾದ ಅಂಶ ಮಹಿಳೆಯೇ... ಒಂದು ಜಾತಿ ಕಣ್ಮರೆಯಾಗದಂತೆ ಇರಲು ಮುಖ್ಯವಾದುವೆಲ್ಲಾ ಆಕೆಗೆ ಚೆನ್ನಾಗಿ ಅರ್ಥವಾಗುತ್ತವೆ... ಏಕೆಂದರೆ ಈ ವ್ಯಥೆಯಿಂದ ಮೊದಲು ಪ್ರಭಾವಕ್ಕೊಳಗಾಗುವುದು ಆಕೆಯ ಮಕ್ಕಳೇ... ಅದಕ್ಕೆ ಮಹಿಳೆಯರೇ ಕಾರಣರು.

ಚಿತ್ರ 12.7: ಯೂದರನ್ನು ಕಾಪಾಡಿದ್ದಾರೆ ಎಂಬ ಆರೋಪಣೆ ಯಿಂದ ಬಹಿರಂಗವಾಗಿ ಶಿಕ್ಷೆಗೊಳಪಡುತ್ತಿರುವ ಮಹಿಳೆಯರು

- ಮಕ್ಕಳನ್ನು ಬೆಳೆಸುವ ಶ್ರಮ, ವ್ಯಥೆಗೆ ಮಹಿಳೆಯರರು ಪರಿಮಿತವಾಗಬೇಕೆಂಬ ವಿಷಯದೊಂದಿಗೆ ನೀವು ಏಕೀಭವಿಸುತ್ತಿರಾ ?
- ಮಕ್ಕಳ ಬೆಳೆಸುವ, ಕಾರ್ಖಾನೆಗಳು, ಕಾರ್ಯಾಲಯಗಳು, ಹೊಲಗಳಲ್ಲಿ ಕೆಲಸ ಮಾಡುವಂತಹ ಜೀವನಕ್ಕೆ ಸಂಬಂಧಿಸಿದ ಅಂಶಗಳಲ್ಲಿ ಸ್ತ್ರೀ, ಪುರುಷರು ಸಮಾನವಾಗಿ ಭಾಗಿಗಳೆಂದು ನೀವು ಅಂದುಕೊಳ್ಳುತ್ತಿರಾ ?

ಪ್ರತಿಭಟನೆಗಳು (ಸತ್ಯಾಗ್ರಹಗಳು)

ನಾಜೀ ಸಾಮ್ರಾಜ್ಯ ಸಾಧಾರಣ ಪ್ರಜೆಗಳ ಮೇಲೆ ಸಾಗಿಸುತ್ತಿರುವ ದಾರುಣ, ಸಂಘಟಿತ ಹಿಂಸೆ ಕಡೆ ಜರ್ಮನರು ಮೌನವಹಿಸುವುದು, ವಿರೋಧತೆ ಕಾಣದಂತೆ ಹೋಗುವುದನ್ನು ಸತ್ಯಗ್ರಹಿಯಾದ ಪಾಸ್ಟರ್ ನೀಮೆಲ್ಲರ್ ಗಮನಿಸಿದನು. ಈ ಮೌನವನ್ನು ವಿರೋಧಿಸುತ್ತಾ ಹೀಗೆ ಬರೆದಿದ್ದಾನೆ :

"ಹಿಂದಿನವರು ಕಮ್ಯುನಿಸ್ಟರಿಗಾಗಿ ಬಂದಿದ್ದಾರೆ,
ನಾನು ಕಮ್ಯುನಿಸ್ಟ ಅಲ್ಲ
ಅದಕ್ಕಾಗಿಯೇ ನಾನು ಎನು ಎನ್ನಲಿಲ್ಲ.
ನಂತರ ಅವರು ಸೋಷಲ್ ಡೆಮಕ್ರಸಿಗಾಗಿ ಬಂದಿದ್ದಾರೆ,
ನಾನು ಸೋಷಲ್ ಡೆಮೆಕ್ರಟಿಕ್ ಅಲ್ಲ
ಅದಕ್ಕಾಗಿಯೇ ನಾನು ಏನು ಎನ್ನಲಿಲ್ಲ.
ನಂತರ ಅವರು ಕಾರ್ಮಿಕ ಸಂಘದವರಿಗಾಗಿ ಬಂದಿದ್ದಾರೆ,
ನಾನು ಕಾರ್ಮಿಕ ಸಂಘ ನಾಯಕನಲ್ಲ.
ಆ ನಂತರ ಅವರು ಯೂದರಿಗಾಗಿ ಬಂದಿದ್ದಾರೆ,
ನಾನು ಯೂದನು ಅಲ್ಲ – ಆದ್ದರಿಂದ ಸುಮ್ಮನಿದ್ದೆ,
ಕೊನೆಗೆ ನನಗಾಗಿ ಅವರು ಬಂದಾಗ,
ಸತ್ಯಗ್ರಹ (ಪ್ರತಿಭಟನೆ) ತಿಳಿಸುವವರು ಯಾರು
ಉಳಿಯದಂತೆ ಹೋದರು.

- ನಾಜೀ ಸಿದ್ಧಾಂತ ಅಧಿಕ ಸ್ವಾಮ್ಯ ಸೂತ್ರಗಳ ಮೇಲೆ ಆಧಾರ ಪಟ್ಟಿದೆ. ಜರ್ಮನಿ ಜನಸಂಖ್ಯೆಯಲ್ಲಿ ಯೂದರು 0.75 ಶೇಕಡ ಮಾತ್ರ. ಯೂದರನ್ನು ಮಾತ್ರವಲ್ಲದೆ ನಾಜೀಗಳನ್ನು ವಿರೋಧಿಸುವವರನ್ನು ಕೂಡ ಶಿಕ್ಷಿಸುತ್ತಿದರು. ಮೇಲಿನ ಕವಿತೆಯಲ್ಲಿ ಇದನ್ನು ಹೇಗೆ ತೋರಿಸಿದ್ದಾರೆ ?

ನಾಜೀಗಳು ಬಯಸಿದ ರೀತಿಯಲ್ಲಿ ಸಮಾಜವನ್ನು ನಿಯಂತ್ರಿಸಲು, ನಡೆಯುವಂತೆ ನೋಡಿಕೊಳ್ಳಲು ಪ್ರತ್ಯಕ ನಿಘಾ, ಭದ್ರತಾದಳ ಗಳನ್ನು ಏರ್ಪಡಿಸಿದರು. ಅಲ್ಲಿಗೆ ಎಲೆಹಸಿರು ಸಮವಸ್ತ್ರದಲ್ಲಿದ್ದ ಪೋಲಿಸ್ ಸಿಬ್ಬಂದಿ, ಸ್ಟಾರ್ಮ್ ಟ್ರೂಪರ್ಸ್(ಎಸ್ಎ) ಮಾತ್ರವಲ್ಲದೆ ಗೆಸ್ಟಾಪೊ (ರಹಸ್ಯ ಪೋಲಿಸ್ ಬೃಂದ), ರಕ್ಷಣಾದಳಗಳು (ಎಸ್ಎಸ್), ನೇರ ವಿಚಾರಣೆ ಪೋಲಿಸರು, ಭದ್ರತೆ ಸೇವೆಗಳು(ಎಸ್ಡಿ) ಏರ್ಪಟ್ಟವು. ಈ ಹೊಸದಾಗಿ ಏರ್ಪಡಿಸಿದ ದಳದ ಸಂವಿಧಾನೇತರ ಅಧಿಕಾರಿಗಳು ನಾಜೀ ಸರ್ಕಾರಕ್ಕೆ ಭಯಂಕರವಾದ ನೇರಪೂರಿತ ಸರ್ಕಾರ ಎಂಬ ಹೆಸರನ್ನು ತಂದು ಕೊಟ್ಟವು. ಪ್ರಜೆಗಳನ್ನು ಈಗ ಯಾವುದೇ ಕಾಯ್ದೆಬದ್ಧ ವಿಧಾನವಿಲ್ಲದಂತೆ ಅರೆಸ್ಟ್(ಬಂಧನ) ಮಾಡ ಬಹುದು. ನಿರ್ಬಂಧ ಶಿಬಿರಗಳಿಗೆ ತಳ್ಳಬಹುದು ಇಲ್ಲವೇ ದೇಶದಿಂದ ಬಹಿಷ್ಕರಿಸಬಹುದು. ಸರಿಸಾಟಿ ಇಲ್ಲದ ಅಧಿಕಾರವನ್ನು ಪೋಲಿಸ್ ದಳಗಳು ಪಡೆದುಕೊಂಡವು.

ಈ ಅಧಿಕಾರಗಳನ್ನು ಉಪಯೋಗಿಸಿಕೊಂಡು ಲಕ್ಷಾಂತರ ರಾಜಕೀಯ ಹೋರಾಟಗಾರರನ್ನು, ಕಾರ್ಮಿಕ ಸಂಘದ ನಾಯಕರನ್ನು, ಅಲ್ಪಸಂಖ್ಯಾತ ವರ್ಗ ಪ್ರಜೆಗಳನ್ನು ಬಂಧಿಸಿ, ಹಿಂಸಿಸುತ್ತಿದ್ದರು. ಅದಕ್ಕೆ ಮುನ್ನ ಎಂದೂ ಕಾಣದ ಆರೋಪಗಳಿಗೆ ದಾರಿ ಮಾಡಿಕೊಟ್ಟರು. ವಿರೋಧಿಗಳನ್ನು ಭಯಗ್ರಸ್ಥರನ್ನಾಗಿ ಮಾಡಿದರು.

ಆರ್ಥಿಕ ಪುನಃ ನಿರ್ಮಾಣದ ಜವಾಬ್ದಾರಿಯನ್ನು ಆರ್ಥಿಕತಜ್ಞ ಹಜಾಲ್ಮರ್ ಷಾಕೆಕ್ಟ್ ಹಿಟ್ಲರ್ ಒಪ್ಪಿಸಿದನು. ಸರ್ಕಾರದ ನಿಧಿಗಳಿಂದ ಉದ್ಯೋಗ ಕಲ್ಪಿಸುವ ಮೂಲಕ ಆತನು ಪೂರ್ತಿ ಉದ್ಯೋಗ, ಪೂರ್ತಿ ಉತ್ಪತ್ತಿ ಎನ್ನುವ ಲಕ್ಷ್ಯ(ಗುರಿ)ಗಳನ್ನು ಹಿಟ್ಟುಕೊಂಡನು ಮೇಲೆ ಹೆಸರಿಸಿದ ಕೀನ್ಸ್ ಭಾವನೆಗಳನ್ನು ನೆನಪಿಗೆ ತಂದುಕೊಳ್ಳಿ. ಈ ಯೋಜನೆಯ ಮೂಲಕ ಜರ್ಮನಿಯಲ್ಲಿ ವಾಹನಗಳು ಅತ್ಯಂತ ವೇಗವಾಗಿ ಹೋಗುವ ರಹದಾರಿಗಳನ್ನು ನಿರ್ಮಿಸಿದರು. ಪ್ರಜೆಗಳ

SCERT TELANGANA



ಚಿತ್ರ 12.8 ಹಿಟ್ಲರನ ಶಾಂತಿ ಯುದ್ಧ ಕಾಮುಕನ ಹಾಗೆ ತೋರಿಸಿದ ವ್ಯಂಗ್ಯ ಚಿತ್ರ

ಕಾರು (ವೊಕ್ಸ್ ವಾಗೆನ್)ರನ್ನು ಉತ್ಪತ್ತಿ ಮಾಡಿದರು. ಈ ಸಮಯದಲ್ಲಿ ಜಾತಿ ಅಹಂಕಾರ ಸರ್ಕಾರದ ಕೋಪಕ್ಕೆ ಗುರಿಯಾದ ಪ್ರಜೆಗಳ ಪರಿಸ್ಥಿತಿ ಘೋರವಾಗಿದ್ದರಿಂದ ಜರ್ಮನಿಯಲ್ಲಿನ ಒಂದು ವರ್ಗ ಪ್ರಜೆಗಳ ಜೀವನ ಪರಿಸ್ಥಿತಿಗಳು ಅಭಿವೃದ್ಧಿಗೊಂಡವು. ಆ ನಂತರ ಮತ್ತಷ್ಟು ಉದ್ಯೋಗ ಒದಗಿಸಲು ಆಯುಧ ಕಾರ್ಖಾನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿದರು. ಆದರೆ ನೆರೆಹೊರೆಯವರೊಂದಿಗೆ ಯುದ್ಧಕ್ಕಿಳಿದರೆ ಅದನ್ನು ತಪ್ಪಿಸಿ ಇದು ಮುಂದುವರೆಯಲು ಸಮಯವಿಲ್ಲದ ಪರಿಸ್ಥಿತಿ ಏರ್ಪಟ್ಟಿತು. ಮೊದಲ ಪ್ರಪಂಚ ಯುದ್ಧ ನಂತರ ಕಳೆದುಕೊಂಡ ಪ್ರಾಂತಗಳನ್ನು ಪುನಃ ಸ್ವಾಧೀನ ಪಡಿಸಿಕೊಳ್ಳಲು ಹಿಟ್ಲರ್ ವಿದೇಶಿ ವಿಧಾನವನ್ನು ಅವಲಂಭಿಸಿದನು. ನಂತರ 1939ರಲ್ಲಿ ಆತನು ಪೋಲೆಂಡ್ ಮೇಲೆ ದಂಡೆತ್ತಿದ್ದರಿಂದ ಎರಡನೇ ಪ್ರಪಂಚ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

ಯುದ್ಧ ಮುಂದುವರೆಯುತ್ತಿರುವ ಸಮಯದಲ್ಲಿ ನಾಜೀ ಸರ್ಕಾರ ಜರ್ಮನಿ ಜಾತಿ ಆಧಿಪತ್ಯವನ್ನು ನಿರ್ಮಿಸಲು ಅಲ್ಪಸಂಖ್ಯಾತ ವರ್ಗಗಳು ಘೋರ ಮೂಕ ಹತ್ಯಾಕಾಂಡ ಕಾರ್ಯಕ್ರಮವನ್ನು ಕೈಗೊಂಡಿತು.

ಎರಡನೇ ಪ್ರಪಂಚ ಯುದ್ಧದ ನೆರಳಿನಲ್ಲಿ ಜರ್ಮನಿ ಮಾನವ ಮರಣ ಹೋಮವನ್ನು ಕೈಗೊಂಡಿತು. ಇದರ ಫಲಿತವಾಗಿ ಯುರೋಪಿನಲ್ಲಿ ಆಯ್ಕೆಯಾದ ಅಮಾಯಕರಾದ ಪೌರರು ದೊಡ್ಡ ಸಂಖ್ಯೆಯಲ್ಲಿ ಸಾವಿಗೀಡಾದರು. ಮರಣ ಹೊಂದಿದವರಲ್ಲಿ ಆರು ಕೋಟಿ ಯೂದರು, 20 ಲಕ್ಷ ಜಿಪ್ಸಿಗಳು, ಕೋಟಿ ಪೋಲಿಷ್ ಪೌರರು, ಮಾನಸಿಕ, ಶಾರೀರಿಕ ವೈಕಲ್ಯವನ್ನು ಹೊಂದಿದವರ ಸಂಖ್ಯೆ 70,000 ಜರ್ಮನಿಯರು, 10,000 ಸ್ವಲಿಂಗ ಸಂಪರ್ಕರು, ಇನ್ನೂ ಅನೇಕ ರಾಜಕೀಯ ವ್ಯಕ್ತಿಗಳು ವಿವಿಧ ಮತನಿಷ್ಠೆ ಪ್ರಜೆಗಳಿದ್ದರು.

- ಹಿಟ್ಲರ್‌ನ ಸಿದ್ಧಾಂತ, ಆರ್ಥಿಕ ವಿಧಾನಗಳ ಫಲಿತವಾಗಿ ಎರಡನೇ ಪ್ರಪಂಚ ಯುದ್ಧ ಸಂಭವಿಸಿತೆಂದು ಹೇಗೆ ಹೇಳಬಹುದು ?
- ''ಹೋಲೊಕಾಸ್ಟ್'' ಕುರಿತು ಆಷ್ವಿಟ್ಜ್ ರೀತಿ ಶಿಬಿರಗಳನ್ನು ಕುರಿತು ಮತ್ತಷ್ಟು ತಿಳಿದುಕೊಂಡು ಅವುಗಳ ಆಧಾರವಾಗಿ ಒಂದು ನಿವೇದಿಕೆಯನ್ನು ತಯಾರಿಸಿರಿ

ಪ್ರಜೆಗಳನ್ನು ಕೊಲ್ಲಲು ನಾಜೀಗಳು ಅದಕ್ಕೂ ಮೊದಲು ಎಂದೂ ಕಂಡರಿಯದ ವಿಧಾನಗಳನ್ನು ಕೈಗೊಂಡರು. ಉದಾಹರಣೆಗೆ ಆಷ್ವಿಟ್ಜ್‌ನಂತಹ ಹತ್ಯಾಕೇಂದ್ರಗಳಲ್ಲಿ ಪ್ರಜೆಗಳನ್ನು ಕೋಣೆಯೊಳಗೆ ಕಳುಹಿಸಿ ಅದರೊಳಗೆ ವಿಷಪೂರಿತ ಗ್ಯಾಸ್ ಬಿಡುವುದರ ಮೂಲಕ ಸಾಯಿಸಿದರು.

GÃlvï®ï ±Ïl±Ïíal ¿áá¨Ïl : 1939 & 1945

Êïã¨ÏlÆ ±Ïl±Ïíal ¿áá¨ÏlPï PÝÃl | ÊÝ¨Ïl ¨ÏáÃlÖlíPÝÃl ±ÏäÄñlÊÝ¨Ïl ÃÝÑóà¿áÊÝ¨Ïl, Óï PlÊÝ¨Ïl, ÓÝÊlÞlgÂÊÝ¨Ïl, ÃlÖlÓlÂ J±Ïlí¨ÏWlÙlá GÃlvï®ïà ±Ïl±Ïíal ¿áá¨ÏlPï Plãvl ÊlÄÓlánlÊï.

CÊlâWlÙïã í©Wï GÃlvï®ïà ±Ïl±Ïíal¿áá¨ÏlPï PÝÃl | ÊÝ¨Ïl
Aí ÍlWlÙlá & ÐlÃlñláWlÙl £àÊlñï

ÊlÓïçìÇ...l J±Ïlí¨Ïl :

ಮೊದಲನೇ ಪ್ರಪಂಚ ಯುದ್ಧ 1919ರಲ್ಲಿ ವರ್ಸೈಲ್ಸ್ ಶಾಂತಿ ಒಪ್ಪಂದದಿಂದ ಮುಗಿಯಿತು. ಪ್ರಪಂಚದಲ್ಲಿ ನಾಲ್ಕರ ಮೂರು ಭಾಗ ಜನಸಂಖ್ಯೆಗೆ ಸದಸ್ಯತ್ವವಹಿಸಿದ 32ದೇಶಗಳ ಪ್ರತಿನಿಧಿಗಳು ಭಾಗವಹಿಸಿದ ಅತಿದೊಡ್ಡ ಸಮಾವೇಶವಿದು, ಯುದ್ಧದಲ್ಲಿ ವಿಜಯಿಗಳಾದ ಅತಿದೊಡ್ಡ ಐದು ದೇಶಗಳಾದ ಅಮೇರಿಕಾ, ಬ್ರಿಟನ್, ಫ್ರಾನ್ಸ್, ಇಟಲಿ, ಜಪಾನುಗಳು ಈ ಸಮಾವೇಶದಲ್ಲಿ ಭಾಗವಹಿಸಿದವು. ಆದರೆ ಸೋಷಲಿಸ್ಟ್ ರಷ್ಯಾದೊಂದಿಗೆ ಸೋಲನ್ನನುಭವಿಸಿದ ಜರ್ಮನಿ, ಆಸ್ಟ್ರಿಯಾ, ಟರ್ಕ್‌ನಂತಹ ದೇಶಗಳನ್ನು ಈ ಸಮಾವೇಶಗಳಿಗೆ ಆಹ್ವಾನಿಸಲಿಲ್ಲ, ಆಶ್ಚರ್ಯ ಉಂಟುಮಾಡಲಿಲ್ಲ. ಅದನ್ನು ಅದು ಗೌರವಿಸಲಿಲ್ಲ, ಅದನ್ನು ಜವಾಬ್ದಾರಿಯೆಂದು ಭಾವಿಸಲಿಲ್ಲ. ಆದ್ದರಿಂದ ಪ್ರಪಂಚ ಭವಿಷ್ಯತ್ತಿನ ಮೇಲೆ ಚರ್ಚೆಗಳನ್ನು ನಡೆಸುತ್ತಿರುವರು ಈ ದೇಶಗಳ ಸಲಹೆಗಳು ಭಾವನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಹೋದರು. ಇದರಿಂದ ವರ್ಸೈಲ್ಸ್ ಒಪ್ಪಂದ ತಮ್ಮ ಕಡೆ ಬಲವಂತವಾಗಿ ಹೇರಲ್ಪಟ್ಟಿವೆ ಎಂದು ಅದನ್ನು ಗೌರಿವಿಸುವ ಜವಾಬ್ದಾರಿ ತಮ್ಮ ಮೇಲೆ ಇಲ್ಲ ಜರ್ಮನಿ ಭಾವಿಸುವುದು ಆಶ್ಚರ್ಯವನ್ನು ಉಂಟು ಮಾಡುವುದಿಲ್ಲ. ಜರ್ಮನಿಯನ್ನು ಬಲಹೀನಗೊಳಿಸಲು ವರ್ಸೈಲ್ಸ್ ಒಪ್ಪಂದ ಅದರ ಮೇಲೆ ಸೈನಿಕ ಕಡಿತವನ್ನು ಭೌಗೋಳಿಕ ಪರಿಮಿತಿಯನ್ನು ವಿಧಿಸಿತು. ಮೊದಲು 1880ರಲ್ಲಿ ಆಕ್ರಮಿಸಿದ ಆಫ್ರಿಕಾದಲ್ಲಿನ ವಸಾಹತು ಪ್ರಾಂತಗಳನ್ನು, ಫ್ರಾನ್ಸ್‌ನಿಂದ 1871ರಲ್ಲಿ ಸ್ವಾಧೀನ ಪಡೆದುಕೊಂಡ ಆಲ್ಸಾಸ್, ಲೊರೈನ್‌ನಂತಹ ಐರೋಪಾ ಪ್ರಾಂತಗಳನ್ನು ಜರ್ಮನಿ ಮರೆತು ಬಿಡುವಂತಾಯಿತು. ನಂತರ, ಮೊದಲ ಪ್ರಪಂಚ ಯುದ್ಧ ಸಮಯದಲ್ಲಿ 9,00,000 ಸೈನಿಕ ಬಲವನ್ನು 1,00,000 ಕಡಿತಗೊಳಿಸುವಂತೆ ತಿಳಿಸಿದರು. ಅದೇ ವಿಧವಾಗಿ ಜಲಾಂತರ್ಗಾಮಿಗಳು ಇರಬಾರದೆಂದು, ಒಂದೊಂದು ಡಜನ್ ಟಾರ್ಪಿಡೊ ಹಡಗುಗಳನ್ನು ವಿನಾಶಕಾರದೊಂದಿಗೆ 10,000 ಟನ್ನುಗಳ ಒಳಗೆ ಇರುವ ಆರು ಯುದ್ಧನೌಕೆಗಳನ್ನು ಮೀರದ ನಾವಿಕದಳ ಇರಬೇಕೆಂದು ನಿರ್ದೇಶಿಸಿದರು. ಆದ್ದರಿಂದ ವರ್ಸೈಲ್ಸ್ ಒಪ್ಪಂದವನ್ನು ಜರ್ಮನಿ ತಮ್ಮ ಮೇಲೆ ಬಲವಂತವಾಗಿ ಹೇರಿದ ಪತ್ರವೆಂದು ಭಾವಿಸುವದು.

AíñlÃÝÑóà¿á ÓlíZ (ÈàW... B... ®ïàÐl®...l) :

ಭವಿಷ್ಯದಲ್ಲಿ ಯುದ್ಧಗಳನ್ನು ನಿವಾರಿಸಲು ವರ್ಸೈಲ್ಸ್ ಒಪ್ಪಂದ ಲೀಗ್ ಆಫ್ ನೇಷನ್ಸ್‌ನ್ನು ಏಪರಡಿಸಿದರು. ಈ ಕೂಟದಲ್ಲಿ ಸೇರಲು ರಷ್ಯಾ, ಜರ್ಮನಿಗಳನ್ನು ಆಹ್ವಾನಿಸಲಿಲ್ಲ. ಕೂಟಮಿ ಏರ್ಪಡುವಲ್ಲಿ ಅಧ್ಯಕ್ಷ ಉಡ್ರೋವಿಲ್ಸನ್ ಉತ್ತಮ ಪಾತ್ರವಹಿಸಿದ್ದರಿಂದ ಆತನ ಪ್ರತಿಪಾದನೆಯನ್ನು ಅಮೇರಿಕಾ ಕಾಂಗ್ರೇಸ್ (ಪಾರ್ಲಿಮೆಂಟ್) ಆಮೋದಿಸಲು ತಿರಸ್ಕರಿಸಿದ್ದರಿಂದ ಅದು ಕೂಡ ಸದಸ್ಯತ್ವ ಪಡೆಯಲಿಲ್ಲ. ಇದರ ಫಲಿತವಾಗಿ ಈ ಕೂಟಮಿಯಲ್ಲಿ ಅದರ ಅತ್ಯುನ್ನತ ದಶವಾದ 1934ರಲ್ಲಿ ಕೂಡ 58 ಮಂದಿ ಸದಸ್ಯರೇ ಇದ್ದರು ''ಸಂಯುಕ್ತ ಭದ್ರತೆ'' ಮೂಲಕ ಚರ್ಚೆಗಳು,

SCERT TELANGANA

ಸಂಪ್ರದಾಯಗಳಿಂದ ದೇಶಗಳ ಮಧ್ಯ ಭಿನ್ನಾಭಿಪ್ರಾಯಗಳನ್ನು ಪರಿಷ್ಕರಿಸುವುದರ ಮೂಲಕ ಯುದ್ಧಗಳು ಸಂಭವಿಸಿಸದಂತೆ ತಡೆಯಬಹುದೆಂದು ಆಶಿಸಿದರು. ಆರೋಗ್ಯ ಕಾರ್ಮಿಕರ ಸಂಕ್ಷೇಮದಂತಹ ಸಂಕ್ಷೇಮ ಕಾರ್ಯಕ್ರಮಗಳಿಗೋಸ್ಕರ ಅನೇಕ ಅಂತರಾಷ್ಟ್ರೀಯ ಸಂಸ್ಥೆಗಳನ್ನು ಅಂತರಾಷ್ಟ್ರೀಯ ಸಂಘ ಏರ್ಪಟು ಮಾಡಿತು. ದೇಶಗಳ ಮಧ್ಯ ವಿವಾದಗಳ ಪರಿಷ್ಕಾರಕ್ಕಾಗಿ ಅಂತರಾಷ್ಟ್ರೀಯ ನ್ಯಾಯಸ್ಥಾನವನ್ನು ಕೂಡ ಏರ್ಪಡಿಸಿತು. ಲೀಗ್ ಆಫ್ ನೇಷನ್ಸ್ ಮೇಲೆ ಬಹಳ ಆಸೆಯನ್ನಿಟ್ಟುಕೊಂಡಿದ್ದರು. ಅದು ಬಹಳ ಸಾಧಿಸುತ್ತದೆಂದು ಬಯಸಿದರು. ಆದರೆ ಅಂತರಾಷ್ಟ್ರೀಯ ಒಪ್ಪಂದಗಳನ್ನು ಉಲ್ಲಂಘಿಸದಂತೆ, ಇತರ ದೇಶಗಳ ಮೇಲೆ ದಂಡೆತ್ತದಂತೆ ಜರ್ಮನಿ, ಇಟಲಿಗಳನ್ನು ಇದು ನಿವಾರಿಸಲಾಗಲಿಲ್ಲ.

±ÀÄ£PÝÃÄ ¨sÁÃÝvÀÄÚñÀ : gÊÀá ì¯ ÓÀÊÝÆá :

1919 ಕೊನೆಯಲ್ಲಿ ಮೊದಲು ಪ್ರಪಂಚ ಯುದ್ಧದಲ್ಲಿ ಜರ್ಮನಿ ಸೋತಿದ್ದರಿಂದ ಯುದ್ಧವನ್ನು ಪ್ರಾರಂಭವಾದ್ದರಿಂದ ಜರ್ಮನಿಯನ್ನು ಶಿಕ್ಷಿಸಬೇಕೆಂದು, ಮತ್ತೆ ಪುನರ್‌ಚೇತನ ಗೊಳ್ಳದಂತೆ ಮಾಡಬೇಕೆಂದು ಮಿತ್ರದೇಶಗಳು ಭಾವಿಸಿದವು. ವರ್ಸೈಲ್ಸ್ ಒಪ್ಪಂದ ತಮ್ಮ ಮೇಲೆ ವಿಧಿಸಿದ ಷರತ್ತುಗಳು ತಮ್ಮನು ಭಾನಿಸರನ್ನಾಗಿ ಮಾಡುತ್ತಿವೆ ಎಂದು ಜರ್ಮನಿಯನ್ನರು ಭಾವಿಸಿದರು. ಇದರಿಂದ ಜರ್ಮನಿಯಲ್ಲಿ ಪ್ರತಿಸ್ಪಂದನೆ ಏರ್ಪಟ್ಟು ಹಿಟ್ಲರು, ಆತನ ನಾಜೀಪಾರ್ಟಿ ಪ್ರಬಲತೆಯನ್ನು ಪಡೆದವು. ವರ್ಸೈಲ್ಸ್ ಒಪ್ಪಂದದಿಂದ ತಾವು ಕಳೆದುಕೊಂಡ ಪ್ರಾಂತಗಳನ್ನು ಮರಳಿ ಪಡೆಯಬೇಕೆಂದು, ಮಧ್ಯ ಯುರೋಪಿನ ಮೇಲೆ ಜರ್ಮನಿ ಮರಳಿ ಒಡೆತನವನ್ನು ಪಡೆಯಬೇಕೆಂದು, ಜರ್ಮನಿ ಆಯುಧಗಳ ಮೇಲೆ ಇರುವ ಪರಿಮಿತಿಗಳಿಗೆ ಅಂತ್ಯ ಹಾಡಬೇಕೆಂದು ಅವರು ಕೋರಿಕೊಂಡರು, ನಾಜಿಗಳ ಕೆಳಗೆ ಜರ್ಮನಿ ಮರಳಿ ವೇಗವಾಗಿ ಕೈಗಾರೀಕರಣ ಹೊಂದಿದ್ದು, ಯುದ್ಧದಿಂದ ಮಾತ್ರ ಉಪಯೋಗಕ್ಕೆ ಬರುವ ಆಯುಧ ಕೈಗಾರಿಕೆಗಳನ್ನು, ಅತಿ ದೊಡ್ಡ ಸೈನ್ಯವನ್ನು ನಿರ್ಮಿಸಿಕೊಂಡಿತು.

ÓÀÊÀÞgÊÝ¨À, ÃÀÐÝÂPÀvÀ »À¿ áwÀÙÀá (USSR) :

ಮೊದಲ ಪ್ರಪಂಚ ಯುದ್ಧ ತೀವ್ರ ಪರಿಣಾಮಗಳಿಂದ ಯುರೋಪಿನವೆಲ್ಲಾ ಸಾಮಾಜಿಕ ಅಲ್ಲೋಲ ಕಲ್ಲೋಲ ವಾಯಿತು. ಕಾರ್ಮಿಕರು ಸಮಾಜವಾದ ಕಮ್ಯುನಿಜಂ ಭಾವನೆಗಳಿಂದ ಪ್ರಭಾವಿತರಾದರು. ಯುರೋಪಿನಲೆಲ್ಲಾ ಶಾಂತಿ ಹೋರಾಟಗಳು ಪ್ರಖ್ಯಾತ ಪ್ರಜಾಧಾರಣೆಯನ್ನು ಗಳಿಸಿದವು. ರಷ್ಯಾದಲ್ಲಿ 1917ರಲ್ಲಿ ಕ್ರಾಂತಿ ಸಂಭವಿಸಿ ಅಲ್ಲಿ ಕಮ್ಯುನಿಸ್ಟ್ ಸರ್ಕಾರ ಏರ್ಪಟ್ಟಿತು. ಯುದ್ಧದಲ್ಲಿ ರಷ್ಯಾ ಭಾಗಸ್ವಾಮ್ಯವನ್ನು ಉಪಸಂಹರಿಸಿ ಕೊಂಡು ಶಾಂತಿ ಚರ್ಚೆಗಳು ಕೈಗೊಳ್ಳುವುದು ಹೊಸ ಸರ್ಕಾರ ಕೈಗೊಂಡ ಮೊದಲ ಕಾರ್ಯಗಳಲ್ಲಿ ಒಂದು (ರಷ್ಯಾ 1924ರಲ್ಲಿ ಸೋವಿಯತ್ ಸೊಷಲಿಸ್ಟ್ ದೇಶಗಳ ಸಮ್ಮೈಕ್ಯದಿಂದ - ಯು.ಎಸ್.ಎಸ್.ಆರ್ ಬದಲಾಯಿತು.) ಬ್ರಿಟನ್‌ನಂತಹ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳು ಯುರೋಪಿ ನಲ್ಲಿನ ಇತರ ದೇಶಗಳಲ್ಲಿ ಕೂಡ ಇಂತಹ ಕ್ರಾಂತಿಗಳೇ ಸಂಭವಿಸುತ್ತವೆಂದು ಭಯಪಟ್ಟು ಸೋವಿಯತ್ ಸೋಷಲಿಜಿಗೆ ವಿರುದ್ಧ ಶಕ್ತಿಯಾಗಿ ಹಿಟ್ಲರ್, ನಾಜೀಗಳು ಪ್ರಬಲವಾಗುವುದನ್ನು ಪ್ರಾರಂಭದಲ್ಲಿ ಬಲಿಷ್ಠವಾದವು. ಹಿಟ್ಲರ್‌ನನ್ನು "ಸಂತೃಪ್ತಿಪಡಿಸುವುದು" ಎನ್ನುವ ವಿಧಾನವನ್ನು ಅವಲಂಭಿಸಿತು.

ಆದರೆ 1939ರಲ್ಲಿ ಜರ್ಮನಿ, ರಷ್ಯಾ ಪರಸ್ಪರ ದಂಗೆ ಹೇಳದಂತಿರಲು ಒಪ್ಪಂದವನ್ನು ಮಾಡಿಕೊಂಡವು. ಬ್ರಿಟನ್, ಫ್ರಾನ್ಸ್, ಕೂಟಕ್ಕೆ ವಿರುದ್ಧವಾಗಿ ಹಿಟ್ಲರ್ ನಿಂತನು. ಇದು ಎರಡನೇ ಪ್ರಪಂಚ ಯುದ್ಧಕ್ಕೆ ಕಾರಣವಾಯಿತು. ಪಶ್ಚಿಮ ಯುರೋಪ್ ಖಂಡದಲ್ಲಿನ ಅಧಿಕ ಭಾಗದ ಮೇಲೆ ಹಿಟ್ಲರ್ ತನ್ನ ಆಧಿಪತ್ಯವನ್ನು ಸ್ಥಾಪಿಸಿದನು. 1942ರಲ್ಲಿ ಹಿಟ್ಲರನು ರಷ್ಯಾದ ಮೇಲೆ ದಂಡೆತ್ತಬೇಕೆಂದು ನಿರ್ಣಯಿಸಿಕೊಂಡನು. ಅದೇ ವರ್ಷದಲ್ಲಿ ಜರ್ಮನಿ ಮಿತ್ರ ದೇಶವಾದ ಜಪಾನು ಅಮೇರಿಕಾ ಮೇಲೆ ದಾಳಿ ಮಾಡಿತು. ಆದ್ದರಿಂದ ಜರ್ಮನಿಗೆ ವಿರುದ್ಧವಾಗಿ ಯುದ್ಧದಲ್ಲಿ ಅಮೇರಿಕಾ, ರಷ್ಯಾ ಕೂಡ ಭಾಗವಹಿಸಿದವು.

SCERT TELANGANA

ñÌPÌ | ¨Ì PÝÃÌ | :

GÃÌvÌ®Ìà ±ÌÌ±ÌíaÌ ¿áá¨Ì 1939 Ó±ÌíŸÃ... 1 ÃÌí¨Ìá vÝí i íW... Ÿí¨ÌÃÌá (ÃÌàÊÌâ) ±Ìo | ÊÌ®Ìá gÊÌáì¯W J²ÓÌÆá ±ÌäàÇÌív... ¯ÃÝPÌÄÔ¨Ìá, ñÌPÌ | PÝÃÌ | . B ®ÌíñÌÃÌ ±ÌäàÇÌív...®ÌãÙÌW ±ÌÊÌàÎÔ, ÎQÓÌÆá gÊÌáì¯ ¿áá¨Ì pÝÀíPÌáWÌÙÌ®Ìá ×oÃ...®Ì Ó̀à®ÌWÌÙÌá ¨ÌívÌ£¨ÌÊÌâ. ±ÌäàÇÝÀívÌ®Ìá ÓÝÌ—à®Ì ±ÌvÌ¨ÌáPÌãÙÌáÊÌâ¨Ìá ÓÌ | ÓÌ¯PÌ PÝ¿áì¿ÞWÌáñÌ¨Ìí¨Ìá ×oÃ... »ÝËÔ¨Ì. B¨ÌÃÌ ±ÌäàÇÌív...W ¹Ìo®...®Ìãí©W ÓÌ¯PÌ J±Ìí¨Ì CÃÌáÊÌâ¨ÌÄí¨Ì ±ÌäàÇÌív... ±ÌÃÌÊÝX A¨Ìá ¿áá¨Ì¨ÌÈ »ÝWÌÊÌ×ÔñÌá. GÃÌvÌ®Ìà ©®Ì ´Ý®... PÌãvÌ ¿áá¨Ì¨ÌÈ »ÝWÌÊÌ×ÔñÌá. C¨ÌÄí¨Ì GÃÌvÌ®Ìà ±ÌÌ±ÌíaÌ ¿áá¨Ì ±ÝÃÌí»ÌÊÝÀáñÌá.

DW D GÃÌvÌá ±ÌÌ±ÌíaÌ ¿áá¨ÌWÌÚW ¨ÝÄ ÊÌÞwPÌão PÝÃÌ | WÌÙÌ®Ìá ®Ìãàvãà | . ÊÌã¨ÌÆá ±ÌÌ±ÌíaÌ ¿áá¨ÌPÌ 19®Ìà ÍñÌÊÌÞ®Ì©í¨ÌÇà Ÿá®Ý© ±ÝÃÌí»ÌÊÝWÌáñÌ¨Ì. BPÌÊÌá | ÎàÆ ÃÝÑÌà¿áÊÝ¨Ì, ÓÝÊÌÞgÀÊÝ¨Ì, ÃÌÖÓÌÀ J±Ìí¨ÌWÌÙÌá, ÓÌ¯PÌÊÝ¨Ì ÊÌã¨ÌÆ ±ÌÌ±ÌíaÌ ¿áá¨ÌPÌ ¨ÝÄÊÌÞwPÌão ÊÌáãÃÌá ±Ì«Ý®ÌÊÝ¨Ì PÝÃÌ | WÌÙÌá. CÊÌ PÝÃÌ | WÌÙÌá ±ÌÌ±ÌíaÌÊÌ®Ìá ÊÌáñÌãí¨Ìá ¿áá¨Ì¨ÌvÌW ¨ÝÄÊÌÞwPÌãqñÌá. B¨ÌÃÌ GÃÌvÌ®Ìà ±ÌÌ±ÌíaÌ ¿áá¨ÌPÌ ÊÌáñÌÐÌá ©àZìPÝÈPÌ PÝÃÌ | WÌÙÌá PÌhãàwÔ¨ÌÊÌâ. ÊÌã¨ÌÆ ±ÌÌ±ÌíaÌ ¿áá¨Ì ±ÌÄÓÝÊÌáWÌÙÌ PÌvÌ gÊÌáì¯ AÓÌíñÌ² ÓÌãí©ÃÌáÊÌâ¨Ìá C¨ÌÃÌÈ Jí¨Ìá D ©àZìPÝÆ PÝÃÌ | WÌÙÌà®Ìá GíŸá¨Ì®Ìá Jí¨Ìãí¨ÝX ®Ìãàvãà | .

´ÝÂÔÓ... ¨ÌàÍÌWÌÙÌá Jí¨ÌPÌãí¨Ìá ÓÌÖÓÌPÌÄÔPÌãÙÌáñÌÝ ®ÌÃÌÓÌãÃÌ ¨ÌàÍÌWÌÙÌ®Ìá Ó̯®ÌÀ¨Ìãí©W PÌŸÚÓÌáÊÌ¨Ì®Ìá ÊÌááí¨ÌáÊÌÃÌÔ¨ÌÃÌá. C¨ÌÄí¨Ì gÊÌáì¯, CoÈ, g±Ý®... ®ÌàñÌñÌ¨ÌÈ®Ì PÌàí¨ÌŸ | Jí¨Ìá PÌvÌ. CíWív... AÊÌááÄPÝ, ´Ý®... ¿áá.GÓ....GÓ....BÃ.... ®ÌàñÌñÌ¨ÌÈ ËáñÌ Ÿ | ÊÌáñÌãí¨Ìá PÌvÌ C¨Ìá GÃÌvÌ®Ì¿á ±ÌÌ±ÌíaÌ¿áá¨Ì BÃÌí»ÌÊÝÀáñÌá. 1941 ÃÌÈ gÃÌ¯¿á ËáñÌ ¨ÌàÍÌÊÝ¨Ì g±Ý®Ìá AÊÌááÄPÝ¨ÌÈ¿á ±ÌÃÌÖÝŸìÃÌ ÊÌááÇ ¨ÝÚ ÊÌÞwñÌá. 1942 ÃÌÈ ×oÃ... ÃÌÐÝÀ ÊÌááÇ ¨ÌívÌ£ÖÌãàWÌÆá¯ | ìÀáÔPÌãív̮̀á. A¨ÌPÌ ËÃÌá¨ÌÊÝX gÃÌ¯W ËÃÌá¨ÌÊÝX ¿áá¨Ì¨ÌÈ AÊÌáá ÄPÝ ÃÌÐÝÀWÌÙÌá PÌãvÌ »ÝWÌÓÝÌÊÌáWÌÙÝ¨ÌÊÌâ. gÊÌáì¯ ñÌ®Ì ÊÌááÇ ¨ÝÚ ÊÌÞvÌáÊÌ¨ÌÃÌãí©W ¿áá.GÓ....GÓ....BÃ.... 1942 ÃÌÈ ËáñÌ ±ÌPÌÊÌ®Ìá ÓÌàÄñÌá. AÊÌááÄPÝ ×ÃÌãàÑÊÌÞ&®ÝWÝÓÝQWÌÙÌ ÊÌááÇ A | á¸Ýí¸... ÖÝPÌáÊÌ¨ÌÃÌãí©W g±Ý®... ÍÃÌÓÝW£¿ÞWÌáÊÌ¨ÌÃÌ ÊÌáãÆPÌ 1945 BWÓ...®ÌÈ GÃÌvÌ®Ìà ±ÌÌ±ÌíaÌ ¿áá¨Ì PÌã®ÌWãíwñÌá.

¿áá¨Ì¨Ì ñÌÃÌáÊÝ¿á ÓÌñÌíñÌÀ ¨ÌàÍÌWÌÙÌá

GÃÌvÌ®Ì¿á ±ÌÌ±ÌíaÌ¿áá¨Ì ÊÌááX¿ááÊÌ¨ÌÃÌãí©W ÖÌÙÌà ÊÌÓÝÖÌñÌá BvÌÚñÌPÌ PÌã®ÌWãívÌá ŸÖÌÙ ¨ÌàÍÌWÌÙÌá ÓÝÌñÌíñÌÀ ±ÌvÌ¨ÌÊÌâ. 1945&1950ÃÌ ÊÌá«ÌPÝÆ¨ÌÈ »ÝÃÌñÌ, ®ÌhàÄ¿Þ, D i ±..., CívÌãà®ÌàÑ¿Þ, a®Ý, ±ÌäàÇív..., ¿ááWÌãÓÌãàË¿Þ, aPÌãÓÌãËQ¿Þ¨ÌíñÌÖ ¨ÌàÍÌWÌÙÌá ÓÌñÌíñÌÀ ¨ÌàÍÌWÌÙÝ¨ÌÊÌâ. ÃÝÐÌÓÌíZ¨Ì PÌÆÓÌÊÌ®Ìá ÊÌááí¨ÌáÊÌÃÌÓÌÆá ËÍÌÓÌíÓÌ¿áá ÓÝ±Ì®ÌWãíwñÌá. 20®Ì¿á ÍñÌÊÌÞ®Ì¨Ì ±Ì¥ÊÌÞ«ì »ÝW¨ÌÈ® ÊÌááSÀÊÝ¨Ì Zo®ÌWÌÙÌ®Ìá ÓÌíQ±ÌÊÝX

SCERT TELANGANA

£Ú¨láPÞãíváÊlâ. ®líñlÃl GÃlvlá A«ÝÂ¿áWlÙlÈ CÊlâWlÙl®lá PláÄñlá C®lÐlá ËÊlÃlWlÙl®lá £Ú¨láPÞãÙÞãlà|.



Ó㠋àÆá, ÊláPÝ¿á **(ಅಂತ್ಯ) :**

ಜರ್ಮನಿ ಸೈನ್ಯಗಳು ಪ್ರಾರಂಭದಲ್ಲಿ ವಿಜಯಗಳನ್ನು ಸಾಧಿಸಿದರೂ, 1943 ಆರಂಭದಲ್ಲಿ ಪ್ರಖ್ಯಾತ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಸೋಲಿನಿಂದ ಅಪಜಯಿಗಳಾಗ ತೊಡಗಿದವು. ಭಯಂಕರ ನಾಜೀ ಪರಿಪಾಲನೆಯಿಂದ ವಿಮುಕ್ತಿದಾತರಾಗಿ ಸೋವಿಯಟ್ ಸೈನ್ಯಕ್ಕೆ ಪೂರ್ವ ಯುರೋಪ್‌ಲೆಲ್ಲಾ ಘನಸ್ವಾಗತ ದೊರೆಯಿತು. ಅಂತಿಮವಾಗಿ ಸೋವಿಯಟ್ ಸೈನ್ಯ ಜರ್ಮನಿ ರಾಜಧಾನಿ ಯಾದ ಬೆರ್ಲಿನ್‌ನನ್ನು ದಕ್ಕಿಸಿಕೊಂಡಿತು. ನಿರ್ಬಂಧ, ವಿಚಾರಣೆ ಗಳನ್ನು ತಪ್ಪಿಸಿಕೊಳ್ಳಲು ಹಿಟ್ಲರ್, ಆತನ ಹಿತೈಷಿ ಮಿತ್ರರು ಆತ್ಮಹತ್ಯಾಗೀಡಾದರು. ಅಂತಿಮವಾಗಿ ಜರ್ಮನಿ ಎರಡು ಭಾಗವಾಗಿ ವಿಭಜನೆ ಯಾಯಿತು. ಪೂರ್ವ ಭಾಗವಾದ ಜರ್ಮನಿ ಗಣತಂತ್ರ ಪ್ರಜಾ ಪ್ರಭುತ್ವ (ಜಿ.ಡಿ.ಆರ್) ಯುಎಸ್‌ಎಸ್ ಆರ್ ಪ್ರಭಾವ ಕೆಳಗೆ, ಪಶ್ಚಿಮ ಭಾಗವಾದ ಜರ್ಮನ್ ಗಣತಂತ್ರ ಸಮೈಕ್ಯ (ಎಫ್.ಆರ್.ಜಿ) ಅಮೇರಿಕಾ ಪ್ರಭಾವದ ಕೆಳಗೆ ಹೋದವು.

ಪೂರ್ವ ಪ್ರಾಂತದಲ್ಲಿ ಹಿರೋಷಿಮಾ, ನಾಗಸಾಕಿಗಳಲ್ಲಿ ಅಮೇರಿಕ ಅಣುಬಾಂಬು ಹಾಕಿದ್ದರಿಂದ ಜಪಾನು ಸೋಲೊಪ್ಪಿಕೊಂಡಿತು. ಇದರೊಂದಿಗೆ 1945 ಆಗಸ್ಟ್‌ನಲ್ಲಿ ಎರಡನೇ ಪ್ರಪಂಚ ಯುದ್ಧ ಕೊನೆಗೊಂಡಿತು. ಅಮೇರಿಕಾ ಸೈನ್ಯಗಳು ಜಪಾನನ್ನು ಆಕ್ರಮಿಸಿಕೊಂಡವು, ಆದರೆ ಜಪಾನಿಯರ ಮನೋಭಿಲಾಸೆಗೆ ಅನುಗುಣವಾಗಿ ಜಪಾನಿನ ಚಕ್ರವರ್ತಿಯನ್ನು ಮುಂದುವರೆಸಿದರು. ಆದರೆ ಇಂಗ್ಲಾಂಡಿನ ಮಾದರಿಯಲ್ಲಿ ಸಂವಿಧಾನಬದ್ಧ ರಾಜರ ಆಳ್ವಿಕೆಯನ್ನು ಅಲ್ಲಿ ಏರ್ಪಡಿಸಿದರು. ಪಾರ್ಲಿಮೆಂಟ್ (ಡೈಟ್)ಗೆ ಜವಾಬ್ದಾರಿವಹಿಸುವ ಆಯ್ಕೆಯಾದ ಸರ್ಕಾರ ಜಪಾನು ಆಳ್ವಿಕೆಯನ್ನು ಕೈಗೊಂಡಿತು.

ನಾಜೀ ಸೈನಾಧಿಪತಿಗಳು, ನಾಯಕರಲ್ಲಿ ಅನೇಕ ಜನರನ್ನು ನಿರ್ಬಂಧಿಸಿ ಪ್ರಖ್ಯಾತ ನೂರೆಂಬರ್ಗ್ ವಿಚಾರಣೆಯಲ್ಲಿ



bñÜÀ 12.9 ®ÝWÜÓÜQ ÊáàÇ A|á ¸ÝíŸá

SCERT TELANGANA



ಚಿತ್ರ 12.10 ಅಣು ಬಾಂಬು ಹಾಕುವ ಮುಂದು, ಹಾಕಿದ ನಂತರ ನಾಗಸಾಕಿ ಪಟ್ಟಣ

ಪರೀಕ್ಷೆಗೊಳಪಡಿಸಿದರು. ನ್ಯೂರೆಂಬರ್ಗ್ ನ್ಯಾಯಾಲಯ ಕೇವಲ ಹನ್ನೆರಡು ಜನ ಪ್ರಮುಖ ರಾಜಕೀಯ ನಾಯಕರಿಗೆ ಮರಣ ಶಿಕ್ಷೆಯನ್ನು ನೀಡಿತು. ಮತ್ತೆ ಕೆಲವರಿಗೆ ಜೈಲು ಶಿಕ್ಷೆ ವಿಧಿಸಿತು. ಅಂತಿಮವಾಗಿ ನ್ಯಾಯ ದೊರೆಯಿತು ಆದರೆ, ನಾಜಿಗಳ ಅಪರಾಧಗಳ ತೀವ್ರತೆ, ಸಂಖ್ಯೆಗಳೊಂದಿಗೆ ಹೋಲಿಸಿದರೆ ಅವರಿಗೆ ಕೊಟ್ಟ ಶಿಕ್ಷೆ ಬಹಳ ಕಡಿಮೆ. ಮೊದಲ ಪ್ರಪಂಚ ಯುದ್ಧ ನಂತರ ಜರ್ಮನಿಯೊಂದಿಗೆ ವ್ಯವಹರಿಸಿದಷ್ಟು ಕಠಿಣವಾಗಿ ಈ ಸಾರಿ ಕೂಡ ವ್ಯವಹರಿಸಬೇಕೆಂದು ಮಿತ್ರ ದೇಶಗಳು ಅಂದುಕೊಳ್ಳಲಿಲ್ಲ. ವಾಸ್ತವಕ್ಕೆ ಯುದ್ಧ ನಂತರ ಜರ್ಮನಿ, ಜಪಾನ್ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ಅವುಗಳ ಆರ್ಥಿಕ ಪುನರುದ್ಧರಣೆಗೆ ಅಮೇರಿಕಾ ಮಾರ್ಷಲ್ ಯೋಜನೆಯೊಂದಿಗೆ, ನಿಧಿಗಳೊಂದಿಗೆ ಮುಂದೆ ಬಂದಿತು. ಅದೇ ರೀತಿ ಪೂರ್ವ ಯುರೋಪು ದೇಶಗಳ ಪುನರುದ್ಧರಣೆಗೆ ಯುಎಸ್ಎಸ್ಆರ್ ಸಹಾಯವನ್ನು ನೀಡಿತು.

ಪ್ರಪಂಚ ಯುದ್ಧಗಳ ಪರಿಣಾಮಗಳು :

ಪ್ರಪಂಚ ಯುದ್ಧಗಳು ಪ್ರಪಂಚ ರಾಜಕೀಯಗಳು, ಸಮಾಜ ಮತ್ತು ಆರ್ಥಿಕ ವ್ಯವಸ್ಥೆಗಳ ಮೇಲೆ ದೀರ್ಘಕಾಲ ಹೇಗೆ ಪ್ರಭಾವ ಬೀರಿದವೋ ಇಲ್ಲಿ ನೋಡೋಣ.

- ×Ã¡ãàÑÊÞ, ®ÝWÝÓÝQWÙ ÊáàÇ A|á¸Ýí¸… ÖÝQÃáÊ¨®á PáÄñá ¯àÊá PàÚÃá£àÄ. B ËÊÄWÙ®á ñÃW£PãàO¿áÈË¯Êá¿áÊÞwPãÚÄ. A|á¿áá¨WÙ A±Ý¿áÊ®áPáÄñáabìÓÄ.´ÝÓÖ…ÍñÎ¨àÍÊÝ¨ÝWãÃ A¨ÃÊáàÇCíñÖB¿áá«WÙ®á±ÁãàXÓÝÖá¨à?

20ನೇ ಶತಮಾನದಲ್ಲಿ ಮೊದಲು ಅರ್ಧ ಹಿರೋಷಿಮಾ, ನಾಗಸಾಕಿಗಳ ಮೇಲೆ ನಡೆದ ಭಯಂಕರ ಅಣುಬಾಂಬುಗಳೊಂದಿಗೂ, ವಿಶ್ವಸಂಸ್ಥೆ ಸ್ಥಾಪನೆಯಿಂದ ತಲೆಎತ್ತಿದ ಆಸೆಗಳೊಂದಿಗೆ ಮುಗಿಯಿತು. ಮೊದಲನೇ ಪ್ರಪಂಚ ಯುದ್ಧ ನಂತರ ಬ್ರಿಟನ್, ಫ್ರಾನ್ಸ್, ಜಪಾನ್, ಇಟಲಿ, ಜರ್ಮನಿಗಳ ವಸಾಹತು ಸಾಮ್ರಾಜ್ಯಗಳು ಕೂಡ ಕೊನೆಗೊಂಡವು 1950ರಲ್ಲಿಗೆ ಭಾರತದೇಶ, ಚೈನಾ, ಇಂಡೋನೇಷಿಯಾ, ವಿಯತ್ನಾ, ಈಜಿಪ್ಟ್, ನೈಜೀರಿಯಾದಂತಹ ದೇಶಗಳು ಸ್ವತಂತ್ರ್ಯವನ್ನು ಪಡೆದವು. ಯುದ್ಧಕ್ಕೂ ಮುನ್ನ ಅತ್ಯಂತ ಶಕ್ತಿವಂತವಾದ ದೇಶವಾಗಿದ್ದ ಬ್ರಿಟನ್ ಈಗ ದ್ವಿತೀಯ ಶ್ರೇಣಿಯನ್ನು ತಲುಪಿತು. ಪ್ರಪಂಚ ರಂಗದ ಮೇಲೆ ಎರಡು ಅಗ್ರ ರಾಜ್ಯಗಳು ಉದ್ಭವಿಸಿದವು. ಅವು ರಷ್ಯಾ, ಅಮೇರಿಕಾ, ಹಿಟ್ಲರ್ ಯುದ್ಧ ಪ್ರಭಾವಕ್ಕೆ ಪ್ರಧಾನವಾಗಿ ಗುರಿಯಾಗಿ, ತೀರ್ವ ಆರ್ಥಿಕವಿನಾಶದ ರುಚಿ ನೋಡಿದ ರಷ್ಯಾ ಕ್ರಮೇಣ ತನ್ನ ಆರ್ಥಿಕ ಪರಿಸ್ಥಿತಿಯನ್ನು

SCERT TELANGANA

ಅಭಿವೃದ್ಧಿಪಡಿಸಿಕೊಳ್ಳತೊಡಗಿತು. ಆದರೆ ರಷ್ಯಾ ಸಾಧಿಸಿದ ವಿಜಯ ಪ್ರಪಂಚದಲ್ಲಿ ಅದರ ಪ್ರತಿಷ್ಠೆ ಹೆಚ್ಚಾಯಿತು. ಪೂರ್ವ ಯುರೋಪ್ ಚೈನದೊಂದಿಗೆ ಸೇರಿ ಈಗ ಅದು ವಿಶಾಲ 'ಸಮಾಜವಾದಿ ಶಿಬಿರ' ವಾಗಿ ಪರಿಗಣಿಸಲಾಯಿತು.

AÓÜ í TÝÂñÜ ±ÝÃ | ®ÜÐÜr :

ಪ್ರಪಂಚ ಯುದ್ಧಗಳ ಕಾರಣದಿಂದ ಬಹಳ ಜನ ಸಾವನ್ನಪ್ಪಿದರು, ಗಾಯಗೊಂಡರು ಇದಕ್ಕೂ ಮೊದಲು ತಿಳಿಸಿದಂತೆ ಮೊದಲನೆ ಪ್ರಪಂಚ ಯುದ್ಧದಲ್ಲಿ ಸುಮಾರು ಕೋಟಿ ಜನ, ಎರಡನೇ ಪ್ರಪಂಚ ಯುದ್ಧದಲ್ಲಿ 2ತ2.5 ಕೋಟಿ ಜನ ಮರಣ ಹೊಂದಿದರು. ಮರಣ ಹೊಂದಿದವರಲ್ಲಿ ಅಧಿಕ ಶೇಕಡ 40 ವರ್ಷದೊಳಗಿನ ಪುರುಷರೇ, ಈ ಎರಡು ಯುದ್ಧ ಗಳಿಂದ ಮರಣ ಯುದ್ಧಗಳ ಪೈಪೋಟಿ ಪ್ರತ್ಯೇಕವಾಗಿ ಅಣುಬಾಂಬುಗಳು, ರಸಾಯನಿಕ ಆಯುಧಗಳ ಪೈಪೋಟಿ ಹೆಚ್ಚಾಯಿತು. ಇಂತಹ ಆಯುಧಗಳು ಪ್ರಮಾದಕರ ವಾಗಿ ಸ್ಫೋಟಗೊಂಡರೆ ಸಂಪೂರ್ಣ ವಿನಾಶ, ಮಾನವ ನಾಶ ನಡೆಯುವ ಮುಪ್ಪು ಭಯದಿಂದ ಪ್ರಪಂಚ ಈಗಿನವರೆಗೂ ಜೀವಿಸುತ್ತಿದೆ.

¿ áá¨Ü©í¨Ü ÓÜ í »ÜËÔ¨Ü ÊÜáÃÜ | ÊÜÙÜá 1500 - 1999



ಗ್ರಾಫ್ 13.1 ಯುದ್ಧ ಮರಣಗಳು 1500 ತ 1999

ಯುದ್ಧ ಮರಣಗಳು, ಮಿಲಿಯನ್‌ಗಳಲ್ಲಿ ಪ್ರತಿ ನೂರು ಜನರಿಗೆ ಮರಣಗಳು

ಪ್ರತಿಶತಮಾನಕ್ಕೆ ಯುದ್ಧಗಳಿಂದ ಆ ಶತಮಾನದ ಜನಸಂಖ್ಯೆಯಲ್ಲಿ ಪ್ರತಿ ನೂರ ಜನರಲ್ಲಿ ಎಷ್ಟು ಜನರು ಮರಣ ಹೊಂದಿದರು ಎಂಬುದನ್ನು ತಿಳಿಸುತ್ತದೆ. ಎಂದರೆ *16*ನೇ ಶತಮಾನದಲ್ಲಿ ಪ್ರತಿ ನೂರು ಜನರಿಗೆ ನಾಲ್ಕು ಜನರಿಗಿಂತ ಕಡಿಮೆ ಜನರು ಮರಣಹೊಂದಿದರು ಕೊನೆ ಶತಮಾನದಲ್ಲಿ ಅದು *44* ರಷ್ಟು ಜನರಿಗೆ ಹೆಚ್ಚಾಯಿತು – ಎಂದರೆ ಸುಮಾರು *4.5%* ಪ್ರಜೆಗಳು

±ÜhÝ±Ü»ÜáñÜ ÊÜáãÆÜ ãñÜÜWÜÙÜ ±Ü£±Ý¨Ü®æ :

ಅಪ್ರಜಾಪ್ರಭುತ್ವ ಸರ್ಕಾರದಿಂದ ಪ್ರಮಾದಗಳೇನೆಂಬುದನ್ನು ಪ್ರಪಂಚ ಯುದ್ಧಗಳಿಂದ ತಿಳಿದುಬಂದದ್ದರಿಂದ ಅಧಿಕಾರ ಪ್ರಜಾಪ್ರಭುತ್ವವಾಗಿರುವ ಅವಶ್ಯಕತೆಯನ್ನು ಮನಗಂಡರು. ಮೊದಲ ಪ್ರಪಂಚ ಯುದ್ಧದ ಜೊತೆಗೆ ಅನೇಕ ಸಾಮ್ರಾಜ್ಯಗಳು (ಆಸ್ಟ್ರೊ ಹಂಗೇರಿಯನ್ ಸಾಮ್ರಾಜ್ಯ, ರಷ್ಯನ್ ಸಾಮ್ರಾಜ್ಯ, ಓಟ್ಟೋಮಾನ್ ಸಾಮ್ರಾಜ್ಯ ಜರ್ಮನ್ ಸಾಮ್ರಾಜ್ಯ) ನಾಶವಾಯಿತು. ರಷ್ಯಾದಂತಹ ದೇಶಗಳಲ್ಲಿ ಸೋಷಲಿಸ್ಟ್ ಕ್ರಾಂತಿಗಳು ಸಂಭವಿಸಿದಾಗ ಜರ್ಮನಿಯಂತಹ ದೇಶಗಳು ರಾಜರ ಆಳ್ವಿಕೆಯಿಂದ ಹೊರಬರಲು ವೈಮರ್ ಗಣತಂತ್ರವಾಗಿ ಏರ್ಪಟ್ಟವು. ಟರ್ಕಿನಲ್ಲಿ ಓಟ್ಟೊಮಾನ್ ಸಾಮ್ರಾಜ್ಯ ಸ್ಥಾನದಲ್ಲಿ ಪ್ರಜಾಪ್ರಭುತ್ವ, ಜಾತ್ಯಾತೀತ ಸರ್ಕಾರ ಏರ್ಪಟ್ಟಿತು. ಅದೇ ವಿಧವಾಗಿ ಮೊದಲ ಪ್ರಪಂಚ ಯುದ್ಧ ಕಾಲದಲ್ಲಿ ವಸಾಹತು ಪರಿಪಾಲನೆ ಪ್ರಾಂತ ಪ್ರಜೆಗಳ ಕೋರಿಕೆಯಂತೆ ವಸಾಹತು ಪ್ರಾಂತಗಳಲ್ಲಿ ಸ್ವಯಂ ಪರಿಪಾಲನೆಯ ಅವಶ್ಯಕತೆಯನ್ನು ಸಿದ್ಧಾಂತದ ಪ್ರಕಾ ವಸಾಹತು ಆಳ್ವಿಕೆ ದೇಶಗಳು ಗುರ್ತಿಸಿದವು. ಎರಡನೇ ಪ್ರಪಂಚ ಯುದ್ಧ ನಂತರ ವಸಾಹತು ಆಳ್ವಿಕೆ ಅಂತ್ಯವಾಗುವ ಪ್ರಕ್ರಿಯೆ ಪ್ರಾರಂಭವಾದ್ದರಿಂದ ಆಸಿಯಾ, ಆಫ್ರಿಕಾ ಖಂಡಗಳಲ್ಲಿ ಹತ್ತು ಸಂಖ್ಯೆಯಲ್ಲಿ ವಸಾಹತು ಆಳ್ವಿಕೆ ದೇಶಗಳು ಸ್ವಾತಂತ್ರ್ಯ ಹೊಂದಿ ಹೊಸ ದೇಶಗಳಾಗಿ ಏರ್ಪಟ್ಟವು.

SCERT TELANGANA

A–PÝÃÚ ÓÚÊÚáñ ãàÆ®¿áÈ Ÿ¨ÚÇÝÊÚÓ :

ಮೊದಲ ಪ್ರಪಂಚ ಯುದ್ಧ ಮುಗಿದಿದ್ದರಿಂದ ಜರ್ಮನಿ, ಆಸ್ಟ್ರೋ - ಹಂಗೇರಿಯನ್, ರಷ್ಯನ್, ಟರ್ಕಿಷ್ ಸಮ್ರಾಜ್ಯಗಳು ಕೂಡ ಕೊನೆಗೊಂಡವೆಂದು ತಿಳಿದುಕೊಂಡೆವು. ಮಧ್ಯ ಪೂರ್ವ ಯುರೋಪು ಪ್ರಾಂತ ರಾಷ್ಟ್ರೀಯತೆ, ಆರ್ಥಿಕ ಮುಗ್ಗಟ್ಟು ಸೈನಿಕ ಭದ್ರತೆಯಂತಹವುಗಳ ಆಧಾರವಾಗಿ ಮರಳಿ ವಿಭಜಿಸಲ್ಪಟ್ಟಿತು. ಎರಡನೇ ಪ್ರಪಂಚ ಯುದ್ಧ ಮುಗಿಯುವುದರೊಂದಿಗೆ ಹಿಂದೆ ವಸಾಹತು ಪ್ರಾಂತಗಳಾಗಿರುವ ದೇಶಗಳು ಸ್ವಾತಂತ್ರ್ಯ ಪಡೆದರಿಂದ ಪ್ರಪಂಚ ನಕ್ಷೆ ರೂಪುರೇಖೆಗಳ ಮತ್ತೊಂದು ಬಾರಿ ಬದಲಾದವು.

ÊÚá×Ú¿ áÄW ÊÚáñÚ aÚÇÝ ÀáÓÚáÊÚ ÖÚPÚá

ಮತ ಚಲಾಯಿಸುವ ಹಕ್ಕುದಂತಹ ರಾಜಕೀಯ ಹಕ್ಕುಗಳಿಗಾಗಿ ಸುದೀರ್ಘ ಹೋರಾಟದ ನಂತರ 1918ರಲ್ಲಿ ಬ್ರಿಟೀಷ್ ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕು ದೊರೆಯಿತು. ಪ್ರಪಂಚ ಯುದ್ಧಗಳ ಮಾದರಿ ದೀರ್ಘಕಾಲದವರೆಗೆ ಸಂಭವಿಸುವ ಯುದ್ಧಕಾಲದಲ್ಲಿ ಕೈಗಾರಿಕಾ ಉತ್ಪತ್ತಿ ಇತರೆ ಸೇವೆಗಳು ಮುಂದುವರೆಯುವ ಅವಶ್ಯಕತೆಯಿದೆ. ಪುರುಷರು ಯುದ್ಧ ಭೂಮಿಯಲ್ಲಿ ಇರುವುದರಿಂದ ಕಾರ್ಖಾನೆಗಳು, ಅಂಗಡಿಗಳು, ಕಾರ್ಯಾಲಯಗಳು, ಸ್ವಚ್ಛಂದ ಸೇವೆಗಳು, ಆಸ್ಪತ್ರೆಗಳು, ಪಾಠಶಾಲೆಗಳಂತವುಗಳಲ್ಲಿ ಮಹಿಳೆಯರ ಕೆಲಸ ಮಾಡಬೇಕಾಯಿತು. ಸಂಪಾದಕರು ಆದ್ದರಿಂದ ಹೆಚ್ಚಾದ ಆತ್ಮವಿಶ್ವಾಸದಿಂದ ಜೀವನದಲ್ಲಿ ಎಲ್ಲಾ ಅಂಶಗಳಲ್ಲಿ ಮಹಿಳೆಯರು ಸಮಾನತೆಯನ್ನು ಬಯಸಿದರು. ಈ ಹಂತದಲ್ಲಿ ಮತ ಚಲಾಯಿಸುವ ಹಕ್ಕು ದೊರೆಯುವುದು ಎಂಬುದು ಒಂದು ದೊಡ್ಡ ಮುನ್ನೆಜ್ಜೆಯಾಗಿತು.

ÖãÓÚ AíñÚÃÝÑà¿á ÓÚíÓWÚÚá :

ಮೊದಲ ಪ್ರಪಂಚ ಯುದ್ಧ ನಂತರ ವಿಭಿನ್ನತೆಯಿಂದ ಶಾಂತಿಯುತ ಪರಿಷ್ಕಾರಕ್ಕಾಗಿ ಅಂತರಾಷ್ಟ್ರೀಯ ಸಂಸ್ಥೆ ಏರ್ಪಟ್ಟಿತು. ಎರಡನೇ ಪ್ರಪಂಚ ಯುದ್ಧ ನಂತರ ಅಂತರಾಷ್ಟ್ರೀಯ ಸಮಿತಿ (ಯುಎನ್‌ಓ) ಏರ್ಪಟ್ಟಿತು. ವಿಶ್ವಸಂಸ್ಥೆ ನಾಲ್ಕು ಸಿದ್ಧಾಂತಗಳ ಆಧಾರವಾಗಿ ಏರ್ಪಟ್ಟ ಪ್ರಪಂಚ ಸರ್ಕಾದಂತಹುದು. ಶಾಂತಿಯನ್ನು ಸ್ಥಾಪಿಸುವುದು, ಮಾನವ ಹಕ್ಕುಗಳನ್ನು ಕಾಪಾಡುವುದು ಅಂತರಾಷ್ಟ್ರೀಯ ಕಾಯಿದೆಗಳನ್ನು ಗೌರವಿಸುವುದು, ಸಾಮಾಜಿಕ ಪ್ರಗತಿಯನ್ನು ಪ್ರೋತ್ಸಾಹಿಸುವುದು. ಮಕ್ಕಳ ಅತ್ಯವಸರ ನಿಧಿ (ಯುನಿಸೆಫ್) ವಿದ್ಯ ವೈಜ್ಞಾನಿಕ, ಸಾಂಸ್ಕೃತಿಕ ಸಂಸ್ಥೆ(ಯುನೆಸ್ಕೊ) ಆರೋಗ್ಯ ಸಂಸ್ಥೆ(ಡಬ್ಲೂಹೆಚ್ ಓ) ಕಾರ್ಮಿಕ ಸಂಸ್ಥೆ(ಐಎಲ್‌ಓ) ದಂತಹ ಸಂಸ್ಥೆಗಳ ಮೂಲಕ ಇದು ಕೆಲಸ ಮಾಡು ತ್ತದೆ. ಇವುಗಳಲ್ಲಿ ಕೆಲವನ್ನು ಕುರಿತು ನೀವು ಕೇಳಿರುತ್ತಿರಿ. ಅವುಗಳ ಕೆಲಸದ ರೀತಿ ನೀತಿ ಕೂಡ ನೋಡಿರುತ್ತಿರಿ. ಅಮೇರಿಕಾ, ರಷ್ಯಾ ದಂತಹ ದೊಡ್ಡ ದೇಶಗಳ ಕೈಯಲ್ಲಿ ವಿಶ್ವಸಂಸ್ಥೆ ಕೈಗೊಂಬೆಯಾಗಿ ಬದಲಾಯಿ ತ್ತಂಬ ಅಪವಾದವಿದ್ದಗಲೂ ಎರಡನೇ ಪ್ರಪಂಚ ಯುದ್ಧಗಳು ಸಂಭವಿಸದಂತೆ ನಿಲ್ಲಿಸುವಂತಾಯಿತು.

ಮುಖ್ಯ ಪದಗಳು

ಕೈಗಾರಿಕಾ ಬಂಡವಾಳದಾರಿ ವಿಧಾನ	ಮೈತ್ರಿ ಒಪ್ಪಂದಗಳು		
ಆಕ್ರಮಣಶೀಲ ರಾಷ್ಟ್ರೀಯವಾದ	ಸೈನಿಕವಾದ	ಫ್ಯಾಸಿಜಂ	ಸಾಮ್ರಾಜ್ಯವಾದ

SCERT TELANGANA

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1 . ಪ್ರಪಂಚ ಯುದ್ಧಗಳಲ್ಲಿ ಮಿತ್ರ ರಾಜ್ಯ, ಅಕ್ಷರಾಜ್ಯ, ಕೇಂದ್ರ ರಾಜ್ಯಗಳ ಕೂಟಮಿ (ಬಣ) ಗಳಲ್ಲಿ ಭಾಗವಹಸಿದ ದೇಶಗಳೊಂದಿಗೆ ಕೂಡಿದ ಪಟ್ಟಿಯನ್ನು ತಯಾರಿಸಿ, ಆಸ್ಟ್ರೇಲಿಯಾ, ಯು.ಎಸ್.ಎಸ್.ಆರ್.(ರಷ್ಯಾ), ಜರ್ಮನಿ, ಬ್ರಿಟನ್, ಜಪಾನ್, ಫ್ರಾನ್ಸ್, ಇಟಲಿ, ಯು.ಎಸ್.ಎ. (AS_3)

2 . ಪ್ರಪಂಚ ಯುದ್ಧಗಳಲ್ಲಿ ರಾಷ್ಟ್ರೀಯ ರಾಜ್ಯಗಳು, ರಾಷ್ಟ್ರೀಯತೆ ಭಾವನೆ ಯುದ್ಧಾಕಾಂಶಿಯನ್ನು ಹೇಗೆ ಪ್ರಭಾವಗೊಳಸಿದವು ? (AS_1)

3 . ಎರಡು ಪ್ರಪಂಚ ಯುದ್ಧಗಳಿಗೆ ಕಾರಣಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ. ಪ್ರಪಂಚದಲ್ಲಿ ಯಾವುದಾದರೂ ದೇಶಗಳಲ್ಲಿ ಈಗಲೂ ಈ ಅಂಶಗಳು ಯಾವಾದರೂ ಇವೆಯೇ ? ಯಾವ ರೂಪದಲ್ಲಿವೆ ? (AS_4)

4 . ರಷ್ಯನ್ ಕ್ರಾಂತಿ ಆ ಸಮಾಜದಲ್ಲಿ ಎಷ್ಟೋ ಬದಲಾವಣೆಗಳನ್ನು ತಂದಿತು. ಅವು ಯಾವುವು ? ಅವರು ಎದುರಿಸುತ್ತಿರುವ ಸವಾಲುಗಳೇನು ? (AS_1)

5. ತೀವ್ರ ಖಿನ್ನತೆ ಪರಿಸ್ಥಿತಿಯಲ್ಲಿ ಸಂಕ್ಷೇಮ ರಾಜ್ಯ ಎನ್ನುವ ಭಾವನೆ ಕೆಳಗೆ ಕೈಗೊಂಡ ವಿವಿಧ ಕ್ರಮಗಳನ್ನು ಹೆಸರಿಸಿ. ರಷ್ಯಾದಲ್ಲಿ ಕೈಗೊಂಡ ಸಂಸ್ಕರಣೆಗೂ, ಇವುಗಳಿಗೂ ಇರುವ ಹೋಲಿಕೆಗಳು, ವ್ಯತ್ಯಾಸಗಳನ್ನು ಹೆಸರಿಸಿರಿ. (AS_1)

6. ನಾಜೀ ಜರ್ಮನಿಯ ಕೈಯಲ್ಲಿ ಯೂದರು ಯಾವ ವಿಧವಾದ ವೇದನೆಗೆ ಗುರಿಯಾದರು ? ಪ್ರತಿ ದೇಶದಲ್ಲೂ ಕೆಲವು ಜನರು ತಮ್ಮ ಪ್ರತ್ಯೇಕ ಹೆಸರು ಗಳಿಸುವ ಕಾರಣದಿಂದ ಬೇರೆಯಾಗಿ ನೋಡಲ್ಪಡುತ್ತಿದ್ದಾರಾ ? (AS_4)

7. ತೀವ್ರ ಖಿನ್ನತೆ ಪರಿಸ್ಥಿತಿಯಲ್ಲಿ ಸಂಕ್ಷೇಮ ರಾಜ್ಯ ಎನ್ನುವ ಭಾವನೆ ಕೆಳಗೆ ಕೈಗೊಂಡ ವಿವಿಧ ಕ್ರಮಗಳನ್ನು ಹೆಸರಿಸಿ. ರಷ್ಯಾದಲ್ಲಿ ಕೈಗೊಂಡ ಸಂಸ್ಕರಣೆಗೂ, ಇವುಗಳಿಗೂ ಇರುವ ಹೋಲಿಕೆಗಳು, ವ್ಯತ್ಯಾಸಗಳನ್ನು ಹೆಸರಿಸಿರಿ. (AS_1)

8. ತೀವ್ರ ಖಿನ್ನತೆಯಲ್ಲಿ ಜರ್ಮನಿ ಎದುರಿಸಿದ ಸವಾಲುಗಳಾವುವು ? ನಾಜೀ ಪರಿಪಾಲಕರು, ಹಿಟ್ಲರ್ ಅವುಗಳನ್ನು ಹೇಗೆ ಉಪಯೋಗಿಸಿಕೊಂಡರು ? (AS_1)

9. ಪುಟಸಂಖ್ಯೆ 168 ರಲ್ಲಿನ ಇದರಿಂದ ಫ್ಯೂಡ ಭೂಮಾಲಿಕರು .... ಏರ್ಪಡಿಸಲು ಯು.ಎಸ್.ಎಸ್.ಆರ್. ಪ್ರಯತ್ನಿಸಿತು ಇದರ ಮೇಲೆ ನಿಮ್ಮ ಅಭಿಪ್ರಾಯವೇನು ? (AS_2)

10. ಪುಟಸಂಖ್ಯೆ 181 ರಲ್ಲಿನ ನಕಾಶೆ ----ನ್ನು ಗಮನಿಸಿ ಈ ಪ್ರಶ್ನೆಗಳಿಗೆ ಉತ್ತರಿಸಿರಿ.

    1) ಜಪಾನ್ ನಿಯಂತ್ರಣದಲ್ಲಿಲ್ಲದ ಯಾವುದಾದರು ಎರಡು ದೇಶಗಳನ್ನು ಹೆಸರಿಸಿ.

    2) ಜಪಾನ್ ನಿಯಂತ್ರಣದಲ್ಲಿದ್ದು ಅದಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಎರಡು ಪ್ರಾಂತಗಳನ್ನು ಹೆಸರಿಸಿರಿ.

11. ಪ್ರಪಂಚ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ.

    1) ಜರ್ಮನಿ 2) ಇಟಲಿ 3) ಆಸ್ಟ್ರೀಯಾ 4) ಯು.ಎಸ್.ಎ. 5) ಚೈನಾ 6) ರಷ್ಯಾ 7) ಬ್ರಿಟನ್

12. ಯುದ್ಧಗಳನ್ನು ನಿವಾರಿಸಿ, ಶಾಂತಿಯನ್ನು ಸ್ಥಾಪಿಸುವ ಕೆಲವು ಘೋಷಣೆಗಳನ್ನು ತಯಾರಿಸಿರಿ. (AS_6)

ಚರ್ಚೆ :

ಯುದ್ಧದಲ್ಲಿ ಮರಣಹೊಂದಿದ ಕುಟುಂಬಗಳ ಪರಿಸ್ಥಿತಿ ಅವರು ಅನುಭವಿಸಿದ ನೋವುಗಳ ಕುರಿತು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

SCERT TELANGANA

ಅಧ್ಯಾಯ
13

ವಸಾಹತು ಆಳ್ವಿಕೆ ಪ್ರಾಂತಗಳಲ್ಲಿ ರಾಷ್ಟ್ರೀಯ ವಿಮುಕ್ತಿ ಚಳುವಳಿಗಳು

ವಸಾಹತು ಆಳ್ವಿಕೆ ಪ್ರಾಂತಗಳನ್ನು ತೋರಿಸುವ ಕೆಳಗಿನ ನಕ್ಷೆಯನ್ನು ನೋಡಿರಿ. 19ನೇ ಶತಮಾನಕ್ಕೆ ಲ್ಯಾಟಿನ್ ಅಮೇರಿಕಾ, ಆಫ್ರಿಕಾ, ಏಷ್ಯಾ ದೇಶಗಳ ಮೇಲೆ ಯೂರೋಪ್ ದೇಶಗಳು ನಿಯಂತ್ರಣ ಹೊಂದಿದ ವಿಧಾನವನ್ನು ನೀವು ಎಂಟನೇ ತರಗತಿಯಲ್ಲಿ ಓದಿದ್ದೀರಿ. ಈ ದೇಶಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಧಾನಗಳನ್ನು ಕುರಿತು ಈ ಅಧ್ಯಾಯನದಲ್ಲಿ ತಿಳಿದುಕೊಳ್ಳೋಣ. ಕೆಳಗಿನ ನಕ್ಷೆಯಲ್ಲಿ ಬ್ರಿಟನ್ ವಸಾಹತು ಆಳ್ವಿಕೆ ಪ್ರಾಂತಗಳು ಗುಲಾಬಿ ಬಣ್ಣದಲ್ಲೂ, ಫ್ರಾನ್ಸ್‌ಗೆ ಸೇರಿದವು ನೀಲಿ ಬಣ್ಣದಲ್ಲೂ, ಹಾಲೆಂಡ್‌ಗೆ ಸೇರಿದವು ತಿಳಿ ಕಂದು ಬಣ್ಣದಲ್ಲೂ ಇವೆ. ಏಷ್ಯಾ, ಆಫ್ರಿಕಾದಲ್ಲಿ ಕೆಲವು ದೇಶಗಳು ಸ್ವತಂತ್ರವಾಗಿಯೇ ಇವೆ, ಇವು ಬೂದಿಬಣ್ಣದಲ್ಲೂ ಇವೆ. ಆಧುನಿಕ ಪ್ರಪಂಚ ನಕ್ಷೆಯಲ್ಲಿ ಈ ದೇಶಗಳನ್ನೆಲ್ಲಾ ಗುರ್ತಿಸಿರಿ.

- ಬ್ರಿಟನ್‌ಗೆ ಸೇರಿದ ವಸಾಹತುಗಳಲ್ಲಿ ಏಷ್ಯಾದಲ್ಲಿ ಒಂದು ಪ್ರಾಂತವನ್ನು, ಆಫ್ರಿಕಾದಲ್ಲಿ ಮತ್ತೊಂದು ಪ್ರಾಂತವನ್ನು ಗುರ್ತಿಸಿರಿ.
- ಹಾಲೆಂಡ್‌ಗೆ ಸೇರಿದ ಒಂದು ಏಷಿಯಾ, ಒಂದು ಆಫ್ರಿಕಾ ವಸಾಹತು ಪ್ರಾಂತವನ್ನು ಗುರ್ತಿಸಿರಿ.
- ಫ್ರಾನ್ಸ್‌ಗೆ ಸೇರಿದ ಒಂದು ಏಷ್ಯಾ, ಒಂದು ಆಫ್ರಿಕಾ ವಸಾಹತು ಪ್ರಾಂತವನ್ನು ಗುರ್ತಿಸಿರಿ.
- ಯಾವ ದೇಶಕ್ಕೆ ವಸಾಹತು ಆಳ್ವಿಕೆ ಪ್ರಾಂತವಲ್ಲದ ಏಷ್ಯಾದಲ್ಲಿ ಎರಡು ದೇಶಗಳನ್ನು ಆಫ್ರಿಕಾದಲ್ಲಿ ಒಂದು ದೇಶವನ್ನು ಗುರ್ತಿಸಿರಿ.
- ಆಸ್ಟ್ರೇಲಿಯಾ ಯಾವ ದೇಶಕ್ಕೆ ವಸಾಹತು ಆಳ್ವಿಕೆ ಪ್ರಾಂತವಾಗಿತ್ತು ?



ನಕ್ಷೆ 1 : 1914ರಲ್ಲಿ ವಸಾಹತು ಆಳ್ವಿಕೆ ಪ್ರಾಂತಗಳು

ಸ್ವತಂತ್ರ ದೇಶಗಳಾದ ಚೈನಾದಂತಹವು ವಾಸ್ತವಾಗಿ ಅನೇಕ ವಸಾಹತು ಆಳ್ವಿಕೆ ದೇಶಗಳ ನಿಯಂತ್ರಣದಲ್ಲಿದ್ದು ಹೆಸರಿಗೆ ಮಾತ್ರ ಸ್ವತಂತ್ರ್ಯವಾಗಿದ್ದವು. ಈ ಅಧ್ಯಾಯದಲ್ಲಿ ವಸಾಹತು ಆಳ್ವಿಕೆ ಪ್ರಾಂತಗಳ ದಾರುಣ ಪರಿಸ್ಥಿತಿಗಳ ಕುರಿತು, ಯೂರೋಪ್ ದೇಶಗಳ ವಸಾಹತು ಒಡೆತನವನ್ನು ವಿರೋಧಿಸಿ ಅವರು ನಡೆಸಿದ ಹೋರಾಟಗಳನ್ನು ಕುರಿತು ತಿಳಿದುಕೊಳ್ಳೋಣ. ಈ ದೇಶಗಳಲ್ಲಿ ಬಹಳಷ್ಟರಲ್ಲಿ ಅನೇಕ ಭಾಷೆ, ಅನೇಕ ಧರ್ಮಗಳಿದ್ದರೂ, ವಿವಿಧ ರೀತಿಯ ಪ್ರಜೆಗಳಿದ್ದರೂ, ಇವರೆಲ್ಲರಿಗೂ ತಾವೆಲ್ಲಾ ಒಂದೇ ರಾಷ್ಟ್ರದವರು ಎಂಬ ಭಾವನೆ ಅಷ್ಟಾಗಿ ಇರಲಿಲ್ಲ. ಈ ಪ್ರಾಂತಗಳಲ್ಲಿ ಸಂಪ್ರದಾಯ ಆಳ್ವಿಕೆದಾರರಾಗಿದ್ದ ರಾಜರು, ಚಕ್ರವರ್ತಿಗಳು ಪ್ರಜಾಪ್ರಭುತ್ವ, ಸ್ವತಂತ್ರ್ಯದಂತಹ ಭಾವನೆಗಳಿಗೆ ಅಷ್ಟಾಗಿ ಬೆಂಬಲ ನೀಡಲಿಲ್ಲ. ಹೊಸ ಹೋರಾಟಗಳು ದಾರಿ ಮಾಡಿಕೊಂಡದ್ದರಿಂದ ಯೂರೋಪಿನಾದ್ಯಂತ ಇರುವ ರಾಷ್ಟ್ರೀಯ ವಾದ, ಪ್ರಜಾಪ್ರಭುತ್ವ, ಕೊನೆಗೆ ಸಮಾಜವಾದದಂತಹ ಹೊಸ ಭಾವನೆಗಳಿಂದ ಪ್ರಜೆಗಳು ಸ್ಫೂರ್ತಿ ಪಡೆಯತೊಡಗಿದರು. ಕೆಲವು ದೇಶದಲ್ಲಿನ ಅನುಭವಗಳನ್ನು, ವಸಾಹತು ಆಳ್ವಿಕೆ ಪ್ರಾಂತಗಳು ಲಕ್ಷಾಂತರ ಪ್ರಜೆಗಳ ಜೀವನದಲ್ಲಿ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳಲು ಇವುಗಳನ್ನು ನಮ್ಮ ದೇಶದಲ್ಲಿನ ಅನುಭವಗಳೊಂದಿಗೆ ಹೋಲಿಸಿ ನೋಡೋಣ.

- ರಾಷ್ಟ್ರೀಯ ಭಾವನೆ ಎಂದರೇನು ? ಅದು ಹೇಗೆ ರೂಪುಗೊಂಡಿತು ಅರ್ಥ ಮಾಡಿಕೊಳ್ಳಲು 9ನೇ ತರಗತಿ ಪಠ್ಯಪುಸ್ತಕವನ್ನು ಮತ್ತೊಂದು ಸಾರಿ ಓದಿರಿ.
- ಆಯಾ ದೇಶಗಳ ಸಂಪ್ರದಾಯ ಆಳ್ವಿಕೆದಾರರು ಎಂತಹ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರೆ ಎಂತಹ ರಾಜ್ಯ ವ್ಯವಸ್ಥೆ ಏರ್ಪಡುತ್ತಿದ್ದವು ?
- ವಸಾಹತು ಆಳ್ವಿಕೆ ಪ್ರಾಂತಗಳಲ್ಲಿ ಯಾವ ಸಾಮಾಜಿಕ ವರ್ಗಗಳು ಸ್ವಾಂತ್ರ್ಯಕ್ಕಾಗಿ ಹೋರಾಡಿದವು ? ಸಮಾನತೆ, ಪ್ರಜಾಪ್ರಭುತ್ವ ಎನ್ನುವ ಭಾವನೆಗಳು ಅವರಿಗೆ ಏಕೆ ಮುಖ್ಯವಾದವು ?

ಚೈನಾ : ಎರಡು ವಿಭಿನ್ನ ಹಂತಗಳು (China : two different phases) :

20ನೇ ಶತಮಾನದ ಆರಂಭದಲ್ಲಿ ಮಂಚೂ ವಂಶದ ಚಕ್ರವರ್ತಿಗಳು ಚೈನಾವನ್ನು ಆಳ್ವಿಕೆ ನಡೆಸುತ್ತಿದ್ದರು. ಆದರೆ ಅವರು ಪಾಶ್ಚಿಮಾತ್ಯ ವಸಾಹತು ಆಳ್ವಿಕೆ ಶಕ್ತಿಗಳಿಂದ ಚೈನಾ ಪ್ರಯೋಜನೆಗಳನ್ನು ಕಾಪಾಡಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಈ ವಸಾಹತುಶಾಹಿ ಶಕ್ತಿಗಳು ಚೈನಾದಲ್ಲಿನ ವಿವಿಧ ಪ್ರಾಂತಗಳಲ್ಲಿ ತಮ್ಮ ಪ್ರಭಾವ ಪ್ರಾಂತಗಳನ್ನು ಏರ್ಪಡಿಸಿಕೊಂಡು ಕಡಿಮೆ ಆಮದು ತೆರಿಗೆಯನ್ನು ಸಲ್ಲಿಸುವುದು, ಚೈನಾ ಕಾಯ್ದೆಗಳು ತಮಗೆ ವರ್ತಿಸದಂತಿರುವುದು, ಸೈನಿಕ ದಳಗಳನ್ನು ಹೊಂದಿರುವಂತಹ ವಿನಾಯಿಗಳನ್ನು ಸಲ್ಲಿಸುವಂತೆ ಚೈನಾ ಚಕ್ರವರ್ತಿಗಳ ಮೇಲೆ ಒತ್ತಡವನ್ನು ತಂದರು. ಈ ಪರಿಸ್ಥಿತಿಗಳಿಂದ ಚೈನಾದಲ್ಲಿನ ಪರಿಪಾಲನಾಧಿಕಾರಿಗಳು, ಪ್ರಜೆಗಳು ಅಸಂತೃಪ್ತಿಯಿಂದ ಇದ್ದರು, ಪ್ರಜೆಗಳು ಅನೇಕ ಚಳುವಳಿಗಳನ್ನು ನಡೆಸಿದರು. ಆಡಳಿತ ಅಧಿಕಾರಿಗಳು ಅನೇಕ ಸಂಸ್ಕರಣೆಗಳಿಗೆ ಪ್ರಯತ್ನಿಸಿದರು.

ಗಣತಂತ್ರ ಏರ್ಪಾಟು (Establishing the Republic) :

ಮಂಚೂ ಸಾಮ್ರಾಜ್ಯವನ್ನು ಪರಾಭವಗೊಳಿಸಿ ಸನ್‌ಯೆಟ್-ಸೆನ್ (1866ತ1925) ತನ್ನ ನೇತೃತ್ವದಲ್ಲಿ 1911ರಲ್ಲಿ ಗಣತಂತ್ರ್ಯ ರಾಜ್ಯವನ್ನು ಏರ್ಪಡಿಸಿದನು. ಸನ್‌ಯೆಟ್ - ಸೆನ್‌ನನ್ನು ಆಧುನಿಕ ಚೈನಾ ನಿರ್ಮಾಪಕನೆಂದು ಪರಿಗಣಿಸುತ್ತಾರೆ. ಆತನು ಬಡ ಕುಟುಂಬಕ್ಕೆ ಸೇರಿದವನು. ಆತನು ವಿದ್ಯಾಭ್ಯಾಸ ಮಾಡಿದ ಮಿಷನರಿ ಪಾಠಶಾಲೆಯಲ್ಲಿ ಕ್ರೈಸ್ತ ಮತದೊಂದಿಗೆ, ಪ್ರಜಾಪ್ರಭುತ್ವ ಭಾವನೆಗಳಿಂದ ಪ್ರಭಾವಕ್ಕೊಳಗಾದನು. ಆತನು ವೈದ್ಯಶಾಸ್ತ್ರವನ್ನು ಅಭ್ಯಸಿಸದನು. ಆದರೆ ಚೈನಾ ಭವಿಷ್ಯದ ಕಡೆ ಬಹಳ ಕಳವಳ ಪಡುತ್ತಿದ್ದನು. ಚೈನಾ ಸಮಸ್ಯೆಗಳನ್ನು ಅಧ್ಯಯನ ಮಾಡಿ ಒಂದು ಕಾರ್ಯಾಚರಣೆ ಯೋಜನೆಯನ್ನು ರೂಪಿಸಿದನು. ಆತನ ಕಾರ್ಯಕ್ರಮವನ್ನು ಮೂರು ಸಿದ್ಧಾಂತಗಳು ಎನ್ನುತ್ತಾರೆ (ಸನ್, ಮಿನ್, ಚುಯಿ) ಇವು ಏನೆಂದರೆ, ರಾಷ್ಟ್ರೀಯವಾದುತ ಎಂದರೆ ವಿದೇಶಿ ಪರಿಪಾಲಕನೆಂದು ಕರೆಯಲ್ಪಡುತ್ತಿರುವ ಮಂಚೂ ವಂಶವನ್ನು, ಇತರ ವಿದೇಶಿ ಸಾಮ್ರಾಜ್ಯವಾದ ಶಕ್ತಿಗಳನ್ನು ಹೊರಹಾಕುವುದು; ಪ್ರಜಾಪ್ರಭುತ್ವತ ಎಂದರೆ ಪ್ರಜಾಪ್ರಭುತ್ವ ಸರ್ಕಾರವನ್ನು ಏರ್ಪಾಟು ಮಾಡುವುದು; ಸಮಾಜವಾದುತ ಎಂದರೆ ಕೈಗಾರಿಕೆಗಳ ಮೇಲೆ ನಿಯಂತ್ರಣ, ಭೂಮಿ ಇಲ್ಲದ ರೈತಾಂಗಕ್ಕೆ ಭೂಮಿ ಹಂಚುವುದಕ್ಕೆ ಭೂ ಸಂಸ್ಕರಣೆಗಳು. ಮಂಚೂ ವಂಶವನ್ನು ತೊಲಗಿಸಿ ಗಣತಂತ್ರವನ್ನು ಪ್ರಕಟಿಸಿದ್ದರಿಂದ, ಸನ್ ನಾಯಕತ್ವದಲ್ಲಿನ ಗಣತಂತ್ರ ಸರ್ಕಾರ ಸ್ಥಿರವಾಗಿರಲು ಸಾಧ್ಯವಾಗಲಿಲ್ಲ, ಯುದ್ಧಪ್ರಭುಗಳು ಎಂದು ಕರೆಯಲ್ಪಡುವ ಸ್ಥಳೀಯ ಸೈನಿಕ ಶಕ್ತಿಗಳ ನಿಯಂತ್ರಣದಲ್ಲಿ ದೇಶವಿದೆ.

SCERT TELANGANA

ಚೈನಾದಲ್ಲಿ :

ಚಿತ್ರ 13.1 : ಮೇ ನಾಲ್ಕರ ಹೋರಾಟದಲ್ಲಿನ ಪ್ರಜೆಗಳ ಸತ್ಯಾಗ್ರಹ

ಸಾಮಾಜಿಕ, ರಾಜಕೀಯ ಅನಿಶ್ಚಿತತೆ ಮುಂದುವರೆಯಿತು. ವರ್ಸೈಲ್ಸ್ ಶಾಂತಿ ಸಮಾವೇಶದ ನಿರ್ಣಯಗಳನ್ನು ವಿರೋಧಿಸುತ್ತಾ 1919 ಮೇ 4ರಂದು ಬೀಜಿಂಗ್‌ನಲ್ಲಿ ಒಂದು ಸತ್ಯಾಗ್ರಹವನ್ನು ಕೈಗೊಂಡರು. ಮೊದಲ ಪ್ರಪಂಚ ಯುದ್ಧದಲ್ಲಿ ಜಯಗಳಿಸಿದ ಬ್ರಿಟನ್ ಪರವಾಗಿ ಇದ್ದರಿಂದ ಜಪಾನು ಆಕ್ರಮಿಸಿದ ಪ್ರಾಂತಗಳು ಚೈನಾಕ್ಕೆ ಪುನಃ ದೊರೆಯಲಿಲ್ಲ. ಈ ಪ್ರತಿಭಟನೆ ಒಂದು ಚಳುವಳಿಯಾಗಿ ರೂಪುಗೊಂಡು 'ಮೇ 4ರ ಚಳುವಳಿ'ಯೆಂದು ಕರೆಯಲ್ಪಟ್ಟಿತು. ಹಳೆಯ ಸಾಂಪ್ರದಾಯಗಳನ್ನು ತಿರಸ್ಕರಿಸಿ ಆಧುನಿಕ ವಿಜ್ಞಾನಶಾಸ್ತ್ರ, ಪ್ರಜಾಪ್ರಭುತ್ವ, ರಾಷ್ಟ್ರೀಯವಾದದ ಮೂಲಕ ಚೈನಾ ಮುನ್ನಡೆ ಯಬೇಕೆಂದು ತಲೆಮಾರು (ಪೀಳಿಗೆ) ಹೋರಾಡಿತು. ದೇಶದ ಸಂಪನ್ಮೂಲಗಳನ್ನು ನಿಯಂತ್ರಿಸುತ್ತಿದ್ದ ವಿದೇಶಿಯರನ್ನು ತೊಲಗಿಸಬೇಕೆಂದು, ಬಡತನವನ್ನು ಕಡಿಮೆಮಾಡಬೇಕೆಂದು, ಅಸಮಾನತೆಯನ್ನು ಕಡಿಮೆಮಾಡಬೇಕೆಂದು ಕ್ರಾಂತಿಕಾರರು ಬಯಸಿದರು. ಸಾಧಾರಣವ ಭಾಷೆ, ಲಿಪಿಗಳನ್ನು ಅನುಸರಿಸುವುದು, ಮಹಿಳೆಯರ-ಪರಾಧೀನತೆ, ಹುಡಿಗಿಯರ ಕಾಲುಗಳನ್ನು ಕಟ್ಟಿಹಾಕುವುದು (ಹೆಣ್ಣು ಹುಡಿಗಿಯರ ಪಾದಗಳನ್ನು ಪೂರ್ತಿ ಬೆಳೆಯದಂತೆ ನಿಯಂತ್ರಿಸುವ ಕ್ರೂರವಾದ ಸಾಂಪ್ರದಾಯ)ದಹಂತಹವುಗಳನ್ನು ವಿರೋಧಿಸುವುದು, ವಿವಾಹದಲ್ಲಿ ಸಮಾನತೆ, ಬಡತನವನ್ನು ಕೊನೆಗೊಳಿಸಲು ಆರ್ಥಿಕಾಭಿವೃದ್ಧಿಯಂತಹ ಸಂಸ್ಕರಣೆಗಳನ್ನು ಅವರು ಪ್ರತಿಪಾದಿಸಿದರು.

- ಚೈನಾ ಯುವಕರು ಹಳೆ ಸಂಪ್ರದಾಯಗಳನ್ನು, ವಿದೇಶಿ ಶಕ್ತಿಗಳನ್ನು ಏಕೆ ವಿರೋಧಿಸತೊಡಗಿದರು ?
- ಇಂತಹ ಘಟನೆ ಏನಾದರೂ ಭಾರತದೇಶದಲ್ಲಿ ನಡೆದಿದೆಯಾ?

ಗಣತಂತ್ರ ಕ್ರಾಂತಿಯ ನಂತರ ದೇಶ ಒಂದು ವಿಷಮಸ್ಥಿತಿಗೆ ತಲುಪಿತು. ದೇಶವನ್ನು ಐಕ್ಯಗೊಳಿಸಲು, ಸುಸ್ಥಿರತೆ ಸಾಧಿಸಲು ಕೃಷಿ ಮಾಡುವ ಪ್ರಧಾನ ಶಕ್ತಿಯಾಗಿ ಕೌಮಿಂಗ್‌ಟಾಂಗ್ (ರಾಷ್ಟ್ರೀಯ ಪ್ರಜಾಪಕ್ಷ, ಇದನ್ನೇ ಕೆಎಂಟಿ ಎನ್ನುತ್ತಿದ್ದರು), ಚೈನಾ ಕಮ್ಯುನಿಸ್ಟ್ ಪಕ್ಷ (ಸಿಸಿಪಿ) ಉದಯಿಸಿದವು. ಕೌಮಿಂಗ್‌ಟಾಂಗ್ ರಾಜಕೀಯ ಸಿದ್ಧಾಂತಕ್ಕೆ ಸನ್‌ಯೆಟ್-ಸೇನ್ ಭಾವನೆಗಳು ಆಧಾರವಾಗಿವೆ. ಬಟ್ಟೆ, ಆಹಾರ, ವಸತಿ, ಸಾರಿಗೆ ಎನ್ನುವ್ವ ನಾಲ್ಕು ಪ್ರಧಾನ ಅವಶ್ಯಕತೆಗಳನ್ನು ಅವರು ಗುರ್ತಿಸಿದರು. ಸನ್‌ಯೆಟ್-ಸೇನ್ ಮರಣದ ನಂತರ ತೌಮಿಂಗ್‌ಟಾಂಗ್ ನಾಯಕವಾಗಿ ಚಿಯಾಂಗ್‌ಕೈಷೇಕ್(1887–1975) ಆಯ್ಕೆಯಾದನು, ಅಧಿಕಾರವನ್ನು ಕೈಹಿಡಿದನು, ಯುದ್ಧ ಪ್ರಭುಗಳಿಗೆ, ಸ್ಥಳೀಯ ನಾಯಕರಿಗೆ ವಿರುದ್ಧವಾಗಿಯೂ, ಕಮ್ಯುನಿಷ್ಟರನ್ನು ನಿರ್ಮೂಲನೆ ಮಾಡಲು ಆತನು ಸೈನಿಕ ಕ್ರಮಗಳನ್ನು ಕೈಗೊಂಡನು. ದೇಶವನ್ನು ಸೈನಿಕ ದೇಶವಾಗಿ ಬದಲಾಯಿಸಲು ಆತನು ಪ್ರಯತ್ನಿಸಿದನು. ಪ್ರಜೆಗಳು ಕೂಡಿ ಕೆಲಸ ಮಾಡುವ ಸಹಕಾರ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಆತನು ಬಯಸಿದನು.



ಚಿತ್ರ 13.2 : ಆ ನಂತರ ಕಾಲದಲ್ಲಿನ ಗೋಡೆ ಪ್ರತಿ : ಹಳೆ ಪ್ರಪಂಚವನ್ನು ಉರುಳಿಸಿ, ಹೊಸ ಪ್ರಪಂಚವನ್ನು ನಿರ್ಮಿಸಿ ಎಂದು

ಕೌಮಿಂಗ್‌ಟಾಂಗ್ ಸಾಮಾಜಿಕ ಮೂಲಗಳು ಪಟ್ಟಣ ಪ್ರಾಂತಗಳಲ್ಲಿವೆ. ಕೈಗಾರಿಕಾ ಅಭಿವೃದ್ಧಿ ಪರಿಮಿತವಾಗಿಯೂ ನಿಧಾನವಾಗಿಯೂ ಇದೆ. ಆಧುನಿಕ ಪ್ರಗತಿಗೆ ಕೇಂದ್ರಗಳಾದ ಷಾಂಘೈನಂತಹ ನಗರಗಳಲ್ಲಿ 1919 ರಲ್ಲಿಗೆ 5 ಲಕ್ಷಗಳ

SCERT TELANGANA

ಕೈಗಾರಿಕಾ ಕಾರ್ಮಿಕ ವರ್ಗ ಏರ್ಪಟ್ಟಿತು. ಆದರೆ ಇವರಲ್ಲಿ ಬಹಳ ಕಡಿಮೆ ಶೇಕಡ ಹಡುಗು ನಿರ್ಮಾಣದಂತಹ ಆಧುನಿಕ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಪಡೆದರು. ಇವರಲ್ಲಿ ಅಧಿಕ ಶೇಕಡ್ಕ ಮಧ್ಯತರಗತಿ ನಗರ ವಾಸಿಗಳು (ಸಿಯಾವೊಷಿಮಿನ್) ಎಂದು ಕರೆಯಲ್ಪಡುವ ವ್ಯಾಪಾರಸ್ಥರು, ಅಂಗಡಿಗಳವರು ಇರುವರು. ನಗರ ಕಾರ್ಮಿಕರಿಗೆ, ಪ್ರತ್ಯೇಕವಾಗಿ ಮಹಿಳೆಯರಿಗೆ ಬಹಳ ಕಡಿಮೆ ವೇತನ ದೊರೆಯುತಿತ್ತು. ಅವರು ಕಾರ್ಮಿಕ ಸಂಘಗಳಲ್ಲಿ ಸಂಘಟನೆ ಮುಂದುವರೆಸಿದರು. ಕೆಲಸದ ದಿನಗಳು ದೀರ್ಘಾವಧಿ ಮಾತ್ರವಲ್ಲದೇ ಕೆಲಸದ ಪರಿಸ್ಥಿತಿಗಳು ಬಹಳ ಕಷ್ಟಕರವಾಗಿದ್ದವು. ಸ್ವತಂತ್ರ ಭಾವನೆಗಳು ಮನ್ನಣೆ ಹೊಂದುವುದರಿಂದ ಮಹಿಳೆಯರ ಹಕ್ಕುಗಳ ಕುರಿತು, ಸಮಾನತೆಯ ಬುನಾದಿ ಮೇಲೆ ಕುಟುಂಬಗಳನ್ನು ನಿರ್ಮಿಸುವುದು, ಪ್ರೇಮದಂತಹವುಗಳನ್ನು ಕುರಿತು ಆಲೋಚಿಸುವುದು, ಚರ್ಚಿಸಲು ಪ್ರಾರಂಭಗೊಂಡವು, ಪಾಠಶಾಲೆಗಳು, ವಿಶ್ವವಿದ್ಯಾಲಯಗಳು ಅಭಿವೃದ್ಧಿಗೊಂಡರಿಂದ (ಪೆಂಕಿಂಗ್ ವಿಶ್ವವಿದ್ಯಾಲಯ 1902ರಲ್ಲಿ ಏರ್ಪಟ್ಟಿತು) ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗೆ ಮನ್ನಣೆ ದೊರೆಯಿತು. ಈ ಹೊಸ ಆಲೋಚನೆಗಳ ಕಡೆ ಆಕರ್ಷಿಸುತ್ತಾ, ಜರ್ನಲಿಜಂ ಬೆಳೆಯಿತು.

- ಈ ಕಾಲದಲ್ಲಿ ಹೊರ ಬಂದ ಮುಖ್ಯವಾದ ರಾಜಕೀಯ ಪಾರ್ಟಿಗಳಾವುವು ?
- ಇಂತಹ ಸಮೀಕರಣದಲ್ಲಿ ಸದಸ್ಯರು ಯಾರು ?
- ಅವರು ಬಯಸಿದ ಸಾಮಾಜಿಕ, ಆರ್ಥಿಕ ಬದಲಾವಣೆಗಳ ಸ್ವರೂಪವೇನು ?

ಚಿಯಾಂಗ್ ಸಾಂಪ್ರದಾಯವಾದಿ, ಮಹಿಳೆಯರ ಪಾತ್ರ ಮನೆಗೆ ಸೀಮಿತವಾಗಿದೆಂದ್ಕು, ಪವಿತ್ರತೆ, ರೂಪ, ಮಾತು, ಕೆಲಸು ಎನ್ನುವ ನಾಲ್ಕು ಸುಗುಣಗಳ ಮೇಲೆ ಅವರು ಶ್ರದ್ಧೆವಹಿಸಬೇಕೆಂದು ಆತನು ಭಾವಿಸುತ್ತಿದ್ದನು. ಸ್ತ್ರೀಯರು ಧರಿಸುವ ಬಟ್ಟೆ ಎಷ್ಟು ಉದ್ದ ಇರಬೇಕೆಂಬುದನ್ನು ಕೂಡ ಸಿಫಾರಸ್ಸು ಮಾಡತೊಡಗಿದರು. ಕಾರ್ಖಾನೆಯ ಯಜಮಾನರಿಗೆ ಪ್ರೋತ್ಸಾಹಿಕವಾಗಿ ಕಾರ್ಮಿಕ ಸಂಘಗಳನ್ನು ಅಡಗಿಸಲು ಕೂಡ ಆತನು ಸಿದ್ಧನಾದನು. ಕೌಮಿಂಗ್‌ಟಾಂಗ್ ಪಕ್ಷ ತನ್ನ ಸಂಕುಚಿತ ಸಾಮಾಜಿಕ ತತ್ವದಿಂದ, ರಾಜಕೀಯ ದೂರದೃಷ್ಟಿ ಕಡಿಮೆಯಾದ್ದರಿಂದ ವಸಾಹತು ದೇಶದಲ್ಲಿ ಏಕತ್ವ ಸಾಧಿಸುವಲ್ಲಿ ವಿಫಲವಾಯಿತು. ಸನ್‌ಯಟ್-ಸೇನ್ ಕಾರ್ಯಕ್ರಮದಲ್ಲಿನ ಪ್ರಧಾನ ಅಂಶವಾದ ಬಂಡವಾಳ ನಿಯಂತ್ರಣೆ, ಭೂಮಿ ಸಮಾನ ಹಂಚಿಕೆ ಎನ್ನುವ ಅಂಶಗಳನ್ನು ಜಾರಿಗೊಳಿಸಲೇ ಇಲ್ಲ. ಹೆಚ್ಚಾಗುತ್ತಿರುವ ಅಸಮಾನತೆಗಳಿಗೆ, ರೈತಾಂಗಕ್ಕೆ ಈ ಪಕ್ಷ ಕಿವಿಗೊಡಲಿಲ್ಲ. ಪ್ರಜೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಷ್ಕರಿಸುವ ಬದಲು ಸೈನ್ಯದಿಂದ ಶಾಂತಿ ಭದ್ರತೆಗಳನ್ನು ಕಲ್ಪಿಸಲು ಪ್ರಯತ್ನಿಸಿದರು.

ಚೈನಾ ಕಮ್ಯುನಿಸ್ಟ್ ಪಕ್ಷದ ಉದಯ (The Rise of the Communist Party of China) :

1937ರಲ್ಲಿ ಚೈನಾದ ಮೇಲೆ ಜಪಾನು ದಂಡೆತ್ತಿ ಬಂದಾಗ ಗುಯೊಮಿಂಡಾಂಗ್ ಹಿಂದೆಜ್ಜೆ ಹಿಟ್ಟಿತು. ಸುದೀರ್ಘ ಯುದ್ಧದಿಂದ ಚೈನ ಬಲಹೀನವಾಯಿತು. 1945ತ1949 ಮಧ್ಯಕಾಲದಲ್ಲಿ ಬೆಲೆಗಳು ತಿಂಗಳಿಗೆ ಶೇಕಡ 30ದಂತೆ ಹೆಚ್ಚಾದವು. ಇದರಿಂದ ಸಾಧಾರಣ ಪ್ರಜೆಗಳ ಜೀವನ ದುರ್ಬಲಕ್ಕೊಳಗಾಯಿತು. ಗ್ರಾಮೀಣ ಚೈನಾ ಎರಡು ವಿಷಮ ಸ್ಥಿತಿಯನ್ನು ಎದುರಿಸಿತು. ಮೊದಲನೆಯದು ಭೂಮಿಗಳು ನಿಸ್ಸಾರವಾದದ್ದು, ಅರಣ್ಯಗಳನ್ನು ಕಡಿದು ನಾಶಗೊಳಿಸಿದ್ದು, ಪ್ರವಾಹಗಳಂತಹ ಜೀವಾವರಣ ಪರವಾದದ್ದು. ಎರಡನೇಯದು ದೋಷಪೂರಿತ ಭೂಮಿಯ ಗೇಣಿ ವಿಧಾನಗಳು, ಸಾಲದ ಬಾರ, ಪುರಾತನ ತಾಂತ್ರಿಕ ವಿಜ್ಞಾನ, ಅಭಿವೃದ್ಧಿಗೊಳ್ಳದ ಸಂಪರ್ಕ ಮಾಧ್ಯಮಗಳಿಂದ ಕೂಡಿದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು.

ರಷ್ಯಾ ಕ್ರಾಂತಿಯ ನಂತರ ಸ್ವಲ್ಪ ದಿನಗಳಲ್ಲೇ 1921ರಲ್ಲಿ ಚೈನಾ ಕಮ್ಯುನಿಸ್ಟ್ ಪಕ್ಷ ಏರ್ಪಟ್ಟಿತು. ರಷ್ಯಾ ಸಾಧಿಸಿದ ವಿಜಯ ಪ್ರಪಂಚದ ಮೇಲೆ ಬಲವಾದ ಪ್ರಭಾವವನ್ನು ಬೀರಿತು. ದೋಚುವಿಕೆಯನ್ನು ಕೊನೆಗೊಳಿಸಿ ಪ್ರಪಂಚ ಸರ್ಕಾರವನ್ನು ಏರ್ಪಡಿಸಲು ಸಹಕಾರಿಯಾಗುವ ಕೊಮಿನ್‌ಟರ್ನ್‌ನನ್ನು ಲೆನಿನ್‌ನಂತಹ ನಾಯಕರು 1918 ಮಾರ್ಚ್‌ನಲ್ಲಿ ಸ್ಥಾಪಿಸಿದರು. ವಿವಿಧ ದೇಶದಲ್ಲಿನ ಕಮ್ಯುನಿಸ್ಟು ಪಕ್ಷಗಳಿಗೆ ಸೊವಿಯಟ್ ಯೂನಿಯನ್, ಕಾಮಿನೆಟರ್ನ್ ಬೆಂಬಲ ನೀಡಿದರು. ಆದರೆ ನಗರದಲ್ಲಿನ ಕಾರ್ಮಿಕ ವರ್ಗದ ಮೂಲಕವೇ ಕ್ರಾಂತಿ ನಡೆಯುತ್ತದೆ ಎಂಬ ಸಾಂಪ್ರದಾಯ ಮಾರ್ಕಿಸ್ಟ್ ಅವಗಾಹನೆಯೊಂದಿಗೆ ಅವು ಕೆಲಸ ಮಾಡ ತೊಡಗಿದವು. ಸಿಸಿಪಿ ನಾಯಕನಾಗಿ ಬೆಳೆದ ಮಾವೊ ಜೆಡಾಂಗ್ (1893ತ1976) ತನ್ನ ಕ್ರಾಂತಿ ಕಾರ್ಯಕ್ರಮಕ್ಕೆ ರೈತಾಂಗವನ್ನು ಆಧಾರವಾಗಿಟ್ಟುಕೊಂಡು ಭಿನ್ನವಾದ ಮಾರ್ಗವನ್ನು ಅವಲಂಬಿಸತೊಡಗಿದನು. ಜಮೀನುದಾರರನ್ನು ಕೊನೆಗೊಳಿಸಲು ಹೋರಾಡುವಂತೆ ಆತನು

SCERT TELANGANA

ಚೈನಾ ರೈತಾಂಗವನ್ನು ಸಂಘಟಿತಗೊಳಿಸುತ್ತಾ ರೈತಾಂಗ ಸೈನ್ಯವನ್ನು ನಿರ್ಮಿಸತೊಡಗಿದನು. ಸಿಸಿಪಿ ನಾಯಕತ್ವದಲ್ಲಿನ ಹೋರಾಟದಲ್ಲಿ ಭೂಮಿ ಇಲ್ಲದ ರೈತರು ಲಕ್ಷಾಂತರ ಜನರು ಭಾಗವಹಿಸ ತೊಡಗಿದರು. ಆತನ ವಿಜಯಗಳು ಸಿಸಿಪಿಯನ್ನು ಪ್ರಬಲವಾದ ರಾಜಕೀಯ ಶಕ್ತಿಯಾಗಿ ಬೆಳೆಸಿ, ಕೊನೆಗೆ ಕೌಮಿಂಗ್‌ಟಾಂಗ್ ಮೇಲೆ ವಿಜಯ ಸಾಧಿಸುವಂತೆ ಮಾಡಿದವು. ದಾಳಿಗಳಿಂದ ರಕ್ಷಣೆ ನೀಡುವ ಜಿಯಾಂಗ್‌ಕ್ಸಿ ಪರ್ವತಗಳಲ್ಲಿ 1928 ರಿಂದ 1934 ರವರಗೆ ನೆಲೆ ನಿಲ್ಲುವುವಂತೆ ಮಾಡುವುದು ಮಾವೊಜೆಂಡಾಂಗನ ವಿಭಿನ್ನವಾದ ಪಂಥವನ್ನು ಸೂಚಿಸುತ್ತದೆ. ಜಮೀನುದಾರರ ಭೂಮಿಯನ್ನು ಸ್ವಾಧೀನ ಪಡೆಸಿಕೊಂಡು ಪುನಃ ಹಂಚುವುದರ ಮೂಲಕ ಬಲವಾದ ರೈತರ ಸಂಘಗಳನ್ನು (ಸೋವಿಯಟ್) ನಿರ್ಮಿಸಿದನು. ಇತರ ನಾಯಕರಂತೆ ಅಲ್ಲದೇ ಸ್ವತಂತ್ರ್ಯವಾಗಿರುವ ಸರ್ಕಾರ, ಸೈನ್ಯಗಳನ್ನು ಮಾವೊ ನಿರ್ಮಿಸಿದನು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಪರಿಷ್ಕರಕ್ಕೆ ಗ್ರಾಮೀಣ ಮಹಿಳಾ ಸಂಘಗಳನ್ನು ಏರ್ಪಡಿಸಲು ಪ್ರೋತ್ಸಾಹಿಸಿದನು. ಹಿರಿಯರು ನಿರ್ಧರಿಸಿದ ವಿವಾಹಗಳನ್ನು ನಿಷೇಧಿಸುತ್ತಾ, ವಿವಾಹ ಒಪ್ಪಂದ ಪತ್ರಗಳ ಕೊಳ್ಳುವ, ಮಾರುವ ಪದ್ಧತಿಯನ್ನು ನಿಲ್ಲಿಸಿದನು. ವಿವಾಹ ವಿಚ್ಛೇದನ ವಿಧಾನವನ್ನು ಸರಳಗೊಳಿಸಿ ಹೊಸ ವಿವಾಹ ಕಾಯ್ದೆಯನ್ನು ತಂದನು.

ಚಿತ್ರ 13.3 : 1944ರಲ್ಲಿ ಯಾನಾನ್‌ನಲ್ಲಿ ಪ್ರಜೆಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ಮಾವೊ

ಕಮ್ಯುನಿಸ್ಟರ ಸೋವಿಯಟ್‌ನ್ನು ಕೌಮಿಂಗ್‌ಟಾಂಗ್ ಚಕ್ರಬದ್ಧಗೊಳಿಸಿದ್ದರಿಂದ ತಮ್ಮ ಸ್ಥಾನವನ್ನು ಬದಾಲಯಿಸಿಕೊಳ್ಳಬೇಕಾಯಿತು. ಇದರಿಂದ್ದ ಲಾಂಗ್ ಮಾರ್ಚ್ ಎಂದು ಪ್ರಖ್ಯಾತಿ ಪಡೆದ ಷಾಂಕ್ಸಿ 6000 ಮೈಲು ಕಷ್ಟಕರವಾದ ಪ್ರಯಾಣ(1934ತ35) ಆರಂಭಗೊಂಡಿತು. ಇಲ್ಲಿ ಯಾನಾನ್‌ನಲ್ಲಿನ ತಮ್ಮ ಹೊಸ ಸ್ಥಾವರದಲ್ಲಿ ಯುದ್ಧ ಪ್ರಭುಗಳನ್ನು ಅಂತ್ಯಗೊಳಿಸಿ, ವಿದೇಶಿ ಸಾಮ್ರಾಜ್ಯವಾದದ ಮೇಲೆ ಹೋರಾಡಲು, ಭೂ ಸಂಸ್ಕರಣೆಗಳು ಕೈಗೊಳ್ಳಲು ತಮ್ಮ ಕಾರ್ಯಕ್ರಮವನ್ನು ಮತ್ತಷ್ಟು ತೀವ್ರಗೊಳಿಸಿದರು. ಭೂ ಸಂಸ್ಕರಣೆಗಳು, ರಾಷ್ಟ್ರೀಕರಣ ಎನ್ನುವ ಈ ಎರಡು ಅಂಶಗಳ ಕಾರಣವಾಗಿ ಪಕ್ಷಕ್ಕೆ ಬಲವಾದ ಸಾಮಾಜಿಕ ಬುನಾದಿ ಏರ್ಪಟ್ಟಿತು.

1937ತ1945 ರ ಮಧ್ಯಕಾಲದಲ್ಲಿ ಚೈನಾದ ಮೇಲೆ ಜಪಾನು ದಾಳಿ ನಡೆಸಿ ಬಹಳ ಭೂಭಾಗವನ್ನು ಆಕ್ರಮಿಸಿತು. ಕ್ರೂರ, ವಸಾಹತು, ಸೈನಿಕ ಆಳ್ವಿಕೆಯನ್ನು ಜಪಾನು ಜಾರಿಗೆ ತಂದಿದ್ದರಿಂದ ಚೈನಾದ ಸಮಾಜ, ಆರ್ಥಿಕ ಪರಿಸ್ಥಿತಿ ಘೋರ ಪ್ರಭಾವಕ್ಕೊಳಗಾದವು. ಜಪಾನು ಆಕ್ರಮಣವನ್ನು ತಡೆಯಲು ಕೌಮಿಂಗ್‌ಟಾಂಗ್, ಸಿಸಿಪಿ ಕೈ ಜೋಡಿಸಿದವು. 1945 ಆಗಸ್ಟ್‌ನಲ್ಲಿ ಅಮೇರಿಕಾಗೆ ಜಪಾನ್ ಶರಣಾದ ನಂತರ ಚೈನಾದ ಮೇಲೆ ಒಡೆತನಕ್ಕಾಗಿ ಕೌಮಿಂಗ್‌ಟಾಂಗ್, ಸಿಸಿಪಿಗಳ ಮಧ್ಯ ಪೂರ್ಣಮಟ್ಟದ ಯುದ್ಧ ನಡೆಯಿತು. ಕೊನೆಗೆ ಚೈನಾ ಪ್ರಧಾನ ಭೂಭಾಗದ ಮೇಲೆ ಹಿಡಿತ ಸಾಧಿಸುವಲ್ಲಿ ಸಿಸಿಪಿ ವಿಜಯವಂತವಾಯಿತು. ಕೌಮಿಂಗ್‌ಟಾಂಗ್‌ಗೆ ತೈವಾನ್ ದ್ವೀಪದಲ್ಲಿ ಸರ್ಕಾರವನ್ನು ಏರ್ಪಡಿಸುವ ಪರಿಸ್ಥಿತಿ ಉಂಟಾಯಿತು.

ನೂತನ ಪ್ರಜಾಪ್ರಭುತ್ವದ ಸ್ಥಾಪನೆ 1949-1954 (Establishing the New Democracy 1949-1954) :

1949ರಲ್ಲಿ ಚೈನಾ ಪ್ರಜೆಗಳ ಗಣತಂತ್ರ ಏರ್ಪಟ್ಟಿತು. ಇದ್ದು ನೂತನ ಪ್ರಜಾಪ್ರಭುತ್ವ ಎನ್ನುವ ಸಿದ್ಧಾಂತದ ಮೇಲೆ ಏರ್ಪಟ್ಟಿತು. ಜಮೀನುದಾರಿ ವಿಧಾನವನ್ನು, ಸಾಮ್ರಾಜ್ಯವಾದವನ್ನು ವಿರೋಧಿಸುವ ಸಾಮಾಜಿಕ ವರ್ಗಗಳೆಲ್ಲಾ ಈ ಸಿದ್ಧಾಂತದ ಪ್ರಕಾರ ಹೊಂದಾದವು. ಆರ್ಥಿಕ ವಿಧಾನದಲ್ಲಿನ ಮುಖ್ಯ ಅಂಶಗಳನ್ನು ಸರ್ಕಾರದ ಹಿಡಿತಕ್ಕೆ ಒಳಪಡಿಸಿದರು. ಅಧಿಕಾರಕ್ಕೆ ಬಂದ ನಂತರ ಸಿಸಿಪಿ ದೊಡ್ಡ ಪ್ರಮಾಣದಲ್ಲಿ ಭೂ ಸಂಸ್ಕರಣೆಗಳು ಜಾರಿಗೆ ಬಂದವು – ಎಂದರೆ ಭೂಮಾಲೀಕರ ಭೂಮಿಯನ್ನು ಜಪ್ತುಗೊಳಿಸಿ ಬಡ ರೈತರಿಗೆ ಹಂಚಿದರು. ಮಹಿಳೆಯರ ರಕ್ಷಣೆಗೆ, ಅವರ ಹಕ್ಕುಗಳಿಗೆ, ಬಹುಪತ್ನಿತ್ವ ನಿಷೇಧಕ್ಕೆ ಕೂಡ ಹೊಸ ಸರ್ಕಾರ ಕಾನೂನುಗಳನ್ನು ಮಾಡಿತು. ಇದರಿಂದ ಮಹಿಳೆಯರು

SCERT TELANGANA

ವಿವಿಧ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನ ಸ್ಥಾನಮಾನವನ್ನು ಪಡೆಯತೊಡಗಿದರು.

ಭೂಸುಧಾರಣೆಗಳು (Land Reforms) :

ಚಿತ್ರ 13.4 : ಭೂಮಿ ರಿಕಾರ್ಡ್‌ಗಳನ್ನು ಸುಟ್ಟು ಹಾಕುತ್ತಿರುವ ಪ್ರಜೆಗಳು

ಗ್ರಾಮೀಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು, ರೈತ ಸಂಘಗಳ ನಿರ್ಮಾಣದಂತವುಗಳಲ್ಲಿ ಎರಡು ವರ್ಷಗಳು ಶಾಂತಿಯುತವಾಗಿ ಕಳೆದ ನಂತರ 1950ತ51ರಲ್ಲಿ ಭೂಸುಧಾರಣೆಗಳ ಜಾರಿ ಪ್ರಾರಂಭಿಸಿದರು. ಗ್ರಾಮಗಳಲ್ಲಿರುವ ಎಲ್ಲಾ ವರ್ಗಗಳನ್ನು ಗುರ್ತಿಸುವುದು, ನಂತರ ಜಮೀನುದಾರರ ಭೂಮಿ, ಇತರ ಉತ್ಪಾದಕ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡು ಪುನಃ ಹಂಚುವಂತಹವು ಇದರಲ್ಲಿನ ಮುಖ್ಯವಾದ ಹಂತಗಳು. ಈ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರವನ್ನು ಪ್ರಾಂತಮಟ್ಟದ ಭೂಸುಧಾರಣ ಸಂಘು ಕಳುಹಿಸಿದ ಕೆಲಸದ ಬೃಂದಗಳುಪೋಷಿಸಿದವು. ರೈತ ಸಂಘಗಳನ್ನು ಏರ್ಪಡಿಸುವುದು, ಸ್ಥಳೀಯ ನಾಯಕತ್ವ ಸ್ಥಾನಗಳಿಗೆ ಅವುಗಳಿಂದ ಕ್ರಿಯಾಶೀಲ ಸದಸ್ಯರನ್ನು ಆಯ್ಕೆ ಮಾಡುವುದು ಇವುಗಳ ಮುಖ್ಯ ವಿಧಿಗಳಲ್ಲಿನ ಭಾಗಗಳಾಗಿದ್ದವು. ಈ ಹೊಸ ನಾಯಕತ್ವ ಪ್ರಧಾನವಾಗಿ ಬಡ, ಮಧ್ಯತರಗತಿ ರೈತಾಂಗದಿಂದ ಏರ್ಪಟ್ಟವು. ಹಲವು ಪ್ರಾಂತಗಳಲ್ಲಿ ತಮ್ಮ ನೈಪುಣ್ಯತೆಯ ಕಾರಣವಾಗಿ ಮಧ್ಯ ತರಗತಿ ರೈತಾಂಗ ಒಡೆತನಕ್ಕೆ ಬಂದಿತು. ಅಷ್ಟೇ ಮಾತ್ರವಲ್ಲದೆ ಸಾರ್ವಜನಿಕ ಸಮಾವೇಶಗಳು, ಬಹಿರಂಗ ವಿಚಾರಣೆಗಳ ಮೂಲಕ ಜಮೀನುದಾರರಿಗೆ ವಿರೋಧವಾಗಿ ಗ್ರಾಮವೆಲ್ಲಾ ಸಮೀಕರಿಸಲು ಈ ಕೆಲಸದ ಬೃಂದಗಳು ಪ್ರಯತ್ನಿಸಿದವು.

ಈ ಪದ್ಧತಿಯಿಂದ ಜಮೀನುದಾರರು ಪ್ರಜೆಗಳ ಅವಮಾನಕ್ಕೆ ಗುರಿಯಾದರು. ಈ ವಿಧವಾಗಿ ಈ ವರ್ಗಕ್ಕೆ ಸೇರಿದ 10ತ20 ಲಕ್ಷ ಜನರನ್ನು ಕೊಲೆ ಮಾಡಿಸಿರುತ್ತಾರೆ.

ಆರ್ಥಿಕ ಸುಧಾರಣೆಗಳ ಕಾರ್ಯಕ್ರಮಗಳ ಭಾಗವಾಗಿ ಚೈನಾ ಸಾಗುವಳಿಯಲ್ಲಿ ಶೇಕಡ 43 ರಷ್ಟು ಗ್ರಾಮೀಣ ಪ್ರಜೆಗಳಲ್ಲಿ ಶೇಕಡ 60ಕ್ಕೆ ಹಂಚಿಕೊಟ್ಟಿದ್ದರಿಂದ ಭೂ ಸುಧಾರಣೆಗಳು ವಿಜಯವನ್ನು ಸಾಧಿಸಿದವು. ಬಡರೈತರ ಕೆಳಗೆ ಭೂಮಿ ಗಣನೀಯವಾಗಿ ಹೆಚ್ಚಾಯಿತು. ಆದರೆ ಹಿಂದಿನಿಂದಲೂ ಮಧ್ಯ ತರಗತಿ ರೈತಾಂಗ ಪ್ರಬಲವಾಗಿದ್ದರಿಂದ ಅದು ಹೆಚ್ಚು ಪ್ರಯೋಜನವನ್ನು ಪಡೆಯಿತು.

- ಯುದ್ಧದಲ್ಲಿ ಜಯಗಳಿಸಲು ಸಿಸಿಪಿನಲ್ಲಿ ಭೂ ಸುಧಾರಣೆಗಳು ಹೇಗೆ ಸಹಕಾರಿಯಾಗಿವೆ ?
- ಭಾರತದೇಶದಲ್ಲಿ ಜಾರಿಗೆ ಬಂದ ಭೂ ಸುಧಾರಣೆಗಳನ್ನು ಚೈನಾದಲ್ಲಿ ನಡೆದವುಗಳೊಂದಿಗೆ ಹೋಲಿಸಿರಿ. ಅವುಗಳ ಮಧ್ಯ ಹೋಲಿಕೆ, ವ್ಯತ್ಯಾಸಗಳನ್ನು ಹೆಸರಿಸಿರಿ.
- ದೇಶ ಅಭಿವೃದ್ಧಿಗೆ, ಸ್ವಾತಂತ್ರ್ಯಕ್ಕೆ ಸ್ತ್ರೀ, ಪುರುಷರಿಗೆ ಸಮಾನಾವಕಾಶಗಳು, ಅವರು ಸಮಾನವಾಗಿ ಭಾಗವಹಿಸುವಿಕೆ ಅವಶ್ಯಕ ಎಂಬ ಅವಲೋಕನದೊಂದಿಗೆ ನೀವು ಏಕೀಭವಿಸುತ್ತೀರಾ ?

ಹಳೆ ಶ್ರೀಮಂತವರ್ಗಕ್ಕೆ ಸೇರಿದ ಅಧಿಕಾರ, ಆರ್ಥಿಕ ಸಂಪನ್ಮೂಲಗಳನ್ನು ತೆಗೆದುಕೊಂಡದ್ದು ಇನ್ನೊಂದು ಕಡೆ ಸಿಸಿಪಿ ಮೂಲಕ ರಾಜಕೀಯ ರಂಗಕ್ಕಿಳಿದ ಬಡ, ಮಧ್ಯ ತರಗತಿಗೆ ಸೇರಿದ ಗ್ರಾಮ, ಕಾರ್ಯಕರ್ತರಿಂದ ಹೊಸ ಹಿಂದುಳಿದ ವರ್ಗ ಏರ್ಪಡತೊಡಗಿತು. ಭೂಸುಧಾರಣೆ ಗಳೊಂದಿಗೆ ರಾಜಕೀಯ ವಿದ್ಯೆ, ಅಕ್ಷರಾಸ್ಯತೆಗಳನ್ನು ವಿಸ್ತರಿಸಲು ದೊಡ್ಡ ಪ್ರಮಾಣದಲ್ಲಿ ರೈತರ ಪಾಠಶಾಲೆಗಳನ್ನು ಪ್ರಾರಂಭಿಸಿದರು. ಇದರ ಜೊತೆಗೆ ಗ್ರಾಮದಲ್ಲಿನ ಚಿಕ್ಕ ಮಕ್ಕಳಿಗೆ, ದೊಡ್ಡವರಿಗೆ ಪ್ರಾಥಮಿಕ ಪಾಠಶಾಲೆಗಳನ್ನು ಪ್ರಾರಂಭಿಸಿದರು.

ಕ್ರಾಂತಿಯ ಆರಂಭದ ವರ್ಷದಲ್ಲಿ ಭೂ ಸುಧಾರಣೆಗಳು ಜಾರಿಗೊಳಿಸುವಲ್ಲಿ, ಎಲ್ಲರಿಗೂ ಪ್ರಾಥಮಿಕ ವಿದ್ಯೆಯನ್ನು ಒದಗಿಸುವಲ್ಲಿ ಸಾಧಿಸಿದ ವಿಜಯಗಳು ಚೈನಾ ಭವಿಷ್ಯದ ಪ್ರಗತಿಗೆ ಬಲವಾದ ಬುನಾದಿಯಾಗಿ ನಿಂತಿತೆಂದು ಮೇಧಾವಿಗಳೆಲ್ಲಾ ಸಾಧಾರಣವಾಗಿ ಏಕೀಭವಿಸುತ್ತಾರೆ. ಸಿಸಿಪಿ

SCERT TELANGANA

ಆಳ್ವಿಕೆ ಕ್ರಮೇಣ ಏಕಪಕ್ಷ ಆಳ್ವಿಕೆಗೆ ದಾರಿ ಮಾಡಿಕೊಟ್ಟಿತು. ಸಿಸಿಪಿಗೆ ಸೇರಿದ ಪ್ರಧಾನ ನಾಯಕರು ಅಥವಾ ಚೆರ್ಮನ್ಸ್ ಬಹಳ ಶಕ್ತಿವಂತರಾಗಿ ಬೆಳೆದರು. ಪ್ರತಿಪಕ್ಷ ಕಾರ್ಯಕ್ರಮಗಳು ತುಳಿತಕ್ಕೊಳಗಾದವು.

ವಿಯತ್ನಾಂ : ಇಬ್ಬರು ವಸಾಹತು ಆಳ್ವಿಕೆದಾರರಿಗೆ ವಿರೋಧ : (Vietnam : Against two colonisers) :

ವಸಾಹತಿನ ಅನುಭವ (The Colonial Experience)

19ನೇ ಶತಮಾನದ ಮಧ್ಯಕಾಲಕ್ಕೆಲ್ಲಾ ಫ್ರೆಂಚ್ ಪ್ರತ್ಯೇಕ್ಷ ಆಳ್ವಿಕೆಗೆ ವಿಯತ್ನಾಂ ಒಳಪಟ್ಟಿತು. ಫ್ರೆಂಚ್ ಆಳ್ವಿಕೆದಾರರು ವಿಯತ್ನಾಂ ಚಕ್ರವರ್ತಿಯನ್ನು ತಮ್ಮ ಕೈಯಲ್ಲಿ ಕೀಲುಗೊಂಬೆಯಾಗಿ ಮಾಡಿಕೊಂಡು ಭಾರತದೇಶವನ್ನು ಬ್ರಿಟೀಷ್‌ನವರು ಆಳ್ವಿಕೆ ನಡಿಸಿದಂತೆಯೇ ಅವರು ಪರಿಪಾಲಿಸಿದರು. ಭಾರತದೇಶವನ್ನು ಬ್ರಿಟನ್ ಪ್ರಭಾವಿತಗೊಳಿಸಿದಂತೆ ವಿಯತ್ನಾಂರು ಜೀವನದಲ್ಲಿ ಎಲ್ಲಾ ಅಂಶಗಳ ಮೇಲೆ ಫ್ರೆಂಚ್‌ನವರು ಪರಿಣಾಮಬೀರಿದರು.

ರಫ್ತು, ಜಮೀನುದಾರಿ ಪದ್ಧತಿ, ರೈತಾಂಗ : (Exports, Landlordism and Peasants)

ಚಿತ್ರ 2 : ವಿಯತ್ನಾಂ

ವಿಯತ್ನಾಂನನ್ನು ಭತ್ತ ರಫ್ತು ಮಾಡುವ ದೇಶವಾಗಿ ಅಭಿವೃದ್ಧಿಗೊಳಿಸ ಬೇಕೆಂದು ಫ್ರೆಂಚ್ ಬಹಳ ಆಸಕ್ತಿ ತೋರಿಸಿತು. ಇದಕ್ಕೆ ಅದು ಮೂರು ತಂತ್ರಗಳನ್ನು ಅನುಸರಿಸಿತು, ನೀರಾವರಿ ಸೌಲಭ್ಯವನ್ನು ಅಭಿವೃದ್ಧಿ ಗೊಳಿಸುವುದು, ಜಮೀನುದಾರರನ್ನು ಪ್ರೋತ್ಸಾಹಿಸುವುದು, ಭತ್ತ , ರಬ್ಬರುದಂತಹ ವ್ಯವಸಾಯ ಉತ್ಪತ್ತಿಗಳ ಮಾರ್ಕೆಟಿಂಗ್‌ಗೆ ಸಹಕರಿಸುವುದು. ಮೆಕಾಂಗ್ ಡೆಲ್ಟಾ ಪ್ರಾಂತಗಳಲ್ಲಿ ಸಾಗುವಳಿ ವಿಸ್ತೀರ್ಣವನ್ನು ಹೆಚ್ಚಿಸಲು ಫ್ರೆಂಚ್‌ನವರು ಬೀಳು ಭೂಮಿಯಿಂದ ನೀರನ್ನು ತೋಡಿ ಕಾಲುವೆಗಳ ನಿರ್ಮಾಣವನ್ನು ಕೈಗೊಂಡರು. ಈ ವಿಶಾಲ ನೀರಾವರಿ ಕೆಲಸಗಳಲ್ಲಿ ಮುಖ್ಯವಾಗಿ ಕಾಲುವೆಗಳು, ಕೆರೆಕಟ್ಟೆ ನಿರ್ಮಾಣದಲ್ಲಿ ಒತ್ತಾಯವಾಗಿ ಕೆಲಸ ಮಾಡಿಸಿ ಅವುಗಳನ್ನು ಪೂರ್ಣಗೊಳಿಸಿದರು. ಇದರ ಫಲವಾಗಿ ಭತ್ತದ ಉತ್ಪತ್ತಿ ಹೆಚ್ಚಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದನ್ನು ರಫ್ತು ಮಾಡಲು ಸಾಧ್ಯವಾಯಿತು. ವಿಯತ್ನಾಂ ತನ್ನ ಭತ್ತ ಉತ್ಪತ್ತಿಯಲ್ಲಿ ಮೂರರಲ್ಲಿ ಎರಡು ಭಾಗ ರಫ್ತು ಮಾಡತೊಡಗಿತು. 1931 ರಲ್ಲಿಗೆ ವಿಯತ್ನಾಂ ಪ್ರಪಂಚದಲ್ಲಿ ಮೂರನೇ ಅತಿ ದೊಡ್ಡ ಅಕ್ಕಿ ರಫ್ತು ಮಾಡುವ ಪ್ರಾಂತವಾಗಿ ಬೆಳೆಯಿತು. ಇದರ ಜೊತೆಗೆ ವಾಣಿಜ್ಯ ಸರಕುಗಳ ಸಾರಿಗೆಗಾಗಿ, ಸೈನಿಕ ಕೇಂದ್ರಗಳನ್ನು ಕಳುಹಿಸುವುದಕ್ಕಾಗಿ ಒಟ್ಟು ಪ್ರಾಂತವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಮೂಲಭೂತ ಸೌಕರ್ಯಗಳನ್ನು (ರಸ್ತೆ, ರೈಲು ಮಾರ್ಗಗಳು) ಅಭಿವೃದ್ಧಿಗೊಳಿಸಿದರು. ವಿಯತ್ನಾಂನ ಉತ್ತರ, ದಕ್ಷಿಣ ಪ್ರಾಂತಗಳನ್ನು, ಚೈನಾವನ್ನು ಸೇರಿಸುವ ಇಂಡೊ - ಚೈನಾ ಖಂಡಾಂತರ ರೈಲು ಮಾರ್ಗ ನಿರ್ಮಾಣಗಳನ್ನು ಆರಂಭಿಸಿದರು.

ವಿಯತ್ನಾಂ ವಸಾಹತು ಆಳ್ವಿಕೆಯ ಆರ್ಥಿಕ ಪರಿಸ್ಥಿತಿ ಮುಖ್ಯವಾಗಿ ಫ್ರೆಂಚ್, ಕೆಲವು ಜನ ಶ್ರೀಮಂತ ವಿಯತ್ನಾಂಮೀಯರ ಅಧೀನದಲ್ಲಿರುವ ಭತ್ತ ಉತ್ಪತ್ತಿ, ರಬ್ಬರು ಸಾಗುವಳಿ ಮೇಲೆ ಆಧಾರಪಟ್ಟಿದೆ. ರಬ್ಬರು ತೋಟಗಳಲ್ಲಿ ಜೀತ ಕಾರ್ಮಿಕರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಆರ್ಥಿಕ ವ್ಯವಸ್ಥೆ ಕೈಗಾರಿಕೀಕರಣ ಹೊಂದಲು ಫ್ರೆಂಚಿನವರು ಏನೂ ಮಾಡಲಿಲ್ಲ. ಗ್ರಾಮೀಣ ಪ್ರಾಂತಗಳಲ್ಲಿ ಜಮೀನುದಾರರು ಹೆಚ್ಚಾಗಿ ದೊಡ್ಡ ದೊಡ್ಡ ಜಮೀನುದಾರರು ಸಣ್ಣ ರೈತರ ಭೂಮಿಗಳನ್ನು ದಕ್ಕಿಸಿಕೊಂಡು ಅವರಿಂದ ಗಣೀ ರೈತರಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಪ್ರತಿಫಲವಾಗಿ ರೈತರ ಜೀವನ ಪ್ರಮಾಣ ಕಡಿಮೆಯಾಯಿತು.

ದಶಮಾನಗಳ ಕಾಲ ಮುಂದುವರೆದ ಭೂ ಪರಾಯೀಕರಣ (ಒಡೆತನ ಕಸಿದುಕೊಳ್ಳುವುದು), ಫ್ರೆಂಚ್‌ನವರಿಗೆ / ಅವರ ಪಕ್ಷನಿಂತ ವಿಯತ್ನಾಂಯರಿಗೆ ಕೆಲವು ಅಂಶಗಳಲ್ಲಿ ವಿನಾಯಿತಿ ನೀಡುವುದರಿಂದ ಭೂಮಿ ದೊಡ್ಡ ಶ್ರೀಮಂತ

SCERT TELANGANA

ಜಮೀನುದಾರರ ಕೈಯಲ್ಲಿ ಕೇಂದ್ರೀಕೃತವಾದವು. ಭೂಮಿ ಇಲ್ಲದಿದ್ದುದು, ಅಥವಾ ನಾಮಮಾತ್ರವಾಗಿದ್ದರಿಂದ ವಿಯತ್ನಾಂ ರೈತಾಂಗ ಸಾಲದ ವಿಷವಲಯದಲ್ಲಿ ಸಿಕ್ಕಿ ಹಾಕಿಕೊಂಡು ಹೊರಬರಲಾರದೆ ಹೋಯಿತು. ಗ್ರಾಮಹಿರಿಯರಾದ ಜಮೀನುದಾರರು ವಿಧಿಸುವ ಅಧಿಕ ತೆರಿಗೆಗಳು, ಅಧಿಕ ಬಾಡಿಗೆ, ಅಧಿಕ ಬಡ್ಡಿ ಭಾರದ ಕೆಳಗೆ ರೈತರು ನರಳಿಹೋಯಿತು. 1930ರಲ್ಲಿಗೆ ಭೂಮಿ ಇಲ್ಲದಂತಾದುದು, ಭೂ ಒಡೆತನಕ್ಕೆ ಸಂಬಂಧಿಸಿದ ಅಂಕಿಅಂಶಗಳು ವಿಯತ್ನಾಂ ರೈತರು ಎದುರಿಸುತ್ತಿರುವ ದಾರುಣ ಪರಿಸ್ಥಿತಿಗಳನ್ನು ಬೆಳಕಿಗೆ ತಂದವು. ಅನ್ನಾಂ ಎನ್ನುವ ಪ್ರಾಂತದಲ್ಲಿ ಸುಮಾರು 53% ಕುಟುಂಬಗಳಿಗೆ ಸಂಪೂರ್ಣ ಯಾವುದೇ ರೀತಿಯ ಭೂಮಿ ಇಲ್ಲ. ಟೋನ್‌ಕಿನ್ ಕೊಚಿನ್‌ಚೀನಾದಲ್ಲಿ ಸುಮಾರು 58%, 79% ಕುಟುಂಬಗಳಿಗೆ ಅರ್ಧಅಂಗುಳ ಭೂಮಿ ಕೂಡ ಇಲ್ಲ. 1930ರಲ್ಲಿ ಭೂಮಿ ಇರುವ ಕುಟುಂಬಗಳಲ್ಲಿ ಅತ್ಯಧಿಕ ಶೇಕಡ ಹಸಿವಿಗೆ ಗುರಿಯಾಗಿದ್ದರೆಂದರೆ ಭೂಮಿ ಇಲ್ಲದ ಕೂಲಿಗಳ ಪರಿಸ್ಥಿತಿಯನ್ನು ನೀವೇ ಊಹಿಸಿಕೊಳ್ಳಿರಿ !

- ವಿಯತ್ನಾಂನಲ್ಲಿ ರೈಲು ಮಾರ್ಗಗಳನ್ನು ಕಾಲುವೆಗಳನ್ನು ಫ್ರೆಂಚರು ಏಕೆ ಅಭಿವೃದ್ಧಿಗೊಳಿಸಿದರು ?
- ಭೂಮಿ ಇಲ್ಲದ ರೈತಾಂಗಕ್ಕೆ, ಭೂಮಿ ಇಲ್ಲದ ಕಾರ್ಮಿಕರಿಗೆ ಮಧ್ಯ ಇರುವ ವ್ಯತ್ಯಾಸವೇನು?
- ಬ್ರಿಟೀಷರ ಆಳ್ವಿಕೆಯಲ್ಲಿನ ಭಾರತದೇಶ ರೈತಾಂಗ ಪರಿಸ್ಥಿತಿ ಕುರಿತು ನೀವು ಓದಿದ್ದೀರಿ. ವಿಯತ್ನಾಂ ರೈತಾಂಗ ಸ್ಥಿತಿಗೆ, ಇದಕ್ಕೆ ಹೋಲಿಕೆಗಳೇನು ?

ಜಮೀನುದಾರರಿಂದ ಭೂಮಿ ತೆಗೆದುಕೊಂಡ ರೈತ ಅದಕ್ಕೆ ಗುತ್ತಿಗೆ ಕೊಡುವುದು ಮಾತ್ರವಲ್ಲದೆ ಭೂಒಡೆಯನ ಭೂಮಿಗಳಲ್ಲಿ, ಮನೆಗಳಲ್ಲಿ ಕೆಲಸ ಮಾಡಬೇಕು. ಅಷ್ಟೇಅಲ್ಲದೇ ಅವರು ಮನಬಂದಂತೆ ವಿಧಿಸುವ ಅನೇಕ ರೀತಿಯ ತೆರಿಗೆಗಳನ್ನು ಕೂಡ ಸಲ್ಲಿಸಬೇಕು. ಇದರಿಂದ ಜಮೀನುದಾರರಿಂದ ರೈತರು ಅಕ್ಕಿ, ಹಣವನ್ನು ಸಾಲವಾಗಿ ತೆಗೆದುಕೊಳ್ಳುವುದು ತಪ್ಪುತ್ತಿರಲಿಲ್ಲ. ಆದ್ದರಿಂದ ಅವರು ಮತ್ತಷ್ಟು ಸಾಲದ ಬಂಧನಕ್ಕೆ ಒಳಗಾಗುತ್ತಿದ್ದರು.

ನಾಗರೀಕರಾಗಿ ಮಾಡುವ ಜವಾಬ್ದಾರಿ (The "Civilising Mission) :

ಬ್ರಿಟೀಷ್‌ರಂತೆ ಫ್ರೆಂಚ್ ವಸಾಹತು ಆಳ್ವಿಕೆದಾರರು ಕೂಡ ವಸಾಹತು ಆಳ್ವಿಕೆ ಪ್ರಜೆಗಳು ಅನಾಗರಿಕರೆಂದು ತಮ್ಮ ಆಳ್ವಿಕೆಯಿಂದ ಆಧುನಿಕ ನಾಗರೀಕತೆ ಲಾಭವನ್ನು ಒದಗಿಸುವುದು ತಮ್ಮ ಕರ್ತವ್ಯವೆಂದು ಅವರು ಭಾವಿಸಿದರು. 'ಸ್ಥಳಿಯರನ್ನು' ನಾಗರಿಕರನ್ನಾಗಿಸಲು ಶಿಕ್ಷಣ ಒಂದು ಉತ್ತಮ ಮಾರ್ಗವೆಂದು ಭಾವಿಸಿದರು. ಫ್ರೆಂಚ್‌ನವರಿಗೆ ಶಿಕ್ಷಿತ ಕಾರ್ಮಿಕರ ಅವಶ್ಯಕತೆ ಇದೆ ಆದರೆ ವಿದ್ಯೆಯಿಂದ ಸಮಸ್ಯೆಗಳು ಉದ್ಭವಿಸುತ್ತವೆಂದು ಭಯಪಡತೊಡಗಿದರು. ಒಮ್ಮೆ ವಿದ್ಯಾವಂತರಾದ ನಂತರ ವಿಯತ್ನಾಂಮೀಗಳು ವಸಾಹತುದಾರರ ಆಧಿಪತ್ಯವನ್ನು ಪ್ರಶ್ನಿಸಬಹುದು. ಅಷ್ಟೇಅಲ್ಲದೇ ವಿಯತ್ನಾಂನಲ್ಲಿರುವ ಫ್ರೆಂಚ್ ಪೌರರು ಮಾಡುವ ಉಪಾಧ್ಯಾಯ, ಅಂಗಡಿಗಳು, ಪೋಲೀಸ್‌ದಂತಹ ಉದ್ಯೋಗಗಳನ್ನು ವಿದ್ಯಾವಂತರಾದ ವಿಯತ್ನಾಂರು ಕಸಿದುಕೊಳ್ಳುತ್ತಾರೆಂದು ಭಯಪಡತೊಡಗಿದರು. ಆದ್ದರಿಂದ ಇವರು ವಿಯತ್ನಾಂನವರಿಗೆ ಸಂಪೂರ್ಣ ಫ್ರೆಂಚ್ ವಿದ್ಯೆಯನ್ನು ಒದಗಿಸುವ ವಿಧಾನಗಳನ್ನು ವಿರೋಧಿಸ ತೊಡಗಿದರು. ಪ್ರಾಥಮಿಕ ಮಟ್ಟದಲ್ಲಿ ವಿಯತ್ನಾಂ ಭಾಷೆಯನ್ನು ಸೇರಿಸಿದ್ದರೂ ಉನ್ನತ ಶಿಕ್ಷಣ ಎಲ್ಲಾ ಫ್ರೆಂಚ್ ಭಾಷೆಯಲ್ಲಿರುತ್ತಿತ್ತು . ಜನಸಂಖ್ಯೆಯಲ್ಲಿ ಬಹಳ ಕಡಿಮೆ ಇರುವ ವಿಯತ್ನಾಂ ಶ್ರೀಮಂತರ ಮಕ್ಕಳನ್ನು ಮಾತ್ರ ಫ್ರೆಂಚ್ ಶಾಲೆಗಳಲ್ಲಿ ಸೇರಿಸಿಕೊಳ್ಳುತ್ತಿದರು. ಆಗ ಶಾಲೆಯಲ್ಲಿ ಸೇರಿದವರಲ್ಲಿ ಬಹಳ ಸ್ವಲ್ಪ ಜನ ಮಾತ್ರ ಪಾಠಶಾಲೆ ಶಿಕ್ಷಣ ಪೂರ್ಣಗೊಳಿಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿ ದ್ದರು. ಪಾಠ್ಯಪುಸ್ತಕಗಳು ಫ್ರೆಂಚ್‌ನವರನ್ನು ಹೊಗಳುತ್ತಾ ವಸಾಹತು ಆಳ್ವಿಕೆದಾರರನ್ನು ಸಮರ್ಥಿಸುತ್ತಿದ್ದವು.

- ಭಾರತದೇಶದಲ್ಲಿ ಬ್ರಿಟೀಷರು ಅನುಸರಿಸಿದ ವಿಧಾನವನ್ನು ನೆನೆಪಿಗೆ ತಂದುಕೊಳ್ಳಲು ಪ್ರಯತ್ನಿಸಿರಿ. ಭಾರತದೇಶದಲ್ಲಿ ಬ್ರಿಟಿಷರು ವಿಯತ್ನಾಂನಲ್ಲಿ ಫ್ರೆಂಚ್‌ನವರು ಅನುಸರಿಸಿದ ವಸಾಹತು ಆಳ್ವಿಕೆ ವಿಧಾನಗಳನ್ನು ಹೋಲಿಸಿರಿ, ಅವುಗಳ ಮಧ್ಯ ಹೋಲಿಕೆಗಳಾವುವು, ವ್ಯತ್ಯಾಸಗಳೇನು ?

ವಿಯತ್ನಾಂ ರಾಷ್ಟ್ರೀಯವಾದದ ಉದಯ : (Emergence of Vietnamese Nationalism) :

ಫ್ರೆಂಚ್‌ನವರು ಕೊಟ್ಟ ಪಠ್ಯಾಂಶಗಳನ್ನು ಉಪಾಧ್ಯಾಯರು, ವಿದ್ಯಾರ್ಥಿಗಳು ಕುರುಡುತನದಿಂದ ಅನುಸರಿಸಲಿಲ್ಲ. ಕೆಲವು ಸಾರಿ ಇದನ್ನು ಬಹಿರಂಗವಾಗಿ, ಕೆಲವು ಸಾರಿ ಮೌನವಾಗಿ ಪ್ರತಿಭಟನೆ ನಡೆಸುತ್ತಿದ್ದರು. ಕೆಳಗಿನ ತರಗತಿಗಳ

SCERT TELANGANA

ವಿಯತ್ನಾಂ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗುತ್ತಿದ್ದರಿಂದ ಅವರ ಬೋಧನೆಯನ್ನು ನಿಯಂತ್ರಿಸುವುದು ಕಷ್ಟಕರವಾಯಿತು. ಪಾಠಗಳನ್ನು ಬೋಧಿಸುವಾಗ ವಿಯತ್ನಾಂ ಉಪಾಧ್ಯಾಯರು ಪಾಠಗಳಲ್ಲಿರುವ ವಿಷಯವನ್ನು ಬದಲಾಯಿಸಿ ಫ್ರೆಂಚ್ ಸರ್ಕಾರವನ್ನು ವಿಮರ್ಶಿಸುತ್ತಿದ್ದರು. ಕಾರ್ಯಾಲಯಗಳಲ್ಲಿ ಉದ್ಯೋಗಗಳಿಗೆ ವಿಯತ್ನಾಂನವರನ್ನು ಅನರ್ಹರನ್ನಾಗಿ ಮಾಡುವ ವಸಾಹತು ಸರ್ಕಾರ ಪ್ರಯತ್ನಗಳನ್ನು ವಿದ್ಯಾರ್ಥಿ ಗಳು ಪ್ರತಿಭಟಿಸತೊಡಗಿದರು. ದೇಶಭಕ್ತಿ ಭಾವನೆಯಿಂದ ಸಮಾಜದ ಪ್ರಯೋಜನಕ್ಕಾಗಿ ಹೋರಾಡುವುದು ವಿದ್ಯಾವಂತರ ಕರ್ತವ್ಯ ಎನ್ನುವ ನಂಬಿಕೆಯಿಂದ ಅವರು ಪ್ರೇರಣೆ ಪಡೆದರು. ಇದರಿಂದ ಅವರು ತಮ್ಮ ಸ್ಥಾನಕ್ಕೆ ಮುಪ್ಪುತಂದೊಡ್ಡುತ್ತದೆ ಎಂದು ಭಯಪಡುವ ಫ್ರೆಂಚ್ ಆಳ್ವಿಕೆಯೊಂದಿಗೂ, ಸ್ಥಳೀಯ ಶ್ರೀಮಂತರೊಡನೆ ಘರ್ಷಣೆ ಪಡುವ ಪರಿಸ್ಥಿತಿ ಏರ್ಪಟ್ಟಿತು. 1920ರವರೆಗೆ ವಿದ್ಯಾರ್ಥಿಗಳು ಯುವ ಅನ್ನಾಂ ಪಾರ್ಟಿಯಂತಹ ರಾಜಕೀಯ ಪಾರ್ಟಿಗಳನ್ನು ಏರ್ಪಡಿಸ್ಸಿ ಅನ್ನಾಮೀಸ್ ಸ್ಟೂಡೆಂಟ್ಸ್ ನಂತಹ ಪತ್ರಿಕೆಗಳನ್ನು ಪ್ರಚುರಪಡಿಸಿದರು.

ಬಂಡಾಯಗಾರರಾಗಿ ಮಹಿಳೆಯರು

ವಿಯತ್ನಾಂ ಮಹಿಳೆಯರು, ಪ್ರತ್ಯೇಕವಾಗಿ ಕೆಳವರ್ಗದವರು ಸಾಂಪ್ರದಾಯಕ ಪುರುಷರೊಂದಿಗೆ ಸಮಾನತೆಯನ್ನು ಅನುಭವಿಸುತ್ತಿದ್ದರು. ಆದರೆ ಸಾರ್ವಜನಿಕ ಜೀವನದಲ್ಲಿ ಅವರ ಪಾತ್ರ ಇರುತ್ತಿರಲಿಲ್ಲ. ತಮ್ಮ ಭವಿಷ್ಯವನ್ನು ನಿರ್ಣಯಿಸುವ ಅಧಿಕಾರ ಅವರಿಗಿರಲಿಲ್ಲ.

ರಾಷ್ಟ್ರೀಯ ಹೋರಾಟ ಬೆಳೆಯುತ್ತಿದ್ದಂತೆ ಮಹಿಳೆಯರ ಸ್ಥಾನ ಕುರಿತು ಆಲೋಚನೆಗಳು ಆರಂಭವಾದವು. ಸ್ತ್ರೀ ತತ್ವಕ್ಕೆ ಹೊಸ ರೂಪ ಕೊಡತೊಡಗಿದರು. ಸಾಮಾಜಿಕ ನಿಯಮಗಳನ್ನು ವಿರೋಧಿಸಿದ ಮಹಿಳಾ ಕವಯಿತ್ರಿಗಳು, ರಾಜಕೀಯ ಮೇಧಾವಿಗಳು ಮೆಚ್ಚಿದರು (ಪ್ರಶಂಸಿದರು). 1930 ರಲ್ಲಿ ನಾಲಿನ್ ಬರೆದ ಕವನದಲ್ಲಿ ಒಬ್ಬ ಮಹಿಳೆ ಬಲವಂತದ ವಿವಾಹದಿಂದ ಹೊರಬಂದು ತನಗೆ ಇಷ್ಟವಾದ ವ್ಯಕ್ತಿಯನ್ನು-ಆತನು ರಾಷ್ಟ್ರೀಯ ಚಳುವಳಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ವಿವಾಹ ಮಾಡಿಕೊಳ್ಳುತ್ತಾಳೆ. ಈ ಕವನ ಆ ದಿನಗಳಲ್ಲಿ ದೊಡ್ಡ ಸಂಚಲನೆಯನ್ನು ಮೂಡಿಸಿತು. ಸಾಮಾಜಿಕ ನಿಯಮಗಳ ಮೇಲೆ ಹೋರಾಟ ವಿಯತ್ನಾಂ ಸಮಾಜದಲ್ಲಿ ನೂತನ ಮಹಿಳಾವಶ್ಯಕತೆಯನ್ನು ಸೂಚಿಸುತ್ತದೆ.

20ನೇ ಶತಮಾನದ ಆರಂಭದಲ್ಲಿ ಆಧುನಿಕ ಶಿಕ್ಷಣಕ್ಕಾಗಿ ವಿಯತ್ನಾಂ ವಿದ್ಯಾರ್ಥಿಗಳು ಜಪಾನಿಗೆ ಹೋದರು. ಅವರಲ್ಲಿ ಬಹಳ ಜನರ ಪ್ರಧಾನ ಉದ್ದೇಶ ವಿಯತ್ನಾಂದಿಂದ ಫ್ರೆಂಚ್‌ನವರನ್ನು ತೊಲಗಿಸುವುದು, ಕೈಗೊಂಬೆ ಚಕ್ರವರ್ತಿಯನ್ನು ತೊಲಗಿಸಿ ಅದಕ್ಕೂ ಮೊದಲು ಫ್ರೆಂಚ್‌ನವರು ಉಳಿಸಿದೆ ಎನ್‌ಗುಯೆನ್ ವಂಶವನ್ನು ಪುನಃ ಅಧಿಕಾರಕ್ಕೆ ತರುವುದು.

ಚೈನಾದಲ್ಲಿ ಸನ್‌ಯಟ್-ಸೇನ್ ಗಣತಂತ್ರ ಕ್ರಾಂತಿ ಸಾಧಿಸಿದ ನಂತರ ವಿಯತ್ನಾಂನಲ್ಲಿ ಕೂಡ ಗಣತಂತ್ರ, ಪ್ರಜಾಪ್ರಭುತ್ವ ಆಳ್ವಿಕೆಯನ್ನು ಏರ್ಪಡಿಸಲು ಅಲ್ಲಿನ ಪ್ರಜೆಗಳು ಪ್ರೇರಣೆ ಪಡೆದರು. ಬಹಳ ಜನ ವಿದ್ಯಾರ್ಥಿಗಳು ಆ ಕಾಲದಲ್ಲಿ ಹೊಸ ರಾಜಕೀಯ ಭಾವನೆಗಳನ್ನು ಕುರಿತು ತಿಳಿದುಕೊಳ್ಳಲು ಚೈನಾ, ರಷ್ಯಾ ದೇಶಗಳಿಗೆ ವಲಸೆ ಹೋದರು.

1930ರ ವರೆಗೆ ಆರ್ಥಿಕ ಕುಸಿತ ವಿಯತ್ನಾಂ ಮೇಲೆ ತೀವ್ರ ಪ್ರಭಾವವನ್ನು ತೋರಿಸಿತು. ರಬ್ಬರು, ಅಕ್ಕಿಯ ಬೆಲೆ ಕಡಿಮೆಯಾಗಿ ಗ್ರಾಮೀಣ ಸಾಲದಭಾರ, ನಿರುದ್ಯೋಗ ಹೆಚ್ಚಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ಪ್ರಜೆಗಳು ಹೋರಾಟ ನಡೆಸತೊಡಗಿದರು. ಇವುಗಳನ್ನು ಫ್ರೆಂಚ್‌ನವರು ಉಕ್ಕಿನಪಾದದಿಂದ ತುಳಿದು ಹಾಕಲಾರಂಭಿಸಿದರು. ಸತ್ಯಾಗ್ರಹ ಮಾಡುವವರ ಮೇಲೆ ವಿಮಾನಗಳಿಂದ ಬಾಂಬುಗಳು ಕೂಡ ಹಾಕತೊಡಗಿದರು.

1930 ಫೆಬ್ರವರಿಯಲ್ಲಿ ಹೊಚಿಮಿನ್ (ಆತನು ಕೆಲವು ದಿನ ಫ್ರಾನ್ಸ್‌ನಲ್ಲೂ, ರಷ್ಯಾದಲ್ಲೂ ಇದ್ದನು) ಪರಸ್ಪರ ಪೈಪೋಟಿ ನಡೆಸುತ್ತಿರುವ ರಾಷ್ಟ್ರೀಯತಾ ಬೃಂದಗಳನ್ನು ಸೇರಿಸಿ ವಿಯತ್ನಾಂ ಕಮ್ಯುನಿಸ್ಟ್ ಪಕ್ಷ (ವಿಯತ್ನಾಂ ಕಾಂಗ್‌ಸಾನ್ ಡಾಂಗ್)ವನ್ನು ಏರ್ಪಡಿಸಿದರು. ಆ ನಂತರ ಇದರ ಹೆಸರು ಇಂಡೋಚೈನೀಸ್ ಕಮ್ಯುನಿಸ್ಟ್ ಪಕ್ಷವಾಗಿ ಬದಲಾಯಿಸಿದರು. ಯೂರೋಪ್‌ದಲ್ಲಿನ ಕಮ್ಯುನಿಸ್ಟ್ ಪಾರ್ಟಿಗಳ ಮಿಲಿಟೆಂಟ್ ಪ್ರದರ್ಶನಗಳೊಂದಿಗೆ ಆತನು ಸ್ಫೂರ್ತಿ ಪಡೆದನು.

- ಅಕ್ಕಿ ಬೆಲೆಗಳು ಕಡಿಮೆಯಾದ್ದರಿಂದ ಗ್ರಾಮೀಣ ಸಾಲದ ಭಾರ ಏಕೆ ಹೆಚ್ಚಾಯಿತು ?
- ವಿಯತ್ನಾಂ, ಚೈನಾದಲ್ಲಿ ರಾಷ್ಟ್ರೀಯವಾದ ಏರ್ಪಟ್ಟಿದ್ದರಿಂದ ಯುವಕರು, ವಿದ್ಯಾರ್ಥಿಗಳು ಮುಖ್ಯ ಪಾತ್ರವಹಿಸಿದರು. ಇವುಗಳ ಮಧ್ಯೆ ಹೋಲಿಕೆ, ವ್ಯತ್ಯಾಸಗಳನ್ನು ಚರ್ಚಿಸಿರಿ.
- ಸ್ವತಂತ್ರ ವಿಯತ್ನಾಂ ಸರ್ಕಾರ ತೆಗೆದುಕೊಂಡ ಮೊದಲ ಕ್ರಮಗಳಲ್ಲಿ ಭೂಮಿ ಗೇಣಿ ಕಡಿಮೆ ಮಾಡುವುದು ಒಂದಾಗಿದೆ. ಈ ಕ್ರಮ ಏಕೆ ಕೈಗೊಂಡರು ?

SCERT TELANGANA

ಚಿತ್ರ 13.5 : ಹೊಚಿಮಿನ್

ಆಗ್ನೆಯ ಏಷ್ಯಾ ಮೇಲೆ ತನ್ನ ಒಡೆತನವನ್ನು ಸಾಧಿಸಬೇಕೆಂಬ ಸಾಮ್ರಾಜ್ಯವಾದ ಆಕಾಂಶೆಯಲ್ಲಿ ಭಾಗವಾಗಿ ಜಪಾನು 1940ರಲ್ಲಿ ವಿಯತ್ನಾಂನ್ನು ಆಕ್ರಮಿಸಿತು. ಆದ್ದರಿಂದ ರಾಷ್ಟ್ರೀಯವಾದಿಗಳು ಫ್ರೆಂಚ್‌ರವರನ್ನು ಮಾತ್ರವಲ್ಲದೆ ಜಪಾನೀಯರನ್ನು ಕೂಡ ವಿರೋಧಿಸಬೇಕಾಗಿ ಬಂತು. ಆದರೆ ಅಷ್ಟರಲ್ಲಿಗೆ ಎರಡನೇ ಪ್ರಪಂಚ ಯುದ್ಧದಲ್ಲಿ ಹಿಟ್ಲರ್ ಫ್ರಾನ್ಸ್‌ನ್ನು ಸಂಪೂರ್ಣವಾಗಿ ಆಕ್ರಮಿಸಿದ್ದರಿಂದ ಫ್ರೆಂಚ್‌ನವರು ಬಲಹೀನ ಸ್ಥಿತಿಯಲ್ಲಿದ್ದರು. ವಿಯತ್ನಾಂ ಸ್ವತಂತ್ರ್ಯ ಸಮಿತಿ (ವಿಯತ್ನಾಂ ಡಾಕ್ ಲಾಪ್ ಡಾಂಗ್ ಮಿನ್) ಇದನ್ನು ವಿಯತ್‌ಮಿನ್ ಎಂದು ಕರೆಯುತ್ತಾರೆ. ಜಪಾನೀಯರ ಆಕ್ರಮಣಕ್ಕೆ ವಿರುದ್ಧವಾಗಿ ಹೋರಾಡಿ 1945 ಸೆಪ್ಟೆಂಬರ್‌ನಲ್ಲಿ ಹನಾಯ್‌ಯನ್ನು ಪುನಃ ಸ್ವಾಧೀನ ಮಾಡಿಕೊಂಡಿತು. ವಿಯತ್ನಾಂ ಪ್ರಜಾಪ್ರಭುತ್ವ ಗಣತಂತ್ರ ಏರ್ಪಟ್ಟಿತು. ಹೊಚಿಮಿನ್ ಅದಕ್ಕೆ ಚೆರ್ಮನ್ ಆದನು. 1945 ಆಗಸ್ಟ್‌ನಲ್ಲಿ ವಿಯತ್‌ಮಿನ್ ಅಧಿಕಾರಕ್ಕೆ ಬಂದ ತಕ್ಷಣ ಭೂಮಿ ಗೇಣಿಯನ್ನು ಶೇಕಡ 25 ಕಡಿಮೆಗೊಳಿಸಿದರು. ಮರು ಗುತ್ತಿಗೆ ಕೊಡುವುದನ್ನು ನಿಷೇಧಿಸಿದರು. 1945 ಆಗಸ್ಟರಲ್ಲಿಗೆ ಇರುವ ಗೇಣಿದಾರರು ಗೇಣಿ ಕೊಡದೇ ಇದ್ದವರ ಮೊತ್ತವನ್ನು ಮಾಫಿ ಮಾಡಿದರು. ಸಮುದಾಯದ ಭೂಮಿಯನ್ನು, ಫ್ರೆಂಚ್‌ನವರ ಅಧೀನದಲ್ಲಿರುವ ಭೂಮಿಯನ್ನು , ವಿಯತ್ನಾಂ ವಿದ್ರೋಹಿಗಳ ಭೂಮಿಯನ್ನು ಪ್ರಜೆಗಳಿಗೆ ಹಂಚತೊಡಗಿದರು.

ವಿಯತ್ನಾಂನಲ್ಲಿ ನೂತನ ಗಣತಂತ್ರ ವ್ಯವಸ್ಥೆ (The New Republic of Vietnam)

ಹೊಸದಾಗಿ ಏರ್ಪಟ್ಟ ಈ ಗಣತಂತ್ರ ದೇಶ ಅನೇಕ ಸವಾಲುಗಳನ್ನು ಎದುರಿಸಿತು. ಚಕ್ರವರ್ತಿ ಬಾವೊದಾಮಿಯನ್ನು ಕೀಲುಗೊಂಬೆಯಾಗಿ ಮಾಡಿ ವಿಯತ್ನಾಂ ಮೇಲೆ ನಿಯಂತ್ರಣವನ್ನು ಪುನಃ ಸಾಧಿಸಲು ಫ್ರೆಂಚ್‌ನವರು ಪ್ರಯತ್ನಿಸಿದರು. ಫ್ರೆಂಚ್ ದಾಳಿಗಳ ನೇತೃತ್ವದಲ್ಲಿ ವಿಯತ್‌ಮಿನ್ ಸದಸ್ಯರು ಬೆಟ್ಟಗಳಲ್ಲಿ ತಲೆಮರಿಸಿಕೊಳ್ಳಬೇಕಾಗಿ ಬಂತು. ಎಂಟು ವರ್ಷಗಳ ಯುದ್ಧದ ನಂತರ 1954ರಲ್ಲಿ ಡೀನ್ ಬೀನ್ ಫು ನಿಂದ ಫ್ರೆಂಚ್ ಸೋಲನ್ನು ಅನುಭವಿಸಿತು. 16,000 ಫ್ರೆಂಚ್ ಸೈನಿಕರು,ಅಧಿಕಾರಿಗಳನ್ನು ಯುದ್ಧ ಖೈದಿಗಳನ್ನಾಗಿ ಮಾಡಿಕೊಂಡರು.

ಫ್ರೆಂಚ್‌ನವರು ಸೋತ ನಂತರ ಜಿನೆವಾದಲ್ಲಿ ನಡೆದ ಶಾಂತಿ ವ್ಯವಹಾರಗಳಲ್ಲಿ ದೇಶವನ್ನು ಎರಡು ಭಾಗಗಳಾಗಿ ವಿಭಜಿಸಲು ವಿಯತ್ನಾಂ ಪ್ರಜೆಗಳನ್ನು ಒಪ್ಪಿಸಿದರು. ದೇಶ ಉತ್ತರ, ದಕ್ಷಿಣ ಭಾಗಗಳಾಗಿ ಎರಡಾಗಿ ಏರ್ಪಟ್ಟಿತು. ಹೊಚಿಮಿನ್, ಕಮ್ಯುನಿಸ್ಟರು ಉತ್ತರ ಭಾಗದಲ್ಲಿ ಅಧಿಕಾರಕ್ಕೆ ಬಂದರು. ದಕ್ಷಿಣ ಭಾಗಕ್ಕೆ ಪುರಾತನ ಚಕ್ರವರ್ತಿಯನ್ನು ಅಧಿಪತಿಯನ್ನಾಗಿ ಮಾಡಿದರು. ಆದರೆ ಸ್ವಲ್ಪ ಕಾಲದಲ್ಲೇ ಆತನನ್ನು ಸೋಲಿಸಿ ಎನ್‌ಗೊಡಿನ್ ಡೀಂ ಅಧಿಕಾರಕ್ಕೆ ಬಂದನು. ಆತನು ದಮನ, ನಿರಂಕುಶ ಸರ್ಕಾರವನ್ನು ಏರ್ಪಡಿಸಿದನು. ಆತನನ್ನು ವಿರೋಧಿಸಿದವರನ್ನೆಲ್ಲಾ ಜೈಲುಪಾಲು ಗೊಳಿಸಿದನು. ಆತನ ನಿರಂಕುಶ ಆಳ್ವಿಕೆಗೆ ವಿರುದ್ಧವಾಗ್ಗಿ ರಾಷ್ಟ್ರೀಯ ವಿಮುಕ್ತಿ ಒಕ್ಕೂಟು (ಎನ್.ಎಲ್.ಎಫ್) ಎನ್ನುವ ಹೆಸರಿನಲ್ಲಿ ಪ್ರಜೆಗಳು ಹೋರಾಡತೊಡಗಿದರು.

- ಇಂತಹ ಭೂ ಸುಧಾರಣೆಗಳು ವಿಯತ್ನಾಂ ಸಮಾಜದ ಮೇಲೆ ಎಂತಹ ಪ್ರಭಾವವನ್ನು ಬೀರಿರಬಹುದು ? ಗ್ರಾಮೀಣ ಪ್ರಾಂತಗಳಲ್ಲಿ ವಿವಿಧ ಸಾಮಾಜಿಕ ವರ್ಗಗಳ ದೃಷ್ಟ್ಯಾ ಇದನ್ನು ಚರ್ಚಿಸಿರಿ.
- ಚೈನಾ, ವಿಯತ್ನಾಂ, ಭಾರತ ದೇಶದಲ್ಲಿನ ಭೂ ಸುಧಾರಣೆಗಳ ರೀತಿಯನ್ನು ಹೋಲಿಸಿರಿ.

ಉತ್ತರ ವಿಯತ್ನಾಂದಲ್ಲಿ ಈ ಕಾಲದವರೆಗೆ ಭೂಮಿ ಗೇಣಿ ಕಡಿಮೆ ಮಾಡುವುದರ ಮೇಲೆ ಫ್ರೆಂಚ್ ಅಥವಾ ಜಪಾನೀಯರ ಕಡೆ ಬಹಿರಂಗವಾಗಿ ನಿಂತ ಜಮೀನುದಾರರ ಭೂಮಿಗಳನ್ನು ಮಾತ್ರ ಸ್ವಾಧೀನ ಪಡಿಸಿಕೊಳ್ಳುವುದರ ಮೇಲೆ ದೃಷ್ಟಿಯಿಟ್ಟದ್ದರಿಂದ ಭೂ ಸುಧಾರಣೆಗೊಸ್ಕರ ಒತ್ತಾಯ ತರಲಿಲ್ಲ. ಆದರೆ 1954 ನಂತರ ಉತ್ತರ ವಿಯತ್ನಾಂನಲ್ಲಿ ಭೂ ಸುಧಾರಣೆಯಲ್ಲಿ ಹೊಸ ಯುಗ ಪ್ರಾರಂಭವಾಯಿತು. ಜಮೀನುದಾರರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಭೂಮಿ ಇಲ್ಲದ ರೈತ ವರ್ಗಕ್ಕೆ, ಬಡ ರೈತರಿಗೆ ಭೂಮಿಯನ್ನು ಹಂಚಿದರು. ಸ್ವಂತ ಭೂಮಿ ಎನ್ನುವ ಯುಗಯುಗಗಳಿಂದ ಇದ್ದ ರೈತರ ಕನಸ್ಸನ್ನು ನಿಜಮಾಡಿದ್ದರಿಂದ ವಿಯತ್ನಾಂ ರೈತವರ್ಗ ಪೂರ್ತಿ ಬೆಂಬಲ ಅವರಿಗೆ ದೊರೆಯಿತು.

SCERT TELANGANA

ಏಜೆಂಟ್ ಆರೆಂಜ್ : ಅತ್ಯಂತ ವಿಷ ಪದಾರ್ಥ

ಏಜೆಂಟ್ ಆರೆಂಜ್ ಎಲೆಗಳು ಉದುರುವಂತೆ ಮಾಡಿ ಸಸ್ಯಗಳನ್ನು ನಾಶಗೊಳಿಸುವ ವಿಷ. ಕಿತ್ತಳೆ ಬಣ್ಣದ ಪಟ್ಟಿರುವ ಡ್ರಮ್ಮುಗಳಲ್ಲಿ ಶೇಖರಣೆ ಮಾಡುವುದರಿಂದ ಅದಕ್ಕೆ ಆ ಹೆಸರು ಬಂತು. 1961-1971 ರ ಮಧ್ಯಕಾಲದಲ್ಲಿ ಅಮೇರಿಕಾ ಕಾರ್ಗೊ ಯುದ್ಧ ವಿಮಾನಗಳು ವಿಯತ್ನಾಂ ಮೇಲೆ 500 ಲಕ್ಷ ಲೀಟರ್ ಈ ವಿಷಪೂರಿತ ರಸಾಯನವನ್ನು ಚಲ್ಲಿದವು. ಅರಣ್ಯಗಳನ್ನು, ಹೊಲಗಳನ್ನು ನಿರ್ಮೂಲಿಸುವ ಮೂಲಕ ಪ್ರಜೆಗಳು ಅವಿತುಕೊಳ್ಳಲು ಅವಕಾಶಗಳಿಲ್ಲದಂತೆ ಮಾಡಿ ಅವರನ್ನು ಸುಲಭವಾಗಿ ಸಾಯಿಸಬಹುದೆಂಬುದು ಅಮೇರಿಕಾ ಯೋಜನೆ. ದೇಶದಲ್ಲಿನ ಶೇಕಡ 14 ಸಾಗುವಳಿ ಭೂಮಿ ಈ ವಿಷಪೂರಿತ ರಸಾಯನದ ಪ್ರಭಾವಕ್ಕೊಳಗಾಯಿತು. ಇದರ ಪ್ರಭಾವ ಬಹಳ ತೀರ್ವವಾಗಿತ್ತು. ಈಗಲೂ ಕೂಡ ಪ್ರಜೆಗಳ ಮೇಲೆ ಅದರ ಪ್ರಭಾವವಿದೆ. ಏಜೆಂಟ್ ಆರೆಂಜ್‌ನಲ್ಲಿನ ರಸಾಯನಿಕ ಅಂಶವಾದ ಡೈ ಆಕ್ಸಿನ್ ಮಕ್ಕಳ ಮೆದುಳು ತೊಂದರೆಗೊಳಗಾಗುವ, ಕ್ಯಾನ್ಸರ್‌ಗೆ ಕಾರಕ ಈ ಔಷಧ ಪ್ರಯೋಗ ಮಾಡಿದ ಪ್ರಾಂತಗಳಲ್ಲಿನ ಮಕ್ಕಳಲ್ಲಿ ಅವಯವ ಲೋಪಗಳು ಅಧಿಕವಾಗಿರಲು ಈ ವಿಷ ಕಾರಣವೆಂದು ಒಂದು ಅಧ್ಯಯನ ಬೆಳಕಿಗೆ ತಂದಿತು.

ರಸಾಯನಿಕ ಆಯುಧಗಳಲ್ಲೂ ಸಹ ಅಮೇರಿಕಾ ತಲೆಹಾಕುವಲ್ಲಿ (ಮುಖ್ಯವಾಗಿ ಪೌರರನ್ನು ಗುರಿಯಾಗಿಟ್ಟುಕೊಂಡು) ವಿಯತ್ನಾಂ ಮೇಲೆ ಹಾಕಿದ ಬಾಂಬುಗಳು ಒಟ್ಟು ಭಾರ ಎರಡನೇ ಪ್ರಪಂಚ ಯುದ್ಧಕಾಲದಲ್ಲಿನ ಮೊತ್ತಕ್ಕಿಂತಲೂ ಹೆಚ್ಚು

ಯುದ್ಧಕ್ಕಿಳಿದ ಅಮೇರಿಕಾ (The Entry of the US into the War)

ಉತ್ತರ ವಿಯತ್ನಾಂದಲ್ಲಿನ ಹೊಚಿಮಿನ್ ಸರ್ಕಾರ ಸಹಾಯದಿಂದ ದೇಶವನ್ನು ಹೊಂದಾಗಿಸಲು ಎನ್.ಎಲ್.ಎಫ್ ಹೋರಾಡತೊಡಗಿದರು. ಈ ಪರಿಣಾಮದಿಂದ ಅಮೇರಿಕಾ ಭಯಪಡತೊಡಗಿತು. ಕಮ್ಯುನಿಸ್ಟರ ಪ್ರಾಬಲ್ಯ ಹೆಚ್ಚಾಗುತ್ತದೆಂಬ ಆಂದೋಳನೆಯಲ್ಲಿ ಸೈನ್ಯವನ್ನು, ಆಯುಧಗಳನ್ನು ಉತ್ತರ ವಿಯತ್ನಾಂಗೆ ಕಳುಹಿಸಿ ಅದು ಪ್ರತ್ಯಕ್ಷವಾಗಿ ಮಧ್ಯಪ್ರವೇಶಿಸಲು ನಿರ್ಣಯಿಸಿಕೊಂಡಿತು.

ಯುದ್ಧದಲ್ಲಿ ಅಮೇರಿಕಾ ತಲೆಹಾಕಿದ್ದರಿಂದ ವಿಯತ್ನಾಮಿಯರಿಗೆ ಮಾತ್ರವಲ್ಲದೆ ಅಮೇರಿಕಾಕ್ಕೆ ಕೂಡ ಬಹಳ ಭಾರವಾಗಿ ಪರಿಣಮಿಸಿತು. 1965 ರಿಂದ 1972 ಮಧ್ಯ ಕಾಲದಲ್ಲಿ ವಿಯತ್ನಾಂ ಯುದ್ಧದಲ್ಲಿ 34,00,000 ಅಮೇರಿಕಾ ಸೈನಿಕರು ಭಾಗವಹಿಸಿದರು. ಅಮೇರಿಕಾ ಹತ್ತಿರ ಆಧುನಿಕ ತಾಂತ್ರಿಕತೆ, ಉತ್ತಮ ವೈದ್ಯಕೀಯ ಸೌಲಭ್ಯಗಳಿದ್ದರೂ ಸೈನಿಕರ ಮರಣಗಳು ಹೆಚ್ಚಾಗಿಯೇ ಇದ್ದವು. ಈ ಯುದ್ಧ ಕಾಲದಲ್ಲಿ ಒಟ್ಟು 47,244 ಜನ ಸೈನಿಕರು ಮರಣ ಹೊಂದಿದರು, 3,03,704 ಜನ ಗಾಯಗೊಂಡರು. (ಹೀಗೆ ಗಾಯಗೊಂಡವರಲ್ಲಿ 23,014 ಜನ 100%ರಷ್ಟು ಅಂಗವಿಕಲರೆಂದು ವೆಟೆರನ್ಸ್ ಅಡ್ಮಿನಿಸ್ಟ್ರೇಷನ್ ತಿಳಿಸಿತು.)

ಅಮೇರಿಕಾಯೊಂದಿಗೆ ನಡೆದ ಈ ಯುದ್ಧ ಬಹಳ ಭಯಂಕರವಾದದ್ದು. ಸಾವಿರಾರು

ಚಿತ್ರ 13.6 : (ಅ) ಅಡವಿಗಳ ಮೇಲೆ ವಿಷ ರಸಾಯನಗಳನ್ನು ಚಲ್ಲುತ್ತಿರುವ ಅಮೇರಿಕಾ ಯುದ್ಧ ವಿಮಾನಗಳು, (ಆ) ಈ ಗೊಂಬೆಗೆ ನಿಜವಾದ ವ್ಯಾಖ್ಯೆ ಪ್ರತಿಯೊಂದಕ್ಕೂ ಒಂದು ಉಪಯೋಗು ಈ ಚಿತ್ರವನ್ನು ಒಬ್ಬ ಹುಡುಗಿ ಡ್ರಮ್ಮನ್ನು ಉರುಳಿಸುತ್ತಾ ಹೋಗುತ್ತಿದೆ ಈ ಲೋಹವನ್ನು ಚಿಕ್ಕ ಡಬ್ಬಾಗಳು, ಸಲಾಕೆಗಳನ್ನು ತಯಾರು ಮಾಡಲು ಉಪಯೋಗಿಸುತ್ತಾರೆ

SCERT TELANGANA

ಅಮೇರಿಕಾ ಸೈನಿಕರು ಶಕ್ತಿಯುತವಾದ ಆಯುಧ ಗಳು, ಯುದ್ಧ ಟ್ಯಾಂಕುಗಳಿಂದ ಬರುತ್ತಿದ್ದರು. ಅವರಿಗೆ ಬೆಂಬಲವಾಗಿ ಆಗಿನ ಅತ್ಯಂತ ಶಕ್ತಿಯುತ ವಾದ ವೈಮಾನಿಕ ಬಾಂಬರು ಗಳಾದ ಬಿ52 ವಿಮಾನ ಗಳಿದ್ದವು. ದೊಡ್ಡ ಪ್ರಮಾಣ ದಲ್ಲಿ ನಡೆದ ದಾಳಿ, ರಸಾಯನಿಕ ಆಯುಧಗಳ ವಿನಿಯೋಗದಿಂದ - ನಾಪಾಲ (ಮನುಷ್ಯರಿಗೆ ತೀವ್ರ ನಷ್ಟವನ್ನುಂಟು ಮಾಡುವ ಪ್ರಮಾದಕರವಾದ ಬಾಂಬು), ಏಜೆಂಟ್ ಆರೆಂಜ್ (ಇದು ಮರ, ಗಿಡಸಸ್ಯಗಳನ್ನು ನಾಶಗೊಳಿಸಿ ಭೂಮಿಯನ್ನು ಬಹಳ ವರ್ಷಗಳವರೆಗೆ ಬೀಳನ್ನಾಗಿ ಬದಲಾಯಿಸಿತು), ಭಾಸ್ವರ (ಪಾಸ್ಫರಸ್) ಬಾಂಬುಗಳಿಂದ ಅನೇಕ ಗ್ರಾಮಗಳು ವಿಧ್ವಂಸಕ್ಕೊಳಗಾದವು, ಅಡವಿಗಳು ನಾಶವಾದವು. ದೊಡ್ಡ ಪ್ರಮಾಣದಲ್ಲಿ ಪ್ರಜೆಗಳು ಮರಣ ಹೊಂದಿದರು.

ಈ ಪ್ರತಿಭಟನೆಗೆ ಮನೆ, ಕುಟುಂಬಗಳನ್ನು ತ್ಯಾಗ ಮಾಡಲು, ದಾರುಣ ಪರಿಸ್ಥಿತಿಯಲ್ಲಿ ಜೀವಿಸಲು, ಸ್ವತಂತ್ರ್ಯಕ್ಕಾಗಿ ಹೋರಾಡಲು ಅನುಕೂಲವಾಗಿ ಪ್ರಜೆಗಳಿಗೆ ರಾಷ್ಟ್ರೀಯ ಭಾವನೆ ನೀಡುವ ಪ್ರೇರಣೆಯನ್ನು ಅಮೇರಿಕಾ ಯೋಜನೆಗಾರರು ಕಡಿಮೆ ಅಂದಾಜು ಮಾಡಿದರು. ಪ್ರಪಂಚಕ್ಕೆಲ್ಲಾ ಅತ್ಯಂತ ಆಧುನಿಕ ತಾಂತ್ರಿಕ ವಿಜ್ಞಾನ ಇರುವ ಅಭಿವೃದ್ಧಿ ಹೊಂದಿದ ದೇಶವನ್ನು ಪ್ರತಿಭಟಿಸುವಲ್ಲಿ ಒಂದು ಸಣ್ಣ ದೇಶಕ್ಕೆ ಇರುವ ಶಕ್ತಿಯನ್ನು ಅಂದಾಜು ಮಾಡುವಲ್ಲಿ ಅವರು ತಪ್ಪಿದರು. ಜಮೀನುದಾರರ ಕೈಯಲ್ಲಿ ತಲತಲಾಂತರಗಳಿಂದ ದೊಚುವಿಕೆಗೆ ಗುರಿಯಾಗಿ ಇತ್ತೀಚಿಗೆ ಸ್ವಲ್ಪ ಭೂಮಿಯನ್ನು ಹೊಂದಿದ ಲಕ್ಷಾಂತರ ಬಡ ರೈತವರ್ಗ ನಿಜಾಯಿತಿಯನ್ನು ಅವರು ಕಡಿಮೆ ಅಂದಾಜು ಮಾಡಿದರು. ರಾಷ್ಟ್ರೀಯ ಭಾವನೆಯಿಂದ ಪ್ರೇರಣೆ ಪಡೆದು, ಭೂ ಸುಧಾರಣೆಗಳಲ್ಲಿ ಉತ್ಸಾಹ ಹೊಂದಿದ ಈ ಬಡ ರೈತವರ್ಗ ಪ್ರಪಂಚದಲ್ಲೇ ಉತ್ತಮ ಸೈನ್ಯವನ್ನು ಸೋಲಿಸುವಲ್ಲಿ ಮುಖ್ಯ ಪಾತ್ರವಹಿಸಿತು.

- ಪೌರರ ಮೇಲೆ, ಅಡವಿಗಳ ಮೇಲೆ ನನ್ನ ಪಾಲು ಏಜೆಂಟ್ ಆರೆಂಜ್‌ನಂತಹ ರಸಾಯನಿಕ ಆಯುಧ ಗಳನ್ನು ಅಮೇರಿಕಾ ಉಪಯೋಗಿಸುವುದು ಸರಿಯೇನಾ ?
- ಅಮೇರಿಕಾದಂತಹ ಬಲವಾದ ದೇಶವನ್ನು ವಿಯತ್ನಾಂನಂತಹ ಚಿಕ್ಕ ದೇಶ ಹೇಗೆ ಎದುರಿಸಿತು?
- ವಿಯತ್ನಾಂದಿಂದ ಅಮೇರಿಕಾ ಸರ್ಕಾರ ಹಿಂಜರಿಯುವಲ್ಲಿ ಆ ದೇಶದಲ್ಲಿನ ಶಾಂತಿ ಚಳುವಳಿಯ ಪಾತ್ರವೇನು ?

ಈ ಯುದ್ಧ ಪ್ರಭಾವ ಅಮೇರಿಕಾದ ಮೇಲೆ ಸಹ ಬೀರಿತು. ತನಗೆ ಸಂಬಂಧವಿಲ್ಲದ ಯುದ್ಧದಲ್ಲಿ ತಲೆಹಾಕಿದ್ದರಿಂದ ಸರ್ಕಾರ ವನ್ನು ಬಹಳ ಜನ ವಿಮರ್ಶಿಸಿದರು. ಯುದ್ಧಕ್ಕಾಗಿ ಯುವಕರನ್ನು ಸೈನ್ಯಕ್ಕೆ ತೆಗೆದುಕೊಳ್ಳುವುದರಿಂದ ಅಲ್ಲಿ ವಿರೋಧತೆ ಇನ್ನೂ ಹೆಚ್ಚಾಯಿತು. ಯುದ್ಧ ದೀರ್ಘಕಾಲ ಮುಂದುವರೆದರಿಂದ ಅಮೇರಿಕಾದಲ್ಲಿ ಅದರ ಕಡೆ ಬಲವಾದ ವಿರೋಧ ಪ್ರತಿಭಟನೆಗಳು ತಲೆಎತ್ತಿದ್ದವು. ಸರ್ಕಾರದ ವಿಧಾನವನ್ನು ಪ್ರಶ್ನಿಸಿದ್ದರಿಂದ ಅಂತಿಮ ವಾಗಿ ಯುದ್ಧ ಮುಕ್ತಾಯ ರಾಯಭಾರವನ್ನು ಕೈಗೊಳ್ಳುವಂತೆ ಮಾಡಿತು. 1974 ಜನವರಿಯಲ್ಲಿ ಪ್ಯಾರಿಸ್‌ನಲ್ಲಿ ಶಾಂತಿ ಒಪ್ಪಂದದ ಮೇಲೆ ಸಹಿ ಹಾಕಿದರು. ಇದರಿಂದ ಅಮೇರಿಕಾ ದೊಂದಿಗೆ ಯುದ್ಧ ಮುಗಿಯಿತು. ಆದರೆ ಸೈಗಾನ್ ಸರ್ಕಾರ, ಎನ್‌ಎಲ್‌ಎಫ್ ಮಧ್ಯ ಘರ್ಷಣೆ ಇನ್ನೂ ಮುಂದುವರೆಯಿತು. 1975 ಏಪ್ರೀಲ್ 30ರ ರಾಷ್ಟ್ರೀಯ ವಿಮುಕ್ತಿ ಒಕ್ಕೂಟ (ಎನ್‌ಎಲ್‌ಎಫ್) ಸೈಗಾದಲ್ಲಿನ ಅಧ್ಯಕ್ಷ ಭವನವನ್ನು ಸ್ವಾಧೀನ ಪಡೆದುಕೊಂಡು ಅಂತಿಮವಾಗಿ ವಿಯತ್ನಾಂರನ್ನು ಒಂದುಗೂಡಿಸಿದರು.

ಚಿತ್ರ 3 : ನೈಜೀರಿಯಾ ನಕ್ಷೆ



ನೈಜೀರಿಯಾ : ವಸಾಹತು ಆಳ್ವಿಕೆದಾರರಿಗೆ ವಿರುದ್ಧವಾಗಿ ಹೊಂದಾಗುವುದು :

(Nigeria : forming unity against the colonisers) :

ಈಗ ಆಫ್ರಿಕಾದಲ್ಲಿನ ವಸಾಹತು ಆಳ್ವಿಕೆ, ರಾಷ್ಟ್ರೀಯ ಭಾವನೆ ಕುರಿತು ತಿಳಿದುಕೊಳ್ಳಲು ಆ ಖಂಡದ ಪಶ್ಚಿಮ ತೀರದಲ್ಲಿರುವ ನೈಜೀರಿಯಾವನ್ನು ಅಧ್ಯಯನ ಮಾಡೋಣ. ಈ ದೇಶವನ್ನು ನಕ್ಷೆಯಲ್ಲಿ ಗುರ್ತಿಸಿರಿ. ಈ ದೇಶ ಕುರಿತು 8ನೇ ತರಗತಿಯಲ್ಲಿ ಓದಿದ್ದನ್ನು ನೆನಪಿಗೆ ತಂದುಕೊಳ್ಳಿ.

SCERT TELANGANA

ಬ್ರಿಟೀಷ್ ವಸಾಹತು ಆಳ್ವಿಕೆ, ಒಂದು ರಾಷ್ಟ್ರದ ಏರ್ಪಾಟು:
(British colonialism and the making of a Nation) :

ಪ್ರಪಂಚದಲ್ಲಿ ಉಳಿದ ಪ್ರಾಂತದ ರೀತಿಯಲ್ಲೇ ಆಫ್ರಿಕಾದಲ್ಲಿ ಕೂಡ ರಾಷ್ಟ್ರೀಯ ರಾಜ್ಯಗಳು ಎನ್ನುವ ಭಾವನೆ ಹೊಸದು. ಕ್ರಮೇಣ ಗಿರಿಜನ ಬುಡಕಟ್ಟು ಜನಾಂಗದ ಅನನ್ಯತೆ, ಸಾಧಾರಣವಾಗಿ ಪ್ರಜೆಗಳನ್ನು ಒಂದಾಗಿಸುತಿತ್ತು. ವಸಾಹತು ಆಳ್ವಿಕೆದಾರರು ಕೆಲವು ಪ್ರಾಂತಗಳನ್ನು ಇಷ್ಟಾನುಸಾರ ತಮ್ಮ ನಿಯಂತ್ರಣಕ್ಕೆ ಒಳಪಡಿಸಿದರು. ಪ್ರಸ್ತುತ ನೈಜರಿಯಾವಾಗಿ ನಮಗೆ ತಿಳಿದ ದೇಶವನ್ನು ಬ್ರಿಟಿಷರು ಏರ್ಪಾಡಿಸಿದರು. ನೈಜರ್ ನದಿ ವ್ಯವಸ್ಥೆಕೆಳಗೆ ವಿವಿಧ ಬುಡಕಟ್ಟು ಜನಾಂಗ ಇರುವ ಬೇರೆ ಬೇರೆ ಪ್ರಾಂತಗಳನ್ನು ಒಗ್ಗೂಡಿಸುವ ಮೂಲಕ ಇದನ್ನು ಏರ್ಪಾಡಿಸಿದರು. ಉತ್ತರ ನೈಜಿರಿಯಾದಲ್ಲಿ ಹೌಸಾ - ಫುಲಾನಿ ಪ್ರಜೆಗಳು ಅಧಿಕ ವಾಗಿದ್ದರು. ಇವರು ಮುಖ್ಯವಾಗಿ ಮುಸ್ಲಿಂರು, ಆಗ್ನೆಯ ನೈಜೀರಿಯಾದಲ್ಲಿ ಈಬೊ ಬುಡಕಟ್ಟು, ನೈರುತ್ಯ ಭಾಗದಲ್ಲಿ ಯೆರುಬಾ ಬುಡಕಟ್ಟು ಪ್ರಜೆಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಅನೇಕ ವರ್ಷಗಳ ಮಿಷನರೀಗಳ ಪ್ರಚಾರದ ಕಾರಣದಿಂದಾಗಿ ದಕ್ಷಿಣ ಪ್ರಾಂತಗಳಲ್ಲಿ ಕ್ರೈಸ್ತ ಮತಸ್ಥರು ಅಧಿಕ ಸಂಖ್ಯೆಯಲ್ಲಿದ್ದಾರೆ. ಆದರೂ ಗಿರಿಜನ ಧಾರ್ಮಿಕ ನಂಬಿಕೆ ಇದ್ದವರು ಕೂಡ ಹೆಚ್ಚಾಗಿದ್ದಾರೆ. ಈ ಮೂರು ಪ್ರಾಂತಗಳ ಮಧ್ಯ ಘರ್ಷಣೆಗಳು, ಸಾರ್ವಜನಿಕ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ಏರ್ಪಾಡಿಸಬೇಕೆಂಬ ಪ್ರಯತ್ನಗಳಿಂದ ಆಧುನಿಕ ನೈಜೀರಿಯಾ ಕಥೆ ತುಂಬಿದೆ. ಆ ದೇಶ ಸಹಜ ಸಂಪನ್ಮೂಲಗಳ ಮೇಲೆ, ಪ್ರತ್ಯೇಕವಾಗಿ ತೈಲದ ಮೇಲೆ ಯೂರೋಪು ನಿಯಂತ್ರಣದಿಂದ ವಸಾಹತು ಆಳ್ವಿಕೆ ವಂಶಪಾರಂಪರ್ಯವು ಇನ್ನೂ ಮುಂದುವರಿಯುತ್ತಲೇ ಇದೆ.

ಆಫ್ರಿಕಾದಲ್ಲಿ ಅಧಿಕ ಜನಸಾಂದ್ರತೆಯ ದೇಶಗಳಲ್ಲಿ ನೈಜರ್‌ನದಿ ಪ್ರಾಂತ ಒಂದಾಗಿದೆ. ಇದು ಅನೇಕ ವಿಧವಾದ ವಸಾಹತು ಆಳ್ವಿಕೆಯಿಂದ ದೋಚುವಿಕೆಗೆ ಒಳಗಾಯಿತು. 16ನೇ ಶತಮಾನದಿಂದ ಅಮೇರಿಕಾಗೆ ಗುಲಾಮರನ್ನು ಸರಬರಾಜು ಮಾಡುವಲ್ಲಿ ಇದು ಪ್ರಧಾನ ಕೇಂದ್ರವಾಗಿತ್ತು. ಆಫ್ರಿಕಾ ಒಳಗಿನಿಂದ ರೈತವರ್ಗ ಬುಡಕಟ್ಟು ಜನರನ್ನು ಹಿಡಿದು ಯೂರೋಪ್ ಗುಲಾಮ ವ್ಯಾಪಾರಸ್ಥರಿಗೆ ಮಾರುತ್ತಿದ್ದರು. 19ನೇ ಶತಮಾನದ ಗುಲಾಮಗಿರಿ ವ್ಯಾಪಾರವನ್ನು ನಿಷೇಧಿಸಿದ್ದರಿಂದ ಈ ಪ್ರಾಂತದಲ್ಲಿನ ವ್ಯವಸಾಯ ಉತ್ಪತ್ತಿಗಳು, ಪ್ರತ್ಯೇಕವಾಗಿ ಕೊಕೊ, ಪಾಮಾಯಿಲ್ ಕಡೆ ವಸಾಹತು ಆಳ್ವಿಕೆದಾರರ ಆಸಕ್ತಿ ಹೆಚ್ಚಾಯಿತು. ತೀರ ಪ್ರಾಂತಗಳ ಮೇಲೆ 1861ರಲ್ಲಿ ಬ್ರಿಟನ್ ತನ್ನ ಆಳ್ವಿಕೆಯನ್ನು ಏರ್ಪಾಡಿಸಿತು. ಪಶ್ಚಿಮ ಆಫ್ರಿಕಾದಲ್ಲಿನ ಲಾಗೊಸ್‌ನ್ನು ವಿದ್ಯೆ, ವ್ಯಾಪಾರ, ಪರಿಪಾಲನೆಗೆ ಪ್ರಧಾನ ಕೇಂದ್ರವಾಗಿ ರೂಪಿಸಿತು. ಅದು ವಸಾಹತು ಆಳ್ವಿಕೆ ಮೇಲೆ ವಿರೋಧತೆಗೆ, ನೈಜೀರಿಯಾ ರಾಷ್ಟ್ರೀಯವಾದಕ್ಕೆ, ಖಂಡಾಂತರ ಆಫ್ರಿಕಾವಾದಕ್ಕೆ ಕೂಡ ಕೇಂದ್ರವಾಗಿದೆ.

19ನೇ ಶತಮಾನದ ಕೊನೆ, 20ನೇ ಶತಮಾನದ ಆರಂಭದಲ್ಲಿ ಬ್ರಿಟೀಷ್ ಆಳ್ವಿಕೆ ಸಾಮ್ರಾಜ್ಯದಲ್ಲಿ ಜನಾಂಗೀಯ ಅಹಂಕಾರ ಪುನಃ ಘರ್ಷಣೆಗೆ ದಾರಿ ಮಾಡಿಕೊಂಡಿತು. ವಿದ್ಯಾವಂತರಾದ ಆಫ್ರಿಕಾ ನಿವಾಸಿಗಳನ್ನು ಸಿವಿಲ್ ಸೇವೆಗಳಿಗೆ ಅನುಮತಿಸಲಿಲ್ಲ. ಆಫ್ರಿಕಾ ವ್ಯಾಪಾರಸ್ಥರ ಬಗ್ಗೆ ಬೇಧಭಾವ ತೋರಿಸುತ್ತಿದ್ದರು. ಇದೇ ಸಮಯದಲ್ಲಿ ಪ್ರಜೆಗಳ ಮೇಲೆ ಮತ್ತಷ್ಟು ನಿಯಂತ್ರಣವನ್ನು ಸಾಧಿಸಲು ಅನುಕೂಲವಾಗಿ ಗಿರಿಜನ ಬುಡಕಟ್ಟು ನಾಯಕರು, ಶ್ರೀಮಂತರೊಂದಿಗೆ ಸಂಬಂಧಗಳನ್ನು ಬೆಳೆಸಿಕೊಂಡರು.

ವಸಾಹತು ಆಳ್ವಿಕೆ ವಿಧಾನಗಳಿಂದ ದಕ್ಷಿಣ ಪ್ರಾಂತಗಳಲ್ಲಿ ಆಧುನಿಕ ಶಿಕ್ಷಣಕ್ಕೆ, ಪರಿಪಾಲನಾ ಆಧುನೀಕರಣಕ್ಕೆ ಪ್ರೋತ್ಸಾಹ ದೊರೆತರೆ ಉತ್ತರ ಪ್ರಾಂತದಲ್ಲಿ ಪ್ರಾಚೀನ ಸಂಪ್ರದಾಯಗಳು ಮುಂದುವರೆದವು. ಪ್ರತಿಫಲವಾಗಿ 20ನೇ ಶತಮಾನ ಕೊನೆಗೆ ಪ್ರಾಂತೀಯ ಅಸಮಾನತೆಗಳು ಹೆಚ್ಚಾದವು. ಉತ್ತರ ಪ್ರಾಂತ ಆಧುನಿಕ ವಿದ್ಯೆಯನ್ನು ಪಡೆದ ಸಾಮಾಜಿಕ ವರ್ಗವನ್ನು ಏರ್ಪಾಡಿಸಿಕೊಳ್ಳಲಾಗಲಿಲ್ಲ. 1939ರಲ್ಲಿ ಬ್ರಿಟೀಷರು ಪಶ್ಚಿಮ, ಪೂರ್ವ ನೈಜೀರಿಯಾ ಪ್ರಾಂತಗಳನ್ನು ಏರ್ಪಾಡಿಸಿ ಯೆರಬಾ, ಈಬು ಜನಾಂಗಗಳ ಮಧ್ಯ ಕೂಡ ವಿಭಜನೆಯನ್ನು ಸೃಷ್ಟಿಸಿದರು. ಆ ವಿಧವಾಗ್ಗಿ ವಿಭಜಿಸಿ,

ಖಂಡಾಂತರ ಆಫ್ರಿಕಾವಾದ (Pan Africanism)

ದೇಶ, ಜನಾಂಗ ಬೇಧಭಾವ ಇಲ್ಲದೆ ಆಫ್ರಿಕಾ ಪ್ರಜೆಗಳನ್ನೆಲ್ಲಾ ಹೊಂದಾಗಿಸಲು ಖಂಡಾಂತರ ಆಫ್ರಿಕಾವಾದ ಪ್ರಯತ್ನಿಸುತ್ತದೆ. ಈ ದೃಷ್ಟಿಯಲ್ಲಿ ವಸಾಹತು ಆಳ್ವಿಕೆಯನ್ನು, ಜನಾಂಗೀಯ ಬೇಧಭಾವ ವನ್ನು ವಿರೋಧಿಸುವುದು ಮಾತ್ರವಲ್ಲದೆ ಸಮಾನತೆ, ಸಾಮಾಜಿಕ ನ್ಯಾಯ, ಮಾನವ ಗೌರವ ಎನ್ನುವ ಸೂತ್ರಗಳ ಆಧಾರವಾಗಿ ಆಫ್ರಿಕಾ ಖಂಡದಲ್ಲಿ, ಎಲ್ಲಾ ಜನಾಂಗ ಪ್ರಜೆಗಳ ಸಮೂಹಗಳ ಮಧ್ಯ ಐಕ್ಯತೆ ಸಾಧಿಸುವುದಕ್ಕೆ ಪ್ರಯತ್ನಿಸಿತು. ಘನಾ ಸ್ವಾತಂತ್ರ್ಯ ಯೋಧನಾದ ಕ್ವಾಮೆನ್‌ಕ್ರೂಮಾ ಇದರಲ್ಲಿ ಪ್ರಮುಖ ಪಾತ್ರವಹಿಸಿದನು.

SCERT TELANGANA

ಪಾಲಿಸು ಎನ್ನುವ ಸಿದ್ಧಾಂತಕ್ಕೆ ಅನುಗುಣವಾಗಿ ಮೂರು ಪ್ರಧಾನ ಗಿರಿಜನ ಜನಾಂಗಗಳ ಮಧ್ಯ ಪೈಪೋಟಿ, ಘರ್ಷಣೆಯನ್ನು ಪ್ರೋತ್ಸಾಹಿಸಿದರು.

ಇದನ್ನು ವಿರೋಧಿಸಿ ಪಾಶ್ಚಿಮಾತ್ಯ ಶಿಕ್ಷಣ ಪಡೆದ ಕೆಲವು ಜನ ಮೇಧಾವಿಗಳು ಸಾಮೂಹಿಕ ನೈಜೀರಿಯಾ ದೇಶ ಎನ್ನುವ ಭಾವನೆಯನ್ನು ಮೂಡಿಸಿ ಬ್ರಿಟೀಷ್‌ರಿಗೆ ವಿರುದ್ಧ ವಾಗಿ ಹೋರಾಡತೊಡಗಿದರು. ನೈಜಿರಿಯಾದಲ್ಲಿ ಮೊದಲ ರಾಜಕೀಯ ಪಕ್ಷವಾದ ನೈಜೀರಿಯಾ ರಾಷ್ಟ್ರೀಯ ಪ್ರಜಾಪ್ರಭುತ್ವ ಪಕ್ಷ(ಎನ್.ಎನ್.ಡಿ.ಪಿ)ನ್ನು1923ರಲ್ಲಿ ಹೆರ್ಬರ್ಟ್ ಮೆಕಾಲೆ ಸ್ಥಾಪಿಸಿದನು. 1923, 1928, 1933ರಲ್ಲಿ ನಡೆದ ಚುನಾವಣೆಯಲ್ಲಿ ಎನ್.ಎನ್‌ಡಿ.ಪಿ. ಎಲ್ಲಾ ಸ್ಥಾನಗಳನ್ನು ಗೆದ್ದಿತು. 1930ರಲ್ಲಿ ಬ್ರಿಟೀಷ್ ವಸಾಹತು ಸರ್ಕಾರದ ಮೇಲೆ ತೀರ್ವವಾದ ದಾಳಿಗಳನ್ನು ಕೂಡ ಮೆಕಾಲೆ ಸಮರ್ಥಿಸಿದನು. 1936ರಲ್ಲಿ ಎನ್ ನಂದಿ ಅಜಿಕಿವೆ ಎನ್ನುವ ವ್ಯಕ್ತಿ ನೈಜಿರಿಯಾ ಯುವ ಚಳುವಳಿಯನ್ನು (ಎನ್.ವೈ.ಎಂ) ಸ್ಥಾಪಿಸಿದನು. ಸಾಂಸ್ಕೃತಿಕ ಹಿನ್ನಲೆ ಸಂಬಂಧವಿಲ್ಲದಂತೆ ನೈಜಿರಿಯಾ ಪ್ರಜೆಗಳನ್ನೆಲ್ಲಾ ಅದು ಆಕರ್ಷಿಸಿಸುತ್ತಾ ಕ್ರಮೇಣ ಅದು ಬಲವಾದ ರಾಜಕೀಯ ಕ್ರಾಂತಿಯಾಗಿ ಬೆಳೆಯಿತು. 1944ರಲ್ಲಿ ಮೆಕಾಲೇ, ಎನ್.ವೈ.ಎಂ ನಾಯಕನು ಎನ್ ನಂದಿ ಅಜಿಕಿವೆ ಸೇರಿ ನೈಜಿರಿಯಾ, ಕಾಮೆರೂನ್‌ನ ರಾಷ್ಟ್ರೀಯ ಸಂಘವನ್ನು (ಎನ್‌ಸಿಎನ್‌ಸಿ) ಏರ್ಪಡಿಸಲು ಅಂಗೀಕಾರಕ್ಕೆ ಬಂದರು. ಕ್ರಮೇಣ ಎನ್ ನಂದಿ ಅಜಿಕಿವೆ ಪ್ರಮುಖ ರಾಷ್ಟ್ರೀಯ ನಾಯಕನಾಗಿ ಬೆಳೆದನು. ಖಂಡಾಂತರ ಆಫ್ರಿಕಾವಾದ, ಖಂಡಾಂತರ ನೈಜೀರಿಯಾವಾದ ಆಧಾರಿತ ರಾಷ್ಟ್ರೀಯ ಉದ್ಯಮಕ್ಕೆ ಆತನು ಬೆಂಬಲ ನೀಡಿದನು.

ಚಿತ್ರ 13.7: ಎನ್ ನಂದಿ

ಎರಡನೆಯ ಪ್ರಪಂಚ ಯುದ್ಧದ ನಂತರ ನೈಜಿರಿಯಾ ಆರ್ಥಿಕ ಪರಿಸ್ಥಿತಿ ಕಷ್ಟಗಳಿಗೆ ಗುರಿಯಾದ್ದರಿಂದ ನೈಜೀರಿಯಾ ರಾಷ್ಟ್ರೀಯವಾದ ತೀರ್ವವಾದ ಭಾವನೆಗಳಿಗೆ ಗುರಿಯಾಗಿ ಅದಕ್ಕೆ ಪ್ರಜೆಗಳ ಆದರಣೆ ಹೆಚ್ಚಾಗಿ ಬಲ ಹೆಚ್ಚಾಗತೊಡಗಿತು. ಎರಡನೇ ಪ್ರಪಂಚ ಯುದ್ಧದಲ್ಲಿ ಬ್ರಿಟನ್ ಪರವಾಗಿ ಹೋರಾಡಿ ಪುನಃ ಬಂದ ಸೈನಿಕರು, ಕಾರ್ಮಿಕರ ಸಂಘ ನಾಯಕರು ಈ ಉದ್ಯಮಕ್ಕೆ ಬೆನ್ನೆಲುಬಾಗಿ ನಿಂತರು. 1945ರಲ್ಲಿ ಅತಿವಾದ ರಾಷ್ಟ್ರೀಯವಾದ ಕಾರ್ಮಿಕ ಸಂಘ ನಾಯಕರ ನೇತೃತ್ವದಲ್ಲಿ ರಾಷ್ಟ್ರೀಯ ಸಾಮಾನ್ಯ ಮುಷ್ಕರ ನಿರ್ವಹಿಸಿದರು.

- ರಾಷ್ಟ್ರೀಯತವಾದಕ್ಕೆ, ಖಂಡಾಂತರ ಆಫ್ರಿಕಾ ಭಾವನೆಗೆ ಮಧ್ಯ ವ್ಯತ್ಯಾಸಗಳು ಏನು ಚರ್ಚಿಸಿರಿ? ರಾಷ್ಟ್ರೀಯವಾದ ಎನ್ನುವುದು ಪರಿಮಿತವಾದ ಭಾವನೆಯಾ ?
- ಒಂದು ಶತಮಾನಗಳ ಕಾಲ ವಸಾಹತು ಆಳ್ವಿಕೆ ಪ್ರಾಂತಗಳ ಮಧ್ಯ ಅಸಮಾನತೆಗಳು ನೆಲೆಗೊಂಡಿವು. ಭಾರತ ದೇಶದಲ್ಲಿ ಕೂಡ ಬ್ರಿಟೀಷ್ ಆಳ್ವಿಕೆಯಲ್ಲಿ ಕರಾವಳಿ ಪ್ರಾಂತಗಳಾದ ಬೆಂಗಾಲು, ಮದ್ರಾಸು, ಬೊಂಬಾಯಿಯಂತಹವು ವೇಗವಾಗಿ ಅಭಿವೃದ್ಧಿ ಯಾದವು. ಅಭಿವೃದ್ಧಿಯಲ್ಲಿ ಹೀಗೆ ಅಸಮಾನತೆಗಳು ಏಕೆ ದಾರಿಮಾಡಿಕೊಂಡವು ?

ನೈಜೀರಿಯಾ ರಾಷ್ಟ್ರೀಯವಾದ ಮುಂದೆ ಎರಡು ಕರ್ತವ್ಯಗಳಿವೆ. ಬ್ರಿಟೀಷ್ ಆಳ್ವಿಕೆದಾರರಿಗೆ ವಿರುದ್ಧವಾಗಿ ಹೋರಾಡುವುದು, ಘರ್ಷಣೆಗೊಳಗಾಗುತ್ತಿರುವ ವಿವಿಧ ಬುಡಕಟ್ಟು ಜನಾಂಗಗಳ ಮಧ್ಯ ಐಕ್ಯತೆಯನ್ನು ಸಾಧಿಸುವುದು. ಉತ್ತರ ಪ್ರಾಂತಗಳಿಗಿಂತ ಬಹಳ ಅಭಿವೃದ್ಧಿ ಹೊಂದಿದ ದಕ್ಷಿಣ ಪ್ರಾಂತದಲ್ಲಿ ರಾಷ್ಟ್ರೀಯ ಚಳುವಳಿ ಬಹಳ ಶಕ್ತಿಯುತ ಇದ್ದರಿಂದ ಉತ್ತರ-ದಕ್ಷಿಣ ಪ್ರಾಂತಗಳ ಮಧ್ಯ ವ್ಯತ್ಯಾಸಗಳು ಮುಂದುವರೆದವು. ದಕ್ಷಿಣ ಪ್ರಾಂತಗಳಲ್ಲಿ ಕೂಡ ಯೆರುಬಾ, ಈಬೂ ಬುಡಕಟ್ಟುಗಳ ಮಧ್ಯ ಘರ್ಷಣೆಗಳು ರಾಷ್ಟ್ರೀಯ ಚಳುವಳಿಯನ್ನು ಪೀಡಿಸತೊಡಗಿದವು. 1950ರಲ್ಲಿಗೆ ಈ ಮೂರು ಪ್ರಾಂತಗಳಲ್ಲಿ ವಸಾಹತು ಆಳ್ವಿಕೆಯನ್ನು ವಿರೋಧಿಸುತ್ತಾ ಮೂರು ಪ್ರಾಂತೀಯ ಪಕ್ಷ ಗಳು ಏರ್ಪಟ್ಟವು. ಉತ್ತರ ಪ್ರಾಂತಗಳಲ್ಲಿ ಸಂಪ್ರದಾಯ ಭಾವನೆಯಿಂದ ಕೂಡಿದ ಉತ್ತರ ಪ್ರಜೆಗಳ ಕಾಂಗ್ರೆಸ್ ಬ (ಎನ್‌ಪಿಸಿ), ಪೂರ್ವ ಪ್ರಾಂತದಲ್ಲಿ ನೈಜೀರಿಯಾ, ಕೆಮರೂನ್ ರಾಷ್ಟ್ರೀಯ ಸಂಘು (ಎನ್‌ಸಿಎನ್‌ಸಿ), ಪಶ್ಚಿಮ ಪ್ರಾಂತಗಳಲ್ಲಿ ಯಾಕ್ಷನ್ ಗ್ರೂಪು (ಎಜಿ).

SCERT TELANGANA

ಸ್ವಾತಂತ್ರ್ಯ, ಬಲಹೀನ ಪ್ರಜಾಪ್ರಭುತ್ವ (Independence and weak democracy)

ಚಿತ್ರ 13.8: ಬೈಫಾರಿಯನ್ ಯುದ್ಧ

ರಾಷ್ಟ್ರೀಯ ಚಳುವಳಿ ತೀವ್ರತೆಯನ್ನು ಗುರ್ತಿಸಿದ ಬ್ರಿಟೀಷ್ ಆಳ್ವಿಕೆದಾರರು ನೈಜೀರಿಯಾನ್ನರಿಗೆ ಅಧಿಕಾರ ವನ್ನು ಒಪ್ಪಿಸಬೇಕೆಂದು ನಿರ್ಣಯಿಸಿಕೊಂಡರು. ಇದಕ್ಕೆ ಮೂರು ಪ್ರಧಾನ ಪ್ರಾಂತಗಳ ಸ್ವಾಯತ್ತತೆಯನ್ನು ಗುರ್ತಿಸುತ್ತಾ ಸಂಕ್ಲಿಷ್ಟ ಒಕ್ಕೂಟ ವ್ಯವಸ್ಥೆಯನ್ನು ಸ್ಥಾಪಿಸಿದರು. 1963 ಅಕ್ಟೋಬರ್ 1ರಂದು ನೈಜೀರಿಯಾ ಸ್ವತಂತ್ರ್ಯ ಪಡೆಯಿತು. ದುರದೃಷ್ಟವಶಾತ್ ಪ್ರಜಾಪ್ರಭುತ್ವ, ನ್ಯಾಯಪೂರಿತ ಸಮತೋಲನೆಯನ್ನು ಸಾಧಿಸಲಾರದೇ ಹೋಗಿದ್ದರಿಂದ ಅನತಿಕಾಲದಲ್ಲಿಯೇ ನೈಜೀರಿಯಾದಲ್ಲಿ ಪೌರಯುದ್ಧ ಪ್ರಾರಂಭಗೊಂಡಿತು. ಪ್ರತಿಫಲವಾಗಿ ಸೈನಿಕ ಆಳ್ವಿಕೆ ಏರ್ಪಟ್ಟಿತು. ಉತ್ತರ ಪ್ರಾಂತದ ಆಧಿಪತ್ಯ ಧೋರಣೆಯನ್ನು ಇದು ಮುಂದುವರೆಸಿತು. ಪೌರ, ಪ್ರಜಾಪ್ರಭುತ್ವ ಸರ್ಕಾರವನ್ನು ಏರ್ಪಡಿಸಲು ಬಹಳ ಪ್ರಯತ್ನಗಳು ನಡೆದವು. ಆದರೆ ಇವುಗಳೆಲ್ಲಾ ವಿಫಲತೆಯನ್ನು ಹೊಂದಿದವು. ಸೈನಿಕ ಆಳ್ವಿಕೆಯಲ್ಲಿ ಭ್ರಷ್ಟಚಾರ, ಮಾನವ ಹಕ್ಕುಗಳ ಉಲ್ಲಂಘನೆ ಮುಂದುವರೆದವು. ಭ್ರಷ್ಟಚಾರ ಆಳ್ವಿಕೆದಾರರಿಗೆ ಬೆಂಬಲ ನೀಡುವ ಬಹುಳಜಾತಿ ಎಣ್ಣೆಕಂಪನಿಗಳು, ಸೈನಿಕ ಸರ್ಕಾರಗಳು ಇದರಲ್ಲಿ ಭಾಗಿಗಳಾದವು.

ಸುದೀರ್ಘ ಸೈನಿಕ ನಿರಂಕುಶ ಆಳ್ವಿಕೆ ನಂತರ 1999ರಲ್ಲಿ ನೈಜೀರಿಯಾ ಪ್ರಜಾಪ್ರಭುತ್ವ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿತು. ಪ್ರಜಾಪ್ರಭುತ್ವ ನೈಜೀರಿಯಾವನ್ನು ನಿರ್ಮಿಸುವ ಸವಾಲುಗಳನ್ನು ಇದು ಹೇಗೆ ಎದುರಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ತೈಲ, ಪರಿಸರ, ರಾಜಕೀಯ (Oil, Environment and Politics) :

ಚಿತ್ರ 13.9: ಎಣ್ಣೆಯಿಂದ

ನೈಜರ್ ಡೆಲ್ಟಾದಲ್ಲಿ 1950ರಲ್ಲಿ ತೈಲವನ್ನು ಕಂಡು ಹಿಡಿದರು. ಈ ಎಣ್ಣೆಯನ್ನು ಹೊರತೆಗೆಯುವ ಹಕ್ಕುಗಳನ್ನು ಡಚ್ ಷೆಲ್ ಕಂಪನಿ ನೇತೃತ್ವದಲ್ಲಿ ವಿವಿಧ ಬಹುಳಜಾತಿ ಕಂಪನಿಗಳು ಪಡೆದಿದ್ದವು, ಪ್ರಸ್ತುತ ಇದು ನೈಜೀರಿಯಾಕ್ಕೆ ಮುಖ್ಯವಾದ ಸಂಪನ್ಮೂಲ. ತೈಲ ಬಾವಿಗಳಲ್ಲಿ ಅನೇಕ ಬಹುಳಜಾತಿ ಸಂಸ್ಥೆಗಳ ಅಧೀನದಲ್ಲಿವೆ. ಇವು ತೈಲವನ್ನು ಹೊರತೆಗೆದು ತಮ್ಮ ಲಾಭದಲ್ಲಿ ಸ್ವಲ್ಪ ಶೇಕಡವನ್ನು ಸೈನಿಕ ಆಳ್ವಿಕೆದಾರರೊಂದಿಗೆ ಹಂಚಿಕೊಂಡರು. ಸಾಮಾನ್ಯ ಪ್ರಜೆಗಳಿಗೆ ಇದರಿಂದ ಯಾವುದೇ ರೀತಿಯ ಪ್ರಯೋಜನ ಕೈಗೂಡಲಿಲ್ಲ. ಅಷ್ಟೇ ಮಾತ್ರವಲ್ಲ ವಿದೇಶಿ ತೈಲ ಕಂಪನಿಗಳು ಪರಿಸರವನ್ನು ಗಮನಿಸದೇ ಯಥೇಚ್ಛವಾಗಿ ತೈಲವನ್ನು ಹೊರ ತೆಗೆಯುವುದರಿಂದ ತೀರಪ್ರಾಂತ ವಾತಾವರಣದಲ್ಲಿ ಅನೇಕ ಸಮಸ್ಯೆಗಳು ತಲೆಎತ್ತಿದವು. ತೈಲ ಬಾವಿಗಳಿಂದ ಸಮುದ್ರ ನೀರಿನಲ್ಲಿ ಸೇರುವ ತೈಲದಿಂದ ಇಲ್ಲಿನ ಜೀವಾವರಣ ವ್ಯವಸ್ಥೆ ತೀವ್ರ ಪ್ರಭಾವಕ್ಕೊಳಗಾಯಿತು. ಪ್ರತ್ಯೇಕವಾಗಿ ಉಷ್ಣವಲಯದ ಅರಣ್ಯಗಳು ತೈಲ ತಡೆಯುವುದಿಲ್ಲ. ಈ ತೈಲ ನೆಲದೊಳಕ್ಕೆ ಇಂಗಿ ಪ್ರತಿ ವರ್ಷ ಮುಳುವಿಕೆಗೆ ಗುರಿಯಾದಾಗ ಮರಳಿ ನೀರಿನ ಮೇಲೆ ಬರುವುದರಿಂದ ಬಹಳ ವಿಸ್ತೀರ್ಣದಲ್ಲಿ ಉಷ್ಣವಲಯದ ಅರಣ್ಯಗಳು ಕಣ್ಮರೆ ಯಾಗಿವೆ. ನೈಜೀರಿಯಾದಲ್ಲಿನ ಉಷ್ಣವಲಯ ಅರಣ್ಯಗಳು ಜೀವಾವರಣ ವ್ಯವಸ್ಥೆಯಲ್ಲಿ 5ರಿಂದ10 ಶೇಕಡದವರೆಗೆ ಕಡಿದು ಹಾಕುವುದರಿಂದಾಗಲಿ, ತೈಲ ಚಿಲುಮೆಯಿಂದಾಗಲಿ ನಷ್ಟವಾಗಿವೆಂದು ಅಂದಾಜು ಮಾಡಲಾಗಿದೆ. ಈ ತೈಲದಿಂದ ಭೂಮಿ, ಭೂಗರ್ಭ ಜಲಗಳು ಕಲುಷಿತಗೊಂಡು ಬೆಳೆಗಳು, ಮೀನು ಸಾಕಾಣಿಕೆಯಂತಹವುಗಳು ತೊಂದರೆ ಗೊಳಗಾಗುತ್ತಿವೆ. ಕುಡಿಯುವ ನೀರು ಸಹ ಕ್ರಮೇಣ ಕಲುಷಿತವಾಗುತ್ತಿವೆ. ಸ್ಥಳೀಯ ನೀರಿನ ಮಡುಗುಗಳಲ್ಲಿ ತೇಲುವಾದ ತೈಲ ಜಿಡ್ಡು ಕಾಣಿಸುತ್ತಿರುತ್ತದೆ. ಕುಡಿಯುವ ನೀರು ಕಲುಷಿತ ಗೊಳ್ಳುವುದರಿಂದ ಆರೋಗ್ಯದ ಮೇಲೆ ತಕ್ಷಣ ಪ್ರಭಾವ ಕಾಣಿಸದಿದ್ದರೂ ದೀರ್ಘಕಾಲದಲ್ಲಿ ಕ್ಯಾನ್ಸರ್‌ನಂತಹ ಸಮಸ್ಯೆಗಳು ಉಂಟಾಗಬಹುದು. ಸಮುದ್ರ ಜಲಗಳಲ್ಲಿ ತೈಲ ಚಿಲುಮೆಗಳು ಬಹಳ ಹೆಚ್ಚಾಗಿದ್ದು, ತೀರ ಪ್ರಾಂತದ ಪರಿಸರ ಪ್ರಭಾವಕ್ಕೊಳಗಾಗಿ ಸ್ಥಳೀಯ ಮೀನು ಉತ್ಪತ್ತಿ ಕಡಿಮೆಯಾಗುತ್ತದೆ.

ಚಿತ್ರ 13.10: ಕೆನ್-ಸಾರೋ-ವಿವಾ

1990ರಲ್ಲಿ ಪ್ರತ್ಯೇಕವಾಗಿ ನೈಜರ್ ಡೆಲ್ಟಾ ಪ್ರಾಂತದಲ್ಲಿ ಪ್ರಜೆಗಳ ಆಂದೋಳನ ಕ್ರಮೇಣ ಹೆಚ್ಚಾಗತೊಡಗಿತು. ಸ್ಥಳೀಯ ಗಿರಿಜನ ಬುಡಕಟ್ಟು ಜನಾಂಗ ವರ್ಷಪೂರ್ತಿ ನಡೆದ ಜೀವಾವರಣ ನಷ್ಟಕ್ಕೆ ಪರಿಹಾರ ಒದಗಿಸಬೇಕೆಂದು, ತಮ್ಮ ಪ್ರಾಂತಗಳಲ್ಲಿನ ಎಣ್ಣೆ ಸಂಪನ್ಮೂಲಗಳ ಮೇಲೆ ತಮಗೆ ನಿಯಂತ್ರಣ ಬೇಕೆಂದು

SCERT KERALA

- ನೈಜೀರಿಯಾದಲ್ಲಿನ ಎಣ್ಣೆ ಸಂಪನ್ಮೂಲಗಳಲ್ಲಿ ಅಧಿಕ ಭಾಗ ಆಗ್ನೇಯ ಭಾಗದಲ್ಲಿವೆ. ಎಣ್ಣೆ ಲಾಭದಲ್ಲಿ ಅಧಿಕ ಭಾಗ ತಮಗೆ ಸೇರಬೇಕೆಂದು ಈಬೂಗಳು ಭಾವಿಸುತ್ತಾರೆ. ಎಣ್ಣೆ ಸಂಪಾದನೆಯಲ್ಲಿ ಉತ್ತರ ಪ್ರಾಂತವನ್ನು ಅಭಿವೃದ್ಧಿಗೊಳಿಸುವುದನ್ನು ಅವರು ವಿರೋಧಿಸುತ್ತಾರೆ. ಈ ಸಮಸ್ಯೆಗೆ ಸರಿಯಾದ, ನ್ಯಾಯಪರವಾದ ಪರಿಷ್ಕಾರವೇನು ?

ಹೋರಾಟ ನಡೆಸತೊಡಗಿದರು. ಈ ಆಂದೋಲನೆ ಮೊದಲು ಜನಾಂಗೀಯ ಆಧಾರದ ಸದಸ್ಯರಲ್ಲಿ ಐಕ್ಯತೆಯನ್ನು ಸಾಧಿಸಿ ಶಾಂತಿಯುತವಾಗಿತು. ಪ್ರಮುಖ ಮಾನವ ಹಕ್ಕುಗಳ ಕಾರ್ಯಕರ್ತ, ಪರಿಸರವಾದಿಯಾದ ಕೆನ್-ಸಾರೋ-ವಿವಾನ ಅಂತರಾಷ್ಟ್ರೀಯ ಸತ್ಯಾಗ್ರಹಗಳ ಮಧ್ಯ ಮಿಲಟರಿ ಸರ್ಕಾರ ಮರಣ ಶಿಕ್ಷೆಗೆ ಒಳಪಡಿಸಿದರಿಂದ ಪರಿಸ್ಥಿತಿ ತೀವ್ರ ರೂಪಪಡೆಯಿತು. ಒಂದು ರಾಷ್ಟ್ರವಾಗಿ ಏರ್ಪಡಲು, ಸುಸ್ಥಿರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಲು, ತನ್ನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಸಾಧಿಸಲು ನೈಜೀರಿಯಾ ಇನ್ನೂ ಪ್ರಯತ್ನಗಳನ್ನು ಮಾಡುತ್ತಲೇ ಇದೆ.

ಕಠಿಣ ಪದಗಳು

ಭೂ ಸುಧಾರಣೆಗಳು | ಜಮಿನುದಾರಿ ಪದ್ಧತಿ | ನೂತನ ಪ್ರಜಾಪ್ರಭುತ್ವ | ಜೀತಕಾರ್ಮಿಕರು
ರಸಾಯನಿಕ ಆಯುಧಗಳು | ಖಂಡಾಂತರ ಆಫ್ರಿಕಾವಾದ

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ !

1. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : (AS_1)
   - ಸನ್‌ಯಟ್-ಸೆನ್ — ದೇಶವನ್ನು ಸೈನಿಕ ದೇಶವನ್ನಾಗಿಸಿದನು
   - ಚಿಯಾಂಗ್ ಕೈಷೇಕ್ — ಪರಿಸರ ದಂಗೆ
   - ಮಾವೊ ಜೆಂಡಾಂಗ್ — ರಾಷ್ಟ್ರೀಕರಣ, ಪ್ರಜಾಪ್ರಭುತ್ವ, ಸಮಾಜವಾದ
   - ಕೆನ್ ಸಾರೊ ವಿವಾ — ರೈತವರ್ಗ ಕ್ರಾಂತಿ
2. ದಶಮಾನಗಳ ಕಾಲದಲ್ಲಿ ಚೈನಾದ ಮಹಿಳೆಯರ ಪಾತ್ರದಲ್ಲಾದ ಬದಲಾವಣೆಯನ್ನು ಗುರ್ತಿಸಿ, ರಷ್ಯಾ, ಜರ್ಮನಿಯಲ್ಲಿ ಸಂಭವಿಸಿದ ಬದಲಾವಣೆಗಳಿಗೆ, ಇವುಗಳಿಗೆ ವ್ಯತ್ಯಾಸ, ಹೋಲಿಕೆಗಳೇನು ? (AS_1)
3. ರಾಜರ ಆಳ್ವಿಕೆಯನ್ನು ಕೊನೆಗೊಳಿಸಿದ ನಂತರ ಚೈನಾದಲ್ಲಿ ಎರಡು ವಿಧವಾದ ಆಳ್ವಿಕೆಗಳು ಏರ್ಪಟ್ಟವು, ಇವುಗಳ ಮಧ್ಯ ಹೋಲಿಕೆಗಳು, ವ್ಯತ್ಯಾಸಗಳೇನು ? (AS_1)
4. ಈ ಅಧ್ಯಾಯನದಲ್ಲಿ ಚರ್ಚಿಸಿದ ದೇಶಗಳೆಲ್ಲಾ ಮುಖ್ಯವಾಗಿ ವ್ಯವಸಾಯದ ಮೇಲೆ ಆಧಾರಪಟ್ಟಿವೆ. ಆದರಲ್ಲಿನ ಪದ್ಧತಿಗಳನ್ನು ಬದಲಾಯಿಸಲು ದೇಶಗಳಲ್ಲಿ ಎಂತಹ ಪ್ರಯತ್ನಗಳು ನಡೆದವು ? (AS_1)
5. ಮೇಲೆ ಚರ್ಚಿಸಿದ ದೇಶಗಳಲ್ಲಿ ಕೈಗಾರಿಕೆಗಳು ಯಾರ ಅಧೀನದಲ್ಲಿವೆ ? ಈ ಪದ್ಧತಿಗಳನ್ನು ಬದಲಾಯಿಸಲು ಎಂತಹ ಪ್ರಯತ್ನಗಳು ನಡೆದವು. ಹೋಲಿಸಲು ಒಂದು ಪಟ್ಟಿಯನ್ನು ತಯಾರಿಸಿ. (AS_1)
6. ಭಾರತದೇಶ, ನೈಜೀರಿಯಾದಲ್ಲಿನ ರಾಷ್ಟ್ರೀಯ ಹೋರಾಟಗಳನ್ನು ಹೋಲಿಸಿ, ಭಾರತದೇಶದಲ್ಲಿ ಇದು ಏಕೆ ಬಲವಾಗಿತ್ತು ?(AS_1)
7. ಸ್ವತಂತ್ರ್ಯ ನೈಜೀರಿಯಾ ದೇಶ ಎದುರಿಸುತ್ತಿರುವ ಸವಾಲುಗಳೇನು ? ಸ್ವತಂತ್ರ್ಯ ಭಾರತದೇಶ ಎದುರಿಸುತ್ತಿರುವ ಸವಾಲುಗಳೊಂದಿಗೆ ಹೋಲಿಕೆ, ವ್ಯತ್ಯಾಸಗಳೇನು ?(AS_1)
8. ಭಾರತದೇಶ, ವಿಯತ್ನಾಂನಂತೆ ಸ್ವಾತಂತ್ರ್ಯಕ್ಕಾಗಿ ನೈಜೀರಿಯಾ ಅಷ್ಟೇನು ತೊಂದರೆಗೊಳಪಡುವಂತಾಗಲಿಲ್ಲ. ಇದಕ್ಕೆ ಕೆಲವು ಕಾರಣಗಳನ್ನು ಹೆಸರಿಸಿ. (AS_1)
9. ಮೇಲೆ ಚರ್ಚಿಸಿದ ದೇಶಗಳಲ್ಲಿ ರಾಷ್ಟ್ರೀಯ ಹೋರಾಟದಲ್ಲಿ ಪಾಠಶಾಲೆ ಶಿಕ್ಷಣದ ಪಾತ್ರವೇನು ? (AS_6)
10. ಈ ದೇಶಗಳ ಸ್ವಾತಂತ್ರ್ಯ ಹೋರಾಟದಲ್ಲಿ ಆಳ್ವಿಕೆದಾರರ ಮೇಲೆ ಯುದ್ಧಗಳು ನಡೆಸಿದರು. ಅವುಗಳ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿರಿ. (AS_1)
11. ಪುಟಸಂಖ್ಯೆ 209ರಲ್ಲಿನ ನಾಗರಿಕರನ್ನಾಗಿ ಮಾಡುವ ಜವಾಬ್ದಾರಿಯಲ್ಲಿನ ನಾಲ್ಕು ಐದು ವಾಕ್ಯಗಳನ್ನು ಓದಿರಿ, ಅದರೊಂದಿಗೆ ನೀವು ಏಕೀಭವಿಸುತ್ತೀರಾ? ಏಕೆ? (AS_1)

SCERT TELANGANA

ಅಧ್ಯಾಯ
14

ಭಾರತದೇಶ ರಾಷ್ಟ್ರೀಯ ಚಳುವಳಿ - ದೇಶ ವಿಭಜನೆ ಸ್ವಾತಂತ್ರ್ಯ:1939-1947

ರಾಷ್ಟ್ರೀಯ ಚಳುವಳಿಯ ಕೊನೆಯ ಹಂತವನ್ನು ಕುರಿತು ತಿಳಿದುಕೊಂಡು ಭಾರತ ದೇಶದ ವಿಭಜನೆಗೆ ದಾರಿ ಮಾಡಿಕೊಟ್ಟ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಿಸೋಣ. ಇದಕ್ಕೆ ಸಂಬಂಧಿಸಿ ದೇಶದ ಪ್ರಜೆಗಳು ಎಷ್ಟೋ ಕಷ್ಟಕರವಾದ ಪ್ರಶ್ನೆಗಳನ್ನು ಎದುರಿಸಿದ್ದಾರೆ. ಕಾಲ ಕ್ರಮದಲ್ಲಿ ಅವುಗಳಿಗೆ ಬಹಳಕಠಿಣವಾದ ಉತ್ತರಗಳನ್ನು ಒಪ್ಪಿಕೊಳ್ಳಬೇಕಾಗಿದೆ.

ಪ್ರಪಂಚ ಯುದ್ಧಕ್ಕೆ ಭಾರತೀಯರು ಬೆಂಬಲ ತಿಳಿಸಬೇಕಾ? 1939ಆ42

ನೀವು ಈಗಾಗಲೇ ಎರಡನೇ ಪ್ರಪಂಚ ಯುದ್ಧವನ್ನು ಕುರಿತು ಓದಿದ್ದೀರಿ. ಈ ಯುದ್ಧವು 1939ರಲ್ಲಿ ಪ್ರಾರಂಭವಾದ ದೇಶದಲ್ಲಿ ಹಲವು ರಾಜ್ಯಗಳು ಕಾಂಗ್ರೆಸ್ ಸರಕಾರದ ಆಡಳಿತದಲ್ಲಿದ್ದವು. ಭಾರತೀಯರಿಗೆ ಸ್ವಯಂ ಆಡಳಿತ ಅಧಿಕಾರವು ಸ್ವಲ್ಪ ಮಟ್ಟಿಗಾದರೂ ಕೊಡಬೇಕೆಂಬ ಸಿದ್ಧಾಂತವನ್ನು ಬ್ರಿಟೀಷ್ ಸರಕಾರವು ಒಪ್ಪಿಕೊಂಡಿತು. 1935ರಲ್ಲಿ ಬ್ರಿಟೀಷ್ ಪಾರ್ಲಿಮೆಂಟ್ ಭಾರತ ಸರಕಾರದ ಕಾನೂನನ್ನು ಜಾರಿಗೊಳಿಸಿತು. ಈ ಕಾನೂನಿನ ಪ್ರಕಾರ ರಾಜ್ಯಗಳಲ್ಲಿ ಚುನಾವಣೆಗಳನ್ನು ನಿರ್ವಹಿಸಿ ಇವುಗಳಲ್ಲಿ ಗೆದ್ದ (ಜಯಗಳಿಸಿದ) ಪಕ್ಷಗಳು ಸರಕಾರವನ್ನು ಏರ್ಪಾಟು ಮಾಡಬಹುದು. ಆದರೆ, ಮತ ಹಾಕುವ ಅಧಿಕಾರವನ್ನು ಜನಸಂಖ್ಯೆಯಲ್ಲಿ ಬಹಳ ಸ್ವಲ್ಪ ಜನಕ್ಕೆ ಮಾತ್ರ ಕೊಟ್ಟಿದ್ದಾರೆ. ರಾಜ್ಯದ ಶಾಸನ ಸಭೆಗಳಿಗೆ 12%, ಕೇಂದ್ರ ಸಭೆಗೆ 1% ಪ್ರಜೆಗಳಿಗೆ ಮಾತ್ರ ಮತದಾನದ ಹಕ್ಕು ಲಭಿಸಿತು. ಬ್ರಿಟೀಷ್ ಇಂಡಿಯಾದಲ್ಲಿ 11 ಸಂಸ್ಥಾನಗಳಲ್ಲಿ 1937ರಲ್ಲಿ ಚುನಾವಣೆಗಳು ನಿರ್ವಹಿಸಿದಾಗ ಕಾಂಗ್ರೆಸ್ ಪಕ್ಷ ಅಖಂಡ ವಿಜಯವನ್ನು ಸಾಧಿಸಿತ್ತು. 11 ಸಂಸ್ಥಾನಗಳಿಗೆ (ರಾಜ್ಯಗಳಿಗೆ) 8 ಸಂಸ್ಥಾನಗಳಲ್ಲಿ ಕಾಂಗ್ರೆಸ್ 'ಪ್ರಧಾನ ಮಂತ್ರಿಗಳು' ಆಯ್ಕೆಯಾದರು. ಇವರು ಬ್ರಿಟೀಷ್ ರಾಜ್ಯಪಾಲರ ಪರ್ಯವೇಕ್ಷಣೆಯಲ್ಲಿ ಕೆಲಸ ಮಾಡತೊಡಗಿದರು.

- 1935ರ ಕಾನೂನು ಕೊಟ್ಟ ಅಧಿಕಾರಗಳಿಗೆ ಭಾರತೀಯರು ಬ್ರಿಟೀಷ್ ಸರಕಾರದ ಬಗ್ಗೆ ಕೃತಜ್ಞತೆ ಭಾವನೆ ಇರಬೇಕಾ?
- ಆ ಸಮಯದಲ್ಲಿ ಬ್ರಿಟಿಷ ಸರ್ಕಾರಕ್ಕೆ ವ್ಯತಿರೇಕವಾಗಿ ಪ್ರತಿಭಟನೆಗಳನ್ನು ಕಾಂಗ್ರೆಸ್ ಚುರುಕುಗೊಳಿಸಿದ್ದರೆ ಏನಾಗುತ್ತಿತ್ತು ? ಇದು ಸ್ವಾತಂತ್ರ್ಯ ಹೋರಾಟಕ್ಕೆ ಪುಷ್ಠಿ ಕೊಡುತ್ತಿತ್ತೇ ?
- ಎರಡನೇ ಮಹಾಯುದ್ಧದಲ್ಲಿ ಬ್ರಿಟನನ್ನು ಸಮರ್ಥಿಸುವುದಕ್ಕೆ, ಸಮರ್ಥಿಸದೇ ಹೋಗುವುದಕ್ಕೆ ನಿಮ್ಮ ಕಾರಣಗಳನ್ನು ತಿಳಿಸಿರಿ.

ಕಾಂಗ್ರೆಸ್ ನಾಯಕರ ಮುಂದೆ ಒಂದು ದೊಡ್ಡ ಸಮಸ್ಯೆ ಉದಯಿಸಿತು. ಜರ್ಮನಿ, ಜಪಾನ್, ಇಟಲಿ ಇತರ ದೇಶಗಳ ಬಣಕ್ಕೆ (ಅಕ್ಷರಾಜ್ಯಗಳ) ವಿರುದ್ಧವಾಗಿ ಆಂಗ್ಲೇಯರು ಮಾಡುತ್ತಿರುವ ಯುದ್ಧಕ್ಕೆ ಸಹಾಯವಾಗ ಬೇಕಾ? ಕಾಂಗ್ರೆಸ್ ಸರಕಾರಗಳನ್ನು ಕನಿಷ್ಟ ಸಂಪ್ರರ್ಕಿಸದಂತೆಯೇ ಬ್ರಿಟನ್ ಯುದ್ಧದಲ್ಲಿ ಭಾರತ ದೇಶವು ಭಾಗವಹಿಸುತ್ತದೆಂದು ನಿರ್ಣಯ ತೆಗೆದುಕೊಂಡಿತ್ತು. ಯುದ್ಧದಲ್ಲಿ ಸಹಾಯ ಮಾಡುವುದಕ್ಕೆ, ಮಾಡದೇ ಹೋಗುವುದಕ್ಕೆ ಅನೇಕ ಕಾರಣಗಳು ಇವೆ. ಈ ಸಮಸ್ಯೆಗಳೊಂದಿಗೆ ಕಾಂಗ್ರೆಸ್ ಕಳವಳಗೊಂಡಿತು.

ಅನೇಕ ಜನ ಕಾಂಗ್ರೆಸ್ ನಾಯಕರು ಹಿಟ್ಲರನ್ನು, ಮುಸ್ಸೋಲಿಯನ್ನು, ಫ್ಯಾಸಿಜಂನ್ನು ವಿರೋಧಿಸಿದರು. ಇತರ ಸ್ವತಂತ್ರ ದೇಶಗಳನ್ನು ಜಯಿಸುವುದಕ್ಕೆ ಪ್ರಯತ್ನಿಸುತ್ತಿರುವ ಫ್ಯಾಸಿಸ್ಟು ಶಕ್ತಿಗಳನ್ನು ಎದುರಿಸಬೇಕೆಂಬ ಧೃಡನಿರ್ಧಾರದಿಂದ ಅವರಿದ್ದರು. ಭಾರತ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು (ಕನಿಷ್ಟ ಭರವಸೆಯನ್ನಾದರೂ) ಕೊಡದಂತೆ ಫ್ಯಾಸಿಸ್ಟರ ಮೇಲೆ ತಮ್ಮ ಹೋರಾಟದಲ್ಲಿ ಭಾರತ ದೇಶವು ಬೆಂಬಲ ಕೊಡಬೇಕೆಂದು ಬಯಸುವುದರಲ್ಲಿ ಅವಲಂಭಿಸುತ್ತಿರುವ ದ್ವಂದ್ವ ನೀತಿಗಳನ್ನು ಬ್ರಿಟೀಷ್ ಸರಕಾರವು ಗುರ್ತಿಸುತ್ತದೆ ಎಂದು ಕಾಂಗ್ರೆಸ್ ಆಶಿಸಿತು.

SCERT TELANGANA

ಅಡಾಲ್ಫ್ ಹಿಟ್ಲರ್‌ಗೆ ಪತ್ರ

ಹೆರ್ ಹಿಟ್ಲರ್

ಬೆರ್ಲಿನ್,

ಜರ್ಮನಿ

ಪ್ರೀತಿಯ ಗೆಳೆಯ

ಮನುಕುಲಕ್ಕಾಗಿ ನಿನಗೆ ಪತ್ರ ಬರೆಯಲೆಂದು ಸ್ನೇಹಿತರು ನನ್ನನ್ನು ಒತ್ತಾಯ ಮಾಡುತ್ತಿದ್ದಾರೆ. ನನ್ನಿಂದ ಪತ್ರ ಅಸಂಧರ್ಭವಾಗಿ ಇರುತ್ತದೆ ಎಂಬ ಅಭಿಪ್ರಾಯದಿಂದ ಅವರ ವಿಜ್ಞಾಪನೆಯನ್ನು ತಳ್ಳಿ ಹಾಕುತ್ತಾ ಬಂದಿದ್ದೇನೆ. ಆದರೆ ನಾನು ಲೆಕ್ಕೆಗಳು ಹಾಕುವುದು ಬಿಟ್ಟು ನನ್ನ ಮನವಿಯನ್ನು ನಿಮಗೆ ತಿಳಿಯಪಡಿಸಬೇಕು.

ಮನುಕುಲವನ್ನು ಅನಾಗರಿಕ ಮಟ್ಟಕ್ಕೆ ಇಳಿಸುವ ಯುದ್ಧವನ್ನು ನಿವಾರಿಸಬಲ್ಲ ವ್ಯಕ್ತಿ ಪ್ರಪಂಚದಲ್ಲಿ ನೀವು ಒಬ್ಬರೇ ಎನ್ನುವುದು ಸ್ಪಷ್ಟವಾಗಿದೆ.

ನಿಮ್ಮ ಆಶಯವು ನಿಮಗೆ ಎಷ್ಟು ಮುಖ್ಯವಾದುದು ಆದಾಗ್ಯೂ ಅದಕ್ಕೆ ಇಂತಹ ಮೌಲ್ಯ ಸಲ್ಲಿಸಬೇಕಾ? ಹಿಂಸೆಯನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿ ಎಷ್ಟೋ ಸ್ವಲ್ಪ ವಿಜಯಗಳು ಸಾಧಿಸಿದ ವ್ಯಕ್ತಿಯಾಗಿ ನಾನು ಮಾಡುತ್ತಿರುವ ವಿಜ್ಞಾಪನೆಯನ್ನು ಕೇಳುತ್ತೀರಾ?

ನಿಮಗೆ ಬರೆಯುವುದರಲ್ಲಿ ಯಾವುದಾದರೂ ತಪ್ಪು ನಡೆದರೆ ಕ್ಷಮಿಸಿರಿ.

ನಿಮ್ಮ

ಎಂ.ಕೆ.ಗಾಂಧೀ

ಮೂಲವು : ಮಹಾತ್ಮಾ ಗಾಂಧಿ ಶೇಖರಣೆಯ ರಚನೆಗಳು ಸಂಪುಟ 76:31 ಮೇ 1939ಅ15 ಅಕ್ಟೋಬರ್, 1939

- ಬ್ರಿಟನ್ ದೃಷ್ಟಿಕೋನದ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸುವುದಕ್ಕೆ ಕಾಂಗ್ರೆಸ್ ಯಾವ ಚರ್ಯೆಯನ್ನು ಕೈಗೊಂಡರೆ ಚೆನ್ನಾಗಿರುತ್ತಿತ್ತು?
- ಬ್ರಿಟನ್ ಮಾತುಕೊಟ್ಟು ಭಾರತೀಯರ ಬೆಂಬಲ ಏಕೆ ಪಡೆಯಲಿಲ್ಲ? 1939ರಲ್ಲಿ ಭಾರತೀಯರು ಕೇಳಿದ್ದು ಮಾತಲ್ಲವೇ? ತರಗತಿಯಲ್ಲಿ ಎಲ್ಲರೂ ಚರ್ಚಿಸಿರಿ.
- ಸರಕಾರಗಳು ರಾಜಿನಾಮೆ ಮಾಡಿದರೆ ದಿನ ನಿತ್ಯದ ವ್ಯವಹಾರಗಳನ್ನು ಯಾರು ನಿರ್ವಹಿಸುತ್ತಾರೆ.

ಬ್ರಿಟೀಷರು ಇದನ್ನು ಗುರ್ತಿಸಿದರು. ಆದರೆ ತಾವು ನಿರ್ಮಿಸಿದ ಸಾಮ್ರಾಜ್ಯವನ್ನು ಬಿಟ್ಟು ಕೊಡುವುದು ಅವರಿಗೆ ಬಹಳ ಕಷ್ಟಕರವೆನಿಸಿತು. ಬ್ರಿಟನ್‌ನಲ್ಲಿ ವಿವಿಧ ರೀತಿಯ ರಾಜಕೀಯ ಪಕ್ಷಗಳಿವೆ. ಯುದ್ಧದ ಸಮಯದಲ್ಲಿ ಕನಸರ್ವೇಟಿವ್ ಪಕ್ಷಕ್ಕೆ ಹೊಂದಿದ ವಿನ್‌ಸ್ಟನ್ ಚರ್ಚಿಲ್ ಪ್ರಧಾನಮಂತ್ರಿಯಾಗಿ ಸಂಕೀರ್ಣ ಸರಕಾರ ಇತ್ತು. ಸಾಧ್ಯವಾದಷ್ಟು ಮಟ್ಟಿಗೆ ಸಮಯ ತಮ್ಮ ಸಾಮ್ರಾಜ್ಯವನ್ನು ಉಳಿಸಿಕೊಳ್ಳ ಬೇಕೆಂದು ಕನ್ಸರ್ವೇಟವ್ ಗಳು ಪ್ರಯತ್ನಿ ಸಿದರು. ಕನಸರ್ವೇಟಿವ್ ರೊಂದಿಗೆ ಹೋಲಿಸಿದರೆ ಭಾರತೀಯರು ಸ್ವಾತಂತ್ರ್ಯ ಪಡೆಯುವುದಕ್ಕೆ ಕಾರ್ಮಿಕ ಪಕ್ಷ ಮುಖ್ಯವಾಗಿತ್ತು.

ಬ್ರಿಟೀಷ್ ಸಾಮ್ರಾಜ್ಯದ ಕೆಳಗೆ ಭಾರತಕ್ಕೆ ಡೊಮಿನಿಯನ್ ಸ್ವಾಯತ್ತತೆಯನ್ನು, ಪರಮಾಧಿಕಾರವನ್ನು ಕೊಡುವುದಕ್ಕೆ ಬ್ರಿಟೀಷರು ಸಿದ್ಧರಾಗಿ ಇದ್ದರು. ಆದರೆ ಕಾಂಗ್ರೆಸ್ ಸಂಪೂರ್ಣ ಸ್ವರಾಜ್ಯವನ್ನು ಬಯಸಿತು. ಅಷ್ಟೇ ಅಲ್ಲದೆ ಕೇಂದ್ರದಲ್ಲಿ ಸಹ ರಾಷ್ಟ್ರೀಯ ಸರಕಾರವನ್ನು ಕೂಡಲೇ ಏರ್ಪಾಟು ಮಾಡಬೇಕೆಂದು ಕಾಂಗ್ರೆಸ್ ಬಯಸಿತು. ಭಾರತ ದೇಶದಲ್ಲಿ ಅನೇಕ ಇತರ ಸಮುದಾಯಗಳ ಪ್ರಯೋಜನೆಗಳನ್ನು ಕಾಪಾಡಬೇಕು. ಆದುದರಿಂದ ಬ್ರಿಟನ್ ಇದಕ್ಕೆ ಆಕ್ಷೇಪಣೆಮಾಡಿತು. ಕಾಂಗ್ರೆಸ್ ಭಾರತೀಯರೆಲ್ಲರಿಗೂ ಪ್ರತಿನಿಧಿತ್ವ ವಹಿಸುತ್ತಿಲ್ಲವೆಂದು (ಉದಾಹರಣೆಗೆ ಮುಸ್ಲಿಂಮರಿಗೆ) ಬ್ರಿಟನ್ ಭಾವನೆ. ಅನೇಕ ಜನ ಭಾರತೀಯರ ಪ್ರಯೋಜನಗಳನ್ನು ಕಾಂಗ್ರೆಸ್ ಪಕ್ಷ ನಿರ್ಲಕ್ಷಿಸುತ್ತದೆ ಎಂದೂ ಅವುಗಳನ್ನು ಕಾಪಾಡುವ ಜವಾಬ್ದಾರಿ ತಮ್ಮ ಮೇಲೆ ಇದೆ ಎಂದು ಬ್ರಿಟನ್ ಭಾವಿಸಿತು.

ಬ್ರಿಟಷರ ಛಲದಿಂದ ಬೇಸರಗೊಂಡ ಕಾಂಗ್ರೆಸ್ ರಾಜ್ಯ ಸರಕಾರದಿಂದ ಹೊರಬರಬೇಕೆಂದು ನಿರ್ಣಯಿಸಿತು. 1937ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರಗಳು 1939 ಅಕ್ಟೋಬರ್‌ನಲ್ಲಿ ರಾಜಿನಾಮೆ ಮಾಡಿದವು.

SCERT TELANGANA

ಯುದ್ಧದಲ್ಲಿ ಗೆಲ್ಲುವುದರ ಮೇಲೆ ದೃಷ್ಟಿ ಕೇಂದ್ರೀಕರಿಸುವುದಕ್ಕೆ ಅನುಕೂಲವಾಗಿ ಶಾಂತಿ ಭದ್ರತೆಗಳನ್ನು ಕಾಪಾಡುವುದಕ್ಕೆ ಸರಕಾರ ಯುದ್ಧದ ಸಮಯದಲ್ಲಿ ಪ್ರತ್ಯೇಕವಾದ ಅಧಿಕಾರಗಳನ್ನು ಹೊಂದಿತು. ಸರಕಾರವನ್ನು ವಿರೋಧಿಸುವರನ್ನಾದರೂ ಕೂಡಲೆ ಸೆರಮನೆಗೆ ಕಳುಹಿಸಿ, ನ್ಯಾಯಸ್ಥಾನಕ್ಕೆ ಹೋಗದಂತೆ ಬೇಕಾದಷ್ಟು ಕಾಲ ಅಪರಾಧಿಯನ್ನು ಬಂದಿಸಬಹುದು. ವಾಕ್ ಸ್ವಾತಂತ್ರ್ಯವನ್ನು ಸಹ ಮೊಟಕು ಗೊಳಿಸಿದರು. ಯುದ್ಧವು ಮುಗಿದ ನಂತರ ಆಳುವವರು ಸ್ವಾತಂತ್ರ್ಯವನ್ನು ಪ್ರಕಟಿಸುವಂತೆ ಒತ್ತಡ ತರುವುದಕ್ಕೆ 1940, 1941 ನೇ ವರ್ಷಗಳಲ್ಲಿ ಕಾಂಗ್ರೆಸ್ ಅನೇಕ ವೈಯಕ್ತಿಕ ಸತ್ಯಾಗ್ರಹಗಳನ್ನು ನಿರ್ವಹಿಸಿತು. ದೊಡ್ಡ ಪ್ರಜಾ ಚಳುವಳಿ ಯಾವುದನ್ನು ಆಕಾಲದಲ್ಲಿ ಕೈಗೊಳಲಿಲ್ಲ.

- ಆ ಸಮಯದಲ್ಲಿ ಬ್ರಿಟೀಷ್ ಸರಕಾರಕ್ಕೆ ವಿರುದ್ಧವಾಗಿ ಪ್ರತಿಭಟನೆಗಳನ್ನು ಕಾಂಗ್ರೆಸ್ ಮಾಡಿದ್ದರೆ ಏನು ನಡೆದಿರುತ್ತಿತ್ತೋ? ಇದು ಸ್ವಾತಂತ್ರ್ಯ ಹೋರಾಟಕ್ಕೆ ಬಲ ಸಿಗುತ್ತಿರುತ್ತಿತ್ತೇ?

ದೇಶದ ಪ್ರಜೆಗಳಿಗೆ ಯಾರು ಪ್ರಾತಿನಿಧ್ಯ ವಹಿಸುತ್ತಾರೆ?

ನಿರಾಶೆಯಿಂದ ತಮ್ಮ ಆಡಳಿತವನ್ನು ವಿರೋಧಿಸುತ್ತಿರುವ ಭಾರತೀಯರೊಂದಿಗೆ ಹೇಗೆ ವ್ಯವಹರಿಸಬೇಕೋ ಬ್ರಿಟನ್‌ಗೆ ತಿಳಿಯಲಿಲ್ಲ. ಪ್ರಜೆಗಳ ಮೇಲೆ ಕಾಂಗ್ರೆಸ್‌ಗೆ ಇರುವ ಹಿಡಿತ ಬಲಹೀನವಾಗುವಂತೆ ಮಾಡಿ ಅದನ್ನು ದಂಡಿಸುವುದಕ್ಕೆ ಇರುವ ಮಾರ್ಗಗಳಾಗಿ ನೋಡಿದರು. ದೇಶ ಪ್ರಜೆಗಳಿಗೆ ಪ್ರಾತಿನಿಧ್ಯ ವಹಿಸುವುದಕ್ಕೆ ಕಾಂಗ್ರೆಸ್‌ಗೆ ಯಾವ ಅಧಿಕಾರ ಇದೆ ಎಂದು ಅನುಮಾನಗಳನ್ನು ಸೃಷ್ಟಿಸಲಾರಂಭಿಸಿದರು. ಇದನ್ನು ಅನುಕೂಲವಾಗಿ ತೆಗೆದುಕೊಂಡು ವಿಭಜಿಸಿ ಪಾಲಿಸು ಎನ್ನುವ ಸಿದ್ದಾಂತವನ್ನು ಅವರು ಪೂರ್ಣ ಮಟ್ಟಯಲ್ಲಿ ಜಾರಿಗೊಳಿಸಿದರು.

ಚಿತ್ರ 14.1 : ಇರವಾಡಿ ನದಿಯನ್ನು



ಚಿತ್ರ 14.2 : ಭಾರತ ದೇಶದಲ್ಲಿ ಎರಡನೇ ಮಹಾಯುದ್ಧದ ಸಮಯದಲ್ಲಿ ಸಿ ೩46 ವಿಮಾನದೊಳಗೆ

ಈ ದಿಶೆಯಲ್ಲಿ ಬ್ರಿಟೀಷ್ ಸರಕಾರವು ಮುಸ್ಲಿಂಲೀಗು ಯೋಜನೆಗಳಿಗೆ ಬೆಂಬಲ ಕೊಟ್ಟು, ಪ್ರೋತ್ಸಾಹಿಸಿ ಕಾಂಗ್ರೆಸ್‌ಗೆ ಕೊಡುವ ಪ್ರಾಧಾನ್ಯತೆಯನ್ನು ಕಡಿಮೆ ಮಾಡಸಾಗಿತು. ಈ ಸಮಯದಲ್ಲೇ ಮುಸ್ಲಿಂ ಲೀಗು, ಎಂ.ಎ.ಜಿನ್ನಾರಂತಹ ಮುಖಂಡರು ಪ್ರಜಾ ರಾಜಕೀಯಗಳಲ್ಲಿ ಕ್ರಿಯಾಶೀಲ ಪಾತ್ರವನ್ನು ಪೋಷಿಸಲಾರಂಭಿಸಿದರು.

SCERT TELANGANA

ಮುಸ್ಲಿಂ ಲೀಗ್

ಈ ಪಕ್ಷವು 1906ರಲ್ಲಿ ಏರ್ಪಟ್ಟಿದೆ.ಉತ್ತರ ಪ್ರದೇಶದಲ್ಲಿ ಮುಸ್ಲಿಂ ಭೂ ಸ್ವಾಮಿಗಳ ಪ್ರಯೋಜನೆಗಳಿಗೆ ಪ್ರಾತಿನಿಧ್ಯವಹಿಸುತ್ತಿರುವ ಈ ಪಕ್ಷಕ್ಕೆ 1930ರವರೆಗೆ ಅಷ್ಟೊಂದು ಪ್ರಜೆಗಳ ಬೆಂಬಲವಿರಲಿಲ್ಲ. ಎಲ್ಲಾ ಸಭೆಗಳಲ್ಲೂ ಮುಸ್ಲಿಮರು ಮಾತ್ರವೇ ಮತ ಹಾಕುವ ಪ್ರತ್ಯೇಕ ಸ್ಥಾನಗಳನ್ನು ಏರ್ಪಾಟು ಮಾಡಬೇಕೆಂದು ಬ್ರಿಟನ್ನನ್ನು ಅದು ಕೋರಲಾರಂಬಿಸಿತು. ಬಹಳ ಪ್ರದೇಶಗಳಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆದುದರಿಂದ ಹಿಂದೂಗಳೇ ಆಯ್ಕೆಯಾಗುತ್ತಾರೆಂದೂ, ಸರಕಾರದಲ್ಲಿ ಮುಸ್ಲಿಮರ ಪ್ರಯೋಜನೆಗಳನ್ನು ಕಾಪಾಡುವುದು ಕಷ್ಟವಾಗುತ್ತದೆಂದು ವಾದಿಸತೊಡಗಿದರು. ಕೆಲವು ಸ್ಥಾನಗಳನ್ನು ಮುಸ್ಲಿಮರಿಗೆ ಮೀಸಲಾತಿ ಗೊಳಿಸಿ ಆ ಪ್ರದೇಶದಲ್ಲಿಯ ಮುಸ್ಲಿಮರಿಗೆ ಮತದಾನದ ಹಕ್ಕು ಕಲ್ಪಿಸಿದರೆ ಶಾಸನ ಸಭೆಗಳಿಗೆ ಮುಸ್ಲಿಮರು ಆಯ್ಕೆಯಾಗಿ ಅವರ ಸಮಸ್ಯೆಗಳನ್ನು ಪ್ರಸ್ತಾವಿಸಬಲ್ಲರು. ಈ ತರ್ಕವನ್ನು ಕಾಂಗೆಸ್ ಸಹ ಒಪ್ಪಿಕೊಂಡಿದ್ದರಿಂದ 1909 ರಿಂದ ಮುಸ್ಲಿಮರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ಏರ್ಪಾಟು ಮಾಡಿದರು. 1937ರಲ್ಲಿ ಸಂಸ್ಥಾನ (ರಾಜ್ಯ) ಸರಕಾರಗಳಿಗೆ ಚುನಾವಣೆಗಳು ನಡೆದಾಗ ದೇಶದಲ್ಲಿ 482 ಮುಸ್ಲಿಂ ಮತಕ್ಷೇತ್ರಗಳಲ್ಲಿ ಮುಸ್ಲಿಂ ಲೀಗು 102 ಸ್ಥಾನಗಳನ್ನು ಗೆದ್ದುಕೊಂಡಿತು. ಆದರೆ ತಮ್ಮದು ರಾಷ್ಟ್ರೀಯ ಪಕ್ಷವಾದುದರಿಂದ ಹಿಂದೂಗಳಿಗೇ ಪ್ರಾತಿನಿಧ್ಯ ವಹಿಸುವುದಿಲ್ಲವೆಂದು ಮುಸ್ಲಿಂ ಮತಕ್ಷೇತ್ರಗಳಲ್ಲಿ ಕಾಂಗ್ರೆಸ್ ಸಹ ಸ್ಪರ್ಧಿಸಿತು. ಕಾಂಗ್ರೆಸ್ ಒಟ್ಟು 58 ಮುಸ್ಲಿಂ ಮತಕ್ಷೇತ್ರಗಳಲ್ಲಿ ಸ್ಪರ್ಧಿಸಿದರೆ 26 ಸ್ಥಾನಗಳಲ್ಲಿ ಜಯ ಗಳಿಸಿತು.

- ಅಲ್ಪಸಂಖ್ಯಾತರ ವರ್ಗಗಳ ಭಯಗಳು , ಸಮಸ್ಯೆಗಳನ್ನು ಪರಿಷ್ಕರಿಸಬೇಕಾದ ಅವಶ್ಯಕತೆಯನ್ನು ಚರ್ಚಿಸಿರಿ.ಅಧಿಕ ಮತಗಳಿಂದ ಗೆಲ್ಲುವ ಚುನಾವಣೆಗಳು ಅಲ್ಪ ಸಂಖ್ಯಾತರ ವರ್ಗಗಳಿಗೆ ಸಹಾಯವಾಗುವುದಿಲ್ಲವೆಂದು ಏಕೆ ಭಾವಿಸಿದ್ದೀರಿ?
- ಅಲ್ಪ ಸಂಖ್ಯಾತರ ವರ್ಗಗಳ ಪ್ರಯೋಜನಗಳು ಕಾಪಾಡುವುದಕ್ಕೆ ಪ್ರತ್ಯೇಕ ನಿಯೋಜಕವರ್ಗಗಳು ಒಂದು ವಿಧಾನ. ಈ ಉದ್ದೇಶ್ಯವು ಈಡೇಸುವಿದರಲ್ಲಿ ಸಹಾಯಪಡುವ ವಿಧಾನಗಳು ಇನ್ನಾವುದಾದರೂ ಇವೆಯೇ? ಉದಾಹರಣೆಗೆ ಮುಸ್ಲಿಮರಿಗೆ ಸಂಬಂಧಿಸಿದ ಅಂಶದಮೇಲೆ ಮತ ಹಾಕುವುದಕ್ಕೆ ಮೊದಲು ಮುಸ್ಲಿಮೇತರ ಸದಸ್ಯರು ತಮ್ಮ ನಿಯೋಜಕವರ್ಗದಲ್ಲಿಯ ಮುಸ್ಲಿಮರನ್ನು ಸಂಪರ್ಕಿಸಬೇಕೆಂಬ ಷರತ್ತು ಇಟ್ಟರೆ ಹೇಗೆ ಇರುತ್ತದೆ? ಇಂತಹ ಪದ್ಧತಿ ಯಾವಾಗ ಕೆಲಸ ಮಾಡುತ್ತದೆ? ಎಂತಹ ಪರಿಸ್ಥಿತಿಗಳಲ್ಲಿ ಇದು ವಿಫಲವಾಗುತ್ತದೆ?

1937ರ ಚುನಾವಣೆಗಳಲ್ಲಿ ಒಟ್ಟು ಮುಸ್ಲಿಂ ಮತಗಳಲ್ಲಿ 4.4 ಶೇಖಡ ಮಾತ್ರವೇ ಮುಸ್ಲಿಂ ಲೀಗು ಪಕ್ಷಕ್ಕೆ ಒದಿವೆ. ಯುನೈಟೆಡ್ ಸಂಸ್ಥಾನಗಳು ಬಾಂಬೆ, ಮದ್ರಾಸಿನಲ್ಲಿ ಮುಸ್ಲಿಂ ಲೀಗು ಪಕ್ಷಕ್ಕೆ ಜನಾದರಣೆ ಲಭಿಸಿತು. ಹತ್ತು ವರ್ಷಗಳ ನಂತರ ಪಾಕಿಸ್ತಾನ್ ಆಗಿ ಏರ್ಪಟ್ಟ ಮೂರು ರಾಜ್ಯಗಳಲ್ಲಿ, ಅಂದರೆ ಬಂಗಾಳ, ಉತ್ತರ ಪಶ್ಚಿಮ ಸರಿಹದ್ದು ಸಂಸ್ಥಾನ (ನಾರ್ತ್ ವೆಸ್ಟ್ ಫ್ರಾಂಟಯರ್ ಪ್ರಾವಿನ್ಸ್) ಪಂಜಾಬಿನಲ್ಲಿ ಬಹಳ ಬಲಹೀನವಾಗಿತ್ತು. ಸಿಂದ್‌ನಲ್ಲಿ ಸಹ ಅದು ಸರಕಾರ ವನ್ನು ಏರ್ಪಾಟು ಮಾಡಲಾಗದೇ ಹೋಗಿತು. ಆ ನಂತರ ಹತ್ತು ವರ್ಷಗಳಲ್ಲಿ ಪರಿಸ್ಥಿತಿಗಳು ಬದಲಾದವು. 1946ರಲ್ಲಿ ಪುನಃ ರಾಜ್ಯ, ಕೇಂದ್ರ ಸಭೆಗಳಿಗೆ ಚುನಾವಣೆಗಳು ನಡೆದಾಗ ಮುಸ್ಲಿಂ ಮತಕ್ಷೇತ್ರಗಳಲ್ಲಿ ಮುಸ್ಲಿಂ ಲೀಗು ಅಖಂಡ ವಿಜಯವನ್ನು ಸಾಧಿಸಿತು.

1937ತ1947ರ ನಡುವೆ ಮುಸ್ಲಿಮರ ಆಲೋಚನೆಗಳು ಏಕೆ ಬದಲಾದವು ? ಮುಸ್ಲಿಮರ ಬಗ್ಗೆ ಕಾಂಗ್ರೆಸ್ ಸೂಕ್ಷ್ಮವಾಗಿ ಸ್ಪಂದಿಸಿಲ್ಲವೆಂದು ಅನೇಕ ಅಂಶಗಳನ್ನು ಮುಸ್ಲಿಂಲೀಗು ಎತ್ತಿ ತೋರಿಸಿತು. ಉದಾಹರಣೆಗೆ ಯುನೈಟೆಡ್ ಸಂಸ್ಥಾನದಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡ ಮುಸ್ಲಿಂ ಲೀಗ್‌ನೊಂದಿಗೆ ಕಲೆತು ಸಮ್ಮಿಶ್ರ ಸರಕಾರ ಏರ್ಪಾಟು ಮಾಡುವುದನ್ನು ಕಾಂಗ್ರೆಸ್ ಪಕ್ಷ ತಿರಸ್ಕರಿಸಿತು. ತಮ್ಮ ಸದಸ್ಯರು ಮುಸ್ಲಿಂ ಲೀಗ್‌ನಲ್ಲಿ ಸದಸ್ಯತ್ವ ತೆಗೆದುಕೊಳ್ಳುದನ್ನು ಕಾಂಗ್ರೆಸ್ ನಿಷೇಧಿಸಿತು. ಈ ಮೊದಲು ಕಾಂಗ್ರೆಸ್ ಸದಸ್ಯರು ಹಿಂದೂ ಮಹಾ ಸಭೆಯಲ್ಲಿ ಸಹ ಸದಸ್ಯರಾಗಿ ಇರುವ ಅವಕಾಶ ಇತ್ತು. ಮೌಲಾನಾ ಅಜಾದ್‌ರಂತಹ ಕಾಂಗ್ರೆಸ್‌ನಲ್ಲಿನ ಮುಸ್ಲಿಂ ನಾಯಕರು ಇದಕ್ಕೆ ಆಕ್ಷೇಪಣೆ ತಿಳಿಸಿದ ನಂತರ 1938ರಲ್ಲಿ ಇದನ್ನು ಸಹ ನಿಷೇಧಿಸಿದರು. ಈ ವಿಧವಾಗಿ ಕಾಂಗ್ರೆಸ್ ಮೂಲಭೂತವಾಗಿ ಹಿಂದೂಗಳ

SCERT TELANGANA

ಪಕ್ಷವೆಂದು, ಮುಸ್ಲಿಂಮ್ಮರೊಂದಿಗೆ ಅಧಿಕಾರವನ್ನು ಹಂಚಿಕೊಳ್ಳುವುದಕ್ಕೆ ಅದು ಸಿದ್ದವಾಗಿಲ್ಲವೆಂಬ ಅಭಿಪ್ರಾಯವನ್ನು ಮುಸ್ಲಿಂಲೀಗ್ ಸೃಷ್ಟಿಸಿತು.

ಹಿಂದೂ ಮಹಾಸಭೆ, ಆರ್.ಎಸ್.ಎಸ್.

ಈ ಸಮಯದಲ್ಲಿ ಹಿಂದೂ ಮಹಾಸಭೆ, ರಾಷ್ಟ್ರೀಯ ಸಾಂಸ್ಕೃತಿಕ ಸಂಸ್ಥೆಯಾದ ರಾಷ್ಟ್ರೀಯ ಸ್ವಯಂ ಸೇವಕ್ ಸಂಘ (ಆರ್.ಎಸ್.ಎಸ್) ಪ್ರಜೆಗಳನ್ನು ಒಟ್ಟುಗೂಡಿಸುವುದಕ್ಕೆ ಚುರುಕಾಗಿ ಕೆಲಸ ಮಾಡಿದವು. ಜಾತಿ, ವರ್ಗಗಳನ್ನು ತಳ್ಳಿಹಾಕಿ ಹಿಂದೂಗಳೆಲ್ಲರನ್ನೂ ಐಕ್ಯಗೊಳಿಸಿ ಸಾಮಾಜಿಕ ಜೀವನದಲ್ಲಿ ಸುಧಾರಣೆಗಳನ್ನು ತರಬೇಕೆಂದು ಈ ಸಂಸ್ಥೆಗಳು ಆಶಿಸಿದ್ದವು. ಭಾರತ ದೇಶವು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಹಿಂದುಗಳ ಭೂಮಿ ಎಂಬ ಅಭಿಪ್ರಾಯವನ್ನು ಸಹ ಅವರು ಉಂಟುಮಾಡಿದರು. ಈ ಸಂಸ್ಥೆಗಳ ಕಾರ್ಯಕಲಾಪಗಳೊಂದಿಗೆ ಅನೇಕ ಜನ ಕಾಂಗ್ರೆಸ್‌ವಾದಿಗಳು ಸಹ ಪ್ರಭಾವಿತಗೊಂಡರು.

ತಮ್ಮ ಸದಸ್ಯರಲ್ಲಿ ಜಾತ್ಯಾತೀತ ಅವಗಾಹನೆಯನ್ನು ಹೆಚ್ಚಿಸುವುದಕ್ಕೆ ಕಾಂಗ್ರೆಸ್ ಎಷ್ಟೋ ಪ್ರಯತ್ನಿಸಿದೆ. ಮುಸ್ಲಿಂ ಪ್ರಜೆಗಳಲ್ಲಿ ಭದ್ರತೆಯ ಭಾವನೆಯನ್ನು ಹೆಚ್ಚಿಸಿ ಮುಸ್ಲಿಂಲೀಗು, ಹಿಂದೂ ಮಹಾಸಭೆ, ಆರ್.ಎಸ್.ಎಸ್. ನಂತಹ ಸಂಸ್ಥೆಗಳ ಕಾರ್ಯಕ್ರಮಗಳು, ಸಂದೇಶಗಳ ಮುಖಾಂತರ ಅವರಲ್ಲಿ ಉಂಟಾಗುವ ತಪ್ಪು ಅಭಿಪ್ರಾಯ ಗಳನ್ನು ತೊಲಗಿಸುವುದಕ್ಕೆ ಸಹ ಕಾಂಗ್ರೆಸ್ ಪ್ರಯತ್ನಿಸಿತು. ಹಿಂದೂಗಳು, ಮುಸ್ಲಿಮರು ಎರಡು ದೇಶಗಳ ಪ್ರಜೆಗಳು ಅಲ್ಲವೆಂದು ಭಾರತ ದೇಶದಲ್ಲಿ ಸಮಗ್ರ ಭಾಗವೆಂದು ಕಾಂಗ್ರೆಸ್ ವಾದಿಸಿಸುತ್ತಿತ್ತು. ಆದರೆ ಹಿಂದೂಗಳ ಪ್ರಾಭಲ್ಯ ಕುರಿತು ಮುಸ್ಲಿಂ ಲೀಗ್‌ಗೆ ಇರುವ ಭಯಗಳನ್ನು ಬ್ರಿಟನ್ ಆಸಕ್ತಿಯಾಗಿ ಕೇಳುತ್ತಾ ಮುಸ್ಲಿಮ್ಮರಿಗೆ ಭದ್ರತೆಯನ್ನು ಕಲ್ಪಿಸುವುದಕ್ಕೆ ಸೂಚನೆಗಳನ್ನು ಮಾಡಲಾರಂಭಿಸಿತು.

> **ಡಾ. ಬಿ.ಆರ್. ಅಂಬೇಡ್ಕರ್, ಪಾಕಿಸ್ತಾನ್ ಅಥವಾ ಭಾರತ ದೇಶ ವಿಂಗಡಣೆ 'ಪರಿಚಯಂ 1940**
>
> ಪಾಕಿಸ್ತಾನ್‌ನನ್ನು ಪರಿಗಣನೆಯಲ್ಲಿ ತೆಗೆದುಕೊಳ್ಳ ಬೇಕೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಕುರಿತು ಆಲೋಚಿಸಬೇಕೆಂದು ಮುಸ್ಲಿಮರು ಹಟ ಹಿಡಿಯುತ್ತಾರೆ..... ಬ್ರಿಟನ್ ತನ್ನ ವಾರಸತ್ವವನ್ನು ಹೆಚ್ಚಿನ ಸಂಖ್ಯಾತರಾದ ಹಿಂದೂಗಳಿಗೆ ಒಪ್ಪಿಸಿ ಅಲ್ಪ ಸಂಖ್ಯಾತರನ್ನು ಅವರ ದಯಾದಕ್ಷಿಣ್ಯಗಳಿಗೆ ಬಿಟ್ಟು ಕೊಡುತ್ತಾ ಅಧಿಕಾರವನ್ನು ಒಪ್ಪಿಸಲಿಲ್ಲ. ಅದು ಸಾರ್ವಭೌಮತ್ವವನ್ನು ಕೊನೆಗೊಳಿಸು ವುದಿಲ್ಲ. ಇನ್ನೊಂದು ರೂಪದಲ್ಲಿ ಸಾರ್ವಭೌಮತ್ವವನ್ನು ಸೃಷ್ಟಿಸುವುದು.

ಪಾಕಿಸ್ತಾನ್ ತೀರ್ಮಾನ

ಮುಸ್ಲಿಮರು ಹೆಚ್ಚಾಗಿ ಇರುವ ಪ್ರದೇಶಗಳಲ್ಲಿ ಆಡಳಿತಕ್ಕೆ ಪ್ರತ್ಯೇಕ ಏರ್ಪಾಟುಗಳು ಮಾಡಬೇಕೆಂಬ ಭಾವನೆ ಹೆಚ್ಚಿನ ಜನರಲ್ಲಿ ಏರ್ಪಡಲಾರಂಭಿಸಿತು. ಉದಾಹರಣೆಗೆ ಸಾರೇ ಜಹಾಸೆ ಅಚ್ಛಾ ಹಿಂದೂಸ್ತಾನ್ ಹಮಾರಾ ಎಂಬ ಕವಿತೆಯನ್ನು ಬರೆದ ಉರ್ದೂ ಕವಿ ಮಹಮ್ಮದ್ ಇಕ್ಬಾಲ್ 1930ರಲ್ಲಿ ಮುಸ್ಲಿಂ ಲೀಗ್‌ಗೆ ಅಧ್ಯಕ್ಷ ಉಪನ್ಯಾಸವನ್ನು ಮಾಡುತ್ತಾ ವಾಯುವ್ಯ ಮುಸ್ಲಿಂ ಸಂಸ್ಥಾನ ಅವಶ್ಯಕತೆಯನ್ನು ಕುರಿತು ಮಾತನಾಡಿದ್ದಾರೆ.

ಪಾಕಿಸ್ತಾನ್ ಅಥವಾ ಪಾಕ್‌ಸ್ತಾನ್ (ಪಂಜಾಬ್, ಆಫ್ಘನ್, ಕಾಶ್ಮೀರು, ಸಿಂದ್ ಬಲುಚಿಸ್ತಾನ್‌ಗಳ ಇಂಗ್ಲೀಷ್ ಅಕ್ಷರಗಳಿಂದ ಏರ್ಪಟ್ಟಿದೆ) ಎಂಬ ಹೆಸರನ್ನು ಕೇಂಬ್ರಿಡ್ಜ್‌ನಲ್ಲಿ ಪಂಜಾಬಿ ಮುಸ್ಲಿಂ ಆದ ಚೌದರಿ ರೆಹ್ಮಾತ್ ಅಲಿ ರೂಪಿಸಿದ್ದಾನೆ. 1933, 1935ರಲ್ಲಿ ಬರೆದ ಕರ ಪತ್ರಗಳಲ್ಲಿ ಈ ಯುವಕ ವಿದ್ಯಾರ್ಥಿ ಈ ರಾಜ್ಯಗಳಿಗೆ ಪ್ರತ್ಯೇಕ ರಾಷ್ಟ್ರೀಯ ಸ್ವಾಯತ್ತತೆಯನ್ನು ಆಶಿಸಿದ್ದನು. 1930ರಲ್ಲಿ ರೆಹ್ಮತ್ ಆಲಿಗೆ ಯಾರು ಪ್ರಾಮುಖ್ಯತೆ ನೀಡಲಿಲ್ಲ. ಪ್ರತ್ಯೇಕಿಸಿ ಮುಸ್ಲಿಂಲೀಗು ಇತರ ಮುಸ್ಲಿಂ ನಾಯಕರು ಅದನ್ನು ವಿದ್ಯಾರ್ಥಿಯ ಕನಸಾಗಿ ವಜಾ ಮಾಡಿದರು.

ಹಿಂದೂಗಳ ಪ್ರಾಬಲ್ಯದ ಬಗ್ಗೆ ಮುಸ್ಲಿಂ ಲೀಗು ಎಬ್ಬಿಸಿದ ಭಯಗಳನ್ನು ಹೋಗಲಾಡಿಸುವುದರಲ್ಲಿ ಕಾಂಗ್ರೆಸ್ ವಿಫಲ ಹೊಂದಿದ್ದರಿಂದ, ಬ್ರಿಟೀಷ್ ಆಡಳಿತಗಾರರು ವಿಭಜಿಸಿ ಪಾಲಿಸು ಎಂಬ ವಿಧಾನವನ್ನು ಅವಲಂಭಿಸಿದ್ದರಿಂದ ರಾಜಕೀಯ ವಾತಾವರಣ ಬದಲಾಗಿತು. 1940 ಮಾರ್ಚ್ ತಿಂಗಳು 23ರಂದು ಉಪಖಂಡದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಸ್ವಲ್ಪ ಸ್ವಾಯತ್ತತೆಯನ್ನು ಬಯಸುತ್ತಾ ಮುಸ್ಲಿಂಲೀಗು ಒಂದು ತೀರ್ಮಾನವನ್ನು ಪ್ರವೇಶಗೊಳಿಸಿತು. ಅಸ್ಪಷ್ಟವಾಗಿರುವ ಈ ತೀರ್ಮಾನವು ದೇಶವಿಭಜನೆಯನ್ನಾಗಲೀ, ಪಾಕಿಸ್ತಾನ್‌ನಾಗಲಿ ತಿಳಿಯಪಡಿಸಿಲ್ಲ. ಆದರೆ, ಆನಂತರದ ವರ್ಷಗಳಲ್ಲಿ ಇದನ್ನು ಪಾಕಿಸ್ತಾನ್ ತೀರ್ಮಾನವಾಗಿ ತಿಳಿಯಪಡಿಸಲು

SCERT TELANGANA

ಆರಂಭಿಸಿದರು. ಮುಸ್ಲಿಂಲೀಗು ಎಬ್ಬಿಸಿದ ಅಂಶಗಳನ್ನು ಪರಿಷ್ಕರಿಸುವುದಕ್ಕೆ ಪ್ರಜೆಗಳು ಅನೇಕ ಪರ್ಯಾಯಗಳನ್ನು ಸೂಚಿಸುತ್ತಾರೆಂದು ಆ ಪರ್ಯಾಯಗಳಲ್ಲಿ ಪಾಕಿಸ್ತಾನ್ ಎಂಬ ಹೊಸ ದೇಶ ಒಂದಿರುವ ವಿಷಯ ನೆನಪಿಟ್ಟುಕೊಳ್ಳಬೇಕು. ಚರ್ಚೆಗಳು, ರಾಯಭಾರಗಳು ಆರಂಭವಾಗಿ, ನಿಂತು ಹೋಗಿದ್ದರಿಂದ ಹೊಸ ದೇಶವಾಗಿ ಪಾಕಿಸ್ತಾನ್ ಏರ್ಪಡುವುದಕ್ಕೆ ಬೆಂಬಲ ಪಡೆಯಲಾರಂಭಿಸಿತು. ಮುಸ್ಲಿಂಲೀಗು ಮುಖಂಡನಾದ ಎಂ.ಎ.ಜಿನ್ನಾ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಕಾಂಗ್ರೆಸ್‌ಗೆ ಸಹ ಕಷ್ಟವಾಗಿತು.

- ಮುಸ್ಲಿಂ ಲೀಗು ರಾಜಕೀಯಗಳಿಂದ ಉಂಟಾದ ಪ್ರಯೋಜನಗಳನ್ನು ಪ್ರಜೆಗಳು ಯಾವ ವಿಧವಾಗಿ ಅಂದಾಜು ಹಾಕಿಕೊಂಡಿದ್ದಾರೆ? ಅವರಿಗೆ ಯಾವುದಾದರೂ ಪ್ರಶ್ನೆಗಳು

1940ರಿ1946 ರ ನಡುವೆ ಪ್ರತ್ಯೇಕ ದೇಶದ ಅವಶ್ಯಕತೆ , ಅದರ ಪ್ರಯೋಜನೆಗಳ ಕುರಿತು ಮುಸ್ಲಿಂ ಪ್ರಜೆಗಳನ್ನು ಮುಸ್ಲಿಂ ಲೀಗು ಒಪ್ಪುವಂತೆ ಮಾಡಿತು. ಹಿಂದೂ ಜಮೀಂದಾರರು, ಬಡ್ಡಿ ವ್ಯಾಪಾರಸ್ಥರು ತಮ್ಮನ್ನು ದರೋಡೆ ಮಾಡದ ಪರಿಸ್ಥಿತಿಯನ್ನು ಕುರಿತು ರೈತರು ಕನಸುಗಳನ್ನು ಕಂಡರು. ವ್ಯಾಪಾರಸ್ಥರು, ಉದ್ಯೋಗಗಳನ್ನು ಹುಡುಕುವವರು ಹಿಂದೂಗಳಿಂದ ಸ್ಪರ್ಧೆ ಇರುವುದಿಲ್ಲವೆಂದು ಆಶಿಸಿದರು. ಮತ್ತಷ್ಟು ಮತ ಸ್ವಾತಂತ್ರ್ಯವು ಇರುತ್ತದೆ. ತಮಗೆ ಬೇಕಾದ ವಿಧವಾಗಿ ಸರಕಾರವನ್ನು ನಡೆಸಿಕೊಳ್ಳುವುದಕ್ಕೆ ಮುಸ್ಲಿಂ ಶ್ರೀಮಂತರಿಂದ ಸ್ವೇಚ್ಛೆ ಲಭಿಸುತ್ತದೆ. 1942ರಿ1945 ಮಧ್ಯ ಕಾಲದಲ್ಲಿ ಬಹಳ ಜನ ಕಾಂಗ್ರೆಸ್ ನಾಯಕರು ಸೆರಮನೆಯಲ್ಲಿ ಇದ್ದರು. ಪ್ರಜೆಗಳ ನಡುವೆ ತನ್ನ ಪ್ರತಿಷ್ಠತೆಯನ್ನು ಹೆಚ್ಚಿಸುವುದಕ್ಕೆ ಮುಸ್ಲಿಂಲೀಗ್ ಈ ಕಾಲವನ್ನು ಸದ್ವಿನಿಯೋಗ ಪಡಿಸಿಕೊಂಡಿತು.

ಬ್ರಿಟೀಷರು ಭಾರತ ದೇಶವನ್ನು ಬಿಟ್ಟು ಹೋಗದಂತೆ ಯಾರು ಮಾಡುತ್ತಾರೆ?

1941ಕ್ಕೆ ಜಪಾನ್ ದೇಶ ಆಗ್ನೇಯ ಏಷ್ಯಾದೊಳಗೆ ವಿಸ್ತರಿಸಲಾರಂಭಿಸಿತು. ಭಾರತ ದೇಶದ ಭೂಭಾಗಳಿಗೆ ಸಹ ಮುಪ್ಪು ಏರ್ಪಡುವ ಅಪಾಯವಿತ್ತು . ಜಪಾನ್‌ಗೆ ವಿರುದ್ಧವಾಗಿ ಯುದ್ಧದಲ್ಲಿ ಭಾರತೀಯರು ಸಹ ಭಾಗವಹಿಸುವಂತೆ ಬ್ರಿಟನ್ ನೋಡಬೇಕಾದ ಪರಿಸ್ಥಿತಿ ಇತು. 1942 ರ ವಸಂತ ಕಾಲದಲ್ಲಿ ತನ್ನ ಮಂತ್ರಿಗಳಲ್ಲಿ ಒಬ್ಬರಾದ ಸರ್ ಸ್ಟಾಫರ್ಡ ಕ್ರಿಪ್ಸನ್ನು ಭಾರತ ದೇಶಕ್ಕೆ ಕಳುಹಿಸಿ ಗಾಂಧೀಜಿಯೊಂದಿಗೆ, ಕಾಂಗ್ರೆಸ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಒತ್ತಡವನ್ನು ಹೇರಿತು. ವೈಸ್ರಾಯ್ ತನ್ನ ಕಾರ್ಯ ನಿರ್ವಹಣೆ ವರ್ಗದಲ್ಲಿ ರಕ್ಷಣೆ ಸದಸ್ಯನಾಗಿ ಭಾರತೀಯನನ್ನು ಮೊದಲಿಗೆ ನೇಮಕಮಾಡಬೇಕೆಂದು ಕಾಂಗ್ರೆಸ್ ಒತ್ತಾಯಿಸಿದ್ದರಿಂದ ಈ ಚರ್ಚೆಗಳು ವಿಫಲವಾದವು.

ಕ್ರಿಪ್ಸ್ ರಾಯಭಾರವು ವಿಫಲವಾದ ನಂತರ ಬ್ರಿಟೀಷರ ಆಡಳಿತಕ್ಕೆ ವಿರುದ್ಧವಾಗಿ ಮಹಾತ್ಮ ಗಾಂಧೀಜಿಯವರು ತನ್ನ ಮೂರನೇ ಮುಖ್ಯವಾದ ಚಳುವಳಿಯನ್ನು ಪ್ರಾರಂಭಿಸಿದರು. 1942 ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾದ ಈ ಚಳುವಳಿ 'ಕ್ವಿಟ್ ಇಂಡಿಯಾ' (ಭಾರತ ದೇಶವನ್ನು ಬಿಟ್ಟು ತೊಲಗಿ). ಗಾಂಧೀಜಿಯನ್ನು ಅರೆಸ್ಟು ಮಾಡಿ ಸೆರಮನೆಯಲ್ಲಿ ಇಟ್ಟಾಗ ಯುವ ಕಾರ್ಯಕರ್ತರು ದೇಶದಾದ್ಯಂತ ಮುಷ್ಕರವನ್ನು ನಿರ್ವಹಿಸಿದರು. ದಾಳಿಗಳಲ್ಲಿ ಆಸ್ತಿ ನಷ್ಟ ಉಂಟು ಮಾಡಿದರು. ಯುವಕರು ದೊಡ್ಡ ಸಂಖ್ಯೆಯಲ್ಲಿ ಮಹಾವಿದ್ಯಾಲಯದ ಶಿಕ್ಷಣವನ್ನು ತ್ಯೆಜಿಸಿ, ಸೆರಮನೆಗೆ ಹೊರಟರು. ಪ್ರತ್ಯೇಕಿಸಿ ರಹಸ್ಯ ಚಳುವಳಿಯಲ್ಲಿ ಕಾಂಗ್ರೆಸ್‌ನಲ್ಲಿ ಜಯಪ್ರಕಾಶ್ ನಾರಾಯಣರಂತಹ ಸಮಾಜವಾದ ಸದಸ್ಯರು ಚುರುಕಾಗಿ ಭಾಗವಹಿಸಿದರು. ಪಶ್ಚಿಮದಲ್ಲಿ ಸತಾರಾ, ಪೂರ್ವದಲ್ಲಿ ಮೇದಿನೀಪೂರ್‌ನಂತಹ ಹಲವು ಜಿಲ್ಲೆಗಳಲ್ಲಿ ಸ್ವತಂತ್ರ ಸರಕಾರಗಳನ್ನು ಪ್ರಕಟಿಸಿದರು. ಬ್ರಿಟೀಷ್ ಆಡಳಿತಗಾರರು ಮತ್ತಷ್ಟು ಬಲ ಪ್ರಯೋಗದಿಂದ ಶಕ್ತಿಯುತವಾಗಿ ಚಳುವಳಿಯನ್ನು ಅಡಗಿಸಿದರು. ಅದಾಗ್ಯೂ ಈ ಚಳುವಳಿಯನ್ನು ಅಡಗಿಸಲು ಒಂದು ವರ್ಷಕ್ಕಿಂತ ಹೆಚ್ಚು ಸಮಯ ಹಿಡಿಯಿತು.

ಅದೇ ಸಮಯದಲ್ಲಿ ಯುದ್ಧದಲ್ಲಿ ಬ್ರಿಟನ್‌ಗೆ ಬೆಂಬಲಕೊಡಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ ನಿರ್ಣಯಿಸಿತು. ನಾಜೀ ಸೈನ್ಯವು ರಷ್ಯಾದ ಮೇಲೆ ದಾಳಿ ಮಾಡಿದುದರಿಂದ ಅದು ಕಳವಳಗೊಂಡಿತು. ಪ್ರಪಂಚ ಮಟ್ಟದಲ್ಲಿನ ತೊಂದರೆಗಳನ್ನು ಗುರ್ತಿಸಿ, ಈ ಯುದ್ಧವನ್ನು ಅದು ಪ್ರಜೆಗಳ ಯುದ್ಧವಾಗಿ ತಿಳಿಯಪಡಿಸಿತು. ಇದಕ್ಕೆ ವಿರುದ್ಧವಾಗಿ ಗಾಂಧೀಜಿಯಂತಹವರು ಬ್ರಿಟನ್ ಭಾರತ ದೇಶವನ್ನು ಬಿಟ್ಟು ಹೋದರೆ ಅದು ಸ್ವತಃ ಜಪಾನ್ ದೇಶವನ್ನು ಎದುರಿಸಬಹುದೆಂದು ಭಾವಿಸಿದರು.

SCERT TELANGANA

ಅಮೇರಿಕಾ, ಯುರೋಪ್‌ಗಳಲ್ಲಿ ಜಪಾನ್ ಸಾಧಿಸಿದ ವಿಜಯಗಳುಭಾರತೀಯರ ಮೇಲೆ ಬಲವಾದ ಮುದ್ರೆಗಳು ಹಾಕಿವೆ. ಯುರೋಪ್ ವಸಾಹತು ಆಡಳಿತಗಾರರು ತಕ್ಷಣವೇ ಅಪಜಯ ಹೊಂದುತ್ತಾರೆಂದು ತಿಳಿದುಕೊಂಡರು. ಜಪಾನ್, ಏಷ್ಯಾ ದೇಶ, ಅದು ಯುರೋಪ್ ವಸಾಹತು ಆಡಳಿತಗಾರರನ್ನು ಎದುರಿಸಿದೆ. ತಾವು ಸಹ ಬ್ರಿಟನ್‌ಗೆ ವಿರುದ್ಧವಾಗಿ ಹೋರಾಡಿ, ಜಯಗಳಿಸಬಲ್ಲರೆಂದು ಭಾರತೀಯರು ತಿಳಿಯಲಾರಂಬಿಸಿದರು. ಆಂಗ್ಲೇಯರು ಉತ್ತಮವಾದ ಜಾತಿಗೆ ಸೇರಿದರೆಂಬ ಭ್ರಮೆ ನುಚ್ಚನೂರಾ ಯಿತು. ಬ್ರಿಟನ್ ಎದುರಿಸುತ್ತಿರುವ ಕ್ಲಿಷ್ಟ ಸಮಯವನ್ನು ಸುಭಾಸ್ ಚಂದ್ರ ಬೋಸರು ಒಳ್ಳೆಯ ಅವಕಾಶವಾಗಿ ಭಾವಿಸಿದರು. ಭಾರತ ದೇಶದ ಸ್ವಾತಂತ್ರವ್ಯವು ಅತ್ಯಂತ ಪ್ರಾಮುಖ್ಯತೆ ಇರುವ ಅಂಶವೆಂದು, ಬ್ರಿಟೀಷ್ ಆಡಳಿತಗಾರರನ್ನು ಹೊರ ಹಾಕುವುದಕ್ಕೆ ಜಪಾನ್ ದೇಶದ ಸಹಾಯವು ತೆಗೆದುಕೊಳ್ಳಬೇಕೆಂದು ಆತನು ಭಾವಿಸಿದನು.

ಚಿತ್ರ 14.3 : ಸುಭಾಷ್ ಚಂದ್ರಬೋಸ್

ಆತನು ರಹಸ್ಯವಾಗಿ ಜರ್ಮನಿಗೆ, ಅಲ್ಲಿಂದ ಜಪಾನ್‌ಗೆ ಹೋಗಿ 1942ರಲ್ಲಿ ಭಾರತೀಯ ಸೈನಿಕರೊಂದಿಗೆ ಒಂದು ಸೈನ್ಯವನ್ನು ತಯಾರು ಮಾಡಿದನು. ಈ ಸೈನಿಕರು ಯಾರು? ಬರ್ಮಾ, ಮಲಯಾ ದೇಶಗಳಲ್ಲಿ ಬ್ರಿಟನ್‌ನನ್ನು ಜಪಾನ್ ಸೋಲಿಸಿದಾಗ ಸೇರೆ ಹಿಡಿದ ಬ್ರಿಟೀಷ್ ಸೈನ್ಯದಲ್ಲಿ ಇರುವವರೇ ಇವರು. ಭಾರತ ರಾಷ್ಟ್ರೀಯ ಸೈನ್ಯ ಎಂಬ ಹೆಸರು ಇಟ್ಟು ತನ್ನ ಸೈನ್ಯದೊಳಗೆ ಬೋಸ್ ಇವರನ್ನು ಸೇರಿಸಿಕೊಂಡನು. ನಂತರ ಎಷ್ಟೋ ಜನ ಮಹಿಳೆ ಯರೊಂದಿಗೆ ಇತರ ಭಾರತೀಯರು ಸಹ ಈ ಸೈನ್ಯದಲ್ಲಿ ಸೇರಿದರು. ಆದರೆ ಬೋಸ್‌ನೊಂದಿಗೆ ಗಾಂಧೀಜಿಯವರು ಏಕೀಭವಿಸಲಿಲ್ಲ. ಜಪಾನ್ ದೇಶ ದವರು ಭಾರತ ದೇಶಕ್ಕೆ ವಿಮುಕ್ತದಾತರಾಗುವುದಿಲ್ಲವೆಂದು ಅವರು ಭಾವಿಸಿದರು. ಆದರೆ ಸುಭಾಷ್ ತಾನು ಆರಿಸಿಕೊಂಡ ಮಾರ್ಗದಲ್ಲಿ ಮುಂದಕ್ಕೆ ಸಾಗಿದನು. ಜಪಾನ್ ಸೈನ್ಯ ಮತ್ತು ಸೈನ್ಯದೊಂದಿಗೆ ಬೆರೆತು ಬ್ರಿಟೀಷರಿಗೆ ವಿರುದ್ಧವಾಗಿ ಸುಮಾರು ಮೂರು ವರ್ಷಗಳವರೆಗೆ ಯುದ್ಧಮಾಡಿದ್ದಾನೆ.

- ತಾವು (ಬಂಧಿಗಳಾಗಿ)ಸೆರೆಯಾಳಾಗಿ ಹಿಡಿದುಕೊಂಡ ಸೈನಿಕರನ್ನು ಬೋಸ್ ತನ್ನ ಸೈನ್ಯದೊಳಗೆ ಸೇರಿಸಿಕೊಳ್ಳುವುದನ್ನು ಜಪನೀಯರು ಏಕೆ ಅನುಮತಿಸಿದರು?
- ಭಾರತ ಸೈನಿಕರು ಭಾರತ ರಾಷ್ಟ್ರೀಯ ಸೈನ್ಯದಲ್ಲಿ ಏಕೆ ಸೇರಿದ್ದಾರೆ?
- ಯುದ್ಧದಲ್ಲಿ ಸೋತರೆ ಬ್ರಿಟೀಷರ ಕೈಯಲ್ಲಿ ಸಿಕ್ಕಿಬೀಳುತ್ತವೆ ಎಂಬ ಭಯವು ಸೈನಿಕರಿಗೆ ಏಕೆ ಇರಲಿಲ್ಲ?

ಅದು ಅತ್ಯಂತ ಕ್ಲಿಷ್ಟ,ಸಾಹಸವಂತವಾದ,ನಾಟಕೀಯ ಪರಿಣಾಮಗಳ ಕಾಲ ಒಂದು ಹಂತದಲ್ಲಿ ಮಿತ್ರ ಪಕ್ಷಗಳು ಯುದ್ಧದಲ್ಲಿ ಸೋಲಬಹುದೆಂದು ಅನ್ನಿಸಿರು. ಸ್ಟಾಲಿನ್ ಗ್ರಾಡ್‌ನಲ್ಲಿ ನಿರ್ಣಾಯಕ (ಜಯ)ಗೆಲುವು ಸಾಧಿಸಿದ್ದರಿಂದ ರಷ್ಯಾ ನಾಜೀ ಶಕ್ತಿಗಳನ್ನು ನಿಯಂತ್ರಿಸಿತು. ಮಿತ್ರ ವರ್ಗಗಳು ಯುದ್ಧದ ಮೇಲೆ ತಿರುಗಿ ಹಿಡಿತ ಸಾಧಿಸಿ ಅಂತಿಮವಾಗಿ ಎರಡನೇ ಪ್ರಪಂಚ ಯುದ್ಧದಲ್ಲಿ ಗೆಲುವು ಸಾಧಿಸಿದೆ. ಸುಭಾಷ್ ಚಂದ್ರಬೋಸ್ ಭಾರತ ರಾಷ್ಟ್ರೀಯ ಸೈನ್ಯವು ಬ್ರಿಟೀಷರ ಕೈಯಲ್ಲಿ ಸೋತಿತು. ಆ ನಂತರ ಘಟನೆಗಳಲ್ಲಿ ಬೋಸ್ ಮರಣಿಸಿದ್ದಾನೋ ಮಾಯವಾಗಿದ್ದಾನೋ ಖಚಿತವಾಗಿ ತಿಳಿದು ಬಂದಿಲ್ಲ. 1944 ಜೂನ್ ತಿಂಗಳಲ್ಲಿ ಯುದ್ಧವು ಮುಕ್ತಾಯ ಹಂತಕ್ಕೆ ಸೇರಿಕೊಳ್ಳುತ್ತಿದ್ದಾಗ ಬ್ರಿಟೀಷ್ ಸರಕಾರವು ಗಾಂಧೀಜಿಯನ್ನು ಸೆರಮನೆಯಿಂದ ಬಿಡುಗಡೆ ಮಾಡಿದೆ. ಭಾರತ ಸ್ವಾತಂತ್ರ್ಯವನ್ನು ಕುರಿತು ಮತ್ತೊಂದು ಸಾರಿ ರಾಯಭಾರಕ್ಕೆ ಸಮಯವು ನಿರ್ದೇಶಿಸಲಾಗಿದೆ.

- 1942-45 ಮಧ್ಯ ಕಾಲವನ್ನು ಸಮೀಕ್ಷಿಸಿರಿ ಮೊದಲಿಗಿಂತ ಈಗ ಬ್ರಿಟೀಷ್ ಆಡಳಿತಕ್ಕೆ ವಿರುದ್ಧವಾಗಿ ಭಾರತೀಯರ ಪ್ರತಿರೋಧಶಕ್ತಿ ಹೆಚ್ಚಿದೆಯಾ ವಿವರಿಸಿರಿ.

SCERT TELANGANA

ಪ್ರಜೆಗಳ ದಂಗೆ – 1946 – 48

ಭಾರತ ರಾಷ್ಟ್ರೀಯ ಸೈನ್ಯಕ್ಕೆ ಹೊಂದಿದ ಸೈನಿಕರನ್ನು ಸೆರಮನೆಯಲ್ಲಿಟ್ಟು ಅವರನ್ನು ಶಿಕ್ಷಿಸಬೇಕೆಂದು ಬ್ರಿಟೀಷ್ ಆಡಳಿತಗಾರರು ನಿರ್ಣಯಿಸಿದರು.ದೇಶದ್ರೋಹದ ಕೆಳಗೆ ಅವರನ್ನು ವಿಚಾರಿಸಿ ಗಲ್ಲುಶಿಕ್ಷೆ ವಿಧಿಸಬೇಕೆಂದು ನಿರ್ಣಯಿಸಿದರು.

- ಘಟನೆಗಳು ಈ ವಿಧವಾಗಿ ತಿರುವು ತೆಗೆದುಕೊಳ್ಳುವುದರಿಂದ ಪ್ರಜೆಗಳ ಜೀವನ ಯಾವ ವಿಧವಾಗಿ ಪ್ರಭಾವಿತವಾಗಿತಗೊಳ್ಳುತ್ತವೆ ?
- ನಾಯಕರಾಗಿ ಮೆಚ್ಚಿದ ಭಾರತ ರಾಷ್ಟ್ರೀಯ ಸೈನಿಕರನ್ನು ಬ್ರಿಟೀಷರು ದೇಶದ್ರೋಹಿಗಳಾಗಿ ಪರಿಗಣಿಸಿ, ವಿಚಾರಿಸಿ ಗಲ್ಲಿಗೇರಿಸುವುದು ಇತರ ಭಾರತೀಯರನ್ನು ಹೇಗೆ ಪ್ರಭಾವಿತಗೊಳಿಸಿರುತ್ತದೆ?

ಭಾರತ ರಾಷ್ಟ್ರೀಯ ಸೈನಿಕರ ವಿಚಾರಣೆ ನಡೆಯುತ್ತಿದ್ದಾಗ ದೇಶದಲ್ಲಿ ಹಲವು ಪ್ರದೇಶಗಳಲ್ಲಿ ಅ ಶಾಂತಿ ಅಸಂತೃಪ್ತಿ ಉಂಟಾದವು. ರಾಷ್ಟ್ರೀಯ ಚೈತನ್ಯದೊಂದಿಗೆ ಉಂಟಾದ ಈ ಪ್ರಜಾದಂಗೆಯಲ್ಲಿ ಹಿಂದೂ – ಮುಸ್ಲಿಂಮರ ಗುರ್ತಿಸುವಿಕೆ, ವಿಭಜನೆ ರಾಜಕೀಯಗಳು ಅಂತಹ ಪ್ರಾಧಾನ್ಯತೆಯನ್ನು ಕಳೆದುಕೊಂಡವು. ಉದಾಹರಣೆಗೆ ಭಾರತ ರಾಷ್ಟ್ರೀಯ ಸೈನಿಕರಲ್ಲಿ ವಿಚಾರಿಸಲ್ಪಡುತ್ತಿರುವವರಲ್ಲಿ ಬಹಳ ಜನ ಮುಸ್ಲಿಮರು, ಆದರೆ ಅವರ ಬಗ್ಗೆ ಪ್ರಜೆಗಳ ಅನುಕಂಪ ಹೆಚ್ಚಾಗಿ ಅವರ ಮತವನ್ನು ಕುರಿತು ಯಾರೂ ಆಲೋಚಿಸಲಿಲ್ಲ.

ಯುದ್ಧವು ಮುಗಿದ ನಂತರ ನೀವು ಇದ್ದ ಹಾಗೆ ಊಹಿಸಿಕೊಂಡರೆ ದೇಶದ ಪರಿಸ್ಥಿತಿಯನ್ನು ಹಗುರವಾಗಿ ಅರ್ಥಮಾಡಿಕೊಳ್ಳುತ್ತೀರಿ. ಆಹಾರ ಧಾನ್ಯಗಳ ಕೊರತೆ, ಆಹಾರ ಪಾಲುಗಳು , ಹೆಚ್ಚುತ್ತಿರುವ ಬೆಲೆಗಳು, ಅಕ್ರಮ ಸಂಗ್ರಹಣೆ, ಕಪ್ಪು ಮಾರುಕಟ್ಟೆ ಅಂತಹವುಗಳೊಂದಿಗೆ ಪ್ರಜೆಗಳಲ್ಲಿ ಹೆಚ್ಚು ಅಶಾಂತಿ ಉಂಟಾಯಿತು. ಕಡಿಮೆ ವೇತನಗಳ ಬಗ್ಗೆ ಪ್ರಜೆಗಳು ಕೋಪಗೊಂಡಿದ್ದರು. ಬೆಲೆಗಳ ಮೇಲೆ ರೈಲ್ವೇ, ಅಂಚೆ ಉದ್ಯೋಗಿಗಳು, ಇತರ ಸರಕಾರದ ಉದ್ಯೋಗಿಗಳು ಅಖಿಲ ಭಾರತ ಮುಷ್ಕರ ಮಾಡಬೇಕೆಂಬ ಯೋಜನೆಯೊಂದಿಗೆ ಇದ್ದರು.

1946ಫೆಬ್ರವರಿ 16ರಂದು ಮುಂಬೈ ಬಂದರ್‌ನಲ್ಲಿ ರಾಮ್ ನೌಕಾಪಡೆಯಲ್ಲಿ ಭಾರತ ಸೈನಿಕರು ಕಡಿಮೆ ಗುಣಮಟ್ಟದ ಆಹಾರವು ತಮ್ಮ ಬಗ್ಗೆ ಬ್ರಿಟೀಷ್ ಅಧಿಕಾರಿಗಳ ಪ್ರವರ್ತನೆಯ ಬಗ್ಗೆ ಪ್ರತಿಭಟಿಸಿ ಉಪವಾಸ ಸತ್ಯಾಗ್ರಹಕ್ಕೆಗೊಂಡರು. (ಅನತಿಕಾಲದಲ್ಲೇ) ತ್ವರಿತವಾಗಿ ಈ ಮುಷ್ಕರವು ಮುಂಬೈಯಲ್ಲಿ ಇತರ ನೌಕಾ ವರ್ಗಗಳಿಗೆ, ಭಾರತ ದೇಶದಲ್ಲಿ ಎಲ್ಲಾ ನೌಕೆಪಡೆ ಕೇಂದ್ರಗಳಿಗೆ ವಿಸ್ತರಿಸಿತು. ದಂಗೆಕೋರರು ನೌಕೆಗಳ ಮೇಲೆ (ಮೂರು ರಂಗುಗಳ) ತ್ರಿವರ್ಣ ಪತಾಕೆ, ಅರ್ಧಚಂದ್ರಾ ಕಾರದ ಪತಾಕೆ, ಖಡ್ಗ, ಸುತ್ತಿಗೆ ಪತಾಕೆಗಳನ್ನು ಕಲಿಸಿ ಹಾರಿಸಿದರು. ಎಂ.ಎಸ್.ಖಾನ್ ಮುಖಂಡನಾಗಿ ನೌಕಾಪಡೆಯ ಕೇಂದ್ರೀಯ ಮುಷ್ಕರ ಸಂಸ್ಥೆ ಏರ್ಪಟ್ಟಿತು. ಒಳ್ಳೆಯ ಆಹಾರ ಕೊಡಬೇಕೆಂದು ಬ್ರಿಟೀಷ್ ಸೈನಿಕರಿಗೆ, ಭಾರತೀಯ ರಾಷ್ಟ್ರೀಯ ಸೈನಿಕರನ್ನು, ಇತರ ರಾಜಕೀಯ ಸೆರೆಯಾಳುಗಳನ್ನು ಬಿಡುಗಡೆ ಮಾಡಬೇಕೆಂದು, ಇಂಡೋನೇಷಿಯಾ ದಿಂದ ಭಾರತೀಯ ಸೈನಿಕರನ್ನು ಉಪಸಂಹರಿ ಸಬೇಕೆಂದು ಈ ಸಂಸ್ಥೆ ಕೋರಿತು.

ಚಿತ್ರ 14. 4: ಭಾರತದೇಶ ಸ್ವಾತಂತ್ರ್ಯ ಕ್ಕೋಸ್ಕರ 1946ರಲ್ಲಿ ದಂಗೆ ಮಾಡಿದ ನೌಕಾ ಪಡೆಗಳ ಚಿಹ್ನೆ

ಈ ಮುಷ್ಕರದಲ್ಲಿ 78 ಹಡಗುಗಳು, , 20 ಕರಾವಳಿ ಪ್ರದೇಶದ ಕಛೇರಿಗಳು, , 20,000 ಜನ ಸೈನಿಕರು ಭಾಗವಹಿಸಿದ್ದರು. ಈ ಮುಷ್ಕರಕ್ಕೆ ಬೆಂಬಲವಾಗಿ ನೂರಾರು ಹಿಂದು ಮುಸ್ಲಿಂ ಯುವಕರು ಮುಂಬೈ ಬೀದಿಗಳಲ್ಲಿ ಬಂದು ಸೈನಿಕರೊಂದಿಗೆ, ಪೋಲೀಸರೊಂದಿಗೆ ಜಗಳವಾಡಿದರು. ಫೆಬ್ರವರಿ 22 ರಂದು ಮುಂಬೈಯಲ್ಲಿ ಮೂರು ಲಕ್ಷ ಜನ ಕೈಗಾರಿಕಾ ಕಾರ್ಮಿಕರು ತಮ್ಮ ಉಪಕರಣಗಳನ್ನು ಬಿಟ್ಟುಕೊಟ್ಟು ಎರಡು ದಿನಗಳವರೆಗೆ, ಪೋಲೀಸರು ಮತ್ತು ಸೈನಿಕರೊಂದಿಗೆ ಘರ್ಷಣೆ ಉಂಟುಮಾಡಿದರು.

SCERT TELANGANA

1946ರಲ್ಲಿ ದೇಶದಲ್ಲಿ ಹಲವು ಪ್ರದೇಶಗಳಲ್ಲಿ ಕೈಗಾರಿಕೆಗಳು, ಕೈಗಾರಿಕೆಗಳಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿ, ಮುಷ್ಕರ ಮಾಡಿದರು. ಭಾರತೀಯ ಕಮ್ಯೂನಿಷ್ಟ್ ಪಕ್ಷ, ಸಮಾಜವಾದ ಪಕ್ಷಗಳು ಈ ಚಳುವಳಿಯಲ್ಲಿ ಚುರುಕಾಗಿ ಭಾಗವಹಿಸಿದವು. ಗ್ರಾಮೀಣ ಪ್ರದೇಶಗಳು ಸಹ ಅಸಂತೃಪ್ತಿಯಿಂದ ಸಿಡಿದೇದ್ದವು.

ಬಂಗಾಳದಲ್ಲಿ ದೊಡ್ಡ ಭೂಸ್ವಾಮಿಗಳಿಂದ ಭೂಮಿಯನ್ನು ಕೃಷಿಮಾಡಲು ತೆಗೆದುಕೊಂಡ ಚಿಕ್ಕ, ಬಡ ರೈತರು ಆಂದೋಲನೆ ಮಾಡತೊಡಗಿದರು. ಈ ಸಮಯದಲ್ಲಿ ಗುತ್ತಿಗೆಯ ಕೆಳಗೆ ತಮಗೆ ಅರ್ಧ ಅಥವಾ ಅದಕ್ಕಿಂತೂ ಕಡಿಮೆ ಕೊಡುವಾಗ ತಮ್ಮ ಭಾಗವನ್ನು ಮೂರನೇ ಎರಡು ಭಾಗಕ್ಕೆ ಹೆಚ್ಚಿಸಬೇಕೆಂದು ಅವರು ಕೋರಿದರು. ಇದನ್ನು 'ತೆಭಾಗ ಚಳುವಳಿ' ಎನ್ನುವರು. ಇದಕ್ಕೆ ಆ ರಾಜ್ಯದ ರೈತರ ಸಭೆ ನಾಯಕತ್ವವಹಿಸಿತು.

ಹೈದರಾಬಾದ್‌ನಲ್ಲಿ ಕಮ್ಯೂನಿಸ್ಟ್ ಪಕ್ಷ ತೆಲಂಗಾಣ ಪ್ರಾಂತ ರೈತರ ಚಳುವಳಿಗೆ ನಾಯಕತ್ವವಹಿಸಿದೆ. ತೆಲಂಗಾಣ ರೈತರು ಭೂಸ್ವಾಮಿಗಳಿಗೆ ವಿರುದ್ಧವಾಗಿ ಹೋರಾಡುತ್ತಾ ರೈತರ ಸಾಲಗಳನ್ನು ಮನ್ನ ಮಾಡಬೇಕೆಂದು, ಗುಲಾಮ ಗಿರಿಯನ್ನು ನಿರ್ಮೂಲಿಸಬೇಕೆಂದು, ಊಳುವವನಿಗೆ ಭೂಮಿಯನ್ನು ಕೊಡಬೇಕೆಂದು ಕೋರಿದರು. ಆಡಳಿತಗಾರರು, ಅವರ ಸೈನಿಕರಿಗೆ ವಿರುದ್ಧವಾಗಿ ರೈತಾಂಗವು ಶಸ್ತ್ರಸಜ್ಜಿತರಾಗಿ ಹೋರಾಡಿದರು. ಈ ಹೋರಾಟದಲ್ಲಿ ಸುಮಾರು 3000 ಗ್ರಾಮಗಳು ಭಾಗವಹಿಸಿದವು. ಮತ್ತೊಂದು ಶಸ್ತ್ರ ಸಜ್ಜಿತ ಹೋರಾಟವು ಟ್ರಾವೆಲ್‌ಕೋರ್‌ನಲ್ಲಿ ಪ್ರನ್ನಪ್ರಾ-ವಾಯಲಾರ್ ಪ್ರದೇಶದಲ್ಲಿ ನಡೆದಿದೆ.

- ದೇಶದಲ್ಲಿಯ ಸಾಧಾರಣ ಪ್ರಜೆಗಳ ಕ್ರಮಗಳನ್ನು ಸಮೀಕ್ಷಿಸಿರಿ.
- ಮೇಲೆ ಹೆಸರಿಸಿದ ಹಲವು ಪ್ರಜಾಚಳುವಳಿಗಳಲ್ಲಿ ಮತಪರ ವ್ಯತ್ಯಾಸಗಳನ್ನು ಹಿಡಿಸಿಕೊಂಡಿಲ್ಲವೆಂದು ಗಮನಿಸಿದ್ದೇವೆ. ಈ ಚಳುವಳಿಗಳಲ್ಲಿ ಪ್ರಜೆಗಳ ಐಕ್ಯತೆಗೆ ಕಾರಣವೇನು?

ಮುಸ್ಲಿಂಲೀಗು, ಕಾಂಗ್ರೆಸ್ - ಅಧಿಕಾರ ಬದಲಾವಣೆಗೆ ರಾಯಭಾರಗಳು

1945ರಲ್ಲಿ ಅಗ್ರನಾಯಕರ ನಡುವೆ ರಾಜಕೀಯ ರಾಯಭಾರಗಳು ತಿರುಗಿ ಪ್ರಾರಂಭವಾದಾಗ ಸಂಪೂರ್ಣ ಸ್ವಾತಂತ್ರವು ಕೊಡುವುದಕ್ಕೆ ಮೊದಲು ವೈಪ್ರಾಯ್, ಸೈನಿಕ ಪಡೆಗಳ ಕಮಾಂಡರ್ -ಇನ್-ಚೀಫ್‌ರನ್ನು ಬಿಟ್ಟು ಕೇಂದ್ರ ಕಾರ್ಯನಿರ್ವಹಣೆಯ ವರ್ಗವನ್ನು ಪೂರ್ತಿಯಾಗಿ ಭಾರತೀಯರೊಂದಿಗೆ ಏರ್ಪಡಿಸಿ ಕೊಳ್ಳುವುದಕ್ಕೆ ಬ್ರಿಟನ್ ಸಿದ್ಧವಾಗಿತು. ಈ ಕಾರ್ಯನಿರ್ವಹಣೆಯ ವರ್ಗದಲ್ಲಿ ಮುಸ್ಲಿಂ ಸದಸ್ಯರನ್ನು ಆಯ್ಕೆಮಾಡುವುದಕ್ಕೆ ಮುಸ್ಲಿಂಲೀಗ್‌ಗೆ ಸಂಪೂರ್ಣ ಅಧಿಕಾರವು ಇರಬೇಕೆಂದು ಜಿನ್ನಾ ಹಠಹಿಡಿದುದ್ದರಿಂದ ಅಧಿಕಾರ ಬದಲಾವಣೆಗೆ ಸಂಬಂಧಿಸಿದ ಚರ್ಚೆಗಳು ವಿಫಲವಾದವು. ಇದರ ಬಗ್ಗೆ ಇತರರು ಆಕ್ಷೇಪಣೆ ವ್ಯಕ್ತಪಡಿಸಿದರು. ರಾಷ್ಟ್ರೀಯ ವಾದ ಮುಸ್ಲಿಮರಲ್ಲಿ ಹಲವು ಜನರ ಬೆಂಬಲ ಕಾಂಗ್ರೆಸ್‌ಗೆ ಇತು. ಪಂಜಾಬ್‌ನಲ್ಲಿ ಯೂನಿಯನಿಸ್ಟ್ ಪಕ್ಷದಲ್ಲಿ ಹಲವರು ಮುಸ್ಲಿಮರು ಸದಸ್ಯರಾಗಿದ್ದರೆ. ಈ ಎರಡೂ ಪಕ್ಷಗಳು ಮುಸ್ಲಿಂಲೀಗು ಬಯಕೆಯನ್ನು ಸಮರ್ಥಿಸಲಿಲ್ಲ. ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧ್ಯಕ್ಷನಾಗಿ ಮೌಲಾನಾ ಅಜಾದ್ ಇರುವುದರಿಂದ ಅದರ ಪ್ರತಿನಿಧಿ ವೃಂದಕ್ಕೆ ಅವನು ನಾಯಕತ್ವವನ್ನು ವಹಿಸಿದನು.

1946ರಲ್ಲಿ ರಾಜ್ಯ ಸರಕಾರಕ್ಕೆ ಚುನಾವಣೆಗಳು ನಡೆದವು. ಕೇಂದ್ರದಲ್ಲಿ ಮೀಸಲಾತಿ ಮಾಡಿದ 30 ಸ್ಥಾನಗಳನ್ನು, ಸಂಸ್ಥಾನದಲ್ಲಿ 569 ಸ್ಥಾನಗಳಲ್ಲಿ 442 ಸ್ಥಾನಗಳನ್ನು ಮುಸ್ಲಿಂಲೀಗು ಗೆದ್ದುಕೊಂಡಿತು. ಅಂದರೆ 1946 ರ ಕೊನೆಗೆ ಮುಸ್ಲಿಂ ಮತದಾರರಲ್ಲಿ ಪ್ರಧಾನ ಪಕ್ಷವಾಗಿ ಮುಸ್ಲಿಂಲೀಗು ಆವಿರ್ಭವಿಸಿ ಭಾರತೀಯ ಮುಸ್ಲಿಮರ ಒಂದು ಏಕೈಕ ಪ್ರತಿನಿಧಿ ಎಂಬ ತನ್ನ ವಾದನೆಯನ್ನು ನಿಜ ಮಾಡಿದೆ. ಮುಸ್ಲಿಂ ಮತಗಳಲ್ಲಿ 86 ಶೇಕಡಕ್ಕಿಂತ ಹೆಚ್ಚು ಆ ಪಕ್ಷಕ್ಕೆ ಬಂದವು. 1946ರಲ್ಲಿ ಸಾಧಾರಣ ನಿಯೋಜಕ ವರ್ಗಗಳಲ್ಲಿ ಕಾಂಗ್ರೆಸ್ ಪಕ್ಷ ಮುಸ್ಲಿಮೇತರ ಮತಗಳಲ್ಲಿ 91 ಶೇಕಡದೊಂದಿಗೆ ಅಖಂಡ ವಿಜಯವನ್ನು ಸಾಧಿತು.

ದೇಶ ವಿಭಜನೆ - ಪರ್ಯಾಯ ಮಾರ್ಗಗಳು

ಮುಸ್ಲಿಂಲೀಗು ಬಯಕೆಯನ್ನು ಪರಿಶೀಲಿಸಿ ಸ್ವತಂತ್ರ್ಯ ಭಾರತ ದೇಶಕ್ಕೆ ಅನುಕೂಲವಾದ ರಾಜಕೀಯ ಚೌಕಟ್ಟನ್ನು ಸಿಫಾರಸ್ಸು ಮಾಡುವುದಕ್ಕೆ ಬ್ರಿಟೀಷ್ ಮಂತ್ರಿ ವರ್ಗವು 1946 ಮಾರ್ಚಿನಲ್ಲಿ ಮೂರು ಜನ ಸದಸ್ಯರ ವೃಂದವನ್ನು ಡಿಲ್ಲಿಗೆ ಕಳುಹಿಸಿತು. ಈ ಕ್ಯಾಬಿನೆಟ್ ಮಿಷನ್ ಮೂರು ತಿಂಗಳವರೆಗೆ ದೇಶವೆಲ್ಲಾ ತಿರುಗಿ ಭಾರತ ದೇಶವನ್ನು

ವಿಭಜಿಸದಂತೆ ಮೂರು ಶ್ರೇಣಿಯ ಒಕ್ಕೂಟವನ್ನು ಪ್ರತಿಪಾದಿಸಿತು. ಮೊದಲಿಗೆ ಎಲ್ಲಾ ಪ್ರಧಾನ ಪಕ್ಷಗಳು ಈ ಯೋಜನೆಯನ್ನು ಒಪ್ಪಿಕೊಂಡವು. ಆದರೆ ಈ ಯೋಜನೆಯನ್ನು ವಿವಿಧ ಪಕ್ಷಗಳು ಪರಸ್ಪರ ವಿರುದ್ಧವಾದ ಪದ್ಧತಿಯಲ್ಲಿ ಅರ್ಥಮಾಡಿ ಕೊಳ್ಳುವುದರಿಂದ ಈ ಒಪ್ಪಂದವು ಹೆಚ್ಚಿನ ಸಮಯ ನಿಲ್ಲಲಿಲ್ಲ. ಅದರೊಂದಿಗೆ ಅಂತಿಮವಾಗಿ ಕ್ಯಾಬಿನೆಟ್ ಮಿಷನ್ ಪ್ರತಿಪಾದನೆಯನ್ನು ಕಾಂಗ್ರೆಸ್ ಮುಸ್ಲಿಂಲೀಗು ಎರಡುಪಕ್ಷಗಳೂ ಜಾರಿಗೊಳಿಸಲಿಲ್ಲ.

ತಮ್ಮ ಬಯಕೆಗಳು ಚರ್ಚೆಗಳ ಮುಖಾಂತರ ಈಡೇರುವುದಿಲ್ಲವೆಂದು ನಿರ್ಣಯಿಸಿದ ಮುಸ್ಲಿಂಲೀಗು ಪ್ರಜೆಗಳನ್ನು ಬೀದಿಗಳಲ್ಲಿ ಬರಬೇಕೆಂದು ಕರೆಕೊಟ್ಟಿತು. ತಮ್ಮ ಬಯಕೆಯಾದ ಪಾಕಿಸ್ತಾನ್‌ವನ್ನು ಸಾಧಿಸಿಕೊಳ್ಳು ವುದಕ್ಕೆ ಪ್ರತ್ಯಕ್ಷ ಕಾರ್ಯಾಚರಣೆಗೆ ತೊಡಗುವುದಕ್ಕೆ ನಿರ್ಣಯಿಸಿಕೊಂಡು 1946 ಆಗಸ್ಟ್ 16ನೇ ದಿನಾಂಕವನ್ನು ಪ್ರತ್ಯಕ್ಷ ಕಾರ್ಯಾಚರಣೆ ದಿನವಾಗಿ ಪ್ರಕಟಿಸಿತು. ಆ ದಿನದಂದು ಕಲಕತ್ತಾದಲ್ಲಿ ಗಲಭೆಗಳು ಉಂಟಾಗಿ ಬಹಳ ದಿನಗಳವರೆಗೆ ನಡೆದವು. ಇವುಗಳಲ್ಲಿ ಸಾವಿರಾರು ಜನ ಮೃತಪಟ್ಟರು. 1947 ಮಾರ್ಚಿ ತಿಂಗಳಿಗೆಲ್ಲಾ ಹಿಂಸಾತ್ಮಕ ಘಟನೆಗಳು ಉತ್ತರ ಭಾರತ ದೇಶದಾದ್ಯಂತ ವ್ಯಾಪಿಸಿದವು.

ಸಾಮೂಹಿಕ ಹಿಂಸೆ ನಡೆದ ಈ ಹಿಂಸಾತ್ಮಕ ಕ್ರಮಗಳ ಸಂದರ್ಭದಲ್ಲಿ 1947 ಮಾರ್ಚಿ ತಿಂಗಳಲ್ಲಿ ಪಂಜಾಬನ್ನು ಎರಡು ಭಾಗಗಳಾಗಿ ವಿಭಜಿಸುವುದಕ್ಕೆ ಕಾಂಗ್ರೆಸ್ ಉನ್ನತ ನಾಯಕತ್ವವು ಸಮ್ಮತಿಸಿತು. ಒಂದು ಭಾಗದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಉಳಿದ ಅರ್ಧ ಭಾಗದಲ್ಲಿ ಹಿಂದೂಗಳು, ಸಿಕ್ಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇದೇ ಸಿದ್ಧಾಂತವನ್ನು ಬಂಗಾಳಕ್ಕೆ ಸಹ ವರ್ತಿಸುವಂತೆ ಮಾಡುವುದಕ್ಕೆ ಕಾಂಗ್ರೆಸ್ ಒಪ್ಪಿಕೊಂಡಿತು.

ಚಿತ್ರ 14.5: ಸ್ವಾತಂತ್ರ್ಯ

1947 ಫೆಬ್ರವರಿ ತಿಂಗಳಲ್ಲಿ ವಾವೆಲ್ ಸ್ಥಾನದಲ್ಲಿ ವೈಸ್ರಾಯ್‌ಯಾಗಿ ಮೌಂಟ್ ಬ್ಯಾಟನ್ ಬಂದನು. ಮುಂದಕ್ಕೆ ಹೋಗುವುದಕ್ಕೆ ಮೌಂಟ್‌ಬ್ಯಾಟನ್ ಕೊನೆಯ ಸಲ ಚರ್ಚೆಗಳಿಗೆ ಆಹ್ವಾನಿಸಿದನು. ಇವು ಸಹ ವಿಫಲವಾದುದರಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುತ್ತೇವೆಂದು ಅದರೊಂದಿಗೆ ದೇಶವನ್ನು ವಿಭಜಿಸುತ್ತವೆಂದು ಸಹ ಪ್ರಕಟಿಸಿದನು. ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಪಂಜಾಬ್ ಪ್ರಾಂತವು, ಎಸ್.ಡಬ್ಲ್ಯೂ, ಎಫ್,ಪಿ.ಸಿಂದ್ ಬಲುಚಿಸ್ತಾನ್, ಪೂರ್ವ ಬಂಗಾಳಗಳು ಹೊಸ ದೇಶವಾದ ಪಾಕಿಸ್ತಾನದಲ್ಲಿನ ಭಾಗವಾಗಿ ಇರುತ್ತವೆ. ಬ್ರಿಟೀಷ್ ಸರಕಾರದಿಂದ ಪಾಕಿಸ್ತಾನ್‌ಗೆ ಅಧಿಕಾರ ಬದಲಾವಣೆ 1947 ಆಗಸ್ಟ್ 14ನೇ ದಿನಾಂಕ, ಭಾರತ ದೇಶಕ್ಕೆ 15ರಂದು ಮಾಡುತ್ತೇವೆಂದು ಪ್ರಕಟಿಸಿದರು. ಪ್ರಜೆಗಳನ್ನು ವರ್ಷದವರೆಗೆ ಆವರಿಸಿಕೊಂಡ ಗಲಭೆಗಳು, ರಕ್ತಪಾತ, ದ್ವೇಷಗಳಿಗೆ ಇದೊಂದೆ ಕಾರ್ಯರೂಪದ ಪರಿಷ್ಕಾರವಾಗಿ ಕಾಣಿಸಿತು.

ದೇಶ ವಿಭಜನೆ - ವಲಸೆಗಳು

- ಕಾಂಗ್ರೆಸ್ ಪಕ್ಷಕ್ಕೆ ಅನುಮೋದನೆ ಯೋಗ್ಯವಾದ ಮುಸ್ಲಿಂಲೀಗು ಬಯಕೆಗಳು ಏನು? ಕಾಂಗ್ರೆಸ್ ತಿಳಿಸಿದ ಕಾರಣಗಳೊಂದಿಗೆ ಏಕೀಭವಿಸುತ್ತೀರಾ?
- ಪ್ರಜೆಗಳ ಅಭಿಪ್ರಾಯಗಳನ್ನು 1946 ರ ಚುನಾವಣೆಗಳು ಯಾವ ವಿಧವಾಗಿ ಸೂಚಿಸಿವೆ? ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ?

ಮುಸ್ಲಿಂ ಧರ್ಮದ ಪಾಕಿಸ್ತಾನ ಏರ್ಪಟ್ಟಿದ್ದರಿಂದ ಬಹಳ ಜನ ಪ್ರಜೆಗಳ ಮುಂದೆ ಊಹಿಸದ ದುಃಖಕರವಾದ ಪರಿಸ್ಥಿತಿ ಎದುರಾಗಿತು. ಹೊಸದಾಗಿ ಗೆರೆಹಾಕಿದ ಗಡಿ ಪ್ರದೇಶದ (ಸರಿಹದ್ದು) ರೇಖೆಗೆ ಒಂದು ಕಡೆ ಇರುವ ಹಿಂದೂಗಳಲ್ಲಿ ಅಭದ್ರತಾ ಭಾವವು ಏರ್ಪಟ್ಟು ವಲಸೆ ಹೋಗುವುದು ಖಚಿತವಾಗಿತು. ಈ ಹೊಸ ಗಡಿ ರೇಖೆಗೆ ಆಚೆಕಡೆ ಇರುವ ಮುಸ್ಲಿಮರಲ್ಲಿ ಸಹ ಇದೇ ಪರಿಸ್ಥಿತಿ. ಎಲ್ಲರೂ ಇದನ್ನು ಬಯಸದೇ ಇರಬಹುದು.

SCERT TELANGANA

VOLKART

The Statesman

(With which the FRIEND OF INDIA is Incorporated.)

PUBLISHED SIMULTANEOUSLY FROM CALCUTTA AND DELHI.

QUALITY — There is TRUTH in our Quality — MODERN FURNISHERS

Vol. CXIII. No. 23112 REG. No. C193 CALCUTTA, FRIDAY, AUGUST 15, 1947. TWO ANNAS.

TWO DOMINIONS ARE BORN

Political Freedom For One-Fifth Of Human Race

POWER ASSUMED BY INDIANS

Constituent Assembly Members Take The Oath

WORK FOR COMMON PROSPERITY

From Our Special Representative

NEW DELHI, Aug 15.—Two new Dominions, India and Pakistan, were born at zero hour today, ushering in political freedom to 400 million people, constituting one-fifth of the human race.

Close Friendship with Britain

Nehru's Reply to Mr. Attlee

NO DISTURBANCE IN CALCUTTA

No incidents of a communal nature occurred in Calcutta and Howrah yesterday.

Joyful Scenes In Calcutta

Celebrations By Hindus And Muslims

By a Staff Reporter

First Governor of W. Bengal

C. R. Sworn In This Morning

By a Staff Reporter

TWO HOLIDAYS

Gandhi & Suhrawardy to Fast and Pray Today

Meeting Listens to Mahatma Without Interruption

By a Staff Reporter

First Cabinet of India Begins to Function

Pandit Nehru Heads Dominion Ministry of Fourteen

INTERNATIONAL RIGHTS OF INDIAN DOMINION

CALCUTTA WEATHER

It's an OMEGA

Ch. ABRECHT

D-5, CLIVE BUILDINGS CALCUTTA

ಚಿತ್ರ 16.6: ಭಾರತ ಸ್ವಾತಂತ್ರ್ಯದ ಮೇಲೆ ದಿನ ಪತ್ರಿಕೆ ವರದಿ. ಇದರಲ್ಲಿ ಯಾವ ಯಾವ ಅಂಶಗಳನ್ನು ಗುರ್ತಿಸಿದ್ದೀರಿ? ಚರ್ಚಿಸಿರಿ.

SCERT TELANGANA

ತಮ್ಮ ಮನೆ, ಊರುಗಳು, ಪಟ್ಟಣಗಳನ್ನು ಬಿಟ್ಟು ಹೋಗಬೇಕಾದುದರಿಂದ ಒಬ್ಬರ ಬಗ್ಗೆ ಇನ್ನೊಬ್ಬರಿಗೆ ಕೋಪ, ವೈಶಮ್ಯಗಳು ಹೆಚ್ಚಾದವು. ಒಟ್ಟಿನಲ್ಲಿ 1.5 ಕೋಟಿ ಹಿಂದೂಗಳು, ಮುಸ್ಲಿಮ್ಮರು ನಿರಾಶ್ರಿತರಾದರು. ಕೊಲೆಗಳು, ದರೋಡೆ, ಸುಡುವಿಕೆ (ದಹನಗಳು) ಯತೇಚ್ಛವಾಗಿ ಮುಂದುವರೆದವು. ಹಿಂದೂಗಳು, ಮುಸ್ಲಿಮರು ಸೇರಿ ಎರಡರಿಂದ ಐದು ಲಕ್ಷ ಜನ ಕೊಲ್ಲಲ್ಪಟ್ಟಿದ್ದಾರೆ. ಅವರು ನಿರಾಶ್ರಿತರಾಗಿ ಬದಲಾದರು, ಪುನರ್ ನಿವಾಸ ಶಿಬಿರಗಳಲ್ಲಿ ಕಾಲಕಳೆದರು. ರೈಲುಗಳಲ್ಲಿ ಹೊಸ ಮನೆಗಳನ್ನು ಅನ್ವೇಷಿಸುವುದಕ್ಕೆ ಹೊರಟರು. ಶಾಂತಿ, ಸಹೋದರ ಭಾವನೆ ಸಂದೇಶಗಳನ್ನು ಸಾರುತ್ತಾ ಗಾಂಧೀಜಿಯು ಗಲಭೆಗಳಿಗೆ ಗುರಿಯಾದ ಜನರ ಶಿಬಿರಗಳ ನಡುವೆ, ಆಸ್ಪತ್ರೆಗಳಲ್ಲಿ ಕಾಲ ಕಳೆದರು. ತಾನು ಇಷ್ಟೊಂದು ಕಷ್ಟಪಟ್ಟಿದ್ದು ಇಂತಹ ಸ್ವಾತಂತ್ರ್ಯ ಸ್ವರಾಜ್ಯಗಳಿಗೋಸ್ಕರವಲ್ಲ. ರಾಷ್ಟ್ರಪಿತ ಮೊದಲನೇ ಸ್ವಾತಂತ್ರ್ಯ ದಿನೋತ್ಸವದಂದು ಸಂಭ್ರಮಗಳನ್ನು ಆಚರಿಸದೇ ಉಪವಾಸ ಮಾಡಿದರು.

ಗಾಂಧೀಜಿ ಮತ್ತು ನೆಹ್ರೂರವರ ನೇತೃತ್ವದಲ್ಲಿ ಕಾಂಗ್ರೇಸ್ 'ಅಲ್ಪಸಂಖ್ಯಾತ ವರ್ಗಗಳ ಹಕ್ಕುಗಳ' ಮೇಲೆ ಒಂದು ತೀರ್ಮಾನವನ್ನು ಮಾಡಿತು. ಆ ಪಕ್ಷ 'ಎರಡು ದೇಶಗಳ ಸಿದ್ಧಾಂತವನ್ನು' ಎಂದಿಗೂ ಒಪ್ಪಲಿಲ್ಲ. ತನ್ನ ಇಷ್ಟಕ್ಕೆ ವಿರುದ್ಧವಾಗಿ ದೇಶವಿಂಗಡಣೆಗೆ ಒತ್ತಾಯದಿಂದ ಒಪ್ಪಿಕೊಳ್ಳಬೇಕಾಗಿ ಬಂದಾಗ್ಯೂ, ಭಾರತ ದೇಶವು ಅನೇಕ ಧರ್ಮಗಳ, ಜಾತಿಗಳ ದೇಶವೆಂದೂ, ಹಾಗೆಯೇ ಮುಂದುವರೆಯಬೇಕೆಂದು ವಿಶ್ವಾಸವಿಟ್ಟಿತು. ಪಾಕಿಸ್ತಾನ್ ಹೇಗೆ ಇದ್ದಾಗ್ಯೂ ಭಾರತ ದೇಶವು 'ಪ್ರಜಾಪ್ರಭುತ್ವ ಜಾತ್ಯಾತೀತ' ದೇಶವಾಗಿ ಇರುತ್ತದೆ. ಧರ್ಮದೊಂದಿಗೆ ಸಂಬಂಧವಿಲ್ಲದಂತೆ ಪೌರರೆಲ್ಲರಿಗೂ ರಾಜ್ಯದಿಂದ ರಕ್ಷಣೆ ಲಭಿಸುತ್ತದೆ, ಸಮಾನ ಹಕ್ಕುಗಳು ಇರುತ್ತವೆ.

ಗಾಂಧೀಜಿಯ ಹತ್ಯೆ

1947 ಆಗಸ್ಟ್ 15ರಂದು ಬಂಗಾಳದಲ್ಲಿ ಗಲಭೆಗಳಿಂದ ಅಲ್ಲಕಲ್ಲೋಲವಾದ ನೋವಖಲೀಯಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ರಾಷ್ಟ್ರಪಿತ ಗಾಂಧೀಜಿಯು ಪ್ರಯತ್ನಿಸಿದನು. ದೇಶ ರಾಜಧಾನಿಯಾದ ದೆಹಲಿಗೆ ಗಾಂಧೀಜಿಯು 1947 ಸೆಪ್ಟಂಬರ್ 9ರಂದು ಸಹ ಬರಲಿಲ್ಲ. ವಾಯುವ್ಯ ಭಾರತದಲ್ಲಿ ದೊಡ್ಡಮಟ್ಟದಲ್ಲಿ ಉಂಟಾದ ಮತ ಘರ್ಷಣೆಗಳಿಂದ ಆ ವೃದ್ಧ ನಾಯಕ ಅತೃಪ್ತಿಯಿಂದ ಇದ್ದನು. ಪ್ರಜೆಗಳ ಭಯಗಳನ್ನು ದೂರ ಮಾಡುವುದಕ್ಕೆ ಗಾಂಧೀಜಿಯು ಪ್ರಯತ್ನಿಸಿದರು. ಆದರೆ ದೇಶದಲ್ಲಿ ಪ್ರಜೆಗಳಲ್ಲಿಯ ಒಂದು ವರ್ಗ ಭಾರತ ದೇಶ ರಾಜಕೀಯಗಳಲ್ಲಿ ಗಾಂಧೀಜಿ ಪಾತ್ರದ ಬಗ್ಗೆ ಕೋಪದಿಂದಿತ್ತು. ಆತನು ನಿರ್ವಹಿಸುತ್ತಿದ್ದ ಸರ್ವಮತ ಪ್ರಾರ್ಥನೆ ಸಮಾವೇಶಗಳನ್ನು ಹಲವು ಸಲ ಅವರು ಭಂಗಪಡಿಸಿದರು. ಗಾಂಧೀಜಿಯವರನ್ನು ಕೊಲೆ ಮಾಡುವುದಕ್ಕೆ ಎರಡು ದಿನಗಳ ಮೊದಲು ಆತನ ಮೇಲೆ ನಡೆದ ಕೊಲೆ ಪ್ರಯತ್ನವು ವಿಫಲವಾಯಿತು. 1948 ಜನವರಿ 28ರಂದು ಗಾಂಧೀಜಿ ಒಬ್ಬ ಹುಚ್ಚನ ಕೈಯಲ್ಲಿನ ಬಂದೂಕಿಗೆ ನಾನು ಬಲಿಯಾಗಬೇಕಾಗಿ ಬಂದರೆ, ನಗುತ್ತಾ ಅದಕ್ಕೆ ಸಿದ್ಧನಾಗುತ್ತಾನೆ. ನನ್ನಲ್ಲಿ ಎಂತಹ ಕೋಪವೂ ಇರಕೂಡದು. ನನ್ನ ಹೃದಯದಲ್ಲಿ ತುಟಿಗಳ ಮೇಲೆ ದೇವರೇ ಇರಬೇಕು. ಎಂದನು.

ಚಿತ್ರ 14.6 : ದೇಶವಿಂಗಡಣೆಗೆ ಸಂಬಂಧಿಸಿದ ವಿವಿಧ ಚಿತ್ರಗಳು, ಈ ಛಾಯಾ ಚಿತ್ರಗಳನ್ನು ಮಾರ್ಗರೇಟ್ ಜೋರ್ಕ್‌ವೈಟ್ ತೆಗೆದಿದ್ದಾರೆ. ಇವು ಲೈಫ್ ಪತ್ರಿಕೆಯಲ್ಲಿ ಪ್ರಚುರಿತವಾಗಿವೆ.

SCERT TELANGANA

ದೇಶಕ್ಕೆ ಸ್ವಾತಂತ್ರ್ಯವು ಬಂದ ಆರು ತಿಂಗಳೊಳಗೆ 1948 ಜನವರಿ 30 ರಂದು ಸಂಜೆ ಸರ್ವಮತ ಪ್ರಾರ್ಥನೆಗೆ ಹೋಗುತ್ತಿರುವ ಜಾತಿಪಿತ ಮೂರು ಬಂದೂಕಿನ ಗುಂಡುಗಳಿಗೆ ನೆಲಕ್ಕೆ ಅಪ್ಪಳಿಸಿದನು. ಸಾಯುವುದಕ್ಕೆ ಮುಂಚೆ ಗಾಂಧೀಜಿಯು ಹೇ, ರಾಂ. ಎಂದಿದ್ದಾನೆಂದು ಅನ್ನುತ್ತಾರೆ. ಆತನನ್ನು ಕೊಲೆ ಮಾಡಿದ ನಾಥೋರಾಂಗಾಡ್ಸೆ ಅಲ್ಲಿಂದ ಓಡಿಹೋದನು. ನಂತರ ಅತನನ್ನು ಮುಂಬೈಯಲ್ಲಿ ಹಿಡಿದುಕೊಂಡರು. ಆತನು ಒಮ್ಮೆ ಹಿಂದೂ ಮಹಾ ಸಭೆಯಲ್ಲಿ ಸದಸ್ಯನು. ಆದ್ದರಿಂದ ಆ ಸಂಸ್ಥೆಯ ಮೇಲೆ ವಿರೋಧ ಹೆಚ್ಚಾಯಿತು. ಇದರ ಫಲಿತವಾಗಿ 1948 ಫೆಬ್ರವರಿ 14ರಂದು ಅಖಿಲ ಭಾರತ ಹಿಂದೂ ಮಹಾಸಭೆ ರಾಜಕೀಯ ಕಾರ್ಯಕ್ರಮವನ್ನು ಬಿಟ್ಟು ನಿಜವಾದ ಸಂಸ್ಥಾಗತ ಕೆಲಸದ ಮೇಲೆ ದೃಷ್ಟಿ ಕೇಂದ್ರೀಕರಿಸಬೇಕೆಂದು ನಿರ್ಣಯಿಸಿತು. ಒಂದು ವಿಧವಾಗಿ ತೀರ್ವವಾದಿ ಗಾಡ್ಸೆ ಅಂತಿಮವಾಗಿ ತನ್ನ ಮಿತ್ರರಿಗೆ, ಆರಿಸಿಕೊಂಡ ಪಂಥಕ್ಕೆ ಹಾನಿಉಂಟುಮಾಡಿದನು.

ÓÏ í ÓÝ®ÏWÙÏ HQàPÏÃÙ |

ಬ್ರಿಟೀಷ್ ಅಧಿಕಾರದ ಕೆಳಗೆ ವಿವಿಧ ಹಂತದಲ್ಲಿ ಸಾರ್ವಭೌಮತ್ವ ಆಡಳಿತದಿಂದ ಸುಮಾರಾಗಿ 550 ಸಂಸ್ಥಾನಗಳಿದ್ದವು. ಬ್ರಿಟೀಷ್ ಆಡಳಿತಗಾರರು ಭಾರತ ದೇಶದಿಂದ ಹೊರಟು ಹೋಗುವುದರಿಂದ ಈ ಸಂಸ್ಥಾನಗಳು ಸಹ ಸ್ವತಂತ್ರವನ್ನು ಪಡೆಯುತ್ತವೆ. ಭಾರತ ದೇಶದಲ್ಲಿ ವಿಲೀನವಾಗುತ್ತವೆಯೋ ಅಥವಾ ಪಾಕಿಸ್ತಾನ್‌ನಲ್ಲಿ ವಿಲೀನವಾಗುತ್ತವೆಯೋ ಸ್ವತಂತ್ರವಾಗಿ ಇರುತ್ತವೆಯೋ ನಿರ್ಣಯಿಸಿಕೊಳ್ಳಿರಿ ಎಂದು ಈ ಸಂಸ್ಥಾನಗಳನ್ನು ಕೋರಿದರು. ಸಂಸ್ಥಾನಗಳ ಪ್ರಜೆಗಳು ಪ್ರಜಾ ಮಂಡಲ ಚಳುವಳಿಯಲ್ಲಿ ಭಾಗವಹಿಸುವುದರ ಮುಖಾಂತರ ಅವರು ತಮ್ಮ ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ಚೈತನ್ಯವನ್ನು ಹೊಂದಿದ್ದರು. ಅರಸೊತ್ತಿಗೆ ಕುಟುಂಬಗಳ ಆಡಳಿತ ಮುಂದುಬರೆಯ ಬೇಕೆಂದು ಆ ಪ್ರಜೆಗಳಿಗೆ ಇಲ್ಲ. ಹೈದ್ರಾಬಾದ್, ಟ್ರಾವನ್‌ಕೋರ್‌ನಲ್ಲಿ ಆಡಳಿತ ಜಮೀಂದಾರರಿಗೆ ವಿರುದ್ಧವಾಗಿ ರೈತಾಂಗವು ಶಸ್ತ್ರಸಜ್ಜಿತ ಹೋರಾಟವನ್ನು ನಡೆಸಿತು.

ಚಿತ್ರ 14. 8: ಮಹಾತ್ಮ ಗಾಂಧಿ ಅಂತಿಮಯಾತ್ರೆ

ಸಂಸ್ಥಾನಗಳ ಪ್ರಜೆಗಳ ಚಳುವಳಿಗೆ ಕಾಂಗ್ರೆಸ್ ಬೆಂಬಲ ಕೊಡುತ್ತಾ ಭಾರತ ದೇಶದಲ್ಲಿ ಬೆರೆತ ಹೊಸ ಸಂವಿಧಾನ ನಿರ್ಮಾಣದಲ್ಲಿ ಪಾಲುದಾರರಾಗಬೇಕೆಂದು ಬಯಸಿತು. 1947 ಜೂಲೈನಲ್ಲಿ ಈ ಜವಾಬ್ದಾರಿಯನ್ನು ಸರ್ದಾರ್ ವಲ್ಲಬಾಯ್ ಪಟೇಲ್‌ರವರಿಗೆ ಒಪ್ಪಿದರು. ಭಾರತ ದೇಶದಲ್ಲಿ ಏಕೀಕರಣವಾಗುವ (ವಿಲೀನ) ಅವಶ್ಯಕತೆಯನ್ನು ಕುರಿತು ಆತನು ಅರಸೊತ್ತಿಗೆ ಕುಟುಂಬಗಳೊಂದಿಗೆ ಚರ್ಚೆಗಳನ್ನು ಪ್ರಾರಂಭಿಸಿದನು. ಅವರು ತಮ್ಮಷ್ಟಕ್ಕೆ ತಾವೇ ಏಕೀಕರಣವಾಗ ದಿದ್ದರೂ ಆ ಪ್ರಕ್ರಿಯೆಯನ್ನು ಪೂರ್ಣ ಗೊಳಿಸುವುದಕ್ಕೆ ಸೇನೆಯನ್ನು ಕಳುಹಿಸಬೇಕಾಗಿ ಇರುತ್ತದೆ ಎಂದು ಸಹ ಆತನು ಸ್ಪಷ್ಟಪಡಿಸಿದನು. 1947 ಆಗಸ್ಟ್ 15 ರಂದು ಕಾಶ್ಮೀರ, ಹೈದ್ರಾಬಾದ್, ಜುನಾಗಡ್‌ಗಳು ವಿನಃ ಉಳಿದ ಸಂಸ್ಥಾನ ಗಳನ್ನೆಲ್ಲಾ ಭಾರತ ದೇಶದೊಂದಿಗೆ ಏಕೀಕರಣ ಒಪ್ಪಂದದ ಪತ್ರದ ಮೇಲೆ ಸಹಿ ಮಾಡಿದವು. ನಂತರ ಎರಡು ವರ್ಷಗಳೊಳಗೆ ಈ ಮೂರು ಸಂಸ್ಥಾನಗಳು (ರಾಜ್ಯಗಳು) ಸಹ ಭಾರತ ದೇಶದಲ್ಲಿ ಏಕೀಕರಣ ವಾಗುವಂತೆ ಮಾಡಿದರು.

ಸಂಸ್ಥಾನಗಳ ಸರಕಾರಗಳನ್ನು ವಶಮಾಡಿಕೊಂಡ ಆಯಾ ಅರಸೊತ್ತಿಗೆ ಕುಟುಂಬಗಳಿಗೆ ವ್ಯಯಕ್ತಿಕ ಖರ್ಚುಗಳಿಗೆ ಪೆನ್ಷನ್ ಜಾರಿಗೊಳಿಸಿದರು. ಇದನ್ನು ಅರಸೊತ್ತಿಗೆ ಜೀವನಾಂಶ ಎನ್ನುವರು ಈ ಪ್ರದೇಶಗಳನ್ನು ಏಕೀಕರಣ ಮಾಡುವುದರ ಮುಖಾಂತರ ಆಡಳಿತ ಸೌಕರ್ಯವಾಗಿ ರಾಜ್ಯಗಳನ್ನು ಏರ್ಪಡಿಸಿದರು. ಭಾರತ ದೇಶದಲ್ಲಿ ಹೊಸ ರಾಜ್ಯಗಳನ್ನು ಏರ್ಪಾಟು ಮಾಡುವ ಈ ಪ್ರಕ್ರಿಯೆ 1956 ರವರೆಗೆ ಮುಂದುವರೆಯಿತು. 1971ರಲ್ಲಿ ಭಾರತ ಸರಕಾರವು ಜೀವನಾಂಶವನ್ನು ರಾಜರ ಕುಟುಂಬಗಳ (ಬಿರುದು) ಪ್ರಶಸ್ತಿಗಳನ್ನು ರದ್ದುಗೊಳಿಸಿತು.

ನಿಮಗೆ ತಿಳಿದ ಆಧುನಿಕ ಭಾರತ ದೇಶವು ಏರ್ಪಟ್ಟಿದೆ. 1947ರಲ್ಲಿ ಅದು ಬಡದೇಶವಾಗಿತ್ತು. ಸರಿಯಾಗಿ ಇಲ್ಲದ ಮೂಲಭೂತ ಸೌಕರ್ಯಗಳೊಂದಿಗೆ, ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಬಹಳ ಹಿಂದುಳಿದಿತ್ತು. ಎರಡು ಶತಮಾನಗಳವರೆಗೆ ಮುಂದುವರೆದ ವಸಾಹತು ಆಡಳಿತ ದೇಶದ ಅಭಿವೃದ್ಧಿಯನ್ನು ತಡೆದು, ದೇಶ ಪ್ರಜೆಗಳ ಆತ್ಮವಿಶ್ವಾಸದ ಮೇಲೆ ಒಡೆತ ಬಿತ್ತು. ಸಮಾನತೆಯಿಂದ ಕೂಡಿದ ಸ್ವಯಂ ಸಮೃದ್ಧ ಆಧುನಿಕ ದೇಶವನ್ನು ನಿರ್ಮಿಸುವುದು ಒಂದು ಸವಾಲಾಗಿಯೂ, ಒಂದು ಅವಕಾಶವಾಗಿಯೂ ಇದೆ.

SCERT TELANGANA

ಮುಖ್ಯ ಪದಗಳು

ಸಂಸ್ಥಾನ (ಡೊಮೀನಿಯನ್) ಪ್ರತಿಷ್ಟೆ   ವಿಭಜಿಸಿ ಪಾಲಿಸು   ಪ್ರತ್ಯೇಕನಿಯೋಜಕ ವರ್ಗ

ನಿಮ್ಮ ಕಲಿಕೆಯನ್ನು ಉತ್ತಮ

1 . ಭಾರತ ದೇಶದಲ್ಲಿ ವಿವಿಧ ಗುಂಪುಗಳು, ವ್ಯಕ್ತಿಗಳು ಎರಡನೇ ಮಹಾಯುದ್ಧದ ಬಗ್ಗೆ ಸ್ಪಂದಿಸಿದ ವಿಧಾನವನ್ನು ಹೋಲಿಸುವುದಕ್ಕೆ ಒಂದು ಪಟ್ಟಿಕೆ ತಯಾರು ಮಾಡಿರಿ? ಈ ಗುಂಪುಗಳು ಎಂತಹ ಸಂದಗ್ದತೆಗೆ ಒಳಗಾಗಿವೆ? (AS_1)

2 . ಯಹೂದಿಗಳು, ಇತರ ಸಮೂಹಗಳ ಬಗ್ಗೆ ಜರ್ಮನಿ ಅಮಾನುಷವಾಗಿ ವ್ಯವಹರಿಸಿದ ಹಿನ್ನೆಲೆಯಲ್ಲಿ ಜರ್ಮನಿಗಾಗಲೀ, ಜಪಾನ್‌ಗಾಗಲೀ ಬೆಂಬಲ ಕೊಡುವುದು ನೈತಿಕವಾಗಿ ಸರಿಯಾದುದೇನಾ? (AS_1)

3 . ಭಾರತ ದೇಶ ವಿಭಜನೆಗೆ ದಾರಿಮಾಡಿಕೊಟ್ಟ ವಿವಿಧ ಕಾರಣಗಳ ಪಟ್ಟಿಯನ್ನು ತಯಾರು ಮಾಡಿರಿ? (AS_1)

4 . ದೇಶ ವಿಭಜನೆಗೆ ಮೊದಲು ವಿವಿಧ ಗುಂಪುಗಳ ನಡುವೆ ಅಧಿಕಾರವನ್ನು ಹಂಚಿಕೊಳ್ಳುವುದಕ್ಕೆ ಯಾವ ಯಾವ ವಿಧಾನಗಳನ್ನು ಆರಂಭಿಸಿದರು ? (AS_1)

5 . ಬ್ರಿಟೀಷ್ ವಸಾಹತು ಪಾಲಕರು ವಿಭಜಿಸಿ, ಪಾಲಿಸು ಎಂಬ ವಿಧಾನವನ್ನು ಭಾರತ ದೇಶದಲ್ಲಿ ಯಾವ ವಿಧವಾಗಿ ಜಾರಿಗೊಳಿಸಿದ್ದಾರೆ? ನೈಜೇರಿಯಾದಲ್ಲಿ ಅವಲಂಭಿಸಿದ ವಿಧಾನಕ್ಕೆ, ಇದಕ್ಕೆ ನಡುವೆ ಹೋಲಿಕೆ ವ್ಯತ್ಯಾಸಗಳೇನು? (AS_1)

6 . ದೇಶ ವಿಂಗಡಣೆಗೆ ಮೊದಲು ರಾಜಕೀಯಗಳಲ್ಲಿ ಮತವನ್ನು ಯಾವ ವಿಧವಾಗಿ ಉಪಯೋಗಿಸಿಕೊಂಡಿದ್ದಾರೆ? (AS_1)

7 . ಸ್ವಾತಂತ್ರ್ಯದ ಹೋರಾಟದ ಅಂತಿಮ ಸಂವತ್ಸರಗಳಲ್ಲಿಕಾರ್ಮಿಕರನ್ನು, ರೈತಾಂಗವನ್ನು ಯಾವ ವಿಧವಾಗಿ ಸಮೀಕರಿಸಿದ್ದಾರೆ? (AS_1)

8 . ಸಾಮಾನ್ಯ ಪ್ರಜೆಗಳ ಜೀವನಗಳನ್ನು ದೇಶ ವಿಂಗಡಣೆ ಯಾವ ವಿಧವಾಗಿ ಪ್ರಭಾವಿತಗೊಳಿಸಿತು ? ವಿಭಜನೆ ನಂತರ ನಡದ ವಲಸೆಗಳಿಗೆ ರಾಜಕೀಯ ಪ್ರತಿಸ್ಪಂದನ ಏನು? (AS_1)

9 . ಹೊಸದಾಗಿ ಏರ್ಪಟ್ಟ ಭಾರತ ದೇಶದೊಳಗೆ ವಿವಿಧ ಸಂಸ್ಥಾನಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಒಂದು ಸವಾಲಾಗಿ ಪರಿಣಮಿಸಿತು. ಚರ್ಚಿಸಿರಿ. (AS_1)

10 . ಭಾರತ ದೇಶದ ರಾಜಕೀಯ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

1) ಕಾಶ್ಮೀರ್ 2) ಹೈದ್ರಾಬಾದ್ 3) ಜುನಾಘಡ್ 4) ಬೆಂಗಾಲ್ 5) ತೆಲಂಗಾಣ

11 . ಸುಭಾಷಚಂದ್ರ ಭೋಸ್ ರವರಲ್ಲಿ ನಿನಗೆ ಇಷ್ಟವಾದ ಗುಣಗಳು ಯಾವುವು ? ಏಕೆ ? (AS_6)

SCERT TELANGANA

ಅಧ್ಯಾಯ

15

ಸ್ವತಂತ್ರ ಭಾರತದ ಸಂವಿಧಾನ ನಿರ್ಮಾಣ

ಭಾರತ ಸಂವಿಧಾನ ಪುನಃ ಸಂದರ್ಶನ

ಮೊದಲಿಗೆ 8ನೇ ತರಗತಿ ಸಾಮಾಜಿಕ ಶಾಸ್ತ್ರ ಪಾಠ್ಯಪುಸ್ತಕದಲ್ಲಿ 13ನೇ ಅಧ್ಯಾಯದಲ್ಲಿ ಓದಿ ಭಾರತ ಸಂವಿಧಾನಕ್ಕೆ ಸಂಬಂಧಿಸಿದ ಕೆಳಗೆ ಕೊಟ್ಟ ಚಟುವಟಿಕೆಗಳನ್ನು ಪೂರೈಸಿರಿ.

- ಭಾರತ ಸಂವಿಧಾನಕ್ಕೆ ---------------, -----------, ------------, ------------- ---------------- ಪ್ರಧಾನವಾಗಿ ಸಹಾಯ ಮಾಡಿದ್ದಾರೆ.
- ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಯಾವ ಯಾವ ಮೂಲಭೂತ ಆದರ್ಶಗಳು ಅಳವಡಿಸಲ್ಪಟ್ಟಿವೆ?
- ಭಾರತ ದೇಶ ಸಂವಿಧಾನದ ಪ್ರಸ್ತಾವನೆಯೊಂದಿಗೆ ಕೆಳಗೆ ಕೊಟ್ಟ ಎರಡು ದೇಶಗಳ ಪ್ರಸ್ತಾವನೆಗಳನ್ನು ಓದಿ ಅವುಗಳಲ್ಲಿ ಹೋಲಿಕೆಗಳು, ವ್ಯತ್ಯಾಸಗಳು ತಿಳಿಸಿರಿ. ತಮ್ಮ ದೇಶವು ಏರ್ಪಡುವುದಕ್ಕೆ ದಾರಿಮಾಡಿಕೊಟ್ಟ ರಾಜಕೀಯ ಘಟನೆಗಳನ್ನು ಪ್ರತಿ ಬಿಂಬಿಸುವುದಕ್ಕೆ ಪ್ರತಿ ಸಂವಿಧಾನವು ಪ್ರಯತ್ನಿಸುತ್ತಾದೆಂಬ ವಿಷಯವನ್ನು ನೆನಪಿನಲ್ಲಿಡಿ ಪ್ರಯತ್ನಿಸಿರಿ. ಜಪಾನ್ ಹಿನ್ನೆಲೆಯನ್ನುಅರ್ಥಮಾಡಿಕೊಳ್ಳುವುದಕ್ಕೆ 13ನೇ ಅಧ್ಯಾಯದಲ್ಲಿ ಜಪಾನ್ ಕುರಿತು ಮತ್ತೊಂದು ಸಾರಿ ಓದಿರಿ. ನೇಪಾಲ್ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ 23ನೇ ಪುಟ ನೋಡಿರಿ.

ನೇಪಾಲ್ ತಾತ್ಕಾಲಿಕ ಸಂವಿಧಾನ ಪ್ರಸ್ತಾವನೆ 2007

ನೇಪಾಳ ಪ್ರಜೆಗಳ ಸಾರ್ವಭೌಮತ್ವ, ಸರಕಾರ ಅಧಿಕಾರದ ವಾರಸುದಾರರಾದ ನೇಪಾಳ ಪ್ರಜೆಗಳು

2007 (1951)ರ ಮೊದಲಿನಿಂದ ಇಲ್ಲಿಯವರೆಗೆ ಪ್ರಜೆಗಳು ಕೈಗೊಂಡ ಚಳುವಳೀಗಳು, ಚಾರಿತ್ರಿಕ ಹೋರಾಟಗಳ ಮುಖಾಂತರ ಪ್ರಜಾಪ್ರಭುತ್ವ, ಶಾಂತಿ, ಪ್ರಗತಿಗಳಿಗೆ ಅನುಕೂಲವಾಗಿ ಪ್ರಜೆಗಳ ಇಚ್ಛೆಯನ್ನು ಗೌರವಿಸುತ್ತಾ ವರ್ಗ, ಜನಾಂಗಿಗಳು, ಪ್ರಾಂತ, ಲಿಂಗಗಳಂತಹ ಅಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಷ್ಕರಿಸಿ ದೇಶವನ್ನು ಅಭಿವೃದ್ಧಿ ಶೀಲವಾಗಿ ಪುನಃ ನಿರ್ಮಿಸುವುದಕ್ಕೆ ಕೃಷಿ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತೇವೆ.

ಸ್ಪರ್ಧಾತ್ಮಕ ಬಹುಪಕ್ಷ ಪ್ರಜಾಪುಭುತ್ವ ಆಡಳಿತ ವ್ಯವಸ್ಥೆ, ಪೌರರ ಸ್ವೇಚ್ಛೆ, ಪ್ರಾಥಮಿಕ ಹಕ್ಕುಗಳು, ಮಾನವ ಹಕ್ಕುಗಳು, ವಯಸ್ಕ ಮತದಾನದ ಹಕ್ಕು, ಕ್ರಮಬದ್ಧವಾಗಿ ಬರುವ ಚುನಾವಣೆಗಳು ಪತ್ರಿಕಾ ರಂಗಕ್ಕೆ ಸಂಪೂರ್ಣಸ್ವೇಚ್ಛೆ, ಸ್ವತಂತ್ರ ನ್ಯಾಯವ್ಯವಸ್ಥೆ ಅನಿರ್ಭಂದಿತ ಆಡಳಿತ ಎಂಬ ಇಂತಹ ಭಾವನೆಗಳಿಂದ ಕೂಡಿದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ನಿಯಮಗಳಿಗೆ ಪೂರ್ಣ ನಿಬದ್ಧತೆಯನ್ನು ವ್ಯಕ್ತಪಡಿಸುತ್ತೇವೆ.

ತಮಗಾಗಿ, ತಮ್ಮಷ್ಟಕ್ಕೆ ತಾವು ಸಂವಿಧಾನವನ್ನು ರೂಪಿಸಿಕೊಳ್ಳುವುದಕ್ಕೆ, ಭಯವಿಲ್ಲದ ವಾತಾವರಣದಲ್ಲಿ ಸಂವಿಧಾನದ ಸಭೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸ್ವೇಚ್ಛಾ ಪೂರಿತ, ನ್ಯಾಯವಾದ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೆ ನೇಪಾಲ್ ಪ್ರಜೆಗಳಿಗೆ ಇರುವ ಮೂಲಭೂತ ಹಕ್ಕುಳಿಗೆ ಭರವಸೆ ಕೊಡುತ್ತೇವೆ;

SCERT TELANGANA

ಪ್ರಜಾಪ್ರಭುತ್ವ, ಶಾಂತಿ, ಅಭಿವೃದ್ಧಿ, ಪ್ರಗತಿಶೀಲ ಸಾಮಾಜಿಕ - ಆರ್ಥಿಕ ಬದಲಾವಣೆ, ದೇಶದ ಸಾರ್ವಭೌಮತ್ವ, ಸಮಗ್ರತೆ, ಸ್ವತಂತ್ರತೆ ಗೌರವಗಳನ್ನು ಕೇಂದ್ರವಾಗಿ ಇಡುತಿದ್ದೇವೆ.

ಅರಸೊತ್ತಿಗೆ ಆಡಳಿತವನ್ನು ರದ್ದುಗೊಳಿಸುತ್ತಾ ನೇಪಾಲ್‌ನಲ್ಲಿ ಜಾತ್ಯಾತೀತ, ಪ್ರಜಾಪ್ರಭತ್ವ ಗಣತಂತ್ರ ದೇಶವಾಗಿ ಪ್ರಕಟಿಸುತ್ತಿದ್ದೇವೆ. ಇಲ್ಲಿಯವರೆಗೆ ವಿವಿಧ ಕ್ರಾಂತಿಗಳು, ಚಳುವಳಿಗಳ ಮುಖಾಂತರ ಸಾಧಿಸಿದವುಗಳನ್ನು ಸಂಸ್ಥಾಗತಗೊಳಿಸುವುದಕ್ಕೆ ರಾಜಕೀಯ ಅವಗಾಹನೆ ಮುಖಾಂತರ ರೂಪಿಸಿದ ನೇಪಾಲ್ ತಾತ್ಕಾಲಿಕ ಸಂವಿಧಾನವನ್ನು 2063 (2007)ರಲ್ಲಿ ಪ್ರಕಟಿಸುತ್ತೇವೆ. ಸಂವಿಧಾನದ ಸಭೆ ಹೊಸ ಸಂವಿಧಾನವನ್ನು ಏರ್ಪಾಟು ಮಾಡುವವರೆಗೆ ಇದು ಜಾರಿಯಲ್ಲಿರುತ್ತದೆ.

ಜಪಾನ್ ಸಂವಿಧಾನದ ಪ್ರಸ್ತಾವನೆ 1946 (ಪೀಠಿಕೆ)

ಜಪಾನ್ ದೇಶದ ಪ್ರಜೆಗಳಾದ ನಾವು ದೇಶದ ಪಾರ್ಲಿಮೆಂಟ್‌ನಲ್ಲಿ ಆಯ್ಕೆಯಾದ ಪ್ರಜಾಪ್ರತಿನಿಧಿಗಳ ಮುಖಾಂತರ ನಮಗೆ, ಮುಂಬರುವ ಪೀಳಿಗೆಗೆ ಎಲ್ಲಾ ದೇಶಗಳೊಂದಿಗೆ ಶಾಂತಿಯುತ ಸಹಕಾರ ಪ್ರತಿಫಲಗಳನ್ನು ಪಡೆಯಬೇಕೆಂದುಕೊಳ್ಳುತ್ತೇವೆ, ಈ ಭೂಮಿಯಲ್ಲಾ ಪೂರ್ಣ ಸ್ವೇಚ್ಛೆಯಿಂದ ಇರಬೇಕೆಂದುಕೊಳ್ಳುತ್ತೇವೆ. ಸರ್ಕಾರದ ಕ್ರಮಗಳ ಮುಖಾಂತರ ಎಂದಿಗೂ ದೇಶದಲ್ಲಿ ಯುದ್ಧದಭೀತಿ ಕಾಣವುದಿಲ್ಲವೆಂದು ತೀರ್ಮಾನಿಸುತ್ತಾ, ಸಾರ್ವಭೌಮತ್ವ ಅಧಿಕಾರವು ಪ್ರಜೆಗಳಲ್ಲಿ ಇರುತ್ತದೆಂದು ತಿಳಿಯಪಡಿಸುತ್ತಾ ಈ ಸಂವಿಧಾನವನ್ನು ಪ್ರಕಟಿಸುತ್ತಿದ್ದೇವೆ. ಸರಕಾರ ಎನ್ನುವುದು ಪ್ರಜೆಗಳ ಪವಿತ್ರ ನಂಬಿಕೆ. ಇದಕ್ಕೆ ಅಧಿಕಾರ ಪ್ರಜೆಗಳಿಂದ ದೊರೆಯುತ್ತದೆ. ಇದರ ಅಧಿಕಾರಗಳನ್ನು ಪ್ರಜಾಪ್ರತಿನಿಧಿಗಳ ಮುಖಾಂತರ ಜಾರಿಗೊಳಿಸುತ್ತಾರೆ. ಇದರ ಪ್ರತಿಫಲಗಳನ್ನು ಪ್ರಜೆಗಳು ಅನುಭವಿಸುತ್ತಾರೆ. ಈ ಮಾನವೀಯತಾ ವಿಶ್ವ ಸೂತ್ರದ ಆಧಾರವಾಗಿ ಈ ಸಂವಿಧಾನವು ರೂಪಿಸಲ್ಪಟ್ಟಿದೆ. ಇದರೊಂದಿಗೆ ವಿಭೇದಿಸುವ ಎಲ್ಲಾ ಸಂವಿಧಾನಗಳನ್ನು, ಕಾನೂನುಗಳನ್ನು, ನಿರ್ಣಯಗಳನ್ನು, ಅಧಿಕಾರಿಕ ಪ್ರಕಟಣೆಗಳನ್ನು ರದ್ದುಗೊಳಿಸಿ ತಿರಸ್ಕರಿಸುತ್ತೇವೆ. ಜಪಾನ್ ದೇಶದ ಪ್ರಜೆಗಳಾದ ನಾವು ಯಾವಾಗಲೂಶಾಂತಿಯನ್ನು ಕೋರಿಕೊಳ್ಳುತ್ತೇವೆ. ಮಾನವ ಸಂಬಂಧಗಳನ್ನು ನಿಯಂತ್ರಿಸುವ ಉತ್ತಮ ಆದರ್ಶಗಳ ಬಗ್ಗೆ ಪೂರ್ಣ ಅವಗಾಹನೆಯೊಂದಿಗೆ ಇದ್ದೇವೆ. ಶಾಂತಿ ಕಾಮುಕರಾದ ಪ್ರಪಂಚ ಪ್ರಜೆಗಳಿಗೆ ನ್ಯಾಯ, ಧರ್ಮಗಳ ಮೇಲೆ ನಂಬಿಕೆಯನ್ನು ಇಡುತ್ತಾ ನಮ್ಮ ಭದ್ರತೆಯನ್ನು, ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕೆಂದು ಸ್ಥಿರವಾಗಿ ನಿರ್ಣಯಿಸಿಕೊಂಡಿದ್ದೇವೆ. ಶಾಂತಿಯನ್ನು ಕಾಪಾಡುವುದಕ್ಕೆ, ನಿರಂಕುಶತ್ವ, ಗುಲಾಮಗಿರಿ, ದಬ್ಬಾಳಿಕೆ, ಅಸಹನೆಯನ್ನು ಭೂಮಿಯ ಮೇಲೆ ಇಲ್ಲದಂತೆ ಶಾಶ್ವತವಾಗಿ ಹೋಗಲಾಡಿಸುವುದಕ್ಕೆ ನಿರತರಾಗಿ ಅಂತರಾಷ್ಟ್ರೀಯ ಸಮುದಾಯದಲ್ಲಿ ಒಂದು ಸಮುಚಿತ ಸ್ಥಾನವನ್ನು ಪಡೆಯಬೇಕೆಂದು ಆಶಿಸುತ್ತೇವೆ. ಶಾಂತಿಯೊಂದಿಗೆ, ಭಯ ಎನ್ನುವುದು ಇಲ್ಲದಂತೆ ಇರುವುದಕ್ಕೆ ಪ್ರಪಂಚ ಮಾನವರಿಗೆಲ್ಲರಿಗೂ ಪ್ರಶಾಂತವಾಗಿ ಜೀವಿಸುವುದಕ್ಕೆ ಹಕ್ಕು ಇದೆ ಎಂದು ನಾವು ಗುರ್ತಿಸುತ್ತೇವೆ. ಯಾವ ದೇಶವಾದರೂ ಸರಿ ತನ್ನ ದೇಶ ಒಂದಕ್ಕೆ ಜವಾಬ್ದಾರಿ ವಹಿಸಿದರೆ ಸರಿಹೋಗುವುದಿಲ್ಲವೆಂದು ನಾವು ನಂಬುತ್ತೇವೆ. ರಾಜಕೀಯ ನೈತಿಕತೆಗೆ ಸಂಬಂಧಿಸಿದ ಕಾನೂನುಗಳು ವಿಶ್ವಜನೀತವಾದುವು. ತಮ್ಮ ಸಾರ್ವಭೌಮತ್ವವನ್ನು ಮುಂದುವರೆಸುತ್ತಾ, ಇತರ ದೇಶಗಳೊಂದಿಗೆ ಸಾರ್ವಭೌಮತ್ವ ಸಂಬಂಧಗಳನ್ನು ಸಮರ್ಥಿಸಿಕೊಳ್ಳುತ್ತಾ ಎಲ್ಲಾ ದೇಶಗಳು ಈ ಕಾನೂನುಗಳನ್ನು ಗೌರವಿಸಬೇಕು. ಜಪಾನ್ ಪ್ರಜೆಗಳಾದ ನಾವು ನಮಗಿರುವ ಎಲ್ಲಾ ಸಂಪನ್ಮೂಲಗಳೊಂದಿಗೆ ಈ ಉತ್ತಮ ಆದರ್ಶಗಳನ್ನು ಸಾಧಿಸುತ್ತೇವೆಂದು ನಮ್ಮ ರಾಷ್ಟ್ರ ಗೌರವವನ್ನು ಪಣವಾಗಿಟ್ಟು ವಾಗ್ದಾನ ಮಾಡುತ್ತೇವೆ.

- ಈ ದೇಶಗಳ ರಾಜಕೀಯ ಸಂದರ್ಭದಲ್ಲಿ ಹೋಲಿಕೆಗಳು, ವ್ಯತ್ಯಾಸಗಳು ಏನು? ಅದಕ್ಕೂ ಮೊದಲಿನ ಘಟನೆಗಳೇನು? ಅದಕ್ಕೆ ಮೊದಲು ಆಡಳಿತಗಾರರು ಯಾರು?
- ಲಿಂಗ ಎನ್ನುವ ಪದವನ್ನು ಯಾವ ದೇಶ ಸಂವಿಧಾನ ಪೀಠಿಕೆಯಲ್ಲಿ ಹೆಸರಿಸಿದೆ?
- ಶಾಂತಿ ಬಯಕೆಯನ್ನು ಯಾವ ದೇಶದ ಸಂವಿಧಾನ ಪೀಠಿಕೆ ಪ್ರತಿಬಿಂಬಿಸಿದೆ?

SCERT TELANGANA

- ಸಂವಿಧಾನ ಪೀಠಿಕೆಯಲ್ಲಿ ಪ್ರಜಾ ಚಳುವಳಿಗಳು ಹೇಗೆ ಪ್ರತಿಬಿಂಬಿಸಿವೆ?
- ಗತಿಸಿದ ಸಮೀಕ್ಷೆಯಲ್ಲಿ ವಿವಿಧ ಪೀಠಿಕೆಯಲ್ಲಿನ ಹೋಲಿಕೆಗಳು, ವ್ಯತ್ಯಾಸಗಳು ಏನು?
- ಮೂರು ದೇಶದಲ್ಲಿ ಭವಿಷ್ಯದ ಸಮಾಜವನ್ನು ಕುರಿತು ಎಂತಹ ಭರವಸೆ ಕೊಟ್ಟಿದ್ದಾರೆ?
- ರಾಜಕೀಯ ವ್ಯವಸ್ಥೆಯ ಸ್ವರೂಪಕ್ಕೆ ಸಂಬಂಧಿಸಿ ಯಾವ ಯಾವ ಭರವಸೆ ಮಾಡಿದ್ದಾರೆ?
- ಈ ದೇಶದ ಪೌರರಿಗೆ ಯಾವ ಯಾವ ವಾಗ್ದಾನಗಳು ಮಾಡಿದ್ದಾರೆ?

ನೇಪಾಳಿನ ಹಿನ್ನೆಲೆ

1959ರಲ್ಲಿ ರಾಜ ಮಹೇಂದ್ರ ಜಾರಿಗೊಳಿಸಿದ ಸಂವಿಧಾನದ ಅಡಿಯಲ್ಲಿ ಮೊದಲನೇ ಚುನಾವಣೆಗಳು ನಡೆದಿವೆ. ಆದರೆ ಒಂದು ವರ್ಷ ಬರುವುದರೊಳಗೆ ಆಯ್ಕೆಯಾದ ಸರಕಾರವನ್ನು ಬೀಳಿಸಿ ಅಧಿಕಾರದಲ್ಲಿ ಹೆಚ್ಚಿನ ಭಾಗ ರಾಜನಿಗೆ ಒಪ್ಪಿಸಿದರು. ಪ್ರಜಾಸ್ವಾಮ್ಯಿಕ ಪ್ರಾತಿನಿಧಿಕ ಸರಕಾರಕ್ಕಾಗಿ ಪ್ರಜೆಗಳು ನಿರಂತರ ಹೋರಾಟದೊಂದಿಗೆ ಅಂತಿಮವಾಗಿ 1991ರಲ್ಲಿ ಚುನಾವಣೆಳು ನಡೆದಿವೆ. ಈ ಚುನಾವಣೆಗಳಲ್ಲಿ ನೇಪಾಳ ಕಾಂಗ್ರೆಸ್ ಪಕ್ಷ ಅತ್ಯಧಿಕ ಬಹುಮತಗಳಿಂದ ಸರಕಾರವನ್ನು ಏರ್ಪಾಟು ಮಾಡಿತು. ಇನ್ನೂ ರಾಜನಿಗೆ ಸರಕಾರದಲ್ಲಿ ಪರಮಾಧಿಕಾರ ಇರುವ ವಿಧಾನದಿಂದ ಕಮ್ಯೂನಿಸ್ಟ್ ಪಕ್ಷ ಸಂತೃಪ್ತಿಗೊಳ್ಳಲಿಲ್ಲ. ಅರಸೊತ್ತಿಗೆಯನ್ನು ರದ್ದುಗೊಳಿಸಬೇಕೆಂದು, ರಾಜಕೀಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನಃ ನಿರ್ಮಿಸಬೇಕೆಂದು ಅವರು ಬಯಸಿದರು. ಈ ಚಳುವಳಿ ಅರಸೊತ್ತಿಗೆ ಅನುಕೂಲ, ಅರಸೊತ್ತಿಗೆ ವಿರುದ್ಧ ಬೃಂದಗಳ ನಡುವೆ ಶಸ್ತ್ರಸಜ್ಜಿತ ಘರ್ಷಣೆಯಾಗಿ ಬದಲಾಯಿತು. 2007ರಲ್ಲಿ ಅರಸೊತ್ತಿಗೆಯು ರದ್ದಾಗಲು ಈ ಚಳುವಳಿ ಕಾರಣವಾಗಿದೆ.

ಚರ್ಚೆಗಳನ್ನು ಓದುವುದು

ಸರಕಾರವು ಹೇಗೆ ಕೆಲಸ ಮಾಡುತ್ತಿದೆ, ದೇಶದ ಭವಿಷ್ಯವನ್ನು ಹೇಗೆ ರೂಪಿಸುತ್ತಾರೆ ಎನ್ನುವ ಅಂಶಗಳಿಗೆ ಸಂಬಂಧಿಸಿ ಯಾವ ದೇಶದ ಸಂವಿಧಾನವಾದರೂ ಸ್ವಲ್ಪ ಮೂಲಭೂತ ನಿರ್ಮಾಣವನ್ನು, ಸಿದ್ಧಾಂತಗಳನ್ನು ಕೊಡುತ್ತದೆ. ಅಂದರೆ, ಸಂವಿಧಾನವು ಎರಡು ಕರ್ತವ್ಯಗಳನ್ನು ನಿರ್ವಹಿಸುತ್ತದೆಂಬ ಮಾತು : (ಅ) ಪೌರರ ಹಕ್ಕುಗಳು, ಜವಾಬ್ದಾರಿಗಳನ್ನು ತಿಳಿಯಪಡಿಸುವುದು; ಸರಕಾರವು ಅದರ ಅಂಗಗಳಾದ, ಕಾರ್ಯನಿರ್ವಾಹಕ, ಶಾಸನ ನ್ಯಾಯ ಶಾಖೆಗಳಂತಹವುಗಳ ನಿರ್ಮಾಣ, ಅಧಿಕಾರಗಳನ್ನು ತಿಳಿಯಪಡಿಸುವುದು (ಆ) ಸರಕಾರವು ,ಸಮಾಜವು ಬೆರೆತು ನಿರ್ಮಿಸಬೇಕಾದ ಭವಿಷ್ಯದ ಸಮಾಜದ ಸ್ವಭಾವವನ್ನು ಸೂಚಿಸುವುದು. ಅಂದರೆ ದೇಶವು ಅಭಿವೃದ್ಧಿಯಾಗುವುದಕ್ಕೆ ಪ್ರಸ್ತುತ ಅಂಶಗಳನ್ನು ಹೇಗೆ ಬದಲಾಯಿಸಬೇಕೋ ಸಂವಿಧಾನವು ಸೂಚಿಸುತ್ತಾ ಪ್ರಧಾನವಾಗಿ ಭವಿಷ್ಯದ ಚೌಕಟ್ಟನ್ನು ತಿಳಿಯಪಡಿಸುತ್ತದೆ.

ನೇಪಾಳದಲ್ಲಿ ಈ ಸಂವಿಧಾನವನ್ನು ರೂಪಿಸುವ ಪ್ರಕ್ರಿಯೆ 2007ರಲ್ಲಿ ಆರಂಭವಾಗಿದೆ. ಆದರೆ 2014 ರಲ್ಲಿಯೂ ಸಹ ಇದು ಪೂರ್ಣಗೊಂಡಿಲ್ಲ. ಇದಕ್ಕೆ ಕಾರಣ ಅನೇಕ ಮೂಲಭೂತ ಅಂಶಗಳ ಮೇಲೆ ನೇಪಾಳದಲ್ಲಿ ಅನೇಕ ರಾಜಕೀಯ ಪ್ರವೃತ್ತಿಗಳು ಒಂದು ಅಭಿಪ್ರಾಯಕ್ಕೆ ಬರದೇ ಹೋಗುವುದು. ಅಂದರೆ ಸಂವಿಧಾನವನ್ನು ರೂಪಿಸುವ ಪ್ರಕ್ರಿಯೆ - ಚರ್ಚೆಗಳು , ವಾದೋಪವಾದಗಳು, ಅಭಿಪ್ರಾಯ ಭೇಧಗಳನ್ನು ಪರಿಷ್ಕರಿಸುವುದು, ಪರಸ್ಪರ ವಿರುದ್ಧ ಭಾವನೆಗಳು ಇರುವವರಿಗೆಲ್ಲಾ ಅನುಮೋದನೆಯೋಗ್ಯವಾಗುವ ಚೌಕಟ್ಟನ್ನು ರೂಪಿಸುವುದು. ಈ ಪ್ರಕ್ರಿಯೆ ಸಂವಿಧಾನ ನಿರ್ಮಾಣ ಪ್ರಕ್ರಿಯೆ. ಭಾರತ ದೇಶದಲ್ಲಿ ಇದು ಹೇಗೆ ನಡೆದಿದೆಯೋ ನೋಡೋಣ.

ಭಾರತ ದೇಶದ ಸಂವಿಧಾನ ನಿರ್ಮಾಣ.

ಭಾರತ ದೇಶದ ಸಂವಿಧಾನವನ್ನು ಸಂವಿಧಾನ ಸಭೆ ರೂಪಿಸಿ, ಜಾರಿಗೊಳಿಸಿದೆ. ಬ್ರಿಟೀಷರ ಆಡಳಿತಕ್ಕೆ ವಿರುದ್ಧವಾಗಿ ಸ್ವಾತಂತ್ರ್ಯಕ್ಕಾಗಿ ಭಾರತೀಯ ಪ್ರಜೆಗಳು ಬಹಳ ಕಾಲದ ಹೋರಾಟದ ಪ್ರತಿಫಲ ಇದು. ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಬ್ರಿಟೀಷ್ ಸರಕಾರ ನಿರ್ಣಯಿಸಿದ್ದರಿಂದ ತಮ್ಮನ್ನು ತಾವು ಪಾಲಿಸಿಕೊಳ್ಳುವುದಕ್ಕೆ ತಮಗೆ ಧೀರ್ಘಕಾಲಿಕ ಉದ್ದೇಶಗಳು ನಿರ್ದೇಶಿಸಿಕೊಳ್ಳುವುದಕ್ಕೆ ಭಾರತದ ಪ್ರಜೆಗಳಿಗೆ ಹೊಸ ಸಂವಿಧಾನವು ಅವಶ್ಯಕವಾಯಿತು.

ಇದಕ್ಕಾಗಿ 1946ರಲ್ಲಿ ರಾಜ್ಯಗಳಿಗೆ ಚುನಾವಣೆಗಳು ನಡೆದ ನಂತರ ಸಂವಿಧಾನ ಸಭೆಗೆ ಚುನಾವಣೆಗಳು ನಡೆದವು. ಸಂವಿಧಾನ ಸಭೆಯ ಸದಸ್ಯರನ್ನು ರಾಜ್ಯದ ಶಾಸನ ಸಭೆಗಳು ಪರೋಕ್ಷವಾಗಿ ಆಯ್ಕೆ ಮಾಡಿವೆ. 1946 ರಲ್ಲಿ ಏರ್ಪಾಟಾದ

SCERT TELANGANA

ಕ್ಯಾಬಿನೇಟ್ ಮಿಷನ್ – ಪ್ರತಿ ರಾಜ್ಯಕ್ಕೆ, ಪ್ರತಿ ಸಂಸ್ಥಾನಕ್ಕೆ ಅಥವಾ ಕೆಲವು ಸ್ಥಾನಗಳಿಂದ ಕೂಡಿದ ಗುಂಪುಗಳಿಗೆ ಕಲವು ಸ್ಥಾನಗಳನ್ನು ಮೀಸಲಿಟ್ಟಿತು. ಈ ಪ್ರಕಾರ ಬ್ರಿಟೀಷ್ ಪ್ರತ್ಯಕ್ಷ ಆಡಳಿತದಲ್ಲಿನ ರಾಜ್ಯಗಳು 292 ಸದಸ್ಯರನ್ನು ಆಯ್ಕೆಮಾಡಿದರೆ ಎಲ್ಲಾ ಸಂಸ್ಥಾನಗಳು ಸೇರಿ 93 ಸದಸ್ಯರನ್ನು ಆಯ್ಕೆ ಮಾಡಿವವು. ಪ್ರತಿ ರಾಜ್ಯದಿಂದ ಆಯ್ಕೆಯಾಗುವ ಸದಸ್ಯರಲ್ಲಿ ಆ ರಾಜ್ಯಗಳಲ್ಲಿ ಆಯಾ ವರ್ಗಗಳ ಜನಸಂಖ್ಯೆಯನ್ನು ಹಿಡಿದು ಮುಸ್ಲಿಮರು, ಸಿಕ್ಕರು, ಇತರರು ಇರುವಂತೆ ಈ ಚುನಾವಣೆಗಳನ್ನು ನಿರ್ವಹಿಸಿದರು. ಸಂವಿಧಾನ ಸಭೆಯಲ್ಲಿ ಪರಿಶಿಷ್ಟಕುಲದವರಿಗೆ ಸೇರಿದ 26 ಜನ ಸದಸ್ಯರು ಇರುವಂತೆ ಸಹ ನೋಡಿದರು. ರಾಜ್ಯಗಳ ಶಾಸನ ಸಭೆಗಳಲ್ಲಿ ಚುನಾವಣೆಗಳು ನಿರ್ವಹಿಸಿದಾಗ ಸಂಸ್ಥಾನಗಳ ಪ್ರತಿನಿಧಿಗಳನ್ನು ರಾಯಭಾರಗಳು ಮುಖಾಂತರ ಆಯ್ಕೆ ಮಾಡಿದರು. ಒಟ್ಟು ಇದರಲ್ಲಿ ಒಂಭತ್ತು ಜನ ಮಾತ್ರವೇ ಮಹಿಳೆಯರು. ಇದರಲ್ಲಿ 69% ಸೀಟುಗಳೊಂದಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಆ ನಂತರ ಸ್ಥಾನದಲ್ಲಿ ಮುಸ್ಲಿಮ್ಮರಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಹೆಚ್ಚಿನ ಶೇಖಡವನ್ನು ಗೆದ್ದುಕೊಂಡ ಮುಸ್ಲಿಂಲೀಗ್ ಇದೆ. ಪ್ರಾರಂಭದಲ್ಲಿ ಬ್ರಿಟೀಷ್ ಇಂಡಿಯಾದ ಎಲ್ಲಾ ಪ್ರದೇಶಗಳ ಸದಸ್ಯರು ಇದರಲ್ಲಿ ಇದ್ದರು. ಆದರೆ 1947 ಆಗಸ್ಟ್ 14ರಂದು ಪಾಕಿಸ್ತಾನ್, ಭಾರತ ದೇಶವಾಗಿ ದೇಶ ವಿಭಜನೆ ನಡೆದುದರಿಂದ ಪಾಕಿಸ್ತಾನಿನ ಸದಸ್ಯರು ಪಾಕಿಸ್ತಾನ್ ಸಂವಿಧಾನ ಸಭೆಯಾಗಿ ಏರ್ಪಟ್ಟರು.



ಚಿತ್ರ 15.1

ಸಂವಿಧಾನ ಸಭೆಯನ್ನು ವಯಸ್ಕರಿಗೆಲ್ಲಾ ಕಲ್ಪಿಸಿದ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕಿನ ಮುಖಾಂತರ ಆಯ್ಕೆ ಮಾಡಿಲ್ಲವೆಂದು ನೀವು ನೋಡಿರುವಿರಿ. ಇದಕ್ಕೆ ಚುನಾವಣೆಗಳು ಪರೋಕ್ಷವಾಗಿ ನಡೆದಿವೆ. ಅಂದರೆ ಭಾರತ ಸಮಾಜದಲ್ಲಿ ಎಲ್ಲಾ ವರ್ಗಗಳಿಗೆ ಇದು ಪ್ರಾತಿನಿದ್ಯ ವಹಿಸುವುದಿಲ್ಲ. ಆ ಸಮಯದಲ್ಲಿ ಜನಸಂಖ್ಯೆಯಲ್ಲಿ ಶೇಕಡ 10 ಪ್ರಜೆಗಳಿಗೆ ಮಾತ್ರ ರಾಜ್ಯ ಶಾಸನ ಸಭೆಗಳಿಗೆ ಮತ ಹಾಕುವ ಹಕ್ಕು ಇದೆ. ಅಷ್ಟೇ ಅಲ್ಲದೆ ಸಂಸ್ಥಾನಗಳ ಪ್ರತಿನಿಧಿಗಳಿಗೆ ಚುನಾವಣೆಗಳು ನಡೆಯುತ್ತಲೇ ಇಲ್ಲ. ಸಂಬಂಧಿಸಿದ ಸಂಸ್ಥಾನಗಳೊಂದಿಗೆ ಚರ್ಚೆಗಳ ಮುಖಾಂತರ ಇವರನ್ನು ಆಯ್ಕೆ ಮಾಡಿದರು. ಸ್ವಾತಂತ್ರ್ಯ ಪಡೆಯುತ್ತಿರುವ ಸಂದರ್ಭದಲ್ಲಿ ತೀವ್ರವಾದ ರಾಜಕೀಯ ಕಾರ್ಯಕಲಾಪಗಳು, ಪ್ರಜೆಗಳ ನಡುವೆ ಹೆಚ್ಚಾಗುತ್ತಿರುವ ಘರ್ಷಣೆಗಳ ಸಂದರ್ಭದಲ್ಲಿ ಈ ನಿರ್ಣಯವನ್ನು ತೆಗೆದುಕೊಂಡರು. ಭಾರತ ದೇಶದಲ್ಲಿ ಏಕೀಕರಣವಾಗಬೇಕೆಂದು ಸಂಸ್ಥಾನಗಳು ಇನ್ನೂ ನಿರ್ಣಯಿಸಿಕೊಂಡಿಲ್ಲ. ಸ್ವತಂತ್ರ ರಾಜ್ಯಗಳಾಗಿ ಮುಂದುವರೆಯುತ್ತೇವೆ ಎಂಬ ಆಸೆ ಅವರಲ್ಲಿ ಬಹಳ ಜನಕ್ಕೆ ಇತ್ತು. ಆದುದರಿಂದ ಅವುಗಳ ಪ್ರತಿನಿಧಿಗಳನ್ನು ಸಂವಿಧಾನದ ಸಭೆಯಲ್ಲಿ ಸೇರಬೇಕೆಂದು ಕೇಳಿದರು. ಮೊದಲಿಗೆ ಮುಸ್ಲಿಂಲೀಗ್‌ನ ಸದಸ್ಯರು ಸಮಾವೇಶಗಳಿಗೆ ಹಾಜರಾಗಲಿಲ್ಲ. ಆದರೆ ಆ ನಂತರ ಸಮಾವೇಶಗಳಿಗೆ ಹಾಜರಾಗಲಾರಂಭಿಸಿದರು.

ಚಿತ್ರ 15.2 : ಈ ಚಿತ್ರದಲ್ಲಿ ತೋರಿಸಿದ ಸಮಾನತೆ, ನ್ಯಾಯ ಎಂಬ ಭಾವನೆಯನ್ನು ಚರ್ಚಿಸಿರಿ.

ಸಂವಿಧಾನ ಸಭೆ ಎಲ್ಲರಿಗೂ ಪ್ರಾತಿನಿಧ್ಯವಹಿಸಿದಾಗ್ಯೂ ಎಲ್ಲಾ ವಿಧದ ಅಭಿಪ್ರಯಾಗಳನ್ನು ಪರಿಗಣನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರತ್ಯೇಕವಾದ ಶ್ರದ್ಧೆ ವಹಿಸಿದೆ. ಪತ್ರಗಳು, ವಾರ್ತಾ ಪತ್ರಿಕೆಯಲ್ಲಿ ಪ್ರಬಂಧಗಳು ಇತರ ಮಾರ್ಗಗಳ ಮುಖಾಂತರ ಎಲ್ಲಾ ವಿಧವಾದ ಪ್ರಜೆಗಳು ತಮ್ಮ ಭಾವನೆಗಳನ್ನು ತಿಳಿಯಪಡಿಸುವಂತೆ ತನ್ನ ಕೆಲಸಕ್ಕೆ ವಿಸ್ತೃತವಾದ ಪ್ರಚಾರವನ್ನು ಕಲ್ಪಿಸಿದೆ. 1946 ಡಿಸೆಂಬರ್ 13ರಂದು ಸಂವಿಧಾನ ಸಭೆಯಲ್ಲಿ ಜನಹರ್‌ಲಾಲ್ ನೆಹ್ರೂರವರು ಈ ಮುಖ್ಯವಾದ ಪ್ರಕಟಣೆಯನ್ನು ಮಾಡಿದ್ದಾನೆ.

ಚಿತ್ರ 15.3



‚... ಭಾರತ ದೇಶಕ್ಕೆ ನಾವು ಕೋರಿಕೊಳ್ಳುತ್ತಿರುವ ಭವಿಷ್ಯ ಒಂದು ಗುಂಪಿಗೋ ಅಥವಾ ಒಂದುವರ್ಗಕ್ಕೋ, ಅಥವಾ ಒಂದು ರಾಜ್ಯಕ್ಕೋ ಪರಿಮಿತವಾದುದಲ್ಲ. ಇದು ದೇಶದ 40 ಕೋಟಿ ಜನಸಂಖ್ಯೆಗೆ ಸಂಬಂಧಿಸಿದ್ದು......... ಇಲ್ಲಿ ಇಲ್ಲದವರನ್ನು ಜ್ಞಾಪಕಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಇಲ್ಲಿ ಒಂದು ಪಕ್ಷಕ್ಕಾಗಿ ಅಥವಾ ಒಂದು ಗುಂಪಿಗಾಗಿ ಕೆಲಸ ಮಾಡುವುದಕ್ಕೆ ಇಲ್ಲ. ದೇಶಕ್ಕೆಲ್ಲಾ ನಾವು ಆಲೋಚನೆ ಮಾಡಬೇಕು. ಭಾರತ ದೇಶದ 40 ಕೋಟಿ ಪ್ರಜೆಗಳ ಯೋಗಕ್ಷೇಮವನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳಬೇಕು....... ನಮ್ಮ ಸ್ವಾರ್ಥಗಳಿಂದ, ಪಕ್ಷದ ವಿವಾದಗಳಿಂದ ಸಾಧ್ಯವಾದಷ್ಟು ಹೊರಬಂದು ನಮ್ಮ ಮುಂದಿರುವ ದೊಡ್ಡ ಸಮಸ್ಯೆಯನ್ನು ಕುರಿತು ಅತ್ಯಂತ ವಿಸ್ತೃತವಾಗಿ, ತಾಳ್ಮೆಯಿಂದ ಪ್ರತಿಭಾವಂತ ಪದ್ದತಿಯಲ್ಲಿ ಆಲೋಚಿಸಿ ನಾವು ರೂಪಿಸುವುದು ದೇಶಕ್ಕೆಲ್ಲಾ ಅರ್ಹತೆಯುಳ್ಳದ್ದಾಗಿರಬೇಕು. ಈ ಅತ್ಯಂತ ಜವಾಬ್ದಾರಿ ತನದ ಕಾರ್ಯಕ್ರಮದಲ್ಲಿ ಪ್ರವರ್ತಿಸಬೇಕಾದ ವಿಧವಾಗಿ ನಾವು ಪ್ರವರ್ತಿಸಿದ್ದೇಎಂದು ಪ್ರಪಂಚವು ಗುರ್ತಿಸುವ ಹಾಗೆ ಇರಬೇಕು.ഌ

ಡಾ॥ ಬಿ.ಆರ್.ಅಂಬೇಡ್ಕರ್ ನಾಯಕತ್ವದಲ್ಲಿ ಒಂದು ಕರಡು ಸಮಿತಿ ಏರ್ಪಟ್ಟಿತು. ಎಲ್ಲಾ ದೃಷ್ಟಿಕೋನಗಳನ್ನು ಪರಿಗಣನೆಯಲ್ಲಿ ತೆಗೆದುಕೊಂಡು ಕೊನೆಯ ಕರುಡನ್ನು ರೂಪಿಸುವ ಜವಾಬ್ದಾರಿ ಈ ಸಂಸ್ಥೆಗೆ ಒಪ್ಪಿಸಿದರು. ಸಂವಿಧಾನಕ್ಕೆ ಸಂಬಂಧಿಸಿದ ಮುಖ್ಯವಾದ ಅಂಶಗಳ ಮೇಲೆ ಸಭೆಯಲ್ಲಿ ಬಹಳ ಕಾಲದವರೆಗೆ ಚರ್ಚಿಸಿದ ನಂತರ ಅವುಗಳಿಗೆ ವಿಸ್ತೃತವಾದ ದಿಶಾ ನಿರ್ದೇಶನವನ್ನು ಮಾಡಿದ್ದಾರೆ. ಚರ್ಚಿಸಿ ಜಾರಿಗೊಳಿಸುವುದಕ್ಕಾಗಿ ಕೊನೆಯ ಕರುಡನ್ನು ಸಂವಿಧಾನದ ಸಭೆಯ ಮುಂದಿಟ್ಟಿದ್ದಾರೆ. ಅಂತಿಮವಾಗಿ ಈ ಸಭೆ 1949 ನವೆಂಬರ್ 26ರಂದು ಸಂವಿಧಾನವನ್ನು ಅನುಮೋದಿಸಿತು. ಇದು1950 ಜನವರಿ 26ರಂದು ಜಾರಿಗೆ ಬಂದಿದೆ. ಭಾರತ ದೇಶದ ಸಂವಿಧಾನದಲ್ಲಿ ಮುಖ್ಯವಾದ ಅಂಶಗಳು ಹೇಗೆ ರೂಪಿಸಲ್ಪಟ್ಟಿವೆಯೋ ತಿಳಿದುಕೊಳ್ಳುವುದಕ್ಕೆ ಸಂವಿಧಾನ ಸಭೆಯಲ್ಲಿ ಕೆಲವು ಮೂಖ್ಯವಾದ ಚರ್ಚೆಗಳನ್ನು ಈಗನೋಡೋಣ.

- ‚ಭಾರತ ದೇಶದ ಪ್ರಜೆಗಳಾದ ನಾವು ...ഌ ಎಂಬ ಪದಗಳೊಂದಿಗೆ ಭಾರತ ದೇಶದ ಸಂವಿಧಾನವು ಆರಂಭವಾಗುತ್ತದೆ. ಭಾರತ ದೇಶದ ಪ್ರಜೆಗಳಿಗೆಲ್ಲಾ ಪ್ರಾತಿನಿಧ್ಯವಹಿಸುತ್ತೇವೆಂದು ಹೇಳಿಕೊಳ್ಳುವುದು ಸಮರ್ಥನೀಯವೇನಾ?
- ದೇಶಕ್ಕೆಲ್ಲಾ ಸಂವಿಧಾನವನ್ನು ರೂಪಿಸುವುದರಲ್ಲಿ ಭಾರತ ದೇಶದ ಪ್ರಜೆಗಳೆಲ್ಲರೂ ಭಾಗವಹಿಸುವಿರಾ? ಈ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವ ಅವಸರ ಪ್ರಜೆಗಳಿಗೆಲ್ಲಾ ಇದೆಯಾ ಅಥವಾ ಸ್ವಲ್ಪ ಜನ ಬುದ್ದಿವಂತರಿಗೆ ಈ ಜವಾಬ್ದಾರಿಯನ್ನು ಒಪ್ಪಿಸಿದರೆ ಸರಿಹೋಗುತ್ತದಾ?
- ಪಾಠಶಾಲೆಗೆಲ್ಲಾ ಒಂದು ಸಂವಿಧಾನವನ್ನು ಏರ್ಪಾಟು ಮಾಡಬೇಕಾದರೆ ಯಾರು ಯಾರು ಅದರಲ್ಲಿ ಭಾಗ ಸ್ವಾಮ್ಯ ಗಳಾಗೇಕು? ಹೇಗೆ ಭಾಗ ಸ್ವಾಮಿಗಳಾಗ ಬೇಕು?

SCERT TELANGANA

ಸಂವಿಧಾನ ಸಭೆಯ ಚರ್ಚೆಗಳನ್ನು ಓದುವುದು

1948ರಲ್ಲಿ ಸಂವಿಧಾನದ ಸಭೆಯ ಮುಂದೆ ಬಿ.ಆರ್.ಅಂಬೇಡ್ಕರ್ ಸಂವಿಧಾನದ ಕರಡನ್ನು ಇಟ್ಟರು. ಅವರ ಉಪನ್ಯಾಸದಲ್ಲಿ ಸ್ವಲ್ಪ ಭಾಗವನ್ನು ಇಲ್ಲಿ ಕೊಟ್ಟಿದ್ದೇವೆ. ಭಾರತ ದೇಶದ ಸಂವಿಧಾನ ಸಭೆಯ ಪ್ರೊಸೀಡಿಂಗ್ಸ್‌ನ ಎಂಬುವುದರಲ್ಲಿ ಇದು ನೊಂದಣೆಯಾಗಿದೆ. ಉಪನ್ಯಾಸವನ್ನು ಸಂಕ್ಷಿಪ್ತಗೊಳಿಸಿದ ಕಡೆಗೆ .... ಚುಕ್ಕೆಗಳಿಂದ ಸೂಚಿಸಲ್ಪಟ್ಟಿದೆ.

ಡಾ. ಬಿ.ಆರ್. ಅಂಬೇಡ್ಕರ್ ಕರಡು ಪ್ರತಿಯನ್ನು ತಯಾರು ಮಾಡುವ ಪ್ರಕ್ರಿಯೆಯನ್ನು ವಿವರಿಸುವದರೊಂದಿಗೆ ಆರಂಭಿಸಿದರು. ಸಾರ್ವತ್ರಿಕ ವಯಸ್ಕ ಮತದಾನ ಹಕ್ಕಿನಂತೆ ಸಂವಿಧಾನದ ಸಭೆ ಆಯ್ಕೆಯಾಗಿಲ್ಲ. ಆದುದರಿಂದ ಸಾಮಾನ್ಯ ಪ್ರಜೆಗಳು, ಸದಸ್ಯರಲ್ಲಿ ಹೆಚ್ಚಿನ ಭಾಗ ಇದರಲ್ಲಿ ಭಾಗವಹಿಸುವಂತೆ ತೆಗೆದುಕೊಂಡ ಕ್ರಮಗಳನ್ನು ಗಮನಿಸಿ.

1948 ನವೆಂಬರ್ 4, ಗುರುವಾರ ಕರಡು ಸಂವಿಧಾನ.

ಗೌರವನೀಯರಾದ ಡಾ ಬಿ.ಆರ್.ಅಂಬೇಡ್ಕರ್.... ಅಧ್ಯಕ್ಷರೇ, ಕರಡು ಸಮಿತಿ ತಯಾರಿಸಿದ ಕರಡು ಸಂವಿಧಾನವನ್ನು ನಿಮ್ಮ ಮುಂದೆ ಇಟ್ಟು ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರತಿಪಾದಿಸುತ್ತಿದ್ದೇನೆ.

ಸಂವಿಧಾನ ಸಭೆಯಲ್ಲಿ ತೆಗೆದುಕೊಂಡ ವಿವಿಧ ನಿರ್ಣಯಗಳಿಗೆ ಅನುಗುಣವಾಗಿ, ಕೇಂದ್ರ ಅಧಿಕಾರಗಳ ಸಂಸ್ಥೆಗಳು, ಕೇಂದ್ರ ಸಂವಿಧಾನದ ಸಂಸ್ಥೆಯು, ರಾಜ್ಯಗಳ ಸಂವಿಧಾನ ಸಂಸ್ಥೆಯೂ, ಪ್ರಾಥಮಿಕ ಹಕ್ಕುಗಳು, ಅಲ್ಪ ಸಂಖ್ಯಾತ ವರ್ಗಗಳು, ಬುಡಕಟ್ಟು ಪ್ರದೇಶಗಳಂತಹವುಗಳ ಮೇಲೆ ಸಂವಿಧಾನ ಸಭೆಯು ಏರ್ಪಡಿಸಿದ ಸಲಹಾ ಸಮಿತಿಗಳ ವರದಿಗಳ ಆಧಾರವಾಗಿ ಸಂವಿಧಾನವನ್ನು ತಯಾರಿಸುವ ಜವಾಬ್ದಾರಿಯನ್ನು ಸಂವಿಧಾನದ ಸಮಿತಿಗೆ ಒಪ್ಪಿಸಲಾಯಿತು. ಕೆಲವು ವಿಷಯಗಳಲ್ಲಿ ಭಾರತ ಸರ್ಕಾರದ ಕಾನೂನು 1935ರಲ್ಲಿಯ ಅಂಶಗಳನ್ನು ಅನುಸರಿಬೇಕೆಂದು ಸಹ ಸಂವಿಧಾನ ಸಭೆ ನಿರ್ದೇಶಿಸಿದೆ...... ತಮಗೆ ಕೊಟ್ಟಿರುವ ಆದೇಶಗಳನ್ನು ಕರಡು ಸಮಿತಿಯು ಪ್ರಮಾಣಿಕತೆಯಿಂದ ಪಾಲಿಸಿದೆ ಎಂಬ ವಿಷಯವನ್ನು ನೀವು ಗಮನಿಸುತ್ತೀರೆಂದು ಆಶಿಸುತ್ತೇನೆ.

ಕರುಡು ಸಂವಿಧಾನವು....ಬಹಳ ದೊಡ್ಡ ಪ್ರತಿ ಇದರಲ್ಲಿ 315 ವಿಧಿಗಳು 8 ಅನುಸೂಚಿಗಳು ಇವೆ. ಕರಡು ಸಂವಿಧಾನದಂತಹ ದೊಡ್ಡ ಸಂವಿಧಾನವಿರುವ ದೇಶ ಬೇರೊಂದು ದಿಲ್ಲವೆಂದು ಒಪ್ಪಿಕೊಳ್ಳಬೇಕು. ಈ ಕರಡು ಸಂವಿಧಾನವನ್ನು ಎರಡು ತಿಂಗಳವರೆಗೆ ಪ್ರಜೆಗಳ ಮುಂದೆ ಇಟ್ಟಿದ್ದೇವೆ. ಅದರಲ್ಲಿಯ ಅಂಶಗಳ ಬಗ್ಗೆ ತಮ್ಮ ಸ್ಪಂದನೆಗಳನ್ನು ತಿಳಿಸುವುದಕ್ಕೆ ಸ್ನೇಹಿತರಿಗೆ, ವಿಮರ್ಶಕರಿಗೆ ವಿರೋಧಿಗಳಿಗೆ ತಕ್ಕಷ್ಟು ಸಮಯ ಲಭಿಸಿತು.

- ದೇಶಕ್ಕೆ ಸ್ವಾತಂತ್ರ್ಯವು ಬಂದ ನಂತರ ಸುಮಾರು................. ದಿನಗಳಿಗೆ ಕರಡು ಸಮಿತಿಯನ್ನು ಏರ್ಪಾಟು ಮಾಡಿದರು.
- ಸಂವಿಧಾನ ಸಭೆ ಮೊದಲಿಗೆ ...., ..., ... ಮುಖ್ಯಾಂಶಗಳ ಮೇಲೆ ಪ್ರತ್ಯೇಕ ಸಂಸ್ಥೆಗಳನ್ನು ನಿಯಮಿಸಿದೆ.
- ಈ ಸಂಸ್ಥೆಗಳ ವರದಿಗಳನ್ನು ಡಾ. ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ .... ಚರ್ಚಿಸಿ, ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಂಡಿತು.
- ಬ್ರಿಟೀಷ್ ಸರಕಾರವು ಮಾಡಿದ................... ಅಂಶಗಳನ್ನು ಸಹ ಕರಡು ತೆಗೆದುಕೊಂಡಿದೆ.
- ಆ ನಂತರ ವಿರ್ಮಕರಿಗೆ, ಸೂಚಕರಿಗೆ ಇದನ್ನು...................... ತಿಂಗಳುಗಳವರೆಗೆ ಪ್ರಜೆಗಳ ಮುಂದೆ ಇಟ್ಟಿದ್ದಾರೆ.
- ಕರಡು ಸಂವಿಧಾನದಲ್ಲಿ....................... ವಿಧಿಗಳು .... ಅನುಸೂಚಿಗಳು ಇವೆ.

ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿ ಬೇರೆ ದೇಶಗಳ ಅನುಭವಗಳನ್ನು ನಮ್ಮ ಸಂವಿಧಾನವು ಹೇಗೆ ತೆಗೆದುಕೊಂಡಿದೆಯೋ ಈಗ ನೋಡೋಣ. ಈ ಉಪನ್ಯಾಸದಲ್ಲಿ ಅಧ್ಯಕ್ಷರಾದ ಡಾ. ಬಿ.ಆರ್.ಅಂಬೇಡ್ಕರ್‌ರವರು ಇತರ ಸಂವಿಧಾನಗಳಿಂದ ತೆಗೆದುಕೊಂಡ

SCERT TELANGANA

ಪ್ರಕ್ರಿಯೆಯನ್ನು ವಿವರಿಸಿದರು. ಇವುಗಳನ್ನು ಓದುತ್ತಿರ್ರುವ ಕ್ರಮದಲ್ಲಿ ಕರಡು ಪ್ರತಿಯಲ್ಲಿ ಸಂಸದೀಯ (ಪಾರ್ಲಿಮೆಂಟರೀ) ಸರ್ಕಾರಕ್ಕೆ ಕೊಟ್ಟ ವ್ಯವಸ್ಥೀಕೃತ ನಿರ್ಮಾಣವನ್ನು ಗುರ್ತಿಸಿರಿ. ಭಾರತ ದೇಶಕ್ಕೆ ಸ್ವಾತಂತ್ರವು ಬಂದ ಒಂದು ವರ್ಷಕ್ಕೆ ಈ ಉಪನ್ಯಾಸವು ಕೊಟ್ಟಿರುವರೆಂದು ಗುರುತಿಸಿಕೊಳ್ಳಿರಿ.

ಚಿತ್ರ 15.4 : ಡಾ|| ಬಿ.ಆರ್.ಅಂಬೇಡ್ಕರ್

ಸಂಸದೀಯ ವ್ಯವಸ್ಥೆ

“ಸಂವಿಧಾನವನ್ನು ಕೈಯಲ್ಲಿಟ್ಟರೆ ಕಾನೂನಿಗೆ ಸಂಬಂಧಿಸಿದ ಯಾವ ವಿದ್ಯಾರ್ಥಿಯಾದರೂ ಸರಿ ಎರಡು ಪ್ರಶ್ನೆಗಳನ್ನು ಕೇಳುತ್ತಾರೆ. ಮೊದಲನೆಯದುಏರ್ಪಾಟು ಮಾಡುತ್ತಿರುವ ಸರಕಾರದ ರೂಪವು ಏನು? ಎರಡನೇಯದು, ಸಂವಿಧಾನದ ರೂಪವೇನು? ...... ನಾನು ಮೊದಲಿನ ಪ್ರಶ್ನೆಯೊಂದಿಗೆ ಪ್ರಾರಂಭಿಸುತ್ತೇನೆ.

ಸಂವಿಧಾನದ ಕರಡುಪ್ರತಿಯಲ್ಲಿ ಭಾರತ ಒಕ್ಕೂಟದ ಅಧಿಪತಿಯಾಗಿ ಅಧ್ಯಕ್ಷರು ಇರುತ್ತಾರೆ. ಈ ಹೆಸರು ಅಮೇರಿಕಾ ಅಧ್ಯಕ್ಷನನ್ನು ನೆನಪಿಗೆ ತರುತ್ತದೆ. ಆದರೆ ಹೆಸರುಗಳಿಗೆ ಮೀರಿ ಅಮೇರಿಕಾದಲ್ಲಿಯ ಸರಕಾರಕ್ಕೆ, ಕರಡು ಸಂವಿಧಾನವು ಪ್ರತಿವಾದಿಸುತ್ತಿರುವ ಸರಕಾರಕ್ಕೆ ಯಾವ ವಿಧವಾದ ಹೋಲಿಕೆ ಇಲ್ಲ. ಅಮೇರಿಕಾ ಸರ್ಕಾರವನ್ನು ಅಧ್ಯಕ್ಷೀಯ ವ್ಯವಸ್ಥೆಯ ಸರ್ಕಾರ ಎನ್ನುತ್ತಾರೆ. ಕರಡು ಸಂವಿಧಾನದ ಪಾರ್ಲಿಮೆಂಟರೀ ಸರ್ಕಾರವನ್ನು ಪ್ರತಿಪಾದಿಸುತ್ತದೆ. ಈ ಎರಡಕ್ಕೆ ಮೂಲಭೂತ ವ್ಯತ್ಯಾಸಗಳಿವೆ.

ಅಮೇರಿಕಾದಲ್ಲಿಯ ಅಧ್ಯಕ್ಷೀಯ ವ್ಯವಸ್ಥೆ ಸರ್ಕಾರದಲ್ಲಿ ಕಾರ್ಯನಿರ್ವಹಣೆಯ ವರ್ಗಕ್ಕೆ ಮುಖ್ಯಸ್ಥರಾಗಿ ಅಧ್ಯಕ್ಷರು ಇರುತ್ತಾರೆ. ಆಡಳಿತದ ಜವಾಬ್ದಾರಿ ಆತನ ಕೈಯಲ್ಲಿ ಇರುತ್ತದೆ. ಕರಡು ಸಂವಿಧಾನದಲ್ಲಿಯ ಅಧ್ಯಕ್ಷರು ಬ್ರಿಟೀಷ್ ಸಂವಿಧಾನದಲ್ಲಿಯ ರಾಜ ಸ್ಥಾನದಲ್ಲಿರುತ್ತಾನೆ. ಆತನು ದೇಶಕ್ಕೆ ಅಧಿಪತಿ. ಆದರೆ ಕಾರ್ಯನಿರ್ವಾಹಕ ವರ್ಗಕ್ಕೆ ಅಲ್ಲ. ಆತನು ದೇಶಕ್ಕೆ ಪ್ರಾತಿನಿಧ್ಯ ವಹಿಸುತ್ತಾನೆ. ಆದರೆ ದೇಶವನ್ನು ಪಾಲಿಸುವುದಿಲ್ಲ. ಆತನು ದೇಶಕ್ಕೆ ಸಂಕೇತ. ಆಡಳಿತದಲ್ಲಿ ಆತನ ಸ್ಥಾನವು ನಾಮಮಾತ್ರವಾದುದು. ಆತನ ಮುದ್ರೆಯ ಮುಖಾಂತರ ದೇಶದ ನಿರ್ಣಯಗಳನ್ನು ತಿಳಿಯಪಡಿಸುತ್ತಾರೆ. ಅಮೇರಿಕಾ ಸಂವಿಧನಾದ ಪ್ರಕಾರ ಅಧ್ಯಕ್ಷರ ಕೆಳಗೆ ವಿವಿಧ ಇಲಾಖೆಗಳಿಗೆ ಜವಾಬ್ದಾರಿ ವಹಿಸುತ್ತ ಕಾರ್ಯದರ್ಶಿಗಳು ಇರುತ್ತಾರೆ. ಅದೇ ವಿಧವಾಗಿ ಭಾರತ ಒಕ್ಕೂಟದ ಅಧ್ಯಕ್ಷರ ಕೆಳಗೆ ಆಡಳಿತದಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಜವಾಬ್ದಾರಿ ವಹಿಸುತ್ತಾ ಮಂತ್ರಿಗಳು ಇರುತ್ತಾರೆ. ಇಲ್ಲಿ ಸಹ ಈ ಎರಡರ ನಡುವೆ ಮೂಲಭೂತವಾದ ವ್ಯತ್ಯಾಸವಿದೆ. ತನ್ನ ಕಾರ್ಯದರ್ಶಿಗಳು ಕೊಡುವ ಸಲಹೆಗಳಿಗೆ ಅಮೇರಿಕಾ ಅಧ್ಯಕ್ಷರು ಬದ್ದರಾಗಿ ಇರಬೇಕಾಗಿಲ್ಲ. ಆದರೆ ಭಾರತ ಒಕ್ಕೂಟದ ಅಧ್ಯಕ್ಷರು ಸಾಧಾರಣವಾಗಿ ತನ್ನ ಮಂತ್ರಿಗಳ ಸಲಹೆಗಳಿಗೆ ಬದ್ದನಾಗಿರುತ್ತಾನೆ. ಅವರ ಸಲಹೆಗಳಿಗೆ ವಿರುದ್ಧವಾಗಿ ಆತನು ಏನು ಮಾಡಲಾರನು, ಅದೇ ವಿಧವಾಗಿ ಅವರ ಸಲಹೆ ಇಲ್ಲದಂತೆ ಕೂಡ ಏನು ಮಾಡಲಾರನು. ಅಮೇರಿಕಾ ಅಧ್ಯಕ್ಷರು ಯಾವ ಕಾರ್ಯದರ್ಶಿಯನ್ನಾದರೂ ಯಾವಾಗಲಾದರೂ ತೆಗೆದುಹಾಕಬಹುದು. ಪಾರ್ಲಿಮೆಂಟ್‌ನಲ್ಲಿ ಬಹುಮತ ಬೆಂಬಲ ಇರುವವರೆಗೆ ಭಾರತ ಒಕ್ಕೂಟದ ಅಧ್ಯಕ್ಷರಿಗೆ ಮಂತ್ರಿಗಳನ್ನುತೆಗೆದು ಹಾಕುವ ಅಧಿಕಾರವಿಲ್ಲ. ....”

- ಭಾರತದ ಅಧ್ಯಕ್ಷರಿಗೆ ಕೊಟ್ಟ ಅಧಿಕಾರಿಗಳು ---------ಗೆ ಸೇರಿದ ------------ ಗಿಂತ ------------ ಗೆ ಸೇರಿದ ------------ ಅಧಿಕಾರಗಳಿಗೆ ಸಮೀಪದಲ್ಲಿವೆ.
- ಭಾರತದ ಅಧ್ಯಕ್ಷರು ------------ ಸಲಹೆಗಳನ್ನು ಪಾಲಿಸುವಂತೆ ಸಂವಿಧಾನದ ಸಭೆ ರೂಪಿಸಿದೆ.
- ಬ್ರಿಟನ್ ರಾಜ, ಭಾರತದ ಅಧ್ಯಕ್ಷರ ಸ್ಥಾನಗಳಲ್ಲಿನ ವ್ಯತ್ಯಾಸವೇನು?

ಒಕ್ಕೂಟ ವ್ಯವಸ್ಥೆ (Federalism)

• ಚರಿತ್ರೆಯಲ್ಲಿ ಪ್ರಧಾನವಾಗಿ ಎರಡುಬಗೆಯ ಸಂವಿಧಾನದ ರೂಪಗಳಿವೆ. ಒಂದನ್ನು ಏಕೀಕೃತ ವಿಧಾನವೆಂದು, ಎರಡನೆಯದನ್ನು ಒಕ್ಕೂಟ ವಿಧಾನವೆಂದು ಕರೆಯುವರು. ಏಕೀಕೃತ ಸಂವಿಧಾನದಲ್ಲಿ ಎರಡು ಮುಖ್ಯವಾದ ಅಂಶಗಳು : (1) ಕೇಂದ್ರ ರಾಜನೀತ್ಯಿ ಪದ್ಧತಿ (ರಾಜನೀತಿ ಪದ್ಧತಿ ಎಂದರೆ ಸರ್ಕಾರದ ವಿಧಾನವು ಅಥವಾ ರಾಜಕೀಯ ನಿರ್ಮಾಣ) ದ ಪರಮಾಧಿಕಾರ, (2) ಉಪಸಾರ್ವಭೌಮತ್ವ ರಾಜನೀತಿ ಪದ್ಧತಿ. ಇಲ್ಲದೇ ಇರುವುದು. ಇದಕ್ಕೆ ವಿರುದ್ಧವಾಗಿ ಸಮೂಖ್ಯ ವಿಧಾನ ಸಂವಿಧಾನದಲ್ಲಿ (1) ಕೇಂದ್ರ ಪ್ರಜಾರಾಜ್ಯ ಪದ್ಧತಿಯ ಜೊತೆಗೆ ಉಪ ರಾಜನೀತಿ ಪದ್ಧತಿ ಸಹ ಇರುವಿಕೆ , (2) ಅವುಗಳಿಗೆ ವಿಭಾಗ ಮಾಡಿಕೊಟ್ಟ ರಂಗಗಳಲ್ಲಿ ಈ ಎರಡೂ ಸಾರ್ವಭೌಮತ್ವವನ್ನು ಹೊಂದಿರುವುದು. ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ ಒಕ್ಕೂಟ ವ್ಯವಸ್ಥೆ ಎಂದರೆ ದ್ವಂದ್ವ ರಾಜನೀತಿ ಪದ್ಧತಿಯನ್ನು ಏರ್ಪಾಟು ಮಾಡುವುದು. (ಕೇಂದ್ರ, ರಾಜ್ಯಗಳೊಂದಿಗೆ ಕೂಡಿದ ದ್ವಂದ್ವ ಸರ್ಕಾರಗಳ ವಿಧಾನ) ಕರಡು ಸಂವಿಧಾನವನ್ನು ಒಕ್ಕೂಟ ವಿಧಾನದ ಸಂವಿಧಾನವೆಂದು ಹೇಳಬಹುದು. ಇದು ದ್ವಂದ್ವ ರಾಜನೀತಿ ಪದ್ಧತಿಯನ್ನು ಏರ್ಪಾಟು ಮಾಡುತ್ತದೆ. ಪ್ರತಿಪಾದಿತ ಸಂವಿಧಾನದಲ್ಲಿಯ ದ್ವಂದ್ವ ರಾಜನೀತಿ ಪದ್ಧತಿಯ ಕೆಳಗೆ ಕೇಂದ್ರದಲ್ಲಿ ಕೇಂದ್ರ ಸರ್ಕಾರ, ಅವುಗಳ ಪರದಿಯಲ್ಲಿ ರಾಜ್ಯ ಸರಕಾರಗಳು ಇರುತ್ತವೆ. ಸಂವಿಧಾನವು ಇವುಗಳಿಗೆ ವಿಭಾಗ ಮಾಡುವ ರಂಗಗಳಲ್ಲಿ ಅವು ಸಾರ್ವಭೌಮತ್ವ ಅಧಿಕಾರಗಳನ್ನು ಹೊಂದಿರುತ್ತವೆ.

• ಈ ದ್ವಂದ್ವ ರಾಜನೀತಿ ವಿಧಾನವು ಅಮೇರಿಕಾ ಸಂವಿಧಾನದ ಹಾಗೆ ಇರುತ್ತದೆ. ಅಮೇರಿಕಾ ರಾಜನೀತಿ ಪದ್ಧತಿ ಸಹ ದ್ವಂದ್ವ ರಾಜನೀತಿ ಪದ್ಧತಿಯೇ, ಇವುಗಳಲ್ಲಿ ಒಂದನ್ನು ಒಕ್ಕೂಟ ಸರ್ಕಾರವೆಂದು, ಎರಡನೆಯದನ್ನು ರಾಜ್ಯ ಸರ್ಕಾರವೆಂದುಕರೆಯುವರು. ಕರಡು ಸಂವಿಧಾನದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳ ಹಾಗೆ ಎನ್ನುವ ಮಾತು. ಅಮೇರಿಕಾ ಸಂವಿಧಾನದ ಪ್ರಕಾರ ಒಕ್ಕೂಟ ಸರ್ಕಾರ ಕೇವಲ ರಾಜ್ಯಗಳ ಒಕ್ಕೂಟವಲ್ಲ, ಅದೇರೀತಿ ರಾಜ್ಯಗಳ ಆಡಳಿತ ಅಂಗಗಳು ಒಕ್ಕೂಟ ಸರ್ಕಾರದ ಇಲಾಖೆಗಳಾಗುವುದಿಲ್ಲ. ಇದೇ ವಿಧವಾಗಿ ಕರಡು ಸಂವಿಧಾನದಲ್ಲಿ ಪ್ರತಿಪಾದಿಸಿದ ಭಾರತ ದೇಶದ ಸಂವಿಧಾನವು ರಾಜ್ಯಗಳ ಒಕ್ಕೂಟವಲ್ಲ. ರಾಜ್ಯ ಆಡಳಿತ ವಿಭಾಗಗಳು ಕೇಂದ್ರ ಸರ್ಕಾರದ ಇಲಾಖೆಗಳಾಗುವುದಿಲ್ಲ. ಭಾರತ ದೇಶ, ಅಮೇರಿಕಾ ಸಂವಿಧಾನಗಳ ನಡುವೆ ಹೋಲಿಕೆ ಇಲ್ಲಿಗೆ ಕೊನೆಯಾಗುತ್ತದೆ, ಈ ಎರಡಕ್ಕೆ ಹೋಲಿಕೆಗಳಿಗಿಂತ ವ್ಯತ್ಯಾಸಗಳು ಸ್ಪಷ್ಟವಾಗಿವೆ. ....

• ಪ್ರತಿಪಾದಿತ ಭಾರತ ಸಂವಿಧಾನವು ಏಕಪೌರತ್ವದೊಂದಿಗೆ ಇರುವ ದ್ವಂದ್ವ ರಾಜನೀತಿ ಪದ್ಧತಿ ಒಟ್ಟು ಭಾರತ ದೇಶಕ್ಕೆ ಏಕಪೌರತ್ವವಿರುತ್ತದೆ. ರಾಜ್ಯಗಳ ಪೌರತ್ವ ಇರುವುದಿಲ್ಲ. ಪ್ರತಿ ಭಾರತೀಯನು ಯಾವ ರಾಜ್ಯದಲ್ಲಾಗಲೀ ಇರುತ್ತಿದ್ದರೂ ಒಂದೇ ವಿಧವಾದ ಪೌರತ್ವ ಹಕ್ಕುಗಳು ಹೊಂದಿರುತ್ತಾನೆ.

• ಭಾರತ ಒಕ್ಕೂಟ ವ್ಯವಸ್ಥೆಯಲ್ಲಿರುವ ಮತ್ತೊಂದು ಪ್ರತ್ಯೇಕ ಅಂಶವು ಇತರ ಒಕ್ಕೂಟ ವ್ಯಸ್ಥೆಗಳಿಗೆ ಬೇರೆಯಾಗಿ ನಿಲ್ಲಿಸುತ್ತದೆ. ಅಧಿಕಾರ ಹಂಚಿಕೆಯೊಂದಿಗೆ, ಪ್ರತ್ಯೇಕ ಶಾಸನ ಕಾರ್ಯನಿರ್ವಾಹಕ, ನ್ಯಾಯ ಅಧಿಕಾರಗಳಿಂದಿರುವ ದ್ವಂದ್ವ ರಾಜನೀತಿಗಳಿಂದ ಕೂಡಿದ ಒಕ್ಕೂಟ ವ್ಯವಸ್ಥೆಯಲ್ಲಿ ವಿಭಿನ್ನ ಕಾನೂನು , ಆಡಳಿತ, ನ್ಯಾಯ ರಕ್ಷಣೆ

- ಸಮೂಖ್ಯ ಪ್ರಜಾರಾಜ್ಯ ಪದ್ಧತಿಯಲ್ಲಿ ಒಂದಕ್ಕಿಂತಲೂ ಹೆಚ್ಚು ಸರಕಾರಗಳು ಇರುತ್ತವೆ. ಭಾರತ ದೇಶದ ವಿಷಯದಲ್ಲಿ ಅವು ------------, ------------ ಸ್ಥಾಯಿಯಲಿವೆ. ನೀವು ------------ ರಾಜ್ಯಕ್ಕೆ,------------ ದೇಶಕ್ಕೆ ಸಂಬಂಧಿಸಿದವರು.
- ಯಾವ ವಿಧವಾದ ಸಂವಿಧಾನದ ಕೆಳಗೆ ಕೇಂದ್ರ ಸರಕಾರದ ಹೆಚ್ಚಿನಅಧಿಕಾರಗಳು ಇರುತ್ತವೆ?
- ಕೇಂದ್ರ, ರಾಜ್ಯ ಸರಕಾರಗಳಿಗೆ ಖಚಿತವಾದ ಅಧಿಕಾರವನ್ನುಯಾವ ವಿಧವಾದ ಸರಕಾರ ಕೊಡುತ್ತದೆ?
- ಭಾರತ ದೇಶದ ರಾಜ್ಯಗಳು ಯಾವ ವಿಧವಾಗಿ ಕೇಂದ್ರ ಸರಕಾರದ ಆಡಳಿತದ ಅಂಗಗಳ ಶಾಖೆಗಳಲ್ಲ?
- ಭಾರತ ಸಂವಿಧಾನದ ರೂಪಕರ್ತರು ದ್ವಂದ್ವ ಪೌರತ್ವ (ದೇಶ, ರಾಜ್ಯ) ವಿಧಾನವನ್ನು ಏಕೆ ತಿರಸ್ಕರಿಸಿದ್ದಾರೆ?

SCERT TELANGANA

ಏರ್ಪಡುವುದು ಅನಿವಾರ್ಯವಾಗುತ್ತದೆ. ಸ್ವಲ್ಪಮಟಟಿಗೆ ಈ ವೈವಿಧ್ಯತೆಗೆ ಪ್ರಾಮುಖ್ಯತೆ ನೀಡುವ ಅವಶ್ಯಕತೆ ಇಲ್ಲ. ಸ್ಥಳೀಯ ಅವಶ್ಯಕತೆಗಳಿಗೆ, ಸ್ಥಾನಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಸರಕಾರದ ಅಧಿಕಾರಗಳನ್ನು ಬದಲಾಯಿಸುವ ಪ್ರಯತ್ನವಾಗಿ ಇದನ್ನು ಸ್ವಾಗತಿಸಬಹುದು. ಆದರೆ ಒಂದು ಹಂತವನ್ನು ದಾಟಿ ವೈವಿಧ್ಯತೆ ಇದ್ದರೆ ಅದು ಗೊಂದಲವಾಗಿ ಸೃಷ್ಟಿಸುತ್ತದೆ. ಹಾಗೆ ಅನೇಕ ಒಕ್ಕೂಟ ದೇಶಗಳಲ್ಲಿ ಗೊಂದಲ ಸೃಷ್ಟಿಸಿದೆ! ವಿವಾಹಕ್ಕೆ, ವಿಚ್ಛೇದನೆಗೆ, ಆಸ್ತಿಗಳ ವಾಸ್ತವಕ್ಕೆ, ಕುಟುಂಬ ಸಂಬಂಧಗಳಿಗೆ, ಒಪ್ಪಂದಗಳಿಗೆ, ಅಪರಾಧಗಳಿಗೆ, ತೂಕಗಳಿಗೆ, ಅಳತೆಗಳಿಗೆ, ಬಿಲ್ಲುಗಳು, ಚೆಕ್ಕುಗಳು, ಬ್ಯಾಂಕಿಂಗ್, ವಾಣಿಜ್ಯಕ್ಕೆ, ನ್ಯಾಯವನ್ನು ಪಡೆಯುವ ವಿಧಾನಗಳಿಗೆ, ಆಡಳಿತಕ್ಕೆ ಸಂಬಂಧಿಸಿದ ಪ್ರಮಾಣಿಕತೆಗಳು, ಪದ್ದತಿಗಳಿಗೆ – ಒಕ್ಕೂಟದಲ್ಲಿ ಇಪ್ಪತ್ತು ರಾಜ್ಯಗಳು ಇವೆ ಎಂದುಕೊಂಡರೆ, ಇಪ್ಪತ್ತು ಬಗೆಯ ಕಾನೂನುಗಳಿದ್ದರೆ ಪರಿಸ್ಥಿತಿ ಹೇಗೆ ಇರುತ್ತದೆಯೋ ಊಹಿಸಿಕೊಳ್ಳಿರಿ. ಇಂತಹ ವ್ಯವಹಾರವು ರಾಜ್ಯಗಳನ್ನು ಬಲಹೀನಗೊಳಿಸುವುದಲ್ಲದೇ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವ ಪೌರರನ್ನು ಸಹಿಸುವುದಿಲ್ಲ. ಆ ಪೌರರು ಒಂದು ರಾಜ್ಯದಲ್ಲಿ ಕಾನೂನು ಬದ್ದವಾದುದು ಬೇರೊಂದು ರಾಜ್ಯದಲ್ಲಿ ಆಗುವುದಿಲ್ಲ ಎಂದು ತಿಳಿದುಕೊಳ್ಳುತ್ತಾರೆ. ಭಾರತ ದೇಶವು ಒಕ್ಕೂಟ ವ್ಯವಸ್ಥೆಯಾಗಿದ್ದು, ಅದೇ ಸಮಯದಲ್ಲಿ ಭಾರತ ದೇಶದ ಐಕ್ಯತೆಯನ್ನು ಕಾಪಾಡುವುದಕ್ಕೆ ಅವಶ್ಯಕವಾದ ಕೆಲವು ಮೂಲಭೂತ ಅಂಶಗಳಲ್ಲಿ ಏಕರೂಪತೆಯು ಹೊಂದಿರುವಂತೆ ವಿಧಾನಗಳನ್ನು, ಪದ್ದತಿಗಳನ್ನು ರೂಪಿಸುವುದಕ್ಕೆ ಕರಡು ಸಂವಿಧಾನ ಪ್ರಯತ್ನಿಸಿದೆ. ಇದಕ್ಕೆ ಕರಡು ಸಂವಿಧಾನವು ಮೂರು ವಿಧಾನಗಳನ್ನು ಅವಲಂಭಿಸಿದೆ..

(1) ಏಕೀಕೃತ ನ್ಯಾಯ ವ್ಯವಸ್ಥೆ

(2) ಪೌರ, ಅಪರಾಧ ಅಂಶಗಳಲ್ಲಿಯ ಮೂಲಭೂತ ಕಾನೂನುಗಳಲ್ಲಿ ಏಕರೂಪತೆ

(3) ಮುಖ್ಯವಾದ ಪದವಿಗಳಲ್ಲಿ ನೇಮಕ ಮಾಡುವುದಕ್ಕೆ ದೇಶಕ್ಕೆಲ್ಲಾ ಅಖಿಲಭಾರತ ಸಿವಿಲ್ ಸರ್ವೀಸ್,

◦ ಒಕ್ಕೂಟ ವ್ಯವಸ್ಥೆಯಲ್ಲಿರುವ ದ್ವಂದ್ವ ರಾಜನೀತಿ ಪದ್ದತಿಯೊಂದಿಗೆ ದ್ವಂದ್ವ ನ್ಯಾಯವ್ಯವಸ್ಥೆ, ದ್ವಂದ್ವ ನ್ಯಾಯ ಸೂತ್ರಗಳು, ದ್ವಂದ್ವ ಸಿವಿಲ್ ಸರ್ವೀಸುಗಳು, ಅನಿವಾರ್ಯ ಪರಿಣಾಮವಾಗಿ ಇರುತ್ತವೆ. ಅಮೇರಿಕಾದಲ್ಲಿ ಒಕ್ಕೂಟ ನ್ಯಾಯವ್ಯವಸ್ಥೆ, ರಾಜ್ಯ ನ್ಯಾಯವ್ಯವಸ್ಥೆ ಎರಡೂ ಬೇರೆ ಬೇರೆ ಯಾವುದಕ್ಕೆ ಅವು ಸ್ವತಂತ್ರವಾದವು. ಭಾರತ ಒಕ್ಕೂಟದಲ್ಲಿ ದ್ವಂದ್ವ ರಾಜನೀತಿಗಳು ಇದ್ದಾಗ್ಯೂ ದ್ವಂದ್ವ ನ್ಯಾಯ ವ್ಯವಸ್ಥೆಗಳು ಇಲ್ಲವೇ ಇಲ್ಲ. ಹೈಕೋರ್ಟು, ಸುಪ್ರೀಂ ಕೋರ್ಟು ಒಂದೇ ಸಮಗ್ರ ನ್ಯಾಯ ವ್ಯವಸ್ಥೆಯಲ್ಲಿಯ ಭಾಗ; ಸಂವಿಧಾನ ಕಾನೂನು, ಪೌರ ಕಾನೂನು, ಅಪರಾಧ ಕಾನೂನುಗಳ ಅಡಿಯಲ್ಲಿ ಎಲ್ಲಾ ವಿಷಯಗಳಲ್ಲಿ ಇವುಗಳ ಪರಿಮಿತಿ ಇದ್ದು, ನ್ಯಾಯವನ್ನು ಒದಗಿಸಬಹುದು. ನ್ಯಾಯವನ್ನು ಒದಗಿಸುವ ವಿಧಾನದಲ್ಲಿ ವೈವಿಧ್ಯತೆ ಇಲ್ಲದಂತೆ ಮಾಡುವುದಕ್ಕೆ ಹೀಗೆ ಮಾಡಿದ್ದಾರೆ. ಇದಕ್ಕೆ ಕೆನಡಾ ದೇಶವೊಂದೇ ಬಹಳ ಮಟ್ಟಿಗೆ ಸಮೀಪ ಹೋಲಿಕೆ ಇರುತ್ತದೆ. ಆಸ್ಟ್ರೇಲಿಯಾದ ವಿಧಾನವು, ಇದು ಒಂದೇ ಎನ್ನಿಸುತ್ತದೆ ಆದರೂ ಒಂದೇ ಅಲ್ಲ. (ವಿವರಣೆ; ಕೆಲವು ಒಕ್ಕೂಟ ದೇಶಗಳಲ್ಲಿ ರಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ರಾಜ್ಯದ ನ್ಯಾಯಲಯಗಳು ಕೊಟ್ಟ ತೀರ್ಪುಗಳನ್ನು ಸುಪ್ರೀಂ ಕೋರ್ಟು ಬದಲಾಯಿಸಿಲಾರದು. ಆದರೆ ಭಾರತ ದೇಶದಲ್ಲಿ ಕೆಳಗಿನ ನ್ಯಾಯಾಲಯ ಯಾವುದಾದರ ಕೊಟ್ಟ ತೀರ್ಪಿನ ಮೇಲೆ ಸುಪ್ರೀಂಕೋರ್ಟು ವಿಚಾರಣೆ ಮಾಡಿ ತೀರ್ಪು ಹೇಳಬಹುದು)

◦ ಪೌರ, ವ್ಯಾಪಾರ ಜೀವನಗಳಿಗೆ ಮೂಲಾಧಾರವಾಗಿ ಇರುವ ಕಾನೂನುಗಳಲ್ಲಿ ವೈವಿಧ್ಯತೆ ಇಲ್ಲದಂತೆ ಮಾಡುವುದಕ್ಕೆ ಜಾಗ್ರತೆ ವಹಿಸಲಾಗಿದೆ. ಪೌರ ವಿಚಾರಣೆ ಸ್ಮೃತಿ, ಶಿಕ್ಷಾಸ್ಮೃತಿಯಂತಹ ಪೌರ, ಅಪರಾಧ ಕಾನೂನುಗಳು ಸ್ಮೃತಿಗಳು, ಸಾಕ್ಷಿಗಳ ಕಾನೂನು, ಆಸ್ತಿ ವರ್ಗಾವಣೆ ಕಾನೂನು, ವಿವಾಹ, ವಿಚ್ಛೇದನಗಳು, ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕಾನೂನುಗಳು ಉಭಯಪಟ್ಟಿಯಲ್ಲಿ (ಅಥವಾ ಕೇಂದ್ರಪಟ್ಟಿಯಲ್ಲಿ) ಸೇರಿಸಿ ಒಕ್ಕೂಟ ವ್ಯವಸ್ಥೆ ಹಾನಿಯಾಗದಂತೆ ಈ ಕಾನೂನುಗಳಲ್ಲಿ ಏಕರೂಪತೆಯನ್ನು ಕಾಪಾಡಿದ್ದಾರೆ. (ವಿವರಣೆ : ಕಾನೂನುಗಳು ಮಾಡುವ ಅಂಶಗಳನ್ನು

SCERT TELANGANA

ಚಿತ್ರ 15.5 : 1950ರಲ್ಲಿ ಗಣರಜ್ಯೋತ್ಸವ ಕವಾತು, ಆಕಾಶದಿಂದ ತೆಗೆದ ಚಿತ್ರ

ಕೇಂದ್ರಪಟ್ಟಿ, ರಾಜ್ಯಗಳ ಪಟ್ಟಿ, ಉಭಯ ಪಟ್ಟಿಗಳಾಗಿ ವಿಂಗಡಿಸಿದ್ದಾರೆ. ಕೇಂದ್ರ ಪಟ್ಟಿಯಲ್ಲಿನ ಅಂಶಗಳ ಮೇಲೆ ಕೇಂದ್ರವು ಮಾತ್ರವೇ ಕಾನೂನುಗಳನ್ನು ಮಾಡಬಲ್ಲದು. ರಾಜ್ಯ ಪಟ್ಟಿಯಲ್ಲಿನ ಅಂಶಗಳ ಮೇಲೆ ರಾಜ್ಯವು ಮಾತ್ರವೇ ಕಾನೂನುಗಳ ಮಾಡಬಲ್ಲದು. ಉಭಯ ಪಟ್ಟಿಯಲ್ಲಿನ ಅಂಶಗಳ ಮೇಲೆ, ರಾಜ್ಯಗಳು, ಕೇಂದ್ರಗಳು ಕಾನೂನುಗಳು ತಯಾರಿಸಬಹುದು. ಆದರೆ ಕೇಂದ್ರವು ಮಾಡುವ ಕಾನೂನಿಗೆ ವಿರುದ್ಧವಾಗಿ ರಾಜ್ಯವು ಕಾನೂನು ಮಾಡಿದರೆ ಕೇಂದ್ರವು ಮಾಡಿದ ಕಾನೂನು ಮಾತ್ರವೇ ನಡೆಯುತ್ತದೆ)

„ಒಕ್ಕೂಟ ವ್ಯವಸ್ಥೆಯಲ್ಲಿ ಭಾಗವಾಗಿ ಇರುವ ದ್ವಂದ್ವ ರಾಜನೀತಿ ಪದ್ದತಿಯಲ್ಲಿ ಎಲ್ಲಾ ದೇಶಗಳಲ್ಲಿ ದ್ವಂದ್ವ ಸೇವೆಗಳ ವಿಧಾನವನ್ನು ಅವಲಂಬಿಸಿದರು. ಎಲ್ಲಾ ಒಕ್ಕೂಟಗಳಲ್ಲಿ ಒಕ್ಕೂಟ ಸಿವಿಲ್ ಸರ್ವೀಸ್, ರಾಜ್ಯದ ಸಿವಿಲ್ ಸರ್ವೀಸ್ ಇವೆ. ಭಾರತ ದೇಶವು ದ್ವಂದ್ವ ಸರ್ಕಾರ ಪದ್ದತಿಯಾದಾಗ್ಯೂ ಈ ಒಂದು ಅಂಶವನ್ನು ಹೊರತುಪಡಿಸಿ ದ್ವಂದ್ವ ಸೇವೆಗಳಿರುತ್ತವೆ. ಪ್ರತಿ ದೇಶದಲ್ಲೂ ಆಡಳಿತ ಪ್ರಮಾಣಿಕತೆಗಳನ್ನು ಕಾಪಾಡುವ ದೃಷ್ಟಿಕೋನದಿಂದ ಆಡಳಿತ ವ್ಯವಸ್ಥೆಯಲ್ಲಿ ಕೆಲವು ಮುಖ್ಯವಾದ ಪದವಿಗಳಿರುತ್ತವೆ. ಅತಿದೊಡ್ಡ, ಸಂಕ್ಲಿಷ್ಟವಾದ ಆಡಳಿತಯಂತ್ರಾಗದಲ್ಲಿ ಇಂತಹ ಪದವಿಗಳನ್ನು ಗುರ್ತಿಸುವುದು ಕಷ್ಟವೇ. ಆದರೆ ಇಂತಹ ಮುಖ್ಯ ಪದವಿಗಳಿಗೆ ನೇಮಿಸುವ ವ್ಯಕ್ತಿಗಳ ಸಾಮರ್ಥ್ಯದ ಆಧಾರದಮೇಲೆ ಆಡಳಿತ ಪ್ರಮಾಣಿಕತೆಗಳು ಆಧಾರಪಟ್ಟಿರುತ್ತವೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಆದರೆ ಅದೃಷ್ಟವಶಾತ್ತು ದೇಶದ ಮೊತ್ತಕ್ಕೆಲ್ಲಾ ಒಂದೇ ವಿಧವಾಗಿರುವ ಗತಿಸಿದ ಆಡಳಿತ ವ್ಯವಸ್ಥೆಯಿಂದ ಈ ಮುಖ್ಯವಾದ ಪದವಿಗಳು ಯಾವುವೋ ನಮಗೆ ಗೊತ್ತು. ರಾಜ್ಯಗಳು ತಮಗೆ ಪ್ರತ್ಯೇಕ ಸಿವಿಲ್ ಸರ್ವೀಸನ್ನು ಏರ್ಪಡಿಸಿಕೊಳ್ಳುವ ಹಕ್ಕುಗಳಿಗೆ ಭಂಗ ಉಂಟಾಗದಂತೆ ಭಾರತ ದೇಶವೆಲ್ಲಾ ಇಂತಹ ಮುಖ್ಯ ಪದವಿಗಳಲ್ಲಿ ನೇಮಕ ಮಾಡುವುದಕ್ಕೆ ಒಂದೇ ಅರ್ಹತೆ, ಒಂದೇ ವಿಧವಾದ ವೇತನಗಳೊಂದಿಗೆ ಅಖಿಲಭಾರತ ಮಟ್ಟದಲ್ಲಿ ಆಯ್ಕೆಯಾಗುವ ಅಖಿಲ ಭಾರತ ಸರ್ವೀಸ್ ಇರುತ್ತದೆ.ಖ [ಅಂಬೇಡ್ಕರ್ ಇಲ್ಲಿ ಪಬ್ಲಿಕ್ ಸರ್ವೀಸ್ ಕಮೀಷನ್ (ಎ.ಎ.ಎಸ್.ಐ.ಪಿ.ಎಸ್.) ಏರ್ಪಾಟಿನ ಕುರಿತು ಪ್ರಸ್ತಾವಿಸುತ್ತಿದ್ದಾರೆ. ರಾಜ್ಯ, ಕೇಂದ್ರ ಸರಕಾರಗಳಲ್ಲಿ ಮುಖ್ಯವಾದ ಪದವಿಗಳಿಗೆ ಇದರ ಮುಖಾಂತರ ನೇಮಕ ನಡೆಯುತ್ತದೆ]

SCERT TELANGANA

- ಭಾರತೀಯ ಒಕ್ಕೂಟ ವ್ಯವಸ್ಥೆಗೂ, ಅಮೇರಿಕಾ ಒಕ್ಕೂಟ ವ್ಯವಸ್ಥೆಗೂ ನಡುವೆ ಮುಖ್ಯವಾದ ಭೇಧಗಳನ್ನು ತಿಳಿಸಿರಿ?
- ರಾಜ್ಯಗಳು ತಮ್ಮ ಸ್ವಂತಃ ಸಿವಿಲ್ ಸರ್ವೆಂಟರನ್ನು (ಅಧಿಕಾರಿಗಳನ್ನು) ಹೊಂದಿರುವ ಅಧಿಕಾರವನ್ನು ಭಾರತ ಸಂವಿಧಾನವು ಕಲ್ಪಿಸುತ್ತಿದೆಯಾ?
- ಒಂದು ರಾಜ್ಯದಲ್ಲಿನ ಅಧಿಕಾರಿಗಳೆಲ್ಲರೂ ರಾಜ್ಯದ ಸಿವಿಲ್ ಸರ್ವೀಸಸ್‌ನಿಂದ ನಿಯಮಿಸಲ್ಪಟ್ಟವರಾ?
- ಅಮೇರಿಕಾದಲ್ಲಿ ಕೇಂದ್ರ ಸರಕಾರ ನ್ಯಾಯ ವ್ಯವಸ್ಥೆ, ರಾಜ್ಯದ ನ್ಯಾಯ ವ್ಯವಸ್ಥೆ, ಬೇರೆ ಬೇರೆ ಭಾರತ ದೇಶದಲ್ಲಿ ಕೇಂದ್ರ, ರಾಜ್ಯಗಳ ನ್ಯಾಯ ವ್ಯವಸ್ಥೆಗಳು ಸಮಗ್ರ ನ್ಯಾಯ ವ್ಯವಸ್ಥೆಯಲ್ಲಿ ಭಾಗವು ವಿವರಿಸಿರಿ.

ಸಂವಿಧಾನ ಸಭೆಯಲ್ಲಿನ ಚರ್ಚೆಗಳಲ್ಲಿ ವಿಮರ್ಶೆಗಳಿಗೆ ಉದಾಹರಣೆಗಳು

ಕರಡು ಸಂವಿಧಾನದ ಮೇಲೆ ಅನೇಕ ವಿಮರ್ಶೆಗಳಿವೆ – ಮೌಲಾನಾ ಹಪ್ರತ್ ಮೋಹನಿರಂತಹವರು ಅದು 1935 ಕಾನೂನಿಗೆ ನಕಲಿ ಮಾತ್ರವೆಂದು ಆರೋಪಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಭಾರತ ದೇಶಕ್ಕೆ ಕ್ಯಾಬಿನೇಟ್ ಮಿಷನ್ ಬಂದಾಗ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಂತಹ ರಾಜಕೀಯ ಗುಂಪುಗಳು ವಯಸ್ಕರೆಲ್ಲರಿಗೂ ಮತದಾನದ ಹಕ್ಕನ್ನುಕೋರುತ್ತಾ 1935 ರ ಕಾನೂನನ್ನು ವಿರೋಧಿಸಿದ ವಿಷಯವನ್ನು ಅವರು ನೆನಪು ಮಾಡಿದ್ದಾರೆ. ದಾಮೋದರ್ ಸ್ವರೂಪ್ ಸೇಥ್ (ಡಿ ಎಸ್‌ಸೇಥ್)ರಂತಹ ಸಮಾಜವಾದಿಗಳು ಈಗಿನ ಕಾಲದ ಸಂವಿಧಾನಗಳಿಂದ, ಉದಾ: ಸೋವಿಯಟ್ ಯೂನಿಯನ್‌ನಿಂದ ಕರಡು ಸಂವಿಧಾನ ಏನನ್ನು ತೆಗೆದುಕೊಂಡಿಲ್ಲವೆಂದು, ಭಾರತೀಯ ಸಂದರ್ಭದಲ್ಲಿ ಮುಖ್ಯವಾದ ಗ್ರಾಮಗಳನ್ನು ಮರೆತಿದ್ದಾರೆಂದು ವಿಮರ್ಶಿಸಿದ್ದಾರೆ. ಸಂವಿಧಾನ ಸಭೆಯ ಸದಸ್ಯರು ವಯಸ್ಕ ಮತದಾನದ ಮುಖಾಂತರ ಆಯ್ಕೆಯಾಗಿಲ್ಲ ಎಂದು ಸಹ ವಾದಿಸಿದರು. ಆತನ ವಿಮರ್ಶೆಗಳನ್ನು ತಿಳಿದುಕೊಳ್ಳೋಣ.

ಡಿ.ಎಸ್. ಸೇಥ್ : ॒ ಅಯ್ಯಾ, ನಮ್ಮ ಭಾರತ ಗಣತಂತ್ರವು ಸ್ವಾಯತ್ತತೆ ಹೊಂದಿರುವ ಚಿಕ್ಕ ಚಿಕ್ಕ ಗಣತಂತ್ರ ಒಕ್ಕೂಟವಾಗಿ ಇರಬೇಕಾಗಿತ್ತು. ಈ ವಿಧವಾಗಿ ನಮ್ಮದೇಶದಲ್ಲಿ ಏರ್ಪಟ್ಟ ಒಕ್ಕೂಟವನ್ನು ಕೇಂದ್ರೀಕರಣಕ್ಕೆ ವಿಜ್ಞರಾದ ಡಾ. ಅಂಬೇಡ್ಕರ್ ಕೊಟ್ಟಷ್ಟು ಪ್ರಾಧಾನ್ಯತೆ ಅವಸರವಾಗುತ್ತಿದ್ದಿಲ್ಲ. ಕೇಂದ್ರೀಕರಣ ಒಳ್ಳೆಯದೇ, ಒಂದೊಂದು ಸಲ ಉಪಯೋಗಕರವೇ. ಆದರೆ ನಾವು ಮಹಾತ್ಮಾಗಾಂಧಿ ತನ್ನ ಜೀವಿತ ಕಾಲವೆಲ್ಲಾ ಹೇಳಿದಂತೆ ಅಧಿಕಾರವನ್ನು ಇನ್ನೂ ಕೇಂದ್ರೀಕರಿಸಿದರೆ ಅದು ಇನ್ನೂ ನಿರಂಕುಶ ಅಧಿಕಾರವಾಗಿ ಬದಲಾಗುತ್ತದೆಂದು, ಫ್ಯಾಸಿಸ್ಟ್ ಆದರ್ಶಗಳ ಕಡೆಗೆ ತೆಗೆದುಕೊಂಡು ಹೋಗುತ್ತದೆಂದು ನಾವು ಮರೆತು ಹೋಗುತ್ತೇವೆ. ನಿರಂಕುಶತ್ವ, ಫ್ಯಾಸಿಜಂನಿಂದ ರಕ್ಷಣೆ ಹೊಂದುವುದಕ್ಕೆ ಏಕೈಕ ಮಾರ್ಗವು ಅಧಿಕಾರವನ್ನು ಸಾಧ್ಯವಾದಷ್ಟು ವಿಕೇಂದ್ರೀಕರಿಸುವುದು. ಆಗ ನಾವು ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದಂತಹ ಹೃದಯಗಳ ಬೆರೆಯುವಿಕೆಯಿಂದ ಅಧಿಕಾರ ಕೇಂದ್ರೀಕರಣೆಯನ್ನು ಸಾಧಿಸಿ ಇರುತ್ತಿದ್ದವು. ಆದರೆ ಕಾನೂನಿನ ಪರವಾಗಿ ಅಧಿಕಾರವನ್ನು ಕೇಂದ್ರೀಕರಿಸಿದರೆ ಅದರ ಸಹಜ ಪರಿಣಾಮವಾಗಿ ನಮ್ಮ ದೇಶವು ಇಷ್ಟು ಕಾಲ ವಿರೋಧಿಸಿದ ಫ್ಯಾಸಿಜಂನ ಕಡೆಗೆ ವಾಲುವುದೇ. ಇಂದಿಗೂ ಸಹ ಅದನ್ನು ಬಲವಾಗಿ ವಿರೋಧಿಸುತ್ತೇವೆಂದು ಹೇಳಿಕೊಳ್ಳುತ್ತಾ ನಿಧಾನವಾಗಿ ಫ್ಯಾಸಿಜಂನ ಕಡೆಗೆ ಹೆಜ್ಜೆಗಳನ್ನು ಹಾಕುತ್ತೇವೆ. ...ಬ

- ಸೇಥ್ ಅಭಿಪ್ರಾಯಗಳು, ಕರಡು ಸಂವಿಧಾನಕ್ಕೆ ನಡುವೆ ಹೋಲಿಕೆಗಳು, ವ್ಯತ್ಯಾಸಗಳೇನು?
- ಸಂವಿಧಾನಕ್ಕೆ 73ನೇ ತಿದ್ದುಪಡಿ ಮಾಡಿದ ನಂತರ ಗ್ರಾಮಗಳಿಗೆ ಎಂತಹ ಸ್ವಾಯತ್ತತೆಯನ್ನು ಕಲ್ಪಿಸುವರೊ ತಿಳಿದುಕೊಳ್ಳಿರಿ.

SCERT TELANGANA

ಪ್ರಾಥಮಿಕ ಹಕ್ಕುಗಳ ಮೇಲೆ ಚರ್ಚೆಗಳಿಗೆ ಉದಾಹರಣೆಗಳು

ಸಮಾನತೆಯ ಹಕ್ಕಿನ ಹಿನ್ನಲೆಯಲ್ಲಿ ಅಸ್ಪೃಶ್ಯತೆ ಎಂಬ ಆಚಾರಕ್ಕೆ ಕಾನೂನಿನ ಪರವಾಗಿ ಕೊನೆಗಾಣಿಸಬೇಕೆಂದು ನಿರ್ಣಯಿಸಿದರು. ಪ್ರಾಥಮಿಕ ಹಕ್ಕುಗಳ ಮೇಲೆ ಚರ್ಚೆಗಳಲ್ಲಿ ಕೆಲವು ಭಾಗಗಳನ್ನು ಓದಿ ಬೇರೆ ದೃಷ್ಟಿ ಕೋನಗಳನ್ನು ಅರ್ಥಮಾಡಿಕೊಳ್ಳೋಣ.

1947, ಏಪ್ರಿಲ್ 25, ಮಂಗಳವಾರ

ಅಧ್ಯಕ್ಷರು (ಗೌರವಾನ್ವಿತ ಡಾ. ರಾಜೇಂದ್ರಪ್ರಸಾದ್) ಸಮಾವೇಶದಲ್ಲಿ ಇದ್ದಾರೆ.

ಶ್ರೀ ಪ್ರೋಮಥ ರಂಜನ್ ಠಾಕೂರ್ : ಅಯ್ಯಾ, ... 6ನೇ ಉಪವಾಖ್ಯ (clause)ನಲ್ಲಿಅಸ್ಪೃಶ್ಯತೆಯನ್ನು ಕುರಿತು ಹೀಗೆ ತಿಳಿಸಿದ್ದಾರೆ :

„ಅಸ್ಪೃಶ್ಯತೆಯನ್ನು ಯಾವ ರೂಪದಲ್ಲಾದರೂ ನಿಷೇಧಿಸುತ್ತಿದ್ದೇವೆ, ಅದರ ಆಧಾರವಾಗಿ ವಿಧಿಸುವ ಬೇಧ ಭಾವನೆ ಅಪರಾಧವಾಗುತ್ತದೆ.µ

ಜಾತಿ ವ್ಯವಸ್ಥೆಯನ್ನು ನಿಷೇಧಿಸದಂತೆ ಅಸ್ಪೃಶ್ಯತೆಯನ್ನು ಹೇಗೆ ಹೋಗಲಾಡಿಸುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ಅಸ್ಪೃಶ್ಯತೆ ಎನ್ನುವುದು ಜಾತಿವ್ಯವಸ್ಥೆಯೆಂಬ ರೋಗದ ಲಕ್ಷಣವು ಮಾತ್ರವೇ. ನಾವು ಜಾತಿ ವ್ಯವಸ್ಥೆಯನ್ನು ಬುಡದಿಂದ ಹೋಗಲಾಡಿಸುವುದು ಬಿಟ್ಟು ಮಾತ್ರ ಅಸ್ಪೃಶ್ಯತೆಗೆ ಮೇಲಿನ ಚಿಕಿತ್ಸೆಗಳು ಮಾಡಿ ಪ್ರಯೋಜನೆ ಇಲ್ಲ.

ಎಸ್.ಸಿ.ಬೆನರ್ಜಿ : ಅಧ್ಯಕ್ಷರೇ, ಅಸ್ಪೃಶ್ಯತೆ ಎಂಬ ಪದಕ್ಕೆ ಮೊದಲು ವಿವರಣೆ ಕೊಡಬೇಕು. ಕಳೆದ 25 ವರ್ಷಗಳಿಂದ ಈ ಪದವನ್ನು ನಾವು ಉಪಯೋಗಿಸುತ್ತಿದ್ದೇವೆ, ಆದರೂ ಇಂದಿಗೂ ಅದು ಏನು ಸೂಚಿಸುತ್ತಿದೆಯೋ ತಿಳಿಯದೆ ತೀವ್ರವಾದ ಗೊಂದಲದಲ್ಲಿದ್ದೇವೆ. ಕೆಲವು ಸಂದರ್ಭದಲ್ಲಿ ಒಂದು ಗ್ಲಾಸ್ ನೀರನ್ನು ತೆಗೆದುಕೊಳ್ಳುವುದು, ಕೆಲವು ಸಲ ಹರಿಜನರಿಗೆ ಆಲಯ ಪ್ರವೇಶವನ್ನು ಕಲ್ಪಿಸುವುದು ಎಂಬ ಅರ್ಥದಲ್ಲಿ ಬಳಸುತ್ತಾರೆ. ಕೆಲವು ಸಲ ಅದು ಎಲ್ಲಾ ಜಾತಿಗಳು ಬೆರೆತು ಊಟಮಾಡುವ ಹಾಗೆ ಪರಿಗಣಿಲಸ್ಪಡುತ್ತದೆ. ಕೆಲವು ಸಲ ಮತಾಂತರ ವಿವಾಹವಾಗಿ ಭಾವಿಸಲ್ಪಡುತ್ತದೆ. ಅಸ್ಪೃಶ್ಯತೆಯನ್ನು ಕುರಿತು ಎಷ್ಟೋ ಕೃಷಿ ಮಾಡಿದ ಮಹಾತ್ಮ ಗಾಂಧೀಜಿ ಅದನ್ನು ಬೇರೆ ಬೇರೆ ವಿಧಗಳಾಗಿ, ಬೇರೆ ಬೇರೆ ಸಂದರ್ಭಗಳಲಿ ಬೇರೆ ಬೇರೆ ಅರ್ಥಗಳೊಂದಿಗೆ ಉಪಯೋಗಿಸಿದ್ದಾರೆ. ಆದುದರಿಂದ ನಾವು ಅಸ್ಪೃಶ್ಯತೆ ಎಂಬ ಪದವನ್ನು ಉಪಯೋಗಿಸಿದಾಗ ಅದರ ಅರ್ಥ ಯಾವುದೋ ನಮ್ಮೆಲ್ಲರಿಗೆ ಸ್ಪಷ್ಟವಾಗಿರಬೇಕು. ಈ ಪದದ ತೊಡಕಿನ ಪ್ರಭಾವವೇನು?

ಅಸ್ಪೃಶ್ಯತೆಗೆ, ಜಾತಿ ಭೇಧ ಭಾವನೆಗೆ ನಾವು ವ್ಯತ್ಯಾಸ ತೋರಿಸಬಾರದು. ಶ್ರೀ ಠಾಕೂರ್ ಹೇಳಿದ ಹಾಗೆ ಅಸ್ಪೃಶ್ಯತೆ ಕೇವಲ ಲಕ್ಷಣವು ಮಾತ್ರವೇ. ಅದರ ಮೂಲ ಕಾರಣವು ಜಾತಿಭೇದ. ಮೂಲ ಕಾರಣವನ್ನು ಅಂದರೆ ಜಾತಿಭೇದ ಭಾವನೆಯನ್ನು ಹೋಗಲಾಡಿದರೆ ಮಾತ್ರ ಅಸ್ಪೃಶ್ಯತೆ ಯಾವುದೋ ಒಂದು ರೂಪದಲ್ಲಿ ಮುಂದುವರೆಯುತ್ತದೆ. ಸ್ವತಂತ್ರ್ಯ ಭಾರತ ದೇಶವು ಏರ್ಪಟ್ಟ ನಂತರ ಎಲ್ಲರೂ ಸಾಮಾಜಿಕ ಪರಿಸ್ಥಿತಿಗಳನ್ನು ಅನುಭವಿಸಬೇಕೆಂದು ನಾವು ಕೋರಿಕೊಳ್ಳುತ್ತೇವೆ.

ಶ್ರೀ ರೋಹಿಣಿ ಕುಮಾರ್ ಚೌದರಿ.... ಅಸ್ಪೃಶ್ಯತೆಯನ್ನು ವ್ಯಾಖ್ಯಾನಿಸುವುದಕ್ಕೆ, ಸ್ಪಷ್ಟವಾಗಿ ಹೀಗೆ ಹೆಸರಿಸಬೇಕು; ಧರ್ಮ, ಜಾತಿ, ಅಥವಾ ಕಾನೂನು ಬದ್ದ ಜೀವನೋಪಾಯದ ಆಧಾರವಾಗಿ ಭೇಧಭಾವನೆಯನ್ನು ತೋರಿಸುವ ಯಾವ ಕ್ರಮವಾನ್ನಾದರೂ ಅಸ್ಪೃಶ್ಯತೆ ಎನ್ನುತ್ತಾರೆ.........

ಶ್ರೀ ಕೆ.ಎಂ.ಮುನ್ಷಿ : ಅಯ್ಯಾ, ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಈ ನಿರ್ವಚನವನ್ನು ಜಾರಿಗೊಳಿಸಿದರೆ ಹುಟ್ಟಿದ ಊರು, ಜಾತಿ ಅಥವಾ ಲಿಂಗವನ್ನು ಆಧಾರವಾಗಿ ತೋರಿಸುವ ಭೇದ ಭಾವನೆ ಸಹ ಅಸ್ಪೃಶ್ಯತೆಯಾಗಿ ಪರಿಗಣಿಸಲ್ಪಡುತ್ತದೆ.

SCERT TELANGANA

LATE CITY EDITION

The Statesman

Incorporating and directly descended from THE FRIEND OF INDIA —Founded 1817

PUBLISHED SIMULTANEOUSLY FROM CALCUTTA AND DELHI

REG. No. C193 | CALCUTTA, THURSDAY, JANUARY 26, 1950 | Price, including 28 Page Supplement, TWO ANNAS

INDIA EMERGES AS REPUBLIC TODAY

Of Significance To People, Says Nehru

CALL FOR UNITY AND TOLERANCE

Offer Of Friendship To All Nations

NEW DELHI, JAN 26.—INDIA EMERGES TODAY AS A "SOVEREIGN DEMOCRATIC REPUBLIC" UNDER THE NEW CONSTITUTION.

THE proclamation of India as a Republic will take place at a ceremony at 10-15 a.m. in the Durbar Hall of Government House.

"Undoubtedly, Jan 26, 1950, is a day of high significance for India and the Indian people," declared Pandit Nehru, Prime Minister, in a broadcast to the people last night.

Calling upon them "to found our republican freedom on the basic factors on which Gandhiji laid stress throughout his career—high character, integrity of mind and purpose, a spirit of tolerance and co-operation and hard work—Pandit Nehru asked them to "shed fear and hatred and think always of the betterment of the millions of our people."

Dr Soekarno, President of the United States of Indonesia, was received by Pandit Nehru and Mr Rajagopalachari when he arrived at the Willingdon aerodrome, New Delhi, on Tuesday to take part in the Indian Republic Day celebrations.—Statesman.

SOEKARNO ADDRESSES INDIAN M.P.s

CONGRATULATIONS ON BIRTH OF NEW REPUBLIC

NEW DELHI, Jan 25.—The President of the Republic of Indonesia, Dr Soekarno, addressing the members of the Indian Parliament this evening, conveyed his congratulations on India being declared a Republic.

Communists Expel British Managers

Reported Incidents Near Tavoy

BURMA OILFIELDS WORKERS' CLAIM

Gunmen Kill Two Policemen

Incident In Howrah Village

TODAY'S PROGRAMME IN CALCUTTA

Proclamation As Republic

Ceremony This Morning

Night Curfew In Bandoeng

PROVINCIAL BORDERS TO BE "RATIONALIZED"

Pandit Nehru signs the new Constitution, winding up the Constituent Assembly in New Delhi.—Statesman.

2 Of Crew Killed In Plane Crash

On Way To Calcutta From Gauhati

REPUBLIC DAY HOLIDAY

The Offices of The Statesman will be closed today, and there will be no issue of the paper dated January 27.

THE REPUBLIC OF INDIA
26th January 1950

WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens:
JUSTICE, social, economic and political;
LIBERTY of thought, expression, belief, faith and worship;
EQUALITY of status and of opportunity; and to promote among them all
FRATERNITY assuring the dignity of the individual and the unity of the Nation;
IN OUR CONSTITUENT ASSEMBLY DO HEREBY ADOPT, ENACT AND GIVE TO OURSELVES THIS CONSTITUTION.

The preamble to the Constitution of the Republic of India.

BEACON STANDARD METAL WINDOWS AND FACTORY SASHES — MARTIN BURN LTD.

ROYAL EXCHANGE ASSURANCE — FIRE, MARINE, ACCIDENT

Hallmarks of quality
"REXINE" • "VYNIDE"
Years of manufacturing experience and technical research have produced "Rexine" and "Vynide"—the twin I.C.I. products—world famous in the leathercloth trade. Ideal for car and furniture upholstery, desk-top covering, book-binding and all similar applications.
They are colour fast, hardwearing, vermin-proof water-proof and washable. The only maintenance they need is an occasional cleaning with soap and warm water.
IMPERIAL CHEMICAL INDUSTRIES (INDIA) LTD.
Calcutta Bombay Madras Kanpur New Delhi Cochin Bangalore

ಚಿತ್ರ 17.6 : 1950, ಜನವರಿ 26 ರ ವಾರ್ತಾಪತ್ರಿಕೆ. ಈ ಪುಟದಲ್ಲಿ ಯಾವ ಯಾವ ಅಂಶಗಳು ಇವೆ?

- ಮೇಲಿನ ಚರ್ಚೆಯಲ್ಲಿ ಯಾವ ಅಭಿಪ್ರಾಯ ಭೇದಗಳು ವ್ಯಕ್ತವಾಗಿವೆ?
- ಈ ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ನಿಮಗೆ ಲಭಿಸಿದರೆ, ನೀವು ಯಾವ ಪರಿಷ್ಕಾರವನ್ನು ಸೂಚಿಸುವಿರಿ?
- ಈ ಪದವನ್ನು ಸಂವಿಧಾನದಲ್ಲಿ ವ್ಯಾಖ್ಯಾನಿಸದಂತೆ ಅಳವಡಿಸುವುದು ಒಂದು ಒಳ್ಳೆಯ ಆಲೋಚನೆಯೆಂದು ನೀವು ಭಾವಿಸುವಿರಾ? ನಿಮ್ಮ ವಾದನೆಗೆ ಕಾರಣಗಳನ್ನು ತಿಳಿಸಿರಿ
- ಕೇವಲ ಅಸ್ಪೃಶ್ಯತೆ ಅಲ್ಲದೇ ಸಂವಿಧಾನವು ಜಾತಿ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೊನೆಗಾಣಿಸಿರಬೇಕು ಎಂಬ ವಿಷಯದೊಂದಿಗೆ ನೀವು ಏಕೀಭವಿಸುತ್ತೀರಾ? ಇದು ಯಾವ ವಿಧವಾಗಿ ಮಾಡಿರಬೇಕೆಂದು ನೀವು ಅಂದುಕೊಳ್ಳುತ್ತೀರಿ.

ಶ್ರೀ ದೀರೇಂದ್ರನಾಥ್ ದತ್ತ : ಅಯ್ಯಾ, ಶ್ರೀ ರೋಹಿಣಿಕುಮಾರ್ ಚೌದರಿಯು ಕೊಟ್ಟ ವ್ಯಾಖ್ಯಾನೆಯನ್ನು ಒಪ್ಪುತ್ತಾರೋ ಇಲ್ಲವೋ ತಿಳಿಯುವುದಿಲ್ಲವಾಗಲಿ ಯಾವುದೋ ಒಂದು ವ್ಯಾಖ್ಯಾನವು ಇರಬೇಕೆಂದು ನನ್ನ ಅಭಿಪ್ರಾಯ. ಅಸ್ಪೃಶ್ಯತೆ ಯಾವ ರೂಪದಲ್ಲಾದರೂ ಅಪರಾಧವೆಂದು ಇಲ್ಲಿ ತಿಳಿಸಿದ್ದಾರೆ. ಅಪರಾಧಗಳನ್ನು ಪರಿಶೀಲಿಸುವ ಮೆಜಿಸ್ಟ್ರೇಟ್ ಅಥವಾ ನ್ಯಾಯಮೂರ್ತಿ ಒಂದು ಪ್ರತ್ಯೇಕ ವಿಷಯವನ್ನು ಅಸ್ಪೃಶ್ಯತೆಯಾಗಿ ಭಾವಿಸಿದರೆ ಮತ್ತೊಬ್ಬ ಮೆಜಿಸ್ಟ್ರೇಟ್ ಬೇರೊಂದು ವಿಷಯವನ್ನು ಅಸ್ಪೃಶ್ಯತೆಯಾಗಿ ಭಾವಿಸಬಹುದು. ಪ್ರತಿಫಲವಾಗಿ ಈ ಅಪರಾಧಗಳೊಂದಿಗೆ ವ್ಯವಹರಿಸುವ ಮೆಜಿಸ್ಟ್ರೇಟರ್ ನಡುವೆ ಏಕರೂಪತೆ ಇರುವುದಿಲ್ಲ. ಕೇಸುಗಳಲ್ಲಿ ತೀರ್ಪು ಕೊಡುವುದು ನ್ಯಾಯಮೂರ್ತಿಗಳಿಗೆ ಬಹಳ ಕಷ್ಟವಾಗಿರುತ್ತದೆ.

ಅಷ್ಟೇ ಅಲ್ಲದೇ ಅಸ್ಪೃಶ್ಯತೆಎಂದರೆ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಬಂಗಾಳದಲ್ಲಿ ಅಸ್ಪೃಶ್ಯತೆ ಎಂದರೆ ಒಂದು ಅರ್ಥ ಬರುವಂತೆ ಉಳಿದ ರಾಜ್ಯಗಳಲ್ಲಿ ಪೂರ್ತಿಯಾಗಿ ಬೇರೆ ಅರ್ಥ ಇರುತ್ತದೆ.

ಅಧ್ಯಕ್ಷರೇ, ... ನ್ಯಾಯಸ್ಥಾನಗಳು ಸರಿಯಾದ ಶಿಕ್ಷೆ ವಿಧಿಸುವಂತೆ ಅಸ್ಪೃಶ್ಯತೆ ಎಂಬ ಪದವನ್ನು ಕೇಂದ್ರ ಶಾಸನ ಸಭೆ ನಿರ್ವಚಿಸುತ್ತದೆಂದು ಆಶಿಸುತ್ತೇನೆ.

ಕೊನೆಯದಾಗಿ ಸಂವಿಧಾನದಲ್ಲಿ ಅಸ್ಪೃಶ್ಯತೆಗೆ ವ್ಯಾಖ್ಯಾನವನ್ನು ಕೊಡಬಾರದೆಂದು, ಭವಿಷ್ಯದಲ್ಲಿ ಅವಶ್ಯಕವಾದ ಕಾನೂನುಗಳನ್ನು ಮಾಡುವ ಜವಾಬ್ದಾರಿಯನ್ನು ಶಾಸನ ಸಭೆಗೆ ಬಿಟ್ಟು ಕೊಡಬೇಕೆಂದು ನಿರ್ಣಯಿಸಿದರು.

ಸಂವಿಧಾನ - ಸಾಮಾಜಿಕ ನಿರ್ಮಾಣ (Constitution and social Engineering)

ಭಾರತ ಸಂವಿಧಾನ ನಿರ್ಮಾಪಕರು ಭಾರತೀಯ ಸಮಾಜವು ಅಸಮಾನತೆಗಳು, ಅನ್ಯಾಯವು, ದೋಚುವಿಕೆಯಂತಹ ಸಮಸ್ಯೆಗಳನ್ನು ಎದುರಿಸುತ್ತದೆಂದು, ಆರ್ಥಿಕ ದರೋಡೆಯಲ್ಲಿ ಪಾಲ್ಗೊಂಡ ವಸಾಹತು ಆಡಳಿತಗಾರರ ವಿಧಾನಗಳಿಗೆ ಬಲಿಯಾಗಿದೆ ಎಂದು ಗುರ್ತಿಸಿದ್ದಾರೆ. ಆದ್ದರಿಂದ ಅಭಿವೃದ್ಧಿಯೊಂದಿಗೆ ಸಾಮಾಜಿಕ ಬದಲಾವಣೆಗೆ ಸಹ ಸಂವಿಧಾನ ಸಹಾಯ ಮಾಡಬೇಕೆಂದು ಗುರ್ತಿಸಿದರು. "ಹಿಂದಿನ ರಾಜಕೀಯ, ಸಾಮಾಜಿಕ ನಿರ್ಮಾಣವನ್ನು ತಿರಸ್ಕರಿಸಿ ಮುಂದುವರೆಯುತ್ತಾ ತನಗೆ ತಾನು ಹೊಸ ವಸ್ತ್ರಗಳನ್ನು ರೂಪಿಸಿಕೊಳ್ಳುತ್ತಿರುವ ದೇಶಕ್ಕೆ" ಸಂವಿಧಾನದ ಸಭೆ ಪ್ರಾತಿನಿಧ್ಯ ವಹಿಸುವಂತೆ ಜವಹರ್‌ಲಾಲ್ ನೆಹ್ರೂ ತಿಳಿಸಿದ್ದಾನೆ.

ಆದುದರಿಂದ ಸಾಮಾಜಿಕ ಬದಲಾವಣೆಗೆ ಸಹಾಯ ಮಾಡುವ ಅನೇಕ ಅಂಶಗಳು ಸಂವಿಧಾನಲ್ಲಿವೆ. ಅಸ್ಪೃಶ್ಯತೆಯನ್ನು ನಿಷೇಧಿಸುವುದನ್ನು ಕುರಿತು ನೀವು ಓದಿದ್ದೀರಿ. ಇದಕ್ಕೆ ಒಂದು ಒಳ್ಳೆಯ ಉದಾಹರಣೆ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ವರ್ಗಗಳಿಗೆ ಮೀಸಲಾತಿಗಳನ್ನು ಕಲ್ಪಿಸುವುದು. ಈ ವರ್ಗಗಳು ವಂಶಪಾರಂಪರ್ಯದಿಂದ ಎದುರಿಸುತ್ತಿರುವ ಅನ್ಯಾಯಗಳನ್ನು ಅಧಿಗಮಿಸುವುದಕ್ಕೆ, ಅವರ ಮತದಾನದ ಹಕ್ಕಿಗೆ ಸರಿಯಾದ ಅರ್ಥವನ್ನು ಕೊಡುವುದಕ್ಕೆ ಕೇವಲ ಸಮಾನತ್ವಕ್ಕೆ ಹಕ್ಕು ಕೊಟ್ಟರೆ ಸರಿಯಾಗುವುದಿಲ್ಲವೆಂದು ಸಂವಿಧಾನದ ರಚನೆಗಾರರು ಭಾವಿಸಿದರು. ಅವರ ಪ್ರಯೋಜನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಪ್ರತ್ಯೇಕ ಸಂವಿಧಾನದ ಕ್ರಮಗಳು ಅವಶ್ಯಕ. ಅದಕ್ಕಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರಯೋಜನೆಗಳನ್ನು ಕಾಪಾಡುವುದಕ್ಕೆ ಶಾಸನ ಸಭೆ ಸ್ಥಾನಗಳ ಮೀಸಲಾತಿಗಳಂತಹ ಅನೇಕ ಪ್ರತ್ಯೇಕ ಅಂಶಗಳನ್ನು ಸಂವಿಧಾನ ನಿರ್ಮಾಪಕರು ಕಲ್ಪಿಸಿದ್ದಾರೆ. ಈ ವರ್ಗಗಳಿಗೆ ಸಾರ್ವಜನಿಕ ವಲಯದ ಉದ್ಯೋಗಗಳಲ್ಲಿ ಮೀಸಲಾತಿಗೆ ಸಹ ಸಂವಿಧಾನ ಅವಕಾಶ ಕಲ್ಪಿಸಿದೆ.

SCERT TELANGANA

ಸಂವಿಧಾನದಲ್ಲಿ "ಸರಕಾರದ ವಿಧಾನಗಳಿಗೆ ಆದೇಶ ಸೂತ್ರಗಳು" ಇವೆ. ಇವು ಸರಕಾರದ ಮುಂದೆ ಪ್ರಧಾನ ಸಾಮಾಜಿಕ ವ್ಯವಸ್ಥೆಗಳನ್ನು ಇಟ್ಟಿವೆ. ಸಾಮಾಜಿಕ ಇಂಜಿನೀರಿಂಗ್ ಸಾಧನೆಯಲ್ಲಿ ಒಂದು ಮುಖ್ಯವಾದ ಅಂಶ ಅಲ್ಪ ಸಂಖ್ಯಾತ ವರ್ಗಗಳ ಹಕ್ಕುಗಳು. ನಾಜೀ ಜರ್ಮನಿಯಲ್ಲಿ ಅಲ್ಪಸಂಖ್ಯಾತ ಯಹೂದಿಗಳನ್ನು ಅಡಗಿಸಿದ ವಿಷಾದ ಅನುಭವವು ಸಂವಿಧಾನದ ನಿರ್ಮಾಪಕರನ್ನು ಆಲೋಚಿಸುವಂತೆ ಮಾಡಿದೆ. ಅಲ್ಪ ಸಂಖ್ಯಾತ ವರ್ಗಗಳಿಗೆ ಪ್ರತ್ಯೇಕ ರಕ್ಷಣೆ ಕಲ್ಪಿಸಿ ಬಹು ಸಂಖ್ಯಾತರು ತಮ್ಮನ್ನು ಕೊನೆಗೆ ತಳ್ಳಿದ್ದಾರೆಂಬ ಭಾವನೆ ಉಂಟಾಗದಂತೆ ಮಾಡಬೇಕೆಂದು ಅವರು ನಿರ್ಣಯಿಸಿದರು. ಮತಪರ ಅಲ್ಪ ಸಂಖ್ಯಾತ ವರ್ಗಗಳು ತಮ್ಮ ಸ್ವತಃ ವಿದ್ಯಾ ಸಂಸ್ಥೆಗಳನ್ನು ನಿರ್ವಹಿಸಿಕೊಳ್ಳುವ ಹಕ್ಕು ಇದಕ್ಕೆ ಒಂದು ಉದಾಹರಣೆ. ಇಂತಹ ಸಂಸ್ಥೆಗಳಿಗೆ ಸರಕಾರದ ನಿಧಿಗಳು ಸಹ ಮೀಸಲಿಡಬಹುದು.

ಪ್ರಸ್ತುತ ಸಂವಿಧಾನ

ಕಾನೂನುಗಳನ್ನು ಆಗಾಗ್ಗೆ ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಏರ್ಪಡುತ್ತದೆ ಎಂದು ಸಂವಿಧಾನ ನಿರ್ಮಾಪಕರು ಗುರ್ತಿಸಿದ್ದಾರೆ. ಆದುದರಿಂದ ಕಾನೂನುಗಳನ್ನು ಸಂವಿಧಾನದಲ್ಲಿಯ ಕಾಯ್ದೆಗಳನ್ನು ತಿದ್ದುಪಡಿ ಮಾಡುವುದಕ್ಕೆ ಸಹ ಅದು ಅವಕಾಶ ಕಲ್ಪಿಸಿದೆ. ಶಾಸನ ಸಭೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನರ ಅನುಮತಿಯೊಂದಿಗೆ ಆಗಾಗ್ಗೆ ಕಾನೂನುಗಳು ತಯಾರಿಸಬಹುದು. ಆದರೆ ಸಂವಿಧಾನದಲ್ಲಿಯ ಕಾಯ್ದೆಗಳ ತಿದ್ದುಪಡಿಯನ್ನು ಮಾಡುವುದಕ್ಕೆ ಪಾರ್ಲಿಮೆಂಟ್ ಮಾತ್ರವೇ ಕೈಗೊಳ್ಳಬೇಕು. ಅಷ್ಟೇ ಅಲ್ಲದೆ ರಾಜ್ಯಸಭೆ, ಲೋಕಸಭೆಗಳ ಎರಡರಲ್ಲೂ ಮುರನೇ ಎರಡು ಭಾಗ ಸದಸ್ಯರು ಅನುಮತಿ ಅವಶ್ಯಕ. ಕೆಲವು ಅಧಿಕರಣಗಳನ್ನು ರಾಜ್ಯದ ಶಾಸನ ಸಭೆಗಳು ಅನುಮೋದಿಸಿದ ನಂತರ (ಅಥವಾ ರ್‍ಯಾಟಿಫೈ ಮಾಡಿದ ನಂತರ) ಮಾತ್ರವೇ ತಿದ್ದುಪಡಿ ಮಾಡಬಹುದು. ಅಷ್ಟೇ ಅಲ್ಲದೆ ಇತರ ಕಾನೂನುಗಳಂತೆ ಹೊಸ ತಿದ್ದುಪಡಿಗಳನ್ನು ದೇಶದ ಅಧ್ಯಕ್ಷರು ಸಹ ಅನುಮೋದಿಸಬೇಕಾಗುತ್ತದೆ.



ರೇಖಾಚಿತ್ರ 1:1950, ಜನವರಿ 26ರ ಸಂವಿಧಾನ ಜಾರಿಗೆ ಬಂದ ದಿನದಿಂದ 2013ವರೆಗೆ ಸುಮಾರು 99 ಸವರಣೆಗಳನ್ನು ಮಾಡಿದ್ದಾರೆ.

- ಭಾರತ ಸಂವಿಧಾನದಲ್ಲಿ ಮೂಲಭೂತ ಅಂಶಗಳಿಗೆ ಸಂಬಂಧಿಸಿ ನೀವು ಗುರ್ತಿಸಿದ ಉದಾಹರಣೆಗಳು, ವಿವರಣೆಗಳನ್ನು ಹೆಸರಿಸಿ.

ಸಂವಿಧಾನಕ್ಕೆ ಮುಖ್ಯ ಬದಲಾವಣೆಗಳು 1970ರಲ್ಲಿ ಮಾಡಿದ್ದಾರೆ. ಇವುಗಳಲ್ಲಿ ಮೊದಲನೆಯದು ಸಂವಿಧಾನ ಪೀಠಿಕೆಯಲ್ಲಿ "ಜಾತ್ಯಾತೀತ ", "ಸಮಾಜವಾದ" ಎಂಬ ಪದಗಳನ್ನು ಸೇರಿಸುವುದು ಪೀಠಿಕೆಯಲ್ಲಿ "ಸಮಾನತ್ವ", "ಸ್ವೇಚ್ಛೆ", "ನ್ಯಾಯ" ದಂತಹ ಪದಗಳು ಜಾತ್ಯಾತೀತ,ಸಮಾಜದವಾದ ಬೆಲೆಗಳಿಗೆ ಪ್ರಾಧಾನ್ಯತೆ ಕೊಟ್ಟಿದೆಯಾದುದರಿಂದ ಈ ಪದಗಳನ್ನು ಸೇರಿಸಿದ್ದಾರೆ. ಭಾರತದ ಸಂವಿಧಾನದ ಇತಿಹಾಸದಲ್ಲಿ ಎರಡನೇ ಮುಖ್ಯವಾದ ಘಟ್ಟ ಕೇಶವಾನಂದ ಭಾರತಿ ಕೇಸಾಗಿ ಪ್ರಖ್ಯಾತಿ ಹೊಂದಿದ ಸುಪ್ರೀಂಕೋರ್ಟಿನ ತೀರ್ಪು. ಭಾರತ ಸಂವಿಧಾನದಲ್ಲಿ ಕೆಲವು ಅಂಶಗಳನ್ನು ಎಂತಹ ಪರಿಸ್ಥಿತಿಯಲ್ಲೂ ತಿದ್ದುಪಡಿ ಮಾಡುವುದಕ್ಕಿಲ್ಲವೆಂದು ಇದರಲ್ಲಿ ವಾದಿಸಿದ್ದಾರೆ. ಇವುಗಳಲ್ಲಿ ಪ್ರಾಥಮಿಕ ಹಕ್ಕುಗಳು ಒಂದು. ಸುಪ್ರೀಂಕೋರ್ಟು ಕೇಶವಾನಂದ ಭಾರತಿ ಕೇಸಿನಲ್ಲಿ ತೀರ್ಪನ್ನು ಕೊಡುತ್ತಾ ದೇಶದ ಉಳಿವು ಕೆಲವು ಮೂಲಭೂತ ಸೂತ್ರಗಳ ಮೇಲೆ ಆಧಾರಪಟ್ಟಿರುತ್ತದೆ ಎಂದು ವಾಧಿಸಿದೆ. ಯಾವ ಮೂಲಭೂತ ಸೂತ್ರಗಳು ಎಂಬ ವಿಷಯದಲ್ಲಿ ನ್ಯಾಯಮೂರ್ತಿಗಳಲ್ಲಿ ಭಿನ್ನಾಭಿಪ್ರಾಯಗಳು ಇದ್ದಾಗ್ಯೂ ಈ ಕೆಳಗಿನವುಗಳ ಮೇಲೆ ಒಮ್ಮತ ಉಂಟಾಗಿದೆ. ಸರಕಾರದ ನಿರ್ಮಾಣ, ಒಕ್ಕೂಟ ಲಕ್ಷಣ, ಉನ್ನತವಾದ ಸಂವಿಧಾನವು, ಸಾರ್ವಭೌತ್ವ ದೇಶ, ನ್ಯಾಯ, ಸಂಕ್ಷೇಮ ರಾಜ್ಯಗಳಂತಹವುಗಳನ್ನು ಏರ್ಪಾಟು ಮಾಡುವುದು.

SCERT TELANGANA

ಮುಖ್ಯ ಪದಗಳು

ಕರಡು ಸಮಿತಿ | **ಸಂವಿಧಾನ ಸಭೆ** | **ಪೀಠಿಕೆ**

ಉಭಯ ಪಟ್ಟಿ | **ಏಕೀಕೃತ, ಒಕ್ಕೂಟ ಸಿದ್ದಾಂತಗಳು** | **ಪೌರತ್ವ**

ಅಧ್ಯಕ್ಷ, ಪಾರ್ಲಿಮೆಂಟರೀ ವ್ಯವಸ್ಥೆ | **ತಿದ್ದುಪಡಿ.**

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ವಿಭಿನ್ನವಾಗಿ ಇರುವುದನ್ನು ಗುರುತಿಸಿರಿ. (AS_1)
   - ★ ಸ್ವಾತಂತ್ರ್ಯ ಹೋರಾಟದ ಅನುಭವಗಳಿಂದ ಭಾರತ ಸಂವಿಧಾನ ಏರ್ಪಟ್ಟಿದೆ.
   - ★ ಈಗಾಗಲೇ ಅಸ್ಥಿತ್ವದಲ್ಲಿದ್ದ ಸಂವಿಧಾನಗಳಿಂದ ಭಾರತ ಸಂವಿಧಾನವನ್ನು ರೂಪಿಸಲಾಗಿದೆ.
   - ★ ಕರಡು ಸಂವಿಧಾನವನ್ನು ಇದ್ದದ್ದು ಇದ್ದ ಹಾಗೆ ಅನುಮೋದಿಸಿದ್ದರು.
   - ★ ದೇಶವನ್ನು ಪರಿಪಾಲಿಸಲು ಸಂವಿಧಾನ ಸೂತ್ರಗಳನ್ನು, ಅಂಶಗಳನ್ನು ಹೆಸರಿಸಿರಿ.
2. ತಪ್ಪು ವಾಕ್ಯಗಳನ್ನು ಸರಿಪಡಿಸಿ. (AS_1)
   - ★ ಸಂವಿಧಾನ ಸಭೆಯ ಚರ್ಚೆಗಳಲ್ಲಿ ಕೆಲವು ಅಂಶಗಳ ಮೇಲೆ ಎಲ್ಲರೂ ಒಂದೇ ಭಾವನೆಯನ್ನು ವ್ಯಕ್ತ ಮಾಡಿದರು.
   - ★ ಸಂವಿಧಾನದ ನಿರ್ಮಾಪಕರು ದೇಶದಲ್ಲಿ ಕೆಲವು ಪ್ರಾಂತಗಳಿಗೆ ಮಾತ್ರ ಪ್ರಾತಿನಿಧ್ಯವಹಿಸಿದ್ದಾರೆ.
   - ★ ಸಂವಿಧಾನದಲ್ಲಿ ವಿಧಿಗಳನ್ನು ತಿದ್ದುಪಡಿ ಮಾಡಲು ಅದು ಅವಕಾಶ ಕಲ್ಪಿಸಿದೆ.
   - ★ ಸಂವಿಧಾನದಲ್ಲಿ ಮೂಲಭೂತ ಅಂಶಗಳನ್ನು ಸಹ ತಿದ್ದುಪಡಿ ಮಾಡಬಹುದೆಂದು ಸುಪ್ರಿಂಕೋರ್ಟ್ ಹೇಳಿದೆ.
3. ಸಂವಿಧಾನ ಸಭೆ ಚರ್ಚೆಗಳಿಂದ ಭಾರತ ಸರ್ಕಾರದ ಏಕೀಕೃತ, ಒಕ್ಕೂಟ ಸೂತ್ರಗಳನ್ನು ವಿವರಿಸಿರಿ. (AS_1)
4. ಅಂದಿನ ರಾಜಕೀಯ ಘಟನೆಗಳನ್ನು ಸಂವಿಧಾನವು ಹೇಗೆ ಪ್ರತಿಬಿಂಬಿಸುತ್ತದೆ? ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿ ಇದಕ್ಕೂ ಮುಂದಿನ ಅಧ್ಯಾಯವನ್ನು ಸಹ ಪರಿಗಣನೆಯಲ್ಲಿ ತೆಗೆದುಕೊಳ್ಳಿರಿ. (AS_1)
5. ಸಂವಿಧಾನ ಸಭೆಯನ್ನು ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕಿನೊಂದಿಗೆ ಆಯ್ದುಕೊಂಡಿದ್ದರೆ ಸಂವಿಧಾನವನ್ನು ರೂಪಿಸುವುದರಲ್ಲಿ ಅದು ಎಂತಹ ಪ್ರಭಾವವನ್ನು ತೋರಿಸಿರುತ್ತಿತ್ತು? (AS_1)
6. ಭಾರತ ಸಂವಿಧಾನದಲ್ಲಿನ ಮೂಲಭೂತ ಸೂತ್ರಗಳನ್ನು ಕುರಿತು ಚಿಕ್ಕ ಪ್ರಬಂಧ ಬರೆಯಿರಿ. (AS_1)
7. ದೇಶದಲ್ಲಿ ರಾಜಕೀಯ ವ್ಯವಸ್ಥೆಗಳನ್ನು ಸಂವಿಧಾನವು ಹೇಗೆ ವ್ಯಾಖ್ಯಾನಿಸಿದೆ. ಅವುಗಳನ್ನು ಹೇಗೆ ಬದಲಾಯಸಿದೆ?(AS_1)
8. ಸಂವಿಧಾನದಲ್ಲಿ ಮೂಲಭೂತ ಸೂತ್ರಗಳು ಇರುತ್ತವೆ. ಆದರೆ ಪ್ರಜೆಗಳು ವ್ಯವಸ್ಥೆಯಿಂದ ಹೊಂದಿದಾಗ ಮಾತ್ರ ಸಾಮಾಜಿಕ ಬದಲಾವಣೆ ಬರುತ್ತದೆ. ಈ ವ್ಯಾಖ್ಯೆಯೊಂದಿಗೆ ನೀವು ಏಕೀಭವಿಸುತ್ತೀರಾ? ನಿಮ್ಮ ಕಾರಣಗಳನ್ನು ತಿಳಿಸಿರಿ. (AS_1)
9. ಪ್ರಪಂಚ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

   1) ನೇಪಾಳ 2) ಜಪಾನ್ 3) ದೆಹಲಿ 4) ಅಮೇರಿಕಾ
10. ಪುಟ ಸಂಖ್ಯೆ 246 ರಲ್ಲಿನ ಬಾರ್ ಗ್ರಾಫನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (AS_3)

    ಎ) ಅತ್ಯಧಿಕ ಸಂವಿಧಾನ ತಿದ್ದುಪಡಿಗಳು ಯಾವ ವರ್ಷದಲ್ಲಿ ಮಾಡಲಾಗಿದೆ?

    ಬಿ) 1961-70 ಕ್ಕಿಂತ 1971-80ರಲ್ಲಿ ಎಷ್ಟು ಅಧಿಕ ತಿದ್ದುಪಡಿಗಳನ್ನು ಮಾಡಲಾಗಿದೆ.
11. ನಿಮ್ಮ ಶಾಲೆಯಲ್ಲಿ ಸಮಾನತೆಯ ಭಾವನೆ ಹೇಗೆ ಜಾರಿಗೊಳ್ಳುತ್ತಿದೆಯೋ ಎಂದು ತಿಳಿಸುವ ಕರಪತ್ರವನ್ನು ತಯಾರಿಸಿರಿ. (AS_6)

SCERT TELANGANA

ಅಧ್ಯಾಯ

16

ಭಾರತ ದೇಶದಲ್ಲಿ ಚುನಾವಣಾ ಪ್ರಕ್ರಿಯೆ

ಪ್ರಜಾ ಪ್ರಭುತ್ವದಲ್ಲಿ ಚುನಾವಣೆಗಳು ಏಕೆ ಅವಶ್ಯ ? ಚುನಾವಣೆಗಳ ನಿರ್ವಹಣೆ ನಡೆಸುವ ವ್ಯವಸ್ಥೆ ಯಾವುದು, ಅದರ ಕಾರ್ಯವೈಖರಿ ಹೇಗಿದೆ, ಅದಕ್ಕಿರುವ ಅಧಿಕಾರಿಗಳು ಯಾರು, ಚುನಾವಣೆಗಳು ನಡೆಯುವ ಪ್ರತಿ ಹಂತದಲ್ಲಿ ತೆಗೆದುಕೊಳ್ಳುವ ನಿಯಮಗಳಾವವು ಎನ್ನುವುದನ್ನು ಈ ಪಾಠದಲ್ಲಿ ತಿಳಿದುಕೊಳ್ಳುತ್ತೇವೆ. ಹಾಗೆಯೆ ಭಾರತ ದೇಶದಲ್ಲಿ ಚುನಾವಣೆಗಳು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಹೇಗೆ ವ್ಯವಸ್ಥಿತವಾಗಿ, ನಿಸ್ಪಕ್ಷಪಾತವಾಗಿ ಜರುಗುತ್ತವೆಯೋ ತಿಳಿದುಕೊಂಡು ಹೀಗೆ ನಡೆಸುವುದಕ್ಕೆ ಚುನಾವಣಾ ಕಮಿಷನರರ ಪಾತ್ರವೇನೆಂದು ತಿಳಿದುಕೊಳ್ಳುತ್ತೇವೆ. ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ಪ್ರಜಾಪ್ರಭುತ್ವದ ಘನತೆಯನ್ನು ದ್ವಿಗುಣಗೊಳಿಸುವುದಕ್ಕೆ ತೆಗೆದುಕೊಳ್ಳಬೇಕಾದ ಸುಧಾರಣೆಗಳ ಕುರಿತು ಚರ್ಚಿಸುತ್ತೇವೆ.

ಚುನಾವಣಾ ಸಮಯದಲ್ಲಿ ವಿವಿಧ ವಾರ್ತಾಪತ್ರಿಕೆಗಳಲ್ಲಿ ಬರುವ ಅಗ್ರಬರಹ, ಶೀರ್ಷಿಕೆಗಳನ್ನು ಜಾಗ್ರತೆಯಿಂದ ಗಮನಿಸಿರಿ ಇವು ಯಾರ ಅಧಿಕಾರಗಳನ್ನು ಕುರಿತು ಸೂಚಿಸುತ್ತಿವೆ, ಇವುಗಳ ಮುಖ್ಯ ಉದ್ದೇಶ ಏನಾಗಿರಬಹುದು ಚರ್ಚಿಸಿರಿ.

ಭಾರತದ ಚುನಾವಣಾ ವ್ಯವಸ್ಥೆ :

ಭಾರತ ದೇಶದಂಥ ಸುವಿಶಾಲ, ಅತ್ಯಧಿಕ ಜನಸಂಖ್ಯೆ ಹೊಂದಿದ ದೇಶದಲ್ಲಿ ಪ್ರಜೆಗಳೆಲ್ಲರೂ ಒಂದು ಕಡೆ ಸೇರಲು, ಚರ್ಚಿಸಲು, ನಿರ್ಣಯಗಳನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಕಾರಣ ಇಲ್ಲಿ ಚುನಾವಣೆಗಳ ಅವಶ್ಯಕತೆ ಏರ್ಪಟ್ಟಿತು. ಪ್ರಪಂಚದಲ್ಲಿಯೇ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತ ದೇಶ, ಸ್ವತಂತ್ರ ಹೊಂದಿದಂದಿನಿಂದ ಚುನಾವಣೆಗಳ ಮುಖಾಂತರ ಪ್ರಜಾಪ್ರಭುತ್ವ ನಿಯಮಗಳಿಗೆ ಗಟ್ಟಿಯಾದ ಬುನಾದಿಯನ್ನು ಹಾಕಿಕೊಂಡಿದೆ.

ದೇಶದಲ್ಲಿ ಚುನಾವಣೆಗಳನ್ನು ಭಾರತದ ಚುನಾವಣಾ ಆಯೋಗ ನಿರ್ವಹಿಸುತ್ತದೆ. ಈ ಆಯೋಗವು ರಾಜಕೀಯ ಪಕ್ಷಗಳಿಗಾಗಿ ''ಚುನಾವಣಾ ನಿಯಮಾವಳಿ''ಯನ್ನು ರೂಪಿಸುತ್ತದೆ. ಚುನಾವಣೆಗಳ ಫಲಿತಾಂಶವನ್ನು ಪ್ರಕಟಿಸಿ ಕೇಂದ್ರ ಇಲ್ಲವೇ ರಾಜಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಸಮರ್ಪಿಸುತ್ತದೆ. ಈ ವಿಧಾನ ಮುಖಾಂತರ ಹೊಸ ಸರಕಾರವು ಏರ್ಪಾಟುಮಾಡುವುದಕ್ಕೆ ಮಾರ್ಗ ಸುಗಮವಾಗುತ್ತದೆ.

ಚಿತ್ರ 16.1 ಬ್ಯಾಲೆಟ್ ಬಾಕ್ಸ್

ಭಾರತದ ಚುನಾವಣಾ ಆಯೋಗ :

ಭಾರತದ ಚುನಾವಣಾ ಆಯೋಗವು 1950 ಜನವರಿ 25 ರಂದು ಏರ್ಪಟ್ಟಿತು. ಇದು ಸ್ವತಂತ್ರವಾಗಿರುವ ಒಂದು ಸಂವಿಧಾನಿಕ ಸಂಸ್ಥೆ. ತನ್ನ

SCERT TELANGANA

ಅಧಿಕಾರದಿಂದ ಭಾರತ ದೇಶದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಸರಿಯಾಗಿ ನಿರ್ವಹಿಸುವ ಬಾಧ್ಯತೆ ಇದರ ಮೇಲೆ ಇದೆ. ಮತದಾರರ ಪಟ್ಟಿಯನ್ನು ರೂಪಿಸಿ ದೇಶದಲ್ಲಿ ಲೋಕಸಭೆ, ರಾಜ್ಯ ಸಭೆ, ರಾಜ್ಯಶಾಸನ ಸಭೆಗಳು, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯ ಚುನಾವಣೆಗಳನ್ನು ನಿರ್ವಹಿಸುತ್ತದೆ.

ಚಿತ್ರ 16.2 ಭಾರತ ಚುನಾವಣಾ ಆಯೋಗದ ಪ್ರಧಾನ ಕಚೇರಿ

2010, ಜನವರಿ 25ಕ್ಕೆ ಭಾರತ ಚುನಾವಣಾ ಆಯೋಗ ಏರ್ಪಟ್ಟು 60 ವರ್ಷಪೂರ್ತಿ ಆದ ಸಂದರ್ಭವಾಗಿ ಪ್ರಜೋತ್ಸವಗಳನ್ನು ನಿರ್ವಹಿಸಿ, 2011 ಜನವರಿ 25 ರಂದು ಮೊದಲ ಮತದಾರರ ದಿನವಾಗಿ ಪ್ರಕಟಿಸಿದರು.

ಚುನಾವಣಾ ಆಯೋಗಕ್ಕೆ ಸ್ವತಂತ್ರ ಅಧಿಕಾರ :

ಅಧಿಕ ಜನಸಂಖ್ಯೆ ಇರುವ ಭಾರತ ದೇಶದಲ್ಲಿ ಚುನಾವಣೆಗಳ ನಿರ್ವಹಣೆ ಎಷ್ಟೋ ಕ್ಲಿಷ್ಟವಾದ ಪ್ರಕ್ರಿಯೆ. ಬ್ರಿಟೀಷರ ಪಾಲನೆಯ ಕಾಲದಲ್ಲಿ ಕೇವಲ 14% ಜನಸಂಖ್ಯೆ ಮಾತ್ರ ಮತ ಚಲಾಯಿಸುವ ಹಕ್ಕನ್ನು ಪಡೆದುಕೊಂಡಿದ್ದರು. 1952 ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ 17.32 ಕೋಟಿ ಮತದಾರರಿದ್ದರು. ಪ್ರಸ್ತುತ 67 ಕೋಟಿ ದಾಟಿದೆ. ನಮ್ಮ ದೇಶದಲ್ಲಿ ಈ ಭಾರಿ ಚುನಾವಣಾ ಪ್ರಕ್ರಿಯೆಯನ್ನು, ಚುನಾವಣಾ ಆಯೋಗವು ಸುಮಾರು 45 ಲಕ್ಷ ಸಿಬ್ಬಂದಿಯೊಂದಿಗೆ ನಿರ್ವಹಿಸುತ್ತದೆ.

ಚಿತ್ರ 16.3 ಭಾರತ ಚುನಾವಣಾ ಆಯೋಗದ ಚಿಹ್ನೆ

ಕೇಂದ್ರ ಚುನಾವಣಾ ಆಯೋಗಕ್ಕೆ ಚುನಾವಣೆಯನ್ನು ನಿರ್ವಹಿಸಲು ಪ್ರತ್ಯೇಕ ಸಿಬ್ಬಂದಿ ಇಲ್ಲ. ಸಂವಿಧಾನದಲ್ಲಿ ಆರ್ಟಿಕಲ್ 324(6) ಪ್ರಕಾರ ರಾಷ್ಟ್ರಪತಿ, ಗವರ್ನರ್‌ಗಳ ಅನುಮತಿಯೊಂದಿಗೆ ಕೇಂದ್ರ, ರಾಜ್ಯ ಸರಕಾರದ ಸಿಬ್ಬಂದಿಯನ್ನು ಚುನಾವಣೆಗಳ ನಿರ್ವಹಣೆಗೆ ತೆಗೆದುಕೊಳ್ಳುತ್ತದೆ. ಆ ಸಮಯದಲ್ಲಿ ಈ ಸಿಬ್ಬಂದಿಯ ಮೇಲೆ ಕೇಂದ್ರ ಚುನಾವಣಾ ಆಯೋಗಕ್ಕೆ ಅಧಿಕಾರ ಇರುತ್ತದೆ. ಕೇಂದ್ರ ಚುನಾವಣಾ ಆಯೋಗದ ಅನುಮತಿ ಇಲ್ಲದೇ ಅವರನ್ನು ಬದಲಿ ಮಾಡುವುದು ಇಲ್ಲವೇ ಪದೋನ್ನತಿ ಮಾಡುವುದಂತಹವುಗಳು ಮಾಡಕೂಡದು.

ಮುಖ್ಯ ಚುನಾವಣಾ ಆಯುಕ್ತರು :

ಮುಖ್ಯ ಚುನಾವಣಾ ಅಧಿಕಾರಿಯು ಭಾರತ ದೇಶದಲ್ಲಿ ಚುನಾವಣಾ ಆಯೋಗಕ್ಕೆ ಅಧಿಪತಿ, ರಾಷ್ಟ್ರೀಯ ಮತ್ತು ರಾಜ್ಯ ಶಾಸನ ಸಭೆಗಳ ಚುನಾವಣೆಗಳನ್ನು ಸರಿಯಾಗಿ, ನಿಸ್ಪಕ್ಷಪಾತವಾಗಿ ನಡೆಸುವುದಕ್ಕೆ ಈತನಿಗೆ ಸಂವಿಧಾನ ಬದ್ಧವಾಗಿ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಈತನು ಸಾಧಾರಣವಾಗಿ ಭಾರತ ಸಿವಿಲ್ ಸರ್ವಿಸಗೆ ಸಂಬಂಧಿಸಿದವರಾಗಿರುತ್ತಾರೆ. ಈತನ ಅಧಿಕಾರಾವಧಿ 6 ವರ್ಷಗಳು ಇಲ್ಲವೇ 65 ವರ್ಷಗಳು ಆಗುವವರೆಗೆ ಪದವಿಯಲ್ಲಿ ಇರುತ್ತಾರೆ. ಮೊದಲ ಚುನಾವಣಾ ಆಯೋಗವು ಏಕ ಸದಸ್ಯ ಸಂಸ್ಥೆಯಾಗಿ ಅಂದರೆ ಒಬ್ಬ ಮುಖ್ಯ ಚುನಾವಣಾ ಅಧಿಕಾರಿಯಿಂದ ಮಾತ್ರವೇ ಕೆಲಸ ಮಾಡಿತು. ಇದನ್ನು 1993 ರಲ್ಲಿ ತ್ರಿಸದಸ್ಯ ಸಂಸ್ಥೆಯಾಗಿ ಬದಲಾಯಿಸಿ ಇಬ್ಬರು ಕಮಿಷನರ್‌ಗಳನ್ನು ಹೆಚ್ಚಾಗಿ ನಿಯಮಿಸಿದರು.

SCERT TELANGANA

ಭಾರತ ರಾಜಕೀಯ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಟಿ.ಎನ್.ಶೇಷನ್ (1990-1996) ಅವಧಿಯಿಂದ ಗಣನೀಯವಾದ ಪ್ರಜಾಭಿಮಾನವನ್ನು ಗಳಿಸಿದೆ. ಶೇಷನ್ ಭಾರತದ ಚುನಾವಣೆಯಲ್ಲಿ ಬ್ರಷ್ಟಾಚಾರವನ್ನು ಕೊನೆಗಾಣಿಸುವುದಕ್ಕೆ ಎಷ್ಟೋ ಪ್ರಯತ್ನವನ್ನು ಮಾಡಿದ್ದಾರೆ. ಆತನ ನಂತರ ಚುನಾವಣಾ ಆಯೋಗದ ಅಧಿಕಾರಗಳನ್ನು ಕುರಿತು ದೇಶ ವ್ಯಾಪ್ತವಾಗಿ ಒಂದು ಗುರುತಿಗೆ ಬಂದಿದೆ.

ಟಿ.ಎನ್.ಶೇಷನ್ ಶಿಫಾರಸ್ಸುಗಳು :

- ಪ್ರಚಾರ ಸಮಯವನ್ನು ನಾಮಿನೇಶನ್ ವಾಪಾಸು ತೆಗೆದು ಕೊಳ್ಳುವ ದಿನಾಂಕದಿಂದ 14 ದಿನಗಳೆಂದು ನಿರ್ಣಯಿಸಿದರು.
- ಒಬ್ಬ ಅಭ್ಯರ್ಥಿ ಒಂದೇ ಸಾರಿ ಎರಡಕ್ಕಿಂತ ಹೆಚ್ಚಿಗೆ ಕ್ಷೇತ್ರಗಳಲ್ಲಿ ಚುನಾವಣೆ ನಿಲ್ಲಬಾರದು.
- ಒಬ್ಬ ವ್ಯಕ್ತಿ ಯಾವುದಾದರೂ ಅಪರಾಧದಲ್ಲಿ ಕನಿಷ್ಟ ಎರಡು ವರ್ಷ ಶಿಕ್ಷೆ ಅನುಭವಿಸಿದರೆ 6 ವರ್ಷಗಳ ವರೆಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ.
- ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ವ್ಯಕ್ತಿ ಮರಣಿಸಿದರೆ ಚುನಾವಣೆಯನ್ನು ಮುಂದೂಡಬೇಕು, ಆದರೆ ರದ್ದುಗೊಳಿಸಬಾರದು.
- ಪ್ರಚಾರ ಪೂರ್ತಿ ಆದ ನಂತರ 48 ಗಂಟೆಗಳ ವರೆಗೆ ಮದ್ಯ ಮಾರಟ ನಿಷೇಧಿಸಬೇಕು.

- ಭಾರತ ದೇಶದಲ್ಲಿ ಸ್ವತಂತ್ರ ಅಧಿಕಾರ ಹೊಂದಿದ ಇತರ ಸಂಸ್ಥೆಗಳ ಕುರಿತು ವಿವರಗಳನ್ನು ಸೇಕರಿಸಿರಿ.

- ಪ್ರಧಾನ ಚುನಾವಣಾ ಆಯುಕ್ತರು ಇತರ ಆಯುಕ್ತರ ಮಧ್ಯದ ಅಧಿಕಾರಗಳು, ಜೀತ ಭತ್ಯೆಗಳು ವ್ಯತ್ಯಾಸಗಳು ಇಲ್ಲ. ನಿರ್ಣಯಗಳನ್ನು ಸಾಧಾರಣವಾಗಿ ಏಕಗ್ರೀವವಾಗಿ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಬಹುಮತದ ಆಧಾರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.

ಚುನಾವಣಾ ಆಯೋಗದ ಕಾರ್ಯಗಳು :

ಸಂವಿಧಾನದಲ್ಲಿ 15ನೇ ಭಾಗದಲ್ಲಿಯ ಆರ್ಟಿಕಲ್ 329 ವರೆಗೆ ಚುನಾವಣಾ ಆಯೋಗದ ನಿರ್ಮಾಣ, ಅಧಿಕಾರ, ಕಾರ್ಯಗಳ ಕುರಿತು ವಿವರಿಸಲಾಗಿದೆ. ಈ ಅಧಿಕಾರಗಳನ್ನು ಕೆಳಗಿನಂತೆ ವಿವರಿಸಬಹುದು.

1. ಪಾಲನಾ ಸಂಬಂಧ ನಿಯಮಗಳು
2. ಸಲಹಾ ನಿಯಮಗಳು
3. ಪಾಕ್ಷಿಕ ನ್ಯಾಯ ಸಂಬಂಧಿತ ನಿಯಮಗಳು

- ಪ್ರಾರಂಭದಲ್ಲಿ ಸಂವಿಧಾನದಲ್ಲಿ ಓಟಿಂಗ್ ವಯಸ್ಸು 21 ವರ್ಷ ಇದ್ದಿತ್ತು. ಆದರೆ 1988 ರಲ್ಲಿ 61ನೇ ಸಂವಿಧಾನ ತಿದ್ದುಪಡಿಯ ಮುಖಾಂತರ ಅದನ್ನು 18 ವರ್ಷಕ್ಕೆ ತಗ್ಗಿಸಿದ್ದಾರೆ.

ಪಾಲನಾ ಸಂಬಂಧ ನಿಯಮಗಳಲ್ಲಿ ಮತದಾರರ ಪಟ್ಟಿಯನ್ನು ರೂಪಿಸುವುದು, ನಿರ್ಧಾರಿತ ಅವಧಿಯಲ್ಲಿ ಅದನ್ನು ಸರಿಪಡಿಸುವುದು, ಸಂಸತ್ತು ಮಾಡಿದ ಪುನರ್ವಿಭಜನೆಗೆ ಸಂಬಂಧಿಸಿದ ಕಾಯ್ದೆಗಳ ಪ್ರಕಾರ ಮತ ಕ್ಷೇತ್ರಗಳ ಭೌಗೋಳಿಕ ಪ್ರದೇಶವನ್ನು ನಿರ್ಣಯಿಸುವುದು, ಚುನಾವಣಾ ಷಡ್ಯೂಲ್ ಪ್ರಕಟಿಸುವುದು, ಚುನಾವಣಾ ನೋಟಿಫಿಕೇಶನ್, ನಾಮಿನೇಷನ್, ಸ್ವಿಕರಣೆ, ಪರಿಶೀಲನ, ಪೋಲಿಂಗ ದಿನಾಂಕದ ನಿರ್ಧಾರ, ಪರಿವೀಕ್ಷಣ, ರಾಜಕೀಯ ಪಕ್ಷಗಳನ್ನು ಗುರುತಿಸುವುದು, ಗುರ್ತುಗಳನ್ನು ಹಂಚುವುದು, ಚುನಾವಣಾ ಸಮಯದಲ್ಲಿ ಪಕ್ಷಗಳು ಪಾಲಿಸಬೇಕಾದ ಚುನಾವಣಾ ನಿಯಮಾವಳಿಯನ್ನು ರೂಪಿಸಿ ಜಾರಿಗೆ ತರುವುದು, ಚುನಾವಣೆಯಲ್ಲಿ ನಡೆದ ಆಕ್ರಮಗಳ ಪರಿಶೀಲನೆಗೆ ವಿಚಾರಣಾಧಿಕಾರಿಗಳನ್ನು ನಿಯಮಿಸುತ್ತದೆ.

SCERT TELANGANA

ಸಂಸತ್ತು, ರಾಜ್ಯ ಶಾಸನ ಸಭೆಗಳ ಅನರ್ಹತೆಯನ್ನು ಕುರಿತು ರಾಷ್ಟ್ರಪತಿ, ಗವರ್ನರ್‌ಗಳಿಗೆ ಸೂಚನೆಯನ್ನು ಕೊಡುತ್ತದೆ. ಪಕ್ಷಗಳ ಮಧ್ಯ ವಿವಾದಗಳನ್ನು ಕೇಳಿ ಪರಿಷ್ಕರಿಸುತ್ತದೆ. ಈ ಸಂದರ್ಭದಲ್ಲಿ ಚುನಾವಣಾ ಆಯೋಗ ಪಾಕ್ಷಿಕ ನ್ಯಾಯ ಸ್ಥಾನದಂತೆ ಕೆಲಸ ಮಾಡುತ್ತದೆ.

ಚುನಾವಣಾ ಆಯೋಗದ ನಿಯಮಾವಳಿಗಳ ಪ್ರಕಾರ ಚುನಾವಣೆಗಳು ನಡೆಯುವ ವರ್ಷದಲ್ಲಿ ಆ ವರ್ಷ ಜನವರಿ 1 ವರೆಗೆ 18 ವರ್ಷಗಳು ತುಂಬಿದ ವರು ಕುಲ, ಜಾತಿ, ಮತ, ಲಿಂಗ, ಭಾಷಾಪರವಾದ ಭೇದಗಳು ಇಲ್ಲದೇ ಮತ ದಾರರ ಪಟ್ಟಿಯಲ್ಲಿ ಹೆಸರನ್ನು ನಮೂದು ಮಾಡಿಕೊಳ್ಳಬಹುದು. ಇದನ್ನು ''ಸಾರ್ವತ್ರಿಕ ಮತದಾನದ ಹಕ್ಕು'' ಎನ್ನುವರು. ಮತದಾರರೆಲ್ಲರನ್ನು ಕಲಿಸಿ ಅದನ್ನು ''ಎಲೆಕ್ಟೊರೆಟ್'' ಅನ್ನುವರು.

ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು :

● ಚುನಾವಣಾ ಆಯೋಗದ ಒಪ್ಪಿಗೆಯನ್ನು ಪಡೆದ ರಾಷ್ಟ್ರೀಯ ಪಕ್ಷಗಳ ಪ್ರಾದೇಶಿಕ ಪಕ್ಷಗಳ ಗುರ್ತುಗಳಲ್ಲಿ ಕೆಲವನ್ನು ಶೇಕರಿಸಿರಿ.

ನಮ್ಮ ದೇಶದಲ್ಲಿ ನಿಬಂಧನಾವಳಿಯನ್ನು ಬರೆದು ಕೊಂಡು ಚುನಾವಣಾ ಆಯೋಗದ ಹತ್ತಿರ ನೊಂದಣಿ ಮಾಡಿಸಿದರೆ ಒಂದು ರಾಜಕೀಯ ಪಕ್ಷ ಹುಟ್ಟುತ್ತದೆ. ಚುನಾವಣಾ ಆಯೋಗ ರಾಜಕೀಯ ಪಕ್ಷಗಳಿಗೆ ಗುರ್ತುಗಳೋನ್ನು ಹಂಚುತ್ತದೆ. ಚುನಾವಣೆಯಲ್ಲಿ ಪಡೆದ ಮತಗಳ ಪ್ರತಿಶತ ವನ್ನು ಹಿಡುದು ಪಕ್ಷಗಳನ್ನು ಪ್ರಾದೇಶಿಕ, ರಾಷ್ಟ್ರೀಯ ಪಕ್ಷಗಳಾಗಿ ಚುನಾವಣಾ ಆಯೋಗ ಗುರುತ್ತಿಸುತ್ತದೆ. ರಾಜ್ಯದಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು ಮತಗಳಲ್ಲಿ 3% ಮತಗಳು, ಇಲ್ಲವೇ 3 ಶಾಸನಸಭಾ ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ ಚುನಾವಣಾ ಆಯೋಗ ಒಂದು ಪಕ್ಷವನ್ನು ಪ್ರಾದೇಶಿಕ ಪಕ್ಷವಾಗಿ ಗುರುತಿಸುತ್ತದೆ. ಸಾಮಾನ್ಯವಾಗಿ ಚುನಾವಣೆ ಯಲ್ಲಿ ಕನಿಷ್ಟ 4 ರಾಜ್ಯಗಳಲ್ಲಿ ಪಡೆದ ಒಟ್ಟು ಮತಗಳಲ್ಲಿ 6% ಮತಗಳನ್ನು ಪಡೆದರೆ ಇಲ್ಲವೇ 4 ಬೇರೆ ಬೇರೆ ರಾಜ್ಯ ಗಳಿಂದ 11 ಲೋಕಸಭೆ ಸ್ಥಾನಗಳನ್ನು ಗೆದ್ದರೆ ಅದು ರಾಷ್ಟ್ರೀಯ ಪಕ್ಷವಾಗಿ ಗುರುತಿಸಿಕೊಳ್ಳುತ್ತದೆ.

ಚುನಾವಣೆಗಳ ನೀತಿ ನಿಯಮಾವಳಿ :

ಚುನಾವಣಾ ನೀತಿ ನಿಯಮಗಳು ಅಂದರೆ ಷೆಡ್ಯೂಲ್ ಪ್ರಕಟಿಸಿದ ದಿನಾಂಕದಿಂದ ಚುನಾವಣೆಗಳು ನಡೆಯುವ ದಿನಾಂಕದ ವರೆಗೆ ಪಕ್ಷಗಳು, ಅಭ್ಯರ್ಥಿಗಳು, ಪ್ರಜೆಗಳು ಪಾಲಿಸಬೇಕಾದ ನಿಯಮ ನಿಬಂಧನೆಗಳನ್ನು ''ಚುನಾವಣಾ ನೀತಿ ಸಂಹಿತೆ'' ಅನ್ನುವರು ಇವುಗಳನ್ನು ಮೀರಿದರೆ ಚುನಾವಣೆ ಅನುಚಿತ ವರ್ತನೆ (ಎಲೆಕ್ಷನ್ ಮಾಲ್ ಪ್ರಾಕ್ಟಿಸ್) ಎಂದು ಪರಿಗಣಿಸಿ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಅಭ್ಯರ್ಥಿಗಳು ಪಾಲಿಸಬೇಕಾದ ನಿಯಮಗಳಲ್ಲಿಯ ಮುಖ್ಯವಾದ ಅಂಶಗಳು :

1. ಪಕ್ಷಗಳು, ಅಭ್ಯರ್ಥಿಗಳು ಜಾತಿ, ಕುಲ,ಮತ, ಪ್ರಾಂತೀಯವಾದ ದ್ವೇಷದ ಭಾವನೆಗಳನ್ನು ಬಡಿ ದೆಬ್ಬಿಸುವಂತೆ ಪ್ರವರ್ತಿಸಕೂಡದು.
2. ಇತರ ರಾಜಕೀಯ ಪಕ್ಷಗಳನ್ನು ಅಭ್ಯರ್ಥಿಗಳನ್ನು ವಿಮರ್ಷಿಸುವಾಗ ಪ್ರಜಾಜೀವಿತದೊಂದಿಗೆ ಸಂಬಂಧ ಇಲ್ಲದ ವ್ಯಕ್ತಿಗತ ದೂಷಣೆಗಳನ್ನು ಮಾಡಕೂಡದು.
3. ರಾಜಕೀಯ ಪ್ರಕಟನೆಗಳಿಂದ ಜಾತಿ, ಕುಲ, ಮತಪರವಾದ ವರ್ತನೆಗಳನ್ನು ಮಾಡಕೂಡದು.
4. ಮಸಿದುಗಳು, ಚರ್ಚಿಗು, ದೇವಾಲಯಗಳು ಇತರ ಪ್ರಾರ್ಥನೆ, ಪವಿತ್ರಸ್ಥಳಗಳಲ್ಲಿ ಪಾಠಶಾಲೆಗ ಳಲ್ಲಿ ಪ್ರಚಾರ ಮಾಡಕೂಡದು.
5. ಮತದಾರರಿಗೆ ಲಂಚಕೊಟ್ಟು ಪ್ರಲೋಭನೆಗೆ ಒಳಪಡಿಸಿ ಇಲ್ಲವೇ ಬೆದರಿಸುವುದು ಮಾಡಕೂಡದು.
6. ಒಬ್ಬರ ಸ್ಥಾನದಲ್ಲಿ ಮತ್ತೊಬ್ಬರನ್ನು ಮತದಾರರನ್ನಾಗಿ ಮಾಡಕೂಡದು.
7. ಪೋಲಿಂಗ್ ಸ್ಟೇಷನ್‌ಗೆ 100 ಮೀಟರ್ ಪರಿಧಿಯಲ್ಲಿ ಪ್ರಚಾರವನ್ನು ಮಾಡಕೂಡದು.

SCERT TELANGANA

8. ಸಮಯ ಮುಗಿದ ನಂತರ ಪ್ರಚಾರ ಮಾಡಬಾರದು.

9. ಪೋಲಿಂಗ ಸ್ಟೇಷನಗೆ ಮತದಾರರನ್ನು ಕರೆದುಕೊಂಡು ಬರುವುದು ಕಳಿಸುವುದು ನಿಷಿದ್ಧ.

10. ಪ್ರಶಾಂತ ಜೀವನವನ್ನು ನಡೆಸುವ ಹಕ್ಕು ಪ್ರತಿಯೊಬ್ಬರಿಗೆ ಇರುತ್ತದೆ. ಅದಕ್ಕೆ ಧಕ್ಕೆ ಬರುವಂತೆ ಮನೆಯ ಮುಂದು ನಿರಸನ ಪ್ರದರ್ಶನಗಳು, ಪಿಕೇಟಿಂಗ್ ಮಾಡುವುದು ನಿಯಮ ಗಳಿಗೆ ವಿರುದ್ಧ.

11. ಅನುಮತಿ ಇಲ್ಲದೆ ಮನೆಯ ಮೇಲೆ ಧ್ವಜಗಳನ್ನು ಹಾರಿಸುವುದು, ಬ್ಯಾನರ್‌ಗಳನ್ನು ಕಟ್ಟುವುದು ಗೋಡೆಗಳ ಮೇಲೆ ಘೋಷಣೆಗಳನ್ನು ಬರೆಯುವುದು. ಪೋಸ್ಟರು ಅಂಟಿಸುವಂತಹುದನ್ನು ಮಾಡ ಕೂಡದು.

● ಚುನಾವಣಾ ನೀತಿಸಂಹಿತೆಯನ್ನು ಉಲ್ಲಂಘಿಸಿದ್ದಕ್ಕೆ ಯಾವುದೇ ಅಭ್ಯರ್ಥಿಗೆ ಶಿಕ್ಷೆ ಆಗಿದೆಯೇ ? ತಿಳಿದುಕೊಳ್ಳಿ.

● ಯಾವುದಾದರೂ ತಪ್ಪಿಗೆ ಶಿಕ್ಷೆಯಾಗಿ ಚುನಾವಣೆಯಲ್ಲಿ ಸ್ಪರ್ಧೆಗೆ ಇಲ್ಲವೇ ಪದವಿಗೆ ಅನರ್ಹರಾದ ಅಭ್ಯರ್ಥಿಗಳ ಕುರಿತು ತಿಳಿದು ಕೊಳ್ಳಿ.

ಈ ಚುನಾವಣಾ ನಿಯಮಗಳ ಮೇಲೆ ಕೆಲವು ಜನ ಅಭ್ಯರ್ಥಿಗಳು, ಸಂಸ್ಥೆಗಳು ಕೋರ್ಟಗಳಿಗೆ ಮೊರೆ ಹೋಗಿದ್ದಾರೆ.

ಸಭೆಗಳು, ಸಮಾವೇಶಗಳು, ಮೆರವಣಿಗೆಗಳು :

1. ಪಕ್ಷಗಳು ಸಭೆಗಳನ್ನು ನಡೆಸಬೇಕೆಂದುಕೊಂಡಾಗ ಮೊದಲೇ ಸಭೆ ನಡೆಸುವ ಪ್ರದೇಶ, ಸಮಯ ಕುರಿತು ತಪ್ಪದೆ ಸ್ಥಳೀಯ ಪೋಲೀಸರಿಗೆ ಸಮಾಚಾರವನ್ನು ತಿಳಿಸಬೇಕು. ಅದನ್ನು ಆಧಾರವಾಗಿಟ್ಟು ಕೊಂಡು ಪೋಲಿಸರು ಶಾಂತಿಭದ್ರತೆಯ ರಕ್ಷಣೆ, ಟ್ರಾಫಿಕ್ ವ್ಯವಸ್ಥೆಯಂತಹ ಅವಸರವಾದ ಏರ್ಪಾಟುಗಳನ್ನು ಮಾಡಿಕೊಳ್ಳುತ್ತಾರೆ.

2. ಸಭೆಗಳು, ಸಮಾವೇಶಗಳು, ಮೆರವಣಿಗೆಗಳು ಮಾಡಬೇಕೆಂಬ ಪ್ರದೇಶಗಳಲ್ಲಿ ಯಾವುದಾದರೂ ನಿಷೇಧಾಜ್ಞೆ ಗಳಿವೆಯೇ ಎಂದು ಅಭ್ಯರ್ಥಿಗಳು ಮೊದಲಿಗೆ ತಿಳಿದುಕೊಳ್ಳಬೇಕು. ನಿಷೇಧಾಜ್ಞೆ ಜಾರಿಯಲ್ಲಿರುವ ಪ್ರದೇಶ ಗಳಲ್ಲಿ ಪ್ರವೇಶಿಸಿದರೆ ತಪ್ಪದೇ ನಿಯಮಗಳನ್ನು ಪಾಲಿಸಬೇಕು.

3. ಲೌಡ್ ಸ್ಪೀಕರ್‌ಗಳನ್ನು ಏರ್ಪಾಟು ಮಾಡುತ್ತಿದ್ದರೇ ಮೊದಲಿಗೆ ಅನುಮತಿ ಪಡೆಯಬೇಕು. ಸಭೆಗಳು, ಸಮಾವೇಶಗಳು, ಮೆರವಣಿಗೆಗಳಿಗೆ ಯಾರಾದರೂ ಭಂಗ ಮಾಡಿದರೆ ಅವರ ಮೇಲೆ ನೇರವಾಗಿ ದಾಳಿ ಮಾಡದೇ ಪೋಲಿಸರಿಗೆ ಸಮಾಚಾರ ವನ್ನು ತಿಳಿಸ ಬೇಕು.

ಮತದಾನದ ದಿನ :

1. ಮತದಾರರು, ಪ್ರಶಾಂತವಾಗಿ ಪ್ರಜಾಪ್ರಭುತ್ವಿಕ ವಾಗಿ ಮತದಾನದ ಹಕ್ಕನ್ನು ಉಪಯೋಗಿಸಲು ಅನು ಕೂಲ ಕಲ್ಪಿಸಬೇಕು.

2. ಎಲ್ಲ ಪಕ್ಷಗಳ ನೇತಾರರು ಚುನಾವಣಾ ಕಾರ್ಯ ಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಸಹಕರಿಸ ಬೇಕು.

SCERT TELANGANA

3. ಪೋಲಿಂಗ ಬೂತನಲ್ಲಿ ಕುಳಿತ ಪಕ್ಷಗಳ ಎಜೆಂಟರಿಗೆ ಅಧಿಕಾರಿಕ ಗುರುತಿನ ಪತ್ರಗಳನ್ನು ಕೊಡಬೇಕು. ಇವುಗಳ ಮೇಲೆ ಪಕ್ಷಗಳ ಗುರುತು ಹೆಸರು ಇರಕೂಡದು.

4. ಚುನಾವಣೆಗೆ 48 ಗಂಟೆ ಮೊದಲೆ ಪ್ರಚಾರ ಕಾರ್ಯವನ್ನು ನಿಲ್ಲಿಸಬೇಕು. ಎಸ್.ಎಮ್.ಎಸ್.ಗಳು ಕೂಡಾ ನಿಷಿದ್ಧ. ಮಧ್ಯವನ್ನು ಹಂಚುವುದು ಮಾಡಕೂಡದು.

5. ಅಭ್ಯರ್ಥಿಗಳು ಅವರ ಅನುಚರರು ಪೋಲಿಂಗ ಬೂತ ಸಮೀಪದಲ್ಲಿ ಏರ್ಪಾಟು ಮಾಡಿದ ಶಿಬಿರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಗುಂಪುಗೂಡ ಕೂಡದು.

6. ಶಿಬಿರಗಳಲ್ಲಿ ಭಿತ್ತಿಪತ್ರಗಳು, ಧ್ವಜಗಳು, ಗುರುತುಗಳ ಇನ್ನೂ ಇತರ ಚುನಾವಣಾ ಸಾಮಗ್ರಿ, ತಿನ್ನುವ ಸಾಮಗ್ರಿಗಳನ್ನು ಇಡಬಾರದು.

● ರಾಜಕೀಯ ಪಕ್ಷಗಳು ಸಭೆಗಳು, ಸಮಾವೇಶಗಳು, ಮೆರವಣಿಗೆಗಳ ಮುಖಾಂತರ ಮಾತ್ರ ಪ್ರಚಾರ ಮಾಡಬೇಕೆ, ಬೇರೆ ಏನಾದರೂ ಮಾರ್ಗಗಳಿವೆಯೇ ಸೂಚಿಸಿರಿ.

ಚಿತ್ರ 16.8 ಮತದಾನದ ಹಕ್ಕನ್ನು ಚಲಾಯಿಸಲು ಸಾಲಾಗಿ ಬರುತ್ತಿರುವ ಮತದಾರರು

ಚುನಾವಣೆಗಳು : ಕೋರ್ಟ ತೀರ್ಪುಗಳು :

● 2013 ರಲ್ಲಿ ಸುಪ್ರೀಂಕೋರ್ಟ ಡಾ॥ ಸುಬ್ರಮಣ್ಯಸ್ವಾಮಿ ಕೇಸನಲ್ಲಿ, ಮತದಾರನು ತನ್ನ ಮತ ಚಲಾಯಿಸಿದ ನಂತರ ತಾನು ಮತ ಹಾಕಿದ ಅಭ್ಯರ್ಥಿಯ ಹೆಸರು, ಗುರುತು ಮೊದಲಾದ ವಿವರಗಳಿಂದ ಕೂಡಿದ ಮುದ್ರಿತ ಪೇಪರನ್ನು ತನ್ನ ಹತ್ತಿ ಇಟ್ಟುಕೊಳ್ಳಲು ಅನುಕೂಲಿಸಲು ಈ.ವಿ.ಎಂ.ನಲ್ಲಿ **ಓಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರಯಲ್ (ವಿ.ವಿ.ಪಿ.ಎ.ಟಿ.)** ಏರ್ಪಾಟು ಮಾಡಬೇಕೆಂದು ಕೇಳಿಕೊಂಡಿದೆ.

● 2013 ರಲ್ಲಿ ಪಿಪುಲ್ಸ ಯುನಿಯನ್ ಆಫ್ ಸಿವಿಲ್ ಲಿಬರ್ಟಿಸ್ ಕೇಸನಲ್ಲಿ ಸ್ಪರ್ದೆ ಮಾಡುತ್ತಿರುವ ಅಭ್ಯರ್ಥಿಗಳನ್ನು ಇಲ್ಲವೆಂದು ಅವರಿಗೆ ವಿರೋಧವಾಗಿ ಓಟು ಹಾಕುವ ಅಧಿಕಾರ ಓಟರ್‌ಗೆ ಇರತ್ತುದೆಂದು ಸುಪ್ರೀಂಕೋರ್ಟ ಹೇಳಿದೆ. ಈ ತೀರ್ಪು ಜಾರಿಗೆ ತರುವುದಕ್ಕೆ ಚುನಾವಣಾ ಆಯೋಗ ನೋಟಾ(NOTA)ವನ್ನು ಏರ್ಪಾಟು ಮಾಡಿದೆ.

● 2013 ರಲ್ಲಿ ಪಿಪುಲ್ಸ ಯುನಿಯನ್ ಆಫ್ ಸಿವಿಲ್ ಲಿಬರ್ಟಿಸ್ ಕೇಸುನಲ್ಲಿ ಸುಪ್ರೀಂಕೋರ್ಟ ತೀರ್ಪುಕೊಡುತ್ತಾ ಪಾರ್ಲಿಮೆಂಟ್, ರಾಜ್ಯ ಶಾಸನಸಭೆಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸಚ್ಚಾರಿತ್ರ, ಅರ್ಧಾಂಗಿ, ಮಕ್ಕಳು, ಆಸ್ತಿಗಳು, ಸಾಲಗಳು, ವಿದ್ಯಾರ್ಹತೆ ಮೊದಲಾದ ಅಂಶಗಳಿಂದ ಕೂಡಿದ ಪ್ರಮಾಣ ಪತ್ರವನ್ನು ತಪ್ಪದೇ ತೋರಿಸಬೇಕೆಂದು ಹೇಳಿದೆ.

ಚುನಾವಾಣಾ ಸಮಯದಲ್ಲಿ ಅಧಿಕಾರ ಪಕ್ಷ :

ಅಧಿಕಾರದಲ್ಲಿರುವ ಪಕ್ಷಗಳು ಚುನಾವಣೆಯಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಮತದಾರರನ್ನು ಓಲೈಸುವ ಅವಕಾಶ ಇದೆ. ಇದನ್ನು ನಿವಾರಿಸುವುದಕ್ಕೆ ಚುನಾವಣಾ ಆಯೋಗವು ಕೆಲವು ನಿಯಮಗಳನ್ನು ರೂಪಿಸಿದೆ. ಅವು

1. ಅಧಿಕಾರ ದುರ್ವಿನಿಯೋಗಕ್ಕೆ ಪ್ರಯತ್ನಿಸಕೂಡದು. ಪಕ್ಷದ ಕೆಲಸಗಳಿಗೆ ಪಾಲನಾಯಂತ್ರಾಂಗವನ್ನು ಉಪಯೋಗಿಸಕೂಡದು.
2. ಅಧಿಕಾರ ಪ್ರವಾಸಗಳು ಮತ್ತು ಪಕ್ಷದ ಪ್ರಚಾರ ಪ್ರವಾಸಗಳು ಎರಡೂ ಕಲಿಸಿ ಇರಬಾರದು.
3. ಸರಕಾರಿ ವಾಹನಗಳನ್ನು ಪ್ರಚಾರಕ್ಕಾಗಿ ಬಳಸಬಾರದು.

SCERT TELANGANA

4. ಸೆಕ್ಯುರಿಟಿ ವಾಹನಗಳು ಮೂರಕ್ಕಿಂತ ಹೆಚ್ಚಿದ್ದರೆ ಅದನ್ನು ಚುನಾವಣಾ ಖರ್ಚಿನಲ್ಲಿ ತೋರಿಸಬೇಕು.

5. ಚುನಾವಣಾ ನೀತಿ ಸಂಹಿತೆ ಜಾರಿಯಾದ ನಂತರದಿಂದ ಚುನಾವಣಾ ಖರ್ಚು ಅಮಲಿನಲ್ಲಿ ಬರುತ್ತದೆ.

6. ಸರಕಾರಿ ವಸತಿ ಗೃಹಗಳು, ಆಫಿಸುಗಳು ಮೊದಲಾದ ಸರಕಾರಿ ಆಸ್ತಿಗಳು ಯಾವವನ್ನೂ ಕೂಡ ಪಕ್ಷಗಳು, ಪ್ರಚಾರಕ್ಕೆ ಬಳಸಿಕೊಳ್ಳಕೂಡದು.

7. ಪತ್ರಿಕೆಗಳಲ್ಲಿ, ಟಿವಿಯಲ್ಲಿ, ಸರಕಾರಿ ಸಂಕ್ಷೇಮ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಪ್ರಕಟನೆಗಳನ್ನು ಕೊಡಬಾರದು.

8. ಪತ್ರಿಕೆಗಳಲ್ಲಿ, ಟಿವಿಯಲ್ಲಿ ಕೊಡುವ ಪಕ್ಷದ ಪ್ರಕಟನೆಗಳನ್ನು ಮೊದಲಿಗೆ ಚುನಾವಣಾ ಆಯೋಗಕ್ಕೆ ತೋರಿಸಿ ಅನುಮತಿ ತೆಗೆದುಕೊಳ್ಳಬೇಕು.

9. ಚುನಾವಣಾ ನೋಟಿಫಿಕೇಶನ್ ಜಾರಿಯಾದ ನಂತರ ಗ್ರಾಂಟುಗಳು, ಖರ್ಚುಗಳು ಮಾಡಕೂಡದು. ಹೊಸ ಯೋಜನೆಗಳನ್ನು ಪ್ರಕಟಿಸಕೂಡದು. ಶಂಕುಸ್ಥಾಪನೆಗಳನ್ನು ಮಾಡಕೂಡದು.

ಮತದಾರರ ಪ್ರತಿಜ್ಞೆ

ಭಾರತ ದೇಶದ ಪೌರರಾದ ನಾವು, ಪ್ರಜಾಪ್ರಭುತ್ವದ ಮೇಲಿನ ವಿಶ್ವಾಸದೊಂದಿಗೆ, ನಮ್ಮ ದೇಶದ ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ಸ್ವತಂತ್ರ ನಿಷ್ಪಕ್ಷಪಾತ, ಪ್ರಶಾಂತ ಚುನಾವಣೆಗಳ ಹಿರಿಮೆಯನ್ನು ಕಾಪಾಡುತ್ತೇವೆ ಎಂದು ಜಾತಿ, ಮತ, ಕುಲ, ವರ್ಗ, ಭಾಷೆಗಳಂತಹ ಒತ್ತಡಗಳಿಗೆ ಪ್ರಭಾವಿತಗೊಳ್ಳದೆ ಪ್ರತಿಯೊಂದು ಚುನಾವಣೆಗಳಲ್ಲಿ ನಿರ್ಭಯವಾಗಿ ಮತದಾನ ಮಾಡುತ್ತೇವೆ ಎಂದು ಈ ಮೂಲಕ ಪ್ರತಿಜ್ಞೆ ಮಾಡುತ್ತಿದ್ದೇವೆ.

ವಿವಿಧ ಮಟ್ಟದಲ್ಲಿ ಚುನಾವಣೆಗಳ ನಿರ್ವಹಣೆ :

ರಾಜ್ಯಮಟ್ಟದಲ್ಲಿ ಚುನಾವಣಾ ಆಯೋಗಕ್ಕೆ ಸಹಾಯಕಾರಿಯಾಗಿ ರಾಜ್ಯ ಚುನಾವಣಾ ಮುಖ್ಯ ಅಧಿಕಾರಿ (ಸ್ಟೇಟ ಚೀಫ್ ಎಲೆಕ್ಟೋರಲ್ ಆಫಿಸರ್) ಇರುತ್ತಾರೆ. ಕೇಂದ್ರ ಚುನಾವಣಾ ಆಯೋಗ ರಾಜ್ಯ ಸರಕಾರವನ್ನು ಸಂಪರ್ಕಿಸಿ ಇವರನ್ನು ನಿಯಮಿಸುತ್ತದೆ. ಈ ಪದವಿಗೆ ಸಂವಿಧಾನದ ಅಧಿಕಾರ ಇಲ್ಲ. ಸಾಧಾರಣವಾಗಿ ಸೀನಿಯರ್ ಐ.ಎ.ಎಸ್. ಅಧಿಕಾರಿಯನ್ನು ನಿಯಮಿಸುತ್ತಾರೆ. ರಾಜ್ಯದಲ್ಲಿ ನಡೆಯುವ ಪಾರ್ಲಿಮೆಂಟ, ರಾಜ್ಯಶಾಸನ ಸಭೆ ಚುನಾವಣೆಗಳಿಗೆ ಈತನ ಪರಿವೀಕ್ಷಣೆಯಲ್ಲಿ ನಡೆಯುತ್ತದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾ ಕಲೆಕ್ಟರ್ ಮುಖ್ಯ ಚುನಾವಣಾ ಅಧಿಕಾರಿಯಾಗಿ ವ್ಯವಹರಿಸುತ್ತಾರೆ.

ಪ್ರತಿ ಮತ ಕ್ಷೇತ್ರದಲ್ಲಿ ಚುನಾವಣೆಗಳನ್ನು ನಿರ್ವಹಿಸಲು, ಪರಿವೀಕ್ಷಿಸಲು ಒಬ್ಬ ಅಧಿಕಾರಿಯನ್ನು ನಿಯಮಿಸುತ್ತಾರೆ. ಈ ಅಧಿಕಾರಿಯನ್ನು 'ರಿಟರ್ನಿಂಗ್' ಅಧಿಕಾರಿ ಅನ್ನುವರು. ಮತದಾರರ ಪಟ್ಟಿಯಲ್ಲಿ ಹೆಸರು ನಮೂದಿಸಿದ್ದು ಪ್ರತಿನಿಧಿಯಾಗಿ ಆಯ್ಕೆಯಾಗಲು ಬೇಕಾದ ಅರ್ಹತೆಗಳಿದ್ದು, ಆಸಕ್ತಿ ಇದ್ದ ಅಭ್ಯರ್ಥಿಗಳು ತಮ್ಮ 'ನಾಮಪತ್ರವನ್ನು' (ನಾಮಿನೇಶನ್ ಪೇಪರ್) ರಿಟರ್ನಿಂಗ್ ಅಧಿಕಾರಿಗೆ ಸಮರ್ಪಿಸುತ್ತಾರೆ. ಈ ಚುನಾವಣಾ ಪತ್ರಗಳ ಮೇಲೆ ಅವರ ಅಭ್ಯರ್ಥಿಯಾಗಲು ಮತದಾರರ ಪಟ್ಟಿಯಲ್ಲಿ ಹೆಸರಿದ್ದ ವ್ಯಕ್ತಿಗಳು ಪ್ರತಿಪಾದನೆ ಮಾಡುತ್ತಾ, ಬಲಪಡಿಸುತ್ತಾ ಸಹಿಯನ್ನು ಮಾಡಬೇಕು. ಗುರುತುಗಳನ್ನು ಹೊಂದಿರುವ ಪಕ್ಷಗಳಿಂದ ಸ್ಪರ್ಧೆ ಮಾಡುವ ಅಭ್ಯರ್ಥಿಗಳನ್ನು ಯಾ ಪಕ್ಷಗಳ ಅಭ್ಯರ್ಥಿಗಳೆನ್ನುತ್ತಾರೆ. ಉಳಿದವರನ್ನು ಸ್ವತಂತ್ರ ಅಭ್ಯರ್ಥಿಗಳೆನ್ನುತ್ತಾರೆ.

ರಿಟರ್ನಿಂಗ್ ಅಧಿಕಾರಿ ತಮಗೆ ಸಮರ್ಪಿಸಿದ ನಾಮಪತ್ರಗಳನ್ನು ಪರಿಶೀಲಿಸುತ್ತಾರೆ (ಸ್ಕ್ರೂಟನಿ) ಅವುಗಳಲ್ಲಿ ಸರಿಯಾದ ನಾಮಪತ್ರಗಳ ಪಟ್ಟಿಯನ್ನು ಪ್ರಕಟಿಸುತ್ತಾರೆ. ನಿಯಮಿತ ಅವಧಿಯೊಳಗೆ ನಾಮಪತ್ರಗಳನ್ನು ವಾಪಸು ಪಡೆಯಲು ಅವಕಾಶ ಇರುತ್ತದೆ. ಆ ಅವಧಿ ಮುಗಿದ ನಂತರ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುತ್ತಾರೆ. ಇವರಿಗೆ ಆಯಾ ಪಕ್ಷಗಳಿಗೆ ಸಂಬಂಧಿಸಿದ ಗುರುತುಗಳನ್ನು ವಿತರಿ



ಚಿತ್ರ 16.9 ಕಂಟ್ರೋಲ್ ಯುನಿಟ್ ಬ್ಯಾಲೆಟ್ ಯುನಿಟ್

SCERT TELANGANA

ಚಿತ್ರ 16.10 ಪೋಲಿಂಗ್ ಬೂತ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ

ಸುತ್ತಾರೆ. ಸ್ವತಂತ್ರ ಅಭ್ಯರ್ಥಿಗಳಿಗೆ ಕೆಲವು ಪ್ರತ್ಯೇಕ ಗುರುತುಗಳನ್ನು ವಿತರಿಸುತ್ತಾರೆ. ಅವುಗಳನ್ನು ಅನುಸರಿಸಿ ಈ.ವಿ.ಯಂ(Electronic Voting Machine)ಗಳನ್ನು ಸಿದ್ಧಪಡಿಸುತ್ತಾರೆ. ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಿಗೆ ಸಾಮಾನ್ಯವಾಗಿ ಇಂತಹ ನಿಯಮಗಳೇ ಪಾಲಿಸುತ್ತಾರೆ. ಒಂದೇ ನಿಯಮ ನಿಬಂಧನೆಗಳು ಎಲ್ಲರಿಗೂ ವರ್ತಿಸುತ್ತವೆ.

ಓಟಿಂಗ್ ಪ್ರಕ್ರಿಯೆ :

ಜಿಲ್ಲಾ ಚುನಾವಣಾ ಅಧಿಕಾರಿಗಳು ಪೋಲಿಂಗ ಏರ್ಪಾಟುಗಳನ್ನು ವಿಸ್ತೃತವಾಗಿ ಮಾಡುತ್ತಾರೆ. ಪೋಲಿಂಗ್ ಕೇಂದ್ರಗಳಿಗೆ ಅಧಿನವಾಗಿ ಪೋಲಿಂಗ್ ಸ್ಟೇಷನ್‌ಗಳು ಕೆಲಸವನ್ನು ನಿರ್ವಹಿಸಲು 'ಪ್ರಿಸೈಡಿಂಗ್ ಆಫಿಸರ್'ರನ್ನು ನಿಯಮಿಸುತ್ತಾರೆ. ಈತನಿಗೆ ಸಹಾಯಕರಾಗಿ ಇನ್ನೂ ಕೆಲವರನ್ನು 'ಪೋಲಿಂಗ್ ಆಫೀಸರ್ಸ್' ಆಗಿ ನಿಯಮಿಸುತ್ತಾರೆ. ಇನ್ನೂ ಕೆಲವು ಜನರನ್ನು ಪರಿವೀಕ್ಷಣೆಗೆ ಪ್ರತ್ಯೇಕವಾಗಿ ನಿಯಮಿಸುತ್ತಾರೆ. ಪೋಲಿಂಗ್ ದಿವಸ ಮತದಾರರ ಪಟ್ಟಿಯಲ್ಲಿ ಹೆಸರಿರುವ ಮತದಾರರೆಲ್ಲರನ್ನು ಮತ ಚಲಾಯಿಸಲು ಅನುಮತಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಮತದಾರರನ್ನು ಗುರುತಿಸುವುದಕ್ಕಾಗಿ ಪೋಲಿಂಗ್ ಏಜೆಂಟ್‌ಗಳು ಸಹಕರಿಸುತ್ತಾರೆ. ಓಟು ಹಕ್ಕನ್ನು ವಿನಿಯೋಗಿಸಿದ ನಂತರ ಅವರ ಎಡಗೈಯ ತೋರು ಬೆರಳಿಗೆ ಅಳಿಸಿ ಹೋಗದ (ಇಂಡೆಲಿಬುಲ್) ಇಂಕು ಗುರುತನ್ನು ಇಡುತ್ತಾರೆ. ಈ.ವಿ.ಯಂ.ಗಳು ಅಲ್ಲದೆ ಬ್ಯಾಲೆಟ್ ಡಬ್ಬಿಗಳನ್ನು ಉಪಯೋಗಿಸಿದರೆ ಬ್ಯಾಲೆಟ್ ಪತ್ರದಲ್ಲಿ ಸ್ವಸ್ತಿಕ್ (2)ಮುದ್ರೆಹಾಕಿ ನಿರ್ಧರಿತ ವಿಧವಾಗಿ ಮಡಿಚಿ ಬ್ಯಾಲೆಟ್ ಡಬ್ಬಿಯಲ್ಲಿ ಹಾಕುತ್ತಾರೆ.

ಮತದಾನವು ಪೂರ್ತಿ ಆದ ನಂತರ ಈವಿಯಂ/ಬ್ಯಾಲೆಟ್ ಪೆಟ್ಟಿಗೆಗಳನ್ನು ಸೀಲ್‌ಮಾಡಿ ಮತಗಣನಾ ಕೇಂದ್ರಕ್ಕೆ ಕಳಿಸುತ್ತಾರೆ. ಅಲ್ಲಿ ಮತಗಳ ಎಣಿಕೆ ನಡೆಯುತ್ತದೆ. ಅತ್ಯಧಿಕ ಮತಗಳು ಸಾಧಿಸಿದ ಅಭ್ಯರ್ಥಿಯನ್ನು ಗೆಲುವು ಸಾಧಿಸಿದ್ದಾರೆಂದು ಪ್ರಕಟಿಸಲಾಗುತ್ತದೆ. 5 ವರ್ಷಗಳಿಗೊಂದು ಸಾರಿ ರಾಷ್ಟ್ರ ಇಲ್ಲವೇ ರಾಜ್ಯಮಟ್ಟದಲ್ಲಿ ನಡೆಯುವ ಚುನಾವಣೆಗಳನ್ನು 'ಸಾರ್ವತ್ರಿಕ ಚುನಾವಣೆ' ಎನ್ನುವರು. ಒಂದು ಇಲ್ಲವೇ ಕೆಲವು ಖಾಲಿ ಇರುವ ಸ್ಥಾನಗಳಿಗೆ ನಡೆಯುವ ಚುನಾವಣೆಗಳಿಗೆ 'ಉಪಚುನಾವಣೆ' ಎನ್ನುವರು. 5 ವರ್ಷ ಪೂರ್ತಿ ಸಮಯ ಆಗುವ ಮುಂದೇ ಶಾಸನ ಸಭೆಗಳಿಗೆ ಇಲ್ಲವೇ ಪಾರ್ಲಿಮೆಂಟಗೆ ನಡೆಯುವ ಚುನಾವಣೆಗಳನ್ನು ಮಧ್ಯಂತರ ಚುನಾವಣೆಗಳೆನ್ನುವರು.

- ಮಧ್ಯಂತರ ಚುನಾವಣೆಗಳು ಯಾವ ಪರಿಸ್ಥಿತಿಯಲ್ಲಿ ಬರುವ ಅವಕಾಶ ಇದೆ ಚರ್ಚಿಸಿರಿ.

ತಿರಸ್ಕೃತವಾದ ಓಟು ನೋಟಾ (NOTA none of the Above) :

2013 ರಲ್ಲಿ ಪೀಪಲ್ಸ ಯುನಿಯನ್ ಆಫ್ ಸಿವಿಲ್‌ಲಿಬರ್ಟಿಸ್ ಕೇಸ್‌ನಲ್ಲಿ ಸುಪ್ರೀಂಕೋರ್ಟ ಕೊಟ್ಟ ತೀರ್ಪಿನ ಆಧಾರವಾಗಿ ಇದನ್ನು ಪ್ರವೇಶ ಪಡಿಸಿದ್ದಾರೆ. ನೋಟಾ ಎನ್ನುವುದು ವ್ಯಕ್ತಿಯ ಭಾವ ಪ್ರಕಟನೆಯ ಸ್ವತಂತ್ರದ ಭಾಗವೆಂದು ಸುಪ್ರಿಂಕೋರ್ಟ ವ್ಯಾಖ್ಯಾನಿಸಿದೆ. ನೋಟಾ ಎನ್ನುವುದನ್ನು ಮೊದಲ ಬಾರಿಗೆ ದೆಹಲಿ, ಮಿಜೋರಾಂ, ರಾಜಸ್ಥಾನ, ಛತ್ತಿಸಗಡ, ಮಧ್ಯಪ್ರದೇಶ ಶಾಸನ ಸಭೆಯ ಚುನಾವಣೆಯಲ್ಲಿ (2013ರಲ್ಲಿ) ಪ್ರವೇಶ ಪಡಿಸಿದರು. ನೋಟಾ ಎನ್ನುವುದು ಕೇವಲ ಮತದಾರನಿಗಿರುವ ವಯುಕ್ತಿಕ ಮಾತ್ರವೆ. ಅಭ್ಯರ್ಥಿ ಗೆಲುವು

ಚಿತ್ರ 16.11 ನೋಟಾ ಗುರುತು

SCERT TELANGANA

ಸೋಲುಗಳ ಮೇಲೆ ಪ್ರಭಾವ ಬೀರುವುದಿಲ್ಲ. ಒಂದುವೇಳೆ ನೋಟಾಕ್ಕೆ ಹೆಚ್ಚಿನ ಓಟು ಬಂದರೂ ಕೂಡ, ನಂತರದ ಸ್ಥಾನದಲ್ಲಿರುವ ವ್ಯಕ್ತಿ ಗೆದ್ದಿದ್ದಾನೆಂದು ಪ್ರಕಟಿಸುತ್ತಾರೆ.

ಚುನಾವಣೆಯಲ್ಲಿ ಸುಧಾರಣೆಗಳು ಅತ್ಯವಶ್ಯಕ :

ಪ್ರಪಂಚದಲ್ಲಿ ಅತ್ಯಧಿಕ ಜನಸಂಖ್ಯೆ ಹೊಂದಿದ ದೇಶಗಳಲ್ಲಿ ನಮ್ಮದು ಎರಡನೆ ಸ್ಥಾನದಲ್ಲಿದೆ. ಇಲ್ಲಿ ಸಾರ್ವತ್ರಿಕ ಚುನಾವಣೆಗಳ ನಿರ್ವಹಣೆ ಒಂದು ದೊಡ್ಡಕಾರ್ಯಕ್ರಮ. ಪಾರದರ್ಶಕ ಪಾಲನ ಕೊಡುತ್ತೇವೆಂದು ಸುಧಾರಿತ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಸಾಧಿಸುತ್ತೇವೆ ಎಂದು ಬಡತನ ನಿರ್ಮೂಲನೆಗೆ ಮತ್ತಷ್ಟು ಪ್ರಯತ್ನಿಸುತ್ತೇವೆಂದು ಪ್ರತಿ ಪಕ್ಷಗಳು ಪ್ರಜೆಗಳಿಗೆ ವಾಗ್ದಾನ ಮಾಡುತ್ತವೆ. ಆದರೆ ಕೆಲವು ಭ್ರಷ್ಟರಾದ ರಾಜಕೀಯ ನಾಯಕರು, ಅಪರಾಧಿಗಳು, ಓಟಿಗಾಗಿ ಕುಲ, ಮತಗಳನ್ನು ಉಪಯೋಗಿಸಿ ಧನ ಬಲದಿಂದ ಓಟನ್ನು ಖರೀದಿಸುತ್ತಿದ್ದಾರೆ. ಈ ಧೋರಣೆಗಳು ಗಟ್ಟಿಯಾದ ಪ್ರಜಾಪ್ರಭುತ್ವಿಕ ಪ್ರಕ್ರಿಯೆಗೆ ಅಪಹಾಸ್ಯ ಮಾಡುತ್ತಿವೆ.

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಕೆಲವು ಸಮಸ್ಯೆಗಳು ಇದ್ದಾಗ್ಯೂ ಕೆಲವರು ನೀತಿವಂತರಾದ, ಸೇವಾಭಾವ ದಿಂದ ಕೂಡಿದ ರಾಜಕೀಯ ನಾಯಕರ ಉದಾಹರಣೆಗಳು ನಮ್ಮ ಪ್ರಜಾಪ್ರಭುತ್ವವನ್ನು ಗರ್ವಪಡುವಂತೆ ಮಾಡಿವೆ.

- ಸುಧಾರಿತ ಪ್ರಜಾಪ್ರಭುತ್ವಕ್ಕಾಗಿ ನೀತಿಯಿಂದ ಕೂಡಿದ ಸರಕಾರಕ್ಕಾಗಿ ನೀವು ಎಂತಹ ಸೂಚನೆಗಳನ್ನು ಮಾಡಬಲ್ಲಿರಿ ?
- ಚುನಾವಣೆಯಲ್ಲಿ ಮೀಸಲಾತಿಯನ್ನು ಒಂದು ಅವಧಿಗಿಂತ ಹೆಚ್ಚು ಒಬ್ಬನ ವ್ಯಕ್ತಿ ಹೊಂದುತ್ತಿದ್ದರೆ, ಅದೇ ಸಾಮಾಜಿಕ ವರ್ಗಕ್ಕೆ ಹೊಂದಿದ ಉಳಿದವರಿಗೆ ಹೇಗೆ ಅವಕಾಶ ಸಿಗುತ್ತದೆ ? ನಿಮ್ಮ ಅಭಿಪ್ರಾಯವನ್ನು ಚರ್ಚಿಸಿರಿ.
- ಚುನಾವಣೆಯಲ್ಲಿ ಹಣವನ್ನು ವಿಪರೀತವಾಗಿ ಖರ್ಚು ಮಾಡಿ ಗೆದ್ದ ಅಭ್ಯರ್ಥಿಯ ಆಲೋಚನಾ ವಿಧಾನ ಹೇಗೆ ಇರುತ್ತದೆ ? ಹಣವನ್ನು ತೆಗೆದುಕೊಂಡು ಓಟು ಹಾಕಿದರೆ, ಗೆದ್ದ ಪ್ರಜಾಪ್ರತಿನಿಧಿಯನ್ನು ತಮ್ಮ ಸಮಸ್ಯೆಗಳ ಪರಿಷ್ಕಾರಕ್ಕಾಗಿ ಕೇಳುವ ನೈತಿಕ ಹಕ್ಕು ಪ್ರಜೆಗಳಿಗೆ ಇರುತ್ತದೆಯೆ ? ಚರ್ಚಿಸಿರಿ.

ಪೋಸ್ಟಲ್ ಬ್ಯಾಲೆಟ್ :

ಚುನಾವಣೆಯ ಕಾರ್ಯಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದ್ದಿ, ತಮ್ಮ ಸ್ವಂತ ಪ್ರದೇಶದಲ್ಲಿ ಅಲ್ಲದೇ ಎಲ್ಲೆಲ್ಲೋ ಕಾರ್ಯನಿರ್ವಹಿಸುತ್ತಿರುತ್ತಾರೆ. ಆದುದರಿಂದ ಅವರು ತಮ್ಮ ಓಟು ಹಕ್ಕನ್ನು ಉಪಯೋಗಿಸಿಕೊಳ್ಳ ಬೇಕೆಂದರೆ ಅವರಿಗೆ ಅನುಕೂಲವಾಗದು. ಇದನ್ನು ನಿವಾರಿಸಲು ಚುನಾವಣಾ ಆಯೋಗವು 'ಪೋಸ್ಟಲ್ ಬ್ಯಾಲಟ್' ಸೌಕರ್ಯವನ್ನು ಕಲ್ಪಿಸಿದೆ. 'ಪೋಸ್ಟಲ್ ಬ್ಯಾಲೆಟ್' ಎಂದರೆ ಚುನಾವಣಾ ಕಾರ್ಯದಲ್ಲಿ ತೊಡಗಿ ಕೊಂಡಿರುವ ಸಿಬ್ಬಂದ್ದಿ ಚುನಾವಣಾ ದಿನಾಂಕಕ್ಕಿಂತ ಮುಂದೆ ತಮ್ಮ ಓಟು ಹಕ್ಕನ್ನು ಬ್ಯಾಲೆಟ್ ಪೇಪರ ಮುಖಾಂತರ ವಿನಿಯೋಗಿಸಿಕೊಳ್ಳುತ್ತಾರೆ. ಇವುಗಳನ್ನು ಸಂಬಂಧಿತ ಅಧಿಕಾರಿಗಳು ಅವರವರ ಸ್ವಂತ ಪೋಲಿಂಗ ಸ್ಟೇಷನ್‌ಗಳಿಗೆ ಪ್ರತ್ಯೇಕ ಏರ್ಪಾಟಿನ ಮುಖಾಂತರ ಕಳಿಸುತ್ತಾರೆ.

ಆ ಎರಡು ಅಸೆಂಬ್ಲಿ ಸ್ಥಾನಗಳ ಚುನಾವಣಾ ನೋಟಿಫಿಕೇಶನ್ ರದ್ದು

ನವದೆಹಲಿ : ರಾಷ್ಟ್ರೀಯ ಚುನಾವಣಾ ಆಯೋಗದ ಚರಿತ್ರೆಯಲ್ಲಿ ಮೊದಲಬಾರಿಗೆ ತಾನು ಬಿಡುಗಡೆ ಗೊಳಿಸಿದ ಚುನಾವಣಾ ನೋಟಿಫಿಕೇಶನ್ ಅನ್ನು ತಾನೇ ರದ್ದುಗೊಳಿಸಿದೆ. ಇದರಂತೆ ತಮಿಳನಾಡು ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಅರವ ಕುರಿಚಿ, ತಂಜಾವೂರು ಅಸೆಂಬ್ಲಿ ಮತಕ್ಷೇತ್ರದಲ್ಲಿ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತದಾರರಿಗೆ ವಿಪರೀತವಾಗಿ ಹಣವನ್ನು ಹಂಚುತ್ತಿದ್ದಾರೆಂಬ ಆರೋಪಣೆಯಿಂದ ಚುನಾವಣಾ ಆಯೋಗವು 2016 ಮೇ 16 ರಂದು ಜರುಗಬೇಕಿದ್ದ ಉಪಚುನಾವಣೆಗಳನ್ನು ಮುಂದೂಡಿತು.

SCERT TELANGANA

ಮುಖ್ಯ ಪದಗಳು

ಮತ, ಚುನಾವಣಾ ನೀತಿ ಸಂಹಿತೆ, ಈ.ವಿ.ಯಂ, ಮತಕ್ಷೇತ್ರ, ನೋಟಾ

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ

1. ಮತದಾನದ ಹಕ್ಕು ಪ್ರಜಾಪ್ರಭುತ್ವದಲ್ಲಿ ಮುಖ್ಯಪಾತ್ರ ವಹಿಸುತ್ತದೆ ಎಂದು ಹೇಗೆ ಹೇಳುವಿರಿ. (AS_1)
2. ಭಾರತ ದೇಶದಲ್ಲಿ ಚುನಾವಣಾ ಆಯೋಗದ ಪಾತ್ರವನ್ನು ಅಂದಾಜಿಸಿರಿ. (AS_1)
3. ಚುನಾವಣಾ ಆಯೋಗದ ಕಾರ್ಯಗಳನ್ನು ವಿವರಿಸಿರಿ. (AS_1)
4. ಚುನಾವಣಾ ನೀತಿ ಸಂಹಿತೆ ಪ್ರಜಾಪ್ರಭುತ್ವದಲ್ಲಿ ಏಕೆ ಅವಸರವೆಂದು ಭಾವಿಸುತ್ತೀರಾ ? (AS_1)
5. ಮತಚಲಾಯಿಸುವುದರಿಂದ ನಮ್ಮ ಜವಾಬ್ದಾರಿ ಮುಗಿಯದು, ಪ್ರಜಾಪ್ರಭುತ್ವವನ್ನು ಪರಿರಕ್ಷಿಸುವುದಕ್ಕಾಗಿ ನಾವು ನಿರಂತರವಾಗಿ ಜಾಗರೂಕತೆಯಿಂದ ಇರಬೇಕೆಂಬ ಮಾತಿನೊಂದಿಗೆ ಏಕೀಭವಿಸುವಂತೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. (AS_2)
6. ನಿಮ್ಮ ಪ್ರದೇಶದಲ್ಲಿ ನಡೆದ ಚುನಾವಣೆಯಲ್ಲಿ ಅನುಚಿತ ವರ್ತನೆಗಳು ಏನಾದರೂ ಗಮನಿಸಿದ್ದೀರಾ ? ನಿಯಮಾವಳಿಯಲ್ಲಿನ ಯಾವ ನಿಯಮವನ್ನು ಉಲ್ಲಂಘಿಸಿದ್ದಾರೆ ? (AS_4)
7. ಚುನಾವಣೆಗಳಲ್ಲಿ ಸುಧಾರಣೆಗಳು ಅತ್ಯವಶ್ಯಕ ಎನ್ನುವ ಗದ್ಯಾಂಶವನ್ನು ಓದಿ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ. (AS_2)
8. ಚುನಾವಣೆಗಳಲ್ಲಿ ಮತದ ಹಕ್ಕಿನ ಪ್ರಾಮುಖ್ಯತೆಯ ಮೇಲೆ ಪ್ರಜೆಗಳನ್ನು ಚೈತನ್ಯವಂತರಾಗಿ ಮಾಡಲು ಒಂದು ಕರ ಪತ್ರವನ್ನು ತಯಾರಿಸಿರಿ. (AS_6)

ಪ್ರಾಜೆಕ್ಟ್ :-

- ದೇಶಕ್ಕಾಗಿ ಜೀವನವನ್ನು ತ್ಯಾಗಮಾಡಿದ ಆದರ್ಶಪ್ರಾಯರಾದ ರಾಜಕೀಯ ನಾಯಕರ ಕುರಿತು ಗೊತ್ತೆ ? ಅವರ ಜೀವನದಿಂದ ನಾವು ಏನನ್ನು ಕಲಿತುಕೊಳ್ಳಬಹುದು.
- ಈ ಮಧ್ಯಕಾಲದಲ್ಲಿ ನಡೆದ ಲೋಕಸಭೆ ಚುನಾವಣೆ ಫಲಿತಾಂಶಗಳನ್ನು ಶೇಕರಿಸಿ ಪಟ್ಟಿಯಾಗಿ ರಚಿಸಿ ವಿಶ್ಲೇಷಿಸಿರಿ.

SCERT TELANGANA

ಅಧ್ಯಾಯ
17

ಸ್ವತಂತ್ರ ಭಾರತದೇಶ (ಮೊದಲ ಮೂವತ್ತು ವರ್ಷಗಳು – 1947 – 1977)

1950, ಜನವರಿ 26ರಂದು ನಾವು ವೈರುದ್ಯಗಳೊಂದಿಗೆ ಕೂಡಿದ ಜೀವನದಲ್ಲಿ ಪ್ರವೇಶಿಸಿದ್ದೇವೆ. ರಾಜಕೀಯದಲ್ಲಿ ಸಮಾನತೆ ಇರುತ್ತದೆ, ಆದರೆ ಸಾಮಾಜಿಕ, ಆರ್ಥಿಕ ಅಂಶಗಳಲ್ಲಿ ಅಸಮಾನತ್ವ ಇರುತ್ತದೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿ - ಒಂದು ಮತ, ಒಂದು ಮತ - ಒಂದೇ ಬೆಲೆ ಎಂಬ ಸೂತ್ರವನ್ನು ಗುರುತಿಸಲಿದ್ದೇವೆ. ಆದರೆ ಸಾಮಾಜಿಕ, ಆರ್ಥಿಕ ಜೀವನದಲ್ಲಿ ನಮಗಿರುವ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಿಂದ ಒಬ್ಬ ವ್ಯಕ್ತಿ - ಒಂದು ಬೆಲೆ ಎನ್ನುವ ಸೂತ್ರವನ್ನು ತಿರಸ್ಕರಿಸುತ್ತಾಇರುತ್ತೇವೆ. ವೈರುದ್ಯಗಳಿಂದ ಕೂಡಿದ ಈ ಜೀವನವನ್ನು ಎಷ್ಟು ಕಾಲ ಭರಿಸೋಣ? ಎಷ್ಟು ಕಾಲ ನಮ್ಮ ಸಾಮಾಜಿಕ, ಆರ್ಥಿಕ ಜೀವನಗಳೊಂದಿಗೆ ಸಮಾನತ್ವವನ್ನು ಸಾಧಿಸದಂತೆ ಇರೋಣ? ಈ ರೀತಿ ಹೆಚ್ಚಿನ ಸಮಯ ಮುಂದುವರೆದರೆ ನಮ್ಮರಾಜಕೀಯ ಪ್ರಜಾಪ್ರಭುತ್ವವೇ ವಿಪತ್ತಿಗೆ ಒಳಗಾಗುತ್ತದೆ. ಈ ವೈರುದ್ಯವನ್ನು ಸಾಧ್ಯವಾದಷ್ಟು ಬೇಗನೆ ಪರಿಷ್ಕರಿಸಬೇಕು, ಇಲ್ಲದಿದ್ದರೆ ಅಸಮಾನತೆ ಯೊಂದಿಗೆ ನರಳುತ್ತಿರುವವರು ಈ ಸಂವಿಧಾನ ಸಭೆಯು ಕಷ್ಟ ಪಟ್ಟು ನಿರ್ಮಿಸಿದ ರಾಜಕೀಯ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಕೆಳಗೆ ಬೀಳಿಸುವರು.

– ಬಿ.ಆರ್.ಅಂಬೇಡ್ಕರ್

15ನೇ ಅಧ್ಯಾಯದಲ್ಲಿ ಭಾರತ ಸಂವಿಧಾನವನ್ನು ಹೇಗೆ ರೂಪಿಸಿರುವರೋ ನೋಡಿದ್ದೇವೆ. ಏಕಕಾಲಕ್ಕೆ ಅನೇಕ ಗುರಿಗಳನ್ನು ಸಾಧಿಸುವುದಕ್ಕೆ ಸಂವಿಧಾನ ಕೃಷಿ ಮಾಡಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಸ್ಥಾಪಿಸುವುದು, ದೇಶವನ್ನು ಐಕ್ಯಗೊಳಿಸಿ ಒಂದೇ ರಾಜಕೀಯ ವಿಧಾನವನ್ನು ರೂಪಿಸುವುದು, (ಧೃಢವಾದ) ಭಾರಿ ಸಾಮಾಜಿಕ ಆರ್ಥಿಕ ಬದಲಾವಣೆಗಳನ್ನು ತರುವುದು. ಎರಡು ಶತಮಾನಗಳವರೆಗೆ ವಿದೇಶಿ ಶಕ್ತಿಗಳೊಂದಿಗೆ ಆಳಲ್ಪಟ್ಟ ಪ್ರಜೆಗಳಿಗೆ ಕಡಿಮೆ ಸಮಯದಲ್ಲಿ ದೇಶದ ಗುರಿಗಳನ್ನು ರೂಪಿಸಿ, ಅವುಗಳನ್ನು ಸಾಧಿಸುವುದಕ್ಕೆ ವ್ಯವಸ್ಥಾಗತ ವಿಧಾನಗಳನ್ನು ಏರ್ಪಡಿಸುವುದು ಸಣ್ಣ ವಿಷಯವೇನಲ್ಲ.

ಭಾರತ ದೇಶ ಸ್ವಾತಂತ್ರ್ಯದ ನಂತರ ಚರಿತ್ರೆಯಲ್ಲಿ ಮೊದಲ ವರ್ಷಗಳಲ್ಲಿ ನಿರ್ಣಯಾತ್ಮಕ ಪಾತ್ರವನ್ನು ಪೋಷಿಸಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡುವುದು, ಸಾಮಾಜಿಕ ಆರ್ಥಿಕ ಬದಲಾವಣೆಗಳನ್ನು ತೆಗೆದುಕೊಂಡು ಬರುವುದು. ಪ್ರಜಾಪ್ರಭುತ್ವದ ವ್ಯವಸ್ಥೆಯು ಕೆಲಸ ಮಾಡುವಂತೆ ನೋಡುವುದು ದೇಶದ ನಾಯಕತ್ವದ ಮುಂದಿರುವ ಮುಖ್ಯವಾದ ಸವಾಲುಗಳು. ಈ ಸಮಸ್ಯೆಗಳಲ್ಲಿ ಒಂದಕ್ಕೊಂದು ಸಂಬಂಧವಿದ್ದು ಸಮತೋಲನೆಗೆ ಪೆಟ್ಟು ಬೀಳದಂತೆ ಜಾಗ್ರತೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಪ್ರಜಾಪ್ರಭುತ್ವವನ್ನು ಪಣವಾಗಿಟ್ಟು ಅಭಿವೃದ್ಧಿ ಉದ್ದೇಶಗಳನ್ನು, ದೇಶ ಐಕ್ಯತೆ, ಸಮಗ್ರತೆಗಳನ್ನು ಸಾಧಿಸುವುದಕ್ಕಲ್ಲ. ಈ ಅಧ್ಯಾಯದಲ್ಲಿ ಒಂದಕ್ಕೊಂದು ಬೆರೆತಿರುವ ಈ ಮೂರು ಅಂಶಗಳೊಂದಿಗೆ ಕೂಡಿಕೊಂಡು ಸಂವಿಧಾನವು, ಪ್ರಜಾಪ್ರಭುತ್ವವೂ ಹೇಗೆ ಕೆಲಸ ಮಾಡಿವೆಯೋ, ದೇಶ ನಿರ್ಮಾಣದಲ್ಲಿ ಮುಖ್ಯವಾದ ಅಂಶಗಳನ್ನೂ ಭಾರತ ದೇಶಹೇಗೆ ಎದುರಿಸುತ್ತಿದೆಯೋ ನೋಡೋಣ.

- ಸಾಮಾಜಿಕ ಸಮಾನತ್ವವನ್ನು ಸಾದಿಸಿದ್ದೀರೆಂದು ನೀವು ಅಂದುಕೊಳ್ಳುತ್ತಿದ್ದೀರಾ? ಸಾಮಾಜಿಕ ಸಮಾನತ್ವವನ್ನು, ಅಸಮಾನತ್ವವನ್ನು ಸೂಚಿಸುವ ನಿಮಗೆ ಎದುರಾದ ಉದಾಹರಣೆಗಳನ್ನು ತಿಳಿಸಿರಿ.

SCERT TELANGANA

ಮೊದಲ ಸಾರ್ವತ್ರಿಕ ಚುನಾವಣೆಗಳು :

ಹೊಸ ಸಂವಿಧಾನದ ಕೆಳಗೆ ನಿರ್ವಹಿಸುತ್ತಿರುವ ಮೊದಲನೇ ಸಾರ್ವತ್ರಿಕ ಚುನಾವಣೆಗಳು ಭಾರತೀಯ ಪ್ರಜಾಪ್ರಭುತ್ವಕ್ಕೆ ಎಷ್ಟೋ ಮುಖ್ಯವಾದುದು. ಬ್ರಿಟೀಷ್ ಆಡಳಿತದಿಂದ ಸ್ವಾತಂತ್ರವು ಬಂದ ನಂತರ ಪ್ರಜಾಪ್ರಭುತ್ವದ ಮಾರ್ಗವನ್ನು ಅನುಸರಿಸುವುದಕ್ಕೆ ಭಾರತ ದೇಶವು ಕಟ್ಟುಬಿದ್ದಿರುವುದನ್ನು ಇವು ಸೂಚಿಸುತ್ತವೆ. ಪಾಶ್ಚಾತ್ಯ ದೇಶಗಳಲ್ಲಿನ ಹಾಗೆ ಮೊದಲಿಗೆ ಆಸ್ತಿ ಇರುವವರಿಗೆ ನಂತರ ಇತರ ಸಾಮಜಿಕ ವರ್ಗಗಳಿಗೆ ಮತದಾನದ ಹಕ್ಕನ್ನು ವಿವಿಧ ಹಂತದಲ್ಲಿ ವಿಸ್ತರಿಸುವಂತೆ ಮಾಡದಂತೆ ಭಾರತ ದೇಶದಲ್ಲಿ ವಯಸ್ಕರೆಲ್ಲರಿಗೂ ಒಂದೇ ಸಲ ಮತದಾನದ ಹಕ್ಕು ಕಲ್ಪಿಸಿದ್ದಾರೆ. ಉದಾಹರಣೆಗೆ ಸ್ವಿಟ್ಜರ್ ಲ್ಯಾಂಡ್‌ನಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು 1971ರಲ್ಲಿ ಸಹ ಲಭಿಸಲಿಲ್ಲ.



ಚಿತ್ರ 17.1 : ಮೊದಲು ಮತ

ಸಾಮಾಜಿಕ ಕಾರಣವಾಗಿ ಸಹ ಮೊದಲ ಚುನಾವಣೆಗಳು ಕಷ್ಟವಾದವು. ಜನಸಂಖ್ಯೆಯಲ್ಲಿ ಹೆಚ್ಚಿನ ಭಾಗಕ್ಕೆ ಓದುವುದು, ಬರೆಯುವುದು ಬರುವುದಿಲ್ಲ. ಅವರು ತಮ್ಮ ಆಯ್ಕೆಯನ್ನು ಹೇಗೆ ತಿಳಿಯಪಡಿಸುತ್ತಾರೆ? ದೇಶದಲ್ಲಿ ಕೆಲವು ಪ್ರದೇಶಗಳಲ್ಲಿ ಮಹಿಳೆಯರು ಅವರ ತಂದೆ ಅಥವಾ ಗಂಡನ ಮುಖಾಂತರ ಗುರುತಿಸಲ್ಪಡುತ್ತಿದ್ದರು. ಅವರಿಗೆ ಬೇರೆ ಪ್ರತ್ಯೇಕವಾದ ಗುರುತು ಇದ್ದಿಲ್ಲ. ಮಹಿಳೆಯರಿಗೆ ಸಮಾನ ಹಕ್ಕುಗಳಿದ್ದು ದೇಶವನ್ನು ಮತ್ತಷ್ಟು ಸಾಮಾಜಿಕ ಸಮಾನತ್ವದ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಇದು ಬದಲಾಗಬೇಕಾಗಿದೆ. ಮತದಾರರ ಪಟ್ಟಿಯನ್ನು ಹೇಗೆ ತಯಾರಿಸಬೇಕು? ದೇಶದಾದ್ಯಂತ ಚುನಾವಣೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಕೈಗೊಳ್ಳುವುದಕ್ಕೆ ಚುನಾವಣಾ ಆಯೋಗವನ್ನು ಏರ್ಪಾಟು ಮಾಡಿದರು.

ನಿರಕ್ಷರತೆ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳನ್ನು ಸೂಚಿಸುವಂತೆ ಪ್ರತಿದಿನದ ಜೀವನದಿಂದ ಕೆಲವು ಗುರುತುಗಳನ್ನು ಉಪಯೋಗಿಸುವುದು ಎಂಬ ಹೊಸ ಆಲೋಚನೆಯೊಂದಿಗೆ ಮುಂದುವರೆದಿದೆ, ಈ ಸೃಜನಾತ್ಮಕ, ಹೊಸ ಪ್ರಯೋಗದ ಕಾರಣವಾಗಿ ಬಹಳ ಕಾಲ ವಿವರಣೆಗಳ ಅವಸರವಿಲ್ಲದಂತೆ ಚಿಹ್ನೆಯನ್ನು ಗುರ್ತಿಸಿದರೆ ಸರಿಹೋಗುತ್ತದೆ. ಇದೇ ವಿಧಾನವು ಇಂದಿಗೂ ಮುಂದುವರೆದಿದೆ. ಇದನ್ನು ಮತ್ತಷ್ಟು ಸುಲಭತರಗೊಳಿಸುವುದಕ್ಕೆ ಮೊದಲನೇ ಚುನಾವಣೆಗಳಲ್ಲಿ ಪ್ರತಿ ಅಭ್ಯರ್ಥಿಗೆ ಹೊರಗಿನ ಕಡೆಗೆ ಅವರ ಗುರ್ತು ಅಂಟಿಸಿದ ಬೇರೆ ಬೇರೆ ಬ್ಯಾಲೆಟ್ ಪೆಟ್ಟಿಗೆಗಳು ವಿಭಾಗಿಸಿದರು. ತಾವು ಆರಿಸಿಕೊಂಡ ಅಭ್ಯರ್ಥಿ ಬ್ಯಾಲೆಟ್ ಪೆಟ್ಟಿಗೆಯಲ್ಲಿ ಮತದಾರನು ತನ್ನ ಮತವನ್ನು ಹಾಕಿದರೆ ಸರಿಹೋಗುತ್ತದೆ. ಚುನಾವಣೆಗಳಿಗೆ ತಯಾರಾಗುತ್ತಿರುವ ಕ್ರಮದಲ್ಲಿ ಮತ ಹಾಕುವಂತೆ ಪ್ರಜೆಗಳನ್ನು ಪ್ರೋತ್ಸಾಹಿಸುವುದಕ್ಕೆ ಪ್ರಚಾರ ಮಾಡಿದರು.

- ಚುನಾವಣೆಗಳನ್ನು ಪ್ರತ್ಯೇಕಿಸಿ ತಮ್ಮ ಮತದಾನದ ಹಕ್ಕನ್ನು ವಿನಿಯೋಗಿಸಿಕೊಳ್ಳುವುದನ್ನು ನಿರಕ್ಷರತೆ ಹೇಗೆ ಪ್ರಭಾವಿತಗೊಳಿಸುತ್ತದೆ? ಈ ಸಮಸ್ಯೆಯನ್ನು ಹೇಗೆ ಪರಿಷ್ಕರಿಸಬಹುದು?
- ಪ್ರಜೆಗಳೆಲ್ಲರಿಗೆ ಮತದಾನದ ಹಕ್ಕು ಇಲ್ಲದಿದ್ದರೆ ನಮ್ಮದು ಪ್ರಜಾಪ್ರಭುತ್ವ ದೇಶವೆಂದು ಹೇಳಿಕೊಳ್ಳುವುದಕ್ಕೆ ಅವಕಾಶವಿರುತ್ತದೆಯೇ?
- ಮಹಿಳೆಯರಲ್ಲಿ ಅಕ್ಷರಾಸ್ಯತೆ ಕಡಿಮೆಯಾಗಿರುವ ಸಂದರ್ಭದಲ್ಲಿ ಅವರಿಗೆ ಮತದಾನದ ಹಕ್ಕು ಕಲ್ಪಿಸದಂತೆ ಇದ್ದರೆ ಅದು ನಮ್ಮ ವಿಧಾನಗಳನ್ನು ಹೇಗೆ ಪ್ರಭಾವಿತಗೊಳಿಸುತ್ತಿತ್ತು ?
- ಕ್ರಮ ತಪ್ಪದಂತೆ ಚುನಾವಣೆಗಳನ್ನು ನಿರ್ವಹಿಸುವುದು ಎಂಬುದು ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಕ್ಕೆ ಸ್ಪಷ್ಟವಾದ ಸಂಕೇತವು. ಈ ವ್ಯಾಖ್ಯಾನದೊಂದಿಗೆ ನೀವು ಏಕೀಭವಿಸುತ್ತೀರಾ? ಕಾರಣಗಳು ತಿಳಿಸಿರಿ.

SCERT TELANGANA

ಚುನಾವಣೆಗಳ ವಿವರಗಳು

ಬುರುಕೆ ವ್ಯವಸ್ಥೆಯನ್ನು ಖಚ್ಚಿತವಾಗಿ ಆಚರಿಸುವ ಜಿಲ್ಲೆಗಳಲ್ಲಿ ಕೇವಲ ಮಹಿಳಾ ಅಧಿಕಾರಿಗಳೊಂದಿಗೆ ಪ್ರತ್ಯೇಕವಾದ ಮಹಿಳೆ ಪೋಲಿಂಗ್ ಕೇಂದ್ರಗಳನ್ನು ಏರ್ಪಾಟು ಮಾಡಿದರು.

ಅಜ್ಮೀರ್‌ನಲ್ಲಿ ಒಬ್ಬ ರಾಜ್‌ಪೂತ್ ಮಹಿಳೆ ಪೂರ್ತಿಯಾಗಿ ಮುಚ್ಚಿಕೊಂಡ ರಥದಲ್ಲಿ ಮತಘಟ್ಟೆಗೆ (ಪೋಲಿಂಗ್ ಕೇಂದ್ರ) ಬಂದಿದ್ದಾಳೆ. ಆಕೆಯ ಶರೀರವೆಲ್ಲಾ ವೆಲ್ವೆಟ್ ವಸ್ತ್ರದಿಂದ ಸುತ್ತಿದೆ. ಆಕೆಯ ಮತ ಹಾಕದಂತೆ ಎಡಗೈ ತೋರಿಸುವ ಬೆರಳಿನ ಮೇಲೆ ಮಸಿಯ ಗುರುತನ್ನು ಹಾಕಿಸಿಕೊಳ್ಳುವುದಕ್ಕೆ ಚಾಚಿದ ಭಾಗವು ವಿನಃ ಪ್ರಜೆಗಳಿಗೆ ಆಕೆಯ ಶರೀರದಲ್ಲಿನ ಇನ್ನೂ ಯಾವ ಭಾಗವನ್ನು ಪ್ರದರ್ಶಿಸಲಿಲ್ಲ.

ಕೆಲವು ಗ್ರಾಮಗಳು ಎಲ್ಲಾ ಕಲೆತು ಮತಹಾಕುತ್ತೇವೆ. ಅಸ್ಸಾಂನಿಂದ ಬಂದ ವರದಿಯ ಪ್ರಕಾರ ಒಂದು ಬುಡಕಟ್ಟು ಗ್ರಾಮದ ಪ್ರಜೆಗಳು ಓಟಿಂಗ್ ನಡೆಯುವುದಕ್ಕೆ ಒಂದು ದಿನದ ಮೊದಲು ಪ್ರಯಾಣ ಮಾಡಿ ಅಲ್ಲಿಗೆ ಸೇರಿಕೊಳ್ಳುತ್ತಾರೆ. ಆ ರಾತ್ರಿಯಲ್ಲಾ ಸುತ್ತಲೂ ಬೆಂಕಿ ಹಾಕಿಕೊಂಡು ಹಾಡುಗಳು ಹಾಡುತ್ತಾ, ಆಟಗಳನ್ನು ಆಡುತ್ತಾ ಕಳೆಯುತ್ತಾರೆ. ಸೂರ್ಯೋದಯ ಆಗುವವರೆಗೂ ಹೀಗೆ ಕಳೆದಿದ್ದಾರೆ. ಆ ನಂತರ ಪೋಲಿಂಗ್ ಕೇಂದ್ರಗಳಿಗೆ ಒಂದೇ ಸಾಲಿನಲ್ಲಿ ಕ್ರಮಶಿಕ್ಷಣದಿಂದ ಕವಾಯಿತ್ತು ಮಾಡುತ್ತಾ ಹೋಗುತ್ತಾರೆ.

ಪೆಪ್ಸು ಗ್ರಾಮದ ಪ್ರಜೆಗಳು ಯಾರಿಗೆ ಮತ ಹಾಕಬೇಕೋ ನಿರ್ಣಯಿಸಿಕೊಳ್ಳುವ ಸಮಸ್ಯೆಗೆ ಪರಿಷ್ಕಾರವಾಗಿ ಆ ಅಭ್ಯರ್ಥಿಗಳ ಯುವ ಪ್ರತಿನಿಧಿಗಳಿಗೆ ಕುಸ್ತಿ ಸ್ಪರ್ಧೆ ಇಟ್ಟು ಅದರಲ್ಲಿ ಗೆದ್ದ ಅಭ್ಯರ್ಥಿಗೆ ಮತ ಹಾಕುತ್ತೇವೆ ಎಂಬ ಒಪ್ಪಂದಕ್ಕೆ ಬಂದರು.

ಪೋಲೀಸ್ ಕೇಂದ್ರಗಳಲ್ಲಿ ಸಮರ್ಪಿಸುವುದಕ್ಕೆ ಎಷ್ಟೋ ವಸ್ತುಗಳನ್ನು ತೆಗೆದುಕೊಂಡು ಬಂದಿದ್ದಾರೆ. ಬ್ಯಾಲೆಟ್ ಪೆಟ್ಟಿಗೆಗಳನ್ನು ತೆರೆದಾಗ ತಮ್ಮ ವಿಶ್ವಾಸವನ್ನು ಪ್ರಕಟಿಸುವ ಉತ್ತರಗಳು, ಒಂದೊಂದು ಸಲ ಆಹಾರ, ಬಟ್ಟೆಗಳು ಕೊಡಿರಿ ಎಂದು ಬೇಡಿಕೊಳ್ಳುವ ವಿಜ್ಞಾಪನೆಗಳು ಕಾಣುತ್ತಿದ್ದವು.

(1958ರಲ್ಲಿ ಮಾರ್ಗರೇಟ್ ಡಬ್ಲ್ಯೂ.ಫಿಷರ್, ಜೋನ್. ವಿ.ಬೊಂಡ್ಯುರಾಂಟ್ ಬರೆದ 'ಪ್ರಜಾಪ್ರಭುತ್ವದ ಚುನಾವಣೆಗಳಲ್ಲಿ ಭಾರತೀಯ ಅನುಭವ' ಪುಸ್ತಕದಿಂದ ತೆಗೆದುಕೊಂಡ ಅಂಶಗಳು,ಪ್ರಚಾರ ಕರ್ತ; ಇಂಡಿಯನ್ ಪ್ರೆಸ್ ಡೈಜೆಸ್ಟ್)

ರಾಜಕೀಯ ವ್ಯವಸ್ಥೆಯಲ್ಲಿ ಏಕಪಕ್ಷ ದಬ್ಬಾಳಿಕೆ :

ಸ್ವತಂತ್ರ ಭಾರತ ದೇಶದಲ್ಲಿ 1952, 1957, 1962ರಲ್ಲಿ ನಡೆದ ಮೊದಲ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಇತರ ಅಭ್ಯರ್ಥಿಗಳನ್ನು ನಾಮಮಾತ್ರದ ಸ್ಥಾನಗಳಿಗೆ ಪರಿಮಿತಿಗೊಳಿಸುತ್ತಾ ಭಾರತ ರಾಷ್ಟ್ರೀಯ ಕಾಂಗ್ರೆಸ್ ಭರ್ಜರಿ ಜಯಗಳಿಸಿದೆ. ಭಾರತ ದೇಶಕ್ಕೆ ಜವಹರ್‌ಲಾಲ್ ನೆಹ್ರೂರವರು ಮೊಟ್ಟಮೊದಲ ಪ್ರಧಾನಮಂತ್ರಿಯಾಗಿ ಆಯ್ಕೆಯಾದರು. ಇತರ ಪಕ್ಷಗಳಲ್ಲಿ ಯಾವ ಒಂದು ಪಕ್ಷಕ್ಕೂ 11 ಶೇಕಡ ಮೀರಿ ಮತಗಳು ಬರಲಿಲ್ಲ. ಒಟ್ಟುಪೋಲಾದ ಮತಗಳಲ್ಲಿ 45%ನೊಂದಿಗೆ ಕಾಂಗ್ರೆಸ್ 70 ಶೇಕಡಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡಿದೆ. ಇತರ ಯಾವ ಪಕ್ಷವೂ ಸಹ ಕಾಂಗ್ರೆಸ್‌ಗೆ ಹತ್ತಿರದಲ್ಲಿಲ್ಲ.

ಕಾಂಗ್ರೆಸ್ ಪಕ್ಷ ಅನೇಕ ರಾಜ್ಯಗಳಲ್ಲಿ ಸಹ ಸರಕಾರವನ್ನು ಏರ್ಪಾಟು ಮಾಡಿತು. ಇದರೊಂದಿಗೆ ಕೆಲವು ಜನ ಪರಿಶೀಲಕರು ಕೇಳಿಕೊಳ್ಳುವ ಕಾಂಗ್ರೆಸ್ ಪಕ್ಷದ ವ್ಯವಸ್ಥೆ ಏರ್ಪಟ್ಟಿತು. ಸುಮಾರಾಗಿ ಎಲ್ಲಾ ಸಂದರ್ಭಗಳಲ್ಲಿ ಅಧಿಕಾರ ಪಕ್ಷವಾಗಿರುವ ಕಾಂಗ್ರೆಸ್‌ಗೆ, ಇತರ ಪಕ್ಷಗಳಿಗೆ ನಡುವೆ ಇರುವ ಸಂಬಂಧಗಳ ಪ್ರತ್ಯೇಕ ಸ್ವಭಾವವನ್ನು ಹಿಡಿದು ಈ ಕಾಲವನ್ನು ಗುರ್ತಿಸುತ್ತಾರೆ. ಆದರೆ ಕಾಂಗ್ರೆಸ್‌ನಲ್ಲಿ ಯಾವಾಗಲೂ ಅಂತರ್ಗತವಾಗಿ ಚಿಕ್ಕ ಚಿಕ್ಕ ವೃಂದಗಳ ಇರುತ್ತವೆ. ಈ ವೃಂದಗಳ ನಾಯಕರ ನಡುವೆ ಸ್ಪರ್ಧೆ ಕಾರಣವಾಗಿ ಏರ್ಪಟ್ಟಿವೆ. ಪಕ್ಷದ ಉದ್ದೇಶಗಳೊಂದಿಗೆ ಇವರು ಏಕೀಭವಿಸಿದಾಗ್ಯೂ ಕೆಲವು ವಿಧಾನಗಳ ವಿಷಯದಲ್ಲಿ ವಿಭೇಧಗಳಿದ್ದವು.

ಸದಸ್ಯರ ಪ್ರಯೋಜನೆಗಳನ್ನು ಹಿಡಿದು ಈ ವೃಂದಗಳು ವಿವಿಧ ಅಂಶಗಳ ಮೇಲೆ ಬಿಡಿಬಿಡಯಾಗಿ ಸ್ಪಂದಿಸುತ್ತಿದ್ದವು. ಇದರಿಂದ ಕಾಂಗ್ರೆಸ್ ಪಕ್ಷ ಬೇರೆ ಬೇರೆ ದೃಷ್ಟಿಕೋನಗಳು, ಪ್ರಯೋಜನಗಳಿಗೆ ಪ್ರಾತಿನಿಧ್ಯವಹಿಸುತ್ತಿರುವಂತೆ ಕಾಣಿಸುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಈ ವೃಂದಗಳು ಇತರ ರಾಜಕೀಯಪಕ್ಷಗಳೊಂದಿಗೆ ಕಲೆತು ನಾಯಕತ್ವದ ಮೇಲೆ ಒತ್ತಡ

SCERT TELANGANA

ಗ್ರಾಫ್ 17.1 : 1952, 1962 ರ ಚುನಾವಣೆಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ಗೆದ್ದುಕೊಂಡ ಸ್ಥಾನಗಳು



ರಾಜಕೀಯ ಪಕ್ಷಗಳ ಸೂಚಿಕೆ (ಐದುಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡವು ಮಾತ್ರವೇ)

1952			1962		
ಭಾರತ ರಾಷ್ಟ್ರೀಯ ಕಾಂಗ್ರೆಸ್	ಸೋಷಲಿಸ್ಟ್ ಪಕ್ಷ	ಗಣತಂತ್ರ ಪರಿಷತ್	ಭಾರತ ರಾಷ್ಟ್ರೀಯ ಕಾಂಗ್ರೆಸ್	ಸ್ವತಂತ್ರ ಪಕ್ಷ	ದ್ರಾವಿಡ ಮುನ್ನೇಟು ಕಜಗಂ
ಸ್ವತಂತ್ರರು	ಕಿಸಾನ್ ಮಜ್ದೂರ್ ಪ್ರಜಾಪಕ್ಷ	ಇತರರು	ಭಾರತ ಕಮ್ಯೂನಿಸ್ಟ್ ಪಕ್ಷ	ಜನಸಂಘ	ಸೋಷಲಿಸ್ಟ್ ಪಕ್ಷ
ಭಾರತ ಕಮ್ಯೂನಿಸ್ಟ್ ಪಕ್ಷ	ಫ್ರೀ ಪುಲ್ಸ್ ಡೆಮರಟಕ್ ಫ್ರಂಟ್		ಸ್ವತಂತ್ರರು	ಪ್ರಜಾಸೋಷಲಿಸ್ಟ್ ಪಕ್ಷ	ಇತರರು

ತುರುವುದಕ್ಕೆ ಪ್ರಯತ್ನಿಸುತ್ತಿದ್ದವು. ಇದು ಆಡಳಿತ ಪಕ್ಷದೊಳಗೆ ತನ್ನ ವಿಧಾನಗಳನ್ನು ತಿದ್ದುಪಡಿಗಾಗಿ ಸಹ ಸಹಾಯ ಮಾಡುತ್ತದೆ. ಏಕ ಪಕ್ಷ ದಬ್ಬಾಳಿಕೆಯಲ್ಲಿರುವ ಪರಿಸ್ಥಿತಿಯಲ್ಲಿ ಸಹ ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯ ಸ್ಪರ್ಧೆ ಇರುತ್ತಿತ್ತು. ಆದುದರಿಂದ ಪ್ರತಿಪಕ್ಷ ಪಾರ್ಟಿಗಳು ನಿಜವಾದ ಪ್ರಮಾದವನ್ನಲ್ಲದೇ ಅವ್ಯಕ್ತ ಪ್ರಮಾದವನ್ನು ಮಾತ್ರವೇ ಸೂಚಿಸುತ್ತಿದ್ದವು.

ಆದುದರಿಂದ ಈ ಪರಿಸ್ಥಿತಿ ಇತರ ರಾಜಕೀಯ ಪಕ್ಷಗಳಿಲ್ಲದ ಅ ಪ್ರಜಾಸ್ವಾಮಿಕ ಪರಿಸ್ಥಿತಿಯಲ್ಲ. ಇತರ ಪಕ್ಷಗಳು ಸ್ಪರ್ಧೆ ಮಾಡಿವೆಯಾಗಲಿ, ಕಾಂಗ್ರೆಸನ್ನು ಸವಾಲು ಮಾಡುವ ಸಂಖ್ಯೆಗಳಲ್ಲಿ ಸ್ಥಾನಗಳನ್ನು ಗೆದ್ದುಕೊಳ್ಳದೇ ಹೋದವು. ಇತರ ರಾಜಕೀಯ ಪಕ್ಷಗಳು ಕ್ರಮವಾಗಿ ಅಭಿವೃದ್ಧಿಗೊಂಡು ಎರಡು ದಶಾಬ್ದಗಳ ಕಾಲದಲ್ಲಿ ಅಧಿಕಾರಕ್ಕೆ ದೀಟಾಗಿ ಬೆಳೆದಿವೆ. ಈ ಕಾಲವು ಪ್ರಧಾನವಾಗಿ ಮೊದಲ ವರ್ಷಗಳಲ್ಲಿ ಪ್ರಜಾಸ್ವಾಮ್ಯವನ್ನು ಸಂರಕ್ಷಿಸಿ ಸ್ವೇಚ್ಛಾಯುತ, ಬಹಿರಂಗ ಸ್ಪರ್ಧೆಯ ಮೇಲೆ ಆಧಾರಪಟ್ಟ ಬಹುಪಕ್ಷಗಳ ವ್ಯವಸ್ಥೆ ಏರ್ಪಡುವುದಕ್ಕೆ ಸಹಾಯ ಮಾಡಿದೆ.

ಸಂವಿಧಾನ ಚೌಕಟ್ಟಿನ ಬಲದ ಕಾರಣವಾಗಿ, ಸ್ವಾತಂತ್ರ್ಯ ಚಳುವಳಿಯು ಹಾಕಿದ ಪ್ರಜಾಸ್ವಾಮಿಕ ಬುನಾದಿಗಳ ಕಾರಣವಾಗಿ ಭಾರತ ದೇಶ ರಾಜಕೀಯಗಳು ಬಹುಪಕ್ಷ ಪ್ರಭುತ್ವ ಬೆಳೆದುನಿಂತಿವೆ. ಅಧಿಕಾರದಲ್ಲಿರುವ ಪಕ್ಷಗಳು ಆಗಾಗ್ಗೆ ಪಕ್ಷಪಾತದಿಂದ ವ್ಯವಹರಿಸಿ, ಬಹುಪಕ್ಷ ಪ್ರಜಾಸ್ವಾಮ್ಯವು ಬೇರೂರದಂತೆ ಪ್ರತಿಪಕ್ಷಗಳನ್ನು ಅಡಗಿಸುತ್ತಿದ್ದವು. ಅದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದ ಇಂಡೋನೇಷಿಯಾ, ಪಾಕಿಸ್ತಾನ್, ಚೈನಾ, ನೈಜೀರಿಯಾವಂತಹ ವಲಸೆ ಆಡಳಿತ ದೇಶಗಳ ಅನುಭವಕ್ಕಿಂತ ಭಾರತ ದೇಶದ ಅನುಭವ ಎಷ್ಟೋ ಭಿನ್ನವಾಗಿದೆ.

- ರಾಜಕೀಯ ವ್ಯವಸ್ಥೆಯಲ್ಲಿ ಕಾಂಗ್ರೆಸ್ ದಬ್ಬಾಳಿಕೆಗೆ ಸಹಾಯ ಮಾಡಿದ ಕಾರಣಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ

SCERT TELANGANA

ರಾಜ್ಯಗಳ ಪುನಸ್ಸಂಘಟನೆ :

ಚಿತ್ರ 17.2 : 1950ರ ಆರಂಭದಲ್ಲಿ ರಸ್ತೆಗೆ ಬುನಾದಿ ಹಾಕುತ್ತಿರುವ ಜನಹರ್‌ಲಾಲ್

ಹೊಸದಾಗಿ ಏರ್ಪಟ್ಟ ದೇಶವು ಎದುರಿಸಿದ ಮೊದಲ ಸವಾಲುಗಳಲ್ಲಿ ಭಾಷಾ ಪ್ರಯುಕ್ತವಾಗಿ ರಾಜ್ಯಗಳನ್ನು ಪುನಃ ವ್ಯವಸ್ಥೀಕರಿಸಬೇಕೆಂಬ ಬಯಕೆ ಒಂದು. ಬ್ರಿಟೀಷ್ ಕಾಲದಲ್ಲಿ ದೇಶವು ಪ್ರೆಸಿಡೆನ್ಸಿಗಳು (ಕೊಲ್ಕತ್ತಾ, ಮದ್ರಾಸ್, ಬಾಂಬೆ) ಆಗಿ, ಸೆಂಟ್ರಲ್ ಪ್ರಾವಿನ್ಸಸ್ (ಕೇಂದ್ರ ಸಂಸ್ಥಾನಗಳು) ಬೀದರ್‌ವಂತಹ ಅನೇಕ ದೊಡ್ಡ ರಾಜ್ಯಗಳಾಗಿ ವಿಭಜಿಸಿತ್ತು. ದೇಶದಲ್ಲಿ ಹೆಚ್ಚಿನ ಭಾಗವು ಅನೇಕ ಸಂಸ್ಥಾನಗಳ ಕೆಳಗೆ ಇದೆ. ಈ ರಾಜ್ಯಗಳಲ್ಲಿ ಹಲವು ಭಾಷೆಗಳು ಮಾತನಾಡುವ ಪ್ರಜೆಗಳು ಕಲೆತು ಜೀವಿಸುತ್ತಿದ್ದಾರೆ. ಉದಾಹರಣೆಗೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ತಮಿಳು, ಮಳೆಯಾಳಂ, ಕನ್ನಡ, ತೆಲುಗು, ಗೋಂಡಿ, ಒಡಿಯಾ ಭಾಷೆಗಳು ಮತ್ನಾನ್ನಡುವವರು ಇದ್ದರು. ಒಂದೇ ಭಾಷೆಯನ್ನು ಮಾತನಾಡುತ್ತಾ ಅಕ್ಕಪಕ್ಕದ ಪ್ರದೇಶಗಳಲ್ಲಿ ಇರುತ್ತಿರ್ದುವ ಪ್ರಜೆಗಳೆಲ್ಲಾ ಒಂದು ರಾಜ್ಯವಾಗಿ ಸಂಘಟಿತ ಪಡಿಸಬೇಕೆಂದು ಬಯಸಿದರು. ಇವುಗಳಲ್ಲಿ ಸಂಯುಕ್ತ ಕರ್ನಾಟಕ, ಮದ್ರಾಸು, ಮೈಸೂರು, ಬಾಂಬೆ, ಹೈದ್ರಾಬಾದ್‌ಗಳಲ್ಲಿ ಕನ್ನಡ ಮಾತನಾಡುವ ಪ್ರಜೆಗಳನ್ನು ಕಲಿಸಿಕೊಂಡು ಸಂಯುಕ್ತ ಮಾಹಾರಾಷ್ಟ್ರ, ಮಹಾಗುಜರಾತ್ ಚಳುವಳಿ, ಟ್ರಾವೆನ್‌ಕೋರ್ – ಕೊಚ್ಚಿನ್ ಸಂಸ್ಥಾನಗಳು ಬೆರೆಯುವಿಕೆ, ಸಿಕ್ಕರಿಗೆ ಪಂಜಾಬ್ ರಾಜ್ಯಗಳಂತಹ ಬಯಕೆಗಳು ದ್ದಿವು. ಈ ಬಯಕೆಗಳನ್ನು ಒಪ್ಪಿಕೊಂಡಿದ್ದರಿಂದ ದೇಶದ ಐಕ್ಯತೆಯನ್ನು ಹೆಚ್ಚಿಸುವುದಕ್ಕೆ ಸಹಾಯ ಮಾಡುವುದಾ, ಅಥವಾ ಭಾಷಾ ಪ್ರಯುಕ್ತ ದೇಶದಲ್ಲಿ ವಿಭಜನೆಯನ್ನು ತರುತ್ತದೆಯಾ ಎನ್ನುವುದು ಪ್ರಧಾನವಾದ ಅಂಶವಾಗಿ ಬದಲಾಗಿದೆ.

ಮತದ ಆಧಾರವಾಗಿ ದೇಶದ ವಿಂಗಡಣೆ ನಡೆದುದರಿಂದ ನಾಯಕರ ಮನಸ್ಸಿನಲ್ಲಿ ಭಾರತ ದೇಶದ ಭದ್ರತೆ, ಸುಸ್ಥಿರತೆಯ ಬಗ್ಗೆ ಅನುಮಾನಗಳು, ಭಯಗಳು ಉಂಟಾದವು. ಭಾಷಾಪ್ರಯುಕ್ತ ರಾಜ್ಯಗಳನ್ನು ಪುನಃ ವ್ಯವಸ್ಥೀಕರಿಸಿದರೆ ದೇಶವು ಒಡೆದು ಹೋಗುತ್ತದೆಂದು ಭಯಪಟ್ಟರು ಕಾಂಗ್ರೆಸ್ ಪಕ್ಷ ಭಾಷಾ ಪ್ರತಿ ಪದಿಕೆಯ ಮೇಲೆ ಸಂಘಟಿತವಾಗಿದ್ದಾಗ್ಯೂ, ಆ ಆಧಾರವಾಗಿ ದೇಶವನ್ನು ಪುನಃ ಸಂಘಟನೆ ಮಾಡುತ್ತೇವೆಂದು ಮಾತು ನೀಡಿದರೂ ಸ್ವಾತಂತ್ರ್ಯವು ಬಂದ ನಂತರ ಅದಕ್ಕೆ ಬೇಗನೆ ಕೈಗೊಳ್ಳಲಿಲ್ಲ.



ಚಿತ್ರ 17.3 : ರಾಜ್ಯಗಳ ಪುನಃ ವ್ಯವಸ್ಥೀಕರಣೆಗೆ ಮೊದಲು ಪರ್ಯಾಯದ್ವೀಪ ದಕ್ಷಿಣ ಪ್ರಾಂತದಲ್ಲಿ ವಿವಿಧ ಪ್ರದೇಶಗಳನ್ನು

ತೆಲುಗು ಮಾತನಾಡುವ ಪ್ರಜೆಗಳು ಎಲ್ಲವುಗಳಿಗಿಂತ ತೀವ್ರವಾದ ಚಳುವಳಿಯನ್ನು ಕೈಗೊಂಡರು. ಭಾಷಾಪ್ರಯುಕ್ತ ರಾಜ್ಯಗಳಿಗೆ ಅನುಗುಣವಾಗಿ ಕಾಂಗ್ರೆಸ್ ಮಾಡಿದ ತೀರ್ಮಾನವನ್ನು ಜಾರಿಗೊಳಿಸಬೇಕೆಂದು ಅವರು ಹಟ ಹಿಡಿದರು. ಬ್ರಿಟೀಷ್ ಆಡಳಿತದಲ್ಲಿ ಸಹ ಆಂಧ್ರಮಹಾಸಭೆ ಸಕ್ರಿಯಾವಾಗಿದ್ದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿನ ತೆಲುಗು ಮಾತನಾಡುವ ಪ್ರಜೆಗಳನ್ನು ಕೂಡಿಸಬೇಕೆಂದು ಪ್ರಯತ್ನಗಳು ಮಾಡಿದೆ. ಈ ಚಳುವಳಿಯು ಸ್ವಾತಂತ್ರ್ಯದನಂತರ ಸಹ ಮುಂದುವರೆದಿದೆ. ವಿಜ್ಞಾಪನೆಗಳು, ಅರ್ಜಿಗಳು ಬೀದಿಗಳಲ್ಲಿ

SCERT TELANGANA

ಕವಾತುಗಳು, ನಿರಾಹಾರ ದೀಕ್ಷೆಗಳಂತಹ ಪದ್ದತಿಗಳನ್ನು ಇದಕ್ಕೆ ಉಪಯೋಗಿಸಿದರು. ಈ ಬಯಕೆಯನ್ನು ಕಾಂಗ್ರೆಸ್ ವಿರೋಧಿಸಿದ್ದರಿಂದ ತೆಲುಗು ಮಾತನಾಡುವ ಪ್ರದೇಶಗಳಲ್ಲಿ ಮೊದಲ ಚುನಾವಣೆಗಳಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಳ್ಳಲಿಲ್ಲ. ಬಾಷಾ ಪ್ರಯುಕ್ತ ಚಳುವಳಿಯನ್ನು ಬಲಪಡಿಸಿದ ಪಕ್ಷಗಳು ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡಿವೆ.

ಭಾಷಾಪ್ರಯುಕ್ತ ರಾಜ್ಯಗಳಿಗೆ ಜವಹರ್‌ಲಾಲ್ ನೆಹ್ರೂ ವಿರೋಧವಲ್ಲ ; ಆದರೆ ಇದು ಅದಕ್ಕೆ ತಕ್ಕ ಸಮಯವಿಲ್ಲವೆಂದು ಭಾವಿಸಿದನು. ಅಂದಿನ ನಾಯಕರಲ್ಲಿ ಈವಿಷಯದಲ್ಲಿ ಇದೇ ಏಕಾಭಿಪ್ರಾಯ ಇದ್ದಿತು. ಭಾರತ ದೇಶವು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಇದೆಯೆಂದು ಈ ಸಮಯದಲ್ಲಿ ಯಾವುದೇ ದೃಷ್ಟಿ ಬೇರೆ ಕಡೆಗೆ ಇರಬಾರದೆಂದು ಅವರು ಭಾವಿಸಿದರು.

ರಾಜ್ಯಗಳ ಪುನರ್ ವ್ಯವಸ್ಥೀಕರಣ ಕಾಯ್ದೆ 1956 :

ಪ್ರತ್ಯೇಕ ತೆಲುಗು ರಾಜ್ಯವನ್ನು ಕೋರುತ್ತಾ ನಿರಾಹಾರ ದೀಕ್ಷೆ ಮಾಡುತ್ತಿರುವ ಪೊಟ್ಟಿಶ್ರೀರಾಮುಲು 58 ದಿನಗಳು ನಿರಾಹಾರ ದೀಕ್ಷೆ(ಉಪವಾಸ) ನಂತರ 1952 ಅಕ್ಟೋಬರ್‌ನಲ್ಲಿ ಮರಣ ಹೊಂದಿದನು. ಅದರೊಂದಿಗೆ ಆಂಧ್ರಪ್ರದೇಶ್, ತಮಿಳುನಾಡು, ರಾಜ್ಯಗಳನ್ನು ಏರ್ಪಡಿಸಿದರು. 1953 ಆಗಸ್ಟ್‌ನಲ್ಲಿ ಪುರ್ನವಿಂಗಡಣೆ ಸಂಸ್ಥೆಯನ್ನು (ಎಸ್.ಆರ್.ಸಿ) ಹಾಕಿದರು. ಇದರಲ್ಲಿ ಫಜಲ್ ಆಲಿ, ಕೆ.ಎಂ.ಪಣಿಕ್ಕರ್, ಹೃದಯನಾಥ್ ಕುಂಜ್ರುಲು ಸದಸ್ಯರಾಗಿ ಇದ್ದರು. ಭಾಷಾಪ್ರಯುಕ್ತ ರಾಜ್ಯಗಳನ್ನು ಏರ್ಪಾಟುಗೊಳಿಸುವ ಅಂಶವನ್ನು ಪರಿಶೀಲಿಸಬೇಕೆಂದು ಈ ಸಂಸ್ಥೆಯನ್ನು ಕೋರಿದರು. ಈ ಸಂಸ್ಥೆಯು ಕೊಟ್ಟ ವರದಿಯ ಆಧಾರವಾಗಿ 1956ರಲ್ಲಿ ಪಾರ್ಲಿಮೆಂಟ್ ರಾಜ್ಯಗಳ ಪುರ್ನವಿಭಜನೆ ಕಾನೂನನ್ನು ಆಮೋದಿಸಿತು. ಇದರ ಆಧಾರವಾಗಿ 14 ರಾಜ್ಯಗಳು, 6 ಕೇಂದ್ರಾಡಳಿತ ಪ್ರದೇಶಗಳು ಏರ್ಪಟ್ಟವು. ಭಾಷಾಪ್ರಯುಕ್ತ ರಾಜ್ಯಗಳನ್ನು ಏರ್ಪಾಟು ಮಾಡುವಾಗ ಗೋಂಡಿ, ಸಂಥಾಲಿ ಅಥವಾ ಒರಾವನ್ ಅಂತಹ ಬುಡಕಟ್ಟು ಜನರ ಭಾಷೆಗಳನ್ನು ಪರಿಗಣನೆಯಲ್ಲಿ ತೆಗೆದುಕೊಂಡಿಲ್ಲವೆಂಬ ವಿಷಯವನ್ನು ಗುರ್ತಿಸಿಕೊಳ್ಳಬೇಕು. ದಬ್ಬಾಳಿಕೆ, ಅಥವಾ ಶಕ್ತಿವಂತ ಪ್ರಜೆಗಳು ಮಾತನಾಡುವ ತಮಿಳು, ತೆಲುಗುಗಳಂತಹ ಭಾಷೆಗಳನ್ನು ಮಾತ್ರವೇ ಪರಿಗಣನೆಯಲ್ಲಿ ತೆಗೆದುಕೊಂಡಿದ್ದಾರೆ.

- ಭಾಷಾ ಪ್ರಯುಕ್ತ ರಾಜ್ಯಗಳು ಏರ್ಪಡದಿದ್ದರೆ ದೇಶ ಐಕ್ಯತೆಗೆ ಮತ್ತಷ್ಟು ಪ್ರಯೋಜನವಾಗಿರುತ್ತಿತ್ತೇ ?
- ಆ ಸಮಯದಲ್ಲಿ ಬುಡಕಟ್ಟು ಜನರ ಭಾಷೆಗಳನ್ನು ಏಕೆ ಹಿಡಿಸಿಕೊಳ್ಳಲಿಲ್ಲ ?
- ಭಾರತದೇಶದಲ್ಲಿ ಪ್ರಸ್ತುತ ಎಷ್ಟು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿವೆ ?
- ಭಾರತದೇಶದಲ್ಲಿ ಇತ್ತೀಚಿನ ಕಾಲದಲ್ಲಿ ಏರ್ಪಟ್ಟ ಹೊಸ ರಾಜ್ಯಗಳಾವುವು ? ಅವು ಯಾವಾಗ ಏರ್ಪಟ್ಟಿವೆ ?

ಭಾಷಾಪ್ರಯುಕ್ತ ರಾಜ್ಯಗಳು ಏರ್ಪಡುವುದು ಪ್ರಜೆಗಳ ಬಯಕೆಯು ಹೇಗೆ ಈಡೇರಿದೆಯೋ, ಒಂದು ಸಮಸ್ಯೆಯನ್ನು ರಾಜಕೀಯಗಳು ಹೇಗೆ ಪರಿಷ್ಕರಿಸಿವೆಯೋ ತಿಳಿಯಪಡಿಸುತ್ತದೆ. ಈಗ ಒಂದು ಸಲ ಹಿಂದೆ ತಿರುಗಿ ನೋಡಿಕೊಂಡರೆ ಭಾಷಾಪ್ರಯುಕ್ತ ರಾಜ್ಯಗಳ ಪುನರ್ ವಿಭಜನೆಯ ನಾಯಕರು ಭಯಪಟ್ಟಂತೆ ದೇಶವನ್ನು ಬಲಹೀನಗೊಳಿಸಲಿಲ್ಲ. ಅದು ಭಾರತ ದೇಶವು ಧೃಡವಾಗುವುದಕ್ಕೆ ಸಹಾಯಪಟ್ಟಿದೆ.

ಸಾಮಾಜಿಕ ಆರ್ಥಿಕ ಬದಲಾವಣೆ :

ಸಂವಿಧಾನ ಸಭೆಯ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು, ದರ್ಜೆ, ಅವಕಾಶಗಳಲ್ಲಿ ಸಮಾನತ್ವವನ್ನು ಕೋರಿಕೊಂಡಿದೆ. ಆಧುನಿಕ ಭಾರತ ದೇಶವನ್ನು ಕಟ್ಟುವುದರಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಗೆ ಮುಖ್ಯವಾದ ಸ್ಥಾನವನ್ನು ಕೊಟ್ಟಿದೆ. ಹೊಸ ಸಂವಿಧಾನವನ್ನು ಆವಿಷ್ಕರಿಸಿ ಯೋಜನಾ ಸಂಘವನ್ನು ಏರ್ಪಡಿಸಿದರು. ಯೋಜನೆಯ ರಚನೆಯನ್ನು ನೆಹ್ರೂ ಒಳ್ಳೆಯ ಆರ್ಥಿಕ ವಿಧಾನವು ಅಲ್ಲದೇ ಒಳ್ಳೆಯ ರಾಜಕೀಯವಾಗಿ ಸಹ ಭಾವಿಸಿದನು.

SCERT TELANGANA

ಚಿತ್ರ 18.4 : 1960ರಲ್ಲಿ ನಿರ್ಮಾಣದಲ್ಲಿರುವ ಭಾಕ್ರಾನಂಗಲ್ ಆಣೆಕಟ್ಟು, ಸ್ವಾತಂತ್ರ್ಯವು ಬಂದ ನಂತರ ಭಾರತ ದೇಶವು ನಿರ್ಮಿಸಿದ ಮೊದಲ ಆಣೆಕಟ್ಟುಗಳಲ್ಲಿ ಇದು ಒಂದು (ಕೆಳಗೆ) ಮೊದಲ ದಶಾಬ್ದಗಳ ಕಾಲದ ವಯೋಜನೆ ವಿದ್ಯಾತರಗತಿಗಳಿಗೆ ಸಂಬಂಧಿಸಿದ ಫೋಟೋ. ಈ ಯೋಜನೆಗಳೊಂದಿಗೆ ಸಮಾಜದಲ್ಲಿ ಅಭಿವೃದ್ಧಿ ಅಥವಾ ಬದಲಾವಣೆಗೆ ಸಂಬಂಧಿಸಿದ ಭಾವನೆಗಳು ಹೇಗೆ ವ್ಯಕ್ತವಾಗುತ್ತವೆಯೋ ಚರ್ಚಿಸಿರಿ.



ಯೋಜನಾ ಬದ್ಧ ಅಭಿವೃದ್ಧಿಯ ಮೂಲಕ ಕುಲ, ಮತ, ಪ್ರಾಂತಗಳಂತಹ ವಿಭಜನೆ ಧೋರಣೆಗಳು ಕಡಿಮೆಯಾಗಿ ಭಾರತ ದೇಶವು ಧೃಢವಾದ, ಆಧುನಿಕ ದೇಶವಾಗಿ ಬೆಳೆಯುತ್ತದೆಂದು ಆತನು ಆಶಿಸಿದನು.

ಮೊದಲನೇ ಪಂಚವಾರ್ಷಿಕ ಯೋಜನೆಯು ವ್ಯವಸಾಯದ ಮೇಲೆ ಕೇಂದ್ರೀಕರಿಸಿ ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ, ಸಾರಿಗೆ, ಸಂವಹನ ವಲಯಗಳ ಅಭಿವೃದ್ಧಿಗೆ, ಸಾಮಾಜಿಕ ಸೇವೆಗಳ ಕಲ್ಪನೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಭಾರತ ದೇಶವು ಸಾಧ್ಯವಾದಷ್ಟು ಬೇಗನೇ ಕೈಗಾರೀಕರಣ ಹೊಂದುವುದಕ್ಕೆ ಸಹ ಅದು ಶ್ರದ್ಧವಹಿಸಿದೆ. ಆಹಾರವು ಮೂಲಭೂತ ಅವಸರವಾದುದರಿಂದ ಆಹಾರದ ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬುದರ ಮೇಲೆ ಏಕಾಭಿಪ್ರಾಯವು ಏರ್ಪಟ್ಟಿದೆ, ಆದರೆ ಇದನ್ನು ಹೇಗೆ ಸಾಧಿಸಬೇಕೆಂಬುದರ ಮೇಲೆ ಏಕಾಭಿಪ್ರಾಯವು ಉಂಟಾಗಲಿಲ್ಲ. ರಾಜಕೀಯ ಅಭಿಪ್ರಾಯವು ಎರಡು ಪ್ರಶ್ನೆಗಳಿಂದ ಬೇರೆಯಾಗಿದೆ. ವಿಸ್ತೃತ ಅಭಿವೃದ್ಧಿ ವಿಧಾನದಲ್ಲಿ ವ್ಯವಸಾಯಕ್ಕೆ ಸಹ ಬೇಕಾದ ಸ್ಥಾನವು ಏನು? ವ್ಯವಸಾಯಕ್ಕೆ ಕೈಗಾರಿಕೆಗಳಿಗೆ ನಡುವೆ ಸಂಪನ್ಮೂಲಗಳ ವಿಭಜನೆ ಹೇಗೆ ಇರಬೇಕು?

ವ್ಯವಸಾಯ ವಲಯದಲ್ಲಿ ಬದಲಾವಣೆಯನ್ನು ನೆಹ್ರೂ ಕೇವಲ ಆರ್ಥಿಕವಾಗಿ ನೋಡಲಿಲ್ಲ, ಅದನ್ನುಗ್ರಾಮೀಣ ರಂಗ, ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಯಾಗಿ ಪರಿಗಣಿಸಿದ್ದಾನೆ. ನೆಹ್ರೂ ಇಷ್ಟಪಟ್ಟ ವಿಧಾನವನ್ನು ಕೊನೆಗೆ ಅನುಸರಿಸಿದರು. ಇದರಲ್ಲಿ ಮೂರು ಪ್ರಧಾನ ಅಂಶಗಳಿವೆ. ಭೂ ಸುಧಾರಣೆಗಳು, ವ್ಯವಸಾಯ ಸಹಕಾರ ಸಂಘಗಳು, ಸ್ಥಳೀಯ ಸ್ವಯಂ ಆಡಳಿತ. ಮೂರು ವಿಧವಾದ ಭೂಸುಧಾರಣೆಗಳನ್ನು ಪ್ರತಿಪಾದಿಸಿದ್ದಾರೆ. ಜಮೀಂದಾರ ವ್ಯವಸ್ಥೆ ರದ್ದು ಗುತ್ತಿಗೆ ವಿಧಾನಗಳ ಸುಧಾರಣೆ, ಭೂಪರಿಮಿತಿ ವಿಧಾನಗಳು, ಇವುಗಳಲ್ಲೆವುಗಳ ಪ್ರಧಾನ ಉದ್ದೇಶವು ಹೂಳುವವನಿಗೆ ಭೂಮಿ ಹೊಂದುವಂತೆ ಮಾಡಿ ಮತ್ತಷ್ಟು ಉತ್ಪತ್ತಿ ಮಾಡುವುದಕ್ಕೆ ಪ್ರೋತ್ಸಾಹಿಸುವುದು ಸಹಕಾರ ಸಂಘಗಳ ಮುಖಾಂತರ ಆರ್ಥಿಕವಾಗಿ ಲಾಭ ಸಾಟಿ ಪರಿಮಾಣವನ್ನು ಸೇರಿಕೊಳ್ಳುವುದಲ್ಲದೇ ಬೀಜಗಳು, ಗೊಬ್ಬರಗಳು, ರಸಾಯನಗಳಂತಹ ಬೆಲೆಬಾಳುವ ಉತ್ಪಾದಕತೆಗಳನ್ನು ಒದಗಿಸಬೇಕು. ಸ್ಥಾನಿಕ ಸರಕಾರಗಳು ಭೂಸಾಧರಣೆಗಳು ಜಾರಿಗೊಳ್ಳುವಂತೆ ನೋಡಿ, ಗ್ರಾಮ ಸಂಯುಕ್ತ ಪ್ರಯೋಜನೆಗಳಿಗೆ ಅನುಗುಣವಾಗಿ ಸಹಕಾರ ಸಂಘಗಳು ನಡೆಯುವಂತೆ ನೋಡುತ್ತವೆ.

SCERT TELANGANA

ಆದರೆ ಭಾರತ ದೇಶದಾದ್ಯಂತ ಭೂಸಾಧರಣೆಗಳನ್ನು ಮನಸ್ಪೂರ್ತಿಯಾಗಿ ಭಾರಿಗೊಳಿಸಲಿಲ್ಲ. ಜಮಿಂದಾರ ವ್ಯವಸ್ಥೆಯನ್ನು ರದ್ದು ಮಾಡಿದ್ದಾಗಲೀ, ಭೂಮಿ ಇಲ್ಲದವರಿಗೆ ಭೂ ಹಂಚಿಕೆ ನಡೆಯಲಿಲ್ಲ. ಗ್ರಾಮೀಣ ಪ್ರಾಂತಗಳಲ್ಲಿ ಶ್ರೀಮಂತರು, ಶಕ್ತಿವಂತರು ಭೂಮಿಯಲ್ಲಿನ ಹೆಚ್ಚಿನ ಭಾಗಗಳ ಮೇಲೆ ನಿಯಂತ್ರಣವನ್ನು ಮುಂದುವರೆಸುತ್ತಾ ಇದ್ದಾರೆ. ದಲಿತರು ಇನ್ನೂ ಭೂಮಿ ಇಲ್ಲದವರಾಗಿಯೇ ಇದ್ದಾರೆ. ಆದರೆ ಜೀತದಾಳುಗಳ ನಿರ್ಮೂಲನೆ, ಅಸ್ಪೃಶ್ಯತೆಯನ್ನು ನಿವಾರಿಸುವುದರಿಂದ ಪ್ರಯೋಜನೆಗಳನ್ನು ಹೊಂದುತ್ತಾರೆ.

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ದೊಡ್ಡ ಜಲಾಶಯಗಳನ್ನು ನಿರ್ಮಿಸಿ ಜಲವಿದ್ಯುತ್ ಉತ್ಪತ್ತಿ ಮಾಡುವುದು, ನೀರಾವರಿ ಸೌಕರ್ಯಗಳ ಕಲ್ಪನೆಗಳ ಮುಖಾಂತರ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದರ ಮೇಲೆ ದೃಷ್ಟಿ ಇಟ್ಟಿದ್ದಾರೆ. ಜಲಾಶಯಗಳಿಂದ ವ್ಯವಸಾಯ, ಕೈಗಾರಿಕೆ ರಂಗಗಳು ಎರಡೂ ಲಾಭಪಡೆದಿವೆ. ವ್ಯವಸಾಯ ಉತ್ಪತ್ತಿ ಹೆಚ್ಚಾದ್ದ್ಯಾಗೂ ಅದು ಜನಸಂಖ್ಯೆಯ ಅವಸರಗಳಿಗೆ ಸರಿಯಾಗುವಷ್ಟು ಇಲ್ಲ.

ದೇಶವು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಮತ್ತಷ್ಟು ಜನರು ಕೈಗಾರಿಕೆಗಳಲ್ಲೂ, ಸೇವೆಯ ರಂಗದಲ್ಲೂ ಕೆಲಸ ಮಾಡುವಂತೆ ಅವರ ಅವಸರ ಇದೆಯೆಂದು ಯೋಜನೆಯ ಕರ್ತರು ಗುರ್ತಿಸಿದ್ದಾರೆ. ಅದರೊಂದಿಗೆ ಎರಡನೇ ಪಂಚವಾರ್ಷಿಕ ಯೋಜನೆಯಿಂದ ಪ್ರಾಧಾನ್ಯತೆ ಕೈಗಾರಿಕೆಗಳ ಕಡೆಗೆ ಹೊರಟಿದೆ. ಭಾರತ ದೇಶದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಈ ಅಂಶಗಳನ್ನು ಹಿಂದಿನ ತರಗತಿಗಳಲ್ಲಿ ನೀವು ಓದಿದ್ದೀರಿ.

- ನೀವು ಗ್ರಾಮೀಣ ಪ್ರದೇಶಗಳಲ್ಲಿ ನಿವಾಸಿಸುತ್ತಿದ್ದರೆ 1970ಕ್ಕಿಂತೂ ಮುಂಚೆ ಸಹಕಾರ ಸಂಘಗಳಂತಹ ಸಂಸ್ಥೆಗಳನ್ನು ಸ್ಥಾಪಿಸಿರುವವರೋ ತಿಳಿದುಕೊಳ್ಳಿರಿ. ಅದರಲ್ಲಿ ಸದಸ್ಯರಾಗಿ ಯಾರು ಇರುವರೋ ತಿಳಿದುಕೊಳ್ಳಿರಿ.
- ಭಾರತ ದೇಶದಲ್ಲಿ ಕೈಗೊಂಡ ಭೂ ಸುಧಾರನೆಳನ್ನು ಚೈನಾದಲ್ಲೂ, ವಿಯತ್ನಾಂನಲ್ಲೂ ಕೈಗೊಂಡವುಗಳೊಂದಿಗೆ ಹೋಲಿಸಿರಿ.

ವಿದೇಶಿ ವಿಧಾನವು, ಯುದ್ಧಗಳು :

ಭಾರತ ದೇಶಕ್ಕೆ ಸ್ವಾತಂತ್ರ್ಯವು ಬಂದ ಸಮಯದಲ್ಲೇಶೀತಲ ಸಮರವು ಮೊದಲಾಗಿ ಪ್ರಪಂಚದಾದ್ಯಂತ ರಷ್ಯಾ ಒಕ್ಕೂಟ (USSR) ಅಥವಾ ಅಮೇರಿಕಾ ಒಕ್ಕೂಟ (USA)ಬೇರೆಯಾಗುತ್ತದೆ. ಜವಹರ್‌ಲಾಲ್ ನೆಹ್ರೂ ಯಾರ ಕಡೆಗೂ ಸೇರದಂತೆ ತಟಸ್ಥವಾಗಿದ್ದು ವಿದೇಶಿ ವಿಧಾನದಲ್ಲಿ ಸ್ವತಂತ್ರವಾಗಿ ವ್ಯವಹರಿಸತೊಡಗಿದನು. ಅದೇ ಸಮಯದಲ್ಲಿ ಸ್ವಾತಂತ್ರ್ಯವನ್ನು ಪಡೆದು ಅದೇ ವಿಧನಾವನ್ನುಮುಂದುವರೆಸಬೇಕೆಂದುಕೊಳ್ಳುತ್ತಿರುವ ಇಂಡೋನೇಷಿಯಾ, ಈಜಿಪ್ಟ್, ಯುಗ ಸ್ಲೋಮಿಯಾದಂತಹ ದೇಶಗಳೊಂದಿಗೆ ಆತನು ಸೇರಿದನು. ಇವರೆಲ್ಲಾ ಕಲೆತು ಅಲಿಪ್ತನೀತಿಯನ್ನು ನಿರ್ಮಿಸಿದರು. ನೆರೆ ದೇಶಗಳಿಗೆ ಸಂಬಂಧಿಸಿ ಒಬ್ಬ ಅಂತರ್ಗತ ವ್ಯವಹಾರದಲ್ಲಿ ಮತ್ತೊಬ್ಬರು ತಲೆಹಾಕ ವಹಿಸಬಾರದೆಂದು ಪಂಚಶೀಲ ಸೂತ್ರಗಳನ್ನು ನೆಹ್ರೂರವರು ರೂಪಿಸಿದರು. ಆದರೆ ಆಕಾಲದಲ್ಲಿ ಭಾರತ ದೇಶವು ಎರಡು ಯುದ್ಧಗಳನ್ನು ಎದುರಿಸಬೇಕಾಯಿತು. ಮೊದಲನೆಯದು 1948ರಲ್ಲಿ ಕಾಶ್ಮೀರ ವಿಷಯದ ಮೇಲೆ ಪಾಕಿಸ್ತಾನ್ ದೇಶದೊಂದಿಗೆ, ಎಡನೆಯದು 1962ರಲ್ಲಿ ಚೈನಾ ದೇಶದೊಂದಿಗೆ ನಡೆದಿವೆ. ಭಾರತ ದೇಶವು ಈ ಯುದ್ಧಗಳಿಗೆ ಪ್ರತ್ಯೇಕಿಸಿ 1962 ರ ಯುದ್ಧಕ್ಕೆ ಸನ್ನದ್ಧರಾಗಿಲ್ಲದಿದ್ದರಿಂದ (ಅಧಿಕ ಮೊತ್ತದಲ್ಲಿ) ಅಪಾರ ಪ್ರಾಣ ನಷ್ಟವನ್ನು, ಧನ ನಷ್ಟವನ್ನು ನೋಡಬೇಕಾಗಿ ಬಂತು.



ಚಿತ್ರ 17.5 : ಲಾಲ್ ಬಹದೂರ್‌ಶಾಸ್ತ್ರಿ

ನೆಹ್ರೂ ನಂತರ :

1964ರಲ್ಲಿ ನೆಹ್ರೂರವರು ಮರಣಿಸಿದ ನಂತರ ಪ್ರಜಾಪ್ರಭುತ್ವವು ಉಳಿಯುತ್ತದೆಯ ಅಥವಾ ಇತರ ದೇಶಗಳಲ್ಲಿಯ ಹಾಗೆ ಪ್ರಜಾಪ್ರಭುತ್ವ ತಕ್ಕ ಸೂತ್ರಕ್ಕೆ ಧಕ್ಕೆ ಉಂಟಾಗುತ್ತದೆಯಾ ಎಂಬ ಅನುಮಾನಗಳು ವಿಮರ್ಶಕರಿಗೆ

SCERT TELANGANA

ಉಂಟಾದವು. ಆದರೆ ಸರಕಾರದ ನಾಯಕನಾಗಿ ಲಾಲ್ ಬಹದ್ದೂರ್ ಶಾಸ್ತ್ರಿಯನ್ನು ಆಯ್ಕೆ ಮಾಡಿದ್ದರಿಂದ ಕಾಂಗ್ರೆಸ್, ಬದಲಾವಣೆಯನ್ನು ವಿಜಯವಂತವಾಗಿ ಕೈಗೊಂಡಿದೆ. ಭಾರತ ದೇಶದ ಗುರಿಗಳು, ಮೂಲಭೂತ ಬೆಲೆಗಳಿಗೆ ಸವಾಲಾಗಿ ನಿಂತ ಅನೇಕ ಅಂಶಗಳೊಂದಿಗೆ ಶಾಸ್ತ್ರಿಯು ಬೇಗನೆ ಅನುಸಂಧಿಸಬೇಕಾಗುತ್ತದೆ. ದಕ್ಷಿಣಾದಿ ಡಿ.ಎಂ.ಕೆ. ಕೈಗೊಂಡ ಹಿಂದೀ ವ್ಯತಿರೇಖ ಚಳುವಳಿ ದೇಶ ಸಮೈಕ್ಯತೆ, ಸಮಗ್ರತೆಗೆ ಪೆಟ್ಟಾಗಿ ನಿಂತಿದೆ. ಆಹಾರದ ಕೊರತೆ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಅಡಚಣೆಯಾಗಿ ಬದಲಾಗಿದೆ. ಅಷ್ಟೇ ಅಲ್ಲದೆ 1965ರಲ್ಲಿ ಪಾಕಿಸ್ತಾನ್‌ದೊಂದಿಗೆ ಯುದ್ಧವು ಆರಂಭವಾಗಿತ್ತು. 1966ರಲ್ಲಿ ಶಾಸ್ತ್ರಿ ಅಕಾಲಮರಣದಿಂದ ಆನಂತರ ಪ್ರಧಾನ ಮಂತ್ರಿಯಾಗಿ ಇಂದಿರಾಗಾಂಧಿ ಆಯ್ಕೆ ಯಾದರು.

ಹಿಂದಿ ವಿರೋಧ ಉದ್ಯಮ :

1963ರಲ್ಲಿ ಅಧಿಕಾರ ಭಾಷೆಯ ಕಾನೂನನ್ನು ಜಾರಿಗೋಳಿಸಿದಾಗ ಹಿಂದಿ ಭಾಷೆಯನ್ನು ಉಳಿದ ದೇಶಗಳ ಮೇಲೆ ಹೇರಬೇಕೆಂದುಕೊಂಡು ಡಿ.ಎಂ.ಕೆ. ತಮಿಳು ನಾಡು ರಾಜ್ಯಾದಾದ್ಯಂತ ಹಿಂದಿ ಭಾಷೆಗೆ ವಿರುದ್ಧವಾಗಿ ಚಳುವಳಿಯನ್ನು ಕೈಗೊಂಡಿತು. ಇದರಲ್ಲಿ ಭಾಗವಾಗಿ ಮುಷ್ಕರಗಳು, ಪ್ರತಿಭಟನೆಗಳು, ಹರ್ತಾಳಗಳು ನಿರ್ವಹಿಸಿದ್ದರು. ದೃಷ್ಟಿ ಗೊಂಬೆಗಳು, ಹಿಂದೀ ಪುಸ್ತಕಗಳು, ಕೊನೆಗೆ ಸಂವಿಧಾನದಲ್ಲಿಯ ಪುಟಗಳನ್ನು ಸಹ ಸುಟ್ಟು ಹಾಕಿದರು. ಸೈನ್ ಹಲಗೆಯಲ್ಲಿ ಹಿಂದಿಯಲ್ಲಿ ಇರುವವುಗಳ ಮೇಲೆ ಬಹಳ ಕಡೆಗೆ ಕಪ್ಪು ಬಣ್ಣವನ್ನು ಹಚ್ಚಿದ್ದರು. ಪೋಲೀಸರು, ಪ್ರತಿಭಟನೆಕಾರರ ನಡುವೆ ಗಲಭೆಗಳು ಉಂಟಾದವು. ಕೇಂದ್ರ ಸರಕಾರವು ಈ ಗಲಭೆಗಳನ್ನು ಪರಿಗಣನೆಯಲ್ಲಿ ತೆಗೆದುಕೊಳ್ಳಬೇಕಾಗಿ ಬಂದಿತು. ಕಾಂಗ್ರೆಸ್ ಪಕ್ಷವೇ ಹಿಂದಿ ಅನುಕೂಲ, ಹಿಂದಿ ವ್ಯತಿರೇಖ ಶಿಬಿರಗಳಾಗಿ ಬೇರ್ಪಟ್ಟಿತು. ದೇಶ ಐಕ್ಯತೆಗೆ ಧಕ್ಕೆಏರ್ಪಟ್ಟಿದೆ ಎಂದು ಕೆಲವರು ಭಾವಿಸಿದರು.

ಕೊನೆಗೆ ಪರಿಸ್ಥಿತಿಗಳು ಕೈಜಾರಿ ಹೋಗುವಂತೆ ಅನ್ನಿಸಿದ್ದರಿಂದ ಆಗಿನಪ್ರಧಾನಿ ಶಾಸ್ತ್ರಿ ಹಿಂದೀ ಅನುಕೂಲ ವಾದನೆಯನ್ನು ಸಮರ್ಥಿಸಿದಾಗ್ಯೂ, ಹಿಂದೀ ವಿರುದ್ಧ ಶಿಬಿರದಲ್ಲಿ ಉದ್ವೇಗಗಳನ್ನು ಶಾಂತಗೊಳಿಸುವುದಕ್ಕೆ ಅನೇಕ ರಿಯಾಯಿತಿಗಳನ್ನು ಪ್ರಕಟಿಸಿದನು. ಇವುಗಳಲ್ಲಿ ಕೆಲವು : ಪ್ರತಿ ರಾಜ್ಯಕ್ಕೆ ತನ್ನದೇ ಆದ ಭಾಷೆ ಹೊಂದಿರಬೇಕೆಂಬ ಹಕ್ಕು ಇದೆ. ಅದು ಪ್ರಾದೇಶಿಕ ಭಾಷೆಯಾಗಬಹದು ಅಥವಾ ಇಂಗ್ಲೀಷ್ ಆಗಿರಬಹುದು, ಪತ್ರ ವ್ಯವಹಾರಗಳು ಇಂಗ್ಲೀಷ್ ಅನುವಾದದೊಂದಿಗೆ ಪ್ರಾದೇಶಿಕ ಭಾಷೆಗಳಲ್ಲಿ ಇರಬಹುದು. ಕೇಂದ್ರ ರಾಜ್ಯಗಳ ನಡುವೆ ವ್ಯವಹಾರ ಭಾಷೆಯಾಗಿ ಇಂಗ್ಲೀಷ್ ಮುಂದುವರೆಯುತ್ತದೆ. ಸಿವಿಲ್ ಸರ್ವೀಸ್ ಪರೀಕ್ಷೆಗಳು ಕೇವಲ ಹಿಂದಿಯಲ್ಲಿ ಅಲ್ಲದೆ ಇಂಗ್ಲೀಷ್‌ನಲ್ಲಿ ಸಹ ನಿರ್ವಹಿಸುತ್ತಾರೆ.

- ಭಾಷೆ ವಿಧಾನವು ರಾಷ್ಟ್ರೀಯ ಸಮೈಕ್ಯತೆಗೆ ಸಮಗ್ರತೆಗೆ ಹೇಗೆ ಸಹಾಯಕವಾಗಿದೆ?
- ರಾಷ್ಟ್ರೀಯ ಭಾಷೆಯ ಅವಸರವಿದೆಯಾ?
- ಎಲ್ಲಾ ಭಾಷೆಗಳಿಗೆ ಸಮಾನ ದರ್ಜೆಇರಬೇಕಾ?

ಇಲ್ಲಿ ಸಹ ಒಂದು ಜನಾಧರಣೆಯನ್ನು ಹೊಂದಿದ ಸಾಮಾಜಿಕ ಚಳುವಳಿಯಿಂದ ತನ್ನ ಅಧಿಕಾರಿಕ ಸ್ಥಾನವನ್ನು ಪುನಃ ಸಮೀಕ್ಷಿಸಿಕೊಳ್ಳಬೇಕಾಯಿತು. ಪ್ರತಿಭಟನೆಯಕಾರರು ಏಕೀಭವಿಸದಿದ್ದರೂ ಈ ಎರಡು ಸಂದರ್ಭಗಳಲ್ಲಿ ಪ್ರಧಾನ ಮಂತ್ರಿಗಳಿಬ್ಬರೂ, ಪರಿಸ್ಥಿತಿಗಳು ಕೈ ಮೀರಿಹೋಗದಂತೆ ನೋಡುವುದಕ್ಕೆ ತಮ್ಮ ದೃಷ್ಟಿ ಕೋನವನ್ನು ಬದಲಾಯಿಸಿಕೊಂಡರು. ತಮ್ಮ ದೃಷ್ಟಿಕೋನಕ್ಕಿಂತ ದೇಶ ಸಮೈಕ್ಯತೆ ಮುಖ್ಯವೆಂದು, ನೆಹ್ರೂ, ಶಾಸ್ತ್ರಿ ಸ್ಪಷ್ಟವಾಗಿ ಗುರ್ತಿಸಿದ್ದಾರೆ.

ಪ್ರಾಂತೀಯ ಪಕ್ಷಗಳು, ಪ್ರದೇಶಿಕ ಚಳುವಳಿಗಳ ಉದಯ

ಭಾರತ ದೇಶದ ಚರಿತ್ರೆಯಲ್ಲಿ 1967 ರ ಚುನಾವಣೆಗಳು ಬಹಳ ಮುಖ್ಯವಾದವು. ಚುನಾವಣೆಗಳನ್ನು ಪ್ರಜೆಗಳು ಬಹಳ ಮುಖ್ಯವಾಗಿ ಪರಿಗಣಿಸುತ್ತಿದ್ದಾರೆಂದು, ಅವುಗಳಿಗೆ ತಮ್ಮದಾದ ಹಿನ್ನಲೆ ಇದೆ ಎಂದು ಈ ಚುನಾವಣೆಗಳು ತೋರಿಸಿದವು. ಈಗಾಗಲೇ ಅರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಂದ ಲಾಭಪಟ್ಟವರು, ನಷ್ಟಪಟ್ಟವರೂ ಸಹ

SCERT TELANGANA

ಇರುವುದರಿಂದ ರಾಜಕೀಯ ಸ್ಪರ್ಧೆಯಲ್ಲಿ ಸಹ ಬದಲಾವಣೆ ಬಂದಿತು. ಕಾಂಗ್ರೆಸ್ ಪಕ್ಷ ಮೊದಲೆಂದೂ ನೋಡದ ಪಫಲಿತಾಂಶಗಳನ್ನು ಅನುಭವಿಸಿತು. ಸ್ವಾತಂತ್ರ್ಯದ ನಂತರ ಅದು ಅಷ್ಟು ಕಡಿಮೆ ಅತ್ಯಧಿಕತೆಯಿಂದ (284 ಸ್ಥಾನಗಳು) ಎಂದು ಆಯ್ಕೆಯಾಗಿಲ್ಲ. ಬಿಹಾರ್. ಉತ್ತರ ಪ್ರದೇಶ್, ರಾಜಸ್ಥಾನ್, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ, ಮದ್ರಾಸ್, ಕೇರಳ ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋಲು ಅನುಭವಿಸಿತು. ಸುಮಾರು 20 ವರ್ಷದವರೆಗೆ ಯಾವುದೇ ಅಡ್ಡಿ ಇಲ್ಲದೇ ಆಳಿದ ಪಕ್ಷ ಈಗ ಸವಾಲುಗಳನ್ನು ಎದುರಿಸಲಿದೆ. ಆದರೆ ಸೋತ ಪಕ್ಷ ಅಧಿಕಾರವನ್ನು ಹಿಡಿದುಕೊಂಡು ಜೋತುಬಿದ್ದಿಲ್ಲ. ಚುನಾವಣೆಗಳಲ್ಲಿ ಗೆದ್ದ ಪಕ್ಷವನ್ನು ಸರಕಾರವು ಏರ್ಪಾಟು ಮಾಡಿಸಿದೆ. ದೇಶದಲ್ಲಿ ಪ್ರಜಾ ಪ್ರಭುತ್ವವು ಬೇರೂರಿದೆ ಎಂದು ಇದು ಸೂಚಿಸುತ್ತದೆ. ಸ್ಪರ್ಧೆಯಿಂದ ಕೂಡಿದ ಬಹುಪಕ್ಷದ ವ್ಯವಸ್ಥೆಯ ಕಡೆ ಗೆ ದೇಶವು ಮುಂದುವರೆಯುತ್ತದೆ . (ಪ್ರಯಾಣಿಸುತ್ತದೆ)

ಕಾಂಗ್ರೆಸ್ ಪಕ್ಷ ಘೋರ ಪರಾಜಯ ಹೊಂದಿದ ರಾಜ್ಯಗಳಲ್ಲಿ ತಮಿಳುನಾಡು, ಕೇರಳ, ರಾಜ್ಯಗಳಿವೆ. ತಮಿಳುನಾಡಿನಲ್ಲಿ ಡಿ.ಎಂ.ಕೆ. ಪಕ್ಷ ಭರ್ಜರಿ ಜಯಗಳಿಸಿದೆ. ಸಂಘಟಿತವಾಗಿ ನಿರ್ವಹಿಸುವ ಪ್ರಾದೇಶಿಕ ಚಳುವಳಿಗಳ ಆದಿಪತ್ಯ ಪಕ್ಷಕ್ಕೆ ಸವಾಲಾಗಿ ಇರುತ್ತವೆ ಎಂದು ಇದು ತಿಳಿಯ ಪಡಿಸುತ್ತದೆ. ಡಿಎಂಕೆಗೆ ಸಿನಿಮಾ ರಂಗದೊಂದಿಗೆ ಬಲವಾದ ಸಂಬಂಧಗಳು ಇವೆ. ಪ್ರಜಾಧರಣೆಇರುವ ಸಿನಿಮಾ ನಟ ಯಂ.ಜಿ.ರಾಮಚಂದ್ರನ್, ಆತನನ್ನು ಎಲ್ಲರೂ ಯಂಜಿ.ಆರ್. ಎನ್ನುವರು. ಅಭಿಮಾನ ಸಂಘಗಳನ್ನು ತನಗೆ ಬೆಂಬಲವಾಗಿ ಡಿ.ಎಂ.ಕೆ. ಉಪಯೋಗಿಸಿಕೊಂಡಿದೆ.

ಪಕ್ಕದಲ್ಲಿರುವ ಕೇರಳ ರಾಜ್ಯದಲ್ಲಲ್ಲದೆ ಪಶ್ಚಿಮ ಬಂಗಾಳ, ಒಡಿಸ್ಸಾದಲ್ಲಿ ಸಹ ಕಾಂಗ್ರೆಸ್ ಅಪಜಯ ಹೊಂದಿತು. ಈ ಸೋಲುಗಳು, ಸವಾಲುಗಳೊಂದಿಗೆ ಕಾಂಗ್ರೆಸ್ ಅಂತರಂಗಿಕವಾಗಿ ಸಹ ಬಲಹೀನಗೊಂಡಿದೆ. ಉತ್ತರಾದಿ ರಾಜ್ಯಗಳಲ್ಲಿ ಗೆದ್ದ ಕೆಲವು ಕಡೆ ಅದರ ಪ್ರತಿನಿಧಿಗಳು ಪ್ರತಿ ಪಕ್ಷದಲ್ಲಿ ಸೇರಿದ್ದಾರೆ. ಫಲಿತವಾಗಿ ಕಾಂಗ್ರೆಸ್ ಸರಕಾರಗಳು ಅಧಿಕಾರಗಳನ್ನು ಕಳೆದುಕೊಂಡವು. ಆ ಸಮಯದಲ್ಲಿ ಸಂಯುಕ್ತ ವಿಧಾಯಕ ದಳ (ಎಸ್‌ವಿಡಿ) ಸರಕಾರಗಳು ಏರ್ಪಟ್ಟಿವೆ. ಇದು ಪ್ರಧಾನವಾಗಿ ಕಾಂಗ್ರೆಸ್‌ಗೆ ವಿರುದ್ಧವಾದ ಶಾಸನ ಸದಸ್ಯರು – ಜನಸಂಘ, ಸೋಷಲಿಸ್ಟರು, ಸ್ವತಂತ್ರಪಕ್ಷ, ಕಾಂಗ್ರೆಸ್ ಕಳಂಕಿತರು ಸ್ಥಳೀಯ ಪಕ್ಷಗಳ ಶಾಸನ ಸದಸ್ಯರುಏರ್ಪಾಟು ಮಾಡಿದ ಸಮ್ಮಿಶ್ರವು.

ಭಾರತ ರಾಜಕೀಯ ಚರಿತ್ರೆಯಲ್ಲಿ ಈ ಹೊಸ ಸರಕಾರಗಳು ಒಂದು ಮೈಲುಗಲ್ಲಾಗಿ ಇರುತ್ತವೆ ಒಂದು ವಿಧವಾಗಿ ಪ್ರಜಾಪ್ರಭುತ್ವದ ದಂಗೆಯನ್ನು ಇದು ಸೂಚಿಸುತ್ತದೆ. ಮಧ್ಯವರ್ಗದ ಕುಲಗಳು ಇವು ಭುಸಾಧರಣೆಗಳಿಂದ ಪ್ರಯೋಜನೆ ಪಡೆದು ಆರ್ಥಿಕವಾಗಿ ಲಾಭಗೊಂಡಿವೆ. ಮೊದಲ ಸಲ ರಾಜಕೀಯ ಅಧಿಕಾರವನ್ನು ಪಡೆದಿವೆ. ಈ ಕುಲಗಳು – ಹರ್ಯಾನಾ, ಉತ್ತರ ಪ್ರದೇಶ್‌ನಲ್ಲಿ ಜಾಟ್, ಬಿಹಾರ್‌ನಲ್ಲಿ ಕುರ್ಮಿ, ಕೊಯಿರಿ. ಮಧ್ಯಪ್ರದೇಶದಲ್ಲಿ ಲೋಥ್, ಈ ಎಲ್ಲಾ ರಾಜ್ಯಗಳಲ್ಲಿ ಯಾದವ್, ಆಂಧ್ರಪ್ರದೇಶ್‌ದಲ್ಲಿ ರೆಡ್ಡಿ, ಕಮ್ಮ, ಕರ್ನಾಟಕದಲ್ಲಿ ಒಕ್ಕಲಿಗ, ತಮಿಳುನಾಡಿನಲ್ಲಿ ವೆಲ್ಲಲ. ಈ ಕುಲಗಳು ಆಯಾ ರಾಜ್ಯಗಳಲ್ಲಿ ಆದಿಪತ್ಯ ಕುಲಗಳಾಗಿದ್ದು ಜನಸಂಖ್ಯೆಯಲ್ಲಿ ಸಹ ಅಧಿಕರಾದ್ದಾರೆ. ಇತರ ಆದಿಪತ್ಯ (ಹಿಂದುಳಿದ) ಕುಲಗಳು ಅಧಿಕಾರದಲ್ಲಿ ಬರುವುದಕ್ಕೆ ಡಿ.ಎಂ.ಕೆ. ಪಕ್ಷವೇ ಒಂದು ಒಳ್ಳೆ ಉದಾಹರಣೆ.

ಈ ಎಸ್.ವಿ.ಡಿ. ಸರಕಾರಗಳಲ್ಲಿ ಬಹಳ ಮಟ್ಟಿಗೆ ಹೆಚ್ಚಿನ ಸಮಯದವರೆಗೆ ನಿಲ್ಲುವುದಿಲ್ಲ. ಅವುಗಳ ಚರಿತ್ರೆ, ಭ್ರಷ್ಟಾಚಾರ, ಕಳಂಕಿತರಿಂದ ತುಂಬಿಹೋಗಿದೆ. ಅಧಿಕಾರ ಕಾಂಕ್ಷೆಯು ಬಂದೇ ಅವರನ್ನು ಒಂದು ಗೂಡಿಸಿದಂತಿದೆ. ಈ ಸರಕಾರಗಳು ಸಾಧಿಸಿದ್ದು ಏನು ಇಲ್ಲ. ಆದರೆ ಇಂದಿಗೂ ಸಹ ಪ್ರಾದೇಶಿಕ ಅಥವಾ ರಾಷ್ಟ್ರಮಟ್ಟದ ಪಕ್ಷಗಳನ್ನು ಇವುಗಳನ್ನು ಪ್ರಾಮಾಣಿಕವಾಗಿ ಮಾಡಿಕೊಳ್ಳುವ ಅಂದಾಜು ಹಾಕಿಕೊಳ್ಳುತ್ತಾರೆ.

ಈ ಕಾಲದಲ್ಲಿ ದೇಶದಲ್ಲಿ ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಭಾವನೆಗಳು ಮತ್ತೆ ನವೀಕರಣೆ ಹೊಂದಿದವು. ಆಂಧ್ರಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣವನ್ನು ಬಯಸಿದರು. ಈ ಚಳುವಳಿಗೆ ಉಸ್ಮಾನಿಯಾ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ನಾಯಕತ್ವವನ್ನು ವಹಿಸಿದರು. ಆಭಿವೃದ್ಧಿ ಫಲಗಳುರಾಜ್ಯದಲ್ಲಿ ಕೆಲವು ವರ್ಗಗಳಿಗೆ ಮಾತ್ರ ಹೊಂದುತ್ತವೆ ಎಂಬುದು ಇವರ ಪ್ರಧಾನ ಆರೋಪ.

SCERT TELANGANA

ಚಿತ್ರ 17.6 : ಇಂದಿರಾ

1969 ರ ಡಿಸೆಂಬರ್ ತಿಂಗಳಲ್ಲಿ ಅಸ್ಸಾಂನಲ್ಲಿ ಖಾಸಿ, ಜೈಂತಿಯಾ, ಗಾರೋ ಬುಡಕಟ್ಟು ಪ್ರದೇಶಗಳೊಂದಿಗೆ ಮೇಘಾಲಯ ಎನ್ನುವ ಹೊಸ ರಾಜ್ಯವನ್ನು ಏರ್ಪಾಟು ಮಾಡಿದರು. 1966ರಲ್ಲಿ ಏರ್ಪಟ್ಟ ಪಂಜಾಬ್‌ಗೆ ತನ್ನದಾದ ರಾಜಧಾನಿ ಇಲ್ಲ. ಹರ್ಯಾನಾ, ಪಂಜಾಬ್‌ಗಳಿಗೆ ಅವಿಭಕ್ತ ರಾಜಧಾನಿಯಗಾಗಿ ಇರುವ ಚಂಡಿಘರ್‌ನ್ನು ತಮಗೆ ಕೊಡಿರಿ ಎಂದು 1968-69ರಲ್ಲಿ ಪಂಜಾಬ್ ಪ್ರಜೆಗಳು ಪ್ರತಿಭಟನೆ ಮಾಡಿದರು. ಮಹಾರಾಷ್ಟ್ರದಲ್ಲಿ ಬೊಂಬಾಯಿ ಮಹಾರಾಷ್ಟ್ರ ನಿವಾಸಗಳಿಗೆ ಹೊಂದಬೇಕೆಂಬ ವಿಚಿತ್ರವಾದನೆ ಮೊದಲಾಯಿತು. ಇದಕ್ಕೆ ಶಿವಸೇನೆ ನಾಯಕತ್ವವಹಿಸಿತು. ನಗರದಲ್ಲಿ ಉದ್ಯೋಗಗಳಲ್ಲೆವನ್ನು ದಕ್ಷಿಣಾದಿ ರಾಜ್ಯದವರು ಪಡೆದುಕೊಂಡಿದ್ದಾರೆಂಬ ಭಾವನೆಯಿಂದ ಈ ಪಕ್ಷವು ಆ ರಾಜ್ಯಗಳ ಪ್ರಜೆಗಳನ್ನು ಉದ್ದೇಶವಾಗಿ ಮಾಡಿಕೊಂಡಿತು.

ಅದೇ ಸಮದಯಲ್ಲಿ ಹಳೆ ಬೇಡಿಕೆಗಳು ಇನ್ನೂ ಮುಂದುವರೆಯುತ್ತಲೇ ಇವೆ. ಕಾಶ್ಮೀರ್ ನಾಲಗ್ಯಾಂಡ್ ಬೇಡಿಕೆಗಳನ್ನು ಈ ಕಾಲದಲ್ಲಿ ಬೆಳಕಿಗೆ ಬಂದಿವೆ. ಗೃಹ ನಿರ್ಭಂಧದಿಂದ ಬಿಡುಗಡೆಯಾದ ನಂತರ ಷೇಕ್ ಅಬ್ದುಲ್ಲಾ ಕಾಶ್ಮೀರ್ ರಾಜ್ಯಕ್ಕೆ ಮರಳಿ ಬಂದನು. ಅದೇ ವಿಧವಾಗಿ ನಾಗಲ್ಯಾಂಡ್‌ನಲ್ಲಿ ಹೊಸ ಯುವ ನಾಯಕತ್ವವು ಚಳುವಳಿಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಿದ್ದವಾಯಿತು.

ಈ ಕಾಲದಲ್ಲೇ ಮತ ಉದ್ವೇಗಗಳು ಸಹ ಉಂಟಾದವು. ದೇಶದಲ್ಲಿ ಕೆಲವು ಪ್ರದೇಶಗಳಲ್ಲಿ ಮತ ಘರ್ಷಣೆಗಳು ಉಂಟಾದವು. ರಾಂಚಿ (ಬಿಹಾರ್) ಅಹ್ಮದಾಬಾದ್ (ಗುಜರಾತ್) ಜಲಗಾವ್ (ಮಹಾರಾಷ್ಟ್ರ) ಅಲಿಘರ್ (ಉತ್ತಪ್ರದೇಶ)ಇವು ಕಷ್ಟ ಕಾಲಗಳು. ರಾಜಕೀಯ ಬದಲಾವಣೆ ಮೊದಲೇ ನಡೆದು ಹೊಸ ನಾಯಕತ್ವವು ರಚಿಸಲ್ಪಡುತ್ತದೆ. ಹೆಚ್ಚುತ್ತಿರುವ ರಾಜಕೀಯ ಚೈತನ್ಯವು, ಬಯಕೆಗಳನ್ನು ಈಡೇರಿಸುವುದರ ಕಾರಣವಾಗಿ ಏರ್ಪಡುತ್ತಿರುವ ಒತ್ತಡಗಳನ್ನು ಸಹಿಸಿಕೊಳ್ಳುವುದಕ್ಕೆ ಹೊಸ ನಾಯಕತ್ವವುಇನ್ನೂ ತಕ್ಕಷ್ಟು ಸನ್ನದ್ಧವಾಗಿಲ್ಲ.

ಜಮ್ಮ ಮತ್ತು ಕಾಶ್ಮೀರ

ಭಾರತ ಒಕ್ಕೂಟದಲ್ಲಿ ಇತರ ಸಂಸ್ಥಾನಗಳಂತೆ ಅಲ್ಲದೇ ಜಮ್ಮೂ ಮತ್ತು ಕಾಶ್ಮೀರ ಸೇರಿದ ಪರಿಸ್ಥಿತಿಗಳು ಬೇರೆಯಾಗಿ ಇವೆ. ಇತರ ಆಡಳಿತಗಾರರಂತಲ್ಲದೆ ರಾಜನಾದ ಹರಿ ಸಿಂಗ್ ಅತ್ತಕಡೆ ಪಾಕಿಸ್ತಾನ್‌ನಲ್ಲೂ ಇತ್ತಕಡೆ ಭಾರತ ದೇಶದಲ್ಲಿ ಬೆರೆಯದಂತೆ ಜಮ್ಮ ಮತ್ತು ಕಾಶ್ಮೀರ್‌ನ್ನು ಸ್ವಾತಂತ್ರ ರಾಜ್ಯವಾಗಿ ಇರಬೇಕೆಂದು ಕೋರಿಕೊಂಡನು. ಈ ರಾಜ್ಯದಲ್ಲಿ ಮಸ್ಲಿಂಮರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ, ರಾಜನು ಹಿಂದುವು. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ಕಾಲದಲ್ಲಿ ಅಲ್ಲಿ ಅಖಿಲ ಜಮ್ಮು ಮತ್ತು ಕಾಶ್ಮೀರ್ ಕಾನ್ಫರೆನ್ಸ್ ಹೆಸರಿನೊಂದಿಗೆ ಪ್ರಜಾಚಳುವಳಿಯೆಂದು ನಡೆಯುತ್ತದೆ. ಇದಕ್ಕೆ ಷೇಕ್ ಮಹಮ್ಮದ್ ಅಬ್ದುಲ್ಲಾ ನಾಯಕತ್ವವನ್ನುವಹಿಸುತ್ತಿದ್ದಾನೆ. ಸರಕಾರದ ಉದ್ಯೋಗಗಳಲ್ಲಿ ಮುಸ್ಲಿಮ್ಮರಿಗೆ ಹೆಚ್ಚಿನ ಪ್ರಾತಿನಿಧ್ಯವು, ಪ್ರತಿನಿಧ್ಯ ಸರಕಾರದಂತಹ ಕೋರಿಕೆಗಳೊಂದಿಗೆ ಈ ಚಳುವಳಿಯು ನಡೆಯುತ್ತದೆ. ಈ ಚಳುವಳಿಯು ಆನಂತರ ನೇಷನಲ್ ಕಾನ್ಫರೆನ್ಸ್ ಆಗಿ ಪರಿಣಮಿಸಿತು. ಇದರಲ್ಲಿ ಸಿಕ್ಕರು, ಹಿಂದೂಗಳು ಸಹ ಸದಸ್ಯರಾಗಿದ್ದರು. ನೇಷನಲ್ ಕಾನ್ಫರೆನ್ಸ್ ಸಹ ಕಾಂಗ್ರೆಸ್‌ನಂತೆ ಮತ ಸಾಮರಸ್ಯತೆಗೆ, ಸಾಮ್ಯವಾದಕ್ಕೆ ಕಟ್ಟುಬಿದ್ದಿದೆ.

1947 ರ ಕೊನೆಗೆ ಪಶ್ಚಿಮ ಸರಿಹದ್ದುಗಳಿಂದ ಪಾಕಿಸ್ತಾನ್ ಬೆಂಬಲದೊಂದಿಗೆ ರಜಾಖ್‌ಗಳ ದಾಳಿಗಳು ಆರಂಭವಾದವು. ಈ ದಾಳಿ ಮಾಡುತ್ತಿರುವವರು ಶ್ರೀನಗರ್‌ನ್ನುಸಮೀಪಿಸುತ್ತಿದ್ದರಿಂದ ರಕ್ಷಣೆಗಾಗಿ ಮಹಾರಾಜನು ಭಾರತೀಯ ಸೈನ್ಯವನ್ನು ಸಹಾಯ ಕೇಳಿದನು. ಆದರೆ ಜಮ್ಮೂ ಮತ್ತು ಕಾಶ್ಮೀರ್ ಭಾರತ ದೇಶದಲ್ಲಿ ವಿಲೀನವಾದ ನಂತರ ಅದರ ಸೈನ್ಯವು ಲಭ್ಯವಾಗುತ್ತದೆಂದು ಭಾರತದ ಗವರ್ನರ್ ಜನರಲ್ ಹೇಳಿದ್ದಾರೆ. ಆ ಸಮಯದಲ್ಲಿ ದೇಶದ ಭವಿಷ್ಯತ್ತಿಗೆ ಸಂಬಂಧಿಸಿ, ಅದು ಸ್ವಾಯತ್ತತೆಯೊಂದಿಗೆ ಮುಂದುವರೆಯುವುದು ಕುರಿತು ವಿಸ್ತೃತವಾದ ಚರ್ಚೆಗಳು ನಡೆದಿವೆ.

SCERT TELANGANA

1948 ರಲ್ಲಿ ಭಾರತ ದೇಶವು ಈ ವಿಷಯವನ್ನು ವಿಶ್ವಸಂಸ್ಥೆಯ ಮುಂದಿಟ್ಟಿದೆ. ಆದರೆ ವಿಷಯವನ್ನು ಸರಿಯಾಗಿ ವಿವರಿಸದೇ ಹೋದುದರಿಂದ ಇದು ಭಾರತ ದೇಶ – ಪಾಕಿಸ್ತಾನ್‌ಗಳ ಸಮಸ್ಯೆಯಾಗಿ ಬದಲಾಗಿದೆ. ಇದರೊಳಗಾಗಿ ಷೇಕ್ ಅಬ್ದುಲ್ಲಾ ಡಿಲ್ಲಿ ಒಪ್ಪಂದವೆಂದು ಕರೆಯಲ್ಪಡುವುದನ್ನು ಅಂಗೀಕರಿಸಿದ್ದಾನೆ. ಇದರ ಪ್ರಕಾರ ಕಾಶ್ಮೀರಗಳು ಭಾರತ ದೇಶದ ಸಂಪೂರ್ಣ ಪೌರರಾಗಿ ಇರುವರು. ಅದೇ ಸಮಯದಲ್ಲಿ ಉಳಿದ ರಾಜ್ಯಗಳೊಂದಿಗೆ ಹೋಲಿಸಿದರೆ ರಾಜ್ಯವು ಹೆಚ್ಚಿನ ಸ್ವಾಯತ್ತತೆಯನ್ನು, ಅಧಿಕಾರಗಳನ್ನು ಹೊಂದಿರುತ್ತದೆ. ರಾಜ್ಯಮೂಲಭೂತ ಸ್ವಭಾವವನ್ನು ಕಾಪಾಡುವುದಕ್ಕೆ ಉದ್ದೇಶಿಸಿದ ಈ ಒಪ್ಪಂದದಲ್ಲಿ ಅನೇಕ ಅಂಶಗಳು ಸಂವಿಧಾನಲ್ಲಿಯ 370ನೇ ಅಧಿಕರಣದಲ್ಲಿ ಅಳವಡಿಸಿಕೊಂಡಿವೆ.

ಅದೇ ಸಮಯದಲ್ಲಿ ರಾಜ್ಯದಲ್ಲಿ ಇರುವ ಆರ್ಥಿಕ ಅಸಮಾನತೆಗಳು ಮತ ಪರವಾದ ಸ್ವರ ಸ್ವಾಧೀನ ಪಡಿಸಿಕೊಂಡಿತು. ರಾಜ್ಯದಲ್ಲಿ ಭೂಸುದಾರಣೆಗಳಿಂದ ಭೂ ಪರಿಮಿತಿಗೆ ಮೀರಿರುವ ಜಮೀನ್ದಾರರ ಭೂಮಿಗಳನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಈ ವಿಧವಾಗಿ ಭೂಮಿಕಳೆದುಕೊಂಡವರಲ್ಲಿ ಹೆಚ್ಚಿನ ಜನ ಹಿಂದೂ ಜಮೀನ್ದಾರರು, ಉಳಿದ ಭೂಮಿ ಹಂಚಿಕೆಯಲ್ಲಿ ಭೂಮಿಯನ್ನು ಪಡೆದವರು ಮುಸ್ಲಿಮ್ಮರು. 1950–1990 ಮಧ್ಯಕಾಲದಲ್ಲಿ ಈ ರಾಜ್ಯವು ಸ್ವಾಯತ್ತತೆಯನ್ನು ಕಡಿಮೆ ಮಾಡಿ ಉಳಿದ ರಾಜ್ಯಗಳೊಂದಿಗೆ ಸಮಾನವಾಗಿ ಮಾಡುವುದಕ್ಕೆ ಕೇಂದ್ರ ಸರ್ಕಾರವು ಅನೇಕ ಸಲ ಪ್ರಯತ್ನಿಸಿತು. ಇದಕ್ಕೆ ಕಾಶ್ಮೀರ್ ಪ್ರಜೆಗಳು ತೀವ್ರವಾಗಿ ಸ್ಪಂದಿಸಿದರು. ಇದನ್ನು ಆಧಾರವಾಗಿ ಮಾಡಿಕೊಂಡು 1990 ರಲ್ಲಿ ಕಾಶ್ಮೀರ್ ಸ್ವತಂತ್ರವಾಗಬೇಕೆಂದು ಚಳುವಳಿಯು ಆರಂಭಗೊಂಡಿತು. ಈ ಕಾಲದಲ್ಲಿ ಕಾಶ್ಮೀರ್ ಕಣಿವೆಯಿಂದ ಅನೇಕ ಹಿಂದೂ ಕುಟುಂಬಗಳು ಇತರ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು.

1967 ರಲ್ಲಿ ಚುನಾವಣೆಗಳ ನಂತರ ಎಡಪಕ್ಷದ ಕಡೆಗೆ ಆಸಕ್ತಿ ತೋರಿಸುವ ಮುಖಾಂತರ ಹೊರಗಿನಿಂದ ಪಕ್ಷದ ಒಳಗಿನಿಂದ ಬರುತ್ತಿರುವ ಸವಾಲುಗಳನ್ನು ಇಂದಿರಾ ಗಾಂಧಿಯವರು ಎದುರಿಸಿದರು. ಬಡವರ, ಕೆಳವರ್ಗದ ಪ್ರಜೆಗಳೊಂದಿಗೆ ತಾನು, ತಮ್ಮ ಪಕ್ಷವು ಬೆರೆತಿದ್ದರಿಂದ ಪಕ್ಷಕ್ಕೆ ಹೊಸ ಸಾಮಾಜಿಕ ಬೆಂಬಲವನ್ನು ಕೊಡಿಸುವುದಕ್ಕೆ ಆಕೆಯುಪ್ರಯತ್ನಿಸಿದಳು. ಇದು ಎರಡೂ ಕಡೆ ಚೂಪಾಗಿರುವ ಆಯುಧವು. ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಭರವಸೆಗಳನ್ನು ಇನ್ನೂ ನೆರವೇರಿಲ್ಲ. 1967 ರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋಲುವುದಕ್ಕೆ ಇದೊಂದು ಪ್ರಧಾನ ಕಾರಣ. ಆದರೆಇಂದಿರಾ ಗಾಂಧಿಯವರು ಮತ್ತಷ್ಟು ಹೊಸ ಭರವಸೆಗಳನ್ನು ಮಾಡಿದ್ದಾರೆ. ಒಂದು ದಶಾಬ್ದದ ಕಾಲದಲ್ಲಿ ಹೆಚ್ಚಾಗುತ್ತಿರುವ ಜನರ ಬಯಕೆಗಳು ಈಡೇರದೇ ನಿರಾಶೆ, ನಿಸ್ಪೃಹಗಳು ಏರ್ಪಟ್ಟು ಅತ್ಯವಸರ ಪರಿಸ್ಥಿತಿಯನ್ನು ವಿಧಿಸುವುದಕ್ಕೆ ದಾರಿಮಾಡಿದೆ.

ಬಂಗ್ಲಾ ದೇಶದ ಯುದ್ಧ :

1970 ರ ದಶಮಾನವು ಪ್ರಥಮದಲ್ಲಿ ಪೂರ್ವ ಪಾಕಿಸ್ತಾನ್ (ಈಗಿನ ಬಾಂಗ್ಲದೇಶ್) ದಲ್ಲಿ ಪ್ರತಿಭಟನೆಗಳು ಉಂಟಾಗಿದ್ದವು. ಪಶ್ಚಿಮ ಪಾಕಿಸ್ತಾನ್ ತಮ್ಮ ಮೇಲೆ ಮಲತಾಯಿಯ ಪ್ರೇಮ ತೋರಿಸಿದ್ದರಿಂದ ಪ್ರತಿಭಟನೆಗಳು ಉಂಟಾದವು. ತಮ್ಮ ಬೆಂಗಾಲಿ ಅಸ್ತಿತ್ವವನ್ನು ಸಮರ್ಥಿಸುವುದಕ್ಕೆ ಚಳುವಳಿಗಳು ಆರಂಭವಾದವು. ಸಾರ್ವತ್ರಿಕ ಚುನಾವಣೆಯಲ್ಲಿ ಮುಜಿಬುರ್ ರೆಹ್ಮಾನ್ ನಾಯಕತ್ವದಲ್ಲಿ ಪಕ್ಷವು ಜಯಗಳಿಸಿತ್ತು. ಆದರೆ ಆತನನ್ನು ಬಂಧಿಸಿ ಪಶ್ಚಿಮ ಪಾಕಿಸ್ತಾನ್‌ಗೆ ಕರೆದೊಯ್ದರು. ಪೂರ್ವ ಪಾಕಿಸ್ತಾನ್‌ನಲ್ಲಿ ಸೇನೆಯ ದಬ್ಬಾಳಿಕೆಯ ಕಾಲವು ಆರಂಭವಾಯಿತು. ಅಲ್ಲಿಂದ ಬಂದ ಲಕ್ಷಗಟ್ಟಲೆ ನಿರಾಶ್ರಿತ ಜನರ ಗುಂಪಿಗೆ ಭಾರತ ದೇಶವು ವಸತಿ ಕಲ್ಪಿಸಿ ಆಹಾರವನ್ನುಕೊಡಬೇಕಾಯಿತು. ಇಷ್ಟರಲ್ಲಿ ಬಾಂಗ್ಲಾದೇಶ್ ವಿಮುಕ್ತಿ ಚಳುವಳಿಯು ಆರಂಭವಾಯಿತು. ಇದರಲ್ಲಿ ಭಾರತ ದೇಶದ ಸಹಾಯವನ್ನು ಕೋರಿದರು. 1971 ರಲ್ಲಿ ಭಾರತ ದೇಶ ಪಾಕಿಸ್ತಾನ್‌ಗಳ ನಡುವೆ ಯುದ್ಧವು ಆರಂಭವಾಗಿತ್ತು. ಭಾರತ ದೇಶವು ನಿರ್ಣಯಾತ್ಮಕವಾಗಿ ನಡುವೆ ಬಂದಿದ್ದರಿಂದ ಬಾಂಗ್ಲಾದೇಶಗೆ ವಿಮುಕ್ತಿ ಸಾಧಿಸಿ, ಸ್ವತಂತ್ರದೇಶವಾಗಿ ಏರ್ಪಡುವಂತೆ ಸಹಾಯನೀಡಿತು. ಭಾರತ ದೇಶವು ತನ್ನ ಸೇನೆಯ ಬಲವನ್ನು ಹೆಚ್ಚಿಸಿಕೊಂಡಿದ್ದರಿಂದ ಅಲ್ಲದೇ ಅಲಿಪ್ತದೇಶವಾಗಿ ತನ್ನ ಸ್ಥಿತಿಯನ್ನು ನೈಪುಣ್ಯದಿಂದ ಉಪಯೋಗಿಸಿಕೊಂಡು ಎರಡು ಅಗ್ರದೇಶಗಳು ಯುದ್ಧದಲ್ಲಿ ತಲೆಹಾಕದಂತೆ ಮಾಡುವುದರಿಂದ ಇದು ಸಾಧ್ಯವಾಗಿದೆ.

SCERT TELANGANA

ಎಡಪಕ್ಷಗಳ ಕಡೆಗೆ ಒಲವು :

ಹೊಸ ವಿಧಾನಗಳು, ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮುಖಾಂತರ ಇಂದಿರಾಗಾಂಧಿ ತನಗೂ, ಕಾಂಗ್ರೆಸ್ ಪಕ್ಷಕ್ಕೂ ಹೊಸ ದಾರಿ ಹಾಕಿಕೊಟ್ಟರು. ಈ ವಿಧಾನದ ಮೂಲಕ ಆಕೆಗೆ ಪಕ್ಷದ ನಿರ್ಮಾಣದ ಮೇಲೆ ಸಂಪೂರ್ಣ ಹಿಡಿತ ಲಭಿಸಿತ್ತು.

ಯುದ್ಧದಲ್ಲಿ ಜಯಗಳಿಸಿ ನಂತರ ಗರೀಬಿ ಹಟಾವೋ ಎಂಬ ಜನಾಕರ್ಷಕ ನಾನ್ನುಡಿಯೊಂದಿಗ್ಗೆ1971 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ರಿಕಾರ್ಡ್ ಮಟ್ಟದಲ್ಲಿ ಜಯಗಳಿಸಿತ್ತು. ಇದರೊಂದಿಗೆ ಇಂದಿರಾಗಾಂಧಿ ಯವರ ಜನಾಕರ್ಷಣೆ ಮತ್ತಷ್ಟು ಹೆಚ್ಚಾಯಿತು. ಪ್ರತಿಪಕ್ಷ ಎನ್ನುವುದು ಕಾಣದಂತಾಯಿತು. ಇಂದಿರಾಗಾಂದಿ ವಿಮರ್ಶೆ ಮಾಡುವವರ ಬಾಯಿ ಮುಚ್ಚಿಸಿದಳು. ಆಕೆ ಪ್ರಜೆಗಳ ಪ್ರೀತಿಯ ನಾಯಕಿಯಾದಳು ಆ ನಂತರ 1972ರಲ್ಲಿ ರಾಜ್ಯದ ಶಾಸನ ಸಭೆಳಿಗೆ ನಡೆದ ಚುನಾವಣೆಗಳಲ್ಲಿ ಇಂದಿರಾಗಾಂಧಿಯವರು ಜನಾಕರ್ಷಣೆಯನ್ನು ಆಧಾರವಾಗಿ ಮಾಡಿಕೊಂಡು ಕಾಂಗ್ರೆಸ್ ಒಳ್ಳೆಯ ಫಲಿತಾಂಶಗಳನ್ನು ಪಡೆಯಿತು. ಈಗ ಆಕೆಗೆ ಪಕ್ಷದ ಮೇಲೆ, ಪಾರ್ಲಿಮೆಂಟಿನ ಮೇಲೆ ನಿಯಂತ್ರಣ ಏರ್ಪಟ್ಟಿತು. ಅಧಿಕಾರದಲ್ಲಿ ಬಂದ ನಂತರ ಇಂದಿರಾಗಾಂಧಿ ಅತ್ತ ಕಡೆ ಪಕ್ಷದಲ್ಲೂ, ಇತ್ತ ಕಡೆ ಸರ್ಕಾರದಲ್ಲೂ ಹಂತಹಂತವಾಗಿ ಅಧಿಕಾರ ಕೇಂದ್ರೀಕರಣೆಗೊಳಿಸಿದ್ದಾಳೆ.

ಈ ಕಾಲದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆ ಸಾಧಿಸಬೇಕೆಂಬ ಉದ್ದೇಶದಿಂದ ಅನೇಕ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ ಮಾಡಿದ ಕಾನೂನು ರಾಜಯೋಗ್ಯವೇತನ ರದ್ದುಗೊಳಿಸಿ ಮಾಡಿದ ಕಾನೂನು ಮುಖ್ಯವಾದುವು. ಈ ಎರಡೂ ಕಾಯ್ದೆಗಳನ್ನು ನ್ಯಾಯಸ್ಥಾನದಲ್ಲಿ ಸವಾಲು ಮಾಡಿದರು. ಆದ್ದರಿಂದ ರಾಜಕೀಯ ಗುರಿಗಳಲ್ಲಿ ನ್ಯಾಯಸ್ಥಾನಗಳು ತಲೆಹಾಕುತ್ತವೆ ಎಂದು ಅನ್ನಿಸುವಂತೆ ಮಾಡಿದ್ದಾರೆ.

ಆದರೆ , ವಿಧಾನಗಳು, ಕಾರ್ಯಕ್ರಮಗಳಿಗೆ ಸಂಬಂಧಿಸಿ ನ್ಯಾಯ ವ್ಯವಸ್ಥೆಗೆ ಭಿನ್ನ ಅಭಿಪ್ರಾಯಗಳು ಇವೆ. ಸಾಮಾಜಿಕ, ಆರ್ಥಿಕ ಬದಲಾವಣೆ ಎಂಬ ಹೆಸರಿನಿಂದ ಸಂವಿಧಾನವನ್ನು ಆಗಾಗ್ಗೆ ತಿದ್ದುಪಡಿ ಮಾಡುತ್ತಾರೆಂದು, ಅದು ವಾಸ್ತವಕ್ಕೆ ಅದರ ಸ್ವರೂಪವನ್ನು ಬದಲಾಯಿಸುತ್ತದೆಂದು, ಬೇರೆ ಬೇರೆ ವ್ಯವಸ್ಥಾಗತ ನಿರ್ಮಾಣಗಳ ನಡುವೆ ಪ್ರಸ್ತುತ ಇರುವ ಸಮತೋಲನೆ ಪೆಟ್ಟು ತಿನ್ನುತ್ತದೆಂದು ಸುಪ್ರೀಂ ಕೋರ್ಟು ಚಾರಿತ್ರಿಕ ತೀರ್ಪನ್ನು ಕೊಟ್ಟಿದೆ. ಇದರೊಂದಿಗೆ ಸಂವಿಧಾನದ ತಿದ್ದುಪಡೆಗೆ ಸರಕಾರಕ್ಕೆ ಇರುವ ಅಧಿಕಾರಗಳಿಗೆ ಸ್ವಲ್ಪಮಟ್ಟಿಗೆ ಪರಿಮಿತಿಗಳು ವಿಧಿಸಲ್ಪಟ್ಟಿವೆ.

ತನ್ನ ನಿಯಂತ್ರಣದಲ್ಲಿ ಇಲ್ಲದ ಘಟನೆಗಳ ಕಾರಣವಾಗಿ ಇಂದಿರಾ ಗಾಂಧಿಯವರು ಸಮಸ್ಯೆಗಳಲ್ಲಿ ಸಿಲುಕಿಕೊಂಡು ತನ್ನ ಮಾತುಗಳು ನಿಲ್ಲಿಸಿಕೊಳ್ಳುವುದು ಕಷ್ಟವಾಯಿತು. ಆಕೆಯ ಸರಕಾರವು ತೀವ್ರವಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಎದುರಿಸಿದೆ. 1973ರಲ್ಲಿ ಅರಬ್ ಇಜ್ರಾಯಿಲ್ ದೇಶಗಳ ನಡುವೆ ಯುದ್ಧದಿಂದ ಇಂಧನದ ಬೆಲೆಗಳು ಹೆಚ್ಚಾದ್ದುದರಿಂದ ಸರಕಾರದ ಮೇಲೆ ಒತ್ತಡ ತೀವ್ರವಾಗಿ ಹೆಚ್ಚಾಯಿತು. ಹಣದುಬ್ಬರ, ನಿತ್ಯಾವಸರ ವಸ್ತುಗಳ ಮೇಲೆ ಬೆಲೆಗಳು ಹೆಚ್ಚಾಗುವಿಕೆ, ಆಹಾರದ ಕೊರತೆ, ನಿರುದ್ಯೋಗದಂತಹವು ಪ್ರಭಾವವನ್ನು ತೋರಿಸಿದವು. ಪ್ರಜೆಗಳಲ್ಲಿ ಹೆಚ್ಚಿನ ಶೇಕಡ ಜನ ಸಂತೋಷವಾಗಿಲ್ಲ. ಇದರೊಂದಿಗೆ ಪ್ರತಿಪಕ್ಷಗಳಿಗೆ ಅವಕಾಶ ಸಿಕ್ಕಿತು. ದೇಶದ ವಿವಿಧ ಪ್ರದೇಶಗಳಲ್ಲಿ ಅಸಂತೃಪ್ತಿಯನ್ನು ಆಸರೆಮಾಡಿಕೊಂಡರು. ಜಯಪ್ರಕಾಶ್ ನಾರಾಯಣರ ನಾಯಕತ್ವದಲ್ಲಿ ಐಕ್ಯವಾದ ಪ್ರತಿ ಪಕ್ಷಗಳು ದೇಶದಲ್ಲಿ ಹಲವು ಪ್ರದೇಶಗಳಲ್ಲಿ ಕಾಂಗ್ರೆಸ್ಸಿಗೆ ಪ್ರತ್ಯೇಕಿಸಿ ಇಂದಿರಾಗಾಂಧಿಗೆ ವಿರುದ್ಧವಾಗಿ ಉದ್ಯಮಿಸಿದವು. ಇದರಿಂದ ಜೆಪಿ ಚಳುವಳ ಎಂದು ಕರೆಯುತ್ತಾರೆ. ಇದು ಬಿಹಾರ್‌ನಲ್ಲಿ ಗುಜರಾತ್‌ನಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ನಡೆದಿದೆ.

ಅತ್ಯವಸರ ಪರಿಸ್ಥಿತಿ (Emergency):

ಶಾಂತಿಯನ್ನು ಕಾಪಾಡುವ ಹೆಸರಿನಿಂದ ಈ ಚಳುವಳಿಗೆ ಸ್ಪಂದಿಸುತ್ತಾ ಪೌರಹಕ್ಕುಗಳಿಗೆ ಉಲ್ಲಂಘನೆ ಆಗುವಂತೆ ಸರಕಾರವು ಅನೇಕ ತೀವ್ರವಾದ ಕಾನೂನುಗಳನ್ನು ಮಾಡಿದೆ. ಸರಕಾರವನ್ನು ತನಗೆ ವ್ಯಕ್ತಿಗತವಾಗಿ ಪ್ರಧಾನಮಂತ್ರಿ ಬಳಸುತ್ತಿರುವಳೆಂದು ಸಹ ಪ್ರತಿ ಪಕ್ಷಗಳು ವಿಮರ್ಶಿಸಿದವು. ಈಗಾಗಲೇ 1971 ರ ಚುನಾವಣೆಗಳಲ್ಲಿ ಪ್ರಜಾಪ್ರತಿನಿಧಿ

SCERT TELANGANA

ಗಳ ಕಾನೂನಿನಲ್ಲಿಯ ಕೆಲವು ಅಂಶಗಳನ್ನುಮೀರಿದೆ ಎಂದು ಲೋಕಸಭೆಗೆ ಇಂದಿರಾಗಾಂಧಿ ಆಯ್ಕೆಯಾದುದನ್ನುಅಲಹಾಬಾದ್ ನ್ಯಾಯಲಯ ರದ್ದು ಮಾಡಿತು. ಆದರೆ ಆಕೆಯು ಸುಪ್ರೀಂ ಕೋರ್ಟು ನಿಂದ ತಡೆಯುವಿಕೆಗೆ ಆದೇಶಗಳು ತಂದುಕೊಂಡಳು.

ಕೆಲವು ದಿನಗಳ ನಂತರ ಜೆ.ಪಿ. ಚಳುವಳಿಯು ಮತ್ತಷ್ಟು ತೀವ್ರತರ ವಾದುದರಿಂದ ಸರಕಾರವು ಅತ್ಯಾವಸರ ಪರಿಸ್ಥಿತಿಯನ್ನು ವಿಧಿಸಿತು. ಪ್ರಜಾಪ್ರಭುತ್ವವನ್ನು ಕಾಪಾಡುವುದಕ್ಕೆ, ಶಾಂತಿ ಭದ್ರತೆಗಳು ಸ್ಥಾಪಿಸುವುದಕ್ಕೆ ದೇಶದ ಸಮಗ್ರತೆಯನ್ನು ಕಾಪಾಡವುದಕ್ಕೆ ಸಾಮಾಜಿಕ , ಆರ್ಥಿಕ ಬದಲಾವಣೆ ಗಳನ್ನು ಮುಂದುವರೆಸುವುದರಲ್ಲಿ ಅದು ಅವಸರವಾಗಿದೆ ಎಂದು ಸರಕಾರವು ಅದನ್ನು ಸಮರ್ಥಿಸಿಕೊಂಡಿದೆ.

ಚಿತ್ರ 17.6 : ಕೊಲ್‌ಕತ್ತಾದಲ್ಲಿ ಕುಟುಂಬ ಯೋಜನೆ ಆಸ್ಪತ್ರೆ

ಇದರೊಂದಿಗೆ ಪ್ರಜಾಪ್ರಭುತ್ವವು ಇಲ್ಲದಂತಾಯಿತು. ದೇಶದಲ್ಲಿ ಶಾಂತಿ ಭದ್ರತೆಗಳಿಗೆ ಅವಸರವೆಂದೂ ಸರಕಾರವು ಅನೇಕ ಅಡಗಿಸುವ ಚರ್ಯೆಗಳಿಗೆ ಗಮನಕೊಟ್ಟಿತು. ಅನೇಕ ಪ್ರಾಥಮಿಕ ಹಕ್ಕುಗಳನ್ನು ನಿಲ್ಲಿಸಿದರು. ಯಾವ ಕಾರಣವಿಲ್ಲದಂತೆ ಅರೆಸ್ಟು ಮಾಡುವುದು, ಹಿಂಸಿಸುವುದು ಪೌರರ ಹಕ್ಕುಗಳಿಗೆ ಭಂಗ ಉಂಟುಮಾಡುವುದು ಅಂತಹ ಅನೇಕ ಘಟನೆಗಳು ಕಂಡುಬಂದಿವೆ. ಈ ಕಾಲದಲ್ಲಿ ಬೆಲೆಗಳ ನಿಯಂತ್ರಣೆ ಕಪ್ಪು ಮಾರುಕಟ್ಟೆ ಗುಲಾಮಗಿರಿಗಳಿಗೆ ವಿರುದ್ಧವಾಗಿ ನಡೆಯುವ ಚಳುವಳಿಗಳನ್ನು ಜನರು ಸ್ವಾಗತಿಸಿದರು. ಆದರೆ ಇದೇ ಕಾಲದಲ್ಲಿ ಕೈಗೊಂಡ ಕೊಳೆಚೆ ಪ್ರದೇಶಗಳ ತೆರುವುಗೊಳಿಸುವಿಕೆ ಜನಸಂಖ್ಯೆ ನಿಯಂತ್ರಣೆ ಹೆಸರಿನೊಂದಿಗೆ ಬಲವಂತನವಾಗಿ ಕುಟುಂಬ ಯೋಜನೆಯ ಆಪರೇಷನ್‌ಗಳು ಮಾಡಿಸುವುದು ಅಂತಹ ಕಾರ್ಯಕ್ರಮಗಳು ಪ್ರಜೆಗಳ ಕೋಪಕ್ಕೆ ಕಾರಣವಾದವು. ಆದರೆ ಪೌರ ಹಕ್ಕುಗಳು ಇಲ್ಲದಿದುದರಿಂದ ಪ್ರಜೆಗಳು ತಮ್ಮ ಅಸಂತೃಪ್ತಿಯನ್ನು ತೋರಿಸುವ ಮಾರ್ಗಗಳು ಇಲ್ಲದಂತಾದವು. ಅದರೊಂದಿಗೆ ತಿದ್ದಿಕೊಳ್ಳುವ ಚರ್ಯೆಗಳು ಕೈಗೊಳ್ಳುವ ಅವಕಾಶ ಸರಕಾರಕ್ಕೆ ಇಲ್ಲದಂತಾಯಿತು.

ಈ ಕಾಲದಲ್ಲಿ ಹೇಳಿಕೊಳ್ಳುವಂತ ಮತ್ತೊಂದು ಮುಖ್ಯ ಪರಿಣಾವು ಸಂವಿಧಾನ ಮಾಡಿದ 42ನೇ ತಿದ್ದುಪಡಿ. ಇದು ಅಣೇಕ ಬದಲಾವಣೆಗಳನ್ನು ತೆಗೆದುಕೊಂಡು ಬಂದಿದೆ. ಈ ತಿದ್ದುಪಡಿಯ ಉದ್ದೇಶಗಳು ಅ) ಚುನಾವಣೆಗಳ ವಿವಾದಗಳಲ್ಲಿ ನ್ಯಾಯ ಸ್ಥಾನಗಳಿಗೆ ಸ್ಥಾನ ಇಲ್ಲದಂತೆ ಮಾಡುವುದು ಆ) ರಾಜ್ಯ ಸರಕಾರದೊಂದಿಗೆ ಹೋಲಿಸಿದರೆ ಕೇಂದ್ರ ಸರಕಾರವನ್ನು ಬಲಪಡಿಸುವುದು ಇ) ಸಾಮಾಜಿಕ, ಆರ್ಥಿಕ ಬದಲಾವಣೆಗೆ ಉದ್ದೇಶಿಸಿದ ಕಾನೂನುಗಳಿಗೆ ನ್ಯಾಯ ಸ್ಥಾನಗಳಿಂದ ಸಾಧ್ಯವಾದಷ್ಟು ರಕ್ಷಣೆಯನ್ನು ಕಲ್ಪಿಸುವುದು. ಈ) ನ್ಯಾಯ ವ್ಯವಸ್ಥೆ ಪಾರ್ಲಿಮೆಂಟಿಗೆ ಒಳಪಟ್ಟು ಇರುವಂತೆ ಮಾಡುವುದು. ಈ ತಿದ್ದುಪಡಿಯ ಉದ್ದೇಶಗಳಾಗಿ ದೇಶ ಸಮೈಕ್ಯತೆಯನ್ನು ದೃಢಗೊಳಿಸುವುದು, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನುನ್ಯಾಯಸ್ಥಾನಗಳಿಂದ ಕಾಪಾಡುವಂತಹವುಗಳನ್ನು ತಿಳಿಯಪಡಿಸಿದಾಗ್ಯೂ, ವಾಸ್ತವದಲ್ಲಿ ಇದರಿಂದ ದೇಶದ ಪ್ರಜಾಪ್ರಭುತ್ವದ ಸ್ವಭಾವವು ಬಲಹೀನಪಟ್ಟಿದೆ.

SCERT TELANGANA

ಮುಕ್ತಾಯ :

ಮೊದಲ ಮೂವತ್ತು ವರ್ಷಗಳು ಅತ್ಯವಸರ ಪರಿಸ್ಥಿತಿ ಮುಗಿದಾಗ್ಯೂ, ಲಾಭ ನಷ್ಟಗಳ ಪಟ್ಟಿ ತಯಾರು ಮಾಡಿದರೆ ತಪ್ಪುಗಳಿಗಿಂತ ಒಪ್ಪುಗಳೇ ಹೆಚ್ಚಿಗೆ ಇವೆ.

ಸ್ಥಿರವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಈ ಕಾಲದಲ್ಲಿ ಸಾಧಿಸಿದ ಅತ್ಯಂತ ಮುಖ್ಯವಾದ ವಿಷಯವಾಗಿ ಹೇಳಬಹುದು. ಅದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದ ಇತರ ದೇಶಗಳೊಂದಿಗೆ ಭಾರತ ದೇಶವನ್ನು ಹೋಲಿಸಿದರೆ ಬೇರೆ ಬೇರೆ ಪ್ರಯೋಜನೆಗಳು ಉಂಟಾದ ಪಕ್ಷಗಳೊಂದಿಗೆ ಸ್ಪರ್ಧೆಯಿಂದ ಕೂಡಿದ ಬಹುಪಕ್ಷ ವ್ಯವಸ್ಥೆ ಕ್ರಮವಾಗಿ ರೂಪುಗೊಳ್ಳುವುದು ಎನ್ನುವುದು ನಿಜವಾದ ಗೆಲುವೆಂದು ಹೇಳಬೇಕು. ಇತರ ದೇಶಗಳ ಹಾಗೆ ಅಲ್ಲದಂತೆ ಭಾರತ ದೇಶದಲ್ಲಿ ಕ್ರಮವು ತಪ್ಪದಂತೆ ಭಯವಿಲ್ಲದ, ಸ್ವೇಚ್ಛಾಯುತ ವಾತಾವರಣದಲ್ಲಿ ಚುನಾವಣೆಗಳು ನಡೆದಿರುವುದಲ್ಲದೇ ಸರಕಾರಗಳು, ನಾಯಕರು ಸಹ ಬದಲಾವಣೆಗೆ ಒಳಗಾದರು. ಭಾರತ ಸಂವಿಧಾನವು ಪೌರರ ಹಕ್ಕುಗಳನ್ನು ಕೊಡುವುದಲ್ಲದೇ ಅವುಗಳನ್ನು ಕಾಪಾಡುವುದಕ್ಕೆ ವ್ಯವಸ್ಥಾಗತೆಯ ನಿರ್ಮಾಣವನ್ನು ಸಹ ರೂಪಿಸಿದೆ.

ನ್ಯಾಯ ವ್ಯವಸ್ಥೆ, ಚುನಾವಣಾ ಆಯೋಗ, ಕಂಟ್ರೋಲರ್ ಅಂಡ್ ಆಡಿಟರ್ ಜನರಲ್‌ರಂತಹ ಸ್ವತಂತ್ರ ವ್ಯವಸ್ಥಾಗತೆಯ ಏರ್ಪಾಟುಗಳಿಂದ ಭಾರತ ದೇಶ ಒಳ್ಳೆಯ ಸಂಸ್ಥಾಗತ ಚೌಕಟ್ಟನ್ನು ಏರ್ಪಡಿಸಿದೆ. ಆಡಳಿತ ಅಧಿಕಾರಗಳು (ನಿಷ್ಪಕ್ಷಪಾತವಾಗಿ) ಭೇಧಭಾವನೆ ಇಲ್ಲದಂತೆ ವ್ಯವಹರಿಸುವುದು ಸಹ ಮಹತ್ತರ ಗೆಲುವೆಂದು ಹೇಳಿಕೊಳ್ಳಬೇಕು. ಸೇನಾಪಡೆಗಳ ಮೇಲೆ ಪೌರರ ನಿಯಂತ್ರಣೆಯನ್ನು ಏರ್ಪಡಿಸುವುದು ಮತ್ತೊಂದು ಮುಖ್ಯವಾದ ವಿಷಯ. ನಮ್ಮ ನೆರೆಹೊರೆಯ ದೇಶಗಳಾದ ಪಾಕಿಸ್ತಾನ್‌ರೊಂದಿಗೆ ಹೋಲಿಸಿದರೆ ಪ್ರಜಾಪ್ರಭುತ್ವದ ಸಂಸ್ಥೆಗಳಲ್ಲಿ ಭಾರತ ದೇಶವು ಎಷ್ಟೋ ಮುಂದಿದೆ.

ಐಕ್ಯತೆ,ದೇಶದ ಸಮಸ್ಯೆಯನ್ನು, ಸಮಗ್ರತೆಯನ್ನು ಕಾಪಾಡಿ, ತಡೆಯುವುದರಲ್ಲಿ ಸಹ ಭಾರತ ದೇಶವು ವಿಜಯವಂತವಾಗಿದೆ. ದೇಶದಲ್ಲಿ ಕೊನೆಯಿಲ್ಲದ ವೈವಿಧ್ಯತೆ ಕಾರಣವಾಗಿ ಅದು ಒಡೆದು ಹೋಗುವುದಕ್ಕೆ ಅನುಕೂಲವಾದ ದೇಶವೆಂದು ಎಲ್ಲರೂ ಭಾವಿಸಿದ್ದರು. ಹಾಗೆ ಆಗದಿರುವುದು ಎನ್ನುವುದು ಇತರ ದೇಶಗಳಿಗೆ ಒಳ್ಳೆಯ ಗುಣಪಾಠವಾಗಿ ಉಪಯೋಗಪಡುತ್ತದೆ.

ಆರ್ಥಿಕ ಉದ್ದೇಶಗಳ ವಿಷಯದಲ್ಲಿ ಯೋಜನಾ ಆಯೋಗವನ್ನು ಸ್ಥಾಪಿಸುವುದು. ಸಮತೋಲನೆ ಪ್ರಾದೇಶಿಕ ಅಭಿವೃದ್ಧಿಯನ್ನು ಉದ್ದೇಶವಾಗಿ ಇಟ್ಟುಕೊಳ್ಳುವುದು ಎಂಬ ಅಂಶಗಳು ಹೇಳಿಕೊಳ್ಳುವಂತಹವು. ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಬಗ್ಗೆ ನಿಜವಾದ ಶ್ರದ್ಧೆಯನ್ನು ಕಾಣಿಸಿದ್ದಾರೆ. ಆಹಾರಕ್ಕಾಗಿ ಬೇರೆಯವರ ಮೇಲೆ ಆಧಾರಪಟ್ಟ ಸ್ಥಿತಿಯಿಂದ ಕಾಲಕ್ರಮೇಣ ಆಹಾರ ಸ್ವಯಂ ಸಮೃದ್ಧಿಯನ್ನು ಸಾಧಿಸಿದ ಸ್ಥಿತಿಗೆ ದೇಶವು ಸೇರಿಕೊಂಡಿದೆ. ಇಕದ್ಕೆ ಕೈಗಾರಿಕೆಗಳಿಗೆ ಒಳ್ಳೆಯ ಬುನಾದಿಯಾಗಿ ನಿಂತಿದೆ. ಆದರೆ ಪ್ರದೇಶಗಳ ನಡುವೆ ಸಮಾನವಾದ ಅಭಿವೃದ್ಧಿ ನಡೆಯದೇ ಕೆಲವು ಪ್ರದೇಶಗಳು ಇತರ ಪ್ರದೇಶಗಳಿಗಿಂತ ಹೆಚ್ಚು ಅಭಿವೃದ್ಧಿಯನ್ನು ಪಡೆದಿವೆ. ಅದೇ ವಿಧವಾಗಿ, ಉದ್ಯೋಗ ಅವಕಾಶಗಳು ಬೆಳೆಯಬೇಕಾದಷ್ಟು ಬೆಳೆಯಲಿಲ್ಲ.

ಪ್ರಾಥಮಿಕ ವಿದ್ಯೆಗೆ, ಪ್ರಜಾರೋಗ್ಯಕ್ಕೆ ಕಡಿಮೆ ಪ್ರಾಮುಖ್ಯತೆಯನ್ನು ಕೊಡುವುದು ದೊಡ್ಡ ಲೋಪವೆಂದು ನಿಸ್ಸಂದೇಹವಾಗಿ ಹೇಳಬಹುದು. ಇದು ಭಾರತ ದೇಶವನ್ನು ಬಹಳ ಕಾಲದವರೆಗೆ ಪೀಡಿಸುತ್ತಾ ಇರುತ್ತದೆ. ಅದೇ ಸಮಯದಲ್ಲಿ ಹೊಸ ಶಕವನ್ನು ಆರಂಭಿಸಿದ ಚೈನಾ, ಕೊರಿಯಾಗಳು ಭಾರತ ದೇಶದೊಂದಿಗೆ ಹೋಲಿಸಿದರೆ ಈ ಎರಡೂ ಅಂಶಗಳಲ್ಲಿ ಎಷ್ಟೋ ಅಭಿವೃದ್ಧಿಯನ್ನು ಸಾಧಿಸಿವೆ.

ಕುಲವ್ಯವಸ್ಥೆಯಲ್ಲಿ ಗರ್ವಪಡಬೇಕಾದ ಅಸ್ಪೃಶ್ಯಂತಹವುಗಳನ್ನು ತೆಗೆದು ಹಾಕಿದಾಗ್ಯೂ ಭೇಧಭಾವನೆಗಳು ಇನ್ನೂ ತೀವ್ರವಾಗಿ ಮುಂದುವರೆಯುತ್ತಿವೆ. ಲಿಂಗ ತಾರತಮ್ಯಗಳು ಸಹ ಮುಂದುವರೆಯುತ್ತದೆ.

SCERT TELANGANA

ಕಠಿಣ ಪದಗಳು

ರಾಜ್ಯಗಳ ಪುನರ್ ವ್ಯವಸ್ಥೀಕರಣ   ಒಂದು ಪಕ್ಷದ ಪ್ರಾಧಾನ್ಯ
ಅತ್ಯವಸರ ಪರಿಸ್ಥಿತಿ   ಪ್ರಾದೇಶಿಕ ಚಳುವಳಿಗಳು   ರಾಷ್ಟ್ರೀಕರಣ

ನಿಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಿ !

1 . ಸ್ವಾತಂತ್ರ್ಯವು ಬಂದ ಮೊದಲ ವರ್ಷಗಳಲ್ಲಿ ಸಾಮಾಜಿಕ - ಆರ್ಥಿಕ ಬದಲಾವಣೆಯನ್ನು ತೆಗೆದುಕೊಂಡು ಬರುವುದಕ್ಕೆ ಯಾವ ಚರ್ಯೆಗಳನ್ನು ಕೈಗೊಂಡಿದ್ದಾರೆ? (AS_1)

2. ಒಂದು ಪಕ್ಷದ ಅಧಿಕಾರ ಅಂದರೆ ಏನು ಅರ್ಥಮಾಡಿಕೊಂಡಿದ್ದೀರಿ ? ಅದು ಚುನಾವಣೆಗಳಲ್ಲಿ ಮಾತ್ರವೇ ಅಧಿಕಾರ ಅಥವಾ ಸಿದ್ದಾಂತ ಭಾವಜಾಲದಲ್ಲಿ ಸಹ ಅಧಿಕಾರವೇ? ನಿಮ್ಮ ಕಾರಣಗಳನ್ನು ತಿಳಿಸುತ್ತಾ ಚರ್ಚಿಸಿರಿ. (AS_1)

3 . ಐಕ್ಯತೆ ಸಾಧಿಸುವ ಅಂಶವಾಗಿಯೋ, ಅಥವಾ ವಿಂಗಡಿಸುವ ಅಂಶವಾಗಿಯೇ ಭಾರತ ದೇಶದ ರಾಜಕೀಯಗಳಲ್ಲಿ ಭಾಷೆಯು ಕೇಂದ್ರಬಿಂದುವಾಗಿ ಅನೇಕ ಸಲ ಪರದೆಯ ಮೇಲೆ ಬಂದಿದೆ. ಈ ಘಟನೆಗಳನ್ನು ಗುರ್ತಿಸಿ ಅವುಗಳನ್ನು ವಿವರಿಸಿರಿ. (AS_1)

4 . 1967 ರ ಚುನಾವಣೆಗಳ ನಂತರ ರಾಜಕೀಯ ವ್ಯವಸ್ಥೆಯಲ್ಲಿ ಬಂದ ಮುಖ್ಯವಾದ ಬದಲಾವಣೆಗಳು ಯಾವುವು ? (AS_1)

5. ರಾಜ್ಯಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಬೇರೊಂದು ಆಧಾರವು ಯಾವುದಾದರೂ ಇದೆಯಾ ? ಭಾಷೆಯ ಆಧಾರವಾಗಿ ಪುನರ್‌ವ್ಯವಸ್ಥೀಕರಣಕ್ಕಿಂತ ಅದು ಯಾವ ವಿಧವಾಗಿ ಉತ್ತಮವಾಗಿ ಇದ್ದಿತು ? (AS_1)

6. ಇಂದಿರಾಗಾಂಧಿ ತೆಗೆದುಕೊಂಡ ಯಾವ ಚರ್ಯೆಗಳನ್ನು (ಎಡಪಕ್ಷದ ಕಡೆಗೆ ಹೋಗುವುದೆಂದು ಹೇಳುತ್ತೀರಿ? ಅದಕ್ಕೆ ಮುಂಚೆ ದಶಮಾನಗಳ ವಿಧಾನಗಳೊಂದಿಗೆ ಹೋಲಿಸಿದರೆ ಇವು ಯಾವ ವಿಧವಾಗಿ ಬೇರೆಯಾದವು? ಆರ್ಥಿಕ ಶಾಸ್ತ್ರದ ಅಧ್ಯಾಯಗಳ ಆಧಾರವಾಗಿ ಪ್ರಸ್ತುತ ವಿಧಾನಗಳಿಗೂ, ಅವುಗಳಿಗೆ ಭೇದವೇನೋ ತಿಳಿಸಿರಿ. (AS_1)

7 . ಭಾರತ ಪ್ರಜಾಪ್ರಭುತ್ವವನ್ನು ಅತ್ಯವಸರ ಪರಿಸ್ಥಿತಿ ಯಾವ ವಿಧವಾಗಿ ಹಿಂತೆಗೆದುಕೊಂಡು ಹೋಗಿದೆ ? (AS_1)

8 . ಅತ್ಯವಸರ ಪರಿಸ್ಥಿತಿಯ ಕಾಲದಲ್ಲಿ ಯಾವ ವಿಧವಾದ ವ್ಯವಸ್ಥಾಗತೆಯ ಬದಲಾವಣೆಗಳು ಬಂದಿವೆ ? (AS_1)

9. ಭಾರತ ದೇಶದ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

1) ಮಹಾರಾಷ್ಟ್ರ 2) ಗುಜರಾತ 3) ಬಿಹಾರ 4) ಉತ್ತರ ಪ್ರದೇಶ 5) ಜಮ್ಮೂಕಾಶ್ಮೀರ 6) ನಾಗಾಲ್ಯಾಂಡ
7) ಪಂಜಾಬ 8) ಮೇಘಾಲಾಯ

10. ಭಾರತ ದೇಶದಲ್ಲಿ ಬಹುಪಕ್ಷ ವ್ಯವಸ್ಥೆಯಿಂದ ಪ್ರಜೆಗಳು ಹೊಂದುತ್ತಿರುವ ಲಾಭಗಳು, ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸಿರಿ. (AS_4)

11. ಪುಟ ಸಂಖ್ಯೆ 248 ರಲ್ಲಿನ 2ನೇ ಪ್ಯಾರಾವನ್ನು ಓದಿ ಅದನ್ನು ವ್ಯಾಖ್ಯಾನಿಸಿ. (AS_2)

SCERT TELANGANA

ಅಧ್ಯಾಯ

18 ರಾಜಕೀಯ ಧೋರಣೆಗಳ ಉದಯ 1977-2000

- ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ ಸ್ವತಂತ್ರ ಭಾರತ ದೇಶದಲ್ಲಿನ ರಾಜಕೀಯ ಘಟನೆಗಳ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

ಈ ಅಧ್ಯಾಯದಲ್ಲಿ ಭಾರತದೇಶದ ಆಧುನಿಕ ರಾಜಕೀಯ ಘಟನೆಗಳ ಕುರಿತು ವಿವರವಾಗಿ ತಿಳಿದುಕೊಳ್ಳೋಣ. ಈ ಘಟನೆಗಳು, ಅಂಶಗಳಲ್ಲಿ ಅನೇಕವಾದವು ದೇಶದ ರಾಜಕೀಯ ಮುಖಚಿತ್ರವನ್ನು ತೀವ್ರ ವಿಭಜನೆಗೆ, ಪರಸ್ಪರ ವಿರುದ್ಧ ಧ್ರುವಗಳಿಗೆ ಒಳಗಾಗುವಂತೆ ಮಾಡಿದವು. ಸ್ಪರ್ಧೆಯಿಂದ ಕೂಡಿದ ಬಹುಪಕ್ಷ ವ್ಯವಸ್ಥೆ ಏರ್ಪಟ್ಟಿದ್ದರಿಂದ ಪಕ್ಷ ವ್ಯವಸ್ಥೆ ಬದಲಾಗಿ ಹೋಯಿತು. ಈ ಬದಲಾವಣೆಯಿಂದ ಯಾವ ಒಂದು ಪಕ್ಷಕ್ಕೂ ಸಹ ತನಗೆ ತಾನಾಗಿ ಸರ್ಕಾರವನ್ನು ಏರ್ಪಾಟು ಮಾಡಲಾರದೇ ಹೋಗಿದ್ದರಿಂದ ನಿರಂತರವಾಗಿ ಅನೇಕ ಸಂಕೀರ್ಣ ಸರ್ಕಾರಗಳು ಏರ್ಪಟ್ಟಿವೆ. ಆರ್ಥಿಕ ರಂಗದಲ್ಲಿನ ಅಭಿವೃದ್ಧಿ ವಿಧಾನದಲ್ಲಿ ಈ ಕಾಲವು ಮುಖ್ಯ ಬದಲಾಣೆಗಳನ್ನು ತಂದಿತು. ಮಾರುಕಟ್ಟೆ ಆರ್ಥಿಕ ವಿಧಾನ, ರಾಜಕೀಯಗಳ ಪ್ರಜಾಪ್ರಭುತ್ವದ ನಡುವಿನ ಘರ್ಷಣೆಗಳು ಈ ಕಾಲದಲ್ಲಿ ಸ್ಥಾನ ಪಡೆಯಲಾರಂಭಿಸಿದವು. ಇದೇ ಸಮಯದಲ್ಲಿ ಧರ್ಮ, ಜಾತಿಬೇಧಗಳನ್ನು ಹೊಸದಾಗಿ ಸಿಂಗರಿಸಿ ಅವುಗಳನ್ನು ರಾಜಕೀಯ ಸಮೀಕರಣಕ್ಕೆ ಉಪಯೋಗಿಸಿಕೊಂಡವು. ಈ ಸಮಕಾಲೀನ ಅಂಶಗಳು ಸಂವಿಧಾನದಲ್ಲಿನ ಮೂಲಭೂತ ಮೌಲ್ಯಗಳಾದ ಪ್ರಜಾಪ್ರಭುತ್ವ, ದೇಶದ ಐಕ್ಯತೆ, ಸಮಗ್ರತೆ, ಸಾಮಾಜಿಕ, ಆರ್ಥಿಕ ಬದಲಾವಣೆಗಳನ್ನು ಹೇಗೆ ಪರಿಣಾಮ ಬೀರುತ್ತಿವೆಯೋ ಈ ಅಧ್ಯಾಯದಲ್ಲಿ ನೋಡೋಣ.

ಈ ಕಾಲದಲ್ಲಿನ ಘಟನೆಗಳ ಮೇಲೆ ವಿದ್ಯಾರ್ಥಿಗಳಿಗೆ, ಉಪಾಧ್ಯಾಯರಿಗೆ ತಮ್ಮ ವಿಶ್ವಾಸವನ್ನಿಡಿದು ತಮ್ಮ ಸ್ವಂತ ದೃಷ್ಟಿಕೋನಗಳಿರುತ್ತವೆ. ಆದರೆ ಇತರರ ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳಬೇಕು, ಇತರರನ್ನು ನೋಯಿಸದಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಈ ಅಧ್ಯಾಯದಲ್ಲಿ ಚರ್ಚಿಸಿದ ಪರಿಣಾಮಗಳು ಪ್ರಜಾಪ್ರಭುತ್ವ ಸಂಸ್ಥೆಗಳ ಸ್ವಭಾವ, ಭವಿಷ್ಯದ ಮೇಲೆ ಮುಖ್ಯವಾದ ಪರಿಣಾಮವನ್ನು ತೋರಿಸುತ್ತವೆ, ಅವುಗಳ ವಿವಿಧ ಪಾರ್ಶ್ವಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ನಮ್ಮ ಪ್ರಜಾಪ್ರಭುತ್ವದ ಪರಿಪಕ್ವತೆ ಈ ಚರ್ಚೆಗಳನ್ನು ಹೇಗೆ ನಿರ್ವಹಿಸಿದ್ದೇವೆ ಎನ್ನುವುದರ ಮೇಲೆ ಆಧಾರಪಟ್ಟಿರುತ್ತದೆ.

ತುರ್ತು ಪರಿಸ್ಥಿತಿಯ ಮುಕ್ತಾಯ, ಮುರಾರ್ಜಿದೇಶಾಯಿ, ಚರಣ್‌ಸಿಂಗ್‌ರ ಅಡಿಯಲ್ಲಿ ಜನತಾಪಕ್ಷದ ಸರ್ಕಾರಗಳ ಏರ್ಪಾಟು	•1977
ಇಂದಿರಾಗಾಂಧಿ ನೇತೃತ್ವದಲ್ಲಿ ಕಾಂಗ್ರೇಸ್ ಸರ್ಕಾರ ಏರ್ಪಾಟು	•1980
ಟಿ.ಡಿ.ಪಿ. ಏರ್ಪಾಟು	•1982
ಆಪರೇಷನ್ ಬ್ಲೂಸ್ಟಾರ್, ಇಂದಿರಾಗಾಂಧಿಯ ಕೊಲೆ	•1984
ಪಂಜಾಬಿನ ಮೇಲೆ ಹೆಚ್.ಎಸ್. ಲಾಂಗೋವಾಲ್‌ನೊಂದಿಗೆ, ಅಸ್ಸಾಂ ಮೇಲೆ ಎ.ಎ.ಎಸ್.ಯು.ನೊಂದಿಗೆ ರಾಜೀವ್‌ಗಾಂಧಿ ಒಪ್ಪಂದಗಳು	•1985
ಮಿಜೋನೇಷನಲ್ ಫ್ರಂಟ್‌ನೊಂದಿಗೆ ಒಪ್ಪಂದ	•1986
ಶ್ರೀಲಂಕಾದೊಂದಿಗೆ ಒಪ್ಪಂದ	•1987
ವಿ.ಪಿ.ಸಿಂಗ್, ಚಂದ್ರಶೇಖರ್‌ರೊಂದಿಗೆ ಜನತಾದಳ್ ಸರ್ಕಾರಗಳ ಏರ್ಪಾಟು	•1989
ಮಂಡಲ ಕಮಿಷನ್ ಸಿಫಾರಸ್ಸುಗಳ ಜಾರಿಗೆಯ ನಿರ್ಣಯ	•1989
ರಾಮಜನ್ಮ ಭೂಮಿ ರಥಯಾತ್ರೆ	•1990
ರಾಜೀವ್‌ಗಾಂಧಿಯ ಕೊಲೆ, ಪಿ.ವಿ. ನರಸಿಂಹರಾವ್ ಪ್ರಧಾನಮಂತ್ರಿಯಾಗಿ ಕಾಂಗ್ರೇಸ್ ಸರ್ಕಾರ	•1991
ಆರ್ಥಿಕ ಉದಾರೀಕರಂಣ ವಿಧಾನಗಳು,	•1990
ಬಾಬ್ರಿ ಮಸ್ಜಿದ್‌ನ್ನು ಉರುಳಿಸಿದ್ದು	•1992
ದೇವೆಗೌಡ, ಐ.ಕೆ. ಗುಜ್ರಾಲ್‌ರು ಪ್ರಧಾನಮಂತ್ರಿಗಳಾಗಿ ನೇಷನಲ್ ಫ್ರಂಟ್ ಸರ್ಕಾರ	•1996
ಎ.ಬಿ. ವಾಜಪೇಯಿ ನೇತೃತ್ವದಲ್ಲಿ ಎನ್.ಡಿ.ಎ. ಸರ್ಕಾರ	•1998

SCERT TELANGANA

ತುರ್ತುಪರಿಸ್ಥಿತಿಯ ನಂತರ ಮರಳಿ ಪ್ರಜಾಪ್ರಭುತ್ವ (Return of Democracy after Emergency)

1975ರಿಂದ 85ರ ನಡುವಿನ ಕಾಲ ಭಾರತದೇಶದ ಪ್ರಜಾಪ್ರಭುತ್ವಕ್ಕೆ ಪರೀಕ್ಷೆಯ ಕಾಲವಿದ್ದಂತೆ. ಅದು ಮೂಲಭೂತ ಪ್ರಜಾಪ್ರಭುತ್ವದ ಹಕ್ಕುಗಳನ್ನು ತಿರಸ್ಕರಿಸಿದ ತುರ್ತುಪರಿಸ್ಥಿತಿಯಿಂದ ಪ್ರಾರಂಭವಾಗಿ ರಾಜೀವ್ ನೇತೃತ್ವದಲ್ಲಿನ ಕಾಂಗ್ರೆಸ್ ಪಕ್ಷ ಐತಿಹಾಸಿಕ ಚುನಾವಣೆಗಳ ವಿಜಯದೊಂದಿಗೆ ಮುಗಿಯಿತು. ಈ ಕಾಲವು ಕಾಂಗ್ರೆಸ್ ಪಕ್ಷದ ಆಳ್ವಿಕೆಯೊಂದಿಗೆ ಪ್ರಾರಂಭವಾಗಿ ಮುಗಿದಿದ್ದರೂ, ಕೇಂದ್ರದಲ್ಲೂ, ರಾಜ್ಯಗಳಲ್ಲೂ ಕಾಂಗ್ರೆಸ್‌ಗೆ ಪರ್ಯಾಯಗಳು ರೂಪುಗೊಂಡವು. ಅನೇಕ ದೇಶಗಳಲ್ಲಿ ನಡೆದಂತೆ ಇದು ಭಾರತದೇಶವೂ ಸಹ ಏಕ ಪಕ್ಷ ಪ್ರಜಾಪ್ರಭುತ್ವದಲ್ಲಿ ಜಾರಿಹೋಗದಂತೆ ಸಮರ್ಥವಾಗಿ ನಿವಾರಿಸಿತು. ಪೈಪೋಟಿಯ ಪರ್ಯಾಯಗಳು ಏರ್ಪಟ್ಟಿರುವುದರಿಂದ ಭಾರತೀಯ ಮತದಾರರಿಗೆ ಆಯ್ದುಕೊಳ್ಳಲು ಅವಕಾಶ ಲಭಿಸಿತು. ಇದರಿಂದ ರಾಜ್ಯಮಟ್ಟ, ರಾಷ್ಟ್ರೀಯ ರಾಜಕೀಯಗಳಲ್ಲಿ ವಿಭಿನ್ನ ರಾಜಕೀಯ ದೃಷ್ಟಿಕೋನಗಳಿಗೆ, ವರ್ಗ ಪ್ರಯೋಜನಗಳಿಗೆ ಅವಕಾಶ ಲಭಿಸಿತು. ಸಮಾಜವಾದಿಗಳು, ಹಿಂದೂ ರಾಷ್ಟ್ರೀಯವಾದಿಗಳು, ಕಮ್ಯೂನಿಷ್ಟ್‌ರಂತಹ ರಾಜಕೀಯ ದೃಷ್ಟಿಕೋನಗಳು ರೈತರ, ದಲಿತರ, ಹಿಂದುಳಿದ ಜಾತಿಗಳು, ಪ್ರಾಂತಗಳಂತಹ ವರ್ಗ ಪ್ರಯೋಜನಗಳು ಸಹ ಮುಂದೆ ಬಂದು ತಮ್ಮ ಹಕ್ಕುಗಳಿಗಾಗಿ ಹೋರಾಡಲಾರಂಭಿಸಿದವು. ಇದೇ ಸಮಯದಲ್ಲಿ ಪರಿಸರ ಚಳುವಳಿ, ಸ್ತ್ರೀವಾದ ಚಳುವಳಿ, ಪೌರಹಕ್ಕುಗಳ ಚಳುವಳಿ, ಸಾಹಿತ್ಯ ಚಳುವಳಿಯಂತಹ ಅನೇಕ ರಾಜಕೀಯೇತರ ಚಳುವಳಿಗಳು ಪ್ರಾರಂಭವಾಗಿ ಸಾಮಾಜಿಕ ಬದಲಾವಣೆಗೆ ಶಕ್ತಿಯುತವಾದ ಚಾಲಕಗಳಾಗಿ ಮಾರ್ಪಟ್ಟವು. ಇವುಗಳಲ್ಲಿ ಕೆಲವು ಅಂಶಗಳನ್ನು ಮತ್ತಷ್ಟು ವಿವರವಾಗಿ ನೋಡೋಣ.

- ಹಲವು ಪಕ್ಷಗಳ ಪ್ರಜಾಪ್ರಭುತ್ವದೊಂದಿಗೆ ಹೋಲಿಸಿದರೆ ಏಕ ಪಕ್ಷ ಪ್ರಜಾಪ್ರಭುತ್ವ ಉತ್ತಮವಾದ ಪರ್ಯಾಯವಾಗಿ ಇರುತ್ತಿತ್ತಾ ?
- ಪ್ರತಿಭಟನೆ, ಬದಲಾವಣೆಗಳಿಗೆ ಸಂಬಂಧಿಸಿದ ಸಾಮಾಜಿಕ ಚಳುವಳಿಗಳಿಗೆ ಅನುಕೂಲವಾದ ಪರಿಸ್ಥಿತಿಗಳನ್ನು ಹಲವು ಪಕ್ಷಗಳ ಪ್ರಜಾಪ್ರಭುತ್ವ ಹೇಗೆ ಸಹಕರಿಸುತ್ತದೆ ?

1977ರ ಚುನಾವಣೆಗಳು, ತುರ್ತುಪರಿಸ್ಥಿತಿಗೆ ಮುಕ್ತಾಯ (1977 Elections & the End of Emergency)

1977 ಜನವರಿಯಲ್ಲಿ ಚುನಾವಣೆಗಳನ್ನು ಪ್ರಕಟಿಸಿದಾಗ ಎಲ್ಲರೂ ಆಶ್ಚರ್ಯಚಕಿತರಾದರು. ಚುನಾವಣೆಗಳು ನಡೆಯುತ್ತವೆಂದು ಯಾರೂ ಊಹಿಸಿರಲಿಲ್ಲ. ರಾಜಕೀಯ ಖೈದಿಗಳೆಲ್ಲರನ್ನೂ ಇಂದಿರಾಗಾಂಧಿ ಬಿಡುಗಡೆ ಮಾಡಿ ಚಳುವಳಿ, ಸಮಾವೇಶಗಳನ್ನು ಅನುಮತಿಸದ ಎಲ್ಲಾ ನಿಯಂತ್ರಣಗಳನ್ನು ತೊಲಗಿಸಿ ಸ್ವತಂತ್ರ ನೀಡಿದರು, ಸೆನ್ಸಾರ್‌ನ್ನು ತೊಲಗಿಸಿದರು. ಕಾಂಗ್ರೆಸ್‌ಗೆ ವಿರುದ್ಧವಾಗಿ ಎಲ್ಲಾ ಪ್ರಧಾನ ಪ್ರತಿಪಕ್ಷ ಪಕ್ಷಗಳು ಸೇರಿ ಸ್ಪರ್ಧಿಸಬೇಕೆಂದು ನಿರ್ಣಯಿಸಿದವು. ಕಾಂಗ್ರೆಸ್ (ಓ), ಸ್ವತಂತ್ರ ಪಕ್ಷ, ಭಾರತೀಯ ಜನ ಸಂಘ, ಭಾರತೀಯ ಲೋಕದಳ, ಸಮಾಜವಾದಿ ಪಕ್ಷಗಳು ವಿಲೀನಗೊಂಡು ಜನತಾ ಪಕ್ಷವಾಗಿ ಏರ್ಪಡಬೇಕೆಂದು ನಿರ್ಣಯಿಸಿದವು. ಜಗ್‌ಜೀವನ್ ರಾಮ್‌ರಂತಹ ಮುಖ್ಯವಾದ ಕಾಂಗ್ರೆಸ್ ನಾಯಕರು ಆ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ವಿರುದ್ಧ ವೇದಿಕೆಯಲ್ಲಿ ಸೇರಿದರು. ಇತರ ಪ್ರಧಾನ ಪ್ರತಿಪಕ್ಷ ಪಕ್ಷಗಳಾದ ಡಿಎಂಕೆ, ಎಸ್‌ಐಡಿ, ಸಿಪಿಐ(ಎಂ) ನಂತಹವು ತಮ್ಮ ಅಸ್ತಿತ್ವವನ್ನು ಮುಂದುವರಿಸಬೇಕೆಂದೂ, ಆದರೆ ಕಾಂಗ್ರೆಸ್‌ಗೆ ವಿರುದ್ಧ ವೇದಿಕೆಯಲ್ಲಿ ಜನತಾ ಪಕ್ಷಕ್ಕೆ ಬೆಂಬಲ ನೀಡಬೇಕೆಂದೂ ನಿರ್ಣಯಿಸಿಕೊಂಡವು. ಕಾಂಗ್ರೆಸ್ ವಿರೋಧ, ತುರ್ತುಪರಿಸ್ಥಿತಿಯ ವಿರೋಧ ಪಕ್ಷಗಳೆಲ್ಲಾ ಒಂದಾಗಿ ಬಂದು ಚುನಾವಣೆಗಳಲ್ಲಿ ಸ್ಪರ್ಧಿಸುವಲ್ಲಿ ಜಯಪ್ರಕಾಶ್ ನಾರಾಯಣ್, ಆಚಾರ್ಯ ಜೆಬಿ ಕೃಪಲಾನಿಯಂತಹ ಹಿರಿಯ ನಾಯಕರು ಮುಖ್ಯಪಾತ್ರ ಪೋಷಿಸಿದರು. ಸಾಮಾಜಿಕ, ರಾಜಕೀಯ ಅಂಶಗಳ ಮೇಲೆ ಈ ಪಕ್ಷಗಳಲ್ಲಿ ಕೆಲವಕ್ಕೆ ವೈವಿಧ್ಯ ಭಾವನೆಗಳಿವೆ ಎನ್ನುವ ವಿಷಯವನ್ನು ಇಲ್ಲಿ ನೆನಪಿಟ್ಟುಕೊಳ್ಳಬೇಕು.

ಭಾರತದೇಶದ ಪ್ರಜಾಪ್ರಭುತ್ವಕ್ಕೆ ಅದು ಒಂದು ಐತಿಹಾಸಿಕ ಚುನಾವಣೆ. ಮೊಟ್ಟಮೊದಲ ಬಾರಿಗೆ ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ಸೋಲನ್ನು ಅನುಭವಿಸಿತು.

SCERT TELANGANA

ಈ ಸಮಯದಲ್ಲಿಯೇ ನೀಲಂ ಸಂಜೀವರೆಡ್ಡಿ 1977 ಮಾರ್ಚ್ 26ರಂದು ಆರನೇ ಲೋಕಸಭೆಗೆ ಸ್ಪೀಕರ್‌ಯಾಗಿ ಏಕಗ್ರೀವವಾಗಿ ಆಯ್ಕೆಯಾದರು. ಆ ನಂತರ ಪ್ರಧಾನ ಪ್ರತಿಪಕ್ಷವಾದ ಕಾಂಗ್ರೆಸ್ ಪಕ್ಷದೊಂದಿಗೆ ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲ ನೀಡಲು, ಆತನು ಭಾರತ ರಾಷ್ಟ್ರಪತಿ ಪದವಿಗೆ ಏಕಗ್ರೀವವಾಗಿ ಆಯ್ಕೆಯಾಗಿ 1977 ಜೂಲೈ 25ರಂದು ಭಾರತದ ಆರನೇಯ ರಾಷ್ಟ್ರಪತಿಯಾಗಿ ಪ್ರಮಾಣ ಸ್ವೀಕಾರ ಮಾಡಿದರು. ಇದರಿಂದ ರಾಜಕೀಯ ಪಕ್ಷಗಳು ಸಂಕೀರ್ಣ ಸರ್ಕಾರಗಳು ಏರ್ಪಾಟು ಮಾಡುವುದರ ಮೂಲಕ ಆಡಳಿತ ಮಾಡುವುದು ಎನ್ನು ಹೊಸ ಧೋರಣೆಯನ್ನು ರಾಜಕೀಯ ಇತಿಹಾಸವನ್ನು ಪ್ರಾರಂಭಿಸಿದವೆಂದು ಸ್ಪಷ್ಟವಾಗುತ್ತದೆ. ಮಹಾನ್ ರಾಜನೀತಿ ಶಾಸ್ತ್ರಜ್ಞರು ಅವಲಂಭಿಸಿದ ಉನ್ನತ ಪ್ರಮಾಣಗಳಿಂದ ಕೂಡಿದ ವೈಯಕ್ತಿಕ ಜೀವನಗಳನ್ನು ಅಂಗೀಕರಿಸುತ್ತಾ ಅವರನ್ನು ಸರ್ಕಾರೀ ಕಾರ್ಯಾಲಯಗಳಲ್ಲಿ ಪ್ರಾಮುಖ್ಯತೆ ನೀಡುವುದೆನ್ನುವುದು ಸಾಂಪ್ರದಾಯಿಕ ಪಕ್ಷೀಯ ರಾಜಕೀಯಗಳಲ್ಲಿ ಬಂದ ಒಂದು ತಿರುವು ಎಂದು ಹೇಳಬಹುದು. ನೀಲಂ ಸಂಜೀವರೆಡ್ಡಿ ಆಡಳಿತ ಕಾಲದಲ್ಲಿ ಮುರಾರ್ಜಿದೇಶಾಯ್, ಚರಣ್‌ಸಿಂಗ್, ಇಂದಿರಾಗಾಂಧಿ ಪ್ರಧಾನಮಂತ್ರಿಗಳಾಗಿ ಏರ್ಪಾಟು ಮಾಡಿದ ಮೂರು ಸರ್ಕಾರಗಳೊಂದಿಗೆ ಕೆಲಸ ಮಾಡಿದರು.

ಚಿತ್ರ 18.1 : ಭಾರತ 6ನೇ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ

ಜಯ ಸಾಧಿಸಿದ ಜನತಾ ಪಕ್ಷ ತನ್ನ ಸ್ಥಾನವನ್ನು ಸುಸ್ಥಿರಪಡಿಸಿಕೊಳ್ಳಲು ಒಂಭತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳನ್ನು ತೊಲಗಿಸಿತು. ಶಾಸನ ಸಭೆಗಳಲ್ಲಿ ಆಧಿಕ್ಯತೆ ಇರುವ ರಾಜ್ಯ ಸರ್ಕಾರಗಳನ್ನು ಅವುಗಳ ಆ ಪಕ್ಷವು ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಸೋತಿದ್ದರಿಂದ ಅವುಗಳನ್ನು ಕೇಂದ್ರ ಸರ್ಕಾರ ತೊಲಗಿಸುವುದು ನ್ಯಾಯವೇ ? ಕಾಂಗ್ರೆಸ್ ಪಕ್ಷ ಸೋತಿದೆಯಾದ್ದರಿಂದ ರಾಜ್ಯಗಳಲ್ಲಿಯೂ ಸಹ ಆಳುವ ಹಕ್ಕು ಕಳೆದುಕೊಂಡಿದೆಯೆಂದು ಜನತಾ ಪಕ್ಷ ಸಮರ್ಥಿಸಿಕೊಂಡಿತು. ಆ ರಾಜ್ಯಗಳಲ್ಲಿ ಮರಳಿ ಚುನಾವಣೆಗಳು ನಡೆದಾಗ ಉತ್ತರ ಪ್ರದೇಶ್, ಮಧ್ಯಪ್ರದೇಶ್, ರಾಜಸ್ಥಾನ್, ಬಿಹಾರ್‌ಗಳಲ್ಲಿ ಜನತಾ ಪಕ್ಷ, ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ), ತಮಿಳುನಾಡಿನಲ್ಲಿ ಡಿಎಂಕೆ ಗೆದ್ದಿದ್ದರಿಂದ ಆ ಪಕ್ಷದ ನಿರ್ಣಯ ಸ್ವಲ್ಪಮಟ್ಟಿಗೆ ಸರಿಯಾದುದೆಂದೆನಿಸಿತು.

1970ರಲ್ಲಿ ಕೆಲವು ಪ್ರತಿಪಕ್ಷ ರಾಜಕೀಯ ಪಕ್ಷಗಳು

ಬಿಎಲ್‌ಡಿ-ಭಾರತೀಯ ಲೋಕ್‌ದಳ್- ಭಾರತೀಯ ರೈತರ ಮೇಲೆ ಪ್ರತ್ಯೇಕ ಶ್ರದ್ಧೆ ಅವಶ್ಯಕ ಎಂದ ಸಮಾಜವಾದಿಗಳಿಂದ ಏರ್ಪಟ್ಟ ಪಕ್ಷ, ಪ್ರಧಾನವಾಗಿ ಉತ್ತರ ಪ್ರದೇಶದಲ್ಲಿದೆ.

ಕಾಂಗ್ರೆಸ್ (ಓ) - ಇಂದಿರಾಗಾಂಧಿ ವಿಧಾನಗಳನ್ನು ವಿರೋಧಿಸಿದ ಕಾಂಗ್ರೆಸ್‌ನಲ್ಲಿನ ಸಂಪ್ರದಾಯದವಾದ ವರ್ಗ.

ಸಿಪಿಐ(ಎಂ)-ಭಾರತೀಯ ಕಮ್ಯೂನಿಸ್ಟ್ ಪಾರ್ಟಿ (ಮಾರ್ಕ್ಸಿಸ್ಟ್) - ರಾಷ್ಟ್ರೀಯ ಮಟ್ಟದಲ್ಲಿರುವ ಪಕ್ಷ, ದೊಡ್ಡ ಭೂ ಸುಧಾರಣೆಗಳಿಗೆ, ಕಾರ್ಮಿಕ ಸಂಘಗಳು, ಸಮಾಜವಾದಿ ವಿಧಾನಗಳಿಗೆ ಕೃಷಿ ಮಾಡುತ್ತಿರುವ ಪಕ್ಷ.

ಡಿಎಂಕೆ-ದ್ರವಿಡ ಮುನ್ನೇಟ್ರಕಜಗಂ- ಪ್ರಧಾನವಾಗಿ ತಮಿಳುನಾಡಿನಲ್ಲಿರುವ ಪಕ್ಷ, ರಾಜ್ಯಗಳಿಗೆ ಮತ್ತಷ್ಟು ಅಧಿಕಾರಗಳು, ಸ್ವಾಯತ್ತತೆ ಕೋರುವ ಪಕ್ಷ.

ಜನಸಂಘ್ - ಹಿಂದೂ ರಾಷ್ಟ್ರೀಯವಾದಿ ಪಕ್ಷ. ಮುಖ್ಯವಾಗಿ ಉತ್ತರಾಧಿ ರಾಜ್ಯಗಳಿಗೆ ನೇಮಿತವಾಗಿದೆ.

ಎಸ್‌ಎಡಿ-ಶಿರೋಮಣಿ ಅಕಾಲೀದಳ್- ಪಂಜಾಬ್‌ಗೆ ಸೀಮಿತವಾಗಿ ಸಿಕ್ಕರಿಗಾಗಿ ಪ್ರತ್ಯೇಕವಾಗಿ ಕೆಲಸ ಮಾಡುತ್ತಿರುವ ಪಕ್ಷ. ಗುರುದ್ವಾರಗಳ ಆಧಾರವಾಗಿ ಸಂಘಟಿತವಾಗಿದೆ. ಆದ್ದರಿಂದ ಇದಕ್ಕೆ ಸ್ವಲ್ಪ ಧಾರ್ಮಿಕಪರವಾದ ಭಾವನೆಗಳಿವೆ. ಇದು ಸಹ ರಾಜ್ಯಗಳಿಗೆ ಮತ್ತಷ್ಟು ಸ್ವಾಯತ್ತತೆ ಕೋರಿದ ಪಕ್ಷ.

SCERT TELANGANA

ಚಿತ್ರ 18.2 : ಮೊದಲ ಕಾಂಗ್ರೇಸೇತರ ಪ್ರಧಾನಮಂತ್ರಿಯಾದ ಮುರಾರ್ಜಿದೇಶಾಯಿ

ಪ್ರಜಾಪ್ರಭುತ್ವನ್ನು, ಸ್ವತಂತ್ರವನ್ನು ಪುನರ್‌ಸ್ಥಾಪಿಸುವತ್ತೇವೆಂಬ ವಾಗ್ದಾನದೊಂದಿಗೆ ಜನತಾಪಕ್ಷ ಅಧಿಕಾರಕ್ಕೆ ಬಂದಿತು. ಆದರೆ ಆಂತರಿಕ ವೈಷಮ್ಯಗಳ ಕಾರಣದಿಂದಾಗಿ ಅದರ ಆಳ್ವಿಕೆ ಆ ಪರಿಣಾಮ ಕ್ಕೊಳಗಾಯಿತು. ಆಂತರಿಕ ಕಲಹಗಳಿಗೆ ಮತ್ತು ಪಕ್ಷಾಂತರಗಳಿಗೆ ಈ ಆಡಳಿತ ಒಂದು ಚಿಹ್ನೆಯಾಗಿ ಉಳಿಯಿತು. ಪಕ್ಷದೊಳಗಿನ ಆಂತರಿಕ ಕಲಹಗಳಿಂದಾಗಿ ಮೂರು ವರ್ಷಗಳೊಳಗೆ ಸರ್ಕಾರ ಉರುಳಿಹೋಗಿ, 1980ರಲ್ಲಿ ಹೊಸ ಚುನಾವಣೆಗಳ ನಿರ್ವಹಣೆಗೆ ದಾರಿ ಮಾಡಿತು.

1980ರಲ್ಲಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬಂದಿತು. ಕೂಡಲೇ ಒಂಬತ್ತು ರಾಜ್ಯಗಳಲ್ಲಿನ ಕಾಂಗ್ರೇಸೇತರ, ಜನತಾ ಸರ್ಕಾರಗಳನ್ನು ರದ್ದುಗೊಳಿಸಿ ಜನತಾಪಕ್ಷದ ರೀತಿಯಲ್ಲಿಯೇ ಕಾಂಗ್ರೆಸ್ ಸರ್ಕಾರ ಪ್ರತಿಸ್ಪಂದಿಸಿತು. ತಮಿಳುನಾಡು, ಪಶ್ಚಿಮ ಬಂಗಾಳಗಳನ್ನು ಹೊರತು ಪಡಿಸಿ, ಉಳಿದ ಎಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ ಜಯಸಾಧಿಸಿತು.

ಜನತಾ ಪಕ್ಷ, ಕಾಂಗ್ರೆಸ್ ಸರ್ಕಾರಗಳು ಒಕ್ಕೂಟ ಸೂತ್ರಗಳನ್ನು ಬಲಹೀನಪಡಿಸಿ ಕೇಂದ್ರೀಕೃತ ಕ್ರಮಗಳಿಗೆ ಬೆಂಬಲ ನೀಡಿದವು. ಇದರೊಂದಿಗೆ ದೇಶದ ಸಮಗ್ರತೆಗೆ ಕೆಲವು ತೀವ್ರವಾದ ಸವಾಲುಗಳು ಎದುರಾದವು. ಅನೇಕ ರಾಜ್ಯಗಳ ಪ್ರಜೆಗಳು ಪರಕೀಯ ಭಾವನೆಗಳಿಗೆ ಒಳಗಾಗಿ ಕೇಂದ್ರದಿಂದ ಮತ್ತಷ್ಟು ಸ್ವಾಯತ್ತತೆಯನ್ನು, ಕೆಲವು ಭಾರತ ದೇಶದಿಂದ ಪ್ರತ್ಯೇಕವಾಗುವುದನ್ನು ಕೋರಿದವು. ರಾಷ್ಟ್ರೀಯ ಮಟ್ಟದಲ್ಲಿ ಮತ್ತಷ್ಟು ನಿರ್ಣಯಾತ್ಮಕವಾದ ಪಾತ್ರ, ಮತ್ತಷ್ಟು ಆರ್ಥಿಕ ಸ್ವಾಯತ್ತತೆ, ರಾಜ್ಯಗಳ ವಿಷಯಗಳಲ್ಲಿ ತಲೆಹಾಕುವುದು, ಗವರ್ನರ್ ಅಧಿಕಾರಗಳ ದುರ್ವಿನಿಯೋಗ, ಇಷ್ಟಬಂದಂತೆ ರಾಷ್ಟ್ರಪತಿ ಪಾಲನೆ ವಿಧಿಸುವುದಂತಹ ಅಂಶಗಳೊಂದಿಗೆ ಕಾಂಗ್ರೇಸೇತರ ಪ್ರಾಂತೀಯ ರಾಜಕೀಯ ಪಕ್ಷಗಳು (ಎಸ್‌ಎಡಿ, ಡಿಎಂಕೆಗಳಂತವು) ಒಂದು ವೇದಿಕೆಯಾಗಿ ಏರ್ಪಟ್ಟವು.

ರಾಷ್ಟ್ರಪತಿ ಪಾಲನೆ

ಸಂವಿಧಾನದಲ್ಲಿನ 356ನೇ ವಿಧಿಯ ಪ್ರಕಾರ ರಾಜ್ಯ ಸರ್ಕಾರ ಸಂವಿಧಾನದ ಪ್ರಕಾರ ರಾಜ್ಯದ ಆಡಳಿತ ನಡೆಸಲಾರದೆಂದು ಗವರ್ನರ್ ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವನ್ನು ತೊಲಗಿಸಬೇಕೆಂದು, ಇನ್ನೂ ಅವಶ್ಯಕವಾದರೆ ಶಾಸನ ಸಭೆಯನ್ನು ರದ್ದು ಮಾಡಬೇಕೆಂದು ರಾಷ್ಟ್ರಪತಿಗೆ ಸಿಫಾರಸ್ಸು ಮಾಡಬಹುದು. ಆಗ ಪ್ರಧಾನಮಂತ್ರಿಯ ಸಲಹೆಯೊಂದಿಗೆ ರಾಜ್ಯ ಸರ್ಕಾರವನ್ನು ರಾಷ್ಟ್ರಪತಿ ತೊಲಗಿಸಿ ಆಡಳಿತ ಬಾದ್ಯತೆಗಳನ್ನು ಕೈಹಿಡಿಯಬೇಕೆಂದು ರಾಜ್ಯದ ಗವರ್ನರ್‌ನನ್ನು ಕೋರಬಹುದು.

ಇದಕ್ಕೆ ಸಂಬಂಧಿಸಿದ ನಿರ್ದಿಷ್ಟವಾದ ಮಾರ್ಗದರ್ಶಕಗಳು ಸಂವಿಧಾನದಲ್ಲಿ ಇಲ್ಲದಿದ್ದುದ್ದರಿಂದ ಅನೇಕ ಕೇಂದ್ರ ಸರ್ಕಾರದಲ್ಲಿ ಪದೇ ಪದೇ 356ನೇ ವಿಧಿಯನ್ನು ರಾಜ್ಯ ಸರ್ಕಾರದಲ್ಲಿ ಅಧಿಕಾರದಲ್ಲಿರುವ ಇತರ ಪ್ರತಿಪಕ್ಷಗಳನ್ನು ವೇಧಿಸಲು, ತೊಲಗಿಸಲು ದುರ್ವಿವಿನಿಯೋಗ ಪಡಿಸುತ್ತಿದ್ದವು.

ಕೇಂದ್ರ ಸರ್ಕಾರ 356ನೇ ವಿಧಿಯನ್ನು ಪ್ರಯೋಗಿಸಲು 1994ರಲ್ಲಿ ನೀಡಿದ ಮುಖ್ಯವಾದ ತೀರ್ಪಿನಲ್ಲಿ ನಿರ್ದಿಷ್ಟವಾದ ನಿಯಮಗಳನ್ನು ತಿಳಿಸಿದೆ. ಅಂದಿನಿಂದ, ಈ ಅಧಿಕಾರವನ್ನು ದುರ್ವಿನಿಯೋಗ ಪಡಿಸುವುದು ವಿರಳವಾಗಿದೆ.

- ರಾಜ್ಯಗಳಲ್ಲಿ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿದ ಸರ್ಕಾರಗಳಿದ್ದಾಗ ಕೇಂದ್ರ ಸರ್ಕಾರ ಅವುಗಳನ್ನು ತೊಲಗಿಸಿದ ಸಂದರ್ಭಗಳು ಅನೇಕ ಇವೆ. ಪ್ರಜಾಪ್ರಭುತ್ವದ ಸೂತ್ರಗಳಿಗೆ ಇದು ಹೇಗೆ ಭಂಗ ತರುವುದೋ ಚರ್ಚಿಸಿರಿ.

ಪ್ರಾಂತೀಯ ಆಕಾಂಕ್ಷೆಗಳ ಉದಯ : (Emergence of Regional Aspirations)

ಭಾರತದೇಶದಲ್ಲಿನ ವಿಭಿನ್ನ ಪ್ರಾಂತಗಳಲ್ಲಿ ಮತ್ತಷ್ಟು ಸ್ವಾಯತ್ತತೆಗಾಗಿ ನಡೆದ ಮೂರು ಚಳುವಳಿಗಳನ್ನು ಪರಿಶೀಲಿಸೋಣ. ಇವು ಆಂಧ್ರಪ್ರದೇಶ್, ಅಸ್ಸಾಂ, ಪಂಜಾಬ್. ಈ ಚಳುವಳಿಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ಗುರ್ತಿಸಿರಿ. ಸ್ವಾಯತತೆಗೆ ಸಂಬಂಧಿಸಿದ ಮೂರು ವಿಧವಾದ ಧೋರಣೆಗಳಿಗೆ ಇವು ಪ್ರತಿನಿಧಿತ್ವ ವಹಿಸುತ್ತದೆ.

SCERT TELANGANA

ಆಂಧ್ರಪ್ರದೇಶ್ (Andhra Pradesh) :



ಚಿತ್ರ 18.3 : ಎನ್.ಟಿ.

ಆಂಧ್ರಪ್ರದೇಶದಲ್ಲಿ ಮುಖ್ಯಮಂತ್ರಿಗಳನ್ನು ಕೇಂದ್ರ ಕಾಂಗ್ರೆಸ್ ನಾಯಕತ್ವ ಪದೇ ಪದೇ ಬದಲಾಯಿಸುತ್ತಿರುವುದು, ಮೇಲಿನಿಂದ ನಾಯಕರ ಮೇಲಿನ ಒತ್ತಡ ಇಲ್ಲಿಯ ಜನರಿಗೆ ಇಷ್ಟವಾಗಲಿಲ್ಲ. ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವದಿಂದಾಗಿ ಆಂಧ್ರಪ್ರದೇಶ್ ನಾಯಕತ್ವಕ್ಕೆ ತಕ್ಕಷ್ಟು ಗೌರವ ಲಭಿಸುತ್ತಿಲ್ಲವೆಂದು ತೆಲುಗು ಪ್ರಜೆಗಳ ಆತ್ಮಗೌರವಕ್ಕೆ ಅವಮಾನವಾಗಿದೆಯೆಂದು ಭಾವಿಸಲಾರಂಭಿಸಿದರು. ಜನಾದರಣೆ ಇರುವ ಖ್ಯಾತ ಸಿನೀನಟನಾದ ಎನ್.ಟಿ.ರಾಮಾರಾವು (ಎನ್.ಟಿ.ಆರ್) ಈ ಅಂಶವನ್ನು ಕೈಹಿಡಿದನು. 1982ರಲ್ಲಿ ತನ್ನ 60ನೇ ಜನ್ಮದಿನದಂದು ತೆಲುಗು ದೇಶಂ ಪಕ್ಷ (ತೆದೇಪ)ವನ್ನು ಸ್ಥಾಪಿಸಿದನು. ತೆಲುಗಿನವರ ಆತ್ಮಗೌರವಕ್ಕಾಗಿ ತೆದೇಪ ಕೃಷಿ ಮಾಡುತ್ತದೆಂದು ಆತ ಹೇಳಿದನು. ರಾಜ್ಯವನ್ನು ಕಾಂಗ್ರೆಸ್ ಪಕ್ಷ ಕೆಳವುಟ್ಟದ ಕಾರ್ಯಾಲಯವಾಗಿ ಪರಿಗಣಿಸುವಂತಿಲ್ಲವೆಂದು ಆತನು ವಾದಿಸಿದನು. ಬಡವರಿಗೆ ಎರಡು ರೂಪಾಯಿಗಳಿಗೆ ಕಿಲೋ ಅಕ್ಕಿ, ಸರ್ಕಾರೀ ಪಾಠಶಾಲೆ33ಗಳಲ್ಲಿ ಮಧ್ಯಾಹ್ನ ಊಟದ ಯೋಜನೆ, ಮಧ್ಯಪಾನ ನಿಷೇಧದಂತಹ ಬಡವರ ಸಂಕ್ಷೇಮ ಯೋಜನೆಗಳನ್ನು ಸಹ ಆತನು ಪ್ರಕಟಿಸಿದನು. ಈ ಜನಾಕರ್ಷಕ ಕ್ರಮಗಳಿಂದ 1982 ರ ಚುನಾವಣೆಯಲ್ಲಿ ತೆ.ದೇ.ಪ. ಘನವಿಜಯ ಸಾಧಿಸಿತು. ಆದರೆ ಆತ 1984ರಲ್ಲಿ ಶಸ್ತ್ರಚಿಕಿತ್ಸೆಗಾಗಿ ಅಮೇರಿಕಾಕ್ಕೆ ಹೋದಾಗ ಗವರ್ನರ್ ಆತನ ಸರ್ಕಾರವನ್ನು ಬರ್ತರಫ್ (ವಜಾಮಾಡಿ) ಮಾಡಿದನು. ತೆ.ದೇ.ಪ.ದಿಂದ ಕಾಂಗ್ರೆಸ್‌ಗೆ ಪಕ್ಷಾಂತರಗೊಂಡ ಎನ್. ಭಾಸ್ಕರ್‌ರಾವ್‌ನನ್ನು ಮುಖ್ಯಮಂತ್ರಿಯಾಗಿ ಗವರ್ನರ್ ಆಹ್ವಾನಿಸಿದನು. ಅಮೇರಿಕಾದಿಂದ ಮರಳಿ ಬಂದ ನಂತರ ಎನ್‌ಟಿಆರ್ ಗವರ್ನರ್ ಕ್ರಮವನ್ನು ಆಕ್ಷೇಪಿಸಿ ಶಾಸನಸಭೆ ಸದಸ್ಯರಲ್ಲಿ ಬಹುಮತ ಬೆಂಬಲ ತನಗೆ ಇದೆ ಎಂದು ನಿರೂಪಿಸಿದನು. ಒಂದು ತಿಂಗಳ ಪ್ರಜಾ ಹೋರಾಟದ ನಂತರ ಕೇಂದ್ರ ಸರ್ಕಾರ ಹೊಸ ಗವರ್ನರ್‌ನನ್ನು ನಿಯಮಿಸಿತು. ಆತನು ಆಂಧ್ರಪ್ರದೇಶ್ ಮುಖ್ಯಮಂತ್ರಿಯಾಗಿ ಎನ್.ಟಿ.ರಾಮಾರಾವ್‌ನನ್ನು ಮರಳಿ ನಿಯಮಿಸಿದನು. ತನ್ನ ಸರ್ಕಾರವನ್ನು ವಿನಾಕಾರಣ ತೊಲಗಿಸಿವುದರ ಮೇಲೆ ಮಾಡಿದ ಹೋರಾಟದಲ್ಲಿ ಎನ್‌ಟಿಆರ್‌ಗೆ ಇತರ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಸಿಪಿಐ(ಎಂ), ಡಿಎಂಕೆ, ಎಸ್‌ಎಡಿ, ನೇಷನಲ್ ಕನ್ಫರೆನ್ಸ್‌ದಂತಹ ಅನೇಕ ಪಕ್ಷಗಳು ಬೆಂಬಲ ನೀಡಿದವು.

- ಎನ್‌ಟಿಆರ್‌ನ ರಾಜಕೀಯಗಳಲ್ಲಿ ಈ ಕೆಳಗಿನ ಅಂಶಗಳ ಪ್ರಾಮುಖ್ಯತೆಯನ್ನು ಚರ್ಚಿಸಿರಿ.

i. ಸಿನೀನಾಯಕನಾಗಿದ್ದ ಹಿನ್ನೆಲೆ
ii. ರಾಜ್ಯದ ಆತ್ಮಗೌರವಕ್ಕಾಗಿ ಹೋರಾಟ
iii. ಬಡವರಿಗೆ ಜನಾಕರ್ಷಕ ಸಂಕ್ಷೇಮ ಯೋಜನೆಗಳು
iv. ಇತರ ಪ್ರಾಂತೀಯ ಪಕ್ಷಗಳೊಂದಿಗೆ ಸಂಬಂಧಗಳು

ಅಸ್ಸಾಂ ಚಳುವಳಿ (Assam Movement) :

ಸ್ವಾಯತ್ತತೆಗೆ ಇದೇ ವಿಧವಾದ ಆದರೆ ಇನ್ನೂ ಶಕ್ತಿಯುತವಾದ ಚಳುವಳಿ ಅಸ್ಸಾಂನಲ್ಲಿ ನಡೆಯುತ್ತಿದೆ. ಅಸ್ಸಾಂನಲ್ಲಿ ಅಸ್ಸಾಮೀ ಭಾಷೆಯಲ್ಲದೇ ಬೆಂಗಾಲಿ ಭಾಷೆ ಸಹ ಹೆಚ್ಚಾಗಿ ಮಾತನಾಡುತ್ತಾರೆ. ಬ್ರಿಟೀಷರ ಆಳ್ವಿಕೆಯ ಕಾಲದಿಂದ ರಾಜ್ಯದ ಆಡಳಿತದಲ್ಲಿ ಕೆಳ, ಮಾಧ್ಯಮಿಕ ಹಂತದ ಉದ್ಯೋಗಗಳಲ್ಲಿ ಬೆಂಗಾಲಿಗಳು ಇರುತ್ತಿದ್ದರು. ಬೆಂಗಾಲೀ ಅಧಿಕಾರಿಗಳು ತಮ್ಮನ್ನು ಸಮಾನರಾಗಿಯಲ್ಲದೇ ಎರಡನೇ ತರಗತಿ ಪೌರರಾಗಿ ನೋಡುತ್ತಿದ್ದಾರೆಂದು ಅಸ್ಸಾಮೀಯರು ಭಾವಿಸುತ್ತಿದ್ದರು. ಸ್ವಾತಂತ್ರ್ಯದ ನಂತರ ಬೆಂಗಾಲೀ ಮಾತನಾಡುವ ಪ್ರಜೆಗಳು ದೊಡ್ಡ ಸಂಖ್ಯೆಯಲ್ಲಿ ಅಸ್ಸಾಂನಲ್ಲಿ ಸ್ಥಿರಪಡಲಾರಂಭಿಸಿದರು. ಇಷ್ಟೆಲ್ಲಾ ಸಾಲದೆ ಸರಿಹದ್ದು (ಗಡಿ) ಆಚೆ ಬಾಂಗ್ಲಾದೇಶದಿಂದ ಎಷ್ಟೋ ಜನರು ವಲಸೆ ಬರಲಾರಂಭಿಸಿದರು. ಪಕ್ಕದ ದೇಶದಲ್ಲಿನ ರಾಜಕೀಯ ಅಸ್ಥಿರತೆ, ಇಲ್ಲವೇ ಪ್ರಕೃತಿ ವೈಪರಿತ್ಯಗಳು ಸಂಭವಿಸಿದಾಗ ಸಾವಿರಾರು ಜನರು ರಾಜ್ಯದೊಳಗೆ ವಲಸೆ ಬಂದು ಸ್ಥಳೀಯರಿಗೆ ಅಡಚಣೆಯುಂಟು ಮಾಡಲಾರಂಭಿಸಿದರು. ಸ್ಥಳೀಯ

SCERT TELANGANA

ಜನರು ಸಾಂಸ್ಕೃತಿಕ ಮೂಲಗಳನ್ನು ಕಳೆದುಕೊಳ್ಳುತ್ತೇವೆಂದೂ, ಅಷ್ಟೇ ಅಲ್ಲದ್ಯೇ ಹೊರಗಿನವರು ಹೆಚ್ಚಾಗಿ ಜನಸಂಖ್ಯೆಯಲ್ಲಿ ತಮ್ಮ ಸಂಖ್ಯೆ ಕಡಿಮೆಯಾಗುವುದೆಂದು ಭಯಪಡಲಾರಂಭಿಸಿದರು.

ಜನರಲ್ಲಿರುವ ಈ ಅಸಂತೃಪ್ತಿ 1970ರಲ್ಲಿ ಸಾಮಾಜಿಕ ಚಳುವಳಿಯಾಗಿ ಬದಲಾಯಿತು. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಎಎಎಸ್‌ಯು) ಈ ಚಳುವಳಿಗೆ ಮುಂಭಾಗದಲ್ಲಿ ನಿಂತಿದೆ. ಈ ಸಂಘ ರಾಜ್ಯದಲ್ಲೆಲ್ಲಾ ವಿಸ್ತರಿಸಿದೆ, ಪ್ರತ್ಯೇಕವಾಗಿ ಯುವಕರಲ್ಲಿ ಅದಕ್ಕೆ ಎಷ್ಟೋ ಆದರಣೆ ಲಭಿಸಿದೆ. ತನ್ನ ಬೇಡಿಕೆಗಳನ್ನು - ಪ್ರಧಾನವಾಗಿ ಹೊರಗಿನವರನ್ನು ತೆಗೆದುಹಾಕಬೇಕೆಂದು ಕೇಂದ್ರಸರ್ಕಾರಕ್ಕೆ ವಿರುದ್ಧವಾಗಿ ಎಷ್ಟೋ ಮುಷ್ಕರಗಳು, ಆಂದೋಲನೆಗಳು, ಪಾದಯಾತ್ರೆಗಳು ನಿರ್ವಹಿಸಿತು.

ಸಂಸ್ಕೃತಿ, ಜನಸಂಖ್ಯೆಯ ಅಂಶಗಳಲ್ಲದೇ ಈ ಚಳುವಳಿಗೆ ಆರ್ಥಿಕ ಅಂಶ ಸಹ ಇದೆ. ವ್ಯಾಪಾರ, ಇತರ ಸಂಸ್ಥೆಗಳು ಅಸ್ಸಾಮೇತರ ಜನರ ಕೈಯಲ್ಲಿ ಇರುತ್ತದ್ದವು. ರಾಜ್ಯದಲ್ಲಿನ ಮುಖ್ಯ ಸಂಪನ್ಮೂಲಗಳಾದ ಟೀ, ಪೆಟ್ರೋಲಿಯಂನಿಂದ ಸ್ಥಳೀಯರಿಗೆ ಲಾಭದಾಯಕವಾಗಿರಲಿಲ್ಲ. ಟೀ ಕೈಗಾರಿಕೆ ಪ್ರಧಾನವಾಗಿ ಕೊಲ್ಕತ್ತಾದಕದಲ್ಲಿದೆ. ತೈಲ ಕೈಗಾರಿಕೆ ಸಾರ್ವಜನಿಕ ರಂಗದಲ್ಲಿದ್ದರೂ, ಸ್ಥಳೀಯರಲ್ಲಿ ಬಹಳ ಸ್ವಲ್ಪಜನ ಮಾತ್ರವೇ ಅದರಲ್ಲಿರುವರು. ಅಷ್ಟೇ ಅಲ್ಲದೇ ತೈಲವನ್ನು ರಾಜ್ಯದಿಂದ ಸಾಗಿಸಿ ಬೇರೆ ಸ್ಥಳಗಳಲ್ಲಿ ಶುದ್ಧೀಕರಿಸುತ್ತಿದ್ದಾರೆ. ಇವುಗಳೆಲ್ಲವುಗಳ ಸಾರಾಂಶವೇನೆಂದರೆ ಅಸ್ಸಾಂನ್ನು ಆಂತರಿಕ ವಸಾಹತು ಪ್ರಾಂತವಾಗಿ ಪರಿಗಣಿಸುತ್ತಿದ್ದಾರೆಂದೂ, ಇದನ್ನು ನಿಲ್ಲಿಸಬೇಕೆಂದು ಜನರ ಆಂದೋಲನೆ ನಡೆಸಿದರು. ಉದ್ಯೋಗಗಳಲ್ಲಿ ಸ್ಥಳೀಯ ಜನರಿಗೆ ಅಧಿಕ ಪ್ರಾಧಾನ್ಯತೆ ನೀಡುವುದು, ಹೊರಗಿನವರನ್ನು ತೊಲಗಿಸುವುದು, ಸಂಪನ್ಮೂಲಗಳನ್ನು ಸ್ಥಳೀಯ ಜನರ ಪ್ರಯೋಜನೆಗಳಿಗಾಗಿ ವಿನಿಯೋಗಿಸುವುದು ಇಂತಹ ಪ್ರಧಾನ ಬೇಡಿಕೆಗಳು.

ಈ ಬೇಡಿಕೆಗಳು ಜನರಲ್ಲಿ ಜಾತಿಪರವಾದ ವಿಭೇಧಗಳನ್ನು ಸೃಷ್ಟಿಸಿದವು. ಏಕೆಂದರೆ ಪಕ್ಕದ ದೇಶದಿಂದ ಬಂದ ಹೊರಗಿನವರಲ್ಲಿ ಹೆಚ್ಚು ಜನರು ಮುಸ್ಲಿಮರಿದ್ದಾರೆ. ಚಳುವಳಿ ಬಂಗಾಳ ವಿರೋಧ, ವಾಮಪಕ್ಷ ವಿರೋಧ (ಪಶ್ಚಿಮ ಬಂಗಾಳದಲ್ಲಿ ವಾಮಪಕ್ಷ ಸರ್ಕಾರ ಅಧಿಕಾರದಲ್ಲಿದೆ). ಅಸ್ಸಾಮೇತರ ಜನರ ಬಗ್ಗೆ ವಿರೋಧ, ಕೊನೆಯದಾಗಿ ಭಾರತದೇಶದ ವಿರೋಧವನ್ನು ಹೊಂದಿದ್ದರಿಂದ ಪರಿಸ್ಥಿತಿಗಳು ಹದಗೆಟ್ಟವು. ಹಿಂಸೆ ಗಲಭೆಗಳು ತೀವ್ರರೂಪ ಪಡೆದಿದ್ದರಿಂದ ಕೇಂದ್ರ ಸರ್ಕಾರ ಇದರ ಮೇಲೆ ದೃಷ್ಟಿ ಹರಿಸಬೇಕಾಯಿತು. ಹೋರಾಟಗಾರರು, ಕೇಂದ್ರ ಸರ್ಕಾರಗಳ ನಡುವೆ ಮೂರು ವರ್ಷಗಳ ಚರ್ಚೆಗಳ ನಂತರ ಒಂದು ಒಪ್ಪಂದಕ್ಕೆ ಬಂದರು. 1984ರಲ್ಲಿ ರಾಜೀವ್‌ಗಾಂಧಿ ನೇತೃತ್ವದಲ್ಲಿ ಕೇಂದ್ರ ಸರ್ಕಾರ, ಎಎಎಸ್‌ಯುಗಳು ಈ ಒಪ್ಪಂದಕ್ಕೆ ಸಹಿ ಮಾಡಿದವು. ಮರಳಿ ಸಾಧಾರಣ ಪರಿಸ್ಥಿತಿಗಳನ್ನು ಸ್ಥಾಪಿಸಲು ಸಹಾಯಕವಾಗುವಂತೆ ರಾಜ್ಯದಲ್ಲಿನ ಕಾಂಗ್ರೇಸ್ ಸರ್ಕಾರ ಇನ್ನೂ ತನ್ನ ಅಧಿಕಾರಾವಧಿ ಇರುವಾಗಲೇ ಉದಾರವಾಗಿ ಇಳಿದು ಚುನಾವಣೆಗಳಿಗೆ ಅವಕಾಶ ಕಲ್ಪಿಸಿತು. ಈ ಚುನಾವಣೆಗಳಲ್ಲಿ ಅಸ್ಸಾಂ ಗಣ ಪರಿಷತ್ (ಎಜಿಪಿ-ಎಎಎಸ್‌ಯು ಗಳಿಗೆ ಅನುಬಂಧವಾಗಿ ಏರ್ಪಟ್ಟ ಪಕ್ಷ) ಅಧಿಕಾರಕ್ಕೆ ಬಂದಿತು.

ಆದರೆ, ಈ ರಾಜಕೀಯ ಬದಲಾವಣೆಗಳಿಂದ ಈ ಚಳುವಳಿಗೆ ಕಾರಣವಾದ ದೀರ್ಘಕಾಲಿಕ ಸಮಸ್ಯೆಗಳು ಪರಿಷ್ಕಾರವಾಗಲಿಲ್ಲ. ರಾಯಭಾರ ಕಾರಣಗಳು, ಭೌಗೋಳಿಕ ಕಾರಣಗಳಿಂದ (ಪರ್ವತಗಳು, ನದಿಗಳು ಇದ್ದುದರಿಂದ ಎಲ್ಲ ಕಡೆಗೂ ಬೇಲಿಹಾಕಲು ಸಾಧ್ಯವಾಗದು) ಬಾಂಗ್ಲದೇಶದ ಮೇರೆಯನ್ನು ಮುಚ್ಚಿ ಹಾಕಲು ಸಾಧ್ಯವಾಗಲಿಲ್ಲ. ಹಲವಾರು ವರ್ಷಗಳ ಹಿಂದೆ ಬಂದು ಸ್ಥಿರಪಟ್ಟ ಬೆಂಗಾಳಿಗರನ್ನು, ಹೊಸದಾಗಿ ವಲಸೆ ಬಂದವರನ್ನು ಗುರ್ತಿಸುವುದು ಸಾಧ್ಯವಾಗಲಿಲ್ಲ. ವಲಸೆ ಬಂದವರನ್ನು ಹಿಂದಕ್ಕೆ ಕಳುಹಿಸುವುದು ಸಾಧ್ಯವಾಗಲಿಲ್ಲ. ಅದೇ ಸಮಯದಲ್ಲಿ ಅಸ್ಥಿತ್ವ ಮೂಲಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರಿಂದ ಅಸ್ಸಾಂನಲ್ಲಿ ಬೋಡೋಗಳು, ಖಾಸೀಗಳು, ಮಿಜೋಗಳು, ಕರ್ಜೀಗಳಂತಹ ಬುಡಕಟ್ಟುಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿತು. ಇವರಲ್ಲಿ ಅನೇಕರು ತಮಗೂ ಸಹ ಸ್ವಾಯತ್ತತೆಬೇಕೆಂದು ಕೇಳಲಾರಂಭಿಸಿದರು. ಅವರು ತಮ್ಮ ಹಕ್ಕುಗಳನ್ನು, ಬೇಡಿಕೆಗಳನ್ನು ಪ್ರತಿಪಾದಿಸಲು ಪ್ರಾರಂಭಿಸಿ ತಮ್ಮ ಪ್ರಾಂತಗಳಿಂದ ಹೊರಗಿನವರನ್ನು ಹೊರಗೂಡಿಸಬೇಕೆಂದು ಕೊಂಡರು. ಇದರಿಂದ ಅಸ್ಸಾಂದಲ್ಲಿನ ಹಲವು ಪ್ರಾಂತಗಳಲ್ಲಿ ಅಲ್ಪಸಂಖ್ಯಾತ ಬುಡಕಟ್ಟು ಜನರನ್ನು ಬಲವಂತವಾಗಿ ಖಾಲಿ ಮಾಡಿಸಲು ಪ್ರಾರಂಭಿಸಿದರು. ಒಂದು ಬುಡಕಟ್ಟಿನ ಹಿಂಸಾತ್ಮಕ ಕ್ರಮಗಳನ್ನು ಎದುರಿಸಲು ಸರ್ಕಾರ ಆಗಾಗ್ಗೆ ಎರಡನೇ ಬುಡಕಟ್ಟನ್ನು ರೊಚ್ಚಿಗೆಬ್ಬಿಸುವುದು,

SCERT TELANGANA

ಇಲ್ಲವೇ ಆಯುಧಗಳನ್ನು ಒದಗಿಸುವುದಂತಹವು ಮಾಡಿತು. ಇದರಿಂದ ಗಲಭೆಗಳು ಪರಿಹರಿಸುವ ಬದಲು ಅವು ಮುಂದುವರೆಯುವುದಕ್ಕೆ ಸರ್ಕಾರ ಸಹಾಯಪಟ್ಟಿತು.

ಗಲಭೆಗಳು ಕಡಿಮೆಯಾಗಿ, ಶಾಂತಿಯನ್ನು ಸ್ಥಾಪಿಸಲು ಈ ಪ್ರಾಂತಗಳಲ್ಲಿ ಸಾಯುಧ ಸೇನಾಪಡೆಯನ್ನು ಕೇಂದ್ರ ಸರ್ಕಾರ ದೊಡ್ಡ ಮೊತ್ತದಲ್ಲಿ ನಿಯಮಿಸಲಾರಂಭಿಸಿತು. ಈಶಾನ್ಯ ಪ್ರಾಂತದಲ್ಲಿ ಸಾಯುಧ ದಳಗಳನ್ನು ಪ್ರಯೋಗಿಸಲು ಮೂರು ಅಂಶಗಳು ಕಾರಣವಾದವು: ಮೊದಲನೆಯದು ಇದು ಚೈನ, ಬರ್ಮಾ (ಇಂದಿನ ಮಯನ್ಮಾರ್), ಬಾಂಗ್ಲದೇಶ ಗಳೊಂದಿಗೆ ಸೂಕ್ಷ್ಮ ಸರಿಹದ್ದು ಪ್ರಾಂತವಾಗಿರುವುದು ; ಎರಡನೆಯದು ಹೋರಾಟದ ಗುಂಪುಗಳು ಆಗಾಗ್ಗೆ ಭಾರತದೇಶದಿಂದ ಬೇರ್ಪಡಬೇಕೆಂದು ಕೋರಿಕೊಳ್ಳುವುದು ; ಮೂರನೇಯದು ಅಲ್ಪಸಂಖ್ಯಾತ ವರ್ಗಗಳ ಮೇಲೆ ಹೋರಾಟದ ಗುಂಪುಗಳು ದೊಡ್ಡ ಮೊತ್ತದಲ್ಲಿ ಹಿಂಸಾತ್ಮಕ ದಾಳಿಗಳು ಪ್ರಾರಂಭಿಸಿದ್ದು, ಭಾರತದ ಸೈನಿಕ ದಳಗಳು ಈ ಸಮಸ್ಯಾತ್ಮಕ ಪ್ರಾಂತದೊಳಗೆ ಪ್ರವೇಶಿಸುವುದರೊಂದಿಗೆ ನಾಗರೀಕ ಹಕ್ಕುಗಳು, ಸ್ವತಂತ್ರಗಳು ರದ್ದಾದವು. ಸೈನ್ಯಕ್ಕೆ ಅಸಾಧಾರಣ ಅಧಿಕಾರಗಳನ್ನು ನೀಡಿದರು. ಈ ಪ್ರಾಂತದಲ್ಲಿ ಶಾಂತಿಯನ್ನು ಸ್ಥಾಪಿಸಲು ಇದೊಂದೇ ಮಾರ್ಗವೆಂದು ಸರ್ಕಾರ ಭಾವಿಸಿತು.

ಬೆಂಗಾಲೀಗಳು, ಅಸ್ಸಾಮಿಗಳ ನಡುವೆ ಪ್ರಾರಂಭವಾದ ಈ ಸಮಸ್ಯೆ ಸೂಕ್ಷ್ಮವಾಗಿ ತಯಾರಾಗಿ ಜನಾಂಗೀಯ ಘರ್ಷಣೆಗಳಿಗೆ ದಾರಿ ಮಾಡಿತು. ಜನಾಂಗೀಯ ಅಸ್ಥಿತ್ವ, ಜನಾಂಗೀಯ ಸಮಸ್ಯೆಗಳಂತಹವುಗಳಲ್ಲಿ ಸಂಕುಚಿತ ದೃಷ್ಠಿ, ವೇಗವಾದ ಪರಿಷ್ಕಾರಗಳಲ್ಲದೇ ವಿಶಾಲ ದೃಷ್ಠಿಕೋನದಿಂದ ನೋಡಬೇಕಾದ ಅವಶ್ಯಕತೆ ಇದೆ.

- ಆಂಧ್ರಪ್ರದೇಶದಲ್ಲಿನ ಎನ್‌ಟಿಆರ್ ಚಳುವಳಿಗೂ, ಅಸ್ಸಾಂ ಚಳುವಳಿಗೂ ಹೋಲಿಕೆಗಳು, ವ್ಯತ್ಯಾಸಗಳೇನು ?
- ಈ ಅಂಶಗಳ ಮೇಲೆ ನಿಮ್ಮ ತರಗತಿಯಲ್ಲಿ ಚರ್ಚೆ ನಿರ್ವಹಿಸಿ :
  ಒಂದು ಪ್ರಾಂತದಲ್ಲಿ ಒಂದೇ ಸಮೂಹಕ್ಕೆ ಸೇರಿದ ಜನರು ಇರಬೇಕು, ಎಲ್ಲಾ ಉದ್ಯೋಗಗಳು, ಎಲ್ಲಾ ವ್ಯಾಪಾರಗಳು ಆ ಸಮೂಹಕ್ಕೆ ಸೇರಿದ ಜನರ ಕೈಯಲ್ಲೇ ಇರಬೇಕು. ಇಲ್ಲವೇ ಭಾರತ ದೇಶದ ಪ್ರಜೆಗಳೆಲ್ಲರೂ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಸ್ವತಂತ್ರವಾಗಿ ಹೋಗುವಂತಿರಬೇಕು. ತಾವು ಆಯ್ದುಕೊಂಡ ಪ್ರಾಂತದಲ್ಲಿ ಸ್ಥಿರಪಡಲು, ಕೆಲಸ ಮಾಡಲು ಅವಕಾಶವಿರುಬೇಕು.
- ಪ್ರಜೆಗಳು ಸ್ವತಂತ್ರವಾಗಿ ಸಂಚರಿಸುವ ವಿಧಾನ ಇದ್ದರೆ ಹೊರಗಿನಿಂದ ಬಂದ ಶ್ರೀಮಂತ, ಶಕ್ತಿವಂತರಾದವರು ಭೂಮಿ, ಸಂಪನ್ಮೂಲಗಳೆಲ್ಲವುಗಳನ್ನು ಕೊಂಡುಕೊಂಡು ಆ ಪ್ರಾಂತದಲ್ಲಿನ ಜನರನ್ನು ಬಡವರು, ನಿರ್ಭಾಗ್ಯರನ್ನಾಗಿ ಉಳಿಸುತ್ತಾರೆಯೇ ?

ಪಂಜಾಬ್ ಚಳುವಳಿ (Panjab Movement) :

ಭಾರತದೇಶಕ್ಕೆ ಇನ್ನೊಂದು ಭಾಗದಲ್ಲಿ ಪಂಜಾಬ್ ರಾಜ್ಯದಲ್ಲಿ ಸ್ವಾಯತ್ತತೆಗೆ ಮತ್ತೊಂದು ಚಳುವಳಿ ರೂಪು ಗೊಂಡಿತು. ಇಲ್ಲಿಯೂ ಸಹ ಅತ್ಯಧಿಕ ಭಾಗದ ಜನರು ಮಾತನಾಡುವ ಭಾಷೆ, ಧರ್ಮದ ಆಧಾರವಾಗಿ ಜನ ಸಮೀಕರಣೆ ನಡೆದಿದೆ. ಇಲ್ಲಿಯೂ ಸಹ ದೇಶಾಭಿವೃದ್ಧಿಯಲ್ಲಿ ರಾಜ್ಯ ಪಾತ್ರವನ್ನು ನಿರ್ಲ್ಷಕ್ಷಿಸುತ್ತಿದ್ದಾರೆನ್ನುವುದೇ ಪಂಜಾಬ್ ಆರೋಪಣೆ. ರಾಜ್ಯ ಏರ್ಪಟ್ಟಾಗ ತಮಗೆ ಅನ್ಯಾಯ ನಡೆದಿದೆಯೆಂದು ಅವರು ಭಾವಿಸುತ್ತಿದ್ದಾರೆ. ರಾಜಧಾನಿ ನಗರವಾದ ಚಂಡೀಗಢ್ ಕೇಂದ್ರಾಡಳಿತ ಪ್ರಾಂತವಾಗಿ ಅಲ್ಲದೇ ತಮ್ಮ ರಾಜ್ಯಕ್ಕೆ ಸೇರಬೇಕೆಂದು ಕೋರಲಾರಂಭಿಸಿದರು. ಭಾಕ್ರಾನಂಗಲ್ ಆಣೆಕಟ್ಟಿನಿಂದ ಹೆಚ್ಚಿನ ನೀರು ಬೇಕೆಂದು, ಸೈನ್ಯದಲ್ಲಿ ಹೆಚ್ಚು ಜನ ಸಿಖ್‌ರನ್ನು ತೆಗೆದುಕೊಳ್ಳಬೇಕೆಂದು ಸಹ ಕೋರಲಾರಂಭಿಸಿದರು.

ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಇದ್ದಾಗ 1978ರಲ್ಲಿ ಆಕಾಲೀದಳ ಕೆಲವು ತೀರ್ಮಾನಗಳನ್ನು ಮಾಡಿ ಅವುಗಳನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರವನ್ನು ಕೋರಿತು. ಸಂವಿಧಾನವನ್ನು ತಿದ್ದುಪಡಿ ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಿ, ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡಬೇಕು ಎನ್ನುವ ಅಂಶ ಅದರ ಮುಖ್ಯವಾದ ಬೇಡಿಕೆ. ತೀರ್ಮಾನ ಹೀಗೆ ತಿಳಿಸುತ್ತಿದೆ. “ವಿಭಿನ್ನ ಭಾಷೆ, ಸಾಂಸ್ಕೃತಿಕ ವರ್ಗಗಳ, ಮತಪರವಾಗಿ ಅಲ್ಪಸಂಖ್ಯಾತ ವರ್ಗಗಳ, ಲಕ್ಷಾಂತರ

SCERT TELANGANA

ಜನರ ಬೇಡಿಕೆಗಳನ್ನು ಜನತಾ ಸರ್ಕಾರ ಪರಿಗಣನೆಗೆ ತೆಗೆದುಕೊಂಡು ದೇಶದ ಐಕ್ಯತೆ, ಸಮಗ್ರತೆಗೆ ಯಾವುದೇ ಅಪಾಯವಾಗದಂತೆ ಅರ್ಥಪೂರ್ಣವಾದ ಒಕ್ಕೂಟ ಸೂತ್ರಗಳ ಆಧಾರವಾಗಿ ದೇಶದ ಸಂವಿಧಾನ ನಿರ್ಮಾಣವನ್ನು ಬದಲಾಯಿಸಬೇಕೆಂದು ಶಿರೋಮಣಿ ಅಕಾಲೀದಳ್ ಕೋರಿಕೊಳ್ಳುತ್ತದೆ. ಅಷ್ಟೇ ಅಲ್ಲದೆ ಇದರಿಂದ ರಾಜ್ಯಗಳಿಗೆ ತಮ್ಮ ತಮ್ಮ ಪ್ರಾಂತಗಳಲ್ಲಿ ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಭಾರತ ದೇಶದ ಪ್ರಜೆಗಳ ಪ್ರಗತಿ, ಸೌಭಾಗ್ಯಗಳೊಂದಿಗೆ ಅರ್ಥಪೂರ್ಣ ಪಾತ್ರ ಪೋಷಿಸಬಲ್ಲವಾಗುತ್ತವೆ ".

ಎಸ್ಎಡಿ, ಕಾಂಗ್ರೇಸ್‌ಗಳ ನಡುವೆ ಚುನಾವಣೆಗಳ ಸ್ಪರ್ಧೆ ಬೆಳೆದಿದ್ದರಿಂದ ಪರಿಸ್ಥಿತಿಗಳು ಮತ್ತಷ್ಟು ಹದಗೆಟ್ಟವು. 1980ರಲ್ಲಿ ಅಕಾಲೀ ಸರ್ಕಾರವನ್ನು ರದ್ದುಗೊಳಿಸಿ ಮರಳಿ ಕಾಂಗ್ರೇಸ್ ಸರ್ಕಾರ ಬಂದಿದ್ದರಿಂದ ಸಿಕ್ಕರು ವಿಬೇಧಗಳಿಗೆ ಗುರಿಯಾಗುತ್ತಿದ್ದೇವೆಂಬ ಭಾವನೆ ಬೆಳೆದು ಉದ್ರಿತ ವಾತಾವರಣ ಮತ್ತಷ್ಟು ತೀವ್ರರೂಪ ಪಡೆಯಿತು. ನಿರಂತರವಾಗಿ ಅನೇಕ ದುರದೃಷ್ಟಕರವಾದ ಸಂಘಟನೆಗಳು ಸಂಭವಿಸಿದ್ದರಿಂದ ಸಿಕ್ಕರು, ಕೇಂದ್ರ ಸರ್ಕಾರದ ನಡುವಿನ ದೂರ, ಅನುಮಾನಗಳು ಹೆಚ್ಚಾದವು. ಅತಿವಾದ ಸಿಕ್ಕರ ಬೃಂದಕ್ಕೆ ನಾಯಕನಾಗಿದ್ದ ಬಿಂದ್ರನ್ ವಾಲೆ ಪ್ರತ್ಯೇಕವಾದವನ್ನು ಪ್ರಚಾರ ಮಾಡುತ್ತಾ ಸಿಕ್ಕರಿಗೆ ಪ್ರತ್ಯೇಕ ದೇಶ ಖಲಿಸ್ತಾನ್‌ಬೇಕೆಂದು ಕೋರಲಾರಂಭಿಸಿದನು. ಈ ಕಾಲದಲ್ಲಿ ರಾಜ್ಯ ತೀವ್ರ ಅಲ್ಲಕಲ್ಲೋಲಗಳಿಗೆ ಗುರಿಯಾಯಿತು. ಅತಿವಾದಿಗಳು ಸಿಕ್ಕರ ಮೇಲೆ ಮಾತ್ರವಲ್ಲದೇ ಪಂಜಾಬ್‌ನಲ್ಲಿನ ಇತರ ಧರ್ಮದ ಪ್ರಜೆಗಳ ಮೇಲೆ ಸಹ ಸಂಪ್ರದಾಯವಾದ ಜೀವನ ವಿಧಾನವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಈ ಘರ್ಷಣೆ ಮತಪರವಾದ ರೂಪವನ್ನು ಸಹ ಪಡೆಯಿತು. ಸಿಕ್ ಧರ್ಮಕ್ಕೆ ಸೇರದ ಜನರ ಮೇಲೆ ದಾಳಿಗಳು ನಡೆದವು. ಇವುಗಳೆಲ್ಲವುಗಳ ಕೊನೆಯ ಪರ್ಯಾವಸಾನವಾಗಿ ಸಿಕ್ಕರ ಪ್ರತ್ಯೇಕವಾದ ಬೃಂದಗಳು ಪವಿತ್ರ ಸ್ಥಳವಾದ ಗೋಲ್ಡೆನ್ ಟೆಂಪಲ್‌ನ್ನು ಆಕ್ರಮಿಸಿಕೊಳ್ಳಲು, ಅವರನ್ನು ಅಲ್ಲಿಂದ ಖಾಲಿ ಮಾಡಿಸಲು ಸೈನ್ಯ ಮಧ್ಯಸ್ಥಿಕೆವಹಿಸಬೇಕಾಗಿ ಬಂದಿತು. ಇದರಿಂದ ತಮ್ಮ ಪುಣ್ಯಸ್ಥಳ ಅಪವಿತ್ರವಾಗಿದೆಯೆಂದು ಸಿಕ್ಕರು ಭಾವಿಸಿದ್ದರಿಂದ ಅವರ ವಿಜಾತಿ ಭಾವನೆ ಮತ್ತಷ್ಟು ತೀವ್ರವಾಯಿತು.

ಚಿತ್ರ 18.4: ಭಾರತದೇಶ 1970–1980ರ ನಡುವೆ ತಾಂತ್ರಿಕ, ಸಹಕಾರ ರಂಗಗಳಂತಹವುಗಳಲ್ಲಿ ಎಷ್ಟೋ ವಿಜಯಗಳನ್ನು ಸಾಧಿಸಿದೆ. ಶ್ರೀಹರಿಕೋಟೆಯಿಂದ ಉಪಗ್ರಹ ಪ್ರಯೋಗ, ಆಮುಲ್ ಸಹಕಾರ ಸಂಘಗಳಂತಹವು ಕೆಲವು ಮೇಲೆ ಇವೆ.

SCERT TELANGANA

ಇವುಗಳೆಲ್ಲವುಗಳ ಕಾರಣದಿಂದಾಗಿ 1984ರಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿ ಹತ್ಯೆಗೆ ಗುರಿಯಾದರು. ಇದರ ನಂತರ ಗಲಭೆಗಳು ಹೆಚ್ಚಾಗಿ, ಪ್ರತ್ಯೇಕವಾಗಿ ದೆಹಲಿಯಲ್ಲಿ ಸಿಕ್ಕರ ಮೇಲೆ ದಾಳಿಗಳು ಮಾಡಿ, ಅವರ ಆಸ್ತಿಗಳನ್ನು ಧ್ವಂಸಮಾಡಿ, ಕೊಲೆ ಮಾಡಿದರು. ಈ ಹಿಂಸೆಯನ್ನು ತಡೆಯಲು ಆಡಳಿತ ಯಂತ್ರಾಂಗ ಸ್ಪಂಧಿಸಿದಂತೆ ತೋರಲಿಲ್ಲ. 'ಆ ನಂತರ ಬಹಳ ವರ್ಷಗಳ ನಂತರವೂ ಸಹ ಅಪರಾಧಿಗಳನ್ನು ನಿರ್ಭಂಧಿಸಲಿಲ್ಲ, ಕಾನೂನಿನ ಪ್ರಕಾರ ಶಿಕ್ಷಿಸಲೂ ಇಲ್ಲ.'

ರಾಜೀವ್‌ಗಾಂಧಿ ಪ್ರಧಾನಮಂತ್ರಿಯಾದ ನಂತರ ಎಸ್‌ಎಡಿಯೊಂದಿಗೆ ಚರ್ಚೆಗಳ ನಡೆಸಿ ಎಸ್‌ಎಡಿ ಅಧ್ಯಕ್ಷ ಸಂತ್ ಲೋಂಗೋವಾಲ್‌ನೊಂದಿಗೆ ಒಪ್ಪಂದ ಮಾಡಿಕೊಂಡನು. ಪಂಜಾಬ್‌ನಲ್ಲಿ ಹೊಸದಾಗಿ ಚುನಾವಣೆಗಳು ನಿರ್ವಹಿಸಿ ಎಸ್‌ಎಡಿ ಜಯಸಾಧಿಸಿದ್ದರೂ ಉಗ್ರವಾದಿಗಳು ಲಾಂಗೋವಾಲ್‌ನನ್ನು ಕೊಲೆ ಮಾಡಿದ್ದರಿಂದ ಶಾಂತಿ ಬಹಳಕಾಲ ನಿಲ್ಲಲಿಲ್ಲ.

1986 ಏಪ್ರಿಲ್‌ನಲ್ಲಿ ಅಕಲ್ ತಖ್ತ್ ಹತ್ತಿರ ಸಮಾವೇಶದಲ್ಲಿ ಖಲಿಸ್ತಾನ್‌ನು ಸ್ವತಂತ್ರ ದೇಶವಾಗಿ ಘೋಷಿಸಿದರು. ಸ್ವತಂತ್ರ ದೇಶಕ್ಕಾಗಿ ಹೋರಾಡುತ್ತಿದ್ದೇವೆಂದು ಅನೇಕ ಗುಂಪುಗಳು ಸಾಯುಧದಳಗಳನ್ನು ಏರ್ಪಡಿಸಿ, ಉಗ್ರವಾದ ಕ್ರಮಗಳು ಕೈಗೊಳ್ಳಲಾರಂಭಿಸಿದರು. ಈ ಗುಂಪುಗಳಿಗೆ ಪಾಕಿಸ್ತಾನ್ ಸರ್ಕಾರ ಕ್ರಿಯಾಶೀಲವಾದ ಬೆಂಬಲ ನೀಡುತ್ತಿದೆಯೆಂದು ಭಾರತ ಸರ್ಕಾರ ಹೇಳಲಾರಂಭಿಸಿತು. ಪಂಜಾಬ್‌ನಲ್ಲಿ ಒಂದು ದಶಮಾನಗಳ ಕಾಲ ಹಿಂಸೆ, ಗಲಭೆಗಳು ನಡೆದವು. ಈ ಹೋರಾಟ ಕಾಲದಲ್ಲಿ ಸಿಕ್ ಉಗ್ರವಾದಿಗಳು ಪೋಲಿಸರೊಂದಿಗೆ, ಇತರ ಧರ್ಮದವರೊಂದಿಗೆ ಹೋರಾಡಿದರು. ಉಗ್ರವಾದಿಗಳು ನಿರ್ದೇಶಿಸಿದ ನಿಯಮಗಳನ್ನು ಅನುಸರಿಸದ ಪತ್ರಿಕೋದ್ಯಮಿಗಳು, ರಾಜಕೀಯ ನಾಯಕರು, ಕಲಾಕರರು, ಉಗ್ರವಾದಿಗಳು ಕೊಲೆಗೆ ಒಳಗಾದರು. ನಾಗರೀಕರ ಪ್ರಾಣನಷ್ಟ ದೊಡ್ಡ ಮೊತ್ತದಲ್ಲಿರುವಂತೆ ವಿವೇಚನೆ ಇಲ್ಲದೆ ದಾಳಿಗಳು ನಡೆಸಿದರು : ರೈಲುಗಳ ಅಳಿಗಳನ್ನು ತಪ್ಪಿಸುವುದು, ಮಾರುಕಟ್ಟೆಗಳು, ರೆಸ್ಟಾರೆಂಟ್‌ಗಳು, ಪಂಜಾಬ್-ದೆಹಲಿ ನಡುವೆ ನಾಗರೀಕರಿರುವ ಪ್ರಾಂತದಲ್ಲಿ ಬಾಂಗ್‌ಸ್ಫೋಟಗಳಂತಹ ಕ್ರಮಗಳು ಕೈಹಿಡಿದರು. ಒಂದು 1991 ರಲ್ಲಿಯೇ ಸಾವಿರ ಜನರವರೆಗೆ ಮರಣ ಹೊಂದಿದರು. ನಿಧಿಗಳ ಸಂಗ್ರಹಣೆಗಾಗಿ ಉಗ್ರವಾದಿಗಳು ದೊಡ್ಡ ಮೊತ್ತದಲ್ಲಿ ಅಪಹರಣಗಳಿಗೆ, ಒತ್ತಾಯದ ವಸೂಲಿಗಳಿಗೆ ನಿರತರಾದರು. ಇವುಗಳೆಲ್ಲವುಗಳ ಫಲವಾಗಿ ಉಗ್ರವಾದಿಗಳು ಸಿಕ್ಕರೊಂದಿಗೆ ಸಹ ಪಂಜಾಬೀ ಜನರಿಗೂ ದೂರವಾಗಲಾರಂಭಿಸಿದರು. ಕಾಲಕ್ರಮದಲ್ಲಿ ಪೋಲೀಸ್ ಚರ್ಯೆಗಳು ಉಗ್ರವಾದಿಗಳ ಬೆನ್ನು ಮುರಿಯಲು, ಜನರ ಸಹಾನುಭೂತಿ ಕಳೆದುಕೊಂಡಿದ್ದ ಹಿನ್ನೆಲೆಯಲ್ಲಿ 1990 ಕೊನೆಯಷ್ಟೊತ್ತಿಗೆ ಕೊನೆಗೆ ಪಂಜಾಬಿನಲ್ಲಿ ಶಾಂತಿ ನೆಲೆಸಿತು.

- ಸಿಕ್ಕರ ಪ್ರತ್ಯೇಕವಾದ, ಉಗ್ರವಾದಗಳನ್ನು ಪ್ರೇರೇಪಿಸುವುದರಲ್ಲಿ 1984ರಲ್ಲಿ ದೆಹಲಿಯಲ್ಲಿ ನಡೆದ ಸಿಕ್ಕ್ ವಿರೋಧ ಗಲಭೆಗಳ ಪಾತ್ರವೇನು ?
- ಅಸ್ಸಾಂ, ಪಂಜಾಬ್ ಚುಳುವಳಿಗಳ ನಡುವಿನ ಹೋಲಿಕೆಗಳು, ವ್ಯತ್ಯಾಸಗಳನ್ನು ಹೆಸರಿಸಿ, ನಮ್ಮ ರಾಜಕೀಯ ವ್ಯವಸ್ಥೆಗೆ ಅವು ಎಂತಹ ಸವಾಲುಗಳನ್ನು ಒಡ್ಡಿದವು ?
- ಈ ಎರಡು ಸಮಸ್ಯೆಗಳೊಂದಿಗೆ ಸಕಾರರ ವ್ಯವಹಿಸಿದ ರೀತಿ ನಮ್ಮ ಪ್ರಜಾಪ್ರಭುತ್ವ ರಾಜನೀತಿಯನ್ನು ಬಲಪಡಿಸುತ್ತಾ , ಬಲಹೀನಪಡಿಸಿತ್ತಾ ?

ಆದರೆ, ಪಂಜಾಬ್‌ನಲ್ಲಿ ಉಗ್ರವಾದವನ್ನು ಅಡಗಿಸಲು ಸರ್ಕಾರ ಬಹಳ ಕಠಿಣ ಪದ್ಧತಿಗಳನ್ನು ಉಪಯೋಗಿಸಿತು. ಇವುಗಳಲ್ಲಿ ಅನೇಕ ನಾಗರೀಕರ ಸಂವಿಧಾನ ಹಕ್ಕುಗಳಿಗೆ ಭಂಗವನ್ನುಂಟು ಮಾಡಿವೆಯೆಂದು ಭಾವಿಸಿದರು. ಉಗ್ರವಾದ ಕಾರ್ಯಕಲಾಪಗಳಿಂದ ಸಾಂವಿಧಾನಿಕ ಯಂತ್ರಾಂಗವೇ ಕುಸಿದು ಬೀಳುವ ಅಂಚಿನಲ್ಲಿದ್ದುದರಿಂದ ಮಾನವ ಹಕ್ಕುಗಳ, ಸಂವಿಧಾನ ಹಕ್ಕುಗಳ ಉಲ್ಲಂಘನೆ ನ್ಯಾಯಯುತವಾದದ್ದು ಎಂದು ಬಹಳ ಜನ ಪರಿಶೀಲಕರು ಭಾವಿಸಿದರು. ಉಗ್ರವಾದಿಗಳ ಮೇಲೆ ವಿರುದ್ಧ ತೀರ್ಪುಗಳು ನೀಡಿದರೆ ತಮ್ಮ ಮೇಲೆ ಸಹ ದಾಳಿಗಳು ನಡೆಯುತ್ತವೆ ಎಂದು ನ್ಯಾಯಾಧೀಶರು ಭಯಪಡಲಾರಂಭಿಸಿದರು. ಇತರ ಪರಿಶೀಲಕರು ಸರ್ಕಾರ ಸಂವಿಧಾನೇತರ ಶಕ್ತಿಯನ್ನು ವಿನಿಯೋಗಿಸುವುದು ಸರಿಯಲ್ಲವೆಂದು, ಇದು ದೀರ್ಘಕಾಲದಲ್ಲಿ ರಾಜನೀತಿಯಲ್ಲಿ ಅಪ್ರಜಾಪ್ರಭುತ್ವ ಧೋರಣೆಗಳು ಬಲಪಡಲು ಸಹಾಯವಾಗುತ್ತದೆಂದು ಭಾವಿಸಿದರು.

SCERT TELANGANA

ರಾಜೀವ್‌ಗಾಂಧಿ ಕಾಲದಲ್ಲಿ ಹೊಸ ಕ್ರಮಗಳು (New Inititives in the Rajiv Gandhi Era) :



ಚಿತ್ರ :18.5 : ರಾಜೀವ್‌ಗಾಂಧಿ

ರಾಜೀವ್‌ಗಾಂಧಿ ನೇತೃತ್ವದಲ್ಲಿನ ಕಾಂಗ್ರೆಸ್ ಹಿಂದೆಂದೂ ಇಲ್ಲದಷ್ಟು ಚುನಾವಣೆಯಲ್ಲಿ ಘನವಿಜಯ ಸಾಧಿಸಿತು. ರಾಜೀವ್‌ಗಾಂಧಿ ಪಂಜಾಬ್, ಅಸ್ಸಾಂ, ಮಿಜೋರಾಂಗಳಲ್ಲಿ, ಪಕ್ಕದ ದೇಶವಾದ ಶ್ರೀಲಂಕದಲ್ಲೂ ಸಹ ಶಾಂತಿ ಪ್ರಕ್ರಿಯೆಗಳು ಪ್ರಾರಂಭಿಸಿದರು. ಶ್ರೀಲಂಕದಲ್ಲಿ ಘರ್ಷಣೆಗೆ ಇಳಿಯುತ್ತಿದ್ದ ಎರಡು ಪಕ್ಷಗಳ ನಡುವೆ (ಪ್ರತ್ಯೇಕವಾದ ತಮಿಳರು, ಶ್ರೀಲಂಕ ಸರ್ಕಾರ) ಶಾಂತಿ ಸ್ಥಾಪಿಸಲು ಭಾರತದೇಶ ತನ್ನ ಸೈನ್ಯವನ್ನು ಕಳುಹಿಸಿತು. ಆದರೆ ಇದಕ್ಕೆ ಈಕಡೆ ತಮಿಳರು, ಆಕಡೆ ಶ್ರೀಲಂಕ ಸರ್ಕಾರವೂ ಅಂಗೀಕರಿಸಿದ್ದರಿಂದ ಇದೊಂದು ದುಸ್ಸಾಹಸ ಕ್ರಮವಾಗಿ ಪರಿಣಮಿಸಿತು. ಕೊನೆಗೆ ಭಾರತದೇಶ ತನ್ನ ಸೈನ್ಯವನ್ನು 1989ರಲ್ಲಿ ಹಿಂದಕ್ಕೆ ತೆಗೆದುಕೊಂಡಿತು.

ಚಿತ್ರ 18.6 : ಹೊಸದೆಹಲಿ ಟೆಲಿಫೋನ್, ಎಕ್ಸೆಂಜ್‌ನಲ್ಲಿ ಕೆಲಸ ಮಾಡುತ್ತಿರುವ ಆಪರೇಟರ್‌ಗಳು, 1950ರಲ್ಲಿನ ಚಿತ್ರ

ದೇಶದಲ್ಲಿ ಅಭಿವೃದ್ಧಿಯ ಕಡೆಗೆ ದೃಷ್ಟಿ ಇಡದಿದ್ದರೂ, ಅದು ನಿಜವಾದ ಲಬ್ದಿದಾರರಿಗೆ ಸೇರುತ್ತಿಲ್ಲವೆಂದು ರಾಜೀವ್‌ಗಾಂಧಿ ಗುರ್ತಿಸಿದನು. ಪ್ರಖ್ಯಾತವಾದ ಒಂದು ಉಪನ್ಯಾಸದಲ್ಲಿ ಬಡವರಿಗಾಗಿ ಖರ್ಚು ಮಾಡುತ್ತಿರುವ ಪ್ರತಿ ರೂಪಾಯಿಯಲ್ಲಿ 15 ಪೈಸೆಗಳೂ ಸಹ ಅವರಿಗೆ ತಲುಪುತ್ತಿಲ್ಲವೆಂದು ರಾಜೀವ್‌ಗಾಂಧಿ ಹೇಳಿದನು. ಅಭಿವೃದ್ಧಿಗೆ ಮೀಸಲಾತಿಗಳು ಎಷ್ಟೋ ಹೆಚ್ಚಾಗಿದ್ದರೂ ಬಡವರ ಪರಿಸ್ಥಿತಿ ಮಾತ್ರ ಹಾಗೆಯೇ ಉಳಿದು ಹೋಗಿದೆ.

ಬಡತನ, ಕೊನೆಯಂಚಿಗೆ ತಳ್ಳಲ್ಪಟ್ಟ ಬಡಜನರು, ಮಹಿಳೆಯರು, ದಲಿತರು, ಬುಡಕಟ್ಟು ಜನರಿಗೆ ಅಭಿವೃದ್ಧಿ ಫಲಗಳು ದೊರೆಯುತ್ತಿಲ್ಲ. ನಡೆಯುತ್ತಿರುವ ಕೆಲಸದ ವಿಧಾನದಲ್ಲಿ ಹಲವು ಬದಲಾವಣೆಗಳನ್ನು ತೆಗೆದುಕೊಂಡು ಬರಬೇಕೆಂದು ಸಹ ಆತನು ಗ್ರಹಿಸಿದನು. ಇದಕ್ಕೆ ಪಂಚಾಯತಿ ರಾಜ್ ಸಂಸ್ಥೆಗಳನ್ನು ಕ್ರಿಯಾಶೀಲಗೊಳಿಸಿ ದೊಡ್ಡ ಸಂಖ್ಯೆಯಲ್ಲಿ ಪ್ರಜೆಗಳು ಆಡಳಿತದಲ್ಲಿ ಭಾಗವಹಿಸುವಂತೆ ಮಾಡುವುದು ಉತ್ತಮ ಪದ್ಧತಿ ಎಂದು ರಾಜೀವ್‌ಗಾಂಧಿ ಭಾವಿಸಿದನು. ಆದರೆ ಅನೇಕ ರಾಜ್ಯ ಸರ್ಕಾರಗಳು, ಪ್ರತ್ಯೇಕವಾಗಿ ವಿರೋಧಪಕ್ಷ ಪಕ್ಷಗಳು

- ಈಗ ಹಿಂದಿರುಗಿ ನೋಡಿದರೆ ರಾಜೀವ್‌ಗಾಂಧಿ ದೇಶಕ್ಕೆ ನೀಡಿದ ಶಾಶ್ವತ ಪ್ರಯೋಜನಗಳೇನು ?
- ತಮಗಾಗಿ ಉದ್ದೇಶಿಸಿದ ಯೋಜನೆಗಳಿಂದ ಬಡಜನರು ಆಗಾಗ್ಗೆ ಏಕೆ ಪ್ರಯೋಜನ ಹೊಂದುತ್ತಿಲ್ಲವೆಂದು ತರಗತಿಯಲ್ಲಿ ಚರ್ಚಿಸಿರಿ. ಇಂತಹ ಲಾಭಗಳು ನಿಜವಾಗಿ ಬಡವರಿಗೆ ತಲುಪಬೇಕೆಂದರೆ ಯಾವ ದೀರ್ಘಕಾಲ ಕ್ರಮಗಳು ತೆಗೆದುಕೊಳ್ಳಬೇಕು ?
- ನಿಮ್ಮ ಪಾಠಶಾಲೆ ವಿದ್ಯಾರ್ಥಿಗಳಿಗೆ ತಲುಪಬೇಕಾದ ಲಾಭಗಳ ಪಟ್ಟಿಯನ್ನು ತಯಾರು ಮಾಡಿರಿ. ಇವು ಅವರಿಗೆ ಸರಿಯಾಗಿ ತಲುಪುತ್ತಿವೆಯಾ ? ತರಗತಿ ಕೋಣೆಯಲ್ಲೂ, ಹೊರಗೆ ಕ್ರೀಡಾ ಮೈದಾನದಲ್ಲೂ, ಮನೆಯ ಹತ್ತಿರ ಚರ್ಚಿಸಿರಿ.

SCERT TELANGANA

ಅಧಿಕಾರದಲ್ಲಿರುವ ರಾಜ್ಯಗಳು ಇದು ತಮ್ಮ ಮೂಲಕವಲ್ಲದೆ ನೇರವಾಗಿ ಜಿಲ್ಲೆಗಳಿಗೆ ತಲುಪಲು, ತಮ್ಮ ಅಧಿಕಾರಗಳನ್ನು ಕಡಿಮೆ ಮಾಡಲು ಉದ್ದೇಶಿಸಿದ ಕ್ರಮವಾಗಿ ಭಾವಿಸಿದರು.

ಆರ್ಥಿಕ ರಂಗದಲ್ಲೂ ಸಹ ರಾಜೀವ್‌ಗಾಂಧಿ ಭಿನ್ನ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸಿದನು. 1985ರಲ್ಲಿ ಆತನ ಸರ್ಕಾರ ಪ್ರವೇಶಪಡಿಸಿದ ಮೊದಲ ಬಡ್ಜೆಟ್‌ನಲ್ಲಿ ಜಾರಿಗೆಯಲ್ಲಿರುವ ಕೆಲವು ನಿಯಂತ್ರಣಗಳನ್ನು, ಪರಿಮಿತಿಗಳನ್ನು ತೊಲಗಿಸಿ ಸರಳೀಕೃತ ಆರ್ಥಿಕ ವಿಧಾನದ ಕಡೆಗೆ ಪ್ರಯಾಣ ಪ್ರಾರಂಭಿಸಿದನು.

ಪ್ರಪಂಚದಲ್ಲಿ ಉದಯಿಸುತ್ತಿರುವ ಹೊಸ ತಾಂತ್ರಿಕ ವಿಜ್ಞಾನಗಳನ್ನು ಪ್ರತ್ಯೇಕವಾಗಿ ಕಂಪ್ಯೂಟರ್, ಟೆಲಿಕಮ್ಯೂನಿಕೇಷನ್ ತಾಂತ್ರಿಕ ವಿಜ್ಞಾನವನ್ನು ಭಾರತದೇಶ ಅವಲಂಭಿಸಬೇಕೆಂದು ರಾಜೀವ್‌ಗಾಂಧಿ ದೃಢವಾಗಿ ನಂಬಿದನು. ಆತನು ಭಾರತದೇಶದಲ್ಲಿ 'ಟೆಲಿಕಾಂ ಕ್ರಾಂತಿ' ಎನ್ನುವುದನ್ನು ಆರಂಭಿಸಿದನು. ಉಪಗ್ರಹ ತಾಂತ್ರಿಕ ವಿಜ್ಞಾನದಿಂದ ದೇಶದಲ್ಲಿ ಟೆಲಿಫೋನ್ ನೆಟ್‌ವರ್ಕ್ ವೇಗವಾಗಿ ವಿಸ್ತರಿಸಲು ಇದು ಸಹಾಯಕವಾಯಿತು.

ಮತತತ್ವ, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಏರಿಕೆ

(Rise of Communalism and Corruption in High Places) :

ದೇಶದ ವಿಭಜನೆಯ ಸಮಯದಲ್ಲಿ ನಡೆದ ಘೋರಗಳ ನಂತರ ರಾಜಕೀಯ ರಂಗದಿಂದ ಧರ್ಮವನ್ನು ದೂರವಿಡಲು ಸ್ವಲ್ಪ ಪ್ರಯತ್ನ ನಡೆಯಿತು. ಆದರೆ ನಂತರ ಕಾಲದಲ್ಲಿ ಧಾರ್ಮಿಕ ಧೋರಣೆ ಇರುವ ಹೊಸ ರಾಜಕೀಯ ಸಮೀಕರಣೆಯನ್ನು ಕಂಡಿತು. ರಾಜಕೀಯ ಉದ್ದೇಶಗಳಿಗೆ ಧರ್ಮವನ್ನು ಬಳಸಿಕೊಳ್ಳುವುದು, ಸರ್ಕಾರದ ಪಕ್ಷಪಾತ ಧೋರಣೆಯ ಕಾರಣದಿಂದ ಅಪಾಯಕರವಾದ ಪರಿಣಾಮಗಳಿಗೆ ದಾರಿ ಮಾಡಿ ದೇಶದ ಐಕ್ಯತೆ, ಸಮಗ್ರತೆಗಳನ್ನೇ ಪ್ರಶ್ನಾರ್ಥಕವಾಗಿ ಬದಲಾಯಿಸಿದೆ.

ಪ್ರಧಾನ ಮಂತ್ರಿ ಕ್ಷಮಾಪಣೆ

ರಾಜ್ಯಸಭೆಯಲ್ಲಿ ಡಾ॥ ಮನ್‌ಮೋಹನ್‌ಸಿಂಗ್ ಪ್ರಕಟಣೆ –

... 1984ರಲ್ಲಿ ನಡೆದ ಈ ಮಹಾ ರಾಷ್ಟ್ರೀಯ ವಿಪತ್ತಿನಲ್ಲಿ ನಾಲ್ಕು ಸಾವಿರ ಜನರು ಸಾಯಿಸಲ್ಪಟ್ಟರು. ಒಂದೇ ದೇಶವಾಗಿ ಬೆರೆತು ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಇಂತಹ ಘೋರ ವಿಷಾದಗಳು ದೇಶದಲ್ಲಿ ಮರಳಿ ಎಂದೂ ನಡೆಯದಂತೆ ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು. ...ಒಂದು ಸಿಕ್ ಪ್ರಜೆಗಳಿಗೆ ಅಲ್ಲದೇ ಒಟ್ಟು ಭಾರತದೇಶಕ್ಕೆ ಕ್ಷಮಾಪಣೆ ಹೇಳಲು ನಾನು ಹಿಂಜರೆಯುವುದಿಲ್ಲ, ಏಕೆಂದರೆ 1984ರಲ್ಲಿ ನಡೆದದ್ದು, ನಮ್ಮ ಸಂವಿಧಾನದಲ್ಲಿ ಅಳವಡಿಸಿದುದ್ದಕ್ಕೆ, ರಾಷ್ಟ್ರ ಎನ್ನುವ ಭಾವನೆಗೆ ಪೂರ್ಣ ವಿರೋಧವಾದದ್ದು. ನಮ್ಮ ಸರ್ಕಾರದ ಪರವಾಗಿ, ಪ್ರಜೆಗಳೆಲ್ಲರ ಪರವಾಗಿ ಇಂತಹ ಘಟನೆ ನಡೆದುದಕ್ಕೆ ನಾನು ನಾಚಿಕೆಯಿಂದ ತಲೆಭಾಗಿಸುತ್ತಿದ್ದೇನೆ. ಆದರೆ ದೇಶದ ವ್ಯವಹಾರಗಳಲ್ಲಿ ಶಿಖರಗಳೂ ಇರುತ್ತವೆ, ಆಳಗಳೂ ಇರುತ್ತವೆ. ಗತಿಸಿದ್ದು ನಮ್ಮೊಂದಿಗಿದೆ. ಅದನ್ನು ಮರಳಿ ಬರೆಯಲಾರೆವು. ಆದರೆ ಮನುಷ್ಯರಾಗಿ ನಮಗೆಲ್ಲರಿಗೂ ಉತ್ತಮವಾದ ಭವಿಷ್ಯವನ್ನು ರೂಪಿಸಬಲ್ಲ ಸಾಮರ್ಥ್ಯ, ದೃಢನಿಶ್ಚಯ ನಮಗೆ ಇವೆ...

(pmindia.mic.co/Rs%20 speech.pdf) ಆ 2005 ಆಗಸ್ಟ್ 11.

- ಈ ಉಪನ್ಯಾಸದಲ್ಲಿನ ಮುಖ್ಯ ಸಂದೇಶವೇನು ?
- ಈ ಉಪನ್ಯಾಸವು ಯಾವ ಸಂಕೇತಗಳನ್ನು ಕಳುಹಿಸುತ್ತಿದೆ ?
- ಪ್ರಧಾನಮಂತ್ರಿ ಈ ಉಪನ್ಯಾಸ ಮಾಡುವುದರಲ್ಲಿನ ಪ್ರಾಮುಖ್ಯತೆ ಏನು ?

ಪತಿಯಿಂದ ವಿವಾಹ ವಿಚ್ಛೇದನ ಹೊಂದಿದ ಷಾ ಬಾನೋ ಎನ್ನುವ ಮಹಿಳೆ ಹಾಕಿದ ವ್ಯಾಜ್ಯ ದಲ್ಲಿ 1985ರಲ್ಲಿ ಸುಪ್ರೀಂಕೋರ್ಟ್ ಆಕೆಯ ಮಾಜೀ ಪತಿ ಆಕೆಗೆ ಜೀವನಾಂಶ ಸಲ್ಲಿಸಬೇಕೆಂದು ತೀರ್ಪು ನೀಡಿತು. ಪ್ರಗತಿಶೀಲ ಮುಸ್ಲಿಮರು ಈ ತೀರ್ಪನ್ನು ಸ್ವಾಗತಿಸಿದರು. ಆದರೆ ಇತರರು ಈ ತೀರ್ಪು ಇಸ್ಲಾಮಿಕ್ ಕಾಯ್ದೆಯಲ್ಲಿ

SCERT TELANGANA

ಮಧ್ಯಪ್ರವೇಶಿಸುತ್ತದೆ ಎಂದೂ, ಇದನ್ನು ಅನುಮತಿಸಿದರೆ ತಮ್ಮ ಧಾರ್ಮಿಕ ಜೀವನದಲ್ಲಿ ಮಧ್ಯ ಪ್ರವೇಶಿಸುವುದು ಮತ್ತಷ್ಟು ಹೆಚ್ಚುತ್ತದೆಂದು ಪ್ರತಿಭಟನೆ ಪ್ರಾರಂಭಿಸಿದರು. ಏಕ ಪಕ್ಷವಾಗಿ ಪತಿಯಿಂದ ವಿಚ್ಛೇದ ನೀಡಲ್ಪಟ್ಟು ಅನ್ಯಾಯಕ್ಕೆ ಒಳಗಾಗುತ್ತಿರುವ ಮಹಿಳೆಯರಿಗೆ ನಡೆಯುತ್ತಿರುವ ಅನ್ಯಾಯಗಳನ್ನು ಇದು ನಿರ್ಮೂಲಿಸುತ್ತದೆಂದು ಮಹಿಳಾ ಹೋರಾಟ ನಾಯಕರು, ಮುಸ್ಲಿಂ ಸಮಾಜದಲ್ಲಿ ಸುಧಾರಣೆಗಳು ಬಯಸುತ್ತಿರುವ ಸದಸ್ಯರು ವಾದಿಸಲಾರಂಭಿಸಿದರು. ಸಂಪ್ರದಾಯ ವರ್ಗಗಳ ಒತ್ತಡಕ್ಕೆ ಒಳಗಾದ ಸರ್ಕಾರ 1986ರಲ್ಲಿ ಹೊಸ ಕಾನೂನು ಮಾಡಿತು. ಇದರ ಪ್ರಕಾರ ಮುಸ್ಲಿಂ ಪತಿಯರಿಗೆ ಯಾವುದೇ ಬಾಧ್ಯತೆ ಇಲ್ಲದಂತೆ ಮಾಡಿ. ವಿಚ್ಛೇದನೆ ಪಡೆದ ಮಹಿಳೆಯರಿಗೆ ಮೂರು ತಿಂಗಳವರೆಗೆ ಮುಸ್ಲಿಂ ಧಾರ್ಮಿಕ ಸಂಸ್ಥೆಗಳು ಜೀವನಾಂಶ ಸಲ್ಲಿಸಿದರೆ ಸರಿಹೋಗುತ್ತದೆ. ಈ ಕ್ರಮದಿಂದ ಮುಸ್ಲಿಂ ಮಹಿಳೆಯರ ಪ್ರಯೋಜನಗಳನ್ನು ಅಲ್ಲಗಳೆದು ಧಾರ್ಮಿಕ ಸಂಪ್ರದಾಯವಾದಿಗಳಿಗೆ ತಲೆಬಾಗಿದೆ ಎಂದು ಬಹಳ ಜನರು ಭಾವಿಸಿದರು.

ಅದೇ ಸಮಯದಲ್ಲಿ ಅಯೋಧ್ಯೆಯಲ್ಲಿನ ವಿವಾದಾಸ್ಪದ ಕಟ್ಟಡವಾದ ಬಾಬ್ರೀ ಮಸೀದಿ ಇರುವ ಸ್ಥಾನದಲ್ಲಿ ರಾಮನಿಗೆ ದೇವಾಲಯ ಕಟ್ಟಬೇಕೆಂದು ಕೆಲವು ಜನ ಹಿಂದುಗಳು ಚಳುವಳಿ ಪ್ರಾರಂಭಿಸಿದರು. ಅದು ರಾಮನ ಜನ್ಮಸ್ಥಳವೆಂದೂ, ಇದಕ್ಕೆ ಮೊದಲು ಅಲ್ಲಿರುವ ದೇವಾಲಯವನ್ನು ಕೆಳಗುರುಳಿಸಿ ಮಸೀದಿ ಕಟ್ಟಿದ್ದಾರೆಂದು ಅವರ ವಾದ. ಬಾಬ್ರೀ ಮಸೀದಿ ನಿರ್ವಹಣಕಾರರು ಇದು ನಿಜವಲ್ಲವೆಂದು, ಇದು ಮುಸ್ಲೀಮರ ಪ್ರಾರ್ಥನಾ ಸ್ಥಳವೆಂದು ತಿಳಿಸಿದರು. ಈ ವಿವಾದ ಕೆಲಕಾಲದಿಂದ ನಡೆಯುತ್ತಿದೆ. ಅಂತಿಮ ನಿರ್ಣಯ ತೆಗೆದುಕೊಳ್ಳುವವರೆ ವರ್ಷದಲ್ಲಿ ಒಂದು ದಿನ ಬಿಟ್ಟು ಮಸೀದಿಯನ್ನು ಮುಚ್ಚಬೇಕೆಂದು ನ್ಯಾಯಾಲಯ ಆದೇಶಿಸಿತು. 1986ರಲ್ಲಿ ನ್ಯಾಯಾಲಯ ತೀರ್ಪು ನೀಡುತ್ತಾ, ಮಸೀದಿಯನ್ನು ವರ್ಷದುದ್ದಕ್ಕೂ ತೆರೆದಿಡಬಹುದೆಂದೂ, ಹಿಂದುಗಳು ದಿನನಿತ್ಯದ ಪೂಜೆಗಳಿಗೆ ಅನುಮತಿಸಬೇಕೆಂದು ಆದೇಶಿಸಿತು. ಕೇಂದ್ರ ಸರ್ಕಾರ ಈ ನಿರ್ಣಯವನ್ನು ಅನುಮೋದಿಸಿದ್ದರಿಂದಲೇ ಇದು ನಡೆದಿರುತ್ತದೆಂದು ಬಹಳ ಜನರು ಅಭಿಪ್ರಾಯಪಟ್ಟರು. ಮಸೀದಿಯನ್ನು ದೇವಾಲಯವಾಗಿ ಬದಲಾಯಿಸಬೇಕೆಂದುಕೊಂಡು ಮತ್ತಷ್ಟು ಜನರನ್ನು ಒಂದುಗೂಡಿಸಲು ದೇವಾಲಯವನ್ನು ತೆರೆದಿದ್ದು ಸಹಕರಿಸಿತು.

ರಾಜಕೀಯ ಪಕ್ಷಗಳು ಪ್ರಜೆಗಳಲ್ಲಿ ತಮ್ಮ ಆದರಣೆಯನ್ನು ಕಳೆದುಕೊಳ್ಳುತ್ತಿವೆ ಎಂದು ಬಹಳ ಜನ ಪರಿಶೀಲಕರು ತಿಳಿಸಲಾರಂಭಿಸಿದರು. ವಿವಿಧ ಅಂಶಗಳ ಮೇಲೆ ರಾಜಕೀಯೇತರ ನಾಯಕತ್ವದ ಅಡಿಯಲ್ಲಿ ಅನೇಕ ಜನಾಂಧೋಲನಗಳು ಸಿಡಿದೆದ್ದವು. ಮಾರುಕಟ್ಟೆಗಾಗಿ ಉತ್ಪತ್ತಿ ಮಾಡುತ್ತಿರುವ ರೈತರು ವ್ಯವಸಾಯ ಉತ್ಪತ್ತಿಗಳನ್ನು ಉತ್ತಮವಾದ ಬೆಲೆಗಳಿಗಾಗಿ ಹೋರಾಡಲಾರಂಭಿಸಿದರು. ಉತ್ತರ ಪ್ರದೇಶ, ಹರ್ಯಾಣಗಳಲ್ಲಿನ ರೈತರು ಮಹೇಂದ್ರಸಿಂಗ್ ತಿಕಾಯತ್ ನಾಯಕತ್ವದಲ್ಲಿ ಹೋರಾಡುತ್ತಿರುವಾಗ ಮಹಾರಾಷ್ಟ್ರದಲ್ಲಿನ ರೈತರು ಶರದ್‌ಜೋಷಿ ನಾಯಕತ್ವದಲ್ಲಿ ಹೋರಾಡಲಾರಂಭಿಸಿದರು. ಅನೇಕ ರಾಜ್ಯಗಳಲ್ಲಿ ಆಣೆಕಟ್ಟುಗಳು, ಗಣಿಗಳಂತಹ ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತರಾಗುತ್ತಿದ್ದ ಬುಡಕಟ್ಟು ಜನರು, ರೈತರು ಅನೇಕ ರಾಜ್ಯಗಳಲ್ಲಿ ಪ್ರತಿಭಟಿಸಲಾರಂಭಿಸಿದರು. ಜನಾದಾರಣೆಯನ್ನು ಕಳೆದುಕೊಳ್ಳುತ್ತಿರುವ ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಬೆಂಬಲಕ್ಕಾಗಿ ಹಿಂದೂ, ಮುಸ್ಲಿಂ ಧರ್ಮಭಾವನೆಗಳಿಗೆ ತಲೆಭಾಗಿಸಲಾರಂಭಿಸಿದರೆಂದು ಪರಿಶೀಲಕರು ಭಾವಿಸಲಾರಂಭಿಸಿದರು. ಆದರೆ ಇದರಿಂದ ದೇಶದ ಜಾತ್ಯಾತೀತ ಸ್ಪೂರ್ತಿಗೆ ಹೊಡೆತ ಬಿದ್ದು, ನಂತರ ದಶಮಾನಗಳಲ್ಲಿ ಧಾರ್ಮಿಕ ತತ್ವ ರಾಜಕೀಯಗಳಿಗೆ ಅವಕಾಶ ಕಲ್ಪಿಸಿದೆ.

ಇದೇ ಸಮಯದಲ್ಲಿ ಭಾರತೀಯ ಸೈನ್ಯಕ್ಕೆ ತುಪಾಕಿಗಳನ್ನು ಸರಬರಾಜು ಮಾಡಿದ ಸ್ವೀಡಿಷ್ ಉತ್ಪತ್ತಿದಾರರಿಂದ ಅನೇಕ ಜನ ನಾಯಕರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಲಂಚ ಮುಟ್ಟಿವೆಯೆಂದು ಆರೋಪಣೆಗಳು ಬಂದವು. ಈ ಆರೋಪಣೆಗಳು ಖಚ್ಚಿತವಾಗಿ ನಿರೂಪಿಸಲ್ಪಡದಿದ್ದರೂ, ಮಂತ್ರಿಮಂಡಲದಲ್ಲಿನ ಮಾಜೀ ಮಂತ್ರಿಗಳಾದ ವಿ.ಪಿ.ಸಿಂಗ್‌ರಂತಹ ಕೆಲವು ಜನರ ನಾಯಕತ್ವದಲ್ಲಿ ಬಲವಾದ ಹೋರಾಟ ನಡೆಯಿತು. ನಂತರ 1989ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೇಸೇತರ ರಾಜಕೀಯ ಶಕ್ತಿಗಳಿಗೆ ಆಡಳಿತ, ರಾಜಕೀಯ ರಂಗಗಳಲ್ಲಿ ಭ್ರಷ್ಟಾಚಾರ ಎನ್ನುವುದು ಮುಖ್ಯ ಪ್ರಚಾರ ಅಂಶವಾಯಿತು.ತಮ್ಮ ನಡುವಿನ ವಿಭೇದಗಳೊಂದಿಗೆ ಸಂಬಂಧವಿಲ್ಲದಂತೆ ಕಾಂಗ್ರೇಸೇತರ ರಾಜಕೀಯ ಪಕ್ಷಗಳು ಏಕವಾದ್ದರಿಂದ ಕಾಂಗ್ರೇಸ್‌ಗೆ ಗೆಲ್ಲುವುದು ಕಷ್ಟವಾಗಿಹೋಯಿತು. ಎಲ್ಲರಿಗಿಂತ ಹೆಚ್ಚು ಸ್ಥಾನಗಳು ಕಾಂಗ್ರೇಸ್‌ಗೆ

SCERT TELANGANA

ಬಂದಿದ್ದರೂ ಅದು ಒಂಟಿಯಾಗಿ ಸರ್ಕಾರವನ್ನು ಏರ್ಪಡಿಸುವ ಸ್ಥಿತಿಯಲ್ಲಿಲ್ಲ. ವಿ.ಪಿ.ಸಿಂಗ್ ನಾಯಕತ್ವದಲ್ಲಿ ಜನತಾದಳ್ ಮೊದಲ ಸಂಕೀರ್ಣ ಸರ್ಕಾರ ಏರ್ಪಡಿಸಿತು.

ಸಮ್ಮಿಶ್ರ ರಾಜಕೀಯಗಳ ಯುಗ (The Era of Coalition Politics) :

1990ರ ಕಾಲದಲ್ಲಿ ಸ್ವಾತಂತ್ರ್ಯಾನಂತರ ಭಾರತದೇಶದಲ್ಲಿ ಬಹಳ ಮುಖ್ಯವಾದ ಬದಲಾವಣೆಗಳು ಉಂಟಾದವು. ಸ್ಪರ್ಧೆಯಿಂದ ಕೂಡಿದ ಬಹುಪಕ್ಷ ವ್ಯವಸ್ಥೆಗೆ ಬದಲಾದ್ದರಿಂದ ಮೆಜಾರಿಟೀ ಸ್ಥಾನಗಳನ್ನು ಗೆದ್ದು ಸ್ವಂತವಾಗಿ ಸರ್ಕಾರನ್ನು ಏರ್ಪಾಟು ಮಾಡುವ ಸ್ಥಿತಿ ಯಾವ ಒಂದು ಪಕ್ಷಕ್ಕೂ ಇಲ್ಲ. 1989ರಿಂದ ರಾಷ್ಟ್ರೀಯ ಮಟ್ಟದಲ್ಲಿ ಏರ್ಪಟ್ಟ ಸರ್ಕಾರಗೆಳೆಲ್ಲವೂ ಸಮ್ಮಿಶ್ರ / ಮೈನಾರಿಟೀ ಸರ್ಕಾರಗಳೇ. ಕೇಂದ್ರದಲ್ಲಿ ಸರ್ಕಾರವನ್ನು ಏರ್ಪಾಟು ಮಾಡಲು ಅನೇಕ ರಾಷ್ಟ್ರೀಯ, ಪ್ರಾಂತೀಯ ಪಕ್ಷಗಳು ಒಂದಾಗಬೇಕಾಗಿ ಬರುತ್ತಿತ್ತು. ಇದರ ಅರ್ಥ ಅನೇಕ ಪಕ್ಷಗಳ ರಾಜಕೀಯ ಸಿದ್ಧಾಂತಗಳನ್ನು, ಕಾರ್ಯಕ್ರಮಗಳನ್ನು ಸೇರಿಸಿಕೊಂಡು ಕನಿಷ್ಠ ಒಪ್ಪಂದಗಳಿಗೆ ಬರಬೇಕಾಗುತ್ತಿತ್ತು. ಆದರಿಂದ ಯಾವ ಒಂದು ಪಕ್ಷ ತನ್ನ ಪೂರ್ಣ ಸಿದ್ಧಾಂತವನ್ನು ಮುಂದುವರೆಸಲು ಸಾಧ್ಯವಾಗದೇ ಸ್ವಲ್ಪಮಟ್ಟಿಗೆ ಕಡಿಮೆ ಮಾಡಿಕೊಳ್ಳಬೇಕಾಗಿ ಬರುತ್ತಿತ್ತು. ಇದರಿಂದ ರಾಜಕೀಯಗಳು, ವಿಧಾನಗಳಲ್ಲಿ ಅನೇಕ ದೃಷ್ಟಿಕೋನಗಳ ಬಗ್ಗೆ ಕೇಂದ್ರಸರ್ಕಾರ ಸೂಕ್ಷ್ಮವಾಗಿ ವ್ಯವಹರಿಸಬೇಕಾಗಿ ಬರುತ್ತಿತ್ತು. ಆದೇ ಸಮಯದಲ್ಲಿ ಇದರಿಂದ ಬಹಳ ಅಸ್ಥಿರತೆ ಕೂಡ ನೆಲೆಗೊಂಡಿತು. ಚಿಕ್ಕ ಪಕ್ಷಗಳೂ ಸಹ ತಮ್ಮ ಬೆಂಬಲ ಹಿಂತೆಗೆದುಕೊಂಡರೆ ಸರ್ಕಾರ ಉರುಳುತ್ತದೆ. ಆದ್ದರಿಂದ ಹೆಚ್ಚು ಪ್ರಯೋಜನಗಳನ್ನು ಪಡೆಯಲು ಅವು ಪ್ರಯತ್ನಿಸಿದವು. ಕೆಲವು ಬಾರಿ ಇದರಿಂದ ಸೈದ್ಧಾಂತಿಕ ಪಕ್ಷಪಾತ ಸಹ ಸಂಭವಿಸುತ್ತಿತ್ತು. ಅಂದರೆ ಯಾವುದೇ ಒಂದು ಭಾಗೀದಾರ ಪಕ್ಷ ಬೆಂಬಲ ಹಿಂತೆಗೆದುಕೊಳ್ಳುತ್ತದೆಂಬ ಭಯದಿಂದ ತೀವ್ರಬದಲಾವಣೆಗಳನ್ನು ತರುವ ವಿಧಾನಗಳನ್ನು ಜಾರಿಗೆ ತರಲು ಸಂಕೀರ್ಣ ಸರ್ಕಾರ ಹೆದರುತ್ತಿತ್ತು.

ಚಿತ್ರ 18.7 : ವಿ. ಪಿ.

ಪ್ರಾರಂಭದ ಸಮ್ಮಿಶ್ರ ಸರ್ಕಾರಗಳು ಬಹಳ ಅಸ್ಥಿರವಾಗಿದ್ದು ಅವುಗಳ ಪೂರ್ಣಕಾಲ ಮುಂದುವರಿಯಲಾರದೇ ಹೋದವು. ನಂತರದ ಸಮ್ಮಿಶ್ರ ಸರ್ಕಾರಗಳು ಕನಿಷ್ಠ ಜಂಟೀ ಕಾರ್ಯಕ್ರಮಗಳು ಸಮನ್ವಯ ಸಂಘಗಳಂತಹ ಹಲವು ವಿಧಾನಗಳ ಮೂಲಕ ಭಾಗೀದಾರರ ನಡುವೆ ಮತ್ತಷ್ಟು ಅವಗಾಹನೆ ಸಾಧಿಸಲ್ಪಟ್ಟವು. ಇದರ ಫಲವಾಗಿ ಬಿಜೆಪಿ ನಾಯಕತ್ವದಲ್ಲಿನ ನೇಷನಲ್ ಡೆಮಾಕ್ರಟಿಕ್ ಅಲಯನ್ಸ್, ಕಾಂಗ್ರೇಸ್ ನಾಯಕತ್ವದಲ್ಲಿನ ಸಮ್ಮಿಶ್ರ ಸರ್ಕಾರಗಳು ತಮ್ಮ ಪೂರ್ಣಕಾಲಾವಧಿ ಅಧಿಕಾರದಲ್ಲಿ ಮುಂದುವರೆದವು. ಅಷ್ಟೇ ಅಲ್ಲದೆ ಯುಪಿಎ (UPA) ಸಮ್ಮಿಶ್ರ ಸರ್ಕಾರ ಮರಳಿ ಚುನಾಯಿಸಲ್ಪಟ್ಟಿತು.

- ಸಮ್ಮಿಶ್ರ ರಾಜಕೀಯಗಳಿಂದ ಸರ್ಕಾರ ಬಲಹೀನ ಪಡುತ್ತಿದೆ ಕೆಲವರು ಭಾವಿಸುತ್ತಿದ್ದರೆ, ಇದರಿಂದ ಯಾವ ಒಂದು ಪಕ್ಷ ತನ್ನ ವಿಧಾನವನ್ನು ದೇಶದ ಮೇಲೆ ಹೇರ ದಂತೆ ಮಾಡಿದೆಯೆಂದು ಕೆಲವು ಜನರು ಭಾವಿಸಿದರು. ಇದನ್ನು ಉದಾಹರಣೆಯೊಂದಿಗೆ ಚರ್ಚಿಸಿರಿ.

ಪಶ್ಚಿಮಬಂಗಾಳದಲ್ಲಿ 'ವಾಮಪಕ್ಷಸರ್ಕಾರ' : (The 'Left Front Government' in Wes Bengal) :

ವಾಮ ಪಕ್ಷ ರಾಜಕೀಯ ಪಕ್ಷಗಳಾದ ಭಾರತೀಯ ಕಮ್ಯೂನಿಸ್ಟ್ ಪಕ್ಷ (ಸಿಪಿಐ), ಫಾರ್ವರ್ಡ್ ಬ್ಲಾಕ್, ರೆವಲ್ಯೂಷನರೀ ಸೋಷಲಿಸ್ಟ್ ಪಾರ್ಟಿ, ಭಾರತ ಕಮ್ಯೂನಿಸ್ಟ್ ಪಾರ್ಟಿ ಮಾರ್ಕ್ಸಿಸ್ಟ್ (ಸಿಪಿಎಂ)ನಂತಹವು 1977ರಲ್ಲಿ ಪಶ್ಚಿಮ ಬಂಗಾಳದ ರಾಜ್ಯ ಚುನಾವಣೆಗಳಲ್ಲಿ ಗೆದ್ದು ಸಿಪಿಎಂಗೆ ಸೇರಿದ ಜ್ಯೋತಿಬಸು ನಾಯಕತ್ವದಲ್ಲಿ ವಾಮಪಕ್ಷ

SCERT TELANGANA

ಸರ್ಕಾರವನ್ನು ಏರ್ಪಾಟು ಮಾಡಿದವು. ರಾಜ್ಯದಲ್ಲಿ ಅಸಂಪೂರ್ಣವಾಗಿ ಉಳಿದು ಹೋಗಿರುವ ಭೂಸುಧಾರಣೆಗಳನ್ನು ಅದು ಮೊಟ್ಟಮೊದಲು ಕೈಹಿಡಿಯಿತು. ಜೂನ್ 1978ರಲ್ಲಿ ಪಶ್ಚಿಮ ಬಂಗಾಲ್ ಸರ್ಕಾರ ಗುತ್ತಿಗೆದಾರರ ಹೆಸರನ್ನು ನಮೋದು ಮಾಡಿ, ಅವರ ಹಕ್ಕುಗಳನ್ನು ಕಾಪಾಡಲ್ಲು ಆಪರೇಷನ್ ಬರ್ಗಾ ಪ್ರಾರಂಭಿಸಿತು. (ಗುತ್ತಿಗೆದಾರರನ್ನು ಬೆಂಗಾಲಿಯಲ್ಲಿ ಬರ್ಗಾದಾರರು ಎನ್ನುತ್ತಾರೆ. ಇವರು ಭೂಮಾಲೀಕರ ಭೂಮಿಗಳನ್ನು ಸಾಗುವಳಿ ಮಾಡುತ್ತಾ ಬೆಳೆಯಲ್ಲಿ ಅಧಿಕ ಭಾಗ ಅವರಿಗೆ ಗುತ್ತಿಗೆಯಾಗಿ ಸಲ್ಲಿಸುತ್ತಾ ಇರುತ್ತಿದ್ದರು.) ಪಶ್ಚಿಮ ಬಂಗಾಳದ ಗ್ರಾಮೀಣ ಜನಸಂಖ್ಯೆಯಲ್ಲಿ ಈ ಗುತ್ತಿಗೆದಾರರು ಅಧಿಕ ಸಂಖ್ಯೆಯಲ್ಲಿರುತ್ತಿದ್ದರು. ಆಡಳಿತ ಸಂಬಂಧಿತ ವಿಳಂಬಗಳು, ಭೂಮಾಲೀಕ ವರ್ಗಗಳ ಯಜಮಾನಿಕೆ ಇಲ್ಲದಂತಾಗಲು ಪಂಚಾಯಿತಿ ರಾಜ್ ಸಂಸ್ಥೆಗಳು, ಗುತ್ತಿಗೆದಾರರ ಜಂಟೀ ಕಾರ್ಯಾಚರಣೆಯ ಮೇಲೆ ಆಪರೇಷನ್ ಬರ್ಗಾ ಆಧಾರಪಟ್ಟಿದೆ. ಅಧಿಕಾರಿಗಳು ಗ್ರಾಮಗಳಲ್ಲಿ ಸಮಾವೇಶಗಳು ನಿರ್ವಹಿಸಿ ವಿವಿಧ ಪಾತ್ರಧಾರಿಗಳು ಹೇಳುವುದು ಕೇಳುತ್ತಿದ್ದರು. ಕೂಡಲೇ ಗುತ್ತಿಗೆದಾರರ ಪಟ್ಟಿ ತಯಾರಿಸಿ ಭೂಮಾಲೀಕರ ಸಮಕ್ಷಮದಲ್ಲಿ ಸರಿನೋಡುತ್ತಿದ್ದರು. ಯಾವುದಾದರೂ ಆಕ್ಷೇಪಣೆಗಳಿದ್ದರೆ ತಿಳಿಯಪಡಿಸಲು ಭೂಮಾಲೀಕರಿಗೆ ಅವಕಾಶ ನೀಡುತ್ತಿದ್ದರು. ಸ್ಥಳದಲ್ಲಿಯೇ ಗುತ್ತಿಗೆದಾರರ ಹೆಸರುಗಳನ್ನು ನಮೋದು ಮಾಡಿ, ಎಲ್ಲಾ ಕಾನೂನುಬದ್ಧ ಪತ್ರಗಳನ್ನು ಸಿದ್ದಪಡಿಸಿ ಕೂಡಲೇ ಹಂಚುತ್ತಿದ್ದರು.

ಆಪರೇಷನ್ ಬರ್ಗಾ ಫಲವಾಗಿ ಗುತ್ತಿಗೆದಾರರನ್ನು ಭೂ ಮಾಲೀಕರು ಒತ್ತಾಯ ಪೂರ್ವಕವಾಗಿ ತೊಲಗಿಸಲು ಅವಕಾಶವಿಲ್ಲದಂತಾಯಿತು. ವಾಸ್ತವವಾಗಿ ಗುತ್ತಿಗೆದಾರರ ಹಕ್ಕನ್ನು ವಂಶಪಾರಂಪರ್ಯ ಮಾಡಿ ಅದು ಮುಂದುವರೆಯುವಂತೆ ನೋಡಿದರು. ಅಷ್ಟೇಅಲ್ಲದೆ ಬೆಳೆಯಲ್ಲಿ ನ್ಯಾಯವಾದ ಪಾಲು (ಶ್ರಮವಿಲ್ಲದೆ ಇತರ ಬಂಡವಾಳ ಗುತ್ತಿಗೆದಾರರು ಹಾಕಿದರೆ 75%, ಭೂಮಾಲೀಕರು ಹಾಕಿದರೆ 50%) ಗುತ್ತಿಗೆದಾರನಿಗೆ ದೊರಕುವಂತೆ ಸರ್ಕಾರ ನೋಡಿಕೊಳ್ಳುತ್ತದೆ. ಒಟ್ಟಾರೆಯಾಗಿ ಪಶ್ಚಿಮ ಬಂಗಾಳದಲ್ಲಿನ ಗ್ರಾಮೀಣ ಪ್ರಾಂತದಲ್ಲಿನ ಕುಟುಂಬಗಳಲ್ಲಿ ಅರ್ಧದವರೆಗೆ ಭೂಸುಧಾರಣೆಗಳ ಲಾಭ ಪಡೆದವು.

- ಪಶ್ಚಿಮ ಬಂಗಾಳದಲ್ಲಿನ ಭೂಸುಧಾರಣೆಗಳನ್ನು ಚೈನಾದಲ್ಲಿ ಇಲ್ಲವೆ ವಿಯತ್ನಾಂದಲ್ಲಿನ ಭೂಸುಧಾರಣೆಗಳೊಂದಿಗೆ ಹೋಲಿಸಿರಿ.
- ಗುತ್ತಿಗೆದಾರರಿಗೆ ರಕ್ಷಣೆ ಲಭಿಸಿದ್ದರಿಂದ ಉತ್ಪತ್ತಿ ಏಕೆ ಹೆಚ್ಚಾಯಿತು ?

ಈ ಕ್ರಮಗಳ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ವ್ಯವಸಾಯ ಉತ್ಪತ್ತಿ ಶೇಕಡ 30 ರಷ್ಟು ಹೆಚ್ಚಾಯಿತು. ಗ್ರಾಮೀಣ ಬಡತನ ಗಣನೀಯವಾಗಿ ಕಡಿಮೆಯಾಯಿತು. ಪಶ್ಚಿಮ ಬಂಗಾಳದಲ್ಲಿನ ಅಧಿಕ ಭಾಗದ ಗುತ್ತಿಗೆದಾರರು (70% ವರೆಗೆ) ಇನ್ನೂ ನಮೋದಾಗಿಲ್ಲವೆಂದೂ, ಈ ಅಪೂರ್ಣ ಜಾರಿಗೆಯಿಂದ ಗ್ರಾಮೀಣ ಪ್ರಾಂತಗಳಲ್ಲಿ ಹೊಸ ಶ್ರೀಮಂತ ವರ್ಗ ಏರ್ಪಟ್ಟಿತೆಂದು ವಿಮರ್ಶಕರು ಭಾವಿಸುತ್ತಾರೆ.

ಏನೇ ಆದರೂ ಆಪರೇಷನ್ ಬರ್ಗಾ, ಪಂಚಾಯಿತಿ ರಾಜ್ ವ್ಯವಸ್ಥೆಯ ಜಾರಿಗೆಯಿಂದ ವಾಮಪಕ್ಷಕ್ಕೆ ಗ್ರಾಮೀಣ ಜನಸಂಖ್ಯೆಯಲ್ಲಿ ಗಣನೀಯವಾದ ಬೆಂಬಲ ದೊರೆಯಿತು. 2006 ವರೆಗೆ ಎಲ್ಲಾ ಚುನಾವಣೆಗಳಲ್ಲಿ ಘನವಿಜಯ ಸಾಧಿಸಿತು. ರಾಜ್ಯದ ಜನರ ಅವಶ್ಯಕತೆಗಳನ್ನು ಪ್ರಜಾಸತ್ತಾತ್ಮಕವಾಗಿ ತೀರಿಸಿದ ಉದಾಹರಣೆಗಳಲ್ಲಿ ಒಂದಾಗಿದೆ.

1980 Äí¨ ÓËáÍ ÓPÝìÃWÙá, PÆÊâ ÃÝgQà¿á ±PWÙá

A–PÝÃ¨ÈÃáÊ ±PWÙá (®àÐ®Ç… ¥ríp… 1989-1990)	A–PÝÃ¨È (¿áá®pv… ¥ríp… 1996-1998) CÃáÊ ±PWÙá	(®àÐ®Ç… vÊãPqP… AÆ¿á®… 1998-2004) ಅಧಿಕಾರದಲ್ಲಿರುವ ಪಕ್ಷಗಳು
hw, wGíP, G i ², qw², gÊáá Êáñá PÝÎàÃ… ®àÐ®Ç… PÝ®Ã®… (hP GÓ…Ô)	ಜೆಕೆ ಎಸ್‌ಸಿ, ಟಿಡಿಪಿ, ಟಿಎಂಸಿ, ಸಿಪಿಐ, ಎಜಿಪಿ, ಡಿಎಂಕೆ, ಎಂಜಿಪಿ	ಜೆಡಿಯು, ಎಸ್‌ಎಡಿ, ಎಐಎಡಿಎಂಕೆ, ಜೆಕೆಎನ್‌ಸಿ, ತೃಣಮೂಲ್ ಕಾಂಗ್ರೆಸ್, ಬಿಜೂ ಜನತಾದಳ್, ಶಿವಸೇನ
¸íŸÆ¯àw¨ ±PWÙá Ô²Gí,Ô² I, ¹h²	ಬೆಂಬಲ ನೀಡಿದ ಪಕ್ಷಗಳು ಸಿಪಿಎಂ	ಬೆಂಬಲ ನೀಡಿದ ಪಕ್ಷಗಳು ಟಿ.ಡಿ.ಪಿ.

C¨á ÓPÝìÃ¨È »ÝXWÙÝ¨ CÆÊ ¸íŸÆ¯àw¨ GÇÝ ÃÝgQà¿á ±PWÙ ±q AÆ. BWÝW, I¨á CÆÊ A¨Qíñ ÖaIá Gí²WÚÃáÊ ±PWÙ®á ÖÓÄÔ¨àÊ.

SCERT TELANGANA

20ನೇ ಶತಮಾನದ ಕೊನೆಯ ದಶಕದಲ್ಲಿನ ಸಮಸ್ಯೆಗಳು :
(Political Concerns in the last decade of 20th Century) :

ರಾಜಕೀಯದಲ್ಲಿ ಈ ಬದಲಾವಣೆಗಳೊಂದಿಗೆ ಇತರ ಮುಖ್ಯವಾದ ಪರಿಣಾಮಗಳು ಸಹ ಸಂಭವಿಸಿದವು. ಭಾರತ ದೇಶದೊಳಗೆ ಸ್ವತಂತ್ರವಾಗಿ ವಿದೇಶಿ ಬಂಡವಾಳಗಳು, ಸರಕುಗಳ ಬರುವಂತೆ ಆರ್ಥಿಕ ವಿಧಾನ ಒತ್ತಡ ಹೇರಲ್ಪಟ್ಟಿತು. ಇನ್ನೊಂದು ಕಡೆ ಹೊಸ ಸಾಮಾಜಿಕ ವರ್ಗಗಳು ಮೊಟ್ಟಮೊದಲ ಬಾರಿಗೆ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಲಾರಂಭಿಸಿದವು. ಅಷ್ಟೇ ಅಲ್ಲದೇ ರಾಜಕೀಯ ಜೀವನದಲ್ಲಿ ಧರ್ಮಪರ ರಾಷ್ಟ್ರೀಯವಾದ, ಧರ್ಮದ ಹೆಸರಿನಲ್ಲಿ ರಾಜಕೀಯ ಸಮೀಕರಣಗಳು ಮುಖ್ಯಾಂಶಗಳಾಗಿ ಬದಲಾದವು. ಇವುಗಳೆಲ್ಲವುಗಳ ಕಾರಣದಿಂದ ಭಾರತೀಯ ಸಮಾಜ ತೀವ್ರವಾದ ಅಲ್ಲಕಲ್ಲೋಲಗಳಿಗೆ ಒಳಗಾಯಿತು. ಈ ಬದಲಾವಣೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಅನುಗುಣವಾಗಿ ಬದಲಾಗುವ ಪ್ರಯತ್ನದಲ್ಲಿಯೇ ಇನ್ನೂ ನಾವು ಇದ್ದೇವೆ.

ಸಂವಿಧಾನಿಕ ಸೌಕರ್ಯಗಳ ವಿಸ್ತರಣೆ (Extention of Constitutional Previlages) :

ಹಿಂದುಳಿದ ವರ್ಗಗಳ ಜನರಿಗೆ ಸಹ ಅವಕಾಶಗಳು ಕಲ್ಪಿಸುವುದರಲ್ಲಿ ಅವರನ್ನು ಸಹ ಒಗ್ಗೂಡಿಸಿಕೊಂಡು ಅಭಿವೃದ್ಧಿ ಸಾಧಿಸಲುವುದರ ಮೇಲೆ ಜನತಾದಳ್ ದೃಷ್ಟಿ ಕೇಂದ್ರೀಕರಿಸಿತು. ಸರ್ಕಾರೀ ಉದ್ಯೋಗಗಳಲ್ಲಿಯೂ, ಶೈಕ್ಷಣಿಕ ಸದುಪಾಯಗಳಲ್ಲಿಯೂ ಇತರ ಹಿಂದುಳಿದ ವರ್ಗ (ಒಬಿಸಿ) ಗಳಿಗೆ ಮೀಸಲಾತಿ ಇರಬೇಕೆಂದು ಸಿಫಾರಸ್ಸು ಮಾಡಿದ ಮಂಡಲ ಕಮೀಷನ್ ನಿವೇದಿಕೆಯನ್ನು ನೇಷನಲ್ ಫ್ರಂಟ್ ಸರ್ಕಾರ ಹೊರತೆಗೆಯಿತು. ಈ ಕಮೀಷನ್ ಗುರ್ತಿಸಿದ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ 27% ಮೀಸಲಾತಿ ಕಲ್ಪಿಸಬೇಕೆಂಬ ಮಂಡಲ ಕಮಿಷನ್ ಮುಖ್ಯವಾದ ಸಿಫಾರಸ್ಸನ್ನು ಜಾರಿಗೆತಂದಂತೆ ವಿ.ಪಿ.ಸಿಂಗ್ ಸರ್ಕಾರ ಘೋಷಿಸಿತು. ಈ ಆದೇಶಗಳಿಂದ ಅನೇಕ ಪ್ರತಿಭಟನೆಗಳು, ಪ್ರತ್ಯೇಕವಾಗಿ ಉತ್ತರ ಭಾರತದೇಶದಲ್ಲಿ ಹೆಚ್ಚಾಗಿ ನಡೆದವು. ದಕ್ಷಿಣದಲ್ಲಿ ಆಗಲೇ ಅನೇಕ ರಾಜ್ಯಗಳು ಒಬಿಸಿಗಳಿಗೆ ಅಧಿಕಭಾಗ ಮೀಸಲಾತಿಗಳು ಜಾರಿಯಲ್ಲಿದ್ದವು. ವಿ.ಪಿ.ಸಿಂಗ್ ಸರ್ಕಾರದ ಈ ನಿರ್ಣಯದ ಬಗ್ಗೆ ಅನೇಕ ಇತರ ರಾಜಕೀಯ ಪಕ್ಷಗಳು ಅನುಕೂಲವಾಗಿಲ್ಲ. ಆದರೆ ತಾವು ಜನಾದರಣೆ ಕಳೆದುಕೊಳ್ಳುತ್ತೇವೆ ಎನ್ನುವ ಭಯದಿಂದ ಅದರ ಬಗ್ಗೆ ವಿರೋಧವನ್ನು ಪ್ರಕಟಿಸಲಿಲ್ಲ. ಕಳೆದ ಎರಡು ದಶಮಾನಗಳಲ್ಲಿ ಒಬಿಸಿ ಜಾರಿಗಳಲ್ಲಿ ಬಹಳಷ್ಟು ಶ್ರೀಮಂತರಾಗಿ ತಮ್ಮನ್ನು ಪ್ರತಿಪಾದಿಸಿಕೊಳ್ಳಲು ಪ್ರಯತ್ನಿಸುತ್ತಿರುವುದೇ ಇದಕ್ಕೆ ಕಾರಣ, ಅವರು ಪ್ರತ್ಯೇಕವಾಗಿ ಭೂಸುಧಾರಣೆಗಳು, ಹಸಿರು ಕ್ರಾಂತಿಯ ಮೂಲಕ ಲಾಭಪಟ್ಟರು. ಆದರೆ ಶಿಕ್ಷಣದಲ್ಲೂ, ಸರ್ಕಾರಿ ಉದ್ಯೋಗಗಳಲ್ಲಿಯೂ, ರಾಜಕೀಯದಲ್ಲಿಯೂ ಸಹ ತಮಗೆ ತಕ್ಕಟ್ಟು ಪ್ರಾತಿನಿಧ್ಯವಿಲ್ಲವೆಂದು ಭಾವಿಸಲು ಆರಂಭಿಸಿದರು. ಈ ಕ್ಷೇತ್ರಗಳಲ್ಲಿಯೂ ಈಗ ಇವರು ತಮ್ಮ ಭಾಗ ಕೋರಲಾರಂಭಿಸಿದರು. ಮಂಡಲ ಕಮಿಷನ್ ಸಿಫಾರಸ್ಸುಗಳನ್ನು ಜಾರಿಗೆ ತರುವುದರ ಮೂಲಕ ವಿ.ಪಿ.ಸಿಂಗ್ ಸರ್ಕಾರ ಅವರ ಕೋರಿಕೆಗಳನ್ನು ತೀರಿಸಿದನು. ಕ್ರಮೇಣ ಆಡಳಿತ ವಿಧಾನ ಜಾತಿ ಸಮಸ್ಯೆಗಳಿಗೆ, ಪ್ರತ್ಯೇಕವಾಗಿ ಕಡಿಮೆ ಜಾತಿಗಳವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಮತ್ತಷ್ಟು ಸೂಕ್ಷ್ಮವಾಗಿ ಸ್ಪಂಧಿಸಲಾರಂಭಿಸಿತು. ದಲಿತರ ಪ್ರಯೋಜನಗಳಿಗೆ ಪ್ರಾತಿನಿಧ್ಯವಹಿಸುತ್ತೇವೆ ಎನ್ನುವ

ಪಂಚಾಯಿತಿರಾಜ್ & 73ನೇ ತಿದ್ದುಪಡಿ

ಸ್ಥಳೀಯ ಸ್ವಯಮಾಡಳಿತಕ್ಕೆ ಸಂವಿಧಾನಿಕ ಅಂತಸ್ತು ನೀಡುತ್ತಾ 1992ರಲ್ಲಿ ಪಿ.ವಿ. ನರಸಿಂಹರಾವು ಸರ್ಕಾರ ಸಂವಿಧಾನದ ತಿದ್ದುಪಡಿ ಮಾಡಿತು. 73ನೇ ಸಂವಿಧಾನ ತಿದ್ದುಪಡಿ ಗ್ರಾಮಮಟ್ಟದಲ್ಲಿ ಸ್ಥಳೀಯ ಸ್ವಯಂಮಾಡಳಿತ ಸರ್ಕಾರಗಳನ್ನು ಕಲ್ಪಿಸಲು, 74ನೇ ಸಂವಿಧಾನ ತಿದ್ದುಪಡಿ ಪಟ್ಟಣ, ನಗರಗಳಿಗೆ ಅವುಗಳ ಮಟ್ಟದಲ್ಲಿ ಸರ್ಕಾರಗಳನ್ನು ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ಮೊಟ್ಟಮೊದಲ ಬಾರಿಗೆ ಆಯ್ದುಕೊಂಡರು. ಒಟ್ಟು ಸ್ಥಾನಗಳಲ್ಲಿ ಮೂರರಲ್ಲಿ ಒಂದು ಭಾಗ (1/3 ರಷ್ಟು ಭಾಗ) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಟ್ಟರು. ಪರಿಶಿಷ್ಟಜಾತಿ, ಪರಿಶಿಷ್ಟವರ್ಗಗಳಿಗೆ ಸಹ ಕೆಲವು ಸ್ಥಾನಗಳನ್ನು ಮೀಸಲಿಟ್ಟರು. ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಗೌರವಿಸುತ್ತಾ ಸ್ಥಳೀಯ ಸ್ವಯಮಾಡಳಿತ ಸರ್ಕಾರಗಳಿಗಿರುವ ಕರ್ತವ್ಯಗಳು, ಅಧಿಕಾರಗಳನ್ನು ರಾಜ್ಯ ಸರ್ಕಾರಗಳ ನಿರ್ಣಯಕ್ಕೆ ಬಿಟ್ಟರು. ಆದ್ದರಿಂದ ದೇಶದಾದ್ಯಂತ ಕೆಲಸ ಮಾಡುವ ಸ್ಥಳೀಯ ಸ್ವಯಂ ಆಡಳಿತ ಸರ್ಕಾರಗಳ ಅಧಿಕಾರಗಳಲ್ಲಿ ವ್ಯತ್ಯಾಸಗಳಿರುತ್ತವೆ.

SCERT TELANGANA

ಬಹುಜನ ಸಮಾಜ ಪಕ್ಷ, ಬೆಳೆಯುತ್ತಿರುವ ಜಾಟ್, ಯಾದವರಂತಹ ಜಾತಿಗಳಿಗೆ ಪ್ರಾತಿನಿಧ್ಯವಹಿಸುವ ಪ್ರಾಂತೀಯ ಪಕ್ಷಗಳು ಭಾರತ ದೇಶದ ರಾಜಕೀಯಗಳಲ್ಲಿ ಮುಖ್ಯಪಾತ್ರ ಪೋಷಿಸಲಾರಂಭಿಸಿದವು.

ರಾಜನೀತಿಗಳು, ಧರ್ಮದ ವಿನಿಯೋಗ (Use of religion and Politics) :

ಜನಸಂಖ್ಯೆಯಲ್ಲಿ ಅತ್ಯಧಿಕರು ಅಂದರೆ ಹಿಂದೂಗಳ ಧಾರ್ಮಿಕ ಅಸ್ತಿತ್ವದ ಆಧಾರವಾಗಿ ದೇಶವನ್ನು ನಿರ್ಮಿಸಬೇಕೆಂಬ ರಾಜಕೀಯ ಧೋರಣೆಗೆ ಭಾರತೀಯ ಜನತಾ ಪಕ್ಷ ನೇತೃತ್ವವಹಿಸುತ್ತಿದೆ. ಪ್ರಜಾಪ್ರಭುತ್ವ, ಜಾತ್ಯಾತೀತತೆ ಎನ್ನುವವು ಪಾಶ್ಚಾತ್ಯ ಭಾವನೆಗಳೆಂದೂ, ಇವು ಸರಿಹೋಗುವುದಿಲ್ಲವೆಂದು, ಪುರಾತನ ಭಾರತೀಯ ಸಂಸ್ಕೃತಿಯಿಂದ ನಾವು ಕಲಿತುಕೊಳ್ಳಬೇಕೆಂದು ಈ ಪಕ್ಷ ವಿಶ್ವಾಸವಿಡುತ್ತದೆ. ಆದರೆ ಧಾರ್ಮಿಕ ಗುರುಗಳು ನಡೆಸುವ ಧರ್ಮಪರವಾದ ರಾಜ್ಯಕ್ಕೆ ಬಿಜೆಪಿ ವಿರೋಧ. ಜಾತ್ಯಾತೀತ ರಾಜ್ಯ ಅಲ್ಪಸಂಖ್ಯಾತ ವರ್ಗಗಳಿಗೆ ಮಾತ್ರವೇ ಪ್ರತ್ಯೇಕ ಸದುಪಾಯಗಳು ಕಲ್ಪಿಸುವುದಲ್ಲದೆ, ದೇಶದ ಪ್ರಜೆಗಳೆಲ್ಲರನ್ನೂ ಸಮಾನ ದೃಷ್ಟಿಯಿಂದ ಕಂಡು ಒಂದೇ ಪೌರ ಕಾನೂನನ್ನು ಜಾರಿಗೆ ತರಬೇಕೆಂದು ಬಿಜೆಪಿ ಜಾತ್ಯಾತೀತ ಸ್ವರೂಪದ ಚರ್ಚೆಯನ್ನು ಪ್ರಾರಂಭಸಿತು.

1980ರ ವರೆಗೆ ಭಾರತದ ರಾಜಕೀಯಗಳಲ್ಲಿ ಈ ಧೋರಣೆ ನಾಮಮಾತ್ರವಾಗಿತ್ತು. ಉದಾಹರಣೆಗೆ 1984ರ ಲೋಕಸಭೆ ಚುನಾವಣೆಯಲ್ಲಿ ಇವರು ಎರಡು ಸ್ಥಾನಗಳು ಮಾತ್ರವೇ ಗೆದ್ದರು. ಆದರೆ ಅಯೋಧ್ಯೆಯ ಅಂಶವನ್ನು ರಾಮನು ಜನ್ಮಿಸಿದ ಪ್ರದೇಶವೆಂದೂ ಮಸೀದಿ ಇರುವ ಸ್ಥಾನದಲ್ಲಿ ದೇವಾಲಯ ನಿರ್ಮಾಣಕ್ಕೆ ಚಳುವಳಿಯನ್ನು ಪ್ರಾರಂಭಿಸಿದ್ದರಿಂದ ಬಿಜೆಪಿಗೆ ಜನಾದರಣೆ ಗಣನೀಯವಾಗಿ ಹೆಚ್ಚಾಯಿತು. ಈ ಅಂಶಗಳಿಗೆ ಬೆಂಬಲವಾಗಿ ಬಿಜೆಪಿ ನಾಯಕನಾದ ಎಲ್.ಕೆ. ಅಡ್ವಾನಿ 1990ರಲ್ಲಿ ಸೋಮನಾಥ್‌ದಿಂದ ಅಯೋಧ್ಯೆಯವರೆಗೆ ರಥಯಾತ್ರೆ ಪ್ರಾರಂಭಿಸಿದರು. ಈ ಜಾತ್ಯಾತೀತ ರಾಜಕೀಯಗಳು ಅಲ್ಪಸಂಖ್ಯಾತ ವರ್ಗಗಳನ್ನು, ಪ್ರತ್ಯೇಕವಾಗಿ ಮುಸ್ಲಿಮರನ್ನು ಸಂತೃಪ್ತಿಪಡಿಸಲು ಪ್ರಯತ್ನಿಸಿ, ಅಧಿಕ ಸಂಖ್ಯೆಯಲ್ಲಿರುವ ಹಿಂದುಗಳನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆಂದು ವಾದಿಸಲಾರಂಭಿಸಿದರು. ಈ ಚಳುವಳಿಯ ಸಮಯದಲ್ಲಿ ಜನರು ಹಲವು ಪ್ರಾಂತಗಳಲ್ಲಿ ಧರ್ಮದ ಆಧಾರದ ಮೇಲೆ ಬೇರ್ಪಟ್ಟರು. ದೊಡ್ಡ ಸಂಖ್ಯೆಯಲ್ಲಿ ಧರ್ಮಾಪರವಾದ ಗಲಭೆಗಳು ಹೆಚ್ಚಾದವು. ಬಿಹಾರ್‌ನಲ್ಲಿ ಅಡ್ವಾನಿಯನ್ನು ಅರೆಸ್ಟ್ ಮಾಡುವುದರಿಂದ ಈ ಯಾತ್ರೆ ಮುಗಿಯಿತು. ಇದಕ್ಕೆ ಪ್ರತಿಯಾಗಿ ವಿ.ಪಿ.ಸಿಂಗ್ ಸರ್ಕಾರಕ್ಕೆ ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡು ಮೊದಲೇ ಚುನಾವಣೆ ನಡೆಯುವಂತೆ ಮಾಡಿತು.

ಶ್ರೀಲಂಕಾಕ್ಕೆ ಭಾರತೀಯ ಸೈನ್ಯವನ್ನು ಕಳುಹಿಸುವುದರಿಂದ ಆತನ ಈ ಕ್ರಮಕ್ಕೆ ಪ್ರತೀಕಾರವಾಗಿ ಶ್ರೀಲಂಕದಲ್ಲಿರುವ ತಮಿಳು ಪ್ರತ್ಯೇಕವಾದ ಬೃಂದವಾದ ಎಲ್‌ಟಿಟಿಇ ಕೈಯಲ್ಲಿ ಈ ಚುನಾವಣೆಗಳ ಪ್ರಚಾರದಲ್ಲಿ ರಾಜೀವ್‌ಗಾಂಧಿ ಹತ್ಯೆಗೆ ಗುರಿಯಾದನು. ನಂತರ ಸುರಿದ ಸಹಾನುಭೂತಿ ಅಲೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತು. ಆದರೆ ಲೋಕಸಭೆಯಲ್ಲಿ ಬಿಜೆಪಿ ಶಕ್ತಿ 120ಕ್ಕೆ ಏರಿತು. ರಾಮಾಲಯ ಪ್ರಚಾರದಲ್ಲಿ ಸಮೀಕರಿಸಲ್ಪಟ್ಟ ದೊಡ್ಡ ಗುಂಪೊಂದು 1992ರಲ್ಲಿ ಅಯೋಧ್ಯೆಗೆ ತಲುಪಿ ಮಸೀದಿಯನ್ನು ನಾಶಪಡಿಸಿತು. ಈ ಘಟನೆಯ ನಂತರ ತೀವ್ರ ಪ್ರತಿಭಟನೆಗಳು, ಧಾರ್ಮಿಕ ಕೋಮುಗಲಭೆಗಳು ಹೆಚ್ಚಾದವು, ಬಹಳ ಪ್ರಾಣನಷ್ಟ ನಡೆಯಿತು.

ಉದಾರವಾದ ಆರ್ಥಿಕ ವಿಧಾನ (Economic Liberalisation):

1991ರಲ್ಲಿ ವಿ.ಪಿ.ಸಿಂಗ್ ಸರ್ಕಾರ ಉರುಳಿಹೋದಾಗ ಭಾರತದೇಶ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಸಾಲಗಳನ್ನು ಮರಳಿ ಪಾವತಿಸಲು, ಆಮದುಗಳಿಗೆ ಸಲ್ಲಿಸಲು ಉಪಯೋಗಿಸುವ ವಿದೇಶಿಮಾರಕ ದ್ರವ್ಯ ಸುಮಾರಾಗಿ ಬತ್ತಿಹೋದವು. ಅಂದರೆ ಹೊಸ ಸಾಲ ದೊರೆತರೆ ವಿನಃ ಹಳೆಯ ಸಾಲಗಳನ್ನು ಸಕಾಲದಲ್ಲಿ ಪಾವತಿಸಲಾರದ ಪರಿಸ್ಥಿತಿಯಲ್ಲಿ ಭಾರತದೇಶ ಇದೆ. 1992ರಲ್ಲಿ ಪಿ.ವಿ. ನರಸಿಂಹರಾವ್ ನೇತೃತ್ವದಲ್ಲಿ ಏರ್ಪಟ್ಟ ಹೊಸ ಕಾಂಗ್ರೆಸ್ ಸರ್ಕಾರ ಈ ಬಿಕ್ಕಟ್ಟನ್ನು ನಿವಾರಿಸಲು ಅಂತರಾಷ್ಟ್ರೀಯ ವಿತ್ತನಿಧಿಯೊಂದಿಗೆ ಮಾತುಕತೆ ನಿರ್ವಹಿಸಿತು. ಇದಕ್ಕೆ ಕೆಲವು ತೀವ್ರವಾದ ನಿಬಂಧನೆಗಳನ್ನು ಹಾಕುತ್ತಾ (ಇವುಗಳನ್ನು ರಚನಾತ್ಮಕ

ಚಿತ್ರ 18.8:ಪಿ.ವಿ. ನರಸಿಂಹರಾವ್

SCERT TELANGANA

ಚಿತ್ರ 18.9:ಹೆಚ್.ಡಿ. ದೇವೆಗೌಡ

ವ್ಯವಸ್ಥಾಪನಾ ಕಾರ್ಯಕ್ರಮ ಎನ್ನುವರು). ಭಾರತದೇಶ ಉದಾರವಾದ ಆರ್ಥಿಕ ವಿಧಾನವನ್ನು ಅವಲಂಬಿಸುವಂತೆ ಮಾಡಿತು. ಇದರ ಅರ್ಥತ

ಅ. ಸರ್ಕಾರದ ಖರ್ಚುಗಳನ್ನು ತೀವ್ರವಾಗಿ ಕಡಿಮೆ ಮಾಡಿಕೊಳ್ಳುವುದು- ಇದರಲ್ಲಿ ರೈತರಿಗೆ ನೀಡುವ ಸಬ್ಸಿಡೀಗಳಲ್ಲಿ ಕಡಿತ, ಪ್ರಜಾಸೇವೆಗಳು, ಆರೋಗ್ಯಗಳಂತಹವು ಗಳಲ್ಲಿ ಸರ್ಕಾರ ತನ್ನ ಖರ್ಚನ್ನು ಕಡಿಮೆ ಮಾಡಿಕೊಳ್ಳುವುದಂತಹವುಗಳು ಸಹ ಇವೆ.

ಆ. ವಿದೇಶೀ ವಸ್ತುಗಳ ಆಮದುಗಳ ಮೇಲೆ ಪರಿಮಿತಿಗಳನ್ನು ತೆರಿಗೆಗಳನ್ನು ಕಡಿಮೆ ಮಾಡುವುದು.

ಇ. ಭಾರತದೇಶದಲ್ಲಿ ವಿದೇಶೀ ಬಂಡವಾಳಗಳ ಮೇಲೆ ಪರಿಮಿತಿಗಳನ್ನು ಕಡಿಮೆ ಮಾಡುವುದು.

ಈ. ಆರ್ಥಿಕ ಕ್ಷೇತ್ರದಲ್ಲಿನ ಅನೇಕ ಕ್ಷೇತ್ರಗಳಲ್ಲಿ (ಉದಾ.: ಟೆಲಿಫೋನ್‌ಗಳು, ಬ್ಯಾಂಕಿಂಗ್, ವಿಮಾನಯಾನದಂತಹವುಗಳಲ್ಲಿ) ಖಾಸಗೀ ಬಂಡವಾಳ ಗಾರರಿಗೆ ಅವಕಾಶ ಕಲ್ಪಿಸುವುದು. (ಇವು ಹಿಂದಿನ ಸರ್ಕಾರಗಳ ಏಕಾಧಿಪತ್ಯದ ಅಡಿಯಲ್ಲಿದ್ದವು).

ಈ ಕ್ರಮಗಳ ಕಾರಣದಿಂದಾಗಿ ಭಾರತ ದೇಶದೊಳಗೆ ವಿದೇಶೀ ವಸ್ತುಗಳು ಪ್ರವೇಶಿಸಿದ್ದರಿಂದ ಭಾರತೀಯ ಕೈಗಾರಿಕೊದ್ಯಮಿಗಳಿಗೆ ಪ್ರಪಂಚ ಉತ್ಪತ್ತಿದಾರರೊಂದಿಗೆ ಸ್ಪರ್ಧಿಸದೇ ತಪ್ಪಲಿಲ್ಲ. ಇದರಿಂದ ವಿದೇಶೀ ಕಂಪನಿಗಳು ಭಾರತದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದವು. ಆದರೆ ಸರ್ಕಾರ ಪ್ರಜೆಗಳಿಗೆ ನೀಡುವ ಸಬ್ಸಿಡಿಗಳಲ್ಲಿ ಕಡಿತ ವಿಧಿಸಿದ್ದರಿಂದ ಅಗ್ಗದ ವಿದೇಶೀ ವಸ್ತುಗಳು ಹೆಚ್ಚಾಗಿ ಭಾರತದಲ್ಲಿನ ಅನೇಕ ಕಾರ್ಖಾನೆ ಗಳು ನಿಂತು ಹೋಗಿದ್ದರಿಂದ ಸಾಧಾರಣ ಪ್ರಜೆಗಳು ಬಹಳ ಕಷ್ಟಗಳಿಗೊಳಗಾ ದರು. ಶಿಕ್ಷಣ, ಆರೋಗ್ಯ, ಸಾರಿಗೆ ಯಂತಹ ಅನೇಕ ಸರ್ಕಾರಿ ಸದುಪಾಯಗಳ ಖಾಸಗೀಕರಣಕ್ಕೆ ಸಹ ಇದು ದಾರಿ ಮಾಡಿದ್ದರಿಂದ ಈ ಸೇವೆಗಳು ನೀಡುವ ಖಾಸಗೀ ವ್ಯಕ್ತಿಗಳಿಗೆ ಜನರು ದೊಡ್ಡ ಮೊತ್ತದಲ್ಲಿ ಹಣ / ಸುಂಕ ಸಲ್ಲಿಸಬೇಕಾಗಿ ಬರುತ್ತಿದೆ.

ಚಿತ್ರ 18.10:ಎ.ಬಿ.ವಾಜಪೇಯಿ

20ನೇ ಶತಮಾನದ ಕೊನೆಯಲ್ಲಿ ಭಾರತದೇಶ ಪ್ರಪಂಚ ಮಾರುಕಟ್ಟೆಯೊಳಗೆ ಎಳೆಯಲ್ಪಟ್ಟಿತು. ಈ ಭಾರತ ದೇಶದಲ್ಲಿ ಒಂದು ಕಡೆ ಜನಸಂಖ್ಯೆಯಲ್ಲಿನ ವಿವಿಧ ವರ್ಗಗಳ ಧ್ವನಿ ಕೇಳಿಸುವ ಪ್ರಜಾಪ್ರಭುತ್ವ ವೃದ್ಧಿ ಹೊಂದುತ್ತಿದೆ, ಮತ್ತೊಂದು ಕಡೆ ಜನರನ್ನು ವಿಭಜಿಸುವ ಧರ್ಮಾಪರ ರಾಜಕೀಯ ಸಮೀಕರಣಗಳಿಂದ ಸಾಮಾಜಿಕ ಶಾಂತಿಗೆ ಅಪಾಯಕಾದಿದೆ. ಐವತ್ತು ವರ್ಷಗಳಿಗೂ ಹೆಚ್ಚು ಅದು ಕಾಲ ಪರೀಕ್ಷೆಗೆ ನಿಂತಿದೆ; ಸ್ವಲ್ಪಮಟ್ಟಿಗೆ ಸ್ಥಿರ, ಆರ್ಥಿಕ ಪರಿಸ್ಥಿತಿಯನ್ನು ಸಾಧಿಸಿದೆ ; ಪ್ರಜಾಪ್ರಭುತ್ವ ರಾಜಕೀಯಗಳು ಬಲವಾಗಿ ಬೇರುಬಿಟ್ಟಿವೆ. ತೀವ್ರ ಬಡತನವನ್ನು, ಜಾತಿಗಳು, ಧರ್ಮಗಳು, ಪ್ರಾಂತಗಳು, ಸ್ತ್ರೀ-ಪುರುಷರ ನಡುವಿನ ತೀವ್ರ ಅಸಮಾನತೆಗಳನ್ನು ಅದು ಇನ್ನೂ ಪರಿಹರಿಸಿಲ್ಲ. 21ನೇ ಶತಮಾನದ ಭಾರತ ದೇಶಕ್ಕೆ ಐವತ್ತು ವರ್ಷಗಳ ಸ್ವಾತಂತ್ರ್ಯಾನಂತರದ ಕಾಲ ನೀಡಿದ ಪರಂಪರೆ ಇದೆ.

ಮುಕ್ತಾಯ :

ಭಾರತದ ಪ್ರಜಾಪ್ರಭುತ್ವ ಅನೇಕ ಸವಾಲುಗಳನ್ನು ಎದುರಿಸಿ ನಿಂತಿದೆ ಎಂದೂ, ಆ ಪ್ರಕ್ರಿಯೆಯಲ್ಲಿ ಅದು ಮತ್ತಷ್ಟು ಬಲಪಟ್ಟಿದೆ ಎಂದು ನೋಡಿದ್ದೇವೆ. ಕ್ರಮ ತಪ್ಪದಂತೆ ನಡೆಯುವ ಸ್ವತಂತ್ರವಾದ, ನ್ಯಾಯಯುತವಾದ ಚುನಾವಣೆಗಳು, ಚುನಾವಣೆಗಳಲ್ಲಿ ಮತ ಚಲಾಯಿಸುವವರ ಸಂಖ್ಯೆ, ಸರ್ಕಾರಗಳ ಬದಲಾವಣೆ, ಹೊಸ ಗುಂಪುಗಳ ಸಾಧಿಕಾರೀಕರಣ, ಪೌರ ಹಕ್ಕುಗಳನ್ನು ಕಾಪಾಡುವುದಂತಹ ಅನೇಕ ವಿಷಯಗಳಲ್ಲಿ ಭಾರತದ ಪ್ರಜಾಪ್ರಭುತ್ವ ವಿಜಯವಂತವಾಗಿದೆಯೆಂದು ಹೇಳಬಹುದು. ಆದರೆ ಶತಮಾನದ ಕೊನೆಯಲ್ಲಿ ಭಾರತದ ಪ್ರಜಾಪ್ರಭುತ್ವದ ಬಗ್ಗೆ ಅನೇಕ ಪ್ರಶ್ನೆಗಳು ಸಹ ತಲೆಎತ್ತಿವೆ. ಸುದೀರ್ಘಕಾಲ ಪ್ರಜಾಪ್ರಭುತ್ವ ದೇಶವಾಗಿದ್ದರೂ, ಬಹುಸಂಖ್ಯೆಯ ಪ್ರಜೆಗಳ ಸಂಕ್ಷೇಮವನ್ನು ಭಾರತದೇಶ ಏಕೆ ಸಾಧಿಸಲಾರದೇ ಹೋಯಿತು ? ಅಭಿವೃದ್ಧಿಯ ಕ್ರಮದಲ್ಲಿ ತಲೆ ಎತ್ತಿದ ಪರಸ್ಪರ ವಿರುದ್ಧ ಬೇಡಿಕೆಗಳ ಕಾರಣವಾಗಿ ಉತ್ಪನ್ನವಾಗುವ ಒತ್ತಡವನ್ನು ಅದು ಹೇಗೆ ಎದುರಿಸುತ್ತಿದೆ ? ಆಳವಾಗಿ ಬೇರೂರಿದ ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಪ್ರಜಾಪ್ರಭುತ್ವ ಭಾರತದೇಶ ಏಕೆ ಕಡಿಮೆ ಮಾಡಲಾರದೇ ಹೋಯಿತು ? ಮುಂಬರುವ ವರ್ಷಗಳಲ್ಲಿ ಈ ಪ್ರಶ್ನೆಗಳನ್ನೂ, ಸಮಸ್ಯೆಗಳನ್ನು ಭಾರತದೇಶ ಎದುರಿಸಬೇಕು. ಭಾರತ ದೇಶವು ಇದನ್ನು ಸಾಧಿಸುತ್ತದೆಂದು ನೀವು ಭಾವಿಸುತ್ತಿರುವಿರಾ?

SCERT TELANGANA

ಕಠಿಣ ಪದಗಳು

ಪ್ರಾಂತೀಯ ಆಕಾಂಕ್ಷೆಗಳು   ಸಮ್ಮಿಶ್ರ ಸರ್ಕಾರಗಳು   ಮತ ತತ್ವವಾದ

ಅಧಿಕ ಸಂಖ್ಯಾತ ವರ್ಗ   ಅಲ್ಪಸಂಖ್ಯಾತ ವರ್ಗ

ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳೋಣ !

1. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : (AS_1)

ಉದಾರವಾದ ಆರ್ಥಿಕ ವಿಧಾನ	ವಿದೇಶೀ ಆಮದುಗಳ ಮೇಲೆ ತೆರಿಗೆಗಳ ಮೇಲೆ ಪರಿಮಿತಿಗಳು
ಮನಬಂದಂತೆ ತೊಲಗಿಸುವುದು	ಕೇಂದ್ರ ಸರ್ಕಾರದ ಮೂಲಕ ರಾಜ್ಯ ಸರ್ಕಾರಗಳು
ಇತರರನ್ನು ತೊಲಗಿಸುವುದು	ತಮಗಿಂತ ವಿಭಿನ್ನವಾಗಿರುವ ಜನರಿಗೆ
ಒಕ್ಕೂಟ ಸಿದ್ಧಾಂತ	ರಾಜ್ಯ ಸರ್ಕಾರಗಳಿಗೆ ಮತ್ತಷ್ಟು ಸ್ವಾಯತ್ತತೆ.

2. ಸ್ವಾತಂತ್ರ್ಯಾನಂತರ ಎರಡನೇ ಹಂತದಲ್ಲಿನ ಪಕ್ಷ ವ್ಯವಸ್ಥೆಯಲ್ಲಿನ ಮುಖ್ಯ ಬದಲಾವಣೆಗಳನ್ನು ಗುರ್ತಿಸಿರಿ. (AS_1)
3. ಕೇಂದ್ರ, ರಾಜ್ಯಮಟ್ಟಗಳಲ್ಲಿ ವಿವಿಧ ಸರ್ಕಾರಗಳ ಪ್ರಧಾನ ಆರ್ಥಿಕ ವಿಧಾನಗಳಲ್ಲಿ ಯಾವುದನ್ನು ಕುರಿತು ಈ ಅಧ್ಯಾಯ ದಲ್ಲಿಯೂ, ಹಿಂದಿನ ಅಧ್ಯಾಯದಲ್ಲಿಯೂ ಚರ್ಚಿಸಿದ್ದೀರಿ ? ಅವುಗಳಲ್ಲಿ ಹೋಲಿಕೆಗಳು, ವ್ಯತ್ಯಾಸಗಳೇನು ? (AS_1)
4. ಪ್ರಾಂತೀಯ ಆಕಾಂಕ್ಷೆಗಳು ಪ್ರಾಂತೀಯ ಪಕ್ಷಗಳ ಏರ್ಪಾಟಗೆ ಹೇಗೆ ದಾರಿ ಮಾಡಿದವು ? ಎರಡು ಹಂತಗಳಲ್ಲಿನ ಹೋಲಿಕೆಗಳು, ವ್ಯತ್ಯಾಸಗಳನ್ನು ವಿವರಿಸಿರಿ. (AS_1)
5. ಸರ್ಕಾರವನ್ನು ಏರ್ಪಾಟು ಮಾಡಬೇಕೆಂದರೆ ರಾಜಕೀಯ ಪಕ್ಷಗಳು ಸಮಾಜದಲ್ಲಿನ ವಿಭಿನ್ನ ವರ್ಗಗಳ ಪ್ರಜೆಗಳನ್ನು ಆಕರ್ಷಿಸಬೇಕು. ಸ್ವಾತಂತ್ರ್ಯನಂತರ ಎರಡನೇ ಹಂತದಲ್ಲಿ ಈ ಕೆಲಸವನ್ನು ರಾಜಕೀಯ ಪಕ್ಷಗಳು ಹೇಗೆ ಮಾಡಿದವು ?(AS_1)
6. ಭಾರತೀಯ ಆಡಳಿತ ವಿಧಾನದಲ್ಲಿ ಎಲ್ಲರನ್ನು ಕೂಡಿಸಿಕೊಳ್ಳುವ ಸ್ವಭಾವ ಬಲಹೀನಪಡಲು ಕಾರಣವಾದ ಪರಿಣಾಮಗಳೇನು ? ವಿವಿಧ ಜನರನ್ನು, ರಾಜಕೀಯ ಆಕಾಂಕ್ಷೆಗಳನ್ನು ಕೂಡಿಸಿಕೊಂಡು ಹೋಗಬಲ್ಲ ಸಾಮರ್ಥ್ಯ ಯಾವ ವಿಧವಾಗಿ ಹೊಡೆತಕ್ಕೆ ಗುರಿಯಾಗುತ್ತಿದೆ ? (AS_1)
7. ವಿವಿಧ ಪ್ರಾಂತೀಯ ಆಕಾಂಕ್ಷೆಗಳು ಸಾಂಸ್ಕೃತಿ, ಆರ್ಥಿಕ ಅಂಶಗಳನ್ನು ಯಾವ ವಿಧವಾಗಿ ಉಪಯೋಗಿಸಿಕೊಳ್ಳುತ್ತವೆ ?(AS_1)
8. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಪ್ರಥಮಾರ್ಧದಲ್ಲಿ ಯೋಜನಾಬದ್ಧವಾದ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದರು. ದ್ವಿತೀಯಾರ್ಧದಲ್ಲಿ ಉದಾರವಾದ ಆರ್ಥಿಕ ವಿಧಾನಕ್ಕೆ ಪ್ರಾಮುಖ್ಯತೆ ನೀಡಿದರು. ಇವು ರಾಜಕೀಯ ಭಾವನೆಗಳನ್ನು ಹೇಗೆ ಪ್ರತಿಬಿಂಬಿಸಿವೆಯೋ ಚರ್ಚಿಸಿರಿ. (AS_1)
9. ಸಮ್ಮಿಶ್ರ ಸರ್ಕಾರದಿಂದ ಸಿದ್ಧಾಂತಗಳಲ್ಲಿ ಮಾಧ್ಯಮಪರ ಮಾರ್ಗವನ್ನು ಅವಲಂಬಿಸಲು ಮತ್ತು ಸಮ್ಮಿಶ್ರ ಸರ್ಕಾರದಲ್ಲಿನ ವಿವಿಧ ರಾಜಕೀಯ ಪಕ್ಷಗಳು ತಮ್ಮ ಪ್ರಾಂತೀಯ ಬೇಡಿಕೆಗಳನ್ನು ಸಾಧಿಸಿಕೊಳ್ಳುವ ವಿಧಾನಕ್ಕೆ ಉದಾಹರಣೆಗಳನ್ನು ವಾರ್ತಾಪತ್ರಿಕೆಗಳು, ವಾರ ಪತ್ರಿಕೆಗಳು ಓದುವುದರ ಮೂಲಕ ಗುರ್ತಿಸಿರಿ. (AS_3)
10. ನಮ್ಮ ದೇಶದ ಪ್ರಧಾನಮಂತ್ರಿಗಳ ಚಿತ್ರಗಳನ್ನು ಶೇಖರಿಸಿ, ಅವರ ಪ್ರತ್ಯೇಕತೆಯನ್ನು ತಿಳಿಸುವ ಒಂದು ಅಲ್ಬಮ್‌ನ್ನು ತಯಾರಿಸಿ. (AS_3)
11. ಪುಟ 262 ಆಂಧ್ರ ಪ್ರದೇಶ ಶೀರ್ಷಿಕೆಯಡಿ ಆಂಧ್ರ ಪ್ರದೇಶದಲ್ಲಿ ಮುಖ್ಯಮಂತ್ರಿಗಳನ್ನು..... ಆತನು ವಾದಿಸಿದನು. ವರೆಗೆ ಓದಿ ಇದನ್ನು ವ್ಯಾಖ್ಯಾನಿಸಿ. (AS_2)
12. ಟೆಲಿಕಾಂ ಕ್ರಾಂತಿಯ ಮೂಲಕ ಬಂದ ಬದಲಾವಣೆಗಳು ಪ್ರಸ್ತುತ ಮಾನವ ಜೀವನ ಶೈಲಿಯ ಮೇಲೆ ಯಾವ ವಿಧದ ಪ್ರಭಾವ ಬೀರುತ್ತಿವೆ ? (AS_4)

ಚರ್ಚೆ:

ತೀವ್ರವಾದ, ಉಗ್ರವಾದವನ್ನು ಎದುರಿಸುವ ಜವಾಬ್ದಾರಿ ಸರ್ಕಾರದ್ದೋ? ಸಮಾಜದ್ದೋ ? ಈ ವಿಷಯದ ಮೇಲೆ ಚರ್ಚೆಯನ್ನು ನಿರ್ವಹಿಸಿರಿ. ಇದರ ಪ್ರಭಾವ ಮಾನವ ಜೀವನದ ಮೇಲೆ ಯಾವ ವಿಧವಾಗಿರುತ್ತದೆ ? ಅನುಭವಗಳನ್ನು ಚರ್ಚಿಸಿರಿ.

SCERT TELANGANA

ಅಧ್ಯಾಯ 19 ಪ್ರಪಂಚ ಯುದ್ಧಗಳ ನಂತರ ಪ್ರಪಂಚ, ಭಾರತದೇಶ

ಎರಡನೇ ಪ್ರಪಂಚ ಯುದ್ಧದ ನಂತರ (Aftermath of the World war -II) :

ಎರಡನೇ ಪ್ರಪಂಚ ಯುದ್ಧದ ಪರಿಣಾಮ ಬೇರೆ ಬೇರೆ ದೇಶಗಳ ಮೇಲೆ ಬೇರೆ ಬೇರೆ ರೀತಿಯಲ್ಲಿ ಪ್ರಭಾವ ಬೀರಿತು. ಯೂರೋಪ್ ದೇಶಗಳು, ಪ್ರತ್ಯೇಕವಾಗಿ ಯು.ಎಸ್.ಎಸ್.ಆರ್., ಪೋಲ್ಯಾಂಡ್, ಯುಗೊಸ್ಲಾವಿಯಾ ಗಳಲ್ಲಿ ತಮ್ಮ ಜನಸಂಖ್ಯೆಯಲ್ಲಿ ಶೇಕಡ 20 ರಷ್ಟರವರೆಗೆ ಮರಣ ಹೊಂದಿ ದುಷ್ಪರಿಣಾಮ ಬೀರಿತು. ನಗರಗಳು, ಕಾರ್ಖಾನೆಗಳು, ಗಣಿಗಳು ದೊಡ್ಡ ಮೊತ್ತದಲ್ಲಿ ವಿಧ್ವಂಸ ವಾಗಿದ್ದರಿಂದ ರಷ್ಯಾ, ಇತರೆ ಯೂರೋಪ್ ದೇಶಗಳು ಆರ್ಥಿಕವಾಗಿ ಸಹ ಬಹಳ ನಷ್ಟ ಹೊಂದಿದವು. ರಷ್ಯಾದಲ್ಲಿ 1700 ಪಟ್ಟಣಗಳು, 31,000 ಕಾರ್ಖಾನೆಗಳು, 70,000 ಗ್ರಾಮಗಳು ಸಂಪೂರ್ಣವಾಗಿ ನಾಶವಾದವು. ಇದಕ್ಕೆ ವಿರುದ್ಧವಾಗಿ ಅಮೇರಿಕಾ ಭೂಭಾಗದ ಮೇಲೆ ಯುದ್ಧ ನಡೆಯಲಿಲ್ಲವಾದ್ದರಿಂದ ಅದಕ್ಕೆ ಉಂಟಾದ ನಷ್ಟ ಕಡಿಮೆ. ವಾಸ್ತವವಾಗಿ ಆರ್ಥಿಕ ಮಹಾ ಕುಸಿತದ ಕಾರಣದಿಂದಾಗಿ ಏರ್ಪಟ್ಟ ಆರ್ಥಿಕ ಬಿಕ್ಕಟ್ಟಿನಿಂದ ಅಮೇರಿಕಾ ಹೊರಬರಲು ಎರಡನೇ ಪ್ರಪಂಚ ಯುದ್ಧ ಸಹಕರಿಸಿತು. ಯುದ್ಧ ರಂಗದಿಂದ ದೂರವಾಗಿದ್ದುದ್ದರಿಂದ ಅಮೇರಿಕದ ಕೈಗಾರಿಕೆಗಳು, ವ್ಯವಸಾಯ ಅಭಿವೃದ್ಧಿ ಹೊಂದಿದವು. ಎರಡನೇ ಪ್ರಪಂಚ ಯುದ್ಧಕಾಲದಲ್ಲಿ ಅಮೇರಿಕಾ ಹೆಚ್ಚು ಉದ್ಯೋಗಾವಕಾಶಗಳು, ಅಧಿಕ ಉತ್ಪಾದಕತೆ ಸಾಧಿಸಿತು. 1945 ಮಾರ್ಚ್‌ನಲ್ಲಿ ಅಮೇರಿಕಾ ಅಧ್ಯಕ್ಷ ಹ್ಯಾರಿ ಟ್ರೂಮನ್ ಭಭಯುದ್ಧದಿಂದ ನಾವು ಪ್ರಪಂಚದಲ್ಲೆಲ್ಲಾ ಶಕ್ತಿವಂತ ದೇಶವಾಗಿ ಆವಿರ್ಭವಿಸಿದ್ದೇವೆ-ಇತಿಹಾಸದಲ್ಲೆಲ್ಲಾ ಇಂತಹ ಶಕ್ತಿವಂತ ದೇಶ ಮತ್ತೊಂದು ಇಲ್ಲ, ಫಿಫಿ ಎಂದನು.



ಚಿತ್ರ 19.1 : ಯುದ್ಧ ನಂತರ ವಾರ್ಸಾ ನಗರ 85% ಕಟ್ಟಡಗಳು ನಾಶವಾದವು

ಯುದ್ಧ ವಿನಾಶಕ್ಕೆ ಗುರಿಯಾದ ದೇಶಗಳು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಪುನರ್ ನಿರ್ಮಿಸಿಕೊಳ್ಳುತ್ತಿರುವ ಕ್ರಮದಲ್ಲಿ ಪ್ರಪಂಚ ಹೊಸ ಪ್ರತಿಕ್ರಿಯೆಗಳನ್ನು ಕಂಡಿತು. ಈ ಪ್ರತಿಕ್ರಿಯೆಗಳಲ್ಲಿ ಮುಖ್ಯವಾದವು ಮೂರು : ವಿಶ್ವಸಂಸ್ಥೆಯ ಸ್ಥಾಪನೆ, ಶೀತಲ ಸಮರ, ವಸಾಹತು ಆಡಳಿತದಿಂದ ವಿಮುಕ್ತಿ, ನಾಜೀ ಭಾವನೆಗಳಾದ ನಿರಂಕುಶತ್ವ, ಸಾಮ್ರಾಜ್ಯಶಾಹಿಗಳಿಗೆ ವಿರುದ್ಧವಾಗಿ ಶಾಂತಿ, ಪ್ರಜಾಪ್ರಭುತ್ವ, ದೇಶಗಳ ಸ್ವಾತಂತ್ರ್ಯ ಎನ್ನುವ ಸೂತ್ರಗಳಿಗಾಗಿ ಎರಡನೇ ಪ್ರಪಂಚಯುದ್ಧ ನಡೆಯಿತು. ಆದ್ದರಿಂದ ಮೊಟ್ಟಮೊದಲ ಕರ್ತವ್ಯವೆಂದರೆ ಎಲ್ಲಾ ದೇಶಗಳಲ್ಲಿ ಶಾಂತಿ, ಅಭಿವೃದ್ಧಿ ಪ್ರಜ್ವಲಿಸುವಂತೆ ಒಂದು ಪ್ರಪಂಚ ಸಂಸ್ಥೆಯನ್ನು ಏರ್ಪಾಟು ಮಾಡುವುದು. ಇದು ವಿಶ್ವಸಂಸ್ಥೆಯ ಸ್ಥಾಪನೆಗೆ ದಾರಿ ಮಾಡಿತು. ವಸಾಹತು ಆಳ್ವಿಕೆ ಶಕ್ತಿಗಳಾದ ಬ್ರಿಟನ್, ಫ್ರಾನ್ಸ್‌ದಂತಹ ದೇಶಗಳು ತಮ್ಮ ವಸಾಹತು ಆಳ್ವಿಕೆ ವಿಧಾನಗಳನ್ನು ಇನ್ನು ಸಮರ್ಥಿಸಿಕೊಳ್ಳಲಾರದೇ ಹೋದವು. ಅಮೇರಿಕಾಕ್ಕೆ ಹೋಲಿಸಿದರೆ ಈ ದೇಶಗಳು ರಾಜಕೀಯವಾಗಿ, ಆರ್ಥಿಕವಾಗಿ ಬಲಹೀನವಾಗಿದ್ದವು. ಹಳೆಯ ವಸಾಹತು ವ್ಯವಸ್ಥೆಯಿಂದ ವಸಾಹತು ದೇಶಗಳ ಮೇಲೆ ವಸಾಹತು ಆಡಳಿತ ದೇಶಗಳು ಏಕಾಧಿಪತ್ಯ ಕಲ್ಪಿಸುತ್ತಿದ್ದುದರಿಂದ ಸಹ ಅದನ್ನು ಅಂತ್ಯಗೊಳಿಸಬೇಕೆಂದು ಅಮೇರಿಕಾ ಒತ್ತಡ ತರಲಾರಂಭಿಸಿತು. ರಷ್ಯಾದಿಂದ ಸ್ಫೂರ್ತಿ ಪಡೆದ ಕಮ್ಯೂನಿಸ್ಟ್ ಪಕ್ಷಗಳು ಅನೇಕ ದೇಶಗಳಲ್ಲಿ ವಸಾಹತು ಶಕ್ತಿಗಳ ವಿರುದ್ಧ ಹೋರಾಡಲಾರಂಭಿಸಿತು. ಆ ವಿಧವಾಗಿ ವಸಾಹತು ವಿರೋಧ ಹೋರಾಟಗಳಿಗೆ ಮುಂದಾಳಾಗಿ ರಷ್ಯಾ ನಿಂತಿತು. ಈ ಪರಿಸ್ಥಿತಿಗಳಲ್ಲಿ ತಮ್ಮ ಅಧೀನದಲ್ಲಿದ್ದ ವಸಾಹತು ದೇಶಗಳಿಗೆ ಬ್ರಿಟನ್‌ನಂತಹ ದೇಶಗಳು ಸ್ವಾತಂತ್ರ್ಯ ನೀಡದೇ ತಪ್ಪಲಿಲ್ಲ. ಇದರ ಕುರಿತು ನೀವು ಹಿಂದಿನ ಅಧ್ಯಾಯಗಳಲ್ಲಿ ಓದಿದ್ದೀರಿ. ಈ ದೇಶಗಳು ಸ್ವತಂತ್ರ ಪಡೆದ ನಂತರ ಬಂಡವಾಳಶಾಹಿ ವಿಧಾನ-ಕಮ್ಯೂನಿಜಂ ನಡುವೆ (ಅಮೇರಿಕ-ರಷ್ಯಾಗಳ ನಡುವೆ ವಿಭಜಿಸಲ್ಪಟ್ಟ ಪ್ರಪಂಚವನ್ನು ಎದುರಿಸಬೇಕಾಗಿ ಬಂದಿತು. ಈ ದೇಶಗಳು ತಮ್ಮ ಅಭಿವೃದ್ಧಿಗೆ ಸ್ವಂತ ಮಾರ್ಗವನ್ನು ಅನುಸರಿಸಲು ಬಿಡದೆ ಯಾವುದಾದರೂ ಒಂದು ಬಣವನ್ನು

SCERT TELANGANA

ಆಯುದ್ದಕ್ಕೊಳ್ಳಬೇಕೆಂಬ ಒತ್ತಡ ಅಧಿಕವಾಗಲಾರಂಭಿಸಿತು. ಈ ಎರಡು ಅಗ್ರ ರಾಷ್ಟ್ರಗಳ ನಡುವಿನ ವಿಬೇಧಗಳನ್ನು ಕೆಲವು ದೇಶಗಳು ತಮಗೆ ಅನುಕೂಲವಾಗುವಂತೆ ಬಳಸಿಕೊಂಡವು. ಈ ಅಂಶಗಳಲ್ಲಿ ಕೆಲವನ್ನು ಕುರಿತು ಈ ಭಾಗದಲ್ಲಿ ವಿವರವಾಗಿ ತಿಳಿದುಕೊಳ್ಳೋಣ.

ವಿಶ್ವಸಂಸ್ಥೆ: (United Nations Organisation) :

ಯುದ್ಧ ಮುಕ್ತಾಯದ ಹಂತಕ್ಕೆ ತಲುಪುತ್ತಿರುವ ಸಮಯದಲ್ಲಿ ಮಿತ್ರ ದೇಶಗಳಲ್ಲಿ ಮುಖ್ಯವಾದ ಬ್ರಿಟನ್, ಫ್ರಾನ್ಸ್, ಅಮೇರಿಕಾ, ಸಿರಿಯಾ ದೇಶಗಳು, ಸೋವಿಯಟ್ ರಷ್ಯಾ, ಚೈನಾಗಳು ವಿಶ್ವಸಂಸ್ಥೆಯ ಸ್ಥಾಪನೆಗೆ ಒಂದು ಸನ್ನದ್ಧ ಸಿದ್ಧಪಡಿಸಿದವು. ಈ ಸನ್ನದು ಯುದ್ಧಗಳನ್ನು ನಿವಾರಿಸಿ, ಶಾಂತಿಯನ್ನು ಸ್ಥಾಪಿಸುವ ಅಂಶವನ್ನೇ ಅಲ್ಲದೆ ಪ್ರಪಂಚದ ಜನರೆಲ್ಲರಿಗೂ ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಲಭಿಸುವಂತೆ, ಬಡತನ, ಹಸಿವುಗಳ ನಿರ್ಮೂಲನೆ ಮಾಡಲು ಪ್ರಾಮುಖ್ಯತೆ ನೀಡಿತು. ಆದ್ದರಿಂದ ವಿಶ್ವಸಂಸ್ಥೆಯು ಶಾಶ್ವತ ಶಾಂತಿ, ಮಾನವ ಅಭಿವೃದ್ಧಿ ಎನ್ನುವ ಎರಡು ಉದ್ದೇಶಗಳೊಂದಿಗೆ ಏರ್ಪಟ್ಟಿದೆ. ಅದೇ ಸಮಯದಲ್ಲಿ ಅದು ದೇಶಗಳ ಸ್ವಾಯತ್ತತೆಯನ್ನು ಗುರ್ತಿಸಿ ವಿಶ್ವ ಶಾಂತಿಗೆ ಭಂಗ ಇಲ್ಲವೇ ತೀವ್ರ ಮಾನವ ಹಕ್ಕುಗಳ ಉಲ್ಲಂಘನೆಯಂತಹ ಸಂದರ್ಭಗಳನ್ನು ಬಿಟ್ಟು ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುವುದಿಲ್ಲವೆಂದು ಭರವಸೆ ನೀಡಿತು.

- ವಸಾಹತು ಆಡಳಿತದಿಂದ ವಿಮುಕ್ತಿ ಎಂದರೇನು ?
- ಎರಡು ಅಗ್ರ ರಾಷ್ಟ್ರಗಳ ನಡುವಿನ ಸ್ಪರ್ಧೆಯಿಂದ ಹೊಸದಾಗಿ ಸ್ವತಂತ್ರ ಪಡೆದ ದೇಶಗಳು ಯಾವ ವಿಧವಾಗಿ ಪ್ರಭಾವಿತವಾದವು ?

ವಿಶ್ವಸಂಸ್ಥೆ ಏರ್ಪಟ್ಟಾಗ ಅದರಲ್ಲಿ ಸದಸ್ಯರಾಗಿ 54 ದೇಶಗಳು ಇರಲು ಇಂದು (2014ರಲ್ಲಿ) 193 ದೇಶಗಳು ಸದಸ್ಯರಾಗಿರುವರು. ನಂತರ ದಶಮಾನಗಳಲ್ಲಿ ವಸಾಹತು ಶಕ್ತಿಗಳಿಂದ ಸ್ವಾತಂತ್ರ್ಯ ಪಡೆದ ದೇಶಗಳು ವಿಶ್ವಸಂಸ್ಥೆಯಲ್ಲಿ ಸೇರಿದವು. ಆರು ಬೇರೆ ಬೇರೆ ಸಂಸ್ಥೆಗಳ ಮೂಲಕ ವಿಶ್ವಸಂಸ್ಥೆ ಕೆಲಸ ಮಾಡುತ್ತಿದೆ. ಒಂದೊಂದು ಸಂಸ್ಥೆಗೆ ಶಾಂತಿ, ಭದ್ರತೆಗಳನ್ನು ಕಾಪಾಡುವುದು, ಶಿಕ್ಷಣ, ಆರೋಗ್ಯ ಸದುಪಾಯಗಳನ್ನು ಉತ್ತಮಪಡಿಸುವುದು, ಬಡತನವನ್ನು ನಿರ್ಮೂಲಿಸುವುದು, ಅಂತರಾಷ್ಟ್ರೀಯ ಅಪರಾಧಗಳ ಹಿನ್ನೆಲೆಯಲ್ಲಿ ನ್ಯಾಯವನ್ನು ನೀಡುವುದಂತಹ ಪ್ರತ್ಯೇಕ ಕರ್ತವ್ಯಗಳಿವೆ. ಈ ಕರ್ತವ್ಯಗಳಿಗೆ ಬಾಧ್ಯತೆವಹಿಸುವ ಕೆಲವು ಸಂಸ್ಥೆಗಳು : ಹೇಗ್‌ನಲ್ಲಿರುವ ಅಂತರಾಷ್ಟ್ರೀಯ ನ್ಯಾಯಾಲಯ, ಜೆನಿವಾದಲ್ಲಿರುವ ಪ್ರಂಪಂಚ ಆರೋಗ್ಯ ಸಂಸ್ಥೆ, ಪ್ಯಾರಿಸ್‌ನಲ್ಲಿರುವ ವಿಶ್ವಸಂಸ್ಥೆಯ ಶಿಕ್ಷಣ, ವಿಜ್ಞಾನಶಾಸ್ತ್ರ, ಸಾಂಸ್ಕೃತಿಕ ಸಂಸ್ಥೆ, ನ್ಯೂಯಾರ್ಕಿನಲ್ಲಿನ ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ನಿಧಿ ಸಂಸ್ಥೆ.

ವಿಶ್ವಸಂಸ್ಥೆ ಮುಖ್ಯ ಅಧಿಕಾರಿಯಾದ ಪ್ರಧಾನ ಕಾರ್ಯದರ್ಶಿ ಯ ಆಯ್ಕೆಯಲ್ಲಿ ಎಲ್ಲಾ ದೇಶಗಳು ಪಾಲ್ಗೊಳ್ಳುತ್ತವೆ. ಈ ಪದವಿ ವಿವಿಧ ದೇಶಗಳ ನಡುವೆ ಬದಲಾಗುತ್ತಾ ಇರುತ್ತದೆ. ವಿಶ್ವಸಂಸ್ಥೆಯ ಪ್ರಧಾನ ಅಂಗವಾದ ಸಾಧಾರಣ ಸಭೆಯಲ್ಲಿ ವಿವಿಧ ದೇಶಗಳ ನಡುವೆ ಚರ್ಚೆಗಳು ನಡೆಯುತ್ತಿರುತ್ತವೆ. ಆದರೆ ಯುದ್ಧ, ಶಾಂತಿಗೆ ಸಂಬಂಧಿಸಿದ ನಿರ್ಣಯಗಳು ಭದ್ರತಾ ಸಮಿತಿಯಲ್ಲಿ ತೆಗೆದುಕೊಳ್ಳುತ್ತಾರೆ. ಇದರಲ್ಲಿ ಶಾಶ್ವತ ಸದಸ್ಯ ದೇಶಗಳಾದ ಚೈನಾ, ಫ್ರಾನ್ಸ್, ಬ್ರಿಟನ್, ಯುಸ್.ಎಸ್.ಎಸ್.ಆರ್. (ಈಗ ರಷ್ಯಾ), ಅಮೇರಿಕಾಗಳಿಗೆ ಪ್ರತ್ಯೇಕ ಸ್ಥಾನ ಇದೆ. ಭದ್ರತಾ ಸಮಿತಿ ತೆಗೆದುಕೊಂಡ ನಿರ್ಣಯಗಳನ್ನು ಈ ಐದು ದೇಶಗಳಲ್ಲಿ ಯಾವ ಒಂದು ದೇಶವಾದರೂ ಹಸ್ತಕ್ಷೇಪ ಮಾಡಿ, ವಿಟೋ ಮಾಡಬಹುದು. (ತಿರಸ್ಕರಿಸಬಹುದು). ಅನೇಕ ಘರ್ಷಣೆಗಳಲ್ಲಿ ಈ ಐದು ದೇಶಗಳ ಪ್ರತ್ಯೇಕ ಪಾತ್ರ ಇರುವುದರಿಂದ ವಿಶ್ವಸಂಸ್ಥೆ ಯಾವುದೇ ಕ್ರಮ ತೆಗೆದುಕೊಳ್ಳದಂತೆ ತಮ್ಮ ವಿಟೋ ಅಧಿಕಾರದಿಂದ ತಡೆಯುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ತಮ್ಮ ಆದೇಶಗಳನ್ನು ಪಾಲಿಸುವಂತೆ ವಿಶ್ವಸಂಸ್ಥೆಯ ಮೇಲೆ ಶಕ್ತಿಯುತ ದೇಶಗಳು ಒತ್ತಡ ತರುತ್ತಿದ್ದವು. ಈ ಶಕ್ತಿವಂತ ದೇಶಗಳಿಗೆ ನೀಡಿರುವ ಪ್ರತ್ಯೇಕ ಅಧಿಕಾರದಿಂದ ಪ್ರಪಂಚ ಶಾಂತಿಯನ್ನು ಕಾಪಾಡುವಲ್ಲಿ ಅವುಗಳಿಗೆ ಪ್ರತ್ಯೇಕ ಪಾತ್ರವನ್ನು ಹೊಣೆಯನ್ನು ನೀಡಿದಂತಾಗಿದೆ.

ಚಿತ್ರ 19.2 : ವಿಶ್ವಸಂಸ್ಥೆಯ ಲೋಗೋ

ಶಿಕ್ಷಣ, ಆರೋಗ್ಯ, ಸಾಂಸ್ಕೃತಿ ಅನುಸಂಧಾನ, ಪರಂಪರೆಯ ರಕ್ಷಣೆಯಂತಹ ಕ್ಷೇತ್ರಗಳಲ್ಲಿ ವಿಶ್ವಸಂಸ್ಥೆ ಅಪಾರ ಕೃಷಿ ಮಾಡುತ್ತಿರಲು ಯುದ್ಧಗಳನ್ನು ನಿವಾರಿಸುವಲ್ಲಿ ಅದು ಅಷ್ಟಾಗಿ ಜಯ ಸಾಧಿಸಲಾರದೇ ಹೋಯಿತು. ಪ್ರಪಂಚ ನಿಯಂತ್ರಣಕ್ಕಾಗಿ ಅಗ್ರರಾಜ್ಯಗಳ

SCERT TELANGANA

ನಡುವೆ ನಡೆದ ಹೋರಾಟದಲ್ಲಿ ಅದು ಆಗಾಗ ಒತ್ತೆಯಾಳಾಗಿ ಬದಲಾಯಿತು.

ಎರಡು ಬಣಗಳು, ಶೀತಲ ಸಮರ : (1945-1991) (The Two Camps and the Cold War 1945-1991)

ಪ್ರಪಂಚ ಯುದ್ಧದ ನಂತರ ಕಾಲದಲ್ಲಿ ಎರಡು ಪ್ರಧಾನ ಸೈದ್ಧಾಂತಿಕ – ರಾಜಕೀಯ ಬಣಗಳು ಏರ್ಪಟ್ಟವು – ಯುಎಸ್ಎಸ್ಆರ್ ನೇತೃತ್ವದಲ್ಲಿ ಕಮ್ಯೂನಿಸ್ಟ್ ಬಣ, ಅಮೇರಿಕಾ ನೇತೃತ್ವದಲ್ಲಿ ಪ್ರಜಾಪ್ರಭುತ್ವ – ಬಂಡವಾಳ ಶಾಹಿ ಬಣ. ಸಮಾನತೆ ಎನ್ನುವ ಭಾವನೆ, ಸರ್ಕಾರ ನಿಯಂತ್ರಿತ ಅಭಿವೃದ್ಧಿ, ಈ ಸಿದ್ಧಾಂತಗಳನ್ನು ವಿರೋಧಿಸುವವರನ್ನು ಅಡಗಿಸುವುದಂತಹವು ಗಳನ್ನು ರಷ್ಯಾ ಅವಲಂಭಿಸಿತು. ಇನ್ನೊಂದು ಕಡೆ ಹಲವು ಪಕ್ಷಗಳ ಪ್ರಜಾಪ್ರಭುತ್ವ, ಖಾಸಗೀ ಬಂಡವಾಳದಾರರ ನಿಯಂತ್ರಿತ ಅಭಿವೃದ್ಧಿ ಎನ್ನುವ ಭಾವನೆಗಳನ್ನು ಅಮೇರಿಕಾ ಪ್ರೋತ್ಸಾಹಿಸಿತು. ಪೂರ್ವ ಯೂರೋಪ್ (ಪೋಲ್ಯಾಂಡ್, ಹಂಗರಿ, ಪೂರ್ವ ಜರ್ಮನಿ) ಎಲ್ಲಾ ರಷ್ಯಾ ಪ್ರಭಾವದಲ್ಲಿದ್ದರೆ, ಹೊಸದಾಗಿ ಸ್ವಾತಂತ್ರ್ಯ ಪಡೆದ ಚೈನಾ, ವಿಯೆತ್ನಾದಂತಹ ವಸಾಹತು ದೇಶಗಳು ಇದಕ್ಕೆ ಸನ್ನಿಹಿತವಾಗಿದ್ದವು. ಪಶ್ಚಿಮ ಯೂರೋಪ್ ದೇಶಗಳಾದ ಬ್ರಿಟನ್, ಫ್ರಾನ್ಸ್, ಸ್ಪೆಯಿನ್‌ನಂತಹವು ಅಮೇರಿಕಾದ ಕಡೆಗೆ ನಿಂತವು. ಪ್ರಪಂಚದಲ್ಲಿನ ದೇಶಗಳನ್ನು ತಮ್ಮ ಬಣದೊಳಗೆ ಸೇರಿಸಿಕೊಳ್ಳಲು ಈ ಎರಡು ಅಗ್ರ ರಾಷ್ಟ್ರಗಳು ಒಂದಕ್ಕೊಂದು ಸ್ಪರ್ಧಿಸಲಾರಂಭಿಸಿದವು.

ಚಿತ್ರ 19.3: ನ್ಯೂಯಾರ್ಕ್‌ನಲ್ಲಿನ ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ

- ಯುದ್ಧಗಳಿಗೂ, ಬಡತನ, ಅಭಿವೃದ್ಧಿಯ ಅಸಮಾನತೆ, ದೇಶಗಳ ನಡುವೆ ಸಾಂಸ್ಕೃತಿಕ ಅನುಸಂಧಾನಕ್ಕೆ ನಡುವೆ ಸಂಬಂಧವೇನಾದರೂ ಇದೆಯಾ ?
- ಐದು ದೇಶಗಳಿಗೆ ನೀಡಿದ ಪ್ರತ್ಯೇಕ ಅಧಿಕಾರಗಳು ಅಪ್ರಜಾಪ್ರಭುತ್ವಿಕವಾದ್ದರಿಂದ ಅವುಗಳನ್ನು ರದ್ದು ಮಾಡಬೇಕೆಂದು ಕೆಲವರು ವಾದಿಸುತ್ತಿರುತ್ತಾರೆ. ಆದರೆ ಈ ದೇಶಗಳಿಗೆ ಪ್ರತ್ಯೇಕ ಅಧಿಕಾರಗಳು ಇಲ್ಲದೇ ಹೋದರೆ ವಿಶ್ವಸಂಸ್ಥೆ ಸಕ್ರಮವಾಗಿ ಕಾರ್ಯನಿರ್ವಹಿಸಲಾರದೆಂದು ಕೆಲವರು ಹೇಳವರು. ಚರ್ಚಿಸಿರಿ.

ಎರಡನೇ ಪ್ರಪಂಚ ಯುದ್ಧದ ನಂತರ 45 ವರ್ಷಗಳವರೆಗೆ ಈ ಎರಡು ಬಣಗಳ ನಡುವೆ ಒಂದು ವಿಚಿತ್ರ ಯುದ್ಧ ನಡೆಯಿತು. ಇದರಲ್ಲಿ ಮುಖ್ಯವಾದ ಸ್ಪರ್ಧೆದಾರರು ಒಂದರ ಮೇಲೊಂದು ಭೌತಿಕ ದಾಳಿಗಳಿಗೆ ಇಳಿಯಲಿಲ್ಲ. ಒಂದಕ್ಕೊಂದು ನೇರವಾಗಿ ಯುದ್ಧದಲ್ಲಿ ಇಳಿಯಲಿಲ್ಲ. ಇದಕ್ಕೆ ಬದಲಾಗಿ ಪ್ರಪಂಚದಲ್ಲಿ ಯಾವ ಎರಡು ಚಿಕ್ಕ ದೇಶಗಳ ನಡುವೆ ಘರ್ಷಣೆ ತಲೆಎತ್ತಿದಾಗ ಈ ಅಗ್ರ ದೇಶಗಳು ತಲಾ ಒಂದು ಪಕ್ಷವಹಿಸಿ ಮಾತುಗಳು, ಪ್ರಚಾರಗಳ ಮೂಲಕ ಯುದ್ಧ ಮಾಡಿದವು. ಸಂಪ್ರದಾಯ ಯುದ್ಧದಲ್ಲಿದ್ದಂತೆ ನಿಜವಾದ ಹೋರಾಟ ಇಲ್ಲವಾದ್ದರಿಂದ ಇದನ್ನು ಶೀತಲ ಸಮರ ಎಂದರು. ಈ ಶೀತಲ ಸಮರದಿಂದ ಅಮೇರಿಕಾ, ರಷ್ಯಾಗಳ ನಡುವೆ ತೀವ್ರ ಘರ್ಷಣೆಯಿಂದ ಕೂಡಿದ ವಾತಾವರಣ ಇತ್ತು, 1945 1991 ರ ನಡುವೆ ನಡೆದ ಪ್ರಪಂಚ ಘಟನೆಗಳೆಲ್ಲವುಗಳ ಮೇಲೆ ಇದು ಪರಿಣಾಮ ಬೀರಿತು.

ಶೀತಲ ಸಮರವೆಂದರೆ ಪ್ರಚಾರ ಯುದ್ಧವೊಂದೇ ಅಲ್ಲ. ಈ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಎರಡು ಕೋಟಿ ಜನ ಮರಣ ಹೊಂದಿದರು. ಈ ಮರಣ ಹೊಂದಿದವರಲ್ಲಿ ಸುಮಾರು ಎಲ್ಲರೂ ಮೂರನೇ ಪ್ರಪಂಚ ದೇಶಗಳವರೆಗೆ, ಅಂದರೆ ವಸಾಹತು ಶಾಹಿಯಿಂದ ಹೊರಬಂದ ವಿಯೆತ್ನಾಂ, ಕೊರಿಯಾ,



ರೇಖಾಚಿತ್ರ 19.1 : ಅಮೇರಿಕಾ, ರಷ್ಯಾಗಳ ಹತ್ತಿರ ಅಣ್ವಾಯುಧ ಸಂಗ್ರಹಣೆಗಳು

SCERT TELANGANA

ಅಂಗೋಲಾ, ಅಫ್ಘಾನಿಸ್ತಾನ್‌ದಂತ ದೇಶಗಳವರೆ. ಪ್ರಪಂಚ ಎರಡು ಬಣಗಳಾಗಿ ಭಾಗವಾದ್ದರಿಂದ ಭೌಗೋಳಿಕವಾಗಿ ಪಕ್ಕದಲ್ಲಿರುವ ದೇಶಗಳು, ಒಂದೇ ಮೂಲಗಳನ್ನು ಹೊಂದಿರುವ ಜನರಿರುವ ದೇಶಗಳು ಶತ್ರುಗಳಾಗಿ ಬದಲಾಗಿ ಅವರ ನಡುವೆ ವಿನಾಶಕರ ಯುದ್ಧಗಳು ಹೆಚ್ಚಾದವು.

ಶೀತಲ ಸಮರದ ಕಾಲದಲ್ಲಿ ಈ ಎರಡು ಬಣಗಳು ಪರೋಕ್ಷ ಯುದ್ಧಗಳು, ಸೈನಿಕ ಒಪ್ಪಂದಗಳು, ಆಯುಧ ಪೈಪೋಟಿಯಂತಹ ವ್ಯೂಹಗಳನ್ನು ಅವಲಂಬಿಸಿದವು.



ಚಿತ್ರ 19.4 : ಅಣುಬಾಂಬುಗಳ ತೀವ್ರತೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದು ಮಾಡಿ ನೋಡಿ. ಹಿರೋಷಿಮಾದ ಮೇಲೆ ಹಾಕಿದ ಅಣುಬಾಂಬು 15 ಕಿ.ಲೋ. ಟನ್ನುಗಳಾದರೆ, ನಗಾಸಾಕಿಯ ಮೇಲೆ ಹಾಕಿದ್ದು 21 ಕಿಲೋ ಟನ್ನುಗಳು, ಒಂದು ಕಿಲೊ ಟನ್ನಿಗೆ ಒಂದು ಚುಕ್ಕೆಯಂತೆ ಮೇಲೆ ಹಿರೋಷಿಮಾದ ಮೇಲೆ ಹಾಕಿದ ಅಣುಬಾಂಬನ್ನು ಸೂಚಿಸಿರುವರು. ರಷ್ಯಾ ಹತ್ತಿರ ಇರುವ ಅತ್ಯಂತ ಶಕ್ತಿಯುತವಾದ ಜಾರ್ ಬಾಂಬೆ ಎನ್ನುವ ಅಣುಬಾಂಬು 50,000 ಕಿಲೋ ಟನ್ನುಗಳು. ಹಿರೋಷಿಮಾದ ಮೇಲೆ ಹಾಕಿದ ಅಣುಬಾಂಬಬನ್ನು ಸೂಚಿಸಿದಂತೆ ಇದನ್ನು ಸೂಚಿಸಬೇಕೆಂದರೆ ಪುಸ್ತಕದಲ್ಲಿ ಚುಕ್ಕೆಗಳಿಗೆ ಎಷ್ಟು ಪೇಜಿಗಳು ಬೇಕೋ ಊಹಿಸಿರಿ. ಈ ಬಾಂಬನ್ನು ಎಂದಾದರೂ ಉಪಯೋಗಿಸಬೇಕಾಗಿ ಬಂದರೆ ಅದರ ಪ್ರಭಾವ ಹೇಗೆ ಇರುತ್ತದೋ ಊಹಿಸಿರಿ.

ಪರೋಕ್ಷ ಯುದ್ಧಗಳು (Proxy War) :

ಪ್ರಾರಂಭದಿಂದಲೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ದೇಶಗಳನ್ನು ತಮ್ಮ ಪ್ರಭಾವದೊಳಗೆ ತೆಗೆದುಕೊಂಡು ಬರಲು ಎರಡು ಬಣಗಳು ಪ್ರಯತ್ನಿಸಿದವು. ಇದರ ಫಲವಾಗಿ ಆಯಾ ದೇಶಗಳಲ್ಲಿ ಎರಡು ವಿರುದ್ಧ ಗುಂಪುಗಳು ತಲಾ ಒಂದು ಬಣಕ್ಕೆ ಬೆಂಬಲ ನೀಡಲಾರಂಭಿಸಿತು. ಉದಾಹರಣೆಗೆ 1947ರಲ್ಲಿ ಟರ್ಕಿ, ಗ್ರೀಕ್ ದೇಶಗಳಲ್ಲಿ ಕಮ್ಯೂನಿಸ್ಟ್ ವಿರೋಧ ಶಕ್ತಿಗಳಿಗೆ ಅಮೇರಿಕಾ ಅಧ್ಯಕ್ಷನಾದ ಹ್ಯಾಂ ಟ್ರುಮನ್ ಬೆಂಬಲ ನೀಡಿದನು. ಆಫ್ರಿಕಾದಲ್ಲಿ ಬೆಲ್ಜಿಯಂ ವಸಾಹತು ಆಡಳಿತದ ಅಡಿಯಲ್ಲಿರುವ ಕಾಂಗೋಗೆ 1960ರಲ್ಲಿ ಸ್ವಾತಂತ್ರ್ಯ ಬಂದಿತು. ಇದರ ಕಮ್ಯೂನಿಸ್ಟ್ ನಾಯಕನಾದ ಪಾಟ್ರಿಸ್ ಲುಮುಂಬಾನನ್ನು 1961ರಲ್ಲಿ ಕೊಲೆ ಮಾಡಿದರು. ಇದರಲ್ಲಿ ಅಮೇರಿಕಾ ಗೂಡಾಚಾರಿ ಸಂಸ್ಥೆಯಾದ ಸಿಐಎ ಬೆಂಬಲ ಇದೆ ಎನ್ನುತ್ತಾರೆ. ಪೋರ್ಚುಗಲ್‌ನಿಂದ ಅಂಗೋಲಾ 1975 ನವೆಂಬರ್‌ನಲ್ಲಿ ಸ್ವಾತಂತ್ರ್ಯ ಪಡೆಯಿತು. ರಷ್ಯಾ, ಕ್ಯೂಬಾಗಳ ಸಹಾಯದಿಂದ ಅಂಗೋಲಾದಲ್ಲಿನ ಕಮ್ಯೂನಿಸ್ಟರು ಅಧಿಕಾರವನ್ನು ಕೈಹಿಡಿದರು. ಲ್ಯಾಟಿನ್ ಅಮೇರಿಕಾದಲ್ಲಿ ಫಿಡೆಲ್ ಕಾಸ್ಟ್ರೋ ಅಮೇರಿಕಾ ಬೆಂಬಲ ಇರುವ ಸರ್ಕಾರಕ್ಕೆ ವಿರುದ್ಧದ ಕ್ರಾಂತಿಗೆ ನಾಯಕತ್ವ ವಹಿಸಿ ರಷ್ಯಾ ಪಂಥದ ಸಮತಾವಾದ ವ್ಯವಸ್ಥೆಯನ್ನು ನಿರ್ಮಿಸಲು ಬದಲಾವಣೆಗಾಗಿ ಹೋರಾಟಗಳನ್ನು ಪ್ರಾರಂಭಿಸಲು ಸ್ಫೂರ್ತಿಯನ್ನು ಪಡೆದವು. ಅವರಲ್ಲಿ ಅತ್ಯಂತ ಪ್ರಜಾಧಾರಣೆ ಹೊಂದಿದ ಚೇಗುವೇರಾ ಎನ್ನುವ ನಾಯಕನು ಕೊಲೆ ಮಾಡಲ್ಪಟ್ಟನು. ಸಮಾಜವಾದಿಗಳ ನಾಯಕತ್ವದಲ್ಲಿ ಚುನಾಯಿಸಲ್ಪಟ್ಟ ಸರ್ಕಾರಗಳನ್ನು ಸಹ ಅಮೇರಿಕಾದ ಬೆಂಬಲದಿಂದ ಆ ದೇಶಗಳ ಸೈನ್ಯಾಧೀಶರು ಉರುಳಿಸಿದರು. ಇದಕ್ಕೆ ಚಿಲಿಯಲ್ಲಿರುವ ಎಸ್. ಅಲ್ಲೆಂಡೀ ಸರ್ಕಾರವನ್ನು ಉರುಳಿಸಿದ್ದು, ಒಂದು ಉದಾಹರಣೆಯಾಗಿ ಹೇಳಬಹುದು.

ರಷ್ಯಾ ಸಹ ತನ್ನ ಪ್ರಭಾವ ವಲಯವನ್ನು ವಿಸ್ತರಿಸಲು ಕೃಷಿ ಮಾಡಿತು. ಉದಾಹರಣೆಗೆ 1950ರಲ್ಲಿ ಜರ್ಮನಿ, ಹಂಗರಿ, ಚೆಕೊಸ್ಲೊವೇಕಿಯಾದಂತ ದೇಶಗಳಲ್ಲಿ ವಿರೋಧ ಎದ್ದಾಗ ರಷ್ಯಾ ತನ್ನ ಸೈನ್ಯವನ್ನು ಕಳುಹಿಸಿ ಆ ದೇಶಗಳಲ್ಲಿ ತನಗೆ ಅನುಕೂಲವಾಗಿಲ್ಲದ ಸರ್ಕಾರಗಳನ್ನು ತೊಲಗಿಸಿ ತಮ್ಮೊಂದಿಗೆ ಸ್ನೇಹ ಪೂರ್ವಕವಾಗಿರುವ ಸರ್ಕಾರಗಳನ್ನು ಸ್ಥಾಪಿಸಿತು. 1960ರ ನಂತರ ರಷ್ಯಾದೊಂದಿಗೆ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದು ಚೈನಾ ನಿರ್ಣಯಿಸಿತು. 1971ರಲ್ಲಿ ಅಫ್ಘಾನಿಸ್ಥಾನದ ಮೇಲೆ ರಷ್ಯಾ ದಾಳಿ ಮಾಡಿ ಅಲ್ಲಿ ತನಗೆ ಅನುಕೂಲವಾಗಿರುವ ಸರ್ಕಾರವನ್ನು ಸ್ಥಾಪಿಸಿತು. ಇದರಿಂದ ಧಾರ್ಮಿಕ ಉಗ್ರವಾದಿಗಳಾದ ಅಫ್ಘನ್ ದಂಗೆಕಾರರಿಗೆ ಅಮೇರಿಕಾ ಬೆಂಬಲ ನೀಡಿತು. ಇದರ ಫಲವಾಗಿ ದೀರ್ಘಕಾಲ ಪೌರಯುದ್ಧ ನಡೆಯಿತು. ಅಂತಿಮವಾಗಿ 1985ರಲ್ಲಿ ಅಫ್ಘಾನಿಸ್ತಾನ್ ದಿಂದ ತನ್ನ ಸೈನ್ಯಗಳನ್ನು ಉಪಸಂಹರಿಸಿಕೊಳ್ಳಬೇಕೆಂದು ರಷ್ಯಾ ನಿರ್ಣಯಿಸಿತು. ನಂತರ ಧಾರ್ಮಿಕ ಉಗ್ರವಾದಿಗಳಾದ ತಾಲಿಬಾನರು ಅಧಿಕಾರಕ್ಕೆ ಬಂದು ಈಗ ಅಮೇರಿಕಾಕ್ಕೆ ವಿರೋಧವಾಗಿ ಬದಲಾದರು. ಈ ಅಗ್ರ ರಾಷ್ಟ್ರಗಳು ಆಡಿದ ಆಟದಲ್ಲಿ ವಸಾಹತುಶಾಹಿ ನಿಯಂತ್ರಣದಿಂದ ಹೊರ ಬರಬೇಕೆಂದುಕೊಳ್ಳುತ್ತಿರುವ ಮೂರನೇ ಪ್ರಪಂಚವು ವಿನಾಶಕ್ಕೆ, ಯುದ್ಧಕ್ಕೆ ರಂಗ ಭೂಮಿಕೆಯಾಗಿ ಬದಲಾಯಿತೆಂದೂ, ಯುದ್ಧದಲ್ಲಿ ರಷ್ಯಾ, ಅಮೇರಿಕದ ಸೈನಿಕರಲ್ಲದೆ ಮೂರನೇ ಪ್ರಪಂಚದ ಜನರು ಸಹ ಪಾಲ್ಗೊಂಡರೆನ್ನುವುದು ಗಮನಿಸಿರಿ.

SCERT TELANGANA

ಸೈನಿಕ ಒಪ್ಪಂದಗಳು (Military Alliances) :

ಅಮೇರಿಕ, ರಷ್ಯಾಗಳೆರಡರ ಹತ್ತಿರ ಅಣ್ವಾಯುಧಗಳಿವೆ. ಆದರೆ ಅಣು ಯುದ್ಧವೇನಾದರೂ ನಡೆದರೆ ಯಾವ ದೇಶವೂ ಗೆಲ್ಲುವುದಿಲ್ಲವೆಂದು ಎರಡಕ್ಕೂ ಗೊತ್ತು. ಆದರೂ ಅವು ಸೈನಿಕ, ಮುಖ್ಯವಾದ ಒಪ್ಪಂದಗಳು ಮಾಡಿಕೊಳ್ಳಲಾರಂಭಿಸಿದವು. 1949ರಲ್ಲಿ ಅಮೇರಿಕಾ ತನ್ನ ಮೈತ್ರಿಯನ್ನು ಉತ್ತರ ಅಟ್ಲಾಂಟಿಕ್ ಸಂಧಿ ವ್ಯವಸ್ಥೆ(ನಾಟೋ) ಎನ್ನುವುದರ ಮೂಲಕ ಬಲಪಡಿಸಿಕೊಂಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಕಮ್ಯೂನಿಸ್ಟ್ ದೇಶಗಳು ವಾರ್ಸಾ ಒಪ್ಪಂದ ಮಾಡಿಕೊಂಡವು. ಅಮೇರಿಕ ವಿವಿಧ ಪ್ರಾಂತಗಳಲ್ಲಿ ಮಿಲಿಟರೀ, ಮಿತ್ರತ್ವ ಒಪ್ಪಂದಗಳಾದ – ಸೌತ್‌ಈಸ್ಟ್ ಏಷಿಯನ್ ಟ್ರೀಟಿ ಆರ್ಗನೈಜೇಷನ್ (ಸೆನ್‌ಟೊ)ಗಳನ್ನು ಮಾಡಿಕೊಂಡಿತು.

ಸೈನಿಕ ಒಪ್ಪದಂಗಳನ್ನು ಮಾಡಿಕೊಳ್ಳುವುದರಿಂದ ತಮ್ಮನ್ನು ತಾವು ಶಕ್ತಿವಂತರನ್ನಾಗಿ ಮಾಡಿಕೊಂಡಿದ್ದರೂ ಯುದ್ಧವೇನಾದರೂ ನಡೆದರೆ ಒಟ್ಟು ನಾಗರೀಕತೆಗಳಿಗೆ ಅಪಾಯ ತರುವ ಮಟ್ಟದಲ್ಲಿ ಮನುಕುಲದ ನಾಶ ನಡೆಯುತ್ತದೆಂದು ಈ ಬಣಗಳಿಗೆ ಗೊತ್ತು. ಆದ್ದರಿಂದಲೇ ಅವು ಒಂದಕ್ಕೊಂದು ತಡೆಯೊಡ್ಡುತ್ತಾ ನಿರ್ಭಂಧಕಗಳಾಗಿ ನಿಲ್ಲುವಂತೆ ವ್ಯವಹರಿಸಿದವು.

ಈ ಒಪ್ಪಂದಗಳ ಮೂಲಕ ಅಗ್ರ ರಾಷ್ಟ್ರಗಳ ಪ್ರಭಾವ ವಲಯ ವಿಸ್ತರಿಸಿ ಅವುಗಳಿಗೆ ಕೆಳಗೆ ತಿಳಿಸಿದವುಗಳು ದೊರೆಯುವಂತಾಯಿತು.

– ಪೆಟ್ರೋಲಿಯಂ, ಖನಿಜಗಳಂತಹ ಪ್ರಮುಖ ಸಂಪನ್ಮೂಲಗಳು.
– ತಮ್ಮ ಉತ್ಪತ್ತಿಗಳಿಗೆ ಮಾರುಕಟ್ಟೆ, ತಮ್ಮ ಬಂಡವಾಳಗಳನ್ನು ಹೂಡಲು ಸುರಕ್ಷಿತವಾದ ಪ್ರದೇಶಗಳು
– ತಮ್ಮ ಸೈನಿಕರನ್ನು, ಆಯುಧಗಳನ್ನು ಉಪಯೋಗಿಸಿಕೊಳ್ಳಲು ಸೈನಿಕ ಸ್ಥಾವರಗಳು
– ತಮ್ಮ ಮನೋಭಾವನೆಗಳ ವಿಸ್ತರಣೆ
– ದೊಡ್ಡ ಮೊತ್ತದಲ್ಲಿನ ಸೈನಿಕ ಖರ್ಚಿಗೆ ಆರ್ಥಿಕ ಬೆಂಬಲ

ಆಯುಧಗಳು, ಅಂತರಿಕ್ಷ ಪೈಪೋಟಿ (Arms and Space Race) :

ಆಯುಧಗಳ ಸಂಶೋಧನೆಯ ಮೇಲೆ ಖಂಡಾಂತರ ಕ್ಷಿಪಣಿಗಳು, ವಿನಾಶಕಾರಕ ಅಣ್ವಾಯುಧಗಳ ಸಂಗ್ರಹಣೆಗಳ ಮೇಲೆ ಅಮೇರಿಕಾ, ರಷ್ಯಾಗಳು ದೊಡ್ಡ ಮೊತ್ತದಲ್ಲಿ ಹಣವನ್ನು ಖರ್ಚು ಮಾಡಿದವು. ಈ ಎರಡು ದೇಶಗಳಲ್ಲಿ ಒಂದೊಂದರ ಹತ್ತಿರ ಪ್ರಪಂಚವನ್ನು ಹಲವು ಸಾರಿ ನಾಶಪಡಿಸಲಬಲ್ಲ ಅಣ್ವಾಯುಧಗಳಿವೆ. ಕಾಲಕ್ರಮದಲ್ಲಿ ಅವುಗಳ ಮಿತ್ರ ದೇಶಗಳಾದ ಬ್ರಿಟನ್, ಫ್ರಾನ್ಸ್, ಚೈನಾಗಳು ಸಹ ಅಣ್ವಾಯುಧಗಳನ್ನು ಸಂಗ್ರಹಿಸಿ ಕೊಂಡವು. ಗೂಢಚಾರದಲ್ಲಿಯೂ, ಕ್ಷಿಪಣಿಗಳನ್ನು ನಿರ್ದೇಶಿಸುವುದರಲ್ಲೂ ಉಪಗ್ರಹಗಳು ಸಹಾಯವಾಗುವುದರಿಂದ ಈಗ ಪೈಪೋಟಿ ಅಂತರಿಕ್ಷದೊಳಗೆ ಸಹ ವಿಸ್ತರಿಸಿದೆ. ಮೊದಲ ಉಪಗ್ರಹವಾದ ಸ್ಪುಟ್ನಿಕ್‌ನ್ನು ರಷ್ಯಾ ಪ್ರಯೋಗಿಸಿತು. ಹಾಗೆಯೇ ಅಂತರಿಕ್ಷದೊಳಗೆ ಮೊದಲ ವ್ಯಕ್ತಿ ಯೂರಿ

ಚಿತ್ರ 1 : ಶೀತಲ ಸಮರದಲ್ಲಿ ಸೈನಿಕ ಒಪ್ಪಂದಗಳು



SCERT TELANGANA

ಗಗಾರಿನ್‌ನನ್ನು ರಷ್ಯಾ ಕಳುಹಿಸಿತು. ಇದರಿಂದ ಎರಡು ರಾಷ್ಟ್ರಗಳ ನಡುವೆ ಉಪಗ್ರಹಗಳನ್ನು ಪ್ರಯೋಗಿಸುವುದರಲ್ಲಿ ಪೈಪೋಟಿ ಪ್ರಾರಂಭವಾಯಿತು. ನೀಲ್ ಆರ್ಮಸ್ಟ್ರಾಂಗ್‌ನನ್ನು ಇತರರನ್ನು ಚಂದ್ರನ ಮೇಲೆ ಕಳುಹಿಸುವುದರಲ್ಲಿ 1969ರಲ್ಲಿ ಅಮೇರಿಕಾ ಸಫಲವಾಯಿತು.

ಯುದ್ಧದ ಅಂಚಿನಲ್ಲಿ (Flase Points) :

ಶತ್ರು ಬಣಗಳು ವಿನಾಶಕಾರಕ ಆಯುಧಗಳ ಸಂಗ್ರಹಣೆಗಳನ್ನು ಹೆಚ್ಚಿಸುತ್ತಾ ಹೋಗಿದ್ದರಿಂದ ಪ್ರಪಂಚವು ಅಣ್ವಾಯುಧ ಯುದ್ಧದ ವಿನಾಶದ ನೆರಳಿನಲ್ಲಿ ಹೆದರುತ್ತಾ ಇದೆ. ಎಲ್ಲಾ ದೇಶಗಳ ಜನರು ಯುದ್ಧ ಭಯದಿಂದ ಜೀವನ ಸಾಗಿಸುತ್ತಿದ್ದರು. ಎರಡು ಅಗ್ರ ರಾಷ್ಟ್ರಗಳ ನಡುವೆ ಯುದ್ಧ ಅನಿವಾರ್ಯವೆನಿಸಿದ ಸಂದರ್ಭಗಳ ಬಹಳಷ್ಟು ಎದುರಾದರೂ ಪರಸ್ಪರ ರಾಯಭಾರದಿಂದ ಇವುಗಳನ್ನು ಹೇಗೋ ನಿವಾರಿಸಿದರು. ರಷ್ಯಾ ತಮ್ಮ ದೇಶದೊಳಗೆ ಅಮೇರಿಕಾಕ್ಕೆ ಸೇರಿದ ಗೂಢಚಾರಿ ವಿಮಾನವನ್ನು ಉರುಳಿಸಿದ್ದು, ಕ್ಯೂಬಾದಲ್ಲಿ ರಷ್ಯಾದ ಆಯುಧ ಸಂಗ್ರಹಣೆಯನ್ನು ಅಮೇರಿಕಾ ಗುರ್ತಿಸಿದ್ದು, ಕೊರಿಯಾ, ಮಧ್ಯ ಪ್ರಾಚ್ಯ ಯುದ್ಧಗಳಂತಹ ಸಂದರ್ಭಗಳಲ್ಲಿ ಪ್ರಪಂಚ ಹಲವು ಬಾರಿ ಯುದ್ಧದ ಅಂಚಿನಲ್ಲಿ ನಿಂತಿತು.

ಚಿತ್ರ 19.5 : (ಎಡ) ಯೂರಿ ಗಗಾರಿನ್, (ಬಲ) ಚಂದ್ರಮಂಡಲದ ಮೇಲೆ ಮನುಷ್ಯ

ಅಲಿಪ್ತ ಚಳುವಳಿ (Non-Alignment Movement (NAM)) :

1950ರಲ್ಲಿ ಪ್ರಪಂಚ ಎರಡು ಶತ್ರು ಬಣಗಳ ನಡುವೆ ತೀವ್ರ ಆಯುಧೀಕರಣಕ್ಕೆ ಒಳಗಾಯಿತು. ಎರಡು ಅಗ್ರ ರಾಷ್ಟ್ರಗಳ ನಡುವೆ ಸೈನಿಕ ಆಧಿಪತ್ಯ, ಸಿದ್ಧಾಂತಗಳ ವಿರೋಧಗಳು, ಆರ್ಥಿಕ ಆಧಿಪತ್ಯಕ್ಕಾಗಿ ನಡೆದ ಪೈಪೋಟಿಯ ಕಾರಣದಿಂದ ಪ್ರಪಂಚ ಎರಡು ಧ್ರುವಗಳಾಗಿ ಒಡೆದು ಹೋಯಿತು. ಈ ಎರಡು ಪಕ್ಷಗಳಲ್ಲಿ ಅವಕಾಶಗಳು ಇಲ್ಲದೇ ಹೋದರು ಅಂತಹ ಯಾವುದೇ ಪಕ್ಷಕ್ಕೂ ಸೇರದೇ ಇರುವುದಕ್ಕೆ ಅಷ್ಟಾಗಿ ಪ್ರಯತ್ನ ಒಂದು ನಡೆಯಿತು. ಅಗ್ರ ರಾಷ್ಟ್ರಗಳ ನಡುವಿನ ಪೈಪೋಟಿಯಿಂದ ಇತ್ತೀಚೆಗೆ ವಸಾಹತುಶಾಹಿಯಿಂದ ವಿಮುಕ್ತಿ ಹೊಂದಿದ ದೇಶಗಳ ಸಮಸ್ಯೆಗಳಾದ ಬಡತನ, ಅನಾರೋಗ್ಯ, ಅಸಮಾನತೆ, ವಸಾಹತು ಶಾಹಿಗಳಂತಹವು ಯಾವುವು ಪರಿಷ್ಕಾರವಾಗಲಿಲ್ಲ.

ಹೊಸದಾಗಿ ಸ್ವತಂತ್ರ ಹೊಂದಿದ ದೇಶಗಳುಅಭದ್ರತಾ ಭಾವನೆಯಿಂದ ಕೂಡಿದ ಪರಿಸ್ಥಿತಿ ಗಳಿಂದ ಬದಲಾವಣೆ ಬೇಕೆಂದು ಬಯಸಿದವು. ಆ ಉದ್ದೇಶದಿಂದ 1955ರಲ್ಲಿ ಇಂಡೋನೇಷಿಯಾ ದಲ್ಲಿನ ಬಾಂಡುಂಗ್ ನಗರದಲ್ಲಿ ಒಂದು ಸಮಾವೇಶ ನಿರ್ವಹಿಸಿದರು. ಮೊದಲು ಏಷಿಯಾ– ಆಫ್ರಿಕಾ ಸಮಾವೇಶವಾದ ಇದಕ್ಕೆ 29 ದೇಶಗಳು ಹಾಜರಾದವು. ಈ ಸಮಾವೇಶದಲ್ಲಿ ಪಾಲ್ಗೊಂಡ ಮುಖ್ಯವಾದ ನಾಯಕರಲ್ಲಿ ಆಗಿನ ಭಾರತ ದೇಶದ ಪಂಡಿತ್ ಜವಹಾರ್‌ಲಾಲ್ ನೆಹ್ರೂ, ಈಜಿಪ್ಟಿನ ನಾಯಕರಾದ ಗಮಲ್ ಅಬ್ದುಲ್ ನಾಸರ್, ಯುಗೋಸ್ಲಾವಿಯಾದ ನಾಯಕರಾದ ಜೊಸೆಫ್ ಬ್ರಿಜ್ ಟಿಟೋರು ಇರುವರು. ಜವಹಾರ್‌ಲಾಲ್ ನೆಹ್ರೂರನ್ನು ಅದರ ಅಧಿಕಾರ ಪ್ರತಿನಿಧಿಯಾಗಿ ಗುರ್ತಿಸಿದರು. ಇದು ಅಲಿಪ್ತ ಚಳುವಳಿಗೆ ದಾರಿ ಮಾಡಿತು.

ಏಷಿಯಾ, ಆಫ್ರಿಕಾ, ನಂತರ ಲ್ಯಾಟಿನ್ ಅಮೇರಿಕಾಗಳಲ್ಲಿ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳ ನಡುವೆ ಸಾಂಸ್ಕೃತಿಕ, ಆರ್ಥಿಕ ಸಹಕಾರವನ್ನು ಪ್ರೋತ್ಸಾಹಿಸಲು ಅಂತರಾಷ್ಟ್ರೀಯ ಸಂಸ್ಥೆಯಾಗಿ ಅಲಿಪ್ತ ಚಳುವಳಿ ರೂಪಿಸಲ್ಪಟ್ಟಿತು.

SCERT TELANGANA

ಇದರ ಮೊದಲ ಸಮಾವೇಶ 1961 ಸೆಪ್ಟೆಂಬರ್‌ನಲ್ಲಿ ಯುಗೊಸ್ಲೋವಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆಯಿತು. ಇದಕ್ಕೆ 25 ಸದಸ್ಯ ದೇಶಗಳು ಹಾಜರಾದವು. 2012 ರ ವೇಳೆಗೆ ಇದರ ಸದಸ್ಯತ್ವ 120 ದೇಶಗಳಿಗೆ ಹೆಚ್ಚಿತು. ಇದರಲ್ಲಿ 17 ಜನ ಪರಿಶೀಲನೆ ಮಾಡುವವರಿದ್ದಾರೆ. ಮೂರು ಮುಖ್ಯ ಉದ್ದೇಶಗಳೊಂದಿಗೆ ಮೊದಲ ಸಮಾವೇಶ ನಡೆಯಿತು.

ಚಿತ್ರ 19.6: ಜೆ. ನೆಹ್ರೂ, ಕೆನ್ಯಾದ ಕ್ವಾಮೆನೇಕ್ರುಮಾ ಈಜಿಪ್ಟಿಗೆ ಸೇರಿದ ಗಮಾಲ್ ಅಬ್ದೆಲ್ ನಾಜರ್, ಇಂಡೋನೇಷಿಯಾಕ್ಕೆ ಸೇರಿದ ಸುಕಾರ್ನೋ, ಯುಗೋಸ್ಲಾವಿಯಾಕ್ಕೆ ಸೇರಿದ ಟಿಟೋ, 1960 ರಲ್ಲಿ ಅಲಿಪ್ತ ಚಳುವಳಿ ಸಮಾವೇಶದ

- ಅಲಿಪ್ತ ಚಳುವಳಿ ಸದಸ್ಯ ದೇಶಗಳ ನಡುವೆ ಸಹಕಾರ, ಇವುಗಳಲ್ಲಿ ಹಲವು ಹೊಸದಾಗಿ ಸ್ವತಂತ್ರಗೊಂಡ ದೇಶಗಳು.
- ಹೆಚ್ಚುತ್ತಿರುವ ಶೀತಲ ಸಮರದ ತೀವ್ರತೆಗಳು, ಉಳಿದ ಪ್ರಪಂಚದ ಮೇಲೆ ಅದರ ಪ್ರಭಾವ.
- ವಸಾಹತುಶಾಹಿಯಿಂದ ವಿಮುಕ್ತಗೊಂಡ ದೇಶಗಳು ಯಾವುದೇ ಶಕ್ತಿಬಣಕ್ಕೂ ಸೇರದಂತೆ ನೋಡುವುದು.

ಎರಡು ಅಗ್ರ ರಾಷ್ಟ್ರಗಳು ಸ್ಪರ್ಧಿಸುತ್ತಾ ವಿವಿಧ ದೇಶಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಭಾರತ ದೇಶದಂತಹ ದೇಶಗಳು ಸ್ವತಂತ್ರ ವೈಖರಿಯನ್ನು ವ್ಯಕ್ತಪಡಿಸಲು ಅಲಿಪ್ತ ಚಳುವಳಿ ಸಹಕರಿಸಿತು. ಅಗ್ರ ರಾಷ್ಟ್ರಗಳನ್ನು ಒಂದನ್ನು ಮತ್ತೊಂದಕ್ಕೆ ವಿರುದ್ಧವಾಗಿ ಉಪಯೋಗಿಸಿಕೊಂಡು ಹೊಸದಾಗಿ ಅಭಿವೃದ್ಧಿ ಹೊಂದಿದ ದೇಶಗಳು ತಮಗೆ ಅವಶ್ಯಕವಾದ ಸಹಾಯವನ್ನು, ಸ್ಥಾನವನ್ನು ಹೊಂದಲ್ಪಟ್ಟವು. ಅಲಿಪ್ತ ಚಳುವಳಿ ದೇಶಗಳ ನಡುವೆ ವಿಭೇದಗಳನ್ನು ಪರಿಷ್ಕರಿಸಿಕೊಳ್ಳುವುದಕ್ಕೆ ಸಹ ಸ್ವಲ್ಪಮಟ್ಟಿಗೆ ಇದು ಸಹಕರಿಸಿತು. ಎರಡು ಅಗ್ರರಾಷ್ಟ್ರಗಳು ಈ ಅಲಿಪ್ತ ಚಳುವಳಿಯನ್ನು ಸಂಶಯದ ದೃಷ್ಟಿಯಿಂದ ನೋಡಿದವು. ಅಂತರಾಷ್ಟ್ರೀಯ ಅಂಶಗಳ ಬಗ್ಗೆ ಅಲಿಪ್ತ ಚಳುವಳಿ ರಷ್ಯಾಕ್ಕೆ ಹತ್ತಿರವಾಗಿ ಸರಿಯುತ್ತಿದೆ ಎಂದು ಅಮೇರಿಕಾ ಭಾವಿಸುತ್ತಿತ್ತು. ಉದಾಹರಣೆಗೆ ಅಫ್ಘಾನಿಸ್ಥಾನದ ಮೇಲೆ ಸೋವಿಯತ್ ದಾಳಿ ಮಾಡುವುದರ ಬಗ್ಗೆ ಸ್ಪಂಧಿಸದೇ ಹೋದದ್ದು ಅಲಿಪ್ತ ಚಳುವಳಿಯ ನಿಷ್ಪಕ್ಷ ಸಿದ್ಧಾಂತಗಳಿಗೆ ವಿಭಿನ್ನವಾಗಿ ಇದೆಯೆಂದು ಅಮೇರಿಕಾ ವಿಮರ್ಶಿಸಿತು. ಅಲಿಪ್ತ ಚಳುವಳಿಯಲ್ಲಿನ ಮತ್ತೊಂದು ಬಲಹೀನತೆಯೆಂದರೆ ಅದರ ಸದಸ್ಯ ದೇಶಗಳು ಒಂದಕ್ಕೊಂದು ಯುದ್ಧಕ್ಕೆ ನಿಲ್ಲದಂತೆ ನಿವಾರಿಸಲಾರದೇ ಹೋದದ್ದು, ಉದಾಹರಣೆಗೆ ಇರಾನ್, ಇರಾಕ್‌ಗಳು ಏಳು ವರ್ಷಗಳ ಸುದೀರ್ಘ ಯುದ್ಧಕ್ಕೆ ನಿಂತಾಗ ಅಲಿಪ್ತ ಚಳುವಳಿ ಏನೂ ಮಾಡಲಾರದೇ ಹೋಯಿತು. ಈ ಪರಿಮಿತಿಗಳು ಇದ್ದರೂ ಎರಡು ಅಗ್ರ ರಾಷ್ಟ್ರಗಳ ನಡುವೆ ಇಭಾಗವಾದ ಪ್ರಪಂಚದ ಹಿನ್ನೆಲೆಯಲ್ಲಿ ಹೊಸದಾಗಿ ಸ್ವಾತಂತ್ರ್ಯ ಹೊಂದಿದ ದೇಶಗಳು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ವತಂತ್ರವಾಗಿ ಭಾಗವಹಿಸುವಲ್ಲಿ ಅಲಿಪ್ತ ಚಳುವಳಿ ಸಹಾಯಪಟ್ಟಿತು.

ಪಶ್ಚಿಮ ಏಷಿಯಾ ಘರ್ಷಣೆಗಳು (West Asian Conflicts) :

ಯೂರೋಪ್, ಏಷಿಯಾಗಳ ಮಧ್ಯ ಪ್ರಾಂತವನ್ನು ಪಶ್ಚಿಮ ಏಷಿಯಾ ಎನ್ನುವರು. ಇದೇ ಪ್ರಾಂತವನ್ನು ಮಧ್ಯ ಪ್ರಾಚ್ಯ ಎಂದು ಸಹ ಕರೆಯುವರು. ಅರಬ್ಬರು, ಯಹೂದಿಗಳ ನಡುವೆ ಏರ್ಪಟ್ಟ ಘರ್ಷಣೆಗಳನ್ನು ಪಶ್ಚಿಮ ಏಷಿಯಾ ಬಿಕ್ಕಟ್ಟು ಎನ್ನುತ್ತಾರೆ. ಇದು ಪ್ರಧಾನವಾಗಿ ಪಾಲಸ್ತೀನಾ ಆಕ್ರಮಣಕ್ಕೆ ಸಂಬಂಧಿಸಿದ್ದು, ಅರಬ್ಬರು ವಾಸಿಸುವ ಪಾಲಸ್ತೀನ ಎರಡನೇ ಪ್ರಪಂಚ ಯುದ್ಧಕ್ಕೆ ಮೊದಲು ಬ್ರಿಟೀಷರ ನಿಯಂತ್ರಣದಲ್ಲಿತ್ತು. ಅಲ್ಲಿದ್ದ ಜೆರುಸಾಲೆಂ ಯಹೂದಿಗಳು, ಕ್ರೈಸ್ತವರ, ಮುಸ್ಲಿಮರೆಲ್ಲರಿಗೂ ಪವಿತ್ರ ಸ್ಥಳ.

ಯಹೂದಿಗಳು ಪಾಲಸ್ತೀನಾವನ್ನು ತಮ್ಮ ಭವಾಗ್ದತ್ತ ಭೂಮಿಫಿಯಾಗಿ ಪರಿಗಣಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಅಲ್ಲಿಂದ ಅವರನ್ನು ನಿರಾಶ್ರಿತರನ್ನಾಗಿ ಮಾಡಿದ್ದರಿಂದ ಅವರು ಯೂರೋಪ್, ಏಷಿಯಾದಲ್ಲೆಲ್ಲಾ ವಲಸೆ ಹೋದರು. ಯೇಸು ಕ್ರೀಸ್ತನನ್ನು ಶಿಲುಬೆಗೆ ಹಾಕುವುದಕ್ಕೆ ಯಹೂದಿಗಳನ್ನು ಹೊಣೆಗಾರರನ್ನಾಗಿ ಮಾಡಿ ಯೂರೋಪಿನಲ್ಲಿರುವ ಕ್ರೈಸ್ತರು ಅವರನ್ನು ಹಿಂಸೆಗೆ ಗುರಿಪಡಿಸುತ್ತಿದ್ದರು.

SCERT TELANGANA

- 1955 ರ ಬಾಂಡುಂಗ್ ಸಮಾವೇಶದ ಮುಖ್ಯ ಉದ್ದೇಶವೇನು ?
- ಅಲಿಪ್ತ ಚಳುವಳಿ ಸೂತ್ರಗಳಿಗೆ ಅಗ್ರ ರಾಷ್ಟ್ರಗಳು ಹೇಗೆ ಸ್ಪಂದಿಸಿದವು ?
- ಅಲಿಪ್ತ ಚಳುವಳಿ ದೇಶಗಳನ್ನು ಮೂರನೇ ಪ್ರಪಂಚ ದೇಶಗಳೆಂದು ಏಕೆ ಕರೆಯುತ್ತಾರೆ?

ಜರ್ಮನಿಯಲ್ಲಿನ ನಾಜೀ ಆಡಳಿತದ ಸಮಯದಲ್ಲಿ ಲಕ್ಷಾಂತರ ಯಹೂದಿಗಳನ್ನು ಕೊಲೆ ಮಾಡುವುದು, ಸೆರೆಮನೆ ಪಾಲು ಮಾಡುವುದು ಇದಕ್ಕೆ ಪರಾಕಷ್ಟೆ.

ಪ್ರಪಂಚದಾದ್ಯಂತ ಇರುವ ಯಹೂದಿಗಳನ್ನು ಒಂದುಗೂಡಿಸಿ, ತಮ್ಮ ಮಾತೃಭೂಮಿಯಾದ ಪಾಲಸ್ತೀನಾವನ್ನು ಮರಳಿ ಪಡೆದು, ಯಹೂದಿಗಳಿಗೆ ಪ್ರತ್ಯೇಕ ದೇಶವನ್ನು ನಿರ್ಮಿಸಲು ಯಹೂದಿಗಳಲ್ಲಿ ಜಿಯಾನಿಸ್ಟ್ ಚಳುವಳಿ ಪ್ರಾರಂಭವಾಯಿತು. 1945ರಲ್ಲಿ ಇದಕ್ಕೆ ಪಾಶ್ಚಾತ್ಯ ಶಕ್ತಿಗಳ ಬೆಂಬಲ ಸಹ ಲಭಿಸಿತು. ಆದರೆ ಈ ಮೊದಲೇ ಪಾಲಸ್ತೀನಿಯನ್ನರು (ಇವರಲ್ಲಿ ಹೆಚ್ಚು ಜನ ಅರಬ್ ಮುಸ್ಲಿಮರು) ಅಲ್ಲಿ ವಾಸಿಸುತ್ತಿರುವರು. ಇದರಿಂದ ಆ ಪ್ರಾಂತಕ್ಕಾಗಿ ಇರುವರ್ಗಗಳ ನಡುವೆ ಘರ್ಷಣೆ ಪ್ರಾರಂಭವಾಯಿತು.

ಮಧ್ಯಪ್ರಾಚ್ಯದಲ್ಲಿ, ಪ್ರತ್ಯೇಕವಾಗಿ ಅರಬ್ ದ್ವೀಪಖಂಡದಲ್ಲಿ ದೊಡ್ಡ ಮೊತ್ತದಲ್ಲಿ ಪೆಟ್ರೋಲಿಯಂ ಸಂಗ್ರಹಗಳನ್ನು ಕಂಡುಹಿಡಿದಿದ್ದರಿಂದ ಸಮಸ್ಯೆ ಮತ್ತಷ್ಟು ಜಟಿಲವಾಯಿತು. ಅಮೇರಿಕಾ, ರಷ್ಯಾಗಳು ಈ ಪ್ರಾಂತವನ್ನು ತಮ್ಮ ಪ್ರಭಾವ ವಲಯದೊಳಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸಿದವು. ಇತರರು ಅದರ ಮೇಲೆ ನಿಯಂತ್ರಣ ಸಾಧಿಸದಂತೆ ತಡೆಯೊಡ್ಡಿದವು.

1947ರಲ್ಲಿ ವಿಶ್ವಸಂಸ್ಥೆ ಒಂದು ತೀರ್ಮಾನವನ್ನು ಅನುಮೋದಿಸಿತು. ಇದರ ಪ್ರಕಾರ ಪಾಲಸ್ತೀನಾವನ್ನು ಎರಡು ಭಾಗಗಳಾಗಿ ಮಾಡಿ ಒಂದು ಅರಬ್ಬರಿಗೆ, ಮತ್ತೊಂದು ಯಹೂದಿಗಳಿಗೆ ನೀಡಿತು. 1948ರಲ್ಲಿ ಬ್ರಿಟನ್ ತನ್ನ ಸೈನ್ಯವನ್ನು ಪಾಲಸ್ತೀನಾದಿಂದ ಉಪಸಂಹರಿಸಿಕೊಂಡಿತು. ಯಹೂದಿಗಳಿಗಾಗಿ ಇಸ್ರಾಯೆಲ್ ಏರ್ಪಟ್ಟಿತು. ಅರಬ್ಬರು ತಮ್ಮ ಮಾತೃಭೂಮಿಯನ್ನು ಬಿಟ್ಟುಕೊಡಲು ಒಪ್ಪಿಕೊಳ್ಳಲಿಲ್ಲ. ಇಸ್ರಾಯೆಲ್‌ನ್ನು ಕಾನೂನುಬದ್ಧ ದೇಶವಾಗಿ ಗುರ್ತಿಸಲು ಅರಬ್ಬರು ತಿರಸ್ಕರಿಸಿದರು. ಪಾಲಸ್ತೀನಾ ಬಗ್ಗೆ ಇಸ್ರಾಯೆಲ್ ದೇಶ ಅವಲಂಬಿಸಿದ ವಿಧಾನಗಳು ವಿಭೇದಗಳನ್ನು ಮತ್ತಷ್ಟು ರೊಚ್ಚಿಗೆಬ್ಬಿಸಿದವು. ಅರಬ್ಬರು ತಮ್ಮ ಆಸ್ತಿಗಳು, ಮನೆ ಬಿಟ್ಟು ಇತರ ಅರಬ್ ದೇಶಗಳಲ್ಲಿ ಆಶ್ರಯಾರ್ಥಿಗಳಾಗಿ ಆಶ್ರಯಪಡೆದರು.

ಈಜಿಪ್ಟ್ ಅಧ್ಯಕ್ಷ ಗಮಾಲ್ ಅಬ್ದೆಲ್ ನಾಸರ್ (1918 - 1970) ಅರಬ್ಬರನ್ನು ಒಂದುಗೂಡಿಸಲು ಪ್ರಯತ್ನಿಸಿದನು. ಇಸ್ರಾಯೆಲ್‌ನಲ್ಲಿನ ಬಹಿರಂಗ ಪ್ರದೇಶಗಳಲ್ಲಿ ಸ್ಫೋಟಕಗಳನ್ನು ನಡೆಸಲು ಆತನು ಆತ್ಮಾಹುತಿ ದಳಗಳನ್ನು ಏರ್ಪಾಟು ಮಾಡಿದನು. ಆತನು ಬ್ರಿಟನ್, ಫ್ರಾನ್ಸ್‌ಗಳಿಗೆ ವಿರುದ್ಧವಾಗಿ ಉಗ್ರ ವಿಧಾನಗಳನ್ನು ಅನುಸರಿಸಿ ಸುಯೇಜ್ ಕಾಲುವೆಯಿಂದ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕೆಂದು ಬ್ರಿಟನ್ ಮೇಲೆ ಒತ್ತಡ ತಂದನು. ಆಸ್ವಾನ್ ಆಣೆಕಟ್ಟು ಕಟ್ಟಿದ್ದರಿಂದ ಈಜಿಪ್ಟಿಗೆ ಅಮೇರಿಕಾ ತನ್ನ ಆರ್ಥಿಕ ಸಹಾಯವನ್ನು ನಿಲ್ಲಿಸಿಬಿಟ್ಟಿತು. ಪಾಶ್ಚಾತ್ಯ ದೇಶಗಳಿಗೆ ವಿರುದ್ಧವಾಗಿ ನಡೆದ ಹೋರಾಟದಲ್ಲಿ ಈಜಿಪ್ಟಿಗೆ ಆಯುಧಗಳು, ಮದ್ದುಗುಂಡುಗಳನ್ನು ಸರಬರಾಜು ಮಾಡಿದ ರಷ್ಯಾದ ಸಹಾಯದಿಂದ ನಾಸರ್ ಸುಯೆಜ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದನು.

1956ರಲ್ಲಿ ಪಾಶ್ಚಾತ್ಯ ದೇಶಗಳ ಬೆಂಬಲದಿಂದ ಈಜಿಪ್ಟ್‌ನ ಮೇಲೆ ಇಸ್ರಾಯೆಲ್ ದಾಳಿ ಮಾಡಿತು. ಯುದ್ಧವನ್ನು ವಿರಮಿಸಿಕೊಳ್ಳಬೇಕೆಂದು ಅಮೇರಿಕಾ, ರಷ್ಯಾಗಳು ಕೋರಿದವು. ಇಸ್ರಾಯೆಲ್ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. 1967ರಲ್ಲಿ ಅರಬ್ಬರು ಮತ್ತೊಮ್ಮೆ ಇಸ್ರಾಯೆಲ್ ಮೇಲೆ ದಾಳಿ ಮಾಡಿದರು. ಪ್ರತಿದಾಳಿಯೊಂದೇ ಉತ್ತಮ ರಕ್ಷಣಾತ್ಮಕ ಕ್ರಮವೆಂದು ಭಾವಿಸಿ ಈಜಿಪ್ಟಿನ ಮೇಲೆ ಇಸ್ರಾಯೆಲ್ ದಾಳಿ ಮಾಡಿ ಅದರ ವಾಯುದಳವನ್ನೆಲ್ಲಾ ನಾಶಗೊಳಿಸಿತು. ಅಷ್ಟೇ ಅಲ್ಲದೆ ಗಾಜಾ, ಗೋಲಾನ್ ಹೈಟ್ಸ್, ವೆಸ್ಟ್ ಬ್ಯಾಂಕ್ ಭೂಭಾಗಗಳನ್ನು ಆಕ್ರಮಿಸಿತು. ವಿಶ್ವಸಂಸ್ಥೆ ಠರಾವು (ತೀರ್ಮಾನ) ಮಾಡಿದರು. ಆಕ್ರಮಿಸಿದ ಪ್ರಾಂತಗಳನ್ನು ಮರಳಿ ಹಿಂದಿರುಗಿಸಲು ಇಸ್ರಾಯೆಲ್ ನಿರಾಕರಿಸಿತು. ಆದರೆ ಯುದ್ಧ ವಿರಾಮಕ್ಕೆ ಮಾತ್ರ ಅಂಗೀಕರಿಸಿತು. ಆ ಆಕ್ರಮಿತ ಪ್ರಾಂತಗಳು ಬಫರ್ ಪ್ರಾಂತವಾಗಿ ಕೆಲಸ ಮಾಡುತ್ತದೆಂದು ಇಸ್ರಾಯೆಲ್ ಭಾವಿಸಿತು. ಅರಬ್ಬರ ಚಳುವಳಿಯನ್ನು ಈ ಯುದ್ಧ ಬಲಹೀನಪಡಿಸಿತು.

ಅಷ್ಟರಲ್ಲಿ 1964ರಲ್ಲಿ ಜೋರ್ಡಾನ್‌ನಲ್ಲಿ ಪಾಲಸ್ತೀನಾ ವಿಮುಕ್ತಿ ಸಂಘ (ಪಿ.ಎಲ್.ಓ) ಉದಯಿಸಿತು. ಅರಬ್ ಗುಂಪುಗಳನ್ನೆಲ್ಲಾ ಒಂದುಗೂಡಿಸಿ ಒಂದು ಹೊಸ ದೃಷ್ಟಿಕೋನವನ್ನು ತಂದಿತು. ಕಳೆದುಕೊಂಡ ಭೂಮಿಯನ್ನು ಶಾಂತಿಯುತವಾಗಿ ಮರಳಿ ಪಡೆಯುವುದೇ ಇದರ ಗುರಿ. ಆದರೆ 1967ರಲ್ಲಿ ಯಾಸರ್ ಅರಾಫತ್ ನಾಯಕತ್ವದಲ್ಲಿ ಪಿಎಲ್‌ಓ ಇಸ್ರಾಯೆಲ್ ಮೇಲೆ ದಾಳಿ ಮಾಡಬೇಕೆಂದು ಅರಬ್ ದೇಶಗಳ ಮೇಲೆ ಒತ್ತಡ ತರಲಾಂಭಿಸಿತು. ಆದರೆ ಇದಕ್ಕೆ ಅರಬ್ ದೇಶಗಳು ಅಷ್ಟು ಉತ್ಸಾಹ ತೋರಲಿಲ್ಲ. ಇದರಿಂದ

SCERT TELANGANA

ಪಿಎಲ್‌ಒದಿಂದ ಒಂದು ವರ್ಗ ಅರಾಫತ್ ನಾಯಕತ್ವದಲ್ಲಿ ಬೇರ್ಪಟ್ಟು ವಿಮಾನಗಳ ಹೈಜಾಕಿಂಗ್, 1972 ಸೆಪ್ಟೆಂಬರ್‌ನಲ್ಲಿ ಮ್ಯುನಿಚ್ ಒಲಂಪಿಕ್ಸ್‌ನಲ್ಲಿ ಇಜ್ರಾಯೆಲ್‌ಗೆ ಸೇರಿದ ಒಲಂಪಿಕ್ ಬೃಂದವನ್ನು ಅಪಹರಿಸಿ ಅನೇಕ ಕ್ರೀಡಾಕಾರರನ್ನು ಕೊಲ್ಲುವುದಂತಹ ಉಗ್ರವಾದ ಕ್ರಮಗಳನ್ನು ಕೈಗೊಂಡಿತು. ಪಾಲಸ್ತೀನಿಯನ್ನರ ಈ ದಾಳಿಗಳನ್ನು ಕಾರಣವಾಗಿ ಮಾಡಿಕೊಂಡು ಇಜ್ರಾಯೆಲ್ ಅವರ ಮೇಲೆ ಪ್ರತಿದಾಳಿಗಳನ್ನು ಮಾಡಿ, ತಾವು ಹಿಂದೆ ನೀಡಿದ ಮಾತನನ್ನು ಜಾರಿಗೆ ತರಲು ನಿರಾಕರಿಸಿತು.

ಚಿತ್ರ 2 : 1947 ರಿಂದ ಇಂದಿನವರೆಗೂ ಪಾಲಸ್ತೀನಾ ಕಳೆದುಕೊಂಡ ಭೂಮಿ



ದಾಳಿ, ಪ್ರತಿದಾಳಿಗಳಿಂದ ಈ ಪ್ರಾಂತವೆಲ್ಲಾ ದಿನನಿತ್ಯ ಯುದ್ಧವಾತಾವರಣಗಳಿಂದ ಉಗ್ರವಾದಿಗಳ ದಾಳಿಗಳಿಂದ ಇರುತ್ತಿತ್ತು. ಪಿಎಲ್‌ಒ ಪರಸ್ಪರ ಘರ್ಷಣೆಗಳಿಗೆ ನಿಲ್ಲುವ ಅನೇಕ ಚಿಕ್ಕ ವರ್ಗಗಳಾಗಿ ಒಡೆದು ಹೋಯಿತು. ಕೊನೆಗೆ ಅರಫತ್ ಉಗ್ರವಾದವನ್ನು ಬಿಟ್ಟು ಇಜ್ರಾಯೆಲ್ ನಿರ್ಮಾಣವನ್ನು ಒಪ್ಪುವುದರ ಮೂಲಕ ಶಾಂತಿಯುತ ಪರಿಷ್ಕಾರಗಳನ್ನು ಕಂಡುಕೊಳ್ಳಲು ಅಂಗೀಕರಿಸಿದನು. ದೀರ್ಘಕಾಲದ ಯುದ್ಧವನ್ನು ಮುಕ್ತಾಯಗೊಳಿಸಲು ಆತನು ಇಜ್ರಾಯೆಲ್ ನೊಂದಿಗೆ ಮಾತುಕತೆ ನಡೆಸಿ ಪಾಲಸ್ತೀನಿಯನ್ನರ ಸ್ವಯಮಾಡಳಿತಕ್ಕೆ ಸಂಬಂಧಿಸಿದ ಅನೇಕ ಒಪ್ಪಂದಗಳನ್ನು ಮಾಡಿಕೊಂಡನು. ವೆಸ್ಟ್ ಬ್ಯಾಂಕ್‌ನಿಂದ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳುವುದಲ್ಲದೆ ಪಾಲಸ್ತೀನಾದಲ್ಲಿನ ಅರಬ್ ವಾಸಿಗಳಿಗೆ ಮತದಾನದ ಹಕ್ಕು ನೀಡಲು ಇಜ್ರಾಯೆಲ್ ಅಂಗೀಕರಿಸಿತು. ಆದರೆ ಇಜ್ರಾಯೆಲ್ ತನ್ನ ಮಾತನ್ನು ಉಳಿಸಿಕೊಳ್ಳದೇ ಯಾವುದೋ ಒಂದು ಕಾರಣದಿಂದ ಪಾಲಸ್ತೀನಿಯನ್ನರ ಮೇಲೆ ದಾಳಿಗಳನ್ನು ಮುಂದು ವರೆಸಿದ್ದರಿಂದ ಈ ಒಪ್ಪಂದಗಳು ಯಶಸ್ವಿಯಾಗಲಿಲ್ಲ. ಪಾಲಸ್ತೀನಿಯನ್ ದೇಶಕ್ಕೆ ಪಿಎಲ್‌ಒವನ್ನು ಶಾಸನಬದ್ಧ ಪ್ರತಿನಿಧಿಯಾಗಿ, ಅರಾಫತ್ 2004ರಲ್ಲಿ ಮರಣ ಹೊಂದಿದನು. ವಿಷಾಹಾರವನ್ನು ನೀಡಿ ಆತನನ್ನು ಕೊಲೆಮಾಡಿದರೆನ್ನುವ ಅನುಮಾನವಿದೆ.

ಇಲ್ಲಿಗೆ ಪಾಲಿಸ್ತೀನಿಯನ್ನರು ದೇಶ ಬಹಿಷ್ಕರಣೆ, ಯುದ್ಧಗಳಂತಹ ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಾ, ತಮ್ಮ ಸ್ವಂತ ದೇಶಕ್ಕಾಗಿ, ಪ್ರಶಾಂತ ಜೀವನಕ್ಕಾಗಿ ಹೋರಾಟವನ್ನು ನಡೆಸುತ್ತಾ ಇದ್ದಾರೆ.

ಮಧ್ಯಪ್ರಾಚ್ಯ (ಗಲ್ಫ್) ಪ್ರಾಂತಗಳಲ್ಲಿ ರಾಷ್ಟ್ರೀಯವಾದ ಭಾವನೆಯ ಬೆಳೆವಣಿಗೆ:

(The Growth of Nationalism in the Middle East):

ಇಜ್ರಾಯೆಲ್‌ಗೆ ಅಮೇರಿಕಾದ ಬೆಂಬಲ ಮುಂದುವರೆಸುತ್ತಿ ರುವುದರಿಂದ, ಪಾಲಸ್ತೀನಿಯನ್ನರ ಕರುಣಾಜನಕ ಪರಿಸ್ಥಿತಿಗಳ ಕಾರಣದಿಂದ ಈ ಪ್ರಾಂತದಲ್ಲಿ ಅಮೇರಿಕಾ ವಿರೋಧ ಭಾವನೆಗಳು ವೇಗವಾಗಿ ವಿಸ್ತರಿಸಿದವು. ತಮಗೂ, ತಮ್ಮ ಮಿತ್ರ ದೇಶಗಳಿಗೂ ತೈಲ ಸಂಪನ್ಮೂಲಗಳನ್ನು ಒದಗುವಂತೆ ಮಾಡಲು ಈ ಪ್ರಾಂತದಲ್ಲಿನ ಅಪ್ರಜಾಪ್ರಭುತ್ವ ಸರ್ಕಾರಗಳಿಗೆ ಅಮೇರಿಕಾ ಬೆಂಬಲ ನೀಡುವುದರಿಂದ ಸಹ ಅದು ಜನರ ದ್ವೇಷಕ್ಕೆ ಗುರಿಯಾಯಿತು. ಮರುಭೂಮಿ ಪ್ರಾಂತದಲ್ಲಿ ಯಾವುದೇ ಇತರ ಸಂಪನ್ಮೂಲಗಳಿಲ್ಲದ ಈ ಪ್ರಾಂತದ ಜನರ ಸಂಕ್ಷೇಮಕ್ಕಾಗಿ ತೈಲಸಂಪನ್ಮೂಲಗಳಿಂದ ಬಂದ ಆದಾಯವನ್ನು ವಿನಿಯೋಗಿಸಬೇಕೆಂದು ಜನರು ಕೋರಿಕೊಂಡರು. 1968ರಲ್ಲಿ ಇರಾಕ್‌ನಲ್ಲಿ ಹೋರಾಟ ಮಾಡಿ ಅರಬ್ ರಾಷ್ಟ್ರೀಯವಾದ ಸೋಷಿಯಲಿಜಂ ಎನ್ನು ಜಂಟಿ ಘೋಷಣೆಗಳೊಂದಿಗೆ ಸದ್ದಾಂಹುಸ್ಸೇನ್ ಅಧಿಕಾರಕ್ಕೆ ಬಂದನು. ಸೋಷಿಯಲಿಜಂ ಎಂದರೆ ಅವರ ಉದ್ದೇಶದಲ್ಲಿ ತೈಲ ಸಂಪನ್ಮೂಲಗಳ ರಾಷ್ಟ್ರೀಕರಣ,

SCERT TELANGANA

ಪೆಟ್ರೋಲಿಯಂನಿಂದ ಬಂದ ಆದಾಯವನ್ನು ನಾಗರೀಕರ ಸಂಕ್ಷೇಮ ಕ್ರಮಗಳಿಗಾಗಿ ಸರ್ಕಾ ಖರ್ಚು ಮಾಡುವುದು. 1969ರಲ್ಲಿ ಇದೇ ವಿಧವಾದ ಪರಿಣಾಮಗಳು ಲಿಬಿಯಾದಲ್ಲಿಯೂ ನಡೆದವು. (ಇದರ ಕುರಿತು ನೀವು ಒಂಭತ್ತನೇ ತರಗತಿಯಲ್ಲಿನ 19ನೇ ಅಧ್ಯಾಯದಲ್ಲಿ ಓದಿದ್ದೀರಿ.) ಈ ಸರ್ಕಾರಗಳು ಸಂಕ್ಷೇಮ ವಿಧಾನಗಳೊಂದಿಗೆ ಒಬ್ಬ ವ್ಯಕ್ತಿ ಇಲ್ಲವೇ ಚಿಕ್ಕ ಗುಂಪಿನ ನಾಯಕತ್ವದಲ್ಲಿ ಆಡಳಿತ ನಡೆಸಿದರು. ಯಾವುದೇ ಪ್ರಜಾಪ್ರಭುತ್ವ ಚಳುವಳಿಗಳಾಗಲೀ, ವಿರೋಧವಾಗಲೀ ಇವು ಅನುಮತಿಸಲಿಲ್ಲ.

ಅನೇಕ ಪ್ರಾಂತಗಳಲ್ಲಿ ಅಮೇರಿಕಾಕ್ಕೆ, ಅಮೇರಿಕಾ ಬೆಂಬಲ ನೀಡಿದ ಸರ್ಕಾರಗಳಿಗೆ ವಿರೋಧವು ಧರ್ಮದ ಬಣ್ಣ ಪಡೆದುಕೊಂಡಿತು. ಸಂಪತ್ತನ್ನು, ಅವಕಾಶಗಳನ್ನು ಎಲ್ಲರಿಗೂ ಸಮಾನವಾಗಿ ಹಂಚಬೇಕೆಂಬ ಭಾವನೆಗೆ ರಾಷ್ಟ್ರೀಯವಾದ ಶಕ್ತಿಗಳಲ್ಲದೇ ಆಯಾ ದೇಶಗಳಲ್ಲಿ ಧಾರ್ಮಿಕ ಸಂಪ್ರದಾಯವಾದಿಗಳು ಅಧಿಕಾರಕ್ಕೆ ಬರಲು ಬೆಂಬಲ ನೀಡಿದವು. 1979ರಲ್ಲಿ ಇರಾನ್‌ನಲ್ಲಿ ಕ್ರಾಂತಿ ಸಂಭವಿಸಿ (ಅಮೇರಿಕಾ ಬೆಂಬಲ ನೀಡಿದ) ಇರಾನ್ ರಾಜನನ್ನು ತೊಲಗಿಸಿ ಷಿಯಾ ಇಸ್ಲಾಮಿಕ್ ಧರ್ಮಗುರುಗಳು, ಪ್ರಜಾಪ್ರಭುತ್ವ ಬದ್ಧವಾಗಿ ಆಯ್ಕೆ ಯಾದ ನಾಯಕರು ಸೇರಿ ನಿರ್ವಹಿಸುವ ಹೊಸ ಸರ್ಕಾರವನ್ನು ಏರ್ಪಾಟು ಮಾಡಿಕೊಂಡರು.

- ಅರಬ್ಬರು, ಪಾಲಸ್ತೀನಿಯನ್ನರ ನಡುವೆ ಘರ್ಷಣೆಗಳಿಗೆ ಕಾರಣಗಳೇನು ?
- ಘರ್ಷಣೆಗಳಲ್ಲಿ ಪಾಲಸ್ತೀನಿಯನ್ನರು ಉಗ್ರವಾದ ಸಿದ್ಧಾಂತವನ್ನು ಏಕೆ ಆರಿಸಿಕೊಂಡರು ? ಇದರ ಫಲಿತಾಂಶಗಳೇನು ?
- ಕೆಲವು ಜನ ಪಾಲಸ್ತೀನಿಯನ್ನರು ಉಗ್ರವಾದ ಸಿದ್ಧಾಂತವನ್ನು ಏಕೆ ಆರಿಸಿಕೊಂಡರು ? ಇದರ ಫಲಿತಾಂಶಗಳೇನು ?
- ಶರಣಾರ್ಥಿಗಳ ಶಿಬಿರಗಳಲ್ಲಿರುತ್ತಾ, ನಿರಂತರ ಯುದ್ಧ ಭಯ, ಬಡತನವನ್ನು ಎದುರಿಸುತ್ತಿರುವ ಪಾಲಸ್ತೀನಿಯನ್ನರ ಜೀವನ ಪರಿಸ್ಥಿತಿಗಳ ಕುರಿತು ತಿಳಿದುಕೊಳ್ಳಿರಿ.

ಸೋವಿಯತ್ ಸೈನಿಕರು ಮರಳಿ ಹೋದ ನಂತರ ಅಫ್ಘಾನಿಸ್ತಾನದಲ್ಲಿ ತಾಲೀಬಾನರು ಅಧಿಕಾರದಲ್ಲಿ ಬಂದು ತೀವ್ರವಾದ ಇಸ್ಲಾಮಿಕ್ ಸರ್ಕಾರವನ್ನು ಏರ್ಪಾಟು ಮಾಡಿದರು. ಧಾರ್ಮಿಕ ಗ್ರಂಥಗಳಲ್ಲಿರುವ ನಿಯಮಗಳನ್ನು ಜನರು ಖಂಡಿತವಾಗಿ ಪಾಲಿಸಬೇಕೆಂದು ಜನರ ಮೇಲೆ ಒತ್ತಡ ತಂದರು. ಈ ಕಾರಣದಿಂದ ಮಹಿಳೆಯರಿಗೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಜನರಿಗೆ ಮೂಲಭೂತ ಸ್ವಾತಂತ್ರ್ಯ, ಸಮಾನತ್ವ ಇಲ್ಲದಂತಾದವು.

21ನೇ ಶತಮಾನದ ಆರಂಭದಲ್ಲಿ ಅರಬ್ಬರಲ್ಲಿ ಅಸಂತೃಪ್ತಿ ಹೆಚ್ಚಾಗಿ, ಇದರ ಫಲವಾಗಿ ಮತಪರ ಉಗ್ರವಾದ ಹೆಚ್ಚಿತು. ಕೆಲವು ಜನ ಅರಬ್ ಉಗ್ರವಾದಿಗಳು ಅಮೇರಿಕಾಕ್ಕೆ ಸೇರಿದ ಎರಡು ವಿಮಾನಗಳನ್ನು ಹೈಜಾಕ್ ಮಾಡಿ ಅವುಗಳಿಂದ ನ್ಯೂಯಾರ್ಕ್‌ನಲ್ಲಿನ ಪ್ರಪಂಚ ವಾಣಿಜ್ಯ ಕೇಂದ್ರದೊಳಗೆ ಅಪ್ಪಳಿಸಿದ್ದರಿಂದ ಆ ಕಟ್ಟಡಗಳು ಉರುಳಿ ಕೆಲವು ಸಾವಿರ ಜನರು ಮರಣ ಹೊಂದಿದರು. ಇದರಿಂದ ತಾಲೀಬನ್ನರ ಮೇಲೆ ಅಮೇರಿಕಾ ಯುದ್ಧ ಪ್ರಕಟಿಸಿ ಕೊನೆಗೆ ಇರಾಕ್ ಮೇಲೆ ಸಹ ಯುದ್ಧಕ್ಕೆ ಇಳಿಯಿತು. ಇತ್ತೀಚೆಗೆ ನಡೆದ ಈ ಘಟನೆಗಳ ಕುರಿತು ಮತ್ತಷ್ಟು ವಿವರಗಳನ್ನು ವಾರ್ತಾಪತ್ರಿಕೆಗಳಿಂದ, ವಾರಪತ್ರಿಕೆಗಳಿಂದ ತಿಳಿದುಕೊಳ್ಳಿರಿ.

ಶಾಂತಿ ಚಳುವಳಿಗಳು ಯುಎಸ್‌ಎಸ್‌ಆರ್ ಪತನ, ಶೀತಲ ಸಮರ ಅಂತ್ಯ (Peace Movements, Collapse of the USSR and the end of the Cold War) :

ಕಾಲಕಳೆಯುತ್ತಿದ್ದಂತೆ ಆಯುಧ ಪೈಪೋಟಿಯನ್ನು ಕಡಿಮೆ ಮಾಡಿ, ಅಣ್ವಾಯುಧಗಳನ್ನು ನಾಶಪಡಿಸಬೇಕೆಂದು ಯುಎಸ್‌ಎಸ್‌ಆರ್, ಅಮೇರಿಕಾಗಳ ಮೇಲೆ ಜನರು ತೀವ್ರ ಒತ್ತಡತರಲಾರಂಭಿಸಿದರು. ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ತಿಳಿದುಕೊಳ್ಳುತ್ತೀರಿ. ಇದರ ಫಲವಾಗಿ ಎರಡು ದೇಶಗಳು ವಿಚಾರ ವಿನಿಮಯ ನಡೆಸಿ ಆಯುಧ ಪೈಪೋಟಿಯನ್ನು, ಸಂಗ್ರಹಗಳನ್ನು ಕಡಿಮೆ ಮಾಡಿಕೊಳ್ಳಬೇಕಾಗಿ ಬಂದಿತು. ಅಂತಿಮವಾಗಿ 1985-1991 ರ ನಡುವೆ ಅಣು ಪರೀಕ್ಷೆಗಳ ಮೇಲೆ ನಿಷೇಧ ವಿಧಿಸಿದರು.

ಯುಎಸ್‌ಎಸ್‌ಆರ್‌ನಲ್ಲಿ ಮಿಹಾಯಿಲ್ ಗೋರ್ಬಚೇವ್ ಅಧಿಕಾರಕ್ಕೆ ಬಂದಿದ್ದರಿಂದ ಇದು ಸಾಧ್ಯವಾಯಿತೆಂದು ಹೇಳಬಹುದು. ಯುಎಸ್‌ಎಸ್‌ಆರ್‌ನಲ್ಲಿ ತೀವ್ರ ಬದಲಾವಣೆಗಳನ್ನು ತಂದು, ಮತ್ತಷ್ಟು ಪಾರದರ್ಶಕವಾಗಿ ಮಾಡಿ ಅದರ ರಾಜಕೀಯಗಳನ್ನು ಬದಲಾಯಿಸಲು ಗೋರ್ಬಚೇವ್ ಪ್ರಯತ್ನಿಸಿದನು. ಆತನು ಉದಾರವಾದ ಸಿದ್ಧಾಂತಗಳನ್ನು ಹೊಂದಿದವನು, ಆರ್ಥಿಕ ವ್ಯವಸ್ಥೆ ಮರಳಿ

SCERT TELANGANA

ಪುನರುಜ್ಜೀವಿತಗೊಳಿಸಲು ಆತನು ಕೆಲವು ಸುಧಾರಣೆಗಳನ್ನು ತಂದು ಪಾಶ್ಚಾತ್ಯ ದೇಶಗಳೊಂದಿಗೆ ಸಂಬಂಧಗಳನ್ನು ಉತ್ತಮಪಡಿಸಲು ಪ್ರಯತ್ನಿಸಿದನು. ಈತನು ಪ್ರವೇಶಪಡಿಸಿದ ಸುಧಾರಣೆಗಳನ್ನು ಭಗ್ಲಾಸ್‌ನೋಸ್ತ್‌ಫಿ, ಭಪೆರ್ರಿಸ್ಟೊತ್ರಯಿಕಾಫಿವಾಗಿ ವ್ಯಾಖ್ಯಾನಿಸುತ್ತಾರೆ.

- ಅರಬ್ ಸೋಷಿಯಲಿಸ್ಟ್ ರಾಷ್ಟ್ರೀಯವಾದಕ್ಕೂ, ಮತಪರ ರಾಷ್ಟ್ರೀಯವಾದಕ್ಕೂ ನಡುವೆ ವ್ಯತ್ಯಾಸಗಳೇನು ?
- ಇರಾನ್‌ನಲ್ಲಿಯೂ, ತಾಲಿಬನ್ನರ ಅಡಿಯಲ್ಲಿರುವ ಅಫ್ಘಾನಿಸ್ತಾನದಲ್ಲಿಯೂ ಸಂಬಂಧಿಸಿದ ಪರಿಣಾಮಗಳನ್ನು ತಿಳಿದುಕೊಂಡು ಮತಪರ ಸರ್ಕಾರಗಳು ಕೆಲಸ ಮಾಡುವ ವಿಧಾನವನ್ನು ಅರ್ಥಮಾಡಿಕೊಳ್ಳಿ.

ಇದೇ ಸಮಯದಲ್ಲಿ ಪೂರ್ವ ಯೂರೋಪ್ ದೇಶಗಳು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾಗ ಯುಎಸ್‌ಎಸ್‌ಆರ್ ಅವರಿಗೆ ಸಹಾಯವಾಗುವ ಸ್ಥಿತಿಯಲಿಲ್ಲ. ಇದರ ಫಲವಾಗಿ ಸ್ವತಂತ್ರ, ಪ್ರಜಾಪ್ರಭುತ್ವ, ಆರ್ಥಿಕ ಸುಧಾರಣೆಗಳನ್ನು ಕೋರುತ್ತಾ ಪೂರ್ವಯೂರೋಪ್‌ದಲ್ಲೆಲ್ಲಾ ಪ್ರಜಾ ಚಳುವಳಿಗಳು ಹುಟ್ಟಿಕೊಂಡವು. ಇದರ ಪರಿಣಾಮವಾಗಿ ದೇಶವನ್ನು ನಡೆಸಲಾರದ ಸರ್ಕಾರಗಳು ಕುಸಿದುಬಿದ್ದವು. ಪಶ್ಚಿಮ ಜರ್ಮನಿಯಿಂದ ಪೂರ್ವ ಪ್ರಾಂತವನ್ನು ಬೇರೆ ಮಾಡುತ್ತಿದ್ದ ಬರ್ಲಿನ್ ಗೋಡೆಯನ್ನು ಹೊಡೆದು ಹಾಕುವುದು ಪೂರ್ವ ಯೂರೋಪ್ ಪರಿಣಾಮಗಳನ್ನು ಸೂಚಿಸುತ್ತದೆ. ಜರ್ಮನಿಯ ಜನರು ವಿರೋಧಿಸಿದ ಈ ಗೋಡೆ ಯುಎಸ್‌ಎಸ್‌ಆರ್‌ನ ಜರ್ಮನಿಯ ಮೇಲೆ ನಿಯಂತ್ರಣಕ್ಕೆ ಸಂಕೇತವಾಗಿದ್ದು ಎಷ್ಟೋ ಖ್ಯಾತಿ ಪಡೆದಿದೆ.

ಚಿತ್ರ 19.7: ಪೂರ್ವ, ಪಶ್ಚಿಮ ಜರ್ಮನಿಯನ್ನು ವಿಭಜಿಸಿದ ಬರ್ಲಿನ್‌ಗೋಡೆಯನ್ನು ಹೊಡೆಯುತ್ತಿರುವ ದೃಶ್ಯ

ಯುಎಸ್‌ಎಸ್‌ಆರ್‌ನಲ್ಲಿಯೇ ಕಮ್ಯೂನಿಸ್ಟ್ ಸಂಪ್ರದಾಯವಾದಿಗಳು ಗೋರ್ಬಚೇವ್‌ನನ್ನು ಅಧಿಕಾರದಿಂದ ತೊಲಗಿಸಿಲು ಒಂದು ಪ್ರತಿಭಟನೆಯನ್ನು ಪ್ರೋತ್ಸಾಹಿಸಿದನು. ಆದರೆ ರಷ್ಯನ್ ಪಾರ್ಲಿಮೆಂಟ್ ಪರವಾಗಿ ಬೋರಿಸ್ ಎಲ್ಸಿನ್ ಈ ಪ್ರತಿಭಟನೆಯನ್ನು ತಡೆದನು. ಆತನು ಅಂತಿಮವಾಗಿ ಅಧ್ಯಕ್ಷ ಚುನಾವಣೆಯಲ್ಲಿ ಜಯ ಸಾಧಿಸಿ 1991ರಲ್ಲಿ ಯುಎಸ್‌ಎಸ್‌ಆರ್‌ನ್ನು ರದ್ದುಪಡಿಸುತ್ತಿರುವಂತೆ ಘೋಷಿಸಿದನು. ಮಾಜೀ ಯುಎಸ್‌ಎಸ್‌ಆರ್‌ನಲ್ಲಿನ ರಾಜ್ಯಗಳು ಸ್ವತಂತ್ರ ದೇಶಗಳಾದವು. ನಂತರ ಇವುಗಳಲ್ಲಿ ಬಹಳಷ್ಟು ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಂಡವು.

ಯುಎಸ್‌ಎಸ್‌ಆರ್ ಕುಸಿದು ಹೋಗಿದ್ದರಿಂದ ಪ್ರಪಂಚ ರಾಜಕೀಯಗಳಲ್ಲಿ ಹೊಸ ಯುಗ ಆರಂಭವಾಯಿತು. ಅದು ಏಕ ಧೃವ ಪ್ರಪಂಚವಾಗಿ ಬದಲಾಯಿತು. ಪ್ರಪಂಚೀಕರಣ ಯುಗ ಪ್ರಾರಂಭವಾಯಿತು. ಇದರ ಕುರಿತು ನೀವು ಮತ್ತೊಂದು ಅಧ್ಯಾಯದಲ್ಲಿ ತಿಳಿದುಕೊಳ್ಳುವಿರಿ.

ಭಾರತದೇಶ ಮತ್ತು ಅದರ ನೆರೆಹೊರೆ ದೇಶಗಳು (India and its Neighbours) :

ಭಾರತದೇಶವನ್ನು ಅಲಿಪ್ತನೀತಿಯ ವ್ಯವಸ್ಥಾಪಕ ದೇಶವೆಂದೂ, ಎರಡು ಅಗ್ರ ದೇಶಗಳ ನಡುವೆ ತನ್ನ ಸ್ವತಂತ್ರ ನಿಲುವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿತೆಂದು ಓದಿದ್ದೇವೆ. ಗಾಂಧೀವಾದ ಸಿದ್ಧಾಂತಗಳಾದ ಶಾಂತಿ, ಅಹಿಂಸೆಗಳ ಆಧಾರವಾಗಿ ತನ್ನ ವಿದೇಶಾಂಗ ನೀತಿಯನ್ನು ರೂಪಿಸಿಕೊಳ್ಳುವುದಕ್ಕೆ ಭಾರತದೇಶ ಪ್ರಯತ್ನಿಸಿತು. ಶಾಂತಿಯ ಬಗ್ಗೆ ತನ್ನ ಧೃಡ ಸಂಕಲ್ಪವನ್ನು ಸಾರಲು ಜವಹಾರ್‌ಲಾಲ್ ನೆಹ್ರೂ ಪ್ರಖ್ಯಾತವಾದ ತನ್ನ ಪಂಚಶೀಲ ಸೂತ್ರಗಳನ್ನು ಪ್ರತಿಪಾದಿಸಿದರು.

1. ಪರಸ್ಪರ ಸಾರ್ವಭೌಮತ್ವವನ್ನು, ಭೌಗೋಳಿಕ ಸಮಗ್ರತೆಯನ್ನು ಗೌರವಿಸುವುದು.
2. ಪರಸ್ಪರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.
3. ಪರಸ್ಪರ ಆಕ್ರಮಣಗಳಿಗೆ ಒಳಗಾಗದಿರುವುದು, ವಿವಾದಗಳನ್ನು ಅವಗಾಹನೆಯೊಂದಿಗೆ ಪರಿಷ್ಕರಿಸಿಕೊಳ್ಳುವುದು.

SCERT TELANGANA

- ಎರಡು ಧ್ರುವಗಳ, ಏಕ ಧ್ರುವ ಪ್ರಪಂಚ ಎನ್ನುವ ಪದಗಳನ್ನು ವಿವರಿಸಿರಿ.

4. ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಪರಸ್ಪರ ಗೌರವ, ಸಹಕಾರಗಳಿಗಾಗಿ ಕೃಷಿ ಮಾಡುವುದು.

5. ಶಾಂತಿಯುತ ಸಹಜೀವನವನ್ನು ಪ್ರೋತ್ಸಾಹಿಸುವುದು.

ಇತರ ದೇಶಗಳೊಂದಿಗೆ, ಪ್ರತ್ಯೇಕವಾಗಿ ನೆರೆಯ ರಾಷ್ಟ್ರಗಳಾದ ಚೈನಾ, ಪಾಕಿಸ್ತಾನ್, ಶ್ರೀಲಂಕಾ ನಂತರ ಬಂಗ್ಲಾದೇಶಗಳೊಂದಿಗೆ ಭಾರತ ದೇಶದ ಸಂಬಂಧಗಳನ್ನು ಈ ಸೂತ್ರಗಳು ಪ್ರಭಾವಿತಗೊಳಿಸಿದವು.

ನೆರೆಹೊರೆ ದೇಶಗಳೊಂದಿಗೆ ಭಾರತ ದೇಶದ ಸಂಬಂಧಗಳ ಬಗೆಗ ಕೆಳಗೆ ನೀಡಿದ್ದನ್ನು ಓದಿ, ಅದು ಎಷ್ಟರಮಟ್ಟಿಗೆ ಈ ಪಂಚಶೀಲ ಸೂತ್ರಗಳ ಮೇಲೆ ಆಧಾರಪಟ್ಟಿದೆಯೋ ತಿಳಿದುಕೊಳ್ಳಿ.

ಚೈನಾದೊಂದಿಗೆ ಭಾರತದೇಶದ ಸಂಬಂಧಗಳು (India's relation with China) :

ಸುದೀರ್ಘ ಹೋರಾಟ, ಹಿಂಸಾತ್ಮಕ ಕ್ರಾಂತಿಯ ನಂತರ 1949ರಲ್ಲಿ ಚೈನಾ ಕಮ್ಯುನಿಸ್ಟ್ ಗಣತಂತ್ರ ರಾಷ್ಟ್ರವಾಯಿತು. ಚೈನಾ ಕಮ್ಯುನಿಸ್ಟ್ ಪಾರ್ಟಿಯನ್ನು ಅಂಗೀಕರಿಸಿದ ಮೊದಲ ದೇಶಗಳಲ್ಲಿ ಭಾರತದೇಶವೂ ಒಂದು. ಹಿಂದೆ ವಿಶ್ವಸಂಸ್ಥೆ ಭದ್ರತಾ ಸಮಿತಿಯಲ್ಲಿ ಚಿಯಾಂಗ್-ಕೈ-ಷೇಕ್ ಸರ್ಕಾರಕ್ಕೆ ಇದ್ದ ಶಾಶ್ವತ ಸ್ಥಾನವನ್ನು ಇಂದು ಚೈನಾಕ್ಕೆ ನೀಡಬೇಕೆಂದು ಎನ್ನುವಲ್ಲಿ ಭಾರತ ತನ್ನ ಬೆಂಬಲ ಸೂಚಿಸಿದೆ. ಸಿದ್ಧಾಂತದ ವಿಬೇಧಗಳಿದ್ದರೂ ಬಾಂಡುಂಗ್ ಸಮಾವೇಶದಲ್ಲಿ ಪಾಲ್ಗೊಳ್ಳಲು ಚೈನಾಕ್ಕೆ ಭಾರತ ಸಹಾಯಪಟ್ಟಿದೆ. ಪಂಚಶೀಲ ಒಪ್ಪಂದಗಳ ಮೇಲೆ ಎರಡು ದೇಶಗಳು 1954 ಏಪ್ರೀಲ್ 29ರಂದು ಸಹಿ ಮಾಡಿದವು. ಎರಡು ದೇಶಗಳ ನಾಯಕರು ತಮ್ಮ ಇರುದೇಶಗಳನ್ನು ಸಂದರ್ಶಿಸಿದರು, ದೊಡ್ಡ ಸಂಖ್ಯೆಯಲ್ಲಿ ಜನರು ಅವರಿಗೆ ಸ್ವಾಗತ ಕೋರಿದರು.

ವಸಾಹತು ಆಡಳಿತ ಕಾಲದಲ್ಲಿ ಎರಡು ದೇಶಗಳ ನಡುವೆ ಸರಿಹದ್ದಾಗಿ ಮೆಕ್‌ಮೋಹನ್ ರೇಖೆ ಎಳೆದಿದ್ದಾರೆ. ನೆಹ್ರೂ ಅದನ್ನು ಒಪ್ಪಿದರು. ಚೈನಾ, ಭಾರತ ದೇಶಗಳ ಮಧ್ಯವಿರುವ ಟಿಬೆಟ್ ಸ್ವತಂತ್ರ ಬಫರ್ ಪ್ರಾಂತವಾಗಿ ಇರುತ್ತಿತ್ತು. ಆದರೆ ಹಿಂದಿನ ಚೈನಾ ಸಾಮ್ರಾಜ್ಯದಲ್ಲಿ ಟಿಬೆಟ್ ಪರಾಧೀನ ದೇಶವಾಗಿತ್ತೆಂದು ಹೇಳುತ್ತಾ, 1950ಟಿಬೆಟ್ಟನ್ನು ಚೈನಾ ತನ್ನಲ್ಲಿ ಸೇರಿಸಿಕೊಂಡಿತು. ಇದರಿಂದ ಭಾರತ ಚೈನಾ ದೇಶಗಳ ನಡುವೆ ಬಫರ್ ಪ್ರಾಂತ ಇಲ್ಲದಂತಾಯಿತು. ಟಿಬೆಟ್‌ನಲ್ಲಿ ನಡೆದ ಪ್ರತಿಭಟನೆಯನ್ನು ಚೈನಾ ತುಳಿದುಹಾಕಿತು. ದಲೈಲಾಮಾ ಆತನ ಸಾವಿರಾರು ಟಿಬೆಟ್ ಅನುಚರರು ತಪ್ಪಿಸಿಕೊಂಡು ಭಾರತದೇಶದಲ್ಲಿ ಆಶ್ರಯ ಪಡೆದರು. ಭಾರತದೇಶ ದಲೈಲಾಮಾನಿಗೆ ಆಶ್ರಯ ನೀಡಿತು. ಇದರಿಂದ ಭಾರತ - ಚೈನಾಗಳ ನಡುವೆ ವೈಷಮ್ಯ ಪ್ರಾರಂಭ ವಾಯಿತು. ಭಾರತ ದೇಶವನ್ನು ಚೈನಾ ಶತ್ರುವಾಗಿ ಭಾವಿಸುವುದು ಪ್ರಾರಂಭಿಸಿತು. ಇದಕ್ಕೆ ಮೊದಲು ಎರಡು ದೇಶಗಳ ನಡುವೆ ಸರಿಹದ್ದು ವಿವಾದ ಏರ್ಪಟ್ಟಿತ್ತು. ಲಡಖ್ ಪ್ರಾಂತದಲ್ಲಿನ ಅಕ್ಸಾಯಿ-ಚಿನ್ ಪ್ರಾಂತ, ಅರುಣಾಚಲ್ ಪ್ರದೇಶದಲ್ಲಿನ ಬಹಳ ಪ್ರಾಂತ ತಮ್ಮದೆಂದು ಚೈನಾ ತಿಳಿಸಿತು. ಅನೇಕ ಪ್ರಯತ್ನಗಳು, ಸುದೀರ್ಘ ಚರ್ಚೆಗಳ ನಂತರ ಸಹ ಇಂದಿಗೂ ಈ ವಿವಾದಗಳು ಪರಿಷ್ಕೃತಗೊಂಡಿಲ್ಲ.

ಭಾರತದೇಶದೊಂದಿಗೆ ಮಾಡಿಕೊಂಡ ಶಾಂತಿ ಒಪ್ಪಂದಗಳನ್ನು ಭಗ್ನಗೊಳಿಸುತ್ತಾ 1962 ಅಕ್ಟೋಬರ್‌ನಲ್ಲಿ ಭಾರತದೇಶದ ಮೇಲೆ ಚೈನಾ ದಾಳಿ ಮಾಡಿತು. ಈ ಅನಿರೀಕ್ಷಿತ ದಾಳಿಗೆ ಭಾರತದೇಶ ಸಂಸಿದ್ಧವಾಗಿಲ್ಲದಿದ್ದುದರಿಂದ ಇದರಲ್ಲಿ ತೀವ್ರ ನಷ್ಟವನ್ನು ಕಂಡಿತು. ಕೊನೆಗೆ ಚೈನಾ ಏಕಪಕ್ಷವಾಗಿ ಯುದ್ಧವಿರಾಮ ಘೋಷಿಸಿ ಸೈನ್ಯವನ್ನು ಹಿಂತೆಗೆದುಕೊಂಡಿತು. ಮರಳಿ ಸಾಧಾರಣ ಸಂಬಂಧಗಳ ಸ್ಥಾಪಿಸಲು ದಶಮಾನ ಕಾಲಕ್ಕೂ ಹೆಚ್ಚು ಸಮಯ ಹಿಡಿಯಿತು. ಪೂರ್ಣಮಟ್ಟದ ರಾಯಭಾರ ಸಂಬಂಧಗಳು 1976ರವರೆಗೂ ಸ್ಥಾಪಿಸಲಾಗಲಿಲ್ಲ.

ಇಂದು ಎರಡೂ ದೇಶಗಳು ಏಷಿಯಾದಲ್ಲಿ ಬಲಗೊಳ್ಳುತ್ತಿರುವ ಶಕ್ತಿಗಳಾಗಿ, ಆರ್ಥಿಕವಾಗಿ ಉನ್ನತ ಸ್ಥಾನದಲ್ಲಿ ಇರುವವೆಂದು ಗುರ್ತಿಸಲ್ಪಡುತ್ತಿವೆ. ಪ್ರಪಂಚದಲ್ಲಿಯೇ ಮುಖ್ಯ ಆರ್ಥಿಕ, ರಾಜಕೀಯ ಶಕ್ತಿಯಾಗಿ ಬೆಳೆಯ ಬೇಕೆಂಬ ಬಯಕೆ ಇಂದು ಎರಡೂ ದೇಶಗಳಿಗೆ ಇದೆ. ಆದುದರಿಂದ ಇವು ಒಂದಕ್ಕೊಂದು ರಾಜಕೀಯ, ಆರ್ಥಿಕ ಪೈಪೋಟಿದಾರರಿಗೆ ಪರಿಗಣಿಸುತ್ತಿವೆ. ಸರಿಹದ್ದುಗ ಹತ್ತಿರ ಆಗಾಗ ಕೆಲವು ಘಟನೆಗಳು ಸಂಭವಿಸುತ್ತಿದ್ದರೂ, ಶಾಂತಿ, ಸಾಮರಸ್ಯಗಳು ಸ್ಥಾಪಿಸಲು ಎರಡೂ ಸರ್ಕಾರಗಳು ಕ್ರಮಗಳು ಕೈಗೊಳ್ಳುತ್ತಿವೆ.

SCERT TELANGANA

ಭಾರತ – ಪಾಕಿಸ್ತಾನ್ ಸಂಬಂಧಗಳು (India's relation with Pakistan) :

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಒಂದು ಕಾಲದ ಬ್ರಿಟೀಷ್ ಇಂಡಿಯಾವನ್ನು ವಿಭಜಿಸುವುದರ ಮೂಲಕ ಪಾಕಿಸ್ತಾನ್, ಭಾರತದೇಶ ಸ್ವತಂತ್ರ ದೇಶಗಳಾದವು. ವಿಭಜನೆಯ ನಂತರ ಎರಡು ದೇಶಗಳ ನಡುವೆ ನಿರಂತರ ಘರ್ಷಣೆಗಳು ಮುಂದುವರೆಯುತ್ತಿವೆ. ಕಾಶ್ಮೀರ ಈ ಎರಡರ ನಡುವಿನ ಮುಖ್ಯವಾದ ವಿವಾದಾಸ್ಪದ ಅಂಶವಾಗಿ ಪರಿಣಮಿಸಿದೆ.

- ದಲೈಲಾಮ, ಆತನ ಟಿಬೆಟ್ ಅನುಚರರಿಗೆ ಭಾರತ ದೇಶ ಆಶ್ರಯ ನೀಡುವುದು ಸರಿಯಾದುದೇನಾ ?
- ಟಿಬೆಟ್‌ನ್ನು ನಿಯಂತ್ರಿಸಬೇಕೆಂದು ಚೈನಾ ಭಾವಿಸುವುದು ಸರಿಯಾದುದೇ ?
- ಸರಿಹದ್ದುಗಳಿಗೆ ಸಂಬಂಧಿಸಿದಂತೆ ಹಿಂದಿನ ವೈಷಮ್ಯಗಳನ್ನು ಮರೆತು ಎರಡು ದೇಶಗಳು ಎಷ್ಟರಮಟ್ಟಿಗೆ ಅರ್ಥಪೂರ್ಣ ಸಹಕಾರವನ್ನು, ಮಿತೃತ್ವವನ್ನೂ ಸಾಧಿಸಬಲ್ಲವು ಎಂದು ಭಾವಿಸುವಿರಿ?

ಎರಡು ದೇಶಗಳ ನಡುವೆ ಮೊದಲನೇ ಯುದ್ಧ ಕಾಶ್ಮೀರಕ್ಕಾಗಿ 1947–48 ರ ನಡುವೆ ನಡೆಯಿತು. ಆದರೆ ಇದು ಸಮಸ್ಯೆಯನ್ನು ಪರಿಹರಿಸಲಿಲ್ಲ. ಯುದ್ಧದಿಂದ ಕಾಶ್ಮೀರ ಎರಡಾಗಿ ವಿಭಜಿಸಲ್ಪಟ್ಟಿತ್ತ: ಪಾಕಿಸ್ಥಾನ್ ಆಕ್ರಮಿತ ಕಾಶ್ಮೀರ (ಪಿಒಕೆ), ಭಾರತ ದೇಶದಲ್ಲಿನ ಜಮ್ಮು–ಕಾಶ್ಮೀರ ರಾಜ್ಯ. ಈ ಎರಡನ್ನೂ ನಿಯಂತ್ರಣ ರೇಖೆ ಬೇರ್ಪಡಿಸುತ್ತಿದೆ.

1965ರಲ್ಲಿ ಭಾರತದೇಶಕ್ಕೆ ಪ್ರಧಾನಮಂತ್ರಿ ಯಾಗಿ ಲಾಲ್ ಬಹದೂರ್ ಶಾಸ್ತ್ರಿ ಇದ್ದರು. ಪಾಕಿಸ್ತಾನ ದಲ್ಲಿ ಸೈನಿಕ ನಿರಂಕುಶಾಧಿಕಾರಿ ಜನರಲ್ ಆಯುಬ್ ಖಾನ್ ಅಧಿಕಾರದಲ್ಲಿದ್ದನು. ಕಾಶ್ಮೀರನ್ನು ವಿಮುಕ್ತಿ ಗೊಳಿಸುವುದು ಎನ್ನುವ ಹೆಸರಿನಿಂದ ಭಾರತದೇಶದ ಮೇಲೆ ದಾಳಿ ಮಾಡಿದರೆ ಕಾಶ್ಮೀರದಲ್ಲಿ ದಂಗೆಯುಂಟಾಗುತ್ತದೆಂದು ಆಯುಬ್ ಖಾನ್ ಆಶಿಸಿದನು. ಆದರೆ, ಕಾಶ್ಮೀರಿನ ಜನರು ಇದಕ್ಕೆ ಸ್ಪಂದಿಸಲಿಲ್ಲ. ಯುದ್ಧದಲ್ಲಿ ಭಾರತ ಸರ್ಕಾರಕ್ಕೆ ಸಹಾಯ ಮಾಡಿದರು. ಲಾಹೋರನ್ನು ಗುರಿಯಾಗಿಟ್ಟುಕೊಂಡು ಪಂಜಾಬ್‌ನಿಂದ ಭಾರತ ಯುದ್ಧ ಮಾಡಿದ್ದರಿಂದ ಪಾಕಿಸ್ತಾನ್ ಕಾಶ್ಮೀರದಿಂದ ಹಿಂಜರಿಯದೇ ತಪ್ಪಲಿಲ್ಲ. ಯುದ್ಧ ವಿರಾಮಕ್ಕೆ ಅಂಗೀಕರಿಸುವಂತೆ ಎರಡು ದೇಶಗಳನ್ನು ವಿಶ್ವಸಂಸ್ಥೆ ಸೆಕ್ರೆಟರಿ ಜನರಲ್ ಆದ ಯುಥಾಂಟ್ ಒಪ್ಪಿಸಿದನು. ಯುದ್ಧ ವಿರಾಮದ ನಂತರ 1966ರಲ್ಲಿ ತಾಷ್ಕೆಂಟ್‌ನಲ್ಲಿ ಎರಡು ದೇಶಗಳ ಪ್ರಧಾನಮಂತ್ರಿಗಳು ಒಂದು ಒಪ್ಪಂದದ ಮೇಲೆ ಸಹಿ ಮಾಡಿದರು.

1970 ರ ಪ್ರಾರಂಭದಲ್ಲಿ ಪಾಕಿಸ್ತಾನ್ ತೀವ್ರ ಆಂತರಿಕ ಬಿಕ್ಕಟ್ಟನ್ನು ಎದುರಿಸಿತು. ಪಾಕಿಸ್ತಾನದಲ್ಲಿ ಸೈನಿಕ ನಿರಂಕುಶಾಧಿಕಾರಿಯಾದ ಜನರಲ್ ಯಾಹ್ಯಾಖಾನ್ ಪ್ರಜಾಪ್ರಭುತ್ವ ಸರ್ಕಾರವನ್ನು ಏರ್ಪಾಟು ಮಾಡುತ್ತೇನೆಂದು ವಾಗ್ದಾನ ಮಾಡಿ ಚುನಾವಣೆಗಳಿಗೆ ಆದೇಶಿಸಿದನು. ಚುನಾವಣೆಯಲ್ಲಿ ಪ್ರಜೆಗಳ ತೀರ್ಪು ಭಿನ್ನವಾಗಿ ಬಂದಿತು. ಪಶ್ಚಿಮ ಪಾಕಿಸ್ತಾನ್‌ನಲ್ಲಿ ಜಲ್ಫಿಕರ್ ಆಲಿ ಭುಟ್ಟೋ ಜಯಿಸಿದರೆ ಪೂರ್ವ ಪಾಕಿಸ್ತಾನದಲ್ಲಿ ಷೇಕ್ ಮುಜಿಬುರ್ ರೆಹ್ಮಾನ್ ನಾಯಕತ್ವದಲ್ಲಿನ ಆವಾಮಿ ಲೀಗ್ ಜಯ ಸಾಧಿಸಿತು. ಆದರೆ ಈ ಚುನಾವಣೆಗಳ ತೀರ್ಪಿಗಾಗಲೀ, ಪೂರ್ವ ಪಾಕಿಸ್ತಾನಿಗೆ ಮತ್ತಷ್ಟು ಸ್ವಾಯತ್ತತೆ ನೀಡುವುದಕ್ಕಾಗಲೀ ಪಾಕಿಸ್ತಾನ್ ಸರ್ಕಾರ ಅಂಗೀಕರಿಸಲಿಲ್ಲ. ಅದಕ್ಕೆ ಬದಲಾಗಿ ಮುಜಿಬುರ್ ರೆಹ್ಮಾನನ್ನು ಬಂಧಿಸಿ ತುಳಿತಕ್ಕೆ ನಿಂತರು. ಪೂರ್ವ ಪಾಕಿಸ್ತಾನದಿಂದ ಸಾವಿರಾರು ಜನ ನಿರಾಶ್ರಿತರು ಭಾರತದೇಶಕ್ಕೆ ಬರಲಾರಂಭಿಸಿದರು. ಮುಜಿಬುಲ್ ರೆಹ್ಮಾನ್ ಬೆಂಬಲಿಗರು ಭಮುಕ್ತಿ ಬಾಹಿನಿಫ ಹೆಸರಿನಿಂದ ವಿಮುಕ್ತಿ ಹೋರಾಟವನ್ನು ಪ್ರಾರಂಭಿಸಿದರು. ಭಾರತದೇಶದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಇದಕ್ಕೆ ಬೆಂಬಲವಾಗಿ ನಿಲ್ಲುವುದಲ್ಲದೆ ಅಂತರಾಷ್ಟ್ರೀಯ ಬೆಂಬಲವನ್ನು ಸಹ ಒಗ್ಗೂಡಿಸಲು ಪ್ರಯತ್ನಿಸಿದರು. ಭಾರತದೇಶಕ್ಕೆ ಬೆಂಬಲವಾಗಿ ನಿಂತ ಯುಎಸ್ಎಸ್ಆರ್‌ದೊಂದಿಗೆ ಮೈತ್ರಿ ಒಪ್ಪಂದದ ಮೇಲೆ ಭಾರತದೇಶ ಸಹಿ ಮಾಡಿತು.

ರೇಖಾಚಿತ್ರ 19.2 : ಭಾರತದೇಶ, ಪಾಕಿಸ್ಥಾನ್‌ಗಳ ಸೈನಿಕ ಖರ್ಚು



ಆಧಾರ: ಸ್ಟಾಕ್ ಹೊಂ ಅಂತರಾಷ್ಟ್ರೀಯ ಶಾಂತಿ ಪರಿಶೋಧನೆ ಸಂಸ್ಥೆ

SCERT TELANGANA

ಧರ್ಮ ಮತ್ತು ಯುದ್ಧ

ಯುದ್ಧ ಮುಗಿದ ನಂತರ ದೆಹಲಿಯಲ್ಲಿ ನಡೆದ ಒಂದು ಮೇಳದಲ್ಲಿ ಇದು ಮುಸ್ಲಿಮರು, ಹಿಂದುಗಳ ನಡುವಿನ ಯುದ್ಧವೆಂದು ಹೇಳುತ್ತಾ ಪಾಕಿಸ್ತಾನ್ ಧರ್ಮವನ್ನು ಉಪಯೋಗಿಸಿಕೊಳ್ಳಲು ಮಾಡಿದ ಪ್ರಯತ್ನವನ್ನು ಲಾಲ್‌ಬಹದೂರ್‌ಶಾಸ್ತ್ರಿ ದೂಷಿಸಿದರು. ಭಾರತದೇಶ ಜಾತ್ಯಾತೀತ ರಾಷ್ಟ್ರವೆಂದು ಗರ್ವದಿಂದ ಹೇಳಿದರು.

“ನಮ್ಮ ದೇಶದ ಪ್ರತ್ಯೇಕತೆ ಏನೆಂದರೆ ಇಲ್ಲಿ ಹಿಂದುಗಳು, ಮುಸ್ಲಿಮರು, ಕ್ರೈಸ್ತವರು, ಸಿಕ್ಕರು, ಪಾರ್ಸಿಗಳು ಇನ್ನೂ ಎಷ್ಟೋ ಧರ್ಮಗಳ ಪ್ರಜೆಗಳಿದ್ದಾರೆ, ಇಲ್ಲಿ ದೇವಾಲಯಗಳು, ಮಸೀದಿಗಳು, ಗುರುದ್ವಾರಗಳು, ಚರ್ಚ್‌ಗಳಿವೆ. ಆದರೆ ಇವುಗಳನ್ನು ನಾವು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಲು ಬಿಡುವುದಿಲ್ಲ..... ಭಾರತದೇಶಕ್ಕೂ, ಪಾಕಿಸ್ತಾನಕ್ಕೂ ನಡುವೆ ಇರುವ ವ್ಯತ್ಯಾಸವಿದೆ. ಪಾಕಿಸ್ತಾನ್ ತನ್ನನ್ನು ತಾನು ಇಸ್ಲಾಮಿಕ್ ದೇಶವಾಗಿ ಹೇಳುತ್ತಾ ಧರ್ಮವನ್ನು ರಾಜಕೀಯ ಅಂಶವಾಗಿ ಉಪಯೋಗಿಸಿಕೊಳ್ಳುತ್ತಿದೆ. ಭಾರತದೇಶದ ಪ್ರಜೆಗಳು ಯಾವ ಧರ್ಮವನ್ನಾದರೂ ಅನುಸರಿಸಬಹುದು, ಯಾವ ವಿಧವಾಗಿಯಾದರೂ ದೇವರನ್ನೂ ಆರಾಧಿಸಬಹುದು. ರಾಜಕೀಯಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬರೂ ಭಾರತೀಯರೇ!

1971 ಡಿಸೆಂಬರ್‌ನಲ್ಲಿ ಪಾಕಿಸ್ತಾನದೊಂದಿಗೆ ಪೂರ್ಣಮಟ್ಟದ ಯುದ್ಧ ಪ್ರಾರಂಭವಾಯಿತು. ಪೂರ್ವ ಪಾಕಿಸ್ತಾನ ವಿಮುಕ್ತಿ ಹೊಂದಿ ಬಾಂಗ್ಲಾದೇಶವಾಗಿ ಏರ್ಪಟ್ಟಿತು. ಇದರಿಂದ ಭಾರತದೇಶ ಯುದ್ಧ ವಿರಾಮ ಘೋಷಿಸಿದ್ದರಿಂದ ಯುದ್ಧ ಮುಗಿಯಿತು. ನಂತರ ಜಲ್ಫೀಕರ್ ಆಲಿ ಭುಟ್ಟೋ, ಪ್ರಧಾನಮಂತ್ರಿ ಇಂದಿರಾಗಾಂಧಿ ನಾಯಕತ್ವದಲ್ಲಿ ಎರಡು ದೇಶಗಳ ನಡುವೆ ಸಿಮ್ಲಾ ಒಪ್ಪಂದವಾಯಿತು.

1971ರ ಯುದ್ಧದ ನಂತರ ಎರಡು ದೇಶಗಳ ನಡುವೆ ಬಹಿರಂಗ ಯುದ್ಧವೇನೂ ನಡೆಯಲಿಲ್ಲ. ಆದರೆ ಸರಿಹದ್ದಿನುದ್ದಕ್ಕೂ ಅನೇಕ ಬಾರಿ ದಾಳಿಗಳು, ಘರ್ಷಣೆಗಳು ನಡೆದವು. ನೀವು “ಕಾರ್ಗಿಲ್ ಯುದ್ಧ”ದ ಕುರಿತು ಕೇಳಿರುತ್ತೀರಿ. 1999ರಲ್ಲಿ ಪಾಕಿಸ್ತಾನ್ ಸೈನ್ಯದ ಸಹಾಯದಿಂದ ಭಾರತ ವಿರೋಧ ಉಗ್ರವಾದಿಗಳು ಭಾರತದ ಭೂಭಾಗಗಳನ್ನು ಆಕ್ರಮಿಸಿಕೊಳ್ಳಲು ಭಾರತ ಸೈನಿಕ ಕ್ರಮಗಳಿಂದ ಅವರನ್ನು ಹಿಮ್ಮೆಟ್ಟಬೇಕಾಯಿತು.

ಭಾರತದೇಶದ ಸರಿಹದ್ದು ರಾಜ್ಯಗಳಾದ ಪಂಜಾಬ್, ಜಮ್ಮು-ಕಾಶ್ಮೀರಗಳಲ್ಲಿ ಪಾಕಿಸ್ತಾನ್ ದೇಶವು ವಿಭಜನಾ ಚಳುವಳಿಗಳಿಗೆ ಬೆಂಬಲ ನೀಡುತ್ತಾ ಬರುತ್ತಿದೆ. ಇಂತಹ ಚಳುವಳಿಗಳಿಗೆ ಬೆಂಬಲ ನೀಡುವುದು ಮಾತ್ರವಲ್ಲದೆ ಮತಪರ ಉಗ್ರವಾದಿಗಳಿಗೆ ಶಿಕ್ಷಣ ನೀಡಿ ಭಾರತ ದೇಶದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಲು ಪಾಕಿಸ್ತಾನ ನಿರಂತರ ಪ್ರಯತ್ನಿಸುತ್ತಿದೆ ಎಂದು ಭಾರತ ದೇಶ ಆರೋಪಿಸುತ್ತಿದೆ. ಅದಕ್ಕೆ ಬದಲಾಗಿ ಭಾರತದೇಶ ತಮ್ಮ ದೇಶದಲ್ಲಿ ಅಸ್ಥಿರತೆ ಸೃಷ್ಟಿಸುತ್ತಿದೆ ಎಂದೂ, ಅಣ್ವಾಯುಧಗಳು, ಇತರ ಆಯುಧಗಳ ಸಂಗ್ರಹಣೆಗಳಿಂದ, ಸೈನಿಕ ಕ್ರಮಗಳ ಮೂಲಕ ತನ್ನನ್ನು ನಿತ್ಯವು ಹೆದರಿಸುತ್ತಿದೆ ಎಂದು ಪಾಕಿಸ್ತಾನ್ ಆರೋಪಿಸುತ್ತಿದೆ. ಇದರ ಫಲವಾಗಿ ಎರಡು ದೇಶಗಳು ಒಂದಕ್ಕೆ ವಿರುದ್ಧವಾಗಿ ಮತ್ತೊಂದು ಆಯುಧಗಳನ್ನು ಒದಗಿಸಿಕೊಳ್ಳುವುದಕ್ಕೆ ದೊಡ್ಡ ಮೊತ್ತದಲ್ಲಿ ಬೆಲೆಬಾಳುವ ನಿಧಿಗಳನ್ನು ಖರ್ಚು ಮಾಡುತ್ತಿವೆ. ಎರಡು ದೇಶಗಳ ಹತ್ತಿರ ಅಣ್ವಾಯುಧಗಳಿವೆ. ಎರಡನೇ ದೇಶ ತಮ್ಮ ಮೇಲೆ ದಾಳಿ ಮಾಡದಂತೆ ಈ ಅಣ್ವಾಯುಧಗಳು ನಿಯಂತ್ರಿಸುತ್ತವೆಂದು ಎರಡು ದೇಶಗಳೂ ವಿಶ್ವಸಿಸುತ್ತಿವೆ.

ಅದೇ ಸಮಯದಲ್ಲಿ ಸಂಸ್ಕೃತಿ, ನಾಗರೀಕತೆಗಳನ್ನು ಹಂಚಿಕೊಂಡ ಸುದೀರ್ಘ ಇತಿಹಾಸ ಎರಡೂ ದೇಶಗಳಿಗೆ ಇರುವುದರಿಂದ ಸ್ವಾರ್ಥಪರ ಶಕ್ತಿಗಳು ದ್ವೇಷವನ್ನು ಬೆಳೆಸುತ್ತಿದ್ದರೂ ಅವುಗಳನ್ನು ಅಧಿಗಮಿಸಲು ಪಾಕಿಸ್ತಾನ್, ಭಾರತದೇಶದ ಜನರು ಪ್ರಯತ್ನಿಸುತ್ತಿದ್ದಾರೆ. ವಾಣಿಜ್ಯ, ಕ್ರೀಡೆಗಳು, ಚಲನಚಿತ್ರಗಳು, ಪ್ರವಾಸ, ಸಾಂಸ್ಕೃತಿಕ ಅನುಸಂಧಾನಗಳ ಮೂಲಕ ಸ್ನೇಹ ವಾರಧಿಗಳು ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಎರಡು ದೇಶಗಳಲ್ಲಿ ಜಾತ್ಯಾತೀತತೆ, ಪ್ರಜಾಪ್ರಭುತ್ವ, ಸ್ವತಂತ್ರ ಇದ್ದರೆ ಇದು ಎರಡು ದೇಶಗಳ ಪ್ರಜೆಗಳ ನಡುವೆ ಮತ್ತಷ್ಟು ಅವಗಾಹನೆ, ಸಹಕಾರ ಏರ್ಪಡಲು ಸಹಕರಿಸುತ್ತದೆ ಎಂದು ಭಾರತೀಯರು, ಪಾಕಿಸ್ತಾನಿ ಪ್ರಜೆಗಳು ಭಾವಿಸುತ್ತಿದ್ದಾರೆ. ಈ ಎರಡು ದೇಶಗಳ ನಡುವೆ ಘರ್ಷಣೆ ಬೆಳೆಯುವುದರಿಂದ ಈ ಆದರ್ಶಗಳಿಗೆ ಮುಪ್ಪು ಏರ್ಪಡುವ ಅಪಾಯವಿದೆ.

ಭಾರತ – ಬಾಂಗ್ಲಾದೇಶ ಸಂಬಂಧಗಳು (India’s relation with Bangladesh) :

1972ರಲ್ಲಿ ಭಾರತೀಯ ಸೈನಿಕರ ಸಹಾಯದಿಂದ ಪಾಕಿಸ್ತಾನದಿಂದ ಬಾಂಗ್ಲಾದೇಶ ವಿಮುಕ್ತಿ ಹೊಂದಿತು. ಅದು ಸ್ವಾತಂತ್ರ್ಯ ಪಡೆದ ಕೂಡಲೇ ಭಾರತದೇಶದೊಂದಿಗೆ 25 ವರ್ಷಗಳ ಶಾಂತಿ ಒಪ್ಪಂದದ ಮೇಲೆ ಸಹಿ ಮಾಡಿತು. ಆದರೆ ಬ್ರಹ್ಮಪುತ್ರ, ಗಂಗಾನದಿ ನೀರಿನ ಹಂಚಿಕೆಯಂತಹ ಅನೇಕ ಅಂಶಗಲ ಮೇಲೆ ಎರಡು ದೇಶಗಳ ನಡುವೆ ವಿಬೇಧಗಳಿವೆ. ಬಾಂಗ್ಲಾದೇಶದಿಂದ ಜನರು ದೊಡ್ಡ ಮೊತ್ತದಲ್ಲಿ ಕಾನೂನುಬಾಹಿರವಾಗಿ ಭಾರತದೇಶದೊಳಗೆ ಬರದಂತೆ ಕೆಲವು ಸರಿಹದ್ದು ಪ್ರಾಂತಗಳಲ್ಲಿ ಭಾರತದೇಶ ಬೇಲಿ

SCERT TELANGANA

ನಿರ್ಮಿಸುವುದನ್ನು ಬಾಂಗ್ಲಾದೇಶದ ಸರ್ಕಾರ ಆಕ್ಷೇಪಿಸಿತು. ಈ ಪ್ರಾಂತದಲ್ಲಿ ಭಾರತದೇಶ ದೊಡ್ಡಣ್ಣನ ಪಾತ್ರ ಪೋಷಿಸುತ್ತಿದೆ ಎಂದ ಬಾಂಗ್ಲಾದೇಶ ಭಾವಿಸುತ್ತಿದೆ.

ಇಷ್ಟು ವಿಬೇಧಗಳಿದ್ದರೂ, ಎರಡು ದೇಶಗಳು ಅನೇಕ ರಂಗದಲ್ಲಿ, ಪ್ರತ್ಯೇಕವಾಗಿ ಆರ್ಥಿಕ ರಂಗದಲ್ಲಿ ಸಹಕರಿಸಿಕೊಳ್ಳುತ್ತಿವೆ. ದಕ್ಷಿಣ ಏಷಿಯಾವನ್ನು ಮಯನ್ಮಾರ್ ಮೂಲಕ ಅನುಸಂಧಾನಗೊಳಿಸ ಬೇಕೆಂಬ ಭಾರತದೇಶದ ವಿಧಾನದಲ್ಲಿ ಬಾಂಗಾಂಲ್ದೇಶ ಒಂದು ಭಾಗವಾಗಿದೆ. ಪ್ರಕೃತಿ ವೈಪರಿತ್ಯಗಳ ನಿರ್ವಹಣೆಯಲ್ಲಿ ಎರಡು ದೇಶಗಳ ನಡುವೆ ಸಹಕಾರ ಒಪ್ಪಂದವಿದೆ. ಬಾಂಗ್ಲಾದೇಶದ ವಿಮುಕ್ತಿಗಾಗಿ ಹೋರಾಡಿದ, ಪ್ರಾಣತ್ಯಾಗ ಮಾಡಿದ ಎಷ್ಟೋ ಭಾರತೀಯರನ್ನು ಬಾಂಗ್ಲಾದೇಶ ಸನ್ಮಾನಿಸಿತು.

- ಎರಡು ದೇಶಗಳ ನಡುವೆ ಶಾಶ್ವತ ಶಾಂತಿ ಸ್ಥಾಪಿಸಲು ಭಾರತದೇಶ, ಪಾಕಿಸ್ಥಾನಗಳು ಯಾವ ಕ್ರಮಗಳನ್ನು ಕೈಗೊಳ್ಳಬೇಕು ?
- ಭಾರತದೇಶ, ಪಾಕಿಸ್ಥಾನ್‌ಗಳ ಅಭಿವೃದ್ಧಿಗೆ ಎರಡು ದೇಶಗಳ ನಡುವೆ ಶಾಂತಿಯ ಅವಶ್ಯಕತೆ ಏನು ?

ಭಾರತ – ಶ್ರೀಲಂಕ ಸಂಬಂಧಗಳು (India's relation with Sri Lanka) :

ಭಾರತದೇಶಕ್ಕೆ ದಕ್ಷಿಣಕ್ಕೆ ಹಿಂದೂ ಮಹಾಸಾಗರದಲ್ಲಿರುವ ದ್ವಿಪ ದೇಶ ಶ್ರೀಲಂಕ. ಅದು 1948ರಲ್ಲಿ ಸ್ವಾತಂತ್ರ್ಯ ಪಡೆಯಿತು. ಹಿಂದಿನಿಂದಲೂ ಭಾರತದೇಶ, ಶ್ರೀಲಂಕಗಳ ನಡುವೆ ಸಾಂಸ್ಕೃತಿಕ, ಆರ್ಥಿಕ ಸಂಬಂಧಗಳಿವೆ. ಎರಡೂ ವಸಾಹತು ಆಡಳಿತದಿಂದ ವಿಮುಕ್ತಿ ಪಡೆದು, ಇಂದಿಗೂ ಪ್ರಜಾಪ್ರಭುತ್ವ ದೇಶಗಳಾಗಿವೆ. ತಮಿಳು ಮಾತನಾಡುವ ಅಲ್ಪಸಂಖ್ಯಾತ ಜನರ ಬಗ್ಗೆ ಶ್ರೀಲಂಕ ಸರ್ಕಾರ ವ್ಯವಹರಿಸಿದ ರೀತಿ ಎರಡು ದೇಶಗಳ ಸಂಬಂಧಕ್ಕೆ ಮುಳ್ಳಿನಂತೆ ತಯಾರಾಗಿದೆ. ಇದರ ಕುರಿತು ನೀವು ಒಂಭತ್ತನೇ ತರಗತಿಯಲ್ಲಿ ಓದಿದ್ದೀರಿ. ಆ ಚರ್ಚೆಯನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ.

- ಬಾಂಗ್ಲಾದೇಶಕ್ಕೆ ಭಾರತದೇಶ ನೀಡಿದ ಬೆಂಬಲವನ್ನು, ಶ್ರೀಲಂಕದಲ್ಲಿ ಅದರ ಪಾತ್ರವನ್ನು ಹೋಲಿಸಿರಿ. ಎರಡು ದೇಶಗಳಲ್ಲಿ ಪರಿಸ್ಥಿತಿ ಒಂದೇ ವಿಧವಾಗಿ ಇದೆಯಾ, ವ್ಯತ್ಯಾಸಗಳೇನು ಇವೆಯಾ ?

ಶ್ರೀಲಂಕ ತಮಿಳು ನಿರಾಶ್ರಿತರು ದೊಡ್ಡ ಸಂಖ್ಯೆಯಲ್ಲಿ ಭಾರತ ದೇಶದೊಳಗೆ ಬರುವುದು ಪ್ರತ್ಯೇಕ ಸಮಸ್ಯೆಯಾಗಿ ಬದಲಾಯಿತು. ಇದರಿಂದ ಭಾರತದೇಶ ಮತ್ತಷ್ಟು ಕ್ರಿಯಾಶೀಲ ಮಧ್ಯಸ್ಥಿಕೆವಹಿಸಿ ಆ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ಶ್ರೀಲಂಕದೊಂದಿಗೂ, ತಮಿಳು ತೀವ್ರವಾದಿಗಳೊಂದಿಗೆ ಒಪ್ಪಂ ಮಾಡಿಕೊಂಡಿತು. ಶ್ರೀಲಂಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಭಾರತ ದೇಶ ತನ್ನ ಸೈನ್ಯವನ್ನು ಕಳುಹಿಸುವುದರ ಬಗ್ಗೆ, ಪ್ರಧಾನಮಂತ್ರಿ ರಾಜೀವ್ ಗಾಂಧಿಯನ್ನು ತಮಿಳ ತೀವ್ರವಾದಿಗಳು ಹತ್ಯೆಗೆ ಗುರಿಮಾಡಿದುದರ ಕುರಿತು ಈ ಹಿಂದೆ ಓದಿದ್ದೀರಿ. ತಮಿಳು ತೀವ್ರವಾದಿಗಳು ವಿರುದ್ಧವಾಗಿ ಶ್ರೀಲಂಕ ಸರ್ಕಾರ ಪೂರ್ಣಮಟ್ಟದಲ್ಲಿ ಯುದ್ಧಕ್ಕೆ ನಿಂತಾಗ ಭಾರತದೇಶ ಅದರಲ್ಲಿ ಹಸ್ತಕ್ಷೇಪ ಮಾಡಬಾರದೆಂದು ನಿರ್ಣಯಿಸಿಕೊಂಡಿತು. ಈ ಯುದ್ಧದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ, ತೀವ್ರ ರಕ್ತಪಾತ ಸಂಭವಿಸಿದವು. ಇದರಿಂದ ತನ್ನ ದೇಶದಲ್ಲಿ ಶ್ರೀಲಂಕ ಸೈನಿಕ ಘರ್ಷಣೆಗಳಿಗೆ ಕೊನೆ ಹೇಳಲು ಸಾಧ್ಯವಾಯಿತು.

ಚಿತ್ರ 19.8 : (ಎಡ) 1958ರಲ್ಲಿ ಚೈನಾಕ್ಕೆ ವಿರುದ್ಧವಾಗಿ ಪ್ರದರ್ಶನೆಗಳು ಮಾಡುತ್ತಿರುವ ಜನರು, ಬ್ಯಾನರ್‌ನಲ್ಲಿ ಕಮ್ಯೂನಿಸ್ಟ್ ಚೈನಾ ಟಿಬೆಟ್‌ಗೆ ಕೈಹಾಕಬೇಡ ಎಂದು ಇದೆ(ಬಲ) 1971ರಲ್ಲಿ ಪೂರ್ವಪಾಕಿಸ್ತಾನ್ ದಿಂದ ಭಾರತದೇಶದೊಳಗೆ ಬರುತ್ತಿರುವ ನಿರಾಶ್ರಿತರು.

- ನೆರೆಹೊರೆಯಲ್ಲಿರುವ ದೊಡ್ಡ ದೇಶಗಳು 'ದೊಡ್ಡಣ್ಣನಂತೆ' ವ್ಯವಹಿಸುತ್ತಿವೆಯೆಂದು ಅನೇಕ ಚಿಕ್ಕ ದೇಶಗಳು ಆರೋಪಿಸುತ್ತಿರುತ್ತವೆ. ಇದರ ಅರ್ಥವೇನಾಗಿರುತ್ತದೆ ?
- ಭಾರತದೇಶ, ಬಾಂಗ್ಲದೇಶ ಇರುವ ನಕ್ಷೆಯನ್ನು ನೋಡಿ ಎರಡು ದೇಶಗಳ ನಡುವೆ ಸಹಕಾರ ಈ ಎರಡಕ್ಕೆ ಏಕೆ ಮುಖ್ಯವಾದುದೋ ತಿಳಿಸಿರಿ.

SCERT TELANGANA

ಕಠಿಣ ಪದಗಳು

ಸೈನಿಕ ಒಪ್ಪಂದಗಳು ಪರೋಕ್ಷ ಯುದ್ಧ ಆಯುಧಪೈಪೋಟಿ ಏಕಧ್ರುವ ಪ್ರಪಂಚ ಎರಡು ಧ್ರುವಗಳ ಪ್ರಪಂಚ ವಸಾಹತು ಆಡಳಿತ ದೇಶಗಳ ವಿಮುಕ್ತಿ ಶಾಂತಿ ವಿಟೋ ಜನಾಂಗೀಯ ಘರ್ಷಣೆಗಳು ಪಂಚಶೀಲ

ಕಲಿಕೆಯನ್ನುಉತ್ತಮ ಪಡಿಸಿಕೊಳ್ಳೋಣ !

1. ಸರಿಯಾದ ಉತ್ತರವನ್ನು ಆರಿಸಿ ; ಶೀತಲ ಸಮರದ ಕುರಿತು ಕೆಳಗೆ ಇರುವ ವ್ಯಾಖ್ಯಾನಗಳಲ್ಲಿ ಯಾವುದು ಸರಿಯಾದುದಲ್ಲ?(AS_1)

ಅ) ಅಮೇರಿಕಾ, ಯುಎಸ್ಎಸ್ಆರ್‌ಗಳ ನಡುವೆ ವಿರೋಧ ಆ) ಅಮೇರಿಕ, ಯುಎಸ್ಎಸ್ಆರ್‌ಗಳು ಪ್ರತ್ಯಕ್ಷ ಯುದ್ಧಲ್ಲಿ ಪಾಲ್ಗೊಳ್ಳುವುದು

ಇ) ಆಯುಧ ಪೈಪೋಟಿಗೆ ಕಾರಣವಾಗುವುದು ಈ) ಎರಡು ಅಗ್ರದೇಶಗಳ ನಡುವೆ ಸೈದ್ಧಾಂತಿಕ ಹೊಡೆದಾಟ

2. ಕೆಳಗೆ ತಿಳಿಸಿದವುಗಳಲ್ಲಿ ಯಾವುದು ಪಶ್ಚಿಮ ಏಷಿಯಾ ಬಿಕ್ಕಟ್ಟಿನಲ್ಲಿ ಇಲ್ಲ? (AS_1)

ಅ) ಈಜಿಪ್ಟ್ ಆ) ಇಂಡೋನೇಷಿಯಾ ಇ) ಬ್ರಿಟನ್ ಈ) ಇಜ್ರಾಯೆಲ್

3. ಎರಡನೇ ಪ್ರಪಂಚ ಯುದ್ಧದ ನಂತರ ಪ್ರಪಂಚ ಅಧಿಕಾರದಲ್ಲಿ ಎಂತಹ ಬದಲಾವಣೆಗಳು ಬಂದವು ? (AS_1)
4. ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಲು ವಿಶ್ವಸಂಸ್ಥೆ ನಿರ್ವಹಿಸಿದ ವಿವಿಧ ಪಾತ್ರಗಳೇನು ? (AS_1)
5. ಪ್ರಜಾಪ್ರಭುತ್ವ ಭಾವನೆಯ ಹಿನ್ನೆಲೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಕೆಲವು ದೇಶಗಳಿಗೆ ಪ್ರತ್ಯೇಕ ಅಧಿಕಾರಗಳು ಇರುವುದು ಸರಿಯಾದುದೇ ? (AS_2)
6. ಸೈನಿಕ ಒಪ್ಪಂದಗಳಲ್ಲಿ ಅಗ್ರ ದೇಶಗಳು ಹೇಗೆ ಲಾಭಪಡೆದವು ? (AS_1)
7. ಶೀತಲ ಸಮರದಿಂದ ಆಯುಧ ಪೈಪೋಟಿ, ಆಯುಧ ನಿಯಂತ್ರಣ ಎರಡೂ ಹೇಗೆ ನಡೆದವು ? (AS_1)
8. ಪ್ರಪಂಚದಲ್ಲಿ ಘರ್ಷಣೆಗಳಿಗೆ ಕೇಂದ್ರವಾಗಿ ಪಶ್ಚಿಮ ಏಷಿಯಾ ಏಕೆ ಬದಲಾಯಿತು ? (AS_1)
9. 20ನೇ ಶತಮಾನದ ಕೊನೆಗೆ, ಒಂದು ದೇಶ ಮಾತ್ರ ಪ್ರಪಂಚದ ಮೇಲೆ ಅಧಿಕಾರವಹಿಸುತ್ತದೆ. ಈ ಹಿನ್ನಲೆಯಲ್ಲಿ ಅಲಿಪ್ತ ಚಳುವಳಿಯ ಪಾತ್ರ ಏನಾಗಿರುತ್ತದೆ ? (AS_1)
10. ''ಕೇವಲ ಸೈನಿಕ ಒಪ್ಪಂದಗಳ ಹಿನ್ನೆಲೆಯಲ್ಲಿ ಮಾತ್ರವಲ್ಲದೆ ಆರ್ಥಿಕ ವಿಧಾನಗಳ ಹಿನ್ನೆಲೆಯಲ್ಲಿ ಸಹ ಅಲಿಪ್ತ ಚಳುವಳಿ ಏರ್ಪಟ್ಟಿದೆ.'' ಇದನ್ನು ಸಮರ್ಥಿಸಿರಿ. (AS_1)
11. ಭಾರತದೇಶಕ್ಕೆ ನೆರೆಹೊರೆ ದೇಶಗಳೊಂದಿಗೆ ಕೆಳಗಿನ ಅಂಶಗಳೊಂದಿಗೆ ಸಂಬಂಧವನ್ನು ತೋರಿಸಲು ಒಂದು ಪಟ್ಟಿ ತಯಾರಿಸಿರಿ; ಘರ್ಷಣೆಗೆ ಕಾರಣವಾದ ಅಂಶಗಳು : ಯುದ್ಧ ಸಂಘಟನೆಗಳು : ಸಹಾಯ, ಸಹಕಾರ ಘಟನೆಗಳು (AS_3)
12. ''ಶ್ರೀಲಂಕದಲ್ಲಿ ಜನಾಂಗೀಯ ಘರ್ಷಣೆಗಳು ಭಾರತದೇಶದೊಂದಿಗೆ ಅದರ ಸಂಬಂಧಗಳನ್ನು ಹೇಗೆ ಪ್ರಭಾವಿತಗೊಳಿಸಿದವು'' ವಿವರಿಸಿರಿ. (AS_1)
13. ಪ್ರಪಂಚ ನಕಾಶೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. (AS_5)

1) ಪೋಲೆಂಡ 2) ಯು.ಎಸ್.ಎಸ್.ಆರ್. 3) ವಿಯೆಟ್ನಾ 4) ಸ್ಪೇನ್ 5) ಲ್ಯಾಟಿನ್ ಅಮೇರಿಕಾ 6) ಅಫ್ಘನಿಸ್ತಾನ್

14. ಪುಟ ಸಂಖ್ಯೆ 288 ರಲ್ಲಿನ ರೇಖಾ ಚಿತ್ರವನ್ನು ಪರಿಶೀಲಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1) ಯಾವ ದೇಶದ ಸೈನಿಕ ಖರ್ಚು ಅಧಿಕವಾಗಿದೆ.

2) ಜಿಡಿಪಿ ಶೆಕಡಾದಲ್ಲಿ ಎರಡು ದೇಶಗಳ ಸೈನಿಕ ಖರ್ಚಿನಿಂದ ನೀನು ಗಮನಿಸಿದ ವಿಷಯವೇನು ?

15. ಪುಟ ಸಂಖ್ಯೆ 288 ರಲ್ಲಿನ ಮೊದಲನೇಯ ಪ್ಯಾರಾವನ್ನು ಓದಿ ಅರ್ಥೈದಿಕೊಂಡು ವ್ಯಾಖ್ಯಾನಿಸಿರಿ. (AS_2)

SCERT TELANGANA

ಅಧ್ಯಾಯ

20 ಸಮಕಾಲೀನ ಸಾಮಾಜಿಕ ಚಳುವಳಿಗಳು

ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿರುವ ಅನೇಕ ಚಳುವಳಿಗಳನ್ನು ನೀವು ನೋಡಿರಬಹುದು. ಒಂದು ಸಮಸ್ಯೆಯನ್ನು ತೆಗೆದುಕೊಂಡು, ಅದರಲ್ಲಿ ಬದಲಾವಣೆ ತೆಗೆದುಕೊಂಡು ಬರಬೇಕೆನ್ನುವ ಉದ್ದೇಶದಿಂದ ಆ ಚಳುವಳಿ ಪ್ರಾರಂಭಿಸುತ್ತಾರೆ. ಇಂತಹ ಚಳುವಳಿಗಳಲ್ಲಿ ನೀವು ಪಾಲ್ಗೊಂಡಿರಬಹುದು. ವಾರ್ತಾಪತ್ರಿಕೆಗಳಲ್ಲಿ ಓದಿದ ಇಲ್ಲವೇ ನೀವು ಪಾಲ್ಗೊಂಡ ಚಳುವಳಿಗಳನ್ನು ನೆನಪಿಸಿಕೊಳ್ಳಿ. ಸಮಸ್ಯೆಗಳೇನು ?, ಅದರಿಂದ ಯಾರು ಪ್ರಾಭಾವಿತರಾದರು, ಅವರ ಬಯಕೆಗಳೇನು ? ಚಳುವಳಿಗೆ ನಾಯಕತ್ವ ಯಾರುವಹಿಸಿದರು ? ಚಳುವಳಿಯಲ್ಲಿ ಭಾಗವಹಿಸಲು ಜನರನ್ನು ಹೇಗೆ ಪ್ರೋತ್ಸಾಹಿಸಿದರು ? ಚಳುವಳಿಯಲ್ಲಿ ಏನಾದರೂ ಅಭಿಪ್ರಾಯ ಬೇಧಗಳು ಇವೆಯಾ ? ಚಳುವಳಿ ಹೇಗೆ ಮುಂದುವರೆಯಿತು ? ತನ್ನ ಉದ್ದೇಶಗಳನ್ನು ಅದು ಎಷ್ಟರ ಮಟ್ಟಿಗೆ ಸಾಧಿಸಿತು ?

ಹಿನ್ನೆಲೆ (Background) :

20ನೇ ಶತಮಾನದ ಪ್ರಥಮಾರ್ಧದ ಪ್ರಪಂಚವನ್ನು ಯುದ್ಧಗಳು, ಕ್ರಾಂತಿಗಳು, ಜರ್ಮನಿಯ ಫ್ಯಾಸಿಜಂ, ಸೋವಿಯತ್ ಸೋಷಿಯಲಿಜಂ, ಪಾಶ್ಚತ್ಯ ಉದಾರವಾದ, ರಾಷ್ಟ್ರೀಯ ವಿಮುಕ್ತಿ ಹೋರಾಟಗಳಂತಹ ಮುಖ್ಯವಾದ ಘಟನೆಗಳು ಪ್ರಭಾವಿತಗೊಳಿಸಿದವು. ಆದರೆ 1950ರ ದಶಕದ ಮಧ್ಯದೊಳಗೆ ಎರಡನೇ ಪ್ರಪಂಚ ಯುದ್ಧ ಮುಗಿಯುವುದು, ಭಾರತದೇಶ, ಚೈನಾ, ಇಂಡೋನೇಷಿಯಾ, ನೈಜೀರಿಯಾ, ಈಜಿಪ್ಟ್‌ನಂತಹ ವಸಾಹತು, ಅರೆವಸಾಹತು ದೇಶಗಳು ಸ್ವತಂತ್ರಗೊಂಡಿದ್ದರಿಂದ ಪ್ರಪಂಚದಲ್ಲಿ ಹೊಸ ಯುಗ ಆರಂಭವಾಯಿತು. ಅನೇಕ ದೇಶಗಳಲ್ಲಿ ಇದು ಆರ್ಥಿಕ ಪ್ರಗತಿ, ಸಂಪತ್ತುಗಳ ಯುಗವಾಗಿತ್ತು. ಆದರೆ ದೀರ್ಘಕಾಲದಿಂದ ಸಮಾನ ಹಕ್ಕುಗಳನ್ನು ಪಡೆಯಲಾರದವರು ತಮ್ಮ ಹಕ್ಕುಗಳನ್ನು ಕೋರುತ್ತಾ ಮುಂದೆ ಬಂದಿದ್ದರಿಂದ ಇದು ಅನೇಕ ದೇಶಗಳಲ್ಲಿ ಇಲ್ಲವೇ ಸಮಾಜದಲ್ಲಿನ ವರ್ಗಗಳಲ್ಲಿ ಉದ್ವೇಗಗಳು ನೆಲೆಸಿದ ಕಾಲವೂ ಸಹ.

1960 ರಲ್ಲಿಯ ಪೌರಹಕ್ಕುಗಳು, ಇತರ ಚಳುವಳಿಗಳು :
(Civil Rights and other Movements of 1960s) :

ಇಂತಹ ಚಳುವಳಿಗಳಲ್ಲಿ ಅತ್ಯಂತ ಮುಖ್ಯವಾದದ್ದು ಅಮೇರಿಕಾದಲ್ಲಿನ ಪೌರಹಕ್ಕುಗಳ ಚಳುವಳಿ. ಪಾಠಶಾಲೆಗಳಲ್ಲಿ, ಬಸ್ಸುಗಳಲ್ಲಿ, ಬಹಿರಂಗ ಪ್ರದೇಶಗಳಲ್ಲಿ ಕಪ್ಪು ವರ್ಣದವರನ್ನು ಪ್ರತ್ಯೇಕವಾಗಿಡಲು, ಉದ್ಯೋಗಗಳಲ್ಲಿ, ಗೃಹ ವಸತಿಗಳಲ್ಲಿ, ಮತದಾನ ಹಕ್ಕಿನಲ್ಲಿ ಸಹ ಅವರ ಬಗ್ಗೆ ಬೇಧಭಾವ ತೋರಿಸುವುದರ ವಿರುದ್ಧವಾಗಿ ಆಫ್ರೋ-ಅಮೇರಿಕನ್ನರು ಇಲ್ಲವೇ ಕಪ್ಪು ವರ್ಣ ಅಮೇರಿಕನ್ನರು ಸಮಾನತ್ವಕ್ಕಾಗಿ ಪ್ರಾರಂಭಿಸಿದ ಹೋರಾಟ ಇದು. ಈ ಹೋರಾಟ 1960ರಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟಿತು. ದೊಡ್ಡ ಸಂಖ್ಯೆಯಲ್ಲಿ ಪ್ರದರ್ಶನೆಗಳು, ಮೆರವಣಿಗೆಗಳು, ಪೌರ ಅವಿಧೇಯತೆ (ಪಕ್ಷಪಾತದಿಂದ ಕೂಡಿದ ಕಾನೂನುಗಳನ್ನು ಶಾಂತಿಯುತವಾಗಿ ಉಲ್ಲಂಘಿಸುವುದು), ಬೇಧಭಾವದಿಂದ ಕೂಡಿದ ಸೇವೆಗಳನ್ನು ಬಹಿಷ್ಕರಣೆಗಳಿಂದ (ಶ್ವೇತವರ್ಣ, ಕಪ್ಪುವರ್ಣದವರಿಗೆ ಬೇರೆ ಬೇರೆ ಸೀಟುಗಳಿರುವ ಬಸ್ಸುಗಳಂತಹವು)

ಚಿತ್ರ 20.1: ಎಲಿಜಬೆತ್ ಎಕ್‌ಫೋರ್ಡ್ ಎನ್ನುವ ಕಪ್ಪು ವರ್ಣದ ಹುಡುಗಿ 1957 ಸೆಪ್ಟೆಂಬರ್ 4ರಂದು ಲಿಟಿಲ್ ರಾಕ್ ಸ್ಕೂಲ್ ಪ್ರವೇಶಿಸಲು ಪ್ರಯತ್ನಿಸುತ್ತಿರುವ ಚಿತ್ರ ಫೋಟೋ: ವಿಲ್.ಸಿ.

SCERT TELANGANA

ಚಿತ್ರ 20.2 ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್



ಈ ಚಳುವಳಿ ಶಾಂತಿಯುತವಾಗಿ ಮುಂದುವರೆಯಿತು. ಇವುಗಳಲ್ಲಿ ಮುಖ್ಯವಾದದ್ದು ಡಾ|| ಮಾರ್ಟಿನ್ ಲೂಥರ್ ಕಿಂಗ್ ನಾಯಕತ್ವದಲ್ಲಿ ಮಾಂಟಗೊಯೆರೀಯಲ್ಲಿ ಒಂದು ವರ್ಷದವರೆಗೆ ಕಪ್ಪುವರ್ಣದವರು ಬಸ್ಸುಗಳನ್ನು ಬಹಿಷ್ಕರಿಸುವುದು. ಇದರಿಂದ ಬಸ್ಸುಗಳನ್ನು ನಿರ್ವಹಿಸುವ ಕಂಪನಿ ತೀವ್ರವಾಗಿ ನಷ್ಟಹೋಯಿತು. ಅಂತಿಮವಾಗಿ 1956ರಲ್ಲಿ ಬಸ್ಸುಗಳಲ್ಲಿ ಬೇಧಭಾವವನ್ನು ನ್ಯಾಯಸ್ಥಾನಗಳು ನಿಷೇಧಿಸದೇ ತಪ್ಪಲಿಲ್ಲ. ಅದೇ ಸಮಯದಲ್ಲಿ ಕಪ್ಪು ವರ್ಣದವರಿಗೂ, ಶ್ವೇತವರ್ಣದವರಿಗೂ ಬೇರೆ ಬೇರೆ ಪಾಠಶಾಲೆಗಳು ಇರುವುದನ್ನು ವಿರೋಧಿಸುತ್ತಾ ಬಲವಾದ ಚಳುವಳಿ ನಡೆಯುತ್ತಿದೆ. 1963 ಆಗಸ್ಟ್ 28ರಂದು ಎರಡು ಲಕ್ಷಗಳಿಗೂ ಹೆಚ್ಚು ಜನರು ವಾಷಿಂಗ್ಟನ್‌ಗೆ ಪ್ರದರ್ಶನೆಯಾಗಿ ಹೋಗಿ ಪೌರಹಕ್ಕುಗಳ ಕಾಯ್ದೆಯನ್ನು ಮಾಡುವಂತೆ ಕೋರಿದರು. ಉದ್ಯೋಗಾವಕಾಶಗಳ ಕಲ್ಪನೆಗೆ ಕಾರ್ಯಕ್ರಮಗಳು, ಪೂರ್ಣನ್ಯಾಯಯುತವಾದ ಉದ್ಯೋಗ, ಒಳ್ಳೆಯ ಗೃಹ ವಸತಿ, ಮತದಾನದ ಹಕ್ಕು, ಶ್ವೇತವರ್ಣ, ಕಪ್ಪುವರ್ಣ ಮಕ್ಕಳು ಸೇರಿ ವಿದ್ಯಾಭ್ಯಾಸ ಮಾಡುವ ಸಮ್ಮಿಶ್ರ ವಿದ್ಯಾಸದುಪಾಯಗಳಂತಹವು ಇವರ ಪ್ರಧಾನ ಬೇಡಿಕೆಗಳು. ಈ ಪ್ರದರ್ಶನದಲ್ಲಿ ಇತರರೊಂದಿಗೆ ಡಾ|| ಕಿಂಗ್ ಉಪನ್ಯಾಸ ಮಾಡಿದನು. ನನಗೊಂದು ಕನಸ್ಸು ಇದೆ. ಎನ್ನುವ ಆತನ ಐತಿಹಾಸಿಕ ಭಾಷಣ ಮಾಡಿದರು. ಆ ನಂತರ ಕಾಲದಲ್ಲಿ ಕಪ್ಪುವರ್ಣದವರಿಗಾಗಿ ಕಾನೂನು ಮಾಡಿದರು. ಸುದೀರ್ಘ ಹೋರಾಟದ ನಂತರ ಇವು ಸಮರ್ಥವಾಗಿ ಜಾರಿಗೆ ಬರಲಾರಂಭಿಸಿದವು ಕೂಡಾ. ಸುಧಾರಣೆಗಳು, ಬದಲಾವಣೆಗಾಗಿ ಅಹಿಂಸಾತ್ಮಕ ಸಾಮಾಜಿಕ ಚಳುವಳಿಗೆ ಇದು ಪ್ರಪಂಚದಾದ್ಯಂತ ಪ್ರೇರಣೆಯಾಗಿ ನಿಂತಿದೆ.

ನನಗೊಂದು ಕನಸು ಇದೆ...

ನೂರು ವರ್ಷಗಳ ಹಿಂದೆ ವಿಮುಕ್ತಿ ಪ್ರಕಟಣೆಯ ಮೇಲೆ ಸಹಿ ಮಾಡಿದ ಮಹನೀಯನ ನೆರಳಲ್ಲಿ ಈ ದಿನ ನಾವು ನಿಂತಿದ್ದೇವೆ. ಅನ್ಯಾಯದ ದಳ್ಳುರಿಯಲ್ಲಿ ಸುಟ್ಟು ಹೋಗುತ್ತಿರುವ ಕಪ್ಪುವರ್ಣದವರಿಗೆ ಈ ಐತಿಹಾಸಿಕ ಪತ್ರ ಒಂದು ಆಶಾದೀಪದಂತೆ ಕಂಡಿತು.... ಆದರೆ, ನೂರು ವರ್ಷಗಳ ನಂತರ ಕಪ್ಪುವರ್ಣದವರು ಇನ್ನೂ ಸ್ವತಂತ್ರವನ್ನು ಪಡೆದಿಲ್ಲ. ಬೇಧಭಾವ ಎನ್ನುವ ಸರಪಳಿಯಿಂದಲೂ, ಬೇರ್ಪಡಿಸುವುದು ಎನ್ನುವ ಸಂಕೋಲೆಗಳಿಂದ ನೂರು ವರ್ಷಗಳ ನಂತರವೂ ಕಪ್ಪುವರ್ಣದವರ ಜೀವನ ಶಕ್ತಿಗುಂದುತ್ತಿದೆ.

ನನ್ನ ನಾಲ್ಕು ಚಿಕ್ಕ ಮಕ್ಕಳು ಒಂದು ದಿನ ಅವರ ಚರ್ಮದ ಬಣ್ಣದಿಂದಲ್ಲದೆ ಅವರ ವ್ಯಕ್ತಿತ್ವದ ಲಕ್ಷಣಗಳಿಂದ ಊಹಿಸುವ ಹಂತದಲ್ಲಿ ಇರುತ್ತಾರೆಂದು ನನ್ನದೊಂದು ಕನಸು ಇದೆ.... ಡಾ|| ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಡಾ|| ಕಿಂಗ್.

- ಡಾ|| ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಡಾ|| ಕಿಂಗ್ ನೀಡಿದ ಈ ಪ್ರಖ್ಯಾತ ಉಪನ್ಯಾಸವನ್ನು ಓದಿ, ಆತನು ಅಮೇರಿಕ ಸಮಾಜದ ಮುಂದಿಟ್ಟ ಆದರ್ಶಗಳ ಕುರಿತು, ಅವುಗಳನ್ನು ಸಾಧಿಸಲು ಆತನು ರೂಪಿಸಿದ ಯೋಜನೆಯ ಕುರಿತು ಒಂದು ಪ್ರಬಂಧ ಬರೆಯಿರಿ.

ಈ ಚಳುವಳಿ ಬಲಪಡುತ್ತಿರುವ ಕ್ರಮದಲ್ಲಿ ಅನೇಕ ದೃಷ್ಟಿಕೋನಗಳು ಮುಂದೆಬಂದವು. ಶಾಂತಿಯುತ ಮಾರ್ಗಗಳ ಮೂಲಕ ಪ್ರಜೆಗಳೆಲ್ಲರಿಗೂ ಸಮಾನತೆ ಸಾಧಿಸುವುದು ಸಾಧ್ಯವಾಗುತ್ತದೆಂದೂ, ಅದಕ್ಕೆ ಅವಶ್ಯಕವಾದ ಕಾನೂನುಗಳನ್ನು ಸರ್ಕಾರ ಮಾಡುವಂತೆ ಮಾಡಬಹುದೆಂದು ಅನೇಕ ಜನರು ಡಾ|| ಕಿಂಗ್‌ನೊಂದಿಗೆ ಏಕೀಭವಿಸಿದರು. ಆದರೆ ಮಾಲ್ಕಂ ಎಕ್ಸ್‌ನಂತಹ ಇತರರು ಅನೇಕ ಜನರಿಂದ ಕಪ್ಪು ಜನರು ಬೇರೆ ಜಾತಿ ಎಂದು, ಶ್ವೇತವರ್ಣೀಯರ ಆಡಳಿತದಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದು ಭಾವಿಸಿದರು. ಅಧಿಕಾರವನ್ನು ಕೈವಶ ಮಾಡಿಕೊಳ್ಳುವುದಕ್ಕಾಗಿ ಸಾಯುಧ ಘರ್ಷಣೆಗಳಿಂದ ಸಹ ಎಲ್ಲಾ ಮಾರ್ಗಗಳನ್ನು ವಿನಿಯೋಗಿಸಿಕೊಳ್ಳಬೇಕೆಂದು ಅವರು ಭಾವಿಸಿದರು.

ಪೌರಹಕ್ಕುಗಳ ಚಳುವಳಿಯಲ್ಲಿ ಕಪ್ಪು ವರ್ಣದ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡರು. ಆದರೆ ಈ ಚಳುವಳಿಯಲ್ಲಿಯೂ ಪುರುಷರ ಆಧಿಪತ್ಯ ಇದೆ ಎಂದು, ತಮ್ಮನ್ನು ಯಾರೂ ಪರಿಗಣಿಸುತ್ತಿಲ್ಲವೆಂದು ಅವರು ಭಾವಿಸಲಾರಂಭಿಸಿದರು. ಪ್ರಖ್ಯಾತ ವಾಷಿಂಗ್ಟನ್ ಪ್ರದರ್ಶನದಲ್ಲಿ ಒಬ್ಬ ಮಹಿಳೆಯನ್ನೂ ಸಹ ಮಾತನಾಡಲು ಬಿಡಲಿಲ್ಲ. ಮಹಿಳೆಯರ ಸಮಾನತ್ವಕ್ಕಾಗಿ ಮಹಿಳೆಯರು ಹೋರಾಡಬೇಕೆಂದು ಅವರು ಭಾವಿಸಲಾರಂಭಿಸಿದರು.

SCERT TELANGANA

ಈ ವಿಭಿನ್ನ ಧೋರಣೆಗೆಳೆಲ್ಲಾ ಸೇರಿಸಿ ಆಧುನಿಕ ಅಮೇರಿಕಾ ಇತಿಹಾಸವನ್ನು ರೂಪಿಸಿದ ಬಲವಾದ ಸಮಾನತೆಯ ಚಳುವಳಿಯನ್ನು ನಿರ್ಮಿಸಲು ಸಹಾಯಕವಾಗಿವೆ.

- ಪೌರಹಕ್ಕುಗಳ ಚಳುವಳಿಯ ಬೇಡಿಕೆಗಳ ಪಟ್ಟಿಯನ್ನು ತಯಾರಿಸಿ, ಅವುಗಳಿಗೆ ನೀವು ಸೂಚಿಸುವ ಪರಿಹಾರಗಳು ಏನೆಂದು ಬರೆಯಿರಿ.
- ಪ್ರಜಾಪ್ರಭುತ್ವ ದೇಶವೆಂದು ಅಮೇರಿಕಾ ಹೇಳಿಕೊಳ್ಳುತ್ತದೆ, ಆದರೆ ಕಳೆದ ಶತಮಾನದ ಮಧ್ಯ ಕಾಲದವರೆಗೂ ಕೆಲವು ಪ್ರಜೆಗಳನ್ನು ಬೇರೆಯಾಗಿಟ್ಟಿತು. ಭಾರತದೇಶದ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ಭಾವನೆ ಎಲ್ಲರನ್ನೂ ಒಂದುಗೂಡಿಸಿಕೊಂಡು ಹೇಗಿರಬೇಕೋ ಚರ್ಚಿಸಿರಿ.
- ಒಂದು ಚಳುವಳಿಯಲ್ಲಿ ವಿಭಿನ್ನ ಧ್ವನಿಗಳು ಏಕೆ ಕೇಳಿಬರುತ್ತಿರುತ್ತವೆ ? ಅವುಗಳಲ್ಲಿ ಅಭಿಪ್ರಾಯ ಬೇಧಗಳನ್ನು ಗುರ್ತಿಸಿರಿ.

ಯುಎಸ್‌ಎಸ್‌ಆರ್‌ನಲ್ಲಿ ಮಾನವ ಹಕ್ಕುಗಳ ಚಳುವಳಿ (Human Rights Movements in the USSR):

ಆ ದಿನಗಳಲ್ಲಿ ಯುಎಸ್‌ಎಸ್‌ಆರ್‌ನಲ್ಲಿಯೂ, ಅದರ ಪ್ರಭಾವ ವಲಯದಲ್ಲಿರುವ ಪೂರ್ವ ಯೂರೋಪ್ ದೇಶಗಳಲ್ಲಿಯೂ ಸ್ವತಂತ್ರವಾದ ಬಹುಪಕ್ಷ ಚುನಾವಣೆಗಳನ್ನು, ಸೆನ್ಸಾರ್ ಇಲ್ಲದ ಸ್ವತಂತ್ರವಾದ ಪತ್ರಿಕೆಗಳು, ಪ್ರಸಾರ ಸಾಧನಗಳು, ಕೊನೆಗೆ ಸಾಮಾನ್ಯ ಪ್ರಜೆಗಳ ಸ್ವತಂತ್ರ ಭಾವ ಪ್ರಕಟಣೆ, ಚಲನೆಯಂತಹವುಗಳನ್ನು ಅನುಮತಿಸಲಿಲ್ಲ. ಈ ಸರ್ಕಾರಗಳು ತಮ್ಮನ್ನು ಉರುಳಿಸುವ ಕುತಂತ್ರಗಳ ಬಗ್ಗೆ ದಿನನಿತ್ಯ ಭಯಪಡುತ್ತಾ ಇದ್ದು ಜನರ ಎಲ್ಲಾ ಕಾರ್ಯಕಲಾಪಗಳ ಮೇಲೆ ನಿಯಂತ್ರಣ, ದೃಷ್ಟಿ ಇಡುತ್ತಿದ್ದವು. ಇಂತಹ ನಿಯಂತ್ರಣಗಳಿಂದ ಬೇಸತ್ತ ಜನರು ಭಾವಪ್ರಕಟಣೆ, ಚಲಿಸುವ ಸ್ವಾತಂತ್ರ್ಯ, ಸ್ವತಂತ್ರವಾದ ಪತ್ರಿಕೆಗಳಂಹ ಮಾನವ ಹಕ್ಕುಗಳಿಗಾಗಿ ಯುಎಸ್‌ಎಸ್‌ಆರ್‌ನ ಹಲವು ಪ್ರಾಂತಗಳಲ್ಲೂ, ಪೂರ್ವ ಯೂರೋಪ್‌ನಲ್ಲಿಯೂ ಹಲವು ಚಳುವಳಿಗಳನ್ನು ಪ್ರಾರಂಭಿಸಿದರು. ಹಂಗರಿ, ಜಕಸ್ಲೋವೇಕಿಯಾ, ಪೋಲ್ಯಾಂಡ್‌ದಂತಹ ದೇಶಗಳಲ್ಲಿ ಇವು ತಮ್ಮ ದೇಶಗಳ ಮೇಲೆ ಯುಎಸ್‌ಎಸ್‌ಆರ್‌ನ ಯಜಮಾನಿಕೆಯಿಂದ ಸ್ವತಂತ್ರವನ್ನು ಸಹ ಕೋರಲಾರಂಭಿಸಿದವು. ಈ ಚಳುವಳಿಗಳಲ್ಲಿ ಕೆಲವಕ್ಕೆ ಅಮೇರಿಕ, ಇಂಗ್ಲೆಂಡ್‌ಗಳೊಂದಿಗೆ ಕಮ್ಯುನಿಸ್ಟ್ ವಿರೋಧ ದೇಶಗಳ ಬೆಂಬಲ ಸಹ ಲಭಿಸಿತು. ಮಾನವ ಹಕ್ಕುಗಳಿಗಾಗಿ ನಡೆದ ಈ ಚಳುವಳಿಯಲ್ಲಿ ಅನೇಕ ವಿಧವಾದ ಧೋರಣೆಗಳಿವೆ. ಕೆಲವು ಧೋರಣೆಗಳು ಸಾಮಾನ್ಯ ಜನರಿಗೆ ಮತ್ತಷ್ಟು ಸ್ವತಂತ್ರವನ್ನು ಕೋರಿದರೆ, ಕೆಲವು ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಗೆ ಅಂತ್ಯ ಹೇಳಬೇಕೆಂದು ಪ್ರಯತ್ನಿಸಿದವು. ಪ್ರಖ್ಯಾತ ಲೇಖನ ಅಲೆಗ್ಸಾಂಡರ್ ಸೋಲ್ಜ್‌ನಿತ್ಸಿನ್, ಅಣುಶಾಸ್ತ್ರಜ್ಞ ಆಂಡ್ರೇ ಸಖರೋವ್ ಈ ಎರಡನೇ ಧೋರಣೆಗೆ ಮುಖ್ಯ ನಾಯಕರು. ಇವು, ಇತರ ಚಳುವಳಿಗಳ ಫಲವಾಗಿ ಯುಎಸ್‌ಎಸ್‌ಆರ್‌ನಲ್ಲಿ ಅಧ್ಯಕ್ಷ ಗೋರ್ಬಚೆವ್‌ನ ಅಡಿಯಲ್ಲಿ ಹೊಸ ನಾಯಕತ್ವ ಆವಿರ್ಭವಿಸಿತು. ಆತನು ಪ್ರಜೆಗಳಿಗೆ ಮತ್ತಷ್ಟು ಸ್ವತಂತ್ರ ಕಲ್ಪಿಸಲು ಗ್ಲಾಸ್‌ನೋಸ್ಟ್ ಎನ್ನುವ ಸುಧಾರಣೆಗಳ ಪ್ರಕ್ರಿಯೆಯನ್ನು ಆರಂಭಿಸಿದನು.

- ಅಮೇರಿಕ, ಯುಎಸ್‌ಎಸ್‌ಆರ್‌ಗಳಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಹೋಲಿಕೆಗಳು, ವ್ಯತ್ಯಾಸಗಳನ್ನು ಗುರ್ತಿಸಿರಿ. ಪ್ರಜೆಗಳ ಹಕ್ಕುಗಳಿಗೆ ಅವು ಹೇಗೆ ಸ್ಪಂಧಿಸಿದವು.

ಅಣು ವಿರೋಧ, ಯುದ್ಧ ವಿರೋಧ ಚಳುವಳಿಗಳು : (Anti-nuclear and Anti-war Movements) :

1970 ಮತ್ತು 1980ರ ದಶಮಾನಗಳು ಒಂದು ಹೊಸ ವಿಧವಾದ ಚಳುವಳಿಯನ್ನು ಕಂಡವು. ಇದು ಅಣ್ವಾಯುಧ ಗಳಿಗೆ, ಯುದ್ಧಗಳಿಗೆ ವಿರುದ್ಧವಾಗಿ ನಡೆದ ಚಳುವಳಿ. 1945 ಆಗಸ್ಟ್‌ನಲ್ಲಿ ಹಿರೋಷಿಮಾ, ನಾಗಸಾಕಿಗಳ ಮೇಲೆ ಅಣುಬಾಂಬುಗಳ ಘೋರವನ್ನು ಪ್ರಪಂಚವೆಲ್ಲಾ ನೋಡಿತು. ಆದರೂ ಅಮೇರಿಕ, ಯುಎಸ್‌ಎಸ್‌ಆರ್, ಬ್ರಿಟನ್, ಫ್ರಾನ್ಸ್‌ನಂತಹ ಅಗ್ರ ರಾಷ್ಟ್ರಗಳು ಇತರ ದೇಶಗಳು ಅವುಗಳನ್ನು ಉಪಯೋಗಿಸಂದತೆ ನಿಯಂತ್ರಿಸುತ್ತದೆ ಎನ್ನುವ ವಿಶ್ವಾಸದಿಂದ ಅಣ್ವಾಯುಧಗಳ ಸಂಗ್ರಹಣೆಯನ್ನು ಬೆಳೆಸುತ್ತಾ ಹೋದವು ಅವು ಅಮೇರಿಕಾ, ಯುಎಸ್‌ಎಸ್‌ಆರ್‌ಗಳ ನಡುವೆ ಶೀತಲ ಸಮರವೂ, ವಿಯತ್ನಾಂನೊಂದಿಗೆ ಅಮೇರಿಕಾ ಯುದ್ಧವು ತೀವ್ರವಾಗಿ ಇರುವ ದಿನಗಳು. ಮತ್ತೊಂದು

SCERT TELANGANA

ಪ್ರಪಂಚ ಯುದ್ಧ ಸಂಭವಿಸುತ್ತದೇನೋ ಎನ್ನುವ ಭಯದ ಮುಷ್ಟಿಯಲ್ಲಿ ಪ್ರಪಂಚವೆಲ್ಲಾ ಇತ್ತು. ಯುದ್ಧ ಪ್ರಾರಂಭವಾಗಿ, ಅಣ್ವಾಯುಧಗಳನ್ನು ಬಳಸಿದ್ದಾದರೆ ಭೂಮಿ ಮೇಲೆ ಮಾನವ ಕುಲವು ಅಳಿದು ಹೋಗುತ್ತದೆಂದು ಭಯಪಡಲಾರಂಭಿಸಿದರು. ಪ್ರಪಂಚದಾದ್ಯಂತ ಶಾಸ್ತ್ರಜ್ಞರು, ಬುದ್ಧಿಜೀವಿಗಳು ಅಣ್ವಾಯುಧಗಳ ನಿಷೇಧಕ್ಕಾಗಿ ಹೋರಾಡಲಾರಂಭಿಸಿದರು, ವ್ಯರ್ಥ ಆಯುಧ ಪೈಪೋಟಿಗೆ ಸಮರೋಪ ಹೇಳಬೇಕೆಂದು ಅಮೇರಿಕಾ, ಯುಎಸ್ಎಸ್ಆರ್‌ಗಳು ಒಂದು ಒಪ್ಪಂದಕ್ಕೆ ಬರಬೇಕೆಂದು ಕೋರಲಾರಂಭಿಸಿದರು.

ವಿಯತ್ನಾಂ ಯುದ್ಧದಲ್ಲಿ ವಿಯತ್ನಾಂಗೆ ಸೇರಿದ 8,00,000 ಸೈನಿಕರು, 30,00,000 ನಾಗರೀಕರು ಅಲ್ಲದೇ ಅಧಿಕ ಸಂಖ್ಯೆಯಲ್ಲಿ ಕಂಬೋಡಿಯನ್ನರು, ಲಾವೋಷಿಯನ್ನರು ಮರಣ ಹೊಂದಿದರು. ಅಮೇರಿಕಾಗೆ ಯಾವುದೇ ಪೌರನಷ್ಟ ನಡೆಯದಿದ್ದರೂ ಬಹಳ ದೊಡ್ಡ ಸಂಖ್ಯೆಯಲ್ಲಿ ಸೈನಿಕರು ಮರಣ ಹೊಂದಿದರು, ಅದಕ್ಕಿಂತ ಅಧಿಕ ಸಂಖ್ಯೆಯಲ್ಲಿ ಅಂಗವಿಕಲರಾದರು. ತಮ್ಮ ಶತೃಗಳಾದ ಅಮೇರಿಕಾ, ಫ್ರಾನ್ಸ್‌ಗಳೊಂದಿಗೆ ಹೋಲಿಸಿದರೆ ವಿಯತ್ನಾಂ ವಿಶಾಲ ಅರಣ್ಯಗಳಿಂದ ಕೂಡಿದ ಬಡದೇಶ. ಯುದ್ಧದಲ್ಲಿ ವಿಯತ್ನಾಮಿಗಳು ಗೆರಿಲ್ಲಾ ಯುದ್ಧ ತಂತ್ರವನ್ನು ಅನುಸರಿಸಿದರು. ಅಮೇರಿಕಾ ರಸಾಯನಿಕ ಆಯುಧಗಳು, ನೇಪಾಮ್ (Naplam) ಬಾಂಬುಗಳಂತಹ ಹೊಸ ಆಯುಧಗಳನ್ನು ಕಂಡು ಹಿಡಿದು ಗ್ರಾಮಗಳನ್ನು ಸಂಪೂರ್ಣವಾಗಿ ನಾಶಗೊಳಿಸಲು ಅವುಗಳನ್ನು ಉಪಯೋಗಿಸಿತು.

ಅಮೇರಿಕಾಕ್ಕೆ ಎಷ್ಟುಮಾತ್ರವೂ ಅಪಾಯಕರವಲ್ಲದ ಅಮಾಯಕರಾದ ಜನರ ಮೇಲೆ ಬಾಂಬುಗಳು ಹಾಕುವುದು ಎಷ್ಟರಮಟ್ಟಿಗೆ ನ್ಯಾಯವೆಂದು 1970ರ ಆರಂಭದಲ್ಲಿ ವಿಯತ್ನಾಂನಿಂದ ಮರಳಿ ಬರುತ್ತಿರುವ ಅಮೇರಿಕಾ ಸೈನಿಕರಲ್ಲಿ ಸಂದೇಹ ಬೆಳೆಯಲಾರಂಭಿಸಿತು. ಅದೇ ಸಮಯದಲ್ಲಿ ಎಲ್ಲೊ ಇರುವ ವಿಯತ್ನಾಂನಲ್ಲಿ ಯುದ್ಧಕ್ಕೆ ತಮ್ಮ ಮಕ್ಕಳನ್ನು ಕಳುಹಿಸಲು ನಿರಾಕರಿಸುವ ಅಮೇರಿಕನ್ನರ ಸಂಖ್ಯೆ ಸಹ ಹೆಚ್ಚತ್ತಾ ಬಂದಿತು. ಇದರಿಂದ ವಿಯತ್ನಾಂ ಯುದ್ಧಕ್ಕೆ ವಿರೋಧವಾಗಿ ಅಮೇರಿಕಾವೆಲ್ಲಾ ಪ್ರಜಾ ಪ್ರತಿಭಟನೆಗಳು ಉಕ್ಕಿ ಹರಿದವು. ಇದರಿಂದ ಕೊನೆಗೆ ಅಮೇರಿಕಾ 1975ರಲ್ಲಿ ಯುದ್ಧವನ್ನು ನಿಲ್ಲಿಸಿ ವಿಯತ್ನಾಂದಿಂದ ಹೊರಗೆ ಬಂದಿತು. ಅಮೇರಿಕಾಕ್ಕೆ ವಿರುದ್ಧವಾಗಿ ವಿಯತ್ನಾಂ ಜನರು ಪ್ರಾರಂಭಿಸಿದ ಚಳುವಳಿ ಸಫಲವಾಗಿದ್ದರಿಂದ ಪ್ರಪಂಚದಾದ್ಯಂತ ಶಾಂತಿ ಹೋರಾಟಕ್ಕೆ ಸ್ಫೂರ್ತಿ ನೀಡಿತು.

''ನಾವು ಹೋಗುವುದಿಲ್ಲ'' ("we Won't Go)

ಅಮೇರಿಕಾದಲ್ಲಿ ದೃಢಕಾಯರಾದ ಎಲ್ಲರು ಕಡ್ಡಾಯವಾಗಿ ಸ್ವಲ್ಪ ಕಾಲದವರೆಗೆ ಸೈನ್ಯದಲ್ಲಿ ಕೆಲಸ ಮಾಡಬೇಕೆಂಬ ಕಾನೂನು ಇದೆ. ವಿಯತ್ನಾಂ ಯುದ್ಧದಲ್ಲಿ ಹೋರಾಡುವುದಕ್ಕೆ, ಸೈನ್ಯದಲ್ಲಿ ಸೇರುವುದಕ್ಕೆಕ ಸಾವಿರಾರು ಜನ ಪೌರರು ನಿರಾಕರಿಸಿದರು. ಈ ತಿರಸ್ಕರಣೆ ಪ್ರತಿಭಟನೆಯಲ್ಲಿ ಒಂದನ್ನು ಇಲ್ಲಿ ಓದೋಣ, ಹಾರ್ವಾರ್ಡ್ ಕ್ರಿಂಸನ್ ಎನ್ನುವ ದಿನ ಪತ್ರಿಕೆಯಲ್ಲಿ ಇದು ಪ್ರಚುರಿತವಾಯಿತು.

ಸೈನ್ಯದಲ್ಲಿ ಸೇರುವ ವಯಸ್ಸಿರುವ ಯುವಕರಾದ ನಮ್ಮನ್ನು ಸರ್ಕಾರ ವಿಯತ್ನಾಂನಲ್ಲಿ ಯುದ್ಧಕ್ಕೆ ಕಳುಹಿಸಬಹುದು. ಈ ಯುದ್ಧದ ಇತಿಹಾಸವನ್ನು ಸ್ವಭಾವವನ್ನು ನಾವು ಅಧ್ಯಯನ ಮಾಡಿದ ಮೇಲೆ ಈ ಯುದ್ಧದಲ್ಲಿ ಪಾಲ್ಗೊಳ್ಳುವುದು ನಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದಿದ್ದೇವೆ. ಆದ್ದರಿಂದ ವಿಯತ್ನಾಂನಲ್ಲಿ ಅಮೇರಿಕಾ ಯುದ್ಧವನ್ನು ಮುಂದುವರೆಸುತ್ತಿರುವವರೆ ನಾವು ಸೈನಿಕ ಸೇವೆಯಲ್ಲಿ ಸೇರಲು (ಕಾನೂನಿನ ಪ್ರಕಾರ ಎಲ್ಲರೂ ಹಾಗೆ ಮಾಡಬೇಕು) ನಿರಾಕರಿಸಬೇಕು ಎನ್ನುವ ದೃಢ ನಿರ್ಣಯವನ್ನು ಪ್ರಕಟಿಸುತ್ತಿದ್ದೇವೆ. ಈ ಪ್ರಕಟಣೆಯ ಮೇಲೆ ಸಹಿ ಮಾಡುವುದರ ಮೂಲಕ ಇದೇ ಅಭಿಪ್ರಾಯಗಳಿರುವ ಸೈನ್ಯದಲ್ಲಿ ಸೇರುವ ವಯಸ್ಸಿನ ಇತರ ಯುವಕರೊಂದಿಗೆ ಸಂಘೀಭಾವ ತಿಳಿಸಿ ಯುದ್ಧಕ್ಕೆ ನಮ್ಮ ವಯಕ್ತಿಕ, ನೈತಿಕ ತಿರಸ್ಕರಣೆಯನ್ನು ಬಲವಾದ ರಾಜಕೀಯ ವಿರೋಧವಾಗಿ ಮಾರ್ಪಡಿಸಲು ಭಾವಿಸಿದ್ದೇವೆ

- ಇವರನ್ನು ದೇಶಭಕ್ತಿ ಇಲ್ಲದವರೆಂದ ಕೆಲವರು ಭಾವಿಸಿದರೆ, ಅನ್ಯಾಯವಾದ ಯುದ್ಧದಲ್ಲಿ ಪಾಲ್ಗೊಳ್ಳಬೇಕೆಂದು ಕೊಳ್ಳದಿರುವುದು ಸಮರ್ಥನೀಯವೇ ಎಂದು ಕೆಲವರು ಭಾವಿಸಿದರು. ಈ ಎರಡು ದೃಷ್ಟಿಕೋನಗಳನ್ನು ತರಗತಿ ಕೋಣೆಯಲ್ಲಿ ಚರ್ಚಿಸಿ ನಿಮ್ಮ ದೃಷ್ಟಿಕೋನದೊಂದಿಗೆ ಎರಡು ಕಡೆಯ ವಾದಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

SCERT TELANGANA

ವಿಯತ್ನಾಂ ಯುದ್ಧ ಮುಗಿದ ನಂತರ ಮತ್ತಷ್ಟು ದೇಶಗಳು ಅಣ್ವಾಯುಧಗಳ ಸಂಗ್ರಹಣೆಯಲ್ಲಿ ಒಂದಕ್ಕೊಂದು ಪೈಪೋಟಿ ಪಡುವುದರಿಂದ ಅಣ್ವಾಯುಧದ ಪೈಪೋಟಿ ತೀವ್ರರೂಪ ತಾಳಿತು. ಈ ಅಣ್ವಾಯುಧಗಳನ್ನು ಉತ್ಪತ್ತಿ ಮಾಡುವ ಕಂಪನಿಗಳು (ಇವುಗಳನ್ನು ಸೈನಿಕ ಕೈಗಾರಿಕಾ ಕಂಪನಿಗಳೆನ್ನುವರು), ಸರ್ಕಾರಗಳು ಸಾಮಾನ್ಯ ಜನರಲ್ಲಿ ಯುದ್ಧ ಭಯವನ್ನು ಉಂಟು ಮಾಡಿ, ಅಣ್ವಾಯುಧಗಳ ಮೇಲೆ ಹಣವನ್ನು ಮತ್ತಷ್ಟು ಖರ್ಚು ಮಾಡಲು ಬೆಂಬಲ ಪಡೆಯುತ್ತಿದ್ದವು. ಕ್ರಮೇಣ, ಪ್ರತ್ಯೇಕವಾಗಿ ಯೂರೋಪಿನಲ್ಲಿ, ಅನೇಕ ಜನರು ಯುದ್ಧ ಜಪ, ಅದರ ಫಲವಾಗಿ ಆಯುಧ ಪೈಪೋಟಿಯಿಂದ ಪ್ರಪಂಚವೆಲ್ಲಾ ಅಪಾಯಕ್ಕೆ ಒಳಗಾಗುತ್ತದೆಂದೂ, ಯುದ್ಧದಲ್ಲಿ ಪ್ರತ್ಯಕ್ಷವಾಗಿ ಸಂಬಂಧ ವಿಲ್ಲದ ದೇಶಗಳೊಂದಿಗೆ ಪ್ರಪಂಚವೆಲ್ಲಾ ಸರ್ವನಾಶವಾಗು ಯುದ್ಧ ಸಂಭವಿಸಬಹುದೆಂದು ಗುರ್ತಿಸಲಾರಂಭಿಸಿದರು. ಸರ್ಕಾರದ ವಿಧಾನಗಳ ಮೇಲೆ ದೊಡ್ಡ ಮೊತ್ತದಲ್ಲಿ ಪ್ರಜಾಂಧೋಲನೆಗಳು ಪ್ರಾರಂಭವಾದವು. ಇತರ ಸರ್ಕಾರಗಳೊಂದಿಗೆ ಅಣ್ವಾಯುಧಗಳ ಸಂಗ್ರಹಣೆಯನ್ನು ಕಡಿಮೆ ಮಾಡಿಕೊಳ್ಳಲು, ಶಾಂತಿ ದೆಸೆಗೆ ಕೃಷಿ ಮಾಡಲು ಚರ್ಚೆಗಳು ಪ್ರಾರಂಭಿಸಬೇಕೆಂದು ಒತ್ತಡ ತರಲಾರಂಭಿಸಿದರು.

ಈ ಒತ್ತಡಗಳ ಕಾರಣದಿಂದ ಆಯುಧ ಪೈಪೋಟಿಯಲ್ಲಿ ಪ್ರಧಾನ ದೇಶಗಳಾದ ಅಮೇರಿಕ, ಯುಎಸ್ಎಸ್ಆರ್‌ಗಳು ತಮ್ಮ ಅಣ್ವಾಯುಧಗಳನ್ನು ಕಡಿಮೆ ಮಾಡಲು ಚರ್ಚೆಗಳು ಪ್ರಾರಂಭವಾದವು. ಇವುಗಳನ್ನು ವ್ಯೂಹಾತ್ಮಕ ಆಯುಧಗಳ ಪರಿಮಿತಿ ಚರ್ಚೆಗಳು (ಸ್ಟ್ರಾಟೆಜಿಕ್ ಆರ್ಮ್ಸ್ ಲಿಮಿಟೇಷನ್ ಟಾಕ್ಸ್-ಎಸ್ಎಎಲ್‌ಟಿ) ಪ್ರಾರಂಭಿಸಿದರು. ಆದರೆ ಇವು ಸಫಲವಾಗಲಿಲ್ಲ. ಅಂತಿಮವಾಗಿ 1991ರಲ್ಲಿ ವ್ಯೂಹಾತ್ಮಕ ಆಯುಧಗಳ ತಗ್ಗಿಸುವ ಒಪ್ಪಂದ (ಸ್ಟ್ರಾಟೆಜಿಕ್ ಆರ್ಮ್ಸ್ ರಿಡಕ್ಷನ್ ಟ್ರೀಟಿ-ಎಸ್‌ಟಿಎಆರ್‌ಟಿ)ದ ಮೇಲೆ ಸಹಿ ಮಾಡಿದರು. ಇತಿಹಾಸದಲ್ಲಿ ಅತ್ಯಂತ ದೊಡ್ಡ, ಸಂಕ್ಲಿಷ್ಟವಾದ ಆಯುಧ ನಿಯಂತ್ರಣ ಒಪ್ಪಂದ ಇದು. 2001ರಲ್ಲಿ ಇದು ಜಾರಿಗೆ ಬಂದಾಗ ಆಗ ಇರುವ ಎಲ್ಲಾ ಯುದ್ಧ ಕೌಶಲ್ಯದ ಅಣ್ವಾಯುಧಗಳಲ್ಲಿ ಶೇಕಡ 80 ರಷ್ಟು ತೊಲಗಿಸಿದರು. ಒಪ್ಪಂದದ ಮೇಲೆ ಸಹಿ ಮಾಡಿದ ಸ್ವಲ್ಪ ಕಾಲಕ್ಕೆ ಯುಎಸ್ಎಸ್ಆರ್ ರದ್ದಾಗಿ ಅದರ ಸ್ಥಾನದಲ್ಲಿ ಹೊಸದಾಗಿ ರಷ್ಯಾ ದೇಶ ಏರ್ಪಟ್ಟಿತು. ಇದರಿಂದ ಸುದೀರ್ಘ ಕಾಲದ ಶೀತಲ ಸಮರಕ್ಕೆ ತೆರೆ ಬಿದ್ದಿತು. ವಿನಾಶಕಾರಕವಾದ ಪ್ರಪಂಚ ಯುದ್ಧ ಎಂದು ಸಂಭವಿಸುತ್ತದೋ ಎನ್ನುವ ಭಯ ತೊಲಗಿ ಹೋಯಿತು. ಆದರೆ ದೇಶಗಳ ನಡುವೆ ಯುದ್ಧಗಳು, ಹಿಂಸೆ, ಕೊನೆಗೊಂಡಿಲ್ಲವೆಂದು ಪೂರ್ವ ಯೂರೋಪ್, ಇರಾಕ್, ಅಫ್ಘಾನಿಸ್ತಾನದಂತಹ ಪ್ರಾಂತಗಳಲ್ಲಿ ವಿನಾಶಕರ ಯುದ್ಧಗಳು ತಿಳಿಯಪಡಿಸಿದವು.

ಚಿತ್ರ 20.3 ಅ) ವಿಯತ್ನಾ ಯುದ್ಧಕ್ಕೆ ವಿರೋಧ ಪ್ರತಿಭಟನೆ
ಆ) ಪೆಂಟಗಾಂವ್ ಹತ್ತಿರ ಕಾವಲು ಇರುವ ಸೈನಿಕನಿಗೆ ಪ್ರತಿಭಟನಾಕಾರರಲ್ಲಿ ಒಬ್ಬ ಮಹಿಳೆ ಒಂದು ಹೂವು ಕೊಡುತ್ತಿದ್ದಾಳೆ. ಈ ಚಿತ್ರಗಳಲ್ಲಿನ ಭಾವನೆಗಳನ್ನು ಚರ್ಚಿಸಿರಿ.

SCERT TELANGANA

- ಆಯುಧೀಕರಣಕ್ಕೆ ವಿವಿಧ ರೀತಿಯ ಪ್ರತಿಸ್ಪಂದನೆಗಳು ಏನು ?
- ಪರಸ್ಪರ ಕಾರ್ಯನೀತಿಗಳನ್ನು ಆಯಾ ದೇಶಗಳ ಸರ್ಕಾರಗಳು ನಿರ್ಣಯಿಸುವುದು ಮಾತ್ರವಲ್ಲದೆ ವಿವಿಧ ದೇಶಗಳ ಜನರು ಒಬ್ಬರಿಗೊಬ್ಬರು ಬೆರೆಯುತ್ತಿದ್ದರೆ ಯುದ್ಧ ಅವಕಾಶಗಳು ಕಡಿಮೆಯಾಗುತ್ತವೆ. ಇದರೊಂದಿಗೆ ನೀವು ಏಕೀಭವಿಸುತ್ತೀರಾ ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ತಿಳಿಸಿರಿ.
- ಅಣು ಕಾರ್ಖಾನೆಗಳನ್ನು, ಕಾಲುಷ್ಯ ಕೈಗಾರಿಕೆಗಳ ಸ್ಥಾಪನೆಯ ನಿರ್ಣಯಗಳೊಂದಿಗೆ ಸಂಬಂಧವಿಲ್ಲದ ದೇಶಗಳ ಜನರು ಸಹ ಪರಿಸರ ಮಾಲಿನ್ಯದ ಪ್ರಭಾವಕ್ಕೆ ಹೇಗೆ ಗುರಿಯಾಗುತ್ತಾರೋ ವಿವರಿಸಿರಿ. ಇಂತಹ ಪರಿಸ್ಥಿತಿಗಳನ್ನು ಹೇಗೆ ಪರಿಷ್ಕರಿಸಬೇಕು ?

ಯುಎಸ್‌ಎಸ್‌ಆರ್‌ನ ಕೊನೆಯ ಹಂತದಲ್ಲಿ ಚೆರ್ನೋಬಿಲ್‌ನಲ್ಲಿರುವ ಅಣು ಕೈಗಾರಿಕೆಗಳಲ್ಲಿ ದೊಡ್ಡ ದುರ್ಘಟನೆ ನಡೆಯಿತು. ಇದರಿಂದ ಚೆರ್ನೋಬಿಲ್‌ನಲ್ಲಿಯ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಮರಣ ಹೊಂದಿದರು. ಅಷ್ಟೇ ಅಲ್ಲದೆ ಯೂರೋಪ್‌ನಲ್ಲಿನ ಅನೇಕ ದೇಶಗಳೊಂದಿಗೆ ಸಹ ಬಹಳ ವಿಶಾಲ ಪ್ರಾಂತದಲ್ಲಿ ಅಣು ಕಾಲುಷ್ಯಕ್ಕೆ ಕಾರಣ ವಾಯಿತು. ಇದರ ಪ್ರಭಾವದಿಂದ ಯುದ್ಧಕ್ಕಾಗಿಯಾದರೂ, ಶಾಂತಿಯುತ ಪ್ರಯೋಜನಗಳಿಗಾದರೂ ಅಣುಶಕ್ತಿಯನ್ನು ಉಪಯೋಗಿಸುವುದರಲ್ಲಿನ ಅಪಾಯಗಳು ಜನರಿಗೆ ತಿಳಿದವು. ಇದರ ಫಲವಾಗಿ ಯುದ್ಧ ವಿರೋಧ ಪ್ರತಿಭಟನೆಗಳು, ಪರಿಸರ ಪರಿರಕ್ಷಣಾ ಚಳುವಳಿಗಳು ಹೆಚ್ಚಾದವು.

ಪ್ರಪಂಚೀಕರಣ, ನಿರಾಶ್ರಿತರಾದ ಜನರು, ಪರಿಸರ ಚಳುವಳಿಗಳು : (Globalisation, marginalised people and environmental movements):

1990 ರಿಂದ, ಪ್ರಪಂಚೀಕರಣ, ನವೀನ ಉದಾರವಾದ ಎನ್ನುವ ಹೆಸರಿನಿಂದ ಸಂಭವಿಸುತ್ತಿರುವ ಪ್ರಪಂಚದಾದ್ಯಂತ ಆರ್ಥಿಕ, ರಾಜಕೀಯ ಬದಲಾವಣೆಗಳಿಂದ ಯಾವುದೇ ಸದುಪಾಯಗಳು ಇಲ್ಲದ ಜನರು ಜೀವನಗಳು ತೀವ್ರವಾಗಿ ಪ್ರಭಾವಿತಗೊಂಡವು. ಬುಡಕಟ್ಟು ಜನರು, ಬಡರೈತರು, ಭೂಮಿಯಿಲ್ಲದ ಕಾರ್ಮಿಕರು, ಮಹಿಳೆಯರು, ಅಸಂಘಟಿತ ರಂಗದಲ್ಲಿ ಕೆಲಸ ಮಾಡುತ್ತಿರುವ ಪಟ್ಟಣದ ಬಡವರು, ಕೈಗಾರಿಕಾ ಕಾರ್ಮಿಕರು ಎಲ್ಲರಿಗಿಂತ ಹೆಚ್ಚಾಗಿ ಪ್ರಭಾವಿತಗೊಂಡರು. ಇಂತಹ ಜನರಲ್ಲಿ ಹೆಚ್ಚು ಜನರಿಗೆ ಪಾಠಶಾಲೆಯ ವಿದ್ಯಾಭ್ಯಾಸ ಸರಿಯಾದ ಪೌಷ್ಟಿಕಾಹಾರ, ಆರೋಗ್ಯ ದೊರೆಯುತ್ತಿರತಿಲ್ಲ. ಈ ಕಾರಣದಿಂದಾಗಿ ಹೊಸ ಉದ್ಯೋಗಗಳಾಗಲೀ, ಉತ್ತಮ ವೇತನಗಳ ಉದ್ಯೋಗಗಳಾಗಲೀ, ಕಾನೂನುಬದ್ಧ ಇಲ್ಲವೇ ಸಂವಿಧಾನಬದ್ಧ ಪರಿಹಾರಗಳಾಗಲೀ ಇವರಿಗೆ ಕೈಗೆಟುಕುವಂತಿರಲಿಲ್ಲ.

ಕಳೆದ ಕೆಲವು ದಶಮಾನಗಳಲ್ಲಿ ವಾಣಿಜ್ಯ ರೈತರು, ಗಣಿಗಳು ಅಗೆಯುವ ಸಂಸ್ಥೆಗಳು, ಆಣೆಕಟ್ಟುಗಳ ಯೋಜನೆಗಳಂತಹವುಗಳಿಂದ ಬುಡಕಟ್ಟು ಜನರು, ನಿರಾಶ್ರಿತರಾದ ಜನರು ಅಪಾಯವನ್ನು ಎದುರಿಸುತ್ತಿದ್ದಾರೆ. ಖನಿಜಗಳು, ಅಪರೂಪವಾದ ಗಿಡಮೂಲಿಕೆಗಳು, ಪ್ರಾಣಿಗಳು, ನೀರು ಇಂತಹ ಬೆಲೆಬಾಳುವ ಸಂಪನ್ಮೂಲಗಳನ್ನು ದೊಡ್ಡ ದೊಡ್ಡ ಕಂಪನಿಗಳು ಗ್ರಾಮೀಣ ಪ್ರಾಂತಗಳಲ್ಲಿ ಕಂಡು ಹಿಡಿಯುವುದರಿಂದ ತಲತಲಾಂತರವಾಗಿ ವಾಸಿಸುತ್ತಿದ್ದ ಪ್ರಾಂತಗಳಿಂದ ಬುಡಕಟ್ಟು ಜನರು, ರೈತರು ತೊಲಗಿಸಲ್ಪಡುತ್ತಿದ್ದಾರೆ. ಇದರಿಂದ ಜನರು ಹೊಸ ಪ್ರಾಂತಗಳಲ್ಲಿ ಚೆಲ್ಲಾಚೆದುರಾಗಿ ಹೋಗುತ್ತಿದ್ದಾರೆ, ಗಿರಿಜನ ಸಂಸ್ಕೃತಿ ನಾಶವಾಗುತ್ತಿದೆ. ಇದರ ಫಲವಾಗಿ ಅವರು ಸಮಾಜದಲ್ಲಿ ಅತ್ಯಂತ ಪ್ರಭಾವಕ್ಕೊಳಗಾದ ಪ್ರಜೆಗಳಾಗಿ ಬದಲಾಗಿದ್ದಾರೆ. ಅಷ್ಟೇ ಅಲ್ಲದೆ ಈ ಅಭಿವೃದ್ಧಿ ಪ್ರಕ್ರಿಯೆಗಳಿಂದ ಪ್ರಕೃತಿ ಸಂಪನ್ಮೂಲಗಳಿಗೆ ತೀವ್ರ ನಷ್ಟ ಏರ್ಪಡುತ್ತಿರುವುದರಿಂದ ಪರಿಸರ ಹೋರಾಟಗಳು ಪ್ರಾರಂಭವಾದವು. ಈ ಅಭಿವೃದ್ಧಿ ಶಕ್ತಿಗಳ ವಿನಾಶಕಾರಕ, ಹಿಂಸಾತ್ಮಕ ಸ್ವರೂಪದ ಮೇಲೆ ಕೋಪವನ್ನು, ನಿರಾಶ್ರಿತರಾದ ಜನರು ಒಗ್ಗೂಡಲು ಈ ಚಳುವಳಿಗಳು ಪ್ರಯತ್ನಿಸುತ್ತಿವೆ. ಈ ಚಳುವಳಿಗಳು ವಿಭಿನ್ನವಾದ ಭವಿಷ್ಯದ ಗುರಿಯನ್ನು ಬಯಸುತ್ತಿವೆ.

ಯೂರೋಪಿನಲ್ಲಿ ಗ್ರೀನ್‌ಪೀಸ್ ಚಳುವಳಿ (Greenpeace Movement in Europe) :

ಅಲಾಸ್ಕಾ ಹತ್ತಿರ ಸಮುದ್ರಗರ್ಭದಲ್ಲಿ ಅಮೇರಿಕ 1971ರಲ್ಲಿ ಪ್ರಾರಂಭಿಸಿದ ಅಣು ಪರೀಕ್ಷೆಗಳಿಗೆ ವಿರುದ್ಧವಾಗಿ ಈ ಚಳುವಳಿ ಪ್ರಾರಂಭವಾಯಿತು. ಪ್ರತಿಭಟನೆ ತಿಳಿಯಪಡಿಸಲು ಸ್ವಯಂಸೇವಕರು ಚಿಕ್ಕ ಹಡಗಿನಲ್ಲಿ ಪ್ರಯೋಗ ಪ್ರದೇಶಕ್ಕೆ ಹೊರಟರು. ಈ ಹಡಗಿನ ಹೆಸರು ಗ್ರೀನ್‌ಪೀಸ್, ಕೊನೆಗೆ ಇದು ಆ ಚಳುವಳಿಯ ಹೆಸರಾಗಿ ಬದಲಾಯಿತು.

SCERT TELANGANA

ಪ್ರಸ್ತುತ ಈ ಚಳುವಳಿ ನಲವತ್ತು ದೇಶಗಳಲ್ಲಿ ವಿಸ್ತರಿಸಿದೆ. ಇದರ ಪ್ರಧಾನ ಕಾರ್ಯಾಲಯ ಅಮಸ್ಟರ್‌ಡಾಂ (ಹಾಲೆಂಡ್) ನಲ್ಲಿದೆ. ಇದು ಮುಖ್ಯವಾದ ಅಂತರಾಷ್ಟ್ರೀಯ ಸ್ವತಂತ್ರ ಸಂಸ್ಥೆಗಳಲ್ಲಿ ಒಂದು.

ಸೂರ್ಯನ ಹಾನಿಕಾರಕ ಕಿರಣಗಳನ್ನು ತಡೆಯುವ ವಾತಾವರಣದಲ್ಲಿನ ಓಜೋನ್ ಪೊರೆ ಕಾಲುಷ್ಯದಿಂದ ಹಾಳಾಗುತ್ತಿದೆ ಎಂದು ಕಳೆದ ದಶಮಾನದಲ್ಲಿ ಶಾಸ್ತ್ರಜ್ಞರು ಗುರ್ತಿಸಿದರು. ಮಾಲಿನ್ಯದಿಂದ ಭೂಮಿಯ ಸರಾಸರಿ ಉಷ್ಣೋಗ್ರತೆಗಳು ಕ್ರಮೇಣ ಹೆಚ್ಚಾಗುತ್ತಿವೆ. ಇದರ ಕಾರಣದಿಂದ ಧೃವ ಪ್ರಾಂತಗಳ ಹತ್ತಿರ ಇರುವ ಮಂಜು ಟೊಪ್ಪಿಗೆಗಳು (ದೊಡ್ಡ ಮೊತ್ತದಲ್ಲಿ ಗಡ್ಡೆ ಕಟ್ಟಿದ ನೀರು) ಕರಗಿ ಹೋಗುತ್ತಿವೆ. ಈ ಮಂಜು ಕರಗಿ ಸಮುದ್ರದಲ್ಲಿ ಸೇರುವುದುರಿಂದ ಮಹಾಸಾಗರಗಳು, ಸಮುದ್ರಗಳ ನೀರಿನ ಮಟ್ಟ ಹೆಚ್ಚಾಗಿ ಪ್ರಪಂಚದಲ್ಲೆಲ್ಲಾ ತೀರ ಪ್ರಾಂತಗಳು ಮುಳುಗಿ ಹೋಗುತ್ತಿವೆ. ಸಮುದ್ರ ತೀರದುದ್ದಕ್ಕೂ ಬಂಗ್ಲಾದೇಶ, ಶ್ರೀಲಂಕ, ಮಾರಿಷಸ್, ಭಾರತದೇಶ, ಇಂಡೋನೇಷಿಯಾದಂತಹ ದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವ ಜನರು ಪ್ರವಾಹಗಳು, ಮುಳುಗುವಂತಹ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಪಂಚದ ಉಷ್ಣೋಗ್ರತೆಗಳು ಹೆಚ್ಚಾಗುವುದರಿಂದ ವರ್ಷಪಾತದಲ್ಲಿನ ವ್ಯತ್ಯಾಸಗಳಿಂದ (ಅಕಾಲ ಮಳೆಗಳು, ಅತಿವೃಷ್ಟಿ, ಬರಗಳು), ಬೆಳೆಗಳು ನಷ್ಟವಾಗುವುದರಿಂದ ತೀರ ಪ್ರಾಂತಕ್ಕೆ ದೂರವಿರುವ ಪ್ರಜೆಗಳು ಸಹ ಸಮಸ್ಯೆಗಳಿಗೊಳಗಾದರು. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ ಪ್ರಪಂಚದಾದ್ಯಂತ ವಾತಾವರಣದ ಬದಲಾವಣೆಯಿಂದ ವ್ಯವಸಾಯಾಧಾರಿತ ಜನರು, ದೇಶಗಳು ಪ್ರಧಾನವಾಗಿ ಇದರ ಪರಿಣಾಮಕ್ಕೊಳಗಾದವು.

ವಾತಾವರಣದ ಬದಲಾವಣೆಯ ಮೇಲೆ ಹಲವು ದೇಶಗಳಲ್ಲಿ ಗ್ರೀನ್‌ಪೀಸ್ ಚಳುವಳಿ ಆರಂಭವಾಯಿತು. ಅನಂತ ವೈವಿದ್ಯತೆಯಿಂದ ಕೂಡಿದ ಜೀವವನ್ನು ಭೂಮಿ ಪೋಷಿಸುವ ಶಕ್ತಿಯನ್ನು ಕಾಪಾಡುವುದೂ ಅದರ ಉದ್ದೇಶ. ಕಾಲಕ್ರಮದಲ್ಲಿ ಈ ಚಳುವಳಿ 'ಸುಸ್ಥಿರ ಅಭಿವೃದ್ಧಿ' ಎನ್ನುವ ಭಾವನೆಯನ್ನು ಮುಂದಕ್ಕೆ ತಂದಿತು. ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದದ ದೇಶಗಳ ಜನರೆಲ್ಲರಿಗೂ ನ್ಯಾಯವಾಗಿರುವ, ಪರಿಸರರಿತ್ಯಾ ದೀರ್ಘಕಾಲ ಬಾಳುವ ಅಭಿವೃದ್ಧಿಯನ್ನು ಅದು ಬಯಸುತ್ತಿದೆ.

- ಗ್ರೀನ್‌ಪೀಸ್ ಚಳುವಳಿ ವೆಬ್‌ಸೈಟ್ ನೋಡಿ (http:/www.greenpeace.org/intrnational) ಅದು ಕೆಲಸ ಮಾಡುತ್ತಿರುವ ಅಂಶಗಳ ಕುರಿತು, ಆಯ್ದುಕೊಂಡ ಹೋರಾಟ ಪದ್ಧತಿಗಳ ಕುರಿತು ತಿಳಿದುಕೊಳ್ಳಿರಿ. ಈ ಚಳುವಳಿಯ ಮೇಲೆ ಇರುವ ಚರ್ಚೆಗಳು, ವಿಮರ್ಶೆಗಳ ಕುರಿತು ಸಹ ತಿಳಿದುಕೊಳ್ಳಿರಿ.

ಭೋಪಾಲ್ ಗ್ಯಾಸ್ ದುರ್ಘಟನೆ, ಸಂಬಂಧಿತ ಚಳುವಳಿಗಳು : (Bhopal Gas Disaster related movements) :

1984ರಲ್ಲಿ ಭೋಪಾಲ್‌ನಲ್ಲಿ ಸಂಭವಿಸಿದ ಈ ತೀವ್ರ ದುರ್ಘಟನೆಯ ಕುರಿತು ನೀವು ಓದಿರುತ್ತೀರಿ. ಭೋಪಾಲ್‌ನಲ್ಲಿ ಯೂನಿಯನ್ ಕಾರ್ಬೈಡ್ ಕಂಪನಿ (ನಂತರ ಇದನ್ನು ಡೌ ಕಂಪನಿಗೆ ಮಾರಾಟಮಾಡಿದರು)ಯಿಂದ ಒಂದು ರಾತ್ರಿ ವಿಷವಾಯುವು ಹೊರಬಂದಿತು. ಇದರಿಂದ ಸಾವಿರಾರು ಜನ ಮರಣ ಹೊಂದಿದರು. ಅದರ ಪ್ರಭಾವದಿಂದ ಇಂದಿಗೂ ಸಾವಿರಾರು ಜನರು ಕಷ್ಟಕ್ಕೊಳಗಾಗುತ್ತಿದ್ದಾರೆ. ಪ್ರಪಂಚದಲ್ಲಿಯೇ ಇದು ಅತಿ ದೊಡ್ಡ ಕೈಗಾರಿಕಾ ದುರ್ಘಟನೆ. ಪ್ರಾರಂಭದಿಂದ ಭೋಪಾಲ್ ಜನರು ನಾಲ್ಕು ಮುಖ್ಯವಾದ ಬೇಡಿಕೆಗಳಿಗಾಗಿ ಹೋರಾಡುತ್ತಿದ್ದಾರೆ.

ಪರಿಣಾಮಕ್ಕೊಳಗಾದವರಿಗೆ ಸರಿಯಾದ ವೈದ್ಯಕೀಯ ಸೌಕರ್ಯ ; ಈ ಕಂಪನಿ ಬಹುರಾಷ್ಟ್ರೀಯ ಕಂಪನಿಯಾದ್ದರಿಂದ ಅಂತರಾಷ್ಟ್ರೀಯ ಪ್ರಮಾಣಗಳ ಆಧಾರವಾಗಿ ನಷ್ಟ ಪರಿಹಾರ ; ಬಹುರಾಷ್ಟ್ರೀಯ ಕಂಪನಿಯ ಒಡೆತನವನ್ನು ಈ ಅಪರಾಧಕ್ಕೆ ಬಾಧ್ಯರನ್ನಾಗಿ ಮಾಡುವುದು ; ಕೊನೆಯದಾಗಿ ಭವಿಷ್ಯದಲ್ಲಿ ಇಂತಹ ದುರ್ಘಟನೆಗಳು ನಡೆಯದಂತೆ ನೋಡುವುದು.

ಇವುಗಳಲ್ಲಿ ಸ್ವಲ್ಪಮಟ್ಟಿಗೆ ಜಯ ಸಾಧಿಸಿದ್ದರೂ ಎಲ್ಲಾ ಪ್ರಧಾನ ಬಯಕೆಗಳನ್ನು ತೀರಿಸಲು ಇನ್ನೂ ಬಹಳ ದೂರದಲ್ಲಿಯೇ ಇರುವರೆಂದು ಹೇಳಬಹುದು. ಭೋಪಾಲ್‌ನಲ್ಲಿ ವೈದ್ಯಕೀಯ ಸೌಕರ್ಯಗಳು ಕಲ್ಪಿಸುವುದಕ್ಕಾಗಿ ದೊಡ್ಡ ಮೊತ್ತದಲ್ಲಿ ನಿಧಿಗಳು ಖರ್ಚು ಮಾಡಿದ್ದರೂ ದುರ್ಘಟನೆಗೆ ಒಳಗಾದ ವ್ಯಕ್ತಿಗಳು ಇನ್ನೂ ಅನಾರೋಗ್ಯದಿಂದ

SCERT TELANGANA

ಚಿತ್ರ 20.4 : ಭೋಪಾಲ್ ಗ್ಯಾಸ್

ನೋವುಪಡುತ್ತಲೇ ಇದ್ದಾರೆ. ನಷ್ಟ ಪರಿಹಾರ ಅಂತರಾಷ್ಟ್ರೀಯ ಪ್ರಮಾಣಗಳ ಪ್ರಕಾರ ದೊರೆಯಲಿಲ್ಲ. ನೀಡಿದ ಸ್ವಲ್ಪ ಹಣ ಕೂಡ ಪ್ರಭಾವಿತ ಜನರೆಲ್ಲರಿಗೂ ಸರಿಯಾಗಿ ಹಂಚಿಕೆಯಾಗಲಿಲ್ಲ. ಅಪಘಾತಕ್ಕೆ ಕಾರಣವಾದ ಕಂಪನಿ ಒಡೆತನವನ್ನು ವಿಚಾರಣೆಗೊಳಪಡಿಸಿ, ಶಿಕ್ಷಿಸಲೇ ಇಲ್ಲ. ಪ್ರಸ್ತುತ ಉತ್ತಮವಾದ ಕಾನೂನುಗಳಿರುವುದು ವಾಸ್ತವವಾದರೂ, ಭವಿಷ್ಯದಲ್ಲಿ ಇಂತಹ ಅಪಘಾತಗಳು ನಡೆಯದಂತೆ ನೋಡಿಕೊಳ್ಳಲು ಸರಿಯಾದ ಪದ್ಧತಿಗಳಾಗಲೀ, ತಕ್ಕಷ್ಟು ನಿಷ್ಪಕ್ಷಪಾತ ವಿಚಾರಣಾ ವ್ಯವಸ್ಥೆಯಾಗಲೀ ಇಲ್ಲ. ದುರ್ಘಟನೆಗೆ ಕಾರಣವಾದ ಕಂಪನಿ ಅಮೇರಿಕಾಲದಲ್ಲಿ ಇದ್ದುದರಿಂದ ಈ ವಿಷಯದಲ್ಲಿ ಪ್ರತಿಭಟನೆ ತಿಳಿಯಪಡಿಸುವುದರಲ್ಲಿ ಮತ್ತಷ್ಟು ಕಷ್ಟವಾಯಿತು. ಈ ಕಂಪನಿ ಕಾರಣದಿಂದ ಏರ್ಪಟ್ಟ ಮಾಲಿನ್ಯದಿಂದ ಪ್ರಭಾವಿತವಾದ ಕಾರ್ಖಾನೆಯ ಕಾರ್ಮಿಕರು, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಹೋರಾಟ ಮಾಡಲು ಅಂತರಾಷ್ಟ್ರೀಯ ಕಾನೂನುಗಳನ್ನು ಉಪಯೋಗಿಸಿಕೊಳ್ಳಬೇಕಾಗಿ ಬರುತ್ತಿದೆ. ಲಂಡನ್‌ನಲ್ಲಿ ನಡೆಯುತ್ತಿರುವ ಒಲಂಪಿಕ್ಸ್ ಕ್ರೀಡೆಗಳಿಗೆ ಡೌ ಕಂಪನಿ ಸ್ಪಾನ್ಸರ್ ಮಾಡಲು ವಿರುದ್ಧವಾಗಿ ಪ್ರಪಂಚದಾದ್ಯಂತ ಜನರು ಸಹಿಗಳನ್ನು ಮಾಡುತ್ತಿದ್ದಾರೆ. ಈ ವಿಧವಾಗಿ ಇಂದಿಗೂ ಈ ವಿಷಯದ ಮೇಲೆ ಜನರನ್ನು ಸಮೀಕರಿಸುತ್ತಿದ್ದಾರೆ. ಒಲಂಪಿಕ್ ಸಂಘ, ಡೌ ಕಂಪನಿಯ ನಡುವೆ ಅನೈತಿಕ ಸಂಬಂಧವನ್ನು ಪ್ರಪಂಚದಾದ್ಯಂತ ಅನೇಕ ಸಂಸ್ಥೆಗಳು ಎತ್ತಿ ಹಿಡಿಯುತ್ತಿವೆ.

ಪರಿಸರ ಚಳುವಳಿಗಳು (Environmental movements) :

ನಮ್ಮ ದೇಶದಲ್ಲಿಯೂ ಸಹ ಪರಿಸರ ಚಳುವಳಿಗಳು ಅರಣ್ಯಗಳ ಸಂರಕ್ಷಣೆಗಾಗಿ ಗ್ರಾಮಮಟ್ಟದಲ್ಲಿ ನಡೆದ ಚಳುವಳಿಗಳೊಂದಿಗೆ 1970ರಲ್ಲಿಯೇ ಪ್ರಾರಂಭವಾದವು. ನೀವು 12ನೇ ಅಧ್ಯಾಯದಲ್ಲಿ ಓದಿದ ಚಿಪ್ಕೋ ಚಳುವಳಿ ಇಂತಹ ಚಳುವಳಿಗಳಲ್ಲಿ ಒಂದು.

ನರ್ಮದಾ ನದಿಯ ಮೇಲೆ ಆಣೆಕಟ್ಟುಗಳಿಗೆ ವಿರುದ್ಧವಾಗಿ ಚಳುವಳಿಗಳು :

(Movements against dams on the Narmada river) :

1950ರಲ್ಲಿ ಭಾರತದೇಶ ಯೋಜನಾಬದ್ಧ ಅಭಿವೃದ್ಧಿಯಲ್ಲಿ ವಿವಿಧೋದ್ದೇಶ ದ ದೊಡ್ಡ ಆಣೆಕಟ್ಟುಗಳನ್ನು ಕಟ್ಟುವುದು ಒಂದು ಭಾಗ. ಹೀಗೆ ಕಟ್ಟಿದ ಆಣೆಕಟ್ಟುಗಳಲ್ಲಿ ಕೆಲವು ಭಾಕ್ರಾನಂಗಲ್, ಹಿರಾಕುಡ್, ನಾಗಾರ್ಜುನಸಾಗರ್, ಪ್ರಾರಂಭದಲ್ಲಿ ಜನರು ಆಣೆಕಟ್ಟುಗಳನ್ನು ಅದ್ಭುತವಾದ ನಿರ್ಮಾಣಗಳಾಗಿ ಪರಿಗಣಿಸಿದರು. ಅವು ದೊಡ್ಡ ಮೊತ್ತದಲ್ಲಿ ನೀರನ್ನು ಸಂಗ್ರಹಿಸಿ, ವಿಶಾಲವಾದ ಭೂಭಾಗಗಳಿಗೆ ವ್ಯವಸಾಯಕ್ಕೆ ನೀರನ್ನು ಒದಗಿಸಿ, ದೊಡ್ಡ ಮೊತ್ತದಲ್ಲಿ ವಿದ್ಯುತ್ ಉತ್ಪತ್ತಿ ಮಾಡಿ, ಪ್ರವಾಹಗಳು, ಬರಗಳನ್ನು ನಿಯಂತ್ರಿಸುತ್ತವೆಯೆಂದು ಬಯಸಿದರು. ಇವುಗಳ ಬಗ್ಗೆ ಆರಾಧನಾ ಭಾವ ಎಷ್ಟಿತ್ತೆಂದರೆ ಈ ಆಣೆಕಟ್ಟುಗಳಿಂದ ಮುಳುಗುವುದಕ್ಕೆ ಗುರಿಯಾದ ಪ್ರಾಂತದಲ್ಲಿನ ಜನರಿಗೆ, ಮರಗಳಿಗೆ, ಹೊಲಗಳಿಗೆ,



ಚಿತ್ರ : ನರ್ಮದಾ ನದಿ ಪರೀವಾಹಕ ಪ್ರಾಂತದಲ್ಲಿ ಜಲವಿದ್ಯುತ್ ಯೋಜನೆಗಳು

SCERT TELANGANA

ಪ್ರಾಣಿಗಳಿಗೆ ಏನಾಯಿತೆಂದು ಯಾರು ಕೇಳಲಿಲ್ಲ. ಈ ಆಣೆಕಟ್ಟುಗಳ ನಿರ್ಮಾಣದಲ್ಲಿ ಕಳೆದುಕೊಂಡ ವಿಶಾಲವಾದ ಫಲವತ್ತಾದ ಭೂಭಾಗಗಳ ಕುರಿತು, ನಷ್ಟ ಹೊಂದಿದ ಮರಗಳು, ಪ್ರಾಣಿ ಸಂಪತ್ತಿನ ಕುರಿತು, ನಿರಾಶ್ರಿತರಾದ ಜನರ ಕುರಿತು ಯಾರು ಗಮನ ನೀಡಲಿಲ್ಲ. ನಿರಾಶ್ರಿತರಾದ ಜನರು ಹೋಗಲು ಎಲ್ಲಿಯೂ ಸ್ಥಳ ಇಲ್ಲ, ಅವರಿಗೆ ಯಾವುದೇ ರೀತಿಯ ನಷ್ಟ ಪರಿಹಾರವೂ ನೀಡಲಿಲ್ಲ. ಒಂದು ವೇಳೆ ನೀಡಿದರೂ ಅದು ನಾಮಮಾತ್ರವಾಗಿಯೇ ಇದೆ. ದೊಡ್ಡ ಆಣೆಕಟ್ಟುಗಳಿಂದ ದೇಶದ ಜನರಿಗೆ ಒದಗುವ ಹೆಚ್ಚಿನ ಪ್ರಯೋಜನಗಳ ಮುಂದೆ ಈ ಸಮಸ್ಯೆಗಳು ಚಿಕ್ಕವೆಂದು ಬಹಳ ಜನರು ಭಾವಿಸಿದರು. ಆದರೆ ನಷ್ಟವಾದ ಅರಣ್ಯಗಳು, ಭೂಮಿಗಳು, ಗ್ರಾಮಗಳಂತಹ ಖರ್ಚುಗಳು, ನಷ್ಟಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡರೆ ಆಣೆಕಟ್ಟುಗಳ ಮೇಲೆ ಮಾಡಿದ ಖರ್ಚಿಗೆ ಅವು ತಕ್ಕಷ್ಟು ಫಲಗಳನ್ನು ನೀಡುತ್ತಿಲ್ಲವೆಂದು ಗ್ರಹಿಸಿದ ಜನರು ಇವುಗಳನ್ನು ಪ್ರಶ್ನಿಸಲಾರಂಭಿಸಿದರು. ಆಣೆಕಟ್ಟುಗಳಿಗೆ ಬಹಳ ದೊಡ್ಡ ಮೊತ್ತದಲ್ಲಿ ಖರ್ಚಾಗುತ್ತದೆ. ನಿರ್ಮಾಣದಲ್ಲಿ ವಿಳಂಬದಿಂದ, ಬೆಲೆಗಳ ಹೆಚ್ಚುವಿಕೆಯಿಂದ ಈ ಖರ್ಚು ಇನ್ನೂ ವಿಪರೀತವಾಗಿ ಹೆಚ್ಚಾಗುತ್ತಿದೆ. ಅಷ್ಟೇ ಅಲ್ಲದೆ ಇವು ಮೊದಲೇ ಆಶಿಸಿದಷ್ಟು ವಿಸ್ತೀರ್ಣಕ್ಕೆ ವ್ಯವಸಾಯಕ್ಕೆ ನೀರು ಒದಗಿಸಲಾರವು. ಊಹಿಸಿದಷ್ಟು ವಿದ್ಯುತ್‌ನ್ನು ಉತ್ಪತ್ತಿ ಮಾಡಲಾರವು. ಆಣೆಕಟ್ಟುಗಳಲ್ಲಿ ಸಂಗ್ರಹ ಮಾಡಿದ ನೀರಿನ ಮಟ್ಟ, ಇಂಜಿನೀಯರ್‌ಗಳು ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಇರುವುದರಿಂದ ಹೀಗೆ ನಡೆಯುತ್ತಿದೆ. ಭಾರತದೇಶದ ಇತಿಹಾಸದಲ್ಲಿಯೇ ನರ್ಮದಾ ನದಿಯ ಮೇಲೆ ಅತ್ಯಂತ ದೊಡ್ಡದಾದ ನದಿ ಕಣಿವೆ ಯೋಜನೆಗಳ ನಿರ್ಮಾಣವನ್ನು ಪ್ರಾರಂಭಿಸಬೇಕೆಂದು ಸರ್ಕಾರ ಪ್ರತಿಪಾದಿಸಿದ್ದರಿಂದ ಈ ಸಮಸ್ಯೆಗಳೆಲ್ಲಾ ಬೆಳಕಿಗೆ ಬಂದವು.

ಈ ಯೋಜನೆಯಿಂದ ನಿರಾಶ್ರಿತರಾದ ಜನರು ಕೇವಲ ಭೂಮಿ ಇರುವವರಿಗೆ ಮಾತ್ರವಲ್ಲದೆ, ಅಲ್ಲಿ ಇರುವವರಿಗೆಲ್ಲಾ ನ್ಯಾಯವಾದ ನಷ್ಟಪರಿಹಾರ ಸಲ್ಲಿಸಬೇಕೆಂದು ಕೋರಲಾರಂಭಿಸಿದರು. ಅಷ್ಟೇಅಲ್ಲದೇ ಆಣೆಕಟ್ಟಿನಿಂದ ಮುಳುಗುವುದಕ್ಕೆ ಗುರಿಯಾದ ಅರಣ್ಯಗಳಿಗೆ ಬದಲಾಗಿ ಅರಣ್ಯ ಬೆಳೆಸುವಿಕೆಯನ್ನು ಪ್ರಾರಂಭಿಸಬೇಕೆಂದೂ, ಭೂಮಿ ಕಳೆದುಕೊಂಡವರಿಗೆ ಬದಲಾಗಿ, ಭೂಮಿ ನೀಡಬೇಕೆಂದು, ಸರಿಯಾದ ಪುನರ್ ವಸತಿ ಕಲ್ಪಿಸಬೇಕೆಂದು ಕೋರಲಾರಂಭಿಸಿದರು. ಆದರೆ, ಕೂಡಲೇ ಜನರು ಎರಡು ವಿಷಯಗಳನ್ನು ಗುರ್ತಿಸಿದರು ; ಕಳೆದುಕೊಂಡ ಭೂಮಿಗೆ ನಷ್ಟ ಪರಿಹಾರವಾಗಿ ನೀಡಲು ತಕ್ಕಷ್ಟು ಭೂಮಿ ಇಲ್ಲ. ನಿರಾಶ್ರಿತರಾದ ಜನರಿಗೆ ಸರಿಯಾದ ಪುನರ್ ವಸತಿ ಕಲ್ಪಿಸಲು ಸಾಧ್ಯವಿಲ್ಲ. ಅಷ್ಟೇಅಲ್ಲದೇ ಇದು ನಷ್ಟ ಪರಿಹಾರ, ಪುನರ್‌ನಿವಾಸಕ್ಕೆ ಸಮಸ್ಯೆಗಳೇ ಅಲ್ಲದೇ ಅಭಿವೃದ್ಧಿಗೆ ಸಂಬಂಧಿಸಿದ ಲೋಪಪೂರಿತ ದೃಷ್ಟಿಕೋನವೆಂದು ಜನರು ಗುರ್ತಿಸಿದರು. ಈ ವಿಧವಾದ ಅಭಿವೃದ್ಧಿ ವ್ಯವಸಾಯವನ್ನು, ಗಿರಿಜನರನ್ನು, ಪಣವಾಗಿಟ್ಟು ಕೈಗಾರಿಕೆಗಳು, ವಾಣಿಜ್ಯ ವ್ಯವಸಾಯ ಕ್ಷೇತ್ರಗಳನ್ನು ಏರ್ಪಾಟು ಮಾಡುವುದು, ಸಹಜ ಸಂಪನ್ಮೂಲಗಳನ್ನು ಸುಸ್ಥಿರವಲ್ಲದ ಪದ್ಧತಿಗಳನ್ನು ವಿನಿಯೋಗಿಸುವುದರ ಮೇಲೆ ಆಧಾರಪಟ್ಟಿದೆ. ಇದು ಬಡರೈತರು, ಗಿರಿಜನರ ಜೀವನ ಪ್ರಮಾಣವನ್ನು ಯಾವ ವಿಧವಾಗಿಯೂ ಸುಧಾರಿಸದಂತೆ ಅವರನ್ನು ನೈಪುಣ್ಯವಿಲ್ಲದ ಕೂಲಿಗಳಾಗಿ ಬದಲಾಯಿಸುತ್ತದೆ.

ಈ ಚಳುವಳಿ ನಾಯಕರು ಈ ಆಣೆಕಟ್ಟುಗಳ ನಿರ್ಮಾಣವನ್ನೇ ವಿರೋಧಿಸಲಾರಂಭಿಸಿದರು. 12ನೇ ಅಧ್ಯಾಯದಲ್ಲಿ ನೀವು ಬಾಬಾ ಮಹಾಲಿಯಾ ಕುರಿತು ಓದಿದ್ದೀರಿ. ನರ್ಮದಾ ನದಿ ಕಣಿವೆ ಆಣೆಕಟ್ಟಿಗೆ ವಿರುದ್ಧವಾಗಿ ಕೈಗೊಂಡ ಪ್ರಜಾ ಚಳುವಳಿಯಾದ ನರ್ಮದಾ ಬಚಾವೊ ಆಂದೋಳನದಲ್ಲಿ ಆತನು ಸಹ ಭಾಗಸ್ವಾಮಿ.

ಪ್ರಾರಂಭದಲ್ಲಿ ಪ್ರಪಂಚ ಬ್ಯಾಂಕಿನಿಂದ ತೆಗೆದುಕೊಂಡ ಸಾಲದಿಂದ ಸರ್ದಾರ್ ಸರೋವರ್ ಆಣೆಕಟ್ಟನ್ನು ನಿರ್ಮಿಸಬೇಕೆಂದು ಭಾವಿಸಿದರು. ತೀವ್ರ ಪ್ರತಿಭಟನೆಗಳು, ಜನರ ಸಮೀಕರಣ, ಪ್ರದರ್ಶನೆಗಳು, ನಿರಾಹಾರ ದೀಕ್ಷೆಗಳು, ಅಂತರಾಷ್ಟ್ರೀಯ ಚಳುವಳಿಯ ನಂತರ ಪ್ರಪಂಚ ಬ್ಯಾಂಕ್ ಇದಕ್ಕೆ ನಿಧಿಗಳು ಒದಗಿಸಕೂಡದೆಂದು ನಿರ್ಣಯಿಸಿಕೊಂಡಿತು.

ಚಿತ್ರ 20.5 : ನಿರಾಶ್ರಿತರಾಗುವುದಕ್ಕೆ ವಿರುದ್ಧವಾಗಿ ನರ್ಮದಾ ಕಣಿವೆಯಲ್ಲಿ ಪ್ರತಿಭಟನೆ

SCERT TELANGANA

- ರೈತರನ್ನು, ಗಿರಿಜನರನ್ನು ನಿರಾಶ್ರಿತರನ್ನಾಗಿ ಮಾಡದೇ ಕಾರ್ಖಾನೆಗಳನ್ನು ಸ್ಥಾಪಿಸುವುದು, ಗಣಿಗಳ ಅಗೆಯುವಿಕೆ, ವಿದ್ಯುತ್ ಉತ್ಪತ್ತಿ ಕೇಂದ್ರಗಳನ್ನು ಪ್ರಾರಂಭಿಸುವುದು ಸಾಧ್ಯವಾಗುವುದಿಲ್ಲವೇ ? ಎಂತಹ ಪ್ರತ್ಯಾಮ್ನಾಯಗಳಿವೆ ? ಈ ಅಂಶಗಳ ಮೇಲೆ ನಿಮ್ಮ ಮನೆಯಲ್ಲಿಯೂ, ತರಗತಿಯಲ್ಲಿಯೂ ಚರ್ಚಿಸಿರಿ.

ಭಾರತ ಪರಿಸರದ ಪರಿಸ್ಥಿತಿ

1980ರಲ್ಲಿ ವಿಜ್ಞಾನಶಾಸ್ತ್ರ ಪರಿಸರ ಕೇಂದ್ರ (ಸೆಂಟರ್ ಫರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್) ಎನ್ನುವುದನ್ನು ಅನಿಲ್ ಅಗರ್‌ವಾಲ್ ಸ್ಥಾಪಿಸಿದನು. ಭಾರತ ದೇಶದಲ್ಲಿನ ಅಭಿವೃದ್ಧಿ, ಪರಿಸರ ಅಂಶಗಳ ಮೇಲೆ ಅಧ್ಯಯನ ಮಾಡಿ ಅವುಗಳ ಬಗ್ಗೆ ಅರಿವು ಮೂಡುವಂತೆ ಮಾಡುವುದೇ ಇದರ ಉದ್ದೇಶ. ಭಾರತದೇಶ ಪರಿಸರ ಸ್ಥಿತಿಯ ಮೇಲೆ ಪೌರರ ನಿವೇದಿಕೆಗಳು 1982ರ ಎನ್ನುವ ಪ್ರಖ್ಯಾತ ನಿಯತಕಾಲಿಕೆಗಳಿಂದ ಅದು ಪ್ರಾರಂಭಿಸಿತು. ಇಂದು ದೇಶ ಎದುರಿಸುತ್ತಿರುವ ಪರಿಸರ ಸಮಸ್ಯೆಗಳಿಗೆ ಸಮಗ್ರವಾದ ಸೂಚಿಕೆಗಳಿಗಾಗಿ ಈ ನಿವೇದಿಕೆಗಳು ಉಪಯೋಗಪಡುತ್ತಿವೆ. ಅದು ಮಾಡುತ್ತಿರುವ ಕೆಲಸ, ಅಧ್ಯಯನ ಮಾಡಿದ ಸಮಸ್ಯೆಗಳ ಕುರಿತು ಮತ್ತಷ್ಟು ತಿಳಿದುಕೊಳ್ಳಲು ಅದರ ವೆಬ್‌ಸೈಟನ್ನು ನೋಡಿರಿ : http://www.cseindia.org

ಸರ್ದಾರ್ ಸರೋವರ್ ಆಣೆಕಟ್ಟು ನಿರ್ಮಾಣವನ್ನು ತಡೆಯುವಲ್ಲಿ ನರ್ಮದಾ ಬಚಾವೋ ಆಂದೋಳನ್ ವಿಫಲವಾಗಿದ್ದರೂ ಎಲ್ಲರೂ ಅಭಿವೃದ್ಧಿ ಪಥದ ಬಗ್ಗೆ ಆಲೋಚಿಸುವಂತೆ ಮಾಡುವಲ್ಲಿ ಅದು ಸಫಲವಾಯಿತು- ಅದು ಬಡವರ ಪ್ರಯೋಜನಗಳಿಗೋಸ್ಕರವೇ ಅಥವಾ ಶ್ರೀಮಂತರಿಗೆ, ಶಕ್ತಿವಂತರಾಗಿ ಎಂದು ಆಲೋಚಿಸುವಂತೆ ಮಾಡಿತು. ಪ್ರಕೃತಿಯಲ್ಲಿ ದೊಡ್ಡ ಮೊತ್ತದಲ್ಲಿ ಹಸ್ತಕ್ಷೇಪ ಮಾಡಿಕೊಳ್ಳುತ್ತಾ ಕಟ್ಟುವ ದೊಡ್ಡ ದೊಡ್ಡ ಕಟ್ಟಡಗಳ ಪ್ರಯೋಜನಗಳ ಕುರಿತು ಸಹ ಎಲ್ಲರೂ ಆಲೋಚಿಸುವಂತೆ ಅದು ಮಾಡಿತು. ಇಂತಹ್ಹ ಅಭಿವೃದ್ಧಿ ಕಾರಣಗಳಿಂದ ನಿರಾಶ್ರಿತರಾದ ಜನರಿಗೆ ತಕ್ಕಷ್ಟು, ಗೌರವದಾಯಕವಾದ ನಷ್ಟಪರಿಹಾರ ಸಲ್ಲಿಸುವ ದಿಕ್ಕಿನಲ್ಲಿ ಸರ್ಕಾರ ಆಲೋಚಿಸುವಂತೆ ಮಾಡಿತು.

ನರ್ಮದಾ ಬಚಾವೋ ಚಳುವಳಿಯಲ್ಲಿ ಅನೇಕ ಧೋರಣೆಗಳು ಒಟ್ಟುಗೂಡಿವೆ. ಅವು : ಮೂಲವಾಸಿ ಜನರ ಚಳುವಳಿ, ನವೀನ-ಉದಾರ ವಾದ ವಿಧಾನಗಳಿಗೆ ವಿರುದ್ಧವಾಗಿ ಚಳುವಳಿ, ನಗರೀಕರಣ, ಆಣೆಕಟ್ಟುಗಳು, ಕೈಗಾರಿಕೆಗಳು, ಗಣಿಗಳಂತಹವುಗಳಿಗಾಗಿ ಭೂಮಿಯನ್ನು ಕಸಿದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಭೂಮಿಗಳನ್ನು ಕಾಪಾಡಿಕೊಳ್ಳುವುದಕ್ಕೆ ರೈತರು ಮಾಡುತ್ತಿರುವ ಚಳುವಳಿಯಂತಹವು.

ಸೈಲೆಂಟ್ ವ್ಯಾಲಿ ಚಳುವಳಿ (1973-83)

ಕೇರಳದಲ್ಲಿಯ ಪಶ್ಚಿಮಘಟ್ಟಗಳಲ್ಲಿನ ಸೈಲೆಂಟ್‌ವ್ಯಾಲಿ (ನಿಶ್ಯಬ್ದ ಕಣಿವೆ) ಯಲ್ಲಿ ಪ್ರವಹಿಸುತ್ತಿರುವ ಎರಡು ನದಿಗಳ ಮೇಲೆ ಆಣೆಕಟ್ಟುಗಳು ನಿರ್ಮಿಸಬೇಕೆಂದು ಪ್ರತಿಪಾದಿಸಿದಾಗ, ಇವುಗಳಿಂದ ಆ ಕಣಿವೆಯಲ್ಲಿರುವ ಅಪರೂಪದ ಪ್ರಾಣಿಗಳು, ಗಿಡಗಳು ವಿನಾಶಹೊಂದುತ್ತವೆಂದು ವಿದ್ಯಾವಂತರಾದ ಅನೇಕ ಜನರು ಗ್ರಹಿಸಿದರು. ಅಪರೂಪದ ಜಾತಿಗಳಲ್ಲಿ ಒಂದು ವಿಧವಾದ ಕೋತಿಯಾದ ಸಿಂಹದ ಬಾಲದ ಕೋತಿ (ಲಯನ್ ಟೇಲ್ಡ್ ಮಕಾಕ್) ಒಂದು. ಕ್ರಮೇಣ ಸೈಲೆಂಟ್ ವ್ಯಾಲಿಗೆ ಬೆಂಬಲವಾಗಿ, ಆಣೆಕಟ್ಟುಗಳಿಗೆ ವಿರುದ್ಧವಾಗಿ ದೊಡ್ಡ ಚಳುವಳಿ ಏರ್ಪಟ್ಟಿತು. ಜನರಲ್ಲಿ ವಿಜ್ಞಾನಶಾಸ್ತ್ರ ಪ್ರಾಚರಕ್ಕೂ, ಶಿಕ್ಷಣಕ್ಕಾಗಿ ಕೆಲಸ ಮಾಡುತ್ತಿದ್ದ ಕೇರಳಶಾಸ್ತ್ರ ಸಾಹಿತ್ಯ ಪರಿಷತ್ (ಕೆಎಸ್‌ಎಸ್‌ಪಿ) ರಾಜ್ಯದಾದ್ಯಂತ ಜನರನ್ನು ಸಮೀಕರಿಸಿತು. ಪ್ರಾಜೆಕ್ಟ್ ಪ್ರಾಂತದಲ್ಲಿ ಮರಗಳನ್ನು ಕಡೆಯುವುದಕ್ಕೆ ವಿರುದ್ಧವಾಗಿ ಈ ಸಂಸ್ಥೆ ನ್ಯಾಯಲಯಕ್ಕೆ ಹೋಯಿತು. ಇದರಿಂದ ಕೇರಳ ಹೈಕೋರ್ಟ್ ಮರಗಳು ಕಡೆಯುವುದನ್ನು ನಿಲ್ಲಿಸಿಬಿಟ್ಟಿತು. ತೀವ್ರ ಪ್ರತಿಭಟನೆಗಳ ಹಿನ್ನಲೆಯಲ್ಲಿ ಕೊನೆಗೆ ಸರ್ಕಾರ ಆಣೆಕಟ್ಟುಗಳ ನಿರ್ಮಾಣವನ್ನು ವಿರಮಿಸಿಕೊಂಡು ಸೈಲೆಂಟ್ ವ್ಯಾಲಿಯನ್ನು 1985ರಲ್ಲಿ ರಾಷ್ಟ್ರೀಯ ಪಾರ್ಕ್‌ಯಾಗಿ ಪ್ರಕಟಿಸಿತು.

ಚಿತ್ರ 20.6 : ಇಲ್ಲಿ ಅರಣ್ಯದಲ್ಲಿ ಮಿಡತೆಗಳಿಲ್ಲ, ಅದಕ್ಕೆ ಈ ಅರಣ್ಯ ನಿಶ್ಯಬ್ಧವಾಗಿರುತ್ತದೆ. ಸಿಂಹದ ಬಾಲದ ಕೋತಿ ಇನ್ನೂ ಅನೇಕ ಇತರ ಕೀಟಗಳು, ಪಕ್ಷಿಗಳು ಈ ಕಣಿವೆಗೆ ಪ್ರತ್ಯೇಕವಾದವು.

SCERT TELANGANA

ಮೇಧಾ ಪಾಟ್ಕರ್‌ರೊಂದಿಗೆ ಮುಖಾಮುಖಿ

ನರ್ಮದಾ ಬಚಾವೋ ಆಂದೋಳನದ ನಾಯಕರಾದ ಮೇಧಾಪಾಟ್ಕರ್ ಒಂದು ಸಂದರ್ಶನದಲ್ಲಿ (ಮುಖಾಮುಖಿ) ಆ ಸಂಸ್ಥೆ ಕುರಿತು ಹೀಗೆ ಹೇಳಿದರು :

ಗುಜರಾತ್ ಸರ್ಕಾರ ತಾನು ಅಂದುಕೊಂಡದ್ದೆ ಮಾಡುತ್ತಿರುವುದರಿಂದ ಈಗ ಕೂಡ ಚಳುವಳಿಯನ್ನು ಮುಂದುವರೆಸುವಲ್ಲಿ ಏನಾದರೂ ಅರ್ಥ ಇದೆಯಾ ?

ಗುರಿಗಳನ್ನು ಮುಟ್ಟವವರೆಗೆ ಹೋರಾಟ ಮುಗಿಯುವುದಿಲ್ಲ...

ಚಿತ್ರ 20.7

ಸರ್ಕಾರ ಪ್ರಕಟಿಸಿದ ವಿಧಾನವೂ, ಯೋಜನೆಯೂ ಪ್ರಗತಿಶೀಲವಾದದ್ದೆಂದು, ವ್ಯವಸಾಯಕ್ಕೆ ಅನುಕೂಲವಾಗಿರುವುದೆಂದು ಎಷ್ಟು ಹೇಳಿದರೂ ಜೀವನೋಪಾಯವನ್ನು ಕಳೆದುಕೊಂಡವರಿಗೆ ಭೂಮಿಯನ್ನು ಕೊಡಲಾರದೇ ಹೋಯಿತು ಎನ್ನುವುದು ಎಲ್ಲರಿಗೂ ಸ್ಪಷ್ಟವಾಗುತ್ತದೆ. ಪರಿಸರ ಅಂಶಗಳನ್ನು ಇನ್ನೂ ಜಾರಿಗೆ ತಂದಿಲ್ಲ. ಅನುಮೋದನೆಯಲ್ಲಿ ವಿಧಿಸಿದ ಷರತ್ತುಗಳು, ವಿಧಾನದಲ್ಲಿ ಮಾಡಿದ ವಾಗ್ದಾನೆಗಳನ್ನು ಪೂರ್ಣಗೊಳಿಸದೇ ಆಣೆಕಟ್ಟು ಎತ್ತರ ಹೆಚ್ಚಿಸುವುದ ಅನ್ಯಾಯ

ಪ್ರಕೃತಿ ಆಧಾರಿತ ಜನರ ನಿವಾಸಗಳನ್ನು ಮುಳುಗುವುದಕ್ಕೆ ಗುರಿ ಮಾಡಿ, ತೀವ್ರ ಸಾಮಾಜಿಕ, ಪರಿಸರ, ಆರ್ಥಿಕ ಖರ್ಚಿನಿಂದ ಸಾಧಿಸಿದ ಅಭಿವೃದ್ಧಿ ಸ್ವಲ್ಪ ಕೂಡ ಕಚ್ ಪ್ರಾಂತದಲ್ಲಿ ನಿಜವಾಗಿಯೂ ಅವಶ್ಯಕವಾದವರಿಗೆ ಅಲ್ಲದೇ ಗುಜರಾತಿನಲ್ಲಿನ ದೊಡ್ಡ ಪಟ್ಟಣಗಳಿಗೆ, ಕಾರ್ಪೊರೇಟ್ ಸಂಸ್ಥೆಗಳಿಗೆ ಹೋಗುತ್ತದೆಂದು ಪ್ರಪಂಚಕ್ಕೆ ತಿಳಿಯಪಡಿಸುವುದಕ್ಕೆ ಕೂಡ ಚಳುವಳಿ ಮುಂದುವರೆಯಬೇಕಾದ ಅವಶ್ಯಕತೆ ಇದೆ. ಇಂತಹ ಅಭಿವೃದ್ಧಿ ವಿಧಾನ ಬದಲಾಗಬೇಕೆಂದು ನರ್ಮದಾ ಬಚಾವೋ ಆಂದೋಳನೆ ಹೋರಾಡುತ್ತಿದೆ. ವಿನಾಶ, ಅಸಮಾನತೆಗಳು, ನಿರಾಶ್ರಿತರಾಗಲು ವಿರುದ್ಧವಾಗಿ ನಡೆಯುತ್ತಿರುವ ಚಳುವಳಿ ನರ್ಮದಾ ಕಣಿವೆಯಲ್ಲಿ ಮಾತ್ರವಲ್ಲದೇ, ದೇಶವೆಲ್ಲಾ ನಡೆಯುತ್ತಿರುವ ಪ್ರತ್ಯಾಮ್ನಾಯ ಅಭಿವೃದ್ಧಿ ನಮೂನೆಯೊಂದಿಗೆ, ಪುನಃ ನಿರ್ಮಾಣ ಕೆಲಸದಿಂದಲೂ ಮುಂದುವರೆಯಬೇಕಾದ ಅವಶ್ಯಕತೆ ಇದೆು

- ಸಾಮಾಜಿಕ ಚಳುವಳಿಗಳು ಉಪಯೋಗಿಸಿದ ವಿವಿಧ ವ್ಯೂಹಗಳನ್ನು ತಿಳಿಸಿರಿ.
- ಪುನರಾವಾಸವನ್ನು ಕಲ್ಪಿಸುತ್ತೇವೆನ್ನುವ ವಾಗ್ದಾನಗಳನ್ನು ಚಳುವಳಿಯಲ್ಲಿನ ಜನರು ಹೇಗೆ ಪರಿಗಣಿಸುತ್ತಾರೆ ?

ಸಾಮಾಜಿಕನ್ಯಾಯ, ಮಾನವ ಹಕ್ಕುಗಳಿಗಾಗಿ ಮಹಿಳೆಯರ ಚಳುವಳಿ : (Movement of Women for social justice and human rights)

ಮಹಿಳೆಯರು ಎದುರಿಸುತ್ತಿರುವ ಅಸಮಾನತೆಗಳ ಕುರಿತು, ಸಮಾನಹಕ್ಕುಗಳು, ಅವಕಾಶಗಳು, ವಯಕ್ತಿಕ ಭದ್ರತೆ, ನ್ಯಾಯಕ್ಕಾಗಿ ಅವರು ಮಾಡುತ್ತಿರುವ ಹೋರಾಟಗಳ ಕುರಿತು ಹಿಂದಿನ ತರಗತಿಯಲ್ಲಿ ಓದಿದ್ದೇವೆ. ಇತ್ತೀಚಿನ ಕಾಲದಲ್ಲಿನ ಹಲವು ಮುಖ್ಯವಾದ ಸಾಮಾಜಿಕ ಚಳುವಳಿಯಲ್ಲಿ ಸಹ ಮಹಿಳೆಯರು ಮುಂದಿದ್ದಾರೆ. ಇಲ್ಲಿ ನಾವು ಎರಡು ಉದಾಹರಣೆಗಳೊಂದಿಗೆ ಇದನ್ನು ಮತ್ತಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳೋಣ : ಆಂಧ್ರಪ್ರದೇಶದಲ್ಲಿ ಸಾರಾಯಿಗೆ ವಿರುದ್ಧವಾಗಿ ಮಹಿಳೆಯರ ಚಳುವಳಿ, ಈಶಾನ್ಯ ಜನರ ಮೇಲೆ ದಮನ ನೀತಿಗೆ ಕಾರಣವಾದ ಸೈನಿಕ ಬಣಗಳ ಪ್ರತ್ಯೇಕ ಅಧಿಕಾರಗಳಿಗೆ ವಿರುದ್ಧವಾಗಿ ಮಣಿಪುರಿ ಮಹಿಳೆಯರ ಚಳುವಳಿ

ಮಹಿಳೆಯರು ಒಂದಾದರೆ (Adavallu Ekamaite) :

ಇದು ಕಥೆ ಅಲ್ಲ. ಇದು ರಾತ್ರಿಶಾಲೆಯಲ್ಲಿ ವಿದ್ಯಾಭ್ಯಾಸ ಕಲಿಯುತ್ತಿರುವ ಮಹಿಳೆಯರ ವಿಜಯಗಾಥೆ, ನಮ್ಮ ಊರು ದೂಬಗುಂಟ, ನಾವು ಕೂಲಿ ಕೆಲಸ ಮಾಡಿಕೊಂಡು ಬದುಕುತ್ತೇವೆ. ನಾವು ಮಣ್ಣಿನಿಂದ ಬಂಗಾರವನ್ನು

SCERT TELANGANA

ಬೆಳೆಸುತ್ತೇವೆ. ಆದರೆ ನಾವುಕಷ್ಟಪಟ್ಟು ಸಂಪಾದಿಸಿದ ಹಣವೆಲ್ಲಾ ಪುರುಷರು ಹೆಂಡ, ಸಾರಾಯಿಗಳ ಮೇಲೆ ಖರ್ಚು ಮಾಡುತ್ತಾರೆ. ಅವರ ಹತ್ತಿರ ಹಣ ಇಲ್ಲದೇ ಹೋದರೆ ಅಕ್ಕಿ, ತುಪ್ಪ ಮಾರಿ ಸಾರಾಯಿಕೊಳ್ಳುವರು. ಅದಕ್ಕಾಗಿ ಯಾವ ವಸ್ತುವನ್ನಾದರೂ ಮಾರಾಟ ಮಾಡುತ್ತಾರೆ. ಅವರ ಕೈಗೆ ಸಿಕ್ಕ ಪ್ರತಿ ವಸ್ತುವನ್ನು ತೆಗೆದುಕೊಂಡು ಹೋಗುತ್ತಾರೆ... ಕುಡಿದದ್ದ ಅಲ್ಲದೇ ನಮ್ಮನ್ನು ದೂಷಿಸುತ್ತಾರೆ. ನಮ್ಮೊಂದಿಗೆ ಜಗಳ ಪ್ರಾರಂಭಿಸುತ್ತಾರೆ, ಮಕ್ಕಳನ್ನು ಹೊಡೆಯುತ್ತಾರೆ. ನಮ್ಮ ದಿನನಿತ್ಯದ ಜೀವನವನ್ನು ದುರ್ಬರವಾಗಿ ಮಾಡುತ್ತಾರೆ. ನಮ್ಮ ಹತ್ತಿರ ಇರುವ ಪಠ್ಯಪುಸ್ತಕದಲ್ಲಿ ಸೀತಮ್ಮ ಕಥೆ ಓದಿದ್ದೇವು. ಅದು ನಮ್ಮನ್ನು ಆಲೋಚಿಸುವಂತೆ ಮಾಡಿತು. ಆಕೆಯ ಸಾವಿಗೆ ಯಾರು ಕಾರಣ ? ಸಾರಾಯಿ ಅಂಗಡಿ ಮುಚ್ಚಿಹಾಕಬೇಕೆಂದು ಸರ್ಪಂಚ್‌ಗೆ ಹೇಳಿದೆವು. ಆದರೆ ಅದರಲ್ಲಿ ನಾವು ಸಫಲವಾಗಲಿಲ್ಲ.

ಆದುದರಿಂದ ಮರುದಿನ ನೂರಾರು ಜನರು ಹೋರಟು ಊರೊಳಗೆ ಬರುತ್ತಿರುವ ಸಾರಾಯಿ ವಾಹನವನ್ನು ಊರ ಹೊರಗೇ ನಿಲ್ಲಿಸಿಬಿಟ್ಟೆವು. ಸಾರಾಯಿಯನ್ನು ಚೆಲ್ಲಿಬಿಡಬೇಕೆಂದು ವಾಹನದ ಯಜಮಾನನಿಗೆ ಹೇಳಿದೆವು. ಆತನಿಗೆ ನಡೆದ ನಷ್ಟಕ್ಕೆ ಒಬ್ಬೊಬ್ಬರು ಒಂದೊಂದು ರೂಪಾಯಿ ಕೊಡುತ್ತೇವೆಂದು ಹೇಳಿದೆವು. ಅವನು ಭಯಪಟ್ಟನು. ಅಂದಿನಿಂದ ನಮ್ಮ ಊರಿನೊಳಗೆ ಸಾರಾಯಿ ವಾಹನಬರಲಿಲ್ಲ. ಒಂದು ದಿನ ಸಾರಾಯಿಯೊಂದಿಗೆ ಒಂದು ಜೀಪು ಊರಿನೊಳಗೆ ಬಂದಿತು. ನಾವು ಅದನ್ನು ಸುತ್ತುವರೆದು ಮೆಜಿಸ್ಟ್ರೇಟಿಗೆ ದೂರು ನೀಡುತ್ತೇವೆಂದು ಯಜಮಾನನ್ನು ಎಚ್ಚರಿಸಿದೆವು. ಆತನು ನಡುಗಿ ಹೋದನು. ಊರಿನಲ್ಲಿನ ಅಂಗಡಿಯನ್ನು ಮುಚ್ಚಿಹಾಕಿದನು. ಅದರಿಂದ ನಮ್ಮ ಆತ್ಮವಿಶ್ವಾಸ ಹೆಚ್ಚಾಯಿತು. ಶಿಕ್ಷಣದಿಂದಲೇ ಈ ವಿಜಯ ಸಾಧ್ಯವಾಯಿತೆಂದು ನಾವು ಗುರ್ತಿಸಿದೆವು. ಈ ವರ್ಷ ಸಾರಾಯಿ ಹರಾಜಿನಲ್ಲಿ ಪಾಲ್ಗೊಳ್ಳುವ ಸಾಹಸ ಯಾರೂ ಮಾಡಲಾರದೇ ಹೋದರು.ಖ

ಇದು 1992ರಲ್ಲಿ ನಡೆಯಿತು. ಆದರೆ ಇದು ಒಂದೇ ಸಂಘಟನೆ ಅಲ್ಲ. ಈ ವಾರ್ತೆ ವ್ಯಾಪಿಸಿದ್ದರಿಂದ ಇತರ ಗ್ರಾಮಗಳ ಮಹಿಳೆಯರು ಸಹ ತಮ್ಮ ಗ್ರಾಮಗಳಲ್ಲಿ ಸಾರಾಯಿ ಮಾರಾಟಗಳನ್ನು ನಿಲ್ಲಿಸಿಬಿಟ್ಟರು. ಅಂತಿಮವಾಗಿ ಅವರು ಸಾವಿರಾರು ಸಂಖ್ಯೆಯಲ್ಲಿ ನೆಲ್ಲೂರು ಜಿಲ್ಲಾಧಿಕಾರಿ ಕಾರ್ಯಾಲಯದ ಹತ್ತಿರ ಪ್ರತಿಭಟನೆ ನಡೆಸಿ ವರ್ಷದಲ್ಲಿ ಒಂದು ಬಾರಿ ನಡೆಯುವ ಸಾರಾಯಿ ಕಂಟ್ರಾಕ್ಟ್ ಹರಾಜನ್ನು ನಿಲ್ಲಿಸಿಬಿಟ್ಟರು. ಹರಾಜನ್ನು ಜಿಲ್ಲಾಧಿಕಾರಿಗಳು ಆರು ಬಾರಿ ಮೂಂದೂಡಿ, ಕೊನೆಗೆ ಅವುಗಳನ್ನು ರದ್ದುಗೊಳಿಸಬೇಕಾಗಿ ಬಂದಿತು.

ಇತರ ಪ್ರಾಂತಗಳಲ್ಲಿ ಮಹಿಳೆಯರು ಸಾರಾಯಿ ಅಂಗಡಿಗಳಿಗೆ ವಿರುದ್ಧವಾಗಿ ಪ್ರತಿಭಟನೆಗಳು ನಿರ್ವಹಿಸಿದರು. ಅವುಗಳನ್ನು ಪಿಕೆಟಿಂಗ್ ಮಾಡಿದರು, ಆ ಅಂಗಡಿಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರು. ಅಂಗಡಿಗಳಲ್ಲಿ ಸಾರಾಯಿ ಇಟ್ಟುಕೊಳ್ಳದಂತೆ ಮಾಡಿ ಇಲ್ಲವೇ ಪುರುಷರು ಸಾರಾಯಿ ಕೊಂಡುಕೊಳ್ಳದಂತೆ ಮಾಡಿ ಸಾರಾಯಿ ಮಾರಟವನ್ನು ನಿಲ್ಲಿಸಲು ಅವರು ಪ್ರಯತ್ನಿಸಿದರು. ಅಂಗಡಿಗಳನ್ನು ಮುಚ್ಚಿ ಹಾಕಲು ಯಜಮಾನರು ನಿರಾಕರಿಸಿದರೆ, ಅವುಗಳನ್ನು ಪಿಕೆಟಿಂಗ್ ಮಾಡುತ್ತಿದ್ದರು, ಸಾರಾಯಿ ಪ್ಯಾಕೇಟ್‌ಗಳನ್ನು ಹೊರಚೆಲ್ಲುತ್ತಿದ್ದರು. ಸಾರಾಯಿಯನ್ನು ಸುಡುತ್ತಿದ್ದರು. ಅನೇಕ ಗ್ರಾಮಗಳಲ್ಲಿ ಸಾರಾಯಿ ಅಭ್ಯಾಸ ಬಿಡದ ಪುರುಷರು ಮೀಸೆಗಳನ್ನು ಮಹಿಳೆಯರು ಕತ್ತರಿಸಿದರು. ಕೆಲವು ಸಂದರ್ಭ ಗಳಲ್ಲಿ ಕತ್ತೆಯ ಮೇಲೆ ಕೂಡಿಸಿ ಮೆರವಣಿಗೆ ಮಾಡಿದರು. ಇನ್ನೂ ಸಾರಾಯಿ ಮಟ್ಟುವುದಿಲ್ಲವೆಂದು ಪುರುಷರಿಂದ ದೇವಾಲಯಗಳಲ್ಲಿ ಪ್ರಮಾಣ ಮಾಡಿಸುತ್ತಿದ್ದರು. ರಾಜ್ಯದಾದ್ಯಂತ ಮಹಿಳೆಯರು ಪ್ರಾರಂಭಿಸಿದ ಪ್ರತಿಭಟನೆಗಳು, ಸಮಾವೇಶಗಳ ಫಲವಾಗಿ ಕೊನೆಗೆ 1993 ಅಕ್ಟೋಬರ್‌ನಲ್ಲಿ ಸಾರಾಯಿಯನ್ನು ಅಧಿಕಾರಿಕವಾಗಿ ನಿಷೇಧಿಸಿದರೂ, 1995ರಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವನ್ನು ವಿಧಿಸಿದರು.

ಈ ಮಹಿಳೆಯರು ದಲಿತರು, ಅತ್ಯಂತ ಬಡವರು, ತಮ್ಮ ಪತಿಗಳು, ಪುರುಷರು ಸಾರಾಯಿಗೆ, ಗುಲಾಮರಾಗುತ್ತಿದ್ದರಿಂದ ಬಹಳ ಕಷ್ಟಗಳಿಗೆ ಒಳಗಾಗುತ್ತಿದ್ದರು. ಈ ಮಹಿಳೆಯರಲ್ಲಿ ಬಹಳ ಜನ ಅಕ್ಷರಾಸ್ಯತೆ ತರಗತಿಗಳಿಗೆ ಹಾಜರಾಗಲಾರಂಭಿಸಿದರು. ಇವರು ಆಗಾಗ ತಮ್ಮ ಸಮಸ್ಯೆಗಳ ಕುರಿತು ಮಾತನಾಡಿಕೊಳ್ಳುತ್ತಿದ್ದರು. ಈ ರಾತ್ರಿಯವೇಳೆ ತರಗತಿಗಳಿಂದ ಈ ಮಹಿಳೆಯರಿಗೆ ತಮ್ಮ ಜೀವನಗಳ ಕುರಿತು ಮಾತನಾಡಿಕೊಳ್ಳಲು ಅವಕಾಶ ಲಭಿಸುತ್ತಿತ್ತು, ಹೊಸ ಸಂಬಂಧಗಳನ್ನು ಏರ್ಪಡಿಸಿತು. ಒಂದು ಸಲ ಚಳುವಳಿ ಪ್ರಾರಂಭವಾದ ನಂತರ ಇವುಗಳ ಅನುಭವಗಳನ್ನು ಸಾಕ್ಷರತೆಯ ಪುಸ್ತಕಗಳ ಮೂಲಕ ರಾಜ್ಯದಲ್ಲಿನ ಮಹಿಳೆಯರೆಲ್ಲರಿಗೂ ವಿಸ್ತರಿಸಿದವು ಈ ವಿಧವಾಗಿ ಸಮಾಜದಲ್ಲಿ ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರು ಧನಬಲ. ಕಂಡಬಲದೊಂದಿಗೆ ರಾಜಕೀಯ ಬೆಂಬಲವಿರುವ ಸಾರಾಯಿ ತಯಾರೀದಾರರ, ಮಾರಾಟಗಾರರನ್ನು ಎದುರಿಸುವಂತಾದರು.

SCERT TELANGANA

ಇಂದು ಪರಿಸ್ಥಿತಿ ಮರಳಿ ಬದಲಾಗಿದೆ. ಸಾರಾಯಿ ಅಂಗಡಿಗಳು ಮರಳಿ ನಡೆಯುತ್ತಿವೆ. ಇಂತಹ ಚಳುವಳಿಗಳ ವಿಜಯಗಳು ಶಾಶ್ವತವಾಗಿ ಮುಂದುವರೆಯಬೇಕೆಂದರೆ ನಿರಂತರ ಪರಿಶೀಲನೆ, ಕಾರ್ಯಾಚರಣೆ ಇರಬೇಕೆನ್ನುವುದು ಅರ್ಥವಾಗುತ್ತದೆ.

- ಇತ್ತೀಚಿನ ಕಾಲದಲ್ಲಿ ಪಶ್ಚಿಮ ಬಂಗಾಳ (ನಂದಿಗ್ರಾಮ), ಒಡಿಶಾ(ನಿಯಮಗಿರಿ), ಆಂಧ್ರಪ್ರದೇಶ್ (ಪೋಲವರ, ಸೋಪೇಟ ಮೊದಲಾದವು)ಗಳಲ್ಲಿ ನಡೆದ ಇಂತಹ ಹೋರಾಟಗಳ ಕುರಿತು ಮತ್ತಷ್ಟು ತಿಳಿದುಕೊಳ್ಳಿ. ಈ ಹೋರಾಟಗಳಲ್ಲಿ ಮುಖ್ಯವಾದ ಅಂಶಗಳನ್ನು ವಿವರಿಸುತ್ತಾ ಒಂದು ಪೋಸ್ಟರು ತಯಾರಿಸಿರಿ.

ಮಾನವ ಹಕ್ಕುಗಳ ಮೇಲೆ ಸಾಮಾಜಿಕ ಸಮೀಕರಣೆ (Social mobilisation on human rights) :

ತಮ್ಮ ಕ್ರಿಯೆಗಳ ಮೇಲೆ ಕಾನೂನುಬದ್ಧ ಸಮೀಕ್ಷೆ ಇಲ್ಲದಿದ್ದರೆ ಅಂದರೆ ಸೈನಿಕ ದಳಗಳ ಕ್ರಮಗಳನ್ನು ನ್ಯಾಯಾಲಯ ಗಳಲ್ಲಿ ಪ್ರಶ್ನಿಸಲಾರೆವು. ಜನರನ್ನು ದಮನ ಮಾಡುವುದಕ್ಕೆ ಸಾಯುಧ ದಳಗಳಿಗೆ ಅಧಿಕಾರಗಳನ್ನು ನೀಡುವ ಕಾನೂನುಗಳಿಗೆ ವಿರುದ್ಧವಾಗಿ ಈಶಾನ್ಯ ಭಾರತದಲ್ಲಿನ ಮಣಿಪುರಿ ಮಹಿಳೆಯರು ಹೇಗೆ ಹೋರಾಡಿದರೋ ತಿಳಿದುಕೊಳ್ಳೋಣ.

ಮಾನವ ಹಕ್ಕುಗಳಲ್ಲಿನ ಕೆಲವು ವಿಧಿಗಳು ಕೆಳಗೆ ಇವೆ. ಈ ಭಾಗವನ್ನು ಎರಡು ಬಾರಿ ಓದಿರಿ. ಮೊದಲು ಎಲ್ಲಾ ಓದಿ ಮಾನವರೆಲ್ಲರಿಗೂ ಇರಬೇಕಾದ ಮಾನವ ಹಕ್ಕುಗಳನ್ನು ಗುರ್ತಿಸಿರಿ. ನಂತರ ಕೆಳಗೆ ನೀಡಿದ ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಯಾವ ಪ್ಯಾರ್ರಾ, ಯಾವ ವಾಕ್ಯದಲ್ಲಿ ಇದೆಯೋ ಗುರ್ತಿಸಿರಿ. (ಪ್ರತಿಯೊಂದಕ್ಕೂ ದೊರೆಯದಿರಬಹುದು, ಅದನ್ನು ಖಾಲಿಯಾಗಿ ಉಳಿಸಿರಿ)

ವಿಧಿ 3: ಪ್ರತಿಯೊಬ್ಬರಿಗೂ ಜೀವಿಸುವ, ಸ್ವತಂತ್ರ, ವಯಕ್ತಿಕ ಭದ್ರತೆಯ ಹಕ್ಕು ಇದೆ. ಪ್ಯಾರಾ ------- ವಾಕ್ಯ -------

ವಿಧಿ 5: ಯಾರನ್ನು ಹಿಂಸೆಗೆ ಇಲ್ಲವೇ ಕ್ರೂರ, ಅಮಾನವೀಯ, ಅವಮಾನಕರವಾಗಿ ನಡೆದುಕೊಳ್ಳುವಂತಿಲ್ಲ ಇಲ್ಲವೇ ಶಿಕ್ಷೆಗೆ ಗುರಿ ಮಾಡಬಾರದು, ಪ್ಯಾರಾ ------- ವಾಕ್ಯ -------

ವಿಧಿ 7: ಕಾನೂನಿನ ಮುಂದೆ ಎಲ್ಲರೂ ಸಮಾನರೆ, ಯಾವುದೇ ಪಕ್ಷಪಾತಕ್ಕೆ ಒಳಗಾಗದೇ ಎಲ್ಲರಿಗೂ ಕಾನೂನಿನ ಮೂಲಕ ಸಮಾನ ರಕ್ಷಣೆ ಲಭಿಸಬೇಕು. ಈ ಪ್ರಕಟಣೆಗೆ ಭಂಗಪಡಿಸಿದಾಗ ಬೇಧಭಾವಕ್ಕೆ ಗುರಿಯಾಗದಂತೆ ಎಲ್ಲರಿಗೂ ಸಮಾನ ರಕ್ಷಣೆ ಲಭಿಸಬೇಕು, ಇಂತಹ ಬೇಧಭಾವ ರೊಚ್ಚಿಗೆಬ್ಬಿಸುವುದರಿಂದ ಸಹ ರಕ್ಷಣ ಲಭಿಸಬೇಕು. ಪ್ಯಾರಾ ------- ವಾಕ್ಯ -------

ವಿಧಿ 9: ಯಾರನ್ನೂ ವಿನಾಕಾರಣ ಬಂಧನಕ್ಕೆ ಒಳಪಡಿಸಬಾರದು, ನಿರ್ಭಂಧಿಸಬಾರದು, ಬಹಿಷ್ಕರಿಸಬಾರದು, ಪ್ಯಾರಾ ------- ವಾಕ್ಯ -------

ವಿಧಿ 10: ಒಬ್ಬ ವ್ಯಕ್ತಿಯ ಮೇಲೆ ಆರೋಪಿಸಲಾದ ಅಪರಾಧಗಳಿಗೆ ಆತನು / ಆಕೆ ಹಕ್ಕುಗಳು, ಬಾಧ್ಯತೆಗಳು ನಿರ್ಣಯಿಸಲು ಸ್ವಾತಂತ್ರ, ನಿಷ್ಪಕ್ಷಪಾತ ಟ್ರಿಬ್ಯುನಲ್ ಮೂಲಕ ಬಹಿರಂಗ ವಿಚಾರಣೆಗೆ ಪೂರ್ಣ ಸಮಾನತೆಯಿಂದ ಕೂಡಿದ ಹಕ್ಕು ಪ್ರತಿಯೊಬ್ಬರಿಗೂ ಇದೆ. ------- ವಾಕ್ಯ -------

ವಿಧಿ 12: ವಿನಾಕಾರಣ ಯಾರ ಏಕಾಂತಕ್ಕೂ, ಕುಟುಂಬಕ್ಕೂ, ವಾಸಕ್ಕೆ ಇಲ್ಲವೇ ಉತ್ತರ ಪ್ರತ್ಯುತ್ತರಗಳಿಗೆ ಮಧ್ಯ ಪ್ರವೇಶಿಸಬಾರದು, ಅಡ್ಡಿಪಡಿಸಬಾರದು, ವ್ಯಕ್ತಿಯ ಗೌರವ, ಮರ್ಯಾದೆಗಳಿಗೆ ಭಂಗವನ್ನುಂಟು ಮಾಡಬಾರದು. ಈ ವಿಧವಾದ ದಾಳಿಗಳು, ಹಸ್ತಕ್ಷೇಪ ಮಾಡುವುದಕ್ಕೆ ವಿರುದ್ಧವಾಗಿ ಪ್ರತಿಯೊಬ್ಬರಿಗೂ ಕಾನೂನಿನ ಮೂಲಕ ರಕ್ಷಣೆ ಹೊಂದುವ ಹಕ್ಕಿದೆ. ಪ್ಯಾರಾ ------- ವಾಕ್ಯ -------

ವಿಧಿ 13: (1) ದೇಶದ ಸರಿಹದ್ದಿನ ಒಳಗೆ ಪ್ರತಿಯೊಬ್ಬರಿಗೂ ಸ್ವತಂತ್ರವಾಗಿ ಸಂಚರಿಸುವ ಹಕ್ಕು. ವಾಸ ಏರ್ಪಡಿಸಿಕೊಳ್ಳುವ ಹಕ್ಕು ಇರುತ್ತವೆ. ಪ್ಯಾರಾ ------- ವಾಕ್ಯ -------

(2) ಪ್ರತಿಯೊಬ್ಬರಿಗೂ ಸ್ವತಂ ದೇಶದೊಂದಿಗೆ ಸಹ ಯಾವ ದೇಶವನ್ನಾದರೂ ಬಿಡುವ ಹಕ್ಕು, ಮರಳಿ ಸ್ವಂತ ದೇಶಕ್ಕೆ ಸೇರುವ ಹಕ್ಕು ಇರುತ್ತವೆ. ಪ್ಯಾರಾ ------- ವಾಕ್ಯ -------

SCERT TELANGANA

ಐತಿಹಾಸಿಕ ಹಿನ್ನೆಲೆ (Historical Context) :

ಮಣಿಪುರ ಇಂದು ಎರಡು ವಿಲಕ್ಷಣವಾದ ಭೌಗೋಳಿಕ ಪ್ರದೇಶಗಳನ್ನು ಹೊಂದಿದೆ : ಪರ್ವತಗಳು, ಕಣಿವೆಗಳು, ಸ್ವಾತಂತ್ರ್ಯಕ್ಕೆ ಮೊದಲು ಕಣಿವೆ ಪ್ರಾಂತಗಳು ರಾಜರ ಆಳ್ವಿಕೆಯಲ್ಲಿದ್ದರೆ ಪರ್ವತ ಪ್ರಾಂತಗಳು ಮುಖ್ಯವಾಗಿ ಬುಡಕಟ್ಟು ಜನರಿಂದ ಸ್ವಲ್ಪ ಸ್ವಾಯತ್ತತೆಯಿಂದ ಇದ್ದವು. 1891ರಲ್ಲಿ ಬ್ರಿಟೀಷರು ಈ ಪ್ರಾಂತದ ಮೇಲೆ ತಮ್ಮ ನಿಯಂತ್ರಣ ಸಾಧಿಸಿದರು. ಆದರೂ ರಾಜನನ್ನು ಆಳಲುಬಿಟ್ಟರು. ಮಣಿಪುರ ರಾಜ್ಯವನ್ನು ಭಾರತದೇಶದಲ್ಲಿ ವಿಲೀನಗೊಳಿಸುತ್ತಾ ರಾಜ 1949ರಲ್ಲಿ ಭಾರತದೇಶದೊಂದಿಗೆ ಒಪ್ಪಂದದ ಮೇಲೆ ಸಹಿ ಮಾಡಿದನು. ಈ ಒಪ್ಪಂದದಿಂದ ಅನೇಕ ಬುಡಕಟ್ಟುಗಳು ವಿಭೇದಿಸಿದವು, ತಾವು ಸ್ವಾಯತ್ತತೆಯಿಂದ ಜೀವಿಸಿದ್ದೇವೆಂದೂ, ತಾವು ಭಾರತದ ದೇಶದಲ್ಲಿ ಒಂದು ಭಾಗವಾಗಲು ಅಂಗೀಕರಿಸುವುದಿಲ್ಲವೆಂದು ವಾದಿಸಲಾರಂಭಿಸಿದವು.

ಭಾರತದೇಶದಲ್ಲಿ ವಿಲೀನಗೊಳ್ಳುವುದನ್ನು ವಿರೋಧಿಸಿದವರನ್ನು ನಿಯಂತ್ರಿಸಲು ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿತು. ಶಾಂತಿ, ಭದ್ರತೆಗಳನ್ನು ಸ್ಥಾಪಿಸಲು ಮಾಡಿದ ಕಾನೂನುಗಳಲ್ಲಿ ಒಂದು ಸಾಯುಧ ದಳಗಳಿಗೆ ಪ್ರತ್ಯೇಕ ಅಧಿಕಾರಗಳ ಕಾನೂನು 1958. ದೇಶ ವಿದ್ರೋಹ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುವರು ಎಂಬ ಅನುಮಾನ ಬಂದರೆ ಆ ವ್ಯಕ್ತಿಯನ್ನು ಬಂಧಿಸಲು ಇಲ್ಲವೇ ಗುಂಡು ಹಾರಿಸಿ ಸಾಯಿಸಲು ಭದ್ರತಾ ಸಿಬ್ಬಂದಿಗೆ ಈ ಕಾನೂನು ಅಧಿಕಾರವನ್ನು ನೀಡುತ್ತದೆ. ಈ ಕಾನೂನಿನಲ್ಲಿನ ಅಂಶಗಳು ದಿರ್ವಿನಿಯೋಗವಾಗಿವೆಯೆಂದು, ಅಮಾಯಕರಾದ ಜನರು ಪದೇ ಪದೇ ಚಿತ್ರಹಿಂಸೆಗೆ, ಕಿರುಕುಳಗಳಿಗೆ, ಗುರಿಯಾದರೆಂದೂ, ಕೊಲೆ ಮಾಡಲ್ಪಟ್ಟರೆಂದು ಆರೋಪಗಳಿವೆ. ಅಷ್ಟೇ ಅಲ್ಲದೆ ಸಾಯುಧ ದಳಗಳು ಮಹಿಳೆಯರನ್ನು ದೋಚುವಿಕೆ, ಅತ್ಯಾಚಾರಗಳಿಗೆ ಗುರಿ ಮಾಡಿದವು ಎನ್ನುವ ಆರೋಪಣೆಗಳು ಸಹ ಇವೆ. ದೇಶ ವಿದ್ರೋಹ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುವರೆನ್ನುವ ಅನುಮಾನದಿಂದ ತಮ್ಮ ಮಕ್ಕಳನ್ನು ;ಪತಿಯನ್ನು ನಿರ್ಭಂದಿಸಿ, ಹಿಂಸಿಸುತ್ತಾರೆನ್ನುವ ಭಯ ಸಹ ಮಹಿಳೆಯರಾಗಿ, ತಾಯಿಯರಾಗಿ ಇವರಿಗೆ ಇತ್ತು. ತಾಯಿಯರು, ಹೆಣ್ಣು ಮಕ್ಕಳು ಸ್ವತಃ ಲೈಂಗಿಕ ಅತ್ಯಾಚಾರಕ್ಕೆ ಗುರಿಯಾಗುತ್ತಿದ್ದಾರೆ. ಹೀಗೆ ಅತ್ಯಾಚಾರಕ್ಕೆ ಗುರಿಯಾದ ಕೆಲವು ಮಹಿಳೆಯರು ಆತ್ಮಹತ್ಯೆಗಳು ಮಾಡಿಕೊಂಡರು. ತಂಗಜಂ ಮನೋಹರವು ಎನ್ನುವ 32 ವರ್ಷದ ಮಹಿಳೆ ನಿರ್ಭಂಧದಲಿ ಸಾವನ್ನಪ್ಪಿದಾಗ ಇದು ಎಲ್ಲರ ದೃಷ್ಟಿಯನ್ನು ಆಕರ್ಷಿಸಿತು, ಇದಕ್ಕೆ ವಿರುದ್ಧವಾಗಿ ದೊಡ್ಡ ಮೊತ್ತದಲ್ಲಿ ಪ್ರತಿಭಟನೆಗಳು ನಡೆದವು.

ಮೈರಾ ಪೈಬೀ ಚಳುವಳಿ (Meira Paibi Movement) :

ಮೈಟೈ ಭಾಷೆಯಲ್ಲಿ ಮೈರಾ ಪೈಬೀ ಎಂದರೆ 'ದೀವಟಿಗೆಯವರು ಎಂದರ್ಥ'. 1970ರ ಕೊನೆಯಲ್ಲಿ ಮದ್ಯಪಾನ ಮಾಡಿ ಬೀದಿಗಳಲ್ಲಿ ಗಲಾಟೆ ಮಾಡದಂತೆ ನಿವಾರಿಸಲು ಮೈರಾ ಸೈಬೀ ಚಳುವಳಿ ಪ್ರಾರಂಭವಾಯಿತು. 1980ರ ಆರಂಭದಲ್ಲಿ ಮಣಿಪುರಿ ಸ್ವಾತಂತ್ರ್ಯಕ್ಕೆ ಪ್ರಾರಂಭವಾದ ಸಾಯುಧ ಚಳುವಳಿಯನ್ನು ಎದುರಿಸಲು ಭಾರತೀಯ ಸೈನ್ಯವನ್ನು ಹೆಚ್ಚು ಸಂಖ್ಯೆಯಲ್ಲಿ ಕಳುಹಿಸುವುದರಿಂದ ಮಾನವ ಹಕ್ಕುಗಳ ಚಳುವಳಿಯಾಗಿ ಅದು ಬದಲಾಯಿತು. ಅದೇ ಸಮಯದಲ್ಲಿ ರಾಜ್ಯವನ್ನು ಗಲಭೆಯ ಪ್ರಾಂತವಾಗಿ ಘೋಷಿಸಿ ಸಾಯುಧ ದಳಗಳ ಪ್ರತ್ಯೇಕ ಅಧಿಕಾರಗಳ ಕಾಯ್ದೆಯ ಅಡಿಯಲ್ಲಿ ಭಾರತೀಯ ಸೈನ್ಯಕ್ಕೆ ಕೊನೆಯಿಲ್ಲದ ಅಧಿಕಾರಗಳನ್ನ ನೀಡಿದರು. ಇದರ ಫಲವಾಗಿ ಪದೇ ಪದೇ ಸೈನಿಕ ಕ್ರಮಗಳಿಂದ ಮಾನವ ಹಕ್ಕುಗಳು ಉಲ್ಲಂಘಿಸಲ್ಪಡುತ್ತಿದ್ದವು. ಇದಕ್ಕೆ ಪ್ರತಿಭಟನಾ ಪ್ರದರ್ಶನಗಳಿಂದ ಮೈರಾ ಪೈಬೀ ಕೂಡಲೇ ಸ್ಪಂಧಿಸಿದಳು. ರಾತ್ರಿಗಳಲ್ಲಿ ಬೀದಿಗಳಲ್ಲಿ ಮೈರಾ ಪೈಬೀ ಗಸ್ತು ತಿರುಗುವುದು ಪ್ರಾರಂಭಿಸಿದಳು. ಗ್ರಾಮಗಳು, ಪಟ್ಟಣಗಳಲ್ಲಿನ ವಾರ್ಡ್‌ಗಳ ಮಹಿಳೆಯರು ಪ್ರತಿದಿನ ಈ ಗಸ್ತಿನಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ಇವರ ಕೈಯಲ್ಲಿ ಯಾವುದೇ ಆಯುಧಗಳಿಲ್ಲದೆ ಕಟ್ಟಿಗೆಗೆ ಬಟ್ಟೆ ಸುತ್ತಿ, ಕಿರೋಸೀನ್‌ನಲ್ಲಿ ಅದ್ದಿ ಬೆಳಗಿಸಿದ ದೀವಟಿಗೆಗಳು ಮಾತ್ರವೇ ಇರುತ್ತಿದ್ದವು. ಪ್ರಜಾಶಾಂತಿಗೆ ಭಂಗ, ಧಕ್ಕೆ ಉಂಟಾಗದಂತೆ ಮಹಿಳಾ ಬೃಂದಗಳು ಪ್ರತಿ ರಾತ್ರಿ, ಪ್ರತಿ ವಾರ್ಡಿನಲ್ಲಿ, ಪ್ರತಿ ಕೂಡಲಿಯಲ್ಲಿ ಕುಳಿತುಕೊಳ್ಳತ್ತವೆ. ಸ್ವಲ್ಪ ಶಾಂತಿಯುತ ಸಮಯದಲ್ಲಿ ಕೆಲವು ಜನ ಮಹಿಳೆಯರೇ ವಂತಿಗೆಯ ಪ್ರಕಾರ ಗಸ್ತು ಇರುತ್ತಿದ್ದರು. ಆದರೆ ಉದ್ರಿಕ್ತತೆಗಳು ಹೆಚ್ಚಾದಾಗ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಕಾವಲು ಇರುತ್ತಾರೆ. ಇವರು ಚಳುವಳಿಕಾರರಲ್ಲ, ಇವರಿಗೆ ರಾಜಕೀಯ ಆಕಾಂಕ್ಷೆಗಳು ಏನು ಇಲ್ಲ. ಜನರ ಭದ್ರತೆ, ಸಂಕ್ಷೇಮದ ಹೊಣೆಯನ್ನು

SCERT TELANGANA

ಚಿತ್ರ 20.8 : ಪ್ರದರ್ಶನೆಯಲ್ಲಿ ಪಾಲ್ಗೊಳ್ಳುತ್ತಿರುವ ಮೈರಾ ಪೈಬೀ ಮಹಿಳೆಯರು

ತಮ್ಮ ಕೈಯಲ್ಲಿ ತೆಗೆದುಕೊಂಡ ಸಾಧಾರಣ ಮಹಿಳೆಯರು ಇವರು. ಸಾಯುಧ ದಳಗಳ ಪ್ರತ್ಯೇಕ ಅಧಿಕಾರಗಳ ಕಾಯ್ದೆಯನ್ನು ರದ್ದು ಮಾಡಬೇಕೆಂದು ಸಹ ಮೈರಾ ಪೈಬೀ ಚಳುವಳಿ ತೋರುತ್ತಿದೆ. ಈ ಕಾನೂನಿಗೆ ವಿರುದ್ಧವಾಗಿ ಚಳುವಳಿ ಕ್ರಮೇಣ ಬಲಪಟಿತು. ಚುನಾವಣೆಗಳನ್ನು ಬಹಿಷ್ಕರಿಸುವುದರಿಂದ ಹಿಡಿದು ರಿಲೇ ನಿರಾಹಾರ ದೀಕ್ಷೆಗಳವರೆಗೆ ತಮ್ಮ ವಿರೋಧವನ್ನು ಅನೇಕ ರೂಪಗಳಲ್ಲಿ ವ್ಯಕ್ತಪಡಿಸಿದರು. ಇವುಗಳಲ್ಲಿ ಒಂದು ಉದಾಹರಣೆ ಇರೋಂ ಷರ್ಮಿಳಾ: ಈಕೆ ಗೃಹ ನಿರ್ಭಂಧದಲ್ಲಿದ್ದರೂ 10 ವರ್ಷಗಳಿಗಿಂತ ಹೆಚ್ಚು ಕಾಲ ನಿರಾಹಾರ ದೀಕ್ಷೆ ಮಾಡುತ್ತಿದ್ದಾಳೆ.

ಈ ಸಮಸ್ಯೆಯನ್ನು ಪರಿಹರಿಸಲು ಅನೇಕ ಪ್ರಯತ್ನಗಳು ನಡೆದಿವೆ. ಮಾಜೀ ಸೈನಿಕಾಧಿಕಾರಿಗಳು ಕೆಲವು ಜನ ಈ ಪ್ರಾಂತದಲ್ಲಿನ ವಿರೋಧಗಳ ಕುರಿತು ಬರೆಯುತ್ತಾ ಉತ್ತಮ ಮೂಲಭೂತ ಸೌಕರ್ಯಗಳು, ಸೌಕರ್ಯಗಳ ಅಭಿವೃದ್ಧಿ ಮಾಡುವುದರ ಮೂಲಕ ಮಾತ್ರವೇ ಈ ಪ್ರಾಂತ ಪ್ರಜೆಗಳ ಅಂಗೀಕಾರವನ್ನು ಪಡೆಯಬಲ್ಲರೆಂದು ತಿಳಿಸಿದ್ದಾರೆ. ಈ ಪ್ರಾಂತದಲ್ಲಿನ ಈ ಕಾನೂನನ್ನು ರದ್ದುಪಡಿಸಲು ಇರುವ ಅವಕಾಶಗಳನ್ನು ಪರಿಶೀಲಿಸಲು ಸುಪ್ರೀಂ ಕೋರ್ಟು ನ್ಯಾಯಾಧೀಶನಾದ ಬಿ.ಪಿ. ಜೀವನ್‌ರೆಡ್ಡಿಯನ್ನು ಸರ್ಕಾರ ನಿಯಮಿಸಿತು. ಈ ಕಮಿಟಿ ತನ್ನ ನಿವೇದಿಕೆಯನ್ನು ಸಮರ್ಪಿಸಿದರೂ ಇಂದಿಗೂ ಶಾಶ್ವತ ಪರಿಷ್ಕಾರವನ್ನು ಕಂಡುಹಿಡಿದಿಲ್ಲ.

ಸಾಮಾಜಿಕಚಳುವಳಿಗಳೆಲ್ಲವುಗಳಲ್ಲಿ ಏಕರೂಪ ಅಂಶಗಳು : (Some common features across social movements) :

ಪರಿಸರ, ಮಾನವ ಹಕ್ಕುಗಳು ಎನ್ನುವ ಸರಿಹದ್ದುಗಳನ್ನು ಅಳಿಸಿಹಾಕುತ್ತಾ ಸಾಮಾಜಿಕ ಚಳುವಳಿಗಳು ಅನೇಕ ಅಂಶಗಳನ್ನು ಬೆಳಕಿಗೆ ತಂದವು. ಅವರ ವಾದಗಳು ಈ ವಿವಿಧ ಸೂತ್ರಗಳಿಂದ ಹುಟ್ಟಿಕೊಂಡವು. ಮಹಾಲಿಯಾ, ಲೂಥರ್ ಕಿಂಗ್‌ರು ಮಾನವ ಹಕ್ಕುಗಳ ಆದರ್ಶಗಳೊಂದಿಗೆ ಪರಿಸರ, ಸಮಾನತೆಗಳಿಗೆ ಸಂಬಂಧಿಸಿದ ಅಂಶಗಳನ್ನು ಕೂಡ ಬೆಳಕಿಗೆ ತಂದರೆಂದು ನೀವು ಗಮನಿಸುತ್ತೀರಿ. ಕೆಲವು ಸಂದರ್ಭಗಳಲ್ಲಿ ತಮ್ಮ ಮೇಲೆ ಹೇರಿದ ಬದಲಾವಣೆಗಳನ್ನು ಈ ಚಳುವಳಿಗಳು ಪ್ರತಿಘಟಿಸಿದವು. ಮಾರ್ಟಿನ್ ಲೂಥರ್ ಕಿಂಗ್, ಮೈರಾ ಪೈಬೀಯಂತಹ ಕೆಲವು ಚಳುವಳಿಗಳು ಬದಲಾವಣೆಗಳನ್ನು ಬಯಸಿದವು. ಸಾಮಾಜಿಕ ಚಳುವಳಿಗಳು ಸಾಮಾನ್ಯವಾಗಿ ರಾಜಕೀಯ ಪಕ್ಷಗಳಿಗೆ ದೂರವಾಗಿದ್ದು ಒಂದು ಉದ್ದೇಶಕ್ಕಾಗಿ ಒಂದಾಗಿ ಕೆಲಸ ಮಾಡಿದವು. ಅದರಲ್ಲಿ ಪಾಲ್ಗೊಳ್ಳುತ್ತಿರುವವರು ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದವರಾಗಿರಬಹುದು. ಆಗಾಗ್ಗೆ ಈ ಚಳುವಳಿಯ ಕಾರ್ಯಕ್ರಮಗಳನ್ನು ಭೂಸ್ವಾಮ್ಯ, ಪ್ರಜಾಪ್ರಭುತ್ವ ಪದ್ಧತಿಗಳಲ್ಲಿ ರೂಪಿಸುತ್ತಾರೆ. ದೇಶದಲ್ಲಿ ಆಳವಾಗಿ ಬೇರೂರಿದ ರಾಜಕೀಯ ವ್ಯವಸ್ಥೆಗಳು ತಮ್ಮ ಆಕಾಂಕ್ಷೆಗಳನ್ನು ಪೂರ್ಣಗೊಳಿಸದಿದ್ದಾಗ ಇಲ್ಲವೇ ಹೋರಾಡುವ ಅಂಶವಿದ್ದಾಗ ಸಾಮಾಜಿಕ ಚಳುವಳಿಗಳು ತಲೆ ಎತ್ತುತ್ತವೆ.

SCERT TELANGANA

ಕೀಲಕ ಪದಗಳು

ಪೌರ ಹಕ್ಕುಗಳು	ಸಹಾಯ ನಿರಾಕರಣೆ	ಜನರನ್ನು ಬೇರೆ ಮಾಡುವುದು	ಅಸ್ಥಿರಪಡಿಸುವುದು
ಯುದ್ಧ ವಿರೋಧ	ಸೈನ್ಯದಲ್ಲಿ ಸೇರುವ ವಯಸ್ಸು	ಸಾಯುಧೀಕರಣ	ಪುನರಾವಸ್ಥೆ
ನಷ್ಟ ಪರಿಹಾರ	ಸಾರಾಯಿ ವಿರೋಧ	ಪ್ರಜಾಪ್ರಭುತ್ವ	ಭಾಗಸ್ವಾಮ್ಯ

ನಿಮ್ಮ ಕಲಿಕೆಯನ್ನು ಉತ್ತಮ ಪಡಿಸಿಕೊಳ್ಳಿ !

1. ಸಾಮಾಜಿಕ ಚಳುವಳಿಗಳ ಮೇಲೆ ಒಂದು ಪಟ್ಟಿ ತಯಾರಿಸಲು ಇಲ್ಲಿ ಕೆಲವು ಅಂಶಗಳಿವೆ. ಇವುಗಳ ಆಧಾರವಾಗಿ ಪಟ್ಟಿ ತಯಾರಿಸಿ, ವಿವಿಧ ಚಳುವಳಿಗಳ ನಡುವೆ ಹೋಲಿಕೆಗಳು, ವ್ಯತ್ಯಾಸಗಳನ್ನು ಗುರ್ತಿಸಿರಿ:(AS_1)

   ಚಳುವಳಿ ಪ್ರಾರಂಭಿಸಿದ ಪ್ರಧಾನ ಅಂಶ ' ಎಲ್ಲಿ ನಡೆಯಿತು ' ಪ್ರಧಾನ ಬೇಡಿಕೆಗಳು ' ಪ್ರತಿಭಟನೆ ತಿಳಿಯ ಪಡಿಸಿದ ಪದ್ಧತಿಗಳು ' ಮುಖ್ಯವಾದ ನಾಯಕರು ' ಸರ್ಕಾರ ಸ್ಪಂಧಿಸಿದ ರೀತಿ ' ಸಮಾಜದ ಮೇಲಾಗುವ ಪ್ರಭಾವ. (AS_3)

2 . ಕನ್ನಯ್ಯ, ರಮ್ಯ, ಸಲ್ಮಾ ಒಂದು ವಿಷಯವನ್ನು ಚರ್ಚಿಸುತ್ತಿರುವರು. ಅವರ ಬಯಕೆಗಳು ಬೇರೆ, ಮಾನವ ಹಕ್ಕುಗಳ ದೃಷ್ಟಿಯಿಂದ ನೀವು ಯಾರೊಂದಿಗೆ ಏಕೀಭವಿಸುತ್ತಿರೋ ತಿಳಿಸಿ ನಿಮ್ಮ ಕಾರಣಗಳನ್ನು ತಿಳಿಯಪಡಿಸಿರಿ. (AS_2)

   ಜನರು ಬಡತನದಲ್ಲಿ ಬಾಡಿಹೋಗದಂತೆ ನೋಡಬೇಕು. ಅದಕ್ಕೆ ಅವಸರವಾದರೆ ಪತ್ರಿಕಾ ಸ್ವತಂತ್ರವನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಿದರೂ ಪರವಾಗಿಲ್ಲ ಎಂದು ರಮ್ಯ ಅನ್ನುತ್ತಾಳೆ. ಆಹಾರ ಒಂದೇ ಇದ್ದರೆ ಸಾಲದೆಂದು, ಪತ್ರಿಕಾ ಸ್ವತಂತ್ರ ಸಹ ಇರುವುದು ಮುಖ್ಯವೆಂದು ಇಲ್ಲದೇ ಹೋದರೆ ದೇಶದ ವಿವಿಧ ಪ್ರಾಂತಗಳಲ್ಲಿ ಮಾನವ ಹಕ್ಕುಗಳು ಎಲ್ಲಿಯಾದರೂ ಉಲ್ಲಂಘಿಸಲ್ಪಡುತ್ತಿದೆಯೇನೋ ಎನ್ನುವುದು ತಿಳಿಯುವ ಮಾರ್ಗವೇ ಇರುವುದಿಲ್ಲವೆನ್ನುವುದು ಸಲ್ಮಾ ವಾದ. ಪತ್ರಿಕೆಗಳು ಶ್ರೀಮಂತರ, ಶಕ್ತಿವಂತರ ಕೈಯಲ್ಲಿದ್ದಾಗ ಪ್ರಯೋಜನವೇನು ? ಅವು ಸಾಮಾನ್ಯ ಜನರಿಗೆ ಸಂಬಂಧಿಸಿದ ಅಂಶಗಳನ್ನು ಏಕೆ ಪ್ರಚುರಣೆ ಮಾಡುತ್ತವೆ ಎಂದು ಕನ್ನಯ ಹೇಳುವನು.



3. ಸಾಮಾಜಿಕ ಚಳುವಳಿಗಳ ಮೂಲಭೂತ ಅಂಶಗಳೇನು ? (AS_1)

4. ಮೇಲೆ ನೀಡಿದ ಉದಾಹರಣೆಯಲ್ಲಿ ಸಾಮಾನ್ಯ ಜನರ ಪಾತ್ರವನ್ನು ಹೇಗೆ ತಿಳಿಸಿರುವರು ?(AS_1)

5. ಅಮೇರಿಕಾದಲ್ಲಿನ ಕಪ್ಪು ಜಾತಿಯ ವರು, ಮೈರಾ ಪೈಬೀ ಚಳುವಳಿಗಳ ನಡುವೆ ಹೋಲಿಕೆಗಳು, ವ್ಯತ್ಯಾಸಗಳೇನು ?(AS_1)

6 . ಪ್ರಪಂಚದಾದ್ಯಂತೆ ಅತ್ಯಧಿಕ ರಾಜಕೀಯ ವ್ಯವಸ್ಥೆಗಳಾಗಿ ಪ್ರಜಾಪ್ರಭುತ್ವಗಳೇ ಇವೆ. ಇವು ಪ್ರಜೆಗಳ ಆಕಾಂಕ್ಷೆಗಳಿಗೆ ಪೂರ್ಣ ನ್ಯಾಯ ಒದಗಿಸಿವೆಯಾ ? ಈ ಅಧ್ಯಾಯದಲ್ಲಿ ನೀಡಿದ ಉದಾಹರಣೆ ಗಳ ಆಧಾರವಾಗಿ "ಪ್ರಜಾಪ್ರಭುತ್ವ – ಸಾಮಾಜಿಕ ಚಳುವಳಿಗಳು " ಎನ್ನುವ ಅಂಶದ ಮೇಲೆ ಚಿಕ್ಕ ಪ್ರಬಂಧ ಬರೆಯಿರಿ.(AS_4)

7. ಭೋಪಾಲ್ ಗ್ಯಾಸ್ ದುರ್ಘಟನೆಯಂತಹವುಗಳ ಹಿನ್ನೆಲೆಯಲ್ಲಿ ಪ್ರತಿಭಟನೆಗಳು, ಚಳುವಳಿಗಳಿಗೆ ಪ್ರಪಂಚದಾದ್ಯಂತೆ ಜನರನ್ನು ಹೇಗೆ ಸಮೀಕರಿಸುತ್ತಾರೋ ತಿಳಿದುಕೊಂಡು, ಚರ್ಚಿಸಿರಿ.(AS_3)

SCERT TELANGANA

ಅಧ್ಯಾಯ
21 ñìÆÉ íWÝ | ÃÝgÂÓÝ«Ü®Ü¿ á aÜÙÜáÊÜÚ

ತೆಲಂಗಾಣ ಪ್ರಜೆಗಳ ಸುದೀರ್ಘ ಹೋರಾಟದ ನಂತರ 2014 ಜೂನ್ 2 ರಂದು ಭಾರತ ದೇಶದಲ್ಲಿ ತೆಲಂಗಾಣ ಒಂದು ಪೂರ್ಣ ಮಟ್ಟದ ರಾಜ್ಯವಾಗಿ ಹೊರಹೊಮ್ಮಿತು. ಈ ಅಧ್ಯಾಯದಲ್ಲಿ ಈ ಪ್ರಕ್ರಿಯೆಯನ್ನು ಕುರಿತು ತಿಳಿದುಕೊಳ್ಳೋಣ.

★ ನೀವು ಇಲ್ಲವೆ ನಿಮ್ಮ ಕುಟುಂಬದ ಸದಸ್ಯರು ಈ ಚಳುವಳಿಯನ್ನು ನೋಡಿರಬಹುದು ಇಲ್ಲವೇ ಅದರಲ್ಲಿ ಪಾಲ್ಗೊಂಡಿರಬಹುದು. ನಿಮ್ಮ ಅನುಭವಗಳನ್ನು ತರಗತಿಯಲ್ಲಿ ವಿನಿಮಯ ಮಾಡಿಕೊಳ್ಳಿರಿ. ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆಯ ಹಿಂದಿರುವ ಪ್ರಧಾನ ಕಾರಣಗಳು ಏನಿರಬಹುದೆಂದು ನೀವು ಅಂದುಕೊಳ್ಳುವಿರಿ ?

★ ತೆಲಂಗಾಣ ರಾಜ್ಯದ ಸಾಧನೆಯಲ್ಲಿ ಪ್ರಮುಖ ಪಾತ್ರವಹಿಸಿದವರ ಹೆಸರಿನ ಪಟ್ಟಿಯನ್ನು ನಿಮ್ಮ ತಂದೆ-ತಾಯಿಯವರು ಮತ್ತು ಶಿಕ್ಷಕರ ಸಹಕಾರದೊಂದಿಗೆ ತಯಾರಿಸಿರಿ. ಅವರ ಪಾತ್ರವನ್ನು ತಿಳಿಸುವ ಪೋಸ್ಟರು ಇಲ್ಲವೆ ಗೋಡೆ ಪತ್ರಿಕೆಯನ್ನು ತಯಾರಿಸಿ ನಿಮ್ಮ ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

ಭಾರತ ದೇಶದಲ್ಲಿ ಹೈದ್ರಾಬಾದ್ ರಾಜ್ಯದ ಸೇರ್ಪಡೆ

ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯ ಅಂತಿಮ ಹಂತದಲ್ಲಿ ಹೈದ್ರಾಬಾದ್ ರಾಜ್ಯ ಅಥವಾ ನಿಜಾಂ ಸಂಸ್ಥಾನವು ಎಲ್ಲರ ದೃಷ್ಟಿಯನ್ನು ಆಕರ್ಷಿಸಿತು. ಭಾರತ ದೇಶವನ್ನು ಬ್ರಿಟಿಷ ಪಾಲಕರು ಬಿಟ್ಟು ಹೋದ ನಂತರ ಸ್ವತಂತ್ರ ರಾಜ್ಯವನ್ನಾಗಿ ಏರ್ಪಾಟು ಮಾಡಿಕೊಳ್ಳಬೇಕೆಂದು ನಿಜಾಂ ಭಾವಿಸಿದನು. ಹೈದ್ರಾಬಾದನಲ್ಲಿನ ರಾಷ್ಟ್ರೀಯವಾದಿಗಳು ಇದನ್ನು ವಿರೋಧಿಸಿದರು. ಹೈದ್ರಾಬಾದ್ ರಾಜ್ಯದಲ್ಲಿನ ಅಧಿಕ ಭಾಗದಲ್ಲಿ ತೆಲುಗು ಮಾತನಾಡುವ ಜಿಲ್ಲೆಗಳಿವೆ, ತೆಲುಗು ತಿಳಿದ ಗಿರಿಜನರ ಜನಸಂಖ್ಯೆಯೂ ಕೂಡಾ ಅಧಿಕ ಸಂಖ್ಯೆಯಲ್ಲಿದೆ. ಈ ಪ್ರಾಂತಗಳನ್ನು ತೆಲಂಗಾಣ ಎಂದು ವ್ಯವಹರಿಸುತ್ತಿದ್ದರು. ಹೈದ್ರಾಬಾದ್‌ನಲ್ಲಿನ ರಾಷ್ಟ್ರೀಯವಾದಿಗಳು ಗ್ರಾಮಗಳಿಗೆ ತೆರಳಿ ತೆಲುಗು ಭಾಷೆಯಲ್ಲಿ ಶಿಕ್ಷಣಕ್ಕಾಗಿ, ಪ್ರಜಾಪ್ರಭುತ್ವ ಸರ್ಕಾರಕ್ಕಾಗಿ, ಸಾಮಾಜಿಕ ಸಮಾನತೆಗಾಗಿ ಪ್ರಚಾರ ಮಾಡತೊಡಗಿದರು. 1920, 1930ರ ದಶಕದಲ್ಲಿ ಆಂಧ್ರ ಮಹಾಸಭೆಯು ಈ ಆಕಾಂಕ್ಷೆಯನ್ನು ಮುಂದುವರೆಸಿತು. 1940ರ ದಶಕದಲ್ಲಿನ ಈ ಚಳುವಳಿಗೆ ಕರಾವಳಿ ಆಂಧ್ರದಲ್ಲಿನ ರಾಷ್ಟ್ರೀಯವಾದಿಗಳು ಕೂಡಾ ಬೆಂಬಲಿಸಿದರು. ಅಲ್ಪಸಮಯದಲ್ಲಿಯೇ ಈ ಚಳುವಳಿಯನ್ನು ಭೂ ಸುಧಾರಣೆಗಳಿಗೆ



ಹೈದರಾಬಾದ ರಾಜ್ಯದ ಭಾಗವಾಗಿ ತೆಲಂಗಾಣ

SCERT TELANGANA

ಸಂಬಂಧಿಸಿದ ಅಂಶಗಳನ್ನು ಕೂಡಾ ಸೇರಿಸಿ, ನಿಜಾಂ, ರಜಾಕರುಗಳ ಬೆಂಬಲವಿದ್ದು ದೊರೆಗಳ ಆಡಳಿತವನ್ನು ಕೂಡಾ ವಿರೋಧಿಸಲಾರಂಭಿಸಿದರು. ಈ ಆಂತರಿಕ ಘರ್ಷಣೆಗಳಿಂದ ಜವಾಹರ್‌ಲಾಲ್ ನೆಹರು ಪ್ರಧಾನಮಂತ್ರಿಗಳಾಗಿರುವ ಭಾರತ ಸರ್ಕಾರವು ಪೋಲಿಸ್ ಕಾರ್ಯಾಚರಣೆ ಕೈಗೊಂಡು ಭಾರತ ದೇಶದಲ್ಲಿ ಹೈದ್ರಾಬಾದ್ ರಾಜ್ಯವು ಸೇರುವ ಹಾಗೆ ಮಾಡಿದರು. ಈ ವಿಷಯವನ್ನು ಕುರಿತು ನೀವು 8ನೇ ತರಗತಿಯಲ್ಲಿ ಅಭ್ಯಾಸ ಮಾಡಿರುವಿರಿ. ಆಗ ಕರಾವಳಿ ಆಂಧ್ರ, ರಾಯಲಸೀಮ ಪ್ರಾಂತಗಳು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿನ ಭಾಗಗಳಾಗಿದ್ದವು. ನಂತರ ತೆಲುಗು ಮಾತನಾಡುವ ಪ್ರಾಂತಗಳೆಲ್ಲವನ್ನು ಸೇರಿಸುತ್ತಾ ಆಂಧ್ರ ಪ್ರದೇಶ ರಾಜ್ಯವನ್ನು ಏರ್ಪಾಟು ಮಾಡಬೇಕೆಂದು ಚಳುವಳಿಯು ಆರಂಭಗೊಂಡಿತು. ಭಾಷಾವಾರು ಅಥವಾ ಭಾಷಾ ಪ್ರಯುಕ್ತ ರಾಜ್ಯಗಳ ಏರ್ಪಾಟು ಕುರಿತು ನೀವು ಹಿಂದಿನ ತರಗತಿಯಲ್ಲಿ ಅಭ್ಯಾಸ ಮಾಡಿರುವಿರಿ.

ದೊಡ್ಡ ಮನುಷ್ಯರ ಒಪ್ಪಂದ (Gentlemen's Agreement) ಆಂಧ್ರ ಪ್ರದೇಶ ರಾಜ್ಯದ ರಚನೆ

ತೆಲುಗು ಭಾಷೆ ಮಾತನಾಡುವ ಮೂರು ವಿಭಿನ್ನ ಪ್ರಾಂತಗಳಿವೆ. ಇವು ತೆಲಂಗಾಣ, ಕರಾವಳಿ ಆಂಧ್ರ, ರಾಯಲಸೀಮ. ಈ ಮೂರು ಪ್ರಾಂತಗಳಲ್ಲಿ ಮಾತನಾಡುವ ತೆಲುಗು ಭಾಷೆಯಲ್ಲಿನ ವ್ಯತ್ಯಾಸಗಳಿರುವುದಲ್ಲದೇ ವಿಭಿನ್ನ ಸಂಸ್ಕೃತಿಗಳು, ಅಸ್ತಿತ್ವಗಳು (Identity) ಕೂಡಾ ಗಿರಿಜನ ಭಾಷೆಗಳು, ದಕ್ಕನ್ ಉರ್ದು,ಂ ಕನ್ನಡ, ಮರಾಠಿ ಭಾಷೆಗಳೊಂದಿಗೆ ಮಿಳಿತವಾದ ಜಾನಪದ ಸಂಪ್ರದಾಯದಿಂದ ತೆಲಂಗಾಣ ಭಾಷೆ ರೂಪುಗೊಂಡಿದೆ. ಕರಾವಳಿ ಆಂಧ್ರದ ತೆಲುಗು ಭಾಷೆಯ ಮೇಲೆ ಸಂಸ್ಕೃತ ಭಾಷೆಯ ಪ್ರಭಾವ ಹೆಚ್ಚಾಗಿದೆ. ಮುಸ್ಲಿಂ, ದಲಿತ ಕರಕುಶಲ, ಗಿರಿಜನ, ವಲಸೆ ಸಮುದಾಯಗಳಿಂದ ತೆಗೆದುಕೊಂಡ ಸಮ್ಮಿಳಿತ ಸಂಸ್ಕೃತಿಯು ತೆಲಂಗಾಣದ ಪ್ರತ್ಯೇಕತೆಯಾಗಿದೆ. ಇತರ ಪ್ರಾಂತಗಳಿಗಿಂತಲೂ ಮುಸ್ಲಿಮರು, ಹಿಂದುಳಿದ ಕುಲದವರು, ಗಿರಿಜನ ಪ್ರಜೆಗಳು ಹೆಚ್ಚಾಗಿದ್ದು ತೆಲಂಗಾಣ ಸಾಮಾಜಿಕ ಚಿತ್ರಣವು ಭಿನ್ನವಾಗಿದೆ. ಐತಿಹಾಸಿಕವಾಗಿ ನೋಡಿದರೆ ತೆಲಂಗಾಣಕ್ಕಿಂತಲೂ ಕರಾವಳಿ ಪ್ರಾಂತದಲ್ಲಿ ಸಂಸ್ಕೃತಿ ಸಂಸ್ಕೃತಿಯ ಪ್ರಭಾವ ಹೆಚ್ಚು. ಕರಾವಳಿ ಪ್ರಾಂತವು ಬ್ರಿಟಿಷರ ನೇರ ಆಡಳಿತದಲ್ಲಿದ್ದು 19ನೆಯ ಶತಮಾನದಿಂದ ಇಂಗ್ಲೀಷ್ ಶಿಕ್ಷಣವು ಜಾರಿಯಲ್ಲಿ ಬಂದಿತು. ಈ ವಿಧವಾಗಿ ಆ ಪ್ರಾಂತವು ಆಧುನಿಕೀಕರಣ ಪ್ರಕ್ರಿಯೆಗೆ ಒಳಪಟ್ಟಿತು. ಇದಕ್ಕೆ ವಿರುದ್ಧವಾಗಿ ನಿಜಾಮರ ಆಡಳಿತದಲ್ಲಿನ ತೆಲಂಗಾಣದಲ್ಲಿ ಬೋಧನಾ ಭಾಷೆಯಾಗಿ ಉರ್ದುನ್ನು ಬಲವಂತವಾಗಿ ಜಾರಿಗೊಳಿಸಿದರು. ಈ ಪ್ರಕ್ರಿಯೆಯಿಂದ ಆಧುನಿಕ ವಿದ್ಯೆಗೆ ಅಷ್ಟೊಂದು ಪ್ರೋತ್ಸಾಹ ದೊರೆಯಲಿಲ್ಲ.

ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ತೆಲಂಗಾಣದ ಪ್ರತ್ಯೇಕ ಲಕ್ಷಣಗಳನ್ನು ವಿವರಿಸಿರಿ.

1) ಸಹಜ ಭೌಗೋಳಿಕ ಅಂಶಗಳು

2) ಸಮಾಜ

3) ಚಾರಿತ್ರಿಕ ಹಿನ್ನೆಲೆ

ಕರಾವಳಿ ಆಂಧ್ರ ಮುಖ್ಯವಾಗಿ ಡೆಲ್ಟಾ ಪ್ರಾಂತಗಳೊಳಗೆ ಮೈದಾನ ಪ್ರಾಂತಗಳನ್ನು ಹೊಂದಿ ಉತ್ತಮ ಕಾಲುವೆಗಳ ವ್ಯವಸ್ಥೆಯೊಂದಿಗೆ, ಸಮೃದ್ಧ ನೀರನ್ನು ಹೊಂದಿರಲು, ಪ್ರಸ್ಥಭೂಮಿಯಲ್ಲಿರುವ ತೆಲಂಗಾಣ ಮಳೆಯಾಧಾರಿತ ವ್ಯವಸಾಯದ ಮೇಲೆ, ಪಶುಪೋಷಣೆಯ ಮೇಲೆ, ಕಾಡುಗಳಲ್ಲಿ ಬೇಟೆ, ಆಹಾರ ಶೇಖರಣೆಯ ಮೇಲೆ ಆಧಾರ ಪಟ್ಟಿದೆ. ಎತ್ತರ, ತಗ್ಗುಗಳಿರುವ ಈ ಪ್ರಾಂತದಲ್ಲಿ ಕೆರೆಗಳನ್ನು ನಿರ್ಮಿಸಿ, ಈ ನೀರನ್ನು ಹಲವು ವಿಧದ ಬೆಳೆಗಳನ್ನು ಬೆಳೆಯಲು ಉಪಯೋಗಿಸುತ್ತಿದ್ದರು. ಬ್ರಿಟಿಷ್ ಕಾಲದಲ್ಲಿ ವ್ಯವಸಾಯ ವ್ಯಾಪಾರ, ಕೈಗಾರಿಕಾ ರಂಗಗಳ್ಲಿ ಕರಾವಳಿ ಆಂಧ್ರ ಚೆನ್ನಾಗಿ ಅಭಿವೃದ್ಧಿ ಹೊಂದಿತು. ಆದರೆ ಮುಖ್ಯವಾದ ನದಿಗಳು ಪ್ರವಹಿಸುತ್ತಾ, ವಿಸ್ತಾರವಾದ ಖನಿಜ ಸಂಪತ್ತು, ಅರಣ್ಯ, ಭೂಮಿಗಳೊಂದಿಗೆ ತೆಲಂಗಾಣ ಅಭಿವೃದ್ಧಿ ಹೊಂದಲು ವಿಸ್ತೃತ ಅವಕಾಶಗಳಿವೆ. ಈ ಕಾರಣವಾಗಿ ತೆಲಂಗಾಣ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು, ಇಲ್ಲಿ ಬಂಡವಾಳ ಹೂಡಲು ಆಂಧ್ರ ಪ್ರಾಂತದಿಂದ ಶ್ರೀಮಂತರು ಬಹಳ ಆಸಕ್ತಿ ತೋರಿದರು. ಇದರಿಂದ ಆಂಧ್ರ ಪ್ರಾಂತದಿಂದ 'ವಿಶಾಲಾಂಧ್ರ' ಎನ್ನುವ ಕೋರಿಕೆ ಹೊರಹೊಮ್ಮಿತು.

ಭಾರತ ದೇಶದಲ್ಲಿ ಸೇರ್ಪಡೆಯಾದ ತರುವಾಯ ಹೈದ್ರಾಬಾದ್ ರಾಜ್ಯವು 1952ರಲ್ಲಿ ಪ್ರಜಾಪ್ರಭುತ್ವ ವಿಧಾನದೊಳಕ್ಕೆ ಬಂದಿತು. ಹೈದ್ರಾಬಾದ್ ರಾಜ್ಯಕ್ಕೆ ಚುನಾಯಿತರಾದ ಮೊಟ್ಟ ಮೊದಲ ಮುಖ್ಯಮಂತ್ರಿ ಬೂರ್ಗುಲ

ರಾಮಕೃಷ್ಣಾರಾವ್ ಮದ್ರಾಸ್ ಪ್ರೆಸಿಡೆನ್ಸಿಯಿಂದ 1953ರಲ್ಲಿ ಆಂಧ್ರ ಪ್ರಾಂತವು ಬೇರ್ಪಡುವುದರೊಂದಿಗೆ ಟಂಗುಟೂರಿ ಪ್ರಕಾಶಂ ಮುಖ್ಯಮಂತ್ರಿಯಾದರು. ಆದರೆ ತೆಲುಗು ಮಾತನಾಡುವ ಪ್ರಾಂತಗಳನ್ನು ಒಗ್ಗೂಡಿಸಬೇಕೆಂದು ಚಳುವಳಿಯು ಆರಂಭಗೊಂಡಿತು. ವಿಲೀನಕ್ಕೆ ಅನುಕೂಲವಾಗಿ ಆಂಧ್ರ ಶಾಸನಸಭೆಯು ಒಮ್ಮತದ ತೀರ್ಮಾನ ಮಾಡಲು, ಹೈದ್ರಾಬಾದ್ ರಾಜ್ಯ ಶಾಸನಸಭೆಯಲ್ಲಿ ಹೆಚ್ಚು ಜನ ಸದಸ್ಯರು ವಿಲೀನಕ್ಕೆ ತೀವ್ರ ಅಭ್ಯಂತರ ವ್ಯಕ್ತಪಡಿಸಿದರು. ಕರಾವಳಿ ಆಂಧ್ರದಲ್ಲಿನ ಶ್ರೀಮಂತ, ಅಭಿವೃದ್ಧಿ ಹೊಂದಿದ ವರ್ಗವು ಹೊಸದಾಗಿ ಏರ್ಪಾಟುಗೊಳ್ಳುವ ರಾಜ್ಯದಲ್ಲಿ ತಮ್ಮ ಅಧಿಪತ್ಯವನ್ನು ಚಲಾಯಿಸುತ್ತಾರೆಂದು ಇವರು ತೀವ್ರ ಮನಸ್ತಾಪಕ್ಕೆ ಗುರಿಯಾದರು. ಯಾವ ಪ್ರಯೋಜನಗಳಿಲ್ಲದೆಯೇ ತೆಲಂಗಾಣ ಪ್ರಜೆಗಳು ತಮ್ಮ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುತ್ತೇವೆಯೆಂದು ಭಯಪಟ್ಟರು. ಕರಾವಳಿ ಪ್ರಾಂತದಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿದ್ದುದ್ದರಿಂದ, ತಮ್ಮ ಯುವಕರ ವಿದ್ಯೆ, ಉದ್ಯೋಗಗಳ ಕುರಿತು ಕೂಡ ಇವರು ಚಿಂತೆಗೀಡಾದರು. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಎರಡು ಪ್ರಾಂತಗಳ ನಾಯಕರು ದೆಹಲಿಯಲ್ಲಿ ಸಮಾವೇಶಗೊಂಡು, ಸುಧೀರ್ಘ ಚರ್ಚೆಗಳ ನಂತರ 1956 ಫೆಬ್ರುವರಿ 20 ರಂದು ''ದೊಡ್ಡ ಮನುಷ್ಯರ ಒಪ್ಪಂದ'' (Gentlemen agreement) ಮಾಡಿಕೊಂಡರು. ಈ ಒಪ್ಪಂದಕ್ಕೆ ಆಂಧ್ರ ಪ್ರಾಂತದಿಂದ ಬಿ.ಗೋಪಾಲ್ ರೆಡ್ಡಿ, ಎನ್.ಸಂಜೀವ ರೆಡ್ಡಿ, ಜಿ.ಲಚ್ಚನ್ನ, ಎ. ಸತ್ಯನಾರಾಯಣ ರಾಜು, ತೆಲಂಗಾಣದಿಂದ, ಬಿ.ರಾಮಕೃಷ್ಣಾರಾವ್, ಎಮ್.ಚೆನ್ನಾ ರೆಡ್ಡಿ, ಜೆ.ವಿ. ನರ್ಸಿಂಗರಾವ್, ಕೆ.ವಿ.ರಂಗಾರೆಡ್ಡಿ, ಸಹಿ ಮಾಡಿದರು. ಇವರು ಮೂಲಭೂತ 14 ಅಂಸಗಳ ಮೇಲೆ ಒಪ್ಪಂದಕ್ಕೆ ಬಂದರು. ಇದರೊಂದಿಗೆ ತೆಲಂಗಾಣ ಪ್ರಜೆಗಳು ಸಂತೃಪ್ತಗೊಳ್ಳುವದರ ಮೂಲಕ ಎರಡು ರಾಜ್ಯಗಳ ವಿಲೀನಕ್ಕೆ ಮಾರ್ಗವು ಸುಗಮವಾಯಿತು. ಈ ವಿಧವಾಗಿ ಹೈದ್ರಾಬಾದ್ ರಾಜಧಾನಿಯಾಗಿ 'ಆಂಧ್ರ ಪ್ರದೇಶ್' ನೂತನ ರಾಜ್ಯವಾಗಿ ಏರ್ಪಟ್ಟಿತು.

ಈ ಒಪ್ಪಂದದಲ್ಲಿನ ಮುಖ್ಯ ಅಂಶಗಳು

1. ಆಡಳಿತದ ಖರ್ಚುಗಳನ್ನು ಎರಡು ಪ್ರಾಂತಗಳು ಆಯಾ ಅನುಪಾತದಲ್ಲಿ ಭರಿಸಬೇಕು. ತೆಲಂಗಾಣದಲ್ಲಿನ ರೆವೆನ್ಯೂ ಉಳಿತಾಯವನ್ನು ತೆಲಂಗಾಣದ ಅಭಿವೃದ್ಧಿಗಾಗಿ ಮಾತ್ರವೇ ಖರ್ಚು ಮಾಡಬೇಕು.

2. ತೆಲಂಗಾಣದಲ್ಲಿ ಆಗಲೇ ಇರುವ ಶೈಕ್ಷಣಿಕ ಸೌಕರ್ಯಗಳನ್ನು ತೆಲಂಗಾಣದ ವಿದ್ಯಾರ್ಥಿಗಳಿಗೆ ಮಾತ್ರವೇ ಒದಗಿಸುತ್ತಾರೆ.

3. ಹನ್ನೆರಡು ವರ್ಷಗಳ ಕಾಲ ತೆಲಂಗಾಣದಲ್ಲಿ ವಾಸವಿದ್ದರೆ ತೆಲಂಗಾಣ ಪ್ರಾಂತದಲ್ಲಿನ ಉದ್ಯೋಗಗಳಿಗೆ, ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಅರ್ಹತೆ ಪಡೆಯುವ ಮುಲ್ಕಿ ನಿಯಮಗಳನ್ನು ಮುಂದುವರೆಸಲು ಅಂಗೀಕರಿಸಿದರು.

4. ತೆಲಂಗಾಣ ಅಭಿವೃದ್ಧಿ, ಅವಸರಗಳನ್ನು ಪರ್ಯವೇಕ್ಷಿಸಲು ಶಾಸನಸಭೆಯಿಂದ 20 ಮಂದಿ ಸದಸ್ಯರೊಂದಿಗೆ ಕಾನೂನು ಬದ್ಧ ಪ್ರಾಂತೀಯ ಸಂಘವನ್ನು ಏರ್ಪಾಟು ಮಾಡಲು ಅಂಗೀಕರಿಸಿದರು.

5. ತೆಲಂಗಾಣದಲ್ಲಿನ ವ್ಯವಸಾಯ ಭೂಮಿಯ ಮಾರಾಟವನ್ನು ಈ ಪ್ರಾಂತೀಯ ಸಂಘವು ನಿಯಂತ್ರಿಸುತ್ತದೆ.

6. ಆಂಧ್ರ ಪ್ರದೇಶ ಮಂತ್ರಿಗಳ ಬೃಂದದಲ್ಲಿ ಶೇಕಡಾ 40 ಸದಸ್ಯರು ತೆಲಂಗಾಣದಿಂದ, 60 ಶೇಕಡಾ ಸದಸ್ಯರು ಆಂಧ್ರದಿಂದ ಇರುತ್ತಾರೆ.

7. ಮುಖ್ಯಮಂತ್ರಿಗಳು ಆಂಧ್ರ ಪ್ರದೇಶದಿಂದ ಇದ್ದರೆ, ಉಪ ಮುಖ್ಯಮಂತ್ರಿ ತೆಲಂಗಾಣದಿಂದ, ಮುಖ್ಯಮಂತ್ರಿ ತೆಲಂಗಾಣದಿಂದ ಇದ್ದರೆ ಉಪಮುಖ್ಯಮಂತ್ರಿ ಆಂಧ್ರದಿಂದ ಇರಬೇಕು.

ತೆಲಂಗಾಣಕ್ಕೆ ಪ್ರಾಂತೀಯ ಮಂಡಳಿಯನ್ನು ಏರ್ಪಾಟು ಮಾಡಬೇಕೆಂಬ ಪ್ರಸ್ತಾವನೆಯು ಬಹಳ ಮುಖ್ಯವಾದುದು. ಇತರ ಪ್ರಾಂತಗಳ ಅಭಿವೃದ್ಧಿ ಯೋಜನೆಗಳನ್ನು ರಾಜ್ಯ ಸರ್ಕಾರವು ರೂಪಿಸುತ್ತದೆ. ತೆಲಂಗಾಣ ವಿಷಯದಲ್ಲಿ ಇವುಗಳನ್ನು ಪ್ರಾಂತೀಯ ಮಂಡಳಿಯು ರೂಪಿಸಬೇಕಾಗಿದ್ದಿತು. ತೆಲಂಗಾಣ ಪ್ರಾಂತದ ಅವಶ್ಯಕತೆಗಳಿಗೆ

SCERT TELANGANA

ಅನುಗುಣವಾಗಿ ಸರ್ವತೋಮುಖ ಅಭಿವೃದ್ಧಿಯನ್ನು ಪ್ರಾಂತೀಯ ಮಂಡಳಿ ಸಾಧಿಸಬೇಕು. ಸಾಮಾನ್ಯ ಯೋಜನೆಗೆ ಅನುಗುಣವಾಗಿ ನೀರಾವರಿ, ಕೈಗಾರಿಕೆಗಳ ಅಭಿವೃದ್ಧಿಗಾಗಿ, ಯೋಜನೆಗಳ ರಚನೆ, ಅಭಿವೃದ್ಧಿಗೆ ಸಂಬಂಧಿಸಿದ ಅಂಶಗಳನ್ನು ಈ ಮಂಡಳಿ ಗಮನಿಸಬೇಕು. ತೆಲಂಗಾಣ ಪ್ರಾಂತಕ್ಕೆ ಸಂಬಂಧಿಸಿದ ವಿವಿಧ ಉದ್ಯೋಗಗಳಿಗೆ ನೇಮಕಾತಿಗಳನ್ನು ಕೂಡಾ ಪರ್ಯವೇಕ್ಷಿಸುತ್ತದೆ. ತೆಲಂಗಾಣ ಭೂಮಿಗಳನ್ನು ತೆಲಂಗಾಣೇತರ ಪ್ರಾಂತ ಪ್ರಜೆಗಳಿಗೆ ಮಾರಾಟ ಮಾಡುವದನ್ನು ಇದು ನಿಯಂತ್ರಿಸುತ್ತದೆ.



ನಕ್ಷೆ 2 : ವಿಭಜನೆಯಾಗದ ಮೊದಲಿನ ಆಂಧ್ರಪ್ರದೇಶ

ಈ ರೀತಿಯಾಗಿ ಒಪ್ಪಂದವು ಸರ್ಕಾರದ ಸಂಪನ್ಮೂಲಗಳನ್ನು ಸಮಾನವಾಗಿ ಬಳಸಿಕೊಳ್ಳುವಂತೆ, ತೆಲಂಗಾಣ ಯುವಕರಿಗೆ ತೆಲಂಗಾಣ ಯುವಕರಿಗೆ ವಿದ್ಯೆ, ಉದ್ಯೋಗ ಅವಕಾಶಗಳು ಲಭಿಸುವಂತೆ ಮಾಡಲು ಪ್ರಯತ್ನಿಸಿತು.

★ ತೆಲಂಗಾಣ ಪ್ರಾಂತೀಯ ಮಂಡಳಿಯಲ್ಲಿ ನೀವು ಸದಸ್ಯರೆಂದುಕೊಳ್ಳಿ. ಎಂತಹ ಪ್ರತ್ಯೇಕ ಅಭಿವೃದ್ಧಿ ಕೆಲಸಗಳನ್ನು ಸೂಚಿಸುವಿರಿ ? ನೀವು ಪ್ರತ್ಯೇಕವಾಗಿ ಪ್ರತಿಪಾದಿಸುವ ಮೂರು ಯೋಜನೆಗಳನ್ನು ಹೆಸರಿಸಿ.

★ ತೆಲಂಗಾಣದಲ್ಲಿನ ಪರಿಶಿಷ್ಟ ಜಾತಿಯವರಿಗೆ, ಗಿರಿಜನರಿಗೆ, ಅಲೆಮಾರಿ ಪ್ರಜೆಗಳಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಯಾವ ವಿಧಾನಗಳನ್ನು ಅನುಸರಿಸಬೇಕಾಗಿದ್ದಿತು ?

★ ತೆಲಂಗಾಣದಲ್ಲಿನ ಖನಿಜ ಸಂಪನ್ಮೂಲಗಳ ವಿನಿಯೋಗಕ್ಕೆ ಉತ್ತಮ ಮಾರ್ಗ ಯಾವುದು ?

★ ತೆಲಂಗಾಣದಲ್ಲಿನ ರೈತರು, ಕೂಲಿಗಳು ಎದುರಿಸುತ್ತಿರುವ ಸಮಸ್ಯೆಗಳು ಇತರ ಪ್ರಾಂತಗಳಿಗಿಂತ ಭಿನ್ನವಾದುವೇ ? ತರಗತಿ ಕೋಣೆಯಲ್ಲಿ ಚರ್ಚಿಸಿರಿ.

★ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯನ್ನು ಕೋರಿದವರಲ್ಲಿ ವಿದ್ಯಾರ್ಥಿಗಳು ಏಕೆ ಪ್ರಮುಖ ಪಾತ್ರವಹಿಸಿದರೆಂದುಕೊಳ್ಳುವಿರಿ ?

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹೊಸದಾಗಿ ಏರ್ಪಟ್ಟ ಆಂಧ್ರ ಪ್ರದೇಶ ರಾಜ್ಯದಲ್ಲಿ ತೆಲಂಗಾಣ ಪ್ರಾಂತದ ಪ್ರತ್ಯೇಕತೆಯನ್ನು ಗುರ್ತಿಸಿತು. ಆದ್ದರಿಂದಲೇ ಅದನ್ನು 'ರಾಜ್ಯದೊಳಗಿನ ರಾಜ್ಯ'ವೆಂದು ಗುರ್ತಿಸಿದರು.

1969ರ ಚಳುವಳಿ

ಕಾಲಗತಿಸಿದಂತೆ ದೊಡ್ಡ ಮನುಷ್ಯರ ಒಪ್ಪಂದವು ಜಾರಿಗೊಳ್ಳದ ಕಾರಣ ಅಸಂತೃಪ್ತಿಯು ಹೆಚ್ಚಾಗತೊಡಗಿತು. ಈ ಅಸಂತೃಪ್ತಿಗೆ ಮೂರು ಮುಖ್ಯ ಕಾರಣಗಳಿವೆ. ತೆಲಂಗಾಣದ ರೆವೆನ್ಯೂ ಉಳಿತಾಯವನ್ನು ಇತರ ಪ್ರಾಂತಗಳಿಗೆ ಬದಲಾಯಿಸುವದು, ಸರ್ಕಾರಿ ರಂಗದ ಉದ್ಯೋಗಗಳಲ್ಲಿ ಪಕ್ಷಪಾತ, ಮುಲ್ಕಿ ನಿಯಮಗಳಿಗ ವಿರುದ್ಧವಾಗಿ ತೆಲಂಗಾಣ ಪ್ರಾಂತದಲ್ಲಿ ಕೆಲಸ ನಿರ್ವಹಿಸುತ್ತಿರುವ ಕರಾವಳಿ ಆಂಧ್ರದ ವ್ಯಕ್ತಿಗಳಿಗೆ ಸ್ಥಳೀಯರ ಅರ್ಹತೆಗಳನ್ನು ಕಲ್ಪಿಸುವದು, ಕೆಲವು ನೇಮಕಾತಿಗಳಿಗೆ ವಿರುದ್ಧವಾಗಿ ಆರಂಭಗೊಂಡ ಪ್ರತಿಭಟನೆ ಅಲ್ಪ ಸಮಯ ದಲ್ಲಿಯೇ ಪ್ರಜಾ ಚಳುವಳಿಯಾಗಿ ಮಾರ್ಪಟ್ಟಿತು. ಈ ಚಳುವಳಿಯಲ್ಲಿ ಉಸ್ಮಾನಿಯಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಿದರು. ಪ್ರತಿಭಟನೆಗಳು, ಮುಷ್ಕರಗಳು, ಉಪವಾಸ ಸತ್ಯಾಗ್ರಹಗಳು, ಆಮರಣ ಉಪವಾಸ

SCERT TELANGANA

ಸತ್ಯಾಗ್ರಹಗಳು ಕೂಡಾ ನಡೆದವು. ಸಾವಿರಾರು ಪ್ರಜೆಗಳೊಂದಿಗೆ ದೊಡ್ಡ ದೊಡ್ಡ ಪ್ರತಿಭಟನೆಗಳು ನಡೆದವು. ಇವುಗಳಲ್ಲಿ ಅನೇಕ ಪ್ರತಿಭಟನೆಗಳು ಪೋಲಿಸರ ದಮನಕ್ಕೊಳಗಾದವು. ಪ್ರತಿಭಟನ ಕಾರರ ಮೇಲೆ ಕೆಲವೊಮ್ಮೆ ಪೋಲಿಸರು ಗುಂಡು ಹಾರಿಸಿದರು. ಅಧಿಕಾರಿಕ ಸಮಾಚಾರದ ಪ್ರಕಾರ 370 ಮಂದಿ ಪ್ರಾಣ ಕಳೆದುಕೊಂಡರು. ಇವರಲ್ಲಿ ಹೆಚ್ಚು ಮಂಡಿ ವಿದ್ಯಾರ್ಥಿಗಳೇ.

ಇದೇ ಸಮಯದಲ್ಲಿ ತೆಲಂಗಾಣದಲ್ಲಿ ಅನೇಕ ನಾಯಕರು ಸೇರಿ ಪ್ರತ್ಯೇಕ ತೆಲಂಗಾಣ ರಾಜ್ಯದ ರಚನೆಗಾಗಿ ಕೆಲಸ ಮಾಡಲು 'ತೆಲಂಗಾಣ ಪ್ರಜಾ ಸಮಿತಿ' ಎಂಬ ವೇದಿಕೆಯಾಗಿ ಏರ್ಪಟ್ಟರು. ನಂತರದ ದಿನಗಳಲ್ಲಿ ಈ ಸಮೀತಿಯು ರಾಜಕೀಯ ಪಕ್ಷವಾಗಿ ಮಾರ್ಪಟ್ಟಿತು. ಕೇಂದ್ರ ಸರಕಾರ ಸುಧೀರ್ಘ ಸಮಾಲೋಚನೆಗಳನ್ನು ನಡೆಸಿ ಎಂಟು ಅಂಶಗಳ ಯೋಜನೆಗಳನ್ನು ಪ್ರತಿಪಾದಿಸಿತು. ಇದರಲ್ಲಿ ಮೂಲಭೂತವಾಗಿ ಅನೇಕ ಕಮೀಟಿಗಳನ್ನು ಏರ್ಪಾಟು ಮಾಡುವದು ಇದೆ. ಬಹಳ ಜನರನ್ನು ಇದು ಸಂತೃಪ್ತಿಪಡಿಸದೇ ಹೋದರೂ ಚಳುವಳಿಯು ತಾತ್ಕಾಲಿಕವಾಗಿ ಹಿನ್ನಡೆಯನ್ನು ಅನುಭವಿಸಿತು.

ಚಿತ್ರ 21.1

1969 ತೆಲಂಗಾಣ ಚಳುವಳಿಯಲ್ಲಿನ ವಿವಿಧ ಪ್ರತಿಭಟನೆಗಳ ರೂಪಗಳು.

Fig 22.1 Different forms of protests in 1969 Telangana agitation

ತೆಲಂಗಾಣ ಹೋರಾಟಕ್ಕೆ ಪ್ರತಿಸ್ಪಂದನೆಯಾಗಿ ಸೀಮಾಂಧ್ರ ಪ್ರಾಂತದಲ್ಲಿ 1972 ರಲ್ಲಿ "ಜೈ ಆಂಧ್ರ ಚಳುವಳಿ" ಆರಂಭಗೊಂಡಿತು. ಕರಾವಳಿ ಜಿಲ್ಲೆಗಳನ್ನು ಇನ್ನಷ್ಟು ಅಭಿವೃದ್ಧಿ ಪಡಿಸಬೇಕೆಂದು ಕೋರುವದಲ್ಲದೇ ಸ್ಥಳೀಯರ ಅರ್ಹತೆಗೆ ಸಂಬಂಧಿಸಿದ ಮುಲ್ಕಿ ನಿಯಮಗಳನ್ನು ಕೂಡ ತೊಲಗಿಸಬೇಕೆಂದು ಇದು ಕೋರಿತು. ತಮ್ಮ ಉದ್ಯೋಗ ಅವಕಾಶಗಳಿಗೆ ಹೊಡೆತ ಬೀಳುತ್ತದೆಯೆಂಬ ಭಯದಿಂದ ಇಲ್ಲಿ ಕೂಡಾ ವಿದ್ಯಾರ್ಥಿಗಳೇ ಚಳುವಳಿಯಲ್ಲಿ ಪ್ರಧಾನ ಭಾಗವಾಗಿ ಇದ್ದರು. ಸರ್ಕಾರ ಉದ್ಯೋಗಗಳಲ್ಲಿ ಸ್ಥಳೀಯ ಪ್ರಜೆಗಳಿಗೆ ಆದ್ಯತೆ ಕೊಡುತ್ತೇವೆ ಎಂದು ಎಲ್ಲಾ ಪ್ರಾಂತಗಳ ಪ್ರಜೆಗಳಿಗೆ ವಿಶ್ವಾಸ ಕಲ್ಪಿಸುತ್ತಾ 1973ರಲ್ಲಿ ಕೇಂದ್ರ ಸರ್ಕಾರ ಆರು ಸೂತ್ರಗಳ ವಿಧಾನವನ್ನು ರೂಪಿಸಿತು. ಶೈಕ್ಷಣಿಕ ಅವಕಾಶಗಳನ್ನು ಎಲ್ಲಾ ಪ್ರಾಂತಗಳಿಗೆ ವಿಸ್ತರಿಸುವದು, ಹೈದ್ರಾಬಾದನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಂತಹ ಅಂಶಗಳು ಇದರಲ್ಲಿನ ಭಾಗವಾಗಿವೆ. ಇದರಿಂದ ತೆಲಂಗಾಣ ಪ್ರಾಂತೀಯ ಕಮೀಟಿಗಳು ಮತ್ತು ಮುಲ್ಕೀ ನಿಬಂಧನೆಗಳನ್ನು ಕೈಬಿಡಲಾಯಿತು. ಈ ವಿಧವಾಗಿ 'ದೊಡ್ಡ ಮನುಷ್ಯರ ಒಪ್ಪಂದ'ದಲ್ಲಿ ಸೇರಿಸಿದ ತನ್ನ ಪ್ರತ್ಯೇಕ ಅಸ್ತಿತ್ವವನ್ನು ತೆಲಂಗಾಣ ಕಳೆದುಕೊಂಡಿತು. ಆಂಧ್ರ ಪ್ರದೇಶದ ಎಲ್ಲಾ ಪ್ರಾಂತಗಳನ್ನು ಒಂದೇ ವಿಧವಾಗಿ ಪರಿಗಣಿಸಲಾರಂಭಿಸಿದರು.

ಈ ಸಮಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕೇಂದ್ರಸರ್ಕಾರ, ಕೇಂದ್ರ ನಾಯಕತ್ವ ಪದೇ ಪದೇ ತಲೆಹಾಕುವದನ್ನು ವಿರೋಧಿಸುವ ಒಂದು ಹೊಸ ರಾಜಕೀಯ ಚಳುವಳಿಯು ಸಮುದ್ರದ ಅಲೆಯಂತೆ ಆಗಸಕೆದ್ದಿತು. ಇದು ತೆಲುಗುದೇಶಂ ರಾಜಕೀಯ ಪಕ್ಷದ ಉದಯಕ್ಕೆ ಕಾರಣವಾಯಿತು. ಇದರೊಂದಿಗೆ ಪ್ರಾಂತೀಯ ಚಳುವಳಿಗಳು ತಾತ್ಕಾಲಿಕವಾಗಿ ತಣ್ಣಗಾದವು.

SCERT TELANGANA

ಒಟ್ಟು ಸಾಗುವಳಿ ವಿಸ್ತೀರ್ಣ-ಮಿಲಿಯನ್ ಹೆಕ್ಟೇರುಗಳು

ಪ್ರಾಂತ	1955-56	2006-07	ಶೇಕಡಾ ವೃದ್ಧಿ
ಆಂಧ್ರ	4.2	5.3	20
ತೆಲಂಗಾಣ	4.8	5	5

ನೀರಾವರಿ ಕೆಳಗೆ ಇರುವ ನಿಕರ ವಿಸ್ತೀರ್ಣ-ಲಕ್ಷಣಗಳ ಹೆಕ್ಟೇರುಗಳಲ್ಲಿ

ಪ್ರಾಂತ	1955-56	2006-07	ಶೇಕಡಾ ವೃದ್ಧಿ
ಆಂಧ್ರ	17	23	135
ತೆಲಂಗಾಣ	7	19	257

ಕೃಪೆ: ಶ್ರೀಕೃಷ್ಣ ಕಮಿಟಿ ರಿಪೋರ್ಟ್

ನೀರಾವರಿ ಕೆಳಗೆ ಇರುವ ನಿಕರ ವಿಸ್ತೀರ್ಣ 2007ರಲ್ಲಿ - ಲಕ್ಷಗಳ ಹೆಕ್ಟೇರುಗಳಲ್ಲಿ

ಪ್ರಾಂತ	ಬಾವಿಗಳು	ಕಾಲುವೆಗಳು	ಕೆರೆಗಳು	ಇತರೆ
ಆಂಧ್ರ	5	13	2.5	2.5
ತೆಲಂಗಾಣ	14	2.5	2	0.5

ತೆಲಂಗಾಣದಲ್ಲಿ ಬೆಳೆಯುತ್ತಿರುವ ಅಸಂತೃಪ್ತಿ

ದೊಡ್ಡ ಮನುಷ್ಯರ (ಹಿರಿಯರ) ಒಪ್ಪಂದವಿದ್ದಾಗ್ಯೂ ಪ್ರಾಂತೀಯ ಮಂಡಳಿಯನ್ನು ಏರ್ಪಡಿಸುವಂತಹ ಅನೇಕ ಮುಖ್ಯ ಅಂಶಗಳನ್ನು ಜಾರಿಗೊಳಿಸಲಿಲ್ಲ. ಕೇವಲ ಪ್ರಾಂತೀಯ ಕಮೀಟಿಯನ್ನು ಮಾತ್ರ ಏರ್ಪಾಟು ಮಾಡಿದರು. ಈ

ಕಮೀಟಿಯ ಶಿಫಾರಸ್ಸುಗಳನ್ನು ತಪ್ಪದೇ ಜಾರಿಗೊಳಿಸಬೇಕೆಂಬುದೇನಿಲ್ಲ, ಸರ್ಕಾರ ಆಗಾಗ್ಗೆ ನಿರ್ಲಕ್ಷಿಸಲಾರಂಭಿಸಿತು.

1956 ರಿಂದ 1990 ರ ವರೆಗೆ ಯೋಜನಾಬದ್ಧ ಅಭಿವೃದ್ಧಿಯ ಕಾಲದಲ್ಲಿ ಆಂಧ್ರ ಪ್ರದೇಶ ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ನಡೆದವು. ದೊಡ್ಡ ದೊಡ್ಡ ಆಣೆಕಟ್ಟುಗಳನ್ನು ಕಟ್ಟಿದರು. ನೀರಾವರಿ, ವಿದ್ಯುತ್ ಯೋಜನೆಗಳನ್ನು ಆರಂಭಿಸಿದರು. ದೊಡ್ಡ ದೊಡ್ಡ ಗಣಿಗಳನ್ನು ಕೈಗಾರಿಕಾ ಕೇಂದ್ರಗಳನ್ನು ಆರಂಭಿಸಿದರು. ವ್ಯವಸಾಯ ಉತ್ಪತ್ತಿಗಳನ್ನು ಬದಲಾಯಿಸಲು ಹಸಿರು ಕ್ರಾಂತಿಯನ್ನು ಜಾರಿಗೊಳಿಸಿದರು. ಅಧಿಕ ಸಂಖ್ಯೆಯಲ್ಲಿ ವಿಶ್ವವಿದ್ಯಾಲಯಗಳನ್ನು ತಾಂತ್ರಿಕ ಸಂಸ್ಥೆಗಳನ್ನು ಸ್ಥಾಪಿಸಿದರು. 1990ರ ನಂತರ ರಾಜ್ಯದಲ್ಲಿ ಅಂದರೆ ಪ್ರತ್ಯೇಕವಾಗಿ ಹೈದ್ರಾಬಾದನಲ್ಲಿ ಸಮಾಚಾರ ತಂತ್ರಜ್ಞಾನವು ಮೊಳಗಿತು. ಆದರೆ ತೆಲಂಗಾಣ ಪ್ರಜೆಗಳು ಈ ಅಭಿವೃದ್ಧಿ ಬಹಳ ಅಸಮಾನತೆಯಿಂದ ಕೂಡಿದೆ ಎಂದು, ಅಭಿವೃದ್ಧಿಯ ಫಲಗಳು ರಾಜ್ಯದ ಇತರ ಪ್ರಾಂತಗಳಿಗೆ ಸೇರುತ್ತವೆ ಯೆಂದು ಭಾವಿಸಲಾರಂಭಿಸಿದರು. ತೆಲಂಗಾಣ ಪ್ರಾಂತದಲ್ಲಿನ ಸಂಪನ್ಮೂಲಗಳನ್ನು ಸ್ಥಳೀಯ ಪ್ರಜೆಗಳ ಪ್ರಯೋಜನಕ್ಕಾಗಿ ಉಪಯೋಗಿಸುವದಿಲ್ಲವೆಂದು ಕೂಡಾ ಇವರು ಭಾವಿಸಲಾರಂಭಿಸಿದರು. ರಾಜ್ಯದಲ್ಲಿ ಏರ್ಪಡುತ್ತಿರುವ ರಾಜ್ಯದಲ್ಲಿ ಏರ್ಪಡುತ್ತಿರುವ ಹೊಸ ಉದ್ಯೋಗ ಅವಕಾಶಗಳನ್ನು ಇತರ ಪ್ರಾಂತದ ಪ್ರಜೆಗಳು ಲಪಟಾಯಿಸುತ್ತಿರುವರೆಂದು ಇಲ್ಲಿನ ಯುವಕರು ಭಾವಿಸಲಾರಂಭಿಸಿದರು.

ಸ್ಥೂಲ ಸಾಗುವಳಿ ವಿಸ್ತೀರ್ಣ ಎನ್ನುವ ಸೂಚಕವನ್ನು ತೆಗೆದುಕೊಂಡರೆ ಒಂದು ವರ್ಷದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಬೆಳೆಗಳನ್ನು ಬೆಳಸಿರುವರೋ ಎಂಬುದನ್ನು ಇದು ತಿಳಿಸುತ್ತದೆ. ಇದು ಕರಾವಳಿ ಆಂಧ್ರ ಪ್ರಾಂತದಲ್ಲಿ ಗಣನೀಯವಾಗಿ ಹೆಚ್ಚಿದೆ. ಆದರೆ ತೆಲಂಗಾಣದಲ್ಲಿ ಸುಮಾರಾಗಿ ಅಷ್ಟೇ ಇದೆ.

- ವ್ಯವಸಾಯ ಪ್ರಗತಿಗೆ, ಸ್ಥೂಲ ಬೆಳೆಗಳ ವಿಸ್ತೀರ್ಣದ ಬೆಳವಣಿಗೆಯನ್ನು ಒಂದು ಸೂಚಕವೆಂದು ನೀವೇಕೆ ಭಾವಿಸುತ್ತೀರಿ ?
- ನೀರಾವರಿಗಾಗಿ ಹೆಚ್ಚಾಗಿ ಬಾವಿಗಳ ಮೇಲೆಯೇ ಆಧಾರ ಪಡುವದರಿಂದ ತೆಲಂಗಾಣ ರೈತರು ಎಂತಹ ಸಮಸ್ಯೆಗಳನ್ನು ಎದುರಿಸುತ್ತಿರುವರು ?
- ಹಿಂದಿನ ಕಾಲದ ಪ್ರಜಗಳ ನೀರಿನ ಸಂಪನ್ಮೂಲಗಳಾದ ಕೆರೆಗಳನ್ನು ಏಕೆ ನಿರ್ಲಕ್ಷಿಸಲಾಯಿತು ? ಅವುಗಳ ಪುನರ್ ನಿರ್ಮಾಣಕ್ಕಾಗಿ ಎಂತಹ ಕ್ರಮಗಳನ್ನು ಕೈಗೊಳ್ಳಬೇಕು ?
- ತೆಲಂಗಾಣದಲ್ಲಿ ಅಧಿಕ ಸಂಖ್ಯೆಯಲ್ಲಿ ಸಂಭವಿಸು ತ್ತಿರುವ ಆತ್ಮಹತ್ಯೆಗಳಿಗೆ ಕಾರಣಗಳೇನು ?
- ಕರಾವಳಿ ಆಂಧ್ರಕ್ಕೆ ಹೋಲಿಸಿದರೆ ತೆಲಂಗಾಣದಲ್ಲಿ ಕಡಿಮೆ ಸಾಕ್ಷರತೆಯಿರಲು ಕಾರಣವೇನು ?

SCERT TELANGANA

ತೆಲಂಗಾಣದಲ್ಲಿ ನೀರಾವರಿ ಸೌಕರ್ಯದ ವಿಸ್ತರಣೆಗಾಗಿ ರೈತರು ಬಹಳಷ್ಟು ಹಣ ಖರ್ಚುಮಾಡಿ ಬಾವಿ ತೋಡಿಸಲು, ಆಂಧ್ರ ಪ್ರಾಂತದಲ್ಲಿ ಸರ್ಕಾರದ ಖರ್ಚಿನೊಂದಿಗೆ ಕಾಲುವೆಗಳ ಮುಖಾಂತರ ಅದು ವಿಸ್ತರಿಸಿತು.

1993–94ರಲ್ಲಿ ಎರಡು ಪ್ರಾಂತಗಳಲ್ಲಿಯೂ ವ್ಯವಸಾಯದಿಂದ ಗ್ರಾಮೀಣ ವ್ಯಕ್ತಿಗೆ ಲಭಿಸುವ ಆದಾಯ ಸುಮಾರು ಒಂದೇ ರೀತಿಯಾಗಿರಲು (ಸುಮಾರು 7800 ರೂಪಾಯಿಗಳು), 2007–08 ರ ವರೆಗೆ ಆಂಧ್ರ ಪ್ರಾಂತದಲ್ಲಿ 11,800 ರೂಪಾಯಿಗಳಷ್ಟು ಏರಿಕೆಯಾಗಲು, ತೆಲಂಗಾಣದಲ್ಲಿ ಅಷ್ಟೊಂದು ವೃದ್ಧಿಯಿಲ್ಲದೆ 10,000 ರೂಪಾಯಿಗಳಷ್ಟೇ ಇದೆ.

ಇದೇ ಸಮಯದಲ್ಲಿ ತೆಲಂಗಾಣ ಜನಸಂಖ್ಯೆಯಲ್ಲಿ ವ್ಯವಸಾಯ ಕೂಲಿಗಳ ಸಂಖ್ಯೆ 38% ದಿಂದ 47%ಕ್ಕೆ ಏರಿಕೆಯಾಗಲು, ಆಂಧ್ರದಲ್ಲಿ ಕೇವಲ ಶೇಕಡಾ 1 ರಷ್ಟು ಮಾತ್ರ ಏರಿಕೆಯಾಯಿತು. ತೆಲಂಗಾಣ ರೈತರು ವ್ಯವಸಾಯದಲ್ಲಿ ಸಂಕಟವನ್ನು ಎದುರಿಸುತ್ತಾ ತಮ್ಮ ಭೂಮಿಗಳನ್ನು ಮಾರಾಟ ಮಾಡುತ್ತಿರುವರೆಂದು ಇದು ತಿಳಿಸುತ್ತದೆ. ಬರಗಾಲದಿಂದ ಬೆಳೆನಷ್ಟವಾದ್ದರಿಂದ, ಪ್ರಜೆಗಳು ಜೀವನೋಪಾಯವನ್ನು ಕಳೆದುಕೊಂಡುದುದರ ಫಲಿತವಾಗಿ ಮೇ 2014 ನವೆಂಬರ್ 2005ರ ಮಧ್ಯೆ ಆಂಧ್ರ ಪ್ರದೇಶ ರಾಜ್ಯದಲ್ಲಿ ಒಟ್ಟು 1068 ಆತ್ಮಹತ್ಯೆಗಳು ಸಂಭವಿಸಲು ಇವುಗಳಲ್ಲಿ 663 ತೆಲಂಗಾಣದಲ್ಲಿಯೇ ಸಂಭವಿಸಿದವು. ಅಂದರೆ ವ್ಯವಸಾಯದಲ್ಲಿನ ಸಂಕಟದ ಕಾರಣವಾಗಿ ರಾಜ್ಯದಲ್ಲಿನ ಆತ್ಮಹತ್ಯೆಗಳಲ್ಲಿ ಶೇಕಡಾ 63 ರಷ್ಟು ತೆಲಂಗಾಣ ಪ್ರಾಂತದಲ್ಲಿಯೇ ಸಂಭವಿಸಿದವು.

ಒಟ್ಟಾರೆಯಾಗಿ ಶೈಕ್ಷಣಿಕ ರಂಗದಲ್ಲಿಯೂ ಕೂಡಾ ಕರಾವಳಿ ಆಂಧ್ರಕ್ಕಿಂತಲೂ ತೆಲಂಗಾಣ ಹಿಂದುಳಿದಿದೆ. 2001 ರಲ್ಲಿ ತೆಲಂಗಾಣದಲ್ಲಿ ಸಾಕ್ಷರತೆ ಶೇಕಡಾ 53 ಆದರೆ ಆಂಧ್ರದಲ್ಲಿ ಶೇಕಡಾ 63. ಇದೇ ಸಮಯದಲ್ಲಿ ತೆಲಂಗಾಣದಲ್ಲಿನ ಬಡವರು, ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ಸಾಕ್ಷರತೆಯ ಶೇಕಡಾ ಇನ್ನೂ ಕಡಿಮೆಯಿದೆ. ಯುವಕರಿಗೆ ತೆಲಂಗಾಣದಲ್ಲಿ 159 ಕಾಲೇಜುಗಳಿವೆ. ಹೈದ್ರಾಬಾದನ್ನು ಬಿಟ್ಟರೆ 116 ಕಾಲೇಜುಗಳು ಮಾತ್ರ ಇವೆ. ಆದರೆ ಅದೇ ಆಂಧ್ರದಲ್ಲಿ ಅಷ್ಟೇ ಜನ ಯುವಕರಿಗೆ 181 ಕಾಲೇಜುಗಳಿವೆ. ಅದೇ ರೀತಿಯಾಗಿ ಕಾಲೇಜು ಶಿಕ್ಷಣಕ್ಕಾಗಿ ಗ್ರಾಂಟು ತೆಲಂಗಾಣಕ್ಕೆ 93 ಕೋಟಿಗಳು ಅದೇ ಆಂಧ್ರಕ್ಕೆ 224 ಕೋಟಿ ರೂಪಾಯಿಗಳು ಇದೆ.

ಅಸಮಾನ ಅಭಿವೃದ್ಧಿ ಮಾತ್ರವಲ್ಲದೇ ತೆಲಂಗಾಣ ಪ್ರಜೆಗಳಲ್ಲಿ ಸಾಂಸ್ಕೃತಿಕ ವಾಗಿಯೂ ಕೂಡಾ ಪಕ್ಷಪಾತಕ್ಕೆ ಗುರಿಯಾಗುತ್ತಿರುವೆವೆಂಬ ಭಾವನೆ ಯುಂಟಾಯಿತು. ಎರಡು ಪ್ರಾಂತಗಳ ಸೇರ್ಪಡೆಯ ನಂತರ ಕರಾವಳಿ ಆಂಧ್ರ ಭಾಷೆ, ಸಂಸ್ಕೃತಿ ಆದರ್ಶವಾದವುಗಳೆಂದು ಪ್ರಚಾರ ಮಾಡುತ್ತಾ ತೆಲಂಗಾಣ, ಭಾಷೆ ಸಂಸ್ಕೃತಿಗಳನ್ನು ಹಿಂದುಳಿದವುಗಳಾಗಿ ನೋಡತೊಡಗಿದರು. ಶಾಲಾ ಪಠ್ಯಪುಸ್ತಕಗಳಲ್ಲಿ ತೆಲಂಗಾಣ ಚರಿತ್ರೆ, ಸಂಸ್ಕೃತಿ, ನಾಯಕರಿಗೆ ತಕ್ಕಷ್ಟು ಪ್ರಾತಿನಿಧ್ಯ ಲಭಿಸಲಿಲ್ಲ, ತೆಲಂಗಾಣದಲ್ಲಿನ ಗ್ರಾಮ ದೇವತೆಗಳನ್ನು, ಹಬ್ಬಗಳನ್ನು ನಿರ್ಲಕ್ಷಿಸುತ್ತಾ, ಕರಾವಳಿ ಪ್ರಾಂತಕ್ಕೆ ಸಂಬಂಧಿಸಿದ ಹಬ್ಬಗಳನ್ನು ಸಂಸ್ಕೃತೀಕರಣಗೊಳಿಸಿದ ಸಾಂಸ್ಕೃತಿಕ ಆಚಾರಣೆಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾರಂಭಿಸಿದರು. ಸಿನೆಮಾಗಳು ಕೂಡಾ ತೆಲಂಗಾಣ ಪ್ರಜೆಗಳನ್ನು ಹಿಂದುಳಿದವರೆಂದು ಚಿತ್ರೀಕರಿಸಿದರು.

ಇದೇ ಸಮಯದಲ್ಲಿ ಕರಾವಳಿ ಆಂಧ್ರದಿಂದ, ರಾಜ್ಯದ ಹೊರಗಿನಿಂದ ಶ್ರೀಮಂತರು ತೆಲಂಗಾಣಕ್ಕೆ ಪ್ರತ್ಯೇಕವಾಗಿ ಹೈದ್ರಾಬಾದ್ ನಗರದ ಸುತ್ತಲೂ ಕೆಲ ಭೂಮಿಗಳನ್ನು ಕೊಂಡುಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿದರು. ಇದರಿಂದ ಈ ಪ್ರಾಂತದೊಳಕ್ಕೆ ಬಂಡವಾಳ ಬಂದಾಗ್ಯೂ, ಇಂತಹ ಅಭಿವೃದ್ಧಿಯಿಂದ ಸ್ಥಳೀಯ ಪ್ರಜೆಗಳು ಯಾವ ಪ್ರಯೋಜನವನ್ನು ಹೊಂದಲಿಲ್ಲ. ಅಷ್ಟೇ ಅಲ್ಲದೆ ರಿಯಲ್ ಎಷ್ಟೇಟ್ ವರ್ಗಗಳಿಂದ ತಮ್ಮ ಭೂಮಿಯ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಾರಂಭಿಸಿದರು.

ಇದೇ ಸಮಯದಲ್ಲಿ ತೆಲಂಗಾಣದಲ್ಲಿನ ಬಡ ರೈತರು, ಕೂಲಿಗಳು ಅನೇಕ ರೀತಿಯ ಒತ್ತಡಗಳಿಗೆ ಗುರಿಯಾದರು ಒಂದು ಕಡೆ ಕಡಿಮೆ ಇದ್ದಾಗ್ಯೂ, ನಶಿಸಿಹೋಗುತ್ತಿರುವ ನೀರಿನ ಸಂಪನ್ಮೂಲಗಳಿಂದ ಒಣ ಬೇಸಾಯ ಮಾಡುವ ಪ್ರಾಂತದಲ್ಲಿನ ಬಡ ರೈತರು, ವ್ಯವಸಾಯ ಉತ್ಪಾದನೆಯಲ್ಲಿ ಅನೇಕ ಪ್ರತಿರೋಧಗಳನ್ನು ಎದುರಿಸುತ್ತಿರುವರು. ಕರಕುಶಲಿಗಳು, ತಮಗೆ ಅವಸರವಾದ ಬಿದಿರು, ಕಟ್ಟಿಗೆಯಂತಹ ಕಚ್ಚಾ ಸಾಮಗ್ರಿಗಳು ನಶಿಸಿಹೋಗುತ್ತಿರುವದರೊಂದಿಗೆ

SCERT TELANGANA

ತಮ್ಮ ಉತ್ಪತ್ತಿಗಳಿಗೆ ಗಿರಾಕಿಯಿಲ್ಲದೆಯೇ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವರು. ಬಟ್ಟೆಗಳನ್ನು ಒಗೆಯುವಂತಹ ಸಾಂಪ್ರದಾಯಿಕವಾಗಿ ಸೇವೆ ಮಾಡುವ ಕುಲಗಳವರು, ಅಲೆಮಾರಿ ಜಾತಿಗಳವರು ಕೂಡಾ ತಮ್ಮ ಸೇವೆಗಳಿಗೆ ಗಿರಾಕಿ ಕಡಿಮೆಯಾಗಿರುವದು, ಜೀವನೋಪಾಯವನ್ನು ಕಳೆದುಕೊಳ್ಳುತ್ತಿರುವಂತಹ ಸಮಸ್ಯೆಗಳನ್ನು ಎದುರಿಸುತ್ತಿರುವರು. ಇಂತಹ ಸಮಸ್ಯೆಗಳನ್ನು (ದೇಶವ್ಯಾಪಿಯಾಗಿ) ದೇಶಾದಾದ್ಯಂತ ಬಡ ಪ್ರಜೆಗಳು ಎದುರಿಸುತ್ತಿದ್ದಾಗ್ಯೂ, ಆಂಧ್ರ ವ್ಯಾಪಾರಿಗಳು ಪ್ರಯೋಜನ ಪಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ಅನುಸರಿಸುತ್ತಿರುವ ಶ್ರೀಮಂತರ ಅನುಕೂಲ ವಿಧಾನಗಳಿಂದ ಹೀಗೆ ನಡೆಯುತ್ತಿದೆಯೆಂದು ತೆಲಂಗಾಣ ಪ್ರಜೆಗಳು ಭಾವಿಸಿದರು. ನಿಜವಾದ ಪ್ರಜಾಪ್ರಭುತ್ವ ಸರ್ಕಾರವು ನಮ್ಮ ಅವಶ್ಯಕತೆಗಳಿಗೆ ಅನುಕೂಲಕರವಾದ ವಿಧಾನಗಳನ್ನು ಅನುಸರಿಸುತ್ತಿದೆಯೆಂದು ತೆಲಂಗಾಣ ಪ್ರಜೆಗಳು ಆಶಿಸಿದರು. ತಮ್ಮ ಕೋರಿಕೆಗಳನ್ನು ಕೇಳಿ, ತಮ್ಮ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸರ್ಕಾರವನ್ನು ಇವರು ಆಶಿಸಿದರು.

1990 ರಲ್ಲಿನ ಚಳುವಳಿ

ಸರಳೀಕೃತ ಆರ್ಥಿಕ ವಿಧಾನಗಳಿಂದ ರೈತರು, ಕರಕುಶಲಿಗಳು ಇತರರು ತೀವ್ರ ಸಮಸ್ಯೆಗಳಿಗೆ ಗುರಿಯಾದಾಗ್ಯೂ, ಅಧಿಕ ಸಂಖ್ಯೆ ಯಲ್ಲಿ ಗುತ್ತೇದಾರರು, ಖಾಸಗಿ ಬಂಡವಾಳ ಹೂಡಿಕೆದಾರರು, ಅಪಾರ ಲಾಭವನ್ನು ಮಾಡಿ ಕೊಂಡರು. ರೈತರು ಕೊಂಡುಕೊಳ್ಳುವ ರಸಾಯನಿಕ ಗೊಬ್ಬರ ಗಳು,ಕೀಟನಾಶಕಗಳು, ವಿದ್ಯುತ್ ನಂತಹ ಉತ್ಪಾದಕಗಳ ದರಗಳು ವಿಪರೀತವಾಗಿ ಹೆಚ್ಚಾದವು. ಇನ್ನೊಂದೆಡೆ ಆಮದು ಮಾಡಿ ಕೊಂಡ ಕಡಿಮೆ ದರದ ವ್ಯವಸಾಯ ಉತ್ಪತ್ತಿಗಳಿಂದ ತೀವ್ರ ಸ್ಪರ್ಧೆಯನ್ನು ಎದುರಿಸಿದರು. ತೆಲಂಗಾಣದಲ್ಲಿ ಅಂತರ್ಜಲ ಸಂಪನ್ಮೂಲಗಳು ನಶಿಸಿಹೋಗುತ್ತಿರುವದರಿಂದ ಮತ್ತಷ್ಟು ಆಳವಾಗಿ ಕೊಳವೆ ಬಾವಿಗಳನ್ನು ಹಾಕಲು ಅಧಿಕ ಮೊತ್ತದ ಬಂಡವಾಳ ಹಾಕಬೇಕಾಗಿದ್ದರಿಂದ ರೈತರು ಮತ್ತಷ್ಟು ಸಂಕಟಕ್ಕೆ ಗುರಿಯಾದರು. ಈ ಮೇಲೆ ಹೆಸರಿಸಿದ ಕಾರಣಗಳಿಂದ ಈ ಪ್ರಾಂತದಲ್ಲಿನ ಅಪಾರ ಸಂಖ್ಯೆಯ ರೈತರು ಆತ್ಮಹತ್ಯೆಗೆ ಮುಂದಾದರು. ಅಷ್ಟೇ ಅಲ್ಲದೇ ಈ ಕಾರಣ ದಿಂದಲೇ ತೆಲಂಗಾಣದಲ್ಲಿನ ವ್ಯವಸಾಯ ಭೂಮಿಗಳನ್ನು ಅಪಾರ ಪ್ರಮಾಣದಲ್ಲಿ ಹೊರಗಿನಿಂದ ಬಂದ ಧನಿಕ ಪ್ರಜೆಗಳಿಗೆ ಮಾರಿಕೊಳ್ಳಬೇಕಾಯಿತು. ಅದೇ ವಿಧವಾಗಿ ಕರಕುಶಲ ವೃತ್ತಿಯವರು, ಸಾಂಪ್ರದಾಯಿಕವಾಗಿ ಸೇವೆ ಮಾಡುವವರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡರು. ಹೊಸ ಉದ್ಯೋಗಗಳಿಗೆ ಸಾಕಾಗುವಷ್ಟು ಸಾಮರ್ಥ್ಯ ಅವರಲಿಲ್ಲ. ಇದೇ ಸಮಯದಲ್ಲಿ ಸರ್ಕಾರವು ತನ್ನ ಖರ್ಚುಗಳನ್ನು ಕಡಿತಗೊಳಿಸಲು ಹೊಸ ನೇಮಕಾತಿಗಳನ್ನು ಕಡಿಮೆಗೊಳಿಸಿತು. ಖಾಸಗಿ ರಂಗವು ಚೆನ್ನಾಗಿ ವಿಸ್ತರಿಸಿದಾಗ್ಯೂ ನಿರುದ್ಯೋಗ ಇಲ್ಲವೇ ಭದ್ರತೆಯಿಲ್ಲದ ಉದ್ಯೋಗ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಕ್ರಮವಾಗಿ, ಜನಸಂಖ್ಯೆಯಲ್ಲಿನ ವಿವಿಧ ವರ್ಗಗಳ ಪ್ರಜೆಗಳು ತಮ್ಮ ಪ್ರತ್ಯೇಕ ಸಂಘಗಳನ್ನು ಚಳುವಳಿಯನ್ನು ರೂಪಿಸಿಕೊಂಡು ತಮ್ಮ ಬೇಡಿಕೆಗಳ ಸಾಧನೆಗಾಗಿ ಹೋರಾಡಲಾರಂಭಿಸಿದರು.

- ತೆಲಂಗಾಣದಲ್ಲಿ ಆಚರಿಸುವ ಮುಖ್ಯವಾದ ಹಬ್ಬಗಳು ಯಾವುವು?
- ತಿಂಗಳುವಾರು ಪಟ್ಟಿಯನ್ನು ತಯಾರಿಸಿರಿ.
- ತೆಲಂಗಾಣ ಪ್ರಜೆಗಳು, ಭಾಷೆ, ಸಂಸ್ಕೃತಿ ಸರಿಯಾಗಿ ಚಿತ್ರೀಕರಿಸಿದ ಸಿನೆಮಾಗಳ ಪಟ್ಟಿಯನ್ನು ತಯಾರಿಸಿರಿ.
- ಕಳೆದ ಇಪ್ಪತ್ತು ವರ್ಷಗಳಲ್ಲಿ ಹೈದ್ರಾಬಾದ ಬಹಳ ದೊಡ್ಡ ಸಂಪದ್ಭರಿತ ನಗರವಾಗಿ ಬೆಳೆದಿದೆ. ಆದಾಗ್ಯೂ ತೆಲಂಗಾಣ ಪ್ರಜೆಗಳು ಇದರಿಂದ ಏಕೆ ತೃಪ್ತಿಪಡಲಿಲ್ಲ ?
- ತೆಲಂಗಾಣ ರೈತರು, ಕರಕುಶಲಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನೆ ಇತರ ರಾಜ್ಯಗಳವರೂ ಕೂಡ ಎದುರಿಸು ತ್ತಿದ್ದಾರೆ. ಅವರ ಸಮಸ್ಯೆಗಳ ಪರಿಷ್ಕಾರಕ್ಕೆ ಪ್ರತ್ಯೇಕ ರಾಜ್ಯವೊಂದೇ ಸರಿಯೇ? ಏಕೆ ?

ಜಾತಿ/ಕುಲ ಸಂಘಗಳಾದ ತುಡುಂರೆಬ್ಬ, ಲಂಬಾಡಿ, ನಂಗಾರಭೇರಿ, ಎರುಕಲ ಕುರ್ರು ನಂತಹವುಗಳು ಏರ್ಪಟ್ಟು ತಮ್ಮ ಸಂಪ್ರದಾಯ ಜೀವನ ವಿಧಾನದ ಮೇಲೆ ನಡೆಯುತ್ತಿರುವ ದಾಳಿಯನ್ನು ಎದುರಿಸುತ್ತಾ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಬೇಕಾದ ಅವಶ್ಯಕತೆಗಳಾದ ನೀರು,ನೆಲ,ಅರಣ್ಯಗಳನ್ನು ಕಾಪಾಡಿಕೊಳ್ಳಲು ಹೋರಾಡಲಾರಂಭಿಸಿದರು.

SCERT TELANGANA

ಮಾದಿಗ ದಂಡೋರಾ, ಕುರುಮಗೊಲ್ಲ ಡೋಲುದೆಬ್ಬ, ಮೋಕುದೆಬ್ಬದಂತಹವುಗಳು ಏರ್ಪಟ್ಟವು. ಎಂಡ ತೆಗೆಯುವ, ಕುರಿಗಳ ಪೋಷಣೆ, ನೇಕಾರ, ಮೀನುಗಾರರಂತಹ ಕುಲವೃತ್ತಿಗಳು ದಿನಗಳೆದಂತೆ ಪ್ರಾಮುಖ್ಯತೆಯನ್ನು ಕಳೆದುಕೊಂಡು ಅವುಗಳ ಆಸ್ತಿತ್ವಕ್ಕೆ ಅಪಾಯ ಒದಗಿತು. ತೆಲಂಗಾಣ ತಮ್ಮ ಸಮಸ್ಯೆಗಳನ್ನು ಪರಿಷ್ಕರಿಸುತ್ತದೆ ಎಂಬ ಆಶೆಯೊಂದಿಗೆ ಚಿಕ್ಕ ವೃತ್ತಿಗಳವರು, ಕೂಡಾ ಚಳುವಳಿಯಲ್ಲಿ ಪಾಲ್ಗೊಂಡರು.

ತೆಲಂಗಾಣಕ್ಕೆ ಆಗುತ್ತಿರುವ ಅನ್ಯಾಯಗಳಿಗೆ ಸಂಬಂಧಿಸಿದ ಸಮಾಚಾರವನ್ನು ಹೊರತೆಗೆಯಲು ಮೇಧಾವಿಗಳು 1989 ರಲ್ಲಿ ತೆಲಂಗಾಣ ಸಮಾಚಾರ ಟ್ರಸ್ಟ್‌ನ್ನು ಆರಂಭಿಸಿದರು. ಆಚಾರ್ಯ ಜಯಶಂಕರ್ ನೇತೃತ್ವದಲ್ಲಿ ನಡೆದ ಅನೇಕ ಸಮಾವೇಶಗಳಲ್ಲಿ 1996ರ ನವೆಂಬರ್ 1 ರಂದು ವರಂಗಲ್ಲಿನಲ್ಲಿ ತೆಲಂಗಾಣ ವಿದ್ರೋಹ ದಿನವನ್ನು ಆಚರಿಸಿದರು. ಇದರ ತರುವಾಯ ಪ್ರಜೆಗಳು ಅಪಾರ ಸಂಖ್ಯೆಯಲ್ಲಿ ಹಾಜರಾಗಿ, ಅನೇಕ ಸಭೆ, ಸಮಾರಂಭಗಳನ್ನು ಕೈಗೊಂಡು ತೆಲಂಗಾಣ ರಾಜ್ಯದ ರಚನೆಯನ್ನು ಕೋರುತ್ತಾ ಅನೇಕ ಸಂಸ್ಥೆಗಳು ಏರ್ಪಟ್ಟವು. 1997 ರಲ್ಲಿ ಏರ್ಪಟ್ಟ ತೆಲಂಗಾಣ ಜನಸಭೆ, ತೆಲಂಗಾಣ ಮಹಾಸಭೆದಂತಹವುಗಳು ತೆಲಂಗಾಣ ರಾಜ್ಯದ ರಚನೆಯ ಚಳುವಳಿಯಲ್ಲಿ, ಬಲಹೀನ ವರ್ಗಗಳು ಒಗ್ಗಟ್ಟಾಗಲು ಚಳುವಳಿಗಳು ಸಹಕಾರಿಯಾದವು.

ಶಿಕ್ಷಕರು, ನಾನ್‌ಗೆಜಿಟೆಡ್, ಗೆಜಿಟೆಡ್, ಅಧಿಕಾರಿಗಳೊಂದಿಗೆ ತೆಲಂಗಾಣದ ಉದ್ಯೋಗಿಗಳೆಲ್ಲರೂ ಸಂಘಗಳಾಗಿ ಏರ್ಪಟ್ಟರು. ತೆಲಂಗಾಣ ಮೇಧಾವಿಗಳೆಲ್ಲರೂ 1997 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಒಂದು ಗೋಷ್ಠಿಯನ್ನು ಏರ್ಪಡಿಸಿ ಎಲ್ಲಾ ಕೋನಗಳಿಂದ ಚಿತ್ರೀಕರಿಸಲು ಸಹಕಾರ ಮಾಡಿದರು. ಅಂದಿನಿಂದ ಉದ್ಯೋಗಿಗಳು, ವಿದ್ಯಾರ್ಥಿಗಳು, ಲೇಖಕರು, ಕಲಾವಿದರಂತಹ ವರುಗಳು, ಚರ್ಚಾಕೂಟಗಳನ್ನು, ಉಪನ್ಯಾಸಗಳನ್ನು, ಸಮಾವೇಶಗಳನ್ನು, ಧೂಂಧಾಂನಂತಹವುಗಳನ್ನು ನಿರ್ವಹಿಸಲಾರಂಭಿಸಿದರು. ಈ ಚಳುವಳಿಯ ಫಲಿತವಾಗಿ ಹೊಸದಾಗಿ ಕಲಾವಿದರಾದ ಕಾರ್ಯಕರ್ತರು ರೂಪುಗೊಂಡರು. ಪ್ರತಿ ತೆಲಂಗಾಣ ಸಮಾವೇಶದಲ್ಲಿ ಇವರ ಪ್ರದರ್ಶನ, ತಪ್ಪದಂತೆ ಇರುತ್ತಿತ್ತು. 1978ರ ಜಗಿತ್ಯಾಲ ಚೈತ್ರಯಾತ್ರೆಯೊಂದಿಗೆ ಆರಂಭಗೊಂಡು 1990 ರಲ್ಲಿ ವರಂಗಲ್‌ನಲ್ಲಿ ರೈತುಕೂಲಿಸಂಘದ ಬಹಿರಂಗಸಭೆಯ ದಿನದ ವರೆಗೆ ಚಳುವಳಿಯ ಸ್ಫೂರ್ತಿ, ಯುವಕರಿಗೆ, ಇವರ ಮೂಲಕ ಗ್ರಾಮೀಣ ಪ್ರಜೆಗಳಿಗೆ ಹೊಸದಾಗಿ ದಿಶಾನಿರ್ದೇಶ ಮಾಡಿತು.

ಹೊಸ ತಲೆಮಾರಿನ ಕಾರ್ಯಕರ್ತರನ್ನು ತಯಾರಿಸಿದ ಈ ಅವಧಿಯು ತೆಲಂಗಾಣ ಚಳುವಳಿಯ ಅತ್ಯಂತ ಮುಖ್ಯವಾದ ಘಟ್ಟವಾಯಿತು. ಈ ಹೊಸ ಉತ್ಸಾಹದೊಂದಿಗೆ ಅನೇಕ ಸಂಸ್ಥೆಗಳು ಏರ್ಪಟ್ಟವು.

ತೆಲಂಗಾಣ ರಾಷ್ಟ್ರ (ರಾಜ್ಯ) ಸಮಿತಿ

ತೆಲಂಗಾಣ ಜನ ಪರಿಷತ್, ತೆಲಂಗಾಣ ಮಹಾಸಭೆ, ತೆಲಂಗಾಣ ಜನಸಭೆ, ತೆಲಂಗಾಣ ಐಕ್ಯ ವೇದಿಕೆಯಂತಹ ಅನೇಕ ಸಂಸ್ಥೆಗಳು ರಾಜಕೀಯ ಸ್ಫೂರ್ತಿಯಿಂದ ಏರ್ಪಟ್ಟವು. ಆದರೆ ಯಾವ ರಾಜಕೀಯ ಪಕ್ಷ ಏರ್ಪಡಲಿಲ್ಲ. ಈ ಹಿನ್ನೆಲೆಯಲ್ಲಿ 2001 ರಲ್ಲಿ ತೆಲಂಗಾಣ ರಾಷ್ಟ್ರ ಸಮಿತಿಯು ಏರ್ಪಟ್ಟಿತು.

ಈ ಮಧ್ಯೆ ಧೂಂ ಧಂಗಳು, ಗರ್ಜನೆಗಳು ಪಾದ ಯಾತ್ರೆಗಳಂತಹ ವಿವಿಧ ಪ್ರತಿ ಭಟನೆಯ ರೂಪಗಳಲ್ಲಿ ತೆಲಂಗಾಣ ಚಳುವಳಿಯು ವ್ಯಕ್ತವಾಗತೊಡಗಿತು. ಸಾಂಪ್ರದಾಯ ಬೋನಾಲು, ರಂಗೋಲಿಯನ್ನು ಕೂಡಾ ತೆಲಂಗಾಣ ಅಕಾಂಕ್ಷೆಯನ್ನು ವ್ಯಕ್ತಪಡಿಸಲು ಉಪಯೋಗಿಸಿ ಕೊಂಡರು. ತೆಲಂಗಾಣ ಚಳುವಳಿಗೆ ತಮ್ಮ ಸಂಪೂರ್ಣ ಸಹಕಾರವನ್ನುಕುಲವೃತ್ತಿಗಳವರು ವ್ಯಕ್ತ ಪಡಿಸುತ್ತಾ ಪ್ರತಿಭಟನೆಯ ಭಾಗವಾಗಿ ಬೀದಿಯಲ್ಲಿಯೇ ಕ್ಷೌರ ಮಾಡುವದು, ಬೀದಿಯಲ್ಲಿಯೇ ಬಟ್ಟೆ ಒಗೆಯುವದು, ಬಹಿರಂಗ ಪ್ರದೇಶಗಳಲ್ಲಿ ಸಾಮೂಹಿಕವಾಗಿ ಅಡಿಗೆ ಮಾಡುವದನ್ನು ಅಪಾರ ಪ್ರಮಾಣದಲ್ಲಿ ಕೈಗೊಂಡರು.

ಈ ಪ್ರಜಾ ಚಳುವಳಿಯು 2009 ಡಿಸೆಂಬರ್ 2010 ಎಪ್ರಿಲ್ ವರೆಗೆ ಗ್ರಾಮಗಳಲ್ಲಿ ಕೂಡಾ ಮುಂದುವರೆಯಿತು. ಈ ಚಳುವಳಿಯನ್ನು ವಿದ್ಯಾರ್ಥಿಗಳೇ ಮುನ್ನಡೆಸಿದರು. ಇವರದೇ ಪ್ರಧಾನ ಪಾತ್ರವಿದ್ದಿತು. ಈ ಸಮಯದಲ್ಲಿಯೇ ವಿದ್ಯಾರ್ಥಿಗಳು ಐಕ್ಯ ಕಾರ್ಯಾಚರಣೆಯ ಸಂಘ (ಐ.ಕಾ.ಸ)ವಾಗಿ ಏರ್ಪಟ್ಟರು. ಇದರೊಂದಿಗೆ ಐಕಾಸಾಗಳನ್ನು

SCERT TELANGANA

ಚಿತ್ರ 21.2

ಚಿತ್ರ 21.2, 21.3, 21.4 ಅಧಿಕ ಸಂಖ್ಯೆಯಲ್ಲಿ ಪ್ರಜೆಗಳು ವಿವಿಧ ಪದ್ಧತಿಗಳನ್ನು ಅನುಸರಿಸಿ ಚಳುವಳಿಯಲ್ಲಿ ಪಾಲ್ಗೊಂಡರು. 2000 ವರ್ಷದ ತರುವಾಯ ನಡೆದ ವಿವಿಧ ಘಟನೆಗಳನ್ನು ಸೂಚಿಸುವ ಚಿತ್ರಗಳು ಈ ಅಧ್ಯಾಯದಲ್ಲಿವೆ. ತಮ್ಮ ಬೇಡಿಕೆಗಳ ಸಾಧನೆಗಾಗಿ ''ಸಕಲ ಜನರ ಸಮ್ಮೆ''ಯಲ್ಲಿ ಭಾಗಿಗಳಾದ ಶಿಕ್ಷಕರು, ರೈತರು, ಮಹಿಳೆಯರು.

ಚಿತ್ರ 21.3

ಚಿತ್ರ 21.4

- ವಿವಿಧ ವರ್ಗಗಳ ಪ್ರಜೆಗಳು ಚಳುವಳಿಯಲ್ಲಿ ಭಾಗಿಗಳಾದ ವಿಧಾನಗಳನ್ನು ಉದಹರಿಸಿರಿ.
- ಪ್ರತ್ಯೇಕ ರಾಜ್ಯದ ಚಳುವಳಿಗೆ ಬೆಂಬಲಿಸಿ ಅವರೆಲ್ಲಾ ಹೊರಬಂದುದು ಏಕೆ ಮುಖ್ಯವೋ ತಿಳಿಸಿ.

ಎಲ್ಲಾ ಸಂಘಗಳಿಗೆ ವಿಸ್ತರಿಸಿ ತೆಲಂಗಾಣದಲ್ಲಿ ನೂರಾರು ಐಕಾಸ್‌ಗಳು ಏರ್ಪಟ್ಟವು. ಅಪರೂಪದ ಈ ಹೋರಾಟದಲ್ಲಿ ನೂರಾರು ಯುವಕರು ಆತ್ಮಹತ್ಯೆಯನ್ನು ಮಾಡಿಕೊಂಡು ತಮ್ಮ ಕುಟುಂಬಗಳನ್ನು ತೆಲಂಗಾಣವನ್ನು ತೀವ್ರ ವಿಷಾದಕ್ಕೆ ಗುರಿಪಡಿಸಿದರು.

ಮಡಿವಾಳರು, ಹಡಪದರು (ಕ್ಷೌರಿಕರು), ಎಂಡ ತೆಗೆಯುವ ಕಾರ್ಮಿಕರು, ಸ್ಮಶಾನಕಾಯುವ ವರು, ರಾಜಪರಂಪರೆಯವರು, ಲಂಬಾಡಿಗಳು, ಕೊರವರು, ಮಾದಿಗರಂತಹ ಸಬ್ಬಂಡ ವರ್ಣಗಳ (ಎಲ್ಲಾ ಜಾತಿಗಳು) ವರು ತಮ್ಮ ತಮ್ಮ ಐ.ಕಾ.ಸ್.ಗಳನ್ನು ಏರ್ಪಡಿಸಿಕೊಂಡು ಈ ಪ್ರತಿಭಟನಾ ಚಳುವಳಿಯಲ್ಲಿ ಭಾಗಿಗಳಾದರು. ಅನೇಕ ಮಂಡಲ ಕೇಂದ್ರಗಳಲ್ಲಿ ಸರದಿ ಉಪವಾಸ ಸತ್ಯಾಗ್ರಹಗಳನ್ನು ಕೈಗೊಂಡರು. ಇದರಲ್ಲಿ ಒಂದೊಂದು ದಿನ ಒಂದು ಕುಲ ಸಂಘದವರು ತಮ್ಮ ಸಂಪ್ರದಾಯ ಉಪಕರಣಗಳಿಂದ ಬಹಿರಂಗ ಪ್ರದೇಶಗಳಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದ ಕೆಲಸವನ್ನು ಮುಂದು ವರೆಸುತ್ತಿದ್ದರು. ಇಂತಹ ಪ್ರತಿಭಟನೆಗಳು ಕೇವಲ ಸಂಪ್ರದಾಯ ಕುಲಗಳು ಇಲ್ಲವೇ ವೃತ್ತಿಗಳಿಗೆ ಮಾತ್ರ ಪರಿಮಿತ ಗೊಳ್ಳಲಿಲ್ಲ. ಆಧುನಿಕ ವೃತ್ತಿಗಳಾದ ಶಿಕ್ಷಕರು, ಕೈಗಾರಿಕೆಗಳಲ್ಲಿನ ಕಾರ್ಮಿಕರು ಗಣಿಗಳ, ಕಾರ್ಮಿಕರು, ಕಾರ್ಮಿಕ ಸಂಘಗಳು, ಮಹಿಳಾ ಸಂಘಗಳು ಕೂಡಾ ಇಂತಹ ಪ್ರತಿಭಟನೆಯಲ್ಲಿ ಚುರುಕಾಗಿ ಪಾಲ್ಗೊಂಡರು.

ಕೆ. ಚಂದ್ರಶೇಖರ್‌ರಾವ್ ರವರ ಉಪವಾಸ ಸತ್ಯಾಗ್ರಹ-2009

ಈ ಚಳುವಳಿಗೆ ನಿರ್ಣಯಾತ್ಮಕ ರೂಪ ಕೊಡಲು ತೆಲಂಗಾಣ ರಾಷ್ಟ್ರ (ರಾಜ್ಯ) ಸಮಿತಿಯ ಅಧ್ಯಕ್ಷರಾದ ಕೆ.ಚಂದ್ರಶೇಖರ್‌ರಾವ್ 2009 ನವಂಬರ್ 29 ರಂದು ಸಿದ್ದಿಪೇಟೆಯಲ್ಲಿ ಆಮರಣ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವದಾಗಿ ಪ್ರಕಟಿಸಿದರು. ಆದರೆ ಈ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವದರ ಮೊದಲೇ ಅವರನ್ನು

SCERT TELANGANA

ಖಮ್ಮಂ ಸೆರೆಮನೆಗೆ ಕಳುಹಿಸಿದರು.ಆತನು ಜೈಲಿನಲ್ಲಿಯೂ, ಆ ತರುವಾಯ ಆಸ್ಪತ್ರೆಯಲ್ಲಿಯೂ ಕೂಡಾ ಉಪವಾಸ ಸತ್ಯಾಗ್ರಹವನ್ನು ಮುಂದುವರೆಸಿದನು. ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಈತನಿಗೆ ಬೆಂಬಲವಾಗಿ ನವಂಬರ್ 16 ರಂದು ವಿದ್ಯಾರ್ಥಿಗಳು ಐಕ್ಯ ಕಾರ್ಯಾಚರಣೆ ಸಂಘವಾಗಿ ಏರ್ಪಟ್ಟರು. ಇದರೊಂದಿಗೆ ವಿಶ್ವವಿದ್ಯಾಲಯ, ಆ ತರುವಾಯ ತೆಲಂಗಾಣದಲ್ಲಿನ ಪಾಲಮೂರು, ಶಾತವಾಹನ, ಮಹಾತ್ಮಾಗಾಂಧಿ ವಿಶ್ವವಿದ್ಯಾಲಯಗಳಲ್ಲಿಯೂ ಐಕಾಸಗಳು ಏರ್ಪಟ್ಟವು. ತದನಂತರ ಉದ್ಯೋಗಿಗಳ ಐಕಾಸ, ವಕೀಲರ ಐಕಾಸ, ವಿವಿಧ ಕುಲಗಳ, ವರ್ಗಗಳ ಐಕಾಸಗಳು, ಜಿಲ್ಲಾ ಮಟ್ಟದ ಐಕಾಸಗಳು ಏರ್ಪಟ್ಟವು.

ತೆಲಂಗಾಣ ರಾಜ್ಯ ಸಮಿತಿಯ ಅಧ್ಯಕ್ಷರಾದ ಕೆ.ಚಂದ್ರಶೇಖರರಾವ್ ರವರ ಉಪವಾಸ ಸತ್ಯಾಗ್ರಹ (ದೀಕ್ಷೆ)ವು ಒಂದು ದೊಡ್ಡ ಪ್ರಜಾ ಚಳುವಳಿಯಾಗಿ ರೂಪ ಪಡೆಯಿತು. 2009 ನವಂಬರ 29 ರಿಂದ ಡಿಸೆಂಬರ 9ರ ವರೆಗೆ 10 ದಿನಗಳ ವರೆಗೆ ಅವರು ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಬೆಂಬಲಿಸಿ ತೆಲಂಗಾಣದಾದ್ಯಂತ ಅಪಾರ ಸಂಖ್ಯೆಯಲ್ಲಿ ಪ್ರಜೆಗಳು ಹೊರಬಂದರು.

ತೆಲಂಗಾಣ ಸಾಧನೆಯ ಹಾದಿಯಲ್ಲಿ :

ಈ ಸಂದರ್ಭದಲ್ಲಿ ಪ್ರತ್ಯೇಕ ರಾಜ್ಯದ ಪ್ರಕಟಣೆಯನ್ನು ಮಾಡದೆ ಹೋದರೆ 2009 ಡಿಸೆಂಬರ್ 10 ರಂದು ಶಾಸನ ಸಭೆಯನ್ನು ಮುತ್ತಿಗೆ ಹಾಕುತ್ತೇವೆ ಎಂದು ವಿದ್ಯಾರ್ಥಿ ಐಕಾಸ ಮಾಡಿದ ಪ್ರಕಟಣೆ ಬಹಳ ಮುಖ್ಯವಾದದ್ದು. ವಿವಿಧ ವಿಶ್ವ ವಿದ್ಯಾಲಯಗಳಿಂದ, ಕಾಲೇಜುಗಳಿಂದ ವಿದ್ಯಾರ್ಥಿಗಳು ಹೈದ್ರಾಬಾದ್ ನಗರದೊಳ್ಳಕ್ಕೆ ಪ್ರವಾಹದಂತೆ ಸೇರಿದರು. ಶಾಸನಸಭೆಯನ್ನು ಮುತ್ತಿಗೆ ಹಾಕಲು ಇವರೆಲ್ಲರೂ ಶಾಸನ ಸಭೆಯ ಸುತ್ತಲೂ ಇರುವ ತಮ್ಮ ಬಳಗದವರ, ಸ್ನೇಹಿತರ ಮನೆಯಲ್ಲಿ ಅವಿತುಕೊಂಡಿದ್ದರು.

ಈ ಮೇಲಿನ ಪರಿಸ್ಥಿತಿಗಳಲ್ಲಿ ಗ್ರಾಮ ಗ್ರಾಮಗಳಲ್ಲಿ ಪ್ರಜೆಗಳಲ್ಲಿ ಈ ಚಳುವಳಿಯು ವಿಸ್ತರಿಸಿದ್ದುದು, ಕೆ.ಚಂದ್ರಶೇಖರ್‌ರಾವ್ ರವರ ಉಪವಾಸ ಸತ್ಯಾಗ್ರಹ, ಪ್ರತಿಪಾದಿತ ಅಸೆಂಬ್ಲಿಯ ಮುತ್ತಿಗೆಯೊಂದಿಗೆ ಸೀಮಾಂಧ್ರ ಪ್ರಾಂತದ ಶಾಸನ ಸಭೆಯ ಸದಸ್ಯರು, ಲೋಕಸಭಾ ಸದಸ್ಯರಿಂದ ತೀವ್ರ ವಿರೋಧ ವಿದ್ಯಾಗ್ಯೂ ಕೇಂದ್ರ ಸರ್ಕಾರಕ್ಕೆ ತೆಲಂಗಾಣ ರಚನೆಯನ್ನು ಪ್ರಕಟಿಸದೆ ಇರಲು ಸಾಧ್ಯವಾಗಲಿಲ್ಲ. 2009 ಡಿಸೆಂಬರ್ 9 ರಂದು ಕೇಂದ್ರ ಗೃಹ ಮಂತ್ರಿ ''ಪ್ರತ್ಯೇಕ ತೆಲಂಗಾಣ ರಾಜ್ಯದ ರಚನೆಯ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತೇವೆ'' ಎಂದು ಪ್ರಕಟಿಸಿದರು. ಇದರೊಂದಿಗೆ ಚಂದ್ರಶೇಖರ್‌ರಾವ್ ತನ್ನ ಉಪವಾಸ ಸತ್ಯಾಗ್ರಹವನ್ನು ಕೈಬಿಟ್ಟರು.

ತೆಲಂಗಾಣ ಚಳುವಳಿಯಲ್ಲಿನ ಪ್ರತಿಭಟನೆಯ ರೂಪಗಳು

ಪ್ರಜೆಗಳನ್ನು ಸಮೀಕರಿಸಲು ತೆಲಂಗಾಣ ಚಳುವಳಿ ಧೂಂಧಾಂ, ಗರ್ಜನೆ, ಪಾದಯಾತ್ರೆಗಳು, ಬೋನಾಲು, ಮಿಲಿಯನ್ ಮಾರ್ಚ್, ಸಕಲ ಜನುಲ ಸಮ್ಮೆ, ಸಾಗರ ಹಾರಂ, ಸಡಕ್ ಬಂದ್, ಚಲೋ ಅಸೆಂಬ್ಲಿಯಂತಹ ಎಷ್ಟೋ ವಿನೂತನ ಹೋರಾಟದ ರೂಪಗಳನ್ನು ಆವಿಷ್ಕರಿಸಿತು.

ಹಾಡುಗಳು, ನಾಟ್ಯಗಳೊಂದಿಗೆ ಮಾಡುವ ಪ್ರತಿಭಟನೆಯ ಪ್ರದರ್ಶನವನ್ನು ಧೂಂಧಾಂ ಎನ್ನುತ್ತಾರೆ. ವಿವಿಧ ಜಾನಪದ ರೂಪಗಳಿಗೆ ಸಂಬಂಧಿಸಿದ ಹಾಡುಗಾರರು, ಆಟಗಾರರೊಂದಿಗೆ ಕೂಡಿದ ಎಷ್ಟೋ ಮಂದಿ ಕಲಾವಿದರು ಒಂದೇ ವೇದಿಕಯ ಮೇಲೆ ಬಂದು ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಈ ಧೂಂಧಾಂ ಕಾರ್ಯಕ್ರಮದಲ್ಲಿ ಒಗ್ಗು ಕಥೆ, ಚಿರತೆಗಳು, ಕೋಲಾಟ, ಬತುಕಮ್ಮ, ಗೊಲ್ಲಸುದ್ದಿಗಳು, ಏಕನಾದ, ಇನ್ನಿತರ ಹಾಡುಗಳು ಇರುತ್ತಿದ್ದವು.

ಅನೇಕ ತೆಲಂಗಾಣ ಹಾಡುಗಳಿಗೆ ನೃತ್ಯಗಳನ್ನು ಮಾಡುತ್ತಿದ್ದರು. ತೆಲಂಗಾಣ ಸಂಸ್ಕೃತಿಯನ್ನು ಬಿಂಬಿಸುವ ತೆಲಂಗಾಣ ಚಳುವಳಿ ಮತ್ತಷ್ಟು ಬಲಪಡಲು ಸಾಮಾನ್ಯ ಪ್ರಜೆಗಳಿಗೆ ತಿಳಿವಳಿಕೆಯನ್ನು ಮೂಡಿಸುತ್ತಿದ್ದರು.

ಕುಲ-ಮತದೊಂದಿಗೆ ಸಂಬಂಧವಿಲ್ಲದೆ ಪ್ರಜೆಗಳೆಲ್ಲರೂ 'ವಂಟ-ವಾರ್ಪು' ಹೆಸರಿನೊಂದಿಗೆ ರಸ್ತೆ ಮೇಲೆ ಬಂದು ಅಡಿಗೆಯನ್ನು ಮಾಡಿ ಅಲ್ಲಿಯೇ ಭೋಜನ ಮಾಡಿದರು. ಇವು ಸಹ ಪಂಕ್ತಿ ಭೋಜನಗಳು. ರಸ್ತೆಗಳ ಮೇಲೆ ವಾಹನಗಳು, ಬಸ್ಸುಗಳನ್ನು ನಿಲ್ಲಿಸಿ ಚಳುವಳಿಕಾರರು ಬೇಯಿಸಿದ ಅಡಿಗೆಯನ್ನು ಪ್ರಯಾಣಿಕರಿಗೂ ಕೂಡ ಉಣಬಡಿಸುತ್ತಿದ್ದರು.

SCERT TELANGANA

- ತೆಲಂಗಾಣ ರಾಜ್ಯ ಏರ್ಪಡುವದರಿಂದ ಗಣಿ, ಫ್ಯಾಕ್ಟರಿ ಕಾರ್ಮಿಕರು ಯಾವ ವಿಧವಾದ ಪ್ರಯೋಜನವನ್ನು ಪಡೆಯುವರು ?
- ಬಡ ಕರಕುಶಲ ನಿಪುಣರು ಗೌರವದಿಂದ ಜೀವನ ಸಾಗಿಸಬೇಕೆಂದರೆ ಎಂತಹ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ ?
- ಹೊಸ ರಾಜ್ಯದಲ್ಲಿ ವಿವಿಧ ಗಿರಿಜನ ಪ್ರಜೆಗಳ ಅವಶ್ಯಕತೆಗಳನ್ನು ಪೂರೈಸಲು ಎಂತಹ ಕ್ರಮ ಕೈಗೊಳ್ಳಬೇಕು ?

ಚಿತ್ರ 21.5

ಚಿತ್ರ 21.6

ಚಿತ್ರ 21.7

ವಿವಿಧ ಜನಾಂಗದ ಜನರು ಚಳುವಳಿಯಲ್ಲಿ ಭಾಗವಹಿಸುತ್ತಿರುವ ಚಿತ್ರ

ಪ್ರಕಟಣೆ ಹಿಂದೆಗೆದುಕೊಳ್ಳುವದು :

ಆಂಧ್ರ ರಾಜಕೀಯ ನಾಯಕರ ಒತ್ತಡದಿಂದ 2009 ಡಿಸೆಂಬರ್ 23 ರ ಪ್ರಕಟಣೆಯನ್ನು ಹಿಂದಕ್ಕೆ ತೆಗೆದುಕೊಂಡರು. ಆಂಧ್ರ ಪ್ರದೇಶದಲ್ಲಿನ ಪರಿಣಾಮ ಗಳ ಮೇಲೆ ಅಧ್ಯಯನ ಮಾಡಲು ನಿವೇದಿಕೆಯನ್ನು ತಯಾರಿಸಿ ತಲುಪಿಸಲು ಜಸ್ಟೀಸ್ ಶ್ರೀ ಕೃಷ್ಣ ನೇತೃತ್ವದಲ್ಲಿ ಒಮದು ಕಮೀಷನ್‌ನ್ನು ಏರ್ಪಾಟು ಮಾಡಿದರು. ತೆಲಂಗಾಣ ಪ್ರಜೆಗಳು ಭ್ರಮನಿರಸನ ರಾದರು. ಈ ಪ್ರಕಟಣೆಯನ್ನು ಹಿಂದೆಗೆದುಕೊಳ್ಳುವ ದಕ್ಕೆ ಇರುವ ಕೆಲ ಕಾರಣಗಳನ್ನು ಪರಿಶೀಲಿಸೋಣ.

ಹೈದ್ರಾಬಾದ್ ಅಭಿವೃದ್ಧಿಯ ಕೇಂದ್ರವಾಗಿ ಮಾರ್ಪಟ್ಟಿದೆ. ಆರ್ಥಿಕ ಸುಧಾರಣೆಗಳಲ್ಲಿನ ವಿಜಯ ಕ್ಕಾಗಲೀ, ಪ್ರಪಂಚ ವ್ಯಾಪಿಯಾಗಿ ಹೆಸರು ಗಳಿಸಿರುವ ಈ ನಗರವು ಭಾರತ ದೇಶದ ಅತ್ಯಂತ ಮುಖ್ಯ ನಗರಗಳಲ್ಲೊಂದಾಗಿ ಬೆಳೆದಿದೆ. ಎಲ್ಲಾ ಸಂಪನ್ಮೂಲಗಳು ಇಲ್ಲಿ ಕೇಂದ್ರೀಕೃತಗೊಂಡಿರುವದರಿಂದ ಪ್ರಾಂತೀಯ ಅಭಿವೃದ್ಧಿಯಲ್ಲಿ ಅಸಮಾನತೆಗಳನ್ನು ಕೂಡಾ ಕಾಣಬಹುದು. ವಿವಿಧ ಪ್ರಾಂತಗಳಿಂದ ಅನೇಕ ಮಂದಿ ಹೈದ್ರಾಬದನಲ್ಲಿ ತಮ್ಮ ಆಸ್ತಿಗಳಿಗೆ

ಚಿತ್ರ 21.8, 21.9 ರಾಜ್ಯದ ರಚನೆಗೆ ಪ್ರಜೆಗಳು ತಮ್ಮ ಐಕ್ಯತೆಯನ್ನು ಸೂಚಿಸುತ್ತಾ ರಸ್ತೆಗಳ ಮೇಲೆ 'ವಂಟ ವಾರ್ಪು' ಹೆಸರಿನೊಂದಿಗೆ ಅಡಿಗೆ ತಯಾರಿಸಿಕೊಂಡು ಸಾಮೂಹಿಕ ಭೋಜನ ಮಾಡಿದರು.

SCERT TELANGANA

ಚಿತ್ರ 21.10 ಭದ್ರತಾವಲಯವನ್ನು ಭೇದಿಸುತ್ತಿರುವ ಪ್ರತಿಭಟನಾಕಾರರು

ಚಿತ್ರ 21.11 ಮಿಲಿಯನ್ ಮಾರ್ಚ್‌ನಲ್ಲಿ ಪಾಲ್ಗೊಂಡ ಚಳುವಳಿಗಾರರು.

ಬಹಳಷ್ಟು ಬಂಡವಾಳ ಹೂಡಿದ್ದರು. ಉದ್ಯೋಗ, ವಿದ್ಯೆ, ಅವಕಾಶಗಳಿಗಾಗಿ ಅಧಿಕ ಸಂಖ್ಯೆಯಲ್ಲಿ ಪ್ರಜೆಗಳು ಹೈದ್ರಾಬಾದ್‌ಗೆ ವಲಸೆ ಬಂದರು.

ಇತರ ಪ್ರಾಂತಗಳಿಂದ ಬಂದ ಬಂಡವಾಳದಾರರು ತಮ್ಮ ಭವಿಷ್ಯತ್ತಿನ ಬಗ್ಗೆ ಚಿಂತೆಗೀಡಾದರು. ಹೊಸ ರಾಜ್ಯ ಏರ್ಪಟ್ಟರೆ ಕಾಲುವೆಗಳ ಮೂಲಕ ತಮ್ಮ ಹೊಲಗಳಿಗೆ ನೀರು ತಲುಪಲು ಸಾಧ್ಯವಿಲ್ಲ ಎಂದು, ವಿದ್ಯುತ್‌ಚ್ಛಕ್ತಿ ಕೊರತೆ ಎರ್ಪಡುತ್ತದೆಯೆಂದು ಕರಾವಳಿ ಪ್ರಾಂತದ ರೈತರು ಕೂಡಾ ಚಿಂತೆಗೀಡಾದರು. ತೆಲುಗು ಭಾಷೆಯ ಆಧಾರದ ಮೇಲೆ ಎರಡು ಪ್ರಾಂತಗಲ ವಿಲೀನ ರದ್ದುಗೊಳ್ಳುವದರ ಮೂಲಕ ಎರಡು ರಾಜ್ಯಗಳಾಗಿ ಏರ್ಪಡುತ್ತಿರುವದು ತುಂಬಾ ದುರದೃಷ್ಟಕರವೆಂದು ಬಹಳ ಜನರು ಭಾವಿಸಿದರು. ಹೊಸ ರಾಜ್ಯವಾಗಿ ಪ್ರಕಟಿಸಿದ ತೆಲಂಗಾಣವನ್ನು ಕೇಂದ್ರ ಸರ್ಕಾರ ಹಿಂಪಡೆಯುವಂತೆ ಒತ್ತಡ ತರುವ ಉದ್ದೇಶದಿಂದಲೇ ಪ್ರತಿಭಟನೆಗಳನ್ನು ಮಾಡಿದರು.

ಈ ಸಮಯದಲ್ಲಿ ಸ್ವತಂತ್ರ ರಾಜ್ಯವನ್ನು ಸಾಧಿಸಿಕೊಳ್ಳಲು, ತೆಲಂಗಾಣದಲ್ಲಿನ ಪ್ರಜೆಗಳೆಲ್ಲರ ಪ್ರಯೋಜನಗಳಿಗಾಗಿ ಹೊಸ ರಾಜ್ಯವು ಪ್ರಾತಿನಿಧ್ಯವಹಿಸುವಂತೆ ಮಾಡಲು ಎಲ್ಲಾ ವಿಧದ ಸಾಮಾನ್ಯ ಪ್ರಜೆಗಳನ್ನು ಸಮೀಕರಿಸುತ್ತಾ ಸ್ವಾಯತ್ತ, ಪಕ್ಷಾತೀತ ಅನೇಕ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಮುಂದುವರೆಸಿದವು. ಇವೆಲ್ಲವುಗಳು ಸಮಾಜದಲ್ಲಿನ ವಿವಿಧ

- ಎಲ್ಲಾ ಹಂತಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಐಕಾಸಗಳು, ಇತರ ಸಂಘಗಳು, ಏರ್ಪಟ್ಟವು. ಇವುಗಳೆಲ್ಲವನ್ನು ಸೇರಿಸುತ್ತಾ ತೆಲಂಗಾಣ ಐಕ್ಯ ಕಾರ್ಯಾಚರಣೆ ಸಂಸ್ಥೆಯನ್ನು ಏಕೆ ಏರ್ಪಾಟು ಮಾಡಬೇಕಾಯಿತು ? ಇದರ ಏರ್ಪಾಟು ಚಳುವಳಿಯನ್ನು ಯಾವ ರೀತಿಯಾಗಿ ಪ್ರಭಾವಿತಗೊಳಿಸಿತು ?
- ತೆಲಂಗಾಣ ಚಳುವಳಿಯಲ್ಲಿ ಕಾರ್ಯಕರ್ತರಾಗಿ ನಿಮ್ಮನ್ನು ಊಹಿಸಿಕೊಳ್ಳಿ ಪ್ರತ್ಯೇಕ ರಾಜ್ಯವನ್ನು ಏರ್ಪಾಟು ಮಾಡಲು ಕೇಂದ್ರ ಸರ್ಕಾರವು ಅಂಗೀಕರಿಸಿದಾಗ ನಿಮ್ಮ ಭಾವನೆಗಳನ್ನು ವಿವರಿಸಿರಿ.

ಚಿತ್ರ 21.11 ಸಾಗರ ಹಾರ ಎಂಬ ಹೆಸರಿನಿಂದ ಹೈದ್ರಾಬಾದ ಟ್ಯಾಂಕಬಂಡ ಮೇಲೆ ನಿರ್ವಹಿಸಿದ ಮೆರವಣಿಗೆ

SCERT TELANGANA

ವರ್ಗಗಳ ಪ್ರಜೆಗಳನ್ನು ಚಳುವಳಿಗೆ ಕರೆತಂದರು. ಈ ಸಂಸ್ಥೆಗಳು ಆಕಾರವಿಲ್ಲದ ಸಾಮಾಜಿಕ ಸಂಸ್ಥೆಗಳಿಗೆ ರಾಜಕೀಯ ರೂಪಕೊಟ್ಟು ಕೆಳಮಟ್ಟದಿಂದ ಪ್ರಜಾ ಚಳುವಳಿಯನ್ನು, ರಾಜಕೀಯ ಚಳುವಳಿಯನ್ನು ಬಲಪಡಿಸಿದರು. ತೆಲಂಗಾಣಕ್ಕಾಗಿ ಈ ಸಂಸ್ಥೆಗಳು ಪೂರ್ಣಸಮಯದ ಕಾರ್ಯಕರ್ತರನ್ನು ತಯಾರು ಮಾಡಿದವು. ಈ ಕಾರ್ಯಕರ್ತರು ವಿವಿಧ ಹಂತಗಳಲ್ಲಿ ಚಳುವಳಿಯನ್ನು ನಿರ್ವಹಿಸಿದರು. ಸಾಮಾನ್ಯ ಪ್ರಜೆಗಳನ್ನು ನಾಯಕತ್ವವನ್ನು ಒಗ್ಗೂಡಿಸುತ್ತಾ ಹೊಸ ನಿರ್ಮಾಣಾತ್ಮಕ ರೂಪಗಳನ್ನು ಏರ್ಪಡಿಸಿದರು.

ಎಲ್ಲಾ ಪಕ್ಷಗಳನ್ನು ಸಂಸ್ಥೆಗಳನ್ನು ಒಗ್ಗೂಡಿಸಿ, ಒಂದೇ ವೇದಿಕೆಯಡಿ ತರಲು ತೆಲಂಗಾಣ ಐಕ್ಯ ಕಾರ್ಯಾಚರಣೆ ಸಂಸ್ಥೆಯಾಗಿ ಏರ್ಪಟ್ಟರು. ಇದರ ನಾಯಕತ್ವದಲ್ಲಿ ಆರು ದೊಡ್ಡ ಪ್ರಮಾಣದ ಪ್ರತಿಭಟನೆಗಳನ್ನು ಕೈಗೊಂಡರು. ಅಸಹಕಾರ ಚಳುವಳಿ, ಮಿಲಿಯನ್ ಮಾರ್ಚ್, ಸಕಲ ಜನುಲ ಸಮ್ಮೆ (ನಲವತ್ತೆರಡು ದಿನಗಳ ಕಾಲ ಮುಂದುವರೆದ ಸಾಧಾರಣ ಮುಷ್ಕರ) ಸಾಗರ ಹಾರಂ, (ಹೈದ್ರಾಬಾದನಲ್ಲಿನ ಹುಸೇನ್ ಸಾಗರ ಸುತ್ತಲೂ ಕೈಗೊಂಡ ಮಾನವಹಾರ), ಸಂಸದ್ ಯಾತ್ರೆ (ಚಲೋ ಪಾರ್ಲಿಮೆಂಟ್) ಮತ್ತು ಚಲೋ ಅಸೆಂಬ್ಲಿ,

ಸಾಧಿಸಿಕೊಂಡ ತೆಲಂಗಾಣ :

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಎರಡು ಪ್ರಾಂತಗಳ ಕಾಂಗ್ರೆಸ್ ನಾಯಕರನ್ನು ಸಂಪರ್ಕಿಸುತ್ತಾ ತನ್ನ ಪ್ರಯತ್ನಗಳನ್ನು ಮುಂದುವರೆಸಿತು. ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ರಾಷ್ಟ್ರಮಟ್ಟದಲ್ಲಿ ಒತ್ತಡ ಹೆಚ್ಚಾಯಿತು. ಈ ರೀತಿಯಾಗಿ ತೆಲಂಗಾಣ ಒಂದು ರಾಷ್ಟ್ರೀಯ ಸಮಸ್ಯೆಯಾಗಿ ಮಾರ್ಪಟ್ಟಿತು. ಆಂಧ್ರ, ತೆಲಂಗಾಣ ಪ್ರಾಂತದ ವಾದಗಳನ್ನು ಕೇಳಿದ ಕಾಂಗ್ರೆಸ ಕೋರ್ ಕಮಿಟಿ ರಾಜ್ಯದ ವಿಭಜನೆಗೆ ಅನುಕೂಲವಾಗಿ ಅಂತಿಮ ನಿರ್ಣಯವನ್ನು ತೆಗೆದುಕೊಂಡಿತು. ಇದಕ್ಕೆ ಅನುಗುಣವಾಗಿ ಆಂಧ್ರ ಪ್ರದೇಶ ರಾಜ್ಯವನ್ನು ವಿಭಜಿಸುತ್ತಾ ಪಾರ್ಲಿಮೆಂಟ್ ಬಿಲ್ಲನ್ನು ಅನುಮೋದಿಸಿ 2014 ಜೂನ 2 ನ್ನು ರಾಜ್ಯದ ಅವಿರ್ಭಾವ ದಿನವನ್ನಾಗಿ ಪ್ರಕಟಿಸಿತು. ಪಾರ್ಲಿಮೆಂಟನಲ್ಲಿ ಬಿ.ಜೆ.ಪಿ., ಬಿ.ಎಸ್.ಪಿ. ಇತರ ವಿರೋಧ ಪಕ್ಷದಲ್ಲಿದ್ದ ಪಕ್ಷಗಳು ಈ ಬಿಲ್ಲಿಗೆ ತಮ್ಮ ಬೆಂಬಲವನ್ನು ಕೊಟ್ಟವು. ಪ್ರಜೆಗಳು ಸಂತೋಷದಿಂದ ಹಬ್ಬವನ್ನು ಆಚರಿಸಿಕೊಂಡರು. ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ನಿರ್ಣಯಗಳು ತಡವಾಗಬಹುದು ಆದರೆ ಪ್ರತಿಭಟನೆಗಳಿಂದ ಪ್ರಜೆಗಳು ತಮ್ಮ ಹೋರಾಟವನ್ನು ಪಟ್ಟುಬಿಡದಂತೆ ಮುಂದುವರೆಸಿದ್ದರಿಂದಲೇ ಆಂಧ್ರ ಪ್ರದೇಶದಿಂದ ತೆಲಂಗಾಣವನ್ನು ಬೇರೆ ಮಾಡಬೇಕೆಂದು ದೇಶವನ್ನು ಒಪ್ಪಿಸಿದವು. ವಿವಿಧ ಪ್ರಾಂತದ ಪ್ರಜೆಗಳು ತೆಲಂಗಾಣ ವಿಜಯೋತ್ಸವವನ್ನು ಆಚರಿಸಿದರು. ತಮ್ಮ ಕನಸು ನನಸಾಯಿತೆಂದು ಎಂದು ವಿದ್ಯಾರ್ಥಿಗಳು ಇತರ ಕಾರ್ಯಕರ್ತರು ಸಂತೋಷದಿಂದ ಕುಣಿದು ಕುಪ್ಪಳಿಸುವದರ ಮೂಲಕ ಸಡಗರದ ಹಬ್ಬವನ್ನು ಆಚರಿಸಿಕೊಂಡರು.

పటం 3: జూన్ 2, 2014 న సాకారమైన తెలంగాణ

SCERT TELANGANA

ಆಚಾರ್ಯ ಜಯಶಂಕರ
(ತೆಲಂಗಾಣ ಸಿದ್ಧಾಂತಕರ್ತ)

ವಿದ್ಯಾರ್ಥಿ ದೆಶೆಯಿಂದಲೇ (1952) ಪ್ರತ್ಯೇಕ ತೆಲಂಗಾಣಕ್ಕಾಗಿ ಹೋರಾಟವನ್ನು ಮುಂದುವರೆಸಿದವರು ಶ್ರೀ ಕೊತ್ತಪಲ್ಲಿ ಜಯಶಂಕರ. ಇವರು ಇಂದಿನ ವರಂಗಲ್ (ಗ್ರಾಮೀಣ) ಜಿಲ್ಲಾ ಆತ್ಮಕೂರು ಮಂಡಲದಲ್ಲಿಯ ಅಕ್ಕಂಪೇಟನಲ್ಲಿ ಆಗಸ್ಟ 6, 1934 ರಲ್ಲಿ ಮಹಾಲಕ್ಷ್ಮೀ, ಲಕ್ಷ್ಮೀಕಾಂತರಾವ ದಂಪತಿಗಳಿಗೆ ಜನ್ಮಿಸಿದರು.

ಅವರು ಶಾಲಾ ಶಿಕ್ಷಣವನ್ನು ಸರಕಾರಿ ಮರ್ಕಜಿ ಹೈಸ್ಕೂಲನಲ್ಲಿ, ಇಂಟರ್ಮೀಡಿಯಟ್, ಡಿಗ್ರಿ ವರಂಗಲ್‌ನಲ್ಲಿ ಪೂರ್ಣಗೊಳಿಸಿದರು. ಬನಾರಸ್ ಹಿಂದೂ ಯುನಿವರ್ಸಿಟಿಯಿಂದ ಎಂ.ಎ. ಎಕನಾಮಿಕ್ಸ ಪದವಿ ಪಡೆದು, ಹೈದರಾಬಾದನಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ. ಪೂರ್ತಿ ಮಾಡಿದರು.

SCERT TELANGANA

ಉಪಾಧ್ಯಾಯ ವೃತ್ತಿಯೊಂದಿಗೆ ಜೀವನ ಪ್ರಾರಂಭಿಸಿದ ಇವರು ಆನಂತರದ ಕಾಲದಲ್ಲಿ ಚಂದಾಕಾಂತಯ್ಯ ಮೆಮೊರಿಯಲ್ ಡಿಗ್ರಿ ಕಲಾಶಾಲೆ ವರಂಗಲ್‌ಗೆ ಪ್ರಾಂಶುಪಾಲರಾಗಿ, ಸಿಫೆಲ್ (ಪ್ರಸ್ತುತದಲ್ಲಿ EFLU) ರಿಜಿಸ್ಟ್ರಾರರಾಗಿ, ಕಾಕತಿಯ ವಿಶ್ವವಿದ್ಯಾಲಯಕ್ಕೆ ರಿಜಿಸ್ಟ್ರಾರರಾಗಿ, ಉಪಕುಲಪತಿಯಾಗಿ ಕಾರ್ಯನಿರ್ವಹಿಸಿದರು.

ತೆಲಂಗಾಣವಾದಿಯಾದ ಆಚಾರ್ಯ ಜಯಶಂಕರ ವಿದ್ಯಾರ್ಥಿ ದೆಶೆಯಿಂದಲೇ ಅನೇಕ ಚಳುವಳಿಗಳಲ್ಲಿ ಪಾಲ್ಗೊಂಡರು. 1952 ರಲ್ಲಿ ಫಜಲ್ ಅಲಿ ನೇತೃತ್ವದಲ್ಲಿ ಏರ್ಪಟ್ಟ ರಾಜ್ಯಗಳ ಪುನರ್‌ವಿಂಗಡನಾ ಕಮಿಷನ್ ಪ್ರಜೆಗಳ ಅಭಿಪ್ರಾಯ ಸಂಗ್ರಹಣೆಗೆ ದೇಶದಲ್ಲಿನ ವಿವಿಧ ಪ್ರಾಂತಗಳನ್ನು ಸಂದರ್ಶಿಸುತ್ತಾ ಹೈದರಾಬಾದಗೆ ಬಂದಾಗ ಕಮಿಷನ್‌ಗೆ ನಿವೇದಿಕೆಯನ್ನು ಸಮರ್ಪಿಸಿದ ವಿದ್ಯಾರ್ಥಿ ಬೃಂದದಲ್ಲಿ ಇವರು ಪ್ರಮುಖರು. ಇವರ ನಿವೇದಿಕೆಯನ್ನು ನೋಡಿದ ನಂತರ ''ತೆಲಂಗಾಣ ಪ್ರತ್ಯೇಕ ರಾಜ್ಯವಾಗಿ ನಿಲ್ಲಬಹುದೆ ಎಂದು ಕಮಿಷನ್ ಕೇಳಿದ ಪ್ರಶ್ನೆಗೆ ಸಮಾಧಾನವಾಗಿ ''ಭಿಕ್ಷೆ ಬೇಡಿ ತಿಂದು ಬದುಕುತ್ತೇವೆ ಆದರೆ ಆಂದ್ರ ಜನರ ಜೊತೆ ಕಲಿಸಿರುವುದಿಲ್ಲ'' ಎಂದು ಎಷ್ಟೋ ಧೈರ್ಯದಿಂದ ಹೇಳಿದ ವಿದ್ಯಾರ್ಥಿನಾಯಕನು 1969 ರಲ್ಲಿ ತೆಲಂಗಾಣ ಚಳುವಳಿ ಗಟ್ಟಿಯಾಗಿ ಬೆಳೆಯಲು ಇವರ ಕೃಷಿ ಅಭಿನಂದನೀಯ. ತೆಲಂಗಾಣ ವಿದ್ಯೆ, ಉದ್ಯೋಗ, ಸಾಂಸ್ಕೃತಿಕವಾಗಿ ಎದುರಿಸುತ್ತಿರುವ ವಿರೋಧಗಳಿಗೆ, ತೆಲಂಗಾಣ ಪ್ರಾಂತದ ಪ್ರಜೆಗಳು ವಿವಿಧ ರಂಗಗಳಲ್ಲಿ ಹಿಂದೆ ಬೀಳುವುದಕ್ಕೆ ಆಂದ್ರದವರ ದೋಚುವಿಕೆಯೇ ಕಾರಣವೆಂದು ತೆಲಂಗಾಣ ಭಾವನೆಯನ್ನು ಪ್ರಚಾರ ಮಾಡಿದರು.

1996 ರಲ್ಲಿ ಪ್ರಾರಂಭವಾದ ಎರಡನೆಯ ಹಂತದ ಚಳುವಳಿಗೆ ಮೂಲವಾದ ವ್ಯಕ್ತಿ ಇವರೇ. ಪ್ರಾಮಾಣಿಕವಾದ, ನಂಬಿಕೆಯಿಂದ ಕೂಡಿದ ತನ್ನ ಸ್ವಭಾವದಿಂದ ತೆಲಂಗಾಣ ಎದುರಿಸುತ್ತಿರುವ ವಿರೋಧತೆಗಳನ್ನು ವಿವಿಧ ಪ್ರಸಾರ ಮಾಧ್ಯಮಗಳ ಮುಖಾಂತರ ಬೇರೆ ಬೇರೆಯಾಗಿ ಪ್ರಚಾರ ಮಾಡಿದರು.

ತೆಲಂಗಾಣ ಚಳುವಳಿಯು ಮೂರು ರೂಪಗಳಲ್ಲಿ ಮುಂದುವರಿಯಬೇಕೆಂದು ಅವರು ಆಶಿಸಿದರು. ಅದರಲ್ಲಿ ಮೊದಲನೆಯದು ಭಾವಜಾಲದ ವ್ಯಾಪ್ತಿ. ಎರಡನೆಯದು ವಿವಿಧ ರೂಪದಲ್ಲಿ ಮುಂದುವರಿದ ಚಳುವಳಿಗಳು, ಆಂದೋಳನಗಳು, ಮೂರನೆಯದು ರಾಜಕೀಯ ಪ್ರಕ್ರಿಯೆ. ತೆಲಂಗಾಣ ಸಾಕಾರವಾಗುವವರೆಗೆ ಭಾವನೆಗಳ ವ್ಯಾಪ್ತಿಗೆ ಆಚಾರ್ಯ ಜಯಶಂಕರರು ಅದ್ವೀತಿಯವಾದ ಕೃಷಿ ಮಾಡಿದರು. ಇವರ ಭಾವನೆಗಳಿಂದ ಪ್ರಭಾವಿತವಾದ ವಿದ್ಯಾರ್ಥಿ ಸಂಘಟನೆಗಳು, ವೃತ್ತಿ ಸಂಘಗಳು, ರಾಜಕೀಯ ಪಕ್ಷಗಳು, ಜಾಯಂಟ್ ಯಾಕ್ಷನ್ ಕಮಿಟಿಗಳು (ಜೆ.ಎ.ಸಿ.) ಆಂದೋಳನಗಳನ್ನು ನಡೆಸುವುದರಿಂದ ತೆಲಂಗಾಣ ಚಳುವಳಿ ಪ್ರಾರಂಭವಾಯಿತು. ಅಂದುಕೊಂಡ ರೀತಿಯಲ್ಲಿಯೇ ಜೂನ್ 2, 2014 ರಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯ ಆವಿರ್ಭವಿಸಿತು. ''ನಾನು ತೆಲಂಗಾಣ ಕಣ್ಣಿನಿಂದ ನೋಡುತ್ತೇನೆ'' ಎಂದು ಸ್ವತ: ಹೇಳಿದ ಜಯಶಂಕರರು ದುರದೃಷ್ಟವಶಾತ್ ತನ್ನ ಕನಸ್ಸು ನಿಜವಾಗುವುದರೊಳಗೆ ಅನಾರೋಗ್ಯ ಕಾರಣದಿಂದ ಜೂನ್ 21, 2011ರಲ್ಲಿ ಮರಣ ಹೊಂದಿದರು.

ಜಯಶಂಕರ ರವರ ಜ್ಞಾಪಕಾರ್ಥವಾಗಿ ತೆಲಂಗಾಣ ರಾಜ್ಯ ಸರಕಾರ ವ್ಯವಸಾಯ ವಿಶ್ವವಿದ್ಯಾಲಯಕ್ಕೆ ಆಚಾರ್ಯ ಜಯಶಂಕರ ವ್ಯವಸಾಯ ವಿಶ್ವವಿದ್ಯಾಲಯ ಎಂದು ಹೆಸರಿಡಲಾಗಿದೆ. ಮತ್ತು ಹೊಸದಾಗಿ ಏರ್ಪಾಟಾದ ಜಿಲ್ಲೆಗಳಲ್ಲಿ ಒಂದಕ್ಕೆ ಜಯಶಂಕರ ಜಿಲ್ಲೆ ಎಂದು ಹೆಸರಿಡಲಾಗಿದೆ.

● ಒಬ್ಬ ಶ್ರಮಿಕ ಮಹಿಳೆಯಾಗಿ ನಿಮ್ಮನ್ನು ಊಹಿಸಿಕೊಳ್ಳಿರಿ. ನಿಮ್ಮ ಭಾವನೆಗಳನ್ನು ವಿವರಿಸಿರಿ.

● 2009 ಡಿಸೆಂಬರನಲ್ಲಿ ನಿಮ್ಮನ್ನು ಅದಿಲಾಬಾದ ಜಿಲ್ಲೆಯಲ್ಲಿನ ಗಿರಿಜನ ವ್ಯಕ್ತಿಯಾಗಿ ಊಹಿಸಿಕೊಳ್ಳಿರಿ. ನಿಮ್ಮ ಭಾವನೆಗಳನ್ನು ಊಹಿಸಿಕೊಳ್ಳಿರಿ.

ಮುಖ್ಯ ಪದಗಳು : ರಜಾಕಾರರು, ಪೋಲೀಸ್‌ಕಾರ್ಯಾಚರಣೆ, ಪ್ರಾಂತೀಯ ಮಂಡಳಿ, ಮುಲ್ಕಿ ನಿಬಂಧನೆಗಳು, ಸೀಮಾಂಧ್ರ, ಸ್ಥೂಲಸಾಗುವಳಿ ವಿಸ್ತೀರ್ಣ

ನಿಮ್ಮ ಕಲಿಕೆಯನ್ನು ಉತ್ತಮ ಪಡಿಸಿಕೊಳ್ಳಿ

1. ತಪ್ಪು ವಾಕ್ಯಗಳನ್ನು ಸರಿಪಡಿಸಿರಿ.
   ★ ಭಾಷೆ ಆಧಾರವಾಗಿ ಭಾರತ ದೇಶದಲ್ಲಿನ ರಾಜ್ಯಗಳು ಏರ್ಪಟ್ಟಿವೆ.
   ★ ರಾಜ್ಯದಲ್ಲಿ ವಾಸಿಸುತ್ತಿರುವ ವಿಭಿನ್ನ ವರ್ಗಗಳ ಪ್ರಜೆಗಳೆಲ್ಲರ ಭಾಷೆಗಳಿಗೆ ಸರಿಯಾದ ಗುರುತು ಲಭಿಸಿದೆ.
2. ತೆಲಂಗಾಣದಲ್ಲಿ ವಾಸಿಸುತ್ತಿರುವ ಪ್ರಜೆಗಳು ವೈವಿಧ್ಯಮಯ ಐತಿಹಾಸಿಕ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯನ್ನು ಹೊಂದಿದ್ದಾರೆ, ಈ ಪಾಠದಲ್ಲಿ ಚರ್ಚಿಸಿದ ಅಂಶಗಳ ಆಧಾರವಾಗಿ ಮೇಲಿನ ವಾಕ್ಯವನ್ನು ನಿರ್ಧಾರಿಸಿರಿ.
3. 'ದೊಡ್ಡ ಮನುಷ್ಯರ ಒಪ್ಪಂದ'ದಲ್ಲಿನ ಮುಖ್ಯಾಂಶಗಳನ್ನು ವಿವರಿಸಿರಿ. ಈ ಒಪ್ಪಂದ ಎರಡು ಪ್ರಾಂತಗಳ ಮಧ್ಯೆ ಅಪನಂಬಿಕೆಗೆ ಹೇಗೆ ಕಾರಣವಾಯಿತು ?
4. ತೆಲಂಗಾಣದಲ್ಲಿನ ಪ್ರಜೆಗಳ ಆಕಾಂಕ್ಷೆಗಳು, ಅನುಭವಗಳ ಆಧಾರವಾಗಿ ಎಲ್ಲ ವರ್ಗಗಳ ಪ್ರಜೆಗಳ ಮನೋಭಾವಗಳನ್ನು ಗೌರವಿಸಲು ಎಂತಹ ಕ್ರಮಗಳನ್ನು ನೀನು ಸೂಚಿಸುವಿ ?
5. ನೀರು, ವ್ಯವಸಾಯ, ವಿದ್ಯೆ, ಉದ್ಯೋಗ ಸೌಲಭ್ಯಗಳಿಗೆ ಸಂಬಂಧಿಸಿ ಎರಡು ಪ್ರಾಂತಗಳಲ್ಲಿ ಎಂತಹ ವ್ಯತ್ಯಾಸಗಳಿವೆ ?
6. ಪಟ್ಟಣ ವ್ಯವಸಾಯ ಪ್ರಾಂತಗಳ ಅಭಿವೃದ್ಧಿಯಲ್ಲಿ ಅಸಮಾನತೆಗಳ ಕಾರಣದಿಂದ, ಸರ್ಕಾರದಿಂದ ಆಶಿಸುವವುಗಳಲ್ಲಿ ವಿರೋಧಗಳು ಏಕೆ ಏರ್ಪಟ್ಟವು ?
7. ಎರಡು ಪ್ರಾಂತಗಳು ಒಂದಾಗಿರಬೇಕೆಂದು ಕೋರುವವರು ಎಂತಹ ವಾದಗಳನ್ನು ತೆರೆಮೇಲೆ ತಂದರು?
8. ತೆಲಂಗಾಣ ರಾಜ್ಯದ ಏರ್ಪಾಟ ಮಾಡುವದಕ್ಕಾಗಿ ಮಾಡಿದ ಜನಸಮೀಕರಣದ ಮಾರ್ಗಗಳನ್ನು ನೀನು ಹೇಗೆ ಮೌಲ್ಯಮಾಪನ ಮಾಡುತ್ತೀಯ ?
9. ತೆಲಂಗಾಣ ರಾಜ್ಯದ ಏರ್ಪಾಟಿನಲ್ಲಿ ಜೆ.ಎ.ಸಿ. ಮತ್ತು ರಾಜಕೀಯ ಪಕ್ಷಗಳ ವಿಭಿನ್ನ ಪಾತ್ರಗಳನ್ನು ವಿವರಿಸಿರಿ. ಎಲ್ಲಾ ರಾಜಕೀಯ ಸಿದ್ಧಾಂತಗಳನ್ನು ಜೆ.ಎ.ಸಿ. ಒಂದೇ ವೇದಿಕೆಯಡಿ ತಂದಿದೆಯೆಂದು ನೀನು ಹೇಗೆ ಅಂದುಕೊಳ್ಳುವಿ ?
10. ತೆಲಂಗಾಣ ನಕಾಶೆಯಲ್ಲಿ ಕೆಳಗಿನವುಗಳನ್ನು ಗುರ್ತಿಸಿರಿ.
    1) ಮಹಬೂಬನಗರ 2) ಖಮ್ಮಂ 3) ನಿಜಾಮಾಬಾದ 4) ಅದಿಲಾಬಾದ 5) ನಲ್ಗೊಂಡ
    6) ಮಹಾಬೂಬಾಬಾದ್ 7) ನಿರ್ಮಲ್ 8) ಜೋಗುಳಾಂಬ ಗದ್ವಾಲ

ಪ್ರಾಜೆಕ್ಟ್

2009ರ ಚಳುವಳಿಯಲ್ಲಿ ಪಾಲ್ಗೊಂಡ ಕೆಲವರೊಂದಿಗೆ ಮುಖಾಮುಖಿ ನಿರ್ವಹಿಸಿರಿ. ಅವರ ಅನುಭವಗಳನ್ನು ತಿಳಿದುಕೊಂಡು ಒಂದು ಪ್ರಸ್ತಾವನೆ ತಯಾರಿಸಿರಿ. ಹಳೇ ದಿನಪತ್ರಿಕೆಗಳು, ವಾರಪತ್ರಿಕೆಗಳಿಂದ ಈ ಘಟನೆಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಶೇಖರಿಸಿ ಒಂದು ಸ್ಕ್ರಾಪ್ ಬುಕ್ ತಯಾರಿಸಿರಿ.

SCERT TELANGANA

ಭಾರತದ ರಾಜಕೀಯ ನಕಾಶೆ

SCERT TELANGANA

ಯುರೋಪ್ ರಾಜಕೀಯ ನಕಾಶೆ



SCERT TELANGANA

ತೆಲಂಗಾಣ ರಾಜಕೀಯ ನಕಾಶೆ



SCERT TELANGANA

ಭಾರತ ಸಂವಿಧಾನದಲ್ಲಿನ ಷೆಡ್ಯೂಲ್‌ಗಳು

1ನೇ ಷೆಡ್ಯೂಲ್ : ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರಾಂತಗಳ ಪಟ್ಟಿ

2ನೇ ಷೆಡ್ಯೂಲ್ : ರಾಷ್ಟ್ರಪತಿ, ಗವರ್ನರಗಳು, ಪ್ರಧಾನ ನ್ಯಾಯಮೂರ್ತಿಗಳು, ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳು, ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಜೀತ ಭತ್ಯೆಗಳು.

3ನೇ ಷೆಡ್ಯೂಲ್ : ಪ್ರಮಾಣಗಳು ಮತ್ತು ಆಶ್ವಾಸನೆಗಳು.

4ನೇ ಷೆಡ್ಯೂಲ್ : ಭಾರತ ದೇಶದ ರಾಜ್ಯಗಳಿಗೆ ರಾಜ್ಯಸಭೆಯ ಸದಸ್ಯರ ಸೀಟುಗಳ ಹಂಚಿಕೆ.

5ನೇ ಷೆಡ್ಯೂಲ್ : ಷೆಡ್ಯೂಲ್ಡ್ ಪ್ರಾಂತಗಳು ಮತ್ತು ಜಾತಿಗಳ ಆಡಳಿತ ಮತ್ತು ನಿಯಂತ್ರಣ.

6ನೇ ಷೆಡ್ಯೂಲ್ : ಅಸ್ಸಾಂ, ಮೇಘಾಲಯ, ತ್ರಿಪುರ, ಮಿಜೋರಾಂ ಮತ್ತು ಅರುಣಾಚಲ್ ಪ್ರದೇಶದಲ್ಲಿನ ಗಿರಿಜನ ಪ್ರಾಂತಗಳ ಆಡಳಿತಕ್ಕೆ ಏರ್ಪಾಟುಗಳು.

7ನೇ ಷೆಡ್ಯೂಲ್ : ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಅಧಿಕಾರಗಳು ಮತ್ತು ಕೆಲಸಗಳ ಹಂಚಿಕೆ ಇದರಲ್ಲಿ ಮೂರು ಪಟ್ಟಿಗಳಿವೆ. 1) ಕೇಂದ್ರಪಟ್ಟಿ(97 ವಿಷಯಗಳು) (2) ರಾಜ್ಯಪಟ್ಟಿ(66 ವಿಷಯಗಳು) (3) ಉಭಯ ಪಟ್ಟಿ(47 ವಿಷಯಗಳು)

8ನೇ ಷೆಡ್ಯೂಲ್ : ಭಾರತ ಸಂವಿಧಾನ ಗುರ್ತಿಸಿದ 22 ಭಾರತೀಯ ಭಾಷೆಗಳು.

1. ಅಸ್ಸಾಮಿ 2. ಬೆಂಗಾಲಿ 3. ಗುಜರಾತಿ 4. ಹಿಂದಿ 5. ಕನ್ನಡ 6. ಕಾಶ್ಮೀರಿ
7. ಮಣಿಪುರಿ 8.ಮಲಯಾಳಂ 9. ಕೊಂಕಣಿ 10.ಮರಾಠಿ 11.ನೇಪಾಳಿ 12. ಒರಿಯಾ
13.ಪಂಜಾಬಿ 14.ಸಂಸ್ಕೃತ 15.ಸಿಂಧಿ 16.ತಮಿಳು 17.ತೆಲುಗು 18.ಉರ್ದು
19.ಸಂಥಾಲಿ 20.ಬೋಡೋ 21.ಮೈಥಿಲಿ 22.ಡೋಗ್ರಿ

9ನೇ ಷೆಡ್ಯೂಲ್ : 1951ನೇ ವರ್ಷದಲ್ಲಿ 1ನೇ ತಿದ್ದುಪಡಿ ಮೂಲಕ ಸೇರ್ಪಡೆ ಮಾಡಲಾಗಿದೆ. ಭೂ ಒಪ್ಪಂದಗಳು, ಭೂಮಿಶಿಸ್ತು, ರೈಲ್ವೇಗಳು, ಕೈಗಾರಿಕೆಗಳಿಗೆ ಸಂಬಂಧಿಸಿದ ಕಾನೂನುಗಳು ಮತ್ತು ಆಜ್ಞೆಗಳನ್ನು ಹೊಂದಿದೆ. (ಆಸ್ತಿಹಕ್ಕು ಪ್ರಸ್ತುತ ಪ್ರಾಥಮಿಕ ಹಕ್ಕು ಅಲ್ಲ)

10ನೇ ಷೆಡ್ಯೂಲ್ : 1985ನೇ ವರ್ಷದಲ್ಲಿ 52ನೇ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಧರ್ಮವನ್ನು ತಪ್ಪಿದ ಸಮಯದಲ್ಲಿ ಅನರ್ಹಗೊಳಿಸುವ ಅವಕಾಶಗಳನ್ನು ಕಲ್ಪಿಸಲಾಗಿದೆ.

11ನೇ ಷೆಡ್ಯೂಲ್ : 1992ನೇ ವರ್ಷದಲ್ಲಿ 73ನೇ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಪಂಚಾಯತಿರಾಜ ಸಂಸ್ಥೆಗಳ ಏರ್ಪಾಟು.

12ನೇ ಷೆಡ್ಯೂಲ್ : 1992ನೇ ವರ್ಷದಲ್ಲಿ 7ನೇ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಮುನ್ಸಿಪಲ್ ಕಾರ್ಪೋರೇಷನ್‌ಗಳ ಏರ್ಪಾಟು.

ಭಾರತ ಸಂವಿಧಾನದಲ್ಲಿನ ಕೆಲವು ಮುಖ್ಯ ಆರ್ಟಿಕಲ್‌ಗಳು

14ನೇ ಆರ್ಟಿಕಲ್ : ಕಾನೂನಿನ ಮುಂದೆ ಎಲ್ಲರೂ ಸಮಾನರು.

15ನೇ ಆರ್ಟಿಕಲ್ : ಮತ, ವರ್ಗ, ಕುಲ, ಲಿಂಗ, ಜನ್ಮಸ್ಥಳಗಳ ಕಾರಣವಾಗಿ ಪಕ್ಷಪಾತ ಮಾಡುವದು ನಿಷೇಧ.

16ನೇ ಆರ್ಟಿಕಲ್ : ಪ್ರಜೆಗಳೆಲ್ಲರಿಗೆ ಉದ್ಯೋಗಗಳಲ್ಲಿ ಸಮಾನ ಅವಕಾಶಗಳು.

17ನೇ ಆರ್ಟಿಕಲ್ : ಅಸ್ಪೃಶ್ಯತೆಯ ನಿಷೇಧ

18ನೇ ಆರ್ಟಿಕಲ್ : ಬಿರುದುಗಳ ರದ್ದು

21ನೇ ಆರ್ಟಿಕಲ್ : ವೈಯಕ್ತಿಕ ಸ್ವಾತಂತ್ರ್ಯ ಮತ್ತು ಜೀವನ ರಕ್ಷಣೆ.

24ನೇ ಆರ್ಟಿಕಲ್ : 14 ವರ್ಷದೊಳಗಿನ ಮಕ್ಕಳ ಕಾರ್ಖಾನೆಗಳಲ್ಲಿ ಮತ್ತು ಗಣಿಗಳಲ್ಲಿ ಉದ್ಯೋಗಕ್ಕಾಗಿ ನೇಮಕ ಮಾಡಿಕೊಳ್ಳುವದರ ಮೇಲೆ ನಿಷೇಧ.

45ನೇ ಆರ್ಟಿಕಲ್ : ಮಕ್ಕಳಿಗೆ ಉಚಿತ ಮತ್ತು ನಿರ್ಬಂಧ ಶಿಕ್ಷಣದ ಕಲ್ಪನೆ.

54ನೇ ಆರ್ಟಿಕಲ್ : ರಾಷ್ಟ್ರಪತಿಗಳ ಚುನಾವಣೆ.

124ನೇ ಆರ್ಟಿಕಲ್ : ಸುಪ್ರೀಂಕೋರ್ಟ್‌ನ ಏರ್ಪಾಟು.

356ನೇ ಆರ್ಟಿಕಲ್ : ದೇಶದಲ್ಲಿನ ಅತ್ಯವಸರ ಪರಿಸ್ಥಿತಿ.

370ನೇ ಆರ್ಟಿಕಲ್ : ಜಮ್ಮು ಮತ್ತು ಕಾಶ್ಮೀರ್ ರಾಜ್ಯಕ್ಕೆ ಪ್ರತ್ಯೇಕ ಅರ್ಹತೆ.

SCERT TELANGANA